ವಾಕೋಶ್ರೀ



ಮಾತೋಶ್ರೀ

ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ಅವರಿಗೆ

ಸಮರ್ಪಿಸಿದ ಅಭಿನಂದನ ಗ್ರಂಥ

ಪ್ರಧಾನ ಸಂಪಾದಕರು

ಚ. ವಿ. ಮುಳಗುಂದ

ಪ್ರಕಟಣೆ–೧

ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ

೧೯೮೭


MATOSHREE : Felicitation volume on 'Women and Society' dedicated to Smt. Gangamma Veerappa Chiniwar in appreciation of her Charity and philanthropy. Editor : C. V. Mulagund; Publisher : Matoshree Prakashana, Muddebihal; 1986; Pagas : 10+508
Price : 75—00

ವಿನ್ಯಾಸ : ಸುರೇಶ ಕುಲಕರ್ಣಿ, ಧಾರವಾಡ.

ಹೊದಿಕೆ : ಮನೋಹರ ಮುದ್ರಣಾಲಯ, ಧಾರವಾಡ.

ಪ್ರಕಾಶನ: ಚ. ವಿ. ಮುಳಗುಂದ, ಪ್ರಾಚಾರ್ಯರು,
ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ,
ಜಿಲ್ಲಾ : ವಿಜಾಪೂರ.

ಮುದ್ರಣ: ಫ. ಶಿ. ಭಾಂಡಗೆ
ತ್ವರಿತ ಮುದ್ರಣಾಲಯ,
ಗದಗ–582101.



ಮಾತೋಶ್ರೀ ಗಂಗಮ್ಮನವರು ಚಿನಿವಾರ

ಪರಿವಿಡಿ

ಭಾಗ–೩
ವೀರಶೈವ ರಾಣಿಯರು

ಭಾಗ–೪
ಧರ್ಮಗಳ ದೃಷ್ಟಿಯಲ್ಲಿ ಮಹಿಳೆ

ಭಾಗ–೫
ಸಾಹಿತಿಗಳ ದೃಷ್ಟಿಯಲ್ಲಿ ಮಹಿಳೆ

ಭಾಗ–೬

ಆಧುನಿಕ ಮಹಿಳೆ

ನಮನ

"ಮಾತೋಶ್ರೀ" ಒಂದು ಗೌರವಗ್ರಂಥ. ಕೃತಜ್ಞತೆಯ ದ್ಯೋತಕವಾಗಿ ನಮ್ಮಿಂದ ಈ ಕೃತಿಕಾಣಿಕೆಯನ್ನು ಸ್ವೀಕರಿಸುತ್ತಲಿರುವವರು ಮಾತೋಶ್ರೀ ಗಂಗಮ್ಮನವರು. ಸುಪ್ರಸಿದ್ಧ ಮಹನೀಯರನ್ನು-ಮಹಿಳೆಯರನ್ನು ಗ್ರಂಥಗಳ ಮೂಲಕ ಗೌರವಿಸುವ ಸಂಪ್ರದಾಯ ನಮ್ಮ ನಾಡಿನಲ್ಲಿ ಇತ್ತೀಚೆ ಬೆಳೆದು ಬಂದಿದೆ. ಮಹಿಳೆಯರಲ್ಲಿ ಈ ಗೌರವ ಗಳಿಸಿದವರ ಸಂಖ್ಯೆ ವಿರಳ. ಈ ವಿರಳ ವ್ಯಕ್ತಿಗಳಲ್ಲಿ ಗಂಗಮ್ಮನವರು ವಿಶಿಷ್ಟವೆನಿಸಿದ್ದಾರೆ. ತಮ್ಮ ಮಹಾತ್ಯಾಗದಿಂದ ಅಭಿನವ ಅತ್ತಿಮಬ್ಬೆ ಎನಿಸಿ, ವಿಜಾಪೂರ ಜಿಲ್ಲೆಯ ಒಂದು ಗ್ರಾಮವಾದ ಮುದ್ದೇಬಿಹಾಳಕ್ಕೆ ಶಿಕ್ಷಣಕೇಂದ್ರ ಪ್ರಸಿದ್ಧಿಯನ್ನು ತಂದುಕೊಟ್ಟ ಕೀರ್ತಿ ಇವರದಾಗಿದೆ.

ಮಾತೋಶ್ರೀ ಗಂಗಮ್ಮ ಚಿನಿವಾರ ಅವರದು ಆಗರ್ಭ ಶ್ರೀಮಂತ ಮನೆತನ. ಸಂಪತ್ತಿಗೆ ಮಿಗಿಲಾದ ಸೌಜನ್ಯ ಈ ಮನೆತನದ ಮಹಾಲಕ್ಷಣ. ಪತಿ ಶ್ರೀ ವೀರಪ್ಪನವರ ನಿಧನದ ತರುವಾಯ 'ದತ್ತಕ' ಇತ್ಯಾದಿ ಸಣ್ಣ ವಿಚಾರ ಗಳಿಗೆ ಗಮನ ಕೊಡದೆ ಸಿರಸಂಗಿ ಲಿಂಗರಾಜ ಮೊದಲಾದವರಂತೆ ತಮ್ಮ ಸಮಸ್ತ ಆಸ್ತಿ-ಪಾಸ್ತಿಯನ್ನು ಸಾರ್ವಜನಿಕ ಕೆಲಸಗಳಿಗೆ ವಿನಿಯೋಗಿಸಲು ಇವರು ನಿರ್ಧರಿಸಿದರು. ಈ ನಿರ್ಧಾರ ಒಂದು ಪುಣ್ಯಗಳಿಗೆ. ದಾಸೋಹ ಪರಂಪರೆಯ ವೀರಶೈವ ಮಹಿಳೆ ಎಂಥ ತ್ಯಾಗ ಮಾಡಬಲ್ಲಳೆಂಬುದಕ್ಕೆ ಅವರ ಈ ನಿರ್ಧಾರ ಪರಮಾವಧಿ ನಿದರ್ಶನವೆನಿಸಿದೆ. ಅಂದಿನಿಂದ ಇವರು ಸಾರ್ವಜನಿಕ ಕೆಲಸಗಳಿಗೆ ಬೊಗಸೆ ಬೊಗಸೆ ತುಂಬ ಧನ-ಕನಕಗಳನ್ನು ಧಾರೆಯೆರೆಯುತ್ತ ಬಂದಿದ್ದಾರೆ. ಈ ಧನಧಾರೆಯಿಂದಾಗಿ ಮುದ್ದೇಬಿಹಾಳದಲ್ಲಿ ವ್ಹಿ. ಬಿ. ಚಿನಿವಾರ ಪ್ರೌಢಶಾಲೆ, ಮಾತೋಶ್ರೀ ಗಂಗಮ್ಮ ಚಿನಿವಾರ ಮಂಗಲಭವನ, ಮಾತೋಶ್ರೀ ಗಂಗಮ್ಮ ಚಿನಿವಾರ ತಾಂತ್ರಿಕ ಸಂಸ್ಥೆ, ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಪ್ರಸೂತಿಗೃಹ ಮೊದಲಾದ ಮಹಾ ಮೈಲುಗಲ್ಲುಗಳು ಸಾಲುಗಟ್ಟಿ ನಿಂತಿವೆ. ಈ ದಾನಪರಂಪರೆಯ ಮುಡಿಯಮಾಣಿಕ್ಯ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ. ೧೯೬೮ ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಈ ಭಾಗದ ಒಂದು ಮಹತ್ವಪೂರ್ಣ ವಿದ್ಯಾ ಕೇಂದ್ರವೆನಿಸಿದೆ.

ಹೀಗೆ ಮಹಾದಾನದ ಮೂಲಕ ನಿತ್ಯವಂದೆಯಾದ ಮಾತೋಶ್ರೀ ಗಂಗಮ್ಮ ನವರು ವೀರಶೈವ ಮಹಿಳೆ. ಆದುದರಿಂದ ವೀರಶೈವ ಶಿವಶರಣೆಯರ, ವೀರ ಶೈವ ಮಹಾರಾಣಿಯರ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು, ಮಹಿಳೆ ಯನ್ನು ಕುರಿತ ಇತರ ಅಭ್ಯಾಸಗಳೂ ಒಳಗೊಳ್ಳುವಂತೆ ಈ ಗ್ರಂಥವನ್ನು

ರೂಪಿಸಲಾಗಿದೆ. ಹೀಗಾಗಿ ಶಿವಶರಣೆಯರು, ವೀರಶೈವ ರಾಣಿಯರು, ಧರ್ಮಗಳ ದೃಷ್ಟಿಯಲ್ಲಿ ಮಹಿಳೆ, ಸಾಹಿತಿಗಳ ದೃಷ್ಟಿಯಲ್ಲಿ ಮಹಿಳೆ, ಆಧುನಿಕ ಮಹಿಳೆ ಎಂಬ ಅಧ್ಯಯನಗಳಿಗೆ ಇಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಇದರಿಂದಾಗಿ ಈ ಹೊತ್ತಗೆಯು ಗಂಗಮ್ಮನವರಿಗೆ "ಗೌರವಗ್ರಂಥವೂ" ಹೌದು, ಅಭ್ಯಾಸಿಗಳಿಗೆ "ಆಕರಗ್ರಂಥ"ವೂ ಹೌದು.

ಇಂಥ ಒಂದು ವಿಚಾರ ನಮ್ಮ ಮನಸ್ಸಿನಲ್ಲಿ ಮೂಡುವುದೇ ತಡ, ಸನ್ಮಾನ ಸಮಿತಿಯ ಸದಸ್ಯರು ಇದಕ್ಕೆ 'ಅಸ್ತು' ಹೇಳಿದರು. ಇಷ್ಟೇ ಅಲ್ಲ, ನನ್ನ ಕಾರ್ಯ ಬಾಹುಳ್ಯ ಮತ್ತು ಪ್ರಸ್ತುತ ಗ್ರಂಥಕ್ಕೆ ಸಂಬಂಧಿಸಿದ ಕಾರಣಗಳಿಂದಾಗಿ ಕಾರ್ಯ ಅಪೇಕ್ಷಿಸಿದ ರೀತಿಯಲ್ಲಿ ತೀವ್ರವಾಗಿ ಮುಂದುವರಿಯದಿದ್ದಾಗ ಹಿರಿಯರಾದ ಸನ್ಮಾನ್ಯ ಶ್ರೀ ಕೆ. ಬಿ. ನಾವದಗಿ, ಎಸ್. ವಿ. ತಡಸದ ಮೊದಲಾದವರು ಆಗಾಗ ನೆನಪಿಸುತ್ತ ಬಂದರು.

ಗ್ರಂಥಶಿಲ್ಪವನ್ನು ಯೋಜಿಸಿದ ಬಳಿಕ ಡಾ. ಶೈಲಜಾ ಉಡಚಣ, ಶ್ರೀ ಶಾಂತರಸ, ಡಾ. ಸರೋಜಿನಿ ಶಿಂತ್ರಿ, ಪ್ರಿ. ಸದಾನಂದ ಕನವಳ್ಳಿ, ಪ್ರೊ. ಎಚ್. ವಿ. ನಾಗೇಶ ಅವರು ಒಂದೊಂದು ವಿಭಾಗದ ಸಂಪಾದನ ಕಾರ್ಯದ ಹೊಣೆಯನ್ನು ಹೊತ್ತು ಅದನ್ನು ತುಂಬ ಸಮರ್ಥ ರೀತಿಯಿಂದ ಪೂರೈಸಿದರು. ಮಾತೋಶ್ರೀಯವರ ಬಗೆಗಿನ ಗೌರವ ಕಾರಣವಾಗಿ ವಿದ್ವಾಂಸರು ಸಕಾಲಕ್ಕೆ ಲೇಖನಗಳನ್ನು ಒದಗಿಸಿದರು. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ನನ್ನನ್ನು ಈ ಮಹಾಕಾರ್ಯದತ್ತ ಪ್ರೇರಿಸುವಲ್ಲಿ, ಈ ಗ್ರಂಥವನ್ನು ಯೋಜಿಸುವಲ್ಲಿ, ಲೇಖನಗಳನ್ನು ಸಂಗ್ರಹಿಸುವಲ್ಲಿ ಸ್ನೇಹಿತರಾದ ಡಾ. ಎಂ. ಎಂ. ಕಲಬುರ್ಗಿಯವರು ಮಾಡಿದ ಉಪಕಾರ, ತೋರಿಸಿದ ಪ್ರೀತಿ–ವಿಶ್ವಾಸ ಅಷ್ಟಿಷ್ಟಲ್ಲ. ಅದನ್ನು ಮಾತುಗಳಲ್ಲಿ ವರ್ಣಿಸುವದು ಅಸಾಧ್ಯ. ಹಾಗೆಯೇ ಪ್ರೊ. ಎಚ್. ವಿ. ನಾಗೇಶ ಇದು ತಮ್ಮದೇ ಕಾರ್ಯವೆಂಬಂತೆ ನನ್ನೊಂದಿಗೆ ಮೊದಲಿನಿಂದಲೂ ದುಡಿದಿದ್ದಾರೆ. ಪ್ರೊ. ಶ್ಯಾಮಸುಂದರ ಬಿದರಕುಂದಿ ಮತ್ತು ಶ್ರೀ ಸುರೇಶ ಕುಲಕರ್ಣಿ ಇವರುಗಳು ಮುದ್ರಣ ಮತ್ತು ವಿನ್ಯಾಸದ ಹೊಣೆ ಹೊತ್ತು ಸಹಕರಿಸಿದ್ದಾರೆ. ಈ ಮಿತ್ರರಿಗೆ ಕೃತಜ್ಞತೆಗಳು.

ಗ್ರಂಥ ಮುದ್ರಣಕಾರ್ಯವನ್ನು ಶ್ರದ್ಧೆಯಿಂದ ಪೂರೈಸಿದ ಗದುಗಿನ ತ್ವರಿತ ಮುದ್ರಣಾಲಯದ ಒಡೆಯರಾದ ಶ್ರೀ ಫ. ಶಿ. ಭಾಂಡಗೆ ಅವರಿಗೂ, ಗ್ರಂಥದ ಹೊದಿಕೆ ಮತ್ತು ಛಾಯಾಚಿತ್ರಗಳ ಮುದ್ರಣವನ್ನು ಪೂರೈಸಿದ ಧಾರವಾಡದ ಮನೋಹರ ಮುದ್ರಣಾಲಯದ ಶ್ರೀ ರವಿ ಆಕಳವಾಡಿ ಅವರಿಗೂ ಧನ್ಯವಾದಗಳು.

ಮುದ್ದೇಬಿಹಾಳ — ಚ. ವಿ. ಮುಳಗುಂದ



ಮದುವೆಯಾದ ಹೊಸದರಲ್ಲಿ ಮಾತೋಶ್ರೀ ಗಂಗಮ್ಮನವರು



ಷಷ್ಟ್ಯಬ್ದಿಯಲ್ಲಿ ತುಲಾಭಾರ

ಭಾಗ—೧

ಮಾತೋಃಶ್ರೀ

ಮಾತೋಶ್ರೀ

ಇಂಥ ಮರಭೂಮಿಯಲೇ ಆಗಬೇಕಿತ್ತು
ಗಂಗಾವತರಣ, ಆಯ್ತು. ನಲಿಯುವುದು ಚೆಲುವು
ನೆಲದ ಬಯಕೆಯು ಬೀಜ ತಲೆಯೆತ್ತುತಿಹ ನಿಲುವು,
ಗಿಡಮರದ ಹಸುರಿನಲಿ, ಗಾಳಿಯುಸುರುವ ಮಾತು-
ಗಳಲಿ ನಿನ್ನದೇ ಹೆಸರು. ಹಕ್ಕಿಗಳ ಕೊರಳಲ್ಲು
ನಿನ್ನದೇ ಸೊಲ್ಲು. ಹೂವು ಹಣ್ಣುಗಳಲ್ಲಿ ಮೂಡು
ವುದು ನಿನ್ನದೆ ಮಾಧುರ್ಯ. ಇದೆಲ್ಲ ನಿನ್ನದು.
ನಿನ್ನುದಾರತೆಯಾವು ಕರೆದದ್ದು ಈ ಹಾಲು!
ಎಲ್ಲವನು ಕೊಟ್ಟು, ಎಲ್ಲವ ಪಡೆದು ಸಮರ್ಪಣ
ಭಾವದಲಿಹ ತಾಯೆ, ನಿನ್ನ ಹೃದಯ ಸಿರಿವಂತಿಕೆ-
ಗೆ ಮಹಾತ್ಯಾಗಕ್ಕೆ ನಿನ್ನಾತ್ಮ ವೈಶಾಲ್ಯಕ್ಕೆ
ಇಲ್ಲ ಸಮತೂಕ. ಬದುಕಿನಲೆ ಪಡೆದೆ ಜೀವನ
ಮುಕ್ತಿ. ಪತಿಗೆ ತಕ್ಕ ಸತಿ; ಶಿವಯೋಗಿಯಕ್ಕರೆ-
ಯ ಮಗಳು. ಚಿನ್ನಕ್ಕೆ ಕುಂದಣ; ಹಾಲಿಗೆ ಸಕ್ಕರೆ.

—ಈಶ್ವರ ಸಿಂಪಿ

ಮಾತೋಶ್ರೀ

ಸಿ. ವಿ. ಮುಳಗುಂದ

ಆಧುನಿಕ ಕರ್ನಾಟಕದ ಶಿಕ್ಷಣಕ್ಷೇತ್ರಕ್ಕೆ ವೀರಶೈವ ಸಂಸ್ಥೆಗಳು ಸಲ್ಲಿಸಿದ ಕಾಣಿಕೆ ಅಪಾರವೂ ಅಪೂರ್ವವೂ ಆಗಿದೆ. ವಿಜಾಪುರದ ಬಿ.ಎಲ್.ಡಿ.ಇ. ಸಂಘ, ಬಾಗಿಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ, ಬೆಳಗಾವಿಯ ಕೆ.ಎಲ್.ಇ. ಸೊಸಾಯಿಟಿ, ತುಮಕೂರಿನ ಸಿದ್ಧಗಂಗಾವಿದ್ಯಾಸಂಸ್ಥೆ, ಗುಲಬರ್ಗಾದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಮತ್ತು ಎಚ್. ಕೆ. ಇ. ಸೊಸಾಯಿಟಿ, ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘ, ಮೈಸೂರಿನ ಸುತ್ತೂರ ಶಿವರಾತ್ರೀಶ್ವರ ಸಂಸ್ಥೆ, ಸಿರಿಗೆರೆಯ ತರಳುಬಾಳು ವಿದ್ಯಾಸಂಸ್ಥೆ ಮುಂತಾದ ದೊಡ್ಡ ಸಂಸ್ಥೆಗಳೂ ಸಾವಿರಾರು ಸಣ್ಣ ಸಂಸ್ಥೆಗಳೂ ಈ ಮಾತಿಗೆ ನಿತ್ಯನಿದರ್ಶನವೆನಿಸಿವೆ.

ವಿಜಾಪೂರ ಜಿಲ್ಲೆಯಲ್ಲಿ ಶಿಕ್ಷಣ ಪ್ರಸಾರಕಾರ್ಯಕ್ಕೆ ಹೆಗಲು ಕೊಟ್ಟವರು ಬಂಥನಾಳದ ಶ್ರೀ ಸಂಗನಬಸವಶಿವಯೋಗಿಗಳು, ನವಿಲುಗುಂದದ ಶ್ರೀ ಬಸವಲಿಂಗಸ್ವಾಮಿಗಳು, ಬೀಳಗಿ ಪಟ್ಟದದೇವರು, ಹುನಗುಂದದ ಶ್ರೀ ಮಹಾಂತಸ್ವಾಮಿಗಳು, ಮಠ ಮಾಸ್ತರರು, ಶ್ರೀ ಫ. ಗು. ಹಳಕಟ್ಟಿ ಮುಂತಾದವರು. ಇವರ ಸಾಧನೆಯ ಕುರುಹುಗಳಾಗಿ ಅಲ್ಲಲ್ಲಿ ವಿದ್ಯಾಸಂಸ್ಥೆಗಳು ತಲೆಯೆತ್ತಿ ನಿಂತಿವೆ.

ಶಿಕ್ಷಣ ಪ್ರಸಾರದಂಥ ಪವಿತ್ರಕಾರ್ಯಕ್ಕೆ ತ್ಯಾಗಮಾಡಿದವರ ಸಾಲಿನಲ್ಲಿ ಅಪರೂಪದ ವ್ಯಕ್ತಿಯೊಬ್ಬರು ಈ ಶತಮಾನದ ಏಳನೆಯ ದಶಕದಲ್ಲಿ ಶೋಭಿಸಿದರು. ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಬೆಲೆಬಾಳುವ ಸ್ಥಿರ ಮತ್ತು ಚರ ಆಸ್ತಿಯನ್ನು ಧಾರೆ ಎರೆದ ಈ ವ್ಯಕ್ತಿ ಪುರುಷನಲ್ಲ; ಮಹಿಳೆ! ಮುದ್ದೇಬಿಹಾಳದ ಚಿನಿವಾರ ಗಂಗಮ್ಮ ಹೆಸರಿನ ವೀರಶೈವ ಮಹಿಳೆ! ತಮ್ಮ ಒಟ್ಟು ಆಸ್ತಿಯಲ್ಲಿ ಅಲ್ಪಾಂಶವನ್ನು ಪುಣ್ಯ ಕಾರ್ಯಗಳಿಗೆ ದಾನಮಾಡಿದವರು ಅನೇಕರಿರಬಹುದು. ಆದರೆ ತಮ್ಮ ಸಮಸ್ತ ಸಂಪತ್ತನ್ನೂ ತೃಣವಾಗಿ ಕಂಡು ತ್ಯಾಗ ಮಾಡಿದವರು ಗಂಗಮ್ಮನವರು. ಆಧುನಿಕ ಅತ್ತಿಮಬ್ಬೆ, ದಾನಚಿಂತಾಮಣಿ ಮುಂತಾದ ಕೀರ್ತಿ ಕುಂಕುಮ ಹೊತ್ತು ಶೈಕ್ಷಣಿಕ ಮರುಭೂಮಿಯಲ್ಲಿ ಸಿಹಿನೀರಿನ ತೊರೆಯಂತೆ, ಶೈಕ್ಷಣಿಕ ಬರಡು ಭೂಮಿಯಲ್ಲಿ ಹಸಿರು ಹೊಲದಂತೆ ಕಂಗೊಳಿಸುತ್ತಿರುವವರು ಮಾತೋಶ್ರೀ ಗಂಗಮ್ಮನವರು.

ಮಾತೋಶ್ರೀಯವರು ತಮ್ಮ ಆಸ್ತಿ-ಪಾಸ್ತಿಯನ್ನು ತ್ಯಾಗಮಾಡಿ "ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ವಿದ್ಯಾಪ್ರಸಾರಕ ವಿಶ್ವಸ್ತ ನಿಧಿ"ಯನ್ನು ಸ್ಥಾಪಿಸಿದ ಸುದ್ದಿ ಶ್ರೀ ಮ. ನಿ. ಪ್ರ. ಸಂಗನಬಸವಶಿವಯೋಗಿಗಳು ಬಂಥನಾಳ ಅವರಿಗೆ ಮುಟ್ಟಿತು. ಆಗ ಅವರು ತೆಗೆದ ಉದ್ಗಾರವಿದು:

'ತಾವು ತಮ್ಮ ಸರ್ವಸ್ವವನ್ನೂ ಭಾರತೀಯರ ಭಾಗ್ಯೋದಯಕ್ಕಾಗಿ, ಶಿಕ್ಷಣ ಪ್ರಸಾರಕ್ಕಾಗಿ ಸಮರ್ಪಿಸಿದ ಸಂಗತಿಯನ್ನು ಶ್ರೀಮಾನ್ ಶಂಕರಪ್ಪ ತಡಸದ ಅವರ ಪತ್ರದಿಂದ ತಿಳಿದು ಬಹು ಸಂತೋಷಭರಿತರಾಗಿದ್ದಲ್ಲದೆ ಆಶ್ಚರ್ಯ ಚಕಿತರೂ ಆಗಿದ್ದೇವೆ. ನಿಮ್ಮ ದಿವ್ಯವಾದ ಭವ್ಯವಾದ ತ್ಯಾಗವು ಇಡೀ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಈ ವರೆಗೂ ಯಾರಿಂದಲೂ ಆಗಿರುವುದಿಲ್ಲ. ಸಿರಸಂಗಿ ಲಿಂಗರಾಜರು ಹಿಂದೆ ತಮ್ಮ ಸಂಸ್ಥಾನವನ್ನೇ ಶಿಕ್ಷಣಕ್ಕಾಗಿ ತ್ಯಾಗಮಾಡಿ ಹೋಗಿದ್ದಾರೆ. ಆದರೆ ಅವರು ತಮ್ಮ ಪಶ್ಚಾತ್ ಶಿಕ್ಷಣಕ್ಕಾಗಿ ಉಪಯೋಗವಾಗಬೇಕೆಂದು ಕಾಗದ ಮಾಡಿ ಹೋದರು. ಆದರೆ ತಾವು ಮಾತ್ರ ಹಯಾತಿ ಇರಲಿಕ್ಕಾಗಿಯೇ ಎಲ್ಲವನ್ನೂ ಶಿಕ್ಷಣಕ್ಕಾಗಿ ಅರ್ಪಿಸಿದ್ದು ಎಲ್ಲರಿಗೂ ಆನಂದವನ್ನಷ್ಟೇ ಅಲ್ಲ, ಆಶ್ಚರ್ಯವನ್ನೂ ಉಂಟುಮಾಡಿದೆ. ಈ ಧೈರ್ಯ, ಈ ಸಾಹಸ ಈ ವರೆಗೂ ಯಾವ ಪುರುಷರಿಂದ ಆಗದ್ದನ್ನು ಮಾತೆಯರೇ ಮಾಡಿ ತೋರಿಸಿದರೆಂಬುದನ್ನು ನೀವು ಸಿದ್ಧಮಾಡಿ ತೋರಿಸಿದಿರಿ. ಎಂಥ ವಿರಕ್ತರೂ ಮಾಡದಿದ್ದುದನ್ನು ವೀರವಿರಾಗಿಣಿಯರಾಗಿ ವೈರಾಗ್ಯದ ನಿಜವಾದ ತೇಜಸ್ಸನ್ನು ಬೆಳಗಿಸಿದ್ದೀರಿ. ನಿಮಗಾಗಿ ನಮ್ಮ ಅನಂತ ಧನ್ಯವಾದಗಳು. 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ' ಎಂಬ ಬಸವೇಶ್ವರನ ಸಂದೇಶದಂತೆ ನೀವು ನಿಜವಾಗಿ ಶಿವನ ಕೃಪೆಗೆ ಪಾತ್ರರಾಗಿದ್ದೀರಿ. ನೀವು ಯಾವುದಕ್ಕೂ ಆಲೋಚಿಸಬೇಕಾಗಿಲ್ಲ. ನಿಮಗಾಗಿ ಇಡೀ ಸಮಾಜವೇ ಬೆಂಬಲವಾಗಿರುವದು. ಅಸ್ತು. ತಮ್ಮ ಕರ್ತವ್ಯವೆಂದು ಸಮಾಜವು, ಸರ್ವರಿಗೂ ಮಾಹಿತಿ ಆಗುವುದಕ್ಕಾಗಿ ತಮ್ಮ ಆದರ್ಶವನ್ನು ಉಳಿದವರೂ ಅನುಕರಣ ಮಾಡಲೆಂದು ಪತ್ರಿಕೆಯಲ್ಲಿ ಪ್ರಸಿದ್ಧ ಮಾಡುವುದಕ್ಕಾಗಿ ತಾವೇಕೆ ಬೇಡವೆನ್ನಬೇಕು? ಹೇಗಾದರೂ ಅವರು ಮಾಡುವವರೇ!'

ಹಿಂದೊಮ್ಮೆ ಕವಿ ಶ್ರೀ ಈಶ್ವರ ಸಣಕಲ್ಲ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಮಹಾವಿದ್ಯಾಲಯದ ಸ್ನೇಹಸಮ್ಮೇಲನಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಅಮ್ಮನವರ ತ್ಯಾಗದ ಬಳ್ಳಿ ಘಮಘಮಿಸುವ ಹೂ ಬಿಡುತ್ತಿರುವುದನ್ನು ನೋಡಿ ತೆಗೆದ ಉದ್ಗಾರಗಳು ಹೀಗಿವೆ:

'ವಾತ್ಸಲ್ಯವು ತ್ಯಾಗದ ಪ್ರತೀಕವು! ವಾತ್ಸಲ್ಯದ ಸಾಕಾರಮೂರ್ತಿಯೇ ಮಾತೃಶ್ರೀಯು. ತನ್ನ ಮಕ್ಕಳ ಸುಖಕ್ಕಾಗಿ, ಉತ್ಕರ್ಷಕ್ಕಾಗಿ, ಕಲ್ಯಾಣಕ್ಕಾಗಿ, ಸರ್ವಾಂಗೀಣ ಪ್ರಗತಿಗಾಗಿ, ತನ್ನ ಸರ್ವಸ್ವವನ್ನೂ ತ್ಯಾಗಮಾಡಿ, ಆ ಮಕ್ಕಳ ಅಭಿವೃದ್ಧಿ ಸಿದ್ಧಿಗಳಲ್ಲಿಯೇ ಆನಂದಪಡುವ ತಾಯಿ ಇವರು. ಈ ಮಾತೃಶ್ರೀಯು ವಾತ್ಸಲ್ಯದ ಪರಾಕಾಷ್ಠೆಯೇ ಪರಮಾತ್ಮ! ನಾವು ಪರಮಾತ್ಮನ ಸಾಕ್ಷಾತ್ಕಾರವನ್ನು ಅನುಭವಿಸಬೇಕಾದರೆ ಮಾತೃವಾತ್ಸಲ್ಯಕ್ಕೆ ಶರಣು ಹೋಗಬೇಕು. ಅಲ್ಲಿ

ಅರ್ಥವಿರದ, ಸ್ವಾರ್ಥವಿರದ, ಬರಿಯ ಭಾವಗೀತೆಯ ಆತ್ಮಮುಕ್ತಿಯ ಆನಂದ ಸುಖವನ್ನು ಅನುಭವಿಸಬಹುದು. ತಾಯಿಯಂತಹ ತ್ಯಾಗಿ, ಯೋಗಿ ಯಾರಿಹರು? ನಾವೆಲ್ಲರೂ ಅಂತಹ ತಾಯಿಯ ಮಕ್ಕಳು.

ಇಂತಹ ವಾತ್ಸಲ್ಯ ಹೃದಯದ ಮಾತೃಶ್ರೀಯುಳ್ಳವರು ತಾವು! 'ಚಿನಿವಾರ' ಎಂಬ ಅಡ್ಡ ಹೆಸರೇ ಬೆಳ್ಳಿ ಬಂಗಾರ ಮುತ್ತು ರತ್ನಾಭರಣಗಳ ವೈಭವದ ವ್ಯಾಪಾರಕ್ಕೆ, ವ್ಯಾಪಾರ ವೈಭವಕ್ಕೆ ಸಾಕ್ಷಿಯಾಗಿದೆ. ಇಂತಹ ವೈಭವ ಪರಂಪರೆಯಲ್ಲಿ ಬೆಳೆದುಬಂದ ತಮಗೆ ಈ ತ್ಯಾಗಜೀವನವು ಅಳವಡುವುದು ಸಹಜ.

ಆಧ್ಯಾತ್ಮಿಕ ಕ್ಷೇತ್ರದಲ್ಲಿ 'ಕೊಟ್ಟದ್ದು ತನಗೆ' ಎಂದು ಸರ್ವಜ್ಞ ಮೂರ್ತಿ ಹೇಳಿದರೆ, 'ಕೊಟ್ಟದ್ದರ ಕೋಟಿಮಡಿ ತನಗೆ' ಎಂದು ಟ್ಯಾಗೋರ್ ಹೇಳಿರುವರು. ಒಂದು ಕಾಳು ಪಡೆದ ಭೂಮಿತಾಯಿ ಆ ಕಾಳಿಗೆ ಪ್ರತಿಯಾಗಿ ಸಾವಿರಾರು ಕಾಳುಗಳ ಸಾವಿರಾರು ತೆನೆಗಳನ್ನು ನೀಡುವ, ದಾನಮಾಡುವ ಮಹಿಮೆಯಂತಿದೆ ತಮ್ಮ ಈ ದಾನ! ತಮ್ಮ ಸಂಪತ್ತು ಈ ರೀತಿ ವಿನಿಯೋಗವಾಗದೇ ಒಂದೇ ಕಡೆಗೆ ಶೇಖರಿಸಲ್ಪಟ್ಟಿದ್ದರೆ ತಮ್ಮ ಕುಟುಂಬದ ವಂಶಜರಾದ ಕೆಲವರಿಗೇನೇ ಇದರ ಸೌಕರ್ಯ ಸೌಲಭ್ಯಗಳು ಲಭ್ಯವಾಗುತ್ತಿದ್ದವು. ತಮ್ಮ ಕುಟುಂಬದ ಒಬ್ಬಿಬ್ಬರು ಮಕ್ಕಳು ಮಾತ್ರ ಸುಶಿಕ್ಷಿತರಾಗಿ ಮುಂದೆ ಬರಬಹುದಾಗಿದ್ದಿತು. ಇಂದು ಮುದ್ದೇಬಿಹಾಳದ ಮಕ್ಕಳ ಜೊತೆಗೆ, ಇದರ ಸುತ್ತು ಮುತ್ತಲಿನ ಹಳ್ಳಿಗಳ ಮಕ್ಕಳೂ ತಮ್ಮ ತ್ಯಾಗದ, ದಾನದ ಫಲವಾಗಿ ಕಲಿತು ಮುಂದೆ ಬರುತ್ತಿರುವರು! ಎಲ್ಲರೂ ತಮ್ಮ ಹೆಸರು ಹೇಳಿ ಹಾಡಿ ಹರಸುತ್ತಿರುವರು. ಹೀಗಾಗಿ ಒಂದೇ ಕುಟುಂಬದಲ್ಲಿ ಬೆಳಗಬೇಕಾಗಿದ್ದ ತಮ್ಮ ವಾತ್ಸಲ್ಯ ಪೂರ್ಣ ಮಾತೃಶ್ರೀಯು ವಿರಾಡ್ರೂಪಿಣಿಯಾಗಿ ವಿಶ್ವವ್ಯಾಪಿಯಾಗಿದೆ. ಈ ದೃಷ್ಟಿಯಿಂದ ತಾವು ಪುಣ್ಯವಂತರು. ಸಫಲ ಜೀವಿಗಳು. ಅಮರರು. ತಮ್ಮಂತಹ ತ್ಯಾಗ ಯೋಗಿಯಂತಹ ತಾಯಿಯ ಉಡಿಯಲ್ಲಿ, ಮಡಿಲಲ್ಲಿ, ಒಡಲಲ್ಲಿ, ಎಡೆಯಲ್ಲಿ, ಅಡಿಯಲ್ಲಿ ಮಗುವಾಗಿ ಆಡುವ ಭಾಗ್ಯವು ನನಗೆ ಲಭಿಸಲಾರದೇ ಎಂದು ಹೃದಯವು ಹಾರೈಸಿ ಹಾತೊರೆಯುತ್ತದೆ! ಆ ಭಾಗ್ಯವನ್ನು ದೇವರು ನನಗೆ ಕರುಣಿಸಿದರೆ ನಾನು ಆತನಿಗೆ ಎಂದೆಂದೂ ಕೃತಜ್ಞನು.

ತಾಯಿ! ತಮ್ಮ ಜೀವನದ ದಿವ್ಯದರ್ಶನವು ನಮ್ಮ ಜೀವನದಲ್ಲಿಯೂ ಅಳವಡಲಿ. ಅದಕ್ಕೆ ತಮ್ಮಂತಹ ಪವಿತ್ರ ತ್ಯಾಗಜೀವನವು ನಮಗೆ ಪ್ರೇರಕವಾಗಲಿ! ಇದೇ ಆ ಪರಮಾತ್ಮನಲ್ಲಿ ನಾನು ಮಾಡುವ ಪ್ರಾರ್ಥನೆ.'

ಮೇಲಿನ ಒಬ್ಬಿಬ್ಬ ಮಹನೀಯರ ನುಡಿಗಳು ಪ್ರಾತಿನಿಧಿಕ ಸ್ವರೂಪದವು. ಅನೇಕರು ಮಾತೋಶ್ರೀಯವರ ಸಾರ್ಥಕ ತ್ಯಾಗವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಅಂಥವರಲ್ಲಿ ಡಾ. ಎ. ಎಸ್. ಅಡಕೆ, ಡಾ. ದೇ. ಜವರೇಗೌಡ, ಡಾ. ಆರ್. ಸಿ. ಹಿರೇಮಠ, ಡಾ. ಎಸ್. ಎಸ್. ಭೂಸನೂರಮಠ ಡಾ. ಹಿರೇಮಲ್ಲೂರ ಈಶ್ವರನ್, ಡಾ. ಎಂ. ಎಸ್. ಸುಂಕಾಪೂರ, ಡಾ. ಎಸ್.

ಶೆಟ್ಟರ್, ಶ್ರೀ ಎಸ್. ಎಸ್. ಒಡೆಯರ್, ಶ್ರೀ ಪಾಟೀಲ ಪುಟ್ಟಪ್ಪ, ಶ್ರೀ ಚನ್ನವೀರ ಕಣವಿ, ಶ್ರೀ ಸ.ಸ. ಮಾಳವಾಡ, ಡಾ. ರಾ.ಯ. ಧಾರವಾಡಕರ ಮುಂತಾದವರು ಮುಖ್ಯರು.

ಬೆಳಗಾವಿ ನೆರೆಯ ಶಾಪುರದಲ್ಲಿ ತೆಲಸಂಗ ಹೆಸರಿನ ಮನೆತನ; ಆಗರ್ಭ ಶ್ರೀಮಂತಿಕೆ ಇರದಿದ್ದರೂ ನೆಮ್ಮದಿಯ ಜೀವನ. ಈ ಮನೆತನದ ದುಂಡಪ್ಪ ಮತ್ತು ನಿಂಬೆವ್ವ ಗಂಗಮ್ಮನವರ ತಂದೆತಾಯಿಗಳು. ಮಾತೋಶ್ರೀ ಗಂಗಮ್ಮನವರು ಬೈಲುಹೊಂಗಲದಲ್ಲಿ ತಾಯಿಯ ತವರುಮನೆಯಾದ ಶ್ರೀ ಇರಸಂಗಪ್ಪ ಜತ್ತಿ ಅವರ ಮನೆಯಲ್ಲಿ ೧೯೦೮ರಲ್ಲಿ ಜನಿಸಿದರು.

ತಂದೆತಾಯಿಗಳಿಗೆ ಗಂಗಮ್ಮ ಒಬ್ಬಳೇ ಮಗಳು. ಮೂರು ವರ್ಷದವಳಿದ್ದಾಗ ತಂದೆಯನ್ನು ಕಳೆದುಕೊಂಡಳು. ತಾಯಿ ಮತ್ತು ಅಜ್ಜ ಚನಬಸಪ್ಪನವರ ಆರೈಕೆಯಲ್ಲಿ ಬೆಳೆದಳು. ಹೆಣ್ಣಜ್ಜ ಇರಸಂಗಪ್ಪ ಆಗಾಗ ಬಂದು ಮಗಳನ್ನು ಮತ್ತು ಮೊಮ್ಮಗಳನ್ನು ಬೈಲಹೊಂಗಲಕ್ಕೆ ಕರೆದುಕೊಂಡು ಹೋಗುತ್ತಿದ್ದ. ಗಂಡನನ್ನು ಕಳೆದುಕೊಂಡಿದ್ದ ಮಗಳ ಮನಸ್ಸಿನ ನೋವನ್ನು ಮರೆಸಲು ಪ್ರಯತ್ನಿಸುತ್ತಿದ್ದ.

ಗಂಗಮ್ಮನಿಗೆ ಎಂಟುವರ್ಷ ನಡೆಯುತ್ತಿತ್ತು. ಆಗ ಅಜ್ಜ ಚನ್ನಬಸಪ್ಪ ಶಾಪುರದ ಮರಾಠಿ ಶಾಲೆಯಲ್ಲಿ ಹೆಸರು ಹಚ್ಚಿಸಿದ. ಶಾಪುರ ಅಂದು ಬ್ರಿಟಿಶರ ದಂಡಿನ ಠಾಣೆಯಾದ ಬೆಳಗಾವಿಯ ಸನಿಹದ ಒಂದು ಸಂಸ್ಥಾನ. ಈಗ ಅದು ಬೆಳಗಾವಿ ನಗರದ ಒಂದು ಭಾಗವಾಗಿದೆ. ಆಗ ಮರಾಠಿ ಭಾಷೆಯದೇ ಪ್ರಭಾವ. ಸಮೀಪದಲ್ಲಿ ಕನ್ನಡ ಶಾಲೆಗಳೇ ಇರಲಿಲ್ಲ. ಎರಡನೇ ಈಯತ್ತೆ ಪಾಸಾದರು. ಮೂರನೇ ಈಯತ್ತೆಗೆ ಸೇರಿದರು. ಬಾಲ್ಯ ಕಳೆಯುತ್ತಿರುವಂತೆಯೇ ಓದು ನಿಲ್ಲಿಸಬೇಕಾಯಿತು. ಮತ್ತೆ ಶಾಲೆಯ ಮೆಟ್ಟಲು ಹತ್ತಲಿಲ್ಲ. ಗಂಗಮ್ಮನವರು ಶಾಲೆಯಲ್ಲಿ ಓದಿದ್ದೇ ಸ್ವಲ್ಪ, ಅದೂ ಮರಾಠಿ ಮಾಧ್ಯಮದಲ್ಲಿ. ಕನ್ನಡ ಓದಲು ಕಲಿತದ್ದು ಗಂಡನ ಮನೆಗೆ ಬಂದ ಮೇಲೆಯೇ.

ಅಜ್ಜ ಚನಬಸಪ್ಪ ಬೆಳಗಾವಿಯ ಅರಟಾಳ ಗಿಲಗಂಚಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಸಿರಸಂಗಿ ಲಿಂಗರಾಜರ ತ್ಯಾಗ ಮನೆಮಾತಾಗಿದ್ದ ಕಾಲವದು. ಮನೆಯಲ್ಲಿ ಸಿರಸಂಗಿ ಲಿಂಗರಾಜರ ತ್ಯಾಗವನ್ನು ಅಜ್ಜ ಕತೆಮಾಡಿ ಹೇಳುತ್ತಿದ್ದರು. ಗಂಗಮ್ಮನಿಗೆ ತಿಳಿಯದಂತೆ ಎಳಮೆಯಲ್ಲಿಯೇ ತ್ಯಾಗ, ಸೇವೆಯ ಬೀಜಗಳು ಮನೋಭೂಮಿಯಲ್ಲಿ ಬಿತ್ತಲ್ಪಟ್ಟವು.

ಬಾಲ್ಯವಿವಾಹ ಪ್ರಚಲಿತವಿದ್ದ ಕಾಲ. ಗಂಗಮ್ಮನಿಗೆ ಹನ್ನೆರಡು ತುಂಬಿದಾಗ ಅಜ್ಜ ಚನ್ನಬಸಪ್ಪನವರು ಆಗಿನ ಪದ್ಧತಿಯಂತೆ ಮುದ್ದೇಬಿಹಾಳದ ಆಗರ್ಭ ಶ್ರೀಮಂತರಾದ ಚಿನಿವಾರ ಬಸಪ್ಪನವರ ಮಗ ವೀರಪ್ಪನವರಿಗೆ ಧಾರೆ ಎರೆದು ಕೊಟ್ಟರು.

ವೀರಪ್ಪನವರದು ಗೌರವಾನ್ವಿತ ಕುಟುಂಬ. ಪರೋಪಕಾರಿ ಜೀವನ. ಸಾಧು ಸಜ್ಜನಿಕೆಯ ಸ್ವಭಾವ. ಶಾಂತಿ–ಸಮಾಧಾನಗಳು ಮೈವೆತ್ತಿದಂತಿದ್ದ ವ್ಯಕ್ತಿತ್ವ.

ಗಂಗಮ್ಮ ವೀರಪ್ಪನವರ ವಿವಾಹದಿಂದ ಹಾಲಿನಲ್ಲಿ ಜೇನು ಬೆರಿಸಿದಂತಾಯಿತು.

ವೀರಪ್ಪನವರದು ಕೆಂಪು ಮಿಶ್ರಿತ ಗೌರವರ್ಣ. ಎತ್ತರದ ನಿಲವು. ತುಂಬಿದ ಸುಂದರ ದುಂಡುಮುಖ. ನೀಳವಾದ ಮೂಗು. ಉದ್ದವಾದ ಮೀಸೆ. ಜರದಂಚಿನ ರುಮಾಲು. ಎರಡು ಮುತ್ತಿನ ಮೇಲು ಮುರುವು. ಬಿಳಿ ಅಂಗಿ. ಬಿಳಿ ಕೋಟು. ಕೋಟಿನಲ್ಲಿ-ಬೆಳ್ಳಿ ಚೈನದ ವಾಚು. ಜರದಂಚಿನ ಅಡ್ಡ ಶೆಲ್ಲೆ. ತಿದ್ದಿ ತೀಡಿದ ಧೋತರ. ಮೈ ಮನಸ್ಸು, ಉಡುಗೆ ತೊಡುಗೆ, ಕುಳಿತುಕೊಳ್ಳಲು ಉಪಯೋಗಿಸುತ್ತಿದ್ದ ಗಾದಿಗಳ ಮೇಲ್ ಹೊದಿಕೆ ಎಲ್ಲವೂ ಶುಭ್ರ, ಸುಂದರ, ಕಲಂಕ ರಹಿತ. ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕು ಅನ್ನಿಸುವಂಥ ಆಕರ್ಷಕ ಸುಂದರ ವ್ಯಕ್ತಿತ್ವ.

ವೀರಪ್ಪನವರಿಗೆ ಒಬ್ಬ ಅಣ್ಣ ಮತ್ತು ಆರು ಜನ ಅಕ್ಕತಂಗಿಯರು. ಗಂಗಮ್ಮನವರು ಗಂಡನ ಮನೆಗೆ ಬರುವುದರೊಳಗಾಗಿ ಭಾವ ಬಸಲಿಂಗಪ್ಪ ಸುಮಾರು ಇಪ್ಪತ್ತೈದರ ಎಳವೆಯಲ್ಲಿಯೇ ಕಾಲವಶನಾಗಿದ್ದ. ಅವನ ಇದ್ದ ಒಬ್ಬಳೇ ಮಗಳನ್ನು ವೀರಪ್ಪನವರು ವಿವಾಹ ಮಾಡಿಕೊಟ್ಟರು.

ವೀರಪ್ಪನವರಿಗೆ ಗಂಗಮ್ಮನವರು ಮೊದಲನೆಯ ಹೆಂಡತಿಯೇನೂ ಆಗಿರಲಿಲ್ಲ, ನಾಲ್ಕನೆಯವರು. ಇವರಿಗಿಂತ ಮೊದಲು ಮದುವೆಯಾದವರಲ್ಲಿ ಮೊದಲನೆಯವಳು ಶ್ರೀಮತಿ ಅಡಿವೆವ್ವ. ಕಮತಿಗಿಗೆ ಕೊಟ್ಟ ವೀರಪ್ಪನವರ ಅಕ್ಕನ ಮಗಳು. ಅಲ್ಲಿಯ ನಾಗಠಾಣ ಮನೆತನದಿಂದ ಬಂದವಳು. ವೀರಪ್ಪನವರಿಗಿಂತ ಕೇವಲ ಎರಡು ವರ್ಷ ಚಿಕ್ಕವಳು. ಅಡಿವೆವ್ವ ಗರ್ಭವತಿಯಾದಾಗ ತವರುಮನೆ ಗಂಡನ ಮನೆಗಳೆರಡರಲ್ಲೂ ಸಂಭ್ರಮ ಸಡಗರ. ದಿನತುಂಬಿ ಗಂಡು ಹಡೆದಳು. ಸಡಗರ ಸಾವಿರಮಡಿಯಾಯಿತು. ಆದರೆ ಕೂಸು ಆಯುಷ್ಯ ಬೇಡಿ ಬಂದಿರಲಿಲ್ಲ. ಕೂಡಲೇ ಅಸುನೀಗಿತು. ಕನಸು ಕಮರಿತು. ಅಡಿವೆವ್ವನ ಆರೋಗ್ಯ ಅಷ್ಟೊಂದು ಸರಿ ಇರಲಿಲ್ಲ. ಹೀಗಾಗಿ ಮತ್ತೆ ಗರ್ಭವತಿಯಾಗಲಿಲ್ಲ. ಗಂಗಮ್ಮ 'ನಡೆಯಲು' ಬಂದ ಮೇಲೂ ಹತ್ತೆಂಟು ವರ್ಷ ಇದ್ದಳು.

ಶ್ರೀಮತಿ ಶಾವವ್ವ ವೀರಪ್ಪನವರ ಎರಡನೆಯ ಹೆಂಡತಿ. ಅಮೀನಗಡದ ಚಟ್ಟೇರ ಮನೆತನದಿಂದ ಬಂದವಳು. ಶಾವವ್ವ ಗರ್ಭವತಿಯಾದಾಗ ಎಲ್ಲರಿಗೂ ಎಣಿಕೆಮೀರಿದ ಆನಂದ. ಆಶೆ ಮತ್ತೆ ಚಿಗುರಿತು. ದಿನತುಂಬಿ ಗಂಡು ಹಡೆದಾಗ ಎಲ್ಲರಿಗೂ ಸ್ವರ್ಗ ಮೂರೇಗೇಣು ಉಳಿದಿತ್ತು. ಊರುತುಂಬ ಸಿಹಿ ಹಂಚಿದರು. ಈ ಸಂತಸ ಬಹಳ ದಿನ ಉಳಿಯಲಿಲ್ಲ. ಶಾವವ್ವ ಹಡೆದ ಹದಿಮೂರು ದಿನಗಳಲ್ಲಿಯೇ ತೀರಿಕೊಂಡಳು. ಗೋಳಸಂಗಿಯ ದೊಡ್ಡವ್ವ ಸಂಗನಬಸವ್ವ ಕೂಸನ್ನು ಜೋಪಾನ ಮಾಡಲು ಬಂದಳು. ತಾಯಿ ಇಲ್ಲದ ಕೂಸಿಗೆ ಬಸಪ್ಪನೆಂದು ನಾಮಕರಣ ಮಾಡಿದರು. ದೈವದಾಟ ವಿಚಿತ್ರ! ಮುಂದೆ ಆರು ತಿಂಗಳುಗಳಲ್ಲಿಯೇ ಹಸುಗೂಸು ಬಸಪ್ಪನೂ ತಾಯಿಯನ್ನೇ ಹಿಂಬಾಲಿಸಿದ. ತಾಯಿಗೆ, ಕೂಸಿಗೆ ಕುತ್ತು ಹತ್ತು ಎನ್ನುತ್ತಾರೆ. ಈ ಮಾತು ಮಾತೃಮರಣ ಮತ್ತು ಶಿಶುಮರಣ ಪ್ರಮಾಣಗಳು ಹೆಚ್ಚಿಗಿದ್ದ ಹಿಂದಿನ ಕಾಲಕ್ಕೆ ಸಹಜ.

ವೀರಪ್ಪನವರ ಮೂರನೆಯ ಹೆಂಡತಿ ಶ್ರೀಮತಿ ಶಿವಲಿಂಗವ್ವ. ನಿಡಗುಂದಿಯ ಪೋಟಗಿಯವರ ಮನೆತನಕ್ಕೆ ಸಂಬಂಧಿಸಿದವಳು. ವಿವಾಹವಾದ ಐದಾರು ತಿಂಗಳುಗಳಲ್ಲಿಯೇ ತೀರಿಕೊಂಡಳು.

ಈ ಸುಮಾರಿಗೆ ವೀರಪ್ಪನವರಿಗೆ ೪೧ ವರ್ಷ ವಯಸ್ಸು. ಇಬ್ಬರು ಹೆಂಡಿರು ಮತ್ತು ಇಬ್ಬರು ಮಕ್ಕಳನ್ನು ಕಳೆದುಕೊಂಡ ಅವರಲ್ಲಿ ನಿರುತ್ಸಾಹ ತುಂಬಿತ್ತು. ವೈರಾಗ್ಯಭಾವ ಮೂಡಿತ್ತು. ಮತ್ತೊಂದು ಮದುವೆಗೆ ಒಲ್ಲೆನೆಂದರು. ಇನ್ನೂ ಮಕ್ಕಳು ಪಡೆಯುವ ವಯಸ್ಸು. ಹಂಬಲವಂತೂ ಸರಿಯೆ. ಮೊದಲಿನ ಹೆಂಡತಿ ಅಡಿವೆವ್ವ ಇನ್ನೂ ಇದ್ದಳು. ಆದರೆ ಆರೋಗ್ಯದಿಂದಿರಲಿಲ್ಲ. ಅಗರ್ಭ ಶ್ರೀಮಂತಿಕೆಯ ಮನೆತನ ಬೆಳಗಬೇಕು, ಬೆಳೆಯಬೇಕು ಎಂಬ ಇಚ್ಛೆ ಸತಿ–ಪತಿಗಳಿಗೂ ಸಂಬಂಧಿಕರಿಗೂ ಇನ್ನೂ ಉಳಿದಿತ್ತು. ಅಡಿವೆವ್ವ ಮೊದಲಾದ ಅನೇಕರ ಪ್ರೀತಿಯ ಒತ್ತಾಯ ವೀರಪ್ಪನವರು ಇನ್ನೊಂದು ಮದುವೆಗೆ ಹೂಂ ಎನ್ನುವಂತೆ ಮಾಡಿತು.

ಬೆಳಗಾವಿ ಹತ್ತಿರದ ಶಾಪುರದ ಚೆನಬಸಪ್ಪನವರು ತೆಲಸಂಗ ಅವರ ಮೊಮ್ಮಗಳು ಗಂಗಮ್ಮ ರೂಪವತಿ ಮತ್ತು ಗುಣವತಿ ಎಂಬುದು ತಿಳಿದಿತ್ತು. ಕನ್ಯೆ ನೋಡಿ ಬಂದರು. ಮನಸ್ಸಿಗೆ ಬಂದಳು. ಆಗ ಗಂಗಮ್ಮನಿಗೆ ಕೇವಲ ಹದಿಮೂರು ವರ್ಷ ವಯಸ್ಸು. ಒಳ್ಳೇ ಮುಹೂರ್ತ ನೋಡಿದರು. ವಿವಾಹ ಮುದ್ದೇಬಿಹಾಳದಲ್ಲಿ ನಾಲ್ಕು ದಿನಗಳ ವರೆಗೆ ವಿಜೃಂಭಣೆಯಿಂದ ನಡೆಯಿತು. ಗಂಗಮ್ಮ ಮಾಲಮನೆಯ ಒಡತಿಯಾದಳು.

ಪತಿ ವೀರಪ್ಪನವರದು ಸುಂದರ ವ್ಯಕ್ತಿತ್ವ. ಸಾಧು ಸ್ವಭಾವ. ಧಾರ್ಮಿಕ ಮನೋಭಾವ. ಒಳಹೊರಗೂ ನಿಷ್ಕಲ್ಮಶ, ಸ್ಪಟಿಕದಂತೆ. ಶ್ರೀಮಂತಿಕೆಗಿಂತ ಹೃದಯದ ಶ್ರೀಮಂತಿಕೆ ಅಧಿಕವಾಗಿದ್ದಿತು. ಇವರ ಈ ಗುಣವನ್ನು ವಯೋವೃದ್ಧರಾದ ಶ್ರೀ ಸಂಗನಬಸಪ್ಪನವರು ನಾಗಠಾಣ ಆದಿಯಾಗಿ ಅನೇಕರು ಇಂದಿಗೂ ಸ್ಮರಿಸುತ್ತಾರೆ. ಜಳಕ ಮಾಡದೇ ಒಂದು ಹನಿ ನೀರನ್ನೂ ಬಾಯಿಯಲ್ಲಿ ಹಾಕುತ್ತಿರಲಿಲ್ಲ. ಅಯ್ಯನವರು ಪ್ರತಿದಿನ ತಪ್ಪದೇ ಮನೆಗೆ ಬರಲೇಬೇಕು. ಕರುಣಪ್ರಸಾದ ಕರುಣಿಸಬೇಕು. ಪ್ರಸಾದ ಸೇವಿಸಬೇಕು. ಆ ನಂತರವೇ ವೀರಪ್ಪನವರದು ಮತ್ತಿತರರದು ಪ್ರಸಾದ. ಇಷ್ಟಾಗಬೇಕಾದರೆ ಹೊತ್ತು ನೆತ್ತಿಯನ್ನು ದಾಟಿ ಹೋಗುತ್ತಿತ್ತು. ಸ್ವಾಮಿಗಳಿಗೆ, ಶರಣರಿಗೆ ಇವರ ಮನೆಯ ಬಾಗಿಲು ಯಾವಾಗಲೂ ತೆರೆದಿರುತ್ತಿತ್ತು. ಚಿತ್ರದುರ್ಗದ ಜಗದ್ಗುರುಗಳು, ಧಾರವಾಡದ ಮೃತ್ಯುಂಜಯ ಅಪ್ಪಗಳು, ಬಂಥನಾಳ ಸಂಗನಬಸವ ಶಿವಯೋಗಿಗಳು, ಹರ್ಡೇಕರ ಮಂಜಪ್ಪನವರು ಮುಂತಾದವರು ಬಂದು ಇವರ ಮನೆಯಲ್ಲಿ ಪೂಜೆ ಪ್ರಸಾದ ತೀರಿಸಿಕೊಂಡು ಹೋಗಿದ್ದಾರೆ. ಇಂಥವರನೇಕರು ಊರಿಗೆ ಬಂದಾಗ ಇವರ ಮನೆಗೆ ತಪ್ಪದೇ ಬರುತ್ತಿದ್ದರು. ಇದು ಇಂದಿಗೂ ನಡೆದುಕೊಂಡು ಬಂದಿದೆ. ಭಕ್ತಿಪೂರ್ವಕ ಆತಿಥ್ಯಕ್ಕೆ ಮುದ್ದೇಬಿಹಾಳದಲ್ಲಿ ಗಂಗಮ್ಮನವರ ಮನೆಯೇ ಮೊದಲಿನದು. ಧಾರ್ಮಿಕ ಕಾರ್ಯಗಳು ಮನೆ

ಗಷ್ಟೇ ಸೀಮಿತವಾಗಿರಲಿಲ್ಲ. ಆಗಾಗ ನಡೆಯುತ್ತಿದ್ದ ಕೀರ್ತನೆ, ಪುರಾಣ ಪ್ರವಚನಗಳಿಗೆ ವೀರಪ್ಪನವರು ಮತ್ತು ಗಂಗಮ್ಮನವರು ಹೋಗುತ್ತಿದ್ದರು. ನೆಮ್ಮದಿ ಪಡೆಯುತ್ತಿದ್ದರು.

ತಂಟೆ ತಕರಾರುಗಳು, ಮೋಸ ವಂಚನೆಗಳು, ಕಪಟ ವ್ಯವಹಾರಗಳು ವೀರಪ್ಪನವರಿಗೆ ಸೇರುತ್ತಿರಲಿಲ್ಲ. ರಾಜಮಾರ್ಗದಲ್ಲಿ ನಡೆಯುವವರು. 'ಏನು ಬಂದಿರಿ, ಹದುಳವಿದ್ದೀರೇ' ಎಂದು ಒಡನೆಯೇ ನುಡಿಯುವ ಸ್ವಭಾವವರು. ಯಾವುದೇ ಮಗುವನ್ನೂ ಕೂಡ ತುಚ್ಛವಾಗಿ, ಅಸಡ್ಡೆಯಿಂದ ಕಾಣುತ್ತಿರಲಿಲ್ಲ. ಭಿಡೆ ಮುರವತ್ತುಗಳಿಗೆ ಒಳಗಾಗದವರು. ಮತ್ತೊಬ್ಬರ ಹಂಗಿನಲ್ಲಿ ಬೀಳದವರು. ಮುದ್ದೇಬಿಹಾಳದ ನಾಶಿ ಸಂಗಪ್ಪ ಅಷ್ಟೇನೂ ಶ್ರೀಮಂತ ವ್ಯಕ್ತಿಯಾಗಿರಲಿಲ್ಲ. ಆದರೂ ಅವರಿಗೂ ಮತ್ತು ವೀರಪ್ಪನವರಿಗೂ ಸಖ್ಯವಿತ್ತು. ಸಿಂದಗಿಯು ವೀರಪ್ಪನವರ ಸಂಬಂಧಿಕರ ಊರು. ಒಮ್ಮೆ ಅಲ್ಲಿಗೆ ಇಬ್ಬರೂ ಹೋಗಿದ್ದರು. ಒಂದೆರಡುದಿನ ಅಲ್ಲಿ ಉಳಿಯಬೇಕಾಗಿ ಬಂತು. ಬಾವಿಯ ಮೇಲೆ ಮೊದಲು ವೀರಪ್ಪನವರು ಜಳಕ ಮಾಡಿದರು. ಶ್ರೀಮಂತರು, ಗೌರವಾನ್ವಿತರು ಎಂದು ವೀರಪ್ಪನವರು ಬಿಟ್ಟಿದ್ದ ಧೋತರವನ್ನು ನಾಶಿ ಸಂಗಪ್ಪ ಒಗೆದು ಮಡಿ ಮಾಡಿದರು. ನಂತರ ಸಂಗಪ್ಪ ಸ್ನಾನ ಮಾಡಬೇಕಾದ ಸರತಿ. ಅವನು ಬಿಟ್ಟ ಧೋತರ ಒಗೆದು ವೀರಪ್ಪನವರು ಭಿಡೆ ಮುಟ್ಟಿಸಿದರು. ಬೀಗರುವರ ನಿಶ್ಚಯ ಮತ್ತು ಮದುವೆಯಂತಹ ಸಾಮಾಜಿಕ ಕಾರ್ಯಗಳನ್ನು ವೀರಪ್ಪನವರು ಮುಂದೆ ನಿಂತು ಮಾಡಿಸುತ್ತಿದ್ದರು. ಆದರೆ ಆಗಲೂ ಅವರು ಅಲ್ಪೋಪಹಾರ ಮತ್ತು ಊಟ ತಮ್ಮ ಮನೆಯಲ್ಲಿಯೇ ಮಾಡುತ್ತಿದ್ದರು.

ಸ್ವಾತಂತ್ರ್ಯಪೂರ್ವದ ಇಪ್ಪತ್ತನೇ ಶತಮಾನ. ನಾಲ್ಕನೆಯ ದಶಕ. ಕಳವು-ದರೋಡೆ, ಕೊಲೆ-ಸುಲಿಗೆಯಂಥ ಅಪರಾಧಗಳನ್ನು ಪರಿಶೀಲಿಸಿ ನ್ಯಾಯ ದಾನ ಮಾಡುವ ಹಕ್ಕು ಅಂದು ಮುನ್ಸಿಫ್ ಕೋರ್ಟಿಗೆ ಇರಲಿಲ್ಲ. ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಗೌರವನ್ಯಾಯಾಧೀಶರಿಗಿತ್ತು. ಮುದ್ದೇಬಿಹಾಳ ತಾಲೂಕಿನ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಐದು ಜನ ಗೌರವನ್ಯಾಯಾ ಧೀಶರಿದ್ದರು. ಅವರಲ್ಲಿ ವೀರಪ್ಪನವರೂ ಒಬ್ಬರಾಗಿದ್ದರು. ಆಶೆ ಆಮಿಷ ಗಳಿಗೆ, ಭಿಡೆ ಮುರವತ್ತುಗಳಿಗೆ ಒಳಗಾಗದೆ ಇವರು ನ್ಯಾಯ ನಿರ್ಣಯ ತೆಗೆದು ಕೊಳ್ಳಲು ಸಲಹೆ ಸೂಚನೆ ನೀಡುತ್ತಿದ್ದರು.

ಸ್ವಾತಂತ್ರ್ಯಪೂರ್ವದ ಮುಂಬೈ ಕರ್ನಾಟಕದಲ್ಲಿ ಜಿಲ್ಲಾ ಲೋಕಲ್ ಬೋರ್ಡು ಅನೇಕ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುವ ಸ್ಥಾನೀಯ ಸ್ವಯಮಾಡಳಿತ ಸಂಸ್ಥೆಯಾಗಿತ್ತು. ಮುದ್ದೇಬಿಹಾಳ ತಾಲೂಕಿನ ವತಿಯಿಂದ ನೇಮಿಸಲ್ಪಟ್ಟ ಸದಸ್ಯರಲ್ಲಿ ವೀರಪ್ಪನವರೂ ಒಬ್ಬರಾಗಿದ್ದರು. ಅನೇಕ ಸಾರ್ವ ಜನಿಕ ಜನಹಿತ ಕಾರ್ಯ ಕೈಗೊಳ್ಳಲು ಇವರು ನೆರವು ನೀಡುತ್ತಿದ್ದರು.

ವೀರಪ್ಪನವರು ರಸಿಕರು ಮತ್ತು ಕಲಾರಾಧಕರೂ ಆಗಿದ್ದರು. ಒಂದೆರಡು ಸಲ ನಾಟಕದಲ್ಲಿ ಪಾತ್ರವನ್ನೂ ಮಾಡಿದ್ದರು. ಹವ್ಯಾಸಿ ನಾಟಕಗಳಿಗೆ ಹಲ

ವಾರು ಕಾಲ ಮಾರ್ಗದರ್ಶನ ಮಾಡಿದ್ದರು. ದನಕರುಗಳನ್ನು ಕಟ್ಟುವ ಹಟ್ಟಿ, ಕೃಷಿ ಉತ್ಪಾದನೆಗಳನ್ನು ಸಂಗ್ರಹಿಸುವ ಉಗ್ರಾಣ ಮತ್ತು ಬಾವಿ ಇದ್ದ ಚಿನಿವಾಲರ ದೊಡವಿನ ಮನೆಯ ಭಾಗಗಳಾಗಿರಲಿಲ್ಲ. ಇದು ಕಾದಾಯಪ್ಪನ ಮನೆಯಾಗಿತ್ತು. ಇದನ್ನು ವೀರಪ್ಪನವರು ಖರೀದಿ ಮಾಡಿದರು. ಒಂದು ಬದಿಯಲ್ಲಿ ದನಕರುಗಳು ನಿಲ್ಲಲು ಹಟ್ಟಿ ಮಾಡಿದರು. ಇನ್ನೊಂದು ಬದಿಯನ್ನು ನಾಟಕದ ತರಬೇತಿಗಾಗಿ ಬಳಸುತ್ತಿದ್ದರು. ಅಂದು ನಾಟಕದ ತರಬೇತಿಯಲ್ಲಿ ಬಳಸುತ್ತಿದ್ದ ಸಾಮಾನುಗಳಲ್ಲಿ ಜೀರ್ಣಸ್ಥಿತಿಯಲ್ಲಿರುವ ಕೆಲವನ್ನು ಗಂಗಮ್ಮನವರ ಮನೆಯಲ್ಲಿ ಇಂದಿಗೂ ನೋಡಬಹುದಾಗಿದೆ.

ಹುಟ್ಟಿದ ಮಕ್ಕಳು ಬದುಕಲಿಲ್ಲ, ಮತ್ತೆ ಮಕ್ಕಳಾಗಲಿಲ್ಲ ಎಂಬುದೊಂದೇ ಕೊರಗು ವೀರಪ್ಪನವರಿಗೆ. ಅದು ತಮ್ಮ ಶಕ್ತಿಗೆ ಮೀರಿದ್ದು, ದೈವೇಚ್ಛೆಗೆ ಬಿಟ್ಟದ್ದೆಂದು ನೆಮ್ಮದಿಯಿಂದಿದ್ದರು. ಜೀವನವಿಡೀ ಶಿಸ್ತು, ಸಂಯಮ, ಶಾಂತಿ, ಸಮಾಧಾನಗಳೇ ಒಡೆದು ಕಾಣುತ್ತಿದ್ದವು.

ವೀರಪ್ಪನವರಿಗೆ ಒಮ್ಮೆ ಇಳಿವಯಸ್ಸಿನಲ್ಲಿ ವಿಷಮಶೀತ ಜ್ವರದ ಬಾಧೆ ಉಂಟಾಯಿತು. ಮುದ್ದೇಬಿಹಾಳದಲ್ಲಿಯ ವೈದ್ಯರಿಂದ ಶುಶ್ರೂಷೆ ನಡೆಯಿತು. ಗುಣ ಕಂಡುಬರಲಿಲ್ಲ; ವಿಜಾಪುರದಿಂದಲೂ ವೈದ್ಯರನ್ನು ಕರೆಸಲಾಯಿತು. ಏನೂ ಸುಧಾರಣೆ ಕಂಡುಬರಲಿಲ್ಲ. ಆಗ ಸನಿಹದಲ್ಲಿ ತಜ್ಞ ವೈದ್ಯರಾಗಲೀ, ಪರಿಣಾಮಕಾರಿ ಔಷಧಗಳಾಗಲೀ ಇರಲಿಲ್ಲ. ೧೯೪೭ನೇ ಇಸ್ವಿ, ನವ್ಹೆಂಬರ್ ಎಂಟನೇ ದಿನಾಂಕ. ಬೆಳಗಿನ ದಿನ ದೀಪಾವಳಿಯ ನೀರು ತುಂಬುವ ಹಬ್ಬ. ಲಕ್ಷ್ಮೀ ಪೂಜೆಯ ಮುನ್ನಾದಿನ. ತಮ್ಮ ಐವತ್ತೊಂಭತ್ತನೆಯ ವಯಸ್ಸಿನಲ್ಲಿ ವೀರಪ್ಪನವರು ನಿಧನರಾದರು. ಆತ್ಮಜ್ಯೋತಿ ಅನಂತಜ್ಯೋತಿಯಲ್ಲಿ ಲೀನವಾಯಿತು! ಆಗ ಗಂಗಮ್ಮನವರಿಗೆ ಕೇವಲ ಮೂವತ್ತೆರಡು ವರ್ಷ ವಯಸ್ಸು. ಆಕಾಶವೇ ಮೈಮೇಲೆ ಬಿದ್ದ ಅನುಭವ. ದಿಕ್ಕೇ ತೋಚದಂತಾಯಿತು. ಆಧಾರ ಉರುಳಿಬಿದ್ದ ಭಯದಿಂದ ಉಂಟಾದ ನಡುಕ. ದೀಪಾವಳಿಯ ಬೆಳಕನ್ನೆಲ್ಲ ತನ್ನ ಪಾಲಿಗೆ ತಿಂದುಹಾಕಿದ ಗಳಿಗೆ.

ಪತಿ ಇದ್ದಾಗ ಆಗಿನ ಕಾಲದ ಪದ್ಧತಿಗೆ ಅನುಗುಣವಾಗಿ ಸಾಮಾನ್ಯವಾಗಿ ಮೇಲುಜಾತಿಯ ಸ್ತ್ರೀಯರಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಒಳಭಾವಣಿಯಲ್ಲಿಯೇ ಪತಿ ವೀರಪ್ಪನವರು ಕೂಡ್ರುತ್ತಿದ್ದರು. ವ್ಯವಹಾರ ನಡೆಸುತ್ತಿದ್ದರು. ಅನೇಕರು ಮೇಲಿಂದಮೇಲೆ ಬರುಹೋಗುವುದು ನಡೆದೇ ಇರುತ್ತಿತ್ತು. ಆಗ ಗಂಗಮ್ಮನವರಿಗೆ ಪಡಸಾಲೆಯಲ್ಲಿಯೂ ಅಡಿ ಇಡಲೂ ಸಾಧ್ಯವಾಗುತ್ತಿರಲಿಲ್ಲ. ಅಡುಗೆಮನೆ, ನಡುಮನೆಯಲ್ಲಿಯೇ ಹೆಚ್ಚಿನ ವೇಳೆ ಕಳೆಯಬೇಕು. ಅಪರೂಪಕ್ಕೆ ಶೀಗೆ ಹುಣ್ಣಿವೆ, ಎಳ್ಳ ಅಮವಾಸ್ಯೆಗಳಲ್ಲಿ ಹೊಲಕ್ಕೆ ಹೋಗಬೇಕಾದಾಗ ಅಥವಾ ಊರಿಗೆ ಹೋಗಬೇಕಾದಾಗ ಬಾಗಿಲ ಎದುರಿಗೇ ಕೊಳ್ಳಾರಿಕಟ್ಟಿದ ಬಂಡಿ ಬಂದು ನಿಲ್ಲುತ್ತಿತ್ತು. ಇಂಥ ಸ್ಥಿತಿ ಇದ್ದ ಕಾಲದಲ್ಲಿ ಗಂಗಮ್ಮನವರಿಗೆ ಪತಿಯನ್ನು ಕಳೆದುಕೊಂಡಾಗ ಆದ ದುಃಖದ ಆಳವನ್ನು ಅರಿಯಲೂ ಅಸಾಧ್ಯ.

ವ್ಯಕ್ತಿತ್ವ ಬೆಳವಣಿಗೆಗೆ ಅವಕಾಶ ನೀಡಿದರೆ ಪುರುಷನಿಗೆ ಸರಿಸಮನಾದ ರೀತಿಯಲ್ಲಿ ಕಾರ್ಯ ಮಾಡುವ ಸಾಮರ್ಥ್ಯ ಸ್ತ್ರೀಗೂ ಇರುತ್ತದೆಂಬುದಕ್ಕೆ ಗಂಗಮ್ಮನವರು ಪತಿಯ ಮರಣಾನಂತರ ಸಾಧಿಸಿದ ಸಾಧನೆ ಸಿದ್ಧಿಗಳೇ ಜೀವಂತಸಾಕ್ಷಿ.

ಪತಿ ವೀರಪ್ಪನವರು ಲಿಂಗೈಕ್ಯರಾದ ಮೇಲೆ ಅಗರ್ಭ ಶ್ರೀಮಂತಿಕೆಯ ಮನೆತನದ ಕಾರ್ಯಭಾರವನ್ನು ಮೈಛಳಿ ಬಿಟ್ಟು ನಿರ್ಭಯದಿಂದ ನಡೆಸಿಕೊಂಡು ಹೋಗುವ ಸಾಮರ್ಥ್ಯ ಪಡೆಯಲು ಗಂಗಮ್ಮನವರಿಗೆ ವರುಷಗಳೇ ಬೇಕಾದವು. ಈ ಮಧ್ಯೆ ಹಲಕೆಲವು ಸಂಬಂಧಿಕರ ಬಾಯಲ್ಲಿ ನೀರೂರಿ ತಂತಮ್ಮ ಮಕ್ಕಳನ್ನು ದತ್ತಕ ಕೊಡುವ ವಿಚಾರಗಳೂ ನುಸುಳಿದವು. ಸ್ವತಂತ್ರ ವಿಚಾರವಾದಿಯೂ, ಸ್ಪಷ್ಟವಾದಿಯೂ ಆದ ಗಂಗಮ್ಮನವರ ಮುಂದೆ ಇವನ್ನು ನೇರವಾಗಿ ಪ್ರಸ್ತಾಪ ಮಾಡುವ ಧೈರ್ಯ, ಯಾರಲ್ಲಿಯೂ ಇರಲಿಲ್ಲ. ಗಂಗಮ್ಮನವರು ಸಾರಾಸಾರ ವಿವೇಚನೆ ಮಾಡುವ ಶಕ್ತಿಯುಳ್ಳವರು. ಯಾವುದಕ್ಕೂ ಅವಸರ ಮಾಡಲಿಲ್ಲ. ದತ್ತಕ ಮಾಡಿಕೊಂಡ ಕೆಲವೊಂದು ಮನೆತನಗಳ ಅಗರ್ಭ ಶ್ರೀಮಂತಿಕೆ ದುರ್ವ್ಯಸನಿಯಾದ ದತ್ತಕ ಮಗನಿಂದ ಹೇಗೆ ಮಂಜಿನಂತೆ ಕರಗಿಹೋಯಿತು ಎಂಬುದನ್ನು ಕಣ್ಣಾರೆ ಕಂಡಿದ್ದರು. ಮೇಲಾಗಿ ದತ್ತಕದ ಮುನ್ನ ಮತ್ತು ದತ್ತಕ ಮಾಡಿಕೊಂಡ ಹೊಸದರಲ್ಲಿ ದತ್ತಕ ಮಾಡಿಕೊಂಡವರ ಬಗೆಗಿನ ಪ್ರೀತಿ ಗೌರವಾದಾರಗಳು ಕಾಲಕಳೆದಂತೆ ಮಾಯವಾಗಿ, ಬಾಳು ಹೇಗೆ ಅಸಹನೀಯವಾಗುವುದೆಂಬುದನ್ನೂ ಅರಿತಿದ್ದರು.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಪ್ಲೇಗು, ಮೈಲಿಬೇನೆ ಮೊದಲಾದ ಅಂಟು ರೋಗಗಳು ಅಪಾರ ಸಂಖ್ಯೆಯಲ್ಲಿ ಜನರನ್ನು ಆಹುತಿ ತೆಗೆದುಕೊಳ್ಳುತ್ತಿದ್ದವು. ಮಾತೋಶ್ರೀ ಗಂಗಮ್ಮನವರು ಮೂರು ಭೀಕರ ಪ್ಲೇಗುಗಳನ್ನು ಕಂಡಿದ್ದಾರೆ. ಎರಡು ಸಲ ಪತಿ ವೀರಪ್ಪನವರು ಇರುವಾಗಲೇ. ಇನ್ನೊಂದು ಸಲ ಅವರು ಲಿಂಗೈಕ್ಯರಾದ ಮೇಲೆ. ಆಗ ಮುದ್ದೇಬಿಹಾಳದಲ್ಲಿ ಬಹಳಷ್ಟು ಜನರು ಊರಹೊರಗೆ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತಿದ್ದರು. ಸಮೀಪದ ಊರುಗಳಲ್ಲಿ ಆಪ್ತೇಷ್ಟರನ್ನು ಹೊಂದಿದ ಕೆಲವರು ಅಲ್ಲಿಗೆ ಹೋಗುತ್ತಿದ್ದರು. ಅಂಥ ಪ್ರಸಂಗಗಳಲ್ಲಿ ಗಂಗಮ್ಮನವರು ಕೃಷ್ಣಾ ತೀರದ ಆಲಮಟ್ಟಿಗೆ ಹೋಗುತ್ತಿದ್ದರು. ಇದಕ್ಕೆ ಕಾರಣಗಳು ಎರಡು. ಒಂದು ಕಾರಣ, ಇವರ ಮನೆ ಗುರುಗಳಾದ ಚಿರೀಮಠದ ಪಟ್ಟದದೇವರು ಆಲಮಟ್ಟಿಯವರು. ಇನ್ನೊಂದು ಕಾರಣ, ಆಲಮಟ್ಟಿಯು ಶರಣ ಹರ್ಡೇಕರ ಮಂಜಪ್ಪನವರ ಆಶ್ರಮದಿಂದ ಪುಣ್ಯಕ್ಷೇತ್ರವಾಗಿದ್ದುದು. ಧಾರವಾಡದ ಮೃತ್ಯುಂಜಯ ಮಹಾಸ್ವಾಮಿಗಳು, ಬಂಥನಾಳ ಶಿವಯೋಗಿಗಳು ಮೊದಲಾದವರು ಮೇಲಿಂದ ಮೇಲೆ ಆಶ್ರಮಕ್ಕೆ ಬಂದು ಹೋಗುತ್ತಿದ್ದರು. ಗಂಗಮ್ಮನವರು ಪ್ಲೇಗು ನಿಮಿತ್ತ ಆಲಮಟ್ಟಿಯಲ್ಲಿ ವಾಸ್ತವ್ಯ ಮಾಡಿದಾಗ ಧಾರವಾಡದ ಮೃತ್ಯುಂಜಯ ಮಹಾಸ್ವಾಮಿಗಳು ಮೊದಲಾದವರ ದರ್ಶನ, ಆಶೀರ್ವಾದ ಮತ್ತು ಉಪದೇಶಗಳಿಂದ ಪುನೀತರಾದುದನ್ನು ಇಂದಿಗೂ ಸ್ಮರಿಸುತ್ತಾರೆ. ಹರ್ಡೇಕರ ಮಂಜಪ್ಪನವರ

ಆಶ್ರಮದಲ್ಲಿ ಹಲವಾರು ಮಹಾಮಹಿಮರ, ದಾಸಿಗಳ ಜೀವನಚರಿತ್ರೆಗಳೂ ಗಂಗಮ್ಮನವರಿಗೆ ಓದಲು ಸಿಗುತ್ತಿದ್ದವು. ಅವುಗಳಲ್ಲಿ ಸಿರಸಂಗಿ ಲಿಂಗರಾಜರ ಜೀವನಚರಿತ್ರೆಯು ಪುಸ್ತಿಕೆ ಅವರ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರಿತೆಂದು ಹೇಳುತ್ತಾರೆ. ಜೊತೆಗೆ ಬಂಥನಾಳ ಶಿವಯೋಗಿಗಳಂಥವರ ಸತ್ಪ್ರೇರಣೆ ಎಲ್ಲವೂ ಸೇರಿ ಪವಿತ್ರಕಾರ್ಯಗಳಿಗೆ ಮತ್ತು ಘನ ಉದ್ದೇಶಗಳಿಗೆ ಆದಾಯವನ್ನು ವ್ಯಯಮಾಡಲು ಮನೋಭೂಮಿಕೆ ಸಿದ್ಧವಾಯಿತು. ಸತ್ಕಾರ್ಯಗಳಿಗೆ ಹಣ ಹಳ್ಳವಾಗಿ, ಹೊಳೆಯಾಗಿ ಹರಿಯುಹತ್ತಿತು.

ಬಸವನ-ಬಾಗೇವಾಡಿಯಲ್ಲಿ ಸಿಂಹಾಸನ ಮಾಮಲೇದಾರರ ಮುಂದಾಳುತನದಲ್ಲಿ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ನಡೆದಿತ್ತು. ಮಾತೋಶ್ರೀ ಗಂಗಮ್ಮನವರು ಸ್ವಸಂತೋಷದಿಂದ ಐದುಸಾವಿರದ ಒಂದು ರೂಪಾಯಿ ಕೊಟ್ಟು ಕೃತಾರ್ಥರಾದರು. ಆಗಿನ ಕಾಲಕ್ಕೆ ಇದು ದೊಡ್ಡ ಮೊತ್ತವೇ ಆಗಿತ್ತು.

ಬಂಥನಾಳದ ಶ್ರೀ ಸಂಗನಬಸವ ಶಿವಯೋಗಿಗಳು ವಿಜಾಪೂರದಲ್ಲಿ ಗುರುಕುಲ ಕಟ್ಟಿಸಲು ತೊಡಗಿದ್ದರು. ಅದಕ್ಕೂ ಐದುಸಾವಿರದ ಒಂದು ರೂಪಾಯಿ ಕಾಣಿಕೆ ಕೊಟ್ಟರು.

ಒಂದು ಕಾಲಕ್ಕೆ ಮುದ್ದೇಬಿಹಾಳ ತಾಲೂಕು ಶೈಕ್ಷಣಿಕವಾಗಿ ಅತಿ ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿತ್ತು. ಪ್ರೌಢ ಶಾಲೆಗಳೂ ಸಾಕಷ್ಟಿರಲಿಲ್ಲ. ಇದ್ದ ಒಂದೆರಡು ಪ್ರೌಢ ಶಾಲೆಗಳಿಗೆ ಸ್ವತಂತ್ರವಾದ ಮತ್ತು ಸಮರ್ಪಕವಾದ ಕಟ್ಟಡಗಳಿರಲಿಲ್ಲ. ಇದಕ್ಕೆ ಮುದ್ದೇಬಿಹಾಳ ನಗರ ಹೊರತಾಗಿರಲಿಲ್ಲ. ವೀರಶೈವ ವಿದ್ಯಾವರ್ಧಕ ಸಂಘದವರು ೧೯೫೧ ರಷ್ಟು ಹಿಂದೆಯೇ ಸ್ಥಾಪಿಸಿದ ಪ್ರೌಢ ಶಾಲೆಗೆ ಕಟ್ಟಡವನ್ನು ಕಟ್ಟಿಸಿಕೊಡಲು ಮಾತೋಶ್ರೀ ಗಂಗಮ್ಮನವರು ಮುಂದೆ ಬಂದರು. ನೂತನ ಕಟ್ಟಡದ ಕೋನಶಿಲೆ ಸಮಾರಂಭವು ಸೋಮವಾರ ದಿನಾಂಕ ೨೪, ಡಿಸೆಂಬರ್ ೧೯೬೨ ರಂದು ನೆರವೇರಿತು. ಬಂಥನಾಳದ ಶ್ರೀ ನಿ. ಪ್ರ. ಸಂಗನಬಸವ ಶಿವಯೋಗಿಗಳು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯದ ಅಂದಿನ ಶಿಕ್ಷಣ ಮಂತ್ರಿ ಸನ್ಮಾನ್ಯಶ್ರೀ ಎಸ್. ಆರ್. ಕಂಠಿ ಅವರು ಅಡಿಗಲ್ಲು ಇಟ್ಟರು. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀಯುತ ಜೆ. ಎಸ್. ದೇಶಮುಖ, ಉಪಾಧ್ಯಕ್ಷರಾದ ಶ್ರೀಯುತ ಎಸ್. ಎನ್. ನಾಡಗೌಡ, ಮುದ್ದೇಬಿಹಾಳ ಮತ್ತು ಸುತ್ತು ಮುತ್ತಲಿನ ಊರುಗಳಿಂದ ಬಂದ ಮಹಾಜನರನೇಕರು ಸಮಾರಂಭದಲ್ಲಿ ಪಾಲುಗೊಂಡಿದ್ದರು.

ಪ್ರೌಢಶಾಲೆಯ ಕಟ್ಟಡದ ಕಾರ್ಯ ಕೂಡಲೇ ಪ್ರಾರಂಭವಾಯಿತು. ವೀರಶೈವ ವಿದ್ಯಾವರ್ಧಕ ಸಂಘದ ಅಂದಿನ ಕಾರ್ಯದರ್ಶಿ ಶ್ರೀ ಎಸ್. ವ್ಹಿ. ತಡಸದ, ಕಟ್ಟಡ ಸಮಿತಿಯ ಕಾರ್ಯದರ್ಶಿ ಡಾ. ವ್ಹಿ. ಎ. ಬಲಕುಂದಿ ಮತ್ತು ಶ್ರೀ ಎಸ್. ಕೆ. ಗುಡ್ನಾಳ ಇವರು ಕಟ್ಟಡ ಕಾರ್ಯದ ಮೇಲ್ವಿಚಾರಣೆಯ ಹೊಣೆ ಹೊತ್ತರು. ಎರಡು-ಮೂರು ವರ್ಷಗಳಲ್ಲಿ ಜಿನಗು ಕಲ್ಲಿನಲ್ಲಿ ಕಟ್ಟಿಸಿದ

ಸುಂದರವಾದ ಕಟ್ಟಡ ಎದ್ದು ನಿಂತಿತು. ಕಟ್ಟಡಕ್ಕೆಂದು ವಾಗ್ದಾನ ಮಾಡಿದ್ದು ಇಪ್ಪತ್ತೈದು ಸಾವಿರವಾಗಿದ್ದರೂ ಕಟ್ಟಡ ಪೂರ್ತಿಯಾದಾಗ ನಾಲ್ವತ್ತೈದು ಸಾವಿರ ಮಿಕ್ಕಿ ಹಣ ಖರ್ಚು ಆಗಿತ್ತು. ಎಲ್ಲವನ್ನೂ ಮಾತೋಶ್ರೀ ಗಂಗಮ್ಮನವರೇ ಕೊಟ್ಟರು. ಮೊದಲು ಮಾಡರ್ನ ಹೈಸ್ಕೂಲ್ ಎಂದು ಕರೆಯಲಾಗುತ್ತಿತ್ತು. ನಂತರ ವೀರಪ್ಪ ಬಸಪ್ಪ ಚಿನಿವಾರ ಹೈಸ್ಕೂಲ್ ಎಂದು ನಾಮಕರಣ ಮಾಡ ಲಾಯಿತು.

ಮೇಲಿನ ಹಲವಾರು ಸಂಘ-ಸಂಸ್ಥೆಗಳಿಗೆ ಹಣವನ್ನು ತ್ಯಾಗಮಾಡಿದರೂ ನೀಡಿ ನೀಡಿ ಕೈ ದಣಿಯವು, ಮಾಡಿ ಮಾಡಿ ಮನ ತಣಿಯದು ಎಂಬಂತೆ ಮಾತೋಶ್ರೀ ಗಂಗಮ್ಮನವರಿಗೆ ಪೂರ್ತಿ ಸಮಾಧಾನವಾಗಲಿಲ್ಲ. ತನ್ನದೆಂಬುದೆಲ್ಲ ವನ್ನೂ ಇಂಥ ಪವಿತ್ರ ಕಾರ್ಯಗಳಿಗೆ, ಘನ ಉದ್ದೇಶಗಳಿಗೆ ಏಕೆ ಮುಡುಪಾಗಿಡ ಬಾರದು? ಎಂಬ ವಿಚಾರ ಮೂಡಿತು. ಇದು ಒಣ ವಿಚಾರವಾಗಲಿಲ್ಲ. ದಿಟ್ಟ ಮತ್ತು ನೈಜ ನಿರ್ಧಾರವಾಯಿತು. ಇಪ್ಪತ್ತು ಲಕ್ಷ ಬೆಲೆಬಾಳುವ ತಮ್ಮದೆನ್ನುವ ಎಲ್ಲ ಸ್ಥಿರ ಮತ್ತು ಚರ ಆಸ್ತಿಯನ್ನು ನೀಡಿ ವಿಶ್ವಸ್ಥ ನಿಧಿಯನ್ನು ಸ್ಥಾಪಿಸಿದರು. ಇದಕ್ಕೆ 'ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ವಿದ್ಯಾಪ್ರಸಾರಕ ವಿಶ್ವಸ್ಥ ನಿಧಿ' ಎಂದು ಹೆಸರಿಡಲಾಯಿತು. ೧೯೬೭ನೇ ಇಸ್ವಿಯಲ್ಲಿ ಮುದ್ದೇಬಿಹಾಳದ ಸಬ್‌ರಜಿ ಸ್ಟ್ರಾರರ ಕಾರ್ಯಾಲಯದಲ್ಲಿ ತ್ಯಾಗಪತ್ರವನ್ನು ನೋಂದಾಯಿಸಲಾಯಿತು. ಪತ್ರಿಕೆ ಗಳಿಗೆ ಪ್ರಸ್ತುತ ವಿಷಯದ ಬಗ್ಗೆ ಬರೆದು ತಿಳಿಸಲು ಪ್ರಮುಖರು ಅಪೇಕ್ಷಿಸಿದರು. ಮಾತೋಶ್ರೀ ಗಂಗಮ್ಮನವರಿಗೆ ಪ್ರಚಾರ ಬೇಕಿರಲಿಲ್ಲ. ಆದ್ದರಿಂದ ಬೇಡ ವೆಂದರೂ ಪ್ರಮುಖರು ಕೇಳಿಲಿಲ್ಲ. ಸಂಯುಕ್ತ ಕರ್ನಾಟಕ ಪತ್ರಿಕೆಗೆ ಬರೆದರು. ಪತ್ರಿಕೆಯವರಿಗೂ ನಂಬಿಕೆ ಹುಟ್ಟಲಿಲ್ಲ. ನಿಜಸಂಗತಿ ಅರಿಯಲು ವರದಿಗಾರ ರೊಬ್ಬರನ್ನು ಕಳಿಸಿದರು. ಸತ್ಯವನ್ನು ಕಣ್ಣಾರೆ ಕಂಡರು. ವ್ಯಾಪಕವಾದ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಇದೊಂದು ಅಸಾಮಾನ್ಯ ಅನು ಕರಣೀಯ ಸಂಗತಿ ಎಂದು ಅನೇಕರ ಪ್ರಶಂಸೆಗೆ ಪಾತ್ರವಾಯಿತು.

ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ವಿದ್ಯಾಪ್ರಸಾರಕ ವಿಶ್ವಸ್ಥ ನಿಧಿಗೆ ಮಾತೋಶ್ರೀ ಗಂಗಮ್ಮನವರು ಕಾರ್ಯಾಧ್ಯಕ್ಷರು. ಶ್ರೀಯುತ ಜೆ. ಎಸ್. ದೇಶಮುಖರು ಕಾರ್ಯದರ್ಶಿ. ಶ್ರೀ ನಿ. ಪ್ರ. ಸಂಗನಬಸವ ಶಿವಯೋಗಿಗಳು ಬಂಥನಾಳ, ಶ್ರೀ ವ್ಹಿ. ವ್ಹಿ. ಜತ್ತಿ, ಮತ್ತು ಡಾ. ಎಸ್. ಆರ್. ಜಿಗಜಿನ್ನಿ ಇವರೆಲ್ಲರೂ ಸದಸ್ಯರು. ಶ್ರೀ ವ್ಹಿ. ವ್ಹಿ. ಜತ್ತಿ, ಶ್ರೀ ಸಂಗನಬಸವ ಶಿವಯೋಗಿ ಗಳು ಬಂಥನಾಳ, ಮತ್ತು ಡಾ. ಎಸ್. ಆರ್. ಜಿಗಜಿನ್ನಿ ಇವರು ಈಗಿಲ್ಲ. ಲಿಂಗೈಕ್ಯರಾಗಿದ್ದಾರೆ. ಆದರೂ ಅವರು ಧರ್ಮದರ್ಶಿಗಳಾಗಿ ಗೈದ ಸೇವೆ ಅಪಾರ. ಈ ಭಾಗದ ಜನತೆ ಇವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸು ತ್ತದೆ. ಇದರ ಸ್ಥಾನದಲ್ಲಿ ಆಲಮಟ್ಟಿಯ ಶ್ರೀ ಮಹಾಂತ ಸ್ವಾಮಿಗಳು ಮತ್ತು ಶ್ರೀ ಎಸ್. ವ್ಹಿ. ತಡಸದ ಇವರು ಧರ್ಮದರ್ಶಿಗಳಾಗಿ ನೇಮಿತರಾಗಿದ್ದಾರೆ. ವಿಶ್ವಸ್ಥ ನಿಧಿಯ ಉದ್ದೇಶಗಳ ಈಡೇರುವಿಕೆಯಲ್ಲಿ ಕ್ರಿಯಾಶೀಲ ಸಹಭಾಗಿತ್ವ

ನೀಡುತ್ತಲಿದ್ದಾರೆ.

ಧರ್ಮದರ್ಶಿಗಳು ಮತ್ತು ಮುದ್ದೇಬಿಹಾಳದ ಮಹಾಜನರು ಮುದ್ದೇಬಿಹಾಳದಲ್ಲಿ ಕಾಲೇಜು ಅವಶ್ಯಬೇಕೆಂಬುದನ್ನು ಮನಗಂಡರು. ಈಗ ಬೆಂಗಳೂರಿನಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಾಗಿರುವ ಶ್ರೀ ಕೆ.ಬಿ. ನಾವದಗಿ, ಶ್ರೀ ಎಸ್. ವ್ಹಿ. ತಡಸದ ಮೊದಲಾದವರು ಕಾಲೇಜಿನ ಸ್ಥಾಪನೆಯ ಕೆಲಸಕ್ಕೆ ಅಣಿಯಾದರು. ಊರ ಸಮೀಪ ಮುದ್ದೇಬಿಹಾಳ–ವಿಜಾಪೂರ ಮಾರ್ಗಕ್ಕೆ ಹೊಂದಿರುವ ೧೮ ಎಕರೆ ಜಮೀನನ್ನು ಖರೀದಿ ಮಾಡಿದರು. ಕಾಲೇಜು ಸ್ಥಾಪನೆಗೆ ಅನುಮತಿ ಕೋರಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಲಕ್ಷಗಟ್ಟಲೆ ಹಣವನ್ನು ಕೊಡಲು ಗಂಗಮ್ಮನವರು ಸಿದ್ಧರಾಗಿಯೇ ಇದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಪರಿಶೀಲನಾ ಸಮಿತಿಯವರು ಮುದ್ದೇಬಿಹಾಳಕ್ಕೆ ಭೆಟ್ಟಿಕೊಟ್ಟರು. ಆರ್ಥಿಕ ಭದ್ರತೆಯ ವಿಷಯಕ್ಕೆ ಅನುಮಾನ ಪಟ್ಟರು. ಅಳುವ ಮಕ್ಕಳ ಕೈಯಲ್ಲಿ ಐದು ಪೈಸೆ ಕೊಡಲೂ ಹಿಂದು ಮುಂದೆ ನೋಡುವ ಜನರೇ ಬಹಳ! ಹೀಗಾಗಿ ಅವರಿಗೆ ಅವ್ವನವರ ತ್ಯಾಗದ ಅರಿವಾದರೂ ಹೇಗೆ ಮೂಡೀತು? ಕೊನೆಗೆ ಸಿಂಡಿಕೇಟ್ ಸದಸ್ಯರಾಗಿದ್ದ ಶ್ರೀ ಎಂ. ಎಂ. ಸುಗಂಧಿ ಅವರು ಅಂದು ಉಪಕುಲಪತಿಯಾಗಿದ್ದ ಶ್ರೀ ಎ. ಎಸ್. ಅಡಕೆ ಅವರ ಮನ ಒಲಿಸುವಲ್ಲಿ ಯಶಸ್ವಿಯಾದರು. ಕಾಲೇಜು ಸ್ಥಾಪನೆಗೆ ವಿಶ್ವವಿದ್ಯಾಲಯದ ಅನುಮತಿ ದೊರಕಿತು.

೧೯೬೮ರ ಶೈಕ್ಷಣಿಕ ವರ್ಷದಿಂದ 'ಮಾತೋಶ್ರೀ ಗಂಗಮ್ಮ ವೀರಪ್ಪ ಜಿನಿವಾರ ಕಲಾ ಮಹಾವಿದ್ಯಾಲಯ'ವು ಪ್ರಾರಂಭವಾಯಿತು. ಕಾಲೇಜಿನ ಪ್ರಾರಂಭೋತ್ಸವವು ೨೧–೭–೧೯೬೮ ರಂದು ಅದ್ದೂರಿಯಾಗಿ ನೆರವೇರಿತು. ಉಪಕುಲಪತಿ ಡಾ. ಎ. ಎಸ್. ಅಡಕೆ ಪ್ರಾರಂಭೋತ್ಸವ ನೆರವೇರಿಸಿದರು. ಬಂಥನಾಳದ ಶ್ರೀ ಸಂಗನಬಸವ ಶಿವಯೋಗಿಗಳು ಅಧ್ಯಕ್ಷತೆ ವಹಿಸಿದ್ದರು. ಸರ್ವಶ್ರೀ ಎಸ್. ಎಸ್. ಒಡೆಯರ್, ಎಂ. ಎಂ. ಸುಗಂಧಿ, ವ್ಹಿ. ಸಿ. ಅಂಗಡಿ, ವಾಯ್. ಕೆ. ಕಟ್ಟೀಮನಿ, ಎಸ್. ಎಸ್. ತಾಳೀಕೋಟಿ, ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಶ್ರೀ ಕೆ. ಬಿ. ನಾವದಗಿ ಅವರು ಸಮಾರಂಭದ ಸೂತ್ರಧಾರರಾಗಿ ನಿಂತು ಸಭೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಮಾತೋಶ್ರೀ ಗಂಗಮ್ಮ ವೀರಪ್ಪ ಜಿನಿವಾರ ಕಲಾ ಮಹಾವಿದ್ಯಾಲಯ ಪ್ರಾರಂಭವಾದ ವರ್ಷ (೧೯೬೮) ಕೇವಲ ೧೬೪ ವಿದ್ಯಾರ್ಥಿಗಳಿದ್ದರು. ಆರು ಜನ ಅಧ್ಯಾಪಕರಿದ್ದರು. ಕಾಲೇಜು ಗ್ರಂಥಾಲಯ ಕೇವಲ ಒಂದು ಸಾವಿರ ಗ್ರಂಥಗಳನ್ನು ಒಳಗೊಂಡಿತ್ತು. ಕಾಲೇಜಿಗೆ ಸ್ವಂತ ಕಟ್ಟಡವೂ ಇರಲಿಲ್ಲ. ಈಗ (೧೯೮೪)ವಿದ್ಯಾರ್ಥಿಗಳ ಸಂಖ್ಯೆ ಏಳುನೂರು ಸಮೀಪಿಸಿದೆ. ಅಧ್ಯಾಪಕರ ಸಂಖ್ಯೆ ಇಪ್ಪತ್ತೈದು,ಗ್ರಂಥಾಲಯದಲ್ಲಿ ಒಂದೂ ಕಾಲು ಲಕ್ಷ ರೂಪಾಯಿ ಮೌಲ್ಯದ ಹತ್ತು ಸಾವಿರದಾ ಐದುನೂರು ಅಮೌಲ್ಯ ಗ್ರಂಥಗಳಿವೆ. ಮಹಾವಿದ್ಯಾಲಯದಲ್ಲಿ ಕಲಾ ವಿಭಾಗದೊಂದಿಗೆ ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳೂ ಸೇರ್ಪಡೆಯಾಗಿವೆ.

ಪಿ. ಯು. ಸಿ. ಹಂತದಲ್ಲಿ ರೇಷ್ಮೆ ವ್ಯವಸಾಯದ ವೃತ್ತಿಶಿಕ್ಷಣ ನೀಡುವ ಏರ್ಪಾಡು ಮಾಡಲಾಗಿದೆ. ಸುಂದರವಾದ, ಭವ್ಯವಾದ ಮತ್ತು ಸ್ವತಂತ್ರವಾದ ಕಾಲೇಜಿನ ಕಟ್ಟಡವು ೧೯೭೬ರಷ್ಟು ಹಿಂದೆಯೇ ನಿರ್ಮಾಣಗೊಂಡಿದೆ. ಮಹಾವಿದ್ಯಾಲಯವು ಪ್ರಾಚಾರ್ಯರ ಮನೆ, ಸುಸಜ್ಜಿತ ಆಟದ ಬಯಲು, ಬಯಲು ರಂಗ ಮಂದಿರ ಮುಂತಾದ ಸೌಕರ್ಯಗಳನ್ನೂ ಒಳಗೊಂಡಿದೆ. ಇವೆಲ್ಲ ಸಾಧನೆಗಳಿಗೆ, ಸಿದ್ಧಿಗೆ ಮಾತೋಶ್ರೀ ಗಂಗಮ್ಮನವರ ಮಹಾತ್ಯಾಗವೇ ಮೂಲ ಕಾರಣ. ಇನ್ನೂ ಸಾಧಿಸಬೇಕಾಗಿರುವುದು ಬೇಕಾದಷ್ಟಿದೆ. ಇದಕ್ಕೆ ಬೇಕಾಗಿರುವುದು ಕಾಲಾವಕಾಶ ಮಾತ್ರವಲ್ಲದೆ ಸಂಚಾಲಕರ ಮತ್ತು ಊರವರ ಒಮ್ಮನದ ಕ್ರಿಯಾಶೀಲ ಸಹಕಾರ.

ಮುದ್ದೇಬಿಹಾಳ ನಗರಕ್ಕೆ ಕಲ್ಯಾಣ ಮಂದಿರದ ಅಗತ್ಯ ಅತಿಯಾಗಿತ್ತು. ಐದು ವರ್ಷಗಳ ಹಿಂದೆ ಇಳಕಲ್ಲಿನ ಲಿಂ. ವಿಜಯ ಮಹಾಂತೇಶ ಮಹಾಸ್ವಾಮಿಗಳ ಪುಣ್ಯತಿಥಿ ಆಚರಣೆಯ ಸಮಾರಂಭದಲ್ಲಿ, ಶ್ರೀ ನಿ. ಪ್ರ. ಮಹಾಂತಸ್ವಾಮಿಗಳ ಸಾನಿಧ್ಯದಲ್ಲಿ ಊರ ಪ್ರಮುಖರು ಮಂಗಲಭವನದ ಅಗತ್ಯತೆಯ ಪ್ರಸ್ತಾಪ ಮಾಡಿದರು. ಐವತ್ತು ಸಾವಿರ ರೂಪಾಯಿಗಳ ಮೊದಲಿನ ಕಾಣಿಕೆ ಮಾತೋಶ್ರೀ ಗಂಗಮ್ಮನವರದು. ಬಡವರು ಬಗ್ಗರು, ದೀನರು ದಲಿತರೆನ್ನದೆ ತಂತಮ್ಮ ಶಕ್ತ್ಯಾನುಸಾರ ಅನೇಕರು ಮಂಗಲಭವನದ ಕಟ್ಟಡ ಕಟ್ಟಲು ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಇದು ಇಂದು ಮುಕ್ತಾಯದ ಹಂತದಲ್ಲಿದೆ.

ಹೀಗೆ ಮಾತೋಶ್ರೀ ಗಂಗಮ್ಮನವರು ಸತ್ಕಾರ್ಯಗಳಿಗೆ, ಘನ ಉದ್ದೇಶಗಳಿಗೆ ಅಪಾರ ಹಣವನ್ನು ತ್ಯಾಗ ಮಾಡಿದ್ದಾರೆ. ದೇಹ ಮನಗಳನ್ನು ಗಂಧದ ಕೊರಡಿನಂತೆ ತೇಯ್ದು ಸುತ್ತಲೂ ಪರಿಮಳ ಬೀರಿದ್ದಾರೆ. ಇಂಥವರು ಕೃತಜ್ಞತೆಗೆ ಪಾತ್ರರು. ಅಭಿನಂದನೆಗೆ ಅರ್ಹರು. ಈ ಉದ್ದೇಶಕ್ಕಾಗಿಯೇ ಪ್ರಸ್ತುತ ಅಭಿನಂದನ ಗ್ರಂಥ 'ಮಾತೋಶ್ರೀ' ಮೈದಳೆದದ್ದು. ಮಹಾಶಕ್ತಿಗೆ, ಮಹಾತ್ಯಾಗಕ್ಕೆ ಸರಿಸಮನಾದ ಅಭಿನಂದನೆಯು ಅಲ್ಪಶಕ್ತಿಯ ನಮ್ಮ ಅಳವಿಗೆ ಮೀರಿದ್ದು. ಅಲ್ಲವೆ? ○



ಅತ್ತಿಗೆ ಶ್ರೀಮತಿ ವಾಸಂತಿಬಾಯಿ ಜಿಗಜಿನ್ನಿ ಅವರೊಂದಿಗೆ



ಮಾತೋಶ್ರೀಯವರ ಮನೆಯ ಮುಂಭಾಗ



ಷಷ್ಟ್ಯಬ್ದಿಯಲ್ಲಿ ಗುರುಸನ್ನಿಧಿ



ಕುಲಪತಿ ದೇ. ಜ. ಗೌ. ಫೋಟೋ ಸಂದರ್ಭದಲ್ಲಿ

ಭಾಗ–೨

ಶಿವಶರಣೆಯರು

ಸಂಪಾದಕರು :

ಡಾ. ಶೈಲಜಾ ಉಡಚಣ

ಮಹಾದೇವಿ

ಶೈಲಜಾ ಉಡಚಣ

ಭಾರತೀಯ ನಾರೀಸಂಸ್ಕೃತಿಯಲ್ಲಿ ಮಹದೇವಿಯಕ್ಕನ ಸ್ಥಾನ ಉನ್ನತ ಮಟ್ಟದ್ದು. ಆಕೆ ತನ್ನ ಭಾವನಾತ್ಮಕ ಮಾನವೀಯ ಅಂಶಗಳ ಜತೆಗೆ, ವೈಚಾರಿಕ ವ್ಯಕ್ತಿತ್ವವನ್ನು ಬೆಳೆಸಿಕೊಂಡು, ಎರಡರ ಸಮನ್ವಯವನ್ನು ಸಾಧಿಸಲು ಹೋರಾಡಿದ ಪ್ರಬುದ್ಧ ಮಹಿಳೆ. ಆಕೆಯ ಜೀವನ ಕೃತಿಗಳನ್ನು (ತುಸು ಅರ್ಥವಾಗದ ಅಧ್ಯಾತ್ಮದ ಆವರಣ ಸರಿಸಿ) ಆಳವಾಗಿ ಪರಿಶೀಲಿಸುವುದಾದರೆ, ಆಕೆ ನಮ್ಮಂತೆ ನಮಗಿಂತ ಮೇಲ್ಮಟ್ಟದ ವೈಚಾರಿಕ ಗಟ್ಟಿತನವನ್ನು ಸಾಧಿಸಿದ, ಬದುಕಿನಲ್ಲಿ ತಾನು ನಂಬಿದ ಮೌಲ್ಯಗಳಿಗೆ ತನ್ನನ್ನೇ ಅರ್ಪಿಸಿಕೊಂಡ ವಿಶಿಷ್ಟ ಮಹಿಳೆಯಾಗಿ ತೋರುವಳು. ಸಾಮಾನ್ಯರು ಸಾಧಿಸಲು ಸಾಧ್ಯವಾಗದ ಸಂಘರ್ಷಮಯ ಬದುಕು ಆಕೆಯದು. ಅದನ್ನು ಅರ್ಥ ಮಾಡಿಕೊಳ್ಳಲು ಆಕೆಯ ಸಮಕಾಲೀನರು, ಆನಂತರದವರಿಗಿಂತ ಇಂದು ನಾವು ಹೆಚ್ಚು ಸಮರ್ಥರಾಗಿರುವುದಕ್ಕೆ ಕಾರಣ : ಈ ಶತಮಾನದಲ್ಲಿ ನಾವು ಪರಿಭಾವಿಸಬಹುದಾದ ಮೌಲ್ಯಗಳ ಸಾಧನೆಯ ಹೋರಾಟಕ್ಕೆ ಆಕೆಯ ಬದುಕು ಹೆಚ್ಚು ಪ್ರಸ್ತುತವಾಗುತ್ತಿರುವುದೇ ಆಗಿದೆ.

ಜೀವನಚರಿತ್ರೆ ಚರ್ಚಾಸ್ಪದ ಸಂಗತಿಗಳು :

ಹರಿಹರ ಚಾಮರಸಾದಿ ಪ್ರಮುಖರನ್ನೊಳಗೊಂಡು ಅನೇಕರು ಮಹದೇವಿಯಕ್ಕನನ್ನು ಕುರಿತು ಬರೆದಿದ್ದಾರೆ. ಇವರಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆ ಕೊಟ್ಟ ಮಹತ್ವದ ಅಂಶಗಳು ಎರಡು. ೧. ಆಕೆಯ ಮದುವೆ, ೨. ಕಿನ್ನರ ಬೊಮ್ಮಯ್ಯ ಆಕೆಯನ್ನು ಕಂಡದ್ದು.

೧. **ಮದುವೆ :** ಮಹದೇವಿಯಕ್ಕನಿಗೆ ಕೌಶಿಕನೊಂದಿಗೆ ಮದುವೆಯಾಗಿತ್ತು ಎಂದು ಚಿತ್ರಿಸುವವರ ಗುಂಪಿನಲ್ಲಿ ಹರಿಹರ ಮೊದಲಿಗನು. ಆಕೆಗೆ ಮದುವೆಯಾಗಲಿಲ್ಲ; ಮದುವೆಗೆ ಮುಂಚಿತವಾಗಿ ಕರಾರು ಮುರಿದ ಕೌಶಿಕನನ್ನು ತ್ಯಜಿಸಿ ಅಕ್ಕ ಅರಮನೆ ಬಿಟ್ಟುಬಂದಳು ಎಂದು ಹೇಳುವವನು ಚಾಮರಸ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯ ಬೆಳೆಯಲು ಎಡೆಕೊಟ್ಟ ಪ್ರೇರಕ ಅಂಶಗಳೇನು, ಎಂಬುದನ್ನು ಪರಿಶೀಲಿಸುವುದು ಇಲ್ಲಿ ಅಪ್ರಸ್ತುತವಾಗಲಾರದು. ಹೆಣ್ಣಿಗೆ ಮದುವೆ ಪರಮಪುರುಷಾರ್ಥ. ಮದುವೆಯಾಗದ

ಹೆಣ್ಣಿಗೆ ಮೋಕ್ಷವಿಲ್ಲ ಎಂಬ ಧರ್ಮ ಸೂತ್ರಕಾರರ ಶಾಸನಕ್ಕೆ ಒಳಪಟ್ಟ ಸಮಾಜ ಅಂದಿನದು. ಹೆಣ್ಣು ಹುಟ್ಟುವುದೇ ಮದುವೆಯಾಗಿ ಮಕ್ಕಳನ್ನು ಹಡೆಯುವದಕ್ಕೆ. ಆ ದಿಶೆಯಲ್ಲಿ ಆಕೆ ಅಗತ್ಯವೆನಿಸುವ ಜ್ಞಾನ–ಕಲೆಗಳನ್ನು ಸಾಧಿಸಬಹುದು. ಅದನ್ನು ಹೊರತುಪಡಿಸಿ ಪಡೆಯುವ ಇತರ ಜ್ಞಾನ, ವೈರಾಗ್ಯ, ವ್ಯಕ್ತಿತ್ವ ಸಾಧನೆ ಇವೆಲ್ಲ ಆಕೆಗೆ ಅಷ್ಟೇನೂ ಸಂಬಂಧಿಸದ ವಿಚಾರಗಳು. ಇತರ ವಿಚಾರಗಳಿಗೆ ಆಕೆಯನ್ನು ಉತ್ತೇಜಿಸುವುದು ಎಂದರೆ ಒಂದು ರೀತಿ ಸಮಾಜ ಸ್ವಾಸ್ಥ್ಯಕ್ಕೆ ಕುಂದುತಂದಂತೆ. ಹೆಣ್ಣು ಇತರ ಸಾಧನೆಗಳಿಗೆ ಸರ್ವಥಾ ಅರ್ಹಳಲ್ಲ; ಆಕೆಯ ಪ್ರಕೃತಿ ಧರ್ಮವೂ ಇದನ್ನೆ ಒಪ್ಪುತ್ತದೆ.

ಇಂಥ ಅನೇಕ ಸಾಂಪ್ರದಾಯಿಕ ವಿಚಾರ ಧೋರಣೆಯಲ್ಲಿ ಸಾಗಿ ಬಂದ ಸಮಾಜ ದಲ್ಲಿ ಹೆಣ್ಣನ್ನು ಮದುವೆಯಿಂದ ಬೇರ್ಪಡಿಸಿ ಗುರುತಿಸುವುದು ಸಾಹಸದ ವಿಚಾರವೇ ಆಗಿತ್ತು. ಈ ಕಾರಣಕ್ಕಾಗಿ ಮದುವೆಯಾಗಿ ಒಲಿಯದ ಮಹದೇವಿಯ ಚಿತ್ರಣ ಹರಿಹರ ನಲ್ಲಿ ಕಂಡರೆ, ಮದುವೆಯಾಗದೆ ಒಳಸೇರಿದ ಮಹದೇವಿಯನ್ನು ಚಾಮರಸನಲ್ಲಿ ಕಾಣುತ್ತೇವೆ. ಮದುವೆಯಾಗಿತ್ತು ಎಂದು ತಿಳಿಸುವ ಹರಿಹರ ಆವೇಶದ ಕವಿ. ಭಕ್ತಿಯ ಭರದಲ್ಲಿ ಅವನು ಲೌಕಿಕ ಮರ್ಯಾದೆಯನ್ನು ಮರೆತು, ಮಹದೇವಿಯ ಸಂಯಮ ಶೀಲ ವ್ಯಕ್ತಿತ್ವ ಚಿತ್ರಣಕ್ಕೆ ಒತ್ತುಕೊಡದೆ ಹೋಗುತ್ತಾನೆ. ಆಕೆಯ ಎದೆಯ ತಳಮಳ ಕ್ಕಿಂತ, ಕೊಟ್ಟ ವಚನಗಳನ್ನು ಮುರಿಯಲು ತವಕಿಸುತ್ತ ಮುಂದುವರಿವ ವಿರಕ್ತಿ ಯನ್ನು ಚಿತ್ರಿಸುವದರಲ್ಲಿಯೇ ಅವನಿಗೆ ಆಸಕ್ತಿ ಹೆಚ್ಚು.

ಇನ್ನು ಮಹಾದೇವಿ ಕೌಶಿಕನನ್ನು ಮದುವೆಯಾಗಲಿಲ್ಲ ಎಂದು ಹೇಳುವ ಧೈರ್ಯ ತೋರಿದವನು ಚಾಮರಸ. ಈತನಿಗೆ ವೈರಾಗ್ಯದ ಬಗ್ಗೆ ಅಭಿಮಾನ. ಮೀಸಲಳಿಯದ ವಿರಕ್ತಿ ಕಾವ್ಯದಲ್ಲಿ ವಿಜೃಂಭಿಸಬೇಕೆಂಬುದು ಅವನ ಆದರ್ಶ. ಹಾಗೆಂದೇ ಮದುವೆ ಯಾಗದೆ ಕರಾರು ಹಾಕಿ ಅರಮನೆ ಸೇರಿದ ಮಹದೇವಿಯನ್ನು ಚಿತ್ರಿಸಿ, ಇನ್ನಷ್ಟು ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟು ಗೊಂದಲವೆಬ್ಬಿಸುತ್ತಾನೆ. ಮದುವೆಯಾಗದೆ ಒಂದು ಹರೆಯದ ಹೆಣ್ಣು ಇನ್ನೊಬ್ಬರ ವಸ್ತುವಾಗಿ ಎಷ್ಟರಮಟ್ಟಿಗೆ ಅವರ ಮನೆ ಸೇರಲು ಸಾಧ್ಯವಿತ್ತು? ಅಥವಾ ಒಂದು ಹೆಣ್ಣನ್ನು ಒತ್ತಾಯದಿಂದ ಕೊಂಡೊಯ್ದರೂ ಆಕೆಯ ಮಾನಸಿಕ ಒಲವು ದೊರೆಯದ ಹೊರತು ಸುಖ ಲಭ್ಯವಾಗುವುದು ಸಾಧ್ಯವೇ? ಇವು ಮನಸ್ಸೀಯ ಅಂಶಗಳು. ಒಟ್ಟಿನಲ್ಲಿ ಮದುವೆಯ ಘಟನೆಯಿಂದ ಮಹದೇವಿಯನ್ನು ಸಂಪೂರ್ಣ ಬೇರ್ಪಡಿಸಿ ನೋಡುವುದು ಸಾಧ್ಯವಾಗಲಿಲ್ಲ ನಮ್ಮ ಕವಿಗಳಿಗೆ. ಇದಕ್ಕೆ ಕಾರಣ ಇಬ್ಬರಿಗೂ ಒಪ್ಪಿಗೆಯಾದ ಸಮಾನ ಅಂಶ ಕೌಶಿಕನ ಪ್ರವೇಶವಾದದ್ದು ಅಕ್ಕನ ಜೀವನದಲ್ಲಿ. ಕೌಶಿಕ–ಮಹದೇವಿಯರ ಸಮಾಗಮವಾದುದು ಸತ್ಯಕ್ಕೆ ಹತ್ತಿರ. ಆದರೆ, ಅವರಲ್ಲಿ ಸಾಮರಸ್ಯ ಕುದುರಲಿಲ್ಲ, ವಿರಸ ವಿಲಂಬಿಸಿತು. ವಿಚಾರ ಸ್ವಾತಂತ್ರ್ಯ ಗೆದ್ದಿತು. ಇದು ವಾಸ್ತವವಾಗಿರಬಹುದಾದ ಸಂಗತಿ.

ಕಿನ್ನರಯ್ಯನ ಪ್ರಸಂಗ : ಮಹದೇವಿಯಕ್ಕನ ಒಂದು ವಚನವನ್ನು ಇಲ್ಲಿ ನೆನೆದುಕೊಳ್ಳೋಣ :

"ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ ಮರುಳಾಗಿ ತೋರುವುದು...."[1]

ಸ್ತ್ರೀ ಪುರುಷರ ಪರಸ್ಪರ ಆಕರ್ಷಣೆ ಎಷ್ಟು ಬಲವತ್ತರವಾದುದು ಎಂಬುದನ್ನು ಅಕ್ಕ ಮೇಲಿನ ವಚನದಲ್ಲಿ ತಿಳಿಸುತ್ತಾಳೆ. ಕಿನ್ನರಯ್ಯನ ಘಟನೆಯನ್ನು ಅರ್ಥಮಾಡಿಕೊಳ್ಳಲು ಮೇಲಿನ ವಚನ ಬೆಳಕು ಬೀರುತ್ತದೆ. ಹೆಣ್ಣಿಗೆ ರೂಪು ಯೌವನಗಳಿರುವ ವರೆಗೆ ಪುರುಷ ದೃಷ್ಟಿಯಲ್ಲಿ ಚಾಂಚಲ್ಯಕ್ಕೆ ಎಡೆಸಹಜ. ಪುರುಷನೆಂಬ ಅಭಿಮಾನ ಮಹದೇವಿಗೆ ಮೊದಲು ಕೌಶಿಕನ ರೂಪದಲ್ಲಿ ಅಸಂಸ್ಕೃತ ಗಂಡಿನಂತೆ ಕಾಡಿದ್ದರೆ, ಇಲ್ಲಿ ಕಿನ್ನರಯ್ಯನ ರೂಪದಲ್ಲಿ ಸುಸಂಸ್ಕೃತ ಶರಣತ್ವ ಸಾಧಿಸಿಯೂ ಮನುಷ್ಯತ್ವದ ಸಹಜ ಗುಣ ಉಳಿದುಕೊಂಡು, ಅದೇ ಜಾಗೃತವಾಗಿ ಎಲ್ಲ ಸಂಸ್ಕಾರಗಳನ್ನು ಹಿಮ್ಮೆಟ್ಟಿ ಒಂದು ಕ್ಷಣ ಅಧಃ ಪಾತಕ್ಕೆ ತಳ್ಳಬಲ್ಲ ಅವಿವೇಕವ ರೂಪದಲ್ಲಿ ಕಾಡಿದೆ. ಇಲ್ಲಿ ಪುರುಷನ ಅಭಿಮಾನವಾಗಿ ಮಹದೇವಿಗೆ ಕಾಡಿದೆ ಎಂದು ಭಾವಿಸುವುದುಕ್ಕಿಂತ ಸ್ತ್ರೀ ಎಂಬ ಅಭಿಮಾನವಾಗಿ ಕಿನ್ನರಯ್ಯನಿಗೆ ಕಾಡಿದೆ. ಈ ಘಟನೆ ಅಸಾಧುವೇನಲ್ಲ. ಕಿನ್ನರಯ್ಯ ಮುಗ್ಗರಿಸಿದ್ದಾನೆ. ಕಿನ್ನರಯ್ಯನ ಸಾಧನಾ ಮಾರ್ಗ ಪರಿಕ್ರಮಣದ ವಚನಗಳು ಅಷ್ಟಾಗಿ ನಮಗೆ ದೊರೆಯುವದಿಲ್ಲ. ಮಹದೇವಿಯಕ್ಕನ ಅಂತಹ ವಚನಗಳು ವಿಪುಲವಾಗಿವೆ. ಆಕೆ ಸದಾ ಜಾಗೃತಳಾಗಿದ್ದು ತನ್ನನ್ನು ತಿದ್ದಿಕೊಳ್ಳುತ್ತ ನಡೆದ ವಿಕಾಸ ಕ್ರಮವನ್ನು ಯಾರೂ ಅರ್ಥಮಾಡಿಕೊಳ್ಳಬಹುದು. ಕರಣಗಳ ಚೇಷ್ಟೆ, ಕೋಟಲೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ತನ್ನ ಜ್ಞಾನ–ವೈರಾಗ್ಯ ವಿಚಾರ ಸಾಧನೆಗಳಿಂದ ಉಪಶಮಿಸಿಕೊಳ್ಳುವ ರೀತಿ ಅನುಭವಕ್ಕೆ ನಿಲುಕುವ ರೀತಿ. ಆಕೆಯ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಗ್ರಹಿಸುವುದಾದರೆ ಆಕೆ ಕಿನ್ನರಯ್ಯನ ವರ್ತನೆಗೆ ಸೋಲದೆ ಜ್ಞಾನಿಯಂತೆ ಅದನ್ನು ಪರಾಮರ್ಶಿಸಿ, ಆತನನ್ನು ಕ್ಷಮಿಸಿ ಮೇಲಕ್ಕೇರಿದ ಮಹಾನುಭಾವೆ. ಆದರೆ ಕಿನ್ನರಯ್ಯನಿಗೆ ಹುಲಿ ನೆಕ್ಕಿ ಹೊರಬಂದ ಅನುಭವ. ಇನ್ನೂ ಪರಾಮರ್ಶೆಗೆ ಒಳಪಡಬೇಕು ಇದು.

ಅಕ್ಕನ ಅಧ್ಯಾತ್ಮಿಕ ಸಾಧನೆ :

ಗಂಡ, ಮಕ್ಕಳು, ಮನೆ ಮಾತ್ರ ಇವೇ ಸಾಧಿಸಬೇಕಾದ ಸಾಧನೆಗಳು ಹೆಣ್ಣಿನ ಬಾಳ್ವೆಗೆ. ಇದರ ಆಚೆಗೆ ಆಕೆ ಮನಸ್ಸು ಮಾಡಿದರೆ ಗಂಡನನ್ನು ಒಲಿಸಲು ಬೇಕಾದ ಕಲೆ, ಚಾತುರ್ಯಗಳನ್ನು ಕಲಿಯಬಹುದು. ಧರ್ಮದ ಹೆಸರಿನಲ್ಲಿ ಒಂದಿಷ್ಟು ಉಪವಾಸ ವ್ರತಾದಿಗಳನ್ನು ಆಚರಿಸಬಹುದು. ಇದನ್ನು ಮೀರಿ ಜ್ಞಾನ–ವೈರಾಗ್ಯ–ವೈಚಾರಿಕತೆ, ಬದುಕಿನ ಹಲವು ಮೌಲ್ಯಗಳನ್ನು ಅರ್ಥಮಾಡಿ ಕೊಳ್ಳಲು ಹೆಣಗಿದ ಹೋರಾಟ ಇಂಥವೇನಾದರು ಸಾಧಿಸಿದ್ದರೆ ಅಂತಹರನ್ನು ಲೋಕ ವಿಲಕ್ಷಣರೆಂದೇ ಪರಿಭಾವಿಸಲಾಗುತ್ತಿತ್ತು. ಮಹದೇವಿಯ ಸಾಧನೆ ಅಂತಹದ್ದು. ಆಕೆ ಹೆಣ್ಣಾಗಿ, ಚೆಲುವೆಯಾಗಿ ಹುಟ್ಟಿದರೂ ಹೆಣ್ಣಿಗೆ ಸಹಜವೆನಿಸುವ ಮುಗ್ಧತೆ, ಅಲ್ಪತೃಪ್ತಿ, ಆಲಸ್ಯ, ಮೌಢ್ಯಗಳಲ್ಲಿ ಬೆಳೆಯದೆ–ಆ ಮಟ್ಟದಿಂದ ಮೇಲೆದ್ದು ಗಂಡಿನಂತೆ ಜ್ಞಾನ–ಪಾಂಡಿತ್ಯ. ವಿಚಾರ–

---

1 ಶಿ. ಶ. ವ. 308 ಪುಟ 127 (RC)

ವಿವೇಕಗಳನ್ನು ಅಳವಡಿಸಿಕೊಂಡು ಧೀರಳಾಗಿ ಗಂಭೀರಳಾಗಿ ಪ್ರೌಢೆಯಾಗಿ ಬೆಳೆದಳು. ತನ್ನವೇ ವಿಶಿಷ್ಟ ಒಲವು ಜೀವನ ದೃಷ್ಟಿಗಳನ್ನು ರೂಪಿಸಿಕೊಂಡಳು. ಅನುಭಾವ ಅಧ್ಯಾತ್ಮ ಸಾಧನೆಗಳಲ್ಲಿ ಆಸಕ್ತಿ ಬೆಳೆದು ಬದುಕಿನ ಒಡಲನ್ನು, ಅದರ ಅನಂತತೆಯನ್ನು ಕಂಡುಕೊಳ್ಳಬಯಸಿದಳು. ಆಕೆಯ ಈ ಉದಾತ್ತ ಆದರ್ಶದ ಆಲೋಚನೆಗಳೇ ಆಕೆ ಯನ್ನು ಸಾಮಾನ್ಯ ಹೆಣ್ಣಿನಿಂದ ಬೇರ್ಪಡಿಸಿದವು. ಕೌಶಿಕನನ್ನು ಮೊದಲ್ಗೊಂಡು ರಾಣೀವಾಸ, ಸುಖ–ಭೋಗವಿಲಾಸಗಳೆಲ್ಲವು ರತ್ನ ಸಂಕೋಲೆಯಾಗಿ ಪರಿಣಮಿಸಿದ್ದು ಆಕೆಗೆ ಈ ಕಾರಣದಿಂದಲೆ. ತನ್ನ ಉನ್ನತ ವಿಚಾರಗಳನ್ನು ಆದರ್ಶಗಳನ್ನು ಅರ್ಥಮಾಡಿ ಕೊಳ್ಳದ'ಸಂಸಾರ ಸುಖ'ತಾಯ್ತನದ ಸುಖ ಆಕೆಗೆ ತಿರಸ್ಕರಣೀಯವೆನಿಸಿತು. ಕೆಳಗಿನ ವಚನ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ:

ಮನಮನ ತಾರ್ಕಣೆ ಕಂಡು ಅನುಭವಿಸಲು
ನೆನಹು ಘನವಹುದಲ್ಲದೆ ಅದು ಹೆಪಣವಲ್ಲಿ ಸಿಲುವುದೇ?
ಎಲೆ ಅವ್ವಾ ನೀನು ಮರುಳವ್ವೆ
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯಗೊಲಿದು ಸಲೆ
ಮಾರುವೋದೆನು ನಿನ್ನ ತಾಯ್ತನವನೊಲ್ಲೆ ಹೋಗಾ ||[1]

ತಾಯ್ತನದ ಬಯಕೆ ಹೆಣ್ಣಿಗೆ ಸಹಜ. ಆಕೆಗೆ ಅದು ಪ್ರಕೃತಿದತ್ತ ಗುಣ. ಅದನ್ನು ತಿರಸ್ಕರಿಸುವುದೆಂದರೇನು, ಆಕೆ ನೈಸರ್ಗಿಕವಾಗಿ ಹೆಣ್ಣಲ್ಲವೆ? ಎಂಬ ಪ್ರಶ್ನೆ ಏಳಬಹುದು. ಆದರೆ ನಿಸರ್ಗವೆಂದು ಪಶುತ್ವ ಮಟ್ಟದಲ್ಲಿಯೇ ಬಾಳುವುದಕ್ಕೂ ಅವು ಗಳನ್ನು ಉದಾತ್ತೀಕರಿಸಿಕೊಂಡು ಮಾನವತಾ ಕಲ್ಯಾಣಕ್ಕಾಗಿ ಬದುಕನ್ನು ಗೌರವಿಸು ವುದಕ್ಕೂ ಅಂತರವಿದೆ. ಆತ್ಮಸಾಧನೆ– ಅನುಭಾವ ಇವು ಸ್ಥೂಲವಾಗಿ ವ್ಯಷ್ಟಿ ಜೀವನ ವನ್ನು ಸಮಷ್ಟಿ ಪ್ರಜ್ಞೆಯಲ್ಲಿ ಲೀನಗೊಳಿಸಿ ಮನುಷ್ಯ ದೈವತ್ವವನ್ನು ಸಾಧಿಸುವುದೇ ಆಗಿದೆ. ಅದನ್ನೆ ಮಹದೇವಿಯಕ್ಕನ ಸಾಧನೆಯಲ್ಲಿ ಗುರುತಿಸಿದ ಶರಣರು ಆಕೆಯನ್ನು 'ಚಿತ್‌ಶಕ್ತಿ' ಎಂದು ಗೌರವಿಸಿದರು. ಯಾವುದೇ ಸಾಧನೆ ಕೇವಲ ಸಂಕಲ್ಪ ಮಾತ್ರ ದಿಂದಲೇ ಸಾಧ್ಯವಾಗುವದಿಲ್ಲ. ಅದಕ್ಕಾಗಿ ಛಲ, ತ್ಯಾಗ, ಸಮರ್ಪಣ ತಾದಾತ್ಮ್ಯ, ಸತತ ಹೋರಾಟ, ಎಚ್ಚರಗಳು ಅಗತ್ಯವಾಗುತ್ತವೆ. ಅಕ್ಕನ ಬಾಳಿನುದ್ದಕ್ಕೂ ನಾವು ಇವುಗಳನ್ನು ಆಕೆಯ ಶರಣಸತಿ-ಲಿಂಗಪತಿ ಸಾಧನಾಮಾರ್ಗದಲ್ಲಿ ಕಂಡುಕೊಳ್ಳುತ್ತೇವೆ.

ಶರಣಸತಿ–ಲಿಂಗಪತಿ ಭಾವ, ಅಕ್ಕನು ಸಾಧಿಸಿದ ಅನುಭಾವ ಮಾಧ್ಯಮ. ಸ್ತ್ರೀ ಸಹಜವಾಗಿ ಆಕೆ ತನ್ನ ಪರಮದೈವತ್ವ ಕೇಡಿಲ್ಲದ ಸಾವಿಲ್ಲದಪತಿ ಚೆನ್ನಮಲ್ಲಿಕಾರ್ಜುನ ನೆಂದು; ತನ್ನ ಆತ್ಮ ಆ ಮಹಾ ಆತ್ಮದಲ್ಲಿ ಲೀನವಾಗಬಯಸುವ ಸತೀಭಾವವೆಂದು ಭಾವಿಸಿದ್ದಳು. ಭಕ್ತ ಪರಂಪರೆಯಲ್ಲಿ ಸಾಗಿ ಬಂದ ಈ ಮಧುರಭಾವದ ಭಕ್ತಿ ಆಕೆಗೂ, ಪರಂಪರಾಗತ ಮೌಲ್ಯಗಳನ್ನು ಉಳಿಸಿಕೊಂಡು ಸಮನ್ವಯ ಕಾಣುವ ಸಂಪ್ರದಾ ಯಕ್ಕೂ ಅನುಕೂಲವಾಯಿತು. ಅಕ್ಕನ ಸಾಧನೆ ಲೋಕರೂಢಿಗೆ ವಿರುದ್ಧವಾದುದರಿಂದ ಒಂದು ಕಡೆ ಆಕೆ ಪರಂಪರಾಗತವಾಗಿ ಬಂದ ವ್ಯವಸ್ಥೆ, ಅದಕ್ಕಂಟಿದ ಮೌಲ್ಯಗಳ ಬಗ್ಗೆ ಬಂಡೇಳಬೇಕಾಯಿತು. ಅದೇ ಕಾಲಕ್ಕೆ ಆಕೆ ತನ್ನ ಸಾಧನೆಯಲ್ಲಿ ಋಜುತ್ವ ಉಳಿಸಿ

---
1 ಶಿ. ಶ. ವ (RC)19. ಪು. 9.

ಕೊಂಡು ಉದ್ದೇಶ ಸಾಧನೆಗಳಲ್ಲಿ ಪರಿಶುದ್ಧತೆ ತರಲು ತನ್ನ ಅಂತರಂಗದ ಜತೆಗೆ ಹೋರಾಡಬೇಕಾಯಿತು. ಇಂತಹ ಸಂದಿಗ್ಧತೆಯಲ್ಲಿ ಆಕೆ ತನ್ನನ್ನೂ ಹೇಗೆ ತೊಡಗಿಸಿದ್ದಳೆಂಬುದನ್ನು ಆಕೆಯ ಹೃದಯಕ್ಕೆ ಕನ್ನಡಿ ಹಿಡಿದ ಅನೇಕ ವಚನಗಳ ಮೂಲಕ ಗ್ರಹಿಸಬಹುದಾಗಿದೆ. ತನ್ನ ಮಾರ್ಗ ಸಾಮಾನ್ಯ ಸ್ತ್ರೀಯರು ನಂಬಿದ ಹಾದಿ ಒಂದೇ ಅಲ್ಲ. ಬಿಲ್ಲು ಬೆಳುಲಕಾಯಿ ಒಂದು ಮಾಡಲು ಬಾರದು. ಸಂಸಾರ ವೈರಾಗ್ಯ ಒಂದು ಮಾಡಲು ಬಾರದು ಎಂಬುದೇ ಆಕೆಯ ಅಭಿಮತ. ವೈರಾಗ್ಯವೆಂದಾಕ್ಷಣ ಸರ್ವಸಂಗ ಪರಿತ್ಯಾಗಿಯಾಗಿ ಗಿರಿಗಹ್ವರಗಳಲ್ಲಿ ಬಾಳುವಕಲ್ಪನೆ ನಮ್ಮ ಕಣ್ಮುಂದೆ ಬರುತ್ತದೆ.ಆದರೆ ಅದು ಹಾಗಲ್ಲ. ಸಂಸಾರ, ಮದುವೆಯ ಬಂಧನಗಳು ಬೇಡವಾದರೂ ಮಮತೆ. ವಾತ್ಸಲ್ಯಗಳು ಬೇಡಾಗುವದಿಲ್ಲ. ಮಹದೇವಿಯ ಸಾಧನೆ ಇದೇ ನಿಟ್ಟಿನಲ್ಲಿ ಸಾಗಿತು. ತನ್ನ ಪ್ರಾಕೃತಿಕ ಗುಣಧರ್ಮಗಳನ್ನು ಸಂಸ್ಕರಿಸಿಕೊಳ್ಳಲು ಆಕೆ ಧ್ಯಾನ, ಜಪತಪಗಳ ಜತೆಗೆ ಜ್ಞಾನಾರ್ಜನೆ, ಅನುಭಾವಿಗಳ ಸತ್ಸಂಗ 'ಹೊರಗೆ ಬಳಸಿ ಒಳಗೆ ಮರೆವಂತೆ' ಬಾಳುವ ಸಾಧನೆ ಇವುಗಳನ್ನು ತನ್ನ ಜೀವನದುದ್ದಕ್ಕೂ ಸಾಧಿಸುತ್ತ ನಡೆದಳು.

ಅಕ್ಕ ತನ್ನ ಅನುಭಾವ ಸಾಧನೆಯಲ್ಲಿ ಸತ್ಸಂಗಕ್ಕೆ ತುಂಬ ಮಹತ್ವ ಕೊಟ್ಟಿದ್ದಾಳೆ. ಕಲ್ಯಾಣದ ಅನುಭವ ಮಂಟಪದ ಪ್ರಯೋಜನ ಆಕೆಯ ಬದುಕಿನಲ್ಲಿ ಮಹತ್ವದ ಘಟ್ಟ. ನಾನಾರೀತಿ ಕಾಯಕಗಳನ್ನು ಹಮ್ಮಿಕೊಂಡು ಲಿಂಗಾನುಸಂಧಾನ ಸಾಧಿಸುತ್ತ ತಮ್ಮನ್ನು ಸಮಾಜಕ್ಕೆ, ಧರ್ಮಕ್ಕೆ, ಮಾನವತೆಗೆ ಅರ್ಪಿಸಿಕೊಂಡು ಬಾಳುತ್ತಿದ್ದ ಹಲವು ಶರಣರ ಜೀವನದ ಪ್ರತ್ಯಕ್ಷ ಸಂಪರ್ಕ ಆಕೆಗೆ ಒದಗಿತು. ಅವರಿಂದ ಆಕೆಯ ಬದುಕಿನಲ್ಲಿ ಸಾಧನೆಯಲ್ಲಿ ಅನೇಕ ಮಾರ್ಗದರ್ಶನಗಳು ದೊರೆತವು. ಸ್ತ್ರೀ ಪುರುಷರು ಒಂದೆಡೆ ಸೇರಿ ಲಿಂಗ ಭೇದದ ಹಂತ ಮೀರಿ ತಮ್ಮ ತಮ್ಮ ದೋಷ ದೌರ್ಬಲ್ಯಗಳನ್ನು ತಿದ್ದಿಕೊಳ್ಳುತ್ತ ಆತ್ಮ ಆತ್ಮಗಳ ಮಥನ ನಡೆಸಿದ ಮಹಾತ್ಮರ ನಿದರ್ಶನಗಳನ್ನು ಆಕೆ ಕಣ್ಣಾರೆ ಕಂಡಳು. ತನ್ನ ಸಾಧನೆಗೂ ಅರ್ಥವಂತಿಕೆ ಬೆಂಬಲ ದೊರೆತು, ಇನ್ನಷ್ಟು ಉತ್ತೇಜನ ಸಿಕ್ಕಿತು. ಈ ಕೆಳಗಿನ ವಚನದಲ್ಲಿ ಅಕ್ಕ 'ಮಹಾನುಭಾವಿಗಳ ಸಂಗ' ಎಂತಹ ಮಹತ್ವದ್ದು ಎಂಬುದನ್ನು ಅತ್ಯಂತ ಅರ್ಥಪೂರ್ಣವಾಗಿ ತಿಳಿಸುತ್ತಾಳೆ:

ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರು ಮರಾದಿಗಳ ಸುಡಲಾಯಿತ್ತು
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ[1]

ತಾನು ಚಿಕ್ಕಂದಿನಲ್ಲಿ ಕಲ್ಪಿಸಿಕೊಂಡ, ಏರು ಯೌವ್ವನದಲ್ಲಿ ಆದರ್ಶವಾದ, ಬದುಕಿನ ಹೋರಾಟದಲ್ಲಿ ಅರ್ಥವಂತಿಕೆ ಪಡೆದ ಚೆನ್ನಮಲ್ಲಿಕಾರ್ಜುನನ ಉಪಮಾತೀತ ನಿಸ್ಸೀಮ ಸ್ವರೂಪ ಗ್ರಹಿಸಲು ಶರಣರ ಅನುಭಾವಗೋಷ್ಠಿ ಆಕೆಗೆ ಇನ್ನಿಷ್ಟು ನೆರವಾಯಿತು. ತನುಗುಣಾದಿಗಳನ್ನು ಗೆಲ್ಲುತ್ತ ಮನ, ಪ್ರಾಣಗಳಲ್ಲಿ ಏಕಾಗ್ರತೆಯನ್ನು

1 ಶಿ. ಶ. ವ 287. 120

ಸಾಧಿಸಿದ ಆಕೆಗೆ ಗಿರಿ, ವನ, ಕೋಗಿಲೆ, ಹಂಸೆ. ಎಲ್ಲ ಸಚರಾಚರಗಳು ತನ್ನಂತೆ ದೇವ ಸಮ್ಮುಖವಾಗಿ ಲೋಕಕಲ್ಯಾಣವೆಸಗುತ್ತಿವೆ ಎನಿಸಿತು. ನಾನು, ತಾನು ಎಂಬ ಭೇದವಿರುವವರೆಗೆ ಬೇರೆಯಾಗಿ ಕಾಣುತ್ತದೆ. ಪರಮ ಜ್ಞಾನದ ಮುಂದೆ ಎಲ್ಲ ಭೇದಗಳೂ ಇಲ್ಲವಾಗಿ ಸ್ವಯಂ ಪ್ರಕಾಶದ ಬೆಳಕು ತಾನೆ ತಾನಾಗುತ್ತವೆ. ಭಕ್ತಿ, ಕರುಣೆ, ಜ್ಞಾನ, ವೈರಾಗ್ಯ, ಮೋಕ್ಷ ಇವೆಲ್ಲ ಸಾಧನೆಯ ಮೆಟ್ಟಲುಗಳು. ತನ್ನ ತಾನರಿದು ತಾನೆ ಆಗುವ ಶಿಖರ ತಲುಪಿದಾಗ ಪರಮ ಸುಖ ಪರಿಣಾಮದಲ್ಲಿ ಎಲ್ಲ ತುಂಬಿಯದು ತುಳುಕುದಂತಾಗಿ ಸತಿ–ಪತಿಭಾವದಲ್ಲಿ ಐಕ್ಯತೋರಿ ಇದ್ದು ಇಲ್ಲದಂತಾಗುತ್ತದೆ. ಆಗ ಹತ್ತರೊಳಗೆ ಹನ್ನೊಂದಾಗಿದ್ದರೂ ನೀರ ತಾವರೆಯಂತೆ ಜೀವನ ಸಾಗುವುದು. ಕಲಾವಿದರು, ವಿಜ್ಞಾನಿಗಳು, ತತ್ವಚಿಂತಕರು, ಶಿಲ್ಪಿಗಳು ಮೊದಲಾದವರು ತಮ್ಮ ತಮ್ಮ ಪ್ರತಿಭೆ ಪ್ರಯತ್ನಗಳ ಮೂಲಕ ಮಾನವ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಮಹದೇವಿಯ ಲೋಕ ಕಲ್ಯಾಣ ಮಾರ್ಗ ಅನುಭಾವ ಸಾಧನೆಯ ಮೂಲಕ ಸಾಗಿತು.

ಸಾಮಾಜಿಕ ಅರಿವು :

ಅಕ್ಕನ ಆಧ್ಯಾತ್ಮ ಸಾಧನೆ ಬಹುಮಟ್ಟಿಗೆ ಸ್ವಕೇಂದ್ರೀಕೃತವ್ಯಕ್ತಿ ನಿಷ್ಠ ಹೋರಾಟವಾದರೂ ಆಕೆ ಬಹಿರಂಗವನ್ನು ಅರ್ಥಾತ್, ಲೋಕ, ವ್ಯವಹಾರ ಜ್ಞಾನ, ಲೌಕಿಕ ರೀತಿ ನೀತಿಗಳನ್ನು ಅಲಕ್ಷಿಸಿದವಳಲ್ಲ. ತನ್ನ ಸಾಧನಾ ಮಾರ್ಗದಲ್ಲಿ ಹಲವು ರೀತಿ ಪುರುಷರನ್ನು ಪುರುಷ ಸ್ವಭಾವವನ್ನು ಕಂಡಿದ್ದಾಳೆ. ಹಾಗೆ ತನ್ನ ಸಮಕಾಲೀನ ಸಮಾಜದಲ್ಲಿ ನಡೆವ ಸ್ತ್ರೀಯ ಬದುಕು ಮತ್ತು ಅವರ ಪರಿಮಿತಿಗಳನ್ನು ಲಕ್ಷಿಸುತ್ತಾಳೆ. ತನ್ನಂತೆ ಸಾಧನಾ ಮಾರ್ಗದಲ್ಲಿ ಮುನ್ನಡೆದ ಅನುಭಾವಿಗಳನ್ನು ಗೌರವಾದರಗಳಿಂದ ಕಾಣುತ್ತಾಳೆ. ಆಕೆಯ ಸಾಮಾಜಿಕ ಎಚ್ಚರ ತನ್ನ ಸಾಧನೆಯ ಎಡ ಬಲಗಳಲ್ಲಿ ಸಾಗುತ್ತದೆಯೆ ಹೊರತು ಬಸವಣ್ಣ ಅಲ್ಲಮರಂತೆ ಪ್ರಜ್ಞಾಮಟ್ಟದಲ್ಲಿ ಪ್ರವರ್ತಿತವಾದದ್ದಲ್ಲ. ಪುರುಷವರ್ಗವನ್ನೂ ಕುರಿತ ಆಕೆಯ ವಚನಗಳಲ್ಲಿ ಅವರ ಸ್ವಾಭಾವಿಕ ಸೋಲಿನ ಮನಸ್ಸು ತುಂಬ ಪರಿಣಾಮ ಬೀರುತ್ತದೆ. ಸ್ತ್ರೀ ರೂಪು, ಯೌವ್ವನಗಳಿಗೆ ಸೋಲುವ ಮರುಳಾಗುವ ಅವರ ವರ್ತನೆಯ ಬಗ್ಗೆ ಆಕೆಗೆ ತಿರಸ್ಕಾರ ದ್ವೇಷಗಳಿಗಿಂತ ಮರುಕ ಕಸಿಕರಗಳಿವೆ. ತಾನು ಎಂತಹ ಅನುಭಾವ ಮಟ್ಟದಲ್ಲಿದ್ದರೂ ತನ್ನಂಥ ಯುವತಿಯನ್ನು ಕುರಿತು ಕಾಮುಕರ ಸಮೂಹ ಹೇಗೆ ವರ್ತಿಸಬಲ್ಲದು, ಪ್ರತಿಕ್ರಿಯಿಸಬಲ್ಲುದು ಆಲೋಚಿಸಬಲ್ಲುದು ಎಂಬುದರ ಜಾತಿ ಸ್ಮರಣೆ ಆಕೆಯಲ್ಲಿ ಮೆಚ್ಚುವಂತಹದ್ದು. ಅವರನ್ನು ಕುರಿತು ಹೇಳಿದ ಕೆಳಗಿನ ವಚನ ಅತ್ಯಂತ ಮನನೀಯ. ಸ್ತ್ರೀ ಪುರುಷರೆನ್ನದೆ ಕಾಡುವ ಕಾಮದ ಗುಣದ ಬಗ್ಗೆ ಅಚ್ಚರಿ ಆದರೂ ಎಚ್ಚರಿಸುವ, ಎದ್ದು ನಿಲ್ಲುವ ಗುಣ ಆತ್ಮಕ್ಕಿದೆ. ಅದನ್ನು ಮರೆತರೆ ಹೇಗೆ?

ಎಲೆ ಅಣ್ಣಾ ಅಣ್ಣಾ ನೀವು ಮರುಳಲ್ಲಾ ಅಣ್ಣಾ
ಎನ್ನ ನಿನ್ನ ಅಳವೆ ?
ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ ।
ಎನ್ನ ನಿನ್ನ ಅಳವೆ ?
ನಾರುವ ಮುಗ್ಗಿದಡೆ ಮಿಡಿಯ ಹರಿಯ ಹೊಯ್ಸರೆ

ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು
ನಿನ್ನ ನೀ ಸಂವರಿಸಿ ಕೈದುವ ಕೊಳ್ಳಿರಣ್ಣಾ
ಚನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ[1]

ಅಕ್ಕ ತನ್ನ ಸಮಕಾಲೀನ ಸ್ತ್ರೀ ಬದುಕನ್ನು ತಕ್ಕಮಟ್ಟಿಗೆ ಲಕ್ಷಿಸುತ್ತಾಳೆ. ತಮ್ಮ ಚೆಲುವು ಯೌವನ ವಿಧೇಯತೆಗಳಿಂದ ಸಂಸಾರವಂದಿಗರಾಗಿ ಬಾಳುವ ಹೆಣ್ಣುಮಕ್ಕಳ ಬಗ್ಗೆ ಆಕೆಗೆ ಬೇಸರವಿಲ್ಲ. ಆದರೆ ಆ ದಾರಿ ತನ್ನದಲ್ಲ. ತನ್ನ ಸಾಧನೆಯ ವೈಶಿಷ್ಟ್ಯಕ್ಕೆ ಅದು ಒಗ್ಗುವುದೂ ಇಲ್ಲ ಎಂಬ ಖಚಿತ ಅಭಿಪ್ರಾಯವಿದೆ. ಆ ಕಾರಣಕ್ಕಾಗಿ ತಾನು "ಹೆಂಗೂಸಲ್ಲ ಸೂಳೆಯಲ್ಲ" ಎಂದು ಹೇಳುವ ವಚನದಲ್ಲಿ ಆಕೆ–ತನ್ನ ಇತರ ಸ್ತ್ರೀಯರಿಗಿರುವ ಅಂತರವನ್ನು ವ್ಯಕ್ತಪಡಿಸಿದ್ದಾಳೆ.

ಆಕೆಯ ಸಾಧನಾಮಾರ್ಗದಲ್ಲಿ ಲಕ್ಷ್ಯಕ್ಕೆ ಬಂದ ಅನೇಕ ಶರಣರನ್ನು ಕುರಿತ ಪ್ರಶಂಸೆ ಕೃತಜ್ಞತೆಗಳು ಆಕೆಯ ವಚನಗಳಲ್ಲಿ ದೊರೆಯುತ್ತವೆ. ತನ್ನ ಅನುಭಾವ ಸಾಧನೆಗೆ ಅವರಿಂದ ದೊರೆತ ಪ್ರತ್ಯಕ್ಷ ಪರೋಕ್ಷ ಮಾರ್ಗದರ್ಶನವನ್ನು ಮನದುಂಬಿ ವ್ಯಕ್ತಪಡಿಸಿದ್ದಾಳೆ.

ಮಹದೇವಿಯಕ್ಕನ ಸಾಧನೆ ಕೇವಲ ಗಿರಿ ಗಹ್ವರಗಳಲ್ಲಿ ಏಕಾಂತದಲ್ಲಿ ಸಾಗಿದ್ದಲ್ಲ. ಜನಮಧ್ಯದಲ್ಲಿದ್ದುಕೊಂಡೇ ಚಿಂತನ ಮಂಥನಗಳ ಮೂಲಕ ಸಾಧಿಸಿದ್ದು. ವೈರಾಗಿ ನಾನೆಂದು ವಿಪರೀತವಾಗಿ ವರ್ತಿಸುವದಾಗಲಿ, ಕೈವಲ್ಯಸಾಧಿಸುತ್ತೇವೆಯೆಂದು ಗುರುಲಿಂಗ ಜಂಗಮ ಮರೆಯುವುದಾಗಲಿ ಆಕೆಗೆ ಒಪ್ಪುವದಿಲ್ಲ. ಜ್ಞಾನಿ ಸ್ತುತಿ ನಿಂದೆಗಳನ್ನು ಸಮಾಧಾನ ಚಿತ್ತದಿಂದ ಸ್ವೀಕರಿಸಬೇಕು. ಸಾಧನೆಯ ಮಾರ್ಗದಲ್ಲಿ ನಡೆವವರಿಗೆ ಲೌಕಿಕರ ಟೀಕೆ ಸಹಜ. ಆದರೆ ಜ್ಞಾನಿ ತನ್ನ ಹಾದಿಯಿಂದ ವಿಚಲಿತನಾಗ ಕೂಡದು ಎನ್ನುತ್ತಾಳೆ. ಆಕೆಯ ಪ್ರಸಿದ್ಧ 'ಬೆಟ್ಟದ ಮೇಲೊಂದು ಮನೆಯ ಮಾಡಿ...' ವಚನದಂತೆ ಅಭಿಪ್ರಾಯವಿರುವ ಒಂದು ವಚನ ಹೀಗಿದೆ :

ಹೆದರದಿರು ಮನವೆ ಹೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರು.
ಫಲವಾದ ಮರನ ಕಲ್ಲಲ್ಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯು ಎನಗೆ ಗತಿ ಸೋಪಾನ
ಚೆನ್ನಮಲ್ಲಿಕಾರ್ಜುನ.[2]

ಒಟ್ಟಿನಲ್ಲಿ ವಿಪರೀತ ವರ್ತನೆಯನ್ನು ಆಕೆ ಖಂಡಿಸುತ್ತಾಳೆ. ಹತ್ತರೊಳಗೆ ಹನ್ನೊಂದಾಗಿ ಬಾಳುತ್ತ ಶರಣ ಮಾಡಿಯೂ ಮಾಡದಂತಿರಬೇಕು ಎಂಬುದೇ ಆಕೆ ನಂಬಿದ ಲೋಕನೀತಿ.

1. ಶಿ. ಶ. ವ. 112 ಪು. 44.
2. ಶಿ. ಶಿ. ವ. 191. ಪು. 72.

ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ
ಆಕಾರ ವಿಡಿದು ಸಾಕಾರ ಸಹಿತ ನಡೆವೆ
ಹೊರಗೆ ಬಳಸಿ ಒಳಗೆ ಮರೆದಿಪ್ಪೆ
ಬೆಂದ ನುಲಿಯಂತೆ ಹುರಿಗುಂದದಿಪ್ಪೆ
ಎನ್ನದೇವ ಚನ್ನಮಲ್ಲಿಕಾರ್ಜುನಯ್ಯಾ
ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆ[1]

ಮಹದೇವಿಯಕ್ಕ ಸಹಜ ಭಕ್ತಿಗೆ ಮಹತ್ತ್ವ ಕೊಟ್ಟಿದ್ದಾಳೆ. ಭಕ್ತಿಯ ಹೆಸರಿನಲ್ಲಿ ಡಾಂಭಿಕತೆ, ನಟನೆ ಆಡಂಬರಗಳನ್ನು ಮೆಚ್ಚುವದಿಲ್ಲ. ಹೃದಯ ಪರಿಪಾಕವಿಲ್ಲದ ಎಲ್ಲವೂ ವ್ಯರ್ಥ ಎಂಬ ಧೋರಣೆ ಆಕೆಯದು.

ಮಾಟ, ಮದ್ದು, ಆಟಮಟಗಳನ್ನು ತೋರಿಸುವ ಭಕ್ತರ ಬಗ್ಗೆ ತೀವ್ರ ಅಸಮಾಧಾನವಿದೆ. ತಾಮಸಭಕ್ತಿಯನ್ನು ಆಕೆ ಅಲ್ಲಗಳೆಯುತ್ತಾಳೆ. ಸಿರಿಯಾಳ, ಸಿಂಧು ಬಲ್ಲಾಳರ ಭಕ್ತಿ ವಿಧಾನ ಬಗ್ಗೆ ಆಕೆಗೆ ಸಮ್ಮತವಿಲ್ಲ. ದಾನ-ಧರ್ಮದ ಹೆಸರಿನಲ್ಲಿಯೂ ಭಕ್ತಿ ಆಚರಿಸುತ್ತೇನೆಯೆಂದು ನಂಬಿರುವವರಿಗೆ ಆಕೆ ತರಾಟಿಗೆ ತೆಗೆದುಕೊಂಡಿದ್ದಾಳೆ. ಭಕ್ತಿಯೆಂಬುದು ಸಾತ್ತ್ವಿಕವಾದ ಆತ್ಮಾನುಸಂಧಾನವೇ ಹೊರತು ಕೊಟ್ಟು ಪಡೆಯುವ ಕೂಲಿ ಕೆಲಸವಲ್ಲ. ಕೆಳಗಿನ ವಚನಗಳು ಆಕೆ ತನ್ನ ಸಮಕಾಲೀನರಲ್ಲಿ ಕಂಡ ಡಾಂಭಿಕತೆಯನ್ನು, ಹಾಗೆ ಅದು ಸಹಜ ಭಕ್ತಿಯಲ್ಲ ಎಂಬುದನ್ನು ವಿಶದಪಡಿಸುತ್ತವೆ:

ಬಸವನ ಭಕ್ತಿ ಕೊಟ್ಟಣದ ಮನೆ
ಸಿರಿಯಾಳನ ಭಕ್ತಿ ಕಸಬುಗೇರಿ
ಸಿಂಧು ಬಲ್ಲಾಳನ ಭಕ್ತಿ ಪರದಾರ ದ್ರೋಹ
ಉಳಿದಾದ ಉದಾಸೀನ ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು.
ಮಣ್ಣಿನ ಮನೆಯ ಕಟ್ಟಿ ಮಾಯಾ ಮೋಹಿನಿ ಎಂಬ
ಮಹೇಂದ್ರಜಾಲದೊಳಗಾಗಿ ಮಾಡುವ ಮಾಟ
ಭಕ್ತನಲ್ಲಿ ಉಂಡು ಉದ್ದಂಡ ವೃತ್ತಿಯಲ್ಲಿ ನಡೆವವರು ಶಿವನಲ್ಲ
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು
ಶ್ರೀಗಿರಿ ಚನ್ನಮಲ್ಲಿಕಾರ್ಜುನ ನನ್ನ ಭಕ್ತಿ
ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ.[2]
ಮಾಟ ಮದುವೆಯ ಮನೆ
ದಾನ ಧರ್ಮ ಸಂತೆಯ ಪಸಾರ,
ಸಾಜಸಾಜೇಶ್ವರಿ ಸೂಳೆಗೇರಿಯ ಸೊಬಗು

1. ಶಿ. ಶ. ವ. 314, ಪು. 129.
2. ,, 247. 106.

ವ್ರತನೇಮವೆಂಬುದು ವಂಚನೆಯ ಉಬ್ಬುವಾಣಿ
ಭಕ್ತಿಯೆಂಬುದು ಬಾಜಿಗಾರರಾಟ........ಚೆನ್ನಮಲ್ಲಿಕಾರ್ಜುನ।

ಸಾಹಿತ್ಯಿಕ ಮೌಲ್ಯಗಳು :

ಮಹದೇವಿಯಕ್ಕ ಮೂಲತಃ ಕವಿ. ಕವಿಯೊಬ್ಬನಲ್ಲಿ ಇರಬೇಕಾದ ಸೂಕ್ಷ್ಮ ಸಂವೇದನ ಶೀಲ ಮನಸ್ಸು, ತೀಕ್ಷ್ಣ ಪ್ರತಿಕ್ರಿಯೆ, ಬದುಕನ್ನು ಇಡಿಯಾಗಿ ಗ್ರಹಿಸ ಬಲ್ಲ ಮಾನವೀಯ ಹೃದಯ—ಜತೆಗೆ ಕವಿತ್ವ ಪ್ರಕಾಶನಕ್ಕೆ ಅಗತ್ಯವಾದ ಪ್ರತಿಭೆ ಆಕೆಯ ವಚನಗಳಲ್ಲಿ ಕಾಣಬಹುದಾಗಿದೆ.

ಆಕೆಯ ಬದುಕೆಲ್ಲ ಒಂದರ್ಥದಲ್ಲಿ ಕಾವ್ಯವೆ. ಕಾರಣ ಆಕೆಯ ವಚನಗಳಲ್ಲಿ ಬಹುಪಾಲು ಚೆನ್ನಮಲ್ಲಿಕಾರ್ಜುನನ ಚಿರವಿರಹದ ಭಾವೋತ್ಕಟ ಹೃದಯಗೀತೆಗಳೇ ಆಗಿವೆ. ಆ ವಚನಗಳಲ್ಲಿ ಒಡಮೂಡಿದ ಸಂಯಮಶೀಲ ಭಾವಾಭಿವ್ಯಕ್ತಿ ಹಾಗೂ ಗಾಢ ಅನುಭವ ನಿಷ್ಠತೆ ಎಂತಹರನ್ನು ದಂಗುಬಡಿಸಬಲ್ಲುದು. ಇತ್ತ ಜ್ಞಾನ–ಅಧ್ಯಾತ್ಮ ಅನುಭವವಿಲ್ಲದವರು ಅದು ಲೌಕಿಕದ ಅತೃಪ್ತಿಯೆಂದು; ಅತ್ತ ಲೌಕಿಕ ಸಂಸಾರದ ಪ್ರೇಮ ದೊರೆಯದವರು ನಿರಾಸಕ್ತ ವೀರ ವಿರಕ್ತಿಯೆಂದು ವ್ಯಾಖ್ಯಾನಿಸಲು ಪ್ರಯತ್ನಿಸಿ ಸೋಲುವ ಸಾಧ್ಯತೆ ಹೆಚ್ಚು. ಆದರೆ ಎರಡರ ಸಮನ್ವಯ ಸಂತೃಪ್ತ ವಿರಹದಲ್ಲಿ ಹೊಯ್ದಾಡಿದವರಿಗೆ ಮಾತ್ರ ಅಕ್ಕನ ಸತೀಪತಿಭಾವದ ವಚನಗಳಲ್ಲಿ ಸ್ಫುರಿಸುವ ಪ್ರತಿಭೆ ಎಂತಹ ಉನ್ನತ ಮಟ್ಟದ್ದು ಎಂಬುದು ಅರಿವಾಗದಿರದು ಉದಾಹರಣೆಗೆ ಈ ಕೆಳಗಿನ ವಚನಗಳನ್ನೇ ಓದಿ :

ಒಲೆಯ ಹೊಕ್ಕು ಉರಿಯ ಮರೆದವಳ,
ಮಲೆಯ ಹೊಕ್ಕು ಉಲುಹ ಮರೆದವಳ ನೋಡಾ ನೋಡಾ
ಸಂಸಾರ ಸಂಬಂಧ ನೋಡಾ 2

ಒಲೆಯ ಹೊಕ್ಕು ಉರಿ ಮರೆಯುವುದು, ಮಲೆ ಹೊಕ್ಕು ಉಲುಹ ಮರೆಯುವುದು– ಈ ಮಾತುಗಳ ಮೂಲಕ ಸಂಸಾರದಲ್ಲಿ ತನ್ನ ಇರವು ಎಂತಹದು ಎಂಬುದನ್ನು ಅಕ್ಕ ತುಂಬ ಪರಿಣಾಮಕಾರಿಯಾಗಿ ಪ್ರತಿನಿಧಿಸುತ್ತಾಳೆ.

ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು
ಕನಸಿನಲಿ ಕಳವಳಿಸಿ ಆನುಬೆರಗಾದೆ
ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ
ಆಪತ್ತಿಗೆ ಸಖಿಯರನಾರನು ಕಾಣೆ...........3
ಕಳವಳದ ಮನ ತಲೆಕೆಳಗಾದುದವ್ವ
ಸುಳಿದು ಬೀಸುವ ಗಾಳಿ ಉರಿಯಾದುದವ್ವಾ

1. ಶಿ. ಶ. ವ. 246. 106.
2. ಶಿ. ಶ. ವ. (RC) 26.11.
3. ಶಿ. ಶ. ವ. (RC) 36.15.

ಬೆಳದಿಂಗಳು ಬಿಸಿಯಾಯಿತ್ತು ಕೆಳದಿ
ಹೊಳಲಸುಂಕಿಗನಂತೆ ತೊಳಲುತಿದ್ದೆನವ್ವಾ..........1
ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವಾ
ಏರಿಲ್ಲದ ಗಾಯದಲಿ ನೊಂದೆನವ್ವಾ
ಸುಖವಿಲ್ಲದ ದಾವತಿ ಕೊಂಡೆನವ್ವಾ 2

ಮೇಲಿನ ವಚನಗಳು ಅಕ್ಕನ ವಿರಹದ ತೀವ್ರತೆಯನ್ನು ಭಾವಿಸಿದಷ್ಟು ಆಸ್ವಾದನೆಗೆ ನಿಲುಕುವ ಶ್ರೇಷ್ಠಮಟ್ಟದ ರಚನೆಗಳಾಗಿವೆ. ಎರೆಯಂತೆ ಕರಗುವುದು, ಮಳಲಂತೆ ಜರಿಜರಿಯುವುದು, ಆವಿಗೆಯು ಕಿಚ್ಚಿನಂತೆ ಸುಳಿಸುಳಿ ಬೇಯುವುದು. ಹೊಳಲ ಸುಂಕಿಗ ನಂತೆ ತೊಳಲುವುದು, ಕಿಚ್ಚಿಲ್ಲದ ಬೇಗೆ, ಏರಿಲ್ಲದ ಗಾಯ—ಈ ಪ್ರತಿಮೆಗಳಲ್ಲಿ ಅಕ್ಕ ಬಿಂಬಿಸುವ ವಿರಹ ಅದರಲ್ಲೂ ಕಿಚ್ಚಿಲ್ಲದೆ ಬೇಯುವ, ಏರಿಲ್ಲದೆಯೆ ಅಳುಕುವ ಅನುಭವ ಅತ್ಯಂತ ಗಾಢವಾಗಿ ಮಡುಗಟ್ಟುತ್ತದೆ. ಆಕೆ ಬಳಸುವ ಉಪಮೆ ರೂಪಕಗಳಲ್ಲಿ ಒಂದು ವಿಶೇಷ ಕಾಂತಿಯಿದೆ. ಬದುಕಿನ ಸಾಮಾನ್ಯ ನಿದರ್ಶನಗಳನ್ನು–ನಮ್ಮ ಸುತ್ತಲಿನ ಹತ್ತಿರದ ಅನುಭವಗಳನ್ನೇ ಎತ್ತಿಕೊಂಡು ತನ್ನ ಅಭಿವ್ಯಕ್ತಿಗೆ ಸಂಪತ್ತು ತುಂಬಿಕೊಳ್ಳುತ್ತಾಳೆ.

ಬಲ್ಲಿದ ಹಗೆಯುವ ಕೆಗೆವನ್ನಬರ
ಬಡವರ ಹರಣ ಹಾರಿ ಹೋದ ತೆರನಂತಾಯಿತ್ತು
ನೀಕಾಡಿ ನೋಡುವನ್ನ ಬರ
ಎನಗಿದು ವಿಧಿಯೇ ಹೇಳಾ ತಂದೆ
ಮೂರುವಾರುವನ್ನಬರ
ಎಮ್ಮ ಗಾಳಿಗೆ ಹಾರಿ ಹೋದ ತೆರನಂತಾಯಿತ್ತು
ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯಾ
ಚೆನ್ನಮಲ್ಲಿಕಾರ್ಜುನ.

ಮೇಲಿನ ವಚನದಲ್ಲಿ ಕಾರುಣ್ಯಕ್ಕಾಗಿ ಕಾಯುವುದಕ್ಕೂ ಒಂದು ಮಿತಿಯಿದೆ ಎಂಬು ದನ್ನು ಅತ್ಯಂತ ಹೃದಯವೇದನವಾಗುವಂತೆ ಬಲ್ಲಿದರ ಹಗೆ ತೆರೆಯುವದರೊಳಗಾಗಿ ಬಡವನ ಪ್ರಾಣ ಹಾರಿಹೋಗುವ ದೃಷ್ಟಾಂತದ ಮೂಲಕ ವಿವರಿಸುತ್ತಾಳೆ. ಇಲ್ಲಿ ಕೊಡುವವನ ನಿರ್ಲಕ್ಷ್ಯ– ಹಸಿದವನ ತೀವ್ರತೆಯನ್ನು ಮನದಟ್ಟುಮಾಡಿಕೊಳ್ಳಬಹುದು. ಹಾಗೆಯೇ ಅನಿರೀಕ್ಷಿತವಾಗಿ ಬರುವ ಸುಖದ ಅನುಭವವನ್ನು 'ಅರಲುಗೊಂಡ ಕೆರೆಗೆ ತೊರೆ ಹರಿದುಬಂದಂತೆ' 'ಬರಲುಗೊಂಡ ಸಸಿಗೆ ಮಳೆ ಸುರಿದಂತೆ' ಎಂಬ ಪ್ರತಿಮೆಗಳ ಮೂಲಕ ಕಣ್ಣಿಗೆ ಕಟ್ಟುವ 'ಅನಿರೀಕ್ಷಿತ ಆನಂದ'ದ ಅನುಭವ ಮನಸೆಯು.

ಉದ್ಗಾರ, ಸಂಬೋಧನೆಗಳಂಥ ಭಾವಸೂಚಕಗಳನ್ನೇ ಪ್ರಯೋಗಿಸಿ, ಕೆಲ ವೊಮ್ಮೆ ಪುನರುಕ್ತಿಗಳನ್ನು ಬಳಸಿ ಕಾವ್ಯಸೌಂದರ್ಯವನ್ನು ಹೆಚ್ಚಿಸುವ ಈ ಕೆಳಗಿನ ವಚನಗಳನ್ನು ಗಮನಿಸಬಹುದು.

1. ಶಿ. ಶ. ವ. 254.109.
2. 251, 108.

ಹಸಿವೆಯೆ ನೀನು ನಿಲ್ಲುನಿಲ್ಲು; ತೃಷೆಯೆ ನೀನು ನಿಲ್ಲು ನಿಲ್ಲು
ಕಾಮವೇ ನೀನು ನಿಲ್ಲು ನಿಲ್ಲು, ಕ್ರೋಧವೇ ನೀನು ನಿಲ್ಲು ನಿಲ್ಲು
ಮೋಹವೇ ನೀನು ನಿಲ್ಲು ನಿಲ್ಲು....
ಚೆನ್ನಮಲ್ಲಿಕಾರ್ಜುನದೇವರ ಅವಸರದ ಒಲೆಯನೊಯ್ಯುತ್ತಲಿದ್ದೇನೆ
ಶರಣಾರ್ಥಿ–1

ಅಯ್ಯಾ ನೀ ಕೇಳಿದಡೆ ಕೇಳು ಕೇಳದೊಡೆ ಮಾಣು
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ ನೀನು ನೋಡಿದಡೆ ನೋಡು ನೋಡದಡೆ ಮಾಣು
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ ನೀನು ಮಚ್ಚಿದಡೆ ಮಚ್ಚು ಮಚ್ಚದೊಡೆ ಮಾಣು
ಆನು ನಿನ್ನನ್ನಪ್ಪಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ ನೀನು ಒಲಿದಡೆ ಒಲಿ ಒಲಿಯದೊಡೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ ಆನು ನಿಮ್ಮನರ್ಚಿಸಿ ಪೂಜಿಸಿ
ಹರುಷದೊಳೋಲಾಡುವೆನಯ್ಯಾ2

ಎಲೆ ಅಣ್ಣಾ ಅಣ್ಣಾ ನೀವು ಮರುಳಲ್ಲಾ ಅಣ್ಣಾ
ಎನ್ನ ನಿನ್ನಳವೆ?
ಹದಿನಾಲ್ಕು ಲೋಕವ ನುಂಗಿದ ಕಾಮನ ಬಾಣದ ಗುಣ!
ಎನ್ನ ನಿನ್ನಳವೆ?
ನಾರುವ ಮುಗ್ಗಿದಡೆ, ಮಿಡಿಯ ಹರಿಸು ಹೊಯ್ವರೇ?
ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು
ನಿನ್ನ ನೀ ಸಂವರಿಸಿಕೈದುವ ಕೊಳ್ಳಿರಣ್ಣಾ
ಚನ್ನಮಲ್ಲಿಕಾರ್ಜುನೆಂಬ ಹಗೆಗೆ ಬೆಂಗೊಡದಿರಣ್ಣಾ3

ಮೇಲಿನ ಮೊದಲ ವಚನದಲ್ಲಿ ಹಸಿವು ತೃಷೆ ಕಾಮಕ್ರೋಧಾದಿಗಳ ಕವಿದು ಬರುವ ಏರಾಟದ ತುರ್ತುಗುಣಕ್ಕೆ ನಿಲ್ಲು ನಿಲ್ಲು ಎಂಬ ಸಂಬೋಧನೆ ಕಡಿವಾಣ ಹಾಕುವ ಕ್ರಿಯೆ ಸೂಚಿಸುತ್ತದೆ. ಈ ವಚನವಲ್ಲಿ ಮನನವಾಗುವ ಸಕ್ರಿಯ ತೀವ್ರತೆ ಮನಸ್ಸಿನ ಅವಸರದಷ್ಟೆ ಶಬ್ದಗಳ ಅವಸರದ ಚಿತ್ರಣ ಕಣ್ಮುಂದೆ ತರುತ್ತದೆ. ಎರಡನೆಯ ಮತ್ತು ಮೂರನೆಯ ವಚನಗಳಲ್ಲಿ ಬರುವ ಅಯ್ಯಾ ಅಯ್ಯಾ ಎಂಬ ಪುನರುಕ್ತಿ ಹಾಗೆಯೆ ಎಲೆ ಅಣ್ಣಾ ಅಣ್ಣಾ ಎಂದು ಸಂಬೋಧಿಸುವಲ್ಲಿ ತೋರುವ ಆತ್ಮೀಯ ಸೌಜನ್ಯ ಇಡೀ

1. ಶಿ. ಶ. ವ.
ಶಿ. ಶ. ವ. (RC) 124.48
2. ಶಿ. ಶ. ವ. 108.42
3. ಶಿ. ಶ. ವ. 113.44

ವಾತಾವರಣವನ್ನೇ ಮಿದುಗೊಳಿಸಿ ಭಾವ ಸೃಷ್ಟಿಗೆ ಸಮರ್ಥನೆ ದೊರೆವ ರೀತಿ ಅದ್ಭುತವಾದದ್ದು.

ಒಟ್ಟಿನಲ್ಲಿ ಅಕ್ಕನ ಬದುಕಿನಲ್ಲಿ ಅನುಭಾವ–ಕಾವ್ಯಗಳು ಬೆಸ್ಗಡಿಸಿ ನೋಡಲಾಗದಷ್ಟು ಹುರಿಗೊಂಡು ಸಾಗಿವೆ. ಆಕೆಯ ಸಾಧನಾಮಾರ್ಗದ ಹಲವು ಸಾಂಪ್ರದಾಯಿಕ ಧಾರ್ಮಿಕತೆಯನ್ನು ಬಿಂಬಿಸುವ ವಚನಗಳನ್ನು ಬದಿಗಿರಿಸಿ ಕೇವಲ ಆಕೆಯ ವಿರಹ-ತೊಳಲಾಟದ ಕೆಲವೇ ವಚನಗಳನ್ನು ಗುರುತಿಸಿದರೂ ಅಲ್ಲಿ ದೊರೆವ ಕಾವ್ಯ ಸೌಂದರ್ಯ ಆಕೆಯನ್ನು ಒಬ್ಬ ಶ್ರೇಷ್ಠಮಟ್ಟದ ಅನುಭಾವ ಕವಯಿತ್ರಿಯನ್ನಾಗಿ ಗುರುತಿಸಲು ಯಾವ ತೊಂದರೆ ಅಡ್ಡಬರುವದಿಲ್ಲ.

ಕೆಲವೊಮ್ಮೆ ಕಾವ್ಯ ಬದುಕಿನಲ್ಲಿ ಪ್ರವೇಶಿಸಿ ಬದುಕನ್ನು ಶೋಧಿಸಲು ಹಚ್ಚುವುದುಂಟು. ಅನೇಕ ಕವಿಗಳ ಬದುಕಿನಲ್ಲಿ ಕಾಣುವುದು ಹೀಗೆಯೆ. ಆದರೆ ಅನುಭಾವ ಕವಿಗಳ ರೀತಿ ಹಾಗಲ್ಲ. ಮಹದೇವಿ ಸ್ವಭಾವತಃ ಅಂತರ್ಮುಖಿ. ಆಕೆಯ ಬದುಕೇ ಕಾವ್ಯಕ್ಕೆ ವಸ್ತುವಾಗಿ ಅಂತರಂಗದ ಸಾಧನೆಯ ಬೆಳಕನ್ನು ಕಾವ್ಯವೇ ಒಪ್ಪಿಸುತ್ತ ಬದುಕಿನ ಎತ್ತರ ಬಿತ್ತರಗಳನ್ನು ಕಾಣುವಂತಾಗುತ್ತದೆ. ಒಟ್ಟಿನಲ್ಲಿ ಕಾವ್ಯ–ಅನುಭಾವಗಳ ಪರಿಪಾಕ ಮಹದೇವಿಯಕ್ಕನ ಬದುಕಿನ ತುಡಿತಕ್ಕೆ ಹತ್ತಿರವಾದ ವಿರಹಗೀತೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

ಮಹದೇವಿಯಕ್ಕನಂತಹ ಅನುಭಾವಿಗಳು ಭಾರತದ ಚರಿತ್ರೆಯಲ್ಲಿ ಕೆಲವರು ದೊರೆಯುತ್ತಾರೆ. ಆದರೆ ಮಹದೇವಿಯ ವೈಶಿಷ್ಟ್ಯ ಬೇರೆ. ಆಕೆ ತನ್ನ ಸಾಧನೆಯನ್ನು ಕನ್ನಡಿಯಂತೆ ನಮ್ಮ ಮುಂದಿಟ್ಟು ಬದುಕಿನ ವಾಸ್ತವಕ್ಕೆ ಒಂದು ಆಯಾಮ ಒದಗಿಸಿ ಹೆಣ್ಣು ಏರಬಹುದಾದ ಎತ್ತರ ಸಾಧನೆಗಳ ಬಗ್ಗೆ ಆತ್ಮ ವಿಶ್ವಾಸ ಹುಟ್ಟಿಸುತ್ತಾಳೆ.

ಉಪನಿಷತ್ ಕಾಲದ ಗಾರ್ಗಿ ಮೈತ್ರೇಯಿಯವರು, ಪುರಾಣದ ಕೆಲವು ಜನ ಸ್ತ್ರೀಯರು, ಬೌದ್ಧ ಭಿಕ್ಷುಣಿಯರು, ಜೈನ ಕಂತಿಯರು, ಆಂಡಾಳ್ ಮೀರಾನಂತಹ ಕೆಲವರು ಧರ್ಮ ಅನುಭಾವಗಳ ಹಾದಿಯಲ್ಲಿ ಸಾಗಿದ್ದುದು ಚರಿತ್ರೆಯಲ್ಲಿ ವಿದಿತವಿದೆ. ಆದರೆ ಮಹದೇವಿಯಕ್ಕ ಇವರ ಮತ್ತು ನಮ್ಮಗಳ ಮಧ್ಯದ ಸುವರ್ಣ ಸೇತುವೆ. ಇವರು ಸಾಧನೆಗಳ ಅಸ್ಪಷ್ಟ ಚಿತ್ರಗಳಿಂದಾಗಿ ಕೇವಲ ನಮಗೆ ಪೂಜನೀಯರು ಮಾತ್ರ ಆಗಿದ್ದಾರೆ. ಆದರೆ ಮಹದೇವಿಯಕ್ಕ ಸಾಧನೆಯ ಸಾಧ್ಯತೆಯನ್ನು, ಅದಕ್ಕೆ ಬೇಕಾದ ವೈಶಿಷ್ಟ್ಯಪೂರ್ಣ ಸಂಕಲ್ಪ ಹೋರಾಟಗಳನ್ನು ತೋರಿದ್ದಾಳೆ. ಆ ಮೂಲಕ ಜ್ಞಾನ–ವೈಚಾರಿಕತೆಗಳ ಹಾಗೂ ವಿಶಾಲ ವ್ಯಕ್ತಿತ್ವ ವಿಕಸನಗಳ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಇಂದಿನ ಆಧುನಿಕ ಭಾರತೀಯ ಮಹಿಳಾ ಜಗತ್ತಿಗೆ ತೀರ ಆತ್ಮೀಯಳಾಗಿ ಕಾಣುತ್ತಾಳೆ. ಈ ದೃಷ್ಟಿಯಿಂದ ಮಹದೇವಿಯಕ್ಕ ಜಗತ್ತಿನ ಸಾಹಿತ್ಯಕ್ಕೆ ಕರ್ನಾಟಕದ ಮಹತ್ವದ ಕೊಡುಗೆ.

ನೀಲಲೋಚನೆ

ಎಂ. ಎಂ. ಕಲಬುರ್ಗಿ

ಭಾರತೀಯ ಪರಂಪರೆಯಲ್ಲಿ ಪತಿಗೆ ಸತಿ ಮೂಕ ಸಂಗಾತಿ. ಇವರಲ್ಲಿ ಕೆಲವರು ಪತಿಯಿಂದ ಶೋಷಿತರಾದ ಮೌನದುಃಖಿಗಳು; ಇನ್ನು ಕೆಲವರು ಪತಿಯನ್ನು ರೂಪಿಸಿದ ಮೌನಶಿಲ್ಪಿಗಳು. ನೀಲಲೋಚನೆ ಮೌನಶಿಲ್ಪಿ ವರ್ಗಕ್ಕೆ ಸೇರಿದವಳಾದರೂ ಆಗಾಗ ಮೌನ ಮುರಿದು ಕಲ್ಯಾಣದ ಆಂದೋಲನದಲ್ಲಿ ಪತಿಯೊಂದಿಗೆ ಪಾಲುಗಾರಳಾದ ಕ್ರಿಯಾಶೀಲ ಮಹಿಳೆಯೆನಿಸಿದ್ದಾಳೆ. ನೀಲಾಂಬಿಕೆ ಎಂಬುದು ರೂಢಿಯಲ್ಲಿದ್ದರೂ ಇವಳ ಮೂಲ ನಾಮ ಮಾಯಿದೇವಿಯೆಂದು ತೋರುತ್ತದೆ.

ಬಸವಣ್ಣನಿಗೆ ಗಂಗಾಂಬಿಕೆ, ನೀಲಾಂಬಿಕೆ ಇಬ್ಬರು ಹೆಂಡಿರು. ಗಂಗಾಂಬಿಕೆ ತನ್ನ ಮಗನಿಗೆ ಸಿದ್ಧರಸನೆಂದು ಹೆಸರಿಟ್ಟಿರುವುದರಿಂದ ಅವಳ ತಂದೆ ಸಿದ್ಧರಸನಾಗಿರಬಹುದೆಂದು ಹೇಳಲು ಮನಸ್ಸಾಗುತ್ತಿದ್ದರೂ ಮಿಕ್ಕ ಕಾವ್ಯಗಳನ್ನು ಗಮನಿಸಿದಲ್ಲಿ ಮಂತ್ರಿ ಬಲದೇವನೇ ಅವಳ ತಂದೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಗಂಗಾಂಬಿಕೆಯ ತಂದೆಯ ಬಗೆಗೆ ಇಷ್ಟು ಸಣ್ಣ ಸಂದೇಹವಿದ್ದರೆ ನೀಲಾಂಬಿಕೆಯ ತಂದೆಯ ಬಗೆಗೆ ಅಷ್ಟೇ ದೊಡ್ಡ ಸಂದೇಹವಿದೆ.

ಹರಿಹರ, ಸಿದ್ಧರಸನ ಆಸ್ತಿಗೆ ಬಸವಣ್ಣ ಒಡೆಯನಾದನೆಂದು ಹೇಳುವನಾದರೂ ಗಂಗಾಂಬಿಕೆ, ಮಾಯಿದೇವಿಯರು ಯಾರ ಮಕ್ಕಳೆಂದು ಸ್ಪಷ್ಟಪಡಿಸುವುದಿಲ್ಲ. ಭೀಮಕವಿ, ಬಲದೇವನ ಮಗಳು ಗಂಗಾಂಬಿಕೆಯೆಂದು ಸ್ಪಷ್ಟಪಡಿಸುತ್ತಿದ್ದರೂ ಮಾಯಿದೇವಿಯ ತಂದೆಯ ವಿಷಯವಾಗಿ ಮೌನ ತಾಳುತ್ತಾನೆ. ಲಕ್ಕಣ್ಣ ದಂಡೇಶ, ಬಲದೇವನ ಮಗಳು ಗಂಗಾಂಬಿಕೆ, ಬಿಜ್ಜಳನ ತಂಗಿ ನೀಲಲೋಚನೆಯೆನ್ನುವನಾದರೂ ಸಿದ್ಧರಸನ ಪ್ರಸ್ತಾಪ ಮಾಡುವುದಿಲ್ಲ. ನೀಲಾಂಬಿಕೆ ಸಿದ್ಧರಸನ ಮಗಳೆಂದು ವೀರಶೈವಾಮೃತ ಪುರಾಣ ಹೇಳುತ್ತದೆ. ಸಿಂಗಿರಾಜ ಪುರಾಣ, ನೀಲಲೋಚನೆ ಸಿದ್ಧರಸನ ಮಗಳು, ಬಿಜ್ಜಳನ ಸಾಕುತಂಗಿ ಎಂದು ವ್ಯಕ್ತಪಡಿಸುತ್ತದೆ.

ಈ ಉಲ್ಲೇಖಗಳನ್ನು ಒಟ್ಟಾಗಿ ನೋಡಿದರೆ ನೀಲಲೋಚನೆ ಚಕ್ರವರ್ತಿ ಬಿಜ್ಜಳನ ತಂಗಿ, ಮಂತ್ರಿ ಸಿದ್ಧರಸನ ಮಗಳು ಎಂಬ ಎರಡು ಅಭಿಪ್ರಾಯಗಳು

ತೋರುತ್ತವೆ. ಯಾವಾಗಲೂ ಇಂಥ ಅಭಿಪ್ರಾಯ ಭೇದಗಳಿಗೆ ನಿವಾರಣೆ ಹುಡುಕುವ ಧೋರಣೆಯುಳ್ಳ ಸಿಂಗಿರಾಜ ಇವಳು ಸಿದ್ಧರಸನ ಮಗಳು, ಬಿಜ್ಜಳನ ಸಾಕು ತಂಗಿಯೆಂದು ಸಾರುತ್ತಾನೆ; ಈ ಸಂದೇಹಕ್ಕೆ ವಿರಾಮ ಹಾಕುತ್ತಾನೆ.

ಈ ಗೊಂದಲವನ್ನು ಗಮನಿಸಿದರೆ ವೀರಶೈವ ಕವಿಗಳಿಗೆ ಯಾವುದೋ ಒಂದು ರುಚಿಸದ ಸಂಗತಿ ಇಲ್ಲಿ ಹುದುಗಿರಬಹುದೆನಿಸುತ್ತದೆ. ಅದು, ಬಹುಶಃ ಇವಳು ಸಿದ್ಧರಸನೆಂಬವನ ಮಗಳಾಗಿರದೆ ಲಕ್ಕಣ್ಣ ದಂಡೇಶ ಹೇಳುವಂತೆ ಶೈವ ಕ್ಷತ್ರಿಯನಾದ ಬಿಜ್ಜಳನ ತಂಗಿಯೇ ಆಗಿರಬೇಕು. ಈ ಶೈವಕ್ಷತ್ರಿಯನೆಂಬ 'ಅನ್ಯಜಾತಿ'ಯೇ ವೀರಶೈವ ಕವಿಗಳನ್ನು ಕಾಡಿದಂತಿದೆ. ಇದನ್ನು ಮುಚ್ಚಲು ಸಿದ್ಧರಸನ ಆಸ್ತಿಗೆ ಬಸವಣ್ಣ ವಾರಸುದಾರನಾದನೆಂಬ ಹರಿಹರನ ಹೇಳಿಕೆಯ ಎಳೆಯನ್ನೇ ತರುವಾಯದವರು ಸ್ವಲ್ಪ ಜಗ್ಗಿ ಸಿದ್ಧರಸ-ನೀಲಲೋಚನೆಯರು ತಂದೆ–ಮಗಳೆಂಬ ಕಲ್ಪನೆ ಕಟ್ಟಿರಬೇಕು. ಆಗ ಬಿಜ್ಜಳನ ತಂಗಿಯೆಂಬ ಸಂಗತಿ ಅಡ್ಡಬರಲು 'ಸಿದ್ಧರಸನ ಮಗಳು, ಬಿಜ್ಜಳನ ಸಾಕು ತಂಗಿ' ಎಂದು ಹೇಳಿ ತಮಗೆ ಉಂಟಾಗಿದ್ದ 'ಅನ್ಯ ಜಾತೀಯತೆ'ಯೆಂಬ ನೋವನ್ನು ಮುಚ್ಚಿಬಿಟ್ಟರು–ಎಂದು ಊಹಿಸಬಹುದು.

೧೨ನೆಯ ಶತಮಾನದಲ್ಲಿ ಬಹುಪತ್ನಿತ್ವ ಸಮಾಜ ಮಾನ್ಯವಾಗಿದ್ದರೂ ಬಸವಣ್ಣನಂಥ ವಿಭೂತಿ ಪುರುಷನ ವಿಷಯವಾಗಿ ಇದು ಕೆಲವರಿಗೆ ಸಮರ್ಥನೀಯವಾಗಿ ಕಾಣುವುದಿಲ್ಲ. ಗಂಗಾಂಬಿಕೆಯ ಹೊಟ್ಟೆಯಿಂದ ಸಿದ್ಧರಸ, ನೀಲಾಂಬಿಕೆಯ ಹೊಟ್ಟೆಯಿಂದ ಬಾಲಸಂಗಯ್ಯ ಹೆಸರಿನ ಮಕ್ಕಳಿದ್ದಿರಬಹುದಾದ ಕಾರಣ ಪುತ್ರ ಸಂತಾನಕ್ಕಾಗಿ ದ್ವಿತೀಯ ಮದುವೆಯಾದನೆಂದೂ ಹೇಳುವಂತಿಲ್ಲ. ಅಧಿಕಾರ, ರೂಪ, ಐಶ್ವರ್ಯಗಳಿಗೆ ಸೋತು ಮದುವೆಯಾದನೆಂದರೆ ಅದು ಬಸವಣ್ಣನವರ ವಿಷಯದಲ್ಲಿ ನಂಬದ ಮಾತು. ಆದುದರಿಂದ ಅಂದಿನ ಸಮಾಜದ ಮಹಾರೋಗವಾಗಿದ್ದ ಜಾತಿ ಭೇದ ನಿವಾರಣೆಗೆ ತಾನೇ ಉದಾಹರಣೆಯಾಗುವ ಉದ್ದೇಶದಿಂದ ವರ್ಣ ಪದ್ಧತಿಯ ಎದುರು ಸಣ್ಣ ವಿಷಯವೇ ಆಗಿದ್ದ, ಅಂದಿನ ಕಾಲದ ಸಹಜ ಕ್ರಿಯೆ ಎನಿಸಿದ್ದ ಬಹುಪತ್ನಿತ್ವ ದೋಷವನ್ನು ಲೆಕ್ಕಿಸದೆ ಬಸವಣ್ಣ ಅನ್ಯಜಾತೀಯಳಾಗಿದ್ದ ನೀಲಾಂಬಿಕೆಯನ್ನು ಮದುವೆಯಾಗಿರಬಹುದು. ಇಲ್ಲಿ ಅವನಿಗೆ ಎರಡನೆಯ ಹೆಂಡತಿ ಮುಖ್ಯವಲ್ಲ; ಮುಖ್ಯವಾಗಿದ್ದುದು ಅವಳ ಅನ್ಯಜಾತೀಯತೆ.

ಬಸವಣ್ಣನವರ ಜೀವನದಲ್ಲಿ ಗಂಗಾಂಬಿಕೆಗಿಂತ ನೀಲಾಂಬಿಕೆ ತುಂಬ ಜೋರು ಕಾಣುವುದಕ್ಕೆ ಅವಳು ಮಂತ್ರಿಕುಮಾರಿಯಾಗಿದ್ದರೆ ಇವಳು ರಾಜಕುಮಾರಿ. ಮೇಲಾಗಿ ದ್ವಿತೀಯ ಪತ್ನಿಯಾಗಿದ್ದ ವ್ಯಾವಹಾರಿಕ ಅಂಶವೇ ಕಾರಣವಾಗಿರಬೇಕು. ಗಂಡನ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಹಾಸುಹೊಕ್ಕಾಗಿ ದುಡಿದ ಶಕ್ತಿ–ಸಾಮರ್ಥ್ಯಗಳು, ಇವಳು ರಾಜಕುಟುಂಬದಲ್ಲಿ ಸಂಸ್ಕಾರ ಪಡೆದು ಬಂದವಳೆಂಬುದನ್ನು ದೃಢಪಡಿಸುತ್ತವೆ. ಗಂಗಾಂಬಿಕೆ ಬ್ರಾಹ್ಮಣಕುಮಾರಿಯಾದುದರಿಂದ ಬಾಲ್ಯದಲ್ಲಿಯೇ ಬಿಚ್ಚಿಕೊಳ್ಳದ ಅವಳ ವ್ಯಕ್ತಿತ್ವ ಆ ತರುವಾಯವೂ ಹಾಗೆಯೇ ಮುಂದುವರಿಯಿತೆಂದು ತೋರುತ್ತದೆ.

ಬಸವಣ್ಣನವರ ಹೆಂಡಿರ ಹೆಸರು ಗಂಗಾಂಬಿಕೆ ನೀಲಾಂಬಿಕೆಯೆಂದು

ಸಾಮಾನ್ಯವಾಗಿ ಪ್ರಚಾರದಲ್ಲಿದ್ದರೂ ಹರಿಹರ ಗಂಗಾಂಬಿಕೆ, ಮಾಯಿದೇವಿ ಎಂದು ಹೇಳುತ್ತಾನೆ. ಹರಿಹರನು, "ಸಿರಿಸರಸ್ವತಿ ಶಚಿಗಳಂ ಕೀಳ್ಮಾಡುವ ತನ್ನರಸಿ ಮಾಯಿದೇವಿ" ಎಂದೂ ಬಸವಣ್ಣನವರು, "ಎನ್ನಸತಿ ನೀಲಲೋಚನೆ ಪೃಥ್ವಿಗಗ್ಗಳ ಚಲುವೆ" ಎಂದೂ ಹೇಳುವುದರಿಂದ ನೀಲಾಂಬಿಕೆಯ ಇನ್ನೊಂದು ಹೆಸರು ಮಾಯಿದೇವಿ ಎಂದು ನಂಬಬಹುದು. ಬಹುಶಃ ಇವಳಿಗೆ ಇದ್ದಿರಬಹುದಾದ ನೀಲನೇತ್ರಗಳಿಗೆ ಮನಸೋತ ಬಸವಣ್ಣ "ನೀಲಲೋಚನೆ" ಎಂದು ಪ್ರೀತಿಯಿಂದ ಕರೆಯುತ್ತಿದ್ದು, ಅದೇ ರೂಢಿಯಲ್ಲಿ ಬಂದಂತಿದೆ.

ಗಂಗಾಬಿಕೆಗೆ ಸಿದ್ಧರಸನಿದ್ದಂತೆ ನೀಲಾಂಬಿಕೆಗೆ ಬಾಲಸಂಗಯ್ಯ ಹೆಸರಿನ ಮಗ ನಿದ್ದನೆಂದು ಕೆಲವು ಕಾವ್ಯಗಳು ಹೇಳುತ್ತವೆ. "ಅವಳ ಕಂದ ಬಾಲಸಂಗ" ಎಂಬ ಗಂಗಾಂಬಿಕೆಯ ಮಾತು ಈ ಸಂಗತಿಯನ್ನು ಸ್ಪಷ್ಟಪಡಿಸುವಂತಿದೆ. ಈತನು ತೀರಿಕೊಳ್ಳಲು ಬಸವಣ್ಣ,

> ಪುಷ್ಪವಿದ್ದಂತೆ ಮೊಗ್ಗೆಯನರ್ಪಿಸಿಕೊಂಡ ಶಿವನು
> ಪಕ್ವವಾದ ಫಳವಿದ್ದಂತೆ ಕಸುಗಾಯ ಕೊಯ್ದ ಶಿವನು /

ಎಂದು ನೊಂದು ನುಡಿದನೆಂದು ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಹೇಳುತ್ತದೆ. ಬಿಜ್ಜಳನೊಂದಿಗೆ ಮನಸ್ತಾಪ ಮಾಡಿಕೊಂಡ ಬಸವಣ್ಣ ಮತಿಘಟ್ಟ ಪಾಳ್ಯಕ್ಕೆ ಹೋಗಲು ಅವನೊಡನೆ ಬಾಲಸಂಗಯ್ಯನೂ ಹೋದನೆಂದು ಸಿಂಗಿರಾಜ ಮೊದಲಾದವರು ಹೇಳುವುದರಿಂದ, ಬಾಲಸಂಗಯ್ಯನ ಹೆಸರಿನಲ್ಲಿ ಕಮಠೇಶ್ವರ ಮುದ್ರಿಕೆಯ ಕೆಲವು ವಚನ ಸಿಗುವುದರಿಂದ ಈತನು ಸ್ವಲ್ಪ ಪ್ರೌಢಾವಸ್ಥೆಯಲ್ಲಿಯೇ ತೀರಿಕೊಂಡಿರಬೇಕೆನಿಸುತ್ತದೆ.

ನೀಲಲೋಚನೆಯ ಜೀವನದ ಘಟನೆಗಳು ಅಷ್ಟಾಗಿ ನಮಗೆ ಗೊತ್ತಾಗದಿದ್ದರೂ ಕಾವ್ಯ–ವಚನಗಳ ಬಲದಿಂದ ಕೆಲವನ್ನು ಇಲ್ಲಿ ಸಂಗ್ರಹಿಸಬಹುದು. ಕಳ್ಳನೊಬ್ಬ ಕನ್ನವಿಕ್ಕಿ ನೀಲಲೋಚನೆಯ (ಹರಹರ ಗಂಗಾಂಬಿಕೆಯ ಎನ್ನುತ್ತಾನೆ) ಕಿವಿಯೋಲೆ ಬಿಚ್ಚುವಷ್ಟರಲ್ಲಿ, ಎಚ್ಚತ್ತು ಕೂಗಲು ಬಸವಣ್ಣ ಎದ್ದು ಬಂದು "ಎಲೆಲೆ ಸಂಗನ ಕರಂ ನೊಂದುದೆ, ಬೆಸಸುವಲ್ಲಿಂ ಮುನ್ನವೇ ಕೊಡದೆ ನಿಲುವುದೇ?" ಎಂದು ಬಿಚ್ಚಿ–ಕೊಡಿಸುತ್ತಾನೆ. ಇಲ್ಲಿಯ ನೀಲಲೋಚನೆಯ ವ್ಯಕ್ತಿತ್ವದಲ್ಲಿ ಶರಣ ತತ್ವಕ್ಕೆ ಇನ್ನೂ ಮಾಗದ ಘಟ್ಟವನ್ನು ಗುರುತಿಸಬಹುದು.

ವಿಟವೇಷ ಧರಿಸಿಬಂದ ಸಂಗಯ್ಯನಿಗೆ ಮಾಯಿದೇವಿ (ನೀಲಲೋಚನೆ) ಯನ್ನು ಒಪ್ಪಿಸಬೇಕೆಂದು ಬಸವಣ್ಣ ಯೋಚಿಸುವಷ್ಟರಲ್ಲಿ ಅವಳು, "ಊರೊಳಗೆ ಪೆಣ್ಣಿಲ್ಲದಿರ್ದಡೆ ಜಂಗಮಕ್ಕೆ ಬಸವನ್ನೆನ್ನ ಕೊಟ್ಟಲ್ಲದೆ ಮಾಣನೆಂದು ಸಿಂಗರಿಸಿ"ಕೊಂಡು ಸಿದ್ಧಳಾಗುತ್ತಾಳೆ. ಆಗ ಶಿವ ಪ್ರತ್ಯಕ್ಷನಾಗಲು ಬಸವಣ್ಣ, "ತಾಯೆ ತಾಯೆ ಮುನ್ನವಾರೆಂದು ಕೊಟ್ಟೆಂ" ಎಂದು ನುಡಿಸುವಲ್ಲದೆ "ಅಂದು ಮೊದಲಾಗಿ ಗುಣಾನ್ವಿತೆ ಮಾಯಿದೇವಿಯುಂ ಶಿವನ ಲತಾಂಗಿಯೆಂದು ಪದೆದರ್ಚಿಸುತಿರ್ದನುರ್ವಿಯೊಳ್" ಎಂದು ಹೇಳುತ್ತಾನೆ ಹರಿಹರ. ಹೀಗಾಗಿ ಈ ಸಂದರ್ಭ ಮೊದಲುಗೊಂಡು "ಶಿವನಿಗೆ ಅರ್ಪಿಸಿದ ಹೆಣ್ಣು" ಎಂಬ ಭಾವನೆಯಿಂದ ಇವಳನ್ನು ಬಸವಣ್ಣ ಮಾತೃಸ್ಥಾನದಲ್ಲಿ ಕಾಣತೊಡ

ಗಿದ ಘಟನೆ ಇವಳ ಜೀವನದ ಬಹುದೊಡ್ಡ ತಿರುವಾಗಿ ತೋರುತ್ತದೆ. ಸಾಮಾನ್ಯವಾಗಿ ಇವಳ ಎಲ್ಲ ವಚನಗಳ ಒಡಲಲ್ಲಿ ಒಂದು ಬಗೆಯ ಬಸವವಿರಹ, ಅನಾಥ ಭಾವಗಳ ಸೂಕ್ಷ್ಮ ಧ್ವನಿ ಕೇಳಿಸುವುದಕ್ಕೆ ಈ ಭೋಗತ್ಯಕ್ತ ಜೀವನವೇ ಕಾರಣವಾಗಿರಬಹುದು.

ಪಾರ್ವತಿಯ ರೂಪಕಂಡು, ಪರಶಿವನ ಸಂಗ ನಿಸ್ಸಂಗವಾಗಿ
ತಾಯಿ ಮಗನಂಗದಿಂದ ತನುವಳಿದು ನಿರಾಭಾರ ರೂಪವನೆಯ್ದಿ
ಬಸವನ ಅನುಭವದಿಂದ ವಿವರವ ಕಂಡು
ವಿಚಾರಪತ್ನಿಯಾದೆನಯ್ಯಾ ಸಂಗಯ್ಯಾ (೧೦೪)
ಮಡದಿಯೆನಲಾಗದು ಬಸವಂಗೆ ಎನ್ನನು,
ಪುರುಷನೆನಲಾಗದು ಬಸವನ ಎನಗೆ
ಉಭಯ ಕುಳವ ಹರಿದು ಬಸವಂಗೆ ಶಿಶುವಾದೆನು
ಪ್ರಮಥರು ಸಾಕ್ಷಿಯಾಗಿ
ಸಂಗಯ್ಯ ಸಿಕ್ಕಿದ ದಿವ್ಯವ ಮೀರದೆ ಬಸವನೊಳಗಾನಡಗಿದೆ (೧೯೭)

ಎಂಬಂತಹ ವಚನಗಳು ಇವಳಿಗೂ ಬಸವಣ್ಣನಿಗೂ ಇದ್ದ ದಾಂಪತ್ಯಾತೀತ ಸಂಬಂಧವನ್ನು ಸ್ಪಷ್ಟ ಪಡಿಸುತ್ತವೆ. ಇಲ್ಲಿ ಬಂದ 'ದಿವ್ಯ' ಎಂಬುದು ಮೇಲೆ ಹೇಳಿದ ಘಟನೆಯ 'ಅಗ್ನಿದಿವ್ಯ' ವನ್ನು ಸೂಚಿಸುತ್ತಿದ್ದು, ಬಸವಣ್ಣನಿಗೆ ತಾನು 'ವಿಚಾರಪತ್ನಿ' (Intellectual Companion) ಯೆಂದು ಸಾರಿದುದು ಜಾಗತಿಕ ದಾಖಲೆಯಾಗುವಂಥ ಅಪೂರ್ವ ಮಾತಾಗಿದೆ.

ಬಸವಣ್ಣ ಒಡ್ಡಿದ ಒರೆಗಲ್ಲಿಗೆ ಮಿಸುನಿಯಾಗಿ ಮೆರೆದ ನೀಲಾಂಬಿಕೆ, ಅವನನ್ನು ಬಂಗಾರವಾಗಿಸುವಲ್ಲಿ ಬಹುದೊಡ್ಡ ಪಾತ್ರ ನಾಡಿದಳು. ಅಜಗಣ್ಣ, ಕಕ್ಕಯ್ಯ, ಚಿಕ್ಕಯ್ಯ (೧೨೨). ಬಸವ, ಚೆನ್ನಬಸವ ಪ್ರಭು, ಚೀಲಾಳ, ಇಹಾಪಗೆಯಾಂಡ (೧೨೪), ಮಾದಾರ ಚೆನ್ನಯ್ಯ (೧೨೫) ಮೊದಲಾದ ಶರಣರ ಒಡನಾಟ, ಪ್ರಭಾವಗಳನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ತನ್ನ ವ್ಯಕ್ತಿತ್ವವನ್ನು ಅರಳಿಸಿಕೊಂಡಳು.

ನೀಲಲೋಚನೆಯ ಹೆಸರಿನಲ್ಲಿ "ಸಂಗ, ಸಂಗಪ್ರಭು, ಸಂಗಮನಾಥ, ಸಂಗಯ್ಯ ಸಂಗನ ಗುರುಬಸವಾ, ಬಸವ ಪ್ರಿಯ ಕೂಡಲ ಸಂಗಮದೇವಾ" ಮುದ್ರಿಕೆಯ ೧೨೫ ವಚನ, ೭ ಸ್ವರ ವಚನಗಳು ಸಿಗುತ್ತವೆ. ಇವಳ ಹೆಸರಿನಲ್ಲಿ ಒಂದು ಕಾಲಜ್ಞಾನ ಕೃತಿಯೂ ಲಭ್ಯವಿದೆ. ಕವಿಚರಿತೆಕಾರರು ಇವಳದೆಂದು ಸೂಚಿಸುವ 'ಪ್ರಸಾದ ಸಂಪಾದನೆ' ಕೃತಿಯ ಬಗೆಗೆ ಸಂದೇಹವಿದೆ. ಇಷ್ಟು ಇವಳ ಸಾಹಿತ್ಯ ಮೊತ್ತ.

ಚಿಕ್ಕಗಾತ್ರ, ಲೋಕಾನುಭವ–ವಚನ ರಚನಾ ಶಿಲ್ಪಗಳ ಕಿಂಚಿದೂನತೆ, ಅನುಭಾವಿಕ ಪ್ರಜ್ಞೆಗಳು ಇವಳ ವಚನದ ಮುಖ್ಯ ಲಕ್ಷಣವೆನಿಸಿವೆ. ಸಾಮಾನ್ಯವಾಗಿ ಇವಳ ಎಲ್ಲ ವಚನಗಳ ಒಡಲಲ್ಲಿ ಬಸವವಿರಹ, ಅನಾಥ ಪ್ರಜ್ಞೆಗಳೇ ಮುಖ್ಯವಾಗಿ ಕೇಳಿಸುತ್ತಿದ್ದು ಇವುಗಳನ್ನು ಪತಿಯ ವಿರಹ ಮತ್ತು ಆತನ ಐಕ್ಯ ಸೂಚಿಸುವ ವಚನಗಳೆಂದು ಗುರುತಿಸಬಹುದಾಗಿದೆ:

ಅಂಗದ ಸಂಗಿಯಲ್ಲಿ ನಮ್ಮ ಬಸವಯ್ಯನು (೧).
ಗುರು ಬಸವನೆನ್ನ ಕಾಯದಲ್ಲಿ ಕೈಯಲಗಿನಂತಿದ್ದನು (೨).

ಬರಿಕಾಯದ ಭ್ರಮೆಯು ಬಿಡಿಸಿದೆಯಲ್ಲಾ ಬಸವಾ (೮).

ಎಂಬಂಥ ವಚನಗಳಲ್ಲಿ ಬಸವನ ವ್ಯಕ್ತಿತ್ವವನ್ನೂ ತನಗೆ ಆತ ಗಂಡನೂ ಹೌದು; ಗುರುವೂ ಹೌದು ಎಂಬುದನ್ನು ಸ್ಪಷ್ಟ ಪಡಿಸಿದ್ದಾಳೆ; ಅವನಿಂದ ತಾನು ಧನ್ಯಳೆಂಬುದನ್ನು ಮನಃಪೂರ್ವಕ ಒಪ್ಪಿಕೊಂಡಿದ್ದಾಳೆ. ಈ ಧನ್ಯತೆ ಕಾರಣವಾಗಿ ತಾನು ಹೆಣ್ಣೆಂಬ 'ಆಂಗಿಕ ಪ್ರಜ್ಞೆ'ಯನ್ನು ಮರೆತು 'ಮಾನವೀಯ ಪ್ರಜ್ಞೆ' ಯಿಂದ ಜೀವನ ನಡೆಸಿದಳು:

ಆಡಲಿಲ್ಲವಯ್ಯಾ ತಾನು ಹೆಣ್ಣು ರೂಪವ ಧರಿಸಿ.
ನಾನು ಹೆಣ್ಣಲ್ಲದ ಕಾರಣ, ನಾನು ಇಹಪರನಾಸ್ತಿಯಾದವಳಯ್ಯಾ.
ನಾನು ಉಭಯದ ಸಂಗವ ಕಂಡು ಕಾಣದಂತಿದ್ದೆನಯ್ಯಾ
ಸಂಗಯ್ಯಾ, ಬಸವ ಬಯಲ ಕಂಡ ಕಾರಣ (೮೩)

ಎಂಬ ವಚನದಲ್ಲಿ ಅವಳ ಜೀವನ ಕ್ರಮವನ್ನು ಕಾಣಬಹುದು. ನಿಜಶರಣೆ ಅಂಗವಶದಲ್ಲಿ ಬದುಕುವಳಾಗಿ, ಸುಖದುಃಖಗಳ ಪರಧಿಯನ್ನು ಮೀರಿದ ಭಾವನೆ ಅವಳದು:

ಆಗಿಂಗೆ ಮಯ್ಯಾನದಿರು; ಚೇಗಿಂಗೆ ಬೆಂಬಳದಿರು
ಆಹಾ ಮನವೆ ಸಂತೈಸಿಕೋ ನಿನ್ನ ನೀನೆ
ಆಗೆಂದಡೆ ನಿನ್ನ ವಶವಲ್ಲ, ಹೋಗೆಂದಡೆ ನಿನ್ನಿಚ್ಛೆಯಲ್ಲ
ಭೋಗಾದಿ ಭೋಗಂಗಳು ಸಂಗಯ್ಯನಧೀನವಾಗಿ (೮೧)

ಎಂಬಂಥ ಸಂಸಾರನಿರ್ಲಿಪ್ತ ಮನೋಭಾವ ನೀಲಮ್ಮನದಾಗಿದ್ದಿತು. ಈ ಎಲ್ಲ ಪರಿಗಳು ಅವಳ ಮಾನಸಿಕ ಧೋರಣೆಗೆ ಕನ್ನಡಿ ಹಿಡಿಯುತ್ತವೆ.

ನೀಲಲೋಚನೆಯ ಸ್ವರವಚನಗಳು ಇದೇ ತತ್ವ ಧೋರಣೆಗಳನ್ನು ಬಿಂಬಿಸುವ ಛಂದೋಬದ್ಧ ಗೀತೆಗಳು. ರುದ್ರಾಕ್ಷಿ, ನಿರುಪಾಧಿಮಾಟ, ಪೂರ್ವಾಶ್ರಮ ನಿರಸನ, ಶೀಲಸಂಪಾದನೆ, ಸಹಭೋಜನ, ಚೆನ್ನಬಸವ ಜೋಗುಳ, ಇಷ್ಟ ಲಿಂಗೈಕ್ಯ–ಈ ವಿಷಯಗಳಿಗೆ ಇವು ಸಂಬಂಧಿಸಿವೆ.

ಅಂಗದೊಳಗೆ ಗುರು ಲಿಂಗದೊಳಗೆ ಮನ
ಜಂಗಮದಲಿ ಧನವರ್ಪಿತವಾಗಿಯೆ
ಲಿಂಗಾಂಗಿತವಾಗಿರಬಲ್ಲಡೆ ಸಂಗನೊಳದು ಶೀಲ||

ಎಂಬ ಪದ್ಯ ತತ್ವ ಮತ್ತು ನಿರೂಪಣೆ ದೃಷ್ಟಿಗಳಿಂದ ಪರಿಪೂರ್ಣರಚನೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇಂಥ ರಚನೆಗಳ ಮುಡಿಯ ಮಾಣಿಕ್ಯ 'ನೋಡು ಲಿಂಗವೇ' ಎಂಬ ಇಷ್ಟ ಲಿಂಗೈಕ್ಯ ಗೀತೆ. ಕನ್ನಡ ಸಾಹಿತ್ಯದ ಕೆಲವೇ ಶ್ರೇಷ್ಠ ಗೀತೆಗಳಲ್ಲಿ ಒಂದಾದ ಇದು ಸ್ವರ ವಚನ ಸಾಹಿತ್ಯ ಭಾಂಡಾರದ ಅನರ್ಘ್ಯ ರತ್ನ. ನೀಲಲೋಚನೆಯ ಆಲೋಚನೆಯ ನಿಲವಿನ ನಾಸನಂಪವೆನಿಸಿದೆ. ಗಂಡಬಸವಣ್ಣ ಸಂಗಮದಲ್ಲಿ ಲಿಂಗೈಕ್ಯವಾಗುವ ಪ್ರಸಂಗ; ಹೆಂಡತಿಯನ್ನು ಕರೆತರಲು ಹಡಪದಪ್ಪಣ್ಣನನ್ನು ಕಳಿಸುತ್ತಾನೆ. ಆಗ ಲಿಂಗಪೂಜೆಯಲ್ಲಿ ನಿರತಳಾದ ಆಕೆ ಈ ವಿಷಯವನ್ನು ಅಂಗೈಯ ಲಿಂಗಕ್ಕೆ ನಿವೇದಿಸುವ ಸಂದರ್ಭವಿದು. "ನೋಡು ನೋಡು ನೋಡು ನೋಡು"ಎಂಬ ಕ್ರಿಯಾಪದಗಳ ಸರಮಾಲೆಯಿಂದ ಇದು ಆರಂಭವಾಗುತ್ತದೆ. ಭಾಷೆಯಲ್ಲಿ ಕ್ರಿಯಾಪದ ಶಕ್ತಿಶಾಲಿಯಾದ ಘಟಕವೆಂಬುವನ್ನು ನೆನೆದರೆ ಅವಳ ಪ್ರತಿಕ್ರಿಯೆಯ ರಭಸ ಸ್ಪಷ್ಟ

ವಾಗುತ್ತದೆ. 'ಅಲ್ಲಿರುವ ಸಂಗಯ್ಯನಿಲ್ಲಿಲ್ಲವೇ?" ಎಂಬ ಅಭಿಪ್ರಾಯವಂತೂ ಅವಳ ಆಧ್ಯಾತ್ಮಿಕ ಅನುಸಂಧಾನಕ್ಕೆ ಉದಾಹರಣೆಯೆನಿಸಿದೆ. ಉದ್ದಕ್ಕೂ ಲಿಂಗದೊಡನೆ ಮುನ್ನಡೆಸಿದ ಸಹಜನಿವೇದನೆ ಓದುಗನ ಎದೆಯನ್ನು ತುಂಬುತ್ತ ಹೋಗುತ್ತದೆ. "ನೀಲಮ್ಮನ ಪಾದದಿಂದ ಲಿಂಗಪೂಜೆಯ ಸಂಪತ್ತು" ಎಂಬ ಕಿನ್ನರಿಬೊಮ್ಮಯ್ಯನ ವಚನ ವಾಕ್ಯ ಈ ಸಂದರ್ಭದಲ್ಲಿ ನೆನಪಾಗುತ್ತದೆ.

ಹೀಗೆ ಸ್ವಂತ ರಚನೆಗಳನ್ನು ಕನ್ನಡಕ್ಕೆ ನೀಡಿದ ನೀಲಾಂಬಿಕೆಯನ್ನು ಕುರಿತು ವೀರಶೈವ ಪುರಾಣಗಳಲ್ಲಿ ಸಾಂದರ್ಭಿಕ-ವಿವರ-ವರ್ಣನೆಗಳಲ್ಲದೆ ನೀಲಮ್ಮನ ಸ್ತೋತ್ರ, ನೀಲಾಂಬಿಕಾ ಪಂಚವಿಂಶತಿ, ನೀಲಮ್ಮನ ತ್ರಿವಿಧಿ ಇತ್ಯಾದಿ ಸ್ವತಂತ್ರಕೃತಿಗಳೂ ಹುಟ್ಟಿಕೊಂಡಿವೆ. ಕರ್ನಾಟಕದ ಇತಿಹಾಸದಲ್ಲಿ ಗೃಹಿಣಿಯೊಬ್ಬಳು ಗಂಡನ ಜೀವನದಲ್ಲಿ, ಸಾಮಾಜಿಕ ಆಂದೋಲನದಲ್ಲಿ ಇಷ್ಟು ದೊಡ್ಡ ಪಾತ್ರವಾಡಿದ ಉದಾಹರಣೆಗಳೇ ಇಲ್ಲವೆಂಬುದನ್ನು ನೆನೆವರೆ, ನೀಲಮ್ಮನಿಗೆ ನೀಲಮ್ಮನೇ ಸಮಾನವೆಂದೆ ಸ್ಪಷ್ಟವಾಗುತ್ತದೆ.

ಅಕ್ಕನಾಗಮ್ಮ

ಎಸ್. ಎಸ್. ಭೂಸರಡ್ಡಿ

ಎನಗೆ ಹಾಲೂಟವನಿಕ್ಕುವ ತಾಯಿ,
ಎನಗೆ ಪರಿಣಾಮವ ತೋರುವ ತಾಯಿ,
ಪರಮಸುಖದೊಳಿಪ್ಪ ತಾಯಿ,
ಪರವಸ್ತುವ ನಂಬಿದ ತಾಯಿ,
ಬಸವನ ಗುರು ತಾಯಿ,
ಸಂಗಯ್ಯನಲ್ಲಿ ಸ್ವಯಲಿಂಗಿಯಾದೆ, ಅಕ್ಕನಾಗಮ್ಮ ತಾಯಿ.
—ನೀಲಮ್ಮ.

ಅಕ್ಕನಾಗಮ್ಮ, ನಾಗಲಾಂಬಿಕೆ, ನಾಗಲಾಂಬೆ, ಅಕ್ಕನಾಗಲಾಂಬಿಕೆ, ಅಕ್ಕನಾಗಾಯಿ, ನಾಗಾಯಿ, ನಾಗಲೆ ಮೊದಲಾದ ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತಿರುವ ಅಕ್ಕನಾಗಮ್ಮ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಚಿರಸ್ಮರಣೀಯ, ಮಹಾ ಶರಣೆ; ಐತಿಹಾಸಿಕ ಪ್ರಸಿದ್ಧ ಮಹಾ ವ್ಯಕ್ತಿ–ಶಕ್ತಿ; ಎಲೆಯ ಮರೆಯ ಹೂವಿನಂತೆ, ತೆರೆಯ ಮರೆಯಲ್ಲಿದ್ದು ಸದ್ದುಗದ್ದಲವಿಲ್ಲದೆ, ಕಲ್ಯಾಣ ಕ್ರಾಂತಿಯ ಕಾರಣ ಪುರುಷ ಮಹಾನುಭಾವಿ ಅಣ್ಣ ಬಸವಣ್ಣನವರನ್ನು ಹೆತ್ತ ಪುಣ್ಯದ ಪುತ್ಥಳಿ ಕಲ್ಯಾಣದ ಕಾಳಗ ದಲ್ಲಿ ಕಲಿಗಿಂತಲೂ ಕಲಿಯಾಗಿ ಖಡ್ಗ ಹಿಡಿದು ಹೋರಾಡಿದ ವೀರ ಮಾತೆ.

ಇಂಥ ಸ್ಫೂರ್ತಿದಾಯಕ ಚೈತನ್ಯಮಯ ಮಹಾಚೇತನವನ್ನು ಕುರಿತು ಯಾವ ಪುರಾಣಗಳೂ, ಕಾವ್ಯಗಳೂ ಹೊರಬರದಿರುವುದು ಸೋಜಿಗವನ್ನುಂಟು ಮಾಡುತ್ತದೆ. ಆದರೆ ಗಣಸಹಸ್ರನಾಮಾವಳಿಯಲ್ಲಿ ವೀರಶೈವ ಪುರಾಣ ಕಾವ್ಯಗಳಲ್ಲಿ ಮಾತ್ರ ಇವರ ಹೆಸರು ಉಲ್ಲೇಖಗೊಂಡಿದೆ.

ಇಂಗಳೇಶ್ವರ ಬಾಗೇವಾಡಿಯು ಮಾದರಸ–ಮಾದಲಾಂಬಿಕೆಯರ ಏಕಮೇವ ಪುತ್ರಿಯಾಗಿ ಜನ್ಮವೆತ್ತಿಬಂದವರು ಅಕ್ಕನಾಗಮ್ಮನವರು; ಸು: ೧೧೧೯ರಲ್ಲಿ. ಬಹಳ ದಿನಗಳ ನಂತರ ಹುಟ್ಟಿಬಂದವರೇ ಅಣ್ಣ ಬಸವಣ್ಣನವರು; ೧೧೩೧ ರಲ್ಲಿ. ಬಾಲ್ಯ ದಲ್ಲಿಯೇ ವಿಲಕ್ಷಣ ಬುದ್ಧಿವಂತೆಯಾದ ಅಕ್ಕನಾಗಮ್ಮ ತಮ್ಮನಾದ ಬಸವಣ್ಣನವರನ್ನು

ಪಾಲನೆ ಪೋಷಣೆ ಮಾಡುವಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದರು. ಹೆಚ್ಚಿನ ಶಿಕ್ಷಣ ಪಡೆಯುವುದಕ್ಕಾಗಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರಿಗೆ ಅವರು ನೆರಳಾಗಿ ನಿಂತರು. ಕೂಡಲಸಂಗಮ ಕ್ಷೇತ್ರದಲ್ಲಿ ಶಿವದೇವನೊಡನೆ ಅಕ್ಕನಾಗಮ್ಮನವರ ಮದುವೆ ಜರುಗಿತು. ಅಪರೂಪ ಅನುರೂಪ-ಸತಿಪತಿಗಳವರು. ಅಂತೆಯೇ ಅವರ ಸೊಗಸಾದ ಪುಣ್ಯ ದಾಂಪತ್ಯದ ಫಲವಾಗಿ ಕ್ರಿ. ಶ. ೧೧೪೧ ರಲ್ಲಿ ಚನ್ನಬಸವಣ್ಣನವರು ಜನ್ಮವೆತ್ತಿದರು. ಬಸವಣ್ಣ–ಚೆನ್ನಬಸವಣ್ಣನವರು ಅಕ್ಕನಾಗಮ್ಮನವರ ಜೀವನ ಎರಡು ಕಣ್ಣುಗಳು.

ಆದರೆ ವೀರಶೈವ ಪುರಾಣಗಳು ಐತಿಹಾಸಿಕ ಘಟನೆಗಳನ್ನು ಮರೆಮಾಚಿ ಚೆನ್ನಬಸವಣ್ಣನವರ ಜನ್ಮ ಕಲ್ಯಾಣದಲ್ಲಿಯೇ ಆಯಿತೆಂದು ಚಿತ್ರಿಸಿವೆ. ಇವರ ಹೆಸರನ್ನೆತ್ತಿ ಹೇಳುವ ಪಾಲ್ಕುರಿಕೆ ಸೋಮನಾಥನು (೧೨೦೦) ತನ್ನ ತೆಲುಗು ಬಸವ ಪುರಾಣದಲ್ಲಿ ಚೆನ್ನಬಸವಣ್ಣನವರ ಜನನ, ಜನಕ, ಬಾಲ್ಯ, ವಿದ್ಯಾಭ್ಯಾಸಗಳ ಬಗೆಗೆ ಏನನ್ನೂ ಹೇಳದೆ ಕಲ್ಯಾಣದಲ್ಲಿ ಬಸವಣ್ಣನೊಂದಿಗೆ ಶಿವಭಕ್ತಿಯ ಪ್ರಾಣಸ್ವರೂಪಳಾದ ನಾಗಲಾಂಬಿಯವರ ತನೂಭವನೂ, ಬಸವಕಾರುಣ್ಯಹಸ್ತ ಸಂಭೂತ ಪ್ರಶಸ್ತದೇಹನೂ ಆದ ಚೆನ್ನಬಸವಣ್ಣನು ಇದ್ದನೆಂದು ಹೇಳಿ, ಅವನ ಮಹಿಮೆಯನ್ನು ಕೊಂಡಾಡಿದ್ದಾರೆ. ಇದನ್ನೇ ಅನುಸರಿಸಿ ಭೀಮಕವಿಯು ಬಸವ ಪುರಾಣ (೧೩೬೯)ದ ಏಳನೆಯ ಸಂಧಿಯಲ್ಲಿ,

"ತರುಣಿ ನಾಗಲಾಂಬೆಯ ಸುಗರ್ಭದಿ
ನಿರುಪಮ, ಜ್ಞಾನ ಸ್ವರೂಪಂ
ಪರಮ ಕಾರಣಿಕ ಚೆನ್ನಬಸವಂ ಉದ್ಭವಂಗೈದ

ಎನ್ನುವ ಸೂಚನಾ ಪದ್ಯವಿದೆ. ಇಲ್ಲಿಯ ಉದ್ಭವಂಗೈದ ಎಂಬ ಪದ್ಯ ಮುಂದಿನ ಕವಿಗಳಿಗೆ ತಪ್ಪು ಕಲ್ಪನೆ ನೀಡಿದೆ. ಚೆನ್ನಬಸವಣ್ಣನವರು ಕಲ್ಯಾಣದಲ್ಲಿ ಜನಿಸಿದರೆಂದು ಬರೆಯಲು ಹಚ್ಚಿದಂತಾಗಿದೆ; ಗೊಂದಲದಲ್ಲಿ ಕೆಡಹಿದೆ. ಹಾಗೆಯೇ ಲಕ್ಕಣ್ಣ ದಂಡೇಶ (೧೪೩೦)ನ ಶಿವತತ್ವ ಚಿಂತಾಮಣಿಯಲ್ಲಿ ಚೆನ್ನಬಸವಣ್ಣನವರ ಜನನವನ್ನು ಕುರಿತು, ಕಲ್ಯಾಣದಲ್ಲಿ ನಿತ್ಯವೂ ಜಂಗಮಾರಾಧನೆಯಲ್ಲಿ ನಿರತರಾಗಿದ್ದ ಬಸವಣ್ಣನವರಿಗೆ ಒಂದು ದಿನ ಇದ್ದಕ್ಕಿದ್ದಂತೆಯೇ ದೊರೆ ಬಿಜ್ಜಳನಿಂದ ಕರೆ ಬರುತ್ತದೆ. ಆಗ ಅವರು ಜಂಗಮ ತೀರ್ಥ ಪ್ರಸಾದಗಳನ್ನು ಕಾಯ್ದುಕೊಂಡಿರಲು ಅಕ್ಕನಾಗಾಂಬಿಯವರನ್ನು ನೇಮಿಸಿ ರಾಜಾಸ್ಥಾನಕೆ ಹೋಗುವರು. ಇತ್ತ ನಾಗಾಂಬಿಯವರಿಗೆ ತೂಕಡಿಕೆ ಹತ್ತಿರಲು ಒಂದು ಬೆಕ್ಕು ಪ್ರಸಾದ ಕೊಳ್ಳಲು ಬರುವದು; ಆಸ್ಥಾನದಲ್ಲಿದ್ದ ಬಸವಣ್ಣನವರು ತಮ್ಮ ದಿವ್ಯ ದೃಷ್ಟಿಯಿಂದ ಇದನ್ನು ಅರಿತುಕೊಂಡು ಕೈ ಬೀಸಲು. ನಾಗಾಂಬಿಯವರು ಎಚ್ಚೆತ್ತು ಪ್ರಸಾದ ಸೇವಿಸುವರು. ಈ ಪ್ರಸಾದದಿಂದ ಗರ್ಭಧರಿಸುವರು (ಶಿ.ಚಿ. ೩೧–೨೦) ಎಂದು ಹೇಳಲಾಗಿದೆ. ಈ ಘಟನೆಯು ಪವಾಡಗಳ ಮಾಲಿಕೆಯಾಗಿದೆ. ಪ್ರಭುಲಿಂಗಲೀಲೆಯ ಚಾಮರಸ (೧೪೩೦)ನು 'ಅಕ್ಕನಾಗಾಂಬಿ ಒಂದು ದಿನ ಬಸವನ ಒಕ್ಕುಮಿಕ್ಕ ಮಹಾ ಪ್ರಸಾದವನ್ನು ಮಿಗಿಲಾಗಿ ಭಕ್ತಿಯಿಂದ ಸ್ವೀಕರಿಸಲು ಆ ಕ್ಷಣದೊಳಗೆ ಶಿವತತ್ವರೂಪವೇ ಬೆಳೆದು ಉದಯಿಸಿದ ಶಿಶುವನ್ನು ಕಂಡು ಅದಕ್ಕೆ

ಚೆನ್ನಬಸವೇಶ್ವರನೆಂದು ಹೆಸರಿಟ್ಟಳು (ಪ್ರ. ಲಿಂ. ಲೀ. ೯–೨೩) ಎಂದುಹೇಳುತ್ತಾನೆ. ಚಾಮರಸ ವಚನ ವಾಙ್ಮಯವನ್ನು ಅಭ್ಯಾಸ ಮಾಡಿದಕವಿ. ಅವನ ವಚನಗಳಲ್ಲಿ ಬರುವ ಉಕ್ತಿಗಳನ್ನು ಆಧಾರವಾಗಿಟ್ಟುಕೊಂಡು ಹೀಗೆ ಹೇಳಿರಬಹುದೆಂದು ತೋರುತ್ತದೆ. ಅಕ್ಕನಾಗಮ್ಮನವರ ಒಂದು ವಚನ ಹೀಗಿದೆ :

"ಎನ್ನ ಭವದ ಬೆಳ್ಳಿಯ ಬೇರು ಹರಿಯಿತ್ತಯ್ಯ
ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ" (ವ. ೬ ಪು. ೩)

ಚನ್ನಬಸವಣ್ಣನವರ ವಚನವೊಂದು ಹೀಗಿದೆ :

"....ನಿನ್ನ ಒಕ್ಕು ಶೇಷವನಿಕ್ಕಿ ಆಗುಮಾಡಿ
ನಿನ್ನಂತರಂಗದಲ್ಲಿ ಅವ್ವೆ ನಾಗಾಂಬಿಯು ಇಂಬುಗೊಂಡಡೆ
ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯ
ಸಂಗನ ಬಸವಣ್ಣಾ[11]

ಈ ವಚನಗಳಿಂದ ಚಾಮರಸ ಪ್ರಭಾವಿತನಾಗಿರಬಹುದು. ಆದರೆ ಪ್ರಸಾದ ಸೇವಿಸಿದಾಕ್ಷಣವೇ ಮಗು ಜನಿಸುವುದು; ಹುಟ್ಟುತ್ತಲೇ ಹೆಸರಿಡುವುದು ಅಲೌಕಿಕ ಸಂಗತಿಗಳೆನಿಸುತ್ತವೆ, ಇವು ಕವಿಗಳ ಕಲ್ಪನೆಯ ಕೈಗೂಸುಗಳಾಗಿವೆ. ಐತಿಹಾಸಿಕ ಸತ್ಯ ಸಂಗತಿಗಳು ಮರೆಮಾಚಿ ಹೋಗಿವೆ. ಶಿವಪ್ರಸಾದದಿಂದ ಉದಯಿಸಿದನೆಂದು ಹೇಳುವ ಇನ್ನೊಂದು ಕೃತಿ ವಿರೂಪಾಕ್ಷ ಪಂಡಿತನ (೧೫೮೪) ಚೆನ್ನಬಸವಪುರಾಣ. ಚನ್ನಬಸವನು ತನ್ನ ತಾಯಿಯ ಉದರವನ್ನು ಬಗೆದು ದೊರೆ ಬಿಜ್ಜಳನಿಗೆ ಬುದ್ಧಿ ಹೇಳಿದ ಮಾತುಗಳು ಬಂದಿವೆ. ಇದನ್ನೆ ಆಧರಿಸಿ ಜಾನಪದ ಸಾಹಿತ್ಯ ಸೃಷ್ಟಿಗೊಂಡಂತೆ ಕಾಣುತ್ತದೆ.

ಇದುವರೆಗಿನ ವಿವೇಚನೆಯಿಂದ ಚನ್ನಬಸವಣ್ಣನವರು ಪ್ರಸಾದ ಮಹಿಮೆಯಿಂದ ಜನ್ಮವೆತ್ತುತ್ತಾರೆಂಬ ಸಂಗತಿ ವಿದಿತವಾಗುತ್ತದೆ. ಇಲ್ಲಿ ಕಕ್ಕಯ್ಯನ ಪ್ರಸಾದದಿಂದ ಎಂಬ ಮಾತು ವ್ಯಕ್ತವಾಗುವದಿಲ್ಲ. ಆದರೆ ಮುಂದೆ ಬರುವ ಕೃತಿಗಳಲ್ಲಿ ಕಕ್ಕಯ್ಯನ ಪ್ರಸಾದ ಮಹಿಮೆಯ ಘಟನೆಯನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳಿವು : ಸಿದ್ಧನಂಜೇಶನ ಗುರುರಾಜ ಚಾರಿತ್ರ (೧೬೭೨) ಅದೃಶ್ಯಕವಿಯ ಪ್ರೌಢದೇವರಾಯನ ಕಾವ್ಯ (೧೬೮೦) ಚನ್ನಪ್ಪ ಕವಿಯ ಶರಣಲೀಲಾಮೃತ (೧೭೦೦) ಚನ್ನಬಸವಣ್ಣನವರನ್ನು ಅಲೌಕಿಕ ಪುರುಷರನ್ನಾಗಿ ತೋರಿಸುವ ಅವಸರದಲ್ಲಿ ಕಕ್ಕಯ್ಯನ ಪ್ರಸಾದ ಮಹಿಮೆಯನ್ನು ಎತ್ತಿ ತೋರಿಸುವ ಭರದಲ್ಲಿ ಐತಿಹಾಸಿಕ ಪ್ರಜ್ಞೆ ಮಾಸಿಹೋಗಿದೆ.

ಬಸವಣ್ಣನವರೂ, ಅಕ್ಕನಾಗಮ್ಮನವರೂ ಕೂಡಲ ಸಂಗಮಕ್ಷೇತ್ರದಲ್ಲಿ ಸುಮಾರು ಹತ್ತು ವರ್ಷಕಾಲ ಇದ್ದಂತೆ ಸಂಶೋಧಕರು ನಿಶ್ಚಯಿಸಿದ್ದಾರೆ: ಸುಮಾರು: ಕ್ರಿ. ಶ. ೧೧೩೧ ರಲ್ಲಿ ಬಸವಣ್ಣನವರು ಜನಿಸಿ ಹದಿನಾರು ವರ್ಷಗಳ ಕಾಲ ಬಾಲ್ಯವನ್ನು ಕಳೆದರು. ಕ್ರಿ. ಶ. ೧೧೪೭ ರಲ್ಲಿ ಕಾರಣಾಂತರಗಳಿಂದ ಕೂಡಲ ಸಂಗಮಕ್ಕೆ ಅಕ್ಕನಾಗಮ್ಮ ಸಹಿತವಾಗಿ ಬಂದು, ಕುಲಪತಿಗಳಾದ ಜಾತವೇದಮುನಿಗಳ ಕೃಪಾಶ್ರಯದಲ್ಲಿ ಬೆಳೆದರು. ಶಿವಸ್ವಾಮಿ–ಅಕ್ಕನಾಗಮ್ಮನವರಿಗೆ ಕೂಡಲಸಂಗಮದಲ್ಲಿ

ಲಗ್ನವಾಯಿತು. ಚೆನ್ನಬಸವಣ್ಣನವರು ಅಕ್ಕನಾಗಮ್ಮನವರ ಪುತ್ರರಾಗಿ ಅಲ್ಲಿಯೇ ಜನಿಸಿದರು. ಸುಮಾರು ೧೧೫೭ ರವರೆಗೆ ಅಲ್ಲಿಯೇ ಇದ್ದರು. ೧೧೫೭ರಲ್ಲಿ ಬಸವಣ್ಣ, ಅಕ್ಕನಾಗಮ್ಮ, ಶಿವಸ್ವಾಮಿ ಎಲ್ಲರೂ ಮಂಗಳವೇಡೆಗೆ ಹೋದರು. ಅಲ್ಲಿ ೫ ವರ್ಷ ಕಾಲ ಇದ್ದರು. ೧೧೬೭ರಲ್ಲಿ ರಾಜಕೀಯ ಬದಲಾವಣೆಯ ಕಾರಣವಾಗಿ ಎಲ್ಲರೂ ಕಲ್ಯಾಣಕ್ಕೆ ಹೋದರು. ಈ ಕಾಲದಲ್ಲಿ ಶಿವಸ್ವಾಮಿ ಕಣ್ಮರೆಯಾದಂತೆ ತೋರುತ್ತದೆ. (ಶಿ. ಸಾ. ಜೂನ ೧೯೬೮, ಪು. ೧೦೭). ಚನ್ನಬಸವಣ್ಣನವರು ಎಂತಹ ಮಹಾತ್ಮರೋ ಚರಿತ್ರೆಯಲ್ಲಿ ಅಂತಹ ದುರದೃಷ್ಟವಂತರು. ಅವರ ಹೆಸರಿನಲ್ಲಿ ಬರೆದ ಕನ್ನಡ, ತೆಲುಗು, ಸಂಸ್ಕೃತ ಗ್ರಂಥಗಳಲ್ಲೆಲ್ಲಾ ಅವರು ಕಕ್ಕಯ್ಯನ ಮಿಕ್ಕ ಪ್ರಸಾದದಿಂದ ಜನಿಸಿದರು. ಎಂದಿದೆ. ಶಿವತತ್ವ ಚಿಂತಾಮಣಿ ಮೊದಲಾದ ಗ್ರಂಥಗಳಲ್ಲಿಯೂ ಹೀಗೆಯೇ ಇದೆ. ಈ ಕಟ್ಟು ಕಥೆಯು ಅದೆಂತು ಇಷ್ಟೋದು ಬೆಳೆಯಿತೆಂಬುದು ಊಹಾತೀತವಾಗಿದೆ. (ತಂದೆಯಿಲ್ಲದೆ ಮಕ್ಕಳು ಹುಟ್ಟುವದು ಸೃಷ್ಟಿಯನಿಯಮಕ್ಕೆ ವಿರೋಧ ಎಂಬುದನ್ನು ಕರ್ಣದೊಳಗೆ ಜನಿಸಿದವರುಂಟೆ? ಎಂಬ ಬಸವಣ್ಣರವರು ವಚನಾಧಾರದಿಂದ ತಿಳಿಯಬಹುದು.) 'ಸ್ತ್ರೀ ಪುರುಷರ ಸಂಗದಿಂದಲ್ಲದೆ ಪಿಂಡವಾಗದು' ಎಂದು ಶಿವಶರಣರು ಹೇಳಿದ್ದಾರೆ. ಆದ್ದರಿಂದ ಕಕ್ಕಯ್ಯನಿಗೂ ಚನ್ನಬಸವಣ್ಣನವರಿಗೂ ಯಾವ ಸಂಬಂಧವೂ ಇಲ್ಲ (ಶ. ಸಾ. ಜೂನ ೧೯೬೮ ಪು.೧೦೭–೧೦೮) ಈ ಮಾತುಗಳು ಮಹತ್ವಪೂರ್ಣವಾಗಿವೆ. ಈ ದಿಸೆಯಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಕಂಡರಸಿದ ಇನ್ನೊಂದು ಮಹಾಕಾವ್ಯವೇ ಸಿಂಗಿರಾಜ ಪುರಾಣ (೧೫೦೦). ಇಲ್ಲಿ ಮಾತ್ರ ಚನ್ನಬಸವಣ್ಣನವರ ತಂದೆಯ ಹೆಸರು 'ಶಿವದೇವ, ಶಿವಸ್ವಾಮಿ' ಎಂದಿದೆ. ಆದುದರಿಂದ ಈ ಶಿವದೇವನೇ ಚನ್ನಬಸವಣ್ಣನವರ ತಂದೆ ಎನ್ನುವದರಲ್ಲಿ ಸಂದೇಹವಿಲ್ಲ. ಹಾಗೆಯೇ ಕರ್ಮಲತೆಯಂಥ ಜನಿವಾರವನ್ನು ಬಿಸುಟು ಅಣ್ಣಬಸವಣ್ಣನವರು ಕಪ್ಪಡಿ ಸಂಗಮಕ್ಕೆ ಬಂದಾಗ ಮಾವರಸ, ಮಾದಲಾಂಬಿಕೆಯರು ಅವರನ್ನು ಪುನಃ ಬಾಗೆವಾಡಿಗೆ ಮರಳಿ ಕರೆದೊಯ್ಯಲು ವಿಶ್ವಪ್ರಯತ್ನ ಮಾಡುತ್ತಾರೆ. ಆಗ ಬಸವರಾಜರು ತಂದೆ ತಾಯಿಗಳನ್ನು ಸಂತೈಸುವ ಈ ಪದ್ಯ ಗಮನಾರ್ಹವಾಗಿದೆ:

"ಏತಕಾಮಾತಿನ್ನು ನೋಡಿ ಸುಖವಿಹುದು ಪರ
ಮಾರ್ಥ ಕಾಮ್ಯಾರ್ಥಕಾಗದು ಸಹಜ ಮೇಲೆ ದು
ರ್ನೀತಧಾರಕಾಂ ಬಹುದಿಲ್ಲ ಬಂದಡೇಂ ನಿಮಗೆ ಸುಖವಿಲ್ಲವಿದಜಿ?
ಬ್ರಾಂತಿ ಬಿಡಿಯೆಂದು ಬೀಳ್ಕೊಡಲವರು ಸಂಸಾರ
ಭ್ರಾಂತಳಿಯುದಳಿಯ ಶಿವದೇವ ಮಗಳ್ನಾಗಾಯ
ನಾತಂಗೆ ಸೇವೆಗೋಸುಗವಿತ್ತು ತಕ್ಕುದಂ ಕೊಟ್ಟು ಬಂದರು ಇತ್ತಲು

(ಸಿ. ಪು. ಸಂಧಿ. ೫ ಪ: ೧೯೭)

ಹಾಗೆಯೇ 'ಅಕ್ಕನಾಗಮ್ಮನವರ ಪತಿ ಶಿವಸ್ವಾಮಿ' 'ನಾಗಾಯಿವಲ್ಲಭ ಶಿವಸ್ವಾಮಿ' ಎಂಬ ಪದಗಳನ್ನು ತನ್ನ ಕಾವ್ಯದಲ್ಲಿ ಬಳಸಿದ್ದಾನೆ.

(ಸಿ. ಪು. ಸಂ. ೩೧ ಇದೇ ೩೧–೨೧)

ಇದರಿಂದ ತಿಳಿದು ಬರುವದೇನೆಂದರೆ :

೧) ಶಿವದೇವ ನಾಗಾಂಬಿಯ ಪತಿ.

೨) ಶಿವದೇವ–ನಾಗಿಲಾಂಬೆಯರ ಮದುವೆ ಜರುಗಿ ಆಗಲೇ ಕೆಲವು ವರ್ಷಗಳಾಗಿವೆ. ಆದರೆ ಅವನಿಗಿನ್ನೂ ಸಂಸಾರ ಭ್ರಾಂತಿ ಅಳಿದಿಲ್ಲ.

೩) ಬಸವಣ್ಣನ ಸೇವೆಗಾಗಿ ಇವರಿಬ್ಬರೂ ಮಾದರಸ ಮಾದಲಾಂಬಿಕೆಯರ ಅಪ್ಪಣೆಯಂತೆ ಕಪ್ಪಡಿ ಕ್ಷೇತ್ರದಲ್ಲಿ ಉಳಿದಿದ್ದಾರೆ.

ಬಸವಣ್ಣನ ಮಹಾಮನೆಯಲ್ಲಿದ್ದವರಲ್ಲಿ ಶಿವಸ್ವಾಮಿಯೂ ಒಬ್ಬನು ಎನ್ನುವ ಬಗೆಗೆ ಮೇಲಿನ ಪುರಾಣದಲ್ಲಿ ಸಾಕಷ್ಟು ಆಧಾರ ಪ್ರಮಾಣಗಳು ಬಂದಿವೆ. ನಿದರ್ಶನಕ್ಕಾಗಿ ಸಂಧಿ ೩೧ ಪದ್ಯ ೪೯,೫೦ ಇವುಗಳನ್ನು ಸೂಜ್ಞರು ಪರಿಶೀಲಿಸಬಹುದಾಗಿದೆ. ಇವುಗಳ ಆಧಾರದ ಮೇಲಿಂದ ಮಹಾಮನೆಯ ಮೇಲ್ವಿಚಾರಣೆಯನ್ನು ಅಕ್ಕನಾಗಮ್ಮನವರು ನೋಡಿಕೊಳ್ಳುತ್ತಿದ್ದರೆ, ಹೊರಗಿನ ಸಮಗ್ರ ವ್ಯವಸ್ಥೆಯ ಹೊಣೆಯನ್ನು ಶಿವಸ್ವಾಮಿ ನಿರ್ವಹಿಸಿದರು. ಶಿವಸ್ವಾಮಿ ಕಾಯಕಯೋಗಿ. ಶಿವಾನುಭವದ ಸೂಕ್ಷ್ಮತೆ ಹಾಗೂ ವ್ಯಾಪಕತೆಗಳನ್ನು ಅರಿಯಲು ಅವರಿಗೆ ಅವಕಾಶವೇ ಇರಲಿಲ್ಲ. ಅಳಿಯನು ಕೈಕೊಂಡ ಲೋಕೋದ್ಧಾರ ಕಾರ್ಯದಲ್ಲಿ ಎಲೆಯ ಮರೆಯ ಹೂವಿನಂತೆ ಮರೆಯಲ್ಲಿಯೇ ನಿಂತು ಅವನು ತನ್ನ ಕರ್ತವ್ಯವನ್ನು ತ್ರಿಕರಣಪೂರ್ವಕವಾಗಿ ನಿರ್ವಹಿಸಿದ್ದಾನೆ. ಅವನು ಭಕ್ತಿ ಭಂಡಾರಿಯಾಗಿರಲಿಕ್ಕಿಲ್ಲ. ಆದರೆ ಕಾಯಕಯೋಗಿಯಾಗಿದ್ದನೆಂಬುದನ್ನು ಮರೆಯುವಂತಿಲ್ಲ. ಶಿವಸ್ವಾಮಿಯ ಹೆಸರನ್ನು ಶರಣರಾಗಲಿ ಅಥವಾ ಇನ್ನಿತರ ಶಿವಕವಿಗಳಾಗಲಿ ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದ ಮಾತ್ರಕ್ಕೆ ಶಿವಸ್ವಾಮಿಯೇ ಇರಲಿಲ್ಲವೆಂದು ಹೇಳುವುದು ಸಮಂಜಸವೆನಿಸದು,

ಚೆನ್ನಬಸವಣ್ಣನವರು ಕಲ್ಯಾಣದಲ್ಲಿ ಹುಟ್ಟಿದರೆಂಬ ಭಾವನೆಗೆ ಭೀಮ ಕವಿಯೇ ಜನಕ. ಇವನು ಹೇಳಿದುದು ಪರಮ ಸತ್ಯವೆಂದು ಭಾವಿಸಿದ ಮುಂದಿನ ಕವಿಗಳೆಲ್ಲರೂ ಇದೇ ಹಾಡನ್ನು ಹಾಡಿದ ಬಗೆಗೆ ಈಗಾಗಲೇ ಮೇಲೆ ಪ್ರಸ್ತಾಪಿಸಲಾಗಿದೆ. ಪ್ರಸಾದ ಪವಾಡವು ಅಮಾನುಷವೂ ಹಾಗೂ ಅಸಂಭವವೂ ಆಗಿರುವಂತೆ ಚೆನ್ನಬಸವಣ್ಣನವರು ಕಲ್ಯಾಣದಲ್ಲಿ ಹುಟ್ಟಿದರೆಂದು ಹೇಳುವುದು ಶುದ್ಧ ತಪ್ಪು.ಬಸವಣ್ಣನವರು ಜೀವಿಸಿದ ಅವಧಿ ಕೇವಲ ೩೬ ವರ್ಷಗಳು (೧೧೩೧–೧೧೬೭). ಬಿಜ್ಜಳನ ಆಳಿಕೆ ಪ್ರಾರಂಭವಾದುದು ೧೧೪೦ರಲ್ಲಿ ೧೧೫೬ರಲ್ಲಿ ಸರ್ವಾಧಿಕಾರಿಯಾಗಿ ಆಡಳಿತ ಸೂತ್ರ ವಹಿಸಿಕೊಳ್ಳುತ್ತಾನೆ. ಬಸವಣ್ಣನವರು ಕಲ್ಯಾಣಕ್ಕೆ ಬಂದದು ೧೧೫೫–೫೬ರಲ್ಲಿ ಕ್ರಿ. ಶ. ೧೧೬೭ರ ವರೆಗೆ ಮಂತ್ರಿಯಾಗಿದ್ದರು; ದಂಡಾಧಿಪತಿಯಾಗಿದ್ದರು.ಚನ್ನಬಸವಣ್ಣನವರು ಕಲ್ಯಾಣದಲ್ಲಿ ಜನಿಸಿದರೆಂಬ ವಾದವನ್ನು ಒಪ್ಪಿಕೊಂಡರೆ ಚೆನ್ನಬಸವಣ್ಣನು ಜೀವಿಸಿದುದು ಕೇವಲ ಹನ್ನೆರಡು ವರುಷವೆಂದಾಗುವುದು. ಅತ್ಯಲ್ಪ ಅವಧಿಯಲ್ಲಿ ಅಗಾಧವಾದ, ಅಪಾರವಾದ ಜ್ಞಾನನಿಧಿಯಾಗುವುದು ಅಸಾಧ್ಯ ಕೋಟಿಯ ಮಾತು, ಸತ್ಯದ ವಿಪರ್ಯಾಸ ಎಂದು ಹೇಳದೆ ವಿಧಿಯಿಲ್ಲ. ಶಿವಶರಣರು ಕಕ್ಕಯ್ಯನ ಮನೆಯ ಪ್ರಸಾದವನ್ನು ತಂದು ಕೊಟ್ಟರೆಂಬ ಕಥೆ ಭಾವುಕರ ಕಲ್ಪನೆಯ ಕೂಸು. ಅತಿಮಾನವತೆಯ ಬಣ್ಣ ಬಳಿದು ಹುಟ್ಟಿಸಿದ ಹುರುಳಿಲ್ಲದ ಒಂದ ಹುಸಿ ಕಥೆ. ಇದೆಲ್ಲವನ್ನೂ ವಿವೇಚಿಸದೆ ಅಕ್ಕನಾಗಮ್ಮ ಕನ್ಯೆಯೆಂದೂ ಶಿವಶರಣ ಕಕ್ಕಯ್ಯನ ಪ್ರಸಾದದಿಂದ ಚೆನ್ನಬಸವಣ್ಣನ ಜನನವಾಯ

ತೆಂದೂ ಕಥೆ ಕಟ್ಟಿ ಹೇಳುವುದು.ಅಕ್ಕನಾಗಮ್ಮನವರ ಚಾರಿತ್ರ್ಯಕ್ಕೆ ದ್ರೋಹಬಗೆದಂತಾಗುತ್ತದೆ. ಇಲ್ಲಿ ವಚನಪಿತಾಮಹ ಫ. ಗು. ಹಳಕಟ್ಟಿಯವರ ಮಾತುಗಳನ್ನು ಎತ್ತಿ ಹೇಳಿದರೆ ಉಚಿತವೆನಿಸುತ್ತದೆ. "ಚೆನ್ನಬಸವಣ್ಣನು 'ಪ್ರಸಾದ'ದಿಂದ ಜನಿಸಿದನೆಂದು ಕೆಲವು ಕೃತಿಗಳು ಹೇಳಿಕೆ. ಅವನು ಬಸವಣ್ಣನವರ ಪ್ರಸಾದದಿಂದ ಜನಿಸಿದನೆಂದೂ, ಡೋಹರ ಕಕ್ಕಯ್ಯನ ಪ್ರಸಾದದಿಂದ ಜನಿಸಿದನೆಂದೂ, ಶಿವಪ್ರಸಾದದಿಂದ ಜನಿಸಿದನೆಂದೂ ವೀರಶೈವ ಪುರಾಣಗಳು ತಿಳಿಸುತ್ತವೆ. ವಿಶೇಷವಾಗಿ ನಾಗಲಾಂಬಿಕೆಯು ಕಕ್ಕಯ್ಯನ ಪ್ರಸಾದದಿಂದ ಗರ್ಭಧರಿಸಿ ಹಡೆದಳೆಂದು ತಿಳಿಯುತ್ತಾರೆ. ಆದರೆ ಇದು ತಪ್ಪು ತಿಳಿವಳಿಕೆ ಎಂದು ತೋರುತ್ತದೆ. ಆಕಾಲಕ್ಕೆ ಬಿಜ್ಜಳನು ಕಲ್ಯಾಣಕ್ಕೆ ಬಂದಿದ್ದಿಲ್ಲ. ಮತ್ತು ಬಸವನು ಅವನ ಪ್ರಧಾನಿಯೂ ಆಗಿದ್ದಿಲ್ಲ. ಈ ಸ್ಥಿತಿಯಲ್ಲಿ ಕಕ್ಕಯ್ಯನು ಕಲ್ಯಾಣಕ್ಕೆ ಅವನನ್ನು ಕಾಣಲು ಬರುವ ಸಂಭವವಿಲ್ಲ" ಪ್ರಸಿದ್ಧ ಇತಿಹಾಸಕಾರ ಪಿ. ಬಿ. ದೇಸಾಯಿಯವರು.

"It May be presumed that, Either Akkanagamma might have been fairly aged when left home or her Marriage alliance with Sivadeva might have been an attraction............"[1] ಎಂದು ಹೇಳಿರುವುದು ಗಮನಾರ್ಹವಾಗಿದೆ.

ವಚನಗಳ ವೈಶಿಷ್ಟ್ಯ :

ಅಕ್ಕನಾಗಮ್ಮನವರ ಸಾಧನೆಸಿದ್ಧಿಯ ಇತಿಹಾಸ ರೋಮಾಂಚನಕಾರಿಯಾಗಿದೆ. ಅವರ ಜೀವನದ ಉದಾತ್ತ ಮನೋಧರ್ಮ ವಚನಗಳಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ವಚನಗಳೇ ಶರಣರ ಶರಣೆಯರ ವ್ಯಕ್ತಿತ್ವವನ್ನು ನಿರೂಪಿಸುವ ನಿಜವಾದ ಪ್ರಮಾಣಗಳು. ಅಕ್ಕನಾಗಮ್ಮನವರ ವಚನಗಳನ್ನು ಅವಲೋಕಿಸಿದರೆ ನಿಜಜೀವನದ ಸರಿಯಾದ ತಿಳುವಳಿಕೆಯಾಗದಿರದು. ಶರಣಸತಿ–ಲಿಂಗಪತಿಭಾವದ ಮೃದುಮಧುರ ವಿಚಾರಗಳು; ಆಧ್ಯಾತ್ಮಿಕ ಸಂಸಾರದ ಸುಂದರ ಭಾವಚಿತ್ರಗಳು, ಬಸವಾದಿ ಪ್ರಮಥರ ಮೇಲಿರುವ ಉತ್ಕಟ ಮನೋಭಾವನೆಗಳು; ಬಸವಣ್ಣನವರು ಲಿಂಗದೊಳಗಾದಾಗ ಹೃದಯದಿಂದ ಹೊರ ಹೊಮ್ಮಿದ ಶೋಕಗೀತೆಗಳಂತಿರುವ ಅವರ ವಚನಗಳು ಸ್ಫುಟವಾದ ವಿಚಾರಗಳನ್ನು ಅತ್ಯಂತ ಸುಲಭವಾಗಿ ನಿವೇದಿಸುತ್ತವೆ. ಪ್ರತಿಪಾದಿಸುತ್ತವೆ. ವೀರಶೈವ ಧರ್ಮ ಸಿದ್ಧಾಂತವನ್ನು ವಿವರಿಸುತ್ತವೆ. ಕೈಕೋಲ ಕೊಂಬರೆ. ಎಳಗರುವಿನ ಎಳೆಗಂದಿಯ ಎಳೆದೊಯ್ದರೆ.ಎನ್ನುವ ಮಾತುಗಳಂತೂ ಓದುಗರ ಮನವನ್ನು ಕಲಕಿಬಿಡುತ್ತವೆ. ಚಿಕ್ಕದಾದರೂ ಚೊಕ್ಕ ನುಡಿಮುತ್ತುಗಳನ್ನು ಹೊತ್ತು ನಿಂತ ಈ ವಚನಗಳು ಅಮೃತ ಬಿಂದುಗಳಂತಿವೆ.

"ಅಲ್ಲಯ್ಯಗಳ ವಚನ ಏರಡೊಂಬತ್ತು ಕೋಟಿ.
ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ
ಎಮ್ಮಯ್ಯಗಳ ವಚನ ವಚನಕ್ಕೊಂದು
ನೀಲಮ್ಮನ ವಚನ ಹನ್ನೊಂದು ಸಾಸಿರ.

1. Shree Basaweswar Commemoration Volume pp. 17.

ಗಂಗಾಂಬಿಕೆಯ ವಚನ ಲಕ್ಷದ ಎಂಟು ಸಾಸಿರ
ಎಮ್ಮಕ್ಕ ನಾಗಾಯಿಯ ವಚನ ಮೂರು ಲಕ್ಷದ ತೊಂಭತ್ತಾರು ಸಾಸಿರ
ಹಡಪದಪ್ಪಯ್ಯಗಳ ವಚನ ಹನ್ನೊಂದು ಸಾಸಿರ
ಮರುಳ ಸಿದ್ಧನ ವಚನ ಅರವತ್ತೆಂಟು ಸಾಸಿರ
.... ಕಪಿಲಸಿದ್ಧ ಮಲ್ಲಿಕಾರ್ಜುನಾ ||

ಸಿದ್ಧರಾಮೇಶ್ವರನ. ಈ ವಚನವನ್ನವಲೋಕಿಸಿದರೆ ಅಕ್ಕನಾಗಮ್ಮನವರು ವಚನಗಳನ್ನು ಸಾಕಷ್ಟು ಬರೆದಿರಬೇಕೆಂದು ತೋರುತ್ತದೆ. ಆದರೆ ಇತ್ತೀಚಿನ ಸಂಶೋಧನೆಯಿಂದ ಪಾತಾಳ ಗರಡಿ ಹಚ್ಚಿ ಹುಡುಕಿದರೂ ಕೇವಲ ಹದಿನಾಲ್ಕು ವಚನಗಳು ಮಾತ್ರ ದೊರೆತಿವೆ. ಒಂದು ಸ್ವರ ವಚನ, ಮತ್ತು ಆಕೆಯ ಹೆಸರಿನಲ್ಲಿ ಮೂಡಿ ಬಂದ ಕಾಲ ಜ್ಞಾನ ವಚನಗಳಿವೆ.

ಸ್ಮಾರಕಗಳು :

ಅಕ್ಕನಾಗಮ್ಮನ ನೆನಪನ್ನು ಎತ್ತಿ ತೋರಿಸುವ ಸ್ಮಾರಕಗಳು ಇಂದಿಗೂ ಅಚ್ಚಳಿಯದೆ ಉಳಿದಿರುವುದು ಕನ್ನಡಿಗರ ಸುದೈವ. ಬಿಜಾಪೂರ ಜಿಲ್ಲೆಯ ಬಾಗೇವಾಡಿ ಇಂಗಳೇಶ್ವರದಲ್ಲಿ ಅಕ್ಕನಾಗಮ್ಮನವರ ಗವಿ ಪ್ರಸಿದ್ಧವಿದೆ. ಸಂಪಗಾವಿಯ ನೈಋತ್ಯಕ್ಕಿರುವ ನಾಗಲಾಪೂರದಲ್ಲಿ ನಡೆದ ಘನಘೋರಸಂಗ್ರಾಮದಲ್ಲಿ ಅಕ್ಕನಾಗಮ್ಮನವರು ಗಣಾಚಾರದಗರ್ವಾನ್ವಿತೆಯಾಗಿ ವಿಜಯದಪತಾಕೆಯನ್ನೆತ್ತಿದ್ದರು. ಕೈಸೆರೆಸಿಕ್ಕಿ ಅಳಿಯಬಿಜ್ಜಳನಿಗೆ ನಾಗಮ್ಮನವರು ಪ್ರಾಣದಾನ ನೀಡಿದರು. ಅಂತೆಯೇ ಆ ಊರಿಗೆ ನಾಗಪುರವೆಂಬಹೆಸರು ಬಂದಿದೆ ಎಂದು ಹಿರಿಯರು ಅಭಿಪ್ರಾಯಪಡುತ್ತಾರೆ. ಅಲ್ಲಿ ಅಕ್ಕನಾಗಮ್ಮನವರ ಸುಂದರ ದೇವಾಲಯವಿದೆ. ಎರಡಡಿ ಎತ್ತರದ ಬಂಧುರ ಮೂರ್ತಿ ಇದೆ. ಕೊರಳಲ್ಲಿ ರುದ್ರಾಕ್ಷಿಸರ, ಕೈಯಲ್ಲಿ ಜಪಮಾಲೆ ಹತ್ತಿರ ಚೆನ್ನಬಸವಣ್ಣನ ಮೂರ್ತಿ ಇದೆ. ಹಾಗೆಯೇ ಬದಿಯಲ್ಲಿ ರುದ್ರಮುನಿ ದೇವಾಲಯವು ಇದೆ. ಬೀದರ ಜಿಲ್ಲೆಯ ಕಲ್ಯಾಣದಲ್ಲಿರುವ ಗವಿಯಂತೂ ರಮ್ಯ ಮನೋಹರ ಪ್ರಶಾಂತವಾದ ತಾಣದಲ್ಲಿ ಭಕ್ತರನ್ನು ಇಂದಿಗೂ ಲೋಹಚುಂಬಕದಂತೆ ಆಕರ್ಷಿಸುತ್ತ ಇಂದಿಗೂ ಅಚ್ಚಳಿಯದೆ ನಾಗಮ್ಮನ ವಿಗ್ರಹ ಉಳಿದಿವೆ. ಕಾರವಾರ ಜಿಲ್ಲೆಯ ಉಳುವಿಯಲ್ಲಿಯೂ ಅಕ್ಕನಾಗಮ್ಮನವರ ಗವಿಯಿದೆ. ಶಿವಮೊಗ್ಗ ಜಿಲ್ಲೆಯ ತುಂಗಾ–ಭದ್ರಾ ನದಿಯ ಎಣ್ಣೆಹೊಳೆಯ ಪ್ರದೇಶದಲ್ಲಿಯೂ ಅಕ್ಕನಾಗಮ್ಮನವರ ದೇವಾಲಯವಿದೆಯೆಂದು ಹೇಳಲಾಗುತ್ತದೆ. ಅಲ್ಲಿಯೇ ಅಕ್ಕನಾಗಮ್ಮ ಲಿಂಗದೊಳಗಾದಳು ಎಂದು ಹೇಳಲಾಗುತ್ತದೆ.

ಮೋಳಿಗೆಯ ಮಾರಯ್ಯನವರ ಪತ್ನಿ ಮಹಾದೇವಿಯಮ್ಮ

ಬಿ. ಸಿ. ಜವಳಿ

(೧)

ಬಸವಣ್ಣನವರ ಸಮಕಾಲೀನ ಶಿವಶರಣೆಯರಲ್ಲಿ ಒಬ್ಬಳಾದ ಮಹಾದೇವಿಯಮ್ಮ 'ರಾಣಿ ಮಹಾದೇವಿಯಮ್ಮ' ಎಂದೇ ಪ್ರಸಿದ್ಧಳಾಗಿದ್ದಾಳೆ. ಕಾಶ್ಮೀರ ದೇಶದ ಅರಸನಾದ ಮಾರಯ್ಯನ ಪತ್ನಿಯಾದ ಈಕೆ ಬಸವಣ್ಣನ ಪ್ರಖ್ಯಾತಿ, ಶಿವಭಕ್ತಿಯ ಪ್ರಸಿದ್ಧ ಕೇಳಿ ಆಕರ್ಷಿತಳಾಗಿ, ಗಂಡನೊಡನೆಯೇ ದೇಶತ್ಯಾಗ-ಗೃಹತ್ಯಾಗ ಮಾಡಿ, ಆಧ್ಯಾತ್ಮಿಕ ಜೀವನವನ್ನು ಅಪೇಕ್ಷಿಸಿ, ಕಲ್ಯಾಣಕ್ಕೆ ಆಗಮಿಸಿದ ಸಾಧ್ವಿ ಸುಖದುಃಖಗಳಲ್ಲಿ ಗಂಡನೊಡನೇ ಇದ್ದು, ಗಂಡನ ಅಭಿಪ್ರಾಯಗಳನ್ನು ಬಲವಾಗಿ ಮೆಚ್ಚಿ, ಅವನಿಗೆ ಬಲಗೈಯಾಗಿ ನಿಂತುಕೊಂಡಳು. ಅರಮನೆಯ ವಾಸದ ಬದಲು ಕುಟೀರವಾಸ, ಅರಸೊತ್ತಿಗೆಯನ್ನು ಬದಿಗೆ ಸರಿಸಿ ಶಿವಭಕ್ತರ ತೊತ್ತುಗೆಲಸವ ಮಾಡಿ, ಗುರು ಸೇವೆ, ಲಿಂಗಸೇವೆ, ಜಂಗಮ ದಾಸೋಹ ನಡೆಸಿ, ಶಿವಭಕ್ತಿಯ ಪವಿತ್ರ ಜೀವನ ಸಾಗಿಸಿದ ಶರಣೆ ಈಕೆ.

(೨)

ಮೊತ್ತ ಮೊದಲು ಈಕೆಯ ಬದುಕಿನ ಬಗೆಗೆ ನಮಗೆ ತಿಳಿದು ಬರುವುದು ಬಸವ ಪುರಾಣದಲ್ಲಿ. ಪಾಲ್ಕುರಿಕೆಯ ಸೋಮನಾಥನನ್ನು ಕನ್ನಡಿಸಿದ ಭೀಮ ಕವಿ, ಬಸವ ಪುರಾಣದಲ್ಲಿ ಮೂವತ್ತೊಂದನೆಯ ಸಂಧಿಯಲ್ಲಿ ಮೋಳಿಗೆಯಮಾರಯ್ಯನ ಕಥೆಯಲ್ಲಿ ಈಕೆಯ ವ್ಯಕ್ತಿತ್ವವನ್ನು ಆನುಷಂಗಿಕವಾಗಿ ಚಿತ್ರಿಸಿ ಕೃತಾರ್ಥನಾಗಿದ್ದಾನೆ. ಪ್ರಸಿದ್ಧಳಾದ ಮಹಾದೇವಿ ಅಕ್ಕನ ಕತೆಯನ್ನು ಆತನು ಬಿಟ್ಟಿದ್ದರೂ ಈಕೆಯ ವಿವರವನ್ನು ನೀಡಿದ್ದು, ಮುಂದಿನ ಅನೇಕ ಕವಿಗಳಿಗೆ ಆಕರವಾದಂತಿದೆ. ಇಲ್ಲಿ ಆಕೆಯ ಗೃಹಿಣೀಪದವ ಬಗೆಗೆ ತಿಳಿಯ ಬರುವ ಅಂಶಗಳು ಇಂತಿವೆ: ರಾಜ್ಯದ ಸಿರಿವಂತಿಕೆಯನ್ನು ತೊರೆದು ಬಂದ ಮಾರಯ್ಯ ಕೈಕೊಂಡ ಕಾಯಕ, "ಕೈಯಾರೆ ಕಟ್ಟಿಗೆಗಳಂ ಕಡಿದೊಟ್ಟಿ ಕಟ್ಟಿ, ಬಲಿಷ್ಠನಾಗಿರ್ದ ತೋರಹೊರೆಯಂ ಹೊತ್ತುಕೊಂಡು, ಅಂಗಡಿಯೊಳಗೆ ವಿಕ್ರಯಿಸುವುದು. ಅದರಿಂದ ಜಂಗಮಕೋಟಿಯನ್ನು ಆರಾಧಿಸುತ್ತಾರೆ: ತಾವು ಒಪ್ಪೊತ್ತು ಮಾತ್ರ ಆರೋಗಿಸುತ್ತಾರೆ. ಊಟವೋ ತೆಳ್ಳನಹ ಅಂಬಕಣ (ಅಂಬಲಿ)! ಸುಖದ

ಸುಪ್ಪತ್ತಿಗೆಯೊಳು ಓಲಾಡುತ್ತಿದ್ದ ಜನರಿಗೆ ಬಡತನದ, ಕಷ್ಟತನದ, ಭಕ್ತಿಯ ಜೀವನದ ಅರಿವಾಗುತ್ತದೆ ಆಗ. ಈ ಗೃಹಿಣಿ ಸ್ವದೇಶದಿಂದ ಪ್ರದೇಶಕ್ಕೆ ಬಂದುದಲ್ಲದೆ, ತನ್ನ ಪ್ರಿಯ ಪತಿ ಒಪ್ಪಿಕೊಂಡ ಕಡುಕಷ್ಟತರದ ಕಾಯಕಕ್ಕೂ ಒಗ್ಗಿಕೊಳ್ಳುತ್ತಾಳೆ. ಇದು ಸಾಮಾನ್ಯ ಮಾತಲ್ಲ. ಕಲ್ಯಾಣದ ಶಿವಶರಣರು ಮೆಚ್ಚುವಂತೆ, ಭಕ್ತಿಯ ಬದುಕನ್ನು ಬಾಳುತ್ತಾರೆ. ಹತ್ತಾರು ಶರಣರಿಂದ ಸೈಯೆನಿಸಿಕೊಂಡುದೂ ಸಾಮಾನ್ಯ ಮಾತಲ್ಲ. ಸುಖದ ಬದುಕನ್ನು ಬದುಕಿದ ಈ ಶರಣದಂಪತಿಗಳು, ಕಠಿಣತೆಯ ಕಾಯಕ-ದಾಸೋಹಗಳಿಗೆ ಹೇಗೆ ಒಗ್ಗಿಕೊಂಡರೆಂಬುದನ್ನು, ಅವರ ಪ್ರಾಮಾಣಿಕ ಬದುಕನ್ನು, ಲೋಕಕ್ಕೆ ಪ್ರಕಟ ಪಡಿಸುವ ಉದ್ದೇಶದಿಂದಲೆಂಬಂತೆ, ಪರೀಕ್ಷಿಸುವ ನೆಪದಲ್ಲಿ, ಅವರ ಸದನಕ್ಕೆ ಬಸವಣ್ಣನವರು ಆಗಮಿಸುತ್ತಾರೆ. ಮಾರಯ್ಯನವರು ಕಾಡಿಗೆ ಕಟ್ಟಿಗೆ ಹೊರೆತರಲು ಹೋಗಿರುತ್ತಾರೆ. ಮನೆಯಲ್ಲಿ ಮಡದಿ ಮಹದೇವಿಯಮ್ಮನವರು ಮಾತ್ರ. ಬಸವಣ್ಣನವರು ಅವರ ಮನೆಗೆ "ಪ್ರಚ್ಛನ್ನ ಭಾವದಲಿ" ಆಗಮಿಸಿ, ಅಮ್ಮನವರಿಗೆ ನಮಸ್ಕರಿಸುತ್ತಾರೆ. ಮಹದೇವಮ್ಮನೂ ಅಷ್ಟೇ ಸಮವಿನಯ ಸಂಪನ್ನಳಾಗಿ, ಪ್ರತಿಯಾಗಿ ವಂದಿಸುತ್ತಾಳೆ. ಅವರಿಗೆ ಕೈಕಾಲು ತೊಳೆದುಕೊಳ್ಳಲು ನೀರು ನೀಡುತ್ತಾಳೆ.* ಬಸವಣ್ಣನವರು ಕೈಕಾಲು ತೊಳೆದುಕೊಂಡು ಆ "ಮಾತೆಗೆ ಅನ್ನಿಯವರೇ ಎಮ್ಮ ದೇವರು ಹಸಿದು ಬಂದರು; ನಿಮ್ಮ ಘನಮನೆಯಲ್ಲಿ ಉಳ್ಳುದ, ಅಮ್ಮ, ಗಡಣಿಸು" ಎನ್ನುತ್ತಾರೆ; ಪ್ರಸಾದ ಸ್ವೀಕರಿಸುತ್ತಾರೆ. ಲಿಂಗಪೂಜೆಗೆ ಕುಳಿತ 'ಮಜ್ಜನಶಾಲೆ' ಯೊತ್ತಿನಲ್ಲಿ 'ಎರಡು ಸಾವಿರ ಹೊನ್ನು' ಇರಿಸಿ ಆ ಮಾತೆಗೆ ವಂದಿಸಿ ಹೊರಡುತ್ತಾರೆ. ಆಗ ಆ ಮನೆಯನ್ನು ಕೊಂಡಾಡಿದ ರೀತಿ ಇದು :

"ಈ ಸದನನಂ ನೋಡಿದಾತನ ದೋಷವೆಲ್ಲಂ ಕೆಟ್ಟು ಹೋಗದೇ?
ಈ ಸದನದೊತ್ತಿನಲಿ ಚರಿಸುವವಂ ಕೃತಾರ್ಥನಲಾ!
ಈ ಸದನ ಸೀಮೆಯೊಳಗೆ ತಿರುಗುವ, ವಾಸಿಸುವ ಜೀವಿಗಳ
ಭಾಗ್ಯವದೇಸೋ!
ಈ ಗೃಹರೇಣು ಸಿಕ್ಕಿದವಂಗಹುದು ಮುಕ್ತಿ!" ಎಂದು.

ಹೀಗೆ ಕೊಂಡಾಡಿದುದನ್ನು ನೋಡಿದರೆ ಆ ಮನೆಯ '**ಭಾಗ್ಯದೇವತೆ**'ಯಂತಿದ್ದ ಮಹದೇವಿಯಮ್ಮ ಎಂತಿರಬೇಕೆಂಬುದನ್ನು ಊಹಿಸಬಹುದು. ಪತಿದೇವನು ಮನೆಯಲ್ಲಿಲ್ಲದಿದ್ದರೂ, ಬಂದವರನ್ನು ಉಪಚರಿಸಿ, ಗೌರವಿಸಿ, ಪೂಜೆ ಪ್ರಸಾದಗಳನ್ನು ಸಲ್ಲಿಸುವ ಈ ಶರಣೆಯ ನಿರ್ಭಯ ಮನೋಧರ್ಮ, ಶಿವಭಕ್ತರ ಮೇಲಿನ ಮಮತೆ, ಶರಣ ಸಂಸ್ಕೃತಿಯ ಕುರುಹುಗಳೇ ಆಗಿವೆ. ಪರಪುರುಷರೊಡನೆ ಒಬ್ಬ ಗೃಹಿಣಿ ಹೇಗೆ ನಡೆದುಕೊಂಡಳೆಂಬುದಕ್ಕೆ ಇದೊಂದು ಉತ್ಕೃಷ್ಟ ನಿದರ್ಶನ. 'ಶಿವಾ' ಎಂದು ಮನೆಗೆ ಬಂದ ಅತಿಥಿಗಳನ್ನು 'ಶಿವ' ನೆಂದೇ ಸ್ವೀಕರಿಸುವುದು ಶರಣಸಮಾಜದ ಲಕ್ಷಣವಾಗಿತ್ತು. ಈ ಸನ್ನಿವೇಶವನ್ನು ಅಂದಿನ ಸಮಾಜದ ವರ್ತನೆಯ ಹಿನ್ನೆಲೆಯಲ್ಲಿಯೇ ತೂಗಿನೋಡಬೇಕು. ಇಂದು ಸಹ ಎಷ್ಟೋ ಮನೆತನಗಳಲ್ಲಿ ಹೆಣ್ಣುಮಕ್ಕಳು ಪರರೊಡನೆ ಮಾತನಾಡುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಹದೇವಿಯಮ್ಮ ಅಪರಿಚಿತ ವ್ಯಕ್ತಿಯಾದರೂ ಆಕೆ

* ಇದು ಶರಣ ಸಂಸ್ಕೃತಿಯ ಕುರುಹು.

ನಡೆದುಕೊಂಡ ರೀತಿ ಮೆಚ್ಚುವಂತಹದು. ಸ್ತ್ರೀಯರ ಸ್ಥಾನಮಾನವನ್ನು ಇದು ಎತ್ತಿ ತೋರಿಸುತ್ತದೆ. 'ಗೃಹಿಣೀ ಗೃಹಮುಚ್ಯತೇ' ಎಂಬ ಸೂತ್ರವನ್ನನುಸರಿಸಿದ ಜೀವನ ಈಕೆಯದು. ಪ್ರಚ್ಛನ್ನ ವೇಷದಲ್ಲಿದ್ದ ಬಸವಣ್ಣನವರಿಗೆ ಆಕೆ ನೀಡಿದ ಭಕ್ತಿಪೂರ್ವಕ ಸ್ವಾಗತದಿಂದ, ನೀಡಿದ ತಿಳಿ ಅಂಬಲಿ ಸುಧಾರಸವಾದುದು ಮಾತ್ರವಲ್ಲ; "ಭವರೋಗಕ್ಕೆ ಔಷಧಿ, ಭಕ್ತಿಯ ಜೀವು, ತವರ್ಮನೆಗೆ ಒದವಿಸಿದ ಧನ. ಶಿವಪದ ಗಂಗಾಸ್ನಾನ"ವಾಯ್ತು! ಅತಿಥಿಗಳನ್ನು ವಂದಿಸಿ ಸ್ವಾಗತಿಸುವುದು, ಹೋಗುವಾಗ ನಮಸ್ಕರಿಸುವುದು, ಸದ್ಗೃಹಿಣಿಯ ಸುಸಂಸ್ಕೃತ ನಡತೆಯ ದ್ಯೋತಕ. ಅವರ ಮನೆಯಲ್ಲಿದ್ದುದು ಬಡ ಅಂಬಲಿ ಮಾತ್ರ. ಹೆಚ್ಚಿಗೆ ಏನೂ ಇರಲಿಲ್ಲ. ಬಡಿಸಲು ಏನೂ ಇಲ್ಲದಿದ್ದರೆ ಆ ಶರಣೆಯ ಮನೆಯ 'ಹರವಿ'ಯ ನೀರನ್ನಾದರೂ 'ಒಕ್ಕುಡಿತೆ' (ಬೊಗಸೆ) ಕುಡಿಯಬೇಕು ಎನ್ನಿಸುತ್ತದೆ ಬಸವಣ್ಣನಿಗೆ! ಇಂತಹ ವಿನಯಶಾಲಿಗಳು ಆ ದಂಪತಿಗಳಾದುದರಿಂದ ಮನೆಯಲ್ಲಿ ಇಂತಹ ವಾತಾವರಣ ಇದೆ. ಬಂದವರಾರೆಂಬುದನ್ನೂ ಕೇಳುವ ಗೋಜಿಗೆ ಹೋಗದೆ, (ಅತಿಥಿ) ಅಯ್ಯಗಳಿಗೆ ತೃಪ್ತಿಯ ಆಹಾರವನ್ನು ನೀಡುತ್ತಾಳೆ. ಬಂದಿದ್ದವರೊಬ್ಬ 'ಅಯ್ಯ'ಗಳೆಂದು ಮಹಾದೇವಿಯಮ್ಮ, ಗಂಡ ಮಾರಯ್ಯ, ಕಟ್ಟಿಗೆ ಹೊರೆ ಹೊತ್ತು ಮಧ್ಯಾಹ್ನಕ್ಕೆ ಮನೆಗೆ ಬಂದಾಗ ತಿಳಿಸಿದಳು. ಬಂದವರು ಬಸವಣ್ಣನವರೇ ಇರಬೇಕೆಂದು ಮಾರಯ್ಯ ಭಾವಿಸಿದ. ಭಕ್ತರ ಬಡತನದ ಬವಣೆಗೆ ಮರುಕಪಟ್ಟು ಮಾಡಿದ ಕೃತ್ಯವಿದೆಂದು ಭಾವಿಸಿದ ಮಾರಯ್ಯನವರು, ಕಾಯಕದಿಂದಲ್ಲದೆ ಬೇರೆ ರೀತಿ ಬಂದ ಹೊನ್ನನ್ನು ಸ್ವೀಕರಿಸಬಾರದೆಂಬ ನೀತಿಗೆ ಬದ್ಧರಾಗಿ, ಬಸವಣ್ಣನವರು ಇರಿಸಿದ ಎರಡು ಜಾಳಿಗೆಯೊಳಗಿರ್ದ ಎರಡು ಸಾವಿರ ಹೊನ್ನನ್ನು, ಇಬ್ಬರು ಜಂಗಮಕ್ಕೆ ಸಮರ್ಪಿಸಿದರು. ತಾನಾಗಿಯೇ ಧನವು ತನ್ನ ಮನೆಯಲ್ಲಿ ಬಂದಿದ್ದರೆ ತಿರುಗಿ ಸಮರ್ಪಿಸುವ ಧೈರ್ಯ ಶರಣರಿಗಲ್ಲದೆ ಬೇರೆಯವರಿಗೆ ಬರಲು ಸಾಧ್ಯವೇ? ಇಂದು, ಅನೇಕರ ಹೆಂಡಂದಿರು, ಪತಿಗಳು ಲಂಚ, ಅನ್ಯವಹಾರ, ಮೋಸಗಳಿಂದ ಸಂಪಾದಿಸಿ ಹಣವನ್ನು ಮನೆಗೆ ತಂದರೆ, ತಿರುಗಿ ಕಳಿಸಿದವರುಂಟೇ? ಸಮಾಜದ ಜನತೆ ಗಂಭೀರವಾಗಿ ಆಲೋಚಿಸಬೇಕು. ಮಹಾದೇವಿಯಮ್ಮನು ಪೂಜ್ಯಳಾದುದು ಇಂತಹ ಅನುಪಮಶೀಲಕ್ಕಾಗಿ ಪರದ್ರವ್ಯಕ್ಕೆ ಆಶಿಸುವ ಹೇಸಿ ಮನಸ್ಸು ಅವಳದಲ್ಲ. ಗಂಡನ ವ್ರತ–ನೇಮಕ್ಕೆ ಬದ್ಧಳಾಗಿ ನಡೆದ ನಿರ್ಮಲ ಮನಸ್ಸಿನ ಸ್ತ್ರೀ ಅಧಿಕ ಧನ ಬೇಕಾಗುವುದು ದುಂದುವೆಚ್ಚಕ್ಕೆ; ಸರಳಜೀವನಕ್ಕಲ್ಲ. ಅವರದು ನಿರಾಡಂಬರದ, ತೃಪ್ತಿಯ, ಸುಖದ ಬದುಕು. ಅದರಿಂದಾಗಿ ಅವರಿಗೆ ಪರಧನವೆಂಬುದೊಂದು ಜೂಜು, ಅದು ಕಿಲ್ಬಿಷ, ತಿನ್ನಲಾರದ ಅಮೇಧ್ಯ. ಆಸೆಯನ್ನು ಗೆದ್ದವರು ಶರಣರು ಎಂಬುದನ್ನು ಈ ದಂಪತಿಗಳ ಬದುಕು ತೋರಿಸುತ್ತದೆ. ರಾಜ್ಯಕ್ಕೆ ಒಡೆಯನಾಗಿದ್ದಾಗ ರಾಜ್ಯದ ಬೊಕ್ಕಸದ ಹಣದಿಂದ ಮಾಡುತ್ತಿದ್ದ ಗುರು–ಜಂಗಮ ಸೇವೆಗೂ, ಶರೀರದ ಕಷ್ಟತರ ದುಡಿಮೆಯಿಂದ ಸಂಪಾದಿಸಿದ ಹಣದಿಂದ ಕೈಕೊಳ್ಳುವ ದಾಸೋಹಕ್ಕೂ ಇರುವ ವ್ಯತ್ಯಾಸವನ್ನು ಇವರ ಚರಿತ್ರೆ ತಿಳಿಸುತ್ತದೆ. ಗಂಡಹೆಂಡಿರಲ್ಲಿ ಒಂದೇ ಮನೋಧರ್ಮ, ಒಂದೇ ತೆರನಾದ ಭಕ್ತಿ. ಇಂತಹ ಸಾಂಸಾರಿಕ ಬದುಕನ್ನು ಹೀಗಳೆದರೆ ಶಿವನಿರ್ಮಿತ ಪ್ರಪಂಚವನ್ನೇ ಹೀಗಳೆದಂತೆ.

ತಾನಿತ್ತ ಧನವನ್ನು ಸ್ವೀಕರಿಸದೆ ಬೇರೆಯವರಿಗೆ ದಾನಮಾಡಿದ ಈ ದಂಪತಿಗಳನ್ನು ಕಂಡು, ನೋಡಿ, ಬಸವಣ್ಣನವರಿಗೆ ಅದೆಂತಹ ಸಂತೋಷವಾಗಿರಬೇಕು! ಅಂತಹ ಅನುಯಾಯಿಗಳಿದ್ದುದರಿಂದಲೇ ಬಸವಣ್ಣನ ಕಾಯಕತತ್ವ ಪ್ರಸಾರ, ಸಾಮಾಜಿಕ ಕ್ರಾಂತಿ ನೆರವೇರಲು ಸಾಧ್ಯವಾಯಿತು. ಬಸವಪುರಾಣದಲ್ಲಿ ಈ ದಂಪತಿಗಳನ್ನು "ಸುಗುಣನಿಧಿಗಳು"–ಎಂದು ಕರೆಯಲಾಗಿದೆ.

(೩)

ಹದಿನೈದನೆಯ ಶತಮಾನದಲ್ಲಿ, ಶೂನ್ಯಸಂಪಾದನೆಕಾರರು, ಶರಣಮಾರ್ಗವನ್ನು ಪ್ರಶಂಸಿಸುವಲ್ಲಿ, 'ಮೋಳಿಗಯ್ಯಗಳ ಸಂಪಾದನೆ'ಯನ್ನು ಸೇರಿಸಿದ್ದುದು, ಆ ಶರಣನ ಮಹತಿಯನ್ನು ಎತ್ತಿತೋರಿಸುತ್ತದೆ. ಮೋಳಿಗಯ್ಯನ ಹೆಸರು ಬರುವಾಗೆಲ್ಲ ಆತನ ಪತ್ನಿ ಮಹದೇವಮ್ಮನ ಹೆಸರು ಬರಬೇಕಾದುದು ನ್ಯಾಯವೇ. ಈ ಸಂಪಾದನೆಯಲ್ಲಿ ವಿವರಿಸುವ ಮುಖ್ಯ ವಿಷಯ : "ಹೊನ್ನ ಜಾಳಿಗೆಯೆರಡ ಬಸವಣ್ಣಂ ಸಿರ್ಥಸಿಕರೆಂದು ಇರಿಸಲ್, ಮಾರಯ್ಯಂ ನಗುತ ಜಜಿದು, ಚರಕಂ ಸ್ವರ್ಣದ ದಂಡಗಳನಿತ್ತುದು". ಈ ಅಂಶವನ್ನು ಮೊತ್ತ ಮೊದಲು ಹೇಳಿದವರು ಬಸವಪುರಾಣಕಾರನೇ. ಆದುದರಿಂದ ಶೂನ್ಯಸಂಪಾದನೆಯ ಈ ನಿರೂಪಣೆಗೆ ಬಸವಪುರಾಣವೇ ಆಕರವೆಂಬುದು ಸುಸ್ಪಷ್ಟ. ಶೂನ್ಯ ಸಂಪಾದನೆಯಲ್ಲಿ ಮಾರಯ್ಯದಂಪತಿಗಳ ಬಗಗೆ ಹೀಗೆ ಹೇಳಲಾಗಿದೆ :

> "ಮೋಳಿಗೆ ಮಾರಯ್ಯನೆಂಬ ಶರಣನು, ಕಾಶ್ಮೀರ ದೇಶಾಧಿಪತಿತ್ವದಿಂದಿರ್ದು,
> ಅದಂ ತ್ಯಜಿಸಿ, ಸತಿಪತಿಗಳಿರ್ವರು ಕಲ್ಯಾಣಕ್ಕೆ ಬಂದು, ಮೋಳಿಗೆ
> ಕಾಯಕಮಂ ಮಾಡಿಕೊಂಡು ಜಂಗಮಾರ್ಚನೆಯಂ ಮಾಡುತ್ತಿರೆ,
> ಬಸವರಾಜದೇವರ ಗೃಹದಲ್ಲಿ ಇಚ್ಛಾಪದಾರ್ಥಮಂ ಷಡುರುಚಿಯಿಂ
> ಸ್ವೀಕರಿಸಿದ
> ಜಂಗಮಮೂರ್ತಿಗಳು, ಆ ಮೋಳಿಗಯ್ಯನ ಗೃಹಕ್ಕೆಬಂದು, ಅಂಬಕಳಮಂ
> ಸ್ವೀಕರಿಸಿ,ಆ ಬಸವರಾಜದೇವರ ಗೃಹಕ್ಕೆ ಹೋಗಿ, ಅತಿಶಯದಿಂ ಕೊಂಡಾಡಿ
> ಹೇಳುತ್ತಿರೆ, ಬಸವರಾಜದೇವರು ಮೋಳಿಗಯ್ಯಗಳನ್ನು" ಸ್ತುತಿಸುತ್ತಾರೆ.

ಅವರ ಮನೆಯ 'ಅನ್ನೋದಕಾದಿಗಳಂ ಬೇಡಿ ತೆಗೆದುಕೊಂಡು ಸ್ವೀಕರಿಸಿದರೆ, 'ಪಾಪಕ್ಷಯ'ವಾಗುತ್ತದೆಯೆಂದು ಭಾವಿಸಿ, ಮಾರಯ್ಯನವರು ಇಲ್ಲದಾಗ ಆಗಮಿಸಿ, ಅವರ ಪತ್ನಿ ನೀಡಿದ ಪ್ರಸಾದ ಸ್ವೀಕರಿಸಿ, ಎರಡು ಹೊನ್ನ ಜಾಳಿಗೆಗಳನ್ನು ಮಜ್ಜನಶಾಲೆಯ ಒತ್ತಿನಲ್ಲಿ ಇರಿಸಿ ಹೋಗುತ್ತಾರೆ. ಗಂಡನು ಬಂದು, ಲಿಂಗಾರ್ಚನೆಯ ಸಮಯದಲ್ಲಿ, ಈ ಹೊನ್ನ ಕಂಡು, ಬಂದಿರ್ದವರಾರೆಂದು ಕೇಳಲು, "ಒಬ್ಬ ಭಕ್ತರು" ಬಂದಿರ್ದರೆಂದು ಹೇಳುತ್ತಾಳೆ. ಬಸವಪುರಾಣದಲ್ಲಿ ಒಬ್ಬ "ಅಯ್ಯಗಳು" ಬಂದಿರ್ದರೆಂದು ಹೇಳಿದರೆ, ಇಲ್ಲಿ ಭಕ್ತರು–ಎಂಬ ಬದಲಾವಣೆ ಆದುದನ್ನು ಓದುಗರು ಗಮನಿಸಬೇಕು. ಬಸವಣ್ಣನವರಿತ್ತ ಹೊನ್ನು ಸ್ವೀಕರಿಸದ ದಂಪತಿಗಳು, ಇಬ್ಬರು ಜಂಗಮಕ್ಕೆ ಆ ಹಣವನ್ನು ಸಮರ್ಪಿಸುತ್ತಾರೆ. ಮಾರಯ್ಯನ ಪತ್ನಿ ಮಹದೇವಮ್ಮ 'ಕಡುಮುಗ್ಧೆ'ಯೆಂಬಂತೆ ಕಂಡುಬರುತ್ತಾಳೆ. ಹಸಿದ ಅಯ್ಯಗಳ ಹೆಸರು ದೆಸೆ ಕೇಳಲಿಲ್ಲ. ಪತಿಗಾಗಿ ಮಾಡಿದ ಪ್ರಸಾದವಿದ್ದುದರಿಂದ, ಇಲ್ಲವೆಂದು ಹೇಳುವ ವಂಚನೆಯನ್ನು ಮಾಡಲಿಲ್ಲ–ಎಂಬು

ವನ್ನು ನಾವು ಗಮನಿಸಬೇಕು. ಅವರಲ್ಲಿಯೂ ಹಸಿದವಗೆ ಇಲ್ಲವೆನ್ನುವುದು ಸಾಧ್ಯವೇ? ಬಂದವರು ಬಸವಣ್ಣನಾದುದರಿಂದ ಆ ಸ್ತ್ರೀಗೆ ಪರಿಚಯವಿಲ್ಲ ಎನ್ನಬೇಕೇ ? ಅಥವಾ ಬಸವಣ್ಣನನ್ನು 'ಪ್ರಚ್ಛನ್ನ ವೇಷದಲ್ಲಿ' ಗುರುತಿಸಲು ಸಾಧ್ಯವಾಗಲಿಲ್ಲ ಎನ್ನಬೇಕೆ ? ಈ ಪ್ರಶ್ನೆಗೆ ಇಲ್ಲಿ ಸಮರ್ಪಕ ಉತ್ತರ ದೊರೆಯುವುದಿಲ್ಲ. ಅದನ್ನು ನಮ್ಮ ಕವಿಗಳು ಗೌಣವೆಂದು ತಿಳಿದಂತೆ ಕಾಣುತ್ತದೆ. ಇದಕ್ಕೆ ಪ್ರತಿಯಾಗಿ ತಾವು ಬಡವರಲ್ಲ ಎಂಬುದನ್ನು ತೋರಿಸಲು, ಕಟ್ಟಿಗೆ ತುಂಡುಗಳನ್ನೇ ಸುವರ್ಣವನ್ನಾಗಿ ಪರಿವರ್ತಿಸಿ, ಜಂಗಮಕ್ಕೆ ದಾನಮಾಡಿದರೆಂದು ವಿವರಿಸಲಾಗಿದೆ. ಇಲ್ಲಿ ಮಹದೇವಿಯಮ್ಮ ಮಾಡಿದ ಅಡುಗೆಯ ರುಚಿ ಮುಖ್ಯವಾದುದು; ಆ ಅಡಿಗೆ, ಪ್ರೀತಿಯ ಭಾವ, ಶುಚಿಮನಸ್ಸಿನಿಂದ ತಯಾರಿಸಿದುದು ಆಗಿದ್ದುದರಿಂದ, ಅದರ ರುಚಿ ಸಾಮಾನ್ಯ ಅಂಬಲಿಯದಾಗಿರದೆ ಅಮೃತಕ್ಕೆ ಸಮಾನವಿತ್ತು! ಬಡಗೃಹಿಣಿಯಾದರೂ ಕೌಟುಂಬಿಕ ಜೀವನದಲ್ಲಿ, ಇದ್ದುದನ್ನೇ ರುಚಿಯಾಗಿ ಮಾಡಿ ನೀಡುವ ಕಲೆ ಮಹಾದೇವಮ್ಮನಿಗೆ ಕರಗತವಾಗಿತ್ತೆಂಬುದನ್ನು ಇಲ್ಲಿ ನಾವು ಮನಗಾಣುತ್ತೇವೆ. ಮಾರಯ್ಯನ ಭಕ್ತಿಭಾವಕ್ಕೆ ಮಹದೇವಿಯಮ್ಮನ ಭಕ್ತಿಯೂ ಸೇರಿದ್ದು ಕುಂದಣಕ್ಕೆ ಒಪ್ಪವಿಟ್ಟಂತಾಗಿದೆ. 'ಧನಿಕನೆಂದು ಆತ್ಮತೇಜದಿಂ ಭಕ್ತಿಯಂ ಮಾಡಿದಡೆ ಫಲಪದಕ್ಕೆ ಕಾರಣವಲ್ಲದೆ ಸಹಜವಲ್ಲ' ಎಂದು ತಿಳಿದ ಅವರು ಬಸವಣ್ಣನವರು ಮಾಡಿದ ಕೃತ್ಯದಿಂದಾಗಿ. ಅವರ ಭಕ್ತಿಯ ಬಗೆಗೆ ಹೀಗೆ ಆಡುತ್ತಾರೆ. ಅವರನ್ನು ಶೂನ್ಯ ಸಂಪಾದನೆಕಾರರು 'ನಿರಾಕಾಮಹಾತ್ಮ'ರೆಂದು ಕೊಂಡಾಡುತ್ತಾರೆ. ಆ ದಂಪತಿಗಳನ್ನು 'ಧನದಲ್ಲಿ ಶುಚಿತ್ವ' ಅಳವಟ್ಟ 'ನಿಧಾನ ತಪ್ಪಿ ಬಂದರೂ ಬೇಡವೆಂದ' ಶರಣರು ಎಂದು ಇತರ ಶರಣರೂ ಕೊಂಡಾಡುತ್ತಾರೆ, 'ಧೀರ ಮೋಳಿಗಮಾರ' ಎಂದು ಬಿರುದನ್ನೀಯುತ್ತಾರೆ.

ಮೋಳಿಗಯ್ಯಗಳು ಲಿಂಗೈಕ್ಯನಾಗಬೇಕೆಂಬ ಇಚ್ಛೆಯನ್ನು ಶರಣಗಣದ ಮುಂದೆ ಇಡುತ್ತಾರೆ. ಆಗ ಅವರ 'ಪುಣ್ಯಾಂಗನೆ' ಮಹಾದೇವಿಯಮ್ಮನು ಹೀಗೆ ನುಡಿಯುತ್ತಾಳೆ :

"ಅದೇತಕಯ್ಯಾ, ಶಿವನೊಳಗೆ ಕೂಟಸ್ಥನಾದಹೆನೆಂಬ ಹಲುಬಾಟ ? ಇದು ಭಕ್ತಿ ಸತ್ಯದ ಆಟವಲ್ಲ. ಇನ್ನಾರ ಕೇಳಿ, ಮತ್ತಿನ್ನಾರಿಗೆ ಹೇಳಿ ನೀ ಮಾಡುವ ಮಾಟ? ಮುನ್ನ ನೀನಾರೆಂದಿದ್ದೆ ಹೇಳಾ ? ಆ ಭಾವವನರಿದು, ನಿನ್ನ ನೀನೆ ತಿಳಿ–ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ", "ಕಾಷ್ಠವ ಸುವರ್ಣವ ಮಾಡಿದೆನೆಂಬ ಘಾತಕತನವೆ ನಿಮ್ಮ ಭಕ್ತಿ? ಸಕಲದೇಶಕೋಶವಾಸ ಭಂಡಾರ ಮಹಾಲಕ್ಷ್ಮಿ ಮುಂತಾದ ಸಂಬಂಧ ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ? ನಿಮ್ಮ ಅರುವಿಂಗೆ ಇದಿರಿನಲ್ಲಿ ಕೂಡಿಹೆನೆಂಬ ಭಿನ್ನಭಾವ ಉಂಟೇ ಅಯ್ಯಾ ? ಕರ್ಪುರದ ಅರಣ್ಯದ ಕಿಚ್ಚು ಹತ್ತಿ ಬೆಂದಲ್ಲಿ ಭಸ್ಮ ಇದ್ದಲು ಎಂದು ಲಕ್ಷಿಸಲುಂಟೇ ? ನಿಮ್ಮ ಭಾವದ ನಿಮ್ಮಲ್ಲಿಗೆ ತಿಳಿದುಕೊಳ್ಳಿ. ನಿಮ್ಮ ಕೂಟಕ್ಕೆ ಎನ್ನ ನಾಚಿಕೆಯ ಬಿಡಿಸಿದ ತೆರನ ತಿಳಿದುಕೊಳ್ಳಿ. ಶಕ್ತಿಯ ಮಾತೆಂದು ಧಿಕ್ಕರಿಸಬೇಡ. ಹೋದಾಗೆ ಕೂಡಿಹೆನೆಂಬುದು ನಿಮ್ಮ ಅರುವಿಂಗೆ ಹಾನಿ"; "ನೀನಲ್ಲಿ ಇಲ್ಲಿ ಕೂಡಿಹೆನೆಂಬ ಕೂಟದ ಭಿನ್ನದ ಹೇಳಯ್ಯಾ"; "ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ ? ಮರುಷ

ರಸ ಕೈಯಲಿದ್ದು ಕೂಲಿಯ ಮಾಡಲೇತಕ್ಕೆ ? ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಸೋಱಿಯ ಹೊಱಲೇತಕ್ಕೆ ? ನಿತ್ಯ ಅನಿತ್ಯವ ನೀ ತಿಳಿದು, ಮರ್ತ್ಯ, ಕೈಲಾಸ ಎಂಬುದು ಭಕ್ತರಿಗೆ ಯುಕ್ತಿಯಲ್ಲ. ನಿಶ್ಚಯವ ತಾನಱಿತು, ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ. ಆ ಬಟ್ಟಬಯಲ ಬೆಳಗ ನಿನ್ನ ನೀನೆ ನೋಡಿಕೋ"; "ಕಾಣೆಗೆ ಹೋರಿ ಕಡವರವ ನೀಗಲೇತಕ್ಕೆ? ಅಳಿಗಾಡಿ ತುಂಬಿದ ಕೊಡವ ಹೊಡಗೆಡಹಲೇತಕ್ಕೆ ? ನಿನ್ನಂಗದಲ್ಲಿ ಗುರುಕೊಟ್ಟ ಲಿಂಗವೆಂಬುದೊಂದು ಕುಱುಹು ಇರುತ್ತಿರಲಿಕ್ಕೆ, ಆ ನಿಜಲಿಂಗದ ಸಂಗವನಱಿಯದೆ, ಸಂದಿಗೊಂದಿಯಲ್ಲಿ ಹೊಕ್ಕೆಹೆನೆಂಬ ಗೊಂದಣವೇತಕ್ಕೆ ? ಘನಲಿಂಗ ನಿನ್ನಂಗದಲ್ಲಿ ಇದ್ದಂತೆ, ಕಂಡೆ ಕಾಣೆನೆಂಬ ನಿನ್ನ ನಿಜ, ನಿಂದಲ್ಲಿಯೇ ತಿಳಿದುಕೊಳ್ಳಿ"; "ಸಕಲದಲ್ಲಿ ಅಳಿದು, ನಿಷ್ಕಲದಲ್ಲಿ ಉಳಿದು ಮತ್ತೆ, ಸಕಲವ ಕೂಡಿಹೆನೆಂಬ ನಿಷ್ಕಲ ಉಂಟೆ, ಅಯ್ಯಾ ? ನಿಷ್ಕಲದೊಳಗೆ ಸಕಲವಡಗಿ, ಆ ಗುಣ ಉಪದೃಷ್ಟಕ್ಕೆ ಈಡಿಲ್ಲದಲ್ಲಿ ಅಖಿಳ ಜಗವೆಂಬುದು ಹೊಱಗು. ಆ ಗುಣ ನಿನ್ನ ಸದ್ಭಾವ ನಿಜವಾದಲ್ಲಿ ನಿನ್ನಂಗವೇ ಕೈಲಾಸ; ಆ ಲಿಂಗದ ಕೂಟವೇ ನಿರ್ವಾಣ. ಇದು ನಿಸ್ಸಂಗದ ಸಂಗ; ನಿಮ್ಮ ನೀವೇ ತಿಳಿದುಕೊಳ್ಳಿ"; "ಅಂಗಕ್ರೀಯನಱುವಲ್ಲಿ ಸ್ಥಾಣುವಿನ ಛಾಯ ತಿಲದಂತೆ, ಆತ್ಮನ ಕಳೆಯ ತೀವಲ್ಲಿ ಶಿಲೆಯಲ್ಲಿದ್ದ ಬಿಂದು ಒಲವರದಿಂದ ಜಾಱುವಂತೆ, ಆ ಅಱಿವು ಮಹದಲ್ಲಿ ಬೆರಸುವಾಗ ವಾರಿಶಿಲೆ ನೋಡ ನೋಡಲಿಕ್ಕೆ ನೀರಾದಂತೆ ಇರಬೇಕು. ಕಾಯವಶದಿಂದ ಕರ್ಮವಮೀರಿ ಕರ್ಮವಶದಿಂದ ಮರ್ಮವಳಗತವಾದಲ್ಲಿ, ಅದೇ ಕಾಯ ಬೆರಸಿ ಎಯ್ದಿದ ಕೈಲಾಸ. ಆ ಭಾವವ ನಿಮ್ಮ ನೀವೇ ತಿಳಿದುಕೊಳ್ಳಿ–ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ" –ಇತ್ಯಾದಿ ಮಾತುಗಳನ್ನು ಮಹದೇವಿಯಮ್ಮನವರು ಲಿಂಗೈಕ್ಯ, ಕೈಲಾಸಗಳನ್ನು ಕುರಿತು ಮಾರಯ್ಯನವರಿಗೆ ತಿಳಿಹೇಳುತ್ತಾಳೆ. ಮಾರಯ್ಯನವರು :

"ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ ಮನಕ್ಕೆ ಎನ್ನ ಮುಕ್ತ್ಯಾಂಗನೆ,
ಎನ್ನ ನಿಶ್ಚಯಕ್ಕೆ ಒಂದು ಗೊತ್ತ ತೋರಾ"

—ಎನ್ನುತ್ತಾರೆ. ಅದಕ್ಕೆ ಮಹದೇವಮ್ಮ "ಮಹಾಘನಲಿಂಗರೂಪರು ನೀವೇ"–ಎಂದು ಉತ್ತರಿಸುತ್ತಾಳೆ. ಅಲ್ಲದೆ "ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು; ಎನಗೆ ಭಿನ್ನದ ಮಾತಿಲ್ಲ" ಎನ್ನುತ್ತಾಳೆ. ಅದಕ್ಕೆ "ನಿನ್ನ ಭಕ್ತಿಯ ಬೆಳೆಯೆ ಎನಗೆ ಸತ್ಯದ ಹಾದಿ", "ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ, ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ, ಎನ್ನ ಸುಖದುಃಖ ನಿನ್ನ ಸುಖದುಃಖ ಅನ್ಯವಿಲ್ಲ" ಎನ್ನುತ್ತಾನೆ ಮಾರಯ್ಯ. ಆಗ ಮಹಾದೇವಿಯಮ್ಮ ಪತಿಗೆ, "ಕೂಟಕ್ಕೆ ಕುಱುಹಾದುದನಱಿಯದೆ, ಆತ್ಮಕ್ಕೆ ಅಱಿವಾದುದನಱಿಯದೆ, ಕೈಲಾಸವೆಂಬ ಸೂತ್ರದ ಒಳಗಿಗೆ ಮನ ಸೋತಿರಲ್ಲಾ! ಈ ನಿರಂಗವ ತಿಳಿದುನಿಂದಲ್ಲಿ, ಬೇಱೆ ಅಂಗವಡಗುವುದಕ್ಕೆ ಉಭಯವುಂಟೆಂಬ ದಂದುಗ ಬೇಡ. ತಾ ನಿಂದಲ್ಲಿಯೇ ನಿಜಕೂಟ, ತಿಳಿದಲ್ಲಿಯೆ ನಿರಂಗವೆಂಬುದಃ; ಇಷ್ಟದಲ್ಲಿ ನೋಟ, ಜ್ಞಾನದಲ್ಲಿ ಕೂಟ; ಕೂಟ ಏಕಾರ್ಥವಾದಲ್ಲಿ ಕಾಯವೆಂಬ ಕದಳಿಯ ಬಿಟ್ಟುದು; ಭಾವವೆಂಬ ಕುಱುಹ ಮರೆದುದು. ಇಂತೀ ಉಭಯ ನಿರ್ಭಾವವಾದಲ್ಲಿ ಇಹಪರವೆಂಬ ಹೊಲಬುಗೆಟ್ಟಿತ್ತು"

ಎನ್ನುತ್ತಾಳೆ. ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ ಸಮರ್ಪಿಸಿದ ಮೇಲೆ ಕೈಲಾಸಕ್ಕೆ ಹೋಗುವುದರಿಂದೇನು ಪ್ರಯೋಜನ? ಈ ಭಾವದ ಮಾತನಾಡಿ. "ಕಾಯವೆರಸಿ ಕೈಲಾಸಕ್ಕೆ ಎಯ್ದುವೆನೆಂಬುದು ಮತವಲ್ಲ; ಘನಲಿಂಗ ಕರಸ್ಥಲದಲ್ಲಿ ಇಪ್ಪ ಅನುವನರಿಯದೆ, ಇಲ್ಲಿಗೆ ಕರ್ಮ, ಅಲ್ಲಿಗೆ ನಿಷ್ಕರ್ಮವೇ? ಹೇಮದ ಮಾಟದ ಒಳಹೊರಗಿನಂತೆ ಮರ್ತ್ಯ ಕೈಲಾಸವೆಂಬ ಕಟ್ಟಳೆ ಇಲ್ಲ. ಅತ್ತ ನಿಶ್ಚಯವಾದಲ್ಲಿಯೇ ಕೈವಲ್ಯ; ಮತತ್ವವಾದಲ್ಲಿಯೇ ಮರ್ತ್ಯದ ಒಳಗು. ಈ ಗುಣ ಸದಮಲಭಕ್ತನ ಯುಕ್ತಿ; ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಹೆನೆಂಬುದು ಕೈಕೂಲಿ; ಭಾಷೆಗೆ ತಪ್ಪಿ ಓಸರಿಸಿದ ಮತ್ತೆ, ಆಸೀ ಹಿತವ ಹೇಳದಲ್ಲಿ, ಮತ್ತೆ ಘಾತಕತನದಿಂದ ಎಯ್ದುಹೆನೆಂಬುದು ಭಕ್ತರಿಗೆ ಹಿತವಲ್ಲ. ದೃಷ್ಟದಲ್ಲಿ ಕೊಟ್ಟುದ ಲಕ್ಷಿಸಲರಿಯದೆ, ಅಲಕ್ಷ್ಯವ ಲಕ್ಷಿಸಿ ಕಾಬುದಕ್ಕೆ ಲಕ್ಷ್ಯವೇನು?—ಕಾಯಭ್ರಮೆಯಿಂದ ಕೈಲಾಸ; ಜೀವಭ್ರಮೆಯಿಂದ ಮಹದ ಕೂಟವೆಂಬುದು; ಕಾಯದ ಜೀವದ ಭೇದವನರಿತಲ್ಲಿ ಅತ್ತಲಿತ್ತಲೆಂದು ಮತ್ತೆ ಹಲುಬಲಿಲ್ಲ."– ಎಂದಿದ್ದಾಳೆ. ಷಟ್ಸ್ಥಲಗಳ ಸಾಧನೆಯಲ್ಲಿ ಸುಬುದ್ಧಿ ಸಾಧ್ಯವಾಗಿ, ಮಲಗಳು ನಾಶವಾಗಿ, ಸುಜ್ಞಾನ ಲಭ್ಯವಾಗುತ್ತದೆ; ಸ್ತುತಿ ನಿಂದೆಗಳನ್ನು ಮೀರಿ ಓಡಲು ನಿಲ್ಲುತ್ತದೆ; ಅರಿವು ಅಳವಟ್ಟು ಮರವೆ ನಷ್ಟವಾಗುತ್ತದೆ. ಇದನ್ನು ಚೆನ್ನಾಗಿ ತಿಳಿದರೆ 'ಅಲ್ಲಿ' 'ಇಲ್ಲಿ' ಎಂಬ ಭೇದವಿರುವುದಿಲ್ಲ– ಎಂದು ಮಹದೇವಿಯಮ್ಮ 'ಲಿಂಗೈಕ್ಯದ ನಿರ್ಣಯ'ವ ನಿರೂಪಿಸುತ್ತಾಳೆ. ಮೋಳಿಗೆಯ ಮಾರಿ ತಂದೆಗಳು ಘನಲಿಂಗದಲ್ಲಿ ತಮಗೆ ಸಮರಸಭಾವವ ತಿಳಿದು ನಿಶ್ಚಯಿಸುತ್ತಾರೆ. ಹೀಗೆ ಬಸವಪುರಾಣದ ಕಥೆಯಿಂದ ಆರಂಭಿಸಿದ ಶೂನ್ಯಸಂಪಾದನೆಕಾರನು ಮೋಳಿಗೆಯ್ಯಗಳ ಸಂಪಾದನೆಯಲ್ಲಿ, ಮಾರಯ್ಯನವರಿಗೆ ಮಾತ್ರ ಸೀಮಿತಗೊಳಿಸದೆ, ಮಾರಯ್ಯನವರ ಪತ್ನಿಯ ವೈಚಾರಿಕ–ದಾರ್ಶನಿಕ ನಿಲವಿನ, ಘನ ವ್ಯಕ್ತಿತ್ವದ ಪರಿಚಯವನ್ನೂ ಮಾಡಿಕೊಟ್ಟಿದ್ದಾನೆಂಬುದು ನಮಗೆ ತಿಳಿದುಬರುತ್ತದೆ.

ಮಾರಯ್ಯಗಳ ಪತ್ನಿ ನಿರ್ಣಯಿಸಿತ್ತುದು ಲಿಂಗೈಕ್ಯನ ಸ್ಥಿತಿಯ ಬಗೆಗೆ. ಕೈಲಾಸ, ಮರ್ತ್ಯ, ಇಹ-ಪರ, ಅಲ್ಲಿ-ಇಲ್ಲಿ ಎಂಬ ವಿಚಾರಗಳ ಬಗೆಗೆ. ಅವಳು ಮನಂಬುಗುವಂತೆ ವಿಷಯ ವಿಶ್ಲೇಷಿಸಿದುದು, ಅವಳ ಬುದ್ಧಿಶಕ್ತಿಯನ್ನು, ಅವಳು ಸಾಧಿಸಿದ ಅಧ್ಯಾತ್ಮಿಕ ಔನ್ನತ್ಯವನ್ನು ಸೂಚಿಸುತ್ತದೆ. ಕೈಲಾಸವ ಕಂಡೆನೆಂಬುದು ಭ್ರಮೆ; ಅಲ್ಲಿ–ಇಲ್ಲಿ ಎಂಬ ಭೇದ ಶರಣಂಗೆ ಇಲ್ಲ. ಭಕ್ತನ 'ಕಾಯವೆ ಕೈಲಾಸ'; 'ಕಾಯಕವೆ ಕೈಲಾಸ'ವೆಂದಿರುವಲ್ಲಿ ಮತ್ತೆ ಬೇರೆ ಕೈಲಾಸವುಂಟೇ? ಇಷ್ಟಲಿಂಗದನೋಟ, ಅರಿವಿನ ಮಾಟದಿಂದ, ಇದಿರಿಂಗೆ ಕೂಡುವೆನೆಂಬುದು ಸಲ್ಲ; ಕರ್ಪುರದ ಅರಣ್ಯಕ್ಕೆ ಬೆಂಕಿಹತ್ತಿದರೆ– ಎಂದರೆ ತನುವಿನ ದುರ್ಗುಣ ನಾಶವಾಗಿ, ಲಿಂಗಗುಣ ಅಳವಟ್ಟು, ಲಿಂಗಜ್ಞಾನವನ್ನು ಸ್ಪರ್ಶವಾದರೆ, ಅಲ್ಲಿ ತನುವುಂಟೇ? ಲಿಂಗದ ಸಂಗವೇ ಸಾಮರಸ್ಯ: ಕಾಯವನ್ನು ವಶದಲ್ಲಿಟ್ಟುಕೊಂಡು, ಕರ್ಮವನ್ನು ಮೀರಿ, ರಹಸ್ಯವನ್ನು ಅರ್ಥಮಾಡಿಕೊಂಡರೆ ಅದೇ 'ಕಾಯ ಬೆರಸಿದ ಕೈಲಾಸ' ಎಂದು ಮೊದಲಾಗಿ ವಿವರಿಸಿ ಈಕೆ ಮಾರಯ್ಯನ ಸಂದೇಹವನ್ನು ನಿವಾರಿಸುತ್ತಾಳೆ. ಚರ್ಚೆಯಲ್ಲಿ ಭಾಗವಹಿಸಿ ಚೆನ್ನಾಗಿ ತಮ್ಮ ವಿಷಯ ಪ್ರತಿಪಾದನೆ ಮಾಡಬಲ್ಲ ಸ್ತ್ರೀಯರ ಸಾಲಿನಲ್ಲಿ ಈ ಶರಣೆ ಒಬ್ಬಳೆಂಬುದನ್ನು ನಾವಿಲ್ಲಿ

ಮನಗಾಣಬಹುದು. ಈ ಸ್ತ್ರೀ, ತಾನು ಮಾತನಾಡುವಾಗ ಪತಿಗೆ ತೋರಬೇಕಾದ ಗೌರವವನ್ನು ಮರೆಯದೇ ತನ್ನ ವಾದಸರಣಿಯನ್ನು ಮುಂದೆಮಾಡಿದ್ದಾಳೆ; ಇಷ್ಟೇ ಅಲ್ಲ ತಾನು ಪ್ರತಿಪಾದಿಸುವ ರೀತಿಯಲ್ಲಿ ತನ್ನ ಪತಿಯ ವಿಚಾರಗಳನ್ನು ಮೀರುತ್ತಾಳೆ. ಆದರೆ ತಾನು ಗಂಡನಿಗಿಂತ ಬುದ್ಧಿವಂತಳು ಎಂಬ ಅಹಂಕಾರ ಅವಳಲ್ಲಿ ತಲೆದೋರಿಲ್ಲ. ವಿನಯ, ಅವಳ ಸಹಜ ಗುಣ ಎನ್ನುವಂತೆ ಮಾತನಾಡಿದ್ದಾಳೆ. ಅನುಭಾವದ ತುತ್ತತುದಿಯಲ್ಲಿದ್ದು ಮಾತನಾಡುವವರು ಆಡುವಂತೆ ನುಡಿದಿದ್ದು, ನಮ್ಮೆಲ್ಲರ ಗೌರವಕ್ಕೆ ಪಾತ್ರಳಾಗುತ್ತಾಳೆ. ಪತಿ–ಮಾರಯ್ಯನವರೂ ಆಕೆಗೆ "ನಿನ್ನ ಭಕ್ತಿಯ ಬೆಳೆ ಎನ್ನ ಸತ್ಯದ ಹಾದಿ; ಎನ್ನ ಸತ್ಯಕ್ಕೆ ನೀ ಸತಿ; ನಿನ್ನ ಸುಖದುಃಖ ಎನ್ನ ಸುಖದುಃಖ" ಎಂದು ಆಡಿದುದನ್ನು ನೋಡಿದರೆ, ಎಷ್ಟರ ಮಟ್ಟಿಗೆ ಮಾರಯ್ಯನವರೂ ಮಹದೇವಿಯಮ್ಮನನ್ನು ತಿಳಿದುಕೊಂಡಿದ್ದಾರೆಂಬುದೂ ಮನವರಿಕೆಯಾಗುತ್ತದೆ. ಇಂತಹ ಮಧುರ ಬಾಂಧವ್ಯದ ದಂಪತಿಗಳಿವರು.

[೪]

ಮಹದೇವಿಯಮ್ಮನು ಅನುಭಾವಿಮಾತ್ರವಲ್ಲ, ಬರಹಗಾರಳೂ ಹೌದು. ಆಕೆಯ ಹೆಸರಿನಲ್ಲಿ ಅರವತ್ತೊಂಬತ್ತು ವಚನಗಳು ಪ್ರಕಟವಾಗಿವೆ. ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದ ಇಪ್ಪತ್ತೇಳು ಶಿವಶರಣೆಯರ ವಚನಗಳಲ್ಲಿ ಈಕೆಯವೂ ಸಂಕಲಿತವಾಗಿವೆ. ಆ ವಚನಗಳು ಈ ಮಾತೆಯು ಬರೆಹದ ರೀತಿಯನ್ನು ತೋರಿಸುತ್ತವೆ. ಅವುಗಳಲ್ಲಿ ಎಂತಹ ವಿಚಾರ ಅಡಗಿದೆಯೆಂಬುದನ್ನು ನಾವು ಮನಗಾಣಬಹುದು. ಶರಣಜೀವನದ ಸುಖಕ್ಕೂ ಸಾಮಾನ್ಯರ ಸುಖಕ್ಕೂ ಇರುವ ಅಂತರವನ್ನು ಹೀಗೆ ತಿಳಿಸಿದ್ದಾಳೆ:

> **"ಸಂಸಾರ ಸಂಗದಿಂದ ಉದಯಿಸಿದ ಸುಖವೆ ದುಃಖವೆಂದರಿಯದೆ,**
> ಆ ಸುಖವನೆ ಮಚ್ಚಿ, ಭವದುಃಖವೆಂಬ ಕ್ರೂರಜನ್ಮಚಕ್ರಕ್ಕೀಡಾಗಿ,
> ಅಲ್ಲಿ ತನ್ನ ಮರೆದು, ತನಗಿಲ್ಲದ ಭ್ರಮೆಯ ತನ್ನದೆಂದು,
> ಅಂತಪ್ಪ ಘೋರದೊಳಗೋಲಾಡುತ್ತಿಪ್ಪ, ಮುಳುಗಾಡುತ್ತಿಪ್ಪ,
> ಅಜ್ಞಾನಜೀವಿಗಳು ನಿಮ್ಮನೆತ್ತಬಲ್ಲರಯ್ಯಾ
> ಎನ್ನ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ?"

ಸುಖ–ದುಃಖಗಳ ಬಗೆಗೆ ಈ ಮಹಿಳೆ ಹೇಳುವ ಮಾತೆಲ್ಲಿ? ನಾವು ತಿಳಿದುಕೊಂಡು ನಡೆಯುವ ಬದುಕಿನ ರೀತಿಯೆಲ್ಲಿ? ನಮ್ಮ ಸುಖ ಈ ಮಾತೆಯ ದೃಷ್ಟಿಯಲ್ಲಿ ದುಃಖ; ಎಂದ ಮೇಲೆ ಈ ಮಾತೆಯ ವಿಚಾರ ಎಂತಿರಬೇಕೆಂಬುದನ್ನು ಯಾರಾದರೂ ತಿಳಿಯಬಹುದು. ಇಷ್ಟೊಂದು ವಿಚಾರವಂತೆಯಾಗಿದ್ದರೂ ಗಂಡನ ಮೇಲೆ ಇದ್ದ ಭಕ್ತಿಗೆ, ಆಕೆಯಲ್ಲಿದ್ದ ವಿನಯಕ್ಕೆ ಆಕೆಯ ಈ ಮಾತು ನೋಡಬಹುದು: "ನಿಮ್ಮ ಭಕ್ತಿಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಪಾದದಲ್ಲಿ ಅಡಗಿತ್ತು". ಅಲ್ಲದೆ ಆ ಶರಣೆಯ ಈ ಕೆಳಗಿನ ಕೆಲವು ನುಡಿಗಳನ್ನು ಅವಲೋಕಿಸಿರಿ:

> ೧ ತುಷರಸವಿದ್ದುದಕ್ಕಲ್ಲದೆ ಫಲ ಫಲಿಸಲಿಲ್ಲ;
> ಕ್ರಿಯಾಸದ್ಭಾವವಿದ್ದಲ್ಲದೆ ಸತ್ಪಥಭಾವಿಯಲ್ಲ.

೨ ಇಷ್ಟ (ಲಿಂಗ) ಚಿತ್ತದಲ್ಲಿ ಅಚ್ಚೊತ್ತಿದ ಮತ್ತೆ
ಆ ನಿಶ್ಚಯ ಉಭಯವ ತಿಳಿದಲ್ಲಿ
ಕಾಯಕ್ಕೆ ಕೈಲಾಸವೆಂಬುದಿಲ್ಲ; ಭಾವಕ್ಕೆ ಬಯಲೆಂಬುದಿಲ್ಲ.
೩ ಕುಟಿಲದಿಂದ ಘಟವ ಹೊರೆವಂಗೆ ಪ್ರಕಟ ಪೂಜೆಯಿಲ್ಲದೆ
ಅಘಟಿತಂಗುಂಟೆ ಅಖಿಳರ ಮೆಚ್ಚಿನ ಪೂಜೆ?
೪ ಲಿಂಗಭೋಗೋಪಭೋಗಿ ತಾನಾದಡೆ
ಉರಿಗೂಡಿಯೆ ಕರಗುವ ಕರ್ಪುರದ ಇರವಿನಂತೆ ಇರಬೇಕು.
೫ ಬೀಜದೊಳಗಣವೃಕ್ಷದ ಹಣ್ಣ ಅದನಾರು ಮೆಲಬಹುದು?
ಸಸಿಯೊಳಗಣಲತೆ ಪರ್ಣ ತಲೆದೋರದ
ನಸುಗಂಪಿನ ಕುಸುಮವ ಅದಾರು ಮುಡಿವರು?
ಇಂತೀ ಅಱುವಿನ ಅಱುವ ಕುಱುಹಿಟ್ಟು ಕೂಡುವನೆ ಲಿಂಗಾಂಗಿ?
೬ ನಿಮಿತ್ತ ಲಗ್ನ ಮಾಯಾ ಮಱುವಡಿ ಬೇಳುವೆ ಮೂಲಿಕೆಯಿಂದ
ಕಡೆಯೆ ನಿನ್ನ ಇರವು?
ನೀನೆ ಗತಿಯೆಂದು ಅರ್ಚಿಸುವವರಲ್ಲಿ, ನೀನಲ್ಲದೆ
ಪೆಱತೊಂದನಱಿಯದವರಲ್ಲಿ,
ನೀನಿರದಿದ್ದಡೆ ನಿನಗದೆ ವಿಶ್ವಾಸಘಾತಕ: ನಿನಗವೆ ಪಾತಕ!
೭ ಬಯಲ ಹೊಲಬಿನಲ್ಲಿ ಹುಟ್ಟಿದ ಬೆಳಗು
ಶಿಲೆ ಲೋಹ ಕಂಚುಗಳಲ್ಲಿ ಬೆಳಗಿನ ಕಳೆ ತೋರುವಂತೆ,
ಎನ್ನ ಕರತಳದಲ್ಲಿ ಸ್ವಯಂಭುವಪ್ಪ ಲಿಂಗವೇ,
ನಿನ್ನ ಕಳೆ ಎನ್ನ ಕಂಗಳಿಗೆ ಹೊಲಬಾಗಿ ಏಕೆ ತೋಱದು?
ಅದು ಎನ್ನಯ ಜಡವೋ ನಿನ್ನಯ ಪ್ರಕೃತಿಯೋ?
೮ ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಹೆನೆಂಬುದು ಕೈಕೂಲಿ
ಭಾಷೆಗೆ ತಪ್ಪಿ ಓಸರಿಸಿದ ಮತ್ತೆ ಅನಿಹಿತವ ಹೇಳಿದಲ್ಲಿ,
ಮತ್ತೆ ಘಾತಕತನದಿಂದ ಎಯ್ದಿಹೆನೆಂಬುದು ಭಕ್ತಿಗೆ ವಿಹಿತವಲ್ಲ.
೯ ಹೇಮದ ಮಾಟದ ಒಳಹೊಱಗಿನಂತೆ
ಮರ್ತ್ಯ ಕೈಲಾಸವೆಂಬ ಕಟ್ಟಳೆ ಇಲ್ಲ.
ಆತ್ಮ ನಿಶ್ಚಯವಾದಲ್ಲಿಯೇ ಕೈವಲ್ಯ.
೧೦ ಕಾಯವುಳ್ಳನ್ನಕ್ಕ ಕರ್ಮ ಬಿಡದು;
ಜೀವವುಳ್ಳನ್ನಕ್ಕ ಪ್ರಕೃತಿ ಕೆಡದು;
ಭಾವಿಸಿಹೆನೆಂಬನ್ನಕ್ಕ ವಿಶ್ವಾಸ ಬಿಡದು;
ಈ ಉಭಯವುಳ್ಳನ್ನಕ್ಕ ಮನ ನಿನ್ನ ನೆನೆಯ ಬಿಡದು.

ಹೀಗೆ ಹಲವಾರು ದೃಷ್ಟಾಂತಗಳನ್ನು, ಆ ಶರಣೆಯ ವಚನಗಳಿಂದ ಕೊಡಬಹುದು. ಆ ನುಡಿಗಳಲ್ಲಿ, ಆಕೆ ಭಾಷೆಯನ್ನು ಬಳಸಿದ ಪರಿ, ದೃಷ್ಟಾಂತಗಳನ್ನು ಕೊಡುವ ರೀತಿ, ಅವುಗಳ ಅರ್ಥ ಸ್ವಾರಸ್ಯ, ವಿಚಾರಗಳ ಪರಿಪೂರ್ಣತೆ.– ಇವುಗಳನ್ನು ನಾವು

ಮನಗಾಣದೆ ಇರೆವು. ಹೊರನಾಡಿನಿಂದ ಕನ್ನಡ ನಾಡಿಗೆ ಬಂದು ನೆಲೆಸಿದ ಈ ಸ್ತ್ರೀ, ಈ ಮಾತುಗಳನ್ನು ಬರೆದಿದ್ದಾಳೆಂದರೆ ಓದಿದ ಯಾರಿಗೆ ಸೋಜಿಗವಾಗದು? ಜೀವವಿರುವವರೆಗೆ ಕರ್ಮವು ಬಿಡದೆ ನಡೆಯಬೇಕು; ಅರ್ಪಿಸದೆ ಉಣ್ಣದಿರಬೇಕು ಎಂಬ ಮಾತನಾಡಿದ ಈ ಮಹಿಳೆ, ಪಂಚಭೂತಗಳಿಂದ ನಿರ್ಮಾಣವಾದ ತನುವು, ಅವುಗಳನ್ನು ಮೀರಿ, ಹೇಗೆ ನಡೆಯಬೇಕೆಂಬುದನ್ನೂ ಒಂದು ವಚನದಲ್ಲಿ ಅರ್ಥವತ್ತಾಗಿ ವಿವರಿಸಿದ್ದಾಳೆ (ವಚನ ೩೨). ಶಿವಶರಣರ ಧರ್ಮದಲ್ಲಿ, ನಡೆಯಂತೆ ನುಡಿಗೆ, ನುಡಿಯಂತೆ ನಡೆಗೆ ಅತ್ಯಂತ ಪ್ರಾಮುಖ್ಯತೆ ಇದೆ. ಈ ಮಾತನ್ನು ಓದುಗರ ಮನದಲ್ಲಿ ಬಿಂಬಿಸುವಂತೆ ಈ ಶರಣೆ ಹೇಳಿದ ರೀತಿಯನ್ನು ಪರಿಶೀಲಿಸಬಹುದು:

"ಊರ್ವಶಿ ಕರ್ಪುರವ ತಿಂದು, ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರಲ್ಲದೆ
ಹಂದಿ ಕರ್ಪುರವ ತಿಂದು ಎಲ್ಲರಿಗೆ ಮುತ್ತಕೊಟ್ಟಡೆ ಮೆಚ್ಚುವರೇ–
ಹುಡುಹುಡು ಎಂದಟ್ಟುವರಲ್ಲದೆ?
ನಡೆ–ನುಡಿ ಶುದ್ಧವುಳ್ಳವರು, ಪುರಾತನರ ವಚನವ ಓದಿದಡೆ,
ಅನುಭಾವ ಮಾಡಿದಡೆ, ಮೆಚ್ಚುವರಲ್ಲದೆ–
ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ,
ಅನುಭಾವ ಮಾಡಿದಡೆ, ಮೆಚ್ಚುವರೇ?"

ಈ ವಚನದ ಸಾದೃಶ್ಯ, ಮನಸ್ಸಿನ ಮೇಲೆ ಉಂಟು ಮಾಡುವ ಪರಿಣಾಮ ಅನುಭವಿಸಿದರೇ ತಿಳಿಯುತ್ತದೆ. 'ಅನುಭಾವವೆಂಬುದು ರಚ್ಚೆಯ ಮಾತಲ್ಲ' ಎಂಬುದನ್ನು, ವಚನವಾಙ್ಮಯ ಎಂತಹರು ಓದಬೇಕೆಂಬುದನ್ನು, ಈ ಶರಣೆ ಸ್ಪಷ್ಟ ನುಡಿಗಳಲ್ಲಿ ಇಲ್ಲಿ ತಿಳಿಸಿದ್ದಾಳೆ. ಹಂದಿ ಮುತ್ತ ಕೊಡುವ ಉಪಮೆಗಿಂತ ಬೇರೆ ಉಪಮೆ ಇನ್ನೊಂದು ಪರಿಣಾಮಕಾರಿಯಾಗದೆಂದೆನಿಸುತ್ತದೆ. ನಡೆ–ನುಡಿ ಶುದ್ಧೀಕರಣ ಹೊಂದುವುದೇ ಅನುಭಾವದ ಗುರಿ; ವಚನ ಸಾಹಿತ್ಯದ ಪರಮೋದ್ದೇಶ. ಇದರಂತೆ ಇನ್ನೊಂದು ದೃಷ್ಟಾಂತವನ್ನು ಪರಿಶೀಲಿಸುವಾ:

"ನೀರು, ನೆಲನಿಲ್ಲದೆ ಇರಬಹುದೇ?
ಬೀಜ, ನೆಲೆ ಇಲ್ಲದೆ ಹುಟ್ಟಬಹುದೇ?
ಜ್ಞಾನ, ಕ್ರಿಯೆಯಿಲ್ಲದೆ ಅರಿಯಬಹುದೇ?"

ಜ್ಞಾನವನ್ನು ತಿಳಿಯಲು ಕ್ರಿಯೆಯೇ ಆಧಾರ.ಕ್ರಿಯೆಯಿಲ್ಲದ ಜ್ಞಾನ,ಜ್ಞಾನವೇ ಅಲ್ಲ ಎಂಬ ತೀರ್ಮಾನ ವಚನಕಾರರದು.ಈ ತೀರ್ಮಾನಕ್ಕೆ ಅನುಗುಣವಾದ ಮಾತು ಈ ಶರಣೆಯದು. ಶಿವಶರಣರು ಹೆಣ್ಣು ಹೊನ್ನು ಮಣ್ಣುಗಳನ್ನು ನಿಂದಿಸಿದವರಲ್ಲ. ಅವು ಬದುಕಿಗೆ ಅಪಾಯಕಾರಿ ಎಂದು ತಿಳಿದವರಲ್ಲ ಎಂಬುದನ್ನು ಈ ಶರಣೆಯ ಇನ್ನೊಂದು ವಚನದಲ್ಲಿ ನೋಡಬಹುದು:

"ನಿನ್ನನರಿವುದಕ್ಕೆ ಹೆಣ್ಣು ಹೊನ್ನು ಮಣ್ಣೆಂಬ ಸನ್ನಿಯ ತೊರೆಯ
ಹಾಯಬೇಕು.
ಆ ಮೂರರನರಿತಲ್ಲಿ, ಮರೆದು ಹಿಡಿದಲ್ಲಿ, ಅರಿದು ಬಿಡುವಲ್ಲಿ,

ಆ ಉಭಯದ ಒಡಲು ಹಱಿಯಬೇಕು”

ಇಲ್ಲಿ ‘ಹನ್ನಿಯ ತೊಱೆ’ ಎಂಬ ಪದಪ್ರಯೋಗವನ್ನು ನಾವು ಗುರುತಿಸಬೇಕು. ಆ ತೊರೆ ದಾಟಿದರೆ ಮಾತ್ರ ಅರಿವು ಸಾಧ್ಯ. ಇಲ್ಲವಾದರೆ ಅದರಲ್ಲಿ ಮುಳುಗುವುದೇ ನಿಶ್ಚಿತ. ದೇವರನ್ನು ಕಾಣುವುದು, ಸಾಕ್ಷಾತ್ಕರಿಸಿಕೊಳ್ಳುವುದು ಹೇಗೆ? ಈ ಶರಣೆಯ ಮಾತಿನಲ್ಲಿ ಉತ್ತರ ನೋಡೋಣ:

“ಮಣ್ಣನಿತ್ತು ನಿಮ್ಮ ಕಂಡೆಹೆನೆಂದಡೆ ಜಗಭರಿತ ನೀನು;
ಹೊನ್ನನಿತ್ತು ನಿಮ್ಮ ಕಂಡೆಹೆನೆಂದಡೆ ಹಿರಣ್ಯಮೂರ್ತಿ ನೀನು;
ಹೆಣ್ಣನಿತ್ತು ನಿಮ್ಮ ಕಂಡೆಹೆನೆಂದಡೆ ತ್ರಿವಿಧ ಶಕ್ತಿಮೂರ್ತಿ ನೀನು;
ಮನವನಿತ್ತು ನಿಮ್ಮ ಕಂಡೆಹೆನೆಂದಡೆ ಮನೋಮೂರ್ತಿ ನೀನು;
ಎನಗೇನು ನಿನಗಿತ್ತು ಕಾಬ ಕಾಣಿಕೆ, ನೀನು ಸಿಕ್ಕುವುದಕ್ಕೆ?
ಕ್ರೀಯಲ್ಲಿ ನಿರತ, ಸದ್ಭಾವದಲ್ಲಿ ಶುದ್ಧ, ಹಿಡಿದುದ ಬಿಡದೆ, ಬಿಟ್ಟುದ ಹಿಡಿಯದೆ,
ನಿಶ್ಚಯವಾದ ನಿಜಜ್ಞಾನಿಗಳಲ್ಲಿ ಬೆಚ್ಚಂತಿದ್ದಡೆ ನೀನು ಅಲ್ಲಿ ತಪ್ಪದಿಪ್ಪೆ”

ಇದು ಸಾಕ್ಷಾತ್ಕಾರ, ಅರ್ಪಣೆಯ ಸಾಧನ. ಸತ್ಕ್ರಿಯೆ ಹಿಡಿದ ಆಚಾರ ಪಾಲನೆ, ಇವು ನಿಜಜ್ಞಾನಕ್ಕೂ ಸಾಧನೆ: ಯಾವಾಗಲೂ ಜ್ಞಾನಿಗಳ ಒಡನಾಟದಲ್ಲಿ ಶಿವಸಾಕ್ಷಾತ್ಕಾರವಿದೆಯೆಂದು ತಿಳಿಸಿದ್ದಾಳೆ. ಗಂಡನು ಹೇಗೇ ಇರಲಿ ಅವನನ್ನು ಅನುಸರಿಸಿ ಸತಿ ನಡೆವುದೇ ಮೇಲು ಎಂಬ ಭಾವನೆ ಅಂದು ಇದ್ದುದನ್ನು ನಮ್ಮ ಜನಪದ ಸಾಹಿತ್ಯದಲ್ಲಿ, ಶುದ್ಧ ಸಾಹಿತ್ಯದಲ್ಲಿ ನಾವು ಸಾಕಷ್ಟು ಕಾಣುತ್ತೇವೆ. ಆದರೆ ವಚನ ವಾಙ್ಮಯ ಇದಕ್ಕೆ ಹೊರತಾಗಿದ್ದಂತೆ ಗೋಚರಿಸುತ್ತದೆ. ಗಂಡನು ಅಹಂಕಾರಿಯಾದರೆ ಅವನನ್ನು ತಿದ್ದುವ ಹೊಣೆ ಸತಿಯ ಮೇಲೆ ಇದೆ. ಕುಟುಂಬವನ್ನು ಸನ್ಮಾರ್ಗದಲ್ಲಿ ನಡೆಸುವುದು ಗಂಡ—ಹೆಂಡರಿಬ್ಬರಿಗೂ ಸಂಬಂಧಿಸಿದ ವಿಷಯ. ಎಂದ ಮೇಲೆ, ಸ್ತ್ರೀ, ಅದರಲ್ಲಿ ತಾನು ಪಾಲುದಾರಳು ಎಂಬ ಅರಿವು ಈ ಶರಣೆಯರಿಗಿದೆ. ಮಹದೇವಿಯಮ್ಮ ಗಂಡನಿಗೆ ಆಡಿದ ಈ ಮಾತು ನೋಡಿರಿ:

“ಕಾಷ್ಠವ ಸುವರ್ಣವ ಮಾಡಿದೆನೆಂಬ ಘಾತುಕತನವೆ ನಿಮ್ಮ ಭಕ್ತಿ?
ಸಕಲದೇಶಕೋಶವಾದ ಭಂಡಾರ ಸವಾಲಕ್ಷ ಮುಂತಾದ ಸಂಬಂಧ,
ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ?
ನಿಮ್ಮ ಅಱಿವಿಂಗೆ ಇದಿರಿನಲ್ಲಿ ಕೂಡಿಹೆನೆಂಬ ಭಿನ್ನಭಾವವುಂಟೇ ಅಯ್ಯಾ?”

ಎಂದು ಕೇಳಿದ ಧೈರ್ಯ ಮೆಚ್ಚುವಂತಹದು. ಅಹಂಕಾರದಿಂದ ಭಕ್ತಿನಾಶವೆಂಬುದನ್ನು ಗಂಡನ ಗಮನಕ್ಕೆ ತಂದು ತಿದ್ದಿದ ಗರತಿ ಈ ಶರಣೆ.

ಇಷ್ಟಲಿಂಗ–ಪ್ರಾಣಲಿಂಗವೆಂಬ ಭೇದದ ಬಗೆಗೆ ಈ ತಾಯಿ ಹೇಳುವ ಮಾತನ್ನು ನೋಡಿ:

“ಘಟಕ್ಕೂ ಆತ್ಮಕ್ಕೂ ಉಭಯ ಲಿಂಗವುಂಟೇ?
ಕಾಯದ ಇಷ್ಟವೆಂದು, ಆತ್ಮನ ಅಱಿವೆಂದು,

ಎರಡೆನಿಸುವ ಲಿಂಗವೆಂಬುದೊಂದು ಕುಱುಹಿಲ್ಲ.
ಅದು ಏಕ ಏವ ಸ್ವರೂಪು; ಅದು ಚಿದ್ವನ ಸ್ವರೂಪು;
ಅದು ಘಟವುಠದ ಬಯಲಿನ ಗರ್ಭದಂತೆ;
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ ಲಿಂಗವು,
ಅತ್ಯತಿಷ್ಠದ್ದಶಾಂಗುಲನಾಗಿಪ್ಪನು" (ವಚನ ೫೯)

ಇದು ಕಾಯದ ಒಳಹೊರಗಿನ ಭೇದದಂತೆ ಎಂದು ತಿಳಿಸಿ, ವ್ಯವಹಾರಕ್ಕೆ ಮಾಡಿಕೊಂಡ ಈ ಭೇದ ನಿಜವಾದುದಲ್ಲ ಎಂದು ತಿಳಿಸಿದ್ದಾಳೆ. ಈ ಲಿಂಗವನ್ನು ಮೆಲ್ಲಮೆಲ್ಲನೆ ಕೂಡುವ ಕೂಟವನ್ನು ಹೀಗೆ ವಿವರಿಸಿದ್ದಾಳೆ:

"ಭಕ್ತಿಗೆ ಕ್ರೀ, ಕ್ರೀಗೆ ಶ್ರದ್ಧೆ ಶ್ರದ್ಧೆಗೆ ಪೂಜೆ,
ಪೂಜೆಗೆ ವಿಶ್ವಾಸ, ವಿಶ್ವಾಸಕ್ಕೆ ವಸ್ತು, ತನ್ಮಯವಾಗಿಪ್ಪುದು;
ಇದು ತುರೀಯ ಭಕ್ತಿಯ ಇರವು;
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ ಲಿಂಗದ
ಮೆಲ್ಲಮೆಲ್ಲನೆ ಕೂಡುವ ಕೂಟ" (ವಚನ ೫೭)

ಕ್ರಿಯೆ, ಶ್ರದ್ಧೆ, ಪೂಜೆ, ವಿಶ್ವಾಸ ವಸ್ತು (ಪರವಸ್ತು) ವಿನ ಮೂಲಕ ಲಿಂಗದಲ್ಲಿ ಐಕ್ಯನಾಗುವ ಸ್ಥಿತಿ ಪಡೆಯಲು ಸಾಧ್ಯ ಎಂಬುದನ್ನು ಈ ವಚನದಲ್ಲಿ ತಿಳಿಸಲಾಗಿದೆ. ಅದರಂತೆಯೇ ಕ್ರಿಯಾಲಿಂಗ,ಜ್ಞಾನಲಿಂಗ ಎಂಬ ಭೇದವೂ ಇಲ್ಲ. ಕುಂಭದ ಒಳಗೆಕಿಚ್ಚಿದ್ದರೆ ಹೊರಗೆ ತಟ್ಟುವುದಿಲ್ಲವೇ? ಈ ಗುಣದಂತೆ ಹೊರಗಣ ಕ್ರಿಯಾಪದ, ಒಳಗಣ ಜ್ಞಾನಸಂಭವ, ಉಭಯದ ತತ್ತಿಲ್ಲ; ಸಕ್ಕರೆಯ ರಾಶಿಗೆ ಕಿಸೆಯ ಕೆಲನುಂಟೇ–ಎಂಬ ಮತ್ತೊಂದು ದೃಷ್ಟಾಂತವನ್ನೂ ನೀಡಿದ್ದಾಳೆ ಈ ಭಾವದ ವಿವರಣೆಗೆ.

ಲಿಂಗಾಂಗ ಸಾಮರಸ್ಯದ ಪಥವನ್ನು ಹೀಗೆ ಮಹದೇವಮ್ಮ ವಿವರಿಸುತ್ತಾಳೆ:

"ಹೃತ್ಕಮಲ ಮಧ್ಯದಲ್ಲಿಪ್ಪ ಲಿಂಗವ ಸರ್ವಾಂಗದಲ್ಲಿ ವೇಧಿಸಿ,
ಪರಿಪೂರ್ಣವಪ್ಪ ಲಿಂಗವ ಅಂತರ್ಮುಖದಿಂದ ಬಾಹ್ಯಮುಖಕ್ಕೆ ತಂದು,
ಪಂಚಸ್ಥಾನದಲ್ಲಿಪ್ಪ ಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳಿಸಲಿಕ್ಕಾಗಿ
ಕಂಗಳು ತುಂಬಿ, ಬಾಹ್ಯದೃಷ್ಟಿಯಱತು, ಲಿಂಗದೃಷ್ಟಿ ಪರಿಪೂರ್ಣವಾಗಿ,
ದೃಕ್ಕಿಂಗೆ ತೋಱುವುದೆಲ್ಲವೂ ಲಿಂಗಮಯವಾಗಿ,
ಏನಮುಟ್ಟಿ ಹಿಡಿದಡೆಯೂ ಪುಷ್ಪಮಯವಾಗಿ,
ಜಿಹ್ವೆಯಲ್ಲಿತೋರುವ ಅಪ್ಪು ರಸ ಮುಂತಾದುವೆಲ್ಲವು ಅರ್ಪಿತಮಯವಾಗಿ,
ಇಂತಪ್ಪ ವ್ಯವಧಾನ ಸರ್ವಾಂಗ ಅಂಗಿಯ ಅವಧಾನ
ಇಷ್ಟದ ಅಱಿವೆಂದು ಉಭಯದ ಗುಟ್ಟುಕೆಟ್ಟಲ್ಲಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನೆಂಬುದಕ್ಕೆ
ಇದಿರೆಡೆಯಿಲ್ಲ" (ವ. ೬೧)

ದೃಷ್ಟಿಗೆ ಎಲ್ಲವೂ ಶಿವಮಯವಾಗಿ ಗೋಚರಿಸುವ, ಮುಟ್ಟಿದುದೆಲ್ಲ ಸುಗಂಧಮಯವಾಗುವ ಸ್ಥಿತಿಯೇ ಶರಣನ ಸ್ಥಿತಿ; ಶಿವಯೋಗಿಯ ಸ್ಥಿತಿ. ಇಂತಹ ಅನುಭಾವಿಗೆ

ಈಶ್ವರನು ಎಲ್ಲೆಡೆಗೂ ಗೋಚರಿಸುತ್ತಾನೆ. ಸತ್ಯವಿದ್ದಲ್ಲಿ, ವಿಶ್ವಾಸವಿದ್ದಲ್ಲಿ ತಪ್ಪದೇ ಶಿವನಿದ್ದಾನೆಂಬ ಭಾವವನ್ನು ಒಂದುವಚನ(ವ.೬೩) ದಲ್ಲಿ ವ್ಯಕ್ತಪಡಿಸಿದ್ದಾಳೆ–ಮಹಾದೇವಿಯಮ್ಮ. ಲಿಂಗಭೋಗೋಪಭೋಗಿಯ ಪರಿಯನ್ನು ಇಂತು ವಿವರಿಸಿದ್ದಾಳೆ:

"ಸಕಲ ಸುಖಂಗಳು ಲಿಂಗಕ್ಕೆಂದು ಕಲ್ಪಿಸಿ ಅಂಗೀಕರಿಸುವವನಿರವು,
ವಾರಿಶಿಲೆ ನೋಡನೋಡಲಿಕ್ಕೆ ನೀರಾಹ* ತೆಱನಂತೆ,
ಅಂಬರದ ವರ್ಣ ನಾನಾ ಚಿತ್ರದಲ್ಲಿ ಸಂಭ್ರಮಿಸಿ
ಕಂಗಳುಮುಚ್ಚಿ ತೆಱೆವುದಕ್ಕೆ ಮುನ್ನವೆ ಅವಱಿಂದ ಕಲೆ ತಿಳಿದಂತಿರಬೇಕು.
ಇದು ಲಿಂಗಭೋಗೋಪಭೋಗಿಯ ಸಂಗದ ಸುಖ;ನಿರಂಗದ ನಿಲ್ವು...."
(ವ.೬೬)

ನೋಡುತ್ತಿರುವಂತೆಯೇ ಭೋಗಿಸುವವನ ಭಾವವು ಲಿಂಗಭಾವದಲ್ಲಿ ಪರಿವರ್ತನೆ ಹೊಂದಬೇಕೆಂಬುದಕ್ಕೆ ಮಹದೇವಿಯಮ್ಮ ಇತ್ತ ಎರಡು ನೈಸರ್ಗಿಕಉಪಮೆಗಳು ಆ ಭಾವವನ್ನು ಮನದಟ್ಟು ಮಾಡುತ್ತವೆ. ಹೀಗೆ ಮಹದೇವಮ್ಮನು. ಸ್ತ್ರೀಯಾಗಿದ್ದರೂ ಪುರುಷ ಅನುಭಾವಿಗಳಿಗಿಂತ ಒಂದು ತೂಕ ಹೆಚ್ಚಾಗಿ ಕಣ್ಣಿಗೆ ಗೋಚರಿಸುತ್ತಾಳೆ ಆಕೆಯ ಮಾತುಗಳಲ್ಲಿ–ವಿಶೇಷವಾಗಿ ಉಪಮೆ, ರೂಪಕ, ದೃಷ್ಟಾಂತಗಳಲ್ಲಿ ಉತ್ತಮ ಕವಿಯ–ಸಾಹಿತಿಯ ಮನೋಧರ್ಮವನ್ನೂ, ಅನುಭಾವಿಯ ಪ್ರಸನ್ನ ಮನಸ್ಸನ್ನೂ, ಆಧ್ಯಾತ್ಮದ, ವಿಚಾರದ ಔನ್ನತ್ಯವನ್ನೂ ಕಾಣುತ್ತೇವೆ. ಬಸವಣ್ಣನ ಕಾಲದಲ್ಲಿ ಎಷ್ಟು ಎತ್ತರದ ಸ್ತ್ರೀಯರು ಇದ್ದರೆಂಬುದಕ್ಕೆ ಈಕೆಯೂ ಶ್ರೇಷ್ಠ ಉದಾಹರಣೆಯಾಗಿದ್ದಾಳೆ.

○

---

* ನೀರಾಗುವ



ಮಾತೋಶ್ರೀಯವರಿಂದ
ಕಾಲೇಜಿನ ನೂತನ ಕಟ್ಟಡದ ಭೂಮಿಪೂಜೆ



ಎಂ. ಜಿ. ವ್ಹಿ. ಸಿ. ಕಾಲೇಜಿನ ಮುಂಭಾಗ



ಕಾಲೇಜಿನ ಪಾರ್ಶ್ವನೋಟ

ಮುಕ್ತಾಯಕ್ಕ

ವಿ. ಎಸ್. ಕಂಬಿ

ಪ್ರವೇಶ :

ಹನ್ನೆರಡನೆಯ ಶತಮಾನವು ಜಾಗತಿಕ ಅನುಭಾವ ಚರಿತ್ರೆಯಲ್ಲಿ ಒಂದು ಅಪೂರ್ವ ಘಟ್ಟ. ವಿಶ್ವದ ಅನೇಕ ದೇಶಗಳಲ್ಲಿ ಈ ಶತಮಾನದಲ್ಲಿ ಸುಪ್ರಸಿದ್ಧ ಅನುಭಾವಿಗಳು ಆಗಿಹೋದ ಸಂಗತಿ ಸ್ಪಷ್ಟವಿದೆ. ಭಾರತ ದೇಶದ ಅನುಭಾವ ಚರಿತ್ರೆಯಲ್ಲಿ ಮುಕ್ತಾಯಕ್ಕಗಳ ಅನುಭಾವವು ಪ್ರಥಮ ಶ್ರೇಣಿಯದು. ಬಹುತೇಕ ಅನುಭಾವಿಗಳ ಜೀವನದ ಸಂಗತಿಗಳು ದೊರೆಯುವುದು ದುರ್ಲಭವಿರುವಂತೆ ಮುಕ್ತಾಯಕ್ಕಗಳ ಜೀವನದ ಬಗ್ಗೆಗೂ ಹೆಚ್ಚು ಸಂಗತಿಗಳು ದೊರೆಯುವುದಿಲ್ಲ. ಶಿವಶರಣರ ವಚನಗಳು, ಶೂನ್ಯ ಸಂಪಾದನೆಗಳು, ಶರಣರ ಚಾರಿತ್ರಿಕ ಕಾವ್ಯಗಳು ಶಿವಶರಣರ ಚಾರಿತ್ರಿಕಾಂಶಗಳ ಬಗ್ಗೆ ಆಕರ ಸಾಹಿತ್ಯ. ಪ್ರಸ್ತುತ ಲೇಖನ, ವಚನಗಳ ಕಟ್ಟುಗಳನ್ನು ಮತ್ತು ಶೂನ್ಯ ಸಂಪಾದನೆಗಳನ್ನು ಆಕರ ಸಾಹಿತ್ಯವನ್ನಾಗಿ ಬಳಸಿಕೊಂಡಿದೆ.

ಪ್ರತಿಪಾದನೆ :

ಚರಿತ್ರೆ : ಮುಕ್ತಾಯಕ್ಕಗಳ ಜನನಿ ಮತ್ತು ಜನಕರ ಬಗ್ಗೆ ಏನೂ ತಿಳಿದು ಬರುವುದಿಲ್ಲ. ಆದರೂ ಒಬ್ಬ ಸಹೋದರ ಇದ್ದ ಬಗ್ಗೆ ಗೊತ್ತಾಗುತ್ತದೆ. ಆತನೇ ಸುಪ್ರಸಿದ್ಧ ಮತ್ತು ಮತ್ತು ಪ್ರಥಮ ದರ್ಜೆಯ ಅನುಭಾವಿ ಅಜಗಣ್ಣ. ಮುಕ್ತಾಯಕ್ಕಗಳ ವಚನಗಳು ಲಭ್ಯವಿರುವಂತೆ ಅಜಗಣ್ಣನ ವಚನಗಳು ಲಭ್ಯವಾಗಿಲ್ಲ. ಮುಕ್ತಾಯಕ್ಕಗಳ ವಚನ ಮುದ್ರಿಕೆ 'ಅಜಗಣ್ಣ' ಎಂದಿದೆ.

ಮುಕ್ತಾಯಕ್ಕಗಳು ನಮ್ಮ ಕಣ್ಣಿಗೆ ಬಿದ್ದುದು ಅವಳ ಜೀವನದ ಒಂದು ಮಹತ್ವದ ಘಟನೆಯ ಸಂದರ್ಭದಲ್ಲಿ. ಅವಳಿದ್ದುದು ಮೊಸಳೆಗಲ್ಲು*ಎಂಬಲ್ಲಿ. ಪ್ರಭುದೇವರು ಅವಳನ್ನು ಸಂದರ್ಶಿಸಿ ಅಂಗೈಯಲ್ಲಿ ಅರಳಿದ್ದ ತಲೆಯನ್ನು ಹಿಡಿದುಕೊಂಡು ಕಂಗಳ ಮುತ್ತು ಪವಣಿಸುವ ಅಸಾಮಾನ್ಯ ಸಂಗತಿ ಘಟಿಸಿರುವುದನ್ನು ಕಂಡು ಬೆಸಗೊಂಡಾಗ ನಮ್ಮ ಕಣ್ಣಿಗೆ ಬೀಳುವುದು. ನಂತರ ಸುಪ್ರಸಿದ್ಧ ದಾರ್ಶನಿಕ ಚರ್ಚೆ ಅಥವಾ ಅನು

* ಸಾಹಿತ್ಯ ಚರಿತ್ರೆಯ ವಿದ್ವಾಂಸರು ಪುರಾಣ ಕಾವ್ಯಗಳಲ್ಲಿ ಬರುವ ಅವಳ ವಾಸಸ್ಥಳದ ಬಗ್ಗೆ ಇರುವ ಭಿನ್ನಾಭಿಪ್ರಾಯವನ್ನು ಸಂಪಾದಿಸಿ ಒಂದು ನಿರ್ಣಯಕ್ಕೆ ಬರಲು ಸಮರ್ಥರು. ಇತ್ತ ಅವರ ಗಮನವನ್ನಿಲ್ಲಿ ಸೆಳೆಯಬಯಸುವೆ.

ಭಾವ ಅವರೀರ್ವರಲ್ಲಿ ನಡೆದುದು ಎಲ್ಲರಿಗೂ ಗೊತ್ತು. ಇಲ್ಲಿಯೇ ಅವಳು ನಿರ್ವಯಲ ಸಮಾಧಿಯನ್ನು ಅನುಭವಿಸಿದ್ದು.

ಸಾಹಿತ್ಯಿಕ ಮೌಲ್ಯ :

ಅಲ್ಲಮ ಮತ್ತು ಮುಕ್ತಾಯಕ್ಕಗಳ ಸಂಭಾಷಣೆ ದಾರ್ಶನಿಕ ಕಾವ್ಯರೂಪದ್ದಾಗಿದೆ. ಶಬ್ದ ನಿಶ್ಶಬ್ದಗಳಿಗೆ ಇಲ್ಲಿ ಹೊಸ ಅರ್ಥವೂ ಬಂದಿದೆ. ಅಲೌಕಿಕ ಸೌಂದರ್ಯವನ್ನು ಈ ವಚನಗಳಲ್ಲಿ ಕಾಣಬಹುದು. ಲೋಗರ ರೀತಿಯಲ್ಲಿ ಉಪಚಾರದ ಮಾತುಗಳು ಕೌತುಕಪೂರ್ಣವಾಗಿವೆ. ಅವರೀರ್ವರ ನುಡಿಗಳು ಅತೀಂದ್ರಿಯ ಸೌಂದರ್ಯದ ವೈವಿಧ್ಯಮಯ ಸೌಂದರ್ಯರಶ್ಮಿಗಳನ್ನು ಸೂಸುತ್ತಿವೆ– ಮುತ್ತಿನ, ಮಾಣಿಕ್ಯದ, ಸ್ಫಟಿಕದ ರಶ್ಮಿಗಳಂತೆ. ಇವು ಅನುಭಾವ ಭಾನುವು ಸೂಸುವ ರಶ್ಮಿಗಳಂತೆ. ಇಂಥ ಸಂಭಾಷಣೆಗಳು ಶ್ರೇಷ್ಠತಮ ಕಾವ್ಯಾಂಶಗಳುಳ್ಳವು. "The Religious literature of the East is very Rich in this respect. There are unique passages from the Upanisads, for example, which are grand, elevating, and enjoyable irrespective of their claims to truth. For many they represent genuine expressions of mystical experience, for others they embody metaphysical speculations. For still others Poetry. Thousands of other religious texts have been written". ಎಂಬ ಮಾತುಗಳು ಮುಕ್ತಾಯಕ್ಕ ಹಾಗೂ ಇತರ ವಚನಕಾರರ ವಚನಸಾಹಿತ್ಯಕ್ಕೂ ಅನ್ವಯಿಸುವವು. ಮುಕ್ತಾಯಕ್ಕ ಮತ್ತು ಅಲ್ಲಮಪ್ರಭುಗಳ ಸಂಭಾಷಣೆಯಲ್ಲಿ ಶಬ್ದಪ್ರಯೋಗದ ಕೌತುಕವನ್ನು ಅಲೌಕಿಕರ ಸ್ವಾನುಭವದ ಆಶ್ಚರ್ಯ, ಆನಂದ, ದರ್ಶನಗಳನ್ನು ಕಾಣಬಹುದು.

ಸಂಭಾಷಣೆಯ ವಸ್ತು :

೧. ಪರಸ್ಪರ ಪರಿಚಯ :

ಲೌಕಿಕರು ಒಬ್ಬರನ್ನೊಬ್ಬರು ಸಂಧಿಸಿದಾಗ ಪರಿಚಯ ಮಾಡಿಕೊಡುವುದು ಎಲ್ಲರಿಗೂ ಸುಪರಿಚಿತ. ಇದೇ ರೀತಿಯಲ್ಲಿ ಮುಕ್ತಾಯಕ್ಕ ಹಾಗೂ ಅಲ್ಲಮಪ್ರಭುಗಳು ಸಂಧಿಸಿದಾಗ ಒಬ್ಬರಿಗೊಬ್ಬರು ಪರಿಚಯ ಮಾಡಿಕೊಡುವುದು ವಿಲಕ್ಷಣವಾಗಿದೆ; ಕುತೂಹಲಕರವಾಗಿದೆ. ಪ್ರಭುದೇವರು ಅನುಭಾವದ ರೀತಿಯಲ್ಲಿ ಕುರುಹನ್ನು ಕೇಳಿದಾಗ ಮುಕ್ತಾಯಕ್ಕಗಳು ಅದೇ ಅನುಭಾವ ಪರಿಭಾಷೆಯಲ್ಲಿ ಉತ್ತರಿಸುತ್ತಾಳೆ. ತಾನು ಗುರು ಪುತ್ರಿಯೆಂಬುದನ್ನು "ಒಬ್ಬರಿಗೂ ಹುಟ್ಟದೆ ಅಯೋನಿಯಲ್ಲ ಬಂದ" ಮಾತಿನಿಂದ ತಿಳಿಸುತ್ತಾಳೆ. 'ಅಯೋನಿ' ಎಂಬ ಮಾತನ್ನು ವೀರಶೈವ ಪರಿಭಾಷೆಯ ಅರ್ಥದಲ್ಲಿ ಅರಿತುಕೊಳ್ಳಬೇಕು. ಇಲ್ಲವಾದರೆ ಅಪಾರ್ಥವಾಗುತ್ತದೆ. ಅವಾಸ್ತವ ಅರ್ಥವಾಗುತ್ತದೆ. ಪ್ರಭುದೇವರೂ ಸಹ ಇಂಥದೇ ಮಾತಿನಲ್ಲಿ ಉತ್ತರಿಸಿ ಓದುಗರನ್ನು ದಂಗುಗೊಳಿಸುತ್ತಾರೆ. ಒಬ್ಬರು ಧಾರ್ಮಿಕ ಪರಿಭಾಷೆಯನ್ನು ಬಳಸಿದರೆ, ಇನ್ನೊಬ್ಬರು ದಾರ್ಶನಿಕ ಪರಿಭಾಷೆಯನ್ನು ಬಳಸುತ್ತಾರೆ. ತಮ್ಮ ಪರಿಚಯ ಹಾಗೂ ಸಂಬಂಧವನ್ನು ಬೆಳೆಸಲು ಇದು ಅವರೀರ್ವರೂ ತಮ್ಮನ್ನು ಪರಿಚಯಿಸಿಕೊಳ್ಳುವ ರೀತಿ. ಇದು ಅಲೌಕಿಕ.

೨. ಸುಗುಣದ ವಿಚಾರ :

ಮುಕ್ತಾಯಕ್ಕಗಳು ನಿರವಯ ಸ್ಥಿತಿಯ ಅಜಗಣ್ಣನನ್ನು ಲಕ್ಷಣಿಸುವಾಗ ಅವಳಲ್ಲಿರುವ ಸಗುಣಭಾವ ಪ್ರಾಧಾನ್ಯತೆಯಿಂದುಂಟಾದ ಶಂಕೆಯು ನುಸುಳುವುದನ್ನು ಅರಿತು "ಸಾಕಾರವಲ್ಲ ನಿರಾಕಾರ ಲಿಂಗೈಕ್ಯವು" ಎಂದು ಎಚ್ಚರಿಸುತ್ತಾರೆ. "ಆರೂಢಿಯ ಕೂಟದಲ್ಲಿ ನಾನಾರನೂ ಕಾಣೆ ಸಾಕ್ಷಿಯಾಗಿ" ಎಂಬ ತಮ್ಮ ಅನುಭಾವವನ್ನು ಪ್ರಮಾಣವಾಗಿ ತಿಳಿಸುತ್ತಾರೆ. ಆದರೂ ಮುಕ್ತಾಯಕ್ಕಗಳು ತಮ್ಮ ವಾದವನ್ನು ಪುನಃ ಮಂಡಿಸುತ್ತಾರೆ. ಶಿವತತ್ವವು ಗುರುವಾಗಿ ಬೋಧಿಸುವಲ್ಲಿ ಸಾಕಾರದ ಅಥವ ಸಗುಣದ ವಿಚಾರದ ಆರಂಭವಾಗುತ್ತದೆ. ಈ ಮಾತಿನಲ್ಲಿ ಮುಕ್ತಾಯಕ್ಕಗಳು ಕಾಣುವ ಸಗುಣದಲ್ಲಿ ಅಡಗಿರುವ ನಿರಾಕಾರವನ್ನು ಪ್ರಭುದೇವರು ತಾನು ಮತ್ತು ಗುರು ಬೇರೆಯಲ್ಲವೆಂಬ ವಿಚಾರದಿಂದ ಎತ್ತಿ ತೋರಿಸುತ್ತಾರೆ. ವೀರಶೈವದ ಮೂಲ ಸಿದ್ಧಾಂತದೆಡೆ "ಗುರುವಿಂಗೂ ಶಿಷ್ಯಂಗೂ ಆವುದು ದೂರ, ಆವುದು ಸರಿಯೆಂಬುದನಾರು ಬಲ್ಲರು? ಗುರುವೇ ಶಿಷ್ಯನಾದ ತನ್ನ ವಿನೋದಕ್ಕೆ; ಶಿಷ್ಯನೇ ಗುರುವಾದ ತನ್ನ ವಿನೋದಕ್ಕೆ." ಎಂಬ ಮಾತಿನಿಂದ,ಮುಕ್ತಾಯಕ್ಕಗಳಿಗೆ ಈ ದ್ವಂದ್ವವು ಕಾಣಲು ಕಾರಣವಾವುದೆಂಬುದನ್ನು ತಿಳಿಸಿದ್ದಾರೆ : "ಕರ್ಮವೆಂಬ ಕೌಟಿಲ್ಯ ಎಡೆವೊಕ್ಕಕಾರಣ". ಮುಕ್ತಾಯಕ್ಕಗಳ ಮಾತಿನಲ್ಲಿ ಸಾಕಾರದ ಸೂಕ್ಷ್ಮಾಕೃತಿ ಸೂಕ್ಷ್ಮಭಾವವು ನಿರಾಕಾರ ವಿಚಾರದಲ್ಲಿ ತಿಳಿಯದಂತೆ ಜಂಗಿಸಿರುವುದನ್ನು ಪ್ರಭುದೇವರು ತಮ್ಮ ತೀಕ್ಷ್ಣ ಪ್ರತಿಭಾರಶ್ಮಿಯಿಂದ ಭೇದಿಸಿ ತೋರಿಸಿದ್ದಾರೆ. "ಗುರು ತಾನಾದಡೂ ಗುರುವಿಡಿದಿರಬೇಕು" ಎಂಬ ಮಾತಿನಲ್ಲಿ ಇದು ಸಗುಣವಾದ ಒಂದು ಮುಖದ ಪರಿಚಯ. ಇದರ ಇನ್ನೊಂದು ಮುಖವನ್ನು ಮುಕ್ತಾಯಕ್ಕಗಳ ನಿರವಯಾವಸ್ಥೆಯ ವಿವರಣೆಯಲ್ಲಿ ಪ್ರಭು ತೋರಿಸುತ್ತಾರೆ. "ಗುಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರು ಉಂಟಲ್ಲದೆ ಸ್ವಯವೆಂದಲ್ಲಿ ನುಡಿಯಲಿಲ್ಲ" ಎಂದು ಹೇಳುವಲ್ಲಿ ಸಗುಣವು ಮತ್ತೆ ಬೇರೆ ರೂಪದಲ್ಲಿ ಪೈದಾಳುತ್ತದೆ. ಮುಕ್ತಾಯಕ್ಕಗಳಲ್ಲಿ : "ನುಡಿದು ಹೇಳುವನ್ನಕ್ಕರ ಭಿನ್ನವಲ್ಲವೇನು?" ಇಲ್ಲಿ ಸಂಪಾದನೆಯು 'ಶಬ್ದ' ಮತ್ತು 'ನಿಶ್ಯಬ್ದ'ಗಳ ವಿವೇಕದಲ್ಲಿ ಪರಿಣಮಿಸುತ್ತದೆ.

ಪ್ರಭು ಮತ್ತು ಮುಕ್ತಾಯಕ್ಕಗಳ ಸಂಭಾಷಣೆಯಲ್ಲಿ ಸಗುಣವು ವೈವಿಧ್ಯಮಯವಾಗಿ ರೂಪುಗೊಳ್ಳುವುದನ್ನೂ, ಅದನ್ನು ನಿರೂಪಗೊಳಿಸುವ ರೀತಿಯನ್ನೂ ನೋಡಬಹುದು.

೩. ಗುರು ಸಂಪಾದನೆ :

ಶಿವಶರಣರು ದೀಕ್ಷೆಯಿಂದ ಲಿಂಗದಲ್ಲಿ ಜನನ ಅಥವಾ ಕರಸ್ಥಲದಲ್ಲಿ ಜನನವೆಂದು ಹೇಳುವರು. ಇದು ವೀರಶೈವರ ಲಿಂಗೋದ್ಭವ ಕಲ್ಪನೆ. ಇದು ಮುಕ್ತಾಯಕ್ಕಗಳು ಹೇಳುವ ಅಯೋನಿಜತೆ. ಶಿವನು ಸಾಕಾರ ರೂಪದಲ್ಲಿ ಗುರುವಾಗಿ ಬಂದು ದೀಕ್ಷಾತ್ರಯಗಳಿಂದ ಶಿಷ್ಯನಿಗೆ ತಾನೇ ಲಿಂಗಸ್ವರೂಪನೆಂಬುದನ್ನು ಬೋಧಿಸುವನು. ಇದು ವಚನಶಾಸ್ತ್ರದ ಪ್ರತಿಪಾದನೆ. ಗುರುವಿನ ಅವಶ್ಯಕತೆಯನ್ನು ಮುಕ್ತಾಯಕ್ಕಗಳು ಸಂಭಾಷಣೆಯುದ್ದಕ್ಕೂ ಪ್ರತಿಪಾದಿಸಿದ್ದುಂಟು. ಸಗುಣ ಗುರು ಮತ್ತು ನಿರ್ಗುಣ

ಗುರುಗಳ ವಿಚಾರ ಸಂಪಾದನೆಯು ವಿವಿಧ ಹಂತಗಳಲ್ಲಿ ಸ್ಫುಟವಾಗಿ ವ್ಯಕ್ತವಾಗಿದೆ. ಅಜಗಣ್ಣಗಳು ಸಾಕಾರವಾಗಿ ನಿರಾಕಾರ ಬೋಧೆಗೈದರೆಂದು ಹೇಳುವಳು, ಮುಕ್ತಾಯಕ್ಕ. ಇದೇ ಶಬ್ದ ನಿಶ್ಶಬ್ದಗಳ ಸಂಬಂಧ. ಈ ವಿವೇಕ ಮುಕ್ತಾಯಕ್ಕಗಳ ಸಂಪಾದನೆಯಲ್ಲಿದೆ. ಇದು ಗುರುಸಂಪಾದನೆ.

೪. ನಿರ್ವಯಲ ಸಮಾಧಿ :

ಮುಕ್ತಾಯಕ್ಕಗಳ ಸಂಭಾಷಣೆಯು ಮೀಮಾಂಸೆಯಿಂದ ಅವಳಲ್ಲಿ ಸಗುಣದಿಂದ ನಿರ್ಗುಣದತ್ತ ಹರಿವ ಕಾತರತೆ ಕಂಡುಬರದಿರದು. ಆ ಹಸಿವು ಹದಗೊಂಡುದರಿಂದಲೇ ಸಾಕ್ಷಾತ್ಕೃತಿ ಸೂಕ್ಷ್ಮವಾದ, ಆಳವಾದ ಅನುಭಾವ ನಡೆದಿದೆ : "ಅಹುದಹುದು........ ಅಱಿವಡೆ ಮತಿಯಿಲ್ಲ, ನೆನೆವರೆ ಮನವಿಲ್ಲ" ಎಂದು ಒಪ್ಪಿಗೆಯನುಸುರಿದ ಮಾತು ಇದಕ್ಕೆ ಸಾಕ್ಷಿ. ಇದೇ ನಿರ್ವಯಲ ಸಮಾಧಿಯ ಸಿದ್ಧತೆ ಮತ್ತು ಸಿದ್ಧಿ. ಇಲ್ಲಿದೆ ಮುಕ್ತಾಯಕ್ಕಗಳ ನಿರ್ವಯಲ ಸಮಾಧಿ. ಇಲ್ಲಿ ಅನೇಕ ಮಾತುಗಳ ಸ್ಪಷ್ಟೀಕರಣದ ಅವಶ್ಯಕತೆಯಿದೆ. ಈ ಲೇಖನದಲ್ಲಿ ಇದಕ್ಕಿಂತಲೂ ಹೆಚ್ಚಿಗೆ ವಿವರಿಸುವದು ಇದರ ಪರಿಮಿತಿಗೆ ಮೀರಿದುದಾದುದರಿಂದ ಸೂತ್ರರೂಪದಲ್ಲಿ ಸೂಚಿಸಲಾಗಿದೆ.

ಸಮಾಲೋಚನೆ :

ಈ ಸಂಪಾದನೆಯ ಬಹುಮುಖ್ಯವಾದ ತಾತ್ತ್ವಿಕ ವಿಚಾರಗಳು ಶೂನ್ಯ ಸಂಪಾದನೆಯುದ್ದಕ್ಕೂ ಹರಡಿಕೊಂಡಿರುವುದು ಪ್ರಾಜ್ಞರ ಗಮನಕ್ಕೆ ಬಾರದಿರದು. ಶಬ್ದತತ್ತ್ವಜ್ಞಾನದ ನವೀನ ಮುಖವು ಇಲ್ಲಿ ಕಂಡುಬರುತ್ತದೆ. ಇದು ಕನ್ನಡಿಗರು ಭಾರತೀಯ ಶಬ್ದಪ್ರಮಾಣಕ್ಕೆ ನೀಡಿದ ಹೊಸ ಕಾಣಿಕೆ. ಮುಕ್ತಾಯಕ್ಕಗಳು ವೈಖರಿ ಶಬ್ದದ ವಿಚಾರವನ್ನು ಹಾಗೂ ಅದರ ರೂಪವನ್ನು ಕುರಿತು ಮಾತನಾಡುತ್ತಾರೆ. 'ತಾಳೋಷ್ಠಸಂಪುಟ'ದ ವಿಚಾರ ಈ ಸಂದರ್ಭದಲ್ಲಿ ಬಂದಿದೆ. ಪ್ರಾಚೀನ ಶೈವ ಮಹರ್ಷಿಗಳು ಅಥವಾ ಯೋಗಿಗಳು ಈ ಬಗ್ಗೆ ಮಾಡಿದ ವಿಚಾರದೊಡನೆ ಇದನ್ನು ಹೋಲಿಸಿ ನೋಡಬಹುದು. ಈ ಅನುಭಾವಿಗಳಿಂದ ವಾಗ್ಭೇದ ವಿಚಾರಕ್ಕೆ ಒಂದು ಹೊಸ ತಿರುವು ಉಂಟಾಗಿದೆ. ಶಬ್ದಭೇದಕ್ಕೆ ಪ್ರಭುದೇವರು ಕೊಟ್ಟ ವಿವರಣೆ, ಶಬ್ದತತ್ತ್ವಜ್ಞಾನ ಚರಿತ್ರಾರ್ಹ ಸಂಗತಿ.

ತಾನು ಮತ್ತು ಇದಿರುಗಳಲ್ಲಿ ಅನ್ಯತೆಯನರಿಯಲವಕಾಶವಿಲ್ಲವೆಂಬ ನಿಶ್ಚಯಾತ್ಮಕ ಅರಿವೇ ಪೂರ್ಣತತ್ತ್ವವೆಂಬುದೇ ಪರಾವಾಕ್. ಇಲ್ಲಿದೆ ಬ್ರಹ್ಮಾದ್ವೈತ ಮತ್ತು ಶಬ್ದಾದ್ವೈತಗಳ ಸಮನ್ವಯದ ಸಿದ್ಧಿ. ಇದು ಭಾರತೀಯ ದರ್ಶನ ಚರಿತ್ರೆಗೆ ಕನ್ನಡಿಗರು ನೀಡಿದ ಕೊಡುಗೆ. ಈ ಕೊಡುಗೆಯನ್ನು ಕನ್ನಡಿಗರಾರೂ ಗುರುತಿಸಿದಂತೆ ಕಾಣುವದಿಲ್ಲ. ಶಬ್ದತತ್ವಜ್ಞಾನದ ಚಾರಿತ್ರಿಕ ಬೆಳವಣಿಗೆಯು ಈ ಘಟ್ಟವನ್ನು ಮುಟ್ಟಿರುವುದನ್ನು ವಚನ ಸಾಹಿತ್ಯದ ಅಧ್ಯಯನಕಾರರು ಅಥವಾ ಮೀಮಾಂಸಕರು ತಿಳಿಸದಿದ್ದರೆ ಶಬ್ದತತ್ತ್ವಜ್ಞಾನಕ್ಕೂ ವಚನಸಾಹಿತ್ಯಕ್ಕೂ ಇರುವ ನಿಕಟ ಸಂಬಂಧವನ್ನು ಗುರುತಿಸುವ ಗುರುತರ ಹೊಣೆಯನ್ನು ತಪ್ಪಿಸಿಕೊಂಡಂತೆ ಹಾಗೂ ಮೀಮಾಂಸೆಗೆ ಯೋಗ್ಯ ತಾತ್ವಿಕ ತಳಹದಿಯನ್ನು ಒದಗಿಸದಿರುವಂತೆ ಆಗುತ್ತದೆ. ರಸಸಿದ್ಧಾಂತಕ್ಕೂ

ದರ್ಶನ ಸಿದ್ಧಾಂತಕ್ಕೂ ನಿಕಟವಾದ ಸಂಬಂಧವನ್ನು ಭಾರತೀಯ ಆಧುನಿಕ ಕಾವ್ಯ ಮೀಮಾಂಸಕರು ಗುರುತಿಸಿರುವದು ಅತ್ಯಂತ ಯೋಗ್ಯಸಂಗತಿಯೆಂಬುದು ಗಮನೀಯ. ಮುಕ್ತಾಯಕ್ಕಗಳ ಸಂಪಾದನೆಯಲ್ಲಿ ಈ ಕಾರ್ಯವು ಬಹು ಸ್ಫುಟವಾಗಿ ಸಶಾಸ್ತ್ರೀಯವಾಗಿ ನಡೆದಿದೆ.*

○

* 'ಬಸವಣ್ಣನವರ ವಚನಗಳ ಮೀಮಾಂಸೆ' ಕಾರ್ಯಗ್ರೈದ ಡಾ॥ ಕೆ. ಕೃಷ್ಣಮೂರ್ತಿಯವರು ಈ ಚಾರಿತ್ರಿಕ ಘಟನೆಯನ್ನು ಪ್ರಸ್ತಾಪಿಸಿದಂತಿಲ್ಲ. ಇದರಿಂದ ಶಬ್ದತತ್ತ್ವಜ್ಞಾನದ ಬೆಳವಣಿಗೆ ಅಥವಾ ವಿಕಾಸದ ಚಿತ್ರಣ ಚಿತ್ರಿಸುವಲ್ಲಿ ಒಂದು ಕಡೆಗೆ ಮರೆತಂತಾಗಿದೆ.

ಲಿಂಗಮ್ಮ

ಶಾಂತರಸ

(೧)

ಲಿಂಗಮ್ಮ ಹಡಪದ ಅಪ್ಪಣ್ಣನ ಹೆಂಡತಿ. ಹಡಪದ ಅಪ್ಪಣ್ಣ ಬಸವಣ್ಣನಿಗೆ ಆಪ್ತನಾದ ಶರಣ. ಹಡಪದ ಎಂದಿರುವುದರಿಂದ. ಆತ ಕ್ಷೌರಿಕನಿದ್ದನೆಂಬುದು ಸ್ಪಷ್ಟವಾಗುತ್ತದೆ. ಆದರೆ ಆತನ ವಚನಗಳಲ್ಲಿ ಆತನ ಕಾಯಕದ ವಿಷಯ ಉಕ್ತವಾಗಿಲ್ಲ. ಸಾಮಾನ್ಯವಾಗಿ ಶರಣರ ಹೆಸರಿನ ಜೊತೆಗೆ ಅವರ ಕಾಯಕದ ಹೆಸರು ಅಂಟಿಕೊಂಡು ಬರುವುದು ರೂಢಿ. ಹಾಗೆ ಅಪ್ಪಣ್ಣನ ಹೆಸರಿನೊಂದಿಗೆ ಬಂದ ಹಡಪದ ಎಂಬುದು ಆತ ಕ್ಷೌರಿಕ ವೃತ್ತಿ ಮಾಡುತ್ತಿದ್ದನೆಂದು ಸೂಚಿಸುತ್ತದೆ. ಅಪ್ಪಣ್ಣನದಾಗಲೀ ಅಥವಾ ಲಿಂಗಮ್ಮನದಾಗಲೀ ವಿವರವಾದ ಚರಿತ್ರೆ ತಿಳಿದುಬಂದಿಲ್ಲ. "ಹಡಪದಪ್ಪಣ್ಣ ಬಸವೇಶ್ವರನ ಏಕನಿಷ್ಠ ಸೇವಕನಾಗಿದ್ದನು. ಆತನ ಹೆಂಡತಿ ಲಿಂಗಮ್ಮ. ಆತನ ಗುರುವು ಚೆನ್ನಮಲ್ಲೇಶ್ವರ. ಹರಳಯ್ಯ ಮಧುವರಸರ ವಧೆಯಾದ ಬಳಿಕ ಬಸವೇಶ್ವರನು ಕೂಡಲಸಂಗಮಕ್ಕೆ ಬಂದನು. ಅವನ ಕೂಡ ಹಡಪದಪ್ಪಣ್ಣನೂ ಇದ್ದನು. ಬಸವೇಶ್ವರನು ಕೂಡಲಸಂಗಮಕ್ಕೆ ಬಂದ ಬಳಿಕ ಅವನು ತನ್ನ ಹೆಂಡತಿ ನೀಲಾಂಬಿಕೆಯನ್ನು ಕರೆತರಲು ಕಲ್ಯಾಣಕ್ಕೆ ಅವನನ್ನು ಕಳಿಸಿದನು. ಅವನು ಅವಳನ್ನು ಕರೆದುಕೊಂಡು ಕೃಷ್ಣಾನದಿಯ ದಂಡೆಯ ಮೇಲಿರುವ ತಂಗಡಿಗಿ ಈ ಗ್ರಾಮಕ್ಕೆ ಬಂದನು. ಅಲ್ಲಿಗೆ ಬರುವಷ್ಟರಲ್ಲಿ ಬಸವೇಶ್ವರನು ಲಿಂಗದಲ್ಲಿ ಐಕ್ಯನಾಗಿದ್ದನು. ಈ ಸುದ್ದಿಯು ತಲ್ಪಿದ ಕೂಡಲೇ ನೀಲಾಂಬಿಕೆಯು ಮತ್ತು ಹಡಪದಪ್ಪಣ್ಣನು ತಮ್ಮ ತಮ್ಮ ಲಿಂಗದಲ್ಲಿ ಬಯಲಾದರು. ತಂಗಡಿಗಿ ಗ್ರಾಮದ ಬದಿಯಲ್ಲಿ ನದೀತೀರದಲ್ಲಿ ಈ ಉಭಯತರ ಸಮಾಧಿಗಳಿವೆ. ಅವುಗಳ ಮೇಲೆ ಚಿಕ್ಕದೇವಾಲಯಗಳನ್ನು ಭಕ್ತರು ಕಟ್ಟಿದ್ದಾರೆ. ಪೂರ್ವ ಕಡೆಯ ದೇವಾಲಯವು ನೀಲಾಂಬಿಕೆಯದೂ ಪಶ್ಚಿಮ ಕಡೆಯದು ಹಡಪದಪ್ಪಣ್ಣನದೂ ಇವೆ."[1] ಇದಿಷ್ಟು ಹಳಕಟ್ಟಿಯವರು ಅಪ್ಪಣ್ಣನನ್ನು ಕುರಿತು ಬರೆದ ಚರಿತ್ರೆ. ವೀರಶೈವಾಮೃತ ಮಹಾಪುರಾಣ, ಗುರುರಾಜ ಚಾರಿತ್ರ ಮತ್ತು ಶರಣಲೀಲಾಮೃತ ಹಳಕಟ್ಟಿಯವರು ಹೇಳಿದ ಚರಿತ್ರೆಗೆ ಆಧಾರಗ್ರಂಥಗಳು.

1. ಡಾ|| ಪಿ. ಜಿ. ಹಳಕಟ್ಟಿ, 220 ಅಮರಗಣಾಧೀಶ್ವರರ ಚರಿತ್ರೆಗಳು, ಪುಟ 91-92.

ಅಪ್ಪಣ್ಣನನ್ನು ಕುರಿತು ಒಂದೆರಡು ಪವಾಡಗಳೂ ಈ ಕಾವ್ಯದಲ್ಲಿ ದೊರಕುತ್ತವೆ. ಆದರೆ ಅವುಗಳಿಂದ ಆತನ ಚರಿತ್ರರಚನೆಗೆ ಯಾವ ಸಹಾಯವೂ ಆಗುವುದಿಲ್ಲ.

ಹಡಪದಪ್ಪಣ್ಣ ಬಸವಣ್ಣನ ಜೊತೆಗೆ ಕೂಡಲಸಂಗಮಕ್ಕೆಹೋದಾಗ ಲಿಂಗಮ್ಮ ಎಲ್ಲಿದ್ದಳು? ಎಲ್ಲಿ ಐಕ್ಯಳಾದಳು? ಕಲ್ಯಾಣಕ್ರಾಂತಿಯ ಅನಂತರ ಬದುಕಿದ್ದಳೆ? ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳಿಲ್ಲ. ಅಲ್ಲದೆ ಆಕೆಯ ಜೀವನದ ಇನ್ನಿತರ ವಿವರಗಳೂ ತಿಳಿದಿಲ್ಲ. "ಹಡಪದಪ್ಪಣ್ಣನ ಹೆಂಡತಿಯು ಲಿಂಗಮ್ಮನು. ಆಕೆಯ ಗುರುವು ಚೆನ್ನಮಲ್ಲೇಶ್ವರನು. ಆದ್ದರಿಂದ ಸತಿಪತಿಗಳ ಗುರುವು ಒಬ್ಬನೇ ಇದ್ದಂತಾಯಿತು. ಈತನನ್ನು ಕುರಿತು ಲಿಂಗಮ್ಮನು ಅನೇಕ ಸಲ ತನ್ನ ವಚನಗಳಲ್ಲಿ ಉಲ್ಲೇಖಿಸಿದ್ದಾಳೆ. ಅವಳ ವಚನಗಳ ಮುದ್ರಿಕೆಯು "ಅಪ್ಪಣ್ಣಪ್ರಿಯ ಚೆನ್ನಬಸವೇಶ್ವರಾ" ಎಂದಿದೆ. ಅವಳು ತನ್ನ ಗಂಡನಾದ ಹಡಪದಪ್ಪಣ್ಣನು ತನಗೆ ಸಿಂಹಾಸನ ಅಂದರೆ ಆಧಾರನಾಗಿದ್ದಾನೆ. ಗುರುವಾದ ಚೆನ್ನಮಲ್ಲೇಶನು ಮನಸ್ಥಲಕ್ಕೆ ಪ್ರಾಣವಾಗಿದ್ದಾನೆ.2 ಮತ್ತು ತಾನು "ಚೆನ್ನಬಸವನ ಕರುಣದ ಶಿಶು ಎಂದು ಹೇಳಿಕೊಂಡಿದ್ದಾಳೆ" ಇದಿಷ್ಟೇ ಆಕೆಯ ಬಗ್ಗೆ ಉಪಲಬ್ಧವಿದ್ದ ಚರಿತ್ರೆ.

ಲಿಂಗಮ್ಮನ ವಚನಗಳಿಂದ ಆಕೆಯ ಲೌಕಿಕ ಮತ್ತು ಆಧ್ಯಾತ್ಮಿಕ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ಸಂಗ್ರಹಿಸಬಹುದು.

ಲಿಂಗಮ್ಮ ಹಡಪದಪ್ಪಣ್ಣನ ಹೆಂಡತಿಯೆಂಬುದಕ್ಕೆ ಆಕೆಯ ವಚನಗಳೇ ಪುರಾವೆಯನ್ನೊದಗಿಸುತ್ತವೆ : "ಅಪ್ಪಣ್ಣಪ್ರಿಯ ಚೆನ್ನಬಸವಣ್ಣ" ಎಂಬ ಆಕೆಯ ಅಂಕಿತದಲ್ಲಿ ಆಕೆಯ ಗಂಡನ ಹೆಸರು ಸೇರಿದೆ. ಗಂಡಂದಿರ ಮತ್ತು ಪ್ರಿಯರಾದವರ ಹೆಸರುಗಳನ್ನು ಅಂಕಿತದಲ್ಲಿ ಸೇರಿಸಿಕೊಳ್ಳುವುದು ಅನೇಕ ಶರಣ ಶರಣೆಯರಲ್ಲಿ ಕಂಡುಬರುತ್ತದೆ. ಕೆಲವು ಕಡೆ ಗೌರವ ಸೂಚಿಸುವುದಕ್ಕೆ ಗುರುವಿನ ಹೆಸರನ್ನೂ ತನಗಿಂತ ಹಿರಿಯರ ಹೆಸರನ್ನೂ ಅಂಕಿತದಲ್ಲಿ ಸೇರಿಸಿಕೊಳ್ಳುವ ರೂಢಿ ವಚನಕಾರರಲ್ಲಿದೆ.

"ಮಾರಯ್ಯಪ್ರಿಯ ಅಮರೇಶ್ವರಲಿಂಗ" ಇದು ಅಯ್ದಕ್ಕಿ ಲಕ್ಕಮ್ಮನ ವಚನ. ಮಾರಯ್ಯ ಆಕೆಯ ಗಂಡ. "ಮುಸಣಯ್ಯಪ್ರಿಯ ಗಜೇಶ್ವರಾ" ಗಜೇಶ ಮುಸಣಯ್ಯಗಳ ಹೆಂಡತಿಯ ಅಂಕಿತ. "ಉರಿಲಿಂಗ ಪೆದ್ದಿಗಳರಸ" ಇದು ಉರಿಲಿಂಗಪೆದ್ದಿಗಳ ಹೆಂಡತಿ ಕಾಳವ್ವೆಯ ಅಂಕಿತ. "ಅಮುಗೇಶ್ವರಾ" ಎಂಬುದು ಅಮುಗೆ ರಾಯಮ್ಮನ ಅಂಕಿತ. ರಾಯಮ್ಮ ಅಮುಗಿ ದೇವಯ್ಯಗಳ ಹೆಂಡತಿ. ಆಕೆ ತನ್ನ ಗಂಡನ ಹೆಸರನ್ನೇ ತನ್ನ ಅಂಕಿತ ಮಾಡಿಕೊಂಡಿದ್ದಾಳೆ. ಹೀಗೆಯೇ ಲಿಂಗಮ್ಮನ ವಚನಾಂಕಿತದಲ್ಲಿರುವ "ಅಪ್ಪಣ್ಣ" ಆಕೆಯ ಗಂಡನ ಹೆಸರೇ.

"ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ" ಎಂಬುದು ಹಡಪದಪ್ಪಣ್ಣನ ಅಂಕಿತ. ಅಪ್ಪಣ್ಣನಿಗೆ ಬಸವಣ್ಣನೆಂದರೆ ಅಪಾರ ಪ್ರೀತಿ, ಗೌರವ. ಆದುದರಿಂದ ಆತನ ಹೆಸರನ್ನು ತನ್ನ ಅಂಕಿತದಲ್ಲಿ ಸೇರಿಸಿಕೊಂಡಿದ್ದಾನೆ.3 ಚೆನ್ನಬಸವಣ್ಣನೆಂದರೆ

2. ಡಾ|| ಪಿ. ಜಿ. ಹಳಕಟ್ಟಿ : ಶಿವಶರಣೆಯರ ಚರಿತ್ರೆಗಳು ಪುಟ 155.
3. ಅಪ್ಪಣ್ಣನಂತೆ ಅನೇಕರು ಬಸವಣ್ಣನ ಹೆಸರನ್ನು ತಮ್ಮ ಅಂಕಿತದಲ್ಲಿ ಸೇರಿಸಿಕೊಂಡಿದ್ದಾರೆ.

ಲಿಂಗಮ್ಮ–ಅಪ್ಪಣ್ಣ ಇಬ್ಬರಿಗೂ ಪ್ರೀತಿ. ಆದುದರಿಂದ ಲಿಂಗಮ್ಮ ಚೆನ್ನಬಸವಣ್ಣನ ಹೆಸರನ್ನೇ ಅಂಕಿತ ಮಾಡಿಕೊಂಡರೆ, ಅಪ್ಪಣ್ಣ ಚೆನ್ನಬಸವಣ್ಣನವರ ಅಂಕಿತವನ್ನೇ– ಕೂಡಲಚೆನ್ನಸಂಗಮದೇವಾ ತನ್ನ ಅಂಕಿತವನ್ನಾಗಿ ಮಾಡಿಕೊಂಡಿದ್ದಾನೆ. ಬಸವ ಪ್ರಿಯ ಎಂದು ಅಪ್ಪಣ್ಣನ ಅಂಕಿತದಲ್ಲಿರುವುದರಿಂದ ಅವರಿಬ್ಬರ ಅಪ್ಪಣ್ಣ–ಚೆನ್ನಬಸ ವಣ್ಣ–ಅಂಕಿತಗಳು ಬೇರೆ ಬೇರೆ ಎಂದು ಗುರುತಿಸಲು ಸಾಧ್ಯವಾಗಿದೆ–ಹೀಗೆ ಬಸವ ಮತ್ತು ಚೆನ್ನಬಸವ ಇವರಿಬ್ಬರು ಅವರಿಬ್ಬರಿಗೆ ಪ್ರಿಯರಾದವರು.

ಲಿಂಗಮ್ಮ ತನ್ನ ಒಂದು ವಚನದಲ್ಲಿ "ಹಡಪದಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗ ವಾಗಿ ಬಂದು ನೆಲೆಗೊಂಡನು".4 ಎಂದು ಹೇಳಿಕೊಂಡಿದ್ದಾಳೆ. ಲಿಂಗವೆಂದರೆ 'ಪತಿ' ಎಂದೇ ಶರಣ–ಶರಣೆಯರ ಹೇಳಿಕೆ; ನಂಬುಗೆ. ಶರಣ (ಶರಣೆ) ಸತಿ ಲಿಂಗಪತಿ ಎಂಬ ಮಾತು ಪ್ರಸಿದ್ಧವಾದುದು. ಈ ಲಿಂಗಸ್ವರೂಪನಾದವನು ಗಂಡನಾಗಿರಲೇಬೇಕು. ಹಡಪದಪ್ಪಣ್ಣನೇ ಕರಸ್ಥಲಕ್ಕೆ ಲಿಂಗವಾಗಿ ಬಂದ ಎಂದರೆ ಆತ–ಅಪ್ಪಣ್ಣ–ಆಕೆಯ ಗಂಡನೇ. ಅಪ್ಪಣ್ಣ (ಗಂಡ) ಮತ್ತು ಕರಸ್ಥಲದ ಲಿಂಗ ಇವರಿಬ್ಬರಲ್ಲಿ ಅಭೇದ ಲಿಂಗಮ್ಮನಿಗೆ. ಈ ವಿವೇಚನೆಯಿಂದ ಹಡಪದಪ್ಪಣ್ಣ ಲಿಂಗಮ್ಮನ ಗಂಡನೆಂಬುದು ಖಚಿತವಾಗುತ್ತದೆ.

ಚೆನ್ನಮಲ್ಲೇಶ್ವರ ಲಿಂಗಮ್ಮನ ಗುರು. ಅಪ್ಪಣ್ಣನಿಗೂ ಈತನೇ ಗುರುವೆಂದು ತಿಳಿದುಬರುತ್ತದೆ. ಲಿಂಗಮ್ಮ ತನ್ನ ವಚನಗಳಲ್ಲಿ ಹದಿನೈದು ಸಲ ತನ್ನ ಗುರುವನ್ನು ಸ್ಮರಿಸುತ್ತಾಳೆ. "ಬಚ್ಚಬರಿಯ ಬೆಳಗಿನೊಳಗೋಲಾಡಿ ನಿಮ್ಮ ಪಾದದೊಳಗೆ ನಿಜ ಮುಕ್ತಳಾದೆನಯ್ಯಾ ಚೆನ್ನಮಲ್ಲೇಶ್ವರಾ, ಅಪ್ಪಣ್ಣಪ್ರಿಯಚೆನ್ನಬಸವಣ್ಣಾ"5 ಎಂಬ ಮಾತು ಚೆನ್ನಮಲ್ಲೇಶ್ವರ ಆಕೆಯ ಗುರುವೆಂಬುದು ಸ್ಪಷ್ಟಪಡಿಸುತ್ತದೆ. "ತಾನು ತಾನಾಗಿಪ್ಪ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯಾ, ಚೆನ್ನಮಲ್ಲೇಶ್ವರನ ಶಿಶುವಾದ ಕಾರಣದಿಂದ...."6 ಎಂಬ ಮಾತಂತೂ ಆತ ಆಕೆಯ ಗುರುವೆಂಬುದನ್ನು ನಿಶ್ಚಿತಗೊಳಿಸುತ್ತದೆ.

ಕೆಳಗಿನ ಆಕೆಯ ವಚನ ಆಕೆಯ ಕಾಲನಿರ್ಣಯಕ್ಕೆ ಅನುಕೂಲವಾಗಿದೆ.

"ಬಸವೇಶ್ವರ, ಚನ್ನಬಸವೇಶ್ವರ, ಮಡಿವಾಳಯ್ಯ, ಅಲ್ಲಮಪ್ರಭು,
ಚೆನ್ನಮಲ್ಲೇಶ್ವರ, ಹಡಪದಪ್ಪಣ್ಣ–
ತಮ್ಮೆಲ್ಲರ ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳೆಂದು
ಹೊತ್ತುಹೊತ್ತಿಗೆ ಎಚ್ಚಜವ ಪಾಲಿಸಿ ರಕ್ಷಣೆಯ ಮಾಡಿದ ಕಾರಣದಿಂದ,

---

1) ಬಸವಣ್ಣಪ್ರಿಯ ನಾಗೇಶ್ವರಲಿಂಗ : ಬೊಕ್ಕಸದ ಸಂಗಣ್ಣ

2) ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗ : ಜಾತಿ ಕಾಯಕದ ಬಸವಣ್ಣ.

3) ಬಸವಣ್ಣಪ್ರಿಯ ಚೆನ್ನಸಂಗಯ್ಯ : ಅಕ್ಕನಾಗಮ್ಮ

4. ಡಾ॥ ಆರ್. ಸಿ. ಹಿರೇಮಠ : ಶಿವಶರಣೆಯರ ವಚನಗಳು (ಸಮಗ್ರ ಸಂಪುಟ :) ಲಿಂಗಮ್ಮನ ಜೋಢಿಯ ವಚನಗಳು ಪುಟ 257, ವಚನ 68.

5. ಅದೇ ಪುಟ 241 ವಚನ 32.

6. ಅದೇ ಪುಟ 257 ವಚನ 68.

ತಮ್ಮೆಲ್ಲರ ಶ್ರೀಪಾದದಲ್ಲಿಯೆ ನಿಜಮುಕ್ತಳಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ"[7]

ಬಸವ, ಚೆನ್ನಬಸವ, ಮಡಿವಾಳಯ್ಯ, ಅಲ್ಲಮಪ್ರಭು ಇವರ ಸಮಕಾಲೀನಳು ಲಿಂಗಮ್ಮ; ಅವರಿಂದ ಅನುಗ್ರಹ ಪಡೆದು ಅನುಭಾವ ಗಳಿಸಿದ್ದನ್ನು, ಹೊತ್ತುಹೊತ್ತಿಗೆ ಸಾಧನೆಯಲ್ಲಿ ಅವರಿಂದಾದ ಜ್ಞಾನದ ನೆರವನ್ನು ಆಕೆ ಮೇಲಿನ ವಚನದಲ್ಲಿ ಹೇಳಿ ಕೊಂಡಿದ್ದಾಳೆ. ಈ ವಚನದಿಂದ ಚೆನ್ನಮಲ್ಲೇಶ್ವರನೂ ಒಬ್ಬ ಶರಣ. ಬಸವ, ಚೆನ್ನ ಬಸವರಷ್ಟೇ ಎತ್ತರದ ಮಟ್ಟ ಆತನದು ಇತ್ತು. ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಬಸವ ಚೆನ್ನಬಸವರ ಹೆಸರಿನೊಂದಿಗೆ ಹಡಪದಪ್ಪಣ್ಣನ ಹೆಸರೂ ಬರುವುದರಿಂದ ಲಿಂಗಮ್ಮನಿಗೆ ಗಂಡನಿಂದ ಅಧ್ಯಾತ್ಮಸಾಧನೆಯಲ್ಲಿ, ಅನುಭಾವದ ಗಳಿಕೆಯಲ್ಲಿ ನೆರವು ದೊರಕಿದೆಯೆಂದು ಗೊತ್ತಾಗುವುದು. ಅಲ್ಲದೆ ಒಂದೇ ದ ಆ ಸತಿಪತಿಗಳ ಭಕ್ತಿ ಶಿವ ನಿಗೆ ಹಿತವಾಗಿತ್ತು. ಮೂರುಕಡೆ ಲಿಂಗಮ್ಮ ತನ್ನ ಪತಿಯನ್ನು ವಚನಗಳಲ್ಲಿ ನೆನೆದಿ ದ್ದಾಳೆ: ಪುಷ್ಪವನ್ನಪ್ಪಿದ ಪರಿಮಳದಂತಿದ್ದ ಆತನ ಹೆಸರನ್ನು ಅಂಕಿತದಲ್ಲಿ ಮೇಳವಿಸಿ ಕೊಂಡಿದ್ದಾಳೆ.

ಶರಣರಲ್ಲಿ ಒಂದು ವಿನೂತನ ವೈಶಿಷ್ಟ್ಯವೆಂದರೆ ಸತಿಪತಿಗಳಿಬ್ಬರೂ ಅನುಭವಿ ಗಳಾಗಿರುವುದು; ಇಬ್ಬರೂ ಒಂದೇ ಧ್ಯೇಯಕ್ಕಾಗಿ ಹೋರಾಡುವುದು; ಇಬ್ಬರೂ ವಚನ ಕಾರರಾಗಿರುವುದು. ಸತಿಪತಿಗಳಿಬ್ಬರು ಆಧ್ಯಾತ್ಮ ಸಾಧನೆಯಲ್ಲಿದ್ದವರು ಲೋಕದ ಇತಿ ಹಾಸದಲ್ಲಿ ಅಲ್ಲೊಂದು ಇಲ್ಲೊಂದು ಉದಾಹರಣೆ ದೊರಕಬಹುದು.ಆದರೆ ನೂರುನೂರು ಸಂಖ್ಯೆಯಲ್ಲಿ ಹೊಸ ಮೌಲ್ಯಗಳನ್ನು ಜನಜೀವನಕ್ಕಿಳಿಸುವ ಒಂದು ಮಹಾಮಣಿಹದಲ್ಲಿ ಗಂಡ–ಹೆಂಡಿರು ಒಂದಾಗಿ ದುಡಿದ ಉದಾಹರಣೆ ಕಲ್ಯಾಣ ಶರಣರದು ಒಂದೇ. ಇದೇನೂ ಅಭಿಮಾನದ ಮಾತಲ್ಲ. ಶರಣರ ಜೀವನಗಳೇ ಸಾಕ್ಷಿಯಾಗಿವೆ. ಅವರ ಮಹಾ ಆಂದೋಲನದಲ್ಲಿ ಶರಣೆಯರ ಪಾತ್ರ ಹಿರಿದು; ಎಲ್ಲಿಯೂ ಕಾಣದ ವೈಚಾರಿಕ, ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯ ಈ ಶರಣೆಯರಲ್ಲಿ ಕಂಡುಬರುತ್ತದೆ.

ಲಿಂಗಮ್ಮನ ವಚನಗಳಲ್ಲಿ ಆಕೆಯ ಲೌಕಿಕ ಜೀವನದ ಅಸ್ಪಷ್ಟ ಚಿತ್ರವನ್ನು ಕಾಣಬಹುದು—

"ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ, ಸತ್ಯಶರಣರ ಪಾದವಿಡಿದೆ
ಆ ಶರಣರ ಪಾದವಿಡಿದು ಗುರುವ ಕಂಡೆ, ಲಿಂಗವ ಕಂಡೆ........"[8]
"ಅಯ್ಯಾ ನಾ ಮರ್ತ್ಯದಲ್ಲಿ ಹುಟ್ಟಿ ಕಷ್ಟಸಂಸಾರಿ ಎನಿಸಿಕೊಂಡೆ
ಕತ್ತಲೆಯಲ್ಲಿ ಮುಳುಗಿ ಕರ್ಮಕ್ಕೆ ಗುರಿಯಾಗುತ್ತಿದ್ದಡೆ
ಹೆತ್ತತಾಯಿ ಎಂಬ ಗುರುಸ್ವಾಮಿ ಎನ್ನ ಕೊರಳಿಗೆ ಗಂಡನೆಂಬ ಲಿಂಗವ
ಕಟ್ಟಿದನು........"[9]

---

7. ಅದೇ ಪುಟ 275 ವಚನ 110
8. ಅದೇ ಪುಟ 254 ವಚನ 64
9. ಅದೇ ಪುಟ 256 ವಚನ 67

"ಅಯ್ಯಾ ನರಕದೊಳು ಹುಟ್ಟಿ ಮಾಯೆಯೊಳಗೆ ಬಿದ್ದವಳ ತಂದು
ಮಹಾಶರಣರು ಎನಗೆ ಕುರುಹ ತೋರಿದರು
ಗುರುವೆಂಬುದನರುಹಿದರು. ಜಂಗಮವೆ ಜಗದಕರ್ತೃವೆಂದರುಹಿದರು....[10]"

ಲಿಂಗಮ್ಮ ಕನಿಷ್ಠ (ಕೀಳು) ಕುಲದಲ್ಲಿ ಹುಟ್ಟಿದಾಕೆ. ಹಡಪದರೆಂದರೆ ಆಗ ಕೀಳೆಂದೇ ತಿಳಿಯಲಾಗುತ್ತಿತ್ತು. ಈ ಕಾಲಕ್ಕೂ ಆ ಭಾವನೆ ಹೋಗಿಲ್ಲ. ಕೀಳು ಕುಲದಲ್ಲಿ ಹುಟ್ಟಿದರೂ ಆಕೆ ಉತ್ತಮಳಾಗಿ ಬೆಳೆದಳು. 'ಉತ್ತಮಿಕೆ' ಎಂಬುದು ಕುಲಕ್ಕಾಗಲೀ ಹುಟ್ಟಿಗಾಗಲಿ ಸಂಬಂಧಿಸಿದ್ದಲ್ಲ; ನಡತೆಗೆ ಸಂಬಂಧಿಸಿದ್ದು. ನಡತೆಗೆ ಮಾನ್ಯತೆ ಹೋಗಿ ಅದು ಕುಲಕ್ಕೆ, ಹುಟ್ಟಿಗೆ ಬಂದು ಸತ್ಯಕ್ಕೆ, ಉತ್ತಮಿಕೆಗೆ ಎಂದಿನಿಂದಲೂ ಅಪಚಾರವಾಗಿದೆ. ಇದರ ವಿರುದ್ಧವೇ ಶರಣರು ಯುದ್ಧ ಸಾರಿದ್ದು. ಅಂತೆಯೇ ಹಡಪದ ದಂಪತಿಗಳಂಥವರು, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ ನಂಥವರು ಶರಣಶ್ರೇಷ್ಠರಾಗಿ ಬೆಳಗಿದರು.

ಕಷ್ಟಸಂಸಾರಿ ಎನಿಸಿ ಲಿಂಗಮ್ಮ ಬಾಳುತ್ತಿರುವಾಗ ಶರಣರ ಸಂಗಪ್ರಾಪ್ತವಾಗಿ ಅವರ ಅನುಗ್ರಹವಾಗಿ ಕುರುಹು (ಇಷ್ಟಲಿಂಗ) ದೊರಕಿತು. ಒಬ್ಬ ಒಳ್ಳೆಯ ಗುರುವೂ ದೊರಕಿದ. ಅನುಭಾವ ಮೈಗೂಡಿಸಿಕೊಂಡು ಶರಣೆಯಾದಳು. ಕರ್ಮಹಿಂಗಿತು, ಮನ ಬತ್ತಲೆಯಾಯಿತು; ಸಾಮರಸ್ಯ ಸಾಧ್ಯವಾಯಿತು.

"ಮಹಾಶರಣರು ಕುರುಹು ತೋರಿದರು"–ಈ ಒಂದು ಮಾತು ಆ ಕಾಲದ ಶರಣರ ಆಂದೋಲನದ ಕೇಂದ್ರ ತತ್ವವನ್ನು ಅರುಹುತ್ತದೆ: ಸಾಮರಸ್ಯಕ್ಕೆ ಸಾಧನೆಯಲ್ಲದೆ ಸರ್ವ ಸಮಾನತೆಯ ಕುರುಹಾದ ಇಷ್ಟಲಿಂಗವನ್ನು ಜನರಿಗೆ ಕೊಟ್ಟು ಶರಣರು ಜಾತಿಪಂಥ ವರ್ಗಗಳನ್ನು ಅಳಿಸಿ ಸಮಾನತೆಯ ಸುಭದ್ರ ಸಮಾಜ ರಚಿಸಿ, ಅನುಭಾವದ ಬೆಳಕನ್ನು ಹರಿಸಿ ಮಾನವತೆಯನ್ನು ಮೆರೆದ ಇತಿಹಾಸವೂ ಲಿಂಗಮ್ಮನ ಆ ಮಾತಿನಲ್ಲಿ ಅಡಗಿದೆ. ಕೀಳನ್ನು ಉನ್ನತೀಕರಿಸುವ ಸಾಧನ ಇಷ್ಟಲಿಂಗವಾಗಿದ್ದಿತು. ಅಂಥ ಇಷ್ಟಲಿಂಗವನ್ನು ಪಡೆದ ಲಿಂಗಮ್ಮ ಲೌಕಿಕ ಮತ್ತು ಪರಮಾರ್ಥ ಎರಡನ್ನೂ ಸಮರ್ಥವಾಗಿ ಬದುಕಿದಳು.

ಹಾಗೆ ನೋಡಿದರೆ ಆಕೆಯ ಎಲ್ಲ ವಚನಗಳು ಆಕೆಯ ಆಧ್ಯಾತ್ಮ ಜೀವನದ ಸಾಧನೆ ಸಿದ್ಧಿಗಳನ್ನೆ ಹೇಳುತ್ತವೆ. ಕೆಳಗಿನ ಎರಡು ವಚನಗಳಲ್ಲಿ ಆಕೆಯ ಲೌಕಿಕ ಮತ್ತು ಪಾರಮಾರ್ಥಿಕ ಜೀವನದಲ್ಲಿದ ಆಕೆಯ ಐಕ್ಯವನ್ನೂ ಗುರುತಿಸಬಹುದು.

"ನರರ ಬೇಡೆನು, ಸುರರ ಹಾಡೆನು, ಕರಣಂಗಳ ಹರಿಯಬಿಡೆನು,
ಕಾಮನ ಬಲೆಗೆ ಸಿಲ್ಕೆನು, ಮರವೆಗೊಳಗಾಗೆನು,
ಪ್ರಣವ ಪಂಚಾಕ್ಷರಿಯ ಜಪಿಸಿಹೆನೆಂದು
ತನುವ ಮರೆದು ನಿಜಮುಕ್ತಳಾದೆನಯ್ಯಾ
ಅಪ್ಪಣ್ಣಪ್ರಿಯ ಚನ್ನಬಸವಣ್ಣ"11
"ಸಾಕಯ್ಯಾ, ಲೋಕದ ಹಂಗು ಹರಿಯಿತ್ತು;

10. ಅದೇ ಪುಟ 256 ವಚನ 66
11. ಅದೇ ಪುಟ 265 ವಚನ 85

ತನುವಿನಾಸೆ ಬಿಟ್ಟಿತ್ತು; ಮನದ ಸಂಚು ನಿಂದಿತ್ತು.
ನುಡಿಗಡಣ ಹಿಂಗಿತ್ತು; ಘನವ ಬೆರೆಯಿತ್ತು, ಬೆಳಗಕೂಡಿತ್ತು.
ಬಯಲಿನೊಳಗೋಲಾಡಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"12

(೨)

ಲಿಂಗಮ್ಮನ ೧೧೩ ವಚನಗಳು ಉಪಲಬ್ಧವಿವೆ. ಎಲ್ಲ ವಚನಗಳಲ್ಲಿ ಅನುಭಾವವೇ ತುಂಬಿದ್ದರೂ ಇಹದ ಬಾಳಿಗೂ ಸಂಬಂಧಿಸಿದ ವಿಚಾರಗಳು ಆ ವಚನಗಳಲ್ಲಿ ಇಲ್ಲದಿಲ್ಲ. ಶರಣರಿಗೆ ಆಧ್ಯಾತ್ಮದಷ್ಟೇ ಈ ಸಂಸಾರ ಮುಖ್ಯವಾಗಿತ್ತು. ಈ ಸಂಸಾರವನ್ನು ಬಿಟ್ಟು ಆಧ್ಯಾತ್ಮವಾಗಲೀ ಅನುಭಾವವಾಗಲೀ ಸಾಧ್ಯವಿಲ್ಲವಲ್ಲ. ಅದಕ್ಕಾಗಿ ಶರಣರು ಈ ಸಂಸಾರವನ್ನು ಸುಂದರಗೊಳಿಸಲು ಹೆಣಗಿದರು. ಈ ಸಂಸಾರದಲ್ಲಿ ಎಲ್ಲಕ್ಕೂ ಸಾಧನವಾದುದು 'ದೇಹ'. ಇದರ ಶುದ್ಧಿಯಿಂದಲೇ ಸರ್ವವೂ ಸಾಧ್ಯ. ದುರುಳ ವೇದಾಂತಿಗಳಂತೆ ಶರಣರು ಈ ದೇಹವನ್ನು ಅಲಕ್ಷಿಸಲಿಲ್ಲ.

"....ಆ ಕರಸ್ಥಲದ ಲಿಂಗವನರ್ಚಿಸಿ ಪೂಜಿಸಿ ವರವ ಬೇಡಿದಡೆ,
ತನುವ ತೋಱಿದನು;
ಆ ತನುವಿಡಿದು ಮಹಾಘನವ ಕಂಡೆ, ಆ ಘನವಿಡಿದು ಮನವ
ನಿಲಿಸಿದೆ....'13

ಮೇಲಿನ ವಚನದಿಂದ ತನುವಿನ ಮಹತ್ವ ಮನದಟ್ಟಾಗುತ್ತದೆ. ದೇಹವನ್ನು ಉದಾಸೀನದಿಂದಲೂ ಕಾಣಲಾಗದು; ಅದನ್ನು ಕೆಟ್ಟ ರೀತಿಯಿಂದಲೂ ಬಳಸಬಾರದು. "ಕೂಡಲಸಂಗಮ ದೇವರ ಒಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು" ಎಂದು ಬಸವಣ್ಣ ಹೇಳಿದರೆ, "ಈ ಕಾಯದಿಂದ ನಿಮ್ಮನ ಕಂಡೆನು" ಎಂದು ಚೆನ್ನಬಸವಣ್ಣ ಹೇಳುತ್ತಾನೆ. ಲಿಂಗಮ್ಮನೂ ಈ ಕಾಯದ ಮಹತ್ವವನ್ನು ಅರಿತವಳು. ಅಂತೆಯೇ ಆಕೆ "ತನುವಿಡಿದು ಮಹಾಘನವ ಕಂಡೆ" ಎನ್ನುತ್ತಾಳೆ. ಅಲ್ಲದೆ ಆಕೆಯ ಲಿಂಗದೇವನು ವರವ ಬೇಡಿದರೆ ತನುವನ್ನು ತೋರಿಸಿದನಂತೆ. ಎಷ್ಟು ಅರ್ಥವತ್ತಾದ ಮಾತಿದು ! ಈ ತನುವಿನಿಂದ ಘನವ ಕಂಡೆ ಆಕೆ "ತಾನು ತಾನಾಗಿಪ್ಪ ಮಹಾಬೆಳಗಿನಲ್ಲಿ ಓಲಾಡಿ ಸುಖಿಯಾದಳಂತೆ."

ಹೊಸ ಸಮಾಜದ ರಚನೆಯು ಕಾಲಕ್ಕೆ ಹಳೆಯ ಸಮಾಜದಲ್ಲಿದ್ದ ದೋಷಗಳನ್ನು ಎತ್ತಿತೋರಿಸಬೇಕಾಗುತ್ತದೆ. ವಚನಕಾರರೆಲ್ಲರೂ ಈ ಕೆಲಸವನ್ನು ನಿರ್ದಾಕ್ಷಿಣ್ಯವಾಗಿ ಮಾಡಿದ್ದಾರೆ. ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆ ಹೊಸದಾದ ಇಂದು ಕೇಳಿಬರುತ್ತಿರುವ ಮಾತುಗಳು ಅಂದು ಬಳಕೆಯಲ್ಲಿ ಇರದಿದ್ದರೂ ಈ ಪ್ರಜ್ಞೆ ವಚನಕಾರರಲ್ಲಿ ಬಲವಾಗಿತ್ತು. ಅವರು ಕಠೋರ ವಿಮರ್ಶಕರು. ಅನೇಕ ಸಲ ತಮ್ಮಿಂದ ರಚನೆಯಾದ ಹೊಸ ಸಮಾಜದಲ್ಲಿ ಕಂಡುಬಂದ ದೋಷಗಳನ್ನೂ ಅವರು

12 ಅದೇ ಪುಟ 267 ವಚನ 113
13 ಅದೇ ಪುಟ 257 ವಚನ 68

ಸುರಿಸಾಚದೆ ಬಲಿಗೆಳೆದಿದ್ದಾರೆ. ಶೋಷಣೆ–ಅದು ಯಾವ ರೂಪದಲ್ಲಿಯೇ ಇರಲಿ– ಅದರ ವಿರುದ್ಧ ಬಂಡೆದ್ದರು. ಲಿಂಗಮ್ಮನ ವಚನಗಳಲ್ಲಿಯೂ ಈ ಅಂಶಗಳನ್ನು ಸ್ಪಷ್ಟವಾಗಿ ಕಾಣಬಹುದು.

ವಾಗದ್ವೈತಿಗಳನ್ನು, ಆಷಾಢಭೂತಿಗಳನ್ನು ಕಂಡು ಲಿಂಗಮ್ಮ ಮೂದಲಿಸುತ್ತಾಳೆ; ಅವರಿಗೆ ಬುದ್ಧಿಯನ್ನೂ ಹೇಳುತ್ತಾಳೆ.

"ತನ್ನ ತಾನರಿಯದೆ ಅನ್ಯರಿಗೆ ಬೋಧೆಯ ಹೇಳುವ
ಅಣ್ಣಗಳಿರಾ ನೀವು ಕೇಳಿರೋ.
ಅವರ ಬಾಳುವೆ ಎಂತೆಂದಡೆ:
ಕುರುಡ ಕನ್ನಡಿಯ ಹಿಡಿದಂತೆ.
ತನ್ನ ಒಳಗು ಮರೆದು ಇದಿರಿಂಗೆ ಬೋಧೆಯ ಹೇಳಿ
ಉದರವ ಹೊರೆವ ಚದುರರೆಲ್ಲರೂ ಹಿರಿಯರೆ? ಅಲ್ಲಲ್ಲ...."14

ಜ್ಞಾನಿಗಳಂತೆ ವರ್ತಿಸುವ ಅಜ್ಞಾನಿಗಳು ಒಳಗು ಮರೆದು ಹೊಟ್ಟೆ ಹೊರೆವ ಚದುರರು. ಈ ಚದುರರು ತಾವು ಅರಿತವರೆಂಬಂತೆ ತೋರಿಸಿಕೊಂಡು ಸಾಮಾನ್ಯರಿಗೆ ಬೋಧೆಯ ಮಾಡಿ, ಅವರನ್ನು ಶೋಷಣೆಗೀಡುಮಾಡಿ ತಾವು ಸುಖವಾಗಿ ಬದುಕುವ ಧೂರ್ತರು. ಇಂಥವರ ಸಂಖ್ಯೆ ಈಗಲೂ ಇದೆ. ಗುರುಬೋಧೆ ಕೊಡುವೆವೆಂದು ಹಳ್ಳಿಗಳಲ್ಲಿ ಅಜ್ಞ ಜನರನ್ನು ಮೋಸಮಾಡುವ ಕಳ್ಳ ಗುರುಗಳು ಸಾಕಷ್ಟಿದ್ದಾರೆ. ಇಂಥವರು ಶರಣರ ವಾಗ್ಜಾಲವ ಕಲಿತುಕೊಂಡು ನುಡಿಯುತ್ತಾರೆ; ಸ್ವಂತಕ್ಕೆ ಜ್ಞಾನವಿಲ್ಲ. ಇವರನ್ನು ಲಿಂಗಮ್ಮ ಕನ್ನಡಿ ಹಿಡಿದ ಕುರುಡರೆನ್ನುತ್ತಾಳೆ. ಅರ್ಥವುಳ್ಳ ಮಾತು. ಕಣ್ಣೇ ಇಲ್ಲ; ತನ್ನ ಮೊಗ ಕಾಣುವುದು ಹೇಗೆ? ತಮ್ಮ ನಿಜದ ಅರಿವೇ ತಮಗಿಲ್ಲ; ಇವರು ಅನ್ಯರಿಗೆ ಏನು ಬೋಧೆಯ ಮಾಡುವರು? ಸಮಾಜಕ್ಕೆ ಇವರು ಕಂಟಕರು.

ಸತ್ಯವನರಿಯದ ಮಾತು ಕಲಿತುಕೊಂಡು ಸಾವಿಗೊಳಗಾದ ಮರ್ತ್ಯರ ವಿಡಂಬನ ಕೆಳಗಿನ ವಚನದಲ್ಲಿದೆ:

"ಮರ್ತ್ಯದ ಮನುಜರು ಸತ್ತರೆಲ್ಲ!
ಕತ್ತಲೆಯೊಳು ಮುಳುಗಿ, ಮಾತು ಕಲಿತುಕೊಂಡು,
ತೂತುಬಾಯೊಳಗೆ ನುಡಿದು, ಕಾತರಿಸಿ ಕಂಗೆಟ್ಟು
ಹೇಸಿಕೆಯ ಮಲದ ಕೊಣದ, ಉಚ್ಚೆಯ ಬಾವಿಗೆ ಮೆಚ್ಚಿ,
ಕಚ್ಚಿಯಾಡಿ ಹುಚ್ಚುಗೊಂಡು ತಿರುಗುವ ಕತ್ತೆಮನುಜರ
ಮೆಚ್ಚರು ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ."15

ಜ್ಞಾನವನ್ನು ಗಳಿಸದೆ ಮಾತು ಕಲಿತುಕೊಂಡು ಜೀವಿಸುವವರು ಇವರು. ಇವರಿಗೆ ಶುದ್ಧ ನಡೆಯಿಲ್ಲ. ಹೇಸಿಗೆ ಬದುಕು ಇವರದು. ಉಚ್ಚೆಯ ಬಾಯಿಗೆ ಮೆಚ್ಚಿ

---

14 ಅದೇ ಪುಟ 250 ವಚನ 54
15 ಅದೇ ಪುಟ 252 ವಚನ 59

ಕಚ್ಚಿಯಾಡುವ ಇವರ ಬಾಯಿ ತೂತುಬಾಯಿ. ಅರ್ಥವುಳ್ಳ ಮಾತಾಡಲು, ಹೃದಯದ ಶುದ್ಧ ಅನಿಸಿಕೆ ಹೊರಹೊಮ್ಮಿಸಲು ಇರುವುದೇ ಬಾಯಿ. ಆದರೆ ಕತ್ತಲೆಯಲ್ಲಿ ಮುಳುಗಿದವರ, ಎಂದರೆ ಅಜ್ಞಾನಿಗಳ ಬಾಯಿ ಅದೊಂದು ತೂತು, ಅಷ್ಟೇ; ಕಲಿತುಕೊಂಡು ಎಂದರೆ ಅನುಭವಕ್ಕೆ ತಂದುಕೊಳ್ಳದೆ, ಅರ್ಥವರಿಯದೆ ಆಡುವ ಮಾತುಗಳು ಆ ತೂತುಬಾಯಿಂದ ಹೊರಬಂದಾಗ ವ್ಯರ್ಥವೆನಿಸುವವು.

ತಾವು ಅರಿಷಡ್ವರ್ಗವಿಲ್ಲದವರು, ಸಚ್ಚರಿತರು ಎಂದು ಹೇಳಿಕೊಳ್ಳುವ ಡಾಂಭಿಕರನ್ನು ಕುರಿತು ಲಿಂಗಮ್ಮನ ವಚನವಿದು:

"ಕಾಮವಿಲ್ಲ, ಕ್ರೋಧವಿಲ್ಲ, ಲೋಭವಿಲ್ಲ
ಮೋಹವಿಲ್ಲ, ಮದವಿಲ್ಲ, ಮತ್ಸರವಿಲ್ಲ
ಎಂಬ ಅಣ್ಣಗಳಿರಾ, ನೀವು ಕೇಳಿರೊ, ಹೇಳಿಹೆನು.
ಕಾಮವಿಲ್ಲದವಂಗೆ ಕಳವಳವುಂಟೆ?
ಕ್ರೋಧವಿಲ್ಲದವಂಗೆ ರೋಷವುಂಟೆ?
ಲೋಭವಿಲ್ಲದವಂಗೆ ಆಸೆಯುಂಟೆ?
ಮೋಹವಿಲ್ಲದವಂಗೆ ಪಾಶವುಂಟೆ?
ಮದವಿಲ್ಲದವಂಗೆ ತಾಮಸವುಂಟೆ?
ಮತ್ಸರವಿಲ್ಲದವನು ಮನದಲ್ಲಿ ಮತ್ತೊಂದ ನೆನೆವನೆ?
ಇವು ಇಲ್ಲವೆಂದು ಮನವ ಕದ್ದು ನುಡಿವ
ಅಬದ್ಧರ ಮಾತ ಮೆಚ್ಚುವನೆ,
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ?"16

ಇಂಥವರು ಸಮಾಜದಲ್ಲಿ ಎಷ್ಟು ಮಂದಿಯಿಲ್ಲ? ತಾವು ಶುದ್ಧವೆಂದು ಹೇಳಿಕೊಂಡು ಹೇಸಿಜೀವನ ಮಾಡುತ್ತಾರೆ. ಲಿಂಗಮ್ಮ ಹಾಕುವ ಪ್ರಶ್ನೆಗಳಿಗೆ ಅಬದ್ಧರಲ್ಲಿ ಉತ್ತರವಿಲ್ಲ. ಇವರು "ಮನವ ಕದ್ದು ನುಡಿವವರು." ಅರ್ಥಪತ್ತಾದ ಮಾತಿದು. ತಮ್ಮ ಮನಸ್ಸಿಗೆ ಮೋಸ ಮಾಡಿ ಹೇಳುವ ಮಾತಿದು. ತಾನು ಹಾಗಿದ್ದೇನೆಂದು ಮನಸ್ಸಿಗೆ ಗೊತ್ತು. ಆದರೆ ಆ ಮನಸ್ಸನ್ನು ಬದಿಗೊತ್ತಿ—ಅದು ಬೇಡವೆಂದರೂ ಕೇಳದೆ–ತಾನು ಹಾಗಿಲ್ಲವೆಂದು ಹೇಳುವವನೇ ಮನ ಕದ್ದು ಮಾತನಾಡುವವ. ಇಂಥ ಮಾತುಗಳಿಂದ ಲಿಂಗಮ್ಮನ ವಚನಗಳಿಗೆ ಮೊನಚೂ ಸತ್ವವೂ ಉಂಟಾಗಿವೆ.

ಕೈಲಾಸ ಮತ್ತು ಮರ್ತ್ಯ ಮತ್ತು ಮರ್ತ್ಯಲೋಕದ ವ್ಯಾಖ್ಯೆ ಮತ್ತು ಇವೆರಡು ಲೋಕಗಳನ್ನು ಶರಣರು ಮೀರಿ ನಿಂದ ನಿಲವು ಕೆಳಗಿನ ವಚನದಲ್ಲಿ ಸುಂದರವಾಗಿ ನಿರೂಪಿತವಾಗಿದೆ:

ಕೈಲಾಸ ಮರ್ತ್ಯಲೋಕ ಎಂಬರು.
ಕೈಲಾಸವೆಂದಡೇನೊ, ಮರ್ತ್ಯಲೋಕವೆಂದಡೇನೊ?
ಅಲ್ಲಿಯೂ ನಡೆಯು ಒಂದೆ, ಇಲ್ಲಿಯೂ ನಡೆಯು ಒಂದೆ.

---

16 ಅದೇ ಪುಟ 268 ವಚನ 93

ಅಲ್ಲಿಯು ನುಡಿಯೂ ಒಂದೆ, ಇಲ್ಲಿಯು ನುಡಿಯೂ ಒಂದೆ ಕಾಣಿರಯ್ಯಾ ಎಂಬರು.

ಕೈಲಾಸವಾಸಿ ದೇವರ್ಕಳೆಂಬರು; ಮರ್ತ್ಯಲೋಕವಾಸಿಗಳು ಗಣಂಗಳೆಂಬರು.

ಸುರಲೋಕದೊಳಗೆ ಸಾಸಿರ ಕಾಲಕ್ಕಲ್ಲದೆ ಅಳಿದಿಲ್ಲವೆಂಬರು.
ನರಲೋಕದೊಳಗೆ ಸತ್ತುಸತ್ತು ಹುಟ್ಟುತ್ತಿಹರೆಂಬರು.
ಇದು ಕಂಡು ನಮ್ಮ ಶಿವಶರಣರು
ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ
ಭವವದಾಂಟಿ ತಮ್ಮ ತಮ್ಮ ಹುಟ್ಟನರಿದು
ಮಹಾ ಬೆಳಗನೆ ಕೂಡಿ, ಬೆಳಗಿನಲ್ಲಿ ಬಯಲಾದರಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"[17]

ಈ ವಚನವಲ್ಲಿ ಉಕ್ತವಾಗಿರುವ 'ಅಲ್ಲಿಯೂ ನಡೆಯು ಒಂದೆ, ಇಲ್ಲಿಯೂ ನಡೆಯು ಒಂದೆ' ಎಂಬ ಮಾತು ಕೈಲಾಸವೇನೂ ಹೆಚ್ಚಲ್ಲ ಎಂಬುದನ್ನು ಧ್ವನಿಸುತ್ತದೆ. ಇದು ಬಸವಣ್ಣನವರ 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂಬ ವಚನವನ್ನು ನೆನಪಿಗೆ ತರುತ್ತದೆ. "ಸುರಲೋಕದೊಳಗೆ ಸಾಸಿರಕಾಲಕ್ಕಲ್ಲದೆ ಅಳಿದಿಲ್ಲ, ನರಲೋಕದೊಳಗೆ ಸತ್ತು ಸತ್ತು ಹುಟ್ಟುತ್ತಿಹರು" –ಎರಡರಲ್ಲಿಯೂ ಅಳಿವು–ಉಳಿವುಗಳಿಂದ, ಸಾವು-ಹುಟ್ಟುಗಳಿಂದ ತೊಡಕು; ಸಂಕೋಲೆ; ಕಷ್ಟಕೋಟಲೆ. ಆದುದರಿಂದ ಶರಣರು ಇವೆರಡು ಲೋಕಗಳನ್ನು ತೃಣವೆಂದು ಭಾವಿಸಿ, ಹುಟ್ಟು ಸಾವುಗಳನ್ನು ಅಳಿಸಿ ಬೆಳಗಿನಲ್ಲಿ ಬಯಲಾದರು.

ಶರಣರಲ್ಲದ ಸಾಮಾನ್ಯ ಜೀವಿಗಳು ಅಂತರಂಗ–ಬಹಿರಂಗ ಶುದ್ಧಿಯಿಲ್ಲದವರು. ಅವರ ನುಡಿ ಎಂತಹುದು? "ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು ಸಂತೆಯ ಸೂಳೆಯರಂತೆ".[18] ಸಂತೆಯಲ್ಲಿ ದೇಹವನ್ನು ಮಾರಿಕೊಳ್ಳುವ ಸೂಳೆಯರಿಗೆ ಅಂತರಂಗ ಬಹಿರಂಗದ ಕಲ್ಪನೆಯಾದರೂ ಎಲ್ಲಿ? ಇನ್ನು ಶುದ್ಧಿಯ ಮಾತು ದೂರವೇ ಉಳಿಯಿತು. ಇವೆರಡು ಶುದ್ಧವಿಲ್ಲದವರಿಗೆ ಸೂಳೆಯರನ್ನು ಹೋಲಿಸಿದ್ದು ಔಚಿತ್ಯಪೂರ್ಣವಾಗಿದೆ. ಇವರೂ ಜೀವನದಲ್ಲಿ ಅರ್ಥ ಅಭಿಮಾನ ಮಾನ ಎಲ್ಲದರಲ್ಲೆ ವ್ಯಭಿಚಾರ ಮಾಡುವವರೇ. ಇರಡು ಶುದ್ಧವಿದ್ದ ಶರಣರ ಇರವು ಹೀಗೆ: "ಅಂತರಂಗವೆಲ್ಲ ಅರುಹಾಯಿತ್ತು, ಬಹಿರಂಗವೆಲ್ಲ ಲಿಂಗವಾಯಿತ್ತು".[19]

ಗಳಿಸಿದ್ದನ್ನು ಶಿವಶರಣರಿಗೆ, ಸಮಾಜಕ್ಕೆ ನೀಡದೆ ಮಡದಿ ಮಕ್ಕಳಿಗೆಂದು ತೆಗೆದಿರಿಸುವವರು ಇಂಥವರು:

17 ಅದೇ ಪುಟ 249 ವಚನ 52
18 ಅದೇ ಪುಟ 257 ವಚನ 108
19 ಅದೇ ಪುಟ 257 ವಚನ 108

"ಒಡಕ ಮಡಕೆಯಂತೆ ಒಡೆದುಹೋಗುವ ಹಡಿಕೆ ಕಾಯವ ನೆಚ್ಚಿ
ತಟತಟನೆ ತಾಗಿ ಮಠದ ಬೆಕ್ಕಾಗಿ ತಿಟ್ಟನೆ ತಿರುಗಿ,
ಬಟ್ಟೆಯಲಿಕ್ಕಿ ಕಡಿವ ಕಳ್ಳನನಱಿಯದೆ, ತಿಂಬ ಹುಲಿಯನಱಿಯದೆ;
ಒಡವೆಯ ಗಳಿಸಿಹೆನೆಂದು ಒಡೆಯನ ಮರೆದು;
ತನ್ನ ಮಡದಿ ಮಕ್ಕಳಿಗೆಂದು
ಅವರ ಒಡವೆರೆದು ಹೋಗುವ ಮಡಿವರೊಡನೆ ನುಡಿಯರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"20

ದೇಹಕ್ಕೆ ಒಡಕ ಮಡಕೆಯೆಂದಿರುವುದು ತುಂಬ ಸೊಗಸು. ಎರಡೂ ಒಡೆದು ಹೋಗುವಂಥವೇ. ಇಂಥ ಕಾಯ ನೆಚ್ಚಿದವರು 'ಮಠದ ಬೆಕ್ಕು' ಎಂಬುದು ಇನ್ನೂ ಸೊಗಸು. ಮಠದಲ್ಲಿದ್ದೂ ಬೆಕ್ಕು ಇಲಿ ಕಂಡರೆ ಬಿಡದು. ಸಮಾಜದಲ್ಲಿ ಇಂಥ ಬೆಕ್ಕುಗಳಿಗೆ ಕೊರತೆಯಿಲ್ಲ. ಒಡವೆಯ ಗಳಿಸಿಹೆನೆಂದು ಒಡೆಯನ ಮರೆವ ಈ ಖೂಳರಿಗೆ ಕಡಿವ ಕಳ್ಳ, ತಿಂಬ ಹುಲಿ ಹಿಂದೆ ಬಿದ್ದಿವೆ; ಇದರ ಅರಿವು ಅವರಿಗಿಲ್ಲ. ಇವರೆಲ್ಲ ನಿಜವ ಕಾಣದೆ ಸಾವಿಗೆ ತುತ್ತಾಗುವವರು; ಶರಣರು ಇವರೊಡನೆ ನುಡಿಯರು.

ಕರ್ತೃವನರಿಯಲು, ಮಹಾಘನವ ಕೂಡಲು ದೇಹವ ನಚ್ಚಿದವರಿಗೆ, ಸಂಸಾರ ಮಚ್ಚಿದವರಿಗೆ ಸಾಧ್ಯವಿಲ್ಲ. ದೇಹದಿಂದ ಎಲ್ಲ ಸಾಧ್ಯ; ಆದರೆ ಅದನ್ನು ಲಿಂಗದೇಹವನ್ನಾಗಿ ಮಾಡಿಕೊಂಡಾಗ ಮಾತ್ರ. ಆ ದಾರಿಯೇ ಗೊತ್ತಿರದ ಕಿಲುಬುದೇಹಿಗಳು ತಮ್ಮ ಅಂತರಂಗದಲ್ಲಿಯೇ ಲಿಂಗವನ್ನರಸುವ ಸಾಹಸಕ್ಕೆ ಕೈಹಾಕುತ್ತಾರೆ; ತಾವೂ ಆಧ್ಯಾತ್ಮಿಗಳೆಂದು ಜನರ ಮಧ್ಯೆ ಮೆರೆಯಲು ಪ್ರಯತ್ನಿಸುತ್ತಾರೆ. ಇಂಥವರು ಲಾಂಛನ ಧರಿಸಿಕೊಂಡು ಶರಣ ಸಮೂಹದಲ್ಲಿಯೂ ಇದ್ದರು. ಅವರನ್ನು ಕಂಡು ಲಿಂಗಮ್ಮ ಏನೊಂದೂ ಮುಲಾಜಿಯಿಲ್ಲದೆ ಮೂದಲಿಸುತ್ತಾಳೆ:

"ಹೊತ್ತು ಹೊತ್ತಿಗೆ ಮೆತ್ತಹಾಕಿ ತಿಪ್ಪೆಯಲ್ಲಿ ಕರ್ಪುರವನಱಸುವನಂತೆ,
ತಿಪ್ಪೆಯಂತಹ ಒಡಲೊಳಗೆ ಕರ್ತುವನಱಸಿಹೆನೆಂಬ ಅಣ್ಣಗಳಿರಾ,
ನೀವು ಕೇಳಿರೋ..."21

ತಿಪ್ಪೆಯಂತಹ ಒಡಲುಳ್ಳವರಿಗೆ ಅನುಭಾವ ಎಲ್ಲಿ ಸಾಧ್ಯ? ತಿಪ್ಪೆಯಲ್ಲಿ ಕರ್ಪುರ ಸಿಕ್ಕುವುದೇ? ಅದರಂತೆ ತಿಪ್ಪೆಯಂತಹ ಒಡಲಿನಲ್ಲಿ ಕರ್ತ ಕಾಣುವನೇ? ಒಡಲಿಗೆ ತಿಪ್ಪೆಯನ್ನು ಹೋಲಿಸಿದ್ದು ಅರ್ಥಪೂರ್ಣ. ಅದೂ ಕಸದಿಂದ ತುಂಬಿದ್ದು; ಇದೂ ಅರಿಷಡ್ವರ್ಗಾದಿ ಕಸದಿಂದ ತುಂಬಿದ್ದು. ಕರ್ಪುರಕ್ಕೆ ಕರ್ತನನ್ನು ಹೋಲಿಸಿದ್ದು ತುಂಬ ಸಮಂಜಸ. ಕರ್ಪುರ ಬರಿದು ಇಲ್ಲವಾಗುತ್ತದೆ; ಕರ್ತ ಇದ್ದೂ ಇಲ್ಲದವನಾಗಿದ್ದಾನೆ.

ಮನದ ಬಗ್ಗೆ ಲಿಂಗಮ್ಮ ಬಹಳ ಕಾಳಜಿವಹಿಸಿ ಮಾತನಾಡುತ್ತಾಳೆ. ಎಲ್ಲಕ್ಕೂ ಮನವೇ ಕಾರಣ. "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ" ಎಂಬ ಮಹಾದೇವಿಯಕ್ಕನ ಮಾತು ಸತ್ಯ. ಈ ಮನವನ್ನು ಗೆದೆಯ

20 ಅದೇ ಪುಟ 247 ವಚನ 46
21 ಅದೇ ಪುಟ 233 ವಚನ 12

ಬೇಕು; ಮಹಪನ್ನಾಗಿ ಮಾಡಬೇಕು. ಇದನ್ನು ಗೆಲಿಯುವವರಿಗೆ ಅನುಭಾವ ಸಾಧ್ಯವಿಲ್ಲ.

ಮನಸ್ಸನ್ನು ಗೆದೆಯಲು ಬಗೆಬಗೆಯ ವ್ರತಗಳನ್ನೋ ನೇಮಗಳನ್ನೋ ಮಾಡಿಕೊಂಡು ದೇಹವನ್ನು ದಂಡಿಸುವವರನ್ನು ಕಂಡು ಲಿಂಗಮ್ಮ ಮರುಗುತ್ತಾಳೆ; ಮನವನ್ನು ಗೆದೆಯುವ ಮಾರ್ಗವನ್ನು ಅರುಹುತ್ತಾಳೆ.

"ಮನವ ಗೆದ್ದೆಹೆನೆಂದು ತನುವ ಕರಗಿಸಿ ಕಾಯುವ ಮುಜುಗಿಸಿ
ನಿದ್ರೆಯ ಕೆಡಿಸಿ ವಿದ್ಯೆಯ ಕಲಿತೆಹೆನೆಂಬ ಬುದ್ಧಿಹೀನರಿರಾ, ನೀವು ಕೇಳಿರೋ!
ನಮ್ಮ ಶರಣರು ಮನವನೆಂತು ಗೆದ್ದಹರೆಂಡಡೆ–
ಕಾಮ ಕ್ರೋಧವ ನೀಗಿ, ಲೋಭ ಮೋಹ ಮದ ಮತ್ಸರವ ಛೇದಿಸಿ
ಆಸೆ ರೋಷವಳಿದು, ಜಗದ ಪಾಶವಬಿಟ್ಟು,
ಆ ಮುಜುಗಿಸುವ ಕಾಯುವನೆ ಪ್ರಸಾದ ಕಾಯುವ ಮಾಡಿ ಸಲಹಿದರು.
ಕೆಡಿಸುವ ನಿದ್ರೆಯನೆ ಯೋಗ ಸಮಾಧಿಯ ಮಾಡಿ
ಸುಖವನೇಡಿಸಿ ಜಗವನೆ ಗೆದ್ದ ಶರಣರ ಬುದ್ಧಿಹೀನರೆತ್ತಬಲ್ಲರೋ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ?"22

ದುರ್ಗುಣಗಳನ್ನು ಒಳಗಿಟ್ಟುಕೊಂಡು ದೇಹ ದಂಡಿಸಿದರೆ ಆಗುವುದೇನು? ಅವರು ಕಲಿತ ವಿದ್ಯೆ ಅವಿದ್ಯೆ. ಅರಿಷಡ್ವರ್ಗಗಳನ್ನು ಕಳೆದು ಕಾಯವನ್ನು ಪ್ರಸಾದ ಕಾಯ ಮಾಡಬೇಕು. ಬರಿದೆ ನಿದ್ದೆಗೆಟ್ಟರೆ ಬಂದುದೇನು? ಆ ನಿದ್ರೆಯನ್ನೇ ಯೋಗ ಸಮಾಧಿ ಮಾಡಬೇಕು. ಎಲ್ಲರು ಏನು ಮಾಡಿದರೂ ಸುಖವನ್ನು ಪಡೆಯಲೆಂದೇ ಮಾಡುವರು. ಆದರೆ ಈ ಸುಖ ನಿಜವಾದ ಸುಖವಲ್ಲ. ಈ ಪ್ರಾಪಂಚಿಕ ಸುಖವನ್ನು 'ಏಡಿಸಿ' ನಿಂತಾಗ ನಿಜವಾದ ಆ ಸುಖದ ಅನುಭವವಾಗುವುದು.

ಶರಣರ ಸಂಗದಿಂದ, ದುರ್ಗುಣಗಳು ಅಳಿಯುವುದರಿಂದ ಮನ ಹೀಗಾಗುತ್ತದೆ:

"ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ,
ಬೆಳಗಿದ ದರ್ಪಣದಂತೆ ಮನ ನಿರ್ಮಲವಾದಲ್ಲದೆ,
ಆ ಮಹಾಘನವ ಕಾಣಬಾರದು..."23

"...ಘನವ ಕಾಂಬುದಕ್ಕೆ ಮನವೆಂತಾಗಬೇಕೆಂದಡೆ:
ಅಕ್ಕಿಯ ಥಳಿಸಿದಂತೆ, ಹಲ್ಲಸುಲಿದಂತೆ, ಕನ್ನಡಿಯ ನೋಡಿದಂತೆ
ಮನ ನಿರ್ಮಲವಾದಲ್ಲದೆ ಘನವ ಕಾಣಬಾರದು..."24

ತಮ್ಮ ತಪ್ಪುಗಳನ್ನು, ದೋಷಗಳನ್ನು ವಚನಕಾರರಂತೆ ಬಿಚ್ಚಿ ಹೇಳಿಕೊಂಡವರು ಕಡಮೆ. ಇವರಲ್ಲಿ ಬಸವಣ್ಣನವರನ್ನು ಮೀರಿಸುವವರು ಯಾರೂ ಇಲ್ಲವೆನ್ನ

---

22 ಅದೇ ಪುಟ 232 ವಚನ 10
23 ಅದೇ ಪುಟ 231 ವಚನ 9
24 ಅದೇ ಪುಟ 233 ವಚನ 13

ಬಹುದು. ಲಿಂಗಮ್ಮ ಸ್ವಾತ್ಮ ವಿಮರ್ಶೆ ಮಾಡಿಕೊಂಡು ತನ್ನ ತಪ್ಪು ಒಪ್ಪುಗಳನ್ನು ಬಯಲಿಗೆ ಹಾಕಿದ್ದಾಳೆ:

"ನೆನವುತ್ತಿದೆ ಮನ; ದುರ್ವಾಸನೆಗೆ ಹರಿವುತ್ತಿದೆ ಮನ;
ಕೊನೆಗೊಂಬೆಗೆ ಎಳೆವುತ್ತಿದೆ ಮನ,
ಕಟ್ಟಿಗೆ ನಿಲ್ಲದು ಮನ; ಬಿಟ್ಟಡೆ ಹೋಗದು ಮನ.
ತನ್ನಿಚ್ಛೆಯಲಾಡುವ ಮನವ ಕಟ್ಟಿಗೆ ತಂದು ಗೊತ್ತಿಗೆ ನಿಲಿಸಿ,
ಬಚ್ಚಬಱಿಯ ಬಯಲಿನೊಳಗೆ ಓಲಾಡುವ
ಶರಣರ ಪಾದದಲ್ಲಿ ನಾ ಬೆಚ್ಚಂತಿದ್ದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"25

ಕಂಡಕಂಡವರಿಗೆ ಶರಣರೆನ್ನಲು ಲಿಂಗಮ್ಮ ಒಲ್ಲಳು. ಅವರ ಇರವು ಮತ್ತು ನಡೆಯನ್ನು ಹೀಗೆ ವರ್ಣಿಸುತ್ತಾಳೆ:

"...
ಆ ಚಿತ್ಪ್ರಕಾಶವೆ ತಾನೆಯಾಗಿ ಆಡುವ ಶರಣನ ಇರವೆಂತೆಂದಡೆ:
ಇದ್ದೂ ಇಲ್ಲದಂತೆ, ಹೊದ್ದಿಯೂ ಹೊದ್ದದಂತೆ,
ಆಡಿಯೂ ಆಡದಂತೆ, ನೋಡಿಯೂ ನೋಡದಂತೆ
ಕೂಡಿಯೂ ಕೂಡದಂತೆ, ಕುಂಭಕದೊಳು ನಿಂದು
ತುಂಬಿದಮೃತವನುಂಡು, ಆ ಜೆಂಬಳಿಯಲ್ಲಾಡುವ ಶರಣ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ, ತಾನೇ ನೋಡಾ"26

"..
ನಮ್ಮ ಶರಣರ ನಡೆ ಎಂತೆಂದಡೆ:
ಕತ್ತಲೆಯ ಬಾಗಿಲಿಗೆ ಕದವನಿಕ್ಕಿ,
ಪಶ್ಚಿಮದ ಕದವ ತೆಗೆದು
ಬಚ್ಚಬರಿಯ ಬೆಳಗಿನೊಳಗೋಲಾಡುವ ಶರಣರ ಪಾದಕ್ಕೆ
ನಮೋ ನಮೋ ಎಂದು ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"27

* * * * *

ವಚನಕಾರರಲ್ಲಿ, ಅಂತೆಯೆ ಕನ್ನಡ ಸಾಹಿತ್ಯದಲ್ಲಿ ಲಿಂಗಮ್ಮನಿಗೆ ಒಂದು ಉನ್ನತ ಸ್ಥಾನವಿದೆ. ಅನುಭಾವವನ್ನು ಉಪಮೆ, ರೂಪಕಗಳಿಂದ, ಸುಂದರ ಉಕ್ತಿಗಳಿಂದ ಮನಮುಟ್ಟುವಂತೆ ಆಕೆ ಹೇಳುತ್ತಾಳೆ. ಆಕೆಯ ವಚನಗಳನ್ನು ಜೋಧೆಯ ವಚನಗಳೆಂದು ಕರೆಯಲಾಗಿದೆ. ನಿಜ. ಅವು ಜೋಧೆಯ ವಚನಗಳೇ. ಈ ಜೋಧೆಯಲ್ಲಿ

25 ಅದೇ ಪುಟ 231 ವಚನ 18
26 ಅದೇ ಪುಟ 228 ವಚನ 2
27 ಅದೇ ಪುಟ 227 ವಚನ 1

ತಾನು ಬಲ್ಲವಳೆಂಬ ಅಹಂಕಾರವಿಲ್ಲ. ಮನುಜರ ದುಸ್ಥಿತಿಯನ್ನು ಕಂಡು ಮರುಗಿ ಕಳಕಳಿಯಿಂದ ಹೊಮ್ಮಿದ ವಚನಗಳಿವು. ಅಲ್ಲಲ್ಲಿ ಸಿಟ್ಟು, ಅಸಹನೆ ತೋರಿದರೂ ಅದು ಅವಗುಣಕ್ಕೆ ಮುನಿದದ್ದು, ಸಾತ್ವಿಕ ಸಂತಾಪ, ಅಷ್ಟೇ.

"ತನುವ ಕರಗಿಸಿ, ಮನವ ಬಳಲಿಸಿ ಕಳವಳಿಸಿ
ಕಣ್ಣು ಕಾಣದ ಅಂಧಕರಂತೆ ಮುಂದುಗಾಣದೆ
ಸಂದೇಹದಲ್ಲಿ ಮುಳುಗಿರುವ ಮನುಜರಿರಾ
ನೀವು ಕೇಳಿರೋ ಹೇಳಿಹೆನು......"
"........ ....
ಬುದ್ಧಿಹೀನರಿರಾ ನೀವು ಕೇಳಿರೋ......"
"....................................
ಅಣ್ಣಗಳಿರಾ ನೀವು ಕೇಳಿರೋ......"

ಇಲ್ಲಿ ಪ್ರಯೋಗವಾಗಿರುವ 'ಅಣ್ಣಗಳಿರಾ' ಎಂಬುದು ವ್ಯಂಗ್ಯವೂ ಆಗಬಹುದು, ಆತ್ಮೀಯತೆಯ ಕುರುಹೂ ಆಗಬಹುದು.

ಲಿಂಗಮ್ಮ ಬಳಸುವ ಉಪಮಾನಗಳು ನೇರ ಜೀವನದಿಂದ ಎತ್ತಿದುವು:

"ತಿಪ್ಪೆಯಂತಹ ಒಡಲೊಳಗೆ...."
"ಬಂಡಿಯ ಮೇಗಣ ಹೇಳವನಂತೆ ಕಂಡ ಕಂಡ ಕಡೆ
ಹಲುಬಿದಡೆ ನಿಮಗೆ ಬಂದುದೇನಿರೋ..."
"ಹೊಸ್ತಿಲೊಳಿರಿಸಿದ ಜ್ಯೋತಿಯಂತೆ...."
"ಒಡಕ ಮಡಿಕೆಯಂತೆ ಒಡೆದು ಹೋಗುವ ಹಡಿಕೆ ಕಾಯುವ ನೆಚ್ಚಿ...."

ಬಹು ಅರ್ಥಶ್ರೀಮಂತಿಕೆಯುಳ್ಳ ಉಕ್ತಿಗಳು:

"ಕರಣಂಗಳಚಿತುದೆ ಕಂಗಳ ಮುಂದಣ ಬೆಳಗು"
"ಮನವು ಮಹದಲ್ಲಿ ನಿಂದುದೆ ಲಿಂಗ"
"ಮಂಡೆಯಲ್ಲಿ ನಿಂದು..."
"ಕಂಗಳ ಕರುಳನೆ ಕೊಯಿದು, ಮನದ ತಿರುಳನೆ ಹುರಿದು"
"ಗೊತ್ತ ಕಂಡವಂಗೆ ಅತ್ತಿತ್ತಲಜಿಸಲುಂಟೆ?"
"ಕುರುಡ ಕನ್ನಡಿಯ ಹಿಡಿದಂತೆ"
"ಸಾಸಿರದಳ ಅಮೃತದ ಕೊಡ ಕಾಯಿತ್ತು,
ಕಾಯ್ದು ಅಮೃತ ಉಕ್ಕಿ ತೊಟ್ಟಿಕ್ಕಿ ಅಮೃತವನುಂಡು"
"ಆ ಲಿಂಗವ ನೋಡುವ ಕಂಗಳಲ್ಲೆ ಐಕ್ಯ"

ಲಿಂಗಮ್ಮನ ಭಾಷೆ ಸರಳ. ಅನೇಕ ಕಡೆ ಆಡುಭಾಷೆಯ ಮಾತುಗಳ ಬಳಕೆಯಾಗಿದೆ. ಅಲ್ಲದೆ ಹೆಣ್ಣುಮಕ್ಕಳು ಬಳಸುವ ಮಾತುಗಳೂ ಅಲ್ಲಲ್ಲಿ ಸೇರಿಕೊಂಡಿವೆ. ಇದರಿಂದ ಭಾಷೆಗೆ ಸೊಗಡು ಉಂಟಾಗಿದೆ:

"ಇವೀಸು, ನಿಮಗೆ ಬಂದುದೇನಿರೋ, ಒಡಕ ಮಡಿಕೆ, ತಟತಟನೆ ತಾಗಿ, ತೂತು ಬಾಯೊಳಗೆ, ನನ್ನ ಕೈಯಲ್ಲೊಂದು ಕಲ್ಲ ತೆಕ್ಕೊಂಡು, ತಳ್ಳಿಬಳ್ಳಿಯನೆ ಹಚ್ಚಿದು, ಅಕ್ಕಿಯ ಥಳಿಸಿದಂತೆ". ಇವೆಲ್ಲ ಅಚ್ಚ ಕನ್ನಡ ಶಬ್ದಗಳೇ.

ಕೆಲವು ಕಡೆ ಅರ್ಥಕ್ಕೆ ಸಂದಿಗ್ಧತೆ ಬರುತ್ತದೆ ಎಂಬಂತೆ ಎನಿಸಿದರೂ ವಿಚಾರ ಮಾಡಿದರೆ ಅದು ಹಾಗಿಲ್ಲವೆಂದು ಖಚಿತವಾಗದಿರದು. ಘನವ ಕಾಣಲು ಮನ ಅಕ್ಕಿಯ ಥಳಿಸಿದಂತೆ, ಹಲ್ಲು ಸುಲಿದಂತೆ ನಿರ್ಮಲವಾಗಬೇಕು ಎನ್ನುತ್ತಾಳೆ ಲಿಂಗಮ್ಮ. ಸಾಮಾನ್ಯ ಮಾತಿನಿಂದ, ಸಾಮಾನ್ಯ ವಸ್ತುವಿನಿಂದ ಒಂದು ವಿಶೇಷ ಅರ್ಥಸಂಪತ್ತಿ ಯನ್ನು ಶರಣರು ಉಂಟುಮಾಡುತ್ತಿರುವಂತೆ, ಆ ಕಲೆ ಲಿಂಗಮ್ಮನಿಗೂ ಸಾಧಿಸಿದೆ. ಥಳಿಸಿ ಕವಚ ತೆಗೆದು ಹೊಟ್ಟು ದೂರಮಾಡಿದ ಅಕ್ಕಿಯಂತೆ ಮನವಾಗಬೇಕು; ಅಂಥ ಅಕ್ಕಿಯಿಂದ ಶುದ್ಧ ಆರೋಗ್ಯದಾಯಕ ಅನ್ನವಾಗುವುದು. ಹಾಗೆ ಶುದ್ಧವಾದ ಮನ ದಿಂದ ಅನುಭಾವದಡಿಗೆ ಮಾಡಲು ಸಾಧ್ಯ. ಹೆಣ್ಣುಮಕ್ಕಳಿಗೆ ಸಹಜವಾದ ಮಾತಿದು. ಈ ಉಪಮಾನ ಬೇರೆ ಕಡೆ ಬಹುಶಃ ಎಲ್ಲಿಯೂ ಬಂದಿಲ್ಲ. ಸ್ವಚ್ಛವಾಗಿ ತಿಕ್ಕಿದ ಹಲ್ಲಿನಂತೆ ಮನವಾಗಬೇಕೆಂಬುದೂ ವಿಶೇಷವೇ. ಅಶುದ್ಧ ಹಲ್ಲು, ಸ್ವಚ್ಛಮಾಡದ ಹಲ್ಲು, ಅನಾ ರೋಗ್ಯಕ್ಕೆ ಕಾರಣ. ಇದರಂತೆ ಮನಸ್ಸನ್ನು 'ಸುಲಿ'ಯಬೇಕು: ಇಲ್ಲದಿದ್ದರೆ ಅದು ಹೊಲಸಿನಿಂದ ರೋಗಿಯಾಗುವುದು. ಮನಸ್ಸು ಸುಲಿಯುವುದೆಂದರೆ ದುರ್ಗುಣಗಳನ್ನು ಮನಸ್ಸಿನಿಂದ ದೂರಮಾಡುವುದೆಂದರ್ಥ.

ಇನ್ನಿತರ ಶರಣರಂತೆ ಲಿಂಗಮ್ಮ ಬೆಡಗಿನ ವಚನಗಳನ್ನೂ ರಚಿಸಿದ್ದಾಳೆ. ಒಂದು ಬೆಡಗಿನ ವಚನ ಬಹುಮುಖ್ಯವೆನಿಸುತ್ತದೆ:

> "ನಾನೊಂದು ಹಾಳೂರಿಗೆ ಹೋಗುತ್ತಿರಲು, ಆ ಹಾಳೂರ ಹೊಕ್ಕಡೆ
> ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು, ಹುಲಿ ಕರಡಿ ಅಡ್ಡಲಾದವು.
> ಇವ ಕಂಡು ನಾ ಹೆದರಿಕೊಂಡು
> ನನ್ನ ಕೈಗೊಂದು ಕಲ್ಲತೆಕ್ಕೊಂಡು ನೋಡುತ್ತಬರುತ್ತಿರಲು,
> ಆ ನಾಯಿಗಳು ಓಡಿಹೋದವು. ಹುಲಿಕರಡಿಗಳು ಅಲ್ಲಿಯೆ ಬಯಲಾದವು.
> ಆ ಊರು ನಿರ್ಮಲವಾಯಿತ್ತು.
> ....
> ....
> ದ್ವಂದ್ವವನೆ ಹರಿದು ನಿಮ್ಮ ಸಂಗ ಸುಖದೊಳಗೋಲಾಡಿ
> ಸುಖಿಯಾದೆ............."[28]

ಹಾಳೂರು ಎಂದರೆ ದೇಹ. ನಾಯಿ ಹುಲಿ ಕರಡಿ ಇವು ಅರಿಷಡ್ವರ್ಗ ಮತ್ತು ಅಷ್ಟ ಮದ ಮುಂತಾದವು. "ಕೈಯಲ್ಲೊಂದು ಕಲ್ಲು ತೆಕ್ಕೊಂಡು ನೋಡುತ್ತ ಬರುತ್ತಿ ರಲು........" ಈ ಕಲ್ಲು ಏನು? ಯಾವುದರ ಸಂಕೇತ? ಈ ಕಲ್ಲಿಗೆ ಹೆದರಿ ನಾಯಿ ಹುಲಿ ಕರಡಿ ಎಂದರೆ ದುರ್ಗುಣಗಳು ಓಡಿಹೋದವು. ಆಗ ಆ ಊರು ನಿರ್ಮಲವಾ ಯಿತಂತೆ. ಎಂದರೆ ಈ ದುರ್ಗುಣಗಳನ್ನು ಓಡಿಸುವ ಶಕ್ತಿ ಲಿಂಗಕ್ಕೆ ಮಾತ್ರ ಉಂಟು.

---

28. ಅದೇ: ಪುಟ 262 ವಚನ 29

ಕಲ್ಲೆಂದರೆ ಇಲ್ಲಿ ಲಿಂಗವೆಂದೇ ಭಾವಿಸಬೇಕಾಗುವುದು. ಲಿಂಗಕ್ಕೆ ಕಲ್ಲೆಂದು ಬೆಡಗಿನಿಂದ ಕರೆದ ಲಿಂಗಮ್ಮನ ಬೆಡಗೇ ಬೆಡಗು.

ಐಕ್ಯ ಸ್ಥಿತಿಯನ್ನು ಹೇಳುವ ಲಿಂಗಮ್ಮನ ಒಂದು ವಚನ ಬಲು ಸೊಗಸಾಗಿದೆ. ಅಲ್ಲದೆ ಆ ವಚನದಲ್ಲಿಯ ಒಂದು ಮಾತು ಪ್ರಮುಖ ಸಿದ್ಧಾಂತದ ಚರ್ಚೆಗೆ ಅವಕಾಶ ನೀಡುತ್ತದೆ. ಇದು ಆ ವಚನ:

"ಅಂಗವ ಮಱೆದವಂಗೆ ಅಂಗದ ಹಂಗೇಕೋ?
ಅಱುವ ಕಂಡವಂಗೆ ಕುಱುಹಿನ ಹಂಗೇಕೋ?
ತಾನು ತಾನಾದವಂಗೆ ಧ್ಯಾನದ ಹಂಗೇಕೋ?
ಮನ ಮುಗ್ಧವಾದವಂಗೆ ಮಾನವರ ಹಂಗೇಕೋ?
ಆಸೆಯನಳಿದವಂಗೆ ರೋಷದ ಹಂಗೇಕೋ?
ಕಾಮನ ಸುಟ್ಟವಂಗೆ ಕಳವಳದ ಹಂಗೇಕೋ?
ನಡೆಗೆಟ್ಟವಂಗೆ ನುಡಿಯ ಹಂಗೇಕೋ?
ನಿಶ್ಚಿಂತನಾದವಂಗೆ ಉಚ್ಚರಣೆಯ ಹಂಗೇಕೋ?
ಬಯಲು ಬಯಲಾದವಂಗೆ ಭಾವದ ಹಂಗೇಕೋ?
ತನ್ನ ಮಱೆದು ನಿಮ್ಮನಱಿದ ಶರಣಂಗೆ ಅಲ್ಲಿಯೇ ಐಕ್ಯ ಕಂಡೆಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ."29

ಒಂದೊಂದು ಪ್ರಶ್ನೆ ಇಲ್ಲಿ ಅರ್ಥಗರ್ಭಿತವಾಗಿದೆ: ಎಲ್ಲ. ಪ್ರಶ್ನೆಗಳಿಗೆ ಉತ್ತರ 'ಇಲ್ಲ' ಎಂದೇ ಬರುವುದು. ಆದರೆ ಒಂದೊಂದು ಮಾತನ್ನೂ ಮಥನಿಸಿ ನೋಡಬೇಕಾಗುತ್ತದೆ; ಹಾಗೆ ನೋಡಿದಾಗ ಅಥವಾ ಹಾಗೆ ನೋಡುವವರಿಗೆ ಪ್ರಶ್ನೆಗಳಿಗುತ್ತರವಾದ 'ಇಲ್ಲ' ಸರಿಯೆನಿಸುತ್ತದೆ. ಅನುಭಾವ ಅಳವಟ್ಟಾಗ ಈ ವಚನದಲ್ಲಿ ಅಡಗಿರುವ ಶರಣನ ಆಧ್ಯಾತ್ಮ ಜೀವನದ ಚರಿತ್ರೆ ವೇದ್ಯವಾಗುವುದು. ಈ ಸ್ಥಿತಿ ಒಮ್ಮಿಗೇ ಬಂದುದಲ್ಲ.

ಎಲ್ಲಕ್ಕಿಂತ ಮಿಗಿಲಾಗಿ ಈ ವಚನದ ಎರಡನೆಯ ಮಾತಾಗಿರುವ "ಅಱುವ ಕಂಡವಂಗೆ ಕುಱುಹಿನ ಹಂಗೇಕೆ? ಎಂಬುದು ಗಮನಾರ್ಹವಾಗಿದೆ; ಸ್ಥಾಪಿತ ಒಂದು ತತ್ವಕ್ಕೆ ಸವಾಲಾಗಿದೆ.

ಲಿಂಗಮ್ಮ ಬಹು ಎತ್ತರಕ್ಕೆ ನಿಂತು ಹೇಳಿದ ಮಾತಿದು. ಇದರಂತೆ ಅಲ್ಲಮ ಪ್ರಭುವೂ ಹೇಳಿದ್ದುಂಟು.

ಇನ್ನೊಂದು ಮಾತು: ಈ ವಚನದ ಅಡಿಟಿಪ್ಪಣಿಯಲ್ಲಿ K ೫೭೫ ಮತ್ತು ೪೮ ಅ ತಾಡವೋಲೆಗಳಲ್ಲಿ ಈ ಸಾಲು ಇಲ್ಲವೆಂದು ಹೇಳಿದೆ. ಹಾಗಾದರೆ ಇದು ಪ್ರಕ್ಷಿಪ್ತವೇ? ಶುದ್ಧ ಮಾತೃಕೆಯಾಗಿ ಸ್ವೀಕರಿಸಿದ ಪ್ರತಿಯಲ್ಲಿ ಈ ಸಾಲು ಇದೆ ಎಂದರೆ ಪ್ರಕ್ಷಿಪ್ತ ಹೇಗಾಗುವುದು? ಪ್ರಕ್ಷಿಪ್ತ ಅಲ್ಲವೆಂದು ಇಟ್ಟುಕೊಂಡರೆ ಅಱುವ ಕಂಡವನಿಗೆ ಐಕ್ಯ ಸ್ಥಲದಲ್ಲಿ ನಿಂದವನಿಗೆ ಕುಱುಹು ಬೇಡವೆಂದು ಅರ್ಥೈಸಬೇಕೇ? ಇಲ್ಲ. ಹಾಗೆಯೇ ಅರ್ಥವಾಗುತ್ತದೆ. ಅಲ್ಲಮಪ್ರಭು, ಲಿಂಗಮ್ಮ ಮುಂತಾದವರು ಲಿಂಗಧರಿಸಿರಲಿಲ್ಲವೇ?

29. ಅದೇ ಪುಟ 238 ವಚನ 27

ಸ್ವಯಂ ಲಿಂಗಿಯು ತಾನಾಗಿರುವೆನೆಂದು ಹೇಳಿದ ಸಿದ್ಧರಾಮನಿಗೆ 'ಆಕಾಶದಲ್ಲಿಹಾರುವ ಪಟಕ್ಕಾದರೂ ಸೂತ್ರಬೇಕೆಂದು' ಒತ್ತಾಯದಿಂದ ಲಿಂಗ ಕಟ್ಟಿದ್ದೇಕೆ?

ಇನ್ನೊಂದು ವಿಚಾರವೂ ಇದೆ: ಷಡುಸ್ಥಲದ ಆಚಾರ ಸಮುಸಮುಚ್ಚಯವಾದುದು. ಶರಣ ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಓಡಾಡುತ್ತಿರಬಹುದು. ಆಯಾ ಅವಸ್ಥೆಗೆ ಆಯಾ ಸ್ಥಲ. ಇದರಲ್ಲಿಯೂ ಒಂದೊಂದು ಸ್ಥಲವನ್ನು ವಿಶೇಷವಾಗಿ ಮಾಡಿಕೊಂಡವರೂ ಉಂಟು. ಇದಕ್ಕೆ ವಚನಗಳೇ ಆಧಾರಗಳಾಗಿವೆ. ಆ ವಿಶೇಷತೆಯಿದ್ದರೂ ಇನ್ನಿತರ ಸ್ಥಲ ಆತ ಬಿಟ್ಟಿರುವನೆಂದಲ್ಲ. ಹೀಗಿರುವಾಗ ಕುಱುಹು ಅವಶ್ಯಕವಾದುದೇ. ಆದರೆ ಸಾಮರಸ್ಯ ಸಾಧಿಸಿದವನಿಗೆ ಕುಱುಹು (ಇಷ್ಟಲಿಂಗ) ಬೇಕಿಲ್ಲ ಎಂಬ ವಾದವನ್ನೂ ಅಲ್ಲಗಳೆಯುವಂತಿಲ್ಲ. ಸಾಮರಸ್ಯಕ್ಕೆ ಸಾಧನವಾದುದು, ಆದು. ಸಾಮರಸ್ಯ ಸಿದ್ಧಿಸಿದ ಬಳಿಕ ಅದರ ಆವಶ್ಯಕತೆಏಕೆ?, 'ಲಿಂಗವೆನ್ನೆ ಲಿಂಗೈಕ್ಯವೆನ್ನೆ' ಎಂಬ ಮಾತು ಸಾಮರಸ್ಯವೇ; ಮಹಾದೇವಿಯಕ್ಕನ 'ಲಿಂಗವೆನ್ನೆ' ಎಂಬ ಮಾತಿನಲ್ಲಿ ಕುಱುಹಿನ ಹಂಗೇಕೆ? ಕುಱುಹು ಈ ಹಂತದಲ್ಲಿ ಏಕೆ ಎಂಬ ಧ್ವನಿ ಅಡಗಿಲ್ಲವೇ? ಇಂಥ ಒಂದು ಹಂತದಲ್ಲಿ ಇಷ್ಟಲಿಂಗದ ಆವಶ್ಯಕತೆ ಇಲ್ಲವೆನ್ನುವವರೂ ಆ ಕಾಲದಲ್ಲಿದ್ದರು; ಎಲ್ಲಹಂತದಲ್ಲಿಯೂ ಶರೀರ ಬಿದ್ದು ಹೋಗುವವರೆಗೂ ಇಷ್ಟಲಿಂಗ ಇರಬೇಕು ಎನ್ನುವವರೂ ಇದ್ದರು ಎಂಬುದು ಶರಣರ ವಚನಗಳಿಂದಲೂ ತಿಳಿದುಬರುವುದು. ಈ ವಿಷಯದಲ್ಲಿ ಅವರು ಒಂದು ನಿರ್ಣಯಕ್ಕೆ ಬಂದಂತೆ ಕಾಣುವುದಿಲ್ಲ. ಲಿಂಗಮ್ಮ ಅಱುವ ಕಂಡ ಬಳಿಕ ಕುಱುಹಿನ ಆವಶ್ಯಕತೆ ಇಲ್ಲವೆನ್ನುವವರಲ್ಲಿ ಒಬ್ಬಳಾಗಿದ್ದಳು. ಆದರೆ ಅಂಥವರು ಲಿಂಗ ಧರಿಸಿದ್ದರೋ ಇಲ್ಲವೋ ಎಂಬುವನ್ನು ತಿಳಿಯಲಿಕ್ಕೆ ಯಾವ ಆಧಾರಗಳೂ ಇಲ್ಲ.

○

ಆಯ್ದಕ್ಕಿ ಲಕ್ಕಮ್ಮ

ಶಾಂತಾದೇವಿ ಇವಮ್ರಾಪುರ

ವ್ಯಕ್ತಿಯ ಸಾಮಾಜಿಕ, ಆಧ್ಯಾತ್ಮಿಕ, ಜೀವನೋದ್ಧಾರದ ಮಹೋದ್ದೇಶವನ್ನು ಹೊಂದಿದ 'ಕಾಯಕ ತತ್ವ' ವಿಶ್ವದ ವೈಚಾರಿಕ ಪ್ರಪಂಚಕ್ಕೆ ೧೨ನೇ ಶತಮಾನದ ಶರಣರು ನೀಡಿದ ಉತ್ಕೃಷ್ಟ ಕಾಣಿಕೆ.

'ಕಾಯಕ' ಎಂದರೆ ಜೀವನೋಪಾಯಕ್ಕಾಗಿ ಚಿತ್ತ ಶುದ್ಧಿಯಿಂದ ಮಾಡುವ ದೈಹಿಕ ದುಡಿಮೆ. ಅದು ಸತ್ಯಶುದ್ಧವಾಗಿದ್ದು ದುಡಿದವನ ಹೊಟ್ಟೆ ತುಂಬುವ ಸಂಕುಚಿತ ಮಾರ್ಗವಾಗದೇ, ಆ ವ್ಯಕ್ತಿಯ ಹೃದಯವನ್ನೂ ಅರಳಿಸಿ, ವ್ಯಕ್ತಿಯ ಆತ್ಮವಿಕಾಸದೊಂದಿಗೆ ಸಮಾಜಕಲ್ಯಾಣಕ್ಕೂ ಪೂರಕವಾಗಬೇಕು. ಎನ್ನುವ ಉದಾತ್ತ ವಿಚಾರಗಳನ್ನು ಕಾಯಕತತ್ವ ಹೊಂದಿದೆ.

ಇಂಥ ಉನ್ನತ ತತ್ವವನ್ನು ದಿನದ ಬಾಳಿನಲ್ಲಿ ಶ್ರದ್ಧೆಯಿಂದ ಬದುಕಿ, ಕಾಯಕ ನಿಷ್ಠೆಯ ಸಾಕಾರ ಮೂರ್ತಿಯಾದವಳು ಆಯ್ದಕ್ಕಿ ಲಕ್ಕಮ್ಮ. ಅಸಿಧಾರಾವ್ರತವಾದ ಕಾಯಕ ನಿಷ್ಠೆಯಲ್ಲಿ ಒಮ್ಮೊಮ್ಮೆ ಜೋಲಿತಪ್ಪುವ ಗಂಡ ಮಾರಯ್ಯನಿಗೂ ಆಸರೆ ನೀಡಿ, ಕೈಹಿಡಿದು ಮೇಲೆತ್ತಿ, ಅರಿವಿನ ಮಾರ್ಗದಲ್ಲಿ ಮುನ್ನಡೆಸಿದ ಆಯ್ದಕ್ಕಿ ಲಕ್ಕಮ್ಮನಿಗೆ ಕಾಯಕ ಪ್ರತ್ಯಕ್ಷ ಕೈಲಾಸ.

ಆಯ್ದಕ್ಕಿ ಲಕ್ಕಮ್ಮ–ಮಾರಯ್ಯ ಅವರದು ಅಪರೂಪದ ಆದರ್ಶ ದಾಂಪತ್ಯ; ಸತಿಪತಿಗಳೊಂದಾಗಿ, ಆತ್ಮಜ್ಞಾನ ಸಂಪಾದನೆಯಲ್ಲಿ ಒಬ್ಬರಿಗೊಬ್ಬರು ಸಹಕರಿಸುತ್ತ, ನಿಜವಾದ ನಿಲವನ್ನರಸುವ ಅನುಕೂಲ ದಾಂಪತ್ಯ. ರಾಯಚೂರ ಜಿಲ್ಲೆಯ ಅಮರೇಶ್ವರದವರಾದ ಇವರಿಗೆ ಅಮರೇಶ್ವರ ಲಿಂಗವೇ ಇಷ್ಟದೈವ. ಶರಣಸಂಗದಲ್ಲಿದ್ದು ಕಾಯಕವನ್ನಾಚರಿಸುವುದು ಇವರ ಬದುಕಿನ ಪರಿಪಾಠ. ದಿನನಿತ್ಯ ಅಂಗಳದಲ್ಲಿ ಕೈ ತಪ್ಪಿ ಬಿದ್ದ ಅಕ್ಕಿಯನ್ನು ಆಯ್ದು ತಂದು ತಮ್ಮ ಪ್ರಾಣಾಂಗನೆ ಲಕ್ಕಮ್ಮನಿಗೆ ಕೊಡುವುದು ಮಾರಯ್ಯನ ನಿತ್ಯದ ಕಾಯಕ. ಅದನ್ನೇ ಲಕ್ಕಮ್ಮ ಅಡಿಗೆ ಮಾಡಿ ಗುರು, ಲಿಂಗ, ಜಂಗಮಕ್ಕೆ ಅರ್ಪಿಸಿ, ನಂತರ ಶೇಷ ಪ್ರಸಾದವನ್ನು ಸತಿಪತಿಗಳು ಸ್ವೀಕರಿಸಿ, ಸಂತೃಪ್ತರಾಗಿ, ಮಹಾಮನೆಯ ಶಿವಾನುಭವ ಗೋಷ್ಠಿಗೆ ಹೋಗಿ ನಿಜದ ನಿಲವನ್ನರಿಯುವಲ್ಲಿ ನಿರತರಾಗಿರುವುದು ಆ ದಂಪತಿಗಳ ಜೀವನ ರೀತಿ. ಹೀಗಿರುವಾಗ ಒಮ್ಮೆ ಒಂದು ಘಟನೆ ನಡೆಯು ಅದು

ಮಾರಯ್ಯ ದಂಪತಿಗಳ ತತ್ವನಿಷ್ಠೆ, ದಾಸೋಹಂಭಾವ ಪ್ರಕಟಪಡಿಸುತ್ತದೆ.

ಒಂದು ದಿನ ಮಾರಯ್ಯನವರ ಕಾಯಕ ಧೋರಣೆಯೇ ಶಿವಾನುಭವ ಗೋಷ್ಠಿಯ ವಸ್ತುವಾಗಿ, ಚರ್ಚೆ ನಡೆಯುತ್ತದೆ. ದೀರ್ಘ ಆಲೋಚನೆಯ ನಂತರ ಪ್ರಭುದೇವ, ಮಾರಯ್ಯನ ಕಾಯಕನಿಷ್ಠೆಯನ್ನು ಮೆಚ್ಚಿ, ಮಾಡುವ ಮಾಟದಲ್ಲಿಯೇ ಮಹಾಘನ ಲಿಂಗವನ್ನು ಅರಿಯುವ ಸೂಕ್ಷ್ಮ ಸಂಬಂಧ ರಹಸ್ಯವನ್ನು ಅರುಹುತ್ತಾರೆ. ಪ್ರಭುದೇವರ ಅನುಭವದಿಂದ ದೀಪ್ತಗೊಂಡ ಮಾರಯ್ಯನವರು ಮನಮಗ್ನಯೋಗದ ಅನುಸಂಧಾನದಲ್ಲಿ ಚಿತ್ತಸ್ವಸ್ಥಗೊಂಡು ಕುಳಿತಿರುವಾಗ ಲಕ್ಕಮ್ಮ "ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ" ಎಂದು, ದಿನದ ಕಾಯಕ ಮರೆತು ಗೋಷ್ಠಿಯಲ್ಲಿ ಕುಳಿತು ಪತಿಯನ್ನು ಎಚ್ಚರಿಸುತ್ತಾಳೆ. ಜೊತೆಗೆ ಕಾಯಕವ ನಿಜಸ್ವರೂಪವನ್ನೂ ಬಿನ್ನವಿಸುತ್ತಾಳೆ; ವಿನೀತಭಾವದಿಂದ:

"ಅಂಗವಳಿತ ಅಳಿವೆಯ ಅಂಗದಲ್ಲಿ
ಬಯಕೆಯಳಿತ ಕೈಯಲ್ಲಿ ತಂಡುಲವನ್ನಾಯ್ದುಕೊಂಡು
ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ ಕೊಂಡು ಬಾ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಮಾರಯ್ಯ"[1]

ಮೇಲಿನ ಮಾತಿನಲ್ಲಿ ಲಕ್ಕಮ್ಮ ಶುದ್ಧಕಾಯಕದ ಸ್ವರೂಪದರ್ಶನ ಮಾಡಿಸಿದ್ದಾಳೆ. ಕಾಯಕ ಮಾಡುವ ಶರಣ, ಅಂಗಗುಣಗಳ ಹಂಗನ್ನು ಹರಿದು ಶುದ್ಧಾಂಗನಾಗಬೇಕು. ನನಗೆ, ನನ್ನದು ಎನ್ನುವ ಬಯಕೆಯನ್ನು ತ್ಯಜಿಸಿ, ನಿಷ್ಕಾಮದಿಂದ ಕಾಯಕಗಯ್ಯಬೇಕು. ಮೇಲಾಗಿ ಕಾಯಕಕ್ಕೆ ಪವಿತ್ರ ಉದ್ದೇಶವಿದ್ದು ಪ್ರಾಮಾಣಿಕವಾಗಿರಬೇಕು; ಇಂಥ ನಿರ್ಮಲಚಿತ್ತದಿಂದ ಹೋಗಿ ಶರಣರಂಗಳದ ಅಕ್ಕಿಯನ್ನಾಯ್ದುಕೊಂಡು ಬರುವಂತೆ ಮಾರಯ್ಯನಿಗೆ ಹೇಳುತ್ತಾಳೆ.

ಪತ್ನಿಯ ಆದೇಶದಂತೆ ಮಾರಯ್ಯ, ಶುದ್ಧಮನಸ್ಕನಾಗಿ ನಿತ್ಯನೇಮದಂತೆ ಬಸವಣ್ಣನವರ ಅಂಗಳಕ್ಕೆ ಬರುತ್ತಾನೆ. ಮಾರಯ್ಯನ ಬಡತನ ಹಾಗೂ ದಿನನಿತ್ಯದ ಶ್ರಮಕ್ಕಾಗಿ ಅನುಕಂಪಗೊಂಡ ಬಸವಣ್ಣನವರು, ನಿತ್ಯಕ್ಕಿಂತ ಅಂದು ಹೆಚ್ಚು ಪ್ರಮಾಣದಲ್ಲಿ ಅಕ್ಕಿಯನ್ನು ಅಂಗಳದಲ್ಲಿ ಸುರಿಸಿರುತ್ತಾರೆ. ಇದರಿಂದ ಸಂತುಷ್ಟನಾದ ಮಾರಯ್ಯ ಹಿಂದೆ-ಮುಂದೆ ಯೋಚಿಸದೇ ನಿತ್ಯಕಾಯಕದ ನೇಮಕ್ಕೆ ಹೆಚ್ಚಾಗಿ ಅಕ್ಕಿಯನ್ನಾಯ್ದುಕೊಂಡು ಮನೆಗೆ ಬಂದು ಲಕ್ಕಮ್ಮನೆದುರಿಗೆ ಸುರಿಯುತ್ತಾನೆ. ಪತಿಯ ದುಡುಕುತನವನ್ನು ಕಂಡು ಲಕ್ಕಮ್ಮನಿಗೆ ಆಶ್ಚರ್ಯವಾಗುತ್ತದೆ. ತೀಕ್ಷ್ಣಮತಿಯಾದ ಅವಳಿಗೆ ಪತಿಯ ವಿಪರೀತ ವರ್ತನೆಯ ಹಿಂದು ಮುಂದುಗಳು ಹೊಳೆದು ಬಿಡುತ್ತವೆ. ಇದು ಬೇರಾರದೋ 'ಅನುಮಾನದ ಚಿತ್ತ'ದ ಫಲ ಎಂಬುದು ಅವಳಿಗೆ ಮನದಟ್ಟಾಗುತ್ತದೆ. ನಿರ್ಧಾರದ ಧ್ವನಿಯಲ್ಲಿ "ಈಸಕ್ಕಿಯಾಸೆ ನಮಗೇಕೆ? ನಮಗೆ ಎಂದಿನಂದವೇ ಸಾಕು. ಮತ್ತು ಕೊಂಡು ಹೋಗಿ ಮರಳಿ ಅಲ್ಲಿಯೇ ಸುರವಿ ಬನ್ನಿ" ಎಂದು ಹೆಚ್ಚಿನಕ್ಕಿಯನ್ನು ಶರಣರಂಗಳದಲ್ಲಿ ಸುರಿದು ಬರಲು ಹೇಳುತ್ತಾಳೆ. ಜೊತೆಗೆ ತನ್ನ ಖಡಾಖಂಡಿತವಾದ ಮಾತಿನಿಂದ ಪತಿ ಕೋಪಿಸಿಕೊಂಡಾನೆಂಬ ಮುಂಧೋರಣೆ

1. ಶೂನ್ಯ ಸಂಪಾದನೆ ಪುಟ 226 ಪದ್ಯ—12.

ಯಿಂದ, ನಮ್ರಳಾಗಿ ತಪ್ಪನ್ನೂ ಅರುಹುತ್ತಾಳೆ. ಜೊತೆಗೆ ಅವನ ದುರಾಸೆಯನ್ನು ಖಂಡಿಸುತ್ತಾಳೆ:

"ಆಸೆಯೆಂಬುದು ಅರಸಿಂಗಲ್ಲದೇ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸನಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"[1]

ಲಿಂಗಶ್ರೀಮಂತನಾದ ಸದ್ಭಕ್ತನಿಗೆ ಆಶೆಯ ಪಾಶವಿಲ್ಲ. ಶಿವಭಕ್ತಿಯೇ ಸಂಪತ್ತು. ಆಶೆಗೂ ಶಿವಭಕ್ತಿಗೂ ಬಹುದೂರ. ಅದು ಏನಿದ್ದರೂ ಭಕ್ತಿಯಲ್ಲಿ ಬಡವನಾದ, ಭಕ್ತಿ ಸಂಪತ್ತಿನಿಂದ ವಂಚಿತನಾದ, ಅರಸರಂಥ ಲೌಕಿಕಜೀವನಗಳಿಗೆ ನಾಳೆಯ ಆಸೆ ಭಕ್ತನನ್ನು ಬಡವನನ್ನಾಗಿಸುವ ಬಂಧನ ಎಂಬುದನ್ನು ಲಕ್ಕಮ್ಮ ಸಾವಧಾನವಾಗಿ ಪತಿಗೆ ತಿಳಿಸುತ್ತಾಳೆ. ತನ್ನ ನಿರ್ಭೀತ ಉತ್ತರದಿಂದ ಕೋಪಗೊಳ್ಳಬಹುದಾದ ಪತಿಗೆ ರೋಷವೆಂಬುದು ಯಮದೂತರ ಸಹಜಪ್ರವೃತ್ತಿ. ಆದರೆ ಅಂಗಗುಣ ಬಾಹಿರನಾಗಿ ಕಾಮ-ಕ್ರೋಧಾದಿಗಳಿಂದ ಮುಕ್ತನಾದ ಶರಣ ಸಾದಾ ಹಸನ್ಮುಖಿ. ಅವನಿಗೆ ಕೋಪವೆಂಬುದು ಹೊಲ್ಲ. ಎಂದು ಜಾಣ್ಮೆಯಿಂದ ಪತಿಗೆ ಕಾಯಕಸೂಕ್ಷ್ಮವಸ್ತುವನ್ನು ಅರುಹುತ್ತಾಳೆ. ಮರೆತು ಮಾನವನಾದ ಮಾರಯ್ಯನಿಗೆ ಅರಿವದೀಪಿಸುವ ಗುರುವಾಗುತ್ತಾಳೆ ಸತಿ ಲಕ್ಕಮ್ಮ.

ಭಕ್ತನಾದ ಶರಣ ಕಾಯಕಮಾಡುವ ನೆಪದಲ್ಲಿ ದುರಾಸೆಯಿಂದ, ಮೋಸದಿಂದ, ಗಳಿಕೆ ಮಾಡಿ ದಾಸೋಹ ಮಾಡಿದರೆ ಅದು ಕಾಯಕ ನಿಷ್ಠೆಗೆ ಬಾಹಿರ. ಅದು ಅನರ್ಪಿತ. ಮಾಡುವ ಕಾಯಕ ಶ್ರದ್ಧೆ, ನಿಷ್ಠೆ ಚಿತ್ತಶುದ್ಧಿಯಿಂದೊಡಗೂಡಿರಬೇಕು. ಒಮ್ಮನದಿಂದ ಕಾಯಕಮಾಡಿ ಒಮ್ಮನದ ಶುದ್ಧಚಿತ್ತದಿಂದ ದಾಸೋಹ ನೆರವೇರಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ, ಮಾಡುವ ಮನ–ಕವಲಾಗಿ, ಆಶೆ ಜನಿಸಿದರೆ ಅದು ಲಿಂಗಕ್ಕೆ ಸಲ್ಲದ ಬೋನ. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆ–ನುಡಿ ಸಾಮರಸ್ಯವಿಲ್ಲದ ಕಾಯಕ ನಿರರ್ಥಕ. 'ಕೊಡದೇ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದೆ ಶೃಂಗಾರ ಮಾಡುವ ಚಿತ್ತ, ಸಂಕಲ್ಪ ಭ್ರಮೆಗಳಿಂದ ಮುಕ್ತವಾಗಿ ನಿರ್ಭಯವಾಗಿ, ನಿಶ್ಚಲವಾಗಿರಬೇಕು. 'ಹರಸಿ ಮಾಡುವುದು ಹರಕೆಯ ದಂಡ, ನೆರಹಿ ಮಾಡುವುದು ಡಂಭಿನ ಭಕ್ತಿ' ಆಸೆ ಆಮಿಷಗಳಿಂದ ದೂರವಾದ ಚಿತ್ತಶುದ್ಧಿಯೇ ನಿಜವ ನಿಲುವಿಗೆ ಸಾಧನ.ಎನ್ನುವ ಲಕ್ಕಮ್ಮನ ಅಮೂಲ್ಯ ವಿಚಾರಗಳಿಂದ ಮಾರಯ್ಯ ದಿಗ್ಭ್ರಾಂತನಾಗುತ್ತಾನೆ. ಲಕ್ಕಮ್ಮ ಮತ್ತೂ ಮುಂದುವರೆದು ನಿತ್ಯ ನೇಮದ ಕಾಯಕ ನಿಷ್ಠೆಗೆ ವ್ಯತಿರಿಕ್ತವಾಗಿ ನಡೆದ ಪತಿಯ ವರ್ತನೆಗೆ ಕಾರಣವನ್ನು ಊಹಿಸಿದಂತೆಯೇ ಕೇಳುತ್ತಾಳೆ: 'ಇದು ನಿಮ್ಮ ಮನವೋ ಬಸವಣ್ಣನ ಅನುಮಾನವ ಚಿತ್ತವೋ? ಬಡಶರಣ

1. ಶಿವಶರಣೆಯರ ವಚನ—ಸಂ. ಡಾ: ಆರ್. ಸಿ. ಹಿರೇಮಠ ಪುಟ 529 ವಚನ 23.

ಮಾರಯ್ಯನಿಗೆ ಆಯ್ದಕ್ಕಿ ಸಾಲುವವೋ ಇಲ್ಲವೋ ಎಂಬ ಚಿತ್ತದ ಅನುಮಾನ ಬಸವಣ್ಣನವರಿಗಿರಬಹುದು. ಆದರೆ ಚಿತ್ತವಿಕಲ್ಪ ಶಿವಭಕ್ತ ಶ್ರೀಮಂತರಾದ ನಮಗೇಕೆ? ಆದುದರಿಂದ ಇದು ತ್ರಿವಿಧದಾಸೋಹಕ್ಕೆ ಅನರ್ಪಿತ. ಮಿಕ್ಕಿದಕ್ಕಿಯನ್ನು ಮತ್ತು ಅಲ್ಲಿಯೇ ಸುರಿದು ಬನ್ನಿ ಮಾರಯ್ಯ. ಎಂದು ನಿರ್ಭಯವಾಗಿ ತನ್ನ ವಿಚಾರಗಳನ್ನು ಪತಿಯ ಮುಂದಿಡುತ್ತಾಳೆ. ಲಕ್ಕಮ್ಮನ ಕಾಯಕನಿಷ್ಠೆಗೆ ನಿಬ್ಬೆರಗಾದ. ಮಾರಯ್ಯನವರ ಮನ, ಸತಿಯ ಸ್ವಾನುಭಾವದ ಬೆಳಗಿನಿಂದ ಸಂತೃಪ್ತವಾಗುತ್ತದೆ.

ಕಾಯಕ ದಾಸೋಹಗಳಂಥ ಕ್ರಿಯಾಚರಣೆಗಳಿಂದ ಮುಕ್ತನಾಗಿ, ತನಗೆ ನಿಜಪದ ಪ್ರಾಪ್ತವಾಗುವ ಸಮಯವಾವುದೆಂದು ತನ್ನ ಸ್ವಾನುಭವಿಯಾದ ಪತ್ನಿಯಿಂದ ತಿಳಿಯಬಯಸಿ, ಮಹಾಘನಲಿಂಗದಲ್ಲಿ ಸಮರಸವಾಗಬೇಕೆನ್ನುವ ತನ್ನ ಅಭಿಲಾಷೆಯನ್ನು ಅರಹುತ್ತಾನೆ. ತಾನು ಗೈಯ್ದ ಕಾಯಕಕ್ಕೆ ಪ್ರತಿಫಲವಾಗಿ ಕೈಲಾಸಪದವಿಯನ್ನು ಮಾರಯ್ಯ ಬಯಸಿದಾಗ ಪತಿಯ ಭ್ರಾಮಕ ವಿಕಳಾವಸ್ಥೆಗಾಗಿ ಲಕ್ಕಮ್ಮ ಮರಗುತ್ತಾಳೆ. ಪ್ರತಿಫಲಾಕಾಂಕ್ಷೆ ಇಲ್ಲದೇ ಮಾಡುವ ಕಾಯಕವೇ ನಿಜವಾದ ಕೈಲಾಸ. ಎಂದು ನಿಷ್ಠುರವಾಗಿ ನುಡಿದು, ಕಾಯಕಕ್ಕೆ ಪ್ರತಿಯಾಗಿ ಕೈಕೂಲಿಯಾಗಿ ಕೈಲಾಸ ಬಯಸುವ ಮಾರಯ್ಯನವರ ಕಾಯಕ–ಕೈಲಾಸಗಳ ದ್ವೈತ ಕಲ್ಪನೆಯನ್ನು ಅಲ್ಲಗಳೆಯುತ್ತಾಳೆ. ಪತಿಯ ಮನದ ಕಾಳಿಕೆಯನ್ನು ಪರಿಹರಿಸಲು ಸನ್ನದ್ಧಳಾಗಿ ಲಕ್ಕಮ್ಮ ಮಾರಯ್ಯನವರ ಮಾಟ-ಕೂಟಗಳ ತಪ್ಪು ಕಲ್ಪನೆಯನ್ನು ಕಟುವಾಗಿ ಅಲ್ಲಗಳೆಯುತ್ತಾಳೆ.

"ಮಾಡಿ ನೀಡಿ ಹೋದೆನೆಂಬಾಗ ಕೈಲಾಸವೇನು ಕೈಕೂಲಿಯೇ?
ಮುಂದೊಂದ ಕಲ್ಪಿಸದೇ ಹಿಂದೊಂದ ಭಾವಿಸದೇ ಸಲೆಸಂದಿದ್ದಾಗವೆ
ಮಾರಯ್ಯ ಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ"[1]

ಮಾರಯ್ಯ ಬಡವನೆಂಬ ಅನುಕಂಪದಿಂದ, ಹೆಚ್ಚು ಅಕ್ಕಿಯನ್ನು ಸುರಿಸಿದ ಬಸವಣ್ಣನವರ ಅನುಮಾನದ ಚಿತ್ರವನ್ನೂ ವಿಡಂಬಿಸುತ್ತಾಳೆ. ಘನಮನಸಂಪನ್ನರಾದ ಶರಣರಿಗೆ ಬಡತನವೆಲ್ಲಿಯದು? 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೇ?' ದಾಸೋಹವನ್ನು ಲಕ್ಷಿಸಿ ಕೈಲಾಸ ಬೇಡುವುದು ಶರಣರಿಗೆ ಸಲ್ಲದ ನೀತಿ.

ಲಕ್ಕಮ್ಮನ ಅನುಭಾವದ ಅಮೃತವನುಂಡು ತೃಪ್ತನಾದ ಮಾರಯ್ಯ ಸತಿಯನ್ನು ಗುರುವೆಂದು ಒಪ್ಪಿಕೊಳ್ಳುತ್ತಾನೆ. ಇಲ್ಲಿಯೇ ಶರಣಧರ್ಮದ ನೀತಿಪತಾಕೆ,ಆಚರಣೆಯ ಭದ್ರ ನೆಲೆಗಟ್ಟಿನ ಮೇಲೆ ವಿಜೃಂಭಿಸಿದೆ. ಸತಿ ಕೀಳು, ಪತಿ ಮೇಲು ಎಂಬ ಪರಂಪರಾಗತ ಕುರುಡು ಮೌಲ್ಯದ ಪುನರ್ವಿಮರ್ಶೆಮಾಡಿದ ಶರಣರು, ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಪ್ರಾಧಾನ್ಯತೆ ಕೊಟ್ಟವರು. ಲಕ್ಕಮ್ಮನಲ್ಲಿ ಬೆಳಗುವ ಅರಿವಿನ ಜ್ಯೋತಿಗೆ ಮಾರಯ್ಯ ವಿನೀತಭಾವದಿಂದ ತಲೆಬಾಗುತ್ತಾನೆ. ಅವಳಿಂದ ನಿಜೈಕ್ಯದ ನಿಲುವನ್ನು ತಿಳಿಯ ಬಯಸುತ್ತಾನೆ:

'ಮಹಾಘನಲಿಂಗದೊಳಗೆ ವಾರಿವಾರಿ ಬೆರೆದ ಹಾಗೆ, ಶಿಖಿ ಕರ್ಪುರ ಸಂಯೋಗ

1. ಶಿವಶರಣೆಯರ ವಚನಗಳು—ಸಂ. ಡಾ: ಆರ್. ಸಿ. ಹಿರೇಮಠ
ಪುಟ 332 ವಚನ 83.

ದಂತೆ ಎಂದಿಷ್ಟು? ನಿರಹಂಭಾವವೇ ಮೂರ್ತಿವೆತ್ತಂತಿದ್ದ ಲಕ್ಕಮ್ಮನ ಅನುಭಾವ ಪೂರ್ಣ ಉತ್ತರ ತೆರೆತೆರೆಯಾಗಿ ಧುಮ್ಮಿಕ್ಕುತ್ತದೆ. ಎಲ್ಲಿದೆ ಕೈಲಾಸ? ಮಾಡುವ ಮಾಟದಲ್ಲಿಲ್ಲದ ಕೈಲಾಸಕ್ಕೆ ಬೇರೆಲ್ಲಿದೆ ಅಸ್ತಿತ್ವ? ಅನ್ಯರು ಸಮರಸದ ಸ್ವರೂಪವನ್ನು ಹೇಳಬಹುದೇ ಹೊರತು, ಸಮರಸಾನುಭವವನ್ನು ಕೊಡಲು ಸಾಧ್ಯವೇ? 'ಕೈದು ಕೊಡುವವರಲ್ಲದೇ ಕಲಿತನವನ್ನು ಕೊಡುವವರುಂಟೇ' ಸ್ವಸಂವೇದ್ಯವಾದ ಲಿಂಗಾಂಗ ಯೋಗವನ್ನು ಬೇರೆಲ್ಲಿ ಅರಸಿದರೂ ವ್ಯರ್ಥ. ಅದು ನಿನ್ನಲ್ಲಿಯೇ ಇದೆ. ಮಾಡುವ ಮಾಟದಲ್ಲಿ ಕಾಮ-ನಿಷ್ಕಾಮಗಳೆಂಬ ಉಭಯವಳಿದಲ್ಲಿ ಅದೇ ಅಮರೇಶ್ವರ ಲಿಂಗವ ಕೂಡುವ ಕೂಟ. 'ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಾ ನೀನೇ ಬಲ್ಲೆ; ತ್ರಿಕರಣ ಶುದ್ಧನಾಗಿ ಅಹಂಕಾರ–ಮಮಕಾರವಳಿದು ನಿರ್ಭಾವನಾಗಿ ನಿಂದು ಮಾಡುವ ಮಾಟವೇ ಮಹಾಘನ ಲಿಂಗೈಕ್ಯ. 'ಅಮರೇಶ್ವರ ಲಿಂಗವಿದ್ದ ಠಾವೇ ಕೈಲಾಸ' ಮಾಟಕೂಟಗಳೆರಡೂ ಅಭಿನ್ನ ಎಂಬ ಅದ್ವೈತ ತತ್ವವನ್ನು ಅರುಹುತ್ತಾಳೆ:

"ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ?
ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ,
ಕೈಲಾಸವೆಂಬ ಆಸೆ ಬೇಡ.
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೆ ಕೈಲಾಸ;"[1]

ಎಂದು ಮಾರಯ್ಯನವರ ಮರುವೆಯ ಮುಸುಕನ್ನು ಓಸರಿಸುತ್ತಾಳೆ. ತನ್ನ ನಿಲುವಿಗೆ ನಾಚದ ಪತಿಯನ್ನು ಲಕ್ಕಮ್ಮ ಅಷ್ಟೇ ವಿನೀತಳಾಗಿ ಸಂತೈಸುತ್ತಾಳೆ:

"ಆವ ಬೀಜವು ಬೀಳುವಲ್ಲಿ, ಮೊಳೆ ಮುಖ, ಹಿಂಚು ಮುಂಚುಂಟೇ?
ನೀ ಮುಱಿದಲ್ಲಿ ನಾನಱುದಲ್ಲಿ ಬೇಱಿಕೊಂಡೊಡಲುಂಟೇ?
ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.
ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ,
ಅಱುದಿಂಗೆ ಬೇಱಿಕೊಂಡೊಡಲುಂಟೇ?
ಬೇಱಿಕೊಂದಡಿಯಿಡದಿರು,
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವನಱಿಯ ಬಲ್ಲಡೆ"[2]

ದೇಹವೆರಡು ಮನವೊಂದು ಎಂದು ಬಾಳಿದ ಸತಿ–ಪತಿಯರಲ್ಲಿ ಭಿನ್ನಭಾವವಿಲ್ಲ. ಪತಿ ಮರೆತು ಎಡವಿದಾಗ ಕೈಹಿಡಿದಸತಿಯಾಗಿ ಮೇಲೆತ್ತುವುದು ಸತಿಯಾದವಳ ಕರ್ತವ್ಯ. ಅವರಿಬ್ಬರ ಅರಿವು ಅಭಿನ್ನ ಎನ್ನುವ ಲಕ್ಕಮ್ಮನ ಅಭಿಪ್ರಾಯ ನಿಜಕ್ಕೂ ಭಾರತೀಯ ಸಂಸ್ಕೃತಿಯ ಹಿರಿಮೆಗೆ ಬದ್ಧವಾದುದು.

ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು ಮೊದಲಾದ ಅಸಂಖ್ಯಾತ ಶರಣರಿಗೆ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮದೇವರಿಗೆ ವಿಭೂತಿಯನ್ನು ಸಂಬಂಧಿಸಿ 'ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಮಹಾಮನೆಯಲ್ಲಿ ಪದಾರ್ಥ

1. ಶಿವಶರಣೆಯರ ವಚನಗಳು—ಸಂ. ಡಾ: ಆರ್. ಸಿ. ಹಿರೇಮಠ ಪುಟ 332 ವ. 92
2. ಶಿವಶರಣೆಯರ ವಚನಗಳು—ಸಂ. ಡಾ: ಆರ್. ಸಿ. ಹಿರೇಮಠ ಪುಟ 334 ವ. 89

ವಾಯಿತ್ತೆಂದು ಬಿನ್ನಹ ಮಾಡಿ ಬರಲು, ಲಕ್ಕಮ್ಮ ಮಾರಯ್ಯನವರಿಗೆ ಹೇಳುತ್ತಾಳೆ. ಮಾರಯ್ಯ ಸತಿಯ ಸಂಕಲ್ಪ ಅರ್ಥವಾಗದೇ ಹಿಂದೆಗೆಯುತ್ತಾನೆ. ಕಡುಬಡವರಾದ ತಾವು ನಿತ್ಯ ನೇಮ ಸಂಪನ್ನರಾದ ಶರಣ ಸಮೂಹಕ್ಕೆ ಆರೋಗಣೆ ಮಾಡಿಸಿ ತೃಪ್ತಿಪಡಿಸಲು ಸಾಧ್ಯವೇ?ಎನ್ನುವ ಸಂದೇಹದಲ್ಲಿ ಬಳಲುತ್ತಾನೆ. ಪತಿಯ ಸಂಕಲ್ಪ-ವಿಕಲ್ಪ ಭ್ರಮೆಯನ್ನರಿತ ಲಕ್ಕಮ್ಮ ಅದನ್ನು ನಿವಾರಿಸಲು ಪ್ರಯತ್ನಿಸಿ ಹೀಗೆ ನುಡಿಯುತ್ತಾಳೆ:

"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ"

ಸತ್ಯಶುದ್ಧ ಕಾಯಕ ಮಾಡುವ ಶರಣರಿಗೆ ಚಿತ್ತ ಶುದ್ಧದ ನಿಲುವೇ ಅಮೂಲ್ಯ ಸಂಪತ್ತು. ಸದ್ಭಕ್ತರಿಗೆ ಅದರ ಫಲಗಳೂ ಕೈಗೂಡುವವೆಂಬ ಲಕ್ಕಮ್ಮನ ಅಚಲ ಕಾಯಕ ನಿಷ್ಠೆಯ ಎದುರು ಮಾರಯ್ಯನವರು ಸೋಲೊಪ್ಪಬೇಕಾಗುತ್ತದೆ. 'ಬೆಟ್ಟ ಬಲ್ಲಿತ್ತೆಂದರೆ ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೇ?' 'ನಿತ್ಯ ಸತ್ಯನಾದ ಶಿವನ ಅಂತಃಕರಣೆಯ ಆಸರೆಯಿದ್ದ ಭಕ್ತನಿಗೆ ಆರ ಹಂಗಿಲ್ಲ.' ಎಂದು ತನ್ನ ಉನ್ನತ ದೃಢ ವಿಚಾರಗಳ ಮೂಲಕ ಪತಿಯ ಭ್ರಮೆಯನ್ನು ನಿವಾರಿಸುತ್ತಾಳೆ. ಲಕ್ಕಮ್ಮನ ಆದೇಶದಂತೆ ಮಾರಯ್ಯ ಬಸವಣ್ಣನ ಮಹಾಮನೆಗೆ ಹೋಗಿ ಸಕಲ ಪ್ರಮಥಗಣಗಳು ಸಹ ಅಮರೇಶ್ವರ ಲಿಂಗದ ಮನೆಯಲ್ಲಿ ಪ್ರಸಾದಕ್ಕೆ ಬರಬೇಕೆಂದು ಬಿನ್ನವಿಸಿ ಬರುತ್ತಾನೆ. ಮಾರಯ್ಯ ಘನಶರಣ ತಿಪ್ಪೆಯ ತಪ್ಪಲಕ್ಕಿಯನ್ನಾಯ್ದು ಹೊಟ್ಟೆ ಹೊರೆಯುವ ಮಾರಯ್ಯನ ಆಹ್ವಾನವನ್ನು ಕೇಳಿ ಬಸವಣ್ಣನಿಗೆ 'ಚಿತ್ತದ ಅನುಮಾನ' ಮತ್ತೆ ಪ್ರಾರಂಭವಾಗುತ್ತದೆ.

ಇವನು ಈ ಮಹತ್ಕಾರ್ಯವನ್ನು ಹೇಗೆ ನೆರವೇರಿಸಬಲ್ಲ ಎಂಬುವೇ ಅವರಿಗೆ ಅಚ್ಚರಿ. ಅಮರೇಶ್ವರ ಲಿಂಗದ ದಿವ್ಯ ಪ್ರಸಾದದಿಂದ ವಂಚಿತನಾಗಬಯಸದ ಬಸವಣ್ಣ, ಮಾರಯ್ಯನ ಬಿನ್ನಹವನ್ನು ಒಪ್ಪಿ ಪ್ರಭುದೇವ ಸಹಿತ ಅಸಂಖ್ಯಾತರೊಂದಿಗೆ ಅವರ ಮನೆಗೆ ಹೋಗುತ್ತಾನೆ.

ಇತ್ತ ಪತಿಯನ್ನು ಕಳುಹಿದ ಲಕ್ಕಮ್ಮ, ತನ್ನ ಅನುಭಾವಕ್ಕೆ ಅಳವಟ್ಟ ಸರ್ವಜ್ಞತ್ವದಿಂದ ಪ್ರಭುದೇವ ಸಹಿತವಾಗಿ ಅಸಂಖ್ಯಾತ ಗಣಂಗಳ ಮನೋಭಿಲಾಷೆಯನ್ನರಿತು, ಅವರವರ ಬಯಕೆಯಂತೆ ಆಯಾ 'ಪ್ರಮಥರ್ಗೆ ಸಲುಸಲುವ ನೇಮಂಗಳಲ್ಲಿ' ಪದಾರ್ಥವನ್ನು ಅನುಗೈಯುತ್ತಾಳೆ.

ದಂಪತಿಗಳೀರ್ವರೂ ಮನೆಗೆ ಬಂದ ಮಹಾಗಣಂಗಳಿಗೆ ಪಾದಾರ್ಚನೆಗೈದು, ಆಯಾ ಶರಣರ ಇಚ್ಛಾ ಪದಾರ್ಥಗಳನ್ನು ಸಲ್ಲಿಸಿ ತೃಪ್ತಿಯಾಗುವಂತೆ ಷಡುರುಚಿಯ ಆರೋಗಣೆ ಮಾಡಿಸುತ್ತಾರೆ. ಅಷ್ಟು ಕ್ಕಿಯಿಂದಲೇ ಅಸಂಖ್ಯಾತರಿಗೆ ಆರೋಗಣೆ ಮಾಡಿಸಿ, ಸದ್ಭಕ್ತರಿಗೆ ಬಡತನವಿಲ್ಲವೆಂಬುದನ್ನು ಪ್ರತ್ಯಕ್ಷ ತೋರಿಸುತ್ತಾರೆ.

ಸತಿಪತಿಗಳ ಘನಮನದ ಸಿದ್ಧಿಯನ್ನು ಕಂಡು, ಪ್ರಭುದೇವ ಸಂತೋಷದಿಂದ ಮನಸಾರೆ ಅವರನ್ನು ಕೊಂಡಾಡುತ್ತಾನೆ. ಶರಣರ ನಿಷ್ಠೆಯ ಒರೆಗಲ್ಲಾಗಿ, ಜ್ಞಾನ ಅನುಭಾವಗಳ ನಿಧಿಯಾದ ಪ್ರಭುದೇವನಿಂದ ಮೆಚ್ಚುಗೆ ಪಡೆದುದು, ಈ ದಂಪತಿಗಳ

ಅಸೀಮ ಕಾಯಕ ನಿಷ್ಠೆಯ ಉನ್ನತ ನಿದರ್ಶನವೆನ್ನಬಹುದು.

ಅಳಿಮನದ ವಿಕಲ್ಪದಿಂದ ಮಾರಯ್ಯ ದಂಪತಿಗಳ ನಿಷ್ಠೆಯನ್ನು ಸಂದೇಹಿಸಿದ ಬಸವಣ್ಣನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಅಲೌಕಿಕ ಸಂಪತ್ತಿನ ಒಡೆಯರಾದ ಅವರ ಹಿರಿಮೆಯನ್ನು ಸ್ತುತಿಸುತ್ತಾನೆ.

"ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು;
ಧನ ನೋಡಾ ಬಡವರು, ಘನಮನಸಂಪನ್ನರು;
ಕೂಡಲ ಸಂಗನ ಶರಣರು ಕರುಳಿಲ್ಲದ ಕಲಿಗಳು;
ಆರಿಗೆ ಉಪಮಿಸಬಹುದು?[1]

ಪ್ರಭುದೇವ, ಬಸವಣ್ಣ ಇವರೆಲ್ಲರ ಪ್ರಶಂಸೆಗಳಿಗೆ ಮಾರಯ್ಯ ದಂಪತಿಗಳ ನಿರಹಂಭಾವ, ದಾಸೋಹಂಭಾವಗಳೇ ಉತ್ತರ:

"ಎನಗೆ ಮನೆ ಇಲ್ಲ, ಎನಗೆ ಧನವಿಲ್ಲ.
ಮಾಡುವುದೇನು? ನೀಡುವುದೇನು?
ಮನೆ ಧನ ಸಕಲಸಂಪದ ಸೌಖ್ಯವುಳ್ಳ ನಿಮ್ಮ ಶರಣರ
ತಪ್ಪಲಕ್ಕಿಯನ್ನಾಯ್ದು ತಂದು ಎನ್ನೊಡಲ ಹೊರೆವೆನಾಗಿ
ಅಮರೇಶ್ವರ ಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನ ಬಸವಣ್ಣ.

ಹೀಗೆ ಅಹಂಭಾವದ ತಲೆಕತ್ತರಿಸಿ ದಾಸೋಹ ಮಾಡಿದ ಕಾಯಕ ಧೀರರು ಮಾರಯ್ಯ–ಲಕ್ಕಮ್ಮ ದಂಪತಿಗಳು.

ಕಾಯಕ ಮಾಡಿ ಕೈಲಾಸಕ್ಕೆ ಹೋಗಬೇಕೆನ್ನುವ ಬಸವ ಪೂರ್ವ ಭಕ್ತಿಪರಂಪರೆಯನ್ನು ಮೆಟ್ಟಿ, ಮುನ್ನಡೆಸು 'ಕಾಯಕವೇ ಕೈಲಾಸ' ಎಂಬ ಅದ್ವೈತ ಭಕ್ತಿ ಸಾಧನೆಗೈಯ್ದ ಜೀವಂತ ನಿದರ್ಶನವಾಗಿದ್ದಾಳೆ ಲಕ್ಕಮ್ಮ. ಆ ದಾರಿಯಲ್ಲಿ ಸಾಗಬಲ್ಲವರಿಗೆಲ್ಲ ಮಾರಯ್ಯ–ಲಕ್ಕಮ್ಮಗಳ ದಿವ್ಯ ಜೀವನ ಆದರ್ಶಪ್ರಾಯವಾಗಿದೆ.

○

1. ಶೂನ್ಯ ಸಂಪಾದನೆ ಪರಾಮರ್ಶೆ–ಪುಟ-695. ಲೇ: ಸಂ. ಶಿ. ಭೂಸನೂರಮಠ

ವರದಾನಿ ಗುಡ್ಡವ್ವೆ

ಎಚ್. ಎಸ್. ಗಂಗಮ್ಮ

ಶರಣರ ಚರಿತ್ರೆಯನ್ನು ತಿಳಿಯಲು ನಮಗೆ ಮುಖ್ಯವಾದ ಆಧಾರಗಳೆಂದರೆ ಶಿವ ಶರಣರ ವಚನಗಳು, ಐತಿಹ್ಯಗಳು, ಶಿವಕವಿಗಳ ಕಾವ್ಯಗಳು ಹಾಗೂ ಶಾಸನಗಳು. ವರದಾನಿ ಗುಡ್ಡವ್ವೆಯ ಬಗ್ಗೆ ಯಾವುದೇ ಶರಣರ ವಚನಗಳಲ್ಲಿ ಉಲ್ಲೇಖವಿಲ್ಲ. ಸ್ವತಃವರದಾನಿ ಗುಡ್ಡವ್ವೆಯು ಬರೆದ ವಚನಗಳೂ ಸಿಗುವುದಿಲ್ಲ. ಶಿವಕವಿಗಳ ಕಾವ್ಯಗಳಲ್ಲಿ ಗುಡ್ಡವ್ವೆಯ ಬಗ್ಗೆ ನಮಗೆ ಉಲ್ಲೇಖಗಳು ಸಿಗುತ್ತವೆ. ಹರಿಹರ ಕವಿಯ ಉಡುತಡಿಯ ಮಹದೇವಿಯಕ್ಕನ ರಗಳೆ, ಭೀಮಕವಿಯ ಬಸವ ಪುರಾಣ, ಪದ್ಮಣಾಂಕನ ಪದ್ಮರಾಜ ಪುರಾಣ, ಲಕ್ಕಣ್ಣದಂಡೇಶನ ಶಿವ ತತ್ವ ಚಿಂತಾಮಣಿ, ಕಿಕ್ಕೇರಿ ನಂಜುಂಡಾರಾಧ್ಯನ ಭೈರವೇಶ್ವರ ಕಾವ್ಯ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಕುಮಾರ ಚನ್ನಬಸವ ವಿರಚಿತ ಪುರಾತನರ ಚರಿತೆ, ಸಿದ್ಧನಂಜೇಶನ ಗುರುರಾಜ ಚಾರಿತ್ರ, ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಮೊದಲಾದ ಕಾವ್ಯಗಳಲ್ಲಿ ಗುಡ್ಡವ್ವೆಯ ಬಗೆಗೆ ಉಲ್ಲೇಖಗಳು ಸಿಗುತ್ತವೆ. ಗುಡ್ಡವ್ವೆಯ ಉಲ್ಲೇಖದ ಬಗೆಗೆ ನಾಲ್ಕು ಶಾಸನಗಳು ಉಪಲಬ್ಧವಿವೆ. ಈ ಆಧಾರಗಳನ್ನು ಇಟ್ಟುಕೊಂಡು ಈಕೆಯ ಚರಿತ್ರೆಯನ್ನು ಈ ರೀತಿ ನಿರೂಪಿಸಬಹುದು.

ಕವಿಚರಿತೆಕಾರರು ತಮ್ಮ ಕವಿಚರಿತೆ ಭಾಗ–೧ ರಲ್ಲಿ ಒಬ್ಬ ಗುಡ್ಡವ್ವೆಯನ್ನು ಉಲ್ಲೇಖ ಮಾಡಿದ್ದಾರೆ. ಇಲ್ಲಿ ಈಕೆಯ ಕಾಲವನ್ನು ಕ್ರಿ. ಶ. ೧೪೨೦ ಎಂದು ಹೇಳಿ ಈಕೆ ಬಸವೇಶ್ವರನ ಸಮಕಾಲೀನಳಾದ ವರದಾನಿ ಗುಡ್ಡವ್ವೆಗಿಂತ ಭಿನ್ನಳು ಎಂದು ಹೇಳಿರುವುದರಿಂದ ಗುಡ್ಡವ್ವೆ ಎಂಬ ಹೆಸರಿನವರು ಇಬ್ಬರಿದ್ದಾರೆಂದು ಭಾಸವಾಗುತ್ತದೆ. (೧) ವರದಾನಿ ಗುಡ್ಡವ್ವೆ (೨) ನಾವದಿಗೆ ಗುಡ್ಡವ್ವೆ. ಕಾವ್ಯಗಳು ಹಾಗೂ ಶಾಸನಗಳ ಆಧಾರವನ್ನು ಇಟ್ಟುಕೊಂಡು ನೋಡಿದಾಗ ಇವರಿಬ್ಬರ ಜೀವನ ಚರಿತ್ರೆಯು ಬೇರೆ ಬೇರೆಯಾಗಿರುವುದು ಕಂಡು ಬರುತ್ತದೆ.

ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಶಿವಶರಣರ ಕಥಾಪ್ರಸಂಗಗಳಲ್ಲಿ ಹಲವು ಗಮನಾರ್ಹ ಸನ್ನಿವೇಶಗಳ ನಿರೂಪಣೆಯಿದೆ. ಅವುಗಳಲ್ಲಿ ಮೇಲಾದುದೆಂದರೆ ವರದಾನಿ ಗುಡ್ಡವ್ವೆಯ ಚರಿತ್ರೆ. ಷೋಡಶರಲ್ಲಿ ಬಹಳ ಪ್ರಖ್ಯಾತ ವ್ಯಕ್ತಿ

ಶಿಷ್ಯವರ್ಗದವಳಾದ ಗುಡ್ಡಮ್ಮ. ಅಥವಾ ವಾರಾಣಸಿ ಗುಡ್ಡಮ್ಮ. ಇಲ್ಲಿ ಈಕೆಯ ಕಥೆ ಈ ರೀತಿಯಾಗಿದೆ: ಕೈಲಾಸದಲ್ಲಿ ಒಮ್ಮೆ ಗಿರಿಜೆಯು ಭೃಂಗೀಶನನ್ನು "ನೀನೆಮ್ಮ ಹಂಗಿಗನಲ್ಲ" ಎಂದು ಹಂಗಿಸಿದ್ದಳಂತೆ. ಶಿವನಿಗೆ ಇದು ಸರಿಹೋಗಲಿಲ್ಲ. "ನಿನ್ನ ನನ್ನಯ ಮನಸ್ಸ ತಿಕ್ಕೆಗೆಟ್ಟು ಕರಿದ ನಾಡಿದೆ ನೀನಿನ್ನು ಗುಡ್ಡಾಯಿ ಎಂಬಳಾಗಿ ನಿನ್ನ ಜನ್ಮನಂಬಿಕ್ಕಿನ ಪಾನವಿರುತವೆನಗನ್ಯವಂ ಬಗೆದ ಸಮಯ ದ್ರೋಹಿಗಳನರಿದು ನಿನ್ನ ನೆಲೆಗೊಳಿಸು. ಗುಡ್ಡಾಪುರದ ನಿನ್ನ ಸೋಮ ಸಾಮ್ಯದ ರೂಪು ರಚಿಸಿ ಮರ್ತ್ಯದೊಳಗೆ ಮನೋಮುದದೊಳ್‌ಕ್ಷಿಸಲ್ ಜನಿಸುಹೋಗಲ್ಲಿ ಸೋಮೇಶಲಿಂಗಾಲಯಮಿಹೆ" ಎಂದು ಬೆಸಸಿದ.

ಶಿವನ ಅಪ್ಪಣೆಯಂತೆ ಗುಡ್ಡಾಪುರದಲ್ಲಿ ಜನ್ಮವೆತ್ತಿ ಅಲ್ಲಿ ಸೋಮೇಶಲಿಂಗದ ಸೇವಾತತ್ಪರಳಾಗಿದ್ದಳು. ಈಕೆಯೆ ಗುಡ್ಡವ್ವೆ. ಈ ಗುಡ್ಡಾಪುರಕ್ಕೆ ಮೂವತ್ತು ಗಾವುದದಲ್ಲಿನ ಅಲಂಪುರದಲ್ಲಿದ್ದ ಬ್ರಹ್ಮೇಶ್ವರ ಲಿಂಗವನ್ನು ಒಂದು ದಿನ ಧೂರ್ತರು ಕಿತ್ತು ಹೊಳೆಯಲ್ಲಿ ಹಾಕಿ, ಅಲ್ಲಿ ವೀರನಾರಾಯಣನನ್ನು ಸ್ಥಾಪಿಸಿದರು. ಅಲ್ಲಿಯೇ ವಾಸಿಸುತ್ತಿದ್ದ ವೀರನಾಚಯ್ಯನೆಂಬುವವನು ಆ ಅತ್ಯಾಚಾರವನ್ನು ಕಂಡರೂ ಪ್ರತಿಭಟಿಸಲನುವಿಲ್ಲದೆ ದುಃಖದಿಂದ ಅನ್ನ ಬಿಟ್ಟು ಮಲಗಿದ. ಅವನ ಕನಸಿನಲ್ಲಿ ಬ್ರಹ್ಮೇಶ್ವರನು ಬಂದು ಆ ವೃತ್ತಾಂತವನ್ನು ಗುಡ್ಡವ್ವೆಗೆ ತಿಳಿಸೆಂದು ಹೇಳಿದಂತಾಯಿತು. ಒಡನೆಯೇ ವೀರನಾಚಯ್ಯನು ಗುಡ್ಡವ್ವೆಯ ಬಳಿ ಹೋಗಿ ಶಿವಲಿಂಗಕ್ಕೆ ಆದ ಅಪಚಾರವನ್ನು ಕುರಿತು ದೂರಿದನು. ಕೂಡಲೇ ಗುಡ್ಡವ್ವೆಯು ಮೇಳದ ಗಣಂಗಳಾದ ಹೋಡಪರನ್ನು ಕರೆದು, ಅಲಂಪುರದ ವಿಭೂತಿಯಿತ್ತು. ಆ ಚತುರ್ಗ್ರಾಮದೊಳಗುಳ್ಳ ಶಿವಭಕ್ತರಿಗೆ ಊರ ಹೊರವಳಯದಲ್ಲಿ ಬೀಡು ಬಿಡಲು ಸೂಚನೆಯಿತ್ತು ಹದಿನಾರು ರಥಗಳನ್ನು ತರಿಸಿ. ಅಲಂಪುರಕ್ಕೆ ಹೋದ ಹರೊಡನೆ ದಾಳಿಯಿಟ್ಟಳು. ದ್ರೋಹಿಗಳು ದಿಗ್ಭ್ರಾಂತರಾಗಿ ಚದುರಿದರು. ಗುಡ್ಡಮ್ಮನು ನಾಚಯ್ಯನ ನೇತೃತ್ವದಲ್ಲಿ ಮುಂದುವರಿದು, ಮಲಪ್ರಹರೀ ನದಿಯಿಂದ ಬ್ರಹ್ಮೇಶ್ವರ ಲಿಂಗವನ್ನು ಎತ್ತಿ ಪುಷ್ಪಕದಲ್ಲಿ ಬಿಜಯಂಗೈಸಿ. ಆ ಪುರದ ಪಶ್ಚಿಮ ಗೋಪುರದಲ್ಲಿ ಬ್ರಹ್ಮೇಶ್ವರ ಲಿಂಗವನ್ನಿಟ್ಟು, ಅದಕ್ಕೆ ಕಾವಲಿಟ್ಟ. ಎಲ್ಲರೂ ವೀರಕಂಕಣಗಳನ್ನು ಕಟ್ಟಿ ಯುದ್ಧಕ್ಕೆ ಹೊರಟರು. ಹೋರಾಡಿ ಗೆದ್ದರು. ವೀರನಾರಾಯಣ ಪ್ರತಿಮೆಯು ಸಿಡಿಯಿತು. ಗುಡ್ಡವ್ವೆಯು ತನ್ನ ಮರವೆಯಿಂದ ಬ್ರಹ್ಮೇಶ್ವರಲಿಂಗಕ್ಕೆ ಈ ಅವಸ್ಥೆಯಾಯಿತೆಂದು ಪ್ರಾಯಶ್ಚಿತ್ತಕ್ಕಾಗಿ "ಜಪಹೋಮಾದಿಗಳನ್ನು" ನಡೆಸಿ ಅಲಂಪೂರ ಪಶ್ಚಿಮದ ಗೋಪುರದ ಧವಳಾರದಲ್ಲಿಟ್ಟಿದ್ದ ಬಹ್ಮೇಶ್ವರ ಲಿಂಗವನ್ನು ತಂದು ಪೀಠದ ಮೇಲೆ ಇಟ್ಟಳು. ಆದರೆ ಆ ಲಿಂಗವು ನೆಲೆನಿಲ್ಲದೆ ಅಲ್ಲಾಡಲು ಗುಡ್ಡವ್ವೆ ಮುಂತಾದ ಹೋಡಪರು ತಮ್ಮ ತಲೆಗಳನ್ನು ಕತ್ತರಿಸಿಕೊಂಡು ಶಿವನನ್ನು ಅರ್ಚಿಸಿ ಕೈಲಾಸಕ್ಕೆ ನಡೆದರು. ರಾಜರು ಸತ್ತರೆ ಅವರ ರಕ್ಷಣೆಗೆ ಕಂಕಣ ಕಟ್ಟಿದ್ದ ವೇಳೆವಾಳಗಳು ಸಾಯುತ್ತಿದ್ದ ಸಂಪ್ರದಾಯವು, ವೀರಶೈವದ ಧಾರ್ಮಿಕ ಕ್ಷೇತ್ರದಲ್ಲಿ ಶಿವಲಿಂಗಕ್ಕೆ ಅಪಚಾರವಾದರೆ ವೀರಭಕ್ತರು ಸಾಯುತ್ತಿದ್ದ ಪದ್ಧತಿಯಲ್ಲಿ ಪಡಿಮೂಡಿರುವುದನ್ನು ಗಮನಿಸಬೇಕು. ಇಲ್ಲಿ ಗುಡ್ಡವ್ವೆಯ ಉಗ್ರಭಕ್ತಿ, ಶೈವಾಭಿಮಾನ ಕಲಿತನ ಸ್ಪಷ್ಟವಾಗಿ ಗೋಚರವಾಗುತ್ತದೆ. ಅಲಂಪೂರದಲ್ಲಿ ಅವಳು ಶಿವಲಿಂಗವನ್ನು ಪ್ರತಿಷ್ಠಾಪಿಸಿದ ಘಟನೆ ನಿರೂಪಿತವಾದುದು ಈ ಕಾವ್ಯದಲ್ಲಿಯೇ.

ಹರಿಹರ ಕವಿಯು ಉಡುತಡಿಯ ಮಹದೇವಿಯಕ್ಕನ ರಗಳೆಯಲ್ಲಿ ಅಕ್ಕನು ಭೂಮಿಗವತರಿಸಬೇಕಾದ ಸಂದರ್ಭದಲ್ಲಿ ಕೈಲಾಸದಲ್ಲಿದ್ದ ಶಿವಶರಣೆಯರ ಹೆಸರನ್ನು ಹೇಳುತ್ತಾ ವರದಾನಿ ಗುಡ್ಡವ್ವೆಯ ಹೆಸರನ್ನೂ ಉಲ್ಲೇಖ ಮಾಡಿದ್ದಾನೆ. ಹರಿಹರನ ಕೃತಿಗಳು ಐತಿಹಾಸಿಕ ಆಧಾರಗಳಿಗೆ ತುಂಬಾ ಹತ್ತಿರವಾದಂತವುಗಳಾಗದುದರಿಂದ 'ವರದಾನಿ ಗುಡ್ಡವ್ವೆ'ಯು ಅಕ್ಕಮಹಾದೇವಿಗಿಂತ ಪೂರ್ವದವಳು ಎಂದು ಊಹಿಸಬಹುದು. ಇಲ್ಲಿ ಈಕೆಯ ಚರಿತ್ರೆಯ ಬಗ್ಗೆ ಯಾವುದೇ ಸಂಗತಿಗಳಿಲ್ಲ.

ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ ಗುಡ್ಡಾಪುರದವಳೆಂದಷ್ಟೇ ಉಲ್ಲೇಖವಿದೆ. ಆದ್ದರಿಂದ ಈಕೆ ಗುಡ್ಡಾಪುರದಲ್ಲಿ ಜನಿಸಿದ ವರದಾನಿ ಗುಡ್ಡವ್ವೆ ಎಂಬುದು ಸ್ಪಷ್ಟ. ಕಿಕ್ಕೇರಿ ನಂಜುಂಡಾರಾಧ್ಯನ ಭೈರವೇಶ್ವರ ಕಾವ್ಯದಲ್ಲಿ 'ಧೀರ ಗುಡ್ಡವ್ವೆ' ಎಂಬ ಉಲ್ಲೇಖವಿದೆ. ಧೀರೆಗುಡ್ಡವ್ವೆ ಎಂದು ಕರೆದಿರುವವರಿಂದ ಈಕೆ ಅಲಂಪುರದ ಪರವಾದಿಗಳ ಜೊತೆ ಯುದ್ಧ ಮಾಡಿ ಬ್ರಹ್ಮೇಶ್ವರ ಲಿಂಗವನ್ನು ಪುನಃ ಪ್ರತಿಷ್ಠಾಪಿಸಿದ ಗುಡ್ಡವ್ವೆಯೇ ಆಗಿರಬೇಕು. ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ ಶರಣರ ಸ್ತುತಿ ಮಾಡುತ್ತ ಗುಡ್ಡವ್ವೆ ಎಂಬ ಹೆಸರಿನ ಜೊತೆಗೆ ಹದಿನಾರು ಜನರ ಹೆಸರು ಹೇಳಿ ಇಂತಿವರು "ಷೋಡಷ ಪುರಾತನ ಪುಂಗವರು" ಎಂದು ಹೇಳಿರುವುದರಿಂದ ಈಕೆ ಷೋಡಷಗಣಂಗಳಲ್ಲಿ ಮುಖ್ಯಸ್ಥಳಾದ ವರದಾನಿ ಗುಡ್ಡವ್ವೆ ಎಂಬುದು ಸ್ಪಷ್ಟವಾಗುತ್ತದೆ.

ವೈಷ್ಣವರು ಕಿತ್ತೊಗೆದ ಅಣಂಪೂರ ಬಾಲಬ್ರಹ್ಮೇಶ್ವರ ಲಿಂಗವನ್ನು ತನ್ನ ಷೋಡಷಗಣದ ಬೆಂಬಲದಿಂದ ಪುನಃ ಸ್ಥಾಪಿಸಿದ ಈ ವೀರ ಮಹಿಳೆಯ ವಿಷಯ ಶಾಸನಗಳಲ್ಲಿ ಕಂಡುಬರುತ್ತದೆ. ಕ್ರಿ. ಶ. ೧೧೪೪ರ ತಾಳಿಕೋಟೆ ಶಾಸನದಲ್ಲಿ........ "ಪರಿಯಳಿಗೆ ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾದುಡಿಗೆ, ಅಣಂಪೂರು, ಕರಹಾಡ, ಕೆಂಭಾವಿ, ಬಮ್ಮಕೂರು ಮೊದಲಾಗಿ ಅನನ್ತದೇಶದೇಶಾನ್ತರದಲಿದಿರಾದ ಪರಸಮಯಿಗಳ ಪಡಲ್ವಡಿಸಿ......." ಎಂಬ ವಾಕ್ಯದಲ್ಲಿಯ 'ಅಣಂಪೂರ' ಗುಡ್ಡವ್ವೆಯು ಲಿಂಗಸ್ಥಾಪನೆ ಮಾಡಿದ ಊರಾಗಿರಬಹುದು. ಶಿವತತ್ವ ಚಿಂತಾಮಣಿಯಲ್ಲಿ ಬಂದಿರುವ ವರದಾನಿ ಗುಡ್ಡವ್ವೆಯ ಚರಿತ್ರೆಗೆ ಇದು ಮತ್ತಷ್ಟು ಪೋಷಣೆಯನ್ನು ನೀಡುತ್ತದೆ.

ಶರಣರ ಸಾಮರ್ಥ್ಯವನ್ನು ಹೇಳುವ ಕ್ರಿ. ಶ. ೧೩೮೯ ರ ಇಂಗಳಗಿ ಶಾಸನ ಗುಡ್ಡವ್ವೆಗಳ ಹಿರಿತನದಲ್ಲಿ ಬಲವ್ವಗಳ ಕಾಲು ತೊಳೆದು ಶಿವಲಿಂಗಗಳಿಗೆ ದತ್ತಿನೀಡಿದುದನ್ನು ತಿಳಿಸುತ್ತದೆ. ಈ ಗುಡ್ಡವ್ವೆ ಷೋಡಷಗಣಕ್ಕೆ ಸಂಬಂಧಿಸಿದವಳೆಂದು ಪಂಡಿತರ ಮತ. ಈ ಶಾಸನದಲ್ಲಿಯ "ಕರಿಕರನಂ ಸೆಂಡಾಡುವರ್......." ಈ ಪದ್ಯ ಈಕೆಯ ಕಲಿತನಕ್ಕೆ ಪ್ರತೀಕವಾಗಿದೆ. ಈ ಶಾಸನದಿಂದ ಗುಡ್ಡವ್ವೆಯು ಅಂದಿನ ಕಾಲದಲ್ಲಿ ಎಷ್ಟೊಂದು ಪ್ರಮುಖ ವ್ಯಕ್ತಿಯಾಗಿದ್ದಳೆಂಬುದು ತಿಳಿಯುತ್ತದೆ.

ವಿಜಾಪುರ ಶಾಸನ–೧, ಇಲ್ಲಿ "ಮೂವತ್ತುಗೇಣು ಬಾಚಿವಿಡಿದು × × ದಾನ ಚಿಂತಾಮಣಿಯ ಫಳಿಯನಿಸುವ ಗುಡ್ಡಾದೇವಿಯ ಭೂಮಿಯೊಳಗೆ ಜಟ್ಟಿ ಗೇಣಿಯಲು ಯಿಬ್ಬರು ಪೂಜಾರಿಯರಿಗೆ ಮತ್ತಂ ೧೦, ಎಂಬ ಉಲ್ಲೇಖವೂ, ಬಿಜಾಪುರ ಶಾಸನ–೨

(ಕ್ರಿ. ಶ ೧೨೭೮) "........ಸ್ವಸ್ತಿ ಶ್ರೀ ಸಕ ೧೨೦೦ ನೆಯ ಬಹುಧಾನ್ಯ ಸಂವತ್ಸರದ ವೈಶಾಕ ಸು. ೧೫ ಯಾದಿ ವಾರದಲು ಶ್ರೀ ತೇಜೇಸ್ವರ, ಶ್ರೀ ವರದಾಸಿ. ಶ್ರೀ ಪ್ರದು ಕೇಸ್ವರ ದೇವರ ಪ್ರತಿಷ್ಠೆಯುಂ ಮಾಡಿ ಪ್ರದಮಂ ರಚಿಯಿಸಿಯಾ ದೇವರುಗಳ ಅಂಗ ಭೋಗ ರಂಗಭೋಗಕ್ಕೆ ಶ್ರೀ ಮಂಡಳಿಕ ಮಹಾದೇವ ರಾಣಿಯರು ...." (ಪತ್ರಿ ವಿವರಣೆ ಇದೆ. ಇಲ್ಲಿ ಬರುವ ಶ್ರೀ ವರದಾನಿಯ ಪ್ರತಿಷ್ಠಾಪನಾ ಉಲ್ಲೇಖ ಆ ಕಾಲ ದಲ್ಲಿ ನಡೆಯುತ್ತಿದ್ದ ಗುಡ್ಡವ್ವೆಯ ಮೂರ್ತಿ ಪೂಜೆಯನ್ನು ತಿಳಿಸುತ್ತದೆ. ಇಲ್ಲಿ ಬರುವ ವರದಾನಿ, ದಾನ ಚಿಂತಾಮಣಿ ಎಂಬ ಉಲ್ಲೇಖಗಳು ಗಮನಾರ್ಹವಾಗಿವೆ.

ಗುಡ್ಡವ್ವೆಯ ವಿಗ್ರಹ ಪ್ರತಿಷ್ಠಾಪನೆಯ ವಿಷಯವನ್ನು ಆಂಧ್ರಪ್ರದೇಶದ ಮಹ ಬೂಬನಗರ ಜಿಲ್ಲೆಯ ವರ್ಧಮಾನ ಪುರಂಶಾಸನವು ತಿಳಿಸಿಕೊಡುತ್ತದೆ. ಅದು: "ಸ್ವಸ್ತಿ ಸಮಸ್ತಭುವನ ವಿಖ್ಯಾತ ಪಂಚಸತವೀರ ಸಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯಸೌಚಾಚಾರ ಚಾರುಚಾರಿತ್ರನಯವಿನಯ ವಿಜ್ಞಾನ ವೀರಬಳಂಬುಧರ್ಮ ಪ್ರತಿ ಪಾಳಕರುಂ ಭಗವತೀ ದೇವಿಯ ಲಬ್ಧವರ ಪ್ರಸಾದ"ರಾದ ಮಿಂಡಗುದ್ದಲಿಯ ದೇವಿ ಶೆಟ್ಟಿ, ವೈದಿಶೆಟ್ಟಿಯರು ಹಲರ ಹೆಸರ ಸಕಳೇಶ್ವರ ದೇವ, ವೀರಭದ್ರ, ಡ್ಡವ್ವೆ, ಸೋಮ ನಾಥ ದೇವರನ್ನು ಪ್ರತಿಷ್ಟೆ ಮಾಡಿದರು. ಇಲ್ಲಿ ಬರುವ 'ಡ್ಡವ್ವೆ'ಯಲ್ಲಿ ಹಿಂದಿನ ಒಂದು ಅಕ್ಷರ ನಷ್ಟವಾಗಿದೆ. ಈ ನಷ್ಟ ಭಾಗದಲ್ಲಿ 'ಗು' ಅಕ್ಷರ ಇರುವ ಸಾಧ್ಯತೆ ಹೆಚ್ಚಿದೆ. ಕಾರಣ ಇದರಿಂದ 'ಗುಡ್ಡವ್ವೆ' ಎಂಬ ಪಾಠ ಸಿದ್ಧವಾಗುತ್ತದೆ. ಈ ವಿಗ್ರಹವನ್ನು ಪ್ರತಿಷ್ಠಾಪಿಸಿದವರು ವ್ಯಾಪಾರಿಗಳು. ಕಾಕತೀಯ ಗಣಪತಿಯ ಆಜ್ಞೆ ಯಲ್ಲಿ ಹುಟ್ಟಿದ ಈ ಶಾಸನದ ಮಿತಿ ಕ್ರಿ. ಶ. ೧೨೨೪. ಗುಡ್ಡವ್ವೆಯ ವಿಗ್ರಹ ಪ್ರತಿಷ್ಠಾ ಪನೆಯ ಸಂಗತಿ ದೂರದ ಆಂಧ್ರಪ್ರದೇಶದಲ್ಲಿ ದೊರೆಯುತ್ತಿರುವುದು ಅತ್ಯಂತ ಗಮನಾರ್ಹ. ಇದು ಗುಡ್ಡವ್ವೆ ಈ ಭಾಗದಲ್ಲಿ ಸಂಚರಿಸಿದುದನ್ನಾಗಲೀ ಅಥವಾ ಆಕೆಯ ಪ್ರಭಾವವನ್ನಾಗಲೀ ಬೆರಳೆತ್ತಿ ಹೇಳುತ್ತದೆ. ಅನ್ಯರಾಜ್ಯದಲ್ಲಿ ಗುಡ್ಡವ್ವೆಯ ಹೆಸರನ್ನೂ ವಿಗ್ರಹ ಪ್ರತಿಷ್ಠಾಪನೆಯ ವಿಷಯವನ್ನು ಹೇಳುವ ಅಪೂರ್ವ ಶಾಸನವೆಂಬ ಮರ್ಯಾದೆ ಇದಕ್ಕಿದೆ.

ಡಾ|| ಫ. ಗು. ಹಳಕಟ್ಟಿಯವರು ಶಿವಶರಣೆಯರ ಚರಿತ್ರೆಗಳು ಎಂಬ ಕೃತಿಯಲ್ಲಿ ಇಬ್ಬರು ಗುಡ್ಡವ್ವೆಯರ ಚರಿತ್ರೆಯನ್ನು ಹೇಳಿದ್ದಾರೆ. ೧ ವರದಾನಿ ಗುಡ್ಡವ್ವೆ ೨ ನಾವದಿಗೆ ಗುಡ್ಡವ್ವೆ. ಈ ಕೃತಿಯಲ್ಲಿ ವರದಾನಿ ಗುಡ್ಡವ್ವೆಯ ಚರಿತ್ರೆಯು ಈ ರೀತಿ ಬಂದಿದೆ: "ವಿಜಾಪುರದಿಂದ ಮೂವತ್ತು ಮೈಲಿನ ದೂರದ ಜತ್ ತಾಲ್ಲೂಕಿನ ಉಮರಾಣಿ ಗ್ರಾಮದಲ್ಲಿ ಇವಳು ಜನಿಸಿದಳು. ತಂದೆ ಅನಂತರಾಯ ತಾಯಿ ಶಿವ ಸಮ್ಮ. ಇವರು ಸತ್ಕಾರ ಕಾಯಕದವರು. ಇಬ್ಬರೂ ವೀರಶೈವರು. ಆ ಕಾಲದಲ್ಲಿ ಆ ನಾಡು ಶಿವಶರಣರ ಬೀಡಾಗಿತ್ತು. ಈಕೆಯ ತಂದೆತಾಯಿಗಳು ಶಿವಾನುಭವದ ಬಗ್ಗೆ ಪರಿಚಯ ಮಾಡಿಕೊಡುತ್ತಿದ್ದರು. ಹಾಗೆಯೇ ಸುತ್ತಲಿನ ಪರಿಸರ ಈಕೆಯ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಭಾವ ಬೀರಿತು. ಕಲ್ಯಾಣದ ಕಡೆಯಿಂದ ಬರುತ್ತಿದ್ದ ಗಣಾಚಾರಿ ಗಳ ಜಂಗಮರ ಬಾಯಿಂದ ಬಸವಣ್ಣ, ಚನ್ನಬಸವಣ್ಣ ಮೊದಲಾದ ಶರಣರು ಕೈಕೊಂಡಿದ್ದ ಧಾರ್ಮಿಕ ಕಾರ್ಯದ ಬಗ್ಗೆ ಕೇಳಿ ತಿಳಿದುಕೊಂಡಿದ್ದಳು. ಅದ್ದರಿಂದ

ಕಲ್ಯಾಣದ ಶರಣರನ್ನು ನೋಡಬೇಕೆಂಬ ತವಕದಿಂದ ಏಕಾಂಗಿಯಾಗಿ ತಂದೆತಾಯಿಗಳಿಗೆ ತಿಳಿಸದೆ ಬಂದಳು.

ಲಿಂಗಮ್ಮ ಕಲ್ಯಾಣಕ್ಕೆ ಬಂದ ಮೇಲೆ ಒಬ್ಬ ಬಡಶರಣೆಯ ಮನೆಯಲ್ಲಿ ಇರತೊಡಗಿದಳು. ಕಲ್ಯಾಣದ ನೆಲ, ಜಲ, ಗಾಳಿ, ಪರಿಸರ, ಶರಣೆಯರ ಸಂಗ, ಈಕೆಗೆ ಮರುಹುಟ್ಟು ನೀಡಿದುವು. ಒಂದು ದಿನ ಇವಳು ಉದ್ಯಾನದಲ್ಲಿ ಶಿವಯೋಗದಲ್ಲಿ ನಿರುತಳಾಗಿರುವುದು ಬಸವಣ್ಣನವರಿಗೆ ಅಂತರಜ್ಞಾನದಿಂದ ತಿಳಿಯಿತು. ಆಗ ನೀಲಾಂಬಿಕೆಯೊಂದಿಗೆ ಉದ್ಯಾನವನಕ್ಕೆ ಬಂದು ನೀಲಾಂಬಿಕೆಗೆ ಲಿಂಗಮ್ಮನ ಶಿವಯೋಗದ ಬಗ್ಗೆ ತಿಳಿಸಿಕೊಟ್ಟನು. ಲಿಂಗಮ್ಮನು ಲಿಂಗಾನುಸಂಧಾನ ವಿಧಾನವನ್ನು ಅವರಿಗೆ ತಿಳಿಸಿದಳು. ಆಗ ಬಸವಣ್ಣನು ತನ್ನ ಅಂತರಾತ್ಮನಲ್ಲಿ ನೋಡಲಾಗಿ ಲಿಂಗಮ್ಮನು ಮಹಾಶಿವಶರಣೆ ಎಂದು ಗೊತ್ತಾಯಿತು. ಇವಳು ಓಂಕಾರ ಮಂತ್ರದಿಂದ ಜನಿಸಿದವಳು. ಶಿವಯೋಗದಿಂದ ಭಕ್ತರನ್ನು ತೃಪ್ತಿಪಡಿಸುವವಳು ಎಂಬುದನ್ನು ತಿಳಿದು ಬಸವಣ್ಣನು ಅವಳನ್ನು ಕುರಿತು ನೀನು “ದಾನಮ್ಮ” ಎಂಬ ಹೆಸರಿನಿಂದ ಪ್ರಸಿದ್ಧಳಾಗು ಎಂದು ಆಶೀರ್ವದಿಸಿದನು. ಕಲ್ಯಾಣದಲ್ಲಿದ್ದಾಗ ಅನೇಕ ದುಃಖಿಗಳ ದುಃಖವನ್ನು ಉಪಶಮನ ಮಾಡಿದಳು. ಈಕೆ ಇದ್ದ ಮನೆಯ ಒಡತಿ ಮಹಾದೇವಿ ಮುಂದೆ ಧನಿಕಳಾದಳು. ಇದು ದಾನಮ್ಮನ ಮಹಿಮೆ. ಎಂದು ತಿಳಿದು ಆಕೆಯ ಪಾದಗಳಿಗೆರಗಿದಳು. ನೀನು ದಿನಾಲು ಲಿಂಗಪೂಜೆಯನ್ನು ಮಾಡು ಲಿಂಗಪ್ರಸಾದದಲ್ಲಿರು ಎಂದು ಆಕೆಗೆ ಬೋಧಿಸಿದಳು.

ಆಕೆ ಕಲ್ಯಾಣದಲ್ಲಿ ಬಿಜ್ಜಳನಿಂದ ಶರಣಧರ್ಮಕ್ಕೆ ಅಘಾತ ಸಂಭವಿಸಿದಾಗ ತನ್ನ ಸ್ವಗ್ರಾಮವಾದ ಉಮಾರಾಣಿಗೆ ಬಂದಳು. ಅಲ್ಲಿಯೇ ಸಮೀಪದ ಸಂಕ ಎಂಬ ಗ್ರಾಮದ ‘ಸಂಗಮನಾಥ’ನೆಂಬ ಶಿವಶರಣನೊಡನೆ ಲಗ್ನವಾದಳು. ಉಭಯರು ಶಿವಾನುಭವಿಗಳಾದ್ದರಿಂದ ತಮ್ಮ ಯೋಗಾಚರಣೆಗೆ ಅನುಕೂಲವಾಗಲೆಂದು ಅಲ್ಲಿಯೇ ಸಮೀಪದ ಗುಡ್ಡಾಪುರ ಗ್ರಾಮದಲ್ಲಿ ಬಂದು ನೆಲಸಿದರು. ಅಲ್ಲಿ ಕೆಲವು ದಿವಸವಿದ್ದು ದೇಶಸಂಚಾರ ಕೈಕೊಂಡು ದಾರಿಯಲ್ಲಿ ಭಕ್ತರನ್ನು ಉದ್ಧಾರ ಮಾಡಿದ್ದಾರೆ. ಕಲ್ಯಾಣದ ಕ್ರಾಂತಿಯ ಕಾಲದಲ್ಲಿ ಇವರು ಮಹತ್ಕಾರ್ಯಗೈದಿದ್ದಾರೆ. ಸಂಚಾರದಲ್ಲಿ ಅವರು ಆದವಾನಿಯನ್ನು ಸಂದರ್ಶಿಸಿದರು. ಅಲ್ಲಿಯ ದೇವಾಂಗದವರು ಈ ದಂಪತಿಗಳನ್ನು ಬಹು ಆದರದಿಂದ ಬರಮಾಡಿಕೊಂಡರಂತೆ. ಬ್ರಹ್ಮೇಶ ಲಿಂಗಸ್ಥಾಪನೆಯು ಅವರು ಆದವಾನಿಯಲ್ಲಿದ್ದಾಗಲೇ ನಡೆದಿರಬೇಕು. ನಂತರ ಈಕೆಯ ಹೆಸರು ಶ್ರೀಶೈಲದವರೆಗೆ ಹಬ್ಬಿತು. ಆದ್ದರಿಂದ ರಾಯಚೂರು, ಬಳ್ಳಾರಿ, ಅನಂತಪುರ, ಮೊದಲಾದ ಪ್ರದೇಶದ ಅನೇಕರು ದಾನಮ್ಮನಿಂದ ಲಿಂಗದೀಕ್ಷೆ ಹೊಂದಿದರು. ಮಲಯಾಳ, ಕೋಚಿನ ಸೀಮೆಯಲ್ಲಿ ಸುತ್ತಾಡಿ ಅಲ್ಲಿಯೂ ಅನೇಕರಿಗೆ ದೀಕ್ಷೆಯಿತ್ತು ರಾಮೇಶ್ವರ ಕಂಚಿಗಳಿಗೆ ಆಗಮಿಸುತ್ತಾರೆ. ಕಂಚಿಯ ಅರಸನಿಂದಲೂ ಹಾಗೂ ವೈಷ್ಣವರಿಂದಲೂ ಮನ್ನಣೆ ಪಡೆಯುತ್ತಾರೆ. ಅಲ್ಲಿಂದ ಕಾಶಿ, ಗಯಾ, ಸೊನ್ನಲಿಗೆಯಲ್ಲಿ ಸಂಚರಿಸಿ ಕೂಡಲಸಂಗಮಕ್ಕೆ ಬರುತ್ತಾರೆ. ಅಲ್ಲಿಯ ಮಣ್ಣಗೂಳಿ ಎಂಬ ಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಗೌರಮ್ಮ ಗೌಡತಿಯ ಸತ್ತ ಒಬ್ಬನೇ ಮಗನನ್ನು ಗುಡ್ಡವ್ವೆಯರು ಬದುಕಿಸುತ್ತಾರೆ.

ತರುವಾಯ ಬಾಗೇವಾಡಿಗೆ ದಯಮಾಡಿಸಿ ಶಿವಬ್ರಾಹ್ಮಣರಿಗೆ ಲಿಂಗದೀಕ್ಷೆಗೈದು, ಪ್ರಸ ಗುಪ್ತಪುರಕ್ಕೆ ಆಗಮಿಸುತ್ತಾರೆ. ಈಕೆಯು ಸಂಚಾರದ ಕಾಲದಲ್ಲಿ ಬೇಡಿದವರಿಗೆ ಇಷ್ಟಾರ್ಥವನ್ನು ಕೊಡುತ್ತಿದ್ದುದರಿಂದ 'ವರದಾನಿಯಮ್ಮ' ಎಂಬ ಅಭಿದಾನ ಬಂದಿತು.

ವರದಾನಿ ಗುಡ್ಡವ್ವೆಯು ಬಸವೇಶ್ವರನ ಸಮಕಾಲೀನಳಾಗಿರಬಹುದು. ಈಕೆಯ ವಿಷಯವಾಗಿ ಮೊದಲು ಕಂಡು ಬರುವ ಶಾಸನದ ಕಾಲ ಕ್ರಿ. ಶ. ೧೧೭೪. ಈ ಶಾಸನ ಅಣ್ಣಿಗೇರಿಯಲ್ಲಿ ಪರವಾದಿಗಳ ಜೊತೆ ಆಕೆ ಯುದ್ಧ ಮಾಡಿ ಗೆದ್ದು ಬ್ರಹ್ಮೇಶ್ವರ ಲಿಂಗ ಸ್ಥಾಪನೆ ಮಾಡಿದ ವಿಷಯವನ್ನು ತಿಳಿಸುತ್ತವೆ. ಇದರಿಂದ ವರದಾನಿ ಗುಡ್ಡವ್ವೆಯು ೧೧೭೪ರ ಹೊತ್ತಿಗೆ ಒಬ್ಬ ಶ್ರೇಷ್ಠ ಶಿವಶರಣೆ ಎನ್ನಿಸಿಕೊಂಡಿರಬೇಕು. ಶಾಸನದಲ್ಲಿ ಈಕೆಯ ಹೆಸರು ಸೇರುವ ಹೊತ್ತಿಗೆ ಸುಮಾರು ಇಪ್ಪತ್ತು ವರ್ಷದವಳಾದರೂ ಆಗಿರಬೇಕು ಎಂದಿಟ್ಟುಕೊಂಡರೆ ಈಕೆಯ ಕಾಲ ಸು. ಕ್ರಿ. ಶ. ೧೧೫೪ ಎಂದಾಗುತ್ತದೆ. ಈ ಕಾಲನಿರ್ಣಯಕ್ಕೆ ಪೋಷಕವಾಗಿ ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಬರುವ "ನಿನ್ನ ಜವ್ವನಂ ಬಪ್ಪಿನಂ ಮೌನವಿರುತವೆನಗನ್ಯಮಂ ಬಗೆದ ಸಮಯ ದ್ರೋಹಿಗಳನರಿದು ನನ್ನ ನೆಲೆಗೋಳಿಸು" ಎಂಬ ವಾಕ್ಯದಲ್ಲಿಯ 'ನಿನ್ನ ಜವ್ವನ ಬಪ್ಪಿನಂ ಮೌನವಿರುತ' ಎಂಬ ವಾಕ್ಯವನ್ನು ನೋಡಿದರೆ ಈಕೆ ಹದಿನಾರು ವರ್ಷಗಳವರೆಗೆ ಮೌನದಿಂದ ಸೋಮೇಶ್ವರ ಲಿಂಗವನ್ನು ಆರಾಧಿಸಿದಳು. ನಂತರ ಅಣ್ಣಿಗೇರಿ ಪರಸಮಯಗಳ ಜೊತೆ ಯುದ್ಧ ಮಾಡಿ ಬ್ರಹ್ಮೇಶ್ವರ ಲಿಂಗಸ್ಥಾಪನೆ ಮಾಡಿದಳು ಎಂದು ಹೇಳಬೇಕಾಗುತ್ತದೆ. ಡಾ|| ಫ. ಗು ಹಳಕಟ್ಟಿಯವರು ಶಿವಶರಣೆಯರ ಚರಿತ್ರೆಗಳು ಎಂಬ ಕೃತಿಯಲ್ಲಿ ನಾವದಿಗೆ ಗುಡ್ಡವ್ವೆಯ ಚರಿತ್ರೆಯನ್ನೂ ಹೇಳಿದ್ದಾರೆ. ಕವಿಚರಿತೆಕಾರರು ತಮ್ಮ ಕವಿಚರಿತೆಯಲ್ಲಿ ಈಕೆಯನ್ನು ಎರಡನೇ ಗುಡ್ಡವ್ವೆಯೆನ್ನಬಹುದು ಎಂದು ಹೇಳಿ, ಈಕೆಯ ಕಾಲವನ್ನು ಕ್ರಿ. ಶ. ೧೪೩೦ ಎಂದು ನಿರ್ಧರಿಸಿದ್ದಾರೆ.

ನಾವದಿಗೆ ಗುಡ್ಡವ್ವೆ ಬಸವಣ್ಣನವರಿಗಿಂತ ಇತ್ತೀಚಿನವಳು. ಇವಳ ಚರಿತ್ರೆ ನಮಗೆ ಮೊದಲನೆ ಭೀಮಕವಿಯ ಬಸವ ಪುರಾಣದಲ್ಲಿ ದೊರೆಯುತ್ತದೆ. ಈ ಕೃತಿಯ ಕಾಲ ಕ್ರಿ. ಶ ೧೩೬೯. ಪದ್ಮಣಾಂಕನ ಪದ್ಮರಾಜ ಪುರಾಣದಲ್ಲೂ ಈಕೆಯ ಚರಿತ್ರೆ ಬಂದಿದೆ. ಈ ಕೃತಿಯ ಕಾಲ ಕ್ರಿ. ಶ ೧೪೦೦. ಈಕೆಯ ಭಕ್ತಿ ಚರಿತ್ರೆ ಜನಮನದಲ್ಲಿ ಹೊಕ್ಕು, ಕಾವ್ಯರೂಪದಲ್ಲಿ ಮೂಡಿ ಬರಬೇಕಾದರೆ ೧೩೬೯ ಕ್ಕಿಂತ ಸುಮಾರು ಇಪ್ಪತ್ತೈದು ವರ್ಷ ಹಿಂದೆ ಈಕೆ ಇದ್ದಿರಬೇಕು ಎಂದಿಟ್ಟುಕೊಂಡರೆ ಈಕೆಯ ಕಾಲ ಸು. ಕ್ರಿ. ಶ ೧೩೪೪ಕ್ಕೆ ಸರಿಯ ಬರುತ್ತದೆ. ಇದರಿಂದ ಕವಿಚರಿತೆಕಾರರು ಮಾಡಿದ ಕಾಲ ನಿರ್ಣಯ ಬದಲಾಗಬೇಕಾಗುತ್ತದೆ.

ಭೀಮಕವಿಯ ಬಸವ ಪುರಾಣ, ಪದ್ಮಣಾಂಕನ ಪದ್ಮರಾಜ ಪುರಾಣ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಕುಮಾರ ಚನ್ನಬಸವ ವಿರಚಿತ ಪುರಾತನರ ಚರಿತೆಗಳಲ್ಲಿ ಈಕೆಯ ಜೀವನ ಚರಿತ್ರೆಯನ್ನು ಈ ರೀತಿ ನಿರೂಪಿಸಲಾಗಿದೆ:

ನಾವದಿಗೆಯೆಂಬ ಪುರದಲ್ಲಿ ಹಿರಿಯ ಕುಲದೊಳು ಪುಟ್ಟಿ ಗುಡ್ಡಮ್ಮನೆಂಬ ಶಿವ ಶರಣೆಯಿರಲಾಕೆಯ ಮೈಯೆಲ್ಲಾ ಕುಷ್ಟಾಗಿ ದಿನದಿನಕ್ಕೆ ಹೆಚ್ಚುತ್ತ ಬರಲು, ಆ ಭಕ್ತೆಯೊಂದು ದಿನ ಬೀದಿಯಲ್ಲಿ ಹೋಗುವಾಗ, ನಾವದಿಗೆಯುಗ್ರಹಾರದಲ್ಲಿ ವಿಪ್ರರು ನುಡಿದರು. "ಮೈಗೆಟ್ಟವಳು ಪೊಲತಿ ನೀನು, ಉತ್ತಮ ದ್ವಿಜರಿಪ್ಪ ಅಗ್ರಹಾರಂ ಪೋಗಬೇಡೆಂದು" ತಡೆದು ನಿಂದ್ಯವಂ ನುಡಿಯಲು ಆಕೆಯು "ಶಿವಶಿವಾ" ಎಂದು ಸೌರಾಷ್ಟ್ರದ ಸೋಮೇಶ್ವರನಂ ಕರೆದುತಂದಿಹೆನೆಂದು ಪೋಗುತ್ತಂ ಇರಲಾಗ ದಾರಿಯಲ್ಲಿ ಶಿವ ಬಂದು "ಮಗಳೆ ನೀನೇಕೆ ಬಳಲಿ ಬಂದೆ? ನಾನು ಬರುತ್ತಿದ್ದೆನೆಂ"ದು ಭಕ್ತೆಯಂ ಮನ್ನಿಸಿ ಮೈದಡಹಿ ಬಂದ ಬಳಲಿಕೆಯಂ ನಿವಾರಿಸಿ ಮರಳಿ ಕಳುಪಿ, ಹಿಂದೆ ಶಿವನು ಬಂದು ನಾವದಿಗೆಯಲ್ಲಿ ಸ್ಥಾಪ್ಯವಾದನು. ಆ ಶಿವನಂ ಕಂಡಾಗ ಗುಡ್ಡಮ್ಮನ ತೊನ್ನಳಿದು ಪೋಗಿ ದಿವ್ಯ ಶರೀರಿಯಾಗಿರುವಾಗ, ಅಲ್ಲಿದ್ದೇಳು ನೂರು ವಿಪ್ರರೆಲ್ಲಂ ಕುಷ್ಟ ಶರೀರಿಗಳಾಗಿ ಕಂದಿ ಕುಂದುತ್ತಿರಲು, ಇತ್ತ ಗುಡ್ಡಮ್ಮನು ಶಿವಭಕ್ತಿಪ್ರಭಾ ಮಹಿಮೆಯಂ ಮೆರೆವುತ್ತಿರಲು ಆ ಕುಷ್ಟ ವಿಪ್ರರು ಮೊದಲಾದನಂತರ ಕುಲದವರೆಲ್ಲರು ಬಂದು ಗುಡ್ಡಮ್ಮನಂಗಳದಲ್ಲಿ ಸಾಷ್ಟಾಂಗವೆರಗಿ ನುತಿಸಲು, ಅವರಿಗಭಯವಿತ್ತು ಅಂಗದ ರೋಗವ ಸಮಸ್ತ ಜಾತಿಗಳಿಗೆ ಪರಿಹರಿಸಿ ಗುಡ್ಡಮ್ಮನು ಸೋಮೇಶ್ವರಲಿಂಗದೊಳು ಬೆರೆದಳು.

ನಾವದಿಗೆಯ ಗುಡ್ಡವ್ವೆಯನ್ನು ಕುರಿತು ಯಾವುದೇ ಶಾಸನಗಳಿಲ್ಲ. 'ನಿಂಜೇಶ್ವರ' ಎಂಬ ಅಂಕಿತವನ್ನೊಳಗೊಂಡ ಈಕೆಯ ಒಂದು ವಚನ ಮಾತ್ರ ದೊರೆತಿದೆ:

"ತನು ಬತ್ತಲೆಯಾದರೇನೋ, ಮನ ಬತ್ತಲೆಯಾಗವನ್ನಕ್ಕ?
ವ್ರತವಿದ್ದರೇನೋ ವ್ರತಹೀನರಾದ ಬಳಿಕ,
ನೆರೆದರೆ ನರಕವಪ್ಪಾ ನಿಂಜೇಶ್ವರಾ."

ಮೇಲಿನ ಈ ಎಲ್ಲ ಆಧಾರಗಳಿಂದ ಗುಡ್ಡವ್ವೆ ಎಂಬ ಹೆಸರಿನ ಇಬ್ಬರು ಶಿವಶರಣೆಯರಿದ್ದು ಒಬ್ಬಳು ಬಸವಣ್ಣನವರ ಸಮಕಾಲೀನಳಾಗಿ ವರದಾನಿ ಗುಡ್ಡವ್ವೆ ಎಂಬ ಹೆಸರಿನಿಂದ ಪ್ರಖ್ಯಾತಳಾಗಿದ್ದಾಳೆ. ಈಕೆಯ ಕಾಲ ಕ್ರಿ. ಶ. ಸು. ೧೧೬೪. ಈಕೆಯ ವಚನಗಳು ಸಿಗುವುದಿಲ್ಲ. ಇನ್ನೊಬ್ಬಳು ಬಸವಣ್ಣನವರಿಗಿಂತ ಈಚಿನವಳಾಗಿ 'ನಾವದಿಗೆಯ ಗುಡ್ಡವ್ವೆ' ಎಂದು ಹೆಸರು ಪಡೆದಿದ್ದಾಳೆ. ಈಕೆಯ ಕಾಲ ಕ್ರಿ.ಶ.ಸು. ೧೩೪೪. ಈಕೆಯ ಒಂದು ವಚನ ದೊರೆಯುತ್ತದೆ. ಕಾವ್ಯ ಹಾಗೂ ಶಾಸನಗಳಲ್ಲಿ ದೊರೆಯುವ ಆಧಾರಗಳಿಂದ ಇಬ್ಬರ ಜೀವನ ಚರಿತ್ರೆಯೂ ಬೇರೆಯಾಗಿರುವುದು ಕಂಡುಬರುತ್ತದೆ.

ವರದಾನಿ ಗುಡ್ಡವ್ವೆಯ ಬಗ್ಗೆ ಕಾವ್ಯ ಹಾಗೂ ಶಾಸನಗಳಲ್ಲಿ ಸ್ಪಷ್ಟವಾದ ಕೆಲವೊಂದು ಸತ್ಯಸಂಗತಿಗಳು ತಿಳಿದುಬರುತ್ತವೆ. ಆದ್ದರಿಂದ ಈಕೆ ಪೌರಾಣಿಕವೂ ಕಾಲ್ಪನಿಕವೂ ಆದ ವ್ಯಕ್ತಿಯಾಗಿರದೆ ಐತಿಹಾಸಿಕ ವ್ಯಕ್ತಿಯೆಂಬುದು ಸುಸ್ಪಷ್ಟ. ಈಕೆಯು ಗುಡ್ಡಾಪುರದವಳಾದ್ದರಿಂದ ಸ್ಥಾನ ವಾಡಿಕೆಯಾಗಿ ಈಕೆಯನ್ನು 'ಗುಡ್ಡಾಪುರದ ದಾನಮ್ಮ' ಎಂದು ಕರೆದಿರಬಹುದು. ಈಕೆಯು ಹದಿನಾರು ಜನ ಪ್ರಮಥರಲ್ಲಿ ಮುಖ್ಯಸ್ಥಳಾಗಿದ್ದುದರಿಂದ ಗುಡ್ಡ + ಅವ್ವೆ = ಗುಡ್ಡವ್ವೆ (ಗುಡ್ಡ ಎಂದರೆ ಶಿಷ್ಯ. ಅವ್ವೆ ಅಂದರೆ ತಾಯಿ, ಅವ್ವ ಎಂದರ್ಥ). ಅಂದರೆ ಷೋಡಶಗಣಂಗಳಲ್ಲಿಯ ಶಿಷ್ಯರಿಗೆಲ್ಲಾ

ಹಿರಿಯಳಾಗಿದ್ದುದರಿಂದ ಗುಡ್ಡವ್ವೆ ಎಂತಲೂ ಕರೆಯುತ್ತಿರಬಹುದು. ಬೇಡಿದವರಿಗೆ ಇಷ್ಟಾರ್ಥವನ್ನು ಕೊಡುತ್ತಿದ್ದುದರಿಂದ 'ವರದಾನಿ ಗುಡ್ಡಮ್ಮ' ಎಂತಲೂ ಹೆಸರು ಪಡೆದಿರಬಹುದು.

ವರದಾನಿ ಗುಡ್ಡವ್ವೆಯು ಧರ್ಮಪ್ರಸಾರ ಕಾರ್ಯ ಮಾಡುವಲ್ಲಿ ಒಳ್ಳೆಯ ಪೌರುಷವನ್ನು ತೋರಿ ಪರಧರ್ಮೀಯರನ್ನು ಗೆದ್ದು ಅವರಲ್ಲಿ ವೀರಶೈವ ಧರ್ಮ ಪ್ರಸಾರ ಮಾಡಿದ್ದಾಳೆ. ಇಂದಿಗೂ ಕೂಡ ಗುಡ್ಡಾಪುರಕ್ಕೆ ಮಹಾರಾಷ್ಟ್ರ, ಕರ್ನಾಟಕ ಪ್ರಾಂತ್ಯದಿಂದ ಎಲ್ಲ ಜಾತಿಯ ಅಸಂಖ್ಯ ಯಾತ್ರಿಕರು ಬರುತ್ತಾರೆ. ಐತಿಹಾಸಿಕ ಮಹಿಳೆಯರಲ್ಲಿ ದೇವತಾಸ್ವರೂಪವನ್ನು ತಾಳಿ ಅವರಂತೆ ಪೂಜೆಗೊಳ್ಳುತ್ತಿರುವ ಶರಣೆ ದಾನಮ್ಮನಂತಹವರ ಉದಾಹರಣೆ ವಿರಳ.

○

ಸತ್ಯಕ್ಕ

ಶ್ರೀಮತಿ ಹನುಮಾಕ್ಷಿ ಗೋಗಿ

"ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ" ಎನ್ನುತ್ತದೆ ಭವಭೂತಿಯ ಸಂಸ್ಕೃತದ ಉತ್ತರ ರಾಮ ಚರಿತ. ಹೆಣ್ಣನ್ನು ನಮ್ಮ ಸಮಾಜ ನಡೆಸಿ ಕೊಂಡಿರುವ ರೀತಿಯನ್ನು ಅನಾದಿಕಾಲದಿಂದ ಇಲ್ಲಿಯವರೆಗೂ ಅವಲೋಕಿಸಿದಾಗ ಮೇಲಿನ ಹೇಳಿಕೆ ಕೇವಲ ಪುಸ್ತಕದ ಬದನೇಕಾಯಿಯಾಗುತ್ತದೆ. ಇಂಥ ವಾತಾವರಣ ಇದಿರಾಗಿತ್ತು ೧೨ನೆಯ ಶತಮಾನದ ಕರ್ನಾಟಕಕ್ಕೆ. ಅದಕ್ಕೆ ಉತ್ತರ ರೂಪವಾಗಿ ಮೈ ತಳೆದದ್ದು ಶರಣರ ಆಂದೋಲನ. ಗಂಡು-ಹೆಣ್ಣಿನ ವ್ಯತ್ಯಾಸ ಕೇವಲ ದೈಹಿಕ. ಮಾನಸಿಕತೆಗೆ, ವೈಚಾರಿಕತೆಗೆ ಅದರ ಸಂಬಂಧವಿಲ್ಲ. ಗಂಡಿನಂತೆ ಹೆಣ್ಣೂ ಎಲ್ಲ ವನ್ನು ವಿಚಾರಿಸಬಲ್ಲಳು, ಸಾಧಿಸಬಲ್ಲಳು ಎನ್ನುವ ಹೊಸ ದೃಷ್ಟಿಕೋನವನ್ನು ನೀಡಿ ದವರು, ಬೋಧಿಸಿದವರು ಶರಣರು; ಅದನ್ನು ಆಚರಣೆಗೆ ತಂದು ಸಿದ್ಧಿಯನ್ನು ಪಡೆದವರು ಶರಣೆಯರು. ವಚನಕಾರ್ತಿಯರು. ಇವರಲ್ಲಿ ಸತ್ಯಕ್ಕನದು ಎದ್ದು ಕಾಣುವ ಹೆಸರು.

ಮೈಸೂರು ಪ್ರಾಂತದಲ್ಲಿರುವ ಶಿವಮೊಗ್ಗೆ ಜಿಲ್ಲೆಯಲ್ಲಿ ಶಿರಾಳಕೊಪ್ಪದಿಂದ ೪ ಮೈಲು ದೂರ ಹಿರೇಜಂಬೂರು ಎಂಬ ಗ್ರಾಮವಿದೆ. ಇದು ಬಸವೇಶ್ವರನ ಕಾಲದಲ್ಲಿ ಶಿವಶರಣರ ಆವಾಸಸ್ಥಾನವಾಗಿತ್ತು. ಇಲ್ಲಿಯೇ ವಾಸವಾಗಿ, ಶರಣರ ಮನೆಯ ಅಂಗಳದ ಕಸಗುಡಿಸುವ ಕಾಯಕವನ್ನು ಮಾಡುತ್ತಿದ್ದಳು ಸತ್ಯಕ್ಕ.[1] ಅಲ್ಲಮಪ್ರಭು, ಆತನ ಗುರು ಅನಿಮಿಷಯ್ಯ, ಶರಣ ಗೊಗ್ಗಯ್ಯರ ಊರು ಬಳ್ಳಿಗಾವೆ ಜಂಬೂರಿನ ಹತ್ತಿರವೇ ಇದೆ; ಇಂಡಿ ತಾಲೂಕಿನ ಮಸಳಿಕಲ್ಲಿನಲ್ಲಿ ಜನಿಸಿದರೂ ಬಹು ದೂರದ ಊರಿನಲ್ಲಿ ಲಿಂಗೈಕ್ಯರಾದ ಅಜಗಣ್ಣ-ಮುಕ್ತಾಯಕ್ಕರ ಸಮಾಧಿಗಳಿರುವ ಮುತ್ತಗೆ ಅತಿ ಸಮೀಪದಲ್ಲಿದೆ; ಶರಣೆ ಜಾನಾಯಿತಾಯಿ, ನಾಯಿಯಿಂದ ವೇದವನ್ನೋದಿಸಿದ ಮಹಾಕಾಳಯ್ಯರ ಊರು ಇದೇ ಜಂಬೂರು. ಈಗಲೂ ಇಲ್ಲಿ ಶರಣೆ ದೋಸೆಪಿಟ್ಟವ್ವೆಯ ದೇವಸ್ಥಾನ, ಸತ್ಯಕ್ಕನ ವಿಗ್ರಹ, ದೇವಸ್ಥಾನಗಳಿವೆ. ಶರಣ ಮಹಾಕಾಳಯ್ಯ ನಾಯಿ ಯಿಂದ ವೇದವನ್ನೋದಿಸಿದ ವಿಗ್ರಹವೂ ಇಲ್ಲಿದೆ. ಸತ್ಯಕ್ಕನ ಆರಾಧ್ಯದೈವವೂ

---

1. ಶಿವಶರಣೆಯರ ಚರಿತ್ರೆಗಳು : ಡಾ॥ ಫ. ಗು. ಹಳಕಟ್ಟಿ 1959, ಪು. 59

ಅಂಕಿತವೂ ಎನಿಸಿದ 'ಜಕ್ಕೇಶ್ವರ'ನ ದೇವಸ್ಥಾನವೂ ಇದೆ. ಕಾರಣ ಜಂಬೂರು ಶಿವಸ್ಥಾನವಾಗಿತ್ತು, ಪುಣ್ಯಕ್ಷೇತ್ರವಾಗಿತ್ತು.

ಪಟ್ಟುಗದ ಘಟನೆಯ ಹೊರತಾಗಿ ಸತ್ಯಕ್ಕನ ಜೀವನದ ಬಗೆಗೆ ಯಾವುದೇ ಗ್ರಂಥಸ್ಥ ವಿವರಗಳು, ಐತಿಹ್ಯಗಳು ದೊರೆಯುವುದಿಲ್ಲ. ತನ್ನ ವಚನಗಳಲ್ಲಿ ಬಾಣ, ನಂಬಿ, ಸಿರಿಯಾಳ–ಚಂಗಳೆ, ಸಿಂಧು ಬಲ್ಲಾಳ, ಗೊಲ್ಲಾಳ, ಸಾಮವೇದಿಗಳನ್ನು ನೆನೆಯುವಂತೆ ಬಸವಣ್ಣನ ಹಿರಿಯ ಸಮಕಾಲೀನರಾದ ದಾಸಮುಗ್ಗಳೆ, ಕೆಂಭಾವಿ ಭೋಗಣ್ಣರನ್ನು ಸ್ತುತಿಸುತ್ತಾಳೆ. ಜೊತೆಗೆ ಬಸವ ಸಮಕಾಲೀನರಾದ ಮಾದಾರ ಚೆನ್ನಯ್ಯ, ಬಳ್ಳೇಶ್ವರ ಮಲ್ಲಯ್ಯ, ಗೊಬ್ಬೂರ ಬಿಬ್ಬಿಬಾಚಯ್ಯ, ಮರುಳಶಂಕರದೇವ, ಮುಕ್ತಾಯಕ್ಕರನ್ನು ಸ್ಮರಿಸಿದುದರಿಂದ, ವಚನಕಾರ ಆದಯ್ಯ ತನ್ನ ಎರಡು ವಚನಗಳಲ್ಲಿ 'ಸತ್ಯಕ್ಕನ ಯುಕ್ತಿ' ಎಂದು ಹೊಗಳಿರುವುದರಿಂದ ಇವರೆಲ್ಲರೂ ಬದುಕಿ ಬಾಳಿದ ಕಾಲವನ್ನು ಗಮನಿಸಿ ಕವಿಚರಿತೆಕಾರರು ಹೇಳುವಂತೆ ಇವಳ ಕಾಲ ಸು. ೧೧೬೦[2] ಎನ್ನುವುದು ಸರ್ವಸಮ್ಮತವೆನಿಸುತ್ತದೆ. ಒಂದು ಸಂದೇಹ: ಈ ಚಿಕ್ಕಪುಟ್ಟ ಶಿವಶರಣರನ್ನು ನೆನೆದಿರುವ ಈಕೆ ಬಸವ, ಅಲ್ಲಮ, ಚೆನ್ನಬಸವ, ಸಿದ್ಧರಾಮರನ್ನೇಕೆ ನೆನೆಯಲಿಲ್ಲ? ಈ ಹಿನ್ನೆಲೆಯಲ್ಲಿ ಶರಣರ ಆಂದೋಲನದ ಪ್ರಭಾವ ಅವಳ ಮೇಲೆ ಆಗಿತ್ತೇ ಹೊರತು ಬಸವಾದಿ ಪ್ರಮಥರ ನೇರ ಸಂಪರ್ಕ ಆಕೆಗಿರಲಿಲ್ಲ; ಕಲ್ಯಾಣವನ್ನು ಸಂದರ್ಶಿಸುವ, ಅನುಭವ ಮಂಟಪದ ಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಅವಳಿಗೆ ದೊರೆತಿರಲಿಲ್ಲವೆಂದು ನಾವು ಸಂಭಾವ್ಯ ಊಹೆ ಮಾಡಬೇಕಾಗುತ್ತದೆ.

* * * *

ಶಿವಶರಣೆ ಸತ್ಯಕ್ಕನನ್ನು ಹಲವಾರು ಕನ್ನಡ ಕಾವ್ಯಗಳಲ್ಲಿ ನಮ್ಮ ಕವಿಗಳು ನೆನೆದಿದ್ದಾರೆ. ಶಿಷ್ಟಪದ ಸಾಹಿತ್ಯದಲ್ಲಷ್ಟೇ ಅಲ್ಲ, ಜನಪದ ಸಾಹಿತ್ಯದಲ್ಲಿಯೂ ಅವಳ ಉಲ್ಲೇಖ ಇರುವುದು ಗಮನಾರ್ಹ. ಸಮಕಾಲೀನ ವಚನಕಾರನಾದ ಆದಯ್ಯ (೧೧೫೦) ಅವಳನ್ನು ತನ್ನ ೨ ವಚನಗಳಲ್ಲಿ ಸ್ಮರಿಸಿದ್ದಾನೆ.

> ಬಸವಣ್ಣನ ಭಕ್ತಿಸ್ಥಲ, ಮಡಿವಳ ಮಾಚಣ್ಣನ ಮಾಹೇಶ್ವರ ಸ್ಥಲ,
> ಘಟ್ಟಿವಾಳ ಮುದ್ದಣ್ಣನ ಪ್ರಸಾದಿಸ್ಥಲ, ಚೆನ್ನಬಸವಣ್ಣನ ಪ್ರಾಣಲಿಂಗಿಸ್ಥಲ,
> ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ,
> ಅಜಗಣ್ಣನ ಆರೂಢ, ನಿಜಗುಣನ ನಿಬ್ಬೆರಗು,
> ಅನಿಮಿಷನ ನಿಶ್ಚಲ, ಮಹಾದೇವಿಯಕ್ಕನ ಜ್ಞಾನ,
> ನಿಂಬಿಯಕ್ಕನ ನಿಶ್ಚಯ, ಮುಕ್ತಾಯಕ್ಕನ ಅಕ್ಕರು,
> ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸಮತೆ,
> ರೇವಣಸಿದ್ಧಯ್ಯದೇವರ ನಿಷ್ಠೆ, ಸಿದ್ಧರಾಮ ತಂದೆಗಳ ಮಹಿಮೆ,

---

2. ಕರ್ನಾಟಕ ಕವಿಚರಿತೆ. ಪ್ರಥಮ ಸಂಪುಟ ಆರ್. ನರಸಿಂಹಾಚಾರ್ಯ, 1972 ಪು.224

ಮರುಳಸಿದ್ಧಯ್ಯದೇವರ ಅದೃಷ್ಟಪ್ರಸಾದದ ನಿಷ್ಠೆ,
ಏಕೋರಾಮಯ್ಯಗಳ ಆಚಾರನಿಷ್ಠೆ, ಪಂಡಿತಾರಾಧ್ಯರ ಸ್ವಯಂಪ್ರಕಾಶ,
ಮುಗ್ಧಸಂಗಯ್ಯ, ಮೈದುನ ರಾಮಣ್ಣ, ಬೇಡರ ಕನ್ನಪ್ಪ,
ಕೋಳೂರ ಕೊಡಗೂಸು, ತಿರುನೀಲ ನಕ್ಕರು, ರುದ್ರಪಶುಪತಿಗಳು,
ದೀಪದ ಕಲಿಯಾರು ಇಂತಿವರ ಮುಗ್ಧಭಕ್ತಿ
ನಿಮ್ಮೊಳಿನಗೆಂದಪ್ಪುದೋ ಸೌರಾಷ್ಟ್ರ ಸೋಮೇಶ್ವರಾ !
ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ,
ಪ್ರಭುವೆನ್ನ ಪ್ರಾಣ, ಚೆನ್ನಬಸವಣ್ಣನೆನ್ನ ಕರಸ್ಥಲದ ಲಿಂಗ,
ಘಟ್ಟಿವಾಳನೆನ್ನ ಭಾವ, ಸೊಡ್ಡಳ ಬಾಚರಸರೆನ್ನ ಅರಿವು,
ಮಹಾದೇವಿಯಕ್ಕನೆನ್ನ ಜ್ಞಾನ, ಮುಕ್ತಾಯಕ್ಕನೆನ್ನ ಅಕ್ಕರು,
ಸತ್ಯಕ್ಕನೆನ್ನ ಯುಕ್ತಿ, ನಿಂಬಿಯಕ್ಕನೆನ್ನ ನಿಶ್ಚಯ,
ಅಲ್ಲಾಳಿಯಕ್ಕನೆನ್ನ ಸಮತೆ, ಅನಿಮಿಷನೆನ್ನ ನಿಶ್ಚಲ,
ನಿಜಗುಣನೆನ್ನ ಕ್ಷಮೆ, ರೇವಣಸಿದ್ಧದೇವರೆನ್ನ ಪುಣ್ಯನೇತ್ರ,
ಸಿದ್ಧರಾಮ ತಂದೆಗಳೆನ್ನ ನೇತ್ರದ ದೃಕ್ಕು, ಮರುಳಸಿದ್ಧದೇವರೆನ್ನ ಶ್ರೋತ್ರ,
ಪಂಡಿತಾರಾಧ್ಯರೆನ್ನ ಜಿಹ್ವೆ, ಏಕೋರಾಮಯ್ಯಗಳೆನ್ನ ನಾಸಿಕ,
ಅಸಂಖ್ಯಾತರೆನ್ನ ಅವಯವಂಗಳು, ಪುರಾತನರೆನ್ನ ಪುಣ್ಯದ ಪುಂಜ,
ಏಳುನೂರೆಪ್ಪತ್ತು ಅಮರಗಣಂಗಳೆನ್ನ ಗತಿ, ಮತಿ, ಚೈತನ್ಯ, ಸೌರಾಷ್ಟ್ರ
ಸೋಮೇಶ್ವರಾ !
ಆನು ಆ ನಿಮ್ಮ ಶರಣರ ಪಡಿದೊತ್ತಯ್ಯಾ! ನಿಮ್ಮ ಧರ್ಮ ನಿಮ್ಮ ಧರ್ಮ[3]

ಹಂಪೆಯಾಳ್ದನ ಅನನ್ಯಭಕ್ತ, ರಸಿಕಚಕ್ರಿ ಹರಿಹರ (ಕ್ರಿ. ಶ. ಸು. ೧೨೦೦) ತನ್ನ ರಗಳೆಗಳಲ್ಲಿ ಶಿವಶರಣ–ಶರಣೆಯರನ್ನು ಸೂಚಿಸುವಾಗ—

ನಂಬಿಯಣ್ಣನ ನಂಬಿಯಕ್ಕ ಮಹದೇವಿಯಂ
ಜಂಬೂರೊಳೆಸೆವ ಸತ್ಯಕ್ಕ ನಮ್ಮವ್ವೆಯಂ[4]

ಮತ್ತು

ನಂಬಿಯಣ್ಣನ ನಂಬಿಯಕ್ಕ ಸತ್ಯಕ್ಕನಂ
ಕೆಂಭಾವಿಯೊಳ್ಮೆರೆದಭಂಗ ಭೋಗಯ್ಯನಂ[5]

ಎಂದು ಸತ್ಯಕ್ಕನನ್ನೂ ನೆನೆದಿದ್ದಾನೆ.

---

3. i) ಆದಯ್ಯನ ವಚನಗಳು ಸಂ: ರಾ|| ಸಾ|| ಫ. ಗು. ಹಳಕಟ್ಟಿ 1931 ಪು. 16-17.
ii) ಆದಯ್ಯನ ವಚನಗಳು ಸಂ : ಉತ್ತಂಗಿ ಚೆನ್ನಪ್ಪನವರು 1957 ಪು. 162-163
iii) ಸಕಲ ಪುರಾತನರ ವಚನಗಳು ಸಂಪುಟ 2 ಸಂ : ಡಾ|| ಎಂ. ಎಸ್. ಸುಂಕಾಪುರ 1976 ಪು. 66-67
4. ಶಿವಭಕ್ತಿ ಮಹಿಮಾ ರಗಳೆಗಳು ಸಂ : ಡಾ|| ಎಂ. ಎಸ್. ಸುಂಕಾಪುರ 1976 ಪು. 346

ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥರು (೧೨೭೫) ಗಣಸಹಸ್ರಗಳನ್ನು ಉಲ್ಲೇಖಿಸುವಾಗ ಅಮರಗಣಂಗಳಲ್ಲಿ "ಜಂಬೂರು ಸತ್ಯಕ್ಕ"ನನ್ನು ಹೆಸರಿಸಿದ್ದಾರೆ.[6]

ಲಕ್ಕಣ್ಣದಂಡೇಶನು (೧೪೩೫) ಶರಣೆಯರ ಪಾದಗಳಿಗೆ ನಮಿಸುತ್ತ

ಸತ್ಯಕ್ಕನೆಂಬೋರ್ವ ಭಕ್ತೆ ಜಂಬೂರೊಳಗೆ
ಭಕ್ತಿವಿದೆ ಹರಿಶಬ್ದಮಂ ಕೇಳದಿಹ ಭಾಷೆ
ಭಕ್ತೆಯಂ ಮನವ ನೋಡುವೆನೆನುತರ್ಲೀಶ್ವರಂ ಬಂದು ಭಿಕ್ಷವನು ಬೇಡೆ
ಭಕ್ತನಂ ಕಾಣುತಂ ಹುಟ್ಟಿಲನ್ನವ ತರಲು
ನಿತ್ಯಳಾಗಾ ತಾಯೆ ಹರಿಯ ಕರುಣದಿಯೆನಲು
ಹೊತ್ತುವತಿ ಕೋಪದಿಂ ಸಟ್ಟುಗದೊಳಿಟಿದವಳ ಚರಣಾಂಬುಜಕ್ಕೆ
ಶರಣು ||

ಹೊಡೆಯಲಾ ಜಂಗಮಂ ಪುರದೊಳಗೆ ದೂಱುತಿರೆ
ನುಡಿಸಲಿಲ್ಲಿಯು ದೂಱಿನಲ್ಲಿ ಸತ್ಯಕ್ಕನುಂ
ಹೊಡೆದಳೆನಲೇಂ ಕಾರಣೆನುತ ಕರೆದುಂ ಕೇಳೆ ಭಿಕ್ಷುಕನ ಕೇಳೆಂದೆನೆ
ನುಡಿದ ಶಿವಹರಿ ನಿಮ್ಮ ರಕ್ಷಿಸೆನಲಾಯಕಂ
ಹಿಡಿದ ಸಟ್ಟುಗದೊಳುಂ ಹೊಡೆಯಲುದಕಂ ಮೆಚ್ಚಿ
ಸಡಗರದಿ ಕೈಲಾಸಕೊಯ್ದ ಸತ್ಯಕ್ಕಗಳ ಚರಣಾಂಬುಜಕ್ಕೆ ಶರಣು[7]

ಎಂದು ಏಕದೇವತಾ ನಿಷ್ಠೆಯನ್ನು ಮೆರೆದ ಸತ್ಯಕ್ಕನಿಗೂ ವಂದಿಸುತ್ತಾನೆ.

ಮುಪ್ಪಿನ ಷಡಕ್ಷರಿದೇವರು (೧೫೮೦) ಶಿವಭಕ್ತರ ತೊತ್ತಿನ ಮಕ್ಕಳಾದವರಿಗೆ ಯಾರೂ ಸರಿಸಾಟಿಯಲ್ಲ ಎನ್ನುವಾಗ—

ಅಕ್ಕನಾಗಮ್ಮ ಸ
ತ್ಯಕ್ಕ ಚಂಗಳೆ ಚೆಲ್ವೆ
ಅಕ್ಕರೆಯ ಮಹಾದೇವಿ ಸುಗ್ಗವ್ವೆಯ
ಚಿಕ್ಕ ಕೊಡಗೂಸಿನವ
ರಕ್ಕರಿನ ತೊತ್ತಿನ
ಮಕ್ಕಳಪ್ಪೆವು ನಮಗೆ ಸರಿಯದಾರು ||[8]

ಎಂದು ಪ್ರಶ್ನಿಸುತ್ತಾರೆ. ಅಲ್ಲದೆ—

5. ಹರಿಹರನ ರಗಳೆಗಳು—ಲಿಂಗಾರ್ಜನಾ ರಗಳೆ ಸಂ: ಡಾ॥ ಫ. ಗು. ಹಳಕಟ್ಟಿ 1968 ಪು. 531.
6. ಗಣಸಹಸ್ರ ನಾಮಾವಳಿ ಸಂ: ಬಿ. ಶಿವಮೂರ್ತಿಶಾಸ್ತ್ರಿ 1955 ಪು. 58
7. ಶಿವತತ್ವ ಚಿಂತಾಮಣಿ ಸಂ: ಎಸ್. ಬಸಪ್ಪ 1960 ಪು. 380
8. ಸುಬೋಧಸಾರ ಸಂ: ಹರ್ಡೇಕರ ಮಂಜಪ್ಪನವರು 1955 ಪು. 37

ಸತ್ತಿಯಕ್ಕ ಹುಟ್ಟನಿಂದ
ಒತ್ತಿ ತನ್ನ ತಿವಿದಳೆಂದು
ಮಿಥ್ಯತನವ ಮಡಗಿಕೊಂಡು ಮತ್ತದಲ್ಲದೆ
ನಿತ್ಯ ಸೌಖ್ಯ ಕೊಂಡ ನಿಮ್ಮ
ನೆತ್ತಿಯನ್ನು ಕುಟ್ಟದವರ
ಭೃತ್ಯನಿವನು ಎಂದು ಕಾಡುತಿಹೆಯೊ ಕಾಣೆನು ||9

ಎಂದೂ ಕೇಳುತ್ತಾರೆ.

ಕಿಕ್ಕೇರಿಯಾರಾಧ್ಯ ನಂಜುಂಡಕವಿ (೧೫೫೦)ಯೂ ಮೇಲಿನ ಘಟನೆಯನ್ನೇ ಹೀಗೆ ಉಲ್ಲೇಖಿಸುತ್ತಾನೆ–

ಹರಿ ಎಂದ ವಿಪ್ರನ |
ಕರದ ಸಟ್ಟುಗದಿ ನಿ |
ಬ್ಬರದಿ ಪೊಯ್ಯಲು ಹಲ್ಲು ಮುರಿಯೆ ||
ನೆರದೆಲ್ಲರ್ ಕಾಬಂತೆ |
ಹರನ ಗರ್ಭವ ಪೊಕ್ಕ |
ಳಿರದೆ ಸತ್ಯಕ್ಕನನಱಿಯ ||10

ಇನ್ನೊಂದೆಡೆ—

ತಿಲಕವ್ವೆಯರ ನೆನ |
ಹಲರ್ದುರ್ ಸತ್ಯಕ್ಕನ |
ಮಲಪದಯುಗವ ಜಾನಿಸುತಾ ||
ಚಲವಂತೆ ಮಹದೇವಿ |
ಯೊಲವಾಂತು ಮುಕ್ತಾಯಿ |
ಗಳ ಕರುಣವ ನೆಱೆ ಪೊತ್ತು ||11

ಎಂದು, ಮಗುದೊಂದೆಡೆ–

ಅರಿಯದು ಕೊಳೂರ |
ತರಳೆ ಸತ್ಯಕ್ಕ ಭಾ |
ಸುರತರದೆಸೆವ ಸೋಹಳೆಯಾ ||
ನಿರುತ ಸೋಮವ್ವೆಯ |
ಪರಿಯಂತೆ ಲಿಂಗದಿ |
ಬೆರಸುವ ಬಗೆಯ ಜಾನಿಪನು ||12

ಎಂದು ಸ್ಮರಿಸುತ್ತಾನೆ.

---

9. ಅದೇ ಪು. 79
10. ಭೈರವೇಶ್ವರ ಕಾವ್ಯ ಸಂ: ಶಿವಬಸವಸ್ವಾಮಿಗಳು 1954 ಸಂಧಿ 5 ಪದ್ಯ 104
11. ಅದೇ 2ನೆಯ ಸಂಧಿ ಪದ್ಯ 233
12. ಅದೇ 3ನೆಯ ಸಂಧಿ ಪದ್ಯ 55

ವಿರೂಪಾಕ್ಷ ಪಂಡಿತನು (೧೫೮೫) ಸಟ್ಟುಗದ ಘಟನೆಯನ್ನೀ ಕೆಳಗಿನಂತೆ ಸಂಕ್ಷೇಪಿಸುತ್ತಾನೆ.

ಹರಿಯ ತಂದಡ್ಡ ಬೀಳಿಸಿದನರಿಯಮರಾಜ
ನರಿದನಾ ಹರಿಯೆಂದು ನುಡಿದನಂ ಸತ್ಯಕ್ಕ
ನಿರದೆ ಹರಿಯೆಂದವನಂ ಹುಟ್ಟಿಂದಲಿರಿದಳೆಲೆ ರಾಮೇಶ ಕೇಳೆಂದನು 13

'ಪುರಾತನ ದೇವಿಯರ ತ್ರಿವಿಧಿ'ಯಲ್ಲಿ—

ಹರನು ಚರರೂಪಿಂದೆ 'ಹರಿ' ಎಂಬ ನುಡಿ ಕೇಳಿ
ಕರದ ಹುಟ್ಟಿಂದ–ತಿವಿದೀಶನೊಲಿಸಿದ
ಗರುವೆ ಸತ್ಯಕ್ಕ ಶರಣಾಗು ||14

ಎಂದಿದ್ದರೆ,

ಅರುಣಾಚಲ ಕವಿಯು 'ಎಲ್ಲ ಪುರಾತನರ ತ್ರಿವಿಧಿ'ಯಲ್ಲಿ—

ಅಕ್ಕ ಮಂಗಾಯಕ್ಕ ಅಕ್ಕ ಚಂಗಳೆಯಕ್ಕ
ಅಕ್ಕ ಚೋಳಕ್ಕ ಸತ್ಯಕ್ಕ ಮುಕ್ತಾಯಿ
ಅಕ್ಕ ನೀಲಮ್ಮನಗೆ ಕೃಪೆಯಾಗು ||15

ಎಂದು ಶಿವಶರಣೆಯರೆಲ್ಲರ ಹರಕೆಯನ್ನು ಕೇಳುತ್ತಾನೆ.

ಷಡಕ್ಷರದೇವನು (೧೬೫೦) ಎಲ್ಲ ಶಿವಶರಣೆಯರನ್ನು ಪಟ್ಟಿ ಮಾಡುತ್ತ—

ಲಿಂಗಾಂಬೆ ಸೂರಸೇನೆ ಸು
ಮಂಗಳೆ ಸತ್ಯಕ್ಕನಲ್ಲಮಾಂಬಿಕೆ ವಿಳಸ
ದ್ಗಂಗಾಂಬೆ ಗೌರಿ ಶಾಂಕರಿ
ಸಂಗಾಂಬಿಕೆ ಚಂಡಿಯುರಸಿಯಾಪಾಂಬಿಕೆಯರ್ ||16

ಎಂದು ಸತ್ಯಕ್ಕನನ್ನೂ ಹೆಸರಿಸಿದ್ದಾನೆ.

ಸರ್ವಜ್ಞ ತನ್ನ ತ್ರಿಪದಿಯಲ್ಲಿ–

ಅಮ್ಮವ್ವೆ ಓಟ್ಟವ್ವೆ ಗೊಗ್ಗವ್ವೆ ಸತ್ಯಕ್ಕ
ಹೆಣ್ಣು ಪೆರೂರು ಕೊಡಗೂಸು | ನಂಜಿಕ್ಕನ
ಮೊಮ್ಮಗ ನಾನು ಸರ್ವಜ್ಞ ||17

ಎನ್ನುತ್ತ ತಾನು ಈ ಶಿವಶರಣೆಯರೆಲ್ಲರ ಕಂದ ಎಂದು ಘೋಷಿಸಿಕೊಂಡಿದ್ದಾನೆ.

ಅನಾಮಧೇಯ ಕವಿಯ 'ಶರಣ ಸ್ತುತಿ'ಯ ಅಂತ್ಯದಲ್ಲಿರುವ

---

13. ಚೆನ್ನಬಸವಪುರಾಣ ಸಂ: ಶಿ. ಶಿ. ಬಸವನಾಳ 1934 ಪು. 666
14. ಶಿವಶರಣರ ತ್ರಿಪದಿಗಳು ಸಂ. ಜಿ. ಶಿವಮೂರ್ತಿಶಾಸ್ತ್ರಿ 1969 ಪು. 5
15. ಅದೇ ಪು. 25
16. ಬಸವರಾಜ ವಿಜಯಂ ಸಂ. ಡಾ|| ಆರ್. ಸಿ. ಹಿರೇಮಠ 1978 ಪು.
17. ಇತ್ತೀಚೆಗೆ ದೊರೆತ ಸರ್ವಜ್ಞನ ವಚನಗಳು: ಬಸವಜರ್ನಲ್ ಸಂ. 2 ಸಂ. 4 ಫೆಬ್ರುವರಿ 1978.

ಅಕ್ಕ ನಾಗಂಮ ಸ
ತ್ಯಕ್ಕ ಚೆಂಗಳೆ ನಿಂಬ
ಯಕ್ಕ ಮಹಾದೇವಿ ಸುಗ್ಗಲೆಯರಾ
ಚಿಕ್ಕ ಕೊಡಗೂಸಿನವರ
ಅಕ್ಕಜಿನ ತೊತ್ತಿನಾ
ಮಕ್ಕಳಪ್ಪೆವು ನಮಗೆ ಸರಿಯದಾರೂ ||18

ಎಂಬ ಪದ್ಯವು ಮುಪ್ಪಿನ ಷಡಕ್ಷರಿಯ ಹಾಡನ್ನೇ ಜ್ಞಾಪಿಸುತ್ತದೆ.

ಶಾಂತಲಿಂಗ ದೇಶಿಕನಂತೂ (ಕ್ರಿ.ಶ. ಸು. ೧೭೦೦) ಒಂದಲ್ಲ ಹಲವಾರು ಬಾರಿ ಸತ್ಯಕ್ಕನನ್ನು ನೆನಪಿಸಿ, ಅವಳ ಜೀವನದಲ್ಲಿ ನಡೆದ ಒಂದು ಘಟನೆಯ ಸಂಪೂರ್ಣ ಚಿತ್ರವನ್ನೇ ನೀಡುತ್ತಾನೆ.

"ಸತ್ಯಕ್ಕನ ಪದವ ಧ್ಯಾಸಿಸುತ್ತ ಎಂಬುದಕ್ಕೆ ಕಥೆ :"

ಜಂಬೂರೆಂಬ ಪುರದಲ್ಲಿ ಸತ್ಯಕ್ಕನೆಂಬ ಶಿವಶರಣೆ ಇರುತಿರ್ದು, ಶಿವಭಕ್ತಿ ನೈಷ್ಠೆಯಿಂದ "ಶಿವನ ಶಬ್ದವನಲ್ಲದೆ ಅನ್ಯಶಬ್ದವ ಕೇಳಲೊಲ್ಲೆ"ನೆಂಬ ಭಾಷೆಮಾಡಿಕೊಂಡಿರುತ ಶಿವಭಕ್ತರ ಮನೆಯ ಅಂಗಳವನುಡಿಗಿ ಮನೆಯಂ ಸಮ್ಮಾರ್ಜನೆಯಂ ಮಾಡಿ ಅವರು ಕೊಟ್ಟ ಧಾನ್ಯದಿಂದ ಜಂಗಮಾರ್ಚನೆಯ ಮಾಡುತ್ತ, ಭಸ್ಮ ರುದ್ರಾಕ್ಷಿ, ಶಿವಮಂತ್ರ ಸ್ಮರಣೆಯೊಡನೆ ಕೂಡಿರುತ, ಭವಿಜನರಂ ಕಂಡರೆ ನುಡಿಯಲೊಲ್ಲದೆ ದಾರಿಯ ತೊಲಗಿ ಪೋಗುತ್ತ. ಶಿವಭಕ್ತಿನಿಷ್ಠೆಯಿಂದಾಚರಿಸುತ್ತಲೊಂದು ದಿನ, ಶಿವನು 'ಅನ್ಯಶಬ್ದವ ಕೇಳಲೊಲ್ಲದ ಭಕ್ತೆಯ ಮನವ ನೋಡುವೆ'ನೆಂದು ಕಂತೆ ಕಮಂಡಲ ದಂಡಿ ಕೋಲು ಗುಂಡುಗಪ್ಪರವೆರಸಿ ಭಿಕ್ಷುಕ ಮೂರ್ತಿಯಾಗಿ ಬಂದು ಸತ್ಯಕ್ಕನ ಮನೆಯ ಮುಂದೆ ನಿಂದಿರಲಾಗ, ಹುಟ್ಟಿನಲ್ಲಿ ಭಿಕ್ಷವಂ ತರಲು. ಜೋಳಿಗೆಯನಾಂತು ಭಿಕ್ಷವ ನೀಡುವಾಗ ಹರಿದ ಜೋಳಿಗೆಯಿಂದೊಂದಗುಳು ನೆಲಕ್ಕೆ ಬೀಳಲಾಗ, ಆ ಭಕ್ತೆ ಕೇಳುವಂತೆ 'ಹರಿದ ಹರಿಯಿಂದ ನೆಲಕ್ಕೆ ಬಿದ್ದಿತ್ತು ಜೋಳಿಗೆ; ಅಚೆಲಿ ಹರಿ ಈಚೀಲಿ ಹರಿ; ಹರಿಯಿಂದ ಭಿಕ್ಷ ಸೂಸಿತೆ'ನಲು 'ಹರನ ವೇಷವ ತೊಟ್ಟು ಗುರುಮೂರ್ತಿಯಾಗಿರ್ದು ಹರಿಹರಿಯೆಂಬ ಹರಿನಾಮವ ನುಡಿದನಲಾ !' ಎಂದು ಕರದಲ್ಲಿರ್ದ ಸಟ್ಟುಗದಿಂದ ಪೊಯ್ಯಲು, ದಂತ ಮುರಿದು ಮೋರೆಯೊಡೆದು ಮೊರೆಯಿಡುತ ಬೀದಿಗೆ ಬರಲು. ಪುರಜನಂ ನೆರೆದು ನೋಡುವಾಗ, 'ಸತ್ಯಕ್ಕನು ಸತ್ಯವುಳ್ಳ ಭಕ್ತೆಯೆಂದು ಭಿಕ್ಷಕ್ಕೆ ಪೋದೆನು, ಎನ್ನನೀ ಪರಿಯಲ್ಲಿ ಕೊಂದಳೆ'ಂದು ಪೇಳಲವರು ಸತ್ಯಕ್ಕನ ಭಕ್ತಿಯನರಿಯದೆ 'ಭಿಕ್ಷುಕನ ಕೊಲಬಹುದೆ ?' ಎಂದು ನುಡಿಯಲು, 'ಅಸತ್ಯವ ಅನ್ಯಶಬ್ದವ ನುಡಿದಡೆ ಕೊಂದೆನೆ'ನಲರ್ದೇನೆಂದು ಜನರು ಚರಮೂರ್ತಿಯಂ ಕೇಳಲು. ಹಿಂದೆ ಮುಂದೆ ನೋಡಿ ಹೆದರಿ ನಡಗುತ್ತ 'ಹರಿದ ಹರಿಕಿನಲ್ಲಿ ಒಂದಗುಳು ಚೆಲ್ಲಿತೆಂದಡೆ ಕೊಂದಳೆ'ಂದು ಪೇಳುವಾಗ ನೆರೆದ ಜನರು ನೋಡುವಂತೆ ಭರದಿಂದ ಪೊಡೆಯಲು. ಹರ ತನ್ನ ನಿಜರೂಪುದೋರಿ 'ಮೆಚ್ಚಿದೆ ಬೇಡು' ಎನಲು, 'ಕುಕ್ಷಿಯ ಕ್ಷುಧೆಗೆ

18. ಕನ್ನಡ ಹಸ್ತಪ್ರತಿ ಸೂಚಿ. 8ನೆಯ ಸಂಪುಟ ಮೈಸೂರು ವಿಶ್ವವಿದ್ಯಾಲಯ. 1930 ಪು. 299

ನೀನು ಭಿಕ್ಷಕೆ ಬಂದು, ಎನ್ನ ಹುಟ್ಟಿನಲ್ಲಿ ಪ್ರೊಡೆದ ಪೆಟ್ಟಿನಿಂದ ನೀನೊಂದೆಯಲಾ ! ಶಿವಶಿವಾ ಎನ್ನ ನೇಮದ ಭಿಕ್ಷವಂ ಮಾಡಿ ನಿನ್ನ ಕುಕ್ಷಿಯೊಳಿಂಬಿಡೆನಲಾಗ, ನರಸುರ ಮುನಿ ಕುಲ ನೋಡುವಂತೆ ಪೂಮಳೆ ಸುರಿಯಲು ಸತ್ಯಕ್ಕನ ತನ್ನ ಕುಕ್ಷಿಯೊಳಗಿಂ ಬಿಟ್ಟು ನಿತ್ಯನಾದ ನಿಜಪದವಂ ಕೊಟ್ಟನು ಶಿವನು'[19] ಎಂದು ಒಂದೆಡೆ ಇದ್ದರೆ ಇನ್ನೊಂದೆಡೆ ಧೂಳಯ್ಯನ ಮಹಿಮೆಯನ್ನು ಸಾರುತ್ತ ಶಿವನು 'ಮೆಚ್ಚಿಂದ ಮಡಿವಾಳನು ಜಜದು ಹೊಜಗಿಕ್ಕಿದರು; ಕಲಿಕಾಮ ಕಲಿಗಣನು ನನ್ನನಿಜಿಸಿ ಬಾದರು. ಸತ್ಯಕ್ಕ ನಿಂಬವ್ವೆಯು ಹುಟ್ಟಿನಲ್ಲಿ ವನಕೆಯಲ್ಲಿ ಹೊಯ್ದರು; ಇಲ್ಲಿ ಧೂಳಯ್ಯನ ಉಳಿಯ ಮುಜಿದೆನು, ನನ್ನ ಕೊಲ್ಲದೆ ಬಿಟ್ಟರು ಸಾಕೆಂದು ಪ್ರಮಥರಿಗೆ ಹೇಳುತ್ತ ಕೈಲಾಸಕ್ಕೆ ಹೋದನಂತೆ.[20] ಮತ್ತೊಂದೆಡೆ–

ಸತ್ಯಕ್ಕ ಲಿಂಗವ ಬೆರದಳು ಎಂಬುದಕ್ಕೆ ಕಥೆ :

ಸತ್ಯಕ್ಕನೆಂಬ ಶಿವಶರಣೆಯು ಜಂಬೂರೆಂಬ ಪುರದಲ್ಲಿ ಶಿವಭಕ್ತಿಯಂ ಮಾಡುತ್ತಿರುವಾಗ 'ಅನ್ಯಶಬ್ದವ ಕೇಳಲೊಲ್ಲೆ'ನೆಂಬ ಭಾಷೆಯಿಂದಿರಲು, ಶಿವನು ಭಿಕ್ಷಕ್ಕೆ ಬರಲು, ಹುಟ್ಟಿನಲ್ಲಿ ನೀಡುವಾಗ ಜೋಳಿಗೆ ಹರಿದಿರಲು ಕಡೆಗೆ ಚೆಲ್ಲಲು, 'ಹರಿದ ಹರಿಯಲ್ಲಿ ಚೆಲ್ಲಿತೆ'ನಲು ಹಿಡಿದ ಹುಟ್ಟಿನಲ್ಲಿ ಹೊಡೆದುದ ಜನರೆಲ್ಲಾ ಕಾಬ ಹಾಂಗೆ ರಟ್ಟೆಕ್ಕಿ ಮತ್ತೆ ಹೇಳೆನಲು ಮೊದಲಂತೆ ನುಡಿಯಲು, ಹುಟ್ಟಿನಲ್ಲಿ ಮತ್ತೆ ಹೊಯ್ವುದ ಕಂಡು 'ಭಕ್ತೆಯ ಭಾಷೆ ಘಟ್ಟಿಯಾಯಿತೆಂ'ದು ಶಿವನು ತನ್ನ ಕುಕ್ಷಿಯೊಳಗೆ ಇಂಬಿಟ್ಟು ಕೊಂಡುದನಱಿದು ನರಸುರಲೋಕದವರೆಲ್ಲಾ ಕೊಂಡಾಡುತ್ತಿರಲು, 'ಶಂಭು ಜಕ್ಕೇಶ್ವರ'ನೆಂಬ ತಮ್ಮಿಷ್ಟಲಿಂಗದ ಕುಕ್ಷಿಯಲ್ಲಿ ಪೊಕ್ಕುಅಕ್ಷಯ ಸುಖದಿಂದಿರ್ದಳು[21] ಎಂದು ಮೊದಲಿನ ಕಥೆಯನ್ನೇ ಸಂಕ್ಷೇಪಿಸುತ್ತದೆ. ಇದೇ ಕಥೆಯೇ 'ಹರಿಯೆಂಬ ವಿಪ್ರನ ಕರವ ಸಟ್ಟುಗದಲ್ಲಿ ಪೊಡೆದಳು ಸತ್ಯಕ್ಕನೆಂಬುದಕ್ಕೆ ಕಥೆ" ಎನ್ನುವಲ್ಲಿ ಇನ್ನೊಮ್ಮೆ ಶಬ್ದ ಬದಲಾವಣೆಗಳೊಡನೆ ಪುನರುಕ್ತಗೊಂಡಿದೆ.

ವೀರಶೈವ ಸಾಹಿತ್ಯೇತಿಹಾಸದಲ್ಲಿ ವಚನಸಾಹಿತ್ಯದ ಹಾಗೂ ಶಿವ ಮತ್ತು ಶಿವ ಶರಣರ ಬಗೆಗಿನ ಸ್ವತಂತ್ರ ಕೃತಿಗಳ ರಚನೆ ಒಂದು ಘಟ್ಟವಾದರೆ ವಚನಸಾಹಿತ್ಯದ ಸಂಕಲನ–ಸಂಪಾದನೆಗಳದು ಇನ್ನೊಂದು ಘಟ್ಟವೆಂಬುದು ಸರ್ವವಿದಿತ. ಇಂತಹ ಹಲವಾರು ಸಂಪಾದನಾಕೃತಿಗಳು ಎರಡನೆಯ ಘಟ್ಟದಲ್ಲಿ ಸಿದ್ಧವಾಗಿ ಶೂನ್ಯಸಂಪಾದನೆಗಳಲ್ಲಿ ತನ್ನ ಸಾಧನೆಯ ಪರಾಕಾಷ್ಠತೆಯನ್ನು ಮುಟ್ಟಿತು. ಇದಕ್ಕೆ ಪೂರ್ವಭಾವಿಯಾಗಿ ಸಕಲ ಪುರಾತನರ ವಚನಗಳ ಕಟ್ಟು ಉತ್ತಮ ನೆಲೆಗಟ್ಟನ್ನು ನಿರ್ಮಿಸಿತು. ಈ ಸಂಪಾದನಾ ಕೃತಿಗಳಲ್ಲಿ ಗುಬ್ಬಿ ಮಲ್ಲಣ್ಣನ ಗಣಭಾಷಿತರತ್ನಮಾಲೆ[23], ಮಹಾ

---

19. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಭಾಗ 1 ಸಂ. ಡಾ|| ಆರ್. ಸಿ. ಹಿರೇಮಠ, ಡಾ|| ಎಂ. ಎಸ್. ಸುಂಕಾಪುರ 1964 ಪು. 81-82
20. ಅದೇ ಭಾಗ-2 ಪು. 38
21. ಅದೇ ಭಾಗ-2 ಪು. 43-44
22. ಅದೇ ಭಾಗ-2 ಪು. 4э9-440
23. ಸಂ. ಪ್ರಭುಸ್ವಾಮಿಗಳು 1948

ಲಿಂಗದೇವನ ಏಕೋತ್ತರ ಶತಸ್ಥಲದಲ್ಲಿ ೫ ವಚನಗಳು,24 ವಿಶೇಷಾನುಭವ ಷಟ್ಸ್ಥಲದಲ್ಲಿ ೩ ವಚನಗಳು,25 ಸಕಲ ಪುರಾತನರ ವಚನಗಳು ಸಂಪುಟ ೩ರಲ್ಲಿ, ೧೧ ವಚನಗಳು,26 ಲಿಂಗಚಿದಮೃತ ಬೋಧೆಯಲ್ಲಿ ೫ ವಚನಗಳು,27 ಪ್ರಸಾದಿ ಸ್ಥಲದ ವಚನಗಳಲ್ಲಿ ೧ ವಚನ,28 ಲಿಂಗಲೀಲಾವಿಲಾಸಚಾರಿತ್ರದಲ್ಲಿ ೪ ವಚನಗಳು,29 ಮಹದ್ದೇವಯೋಗಿ ವಿರಚಿತ ವೀರಶೈವ ಚಿಂತಾಮಣಿಯಲ್ಲಿ ೨ ವಚನಗಳು,30 ಮುಕ್ತಿ ಕಂಠಾಭರಣದಲ್ಲಿ ೪ ವಚನಗಳು,31 ಸೇರ್ಪಡೆಯಾಗಿವೆ.

ತೋಂಟದ ಸಿದ್ಧಲಿಂಗ ಶಿವಯೋಗಿ (೧೫೮೦) ವಿರಚಿತ ಪಾಲ್ಕುರಿಕೆ ಸೋಮೇಶ್ವರ ಪುರಾಣದಲ್ಲಿ ಭಕ್ತರಿಗೆ ತಾನು ಅಂಜುವೆನೆಂದು ಶಿವನು ಹೇಳಿಕೊಳ್ಳುವ ಸಮಯದಲ್ಲಿ ಸತ್ಯಕ್ಕನ ಉಲ್ಲೇಖ ಹೀಗಿದೆ—

..............................ಪರಮ ಸದ್ಭಕ್ತರಂ ||
ಅವಿವೇಕದಿಂ ತೆಗಳಲಾಗದಾನೆಂದೆಂದು
ಮವರ್ಗೆಯಂಜುವೆನೆಂತೆನಲೊರ್ವ ಸದ್ಭಕ್ತೆ
ವಿವರಿಸಲ್ಸತ್ಯಕ್ಕನೆಂಬ ಪೆಸರಿಂದೆ ಜಂಬೂರೊಳೊಪ್ಪುತ್ತಿರ್ಪಳು |
ಹರಿಶಬ್ದಮಂ ಕೇಳಳಾಕೆಯುವಳಂಗಣಕೆ
ತರದಿಂದೆಯಾಂ ಬಿನದದಿಂ ಭಿಕ್ಷಕೆಯ್ದಿ ತೆರ
ಹರಿಸದನ್ನ್ಯೋಚ್ಚರಣೆಗೆಯ್ಯೆ ಕಿಸುಗಣ್ಚಿಯಾಸತಿ ತಗುಳ್ದಟ್ಟಿ ಬಂದು ||
ನಿರುತದಿಂದೆನ್ನ ರೂಪಂ ತೋರ್ದೊಡಂ ಬಿಡದೆ
ಕರದ ಸಟ್ಟುಗದಿಂದೆ ಸದೆದಳ್....32

ಇತ್ತೀಚೆಗೆ ವಚನಪಿತಾಮಹ ಫ. ಗು. ಹಳಕಟ್ಟಿಯವರು ೭೭೦ ಅಮರ ಗಣಾಧೀಶ್ವರರ ಚರಿತ್ರೆಗಳು,33 ಶಿವಶರಣೆಯರ ಚರಿತ್ರೆಗಳು,34 ಪುಸ್ತಕಗಳಲ್ಲಿ ಸತ್ಯಕ್ಕನ ಇತಿವೃತ್ತ ನೀಡಿದ್ದರೆ, ಸಂಗೀತದಲ್ಲಿ ಶಿವಶರಣರ ವಚನಗಳು35 ಎಂಬ ಪುಸ್ತಕದಲ್ಲಿ ಸತ್ಯಕ್ಕನ 'ಲಂಚವಂಚನೆಗೆ ಕೈಯಾನದ ಭಾಷೆ....' ವಚನವನ್ನು ರಾಗ : ಸುಸಾರಂಗ,

---

24. ಸಂ: ಸಂ. ಶಿ. ಭೂಸನೂರಮಠ 1974
25. ಸಂ: ಡಾ॥ ಆರ್. ಸಿ. ಹಿರೇಮಠ 1971
26. ಸಂ: ಡಾ॥ ಎಂ. ಎಸ್. ಸುಂಕಾಪುರ 1978
27. ಸಂ: ಡಾ॥ ಎಂ. ಎಸ್. ಸುಂಕಾಪುರ 1975
28. ಸಂ: ಡಾ॥ ಎಂ. ಎಸ್. ಸುಂಕಾಪುರ 1977
29. ಸಂ: ಸಂ. ಶಿ. ಭೂಸನೂರಮಠ 1976
30. ಸಂ: ಡಾ॥ ಆರ್. ಸಿ. ಹಿರೇಮಠ 1971
31. ಸಂ: ಡಾ॥ ಆರ್. ಸಿ. ಹಿರೇಮಠ 1971
32. ಸಂ: ಎನ್. ಆರ್. ಕರಿಬಸವಶಾಸ್ತ್ರಿ 1912 ಪು. 233
33. ಡಾ॥ ಫ. ಗು. ಹಳಕಟ್ಟಿ 1954 ಪು. 167
34. ಅವರೇ 1959 ಪು. 59-62
35. ಅವರೇ 1954 ಪು. 32
36. ಶರಣ ಚರಿತಾಮೃತ 1977 ಅನುಬಂಧ 2 ಪು. 784

ತಾಲ : ತ್ರಿತಾಲದಲ್ಲಿ ಹಾಡಬಹುದೆಂದು ಸೂಚಿಸಿದ್ದಾರೆ. ಡಾ॥ ಸಿದ್ಧಯ್ಯ ಪುರಾಣಿಕರು ಶರಣಾಂಕ ವಲ್ಲರಿ[36]ಯಲ್ಲಿ ಸತ್ಯಕ್ಕನನ್ನು ಗಮನಿಸಿದ್ದಾರೆ.

ಶರಣೆ ಸತ್ಯಕ್ಕನನ್ನು ಕೇವಲ ಕವಿ ಸಾಹಿತಿಗಳಷ್ಟೇ ಸ್ಮರಿಸಿಲ್ಲ. ಜನಪದರೂ ಅವಳನ್ನು ಮರೆತಿಲ್ಲ ಎಂಬುದಕ್ಕೆ ಸಾಕ್ಷಿಯಂತಿವೆ. ಈ ಕೆಳಗಿನ ನುಡಿಗಳು. ಚೆನ್ನ ಬಸವಣ್ಣನನ್ನು ತೊಟ್ಟಿಲಲ್ಲಿ ಹಾಕುವಾಗ ಈ ಶರಣೆಯರೆಲ್ಲ ನೆರೆದಿದ್ದರಂತೆ–

ಸತ್ಯಕ್ಕ ಚಂಗುಳಿ ಕದಿರೆ ರೆಮ್ಮವ್ವ ।
ಉತ್ತಮ ಶಿವಯೋಗಿ ವೀರಸಂಗವ್ವ ।
ಸತ್ತಗಂಡನ ಪ್ರಾಣ ಪಡೆದ ಚೆನ್ನವ್ವ । ಅವರು
ಮುತ್ತೈದೆ ಶರಣೇರು ಬಂದರು ಬಾಗಿನಕ ॥[37]

ಕುಟ್ಟುವಾಗ ಜನಪದ ಶರಣೆಯೊಬ್ಬಳು–

ಅನ್ಯಶಬ್ದಂಗಳನೊಲ್ಲಾಳೆ ।
ಶಿವನ ಹುಟ್ಟನೊಳಿಟ್ಟು ತಿವಿದಾಳೆ ।
ಭಿನ್ನವಿಲ್ಲದೆ ಲಿಂಗಗರ್ಭದೊಳು । ಹೊಕ್ಕಂಥ
ಚೆನ್ನ ಸತ್ಯಕ್ಕ ಬಾ ಒರಳಿಕ್ಕಿ ಹೊಯ್ಯಾವ್ವ ॥[38] ಎಂದು

ನೇರವಾಗಿ ಸತ್ಯಕ್ಕನನ್ನೇ ಕುಟ್ಟುವುದಕ್ಕೆ ಆಹ್ವಾನಿಸುತ್ತಾಳೆ.

ಶಿವಶರಣೆ ಚೆನ್ನವ್ವನ ಮದುವೆ ಕಾಳಿಂಗರಾಯನ ಜೊತೆ ಆಗುವಾಗ ಬಂದ ಗೌರಮ್ಮನಿಗೆ ಗಂಡನ ಹೆಸರನ್ನು ಕೇಳಿದಾಗ, ಅವಳು–

ಸತ್ಯಕ್ಕನ ಮನೆಗೆ ಭಿಕ್ಷಕಂಬುತ ಹೋಗಿ
ಹುಟ್ಟು ಹುಟ್ಟೇಲಿ ಕಟವಾಯ । ತಿವಿಸಿಕೊಂಬ
ಇಂಥ ಭಂಡರ ಹೆಸರೇನ ಹೇಳಲವ್ವಾ ॥[39]

ಎಂದು ಮರುಪ್ರಶ್ನೆಯನ್ನು ಹಾಕಿ ಶಿವನನ್ನೇ ಮೂದಲಿಸಿದಳಂತೆ !

ಶ್ರೀ ಬಸವೇಶ್ವರರ ಲಾವಣಿಪದವೊಂದರಲ್ಲಿ ಶಿವಶರಣೆಯರನ್ನು ಉಲ್ಲೇಖಿಸುತ್ತ–

ನೂಲನು ನೂಲುವ ಕಾಯಕದಲಿ ನಿಂತು ಶಿವಧ್ಯಾನ ಮಾಳ್ಪಳು
ರೆಮ್ಮವ್ವನು ।
ಕಾಳನು ಕುಟ್ಟುತ ಕೂಲಿಯ ಮಾಡುತ ಲಿಂಗವ ಪೂಜಿಪ
ಸೋಮವ್ವನು ।
ಮಹದೇವಿಯಕ್ಕ ಮಹಿಳೆಯಲಿ । ಸತ್ಯಕ್ಕ ಸುಗುಣರಾಶಿಯಲಿ ।
ಮುಕ್ತಾಯಿಯಕ್ಕ ಮಹಿಮೆಯಲಿ । ಗಂಡಸರ ಮೀರಿ ಜ್ಞಾನದಲಿ ॥

37 ಅಕ್ಕನಾಗಮ್ಮನ ಜೋಗುಳದ ಪದ: ಜಾನಪದಜೇನು ಸಂ: ಎ. ಜಿ. ನೀಲಗಾರ 1979 ಪು. 14

38. ಒರಳಕ್ಕಿ ಹಾಡುವ ಪದ: ಅದೇ ಪು. 55

39. ಕನ್ನಡ ಜನಪದ ಸಾಹಿತ್ಯಭಂಡಾರ: ಸಂಪುಟ-1 ಸಂ. ಮತಿಘಟ್ಟ ಕೃಷ್ಣಮೂರ್ತಿ 1975 ಪು. 963

ರಾಜರು ಕುಲಜರು ಕೂಲಿಯ ಮನುಜರು ದೇವನೊಬ್ಬನೆಂದು ಸಾರಿದರಾ||
ಬಸವನ ಚರಿತೆಯನುಸುರುವೆ..........40

ಎಂದು ಜನಪದ ಕವಿಯೊಬ್ಬನು ಸ್ತುತಿಸಿದ್ದಾನೆ.

ಈ ರೀತಿ ಸತ್ಯಕ್ಕ ಎಲ್ಲಂದದ ಕವಿಗಳಿಂದ ಸ್ತುತಿಸಲ್ಪಟ್ಟಿದ್ದಾಳೆ ಎನ್ನುವುದು ಖಚಿತವಾದರೂ ಅವಳ ಬಗ್ಗೆ ತಿಳಿಯುವುದು ಬಹಳ ಕಡಿಮೆ ಅವಳ ಏಕದೇವತಾ ನಿಷ್ಠೆಯ ಈ ವಿಶಿಷ್ಟವಾದ ಬಹಿರ್‌ರೂಪದ ಹಿನ್ನೆಲೆಯಲ್ಲಿ ಅವಳ ಸ್ವರಚಿತ ವಚನಗಳನ್ನು ಆಧಾರವಾಗಿಟ್ಟುಕೊಂಡು ಅಂತಃಸತ್ವವನ್ನು ಅರಿತುಕೊಳ್ಳುವುದು ವಿಹಿತ.

*　　　*　　　*　　　*

ಶಂಭುಜಕ್ಕೇಶ್ವರ ಎಂಬ ಅಂಕಿತದಲ್ಲಿ ಇದುವರೆಗೂ ಸಿಕ್ಕ ೨೮ ವಚನಗಳಲ್ಲಿ ೨೭ನ್ನು ಸತ್ಯಕ್ಕ ರಚಿಸಿದ್ದಾಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಎಲ್ಲ ವಚನಗಳು ಸರಳ, ಸುಂದರ, ಅಲಂಕಾರರಹಿತವಾದವುಗಳು. ಹೇಳುವುದನ್ನು ನೇರವಾಗಿ, ಶ್ರೀಸಾಮಾನ್ಯರಿಗೂ ತಿಳಿಯುವಂತೆ ಹೇಳುವುದು ಸತ್ಯಕ್ಕನ ವಚನಗಳ ವೈಶಿಷ್ಟ್ಯ.

ದೇವರಿಗೆ ವಿವಿಧ ರೀತಿಯ ಹೂ-ಪತ್ರಿಗಳನ್ನು ಏರಿಸುತ್ತ, ೧೦೮ ರೀತಿಯ ಮಂತ್ರಗಳನ್ನು ಜಪಿಸುತ್ತ, ಆರತಿ-ದೀಪಾದಿಗಳನ್ನು ಬೆಳಗಿಸಿ, ಧೂಪ-ಗುಗ್ಗುಳಗಳ ಧೂಮವನ್ನು ಎಬ್ಬಿಸಿದರೆ ಅದು ಕೇವಲ ಬಾಹ್ಯಾಡಂಬರವಾಗುತ್ತದೆಯೇ ವಿನಃ ಭಕ್ತಿಯಲ್ಲ. ಪರಧನವನ್ನು ಮುಟ್ಟಬಾರದು, ಪರಸ್ತ್ರೀಯರನ್ನು ಕಣ್ಣೆತ್ತಿ ನೋಡಿ ಮನದಲ್ಲಿಯೂ ಬಯಸಬಾರದು, ಅನ್ಯದೈವಗಳ ಹೆಸರನ್ನೂ ನೆನೆಯಬಾರದು. ಅಂತಹ ಪರಿಶುದ್ಧ ಭಕ್ತಿಯಿಂದ ಕೂಡಿದ ಹೃದಯವನ್ನು ಸಾಧಿಸುವುದೇ ನೇಮ ಎಂದು ಸಾರಿ ಹೇಳಿದ್ದಾಳೆ. ಇದು ಬಸವಣ್ಣನವರ 'ಛಲ ಬೇಕು ಶರಣಂಗೆ....' ಮತ್ತು 'ಪಾಪಿ ಮಜ್ಜನಕೆರೆದರೆ ರಕ್ತದ ಧಾರೆ....' ವಚನಗಳನ್ನು ನೆನಪಿಸುತ್ತದೆ, ಅವಳ ಏಕದೇವತಾ ನಿಷ್ಠೆಯ ಹಿನ್ನೆಲೆಯನ್ನೂ ಅರುಹುತ್ತದೆ. ಶಂಭುಜಕ್ಕೇಶ್ವರನಲ್ಲದೆ ಬೇರೆ ದೈವಗಳೇ ಇಲ್ಲ ಎನ್ನುವ ಅವಳಿಗೆ ಜಗದೊಳಗೊಬ್ಬನೆ ಗಂಡನಂತೆ ಆತ. (ವ. ಸಂ. ೧೩೯, ೧೫೪, ೧೪೧, ೧೪೬.)

ಗುರುಶಿಷ್ಯ ಜಂಗಮರ ಲಕ್ಷಣಗಳು ಹೇಗಿರಬೇಕು ಎನ್ನುವುದನ್ನೂ ಅವಳು ವಿವರಿಸಿದ್ದಾಳೆ. ಯಾವ ಕುಲ-ಮತಗಳಲ್ಲಿ ಜನಿಸಿದರೂ ಸರಿ, ಲೌಕಿಕ ಜೀವನಕ್ಕಿಂತ ಅತೀತವಾದ ಪಾರಲೌಕಿಕದ ಬೆನ್ನಟ್ಟಿ, ಪಂಚಮಹಾಪಾತಕಗಳನ್ನು ಮಾಡದೆ, ಸಾಧು-ಸಜ್ಜನ-ಶರಣರ ಸಂಗದಲ್ಲಿ ಬೆರೆತು, ಸತ್ಯಶುದ್ಧವಾಗಿ ನುಡಿದಂತೆ ನಡೆದು, ಲಿಂಗದೀಕ್ಷೆಯನ್ನು ಪಡೆಯುವ ಹಂಬಲವುಳ್ಳಾತನೇ ಶಿಷ್ಯ. ಅಂಥವನ ಅಂಗಕ್ಕೆ ಅಂಟಿದ ಮಾಯಾಮಲ, ಆಣವಮಲ, ಕಾರ್ಮಿಕಮಲಗಳನ್ನು ತೊಡೆದು ಹಾಕಿ ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇದಾದೀಕ್ಷೆಗಳನ್ನು ಕರುಣಿಸುವಾತ ಗುರು. ಈ ರೀತಿ ಗುರುವಿನಿಂದ ದೀಕ್ಷೆ ಪಡೆದವನಿಗೆ ತ್ರಿವಿಧ ಜಪವಿಧಾನ ಬೋಧಿಸುವಾತ ಜಂಗಮ. ಈ ಲಕ್ಷಣವುಳ್ಳ ಗುರು-ಶಿಷ್ಯ-ಜಂಗಮರಿಗೆ ಜನನ-ಮರಣಗಳ ಚಕ್ರದ ಭಯವಿಲ್ಲವಂತೆ! ಇದಕ್ಕೆ ವ್ಯತಿರಿಕ್ತವಾದ ಗುಣವುಳ್ಳ ಶಿಷ್ಯನಿಗೆ ಧನದಾಸೆಯಿಂದ ದೀಕ್ಷೆ ಕೊಡುವಾತ

---

40. ಶ್ರೀ ಬಸವೇಶ್ವರರ ಲಾವಣಿಪದ ಕುಲಕರ್ಣಿ ಕೇಶವರಾಯ. 1936 ಪು. 14.

ಗುರುವಲ್ಲ, ಅಂಥವನಿಗೆ ಜಪ-ಷಟ್ಸ್ಥಲಗಳನ್ನು ಬೋಧಿಸಿ ಕೈತೊಳೆಯುಕೊಳ್ಳುವಾತ ಜಂಗಮನಲ್ಲ. ಇಂಥ ಅಧಮರಿಗೆ ಭವಬಂಧನ ತಪ್ಪದಂತೆ! ಇವರನ್ನು ಹುಟ್ಟುಂಧಕರು, ಪರಮಪಾತಕರು, ಕೆಟ್ಟಗಣ್ಣವರು, ಅಧಮರು ಎಂದು ಸಂಬೋಧಿಸುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಸತ್ಯಕ್ಕ. ನಿರ್ಭಿಡೆಯ—ನಿರ್ಭೀತಿಯ ನುಡಿ ಅವಳದು. (ವ. ಸಂ. ೧೪೪, ೧೪೫)

'ಇಂದಿಂಗೆ ನಾಳಿಂಗೆ' ಎಂದು ಕೂಡಿಡುವ ಪದ್ಧತಿ ಶರಣರದಲ್ಲ. ಮಾಡಿದ ಕಾಯಕಕ್ಕೆ ತಕ್ಕ ಪ್ರತಿಫಲ ದೊರೆತರೆ ಸಾಕು, ಅದಕ್ಕಿಂತಲೂ ಹೆಚ್ಚಿನ ಲಂಚ ಅವರಿಗೆ ಬೇಕಿಲ್ಲ, ಮೋಸ-ತಟವಟಗಳನ್ನು ಅವರು ಕಂಡರಿಯರು. ಅದಕ್ಕಾಗಿಯೇ ಸತ್ಯಕ್ಕ ಪ್ರಮಾಣ ಮಾಡಿ ಹೇಳುತ್ತಾಳೆ–ದಾರಿಯಲ್ಲಿ ಬಿದ್ದ ವಸ್ತ್ರ-ಹೊನ್ನುಗಳನ್ನು ಮುಟ್ಟಿದರೆ ನಿಮ್ಮಾಣೆ ಎಂದು. ನೀನು ಕೊಟ್ಟಷ್ಟೇ ಸಾಕು. (ಅದು ಭಿಕ್ಷೆಯಾದರೂ ಸರಿಯಂತೆ !) ಎನ್ನುವುದು ಸತ್ಯಕ್ಕನ ಸರ್ವಸಮರ್ಪಣೆ-ಸಂತೃಪ್ತ ಭಾವಗಳನ್ನು ಸೂಚಿಸುತ್ತದೆ. (ವ. ಸಂ. ೧೩೭).

ಮೊಲೆ–ಮುಡಿಯಿದ್ದರೆ ಹೆಣ್ಣು, ಕೇಶ–ಮೀಸೆ–ಕಠಾರವಿದ್ದುದು ಗಂಡು ಎಂದು ತೋರುವುದು ಬಹಿರ್‌ರೂಪವನ್ನು ಗಮನಿಸಿದಾಗ ಮಾತ್ರ. ಅಂತಃಸತ್ವ ಎರಡರದೂ ಒಂದೇ ಇರಬಹುದು. ಯಾವ ಹಣ್ಣಾದರೇನು? ನಾವು ಮೆಚ್ಚುವುದು ಅದರ ಮಧುರ ರುಚಿಯಿಂದ; ಯಾವ ಹೂವಾದರೇನು? ಅದನ್ನು ಮೆಚ್ಚುವುದು ಸುಗಂಧದಿಂದ. ಅದೇ ರೀತಿಯಲ್ಲಿ ಗಂಡು–ಹೆಣ್ಣುಗಳ ಬಹಿರ್‌ರೂಪಕ್ಕಿಂತ ಅಂತಃಸತ್ವ, ವ್ಯಕ್ತಿತ್ವಗಳು ಮಹತ್ವದವು ಎನ್ನುತ್ತಾಳೆ ಆಕೆ. ಸಮಸ್ತ ಶರಣರ ನಿಲುವು ಇಲ್ಲಿ ಸಮರ್ಥವಾಗಿ ಶಬ್ದರೂಪ ತಳೆದು, ಸುಂದರ ಮುಕ್ತಕವೆನಿಸಿದೆ. (ವ. ಸಂ. ೧೫೨)

ಹುರಿದು ಬೆರೆಸಿದ ಬೀಜ ಮೊಳಕೆ ತೋರದು, ನೀರು ಸೇರಿಸಿದ ಎಣ್ಣೆಯ ಜ್ಯೋತಿ ಉರಿಯಲಾರದು. ಅದೇ ರೀತಿ ಜಿಹ್ವಾಚಾಪಲ್ಯಕ್ಕೆ ಒಳಗಾಗಿ ಭವಿಯ ಸ್ನೇಹಮಾಡಿ ಅವರ ಮನೆಯ ತುತ್ತಿಡುವವರಿಗೆ ಶಿವ ಒಲಿಯುವುದಿಲ್ಲ ಎನ್ನುವ ಅಭಿಪ್ರಾಯ ಅವಳದು. (ವ. ಸಂ. ೧೩೮)

ವೇದಗಳು, ವೇದಿಗಳು ಶಿವನನ್ನು ಕೇವಲ ನಾದಬಿಂದು ಕಳಾತೀತ ಎಂದು ಹೊಗಳಿದರೇ ಹೊರತು ನಿಜರೂಪವನ್ನು ತಿಳಿಸಲಿಲ್ಲ. ಪರಮಾತ್ಮ ಭಕ್ತರ ಮಧ್ಯಕ್ಕೆ ಬಂದುದರಿಂದ ಭಕ್ತರೇ ಆತನಿಗೆ ಮಹತ್ವ ತಂದುಕೊಟ್ಟರು ಎಂದು ಆಪ್ತರ ಹೆಗ್ಗಳಿಕೆಯನ್ನು ಸಾರುತ್ತಾಳೆ. ಜೊತೆಗೆ ದೇವನು ಒಳ್ಳೆಯವನೆಂದು ತಿಳಿಯಬೇಡ. ಸರ್ವಸಮರ್ಪಣಾ ಭಾವದಿಂದ ಕಿಂಕರತ್ವವನ್ನು ಮಾಡಿದರೆ ಮಾತ್ರ ಒಲಿಯುತ್ತಾನೆ ಎಂದೂ ಎಚ್ಚರಿಸುತ್ತಾಳೆ. (ವ. ಸಂ. ೧೩೨, ೧೪೦)

41. ಕಂಸಿನಲ್ಲಿರುವ ವಚನ ಸಂಖ್ಯೆಗಳು "ಶಿವಶರಣೆಯರ ವಚನಗಳು" ಸಮಗ್ರ ಸಂಪುಟದಲ್ಲಿಯ "ಸತ್ಯಕ್ಕನ ವಚನ"ಗಳಿಗೆ ಕೊಟ್ಟ ಸಂಖ್ಯೆಗಳು. ಸಂ: ಡಾ॥ ಆರ್. ಸಿ. ಹಿರೇಮಠ 1968 ಪು. 354-366.

ನನ್ನನ್ನು ಈ ಜನನ-ಮರಣಗಳ ಚಕ್ರದಲ್ಲೇಕೆ ಸಿಲುಕಿಸಿದೆ? ಘೋರವಾದ ಸಂಸಾರ ತಾಪತ್ರಯಗಳಿಗೇಕೆ ಒಳಗು ಮಾಡಿದೆ? ಯಾವ ತಪ್ಪು ನನ್ನಿಂದ ಘಟಿಸಿತು? ನಿಮಗೆ ಸಾಕಲಿಕ್ಕಾಗಲಿಲ್ಲವೇದು ನೂಕಿವರೆ ನಾನೇನು ನಿಮ್ಮನ್ನು ಬಿಡುವವಳಲ್ಲ ಎಂದು ಶಂಭುವಿಗೇ ಸವಾಲನ್ನೆಸೆದು ತನ್ನ ಧಾರ್ಷ್ಟ್ಯತನವನ್ನು, ಛಲವನ್ನು ತೋರಿಸುತ್ತಾಳೆ. (ವ. ಸಂ. ೧೩೩)

ನೀನು ಜಾಣ, ಅನುಭಾವಿ ಎಂಬ ನುಡಿ ಕೇಳಿ ಬಂದಿದ್ದೇನೆ. ನೀನು ನಿತ್ಯನಾದುದರಿಂದ ನನ್ನನ್ನೂ ಹಾಗೆಯೇ ಆಗಿಸುವ ಭಾಷೆ ಕೊಡು. ಪುಣ್ಯ-ಪಾಪಗಳು ಹೊದ್ದದಂತೆ ಮಾಡು, ಸದ್ಗುರುವಿನ ದರ್ಶನ ಮಾಡಿಸಿ ನೀನೇ ಪ್ರಾಣಲಿಂಗವಾಗಿ ಸಲಹು ಎಂದು ಆರ್ತವಾಗಿ ಪ್ರಾರ್ಥಿಸುತ್ತಾಳೆ ಶಿವನಲ್ಲಿ. (ವ. ಸಂ. ೧೩೪-೧೩೬)

ನೀನು ನನ್ನ ಅಂತರಂಗದಲ್ಲಿಯೇ ಇರುವುದನ್ನು ತಿಳಿಯದಾಗಿದ್ದೆ ಮರೆವಿನಿಂದ. ನಿನ್ನ ಬಯಲಸ್ವರೂಪವನ್ನು ಅರಿವಿನ ಮೂಲಕ ತಿಳಿದು, ತನ್ನನ್ನು ಅರಿತವರಿಗೆ ಮಾತ್ರ ಒಳ್ಳೆಯವನಾದ ನಿನ್ನಲ್ಲಿ ಮೋಹಗೊಂಡಿದ್ದೇನೆ ಎನ್ನುತ್ತಾಳೆ. (ವ.ಸಂ.೧೪೮)

ಶಿವನಲ್ಲಿ ಶರಣಾಗತಿಯನ್ನು ಹೊಂದಿದ ಮೇಲೆಯೂ ಮರ್ತ್ಯದಲ್ಲಿ ಜನ್ಮವೆತ್ತಿದರೆ, ಪೂರ್ವಾರ್ಜಿತ ಕರ್ಮ ಬೆನ್ನು ಬಿಡದಿದ್ದರೆ ಅದು ನನ್ನ ಅಪಮಾನವಲ್ಲ. ನಿನ್ನದೇ ಎಂದು ಎಲ್ಲ ಹೊಣೆಯನ್ನೂ ಶಿವನ ಮೇಲೆಯೇ ಹೊರಿಸಿ ನಿಶ್ಚಿಂತಳಾಗುತ್ತಾಳೆ ಸತ್ಯಕ್ಕ. (ವ. ಸಂ. ೧೩೫)

ಶಿವ ದೇವರದೇವ, ನಿತ್ಯತೃಪ್ತ, ಕರುಣಾಕರ ಎಂದು ಕರೆಸಿಕೊಂಡು ತದ್ವಿರುದ್ಧವಾದ ಕೆಲಸಗಳನ್ನು ಮಾಡಿದ. ಅದೇ ರೀತಿ ಹಿರಿಯ, ಮಹಂತ, ಕರುಣಿ. ದಾನಿ, ಗುರು ಎಂದು ಕರೆಸಿಕೊಂಡು ಗುಣಕ್ಕೆ ವಿರೋಧಾಭಾಸ ಎನ್ನಿಸುವ ಕೃತಿಗಳನ್ನೇ ಮಾಡಿದ. ಅದಕ್ಕಾಗಿ ಅವನನ್ನು ವ್ಯಾಜ ಸ್ತುತಿಯಿಂದ ನಿಂದಿಸುತ್ತಾಳೆ, ಜೊತೆಗೆ ಶಂಭು ಜಕ್ಕೇಶ್ವರನಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಎಲ್ಲವೂ ಆತನ ಲೀಲೆ, ಅದಕ್ಕಾಗಿಯೇ ಆತ ಶ್ರುತಿಗಳಿಗೂ ನಿಲುಕಲಿಲ್ಲ ಎಂದು ಸಮಾಧಾನಪಟ್ಟುಕೊಳ್ಳುತ್ತಾಳೆ. ಮಾತು ಸರಳವಾಗಿದ್ದರೂ ನೇರ, ಶಕ್ತಿಯುತ, ಕಿರಿದರಲ್ಲಿ ಹಿರಿಯರ್ಥವನ್ನು ಅಡಗಿಸಿಡುವ ಸಾಮರ್ಥ್ಯವಿದೆ ಸತ್ಯಕ್ಕನಿಗೆ. (ವ. ಸಂ. ೧೪೨-೧೪೬)

ಕೈಚಾಚಿ ತೆಗೆದುಕೊಳ್ಳುವವರಿಗಿಂತ ಕೈ ನೀಡಿ ಕೊಡುವವರೇ ದೊಡ್ಡವರು. ಕಾರಣ ಶಂಭು ಜಕ್ಕೇಶ್ವರನಿಗಿಂತ ಅವನ ಭಕ್ತರೇ ದೊಡ್ಡವರು ಎಂದು ಶರಣರನ್ನು ಸ್ತುತಿಸಿ, ಅವರು ಶಿವನಲ್ಲಿಟ್ಟಿರುವ ವಿಶ್ವಾಸಕ್ಕೆ ನಮೋ ನಮೋ ಎಂದು ತಲೆಬಾಗಿದ್ದಾಳೆ. (ವ. ಸಂ. ೧೪೭, ೧೫೯)

ಶರಣಸತಿ, ಲಿಂಗಪತಿಯ ಭಾವ ಎಲ್ಲ ಶರಣರ ವಚನಗಳಲ್ಲಿ ಮೂಡಿದಂತೆ ಇವಳಲ್ಲಿಯೂ ನೆಲೆನಿಂತಿದೆ. ಮಹಾದೇವಿಯಕ್ಕನ ವಚನಗಳಲ್ಲಿ ಬರುವ, ಲಿಂಗಪತಿಯ ಬಗೆಗಿನ ವಿರಹ, ಉತ್ಕಟಾವಸ್ಥೆಗಳು ಈಕೆಯ ವಚನಗಳಲ್ಲಿಯೂ ಕಾಣಿಸಿಕೊಂಡಿವೆ. 'ನಿನ್ನನಲ್ಲದೆ ಬೇರೊಬ್ಬ ಗಂಡನನ್ನು ನಾ ಕಾಣೆ, ನಿಮ್ಮಾಣೆ' ಎನ್ನುವಲ್ಲಿರುವ ಅವಳ ನಿಷ್ಠೆ ನಮ್ಮ ಗಮನವನ್ನು ಸೆಳೆಯುತ್ತದೆ. ವಯಸ್ಸಿಗನುಸಾರವಾಗಿ ಅವಳ ಅನುಭವಗಳು ಬರಬೇಕು. ಕಾರಣ ಯೌವ್ವನ ಸರಿದು ಹೋಗುವುದಕ್ಕಿಂತ ಮುಂಚೆ

ಶಂಭುಜಕ್ಕೇಶ್ವರನ ನೆರೆಯಬೇಕು ಎನ್ನುವ ಹಂಬಲ ಅವಳದು. ಶರಣಸತಿಯ ಆರ್ತ ಮನೋಭಾವ, ವಿರಹದ ಉದ್ವೇಗ-ಉತ್ಕಟಾವಸ್ಥೆಗಳ ಸಮರ್ಥ ಚಿತ್ರಣವಿದೆ. ಕನ್ನಡಿಯಲ್ಲಿ ಕರಿಯನ್ನು ಅಡಗಿಸಿಟ್ಟಂತೆ ಅವಳ ಯಾತನೆ–ಕಳವಳಗಳನ್ನು ವಚನಗಳು ಸುಂದರವಾಗಿ ಚಿತ್ರಿಸುತ್ತವೆ. (ವ. ಸಂ. ೧೪೯–೧೫೦)

ಲಿಂಗಪತಿ–ಶರಣಸತಿಯರಲ್ಲಿ ಮೂಡುವ ಸಲುಗೆ–ಆತ್ಮೀಯತೆಗಳೂ ಇಲ್ಲಿವೆ. 'ಭಾವನೇಕೆ ಬಾರ? ಏಕೆ ಬಾರ? ಏಕೆ ಬಾರ?' ಎನ್ನುವ ಪುನರುಕ್ತಿ ಹಂಬಲವನ್ನು, ಒತ್ತಾಸೆಯನ್ನೂ ಮನ ತಟ್ಟುವಂತೆ ಚಿತ್ರಿಸುತ್ತದೆ. (ವ. ಸಂ. ೧೫೧)

ಅಣ್ಣ ಅಜಗಣ್ಣ ಲಿಂಗೈಕ್ಯನಾದಾಗ ಶರಣೆ ಮುಕ್ತಾಯಕ್ಕ ನಡೆದುಕೊಂಡ ಬಗೆ ಸತ್ಯಕ್ಕನಿಗೆ ಬೇಸರವನ್ನು ತಂದಿದೆ. ಅವಳ ವರ್ತನೆಯನ್ನು ಈಕೆ ಖಡಾಖಂಡಿತವಾಗಿ ಅಲ್ಲಗಳೆಯುತ್ತಾಳೆ. ಶಿವಭಕ್ತರಿಗೆ ಅಳಿವೆನ್ನುವುದಿಲ್ಲ, ಆತ್ಮ-ಪರಮಾತ್ಮನೊಡನೆ ಬೆರೆಯುವುದೇ ಮಹಾ ಮರಣ. ಅದಕ್ಕಾಗಿ ಶೋಕಿಸಬಾರದು ಎನ್ನುವುದು ಅವಳ ನಿಲುವು.

ಧ್ಯಾನಿಸಿ ನೆನೆದಡೆ ಶೋಕಿಸಿದರೆಂಬರೆಲೆ ಅವ್ವಾ,
ಈ ಅಜಗಣ್ಣ ತಂದೆಯನಗಲಿ ನಾನೆಂತು ಸೈರಿಸುವೆನೆಲೆ,
ಸತ್ಯಕ್ಕ ತಾಯೆ ಆಹಾ![42]

ಎನ್ನುವ ಭಾವಪ್ರಧಾನ ವ್ಯಕ್ತಿ ಮುಕ್ತಾಯಕ್ಕನಿಗಿಂತಲೂ ವಿಚಾರಪ್ರಧಾನ ವ್ಯಕ್ತಿಯಾಗಿ ಸತ್ಯಕ್ಕನ ವ್ಯಕ್ತಿತ್ವ ಮೇಲ್ತರಗತಿಯದೆನಿಸುತ್ತದೆ. (ವ. ಸಂ. ೧೫೫, ೧೫೬)

ಲಿಂಗೈಕ್ಯದ ಅರ್ಥವನ್ನು ಸುಂದರವಾದ ಉಪಮೆಗಳ ಮೂಲಕ ವಿವರಿಸಿದ್ದಾಳೆ. ಆತ್ಮ–ಪರಮಾತ್ಮಗಳು ಒಂದರಲ್ಲಿ ಇನ್ನೊಂದು ಅಡಗಿದರೂ ಬರಿಗಣ್ಣಿಗೆ ಕಾಣುವುದಿಲ್ಲ, ವಾಙ್ಮನಸಕ್ಕೆ ಅಗೋಚರ ಎನ್ನುವ ಗಂಭೀರ ತತ್ವವನ್ನು ತಿಳಿಯಾಗಿಸಿದ್ದಾಳೆ. ಸಾಧನೆಯ ಮೂಲಕ ಐಕ್ಯಸ್ಥಳವನ್ನು ತಲುಪಿ, ತನಗೆ ಉಂಟಾದ ಅನುಭಾವವನ್ನು ಸುಂದರ ಉಪಮೆಗಳ ಮೂಲಕ ತಿಳಿಸುವಲ್ಲಿ ಅವಳ ಕಾವ್ಯಾಭಿವ್ಯಕ್ತಿಯ ಸಾರ್ಥಕತೆ ಅಡಗಿದೆ. (ವ. ಸಂ. ೧೫೮)

ಈ ಎಲ್ಲ ಕಾರಣಗಳಿಂದಾಗಿಯೇ "ಸತ್ಯಕ್ಕನ ಶೈಲಿಯಲ್ಲಿ ಹಟವಿದೆ, ಅಧಿಕಾರವಾಣಿಯಿದೆ. ಗಂಡುಶೈಲಿ; ಕ್ರಾಂತಿಯ ಮಾತು. ಸತ್ಯಕ್ಕನ ವಚನಗಳು ವಿಚಾರಪ್ರಚೋದಕವಾಗಿವೆ. ಅಂಧಶ್ರದ್ಧೆ ಅವಳಿಗಾಗದು. ಭಾಷೆಯ ಮೇಲಿನ ಪ್ರಭುತ್ವ ಸತ್ಯಕ್ಕನಿಗಿದೆ. ಭಕ್ತಿ, ನಿಷ್ಠೆ, ದೇವನಲ್ಲಿ ಹಟ, ಸಮಾಜದ ಅಂಧಶ್ರದ್ಧೆಯನ್ನು ಕಳಚಿ ಚೆಲ್ಲುವ ಕ್ರಾಂತಿಕಾರೀ ವಿಚಾರಗಳು ಸತ್ಯಕ್ಕನ ವಚನದ ವೈಶಿಷ್ಟ್ಯ"[43] ಎಂದಿದ್ದಾರೆ ಡಾ|| ಸರೋಜಿನಿ ಮಹಿಷಿಯವರು.

ಸತ್ಯಕ್ಕ ಮಧ್ಯಮ ವರ್ಗದ ಒಬ್ಬ ಸಾಮಾನ್ಯ ಹೆಣ್ಣುಮಗಳು. ಶರಣರ, ವಚನಕಾರರ ಮೂಸೆಯಲ್ಲಿ ಸಿಕ್ಕು ಕಾಳಿಕೆಯನ್ನು ಕಳೆದುಕೊಂಡ ಸುವರ್ಣ; ಅವರ

42. ಶಿವಶರಣೆಯರ ವಚನಗಳು ಸಂ. ಡಾ|| ಆರ್. ಸಿ. ಹಿರೇಮಠ ೧೯೬೮ ಪು. ೩೩೯
43. ಕರ್ನಾಟಕದ ಕವಯಿತ್ರಿಯರು ೧೯೬೫ ಪು. ೧೬೦ ಮತ್ತು ೧೬೧

ಪ್ರಭಾವಲಯದಲ್ಲಿ ತನ್ನ ಅಜ್ಞಾನದ ಅಂಧಃಕಾರವನ್ನು ಹೋಗಲಾಡಿಸಿಕೊಂಡು ಅರಿವಿನ ಬೆಳಗನ್ನು ಪಡೆದ ಜ್ಯೋತಿ; ಸಾಧನೆಯ ಮೂಲಕ ವ್ಯಕ್ತಿತ್ವ ಸಿದ್ಧಿಯನ್ನು ಪಡೆದವಳು ಎನ್ನುವ ಹಿನ್ನೆಲೆಯಲ್ಲಿ ಅವಳ ವಚನಗಳನ್ನು ಪರಿಶೀಲಿಸಿದಾಗ ಮಹಿಷಿಯವರ ಮಾತುಗಳು ಉಚಿತ ಎನ್ನಿಸುತ್ತವೆ. ಸತ್ವಭರಿತ ವಚನಕಾರ್ತಿಯರಾದ ಅಕ್ಕಮಹಾದೇವಿ, ನೀಲಾಂಬಿಕೆ, ಲಿಂಗಮ್ಮನವರಿಗೆ ಹೋಲಿಸಿದಾಗ ಸಾಹಿತ್ಯಿಕವಾಗಿಯಾಗಲಿ, ಅನುಭಾವಿಕವಾಗಿಯಾಗಲಿ, ವೈಚಾರಿಕವಾಗಿಯಾಗಲಿ ಸತ್ಯಕ್ಕ ಉನ್ನತ ದರ್ಜೆಯ ವಚನಕಾರ್ತಿಯಲ್ಲ ಎಂದು ಹೇಳದೇ ಗತ್ಯಂತರವಿಲ್ಲ. ಆದರೂ ಶ್ರೀಸಾಮಾನ್ಯಳಾದ ಸತ್ಯಕ್ಕ ಏರಿದ ಸ್ಥಾನ, ನಡೆಸಿದ ಸಾಧನೆ, ಪಡೆದ ಅನುಭಾವ, ತಳೆದ ನಿಲುವು, ಮಾಡಿದ ರಸಾಭಿವ್ಯಕ್ತಿ ಇವುಗಳನ್ನು ಮೆಚ್ಚಲೇಬೇಕಾಗುತ್ತದೆ.

○

ಕೇತಲದೇವಿ

ಜಿ. ಎಸ್. ವಾಮನಿ

ಶಿವಶರಣೆಯರಲ್ಲಿ ಕುಂಬಾರ ಗುಂಡಯ್ಯನ ಪತ್ನಿ ಕೇತಲದೇವಿ ಒಬ್ಬಳು. ಬೀದರ ಜಿಲ್ಲೆಯ ಬಾಲ್ಕ(ಭಲ್ಲುಕೆ)ಯಲ್ಲಿ ಬಾಳಿದ ಇವಳು ಸುಮಾರು ೧೧೬೦ ಅಂದರೆ ಬಸವಣ್ಣನವರ ಸಮಕಾಲೀನಳೆಂದು ಬಹುಸಂಖ್ಯೆ ಬಲ್ಲಿದರ ಅಭಿಪ್ರಾಯ. ಕುಂಬಾರ ಗುಂಡಯ್ಯ ಶಿವನಾಟದ ಸವಿಗಂಡ ಶರಣಶ್ರೇಷ್ಠ. ಪತಿ ಮತ್ತು ಪತ್ನಿಯರ ಸಂಬಂಧ, ಬೆಳಕು ಹಾಗೂ ಬತ್ತಿಗಳಂತೆ, ಬತ್ತಿ ತಾನು ಸುಟ್ಟುಕೊಂಡು, ಬೆಳಕನ್ನು ಬೆಳಗಿಸುವಂತೆ, ಒಳ್ಳೆಯ ಸತಿ ಮರೆಯಲ್ಲಿದ್ದು ಪತಿಯನ್ನು ಬೆಳಕಿಗೆ ತರುವಳು.

ಬತ್ತಿಯಂತೆ ಬಾಳಿದ ಶರಣೆ ಕೇತಲದೇವಿಯ ಬಲದಿಂದ ಬೆಳಗಿದ ಕುಂಬಾರ ಗುಂಡಯ್ಯ. ಈ ಕೇತಲದೇವಿಯ ವಿಷಯ ಸಾಕಷ್ಟು ಸಾಹಿತ್ಯ ದೊರಕಿಲ್ಲ.

ಧಾರ್ಮಿಕ ಕ್ಷೇತ್ರದಲ್ಲಿ, ಶರಣೆಯರು, ಶರಣರಷ್ಟೇ ಹಕ್ಕು-ಬಾಧ್ಯತೆಗಳನ್ನು ಹಂಚಿಕೊಂಡವರು. ಅಂದರೆ ಸ್ತ್ರೀಯೂ ಕಾಯಕ ಮಾಡಬೇಕಾಗುವುದು. ಶರಣೆ ಕೇತಲದೇವಿ ನಿತ್ಯವೂ ಲಿಂಗಕ್ಕೆ ಪಾವುಡವನ್ನು ಹಾಕುವ ಕಾಯಕವನ್ನು ಕೈಕೊಂಡಿದ್ದಳು. ಆಕೆಗೆ ಅದೊಂದು ನಿಷ್ಠೆಯ ವ್ರತ ಮತ್ತು ನಂಬಿಕೆಯ ನಿಯಮವಾಗಿತ್ತೆಂದು ತಿಳಿದು ಬರುವದು. ಒಮ್ಮೆ ಲಿಂಗಕ್ಕೆ ಹಾಕುವ ಪಾವುಡ, ದೊರೆಯದೆ ಹೋದಾಗ, ಕಾಯಕಕ್ಕೆ ಕಲಂಕ ಬಂತೆಂದು, ಗಂಭೀರವಾಗಿ ಭಾವಿಸಿಕೊಂಡು, ತನ್ನ ಎದೆಯ ಚರ್ಮವನ್ನೇ ತೆಗೆದು, ಪಾವುಡವಂತೆ ಧರಿಸಿದಳೆಂದೂ, ಅದಕ್ಕೆ ಶಿವನು ಮೆಚ್ಚಿದನೆಂದೂ ಹೇಳಿಕೆ ಇದೆ.

ಶರಣ–ಶರಣೆಯರು ಛಲವುಳ್ಳವರು. ಆದ್ದರಿಂದ ಈ ಘಟನೆ ಕೇತಲದೇವಿಯ ಕರ್ತವ್ಯ ನಿಷ್ಠೆಯನ್ನು ಸ್ಪಷ್ಟಪಡಿಸುವದು. ಮರಣವೇ ಮಹಾನವಮಿ ಎಂಬ ಶರಣರ ಘೋಷಣೆಯಂತೆ, ವ್ರತ ನಿಯಮಗಳಿಗೆ, ಕಾಯಕಕ್ಕೆ ಚ್ಯುತಿ ಬಂದಾಗ, ಶರಣ-ಶರಣೆಯರು, ತಮ್ಮ ದೇಹವನ್ನು ತೃಣಕ್ಕೆ ಸಮಾನವಾಗಿ ಕಂಡು, ಕಾಯಕ ಮರೆಯಲು ತ್ಯಾಗಕ್ಕೆ ಸದಾ ಸಿದ್ಧರು. ಅಂಥವರಲ್ಲಿ ಮಹಾಶಿವಶರಣೆ ಕೇತಲದೇವಿ ಒಬ್ಬಳೆಂದು ತಿಳಿಯಬಹುದು. ವ್ರತ ನಿಯಮಗಳಿಗೆ ಆಕೆ ಎಷ್ಟು ಮಹತ್ವ ಕೊಟ್ಟಿದ್ದಳೆಂಬುದು, ಆಕೆಯ ಕೆಳಕಾಣಿಸಿದ ವಚನದಿಂದ ಮನಗಾಣಬೇಕು.

ಹದ ಮಣ್ಣಲ್ಲದೆ ಮಡಕೆಯಾಗಲಾರದು;
ವ್ರತಹೀನನ ಬೆರೆಯಲಾಗದು;
ಬೆರೆದಡೆ ನರಕ ತಪ್ಪದು;
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ;

ಮೇಲಿನ ಮಾತುಗಳಿಂದ ಕೇತಲದೇವಿ ಅತಿ ನಿಷ್ಠುರ ಸ್ವಭಾವದವಳೆಂದು ತಿಳಿದುಬರುವುದು. ಶರಣ ಲೋಕ ವಿರೋಧಿ, ಯಾರಿಗೂ ಅಂಜುವನಲ್ಲ ಎಂಬ ಹೇಳಿಕೆಯಂತೆ ಶರಣೆ ಕೇತಲದೇವಿ ಧೀರಳೂ, ಛಲವುಳ್ಳವಳೂ, ಗಟ್ಟಿಗಳೂ ಆಗಿದ್ದಳೆಂದು ಸ್ಪಷ್ಟವಾಗುವದು. ವ್ರತ ನಿಯಮಗಳಿಂದ ಮಾನವರು ಹರನ ಭಕ್ತರಾಗುವ ಹದಕ್ಕೆ ಬರುವರು. ಅಂಥವರು ಎಂಥ ಮೂರ್ತಿ (ಗಡಿಗೆ) ಆಗಲು ಸಮರ್ಥರಾಗುವರೆಂದು ಪ್ರತಿಪಾದಿಸಿದ್ದಾಳೆ. ವ್ರತನೇಮವಿಲ್ಲದವರು ಮಣ್ಣಿನ ಹೆಂಟೆಯಂತಿದ್ದು, ಅಂಥವರ ಸಹವಾಸ ಮಾಡಿದರೆ ನರಕ ತಪ್ಪದೆಂದು ಎಚ್ಚರಿಕೆ ಕೊಟ್ಟಿದ್ದಾಳೆ. ಕೇತಲದೇವಿ ಇಟ್ಟುಕೊಂಡ 'ಕುಂಭೇಶ್ವರ' ಅಂಕಿತ ದ್ವಂದ್ವಾರ್ಥ ಹೇಳುವುದು. ಕುಂಭ ಎಂದರೆ ಗಡಿಗೆ ಎಂದೂ ದೇಹ ಎಂದೂ ಅರ್ಥ ಮಾಡಬಹುದು. ಹೀಗೆ ಗಡಿಗೆಯನ್ನು ಮಾಡುವ ತನ್ನ ಪತಿದೇವ ಗುಂಡಯ್ಯನ ಹೆಸರನ್ನೂ ಹೇಳಿದಂತಾಗಿದೆಯಲ್ಲದೆ, ದೇಹದೊಡೆಯ ಪರಶಿವನ ಹೆಸರನ್ನೂ ಹೇಳಿದಂತಾಗಿದೆ.

ಒಟ್ಟಿನಲ್ಲಿ ಕೇತಲದೇವಿ ಎಲೆಯ ಮರೆಯ ಹೂವಾಗಿದ್ದರೂ, ತನ್ನ ಹಸನಾದ ವ್ಯಕ್ತಿತ್ವದಿಂದ ಪರಮ ಪರಿಮಳವನ್ನು ಬೀರುತ್ತಿದ್ದಾಳೆ. ಗುಂಡ ಜನಸಾಮಾನ್ಯರ ಸ್ಮರಣೆಯಲ್ಲಿ ಉಳಿದಿರುವಂತೆ, ಗುಂಡನ ಆದರ್ಶ ಪತ್ನಿ ಕೇತಲದೇವಿ ಜನರ ಮನದಲ್ಲಿ ಉಳಿಯಬೇಕಾಗಿದೆ.

○

ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ

ಬಿ. ವಿ. ಗುಂಜಟ್ಟಿ

ಗಜೇಶ ಮಸಣಯ್ಯಗಳ ನಿರ್ದುಷ್ಟವಾದ ಚರಿತ್ರೆ ನಮಗೆ ದೊರೆಯುವದಿಲ್ಲ. ವೀರಶೈವ ಪುರಾಣ ಕಾವ್ಯಗಳಲ್ಲಿ–ಪಾಲ್ಕುರಿಕೆ ಸೋಮನಾಥನ ಗಣ ಸಹಸ್ರನಾಮ, ಪಂಡಿತಾರಾಧ್ಯ ಚರಿತ್ರ, ಬಸವಪುರಾಣ, ಭೀಮಕವಿಯ ಬಸವಪುರಾಣ, ಷಡ್ಕ್ಷರಾಂಕನ ಪದ್ಮರಾಜ ಪುರಾಣ, ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ಸಿದ್ಧನಂಜೇಶನ ಗುರುರಾಜ ಚಾರಿತ್ರ, ಕಿಕ್ಕೇರಿಯಾರಾಧ್ಯ ನಂಜುಂಡನ ಭೈರವೇಶ್ವರ ಕಾವ್ಯ, ಕವಿ ಶಾಂತನ ಶಿಭವಸ್ತೋತ್ರದ ಕಂದ, ಉತ್ತರ ದೇಶದ ಬಸವಲಿಂಗನ ಬಸವೇಶ್ವರ ಪುರಾಣದ ಕಥಾಸಾಗರ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಇವೇ ಮೊದಲಾದ ಕೃತಿಗಳಲ್ಲಿ ಗಜೇಶ ಮಸಣಯ್ಯನ ವಿಷಯ ಎಡೆಪಡೆದಿದ್ದರೂ, ಆತನ ಪೂರ್ಣಜೀವನೇತಿಹಾಸ ಸಂಗತಿಗಳು ದೊರೆಯುವದು ವಿರಳವೆಂದೇ ಹೇಳಬಹುದು.

ಇಂದಿನವರೆಗೆ ದೊರೆತಿರುವ ಎಲ್ಲ ಪುರಾಣ ಕರ್ತೃಗಳು, ವಚನಕಾರರು ಈತನನ್ನು ಗಜೇಶ ಮಸಣಯ್ಯ ಎಂದು ಕರೆದಿದ್ದರೂ ಡಾ. ಎಂ. ಎಂ. ಕಲಬುರ್ಗಿ ಅವರು ಶಿಲಾ ಲಿಪಿಯನ್ನು ಆಧರಿಸಿ ಅಂಗಜೇಶ ಮಸಣಯ್ಯ ಎಂದು ಅವನ ಹೆಸರಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅವನ ಹೆಸರು, ಕಾಲ, ದೇಶಗಳ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲದಿರುವುದು ಕಂಡುಬರುತ್ತದೆ. ಈತನ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಸದ್ಯಕ್ಕೆ ಕವಿಚರಿತೆಕಾರರು ಊಹಿಸಿರುವ ಹಾಗೆ ಸು. ೧೧೬೦ ರಲ್ಲಿ ಇವನು ಇದ್ದಿರಬೇಕೆಂದಿರುವದೇ ಹೆಚ್ಚು ಸಮ್ಮತವಾದದ್ದೆನಿಸಿದೆ. ಹಾಗೆಯೆ ಅವನ ಸ್ಥಳದ ಬಗ್ಗೆಯೂ ವಿದ್ವಾಂಸರಲ್ಲಿ ವಾದ ವಿವಾದಗಳಿವೆ. ವೀರಶೈವ ಪುರಾಣಗಳು ಹೆಸರಿಸುವ 'ಕರಜಿಗೆ' ಹೆಸರಿನ ಗ್ರಾಮ ಕರ್ನಾಟಕದಲ್ಲಿ ಮೂರು ಇದ್ದುದೇ ಅದಕ್ಕೆ ಕಾರಣವಾಗಿದೆ. ಆದರೂ ಮಸಣಯ್ಯನು ಪುರಾಣಕಾರರು ಹೇಳುವಂತೆ ಅಕ್ಕಲಕೋಟೆಗೆ ಸಮೀಪದಲ್ಲಿರುವ ಕರಜಿಗೆಯವನಾಗಿರಬೇಕೆಂದು ಹೆಚ್ಚು ಜನರ ಅಭಿಪ್ರಾಯವಾಗಿದೆ.

ಮುಸಣಯ್ಯ, ಶರಣಸತಿ ಲಿಂಗಪತಿ ಎಂಬ ಉತ್ಕಟವಾದ ಭಾವನೆಯನ್ನು ತಳೆದು, ಭಕ್ತನಾದ ತಾನು ಹೆಣ್ಣು, ದೇವರೇ ಗಂಡ ಎಂಬ ತತ್ವಪ್ರಣಾಲಿಯನ್ನು ರೂಢಿಸಿಕೊಂಡವನಾಗಿದ್ದನೆಂಬುದು ಅವನ ವಚನಗಳಿಂದ ತಿಳಿದುಬರುತ್ತದೆ. ತಾನು ಹೆಣ್ಣು ಎಂದು ಪರಿಭಾವಿಸಿಕೊಂಡು ಬರೆದ ಘನಲಿಂಗದೇವ, ಉರಿಲಿಂಗದೇವ, ಷಣ್ಮುಖ ಸ್ವಾಮಿ ಮೊದಲಾದವರ ವಚನಗಳಂತೆ, ಈತನಲ್ಲಿಯೂ ಕೋಮಲತೆ ಹಾಸು ಹೊಕ್ಕಿರುವದನ್ನು ಅರಿಯಬಹುದಾಗಿದೆ. ಈಗ ಈತನ ೬೬ ವಚನಗಳು ಮಾತ್ರ ಉಪಲಬ್ಧ ಇವೆ. ಈತನ ವಚನಗಳ ಮುಕುಟ 'ಮಹಾಲಿಂಗಗಜೇಶ್ವರಾ' ಎಂದಾಗಿರುತ್ತದೆ. ಈತ ನಂತೆ ಈತನ ಪುಣ್ಯಸ್ತ್ರೀಯ ವಚನಗಳಲ್ಲಿಯೂ ಅನುಭಾವದ ಹಿರಿಮೆಯನ್ನು, ಭಕ್ತಿಯ ಉತ್ಕಂಠತೆಯನ್ನು, ಆಧ್ಯಾತ್ಮದ ಔನ್ನತ್ಯವನ್ನು ಕಾಣಬಹುದಾಗಿದೆ. ಈಗ ಉಪಲಬ್ಧವಾಗಿರುವ ಅವಳ ಒಂಭತ್ತು ವಚನಗಳ ಮುಕುಟ 'ಮುಸಣಯ್ಯ ಪ್ರಿಯ ಗಜೇಶ್ವರ' ಎಂದಾಗಿರುತ್ತದೆ.

ಗಜೇಶ ಮುಸಣಯ್ಯನ ಪುಣ್ಯಸ್ತ್ರೀ,ಬಸವಣ್ಣನೇ ಗುರುವೆಂದು, ಚೆನ್ನಬಸವಣ್ಣನೇ ಲಿಂಗವೆಂದು, ಪ್ರಭುದೇವನೇ ಜಂಗಮವೆಂದು, ಮರುಳಶಂಕರದೇವರೇ ಪ್ರಸಾದವೆಂದು ಪರಿಭಾವಿಸಿ, ಅವರು ಕ್ರಮವಾಗಿ ಒದಗಿಸಿದ ಶುದ್ಧ ಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧ ಪ್ರಸಾದ ಮತ್ತು ಮಹಾಪ್ರಸಾದಗಳನ್ನು ಉಂಡು ತಾನು ಪರಿಪೂರ್ಣತೆಯನ್ನು ಸಾಧಿಸಿರುವದಾಗಿ ನಿರೂಪಿಸಿದ್ದಾಳೆ. ಶರಣ ಸಂದೋಹದ ಅಗ್ರಗಾಮಿಗಳಿಗೆ ಕೃತಕೃತ್ಯತೆಯನ್ನು ಸಲ್ಲಿಸಿದ್ದಾಳೆ.

ವಿಷಯಂಗಳ ಪರಮುಖಕ್ಕೆ ತಾ ಶಕ್ತಿಯಾಗಿ ಭೋಗಿಸುವ ನಿರ್ಲೇಪ ಸ್ಥಿತಿಯನ್ನು ಪ್ರಸ್ತಾಪಿಸುವಲ್ಲಿ ಸೃಷ್ಟಿಯ ಉತ್ಪತ್ತಿ, ಅಂಗದ ರಚನೆ, ವಿಷಯಂಗಳನ್ನು ಭೋಗಿಸುವ ಬಗೆ–ಮೊದಲಾದವನ್ನು ಇವಳು ಮನೋಜ್ಞವಾಗುವಂತೆ ನಿರೂಪಿಸಿದ್ದಾಳೆ. ಮೂಲದಲ್ಲಿದ್ದ ನಿಃಕಲವಾದ ಪರಬ್ರಹ್ಮಲಿಂಗ ನೆನಹು ನಿರ್ಧರಿಸಿ ಚಿಚ್ಛಕ್ತಿಯಾಗಿ ಅದೇ ಒಲಿದು ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾ ಶಕ್ತಿಯಾಗುವದು. ಮುಂದೆ ಪರಾಶಕ್ತಿಯಿಂದ ಆಕಾಶ, ಆದಿಶಕ್ತಿಯಿಂದ ವಾಯು, ಇಚ್ಛಾಶಕ್ತಿಯಿಂದ ತೇಜ, ಜ್ಞಾನಶಕ್ತಿಯಿಂದ ಅಪ್ಪು ಹಾಗೂ ಕ್ರಿಯಾಶಕ್ತಿಯಿಂದ ಪೃಥ್ವಿ ಎಂದು ಪಂಚಭೂತಗಳು ಉದ್ಭವಿಸುವವು. ಈ ಪಂಚಭೂತಗಳೇ ಪಂಚೀಕರಣಗೊಂಡು ಅಂಗವಾಗುವದು. ಆ ಲಿಂಗ ನೇತ್ರ, ನಾಸಿಕ, ಕರ್ಣ, ಜಿಹ್ವೆ ಹಾಗೂ ತ್ವಕ್ಕು ಎಂದೆನ್ನುವ ಪಂಚಕರಣೇಂದ್ರಿಯಗಳನ್ನು ಹೊಂದಿರುವುದು. ಈ ಒಂದೊಂದು ಇಂದ್ರಿಯವೂ–ನೇತ್ರದಲ್ಲಿ ರೂಪ, ನಾಸಿಕದಲ್ಲಿ ಗಂಧ. ಕರ್ಣದಲ್ಲಿ ಶಬ್ದ, ಜಿಹ್ವೆಯಲ್ಲಿ ರಸ ಹಾಗೂ ತ್ವಕ್ಕಿನಲ್ಲಿ ಸ್ಪರ್ಶವೆನ್ನುವ ವಿಷಯಗಳನ್ನು ಪಡೆದಿರುವವು. ಈ ವಿಷಯಗಳನ್ನು ಭೋಗಿಸುವಂಥ ಅಂಗನು ತನ್ನ ಕರಣೇಂದ್ರಿಯಗಳಲ್ಲಿ ಇರುವ ಲಿಂಗನಿಗೆ ವಿಷಯವನ್ನು ಮೊದಲು ಸಮರ್ಪಿಸಿ, ನಂತರದಲ್ಲಿ ತಾನು ಸ್ವೀಕರಿಸಿ ಲಿಂಗಭೋಗೋಪ ಭೋಗಿಯೆನಿಸಬೇಕು. ಅಂದರೆ ಕಣ್ಣಲ್ಲಿರುವ ಶಿವಲಿಂಗಕ್ಕೆ ರೂಪವನ್ನು, ನಾಸಿಕದಲ್ಲಿರುವ ಆಚಾರಲಿಂಗಕ್ಕೆ ಗಂಧವನ್ನು, ಜಿಹ್ವೆಯಲ್ಲಿರುವ ಗುರುಲಿಂಗಕ್ಕೆ ರಸವನ್ನು, ಕರ್ಣದಲ್ಲಿರುವ ಪ್ರಸಾದ ಲಿಂಗಕ್ಕೆ ಶಬ್ದವನ್ನು, ತ್ವಕ್ಕಿನಲ್ಲಿರುವ ಜಂಗಮಲಿಂಗಕ್ಕೆ ಸ್ಪರ್ಶ

ವಿಷಯವನ್ನು ಮೊದಲು ಸಮರ್ಪಿಸಿ, ನಂತರದಲ್ಲಿ ಭೋಗಿಸುವ ಭಕ್ತಿಸಂಪುಟನಾದರೆ ಅವನು ನಿರ್ಲೇಪನೆನಿಸಿಕೊಳ್ಳುವನು. ಅವನಿಗೆ ಯಾವುದರ ಲೇಪವೂ ಆಗದು. ಕಾರಣ ಅವನು ವಿಷಯಗಳನ್ನು ಮೊದಲು ಆಯಾಯಾ ಲಿಂಗಕ್ಕರ್ಪಿಸಿ ಪ್ರಸಾದಗೊಳಿಸಿಕೊಂಡು ಭೋಗಿಸುವದರಿಂದ ಪ್ರಸಾದ ಕಾಯನಾಗಿ ಪರಿಣಮಿಸುವನು. ಈ ರೀತಿಯಾಗಿ ಭಕ್ತನು ಪ್ರಸಾದ ಕಾಯನಾಗಿ, ಲಿಂಗಭೋಗೋಪಭೋಗಿಯಾಗಿ ನಿರ್ಲೇಪನೆನಿಸುವ ಪರಿಯನ್ನು ಇವಳು ಒಳ್ಳೇ ಮಾರ್ಮಿಕವಾಗಿ ನಿರೂಪಿಸಿರುವಳು.

ಹೊನ್ನು, ಹೆಣ್ಣು, ಮಣ್ಣು, ಅಂಗ, ಇಂದ್ರಿಯ, ಜಗತ್ತುಗಳನ್ನು ಹೊರತುಪಡಿಸಿ ಲಿಂಗವನ್ನು ಒಲಿಸಿಕೊಳ್ಳಬೇಕೆಂಬುದು ಶುದ್ಧ ಅಜ್ಞಾನದ ಮಾತೆಂದು, ಅವು ಲಿಂಗಕ್ಕೆ ವಿರುದ್ಧವಲ್ಲವೆಂದೂ, ಅರಿವಿಂದ ಕಂಡೊಡಗಿದ ಸುಖವು ಎಂದು ಹೇಳಿ ಅರಿವಿನ ಮಹತಿಯನ್ನು ಇವಳು ಸಾರಿರುವಳು. ಜೀವಿಯು ಪ್ರಪಂಚದಲ್ಲಿದ್ದುಕೊಂಡೇ ಪಾರಮಾರ್ಥವನ್ನು ಸಾಧಿಸಬೇಕು, ಪ್ರಪಂಚವನ್ನು ಈಸಿ ಜಯಿಸಬೇಕೆಂಬುದನ್ನು ಅತ್ಯಂತ ಸರಳ ಸುಂದರವಾಗಿ ವಿವರಿಸಿರುವಳು. ಮನುಷ್ಯ ಮೋಕ್ಷ ಸುಖವನ್ನು ಅಥವಾ ನಿಜದ ನೆಲೆಯ ಸುಖವನ್ನು ಅರಿವಿನಿಂದ ಸಾಧಿಸಬೇಕೆಂದು ತಿಳಿಸಿ ಹೇಳಿರುವಳು. ಇದುವರೆಗೆ ಲಿಂಗವನ್ನು ಒಲಿಸಿ ಅವಿರಳವಾದ ಸುಖವನ್ನು ಪಡೆಯಬೇಕಾದರೆ ಹೊನ್ನು–ಹೆಣ್ಣು–ಮಣ್ಣು ಮೊದಲಾದವುಗಳನ್ನು ಬಿಡಬೇಕೆಂದು ಹೇಳಿಕೊಂಡು ಬಂದಿರುವ ವಿಚಾರವನ್ನು ಅತ್ಯಂತ ಸಮರ್ಥವಾಗಿ ಖಂಡಿಸಿ ತನ್ನ ಅರಿವಿನ ಅಗಾಧತೆಯನ್ನು ಮೆರೆದಿದ್ದಾಳೆ. ಹೊನ್ನು ಬಿಟ್ಟು ಲಿಂಗವನೊಲಿಸಬೇಕೆಂಬರು, ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ ? ಎಂದು ಪ್ರಶ್ನೆಗಳನ್ನು ಹಾಕಿ ವಿಸ್ಮಯವನ್ನುಂಟುಮಾಡುವಳು. ಹೊನ್ನು–ಮಣ್ಣು–ಹೆಣ್ಣು, ಇಂದ್ರಿಯ, ಅಂಗ, ಜಗತ್ತು ಇವಾವೂ ಪರಮ ಶಾಂತನೆಂಬ ಪರಂಜ್ಯೋತಿ ಲಿಂಗವನ್ನು ಕಾಣುವಲ್ಲಿ ಅಡ್ಡಿಯಾಗಲಾರವೆಂಬುದನ್ನು ತಿಳಿಸಿದ್ದಾಳೆ. ಪರಂಜ್ಯೋತಿ ಲಿಂಗದಲ್ಲಿ ಅವಿರಳ ಸುಖದಲ್ಲಿ ಲೋಲಾಡಬೇಕಾದರೆ ನಮ್ಮ ಕೋಪ-ಮುನಿಸುಗಳನ್ನು ಬಿಟ್ಟು ಇದನ್ನು ಅರಿವಿನಿಂದ ಸಾಧಿಸಬೇಕೆಂದಿರುವಳು. ಆದರೆ ಆ ಕೋಪ-ಮುನಿಸುಗಳಲ್ಲಿ ನಮ್ಮನ್ನೇ ನಾವು ಮರೆದರೆ ಆ ಲಿಂಗಸುಖವನ್ನು ಅನುಭವಿಸಲರಿಯದೆಂದು ಪ್ರತಿಪಾದಿಸಿದ್ದಾಳೆ.

ಗುರು-ಶಿಷ್ಯ ಸಂಬಂಧವನ್ನು ಕುರಿತಾಗಿಯೂ ಗಜೇಶ ಮಸಣಯ್ಯನ ಪುಣ್ಯಸ್ತ್ರೀ ವಿಚಾರಪ್ಲುತವಾದ ಅಭಿಪ್ರಾಯವನ್ನು ಮಂಡಿಸಿದ್ದಾಳೆ. ಶ್ರೀಗುರು ಶಿಷ್ಯನಿಗೆ ಪಾದತೀರ್ಥ, ಕರುಣಪ್ರಸಾದ, ವಿಭೂತಿ, ರುದ್ರಾಕ್ಷಿ ಹಾಗೂ ಪ್ರಣವ ಪಂಚಾಕ್ಷರಿಯನ್ನು ದಯಪಾಲಿಸುತ್ತಾನೆ. ಈ ರೀತಿಯಾಗಿ ಕೊಟ್ಟ ಅವನ್ನು ಶಿಷ್ಯನಾದವನು ಬೇರೊಬ್ಬರಿಗೆ ಕೊಡಲಿಕ್ಕೆ ಬಾರದೆಂದು ವ್ಯಕ್ತಪಡಿಸಿದ್ದಾಳೆ. ಒಂದು ವೇಳೆ ಮರಳಿಸುವದಾದರ ಅವನ್ನು ಗುರುವಿಗೆ ಮರಳಿಕೊಡಬೇಕು. ಆತನು ಮಾತ್ರ ಮರಳಿ ಪಡೆಯಲು ಸಮರ್ಥನಾಗಿರುತ್ತಾನೆ. ಇದನ್ನು ಬಿಟ್ಟು ಗುರು–ಶಿಷ್ಯ ಎಂದೆನ್ನುವ ಭೇದವನ್ನು ಎಣಿಸಿ, ಗುರುತ್ವವನ್ನು ಬಯಸಿ ಬೇರೆಯವರಿಗೆ ಗುರು ಕರುಣಿಸಿಕೊಟ್ಟ ವಸ್ತುಗಳನ್ನು ಕೊಡಲು ಹೋದರೆ ಅವನು ಗುರುದ್ರೋಹಿ ಎಂದೆನಿಸುವನೆಂದು ನಿರಾತಂಕವಾಗಿ ನಿರ್ಭೀತಿಯಿಂದ ತಿಳಿಸಿದ್ದಾಳೆ. ಅಂದರೆ ಗುರು ಕರುಣಿಸಿಕೊಟ್ಟದ್ದನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳ

ಬೇಕು, ಗುರುದ್ರೋಹಿ ಎಂದೆನಿಸಿಕೊಳ್ಳದಂತೆ ಹೇಗೆ ನಡೆಯಬೇಕೆಂದೆಲ್ಲ ವಿಚಾರವನ್ನು ಸೂಚಿಸಿರುವಳು.

ಗಜೇಶ ಮಸಣಯ್ಯನ ಪುಣ್ಯಸ್ತ್ರೀ, ಗುರು–ಶಿಷ್ಯ–ಲಿಂಗದಲ್ಲಿ ಯಾವ ಭೇದವೂ ಇಲ್ಲವೆಂಬುದನ್ನು ಚಾಣಾಕ್ಷತನದಿಂದ ಸಾರಿದ್ದಾಳೆ. ಜ್ಞಾನ ಸ್ವರೂಪಿಯಾದ ಶ್ರೀಗುರುವಿನಿಂದ ಲಿಂಗದ ಅನುಗ್ರಹವನ್ನು ಪಡೆದುಕೊಂಡು, ಪ್ರಣವ ಪಂಚಾಕ್ಷರಿ ಮಂತ್ರವನ್ನು ಅಳವಡಿಸಿಕೊಂಡಿರಲು, ಅದನ್ನು ಕಂಡು ಮತ್ತೊಬ್ಬ ಗುರುಕರುಣೆಯಾದಾತ ಬರಲು ಆ ಲಿಂಗಾನುಗ್ರಹ–ಪ್ರಣವ ಪಂಚಾಕ್ಷರಿಯನ್ನು ಆತನಿಗೆ ಕೊಟ್ಟರೆ ಅವನಿಗೆ ತಾನು ಗುರುವಾಗಬಹುದೇ ? ಹಾಗನ್ನಲಾಗದು. ಅವನು ಮತ್ತು ಇವನು ಇಬ್ಬರೂ ಒಂದೇ ಪರಂಜ್ಯೋತಿಯ ಆಣತಿಯಂತೆ, ನಡೆಯುವವರಾದ್ದರಿಂದ ಇಬ್ಬರೂ ಒಂದೇ ಗುರುವಿನ ಶಿಷ್ಯರು. ಗುರು ಬಂಧುಗಳೆನಿಸುವರು. ಅವರು ಪರಂಜ್ಯೋತಿ ಜ್ಞಾನವನ್ನು ಪಡೆದಿರಲು ಗುರು–ಶಿಷ್ಯ–ಲಿಂಗದ ಯಾವ ಭೇದವನ್ನೂ ಗಮನಿಸಲಾರರು. ಅಂದರೆ ಗುರು–ಶಿಷ್ಯ–ಲಿಂಗ ಈ ಎಲ್ಲವೂ ಒಂದೇ ಚೈತನ್ಯವಸ್ತುವಿನ ಭಿನ್ನ ಸ್ವರೂಪಗಳೆಂದು ಪ್ರಸ್ತಾಪಿಸಿರುವಳು.

ಅರಿವಿನ ಮಹತಿಯನ್ನು ಪ್ರತಿಪಾದಿಸುತ್ತ, ನನ್ನರಿವನ್ನು ಸರಿಯಾಗಿ ತೋರುವವನೇ ನಿಜವಾದ ಗುರು ಎಂಬುದನ್ನು ಮನೋಜ್ಞವಾಗಿ ನಿರೂಪಿಸಿದ್ದಾಳೆ. ಗುರುವಾದಾತ ಮೊದಲು ನನ್ನ ನಿಜದ ನೆಲೆಯನ್ನು ತಿಳಿಸಿಕೊಡಬೇಕು. ತನ್ನ ನಿಜದ ನೆಲೆಯನ್ನು ಅರಿತಾಗಲೇ ನಿನ್ನನ್ನೂ ಅರಿಯಲಿಕ್ಕೆ ಸಾಧ್ಯವಾಗುವದು. ನನ್ನ ಅರಿವನ್ನು ಬಿಡಕಡೆ ನಿನ್ನ ಅರಿವಿನ ದರ್ಶನ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಹಾಗಾದಲ್ಲಿ ನೀನು ಗುರುವಾಗಲಾರೆ, ನಾನು ಶಿಷ್ಯನೆನಿಸಿಕೊಳ್ಳಲಾರೆ. ನನಗೆ ತಿಳಿಯುವಂತೆ ಮಾಡಿದರೆ ಮಾತ್ರ ನೀನು ನನಗೆ ಗುರು. ನಾನು ನಿನ್ನ ಶಿಷ್ಯಳಾಗುತ್ತೇನೆಂದು ನಿಜ– ಗುರು–ಶಿಷ್ಯರ ವಿಚಾರವನ್ನು ಪ್ರಸ್ತಾಪಿಸಿದ್ದಾಳೆ.

ಅಂಗ–ಪ್ರಾಣ–ಭಾವಗಳನ್ನು ಒಳಕೊಂಡಾಗ ಲಿಂಗವೆನಿಸುತ್ತದೆಯೇ ವಿನಾ ಒಂದೊಂದಾಗಿ ಬೇರೆಯೇ ಲಿಂಗವೆನಿಸಲಾರವು. ಅಂಗದ ಮೇಲೆ, ಮನದ ಮೇಲೆ, ಭಾವದ ಮೇಲೆ ಧರಿಸಿಕೊಂಡಿರುವದು ಬೇರೆ ಬೇರೆಯಾಗಿ ತೆಗೆದುಕೊಂಡಾಗ ಲಿಂಗವಲ್ಲ. ಆದರೆ ಮೂರೂ ಒಂದೇ ಎನ್ನುವ ರೀತಿಯಲ್ಲಿ ಗ್ರಹಿಸಿದಾಗ ಲಿಂಗವೆನಿಸುವದು. ಅಂದರೆ, ಸ್ಥೂಲ ಶರೀರದ ಮೇಲೆ ಇಷ್ಟಲಿಂಗದ ಪೂಜೆ ಆದರೆ ಸೂಕ್ಷ್ಮ ಮತ್ತು ಕಾರಣ ತನುವಲ್ಲಿಯು ಪ್ರಾಣಲಿಂಗ ಮತ್ತು ಭಾವಲಿಂಗದ ಪೂಜೆ ಆಗುತ್ತಿರಬೇಕು. ಅಂಗದ ಮೇಲೆ ಧರಿಸಿಕೊಂಡ ಲಿಂಗ ವ್ಯವಹಾರ ಮಾತ್ರ. ಮನದ ಮೇಲಣ ಲಿಂಗ ಸಂಕಲ್ಪ ಹಾಗೆಯೇ, ಭಾವದ ಮೇಲಣ ಲಿಂಗ ಭ್ರಾಂತುತ್ವ. ಆಳಿನ ಆಳು ಹೇಗೆ ಅರಸನಾಗಲಾರನೋ ಹಾಗೆ ಒಂದನ್ನು ಒಳಕೊಂಡ ಮಾತ್ರದಿಂದ ಲಿಂಗವೆನಿಸದು. ಅಂಗ–ಪ್ರಾಣ–ಭಾವವನ್ನೊಳಕೊಂಡಾಗಲೇ ಲಿಂಗವೆನಿಸುವದೆಂಬುದನ್ನು ನಿವೇದಿಸುವಲ್ಲಿ ಅವಳ ತರ್ಕದ ಹಿರಿಮೆ ಕಾಣಬಹುದಾಗಿದೆ.

ಗುರುವಾಗಿದ್ದು ಶಿವ ಭಕ್ತನೊಳಡಗಿದ, ಲಿಂಗವಾಗಿ ಭಕ್ತನೊಳಡಗಿದ, ಜಂಗಮವಾಗಿ ಭಕ್ತನೊಳಡಗಿದ– ಹೀಗೆ ನಾಲ್ಕೂ ಒಂದೇ. ಭಾಜನವೂ ಒಂದೇ.

ಭೋಜನವೂ ಒಂದೇ. ಇವು ಬೇರೆ ಎಂದು ಭೇದಮಾಡುವ ಶಾಸ್ತ್ರಸೂತಕಗಳ ತೋರಬೇಡವೆಂದು ಕನಲಿ ನುಡಿದ್ದಾಳೆ. ಶಿವ ಎಲ್ಲರಲ್ಲಿ–ಎಲ್ಲವನ್ನು ಹೇಗೆ ಒಳಗೊಂಡಿರುವನೆಂಬ ಸತ್ಯದರ್ಶನವನ್ನು ಮನಗಾಣಿಸುವಲ್ಲಿ ಯಶಸ್ವಿಯಾಗಿದ್ದಾಳೆ.

ಇವಳ ನಿಜವಾದ ಹೆಸರು ಏನಿತ್ತೆಂಬುದು ತಿಳಿದು ಬರುವದಿಲ್ಲವಾದರೂ ಗಜೇಶಮಸಣಯ್ಯಗಳ ಪುಣ್ಯಸ್ತ್ರೀ ಎಂದು ಉಲ್ಲೇಖಗೊಂಡ ಇವಳು ಗುರುನಿಷ್ಠೆಯುಳ್ಳವಳು, ನೇರಸ್ವಭಾವದವಳು, ಭಗವದ್‌ಸಾಕ್ಷಾತ್ಕಾರಕ್ಕೆ ಅರಿವೆ ಮುಖ್ಯವಾದದ್ದೆಂಬ ಉತ್ಕಟತೆಯನ್ನು ಹೊಂದಿದವಳೆಂಬುದು ಕಂಡುಬರುತ್ತದೆ.

ಸ್ತ್ರೀಯರನ್ನು ಅಜ್ಞಾನದಿಂದ ನಿರ್ಮಲಜ್ಯೋತಿಗೆ ಕರೆತಂದ, ಮಾಯೆಯನ್ನು ಮಹಾದೇವಿಯಾಗುವಂತೆ ಮಾಡಿದ, ಅಂಧ ನಂಬಿಕೆಯ ಗುಲಾಮಳನ್ನು ಧೀರ ಶರಣೆಯಾಗುವಂತೆ ಮಾಡಿದ ವಿಚಾರಮಾರ್ಗಕ್ಕೆ ಹಚ್ಚಿದ, ಮತ್ತು ಅನುಭವಮಂಟ ಪವ ತತ್ವಗೋಷ್ಠಿಸಾಧನೆಯಲ್ಲಿ ಸ್ತ್ರೀಯರಿಗೆ ತಮ್ಮತನವನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಟ್ಟ ಮಹಾಪುಣ್ಯ ಶಿವಶರಣರದು. ಆ ಪುಣ್ಯಫಲವಾಗಿ ಅನೇಕ ಮಹಿಮಾನ್ವಿತ ಶರಣೆಯರು ಸಮಾಜದಲ್ಲಿ ಮೂಡಿಬಂದು ಇಂದಿಗೂ ಜನತೆಯ ಕಣ್ಬೆಳಕಾಗಿದ್ದಾರೆ. ಅಂಥವರಲ್ಲಿ ಗಜೇಶಮಸಣಯ್ಯಗಳ ಪುಣ್ಯಸ್ತ್ರೀಯೂ ಒಬ್ಬಳು ಎಂದು ಧಾರಾಳವಾಗಿ ಹೇಳಬಹುದು. ಇವಳ ವಚನಗಳಲ್ಲಿ ಕಾವ್ಯಸೌಂದರ್ಯದ ಮಾರ್ದವತೆ ಕಾಣಬರದಿದ್ದರೂ ಅನುಭಾವ–ಅರಿವುಗಳ ಮಿಂಚಿನ ಸಂಚಲವನ್ನು ಕಾಣಬಹುದಾಗಿದೆ.

ಅಮುಗೆ ರಾಯಮ್ಮ ಹಾಗೂ ಅಕ್ಕಮ್ಮ

ಶ್ರೀಮತಿ ಎಚ್. ಎಂ. ಬೀಳಗಿ

ಕರ್ನಾಟಕದ ಇತಿಹಾಸದಲ್ಲಿ ಪರ್ವಕಾಲವೆನಿಸಿದ ಹನ್ನೆರಡನೆಯ ಶತಮಾನದಲ್ಲಿ, ಧರ್ಮದ ಹೆಸರಿನಲ್ಲಿರುವ ಅನಿಷ್ಟ ಸಂಪ್ರದಾಯಗಳನ್ನು ಕಿತ್ತೆಸೆದು, ಸಮಾನತೆಯ ನೆಲೆಗಟ್ಟಿನ ಮೇಲೆ ಹೊಸ ಸಮಾಜ ರಚಿಸಲು ಮುಂದಾದ ಬಸವಾದಿ ಶರಣರು, ಸ್ತ್ರೀಗೂ ಸಾಮಾಜಿಕ, ಆಧ್ಯಾತ್ಮಿಕ ಸ್ಥರಗಳಲ್ಲಿ, ಮುಕ್ತಿ ಆತ್ಮಸಾಧನೆಗಳಂಥ ಆಂತರಿಕವಿಕಾಸ ವಿಚಾರವಲ್ಲಿ ಮುಕ್ತದ್ವಾರವನ್ನು ತೆರೆದುಕೊಟ್ಟರು. ಅಂಥವರಲ್ಲಿ 'ಅಮುಗೆ ರಾಯಮ್ಮ' ಹಾಗೂ 'ಅಕ್ಕಮ್ಮ' ಅವಶ್ಯ ಪರಿಗಣಿಸಬೇಕಾದ ಶರಣೆಯರು.

ಅಮುಗೆ ರಾಯಮ್ಮ

ಅಕ್ಕಮಹಾದೇವಿಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ವಚನರಚನೆ ಮಾಡಿದ ನಾಲ್ಕಾರು ಜನ ಶರಣೆಯರಲ್ಲಿ ಎದ್ದುಕಾಣುವ ಹೆಸರು ಅಮುಗೆ ರಾಯಮ್ಮನದು. ಅಮುಗೆ ರಾಯಮ್ಮನ ಜೀವನ ವೃತ್ತಾಂತಗಳು, ವಿವರಗಳು ಹೆಚ್ಚಾಗಿ ದೊರೆತಿಲ್ಲವಾದರೂ ಈಕೆಯ ಪತಿ ನೇಕಾರಕುಲದ ಅಮುಗಿದೇವಯ್ಯನ ವಿಷಯ ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ವ್ಯಕ್ತವಾಗಿದೆ. 'ಸಿದ್ಧರಾಮ ಚಾರಿತ್ರ್ಯ'ದಲ್ಲಿ ರಾಯಮ್ಮ ಅಮುಗಿದೇವಯ್ಯನ ಪತ್ನಿ ಎಂಬುದಾಗಿ ಉಲ್ಲೇಖಿತವಾಗಿದೆ. ಆದರೆ ರಾಯಮ್ಮ ರಾಯಸದ ಮಂಚಣ್ಣನ ಪತ್ನಿ ಎಂಬುದಾಗಿ ಕೆಲವರು ಅಭಿಪ್ರಾಯಪಟ್ಟಿದ್ದಾರೆ. 'ಶಿವಶರಣರ ಚರಿತ್ರೆಗಳು'[1] ಮತ್ತು 'ಶಿವಶರಣ ಕಥಾರತ್ನಕೋಶ'[2] ಗಳಲ್ಲಿ ರಾಯಮ್ಮ ರಾಯಸದ ಮಂಚಣ್ಣನ ಪತ್ನಿ ಎಂದು ಹೇಳಲಾಗಿದೆ. ಇದೇ ವಿಚಾರವನ್ನು ಒಪ್ಪಿಕೊಂಡ ಡಾ. ಸರೋಜಿನಿ ಮಹಿಷಿಯವರು[3], "ರಾಯಮ್ಮ ರಾಯಸದ ಮಂಚಣ್ಣನ ಪತ್ನಿ" ಎಂದು ಹೇಳುತ್ತ, "ಅಮುಗೇಶ್ವರ ಎಂಬುದು ಯಾವುದಾದರೊಂದು ಗ್ರಾಮದ ದೇವರ ಹೆಸರೋ ಅಥವಾ ಅವಳ ಗುರುವಿನ ಹೆಸರೋ ತಿ

1. ಶಿವಶರಣರ ಚರಿತ್ರೆಗಳು—ಫ. ಗು. ಹಳಕಟ್ಟಿ ಪುಟ. 44-45
2. ಶಿವಶರಣರ ಕಥಾರತ್ನಕೋಶ—ತ. ಸು. ಶಾಮರಾಯ ಪುಟ 364
3. ಕರ್ನಾಟಕದ ಕವಯಿತ್ರಿಯರು—ಡಾ. ಸರೋಜಿನಿ ಮಹಿಷಿ ಪುಟ 143

ಯಮ. ಅಮುಗಿದೇವಯ್ಯ ಎಂಬುದು ಗುರುವಿನ ಹೆಸರೇ ಆಗಿರಬೇಕು."[1] ಎಂದು ಸಂದೇಹ ವ್ಯಕ್ತಪಡಿಸಿದ್ದಾರೆ. ಶಿವಶರಣೆಯರ ಸಮಗ್ರ ವಚನಗಳನ್ನು ಸಂಪಾದಿಸಿ ವಿಸ್ತೃತಪೂರ್ಣವಾದ ಮುನ್ನುಡಿಯನ್ನು ಬರೆದ ಡಾ. ಆರ್. ಸಿ. ಹಿರೇಮಠ[2] ಅವರು 'ಸಿದ್ಧರಾಮ ಚಾರಿತ್ರ್ಯ'ವನ್ನು ಆಧಾರವಾಗಿಟ್ಟುಕೊಂಡು ರಾಯಮ್ಮ, ಸೊನ್ನಲಿಗೆಯಲ್ಲಿ ನೆಲಸಿ ನಿಷ್ಠಾವಂತ ಭಕ್ತನೆನಿಸಿದ ನೇಕಾರ ಕುಲದ ಅಮುಗಿದೇವಯ್ಯನ ಪತ್ನಿ ಎಂದು ಖಚಿತಪಡಿಸಿದ್ದು, ಅದೇ ಅಭಿಪ್ರಾಯವನ್ನು ಕನ್ನಡ ಸಾಹಿತ್ಯ ಚರಿತ್ರೆ[3]ಕಾರರೂ ಒಪ್ಪಿಕೊಂಡಿದ್ದಾರೆ. 'ಡಾ. ಎಲ್. ಬಸವರಾಜು'[4] ಅವರು ಸಹ ವಚನಾಂಕಿತವನ್ನು ನಿರ್ಧರಿಸುವಲ್ಲಿ ರಾಯಮ್ಮ, ಅಮುಗಿದೇವಯ್ಯನ ಸತಿ ಎಂಬುದಾಗಿ ಹೇಳಿದ್ದಾರೆ.

ವಿಚಿತ್ರವೆಂದರೆ ಇತ್ತೀಚೆಗೆ ಬೆಳಕುಕಂಡ 'ಬಸವಯುಗದ ಶಿವಶರಣೆಯರು' ಎಂಬ ಕೃತಿಯಲ್ಲಿ ಮತ್ತೆ ಎರಡೂ ರೀತಿಯ ವಿಚಾರಗಳು ಉಕ್ತವಾಗಿವೆ. ಒಂದೆಡೆ "ಬಸವಣ್ಣನವರ ರಾಯಸದ ಕಾಯಕದಲ್ಲಿ ನಿರತನಾದ ಮಂಚಣ್ಣ ಅನುಭಾವಿ. ಅವನ ಪತ್ನಿ ರಾಯಮ್ಮನೂ ಅನುಭಾವಿಯಾಗಿದ್ದಾಳೆ, ವಚನಕಾರಳಾಗಿದ್ದಾಳೆ."[5] ಎಂದು ಹೇಳಿ ರಾಯಮ್ಮನ ಒಂದು ವಚನವನ್ನು ಉದ್ಧರಿಸಲಾಗಿದೆ. ಮುಂದೆ 'ಅನುಭವ ಮಂಟಪದ ಪ್ರಭಾವಕ್ಕೊಳಗಾದ ವಚನಗಾರ್ತಿಯರು; ಎಂಬ ಅಧ್ಯಾಯದಲ್ಲಿ "ಸೊನ್ನಲಿಗೆಯ ಶರಣ ಅಮುಗಿದೇವಯ್ಯನ ಪತ್ನಿ ರಾಯಮ್ಮನ ವಚನಗಳು ಚಾಟಿ ಏಟಿನಂತಿವೆ"[6] ಎಂದು ಹೇಳಿ ಅದೇ ರಾಯಮ್ಮನ ಇನ್ನೊಂದು ವಚನವನ್ನು ಉದಾಹರಿಸಲಾಗಿದೆ. ಈ ರೀತಿಯ ಆಭಾಸಕ್ಕೆಡೆಮಾಡಿಕೊಡದೆ ಖಚಿತವಾದ ಒಂದು ಅಭಿಪ್ರಾಯವನ್ನು ನೀಡಿದ್ದರೂ ಸಾಕಾಗಿತ್ತು. ಈಗ ತಿಳಿದ ಮಟ್ಟಿಗೆ ರಾಯಮ್ಮ ಅಮುಗಿ ದೇವಯ್ಯನ ಪತ್ನಿ ಎಂದು ಒಪ್ಪಿಕೊಳ್ಳಲಾಗಿದೆ.

ರಾಯಮ್ಮ ಬಸವಾದಿ ಶರಣರೊಂದಿಗೆ ಶಿವಾನುಭವ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದುದರಿಂದ ಈಕೆಯ ಕಾಲ ಸು. ೧೧೬೦ ಎಂದು ನಿರ್ಧರಿಸಲಾಗಿದೆ. ಅಮುಗಿದೇವಯ್ಯನ ಹೆಸರಿನ ಶಾಸನವನ್ನು ಗಮನಿಸಿ, "ಈ ಶಾಸನದ ಕಾಲ ಕ್ರಿ. ಶ. ಸು. ೧೨೦೦ ಇದ್ದುದರಿಂದ ಕಲ್ಯಾಣಕ್ರಾಂತಿಯ ತರುವಾಯವೂ ಬದುಕಿದ ಅಮುಗಿದೇವ ಪುಳಜೆಯಲ್ಲಿ ನಿಂತು ವೀರಶೈವ ಧರ್ಮದ ದೀವಿಗೆಯನ್ನು ಬೆಳಗಿದನೆನ್ನಬಹುದು"[7] ಎಂದು ಡಾ. ಎಂ. ಎಂ. ಕಲಬುರ್ಗಿಯವರು ಹೇಳಿದ್ದಾರೆ. ಆದರೆ ಈ ಅವಧಿಯಲ್ಲಿ

---

1. ಕರ್ನಾಟಕದ ಕವಯಿತ್ರಿಯರು—ಡಾ. ಸರೋಜಿನಿ ಮಹಿಷಿ ಪುಟ 143
2. ಶಿವಶರಣೆಯರ ವಚನಗಳು—ಸಂ. ಡಾ. ಆರ್. ಸಿ. ಹಿರೇಮಠ ಪ್ರಸ್ತಾವನೆ 409
3. ಕನ್ನಡ ಸಾಹಿತ್ಯ ಚರಿತ್ರೆ (IVನೆಯ ಸಂಪುಟ) ಪ್ರ. ಸಂ. ಡಾ. ಹಾ. ಮಾ. ನಾಯಕ ಮೈ. ವಿ. ವಿ. ಪುಟ 563
4. ಶಿವದಾಸಗೀತಾಂಜಲಿ—ಡಾ. ಎಲ್. ಬಸವರಾಜು ಪುಟ 304
5. ಬಸವಯುಗದ ಶಿವಶರಣೆಯರು—ಶ್ರೀಮತಿ ಶಾಂತಾದೇವಿ ಮಾಳವಾಡ ಪುಟ 69
6. ಬಸವಯುಗದ ಶಿವಶರಣೆಯರು—ಶ್ರೀಮತಿ ಶಾಂತಾದೇವಿ ಮಾಳವಾಡ ಪುಟ 93
7. ಶಾಸನಗಳಲ್ಲಿ ಶಿವಶರಣರು—ಡಾ. ಎಂ. ಎಂ. ಕಲಬುರ್ಗಿ ಪುಟ 99

ರಾಯಮ್ಮ ಇದ್ದಿರಬಹುದಾದ ಆಧಾರಗಳು ಲಭ್ಯವಾಗದೆ ಇರುವದರಿಂದ ಆಕೆಯ ಕಾಲ ಕ್ರಿ. ಶ. ಸು. ೧೧೬೦ ರ ಮಟ್ಟಿಗೆ ಉಳಿಯುತ್ತದೆ.

ರಾಯಮ್ಮನ ಜೀವನದ ಬಗೆಗೆ ಇತರ ವಿವರಗಳು ಸ್ಪಷ್ಟವಾಗಿ ತಿಳಿದು ಬರುವದಿಲ್ಲವಾದರೂ, ಈಕೆಯ ಪತಿಗೆ ಸಂಬಂಧಿಸಿದ ವಿಷಯಗಳು ಕನ್ನಡಕಾವ್ಯಗಳಲ್ಲಿ ಅಲ್ಲಲ್ಲಿ ಮೂಡಿ ಬಂದಿವೆ. 'ಸಿದ್ಧರಾಮಚಾರಿತ್ರ್ಯ'ದಲ್ಲಿ ಇಲ್ಲದೆ ಇದ್ದ ಒಂದ ಪವಾಡ ಕಥಾನಕವನ್ನು ಸೇರಿಸುವ ಮೂಲಕ ಅಮುಗಯ್ಯನ ನೈಷ್ಠಿಕ ಭಕ್ತಿಯನ್ನು ಎತ್ತಿ ತೋರಿಸಲು ಪ್ರಯತ್ನಿಸಿದ್ದರೆ 'ಚಿಕ್ಕನಂಜೇಶ' ತನ್ನ 'ರಾಘವಾಂಕ ಚರಿತೆ'[2] ಯಲ್ಲಿ ಸಿದ್ಧರಾಮ, ಮಲ್ಲಿನಾಥನ ಆರಾಧನೆಗಬೇಕಾದ ಅಕ್ಕಿಗಾಗಿ ಊರಲ್ಲೆಲ್ಲ ಕೊಟ್ಟಣ ಹಾಕಿಸುತ್ತಾನೆ. ಅಮುಗಯ್ಯನ ಮನೆಗೂ ಕಳುಹಿಸುತ್ತಾನೆ. 'ತಾವು ಏಕಲಿಂಗ ನಿಷ್ಠೆಯುಳ್ಳವರು, ಅಂಗದ ಮೇಲೆ ಲಿಂಗವಿಲ್ಲದ ಭವಿಯ ಸೇವಿಸೆವು' ಎಂದು ಹೇಳಿ ಅಮುಗಯ್ಯ ಭತ್ತವನ್ನು ತಿಪ್ಪೆಗೆ ಹಾಕಿಸಿದಾಗ ಸಿದ್ಧರಾಮ ಅವರಿಗೆ ಊರುಬಿಟ್ಟು ಹೊರಟು ಹೋಗುವಂತೆ ಹೇಳುತ್ತಾನೆ.ಅಮುಗಯ್ಯಪಾತ್ರೆಗಳನ್ನೆಲ್ಲ ಒಂದುಹೊರೆಮಾಡಿ ನೂಲನ್ನೆಲ್ಲಇನ್ನೊಂದು ಹೊರೆಮಾಡಿಕಟ್ಟ ತಂತುಕ್ರಿಯಾಸಾಧನೆಗಳನ್ನೆಲ್ಲ ಒಂದು ಹೊರೆ ಮಾಡಿ,"...ಮುಂದಣೂರಿಗೆ ಕಪಿಲಸಿದ್ಧಮಲ್ಲಯ್ಯನೀನೊಂದುಹೊರೆಯಂತರ್ಪುದೆಂದು ಪೊರೆಗಳೊಲವಿಂದ ದಂಪತಿಗಳೊಯ್ಯಲು"[3]ಸ್ವತಃ ಕಪಿಲಸಿದ್ಧಮಲ್ಲಯ್ಯ ಆ ಹೊರೆಯನ್ನು ಹೊತ್ತು ಒಯ್ಯುತ್ತಾನೆ. ನಂತರ ತೈಲಾಭ್ಯಂಗನ ಮಾಡಿಸುವಾಗ ಸಿದ್ಧರಾಮನಿಗೆ, ಮಲ್ಲಯ್ಯನಿಂದ ವಿಷಯ ತಿಳಿದು ಬರುತ್ತದೆ. ಅಮುಗಯ್ಯ ಸದ್ಭಕ್ತನೆಂಬುದಾಗಿ ಮಲ್ಲಯ್ಯ ಹೇಳುತ್ತಾನೆ. ಸಿದ್ಧರಾಮ ಅಮುಗಯ್ಯನನ್ನು ಕರೆತರಲು ಬಂದಾಗ, ತಾನು ಕಲ್ಯಾಣಕ್ಕೆ ಹೋಗುವದಾಗಿ ಹೇಳಿ ಅಮುಗಯ್ಯ ಪತ್ನಿಯೊಂದಿಗೆ ಕಲ್ಯಾಣಕ್ಕೆ ಹೊರಟು ಬರುತ್ತಾನೆ. ಶಿವಲಿಂಗಕವಿಯ 'ಅಮುಗಿದೇವಯ್ಯಗಳ ಸಾಂಗತ್ಯ'[4] 'ನೇಗಿಯ ಅಮುಗಯ್ಯ'[5] ಎಂಬ ಜಾನಪದ ಕಥನಗೀತೆಗಳಲ್ಲೂ ಇದೇ ಪವಾಡ ಪ್ರಸಂಗ ನಿರೂಪಿತವಾಗಿದೆ. ಪ್ರಸ್ತುತ ಪವಾಡದ ಛಾಯೆಯನ್ನು ಗಮನಿಸಿ ಅಮುಗಯ್ಯ ದಂಪತಿಗಳು ನಿಷ್ಠಾವಂತ ಭಕ್ತರಾಗಿದ್ದರೆಂದೂ, ಕರ್ಮಮಾರ್ಗವನ್ನು ಸ್ಥಾವರ ಲಿಂಗಪೂಜೆಯನ್ನು ಒಪ್ಪದ ಏಕಲಿಂಗೋಪಾಸಕರಾಗಿದ್ದರೆಂದೂ ಹೇಳಬಹುದು."ನಿಷ್ಠಾ ಮಹೇಶ್ವರನೆನಿಪ ಅಮುಗಿದೇವಯ್ಯಗಳಿಂದ ಪ್ರಭುದೇವರೆಂಬ ಅನಾದಿ ಜಂಗಮವ ಕಂಡೆ" ಎಂದು ಸಿದ್ಧರಾಮ ತನ್ನ ಒಂದು ವಚನದಲ್ಲಿ ಹೇಳಿರುವ ಮಾತು ಗಮನಾರ್ಹವಾಗಿದೆ.

ರಾಯಮ್ಮನಿಗೆ 'ವರದಾನಿಯಮ್ಮ' ಎಂದು ಇನ್ನೊಂದು ಹೆಸರೂ ಇರುವಂತೆ ತೋರುತ್ತದೆ. ನೇಗ್ಗಿಯ 'ಅಮುಗಯ್ಯ' ಎಂಬ ಜಾನಪದ ಗೀತೆಯಲ್ಲಿ"ದಾನವ್ವ ಶಿವ

---

2. ರಾಘವಾಂಕ ಚರಿತೆ: ಚಿಕ್ಕನಂಜೇಶ ಪು. 277-78
3. " " " " 278
4. ಅಮುಗಿದೇವಯ್ಯಗಳ ಸಾಂಗತ್ಯ: ಶಿವಲಿಂಗಕವಿ.
5. ಕನ್ನಡ ಜಾನಪದ ಗೀತೆಗಳು: ಡಾ. ಬಿ. ಎಸ್. ಗದ್ದಗಿಮಠ. ಪು. 298.301

ಶರಣೆ ಸಾಣಿ ಅಮುಗನ ಮಡದಿ"[1]. "ವರದಾನಿ ಹೆಂಡತಿಯು ತರವಲ್ಲ ಈ ಊರು".[2] "ನಡುರಾತ್ರಿ ಮೀರಿರಲು ಮಡದಿ ದಾಸಿಯು ಕರೆದ ತಡವೇಕೆ ಗಂಟು ಹೊರಸಿಸಸು"[3] ಎಂಬ ಉಲ್ಲೇಖಗಳು ಇವೆ. ಈ ಅಂಶಗಳನ್ನು ಗಮನಿಸಿದಾಗ ರಾಯಮ್ಮನಿಗೆ 'ವರದಾನಿಯಮ್ಮ', 'ವರದಾನಿ' ಎಂಬ ಇನ್ನೊಂದು ಹೆಸರು ಇರಬಹುದೆಂದು ಊಹಿಸಬೇಕಾಗುತ್ತದೆ. ಅಮುಗಯ್ಯನಿಗೆ ಸಂಬಂಧಿಸಿದ ಇದೇ ಪವಾಡ ಪ್ರಸಂಗ ವಸ್ತುವಾಗುಳ್ಳ 'ಶಿವಲಿಂಗ' ಕವಿಯ ಅಮುಗಿದೇವಯ್ಯಗಳ ಸಾಂಗತ್ಯ4 ಎಂಬ ಕೃತಿಯಲ್ಲಿ ಅಮುಗಯ್ಯನ ಮಡದಿ 'ರುದ್ರಾಣಿಯಮ್ಮ' ಎಂದು ಉಕ್ತವಾಗಿದೆ. ಬಹುಶಃ ರಾಯಮ್ಮ 'ರುದ್ರಾಣಿಯಮ್ಮ', 'ವರದಾನಿಯಮ್ಮ' ಎಂದು ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿರಬಹುದಾದರೂ ಆಕೆ ಪ್ರಸಿದ್ಧಳಾದುದು 'ರಾಯಮ್ಮ'ಎಂಬ ಹೆಸರಿನಿಂದಲೇ ಎಂದು ತೋರುತ್ತದೆ. ಪತಿಯಂತೆ ಕರ್ಮಮಾರ್ಗವನ್ನೊಪ್ಪದ ನೈಷ್ಠಿಕ ಭಕ್ತಿಯ ಶರಣೆ ರಾಯಮ್ಮ ಕಲ್ಯಾಣದಲ್ಲಿ ಬಂದು ನೆಲೆಸಿದ ನಂತರ ವಚನರಚನಾ ಕಾರ್ಯವನ್ನು ಕೈಗೆತ್ತಿಕೊಂಡಿರಬೇಕು.

ವಚನಗಳು

ಇಲ್ಲಿಯವರೆಗೆ ರಾಯಮ್ಮನ ಒಂದು ನೂರಾ ಹದಿನಾರು[5] ವಚನಗಳು ಪ್ರಕಟಗೊಂಡಿವೆ. ಈಕೆಯ ವಚನಗಳ ಅಂಕಿತ 'ಅಮುಗೇಶ್ವರ ಲಿಂಗ' ಸಂಖ್ಯಾ ದೃಷ್ಟಿಯಿಂದ ರಾಯಮ್ಮನ ವಚನಗಳ ಪ್ರಮಾಣ ಹೆಚ್ಚಾಗಿದ್ದರೂ, ಸತ್ವದ ದೃಷ್ಟಿಯಿಂದ ನೋಡಿದಾಗ ಅಕ್ಕಮಹಾದೇವಿಯ ವಚನಗಳಲ್ಲಿರುವ ಭಕ್ತಿಯ ಮಾರ್ದವತೆಯಾಗಲಿ, ಮುಕ್ತಾಯಕ್ಕನ ವಚನಗಳಲ್ಲಿರುವ ಬುದ್ಧಿಯ ಪ್ರಖರತೆಯಾಗಲಿ ಕಂಡುಬರುವದಿಲ್ಲ. ಅನೇಕ ಕಡೆಗಳಲ್ಲಿ ಶರಣರ ವಚನಗಳ ಪ್ರಭಾವ ಎದ್ದು ಕಾಣುತ್ತದೆ. ಹಲವೆಡೆ ಪುನರಾವೃತ್ತಿ ವೈದೋರಿದೆ. ಇವಳ ವಚನಗಳಲ್ಲಿ ಎದ್ದು ಕಾಣುವ ವಿಶೇಷವೆಂದರೆ ಕಂಡದ್ದನ್ನು ಕಂಡಂತೆ ಆಡುವ ಬಿಚ್ಚುನುಡಿ. ಸಮಾಜವನ್ನು. ತೋರಿಕೆಯ ಭಕ್ತರನ್ನು, ನಿಷ್ಠೆಯಿಲ್ಲದ ಆಚಾರವಂತರನ್ನು ಬಡಿದೆಬ್ಬಿಸುವ ಚಾಟಿಏಟಿನಂತ ಹಮಾತುಗಳು.ಒಂದೆ ಮಾತಿನಲ್ಲಿ ಹೇಳುವದಾದರೆ, ರಾಯಮ್ಮ ಆಡುವುದು 'ಹಸಿಗೋಡೆಗೆ ಹರಳಿಟ್ಟಂತಹ' ಮಾತುಗಳನ್ನು.

ಸಾಧನೆಯ ಆರಂಭದಲ್ಲಿ ಭಕ್ತನಲ್ಲಿರಬಹುದಾದ ಚಿತ್ತಚಾಂಚಲ್ಯ. ಅದನ್ನು ಮೀರಿ ತನ್ನ ಗುರಿ ತಲುಪಬೇಕೆಂಬ ಮಾನಸಿಕ ಹಂಬಲ. ರಾಯಮ್ಮನಲ್ಲೂ ಗೋಚರವಾಗಿದೆ. "ಹೆದರದಿರು ಮನವೆ ಹಿಮ್ಮೆಟ್ಟದಿರು ಮನವೆ ಹಿಡಿದ ಛಲವ ಬಿಡದಿರು ಮನವೆ" ಎಂದು ತನ್ನನ್ನೆ ತಾನು ಸಂತೈಸಿಗೊಳ್ಳುತ್ತಾಳೆ ರಾಯಮ್ಮ. "ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ" ಎಂದು ಬಸವಣ್ಣನವರು ಸಂಗಯ್ಯನಲ್ಲಿ ಅಂಗಲಾಚಿ

1. ಕನ್ನಡ ಜಾನಪದ ಗೀತೆಗಳು ಡಾ. ಎಸ್. ಗದ್ದಗಿಮಠ ಪು. 298
2. ,, ,, ,, ,, ,, ,, ,, 301
3, ,, ,, ,, ,, ,, ,, ,, 301
4. ಅಮುಗಿ ದೇವಯ್ಯಗಳ ಸಾಂಗತ್ಯ: ಶಿವಲಿಂಗಕವಿ ,, 115
(ಸಾಂಗತ್ಯ ಕವಿಗಳು) (ಹಂಪನಾ)
5. ಶಿವಶರಣೆಯ ರ ವಚನಗಳು: ಡಾ. ಆರ್. ಸಿ. ಹಿರೇಮಠ. ಪು. 411-455

ಬೇಡಿಕೊಂಡಂತೆ, ರಾಯಮ್ಮನೂ

ಎನ್ನ ದೇಹವ ದಗ್ಧವ ಮಾಡಯ್ಯಾ
ಎನ್ನ ಕಾಯದಲ್ಲಿಪ್ಪ ಕರ್ಮವ ತೊಡೆಯಯ್ಯಾ
ಎನ್ನ ಭಾವದಲ್ಲಿಪ್ಪ ಭ್ರಮೆಯ ಜಱಿಯಯ್ಯಾ
ನಾ ಹಿಡಿದ ಛಲವ ಬಿಡದೆ ನಡೆಸಯ್ಯಾ ಅಮುಗೇಶ್ವರ1

ಎಂದು ಹೇಳುತ್ತ, ತನ್ನ ತನು ಮನ ಪರಿಶುದ್ಧಗೊಳಿಸಿ ತನ್ನ ಛಲವನ್ನು ಮೆರೆಸಬೇಕೆಂದು ಪರಮಾತ್ಮನಲ್ಲಿ ಮೊರೆಯಿಟ್ಟಿದ್ದಾಳೆ. ಮುಂದೆ ಆಕೆಯ ಸಾಧನೆ ಗಟ್ಟಿಗೊಳ್ಳುತ್ತ ಹೋಗಿ, ಆತ್ಮವಿಶ್ವಾಸ ಕುದುರಿದಾಗ, ನಿಜವಾದ ಅರಿವು ಸಾಧಿತವಾದ ಮೇಲೆ ಗುರುಲಿಂಗ ಜಂಗಮದ ಆವಶ್ಯಕತೆಯೂ ಇಲ್ಲವೆನ್ನುವಷ್ಟರ ಮಟ್ಟಿಗೆ ಆಕೆಯಲ್ಲಿ ಶ್ರದ್ಧಾ ಭಕ್ತಿ ನೆಲೆಗೊಳ್ಳುತ್ತದೆ. ಅದನ್ನೆ ರಾಯಮ್ಮ "ಅಱುವುಳ್ಳವಂಗೆ ಗುರುವಿನ ಹಂಗೇಕೆ? ಅಱುವುಳ್ಳವಂಗೆ ಲಿಂಗದ ಹಂಗೇಕೆ? ಅಱುವುಳ್ಳವಂಗೆ ಜಂಗಮದ ಹಂಗೇಕೆ?" ಎಂದು ಪ್ರಶ್ನಿಸುತ್ತಾಳೆ. "ತನ್ನ ತಾನು ಅಱಿವವಂಗೆ ಏಣಾಂಕನ ಶರಣರ ಸಂಗವೇಕೆ?"ಎಂದು ಕೇಳುತ್ತಾಳೆ. ಸಾಧನೆಯ ಆರಂಭದಲ್ಲಿ ಭಕ್ತನಿಗೆ ಗುರುಲಿಂಗ ಜಂಗಮದ ಆವಶ್ಯಕತೆಯಿದೆಯಾದರೂ, ಸಾಧನೆಯಲ್ಲಿ ಸಿದ್ಧಿಯನ್ನು ಸಾಧಿಸಿ ತನ್ನ ತಾನರಿದು ನಿಜವಾದ ಅರಿವು ಸಾಧಿಸಿಕೊಂಡ ಮೇಲೆ ಗುರುಲಿಂಗ ಜಂಗಮರ ಅನುಗ್ರಹ ಬೇಕಿಲ್ಲವೆಂಬುದು ಶರಣೆಯ ಮತ. ಇಷ್ಟೆ ಅಲ್ಲ. ಬಹಿರಂಗ ಅಂತರಂಗ ಶುದ್ಧವಾದ ಭಕ್ತನಿಗೆ ಪುನಃ ದೀಕ್ಷೆಯೂ ಬೇಕಿಲ್ಲ ಎಂದು ವಾದಿಸುತ್ತಾಳೆ.

ಅಂಗಕ್ಕಾಚಾರ ಮನಕ್ಕೆ ಜ್ಞಾನ ಸಮರಸಾದ್ವೈತವಾದ ಮತ್ತೆ
ಪುನರಪಿ ಪುನರ್ದೀಕ್ಷೆಯುಂಟೆ?
ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಉಂಟೆ ಕೋಲು?
ಭವಿಗೆ ನೇಮವ್ರತ ಪುನರ್ದೀಕ್ಷೆಯಲ್ಲದೆ ಭಕ್ತರಿಗುಂಟೆ
ವ್ರತತಪ್ಪಿ ಅನುಗ್ರಹವಿಡಿದ ನರಕಿಗಳಿಗೆ
ಮುಕ್ತಿ ಇಲ್ಲ ಎಂದೆ ಅಮುಗೇಶ್ವರ ಲಿಂಗದಲ್ಲಿ2

ನೈತಿಕ ಜೀವನದಿಂದಾಗಿ ಅಂತರಂಗ, ಬಹಿರಂಗಗಳೆರಡರ ಪರಿಶುದ್ಧತೆಯನ್ನು ಸಾಧಿಸಿಕೊಳ್ಳಬಹುದೆಂದೂ, ಆಂತರಿಕ ಶುದ್ಧಿಯೇ ಎಲ್ಲ ಸಾಧನೆಗೂ ಮೂಲ ತಳಹದಿಯೆಂದೂ ಗ್ರಹಿಸಿದ ಶರಣೆ ಅದಕ್ಕೆ ವಿಶೇಷ ಪ್ರಾಧಾನ್ಯತೆ ಕೊಟ್ಟಿದ್ದಾಳೆ. ಅರಿವು ಸಾಧಿಸಿಕೊಂಡು ಶರಣನೆನಿಸಿದ ಮೇಲೆ ಲೋಕದ ಮಾನವರ ಹೊಗಳಿಕೆ, ತೆಗಳಿಕೆಗೆ ಕಿವಿಗೊಡದೆ ಮಾನಸಿಕ ಶುಚಿತ್ವವನ್ನು ಉಳಿಸಿಕೊಂಡು ಬರಬೇಕೆಂದೂ, "ಸಾಧನೆಯ ಬಲ್ಲೆನೆಂದು ಹಾದಿಹೋಕರ ಕೂಡೆ ಹೋರದಿರಬೇಕು. ಬೀದಿಯಲ್ಲಿ ಸಿಂಪು ಬೀಱದಿರಬೇಕು" ಎಂದೂ ಹೇಳಿದ್ದಾಳೆ.

ರಾಯಮ್ಮ ಪ್ರತಿಪಾದಿಸಿದ ಇನ್ನೊಂದು ಬಹುಮುಖ್ಯವಾದ ವಿಷಯವೆಂದರೆ

1. ಶಿವಶರಣೆಯರ ವಚನಗಳು ಡಾ. ಆರ್. ಸಿ. ಹಿರೇಮಠ ವ. 6 ಪು. 412
2, " " " " ವ. 44 " 426

ವಿರಕ್ತಿ ವಿಚಾರ. ಅನೇಕ ವಚನಗಳಲ್ಲಿ ವಿರಕ್ತರ ಲಕ್ಷಣಗಳನ್ನು ಸಾದ್ಯಂತವಾಗಿ ವಿವರಿಸುತ್ತ ಹೋಗಿದ್ದಾಳೆ. "ವಿರಕ್ತನಾದ ಬಳಿಕ ವಿಷಯಕ್ಕೆ ದೂರನಾಗಿರಬೇಕು" ಎಂದು ಹೇಳುತ್ತ "ಸಜ್ಜೆ ಶಿವಧಾರವ ಧರಿಸಿ ಒರ್ವನಾಗಿ ಒಂದುವಸ್ತ್ರವಕಟ್ಟಿ ಸಂತೋಷಿಯಾಗಿರಬಲ್ಲಡೆ ವಿರಕ್ತನೆಂಬೆನು", "ಆಚಾರಸಹಿತವಾಗಿ ಭಕ್ತಿ ಭಿಕ್ಷವ ತೆಗೆದುಕೊಂಡು ಉಪಾಧಿರಹಿತವಾಗಿಪ್ಪ ವಿರಕ್ತನ ತೋರಿಬದುಕಿಸಯ್ಯಾ" ಎಂದು ತನ್ನ ಆರಾಧ್ಯದೈವವನ್ನು ಕೇಳಿಕೊಂಡಿದ್ದಾಳೆ. ವಿರಕ್ತನ ಪರಿ "ವಾಯುಬೀಸದ ಉದಕದಂತಿರಬೇಕು, ಅಂಬುಧಿಯೊಳಗೆ ಕುಂಭ ಮುಳುಗಿದಂತಿರಬೇಕು; ದರಿದ್ರಂಗೆ ನಿಧಾನ ಸೇರಿದಂತಿರಬೇಕು" ಎಂದು ಪಟ್ಟಿಕೊಡುತ್ತಾಳೆ. ಅರಿಷಡ್ವರ್ಗಗಳನ್ನು ಗೆದ್ದು, ಅಷ್ಟಮದಗಳನ್ನು ಮೆಟ್ಟಿ, ಇಷ್ಟಲಿಂಗವನರಿದು ಆಚರಿಸಬಲ್ಲ ನಿತ್ಯತೃಪ್ತನೇ ನಿಜವಾದ ವಿರಕ್ತನೆಂಬುದು ರಾಯಮ್ಮನ ಅಭಿಮತ. ಅಂತೆಯೆ ಉದರಪೋಷಣೆಗಾಗಿ ವೇಷತೊಟ್ಟು ತಿರುಗುವ ತೋರಿಕೆಯ ಭಕ್ತರನ್ನು ಕಂಡಾಗ ಸಿಡಿದೇಳುತ್ತಾಳೆ.

ಹೊನ್ನ ಬಿಟ್ಟಡೇನು ಹೆಣ್ಣ ಬಿಟ್ಟಡೇನು ಮಣ್ಣ ಬಿಟ್ಟಡೇನು
ವಿರಕ್ತನಾಗಬಲ್ಲನೆ?
ಆದ್ಯರ ವಚನಂಗಳ ಹತ್ತು ಸಾವಿರದ ಲೆಖ್ಖವಿಲ್ಲದೆ ಓದಿದಡೇನು
ನಿತ್ಯರಾಗಬಲ್ಲರೆ?
ಮಂಡೆಯ ಬೋಳಿಸಿಕೊಂಡು ಅಂದಘಂದಕ್ಕೆ ತಿರುಗುವ
ಜಗಭಂಡರ ಮೆಚ್ಚುವನೇ ಅಮುಗೇಶ್ವರ ಲಿಂಗವು?[1]

ಎಂದು ತೋರಿಕೆಯ ವಿರಕ್ತರನ್ನು ಖಂಡಿಸಿದ ಶರಣೆ "ಕಾವಿ ಕಾಷಾಂಬರವ ಹೊದ್ದು ಕಾಯವಿಕಾರಕ್ಕೆ ತಿರುಗುವ ಕರ್ಮಿಗಳ ಮುಖವ ನೋಡಲಾಗದು" ಎಂದು ಜರಿಯುತ್ತಾಳೆ. ಹೆಣ್ಣು ಹೊನ್ನು ಮಣ್ಣು ಮೂರೂ ಬಿಟ್ಟು ವಿರಕ್ತನಾಗಿ ಮತ್ತೆ ಈ ಮೂರರ ಪಾಶಕ್ಕೊಳಗಾದ ಗುರುವಿಗೆ ಎರಗಿದೆನಾದಡೆ ಅಘೋರ ನರಕ ತಪ್ಪದು ಎನ್ನುವ ರಾಯಮ್ಮ ವಿರಕ್ತನಾದ ಬಳಿಕ ಮತ್ತೆ ಲೌಕಿಕ ಪಾಶಕ್ಕೊಳಗಾಗಕೂಡದೆಂಬ ದೃಢವಾದ ನಿಲುವನ್ನು ವ್ಯಕ್ತಪಡಿಸಿದ್ದಾಳೆ. ಧರ್ಮದ ಹೆಸರಿನಲ್ಲಿ ನಡೆಯುವ ವಿಕೃತಿ, ವಿಚಾರರಹಿತ ಸಂಪ್ರದಾಯ ಗೊಡ್ಡು ನಂಬಿಕೆಗಳನ್ನು ಉಚ್ಚಾಟಿಸಿ ಧರ್ಮದ ಮೂಲ ಸ್ವರೂಪವನ್ನು ಬೆಳಗಿಸುವ ಅನೇಕ ಸ್ಪಷ್ಟವಿಚಾರಗಳನ್ನು ರಾಯಮ್ಮನೂ ಪ್ರತಿಪಾದಿಸಿದ್ದಾಳೆ. "ಮಂಡೆಯ ಬೋಳಿಸಿಕೊಂಡು ತುಂಡುಗಂಬಳಿಯ ಹೊದ್ದವರ ನಂಬಲಾರೆ ನಚ್ಚಲಾರೆ" ಎಂದು ಖಂಡಿಸಿದ ಶರಣೆ ಗಡ್ಡಮಂಡೆ ಬೋಳಿಸಿಕೊಂಡವರು ಕಬ್ಬಲಿಗರ ಮಕ್ಕಳು, ಬತ್ತಲೆ ಇದ್ದವರೆಲ್ಲ ಕಂಚಿಗರ ಮಕ್ಕಳು ಎಂದು ಕಟೂಕ್ತಿಗಳನಾಡುತ್ತಾಳೆ. ಪುರಾತನರ ವಚನಗಳನ್ನು ತಮ್ಮ ಹೊಟ್ಟೆಯ ಪಾಡಿಗಾಗಿ ಬಳಸಿಕೊಳ್ಳುತ್ತಿದ್ದ ಜಂಗಮವೇಷದ ಸ್ವಾರ್ಥಿಗಳನ್ನು ಕಂಡಾಗ ಆಕೆಯ ನಾಲಿಗೆ ಹರಿತವಾಗುತ್ತದೆ; ಮಾತು ಮೊನಚಾಗುತ್ತದೆ. "ಆದ್ಯರ ವಚನಂಗಳ ಅಲ್ಲಿಗಲ್ಲಿಗೆ ಉಸುರಿ ಅನ್ನ ಕೂಳಿಗೆ ಹರಿದಾಡುವ" ಅಜ್ಞಾನಿಗಳು "ಬೆಟ್ಟದ ನೆಲ್ಲಿಯಕಾಯ ಪಟ್ಟಣಕ್ಕೆ ಹೊತ್ತುಕೊಂಡು ಹೋಗಿ ಹೊಟ್ಟೆಯ ಹೊರೆವವರಂತೆ", "ಉತ್ತಮ ತೇಜಿಯ ಹೆಸರು ಹೇಳಿ ಕಡಲೆಯ ತಿಂಬ

1. ಶಿವಶರಣೆಯರ ವಚನಗಳು ಸಂ. ಡಾ. ಆರ್. ಸಿ. ಹಿರೇಮಠ ವ. 97 ಪು. 448

ಗಾವಲಿಗರಂತೆ" ಇಷ್ಟೆ ಅಲ್ಲ, "ಅತ್ತೆಯ ಹೆಸರ ಹೇಳಿ ಹೊಟ್ಟೆ ಹೊರೆವ ತೊತ್ತಿನಂತೆ" ಎಂದು ಟೀಕಿಸಿದ್ದಾಳೆ. ಈ ಮಾತುಗಳನ್ನು ಗಮನಿಸಿದಾಗ, ಆ ಕಾಲದಲ್ಲೂ ಅನ್ಯರ ವಚನವನ್ನು ಊರೂರಲ್ಲಿ ಬಿತ್ತರಿಸಿ ತನ್ಮೂಲಕ ತಮ್ಮ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದ ಸ್ವಾರ್ಥಿಗಳಾದ ಸೋಮಾರಿ ಜಂಗಮರು ಇದ್ದಿರಬಹುದೆಂದು ತಿಳಿದು ಬರುತ್ತದೆ. ಅಂತೆಯೆ ಜ್ಞಾನವೆಂಬುದು ಚೀಲದೊಳಗೆ ತುಂಬಬಹುದಾದ ಜೀರಿಗೆಯೂ ಅಲ್ಲ, ಗಾಣದೊಳಗಿನ ಹಿಂಡಿಯೂ ಅಲ್ಲ; ಬೊಕ್ಕಣಕ್ಕೆ ತುಂಬುವ ಹುದುಳಿಯೂ ಅಲ್ಲ; ಭಕ್ತಿ ಜ್ಞಾನ ವೈರಾಗ್ಯ ಇವು ಕೇವಲ ಪ್ರಸಾರದಿಂದ ಲಭಿಸುವಂಥವುಗಳಲ್ಲ; ಸ್ವಪ್ರಯತ್ನ, ಸಾಧನೆಗಳಿಂದ ಮಾತ್ರ ಅರ್ಜಿಸಿಕೊಳ್ಳುವಂಥವುಗಳು ಎಂದು ವಿವರಿಸಿದ್ದಾಳೆ.

ವರ್ಣಾಶ್ರಮ ಧರ್ಮಪದ್ಧತಿಯಿಂದ ಸಮಾಜದಲ್ಲುಂಟಾದ ಜಾತಿಯ ವಿಷಮತೆಯನ್ನು ಹೋಗಲಾಡಿಸಿ, ಕುಲದ ಮದವನ್ನು ನಿರ್ನಾಮಮಾಡಿ ಮಾನವತೆಯ ಏಕತೆಯನ್ನು ಸಾಧಿಸುವದು ಶರಣ–ಶರಣೆಯರ ಮೂಲ ಆಶಯವಾಗಿತ್ತು. "ವೇದಶಾಸ್ತ್ರ ಆಗಮ ಪುರಾಣಗಳಲ್ಲಿ ಶ್ರುತಿ. ಸ್ಮೃತಿಗಳಲ್ಲಿ ನುಡಿವುದು ಪುಸಿ" ಎಂದು ವೈದಿಕ ಧರ್ಮವನ್ನು ವಿಡಂಬಿಸಿದ ರಾಯಮ್ಮ ಹುಟ್ಟಿನಿಂದ, ಕಾಯಕದಿಂದಲ್ಲದೆ, ವ್ಯಕ್ತಿಯ ಚಾರಿತ್ರ್ಯ, ನಡೆನುಡಿಗಳಿಂದ ಕುಲವನ್ನು ನಿರ್ಧರಿಸಬೇಕೆಂದು ಹೇಳಿದ್ದಾಳೆ. "ಜಾತಿ ಗೋತ್ರವನೆತ್ತಿ ನುಡಿಯಲೇಕೆ?" ಎಂದು ಕೇಳಿ, "ಮದ್ಯಮಾಂಸವ ಭುಂಜಿಸುವವರು ಅನಾಚಾರಿಗಳು. ಆವ ಕುಲವಾದಡೇನು. ಅಂಗದ ಮೇಲೆ ಲಿಂಗವುಳ್ಳವರೆಲ್ಲರು ಆಚಾರವುಳ್ಳವರೆಂಬೆನಯ್ಯಾ" ಎಂದು ಜಾತಿಭೇದವನ್ನು ಅಲ್ಲಗಳೆದಿದ್ದಾಳೆ.

ಅನುಭವ ಮಂಟಪದ ಹಿರಿಯ ಶರಣರು–ಶರಣೆಯರ ಬಗೆಗೆ ರಾಯಮ್ಮನಲ್ಲಿ ಅಪಾರವಾದ ಗೌರವವಿದೆ. ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭು, ಸಿದ್ಧರಾಮ, ಮೋಳಿಗೆಯಯ್ಯ, ಆಯ್ದಕ್ಕಿ ಮಾರಯ್ಯ, ಅಜಗಣ್ಣ, ಮಹಾದೇವಿಯಕ್ಕ ಮುಂತಾದವರನ್ನು ಸ್ಮರಿಸಿಕೊಂಡಿದ್ದಾಳೆ. "ಅಜಾತತತ್ತ್ವರು ತತ್ವಂಗಳ ಮೇಲೆ ನಿನ್ನ ಅಜಾತವರಿಲ್ಲ, ಎನ್ನುತ್ತ, "ಬಸವಣ್ಣಂಗೆ ಭಕ್ತಿಯ ತೋಜಲೆಂದು, ಚನ್ನಬಸವಣ್ಣಂಗೆ ಆಜುಸ್ಥಲವನರುಹಲೆಂದು" ಬಂದ ಪ್ರಣವಸ್ವರೂಪಿ ಅಲ್ಲಮಪ್ರಭುವಿನ ಹಿರಿಮೆಯನ್ನು ಸಾರಿದ್ದಾಳೆ.

ರಾಯಮ್ಮನ ವಚನಗಳಲ್ಲಿ ಕಾಣುವ ಇನ್ನೊಂದು ವೈಶಿಷ್ಟ್ಯಪೂರ್ಣವಾದ ಅಂಶವೆಂದರೆ, ವಿಷಯ ನಿರೂಪಣೆಯಲ್ಲಿ ಪಶುಪಕ್ಷಿ ಪ್ರಾಣಿಗಳ ಬಳಕೆ ಹೆಚ್ಚಾಗಿರುವುದು. "ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ? ಆಡಿನ ಮರಿ ಆನೆಯಾಗಬಲ್ಲುದೆ? ಸೀಳ ನಾಯಿ ಸಿಂಹದ ಮರಿಯಾಗಬಲ್ಲುದೆ? (ವ–೧೫ ಪು ೪೧೬), "ಉತ್ತಮ ತೇಜಿಯ ಮರಿಗೆ ಸುಪ್ಪತ್ತಿಗೆಯಲ್ಲದೆ ಕತ್ತೆಯ ಮರಿಗೆ ಸುಪ್ಪತ್ತಿಗೆಯ ಹಾಸುವರೆ?" (ವ. ೧೬ ಪು. ೪೧೭), "ಒಡೆಯನ ಕಂಡಡೆ ಬಡಿವುದಯ್ಯಾ ಬಾಲವನು ಸುಸಿ"(ವ ೩೪ ಪು ೪೨೩), "ವರಹ ಕುಕ್ಕುಟನ ಸರಿ ಎನ್ನಬಹುದೆ?" (ವ. ೧೦೬ ಪು ೪೩೫)—ಹೀಗೆ ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ತೋರಿಕೆಯ ಭಕ್ತರನ್ನು, ವೇಷಧಾರಿ ವಿರಕ್ತರನ್ನು ಕಟುವಾಗಿ ಟೀಕಿಸುವಲ್ಲಿ ಇಂತಹ ಹಲವಾರು ಉದಾಹರಣೆಗಳನ್ನು ಸಾಂಕೇತಿಕವಾಗಿ ಬಳಸಿಕೊಂಡಿದ್ದಾಳೆ ಶರಣೆ.

ಸಾಹಿತ್ಯಿಕ ದೃಷ್ಟಿಯಿಂದ ಗಮನಿಸಿದಾಗ, ರಾಯಮ್ಮನ ವಚನಗಳು ಮಹಾದೇವಿಯಕ್ಕನ ವಚನಗಳ ಮಟ್ಟಕ್ಕೆ ಏರದೆ ಹೋಗುತ್ತವೆ. ಅಕ್ಕನ ವಚನಗಳಲ್ಲಿ ಕಂಡು ಬರುವ ಭಾವಗೀತಾತ್ಮಕ ಸ್ಪರ್ಶವಾಗಲಿ, ಮೃದುಮಧುರ ಭಾವನೆಗಳ ಅಭಿವ್ಯಕ್ತಿಯಾಗಲಿ ಇಲ್ಲಿ ಆಸ್ಪದವಿಲ್ಲ. ವಿಡಂಬನೆ, ವ್ಯಂಗ್ಯೋಕ್ತಿಗಳೇ ಪ್ರಧಾನ ಅಂಶಗಳು. ಆದರೂ ಅಲ್ಲಲ್ಲಿ ಸುಂದರ ಸಾದೃಶ್ಯಗಳನ್ನುಳ್ಳ ಅಲಂಕಾರಗಳು, ಅರ್ಥಗರ್ಭಿತವಾದ ಗಾದೆಯ ಮಾತುಗಳು, ಸತ್ವಪೂರ್ಣವಾದ ನುಡಿಗಟ್ಟುಗಳು ಸೇರಿಕೊಂಡು ವಚನಗಳ ಗಾಂಭೀರ್ಯವನ್ನು ಹೆಚ್ಚಿಸಿವೆ. ಅರಿವು. 'ಮೂಗ ಕಂಡ ಕನಸಿನಂತೆ', ಜ್ಞಾನ. "ಕತ್ತೆಯ ಮನೆಯಲ್ಲಿ ಮಧುರವ ಸವಿದಂತೆ", ವಿರಕ್ತನ ಪರಿ, "ಹಿಂಡನಗಲಿದ ಮದಗಜ ಹಿಂಡ ಸೇರಿದಂತೆ", ವೇಷಧಾರಿಗಳು. "ಕುಂಜರನ ವೇಷದ ತೊಟ್ಟ ಹಂದಿಯಂತೆ" ಎಂದು ಹೇಳಿದಲ್ಲಿ ಲೋಕಾನುಭವದ ಸಾದೃಶ್ಯಗಳು, ಕಂಡುಂಡ ಅನುಭವಗಳು ಅಲಂಕಾರದ ರೂಪದಲ್ಲಿ ಅಭಿವ್ಯಕ್ತಿಪಡೆದಿವೆ.

"ಪಟ್ಟಣದ ಸೂಳೆಯಕೂಡೆ ಪರಬ್ರಹ್ಮವ ನುಡಿಯಲೇಕೆ? ಸಂತೆಗೆ ಬಂದವರ ಕೂಡೆ ಸಹಜವ ನುಡಿಯಲೇಕೆ" (ವ ೮೯ ಪು ೪೪೪), "ಪಸರವ ಹರಡುವರೆಲ್ಲ ರತ್ನದ ಬೆಲೆಯ ಬಲ್ಲರೆ? ಕುದುರೆಯ ಹಿಡಿದವರೆಲ್ಲ ರಾವುತಿಕೆಯ ಮಾಡಬಲ್ಲರೆ? "(ವ-೧೧೧ ಪು. ೪೫೩) "ಮಜ್ಜನವಣಿಯ ಕಂಡವಂಗೆ ಮರಣದ ಹಂಗುಂಟೆ? ಪರುಷವುಳ್ಳವಂಗೆ ಪಾಷಾಣದ ಹಂಗುಂಟೆ?"(ವ. ೧೧೪ ಪು ೪೫೪)ಈ ಮಾದರಿಯ ಅರ್ಥಪೂರ್ಣವಾದ, ಧ್ವನಿಪೂರ್ಣವಾದ ಗಾದೆಯ ರೂಪದ ಮಾತುಗಳ ಬಳಕೆಯಿಂದಾಗಿ ವಚನಗಳ ಸತ್ವ ಹೆಚ್ಚಿದೆ, ವಿಡಂಬನೆ ಸಾರ್ಥಕವೆನಿಸಿದೆ. ಒಟ್ಟಾರೆ 'ಇಷ್ಟಲಿಂಗ ತತ್ವ ಒಪ್ಪಿಕೊಂಡ' ರಾಯಮ್ಮನ ಧೈರ್ಯ, ಕೆಚ್ಚು, ಛಲ ಹಾಗೂ ನಿರ್ದಾಕ್ಷಿಣ್ಯ ಪ್ರವೃತ್ತಿಯನ್ನು ಆಕೆಯ ವಚನಗಳಲ್ಲೂ ಗುರ್ತಿಸಬಹುದು. "ಅವಳ (ಭಾಷೆಯ) ಒರಟುತನವೇ ಅವಳ ಅಭಿವ್ಯಕ್ತಿಗೆ ನಾವಿನ್ಯತೆಯನ್ನು ತರುತ್ತದೆ"1 ಎಂಬ ಡಾ. ಎಂ. ಚಿದಾನಂದ ಮೂರ್ತಿಯವರ ಮಾತನ್ನಿಲ್ಲಿ ಸ್ಮರಿಸಬಹುದು.

ಅಕ್ಕಮ್ಮ

ಶರಣೆಯರ ಸಮೂಹದಲ್ಲಿ'ರೆಮ್ಮವ್ವೆ'ಎಂಬ ಒಂದೇ ಹೆಸರಿನವರು ಐದುಜನರಿದ್ದು ಅವರಲ್ಲಿ ಒಬ್ಬ ಶರಣೆಮಾತ್ರ ಅಕ್ಕಮ್ಮ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ.ಹೆಚ್ಚಿನ ಸಂಖ್ಯೆಯ ವಚನರಚನೆ ಮಾಡಿದವರಲ್ಲಿ ಪ್ರಸ್ತುತ ಅಕ್ಕಮ್ಮನೂ ಒಬ್ಬಳು. ಈಕೆಯ ಜೀವನ ವಿಷಯ, ವೃತ್ತಿ ಇತ್ಯಾದಿಗಳ ಬಗೆಗೆ ವಿಶೇಷವಾಗಿ ಏನೂ ತಿಳಿದು ಬಂದಿಲ್ಲ. ಬಸವಾದಿ ಶರಣರ ಸಮಕಾಲೀನೆಯಾಗಿದ್ದುದರಿಂದ ಈಕೆಯ ಕಾಲ ಕ್ರಿ. ಶ. ಸು. ೧೧೬೦ ಎಂದು ಗ್ರಹಿಸಲಾಗಿದೆ. ಅಕ್ಕಮ್ಮನ ವಿಷಯವಾಗಿ ಹೆಚ್ಚಿನ ಸಂಗತಿಗಳು ತಿಳಿದುಬಾರದ್ದರಿಂದ ವಚನಗಳನ್ನು ಆಧರಿಸಿಯೇ ಆಕೆಯ ಸಾಧನೆಯ ಮಟ್ಟ, ಸ್ವಭಾವಾದಿಗಳನ್ನು ಗುರ್ತಿಸಬೇಕಾಗುತ್ತದೆ. ಬಹುಶಃ ಈಕೆ ಸಾಮಾನ್ಯ ವರ್ಗದಿಂದ ಬಂದಿರಬಹುದೆಂದೂ, ಸಂಸಾರದ ಬಂಧನಕ್ಕೆ ಸಿಲುಕದೆ ಒಬ್ಬಂಟಿಗಳಾಗಿ, ಸ್ವತಂತ್ರಳಾಗಿ, ಬದುಕಿರಬೇಕೆಂದು ಊಹಿಸಲಾಗಿದೆ. "ಅಕ್ಕಮ್ಮನ ವಚನಗಳು ಏಕಸ್ಥಲ ಪ್ರಧಾನವಾಗಿದ್ದು".

1. ವಚನ ಸಾಹಿತ್ಯ : ಡಾ. ಎಂ. ಚಿದಾನಂದ ಮೂರ್ತಿ ಪು. 148

"ಮಾಹೇಶ್ವರ ಸ್ಥಲದ ನಿಷ್ಠೆಯನ್ನು ಹೆಚ್ಚಾಗಿ ಪ್ರಕಟಿಸುತ್ತವೆ." "ಮಾಹೇಶ್ವರ ಸ್ಥಲದ ಸ್ವಭಾವ ಲಕ್ಷಣಗಳೆಲ್ಲವೂ ಗೋಚರವಾಗುತ್ತವೆ"1 ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಮಾಹೇಶ್ವರ ಸ್ಥಲ ನೈಷ್ಠಿಕಭಕ್ತಿ ಪ್ರಧಾನವಾದುದು. ಅಂಥ ನೈಷ್ಠಿಕಭಕ್ತಿ ಅಕ್ಕಮ್ಮನವಚನಗಳಲ್ಲಿ ಎದ್ದು ಕಾಣುತ್ತದೆ. ವ್ರತ ಆಚಾರಗಳನ್ನು ತನ್ನ ಬದುಕಿನ ಹಾಸು ಹೊಕ್ಕನ್ನಾಗಿ ಮಾಡಿಕೊಂಡ ಶರಣೆ ವ್ರತಭ್ರಷ್ಟರನ್ನು ಆಚಾರ ಹೀನರನ್ನು ತೀರ ಅಸಹ್ಯವಾಗಿ ಕಂಡುದಲ್ಲದೆ ವೇಷಧಾರಿಗಳನ್ನು ಬಲವಾಗಿ ಖಂಡಿಸುತ್ತಾಳೆ. ಎಂಥ ಪ್ರಸಂಗದಲ್ಲೂ ಹಿಡಿದ ವ್ರತ ಆಚಾರಗಳನ್ನು ಬಿಡದ ಛಲ, ತನ್ನ ಗುರಿಯನ್ನು ಈಡೇರಿಸಿ ಕೊಳ್ಳುವ ಧೈರ್ಯ, ತಾಮಸ ಆಚಾರ ವಿಚಾರಗಳನ್ನು ಅಲ್ಲಗಳೆಯುವ ಕೆಚ್ಚು–ಆಕೆಯ ವಚನಗಳಲ್ಲಿ ಎದ್ದು ಕಾಣುವ ವಿಶಿಷ್ಟವಾದ ಅಂಶಗಳು. ಅಕ್ಕಮ್ಮನ ಕಾಯಕ ವಿಚಾರವೂ ತಿಳಿದುಬರುವದಿಲ್ಲ. ನೀತಿವಂತಳೂ, ಆಚಾರವಂತಳೂ ಆದ ಶರಣೆ ಅಕ್ಕಮ್ಮ ಎಂದು ಮಾತ್ರ ಹೇಳಬಹುದು.

ವಚನಗಳು :

ಅಕ್ಕಮ್ಮನ ಒಂದುನೂರಾ ಐವತ್ತೊಂದು2 ವಚನಗಳು ಪ್ರಕಟಗೊಂಡಿವೆ. ಈಕೆಯ ವಚನಗಳ ಅಂಕಿತ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬುದು. ಆಚಾರ, ನಿಯಮ, ಶೀಲ ಇವುಗಳೇ ಅಕ್ಕಮ್ಮನ ವಚನಗಳ ಕೇಂದ್ರವಸ್ತು. ಅಕ್ಕಮ್ಮ ಮಾಹೇಶ್ವರ ಸ್ಥಲದ ಸಾಧಕಿಯಾದ್ದರಿಂದ ಭಕ್ತಸ್ಥಲದಲ್ಲಿರಬಹುದಾದ ಮಾನಸಿಕ ತುಯ್ತವಾಗಲಿ, ತನ್ನ ಮನಸ್ಸನ್ನು ಗಟ್ಟಿಗೊಳಿಸುವಂತೆ ಪರಮಾತ್ಮನಲ್ಲಿ ನಿವೇದಿಸುವ ರೀತಿಯಾಗಲಿ ಆಕೆಯ ವಚನಗಳಲ್ಲಿ ಕಂಡುಬರುವದಿಲ್ಲ. ಆ ಸ್ಥಿತಿಯನ್ನು ಮೀರಿ ಸ್ಥಿರಗೊಂಡಿದೆ ಶರಣೆಯ ಚಿತ್ತ. ಹಾಗಾಗಿ ವ್ರತ ಆಚರಣೆಯ ಕಡೆಗೆ ಆಕೆಯ ತೀವ್ರವಾದ ಆಸಕ್ತಿ ಪ್ರವಹಿಸಿದೆ.

ಶರಣರ ದೃಷ್ಟಿಯಲ್ಲಿ 'ಆಚಾರ' ಎಂಬ ಪದಕ್ಕೆ ಬಹಳ ವ್ಯಾಪಕಾರ್ಥ ಇದೆ. ನಿಜವಾದ ಅರ್ಥದಲ್ಲಿ ವ್ರತಾಚಾರವೆಂದರೇನು? ಎಂಬುದನ್ನು ಅಕ್ಕಮ್ಮ ಒಂದು ವಚನದಲ್ಲಿ ಸ್ಪಷ್ಟಪಡಿಸಿದ್ದಾಳೆ.

"ಪರಸ್ತ್ರೀ ಪರಧನಂಗಳಲ್ಲಿ ನಿಂದೆಗೆ ಒಡಲಾಗದಿದ್ದುದೆ ವ್ರತ;
ಸರ್ವಭೂತಹಿತನಾಗಿ ನಿಂದೆಗೆ ಒಡಲಾಗದಿದ್ದುದೆ ಆಚಾರ" ಎಂದು

ವ್ರತಾಚಾರದ ಮರ್ಮವನ್ನೆ ಬಿತ್ತರಿಸಿದ್ದಾಳೆ.

ವ್ರತವೆಂಬುದೇನು? ಮನವಿಕಾರಿಸುವದಕ್ಕೆ ಕಟ್ಟಿದ ಗೂತ್ತು.
ಜಗದಕಾಮಿಯಂತೆ ಕಾಮಿಸದೆ
ಜಗದ ಕ್ರೋಧಿಯಂತೆ ಕ್ರೋಧಿಸದೆ
ಜಗದ ಲೋಭಿಯಂತೆ ಲೋಭಿಸದೆ
ಮಾಯಾ ಮೋಹಂಗಳು ವರ್ಜಿತವಾಗಿ
ಮನಬಂದಂತೆ ಆಡದೆ ತನು ಬಂದಂತೆ ಕೂಡದೆ

---

1. ಶಿವಶರಣೆಯರ ವಚನಗಳು ಸಂ. ಡಾ. ಆರ್. ಸಿ. ಹಿರೇಮಠ ಪು. 410
2. ಶಿವಶರಣೆಯರ ವಚನಗಳು ಸಂ. ಡಾ. ಆರ್. ಸಿ. ಹಿರೇಮಠ ಪು. 459-529

ವ್ರತಭಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಂಗ.

ಎಂದು ಹೇಳಿ "ಜೀವ ನೋವ ಕಾಯಕ್ಕೆ ಜೀವವೆಂಬ ಬೆಳೆಗೆ ವ್ರತ ಭಾವವೆಂಬ ಬೇಲಿಯ ಸಾಗಿಸಿಕೊಳ್ಳಿ" ಎಂದು ಉಪದೇಶಿಸಿದ್ದಾಳೆ. ವ್ರತಸ್ಥನಾದ ಮೇಲೆ, "ಬೆಳ್ಳಿ, ಭಂಗಿ, ಸುಗ್ಗಿ, ಉಳ್ಳಿ ಮೊದಲಾದವುಗಳನ್ನು ಬಿಡಬೇಕು ಎಂದೂ, ವ್ರತಹೀನರನ್ನು ಬೆರೆಯಕೂಡದೆಂದೂ, ತನ್ನ ಮಡದಿ ಮಕ್ಕಳು, ಸಂಬಂಧಿಕರೂ ಆ ವ್ರತವನ್ನು ಅನುಸರಿಸುವಂತೆ ಮಾಡಬೇಕೆಂದೂ ನುಡಿಯುತ್ತಾಳೆ. "ವ್ರತವಿಲ್ಲದ ಗುರುವ ಪೂಜಿಸಲಾಗದು, ವ್ರತವಿಲ್ಲದ ಜಂಗಮದ ಪ್ರಸಾದವ ಕೊಳಲಾಗದು, ವ್ರತವಿಲ್ಲದವರ ಅಂಗಳವ ಮೆಟ್ಟಲಾಗದು" ಎಂದು ವ್ರತಾಚರಣೆಗೆ ಊನ ಬರದಂತಹ ನಿರ್ದಿಷ್ಟ ನಿಲುವನ್ನು ತಾಳಿದ್ದಾಳೆ. ಆಚಾರವೆಂದರೆ ಯಾಂತ್ರಿಕವಾದ ನೈತಿಕನಿಯಮಗಳ ಅಥವಾ ಧಾರ್ಮಿಕ ವಿಧಿ ವಿಧಾನಗಳ ಅನುಸರಣೆಯಲ್ಲ. ಮಾನಸಿಕ ಸಿದ್ಧಿಯನ್ನು ಸಾಧಿಸಿಕೊಳ್ಳಬೇಕು. ಅಂಗಕ್ರಿಯೆಗಳು ಲಿಂಗಕ್ರಿಯೆಗಳಾಗುವಂತೆ ಅಂತರಂಗದ ಅರಿವು ಮತ್ತು ಅರಿವಿನ ಆಚರಣೆಯನ್ನು ಸಮನ್ವಯಿಸಿಕೊಳ್ಳಬೇಕೆಂಬುದೇ ಅಕ್ಕಮ್ಮನ ಅಭಿಪ್ರಾಯ. ವ್ರತ ಆಚರಣೆಗಳಲ್ಲಿ ಶ್ರದ್ಧೆ ಇರಬೇಕೆಂದೂ, ಅರಿತು ಆಚರಿಸಿದಾಗಲೇ ಆ ಆಚರಣೆ ಬ್ರಹ್ಮಮಯವಾಗುವದೆಂದೂ ನಂಬಿದ ಶರಣೆ. ಅರಿವಿಲ್ಲದ ಆಚರಣೆ,ಅಜ್ಞಾನದ ಕರ್ಮಗಳ ಬಂಧನದಲ್ಲಿ ಸಿಲುಕಿದವರನ್ನು, ಅಹಂಭಾವಿಗಳಾದ ಹಿರಿಯರನ್ನು ಕಂಡಾಗ ಅಬ್ಬರಿಸುತ್ತಾಳೆ.

ಬತ್ತಲೆಯಿದ್ದವರೆಲ್ಲ ಕತ್ತೆಯ ಮರಿಗಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು? ಅರಿವೇ ಮುಖ್ಯವಯ್ಯ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ[1]

ಎಂದು ವೇಷಧಾರಿಗಳನ್ನು ಟೀಕಿಸುತ್ತಾಳೆ. ಈ ಮಾತುಗಳಲ್ಲಿ ಜೈನಯತಿಗಳಲ್ಲಿ ಶೈವ ವಿರಕ್ತರನ್ನು ಟೀಕಿಸಿರುವುದು ಧ್ವನಿತವಾಗುತ್ತದೆ. "ವೇಷವೆಲ್ಲಿರದು? ಸೂಳೆಯಲ್ಲಿ ಡೊಂಬರಲ್ಲಿ, ಬೈರೂಪಿಗಳಲ್ಲಿ ಇರದೆ? ವೇಷವ ತೇಜಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದು?" ಎಂದು ವಿಡಂಬಿಸುತ್ತಾಳೆ. "ಹೋತಿನ ಗಡ್ಡದಂತೆ ಗಡ್ಡದ ಹಿರಿಯರು ನೋಡಾ" ಎಂದು ಅನಾಚಾರಿಗಳಾದ ಗರ್ವಿಷ್ಠ ಹಿರಿಯರ ಹಿರಿಯತನವನ್ನು ಖಂಡಿಸುತ್ತಾಳೆ. "ಅರಿತು ಮಾಡುವ ಶೀಲ ಮುಕ್ತಿಯ ಮೂಲ" ಎಂದು ಚೆನ್ನಬಸವಣ್ಣ ಹೇಳಿದಂತೆ ಸಾಧನೆಗೆ ಸಹಾಯಕವಾದ ಶ್ರದ್ಧೆಯನ್ನು ಅರಿವಿನಿಂದ ಆವೃತವಾದ ಆಚರಣೆಯನ್ನು ಪುರಸ್ಕರಿಸಿ ಅವಿಚಾರದ ಅಂಧಶ್ರದ್ಧೆಯನ್ನು ಅಲ್ಲಗಳೆದಿದ್ದಾಳೆ.

ಧರ್ಮದ ಹೆಸರಿನಲ್ಲಿ ಜೀವನಕ್ಕೆ ವಿಮುಖವಾಗುವದನ್ನು ಒಪ್ಪದೆ, ವ್ಯಕ್ತಿ ಬೆವರು ಸುರಿಸಿ ದುಡಿದು ತಿನ್ನುವ ಹಕ್ಕನ್ನು ಪಡೆದುಕೊಳ್ಳಬೇಕೆಂದು ಶರಣರು–ಶರಣೆಯರು ಸೂಚಿಸಿದ್ದಾರೆ. "ಪಾಪಿಯಧನ ಪ್ರಾಯಶ್ಚಿತ್ತಕ್ಕೆ" ಆದರೆ " ಸತ್ಯಶುದ್ಧ ಕಾಯಕದಿಂದ

1 ಶಿವಶರಣೆಯರ ವಚನಗಳು ಡಾ. ಆರ್. ಸಿ. ಹಿರೇಮಠ ವ. 151 ಪು. 528

ಬಂದ ಕಾರೆಯ ಸೊಪ್ಪಾದರೂ ಚಂದೇಶ್ವರ ಲಿಂಗಕ್ಕೆ ಅರ್ಪಿತ," ಎಂಬುವೆ ಕಾಯಕ ತತ್ವದ ಮೂಲ ಉದ್ದೇಶ. ಒಂದು ವಚನದಲ್ಲಿ ಅಕ್ಕಮ್ಮ ಇಂತಹ ಕಾಯಕ ತತ್ವದ ರಹಸ್ಯವನ್ನು ಗುರ್ತಿಸಿದ್ದಾಳೆ.

ಖಂಡಿತ ಕಾಯಕದ ವೃತ್ತಾಂಗಿಯ ಮಾಟದ ಇರವೆಂತೆಂದಡೆ
ಕೃತ್ಯದ ನೇಮದ ಸುಯಿದಾನದ ಅಚ್ಚೊತ್ತಿದಂತೆ ತಂದು
ಒಡೆಯರು ಭಕ್ತರು ತನ್ನ ಮಡದಿ ಮಕ್ಕಳು ಸಹಿತವಾಗಿ ಒಡಗೂಡಿ
ಎಡೆಮಾಡಿ ಗಡಿಗೆ ಭಾಜನದಲ್ಲಿ ಮತ್ತೊಂದೆಡೆಗೆ ಈಡಿಲ್ಲದಂತೆ
ಬಿಡು ಮುಡಿಯನಱಿಯದೆ
ಮತ್ತೆ ಇರುಳೆಡೆಗೆಂದಿರಿಸದೆ ಹಗಲೆಡೆಯ ನೆನೆಯದೆ
ಇಂದಿಗೆ ನಾಳಿಗೆ ಎಂಬ ಸಂದೇಹಮಂ ಬಿಟ್ಟು
ಮುಂದಣ ಕಾಯಕ ಅಂದಂದಿಗೆ ಉಂಟು ಎಂಬುದನಱಿತು
ಬಂದುದ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ
ಸದಾನಂದದಲ್ಲಿಪ್ಪ. ಭಕ್ತನಂಗಳ ಮಂಗಳಮಯ ಕೈಲಾಸ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದ ಬೆಳಕು2

ಶರಣರು 'ಕಾಯಕ'ಕ್ಕೆ ಕೊಟ್ಟ ಅರ್ಥವ್ಯಾಪ್ತಿಯನ್ನೆಲ್ಲ ಪ್ರತಿಬಿಂಬಿಸುತ್ತದೆ ಈ ವಚನ. ಅಂದಿನ ಕಾಯಕ ಅಂದಿಗೆ. ಇಂದಿನ ಹಣ ನಾಳೆಗೆ ತಂಗುಳ. ಅದನ್ನು ಅಂದೇ ಸದ್ವಿನಿಯೋಗ ಮಾಡಬೇಕು, ದಾಸೋಹ ಮಾಡಿ ವ್ಯಯಿಸಬೇಕು ಎಂದು ಹೇಳುವ ಅಕ್ಕಮ್ಮನ ಅಭಿಪ್ರಾಯವನ್ನು ಗಮನಿಸಿದರೆ 'ಅಸಂಗ್ರಹ ತತ್ವ'ವನ್ನು ಆಗಲೆ ಶರಣ-ಶರಣೆಯರು ಮನಗಂಡಿದ್ದರೆಂದು ಹೇಳಬೇಕಾಗುತ್ತದೆ. ಕಾಯಕ ವಿಚಾರ ವಿವರಿಸು ವಲ್ಲಿ ಅಕ್ಕಮ್ಮ ಅಸಿ, ಮಸಿ, ವಾಣಿಜ್ಯ, ಪಾದತ್ರಾಣ, ಪಹರಿ, ಬೊಕ್ಕಸ, ಬಿಯಗ ಮುಂತಾದ ಕೆಲ ಕಾಯಕಗಳ ಹೆಸರುಗಳನ್ನು, ಗುಂಡು, ಬಂಧನ, ಕಲಕೇತ, ಯಾಚ ಕಪಗುಡಿ, ಪರಿಹಸಕ ಮುಂತಾದ ಜಾನಪದ ಕಾಯಕಗಳನ್ನೂ ಉಲ್ಲೇಖಿಸಿದ್ದಾಳೆ.

ರಾಯಮ್ಮನಂತೆ ಅಕ್ಕಮ್ಮನೂ ತನ್ನ ವಚನಗಳ ನಿರೂಪಣೆಯಲ್ಲಿ ಅನೇಕ ಪಶು ಪಕ್ಷಿ ಪ್ರಾಣಿಗಳನ್ನು ಉದಾಹರಿಸಿದ್ದಾಳೆ.

"ಮೂಷಕ ಮಾರ್ಜಾಲ ಮಕ್ಷಿಕ ಇವು ಮೊದಲಾದ ಸಕಲ ಪ್ರಾಣಿಗಳಿಗೆ....."
(ಶಿ. ಶ. ವ. ೧೧೦-ಪು.೫೦೯)

"ಮೂಷಕ ವಿಹಂಗ ಕುಕ್ಕುಟ ಮಾರ್ಜಾಲ ಕುಕ್ಕುರ..."(ವ.೧೧೧-ಪು.೫೧೦)

"ಅಜ ಎಮ್ಮೆ ಹಾಲಬಿಟ್ಟಲ್ಲಿ ಹೇರಂಡವ ಬೆಳೆಯುಲಿಲ್ಲ...." (ವ. ೮ ಪು. ೪೬೦)

"ಅಕ್ಕಮ್ಮನ ವಚನಗಳಲ್ಲಿ ಕಾಣಬರುವ ಇನ್ನೊಂದು ವಿಶೇಷವೆಂದರೆ ಕೆಲ ವಸ್ತು ಪದಾರ್ಥಗಳ ಬಳಕೆ ಹೇರಳವಾಗಿರುವುದು.

"ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು ಅಡಕೆ ಫಲರಸ ದ್ರವ್ಯವ......"
(ವ. ೧ ಪು. ೪೫೯)

---

2. ಶಿವಶರಣೆಯರ ವಚನಗಳು ಡಾ. ಆರ್. ಸಿ. ಹಿರೇಮಠ ವ. 41 ಪು. 478

"ಬೆಳ್ಳಿ ಭಂಗಿ ನುಗ್ಗಿ ಉಳ್ಳಿ ಮೊದಲಾದವನೆಲ್ಲವ ಬಿಡಬೇಕು……"
(ವ. ೯೩ ಪು. ೫೦೨)

"ಕಾರ ಲವಣ ನಿಷೇಧವೆಂದು ಬಿಟ್ಟು……." (ವ. ೧೧೩–೫೧೧)

ಪ್ರತ್ಯಾಹಾರವನ್ನು ದೀರ್ಘವಾಗಿ ಚರ್ಚಿಸಿಕೊಂಡು ಬಂದ ಅಕ್ಕಮ್ಮ ಇಂತಹ ಉದಾಹರಣೆಗಳನ್ನು ನೀಡಿದ್ದಾಳೆ.

ಅಕ್ಕಮ್ಮನ ವಚನಗಳಲ್ಲಿ ಕಾವ್ಯಾಂಶವನ್ನು ಗುರುತಿಸಲುಹೋದರೆ, ಕೆಲ ಸಹಜ ಸುಂದರ ಅಲಂಕಾರಗಳು, ನುಡಿಗಟ್ಟುಗಳಂತಹ ಮಾರ್ಮಿಕ ಮಾತುಗಳಿಂದಲೆ ತೃಪ್ತಿ ಪಡಬೇಕಾಗುತ್ತದೆ.

"ಕೂಸಿಗೆ ಹಾವ ಕಚ್ಚಿಸಿಕೊಂಡು ಸಾವತೆರನಂತೆ", "ತೊಟ್ಟು ಬಿಟ್ಟ ಹಣ್ಣಿನಂತೆ" "ಎಲವನ ಮರನ ಕಾಯ್ದ ವಿಹಂಗನಂತೆ"–ಇಂತಹ ಸುಂದರ ಅಲಂಕಾರಗಳೂ ಇವೆ. "ಚಿನ್ನ ಒಡೆದರೆ ಕರಗಿದಡೆ ರೂಪಪ್ಪುದಲ್ಲದೆ, ಮುತ್ತು ಒಡೆದು ಕರಗಿದಡೆ ರೂಪಪ್ಪುದೆ?" (ವ. ೫೦ ಪು. ೪೮೨) "ಬೀಗಿ ಬೆಳೆದ ಹೊಲಕ್ಕೆ ಬೇಲಿಯ ಕಟ್ಟಿದಡೆ ಬೇಗೆಯುಂಟೆ?" (ವ. ೧೨೮ ಪು. ೫೧೭) "ತಾ ಮುಳುಗಿದ ಮತ್ತೆ ಸಮುದ್ರದ ಪ್ರಮಾಣ ತನಗೇನು?" ಇಂತಹ ಮಾರ್ಮಿಕವಾದ ಔಚಿತ್ಯ, ಪೂರ್ಣವಾದ ಮಾತುಗಳು ಮೈವೆತ್ತು ವಚನಗಳಿಗೆ ಮೆರಗನ್ನು ತಂದಿವೆ. ಒಟ್ಟಾರೆ ಶೀಲ, ವ್ರತ, ಆಚಾರ, ಹಾಗೂ ಏಕದೈವ ನಿಷ್ಠೆಗಳನ್ನು ಪ್ರತಿಪಾದಿಸುವುದೇ ಅಕ್ಕಮ್ಮನ ಮೂಲ ಉದ್ದೇಶ.

ಹೀಗೆ ಅನುಭವ ಮಂಟಪದಂತಹ ವಿಚಾರಗೋಷ್ಠಿಯಲ್ಲಿ ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ನಿಖರವಾಗಿ, ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ ಶರಣೆಯರಲ್ಲಿ ಪ್ರಸ್ತುತ 'ಅಮುಗೆ ರಾಯಮ್ಮ' ಹಾಗೂ 'ಅಕ್ಕಮ್ಮ' ಪ್ರಮುಖರಾಗಿದ್ದಾರೆ ಎಂದು ಹೇಳಬಹುದು.

ಗೊಗ್ಗವ್ವೆ ಮತ್ತು ಬೊಂತಾದೇವಿ

ಸರೋಜಿನಿ ಚವಲಾರ

ಗೊಗ್ಗವ್ವೆ

ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಅಮರಗಣಾಧೀಶ್ವರರ ಚರಿತ್ರೆ, ಶಿವಶರಣೆಯರ ಚರಿತ್ರೆ, ಅರವತ್ತು ಮೂರು ಶಿವಶರಣರ ಚರಿತ್ರೆಗಳು, ಶಿವ ಶರಣ ಕಥಾರತ್ನ ಕೋಶಗಳಲ್ಲಿ ಗೊಗ್ಗವ್ವೆಯ ಚರಿತ್ರೆ ಸಂಗ್ರಹವಾಗಿದೆ. ಶಿವಭಕ್ತ ದಂಪತಿಗಳ ಉದರದಲ್ಲಿ ಕೇರಳದೇಶದ ಅವಲೂರು ಎಂಬಲ್ಲಿ ಗೊಗ್ಗವ್ವೆ ಜನಿಸಿದಳು. ಕೊನೆಯವರೆಗೂ ಶಿವನ ಸೇವೆಯಲ್ಲಿರಬೇಕೆಂದು ಅವಳು ನಿರ್ಧರಿಸಿದಳು. ವಯಸ್ಸಿಗೆ ಬಂದ ಮಗಳ ಮದುವೆಯ ಪ್ರಯತ್ನದಲ್ಲಿರುವ ತಂದೆ ತಾಯಿಗಳಿಂದ ದೂರವಿರಲು ಗೊಗ್ಗೇಶ್ವರ ದೇವಾಲಯದಲ್ಲಿ ಅಡಗಿಕೊಳ್ಳುವಳೆಂಬಲ್ಲಿಯವರೆಗೆ ಅವಳ ಕಥೆಯನ್ನು ಎಲ್ಲ ಕವಿಗಳೂ ಒಪ್ಪಿದ್ದಾರೆ. ಮುಂದಿನ ಕಥೆಯು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ವಿವರವಾಗಿ ಬಂದಿದೆ.

ಗೊಗ್ಗವ್ವೆ ದೇವಾಲಯದಲ್ಲಿ ಅಡಗಿರುವದನ್ನು ತಿಳಿದು. ಅವಳ ಇಚ್ಛೆಯಂತೆ ಇರಗೊಡುವದಾಗಿ ತಂದೆ ತಾಯಿ ಮಾತುಕೊಡುತ್ತಾರೆ. ಶಿವಾಲಯಕ್ಕೆ ಹೋಗಿ ತುಪ್ಪದ ದೀಪ ಹಚ್ಚಿ ಕರ್ಪುರ ಅಗರು ಕುಮುಂಜನದಿಂದ ಧೂಪ ಹಾಕುವದೆ ಪೂಜೆ ಯೆಂದು ನಿಷ್ಠೆಯಿಂದ ನಿತ್ಯವು ಆಚರಿಸತೊಡಗುತ್ತಾಳೆ. ಶಿವನು ಸುಂದರ ಪುರುಷನ ವೇಷಧರಿಸಿ ಬಂದು 'ನನ್ನ ಸತಿಯಾಗು' ಎಂದಾಗ ಅವಳು ಒಪ್ಪದಿರುವುದನ್ನು ಕಂಡು ಹಿಂಸಿಸಲು ಮುಂದಾಗುತ್ತಾನೆ. ಆಗ ಗೊಗ್ಗವ್ವೆ 'ಶಿವನೆ' ಎಂದು ಉದ್ಗರಿಸುತ್ತಾಳೆ. ಶಿವನು ಅವಳ ಭಕ್ತಿಗೆ ಮೆಚ್ಚಿ 'ಇಚ್ಛೆಯೇನೆಂದು' ಕೇಳಿದಾಗ ಶಿವಭಕ್ತರ ಬಳಿಯಿದ್ದು ಭಕ್ತಿಯನ್ನು ಸಲ್ಲಿಸಲು ಬೇಡಿಕೊಳ್ಳುತ್ತಾಳೆ. ಆಗ ಶಿವನು ಅವಳಿಗೆ ಗುರುವಾಗಿ ವೀರ ಶೈವೋಪದೇಶಮಾಡಿ ಶಿವಭಕ್ತರಿಗೆ ಧೂಪವನ್ನರ್ಪಿಸುವ ಕಾಯಕವನ್ನು ಒಪ್ಪಿಸುತ್ತಾನೆ ಅದೇ ಕಾಯಕವನ್ನು ಅವಳು ಕಡೆತನಕ ಮಾಡಿದ ಕಾರಣ ಧೂಪದ ಗೊಗ್ಗವ್ವೆಯೆಂದು ಗುರುತಿಸಲ್ಪಟ್ಟಿದ್ದಾಳೆ.

ಕೊಡಗಲೂರ ದೊರೆ ಚಾರಮರಾಯನು ಗೆಳೆಯ ನಂಜಣ್ಣನನ್ನು ಶಿವನು ಕೈಲಾಸಕ್ಕೆ ಒಯ್ದ ಸುದ್ದಿ ತಿಳಿದು ಅವನನ್ನು ಹುಡುಕುತ್ತ ಅವಲೂರಿಗೆ ಬಂದಾಗ

ಗೊಗ್ಗವ್ವೆ ಧೂಪದ ಹೊಗೆಯ ಮೂಲಕ ಕೈಲಾಸದ ದಾರಿ ತೋರಿದಳೆಂಬುದು. ಆ ದಾರಿಹಿಡಿದು ಅವನು ಶಿವನೆಡೆಗೆ ಹೋದನೆಂಬುದು. ಮುಂದೆ ಧೂಪದ ದಾರಿಹಿಡಿದು ಅವಳು ಕೂಡ ಶಿವನ ಸಾನಿಧ್ಯವನ್ನು ಪಡೆದಳೆಂಬುದು ಎಲ್ಲ ಕವಿಗಳು ಒಪ್ಪಿದ ಕಥೆಯಾಗಿದೆ. ಈ ಸಂದರ್ಭವನ್ನು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ, ಹೆಚ್ಚು ವಿಸ್ತೃತವಾಗಿ ಕಾಣಬಹುದು. ಇಲ್ಲಿ 'ಕೈಲಾಸವು ಎಷ್ಟು ದೂರವೆಂದು ಚಾರಮ ರಾಯನು ಕೇಳಿದಾಗ 'ಒಂದೇ ಗೇಣು ದೂರ' ವೆಂದು ಗೊಗ್ಗವ್ವೆಯಿಂದ ಹೇಳಿಸಿದ್ದು ಅವಳ ಭಕ್ತಿಯ ಪರಾಕಾಷ್ಠೆಯನ್ನು ಎತ್ತಿ ತೋರುತ್ತದೆ. ಕೊನೆಗೆ ಅವಳು ಧೂಪದ ಹೊಗೆಯೊಳಗೆ 'ಎತ್ತಹೋದರು ಧೂಪದ ಪೊಗೆ ಶಿವನೆ ನಿನ್ನತ್ತಲೆ' ಎಂದು ಲಿಂಗದಲ್ಲಿ ಕೂಡಿ ನಿತ್ಯಸುಖಿಯಾದಳೆಂಬುದು ಅವಳ ಕಾಯಕ ನಿಷ್ಠೆಯನ್ನು ತೋರುತ್ತದೆ.

ವೈರಾಗ್ಯನಿಧಿಯಾಗಿ, ಧೂಪದ ಕಾಯಕವಿಡಿದು, ಚಾರಮನಿಗೆ ಕೈಲಾಸದ ದಾರಿಯನ್ನು ತೋರಿಸಿ ಗೊಗ್ಗವ್ವೆ 'ನಾಸ್ತಿನಾಥ' ಎಂಬ ಅಂಕಿತದಿಂದ ವಚನ ರಚಿಸಿ ಶಿವನ ಸಾನಿಧ್ಯ ಸೇರಿದಳೆಂಬ ವಿಷಯದಲ್ಲಿ ಯಾವ ಕವಿಗಳಲ್ಲಿಯೂ ಭಿನ್ನಾಭಿಪ್ರಾಯ ವಿಲ್ಲ.

ಉತ್ತರ ಕರ್ನಾಟಕದಲ್ಲಿ ಗೊಗ್ಗವ್ವೆಯೆಂಬ ಹೆಸರಿನ ಬಳಕೆ ಇಂದಿಗೂ ದೊರೆಯುತ್ತದೆ. ಗೊಗ್ಗೇಶ್ವರ ದೇವಾಲಯಗಳು,ಆ ಹೆಸರಿನ ವೇಷಧಾರಿಗಳು ಈಗಲೂ ಇದ್ದಾರೆ. ಪ್ರತಿಷ್ಠಾಪಿತ ಮೂರ್ತಿಗಳು ಮಾತ್ರ ಪೂಜೆಗೊಳ್ಳುತ್ತಿದ್ದ ಕಾಲದಲ್ಲಿ ಹೆಚ್ಚು ಜನಪ್ರಿಯ ವಾದ ದೇವರುಗಳಲ್ಲಿ ಗೊಗ್ಗೇಶ್ವರನು ಒಬ್ಬನಿರಬೇಕು. ದೇವರಲ್ಲಿ ಬೇಡಿಕೊಂಡಾಗ ಹುಟ್ಟುವ ಮಕ್ಕಳಿಗೆ ಆ ದೇವರ ಹೆಸರನ್ನೆ ಇಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಗೊಗ್ಗವ್ವೆ ಯೆಂಬ ಹೆಸರನ್ನು ಅವಳ ತಂದೆ ತಾಯಿಯರು ಇಟ್ಟಿರಬೇಕು. ಕಾಲಾನುಕ್ರಮದಲ್ಲಿ, ಶಬ್ದಗಳು ಅರ್ಥವ್ಯತ್ಯಾಸವನ್ನು ಪಡೆಯುವದು ಸಹಜವಾಗಿರುವದರಿಂದ 'ಗೊಗ್ಗವ್ವೆ' ಪದವು ಇಂದು ಅಪಹಾಸ್ಯದಲ್ಲಿ ಬಳಕೆಯಾಗುತ್ತಿದೆ. ಅಂಕಿತನಾಮವಾಗುವದು ಕಡಿಮೆ ಯಾಗಿದೆ.

ಡಾ. ಆರ್. ಸಿ. ಹಿರೇಮಠರು ಸಂಪಾದಿಸಿದ 'ಇಪ್ಪತ್ತೇಳು ಶಿವಶರಣೆಯರ ವಚನಗಳು' ಗ್ರಂಥದಲ್ಲಿ ಗೊಗ್ಗವ್ವೆಯ ಆರು ವಚನಗಳು ದೊರೆಯುತ್ತವೆ.

ಉದ್ದವನೇಜಿವದಕ್ಕೆ ಗದ್ದುಗೆಯಿಲ್ಲದೆ ಎದ್ದುಬಾರದು
ಚಿದ್ರೂಪವನಜಿವುದಕ್ಕೆ ಅರ್ಚನೆ ಪೂಜನೆ ನಿತ್ಯನೇಮವಿಲ್ಲದೆ
ಕಾಣಬಾರದು.

ಆದ ಸತ್ಯದಿಂದ ಮಾಡಿ ಅಸತ್ಯವ ಮುಚ್ಚಿದಡೆ
ಇದೆ ಸತ್ಯ ನಾಸ್ತಿನಾಥ ||೧||

ಚಿದ್ರೂಪನಾದ ನಾಸ್ತಿನಾಥನನ್ನು ಅರಿಯುವ ಮಾರ್ಗವೆಂದರೆ ಅರ್ಚನೆ, ಪೂಜನೆ, ನಿತ್ಯನಿಯಮಗಳು. ಅದು ಸತ್ಯದಿಂದ ಮಾಡುವ ಆಚರಣೆಯಾಗಿರಬೇಕು. ಸತ್ಯ–ನಿತ್ಯ ಆಚರಣೆಯ ನಿಚ್ಚಣಿಕೆಯನ್ನು ಏರಿದಾಗಲೇ ಎತ್ತರದಲ್ಲಿರುವ ನಾಸ್ತಿನಾಥನು ದೊರೆ

ಯುತ್ತಾನೆ. ಕೆಳಮಟ್ಟದಲ್ಲಿರುವ ವ್ಯಕ್ತಿ ಮೇಲೇರಲು ಬೇಕಾಗುವಸಾಧನೆಯನ್ನು ನಿಚ್ಚಣಿಕೆಯ ಮುಖಾಂತರ ಗೊಗ್ಗವ್ವೆ ತೋರ್ಪಡಿಸಿದ್ದಾಳೆ.

ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ ?
ಶರಧಿಕೊಂಡ ಸಾಗರಕ್ಕೆ ಕುಱುಹಿನ ತಲೆಯೆ ?
ಲಿಂಗ ಮುಟ್ಟದ ಅಂಗಕ್ಕೆ ಮತ್ತೆ ಪುಣ್ಯವುಂಟೆ ?
ಹುಸಿ, ನಾಸ್ತಿನಾಥಾ ! ||೨||

ಭೋಗದ ಬೆಂಕಿ ಹಿಡಿದಾಗ ಬೇರಾವುದೂ ಕಾಣದಿರುವಂತೆ, ಸಾಗರವನ್ನು ಸೇರಿದ ಶರಧಿಗೆ ಬೇರೆ ಅಸ್ತಿತ್ವವಿಲ್ಲದಿರುವಂತೆ, ಲಿಂಗಮುಟ್ಟಿದ ಅಂಗವು ಲಿಂಗವಲ್ಲದೆ ಮತ್ತೇನೂ ಆಗಲಾರದು. ಲಿಂಗಾಂಗ ಸಾಮರಸ್ಯದ ಸಹಜ ನೋಟವನ್ನು ಸರಳವಾದ ಹೇಳಿಕೆಗಳಲ್ಲಿ ಗೊಗ್ಗವ್ವೆ ಮನಕ್ಕೆ ನಾಟುವಂತೆ ಬಿಂಬಿಸಿದ್ದಾಳೆ.

ಮಾರುತನಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ ||೩||

ಗಾಳಿಯಲ್ಲಿ ಬೆರೆತ ಗಂಧ, ಸುರತದಲ್ಲಿ ಬೆರೆತಸುಖ, ಮೆಚ್ಚಿದಲ್ಲಿ ಕೊಡುವ ಉಚಿತದಂತೆ ಭಕ್ತನು ದೇವನಲ್ಲಿ ಬೆರೆಯುವ ಬಗೆಯನ್ನು ಕಾಣಬೇಕೆಂಬುದು ಅವಳ ಅಭಿಪ್ರಾಯ.

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅಱಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ,
ಉತ್ತರವಾವುದೆಂದಱಿಯಬೇಕು
ಈ ಎರಡಱ ಉಭಯವ ಕಳೆದು ಸುಖಿ ತಾನಾಗಬಲ್ಲಡೆ,
ನಾಸ್ತಿನಾಥನು ಪರಿಪೂರ್ಣನೆಂಬೆ. ||೪||

ಗಂಡು ಹೆಣ್ಣು ಒಂದನ್ನೊಂದು ಮೋಹಿಸುವುದು ಲೌಕಿಕವೃತ್ತಿಯಾದರೂ ಉಭಯಭೇದವನ್ನು ಕಳೆದು ಸುಖಿಯಾಗಬಲ್ಲನು ಪರಿಪೂರ್ಣನಾಗುವದರಲ್ಲಿ ಸಂದೇಹವಿಲ್ಲವೆಂಬುದು ಅವಳ ಸಂದೇಶವಾಗಿದೆ.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು;
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯವ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ ||೫||

ದೈಹಿಕ ಬದಲಾವಣೆಗಳ ಮೇಲೆ ಹೆಣ್ಣು-ಗಂಡೆಂಬ ಭೇದವು ನೈಸರ್ಗಿಕವಾಗಿ ರೂಪಿತಗೊಳ್ಳುತ್ತದೆ. ಅವರೊಳಗಿನ ಜ್ಞಾನಕ್ಕೆ ಲಿಂಗಭೇದವೆಲ್ಲಿಯದು ? ಈ ರೀತಿಯಾಗಿ ಶರಣರು ಪ್ರಕೃತಿ ಧರ್ಮವನ್ನು ಗುರುತಿಸಿಯೂ ಆಧ್ಯಾತ್ಮಿಕ ಸಾಧನೆಯಲ್ಲಿ

ತೊಡಗುವ ಸುಗಮದ ಹಾದಿಯನ್ನು ಜೋಡಿಸಿ ಸಾಮಾನ್ಯರನ್ನೂ ಮೇಲೆತ್ತುವ ಕೃಪೆ ಮಾಡಿದ್ದಾರೆ.

ಭಕ್ತರು ಜಂಗಮದಲ್ಲಿ ಕಟ್ಟ ಹೊಯಿಲೇಕೆ ?
ಧೂಪದ ಹೊಗೆ ಎತ್ತಹೋದಡೂ ಸರಿ
ಇದು ಸತ್ಯವೆಂದೆ ನಾಸ್ತಿನಾಥಾ ||೬||

ಭಕ್ತರು ಲಾಂಛನ ತೋರಿಸುವದಿಲ್ಲ. ಗೊಗ್ಗವ್ವೆ ಧೂಪದ ಹೊಗೆಯಲ್ಲಿ ಕೈಲಾಸವನ್ನು ತೋರಿಸಿದವಳು, ಕಂಡವಳು. ಅದು ಅವಳು ಬದುಕಿದ ದಾರಿಯೂ ಹೌದು, ಬದುಕಿನಿಂದ ಮುಕ್ತಳಾದ ದಾರಿಯೂ ಹೌದು. ಬದುಕಿನುದ್ದಕ್ಕೂ ಹಿಡಿದ ಕಾಯಕದಲ್ಲಿ ಕೈಲಾಸವೆಂಬ ಸತ್ಯದರ್ಶನವನ್ನು ಪಡೆದ ಗೊಗ್ಗವ್ವೆಯಂಥ ಶರಣೆಯರನ್ನು ಪಡೆದ ನಮ್ಮ ನಾಡ-ನುಡಿ ಧನ್ಯ.

ಗೊಗ್ಗವ್ವೆ ಲೌಕಿಕ ವಿಚಾರಧಾರೆಯ ಮೇಲೆ ಅಲೌಕಿಕ ಚಿಂತನೆಯನ್ನು ಹುರಿಗೂಡಿಸಿ ತೋರಿಸುವದು ಅವಳ ವಚನಗಳಿಂದ ಸ್ಪಷ್ಟವಾಗುತ್ತದೆ. ಎತ್ತರವನ್ನು ನಿಲುಕಿಸುವ ನಿಚ್ಚಣಿಕೆಯ ಆವಶ್ಯಕತೆಯಂತೆ ಪೂಜೆ, ಅರ್ಚನೆ ನಿತ್ಯನಿಯಮಗಳ ಸ್ಥಾನವನ್ನು ಖಚಿತಪಡಿಸಿರುವದು, ಸಮುದ್ರ–ನದಿಗಳ ಬೆರಕೆಯ ನಂತರ ಗುರುತಿನ ಚಿಹ್ನೆ ಹುಡುಕುವದನ್ನು ಅಂಗಾಂಗಗಳ ಸಮರಸತೆಗೆ ಹೋಲಿಸುವದು, ಅದೇ ಭಾವವನ್ನು ಗಂಧ ಗಾಳಿ ಸುರತ ಸುಖಗಳ ಬೆರಕೆಯಲ್ಲಿ ಮುಂದುವರಿಸುವದು ಮೊದಲಾದ ವಿಷಯಗಳ ನಿರೂಪಣೆಯನ್ನು ತಿಳಿಗೊಳಿಸಿ ಬಿಂಬಿಸಿರುವದು ಮೆಚ್ಚುವಂತಿದೆ.

ಬೊಂತಾದೇವಿ

ಬೊಂತಾದೇವಿಯ ಚರಿತ್ರೆಯು ಅಮರಗಣಾಧೀಶ್ವರರ ಚರಿತ್ರೆ, ಅರವತ್ತುಮೂರು ಶಿವಶರಣರ ಚರಿತ್ರೆ, ಶಿವಶರಣ ಕಥಾರತ್ನಕೋಶ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಕಥಾಸಾಗರ, ಸೋಮೇಶ್ವರ ಪುರಾಣ, ಚತುರಾಚಾರ್ಯರ ಪುರಾಣಗಳಲ್ಲಿ ದೊರೆಯುತ್ತದೆ. ಈ ಎಲ್ಲ ಕೃತಿಗಳ ಪ್ರಕಾರ ಅವಳು ಕಾಶ್ಮೀರ ದೇಶದ ಮಾಂಡವ್ಯಪುರದರಸನ ಮಗಳಾದ ನಿಜದೇವಿ. ಬಾಲ್ಯದಿಂದ ಶಿವಭಕ್ತೆ, ರಾಜ ವೈಭವತೊರೆದು ದಿಗಂಬರೆಯಾಗಿ ಶಿವನ ಭ್ರಾಂತಿಯಲ್ಲಿ ಬೆಟ್ಟ-ತಿಟ್ಟು, ಕಾಡು-ಮೇಡುಗಳನ್ನು ದಾಟಿ ಕಾಶ್ಮೀರದಿಂದ ಕಲ್ಯಾಣಕ್ಕೆ ಹೊರಟಾಗ ಹಲವಾರು ತರುಣರು ಮೋಹಿಸಿದರೂ ಧಿಕ್ಕರಿಸಿ ನಡೆದಳು. ಕೊನೆಗೆ ಶಿವನು ಸುಂದರ ಪುರುಷನ ವೇಷದಲ್ಲಿ ಬಂದು ತನ್ನ ಪತಿಯಾಗಲು ಕೇಳಿದಾಗ ಅವನು ಕಾಮವೈರಿಯೆಂದು ತಿಳಿದು ತನಗೆ ಕಾಮನ ಹಂಗಿಲ್ಲವೆಂದು ನಿರಾಕರಿಸುತ್ತಾಳೆ. ಮತ್ತೊಮ್ಮೆ ಶಿವನು ವೇಷಧಾರಿಯಾಗಿ ಬಂದು "ಎನಗಾರು ಇಲ್ಲ, ನನ್ನನ್ನು ವರಿಸು" ಎಂದು ಕೇಳಿದಾಗ ಅವನಿಗೆ ಗಂಗೆ–ಗೌರಿಯರು ಕುಮಾರ–ಗಣಪರುಇರುವ ಶಿವನೆಂದು ತಿಳಿದು ನಿರಾಕರಿಸುತ್ತಾಳೆ. ಆಗ ಅವಳ ವೈರಾಗ್ಯಕ್ಕೆ ಮೆಚ್ಚಿ ದಿಗಂಬರೆಯಾಗಿರಬೇಡವೆಂದು ಬೊಂತೆಯನ್ನು ಹೊದೆಯಲು ಕೊಟ್ಟನು. ಅಂದಿನಿಂದ ಬೊಂತಾದೇವಿಯೆಂದು ಹೆಸರಾಯಿತು.

ಕಲ್ಯಾಣದಲ್ಲಿ ಬೊಂತಾದೇವಿ ಶರಣರ ಸಂಗದಲ್ಲಿ ದಿನಕಳೆಯುತ್ತ ಶಿವಾನುಭವ ಕಾಯಕದಲ್ಲಿ ನಿರತಳಾದರು. ಕಲ್ಯಾಣಕ್ರಾಂತಿಯ ಕಾಲಕ್ಕೆ ಅಕ್ಕಮಹಾದೇವಿ ಮೊದ

ಲಾದ ಶರಣ–ಶರಣೆಯರು ಕಲ್ಯಾಣವನ್ನು ಬಿಟ್ಟು ಹೊರಟುಹೋದಾಗಲೂ ಅವಳು ಅಲ್ಲಿಯೆ ನೆಲೆಸಿದಳು. ನಿಜದೇವಿ ಹೆಸರಿಗೆ ತಕ್ಕಂತೆ ನಿಜವನ್ನರಿತವಳು. ಕಾಮನನ್ನು ಯಮನನ್ನು ಜಯಿಸಿದವಳೆಂಬ ಪ್ರತೀತಿಯಿರುವದನ್ನು ಕೆಲವು ಕವಿಗಳು ನಂಬಿ ಹಾಡಿದ್ದಾರೆ.

ಕಲ್ಯಾಣದಲ್ಲಿ ಬೊಂತಾದೇವಿ ವಾಸಿಸುತ್ತಿದ್ದುದು ಯಾರಿಗೂ ತಿಳಿದಿರಲಿಲ್ಲ. ಅಕ್ಕಮಹಾದೇವಿ ಹೊರಟು ಹೋದಮೇಲೆ ಅಲ್ಲಮಪ್ರಭು ಬೊಂತಾದೇವಿಯು ಅಕ್ಕಮಹಾದೇವಿಗಿಂತ ಹಿರಿಯಳೆಂದು ಭಕ್ತಜನರಿಗೆ ಪರಿಚಯಿಸುತ್ತಾರೆ. ಕೊನೆಗೊಮ್ಮೆ ಬೊಂತೆಯನ್ನು ಆಕಾಶದತ್ತ ತೂರಿ ಬಯಲಲ್ಲಿ ಬೆರೆಯುತ್ತಾಳೆ.

ಬೊಂತಾದೇವಿಯು ಸರ್ವಸಮಭಾವವನ್ನು ಹೊಂದಿದವಳಾಗಿದ್ದಳು. ತಿಪ್ಪೆ ಉಪ್ಪರಿಗೆಯೆಂಬ ಕೀಳು–ಮೇಲುಗಳನ್ನು ನಂಬಿದವಳಲ್ಲವೆಂಬುದನ್ನು ಎತ್ತಿಹೇಳುವ ದಂತಕಥೆಯೊಂದು ಪ್ರಚಾರದಲ್ಲಿದೆ. ಒಮ್ಮೆ ಬೊಂತಾದೇವಿ ತಿಪ್ಪೆಯಲ್ಲಿ ಮಲಗಿದ್ದನ್ನು ಕಂಡವನೊಬ್ಬ ಹೇಸಿಕೊಂಡಾಗ ಅವಳು ತನ್ನ ಬೊಂತೆಯನ್ನು ಕೊಡವಲು ರತ್ನಗಳು ಉದುರುವದನ್ನು ನೋಡಿ ಅವನು ನಾಚಿಹೋಗುತ್ತಾನೆ. ಇದೊಂದು ಪವಾಡವೆನಿಸಿದರೂ ಅವಳ ವಚನಗಳಲ್ಲಿ ಸಮತಾವಾದವು ಪ್ರಕಟವಾಗಿರುವದನ್ನು ಅಲ್ಲಗಳೆಯುವದು ಸಾಧ್ಯವಿಲ್ಲ.

‘ಇಪ್ಪತ್ತೇಳು ಶಿವಶರಣೆಯರ ವಚನಗಳು’ ಗ್ರಂಥದಲ್ಲಿ ಬೊಂತಾದೇವಿಯ ಐದು ವಚನಗಳು ದೊರೆಯುತ್ತವೆ.

ಅಂತಾಯಿತ್ತಿಂತಾಯಿತ್ತೆಂತಾಯಿತ್ತೆನಬೇಡ
ಅನಂತನಿಂತಾತ್ಮನೆಂದಱಿಯಾ ಬಿಡಾಡಿ
ಕರೆದಡೆ ಓ ಎಂಬುದು
ನಾದವೊ, ಬಿಂದುವೊ, ಪ್ರಾಣವೊ ?
ಇದಾವುದು ಬಲ್ಲಡೆ ನೀ ಹೇಳಾ ಬಿಡಾಡಿ
ನಾಲ್ಕುವೇದ, ಹದಿನೆಂಟು ಪುರಾಣ, ಇಪ್ಪತ್ತೆಂಟಾಗಮ
ಇದ ಪ್ರತಿ ಬಿಡಾಡಿ.
ಶಬ್ದವೆ ಬ್ರಹ್ಮ, ಶಬ್ದವೇ ಸಿದ್ಧ, ಶಬ್ದವೇ ಶುದ್ಧ
ಕಾಣಿರಾ ಬಿಡಾಡಿ ! ||೧||

ಬಿಡಾಡಿ ಎಂಬ ಅಂಕಿತದಿಂದ ಬೊಂತಾದೇವಿಯ ವಚನಗಳು ಪ್ರಕಟವಾಗಿವೆ. ಹಾಗೆ ಹೀಗೆ ಹೇಗಾಯಿತೆನ್ನದೆ ಅನಂತಾತ್ಮನಾದ ಅವನಿರುವನು ಹೀಗೆಂದು ತಿಳಿದು ನಂಬಿ ಕರೆದರೆ ಓ ಎನ್ನುವಾತನು ನಾದರೂಪನೊ, ಬಿಂದುಸ್ವರೂಪನೋ, ಪ್ರಾಣಾತ್ಮಕನೊ ಅದನ್ನು ಹೇಳಬೇಕಾದವನು ಅವನೆ. ವೇದಾಗಮ ಪುರಾಣಗಳು ಅದೇ ಶೋಧದಲ್ಲಿವೆ. ಕಾರಣ ಶಬ್ದವೇ ಶುದ್ಧ, ಸಿದ್ಧ ಮತ್ತು ಬ್ರಹ್ಮನೆಂದು ಬೊಂತಾದೇವಿಯ ವಿಚಾರವು ಪಂಡಿತೋತ್ತಮರ ಗಹನ ತಾತ್ತ್ವಿಕ ಜ್ಞಾನವನ್ನು ತಿಳಿಯಾಗಿ ಬಿಂಬಿಸಿವೆ.

ಅಱಿವೆ ಬಿಡಾಡಿ, ಅಱಿಯದೆ ಬಿಡಾಡಿ,

ಮಱವೆ ಬಿಡಾಡಿ, ಮಱೆಯದೆ ಬಿಡಾಡಿ
ಅಱಿವಱಿತು ಕುಱುಹಿಲ್ಲದಾತ ನೀನೆ ಬಿಡಾಡಿ ||೩||

ಅಱಿವು ಮಱೆವುಗಳಾದ, ಅವುಗಳಾಚಿನ ರೂಪ, ಅಱಿವು ಬತ್ತಿ ಕುಱುಹು ಇಲ್ಲದ ಅವನೆ ಬೊಂತಾದೇವಿಯ 'ಬಿಡಾಡಿ'

ಘಟದೊಳಗಣ ಬಯಲು ಮಠದೊಳಗಣ ಬಯಲು
ಬಯಲು ಬಯಲು ಬಯಲು !
ತಾನೆಲ್ಲ ಬಯಲು, ಬಿಡಾಡಿ ಬಯಲು ||೩||

ಬಯಲ ಬಟ್ಟೆಯನ್ನು ನಂಬಿದ ಬೊಂತಾದೇವಿಗೆ ಘಟ ಮತ್ತು ಮಠದ ಸಣ್ಣ ಮತ್ತು ದೊಡ್ಡ ಬಯಲೆಂದು ಭೇದವಿಲ್ಲ. ಅವಳಾತ 'ಬಿಡಾಡಿ'ಯ ರೂಪ, ಬಯಲೇ ಬಯಲೆಂಬುದನ್ನು ಅರಿತು ಹೇಳಿದ್ದಾಳೆ. ಈ ಮೂರು ವಚನಗಳಲ್ಲಿ ಆಧ್ಯಾತ್ಮಲೋಕದ ಅಮರ ಸಿದ್ಧಿಯ ತುತ್ತತುದಿಯನ್ನು ಏರಿನಿಂತು ನಿಜದ ಆಳವನ್ನು ಇಳಿದುನೋಡಿ ಸತ್ಯದರ್ಶನವನ್ನು ತೋರಿದ್ದಾಳೆ.

ಊರ ಒಳಗಣ ಬಯಲು, ಊರ ಹೊಱಗಣ ಬಯಲೆಂದುಂಟೆ ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊಱಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಿಂದ ಒಳಹೊಱಗೆಂಬ ನಾಮವೈಸೆ !
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ ||೪||

ಪಱಪುಟ್ಟನಾಥವೊ ಎಂಬ ಲಿಂಗ,
ತಱಗೆಲೆಗಳಿಗೊಂದೆ ಗಾಳಿ,
ಹಾಱುತ್ತಿಪ್ಪವು ಒಂದೇ ಅನಿಲನಿಂದ
ದೇಹಪಱಪಟಿಗಳೊಳಗೆಲ್ಲಾ,
ಕರೆದಡೆ ಓ ಎಂಬಾತನೆ ಬಿಡಾಡಿ? ||೫||

ಬೊಂತಾದೇವಿಯ ಆಧ್ಯಾತ್ಮಿಕ ಸಾಧನೆ ಸಿದ್ಧಿಗಳ ಜೊತೆಗೆ ಸಾಮಾಜಿಕ ಕಳಕಳಿಯು ವ್ಯಕ್ತಗೊಂಡು ಅವಳ ವಿಶಾಲದೃಷ್ಟಿಕೋನದ ಪರಿಚಯವಾಗುತ್ತದೆ. ಮೇಲು ಕೀಳೆಂಬ ಭಾವವನ್ನು ಅಲ್ಲಗಳೆದ ಅವಳು ಸಕಲರೊಳಗಿನ ತಿರುಳು ಒಂದೆಂಬುದನ್ನು ಎತ್ತಿಹೇಳಿದ್ದಾಳೆ. ಊರೊಳಗಿನ, ಹೊರಗಿನ, ಬ್ರಾಹ್ಮಣರ, ಹೊಲೆಯರ ಬಯಲೆಂದು ಕರೆಯುವದನ್ನು ಬೊಂತಾದೇವಿ ಒಪ್ಪುವದಿಲ್ಲ. ಬಯಲು ಯಾವುದಾದರೂ ಎಲ್ಲಿದ್ದರೂ ಬಯಲು. ಚಿತ್ತಭಿತ್ತಿಯ ಒಳಹೊರಗೆಲ್ಲ ಇರುವವನು ಅವನೆ, ಜಾತಿಮತಗಳನ್ನು ಮೀರಿದ ಬಯಲುರೂಪಿ ಶಿವನು ಅವಳಿಗೆ ಪ್ರಸ್ತುತ. ಪ್ರಾಣಿ-ಪಕ್ಷಿ ಮಾನವರಿಗೆಲ್ಲ ಬೀಸುವ ಗಾಳಿ ಒಂದೆ; ಪ್ರಾಣರೂಪ ದೇವನು ಒಬ್ಬನೆಯೆಂಬುದನ್ನು ಅವಳು ಸೂಚಿಸುತ್ತಾಳೆ. ಅಪ್ರಾಕೃತಿಕ ಹೊದಿಕೆಯನ್ನು ಅವಲಂಬಿಸಿದ ಮಾನವರ ವಿಕೃತಿಯನ್ನು ತಿರಸ್ಕರಿಸಿ ದಿಗಂಬರೆಯಾದ ಬೊಂತಾದೇವಿಗೆ ಬಯಲು ಅನಿಲಗಳು ಕಣ್ಣಿಗೆ ಕಾಣದ, ಸ್ವರೂಪವಿಲ್ಲದ, ಅನಿಸಿಕೆಗೆ ಮಾತ್ರ ಗಮ್ಯವಾದ ವಿಷಯಗಳು ಆದರ್ಶವಾಗಿರುವದು ಸಮರ್ಪಕವಾಗಿದೆ.

ಗೊಗ್ಗವ್ವೆ, ಬೊಂತಾದೇವಿ, ಅಕ್ಕಮಹಾದೇವಿಯರು ವೈರಾಗ್ಯವನ್ನು ಅಪ್ಪಿಕೊಂಡದ್ದು ಅಕಸ್ಮಿಕವೆನಿಸಬಹುದಾದರೂ ಆ ಕಾಲದ ಹಿನ್ನೆಲೆಯಲ್ಲಿ ವಿಶಿಷ್ಟ ಅರ್ಥವನ್ನು ಕೊಡುತ್ತದೆ. ಅಂದು ಮಹಿಳೆಯರು ಧಾರ್ಮಿಕ ಕ್ರಿಯೆಗಳಲ್ಲಿ, ಸಾಮಾಜಿಕ ಆಗುಹೋಗುಗಳಲ್ಲಿ, ವೈರಾಗ್ಯ, ಆಧ್ಯಾತ್ಮಿಕ ಸಾಧನೆಯಲ್ಲಿ ಪುರುಷರಿಗೆ ಸರಿಸಮನಾಗಿ ನಿಲ್ಲಲಾರದೆಂಬ ಭಾವನೆ ಬೇರೂರಿನಿಂತಾಗ ಶರಣರ ಪ್ರಭಾವಲಯದಲ್ಲಿ ಗೊಗ್ಗವ್ವೆ, ಬೊಂತಾದೇವಿ, ಅಕ್ಕಮಹಾದೇವಿಯಂತಹ ಶರಣೆಯರು ವಿರಾಗಿಗಳಾಗಿ ಬೆಳಗಿದರು. ಅವರ ಸಾಧನೆ ಊರಾಚೆಗಲ್ಲ, ಸಿರಿತನದಿಂದಲ್ಲ, ದೇಹಾಲಸ್ಯದಿಂದಲ್ಲ. ಜೀವನರಂಗದ ಎಲ್ಲ ಕಷ್ಟಕಾರ್ಪಣ್ಯ, ನೋವು, ಶ್ರಮಗಳ ನಡುವೆ ಅಜೀವು–ಮಜೀವುಗಳಾಚೆ; ಬಯಲು–ಆಲಯಗಳ ಭ್ರಮೆಯನ್ನು ಮೀಜಿನಿಂತು, ಸ್ವಚ್ಛಂದವಾಗಿ ಆಡಿದ ಬಿಡಾಡಿ, ಅಸ್ತಿತ್ವವಿಲ್ಲದ ನಾಸ್ತಿನಾಥನನ್ನು ಕಂಡ ಅಂತಿಮದರ್ಶನವು ಅಪೂರ್ವವಾದದ್ದಾಗಿದೆ.

ಜೇಡರ ದಾಸಿಮಯ್ಯ, ಸತ್ಯಕ್ಕ, ಅಂಬಿಗರ ಚೌಡಯ್ಯ, ಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶರಣ–ಶರಣೆಯರು ಹೆಣ್ಣು–ಗಂಡೆಂಬುದು ದೈಹಿಕ ಭೇದಮಾತ್ರವಾಗಿರುವದರಿಂದ ಅದನ್ನು ಪರಿಗಣಿಸಬಾರದೆಂದು ಹೋರಾಟಕ್ಕಿಳಿಯುವ ಮೊದಲೆ ಗೊಗ್ಗವ್ವೆಯು ಈ ವಿಚಾರವನ್ನು ಪ್ರತಿಪಾದಿಸಿರುವದು ಗಮನಾರ್ಹ ವಿಷಯವಾಗಿದೆ. ಅವಳ ವೈಚಾರಿಕ ನೆಲಗಟ್ಟಿನಿಂದ ಶರಣರು ಪ್ರಚೋದನೆಯನ್ನು ಪಡೆದಿರಬೇಕು. ಶರಣರ ಕ್ರಾಂತಿಗೆ ಗೊಗ್ಗವ್ವೆಯ ಒಂದೊಂದು ಮಾತೂ ಅಮೂಲ್ಯ ಮುತ್ತಾಗಿರುವಲ್ಲಿ ಸಂದೇಹವಿಲ್ಲ.

ಯಾವ ಸಮತಾವಾದವನ್ನು ನಾವಿಂದು ಕಾರ್ಲಮಾರ್ಕ್ಸ ಮತ್ತು ಎಂಗೆಲ್ಸರ ಕೊಡುಗೆಯೆಂದು ಪರಿಗಣಿಸುತ್ತೇವೆಯೋ ಅದನ್ನು ಎಂಟುನೂರು ವರುಷಗಳ ಹಿಂದೆ ಕನ್ನಡಿಗರಾದ ಶರಣ–ಶರಣೆಯರು ನಡೆದು–ನುಡಿದು ತೋರಿರುವದು ಸರ್ವವಿದಿತ. ನಿರಂತರ ಕಾರ್ಯನಿರತರಾಗಿರುವ, ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ತತ್ವವನ್ನು ಭಗವದ್ಗೀತೆಯಂತೆ ಹೇಳಿರುವ ನಿದರ್ಶನಗಳು ಸಾಕಷ್ಟು ದೊರೆತರೂ ಅದನ್ನು ವ್ಯಕ್ತಿ ಜೀವನದಲ್ಲಿ ಅನುಸರಿಸಿತೋರಿದ ಶ್ರೇಯಸ್ಸು ಶರಣರಿಗೆ ಮಾತ್ರ ದೊರೆಯುತ್ತದೆ. ಗೊಗ್ಗವ್ವೆ ಬೊಂತಾದೇವಿಯರು ಶರಣತತ್ವಕ್ಕೆ ಬದ್ಧರಾಗಿ ಕಾಯಕದಿಂದ ಕಾಯಕದಲ್ಲಿಯೆ ಸ್ವರ್ಗಸುಖವನ್ನು ಕಂಡರು. ಶ್ರೇಷ್ಠ-ಕನಿಷ್ಠ; ಕುಲಜ-ಅಂತ್ಯಜನೆಂಬ ಭೇದವನ್ನು "ತೊಡೆಯುಲು ಬ್ರಾಹ್ಮಣ ಬಯಲು ಹೊಲೆ ಬಯಲು"ಗಳೆಲ್ಲಿವೆಯೆಂದು ಕೂಗು ಹಾಕಿದವರು ಶರಣ-ಶರಣೆಯರು. ಬೊಂತಾದೇವಿಯಂತೆ ಬಯಲು, ಅಸಿಲಗಳ ಪ್ರತೀಕಗಳನ್ನು, ನಿಜಜೀವನದ ಹಲವಾರು ಉದಾಹರಣೆಗಳನ್ನು ಎತ್ತಿ ಆಧ್ಯಾತ್ಮಿಕ ತಳಹದಿಯನ್ನು ತಿಳಿಗೊಳಿಸಿ ಹೇಳುವ ಸಾಮರ್ಥ್ಯ ಪಡೆದವರು ಶರಣ ಶರಣೆಯರು.

ಗೊಗ್ಗವ್ವೆ ಬೊಂತಾದೇವಿಯರು ಅರ್ಚನೆ ಪೂಜನೆ ನಿತ್ಯನಿಯಮಾಚರಣೆಯಿಂದ, ವೈರಾಗ್ಯಕ್ಕೆ ನಿಷ್ಠೆಯಿಂದ ಅರ್ಪಿತರಾಗಿ, ಅನುಭವಗಟ್ಟಿಗಳಾದ ವಚನಗಳನ್ನಿತ್ತು ಸರ್ವಮಾನ್ಯರೂ ನಿತ್ಯಸ್ಮರಣೀಯರೂ ಆಗಿದ್ದಾರೆ.

○

ಲಕ್ಷ್ಮಮ್ಮ ಮತ್ತು ರೇಚವ್ವೆ

ಬಿ. ವ್ಹಿ. ಯಕ್ಕುಂಡಿಮಠ

ದೇವರದಾಸಿಮಯ್ಯನ "ಪತಿಸತಿಗಳೊಂದಾದ ಭಕ್ತಿ! ಹಿತವಾಗಿಪ್ಪುದು ಶಿವಂಗೆ" ಎಂಬ ಮಾತಿನಂತೆ ಹನ್ನೆರಡನೆಯ ಶತಮಾನದಲ್ಲಿ ಅನೇಕ ಶಿವಶರಣೆಯರು ತಮ್ಮ ಪತಿಯ ಕಾರ್ಯಕ್ಷೇತ್ರಗಳಿಗೆ ಬೆಂಗಾವಲಾಗಿ ನಿಂತು, ಹೂ-ಕಾಯಾಗಿ ದುಡಿದು, ಅವರ ಸಾಧನೆ ಸಿದ್ಧಿಸುವಲ್ಲಿ ನೆರವೆಗೈದುದು ತಿಳಿದುಬರುತ್ತದೆ. ಇದಕ್ಕೆ ಕೊಂಡೆಯ ಮಂಚಯ್ಯಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ ಮತ್ತು ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ ಇವರು ಹೊರತಾಗಿಲ್ಲ.

೧) **ಕೊಂಡೆಯ ಮಂಚಯ್ಯಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ**—ಶರಣೆ ಲಕ್ಷ್ಮಮ್ಮನ ಜೀವನ ಚರಿತ್ರೆಗೆ ಸಂಬಂಧಿಸಿ ಹೆಚ್ಚಿನ ವಿಷಯ ದೊರೆತಿಲ್ಲ. ಇದೇ ರೀತಿ ಇನ್ನೂ ಅನೇಕ ಶರಣ-ಶರಣೆಯರ ವಿಷಯಗಳು ನಮಗೆ ದೊರೆಯದೇ ಇರುವುದು ಶೋಚನೀಯ ಸಂಗತಿ. ಆದರೂ ತ. ಸು. ಶಾಮರಾಯರು "ಶಿವಶರಣ ಕಥಾರತ್ನ ಕೋಶ" ಗ್ರಂಥದಲ್ಲಿ ಸಾಧ್ಯವಾದ ಮಟ್ಟಿಗೆ ಎಲ್ಲ ಶರಣ-ಶರಣೆಯರ ಬಗೆಗೆ ಉಪಲಬ್ಧ ವಿಷಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಲಕ್ಷ್ಮನ ಕಾಲ ಕ್ರಿ. ಶ. ೧೧೬೦. ಈಕೆ ಕೊಂಡೆಮಂಚಣ್ಣನ ಪತ್ನಿ. ಕೊಂಡೆ ಮಂಚಣ್ಣ ಮತ್ತು ಲಕ್ಷ್ಮಮ್ಮ ಗುಪ್ತಭಕ್ತಿಯುಳ್ಳವರಾಗಿದ್ದರೆಂದು ತಿಳಿದುಬರುತ್ತದೆ. ಲಕ್ಷ್ಮಮ್ಮ ಶಿವಾನುಭವದಲ್ಲಿ ನಿರತಳಾಗಿದ್ದು ವಚನ ರಚಿಸಿದ್ದಾಳೆ. ಈಗ ಇವಳ ಒಂದು ವಚನ ಮಾತ್ರ ದೊರೆತಿದೆ. 'ಅಗಜೇಶ್ವರಲಿಂಗ' ಎಂಬುದು ಇವಳ ವಚನಾಂಕಿತ.

ಆಯುಷ್ಯ ತೀರಲು ಮರಣ;
ವ್ರತ ತಪ್ಪಲು ಶರೀರ ಕಡೆ;
ಮೇಲು ವ್ರತವೆಂಬ ತೂತರ ಮೆಚ್ಚ;
ನಮ್ಮ ಅಗಜೇಶ್ವರ ಲಿಂಗವು;

ಈ ಮೇಲಿನ ವಚನದಲ್ಲಿ ಲಕ್ಷ್ಮಮ್ಮ ವ್ರತಚಾರಣೆಗೆ ನಿಷ್ಠೆಯ ಮಹತಿಯನ್ನು ಎತ್ತಿ ಹೇಳಿದ್ದಾಳೆ. ಮನುಷ್ಯ ತನ್ನ ಜೀವಿತಾವಧಿಯಲ್ಲಿ ನಿಷ್ಠೆಯಿಂದ, ಸದಾಚಾರದಿಂದ ಬಾಳಬೇಕು. ಹೀಗೆ ನಡೆದಲ್ಲಿ ಆತನ ಜೀವನ ದಿವ್ಯ ಪಥವತ್ತ ಸಾಗುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ನಡೆದರೆ ಆತ ಬದುಕಿಯೂ ಸತ್ತಂತೆ. ಆಯುಷ್ಯ ತೀರಿ

ಪಡೆ ಮರಣ ಬರುವಂತೆ ವ್ರತ ಭ್ರಷ್ಟನಾದರೆ ಅವನು ಸಮಾಜದ ಜನರಿಂದ ತಿರಸ್ಕರಿಸಲ್ಪಡುವನು. ಧಾರ್ಮಿಕ ವ್ರತ, ಆಚರಣೆಯಿಂದಾಗಿ ಮನುಷ್ಯ ಏನನ್ನೂ ಸಾಧಿಸಲಾರ ಎಂಬ ಹಿರಿದಾದ ಮಾತನ್ನು ಲಕ್ಷ್ಮಮ್ಮ ಎತ್ತಿ ಹೇಳಿದ್ದಾಳೆ. ತಪ್ಪಿಗೆ ಪ್ರಾಯಶ್ಚಿತ್ತವೇ ಶಿಕ್ಷೆ ಎಂಬ ಪ್ರತೀತಿ ಇದ್ದರೂ ಲಕ್ಷ್ಮಮ್ಮನ ದೃಷ್ಟಿಯಲ್ಲಿ ಇದು ಮೂರ್ಖರ ಮಾತು. ಇದನ್ನು ಅಗಜೇಶ್ವರಲಿಂಗವು ಒಪ್ಪಲಾರ ಎಂದು ಹೇಳಿದ್ದಾಳೆ.

೨) **ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ**—ಶರಣೆ ಲಕ್ಷ್ಮಮ್ಮನಂತ ರೇಚವ್ವೆಯ ಚರಿತ್ರೆಯ ಬಗೆಗೂ ಹೆಚ್ಚಿನ ವಿಷಯ ಉಪಲಬ್ಧವಿಲ್ಲ. ಸಿದ್ಧನಂಜೇಶ ತನ್ನ 'ಗುರುರಾಜ ಚಾರಿತ್ರ'ದಲ್ಲಿ ಇತರ ಶರಣೆಯರ ಜೊತೆಗೆ ಈಕೆಯನ್ನೂ ಸ್ತುತಿಸಿದ್ದಾನೆ.

ವೀರ ಸುಗ್ಗವ್ವೆಯುಂ ಸತ್ಯಕ್ಕ ನಾಗಮ್ಮ
ವೀರ ಸಂಗವ್ವೆ ಮುಕ್ತಾಯಕ್ಕ ಕಮಳವ್ವೆ
ಸೂರಸಾಸಿಗಳುಡುತಡಿಯ ಮಹಾದೇವಿಯಾದವ್ವೆ ಜೊಂತಾದೇವಿಯು
ವೀರ ರೆಮ್ಮವ್ವೆ ನಿಂಬವ್ವೆ ಪಿಟ್ಟವ್ವೆ ಹೇ
ರೂರ ಹೆಣ್ಣುಂ ಚಂದ್ರಮಹದೇವಿ ರೇಚವ್ವೆ
ಜಾರು ಗುರುಭಕ್ತಿ ಲಿಂಗಮ್ಮ ನರಸವ್ವೆಯುಂ ಕೊಲ್ಲವ್ವೆ ರೆಬ್ಬೆವ್ವೆಯುಂ,

ಈಕೆಯ ಕಾಲ ಕ್ರಿ. ಶ, ೧೧೬೦ 'ನಿಜಶಾಂತೇಶ್ವರ' ಎಂಬ ಅಂಕಿತದಲ್ಲಿ ಈಕೆ ವಚನ ರಚಿಸಿದ್ದಾಳೆ; ಈಗ ದೊರೆತುದು ಒಂದು ಮಾತ್ರ.

ಬಂಜೆಯಾವಿಂಗೆ ಕ್ಷೀರವುಂಟೆ ?
ವ್ರತಹೀನನ ಬೆರೆಯಲುಂಟೆ ?
ನೀ ಬೆರೆವಡೂ ಬೆರೆ; ನಾನೊಲ್ಲೆ ನಿಜಶಾಂತೇಶ್ವರಾ !

ಈ ವಚನದಲ್ಲಿಯೂ ವ್ರತಾಚರಣೆಗೆ ಪ್ರಾಧಾನ್ಯತೆ ಇದ್ದುದು ಕಂಡುಬರುತ್ತದೆ. ಭಕ್ತಸ್ಥಲದ ಮಹತಿಯನ್ನು ಎತ್ತಿ ತೋರಿಸುವಲ್ಲಿ ಈಕೆಯ ಪಾತ್ರ ಎದ್ದುಕಾಣುತ್ತಿದೆ. ಭಕ್ತನಾಗದವ ಮಹೇಶ್ವರನಾಗಲಾರ, ಐಕ್ಯದ ಸ್ಥಿತಿಗೇರಲಾರ. ಆ ಪ್ರಯುಕ್ತ ಭಕ್ತಿಹೀನನನ್ನು ಬಂಜೆಯೆಂದು ಓಲ್ಪಿಸಿದ್ದಾಳೆ. ಬಂಜೆ ಭಕ್ತಿಕೂಸನ್ನೇ ಹಡೆಯದಿದ್ದರೆ ಆಕೆಗೆ ಮುಕ್ತಕ್ಷೀರ ಎಲ್ಲಿಂದ ಬರಬೇಕು. ಭಕ್ತಿ ಹೀನ ವ್ರತ ಮುಂದಿನ ಮೆಟ್ಟಲುಗಳಿಗೆ ವಂಚಿತನಾಗುವಲ್ಲಿ ಯಾವ ಸಂದೇಹವೂ ಇಲ್ಲ. ಭಕ್ತನಾಗದೇ ಮುಕ್ತನಾಗುವೆನೆಂಬ ಮಾತು ನನಗೇಡು. ಅಂತೇಯೇ ವ್ರತಹೀನನಾಗಿ ಅಂದರೆ ಭಕ್ತಿಹೀನನಾಗಿ ಮುಕ್ತನಾಗುವೆನೆಂಬ ನಿನ್ನ ಭ್ರಾಂತಿಗೆ ನಾನು ಒಗೊಡುವದಿಲ್ಲೆಂಬ ಅರ್ಥದಲ್ಲಿ 'ನೀ ಬೆರೆದಡೂ ಬೆರೆ ನಾನೊಲ್ಲೆ' ಎಂದು ನುಡಿದಿದ್ದಾಳೆ. ಮುಕ್ತನಾಗಲು ನಿಜವ್ರತ, ನಿಷ್ಕಾಮಭಕ್ತಿ ಬೇಕೆಂಬುದನ್ನು ರೇಚವ್ವೆ ಎತ್ತಿ ತೋರಿಸಿದ್ದಾಳೆ.

ಒಟ್ಟಾರೆ ಹನ್ನೆರಡನೆಯ ಶತಮಾನದ ಹೊಸ ದೃಷ್ಟಿಯಿಂಗಾಗಿ, ಸಮಾಜದಲ್ಲಿ ಹೊಸ ಆಸೆ ಚೇತನ ಮೂಡಿತು. ಯಾವ ಭೇದಭಾವವಿಲ್ಲದೆ ಎಲ್ಲರಿಗೂ ಆಧ್ಯಾತ್ಮಿಕ ಸಾಧನೆಯಲ್ಲಿ, ಸಾಹಿತ್ಯ ರಚನೆಯಲ್ಲಿ ಸಮಾನ ಅವಕಾಶ ದೊರೆಯಿತು. ಇದರಿಂದಾಗಿ ನಡೆ–ನುಡಿಗಳೆರಡನ್ನೂ ಜೀವನದುಸಿರಾಗಿರಿಸಿಕೊಂಡು ಬಾಳಿದ ಅಸಂಖ್ಯ ಶಿವಶರಣ–ಶರಣೆಯರ ವಚನಗಳು ನಮಗೆಲ್ಲ ದಾರಿದೀಪಗಳಾಗಿವೆ.

○

ಕದಿರ ರೆಮ್ಮವ್ವೆ ಮತ್ತು ಕೊಟ್ಟಣದ ಸೋಮವ್ವೆ

ವೀರಣ್ಣ ರಾಜೂರ

ಹನ್ನೆರಡನೆಯ ಶತಮಾನ ಕರ್ನಾಟಕದ ಚರಿತ್ರೆಯಲ್ಲಿ ಅನೇಕ ದೃಷ್ಟಿಯಿಂದ ಮಹತ್ವಪೂರ್ಣ ಕಾಲ; ಹಲವಾರು ವೈಶಿಷ್ಟ್ಯಗಳನ್ನು ಮೆರೆದ ಕ್ರಾಂತಿಯುಗ. ಆ ವೈಶಿಷ್ಟ್ಯಗಳಲ್ಲಿ ಬಸವಾದಿ ಶರಣರು ಗೈದ ಆಂದೋಲನ ಪ್ರಮುಖವಾದುದು. ಅವರು ಮಾಡಿದ ಅನೇಕ ವಿನೂತನ ಕಾರ್ಯಗಳಲ್ಲಿ ಸ್ತ್ರೀ ಸ್ವಾತಂತ್ರ್ಯವೂ ಒಂದು. ಇದರ ಫಲವಾಗಿ ಅನೇಕ ಶಿವಶರಣೆಯರು ನಮ್ಮ ಪೂರ್ವ ಇತಿಹಾಸದಲ್ಲಿ ಒಮ್ಮೆಲೇ ಕಾಣಿಸಿಕೊಂಡರು, ಅವರಲ್ಲಿ ಕದಿರ ರೆಮ್ಮವ್ವೆ ಮತ್ತು ಕೊಟ್ಟಣದ ಸೋಮವ್ವೆ ಗಮನಾರ್ಹರು.

ಇವರ ಜೀವನೇತಿಹಾಸಕ್ಕೆ ಸಂಬಂಧಿಸಿ ಸದ್ಯ ದೊರೆತ ಸಂಗತಿ ತೀರ ಅಲ್ಪ. ಸ್ವರಚಿತ ವಚನಗಳಲ್ಲಿ ಉಕ್ತವಾದ ವಿಷಯದ ಮೇಲಿಂದ ಅವರ ಕಾಯಕ, ಮನೋಭಾವಗಳನ್ನು ಮಾತ್ರ ತಿಳಿದುಕೊಳ್ಳಲು ಸಾಧ್ಯ; ಉಳಿದ ವಿವರ ಅಜ್ಞಾತವೆಂದು ಹೇಳಿದೆ ವಿಧಿಯಿಲ್ಲ.

ಕದಿರ ರೆಮ್ಮವ್ವೆ

ಕದಿರ ರೆಮ್ಮವ್ವೆ, ರೆಬ್ಬವ್ವೆ ಎಂದು ಕರೆಯಿಸಿಕೊಳ್ಳುವ ಈ ವಚನಕಾರ್ತಿ ಹನ್ನೆರಡನೆಯ ಶತಮಾನದಲ್ಲಿ ಬಸವ ಸಮಕಾಲೀನಳಾಗಿ ಬಾಳಿದ ಕಾಯಕ ಜೀವಿ. ಈಕೆಯ ಜೀವಿತ ಕಾಲವನ್ನು ಕವಿಚರಿತೆಕಾರರು ಸು. ೧೧೬೦ ಎಂದು ಊಹಿಸಿದ್ದಾರೆ....1 ಡಾ|| ಎಲ್. ಬಸವರಾಜು ಅವರು ಈಕೆಯ ವಚನಗಳಲ್ಲಿ ಬಳಕೆಯಾದ 'ಪರದಳ ವಿಭಾಡ' 'ಗಜವೇಂಟೆಕಾರ' ಎಂಬ ಪದಗಳನ್ನು ಗಮನಿಸಿ, ಇವು ವಿಜಯನಗರದ ಅರಸರ ಕಾಲದಲ್ಲಿ ಬಳಕೆಗೆ ಬಂದ ಬಿರುದಾವಳಿಗಳು, ಆದ್ದರಿಂದ ಈಕೆ ಸು. ೧೪೩೦ ರವಳಿರಬೇಕು ಎಂದು ಕಲ್ಪಿಸಿದ್ದಾರೆ2. ಹರಿಹರ ತನ್ನ ಲಿಂಗಾರ್ಚನೆಯ ರಗಳೆಯಲ್ಲಿ ಇತರ ಶಿವಶರಣೆಯರ ಜೊತೆಗೆ ರೆಮ್ಮವ್ವೆಯನ್ನೂ ಸ್ಮರಿಸಿದ್ದಾನೆ.3 ಪಾಲ್ಕುರಿಕೆ ಸೋಮನಾಥ ತನ್ನ ಪಂಡಿತಾರಾಧ್ಯ ಚಾರಿತ್ರದಲ್ಲಿನ ಗಣಸಹಸ್ರನಾಮದಲ್ಲಿ ಈಕೆಯ ಹೆಸರನ್ನೂ

1. ಕ.ಕ.ಚ.ಸಂ. 1. ಪು. 241 (ತಿದ್ದಿದ ದ್ವಿತೀಯ ಮುದ್ರಣ)
2. ಶಿವದಾಸ ಗೀತಾಂಜಲಿ ಪು. 367
3. ಹರಿಹರನ ರಗಳೆಗಳು ಭಾಗ—7 ಸಂ. ಫ. ಗು. ಹಳಕಟ್ಟಿ ಪು. 43-48

ಸೇರಿಸಿದ್ದಾನೆ[4] ಕಾರಣ ಈಕೆ ಕವಿಚರಿತೆಕಾರರ ಅಭಿಪ್ರಾಯದಂತೆ ಬಸವಸಮಕಾಲೀನರೊಳಗಿದ್ದ ವಚನಕಾರ್ತಿ ಎಂದು ನಿರ್ಧರಿಸುವುದೇ ಉಚಿತವೆನಿಸುತ್ತದೆ. ಇದಕ್ಕೆ ಪುಷ್ಟಿ ಕೊಡುವ ಇನ್ನೊಂದು ಅಂಶವೆಂದರೆ ಬಸವಾದಿ ಶರಣರ ವಚನಗಳ ಜೊತೆ ಈಕೆಯ ವಚನಗಳೂ 'ಸಕಲಪುರಾತನರ ವಚನಗಳು' ಕಟ್ಟು ಮತ್ತು ಇತರ ಸ್ಥಲಕಟ್ಟಿನ ಕೃತಿಗಳಲ್ಲಿ ಸಮಾವೇಶಗೊಂಡಿವೆ. ಸುಮಾರು ೧೬೨೦ರಲ್ಲಿದ್ದ ಶಂಕರದೇವ ತನ್ನ 'ಇಷ್ಟಲಿಂಗ ಚಾರಿತ್ರ' ಎಂಬ ಕೃತಿಯಲ್ಲಿ ಇತರ ಶರಣೆಯರ ಜೊತೆ 'ರೆಮ್ಮವ್ವೆ'ಯನ್ನು ಸ್ತುತಿಸಿದ್ದಾನೆ.[5] ಅಜ್ಞಾತ ಕವಿಯ 'ನೂರೆಂಟು ಶರಣೆಯರ ಅಷ್ಟಕ'ದಲ್ಲಿಯೂ ಈಕೆಯ ಹೆಸರು ಉಲ್ಲೇಖವಾಗಿದೆ.[6]

ಕವಿಚರಿತೆಕಾರರು ಕದಿರ ರೆಮ್ಮವ್ವೆ, ಕದಿರ ರೇಮಯ್ಯನ ಸತಿಯಾಗಿರಬಹುದು ಎಂದು ಊಹಿಸಿದ್ದಾರೆ.[7] ಕದಿರ ರೇಮಯ್ಯನ ಕಥೆ ಹೆಚ್ಚಾಗಿ ಎಲ್ಲ ವೀರಶೈವ ಪುರಾಣಗಳಲ್ಲಿ ಪ್ರಾಸಂಗಿಕವಾಗಿ ಬರುತ್ತದೆ. ಆದರೆ ಅಲ್ಲೆಲ್ಲಿಯೂ ರೆಮ್ಮವ್ವೆಯ ಪ್ರಸ್ತಾಪವಿಲ್ಲ. ಇಬ್ಬರ ಹೆಸರಿನ ಹಿಂದೆ ಹತ್ತಿದ ವಿಶೇಷಣ ಸಾಮ್ಯದಿಂದ ಕವಿಚರಿತೆಕಾರರು ಈಕೆ ಆತನ ಸತಿ ಇರಬೇಕೆಂದು ಕಲ್ಪಿಸಿದಂತಿದೆ. ಆದರೆ ಇಬ್ಬರಿಗೂ 'ಕದಿರೆ' ವಿಶೇಷಣ ಹತ್ತಲು ಕಾರಣಗಳು ಬೇರೆಯೇ ಆಗಿವೆ. ರೇಮಯ್ಯನಿಗೆ ಅವನ ಊರಿನ ಮೇಲಿಂದ 'ಕದಿರೆ ರೇಮಯ್ಯ' ಎಂದು ಹೆಸರು ಬಂದಿದ್ದರೆ,[8] ರೆಮ್ಮವ್ವೆಗೆ ಆಕೆಯ ಕಾಯಕದ ಮೇಲಿಂದ 'ಕದಿರ ರೆಮ್ಮವ್ವೆ' ಎಂಬ ಹೆಸರು ಪ್ರಾಪ್ತವಾಗಿದೆ.[9] ಆದುದರಿಂದ ಈಕೆ ರೇಮಯ್ಯನ ಸತಿಯಾಗಿರಬೇಕು ಎಂಬ ಮಾತನ್ನು ಸಬಲ ಸಾಕ್ಷ್ಯಾಧಾರಗಳು ದೊರಕುವವರೆಗೆ ನಂಬುವುದು ಕಷ್ಟ.

ರೆಮ್ಮವ್ವೆ ಒಬ್ಬ ನಿಷ್ಠಾವಂತ ಕಾಯಕ ಜೀವಿ. ರಾಟೆಯಿಂದ ನೂಲು ತೆಗೆಯುವುದು, ಅದರಿಂದ ಬಂದ ಆದಾಯದಿಂದ ಗುರುಲಿಂಗ ಜಂಗಮ ಸೇವೆ ಮಾಡುವುದು, ಜೊತೆಗೆ ಶರಣರ ಅನುಭಾವಗೋಷ್ಠಿ, ಆಧ್ಯಾತ್ಮ ಚರ್ಚೆಯಲ್ಲಿ ಭಾಗವಹಿಸುವುದು. ಅವಳ ನಿತ್ಯನೇಮ, ಸತ್ಯಕಾಯಕವಾಗಿತ್ತು. ಈ ಕಾಯಕಾನುಭವ, ಶರಣರ ಸಖ್ಯ ಹಾಗೂ ಶಿವಾನುಭವಗಳನ್ನು ಆಕೆ ತನ್ನ ವಚನಗಳಲ್ಲಿ ಅಭಿವ್ಯಕ್ತಪಡಿಸಿದ್ದಾಳೆ.

ಸದ್ಯ ರೆಮ್ಮವ್ವೆ ರಚಿಸಿದ ನಾಲ್ಕು ವಚನಗಳು ಮಾತ್ರ ದೊರೆತಿವೆ. ಅವುಗಳಲ್ಲಿ

---

4. ಶಿವದಾಸ ಗೀತಾಂಜಲಿ ಪು. 314
5. ಇಷ್ಟಲಿಂಗ ಚಾರಿತ್ರ: ಸಂ. ಎಸ್. ಉಮಾಪತಿ ಪದ್ಯ—42
6. ನೂರಾರು ಶರಣೆಯರ ಅಷ್ಟಕ: ನುಡಿ—8 (ಕನ್ನಡ ಅಧ್ಯಯನ ಪೀಠದ ತಾ. ಪ್ರ 811)
7. ಕರ್ಣಾಟಕ ಕವಿಚರಿತೆ—ಸಂಪುಟ-3 ಪು. 350 (ಹಳೆಯದು)
8. "ಕುಂತಳದೇಶದ 'ಕದಿರೆ' ಎಂಬ ಪುರದಲ್ಲಿ ರೇಮಯ್ಯನೆಂಬ ಶರಣರು ಗುರುಲಿಂಗ ಜಂಗಮ ಭಕ್ತಿಯಂ ಮಾಡುತ್ತ ಸುಖದಲ್ಲಿರುವಾಗ...."—ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ: ಭಾಗ–2 ಪು. 291
9. "ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ...."—ಎಂಬ ಈ ವಚನದಿಂದ ಇದು ಸ್ಪಷ್ಟ.

ಮೂರು ಸಕಲ ಪುರಾತನರ ಕಟ್ಟು,[10] ಲಿಂಗಚಿದಮೃತ ಬೋಧೆ,[11] ಭಕ್ತ್ಯಾನಂದ ಸುಧಾರ್ಣವ[12] ಮೊದಲಾದ ಸ್ಥಲಕಟ್ಟಿನ ಕೃತಿಗಳಲ್ಲಿ ಎಡೆ ಪಡೆದಿದ್ದರೆ, ಒಂದು ಮಾತ್ರ ಏಕಮುಲಿಯ ಗುರುಶಾಂತನ 'ಮಿಶ್ರ ಸ್ತೋತ್ರದ ವಚನಗಳು[13] ಸಂಕಲನದಲ್ಲಿ ಸೇರಿಕೊಂಡಿದೆ. ವಚನಗಳ ಅಂಕಿತ 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ'.

"ಶರಣ ಸತಿ ಲಿಂಗಪತಿ" ಭಾವ ಶರಣರ ವಚನಗಳ ಒಂದು ಪ್ರಮುಖ ಲಕ್ಷಣ. ಅಕ್ಕಮಹಾದೇವಿ, ಸತ್ಯಕ್ಕ, ಗಜೇಶ ಮಸಣಯ್ಯ, ಊರಿಲಿಂಗದೇವ, ಬಸವಣ್ಣ, ಷಣ್ಮುಖ ಶಿವಯೋಗಿ ಮೊದಲಾದವರು ಈ ಭಾವವನ್ನು ತಮ್ಮ ವಚನಗಳಲ್ಲಿ ಅತ್ಯಂತ ಸಮರ್ಥವಾಗಿ ಪ್ರಕಟಪಡಿಸಿದ್ದಾರೆ. ಶರಣ ತಾನು ಸತಿಯೆಂದು, ಲಿಂಗವೇ ಪತಿಯೆಂದು ಭಾವಿಸಿ ಲಿಂಗಪತಿಯೊಡನೆ ಸಾಮರಸ್ಯ ಹೊಂದಲು ಪಡುವ ತವಕ, ವಿರಹ, ಅದಕ್ಕೆ ಪೂರ್ವಭಾವಿಯಾಗಿ ಲಿಂಗಪತಿಯ ಗುಣಗಾನ, ವಿಶಿಷ್ಟತೆಗಳು ಈ ಬಗೆಯ ವಚನಗಳಲ್ಲಿ ವರ್ಣಿತವಾಗಿರುತ್ತವೆ. ರೆಮ್ಮವ್ವೆಯೂ ತನ್ನೆರಡು ವಚನಗಳಲ್ಲಿ ಈ ಭಾವವನ್ನು ಸುಂದರವಾಗಿ ವ್ಯಕ್ತಪಡಿಸಿದ್ದಾಳೆ:

ಎಲ್ಲರ ಗಂಡಂದಿರು ಪರದಳ ವಿಭಾಡರು;
ಎನ್ನ ಗಂಡ ಮರಳ ವಿಭಾಡ
ಎಲ್ಲರ ಗಂಡರು ಗಜವೇಂಟೆ ಕಾರರು;
ಎನ್ನ ಗಂಡ ಮನವೇಂಟೆ ಕಾರ.
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು;
ಎನ್ನ ಗಂಡ ತಾರದೆ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂಱು
ಎನ್ನ ಗಂಡಂಗೆ ಅದೊಂದೆಪ ಅದೊಂದು ಸಂದೇಹ.
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ.[14]
ಎಲ್ಲರ ಹೆಂಡಿರು ತೊಳಸಿಕ್ಕುವರು
ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂದಿರಗೆ ಬಸಿವರು
ಎನ್ನ ಗಂಡಂಗೆ ಬಸಿವುದಿಲ್ಲ.
ಎಲ್ಲರ ಗಂಡರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ

---

10. ಸಕಲಪುರಾತನರ ವಚನಗಳು: ಸಂ. 3 ಸಂ. ಎಂ. ಎಸ್. ಸುಂಕಾಪುರ ಪು. 58-59
11. ಲಿಂಗಚಿದಮೃತ ಬೋಧೆ: ಸಂ. ಎಂ. ಎಸ್. ಸುಂಕಾಪುರ ಸ್ಥಲ 22 ವಚನ 48, 49 ಇದರಲ್ಲಿ ಎರಡು ಮಾತ್ರ ಇವೆ.
12. ಭಕ್ತ್ಯಾನಂದ ಸುಧಾರ್ಣವ: (ಕಅಪೀ. ತಾಪ್ರ 1885) ಸ್ಥಲ 11 ವಚನ 120; 1985-86.
13. ಮಿಶ್ರಸ್ತೋತ್ರದ ವಚನಗಳು: (ಕಅಪೀ ತಾಪ್ರ 115; 14) ವಚನ—85
14. ಶಿವಶರಣೆಯರ ವಚನಗಳು: ಸಂ: ಡಾ॥ ಆರ್. ಸಿ. ಹಿರೇಮಠ, ಪು. 380-81

ಎಲ್ಲರ ಗಂಡಂದಿರು ಮೇಲೆ; ಎನ್ನ ಗಂಡ ಕೆಳಗೆ, ನಾ ಮೇಲೆ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ.[15]

ಲೋಕದ ಲೌಕಿಕ ಗಂಡರಿಗೂ ತನ್ನ ಮನದ ಅಲೌಕಿಕ ಗಂಡನಿಗೂ ಇರುವ ಅಸಾಧಾರಣ ಅಂತರವನ್ನು ಅವರ ಗುಣವಿಶೇಷ ವೈಶಿಷ್ಟ್ಯಗಳನ್ನು ಮೇಲಿನ ಎರಡು ಬೆಡಗಿನ ವಚನಗಳಲ್ಲಿ ಅತ್ಯಂತ ಮಾರ್ಮಿಕವಾಗಿ ಬಣ್ಣಿಸಿದ್ದಾಳೆ.[16]

ಇನ್ನೊಂದು ವಚನದಲ್ಲಿ ತನ್ನ ಲೌಕಿಕ ಕಾಯಕದ ಕ್ರಿಯೆಗಳನ್ನೆ ಪಾರಲೌಕಿಕ ಪರಮಾತ್ಮನ ಸಂಬಂಧವಾದ ಆಧ್ಯಾತ್ಮಿಕ ಅನುಭವಕ್ಕೆ ಹೊಂದಿಸಿ ಚಮತ್ಕಾರದಿಂದ ಹೀಗೆ ನುಡಿದಿದ್ದಾಳೆ :

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು, ಸಿಂದಜೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರ ಕರ್ಣ
ಅಜಾವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾರೆ
ಸುತ್ತಿತ್ತು ನೂಲು, ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ....[17]

ಮತ್ತೊಂದು ವಚನದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ ಈ ಮೂವರು ಶರಣ ಶ್ರೇಷ್ಠರು ತನ್ನ ಸ್ಥೂಲ, ಸೂಕ್ಷ್ಮ, ಕಾರಣ ತನುಗಳೆಂದೂ ಅವರ ಕರುಣದಿಂದ ತಾನು ಬದುಕಿದೆ, ಜೀವನ ಸಾರ್ಥಕಪಡಿಸಿಕೊಂಡೆನೆಂದೂ ತಿಳಿಸುತ್ತಾಳೆ:

ಎನ್ನ ಸ್ಥೂಲ ತನುವೆ ಬಸವಣ್ಣನಯ್ಯ
ಎನ್ನ ಸೂಕ್ಷ್ಮ ತನುವೆ ಚೆನ್ನಬಸವಣ್ಣನಯ್ಯ
ಎನ್ನ ಕಾರಣ ತನುವೆ ಪ್ರಭುದೇವರಯ್ಯ
ಇಂತಿವರ ಕರುಣದಿಂದಲಾನು ಬದುಕಿದೆನಯ್ಯ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ....[18]

ಈಕೆಯ ವಚನಗಳ ಭಾಷೆ ಸರಳ, ಪರಿಭಾಷೆ ಬಂಧುರ. ಒಂದು ವಚನ ಸುಲಭ ಗ್ರಾಹ್ಯವಾದರೆ, ಉಳಿದ ಮೂರು ಬೆಡಗಿನಿಂದ ಕೂಡಿವೆ. ಲೌಕಿಕದೊಡನೆ ಪಾರ ಲೌಕವನ್ನು ಸಮೀಕರಿಸಲು ಬೆಡಗಿನ ಈ ವಿಧಾನ ಸಮರ್ಪಕವೆಂದು ತೋರುತ್ತದೆ. ಎಲ್ಲ ವಚನಗಳಲ್ಲಿ ಲೋಕಾನುಭವ ಮತ್ತು ಶಿವಾನುಭವ ಸಮನಾಗಿ ಬೆರೆತು ಪರಿಪಾಕ ಗೊಂಡಿವೆ. ಒಟ್ಟಿನಲ್ಲಿ ಕದಿರ ರೆಮ್ಮವ್ವೆ ಕೆಲವೇ ವಚನಗಳನ್ನು ಬರೆದಿದ್ದರೂ ತನ್ನವೇ ಆದ ಕೆಲವು ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡು ವಚನಸಾಹಿತ್ಯದಲ್ಲಿ ಸ್ಥಿರವಾಗಿ ನಿಂತಿದ್ದಾಳೆ.

---

15. ಶಿವಶರಣೆಯರ ವಚನಗಳು: ಸಂ. ಡಾ॥ ಆರ್. ಸಿ. ಹಿರೇಮಠ, ಪು. 380-81
16. ಇವುಗಳ ವಿವರಣೆಯನ್ನು ಅನುಬಂಧದಲ್ಲಿ ಕೊಟ್ಟಿರುವ ಟೀಕೆಯಲ್ಲಿ ನೋಡಿ
17. ಶಿವಶರಣೆಯರ ವಚನಗಳು: ಪು. 81
18. ಅದೇ ಪುಟ 80

ಕೊಟ್ಟಣದ ಸೋಮವ್ವೆ

ಈಕೆಯ ಸ್ವವಿಷಯ ಕದಿರ ರೆಮ್ಮವ್ವೆಯಷ್ಟು ಸಹಿತ ದೊರಕುವುದಿಲ್ಲ. ಸಕಲ ಪುರಾತನರ ವಚನಗಳ ಕಟ್ಟು ಮತ್ತು ಶೀಲ ಸಂಪಾದನೆ[19] ಈ ಎರಡು ವಚನ ಸಂಕಲನಗಳಲ್ಲಿ ಇವಳ ಹೆಸರಿನಡಿಯಲ್ಲಿ ಒಂದು ವಚನ ಮಾತ್ರ ಸಂಗ್ರಹವಾಗಿದೆ. ವಚನಾಂಕಿತ 'ನಿರ್ಲಜ್ಜೇಶ್ವರಾ'. ವಿದ್ವಾಂಸರು ಬಸವ ಸಮಕಾಲೀನ ಶರಣೆಯಾಗಿ ಈಕೆ ಬಾಳಿರಬೇಕೆಂದು ಗಣಿಸಿದ್ದಾರೆ.[20] ಕವಿಚರಿತ್ರೆಕಾರರು ಇವಳ ಕಾಲ ಸು.೧೧೬೦ ಇರಬೇಕೆಂದು ಊಹಿಸಿದ್ದಾರೆ.[21] ಕದಿರ ರೆಮ್ಮವ್ವೆಯಂತೆ ಇವಳೂ ಕಾಯಕ ಜೀವಿಯಾಗಿ ಶರಣರ ಮಧ್ಯೆ ಬಾಳಿ ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಂಡಿರಬೇಕು. ಇವಳ ಕಾಯಕ ಕೊಟ್ಟಣ ಕುಟ್ಟುವುದು. ಇದು ಈಕೆಯ ಹೆಸರಿಗೆ ಹತ್ತಿದ ವಿಶೇಷಣ ಹಾಗೂ ವಚನದಲ್ಲಿ ಬಳಸಿದ ದೃಷ್ಟಾಂತಗಳಿಂದ ವ್ಯಕ್ತವಾಗುತ್ತದೆ. ನಿತ್ಯ ಭಕ್ತರ ಮನೆಯ ಅಕ್ಕಿಯನ್ನು ಕುಟ್ಟುವುದು, ಅದರಿಂದ ಬಂದ ಧನದಿಂದ ಗುರುಲಿಂಗಜಂಗಮ ಸೇವೆ ಮಾಡುವುದು. ಇದು ಇವಳ ದಿನಚರಿ.

ನಡೆ–ನುಡಿ, ಆಚಾರ–ವಿಚಾರ, ವ್ರತ–ನಿಯಮಗಳಿಗೆ ಶರಣರು ಕೊಟ್ಟ ಸ್ಥಾನ ಹಿರಿದಾದುದು. 'ನುಡಿದಂತೆ ನಡೆದರೆ ಅದೇ ಜನ್ಮಕಡೆ' ಎಂಬುದನ್ನರಿತು ನಡೆನುಡಿಗಳಲ್ಲಿ ಸಾಮರಸ್ಯವನ್ನು ಸಾಧಿಸಿದ ಸಾತ್ವಿಕರವರು. ಜೀವನಕ್ಕೊಂದು ನಿಯಮ ಬೇಕು, ಜೀವಿ ವ್ರತ ಸಹಿತನಾಗಿರಬೇಕೆಂದು ತಾವು ವ್ರತ ನಿಯಮಗಳನ್ನು ಪಾಲಿಸಿ ಶುದ್ಧ ಜೀವನ ನಡೆಸಿ, ಇತರರು ಅದರಂತೆ ನಡೆದರೆ ಜೀವನ ಪಾವನ, ಸಾರ್ಥಕವೆಂದು ತೋರಿಸಿಕೊಟ್ಟ ಸಾಧಕರವರು. ಅವರ ಈ ಆಚರಣೆ ಕುರಿತ ವಿಚಾರಗಳು ವಚನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಳವಟ್ಟಿವೆ. ವ್ರತ ನಿಯಮಗಳನ್ನು ಕುರಿತು ಶರಣರಿಗಿಂತ ಶರಣೆಯರು ಒಂದು ಕೈಮೇಲಾಗಿಯೇ ಹೇಳಿದುದನ್ನು ಆಚರಣೆಯಲ್ಲಿ ತಂದು ಜೀವನ ಹಸನಾಗಿಸಿಕೊಂಡಿದ್ದಾರೆ. ಹೆಚ್ಚಾಗಿ ಎಲ್ಲ ಪುರಾತನ ಶರಣೆಯರೂ ವ್ರತನಿಯಮಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಾತಿಗೆ ಕೊಟ್ಟಣದ ಸೋಮವ್ವೆ ಹೊರತಾಗಿಲ್ಲ. ತಾನು ರಚಿಸಿದ ಈಗ ದೊರೆತ—ಒಂದೇ ಒಂದು ವಚನದಲ್ಲಿ ಆಕೆ ವ್ರತವನ್ನು ಕುರಿತು ಮನಮುಟ್ಟುವಂತೆ ಹೇಳಿದ್ದಾಳೆ :

> "ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
> ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ
> ಅರಿಯದುದು ಹೋಗಲಿ, ಅರಿದು ಬೆರೆವೆನಾದಡೆ
> ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ
> ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ"[22]

---

19. ಶೀಲ ಸಂಪಾದನೆ: (ಕನ್ನಡ ಅಧ್ಯಯನ ಪೀಠ ತಾ.ಪ್ರ 2773)
20. ಈಕೆ ನಿರ್ಲಜ್ಜ ಶಾಂತಯ್ಯನ ಶಿಷ್ಯರಲ್ಲಿ ಒಬ್ಬಳು ಎಂದು ಡಾ. ಫ.ಗು.ಹಳಕಟ್ಟಿಯವರು ಅಭಿಪ್ರಾಯಪಡುತ್ತಾರೆ. (ಶಿವಶರಣೆಯರ ಚರಿತ್ರೆಗಳು ಪುಟ-47)
21. ಕ. ಕ. ಚ. ಸಂ.-1. ಪುಟ-242 (ತಿದ್ದಿದ ದ್ವಿತೀಯ ಮುದ್ರಣ).
22. ಶಿವಶರಣೆಯರ ವಚನಗಳು ಪುಟ-398.

ಇಲ್ಲಿ ವ್ರತದ ಶ್ರೇಷ್ಠತೆಯನ್ನೂ ವ್ರತವಿಹೀನತೆಯ ಭ್ರಷ್ಟತೆಯನ್ನೂ ತನ್ನ ಕಾಯಕವ ಸುಂದರ ದೃಷ್ಟಾಂತದೊಂದಿಗೆ ಸ್ಪಷ್ಟಪಡಿಸಿದ್ದಾಳೆ. ಅಕ್ಕಿಯನ್ನು ಹದವರಿತು ಕುಟ್ಟಬೇಕು. ಹದತಪ್ಪಿದರೆ ಅದು ನುಚ್ಚಾಗಿ ನಿರುಪಯುಕ್ತವಾಗುತ್ತದೆ. ಹಾಗೇ ಭಕ್ತನು ವ್ರತ ಸಹಿತನ ಸಂಗಬೆಳೆಸಬೇಕು, ಅಂದರೆ ಮಾತ್ರ ಮುಕ್ತಿಪ್ರಾಪ್ತಿ. ಅದನ್ನು ಬಿಟ್ಟು ವ್ರತಹೀನನ ಕೂಡಿದರೆ ನರಕಕ್ಕೆ ಭಾಜನನಾಗಬೇಕಾಗುತ್ತದೆ. ಎಂದು ತಿಳಿಸಿದ್ದಾಳೆ. ಆಕೆ ಇನ್ನೂ ಮುಂದುವರಿದು ಅರಿಯದೆ ವ್ರತಹೀನನನ್ನು ಬೆರೆತರೆ ಅದು ತಪ್ಪಲ್ಲ. ಅರಿತೂ ಬೆರೆತರೆ ಮಹಾಪರಾಧ. ಅಂಥ ಅಪರಾಧಿಯನ್ನು ದೇವರು ಶಿಕ್ಷಿಸದೆ ಬಿಡಲಾರ. ಕಾದಕತ್ತಿಯಿಂದ ಅವರ ಕಿವಿಯನ್ನು ಕೊಯ್ಯುತ್ತಾನೆ. ಅದಕ್ಕಾಗಿ ಯಾವಾಗಲೂ ವ್ರತ ಸಹಿತನ ಸಹವಾಸವೇ ಲೇಸು ಎಂಬುದು ಈಕೆಯ ಅಭಿಮತ. ವ್ಯಕ್ತಿಯ ನಡವಳಿಕೆ ಶುದ್ಧವಾಗಿರಬೇಕು, ಶೀಲಯುತವಾಗಿರಬೇಕು. ಆಚಾರಹೀನತೆ ಪಾಪ ಎಂಬುದು ಈ ವಚನದ ಆಶಯ. ಭಾಷೆ ಸರಳ, ಹೇಳುವ ವಿಧಾನ ಸುಂದರ.

ಒಟ್ಟಿನಲ್ಲಿ ಕದಿರೆ ರೆಮ್ಮವ್ವೆ ಮತ್ತು ಕೊಟ್ಟಣದ ಸೋಮವ್ವೆ ಇಬ್ಬರೂ ನಿಷ್ಠಾವಂತ ಕಾಯಕ ಜೀವಿಗಳಾಗಿ, ಅನುಭಾವಿಗಳಾಗಿ ವಚನ ಸಾಹಿತ್ಯದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಅನುಬಂಧ

ಕದಿರ ರೆಮ್ಮವ್ವೆಯ ಮೂರು ಬೆಡಗಿನ ವಚನಗಳಿಗೆ 'ಸಿಂಗಳದ ಸಿದ್ಧಬಸವರಾಜ' ಬರೆದ ಟೀಕೆಯನ್ನು ಓದುಗರ ಉಪಯೋಗಕ್ಕಾಗಿ ಇಲ್ಲಿ ಕೊಡಲಾಗಿದೆ.

ವಚನ

ಎಲ್ಲರ ಗಂಡಂದಿರು ಪರದಳ ವಿಭಾಡರು; ಎನ್ನ ಗಂಡ ಮನದಳ ವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು; ಎನ್ನ ಗಂಡ ಮನವೇಂಟೆಕಾಜಿ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು; ಎನ್ನ ಗಂಡ ತಾರದೆ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂಜು; ಎನ್ನ ಗಂಡಂಗದೊಂದೆ
ಅದೊಂದೂ ಸಂದೇಹ, ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ಟೀಕು

ಮಾಯಾಶಕ್ತಿಯ ವಲ್ಲಭರಾದ ಖಂಡಿಲ ಜ್ಞಾನಿಗಳೆಲ್ಲರು ಬಹಿರಂಗದ ಪ್ರಪಂಚು ತನುದಂಡನೆಗಳಿಂದ ನಿವೃತ್ತಿಯ ಮಾಡಬೇಕೆನ್ನುತ್ತಿಹರೆಂಬುದೀಗ, ಎಲ್ಲರ ಗಂಡಂದಿರು ಪರದಳ ವಿಭಾಡರು ಎಂಬ ಶಬ್ದಕ್ಕರ್ಥ.

ಚಿತ್‌ಸ್ವರೂಪನಾದ ಶರಣಸತಿಗೆ ಮಹಾಘನಲಿಂಗವೇ ಪತಿಯಾದ ಕಾರಣ, ಆ ಮಹಾ ಘನಲಿಂಗವು ಶರಣನ ಸರ್ವಾಂಗವನವಗ್ರಹಿಸಿ ಮನಿಸಿನಿಂತೋರುವ ಸಂಕಲ್ಪ ವಿಕಲ್ಪ ಮೊದಲಾದ ಸಕಲ ಪ್ರಪಂಚ ನಿವೃತ್ತಿ ಮಾಡಿ ಶಿವಜ್ಞಾನವ ಪ್ರಭಾವಿಸಿ ಕೊಡುತ್ತಿಹುದೆಂಬುದೀಗ, ಎನ್ನ ಗಂಡ ಮನದಳ ವಿಭಾಡ ಎಂಬ ಶಬ್ದಕ್ಕರ್ಥ.

ಮಾಯಾಶಕ್ತಿಯ ವಲ್ಲಭರಾದ ಭಿನ್ನಜ್ಞಾನಿಗಳೆಲ್ಲರು ಬಹಿರಂಗದಷ್ಟಮದಂಗಳ ನಷ್ಟವ ಮಾಡಬೇಕೆನುತ್ತಿಹರು. ಚಿದ್ರೂಪನಾದ ಶರಣನ ಬಾಹ್ಯಾಂತರಂಗಳನೊಳ

ಗೊಂಡು ಪರಿಪೂರ್ಣವಾಗಿಪ್ಪ ಪರಶಿವ ತತ್ವವು ಅಂತರಂಗದಷ್ಟಮದಂಗಳ ನಷ್ಟವ ಮಾಡಿ ಚಿದಹಂಕಾರದ ಸ್ವರೂಪವನೆಯ್ದಿಸುತ್ತಿಹನೆಂಬುದೀಗ, ಎಲ್ಲರ ಗಂಡಂದಿರು ಗಜವೇಂಟೆಕಾರರು; ಎನ್ನಗಂಡ ಮಸವೇಂಟೆಕಾರ ಎಂಬ ಶಬ್ದಕ್ಕರ್ಥ.

ತಮ್ಮ ನಿಜವೇ ಪರಬ್ರಹ್ಮವೆಂದರಿಯದೆ ದ್ವೈತಭಾವದಿಂದ ಲಿಂಗಕ್ಕೆ ಸರ್ವ ಕ್ರಿಯೋಪಚಾರಂಗಳ ಮಾಡಿ ಭಿನ್ನಫಲಪದಂಗಳ ಪಡೆದು ಭೋಗಿಸಿದವರು ಭವ ಹೇರುವಪ್ಪ ಜನ್ಮಾಂತರಕ್ಕೆ ಬಂದು ಮಾಯಾ ಸಂಬಂಧವಾದ ಸಕಲ ವಿಷಯ ಪದಾರ್ಥಂಗಳ ಜೀವಭಾವದಿಂ ಭುಂಜಿಸುತ್ತಿಹರು. ಸುಜ್ಞಾನ ಸನ್ನಿಹಿತವಾದ ಶರಣ ಸತಿಗೆ ಪತಿಯಾಗಿರ್ಪ ಮಹಾಘನಲಿಂಗವು ಫಲಪದಂಗಳ ಕೊಟ್ಟು ಭವಕ್ಕೆ ತಾರದೆ ಲಿಂಗ ಮನಪ್ರಾಣ ಸರ್ವೇಂದ್ರಿಯಂಗಳಲ್ಲಿ ಸಂಬಂಧವಾದ ಸಕಲ ಪದಾರ್ಥಂಗಳ ಭಕ್ತಿಯಿಂದರ್ಪಿಸಿಕೊಂಡು ಪ್ರಸಾದವ ಕರುಣಿಸಿ ನಿತ್ಯವಾದ ಮುಕ್ತಿಯ ಕೊಡುತ್ತಿಹುದು ಶರಣಂಗೆಂಬುದೀಗ, ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು, ಎನ್ನ ಗಂಡ ತಾರದೆ ಇಕ್ಕಿಸಿಕೊಂಬ ಎಂಬ ಶಬ್ದಕ್ಕರ್ಥ.

ಮಾಯಾ ಶಕ್ತಿಯ ವಲ್ಲಭರಾದ ಭಿನ್ನಜ್ಞಾನಿಗಳೆಲ್ಲರೂ ತ್ರಿಪುಟಿ ಜ್ಞಾನ ಸಂಬಂಧಿಗಳಾಗಿಹರು. ಚಿತ್ ಪ್ರಭಾಂಗ ಸ್ವರೂಪನಾದ ಶರಣಸತಿಗೆ ಪ್ರಾಣವಲ್ಲಭನಾದ ಪರಬ್ರಹ್ಮಲಿಂಗಕ್ಕೆ ಅಖಂಡ ಜ್ಞಾನಪ್ರಕಾಶವೊಂದೇ ಶರಣನ ಸರ್ವಾಂಗನವ ಗ್ರಹಿಸಿ ನಿಷ್ಪತ್ತಿಯಾಯಿತ್ತೆಂಬುದೀಗ, ಎಲ್ಲರ ಗಂಡಂದಿರಿಗೆ ಮೂಜು, ಎನ್ನಗಂಡಂಗದೊಂದೆ. ಅದೊಂದೂ ಸಂದೇಹ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ.

ವಚನ

ಎಲ್ಲರ ಹೆಂಡಿರು ತೊಳಸಿಕ್ಕುವರು; ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂದಿರಿಗೆ ಬಸಿವರು; ಎನ್ನ ಗಂಡಂಗೆ ಬಸಿವುದಿಲ್ಲ.
ಎಲ್ಲರ ಗಂಡಂದಿರಿಗೆ ಬೀಜವುಂಟು; ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ; ಎನ್ನ ಗಂಡ ಕೆಳಗೆ, ನಾ ಮೇಲೆ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ.

ಟೀಕು

ಸಾಕಾರವಾದ ಲಿಂಗಕ್ಕೆ ಸತಿಯರೆನಿಸಿಕೊಂಬ ದ್ವೈತಿಗಳು ಭಿನ್ನ ಕ್ರಿಯೆಗಳ ಮಾಡಿ ಫಲಪದಂಗಳ ಪಡೆದು ಭೋಗಿಸಿ ಭವಹೇತುವಾಗಿ ಜನನಕ್ಕೆ ಬಂದು ಭಿನ್ನವಿಟ್ಟ ಪದಾರ್ಥಗಳ ಲಿಂಗಕ್ಕರ್ಪಿಸಿ ಭೋಗಿಸುತ್ತಿಹರು. ಮಹಾಘನಲಿಂಗವ ಸರ್ವಾಂಗದಲ್ಲಿ ಸಂಬಂಧವ ಮಾಡಿಕೊಂಡಿರ್ಪ ಶರಣ ಸತಿಯು ಸಕಲ ಪದಾರ್ಥಂಗಳ ಅಭಿನ್ನಭಾವದಿಂ ಲಿಂಗಕ್ಕರ್ಪಿಸಿ ಲಿಂಗ ಭೋಗೋಪಯೋಗಿಹಳಲ್ಲದೆ ಜೀವಭಾವದಿಂ ಜನನಕ್ಕೆ ಬರಲಿಲ್ಲವೆಂಬುದೀಗ, ಎಲ್ಲರ ಹೆಂಡಿರು ತೊಳಸಿಕ್ಕುವರು; ಎನ್ನ ಗಂಡಂಗೆ ತೊಳಸಿಕ್ಕುವದಿಲ್ಲ ಎಂಬ ಶಬ್ದಕ್ಕರ್ಥ.

ಮಾಯಾ ಶಕ್ತಿಯ ವಲ್ಲಭರಾದ ಭಿನ್ನಜ್ಞಾನಿಗಳೆಲ್ಲರು ದೇಹೇಂದ್ರಿಯ ವಿಷಯ ರಸಂಗಳ ನಿಷ್ಪತ್ತಿಯ ಮಾಡಬೇಕೆನುತ್ತಿಹರು. ಸರ್ವಾಂಗಲಿಂಗ ಸಂಬಂಧಿಯಾಗಿಪ್ಪ

ಶರಣ ಸತಿಯು ದೇಹೇಂದ್ರಿಯ ವಿಷಯರಸಂಗಳ ನಿವೃತ್ತಿ ಮಾಡಿ ಕಳೆಯಲಿಲ್ಲ ವೆಂಬುದೀಗ, ಎಲ್ಲರ ಗಂಡಂದಿರಿಗೆ ಬಸಿವರು, ಎನ್ನ ಗಂಡಂಗೆ ಬಸಿವುದಿಲ್ಲ ಎಂಬ ಶಬ್ದಕ್ಕರ್ಥ.

ಮಾಯಾ ವಲ್ಲಭರಾದ ದ್ವೈತಿಗಳೆಲ್ಲಕ್ಕೂ ತಾನೆಂಬಹಂಕಾರವುಂಟಾಗಿತ್ತಿಹುದು ಶರಣೆಂಗೆ ಚೈತನ್ಯ ಸ್ವರೂಪವಾದ ಮಹಾಘನಲಿಂಗವೆಂಬ ಪತಿಗೆ ಜನನಕ್ಕೆ ಕಾರಣ ವಾದ ಅಹಂಕಾರ ನಾಸ್ತಿಯೆಂಬುದೀಗ, ಎಲ್ಲರ ಗಂಡಂದಿರಿಗೆ ಬೀಜವುಂಟು, ಎನ್ನ ಗಂಡಂಗೆ ಅಂಡದ ಬೀಜವಿಲ್ಲ ಎಂಬ ಶಬ್ದಕ್ಕರ್ಥ.

ಮಾಯಾ ಶಕ್ತಿಯ ಖಂಡಿತ ಜ್ಞಾನಿಗಳೆಲ್ಲರೂ ಲಿಂಗಕ್ಕೆ ಅರ್ಹ ಕ್ರಿಯೋಪ ಚಾರಂಗಳ ಮಾಡಿ ಫಲಭೋಗ ಪ್ರಾಪ್ತಿಯನೆಯ್ದು ಸ್ವರ್ಗದಲ್ಲಿ ತೇಜಿಷ್ಟರಾಗಿಹರು. ಶರಣಸತಿಗೆ ವಲ್ಲಭ ತಾನಾಗಿರ್ಪ ಮಹಾಘನಲಿಂಗವು ಚತುರ್ವಿಧ ಫಲಪದಂಗಳ ಮುಟ್ಟದೆ ಶರಣನ ಸರ್ವಾಂಗದಲ್ಲಿ ಸಂಬಂಧವಾಗಿರುತ್ತಿರಲು ಆ ಲಿಂಗಕ್ಕೆ ಶರಣನೆ ಅಧಿಷ್ಟಾಯಕನಾಗಿ ಸಮರಸ ಭಾವದಿಂದಿರುತ್ತಿಹನೆಂಬುದೀಗ, ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ, ನಾ ಮೇಲೆ ಕದಿರ ರೆಮ್ಮಿಯೊಡನೆಯ ಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ.

ವಚನ

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ: ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯುವೆರಡು ಸೂತ್ರ ಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹುಲಾಗಿ
ಸುತ್ತಿತು ನೂಲು, ಕದಿರು ತುಂಬಿತ್ತು, ರಾಟೆಯು ತಿರುಹಲಾರೆ
ಎನ್ನ ಗಂಡ ಕುಟ್ಟಿಹ, ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ಟೀಕು

ಶಿವಜ್ಞಾನೋದರವಾಗಿ ಶ್ರೀಗುರು ಕಾರುಣ್ಯದಿಂ ಸರ್ವಾಂಗಲಿಂಗ ಸಂಬಂಧ ವಾಗಿರ್ಪ ಶರಣನ ಸರ್ವಾಚಾರ ಸಂಪತ್ತಿನ ಆಚರಣೆಯೆಂತೆಂದಡೆ; ಇಷ್ಟಲಿಂಗ ಸಂಬಂಧವಾದ ಆಚಾರವೆಂಬುದೀಗ, ನಾ ತಿರುಹುನ ರಾಟೆಯ ಕುಲಜಾತಿಯ ಕೇಳಿರಣ್ಣಾ, ಅಡಿಯ ಹಲಗೆ ಬ್ರಹ್ಮ ಎಂಬ ಶಬ್ದಕ್ಕರ್ಥ.

ತನ್ನ ಹೃದಯ ಕಮಲ ಕರ್ಣಿಕಾ ಮಧ್ಯದಲ್ಲಿ ಚಿತ್‌ಪ್ರಕಾಶವಾಗಿ ತೊಳಗಿ ಬೆಳಗುವ ಪ್ರಾಣಲಿಂಗದಲ್ಲಿ ಆಚರಿಸುವ ಸೃಷ್ಟಿಕಾಭಾವಂಗಳೆರಡು ತೋರಣವಾಗಿಹ ವೆಂಬುದೀಹ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ ಎಂಬ ಶಬ್ದಕ್ಕರ್ಥ.

ಅಂತಪ್ಪ ಮಹಾಜ್ಞಾನದ ಬೆಂಬಳಿಯಲ್ಲಿ ತೋರುವ ಜ್ಞಾನ ಕ್ರಿಯೆಗಳೆರಡು ಭಿನ್ನವಿಲ್ಲದಿಹವೆಂದೀಗ, ರುದ್ರನ ಬೆಂಬಳಿಯುವೆರಡು ಸೂತ್ರ ಕರ್ಣ ಎಂಬ ಶಬ್ದಕ್ಕರ್ಥ.

ಅಂತು ಜ್ಞಾನಕ್ರಿಯೆಯೊಳಕೊಂಡು ಸದ್ವಿವೇಕ ಜ್ಞಾನ ಸಂಬಂಧವಾದ ಶಿವಾದ್ವೈತ ಭಕ್ತಿಯಿಂದಾಚರಿಸುತ್ತಿರ್ಪ ಶರಣನ ಸ್ವಾನುಭಾವ ಸೂತ್ರವು ಸದ್ವಿವೇಕ

ಜ್ಞಾನ ಪರಿಪೂರ್ಣವಾಯಿತ್ತೆಂಬುದೀಗ, ಸುತ್ತಿತು ನೂಲು, ಕದಿರ ತುಂಬಿತ್ತು ಎಂಬ ಶಬ್ದಕ್ಕರ್ಥ.

ಅಂತು ಅಭಿನ್ನ ಕ್ರಿಯಾಚಾರವಿಡಿದಾಚರಿಸುತ್ತಿರ್ಪ ಶರಣನು ಭಿನ್ನಕ್ರಿಯಾಚಾರವಿಡಿದಾಚರಿಸಿದೊಡೆ ಮಹಾಘನಲಿಂಗವೆಂಬ ಪತಿ ಆಜ್ಞೆಯ ಮಾಡಿಹನೆಂಬುದು ಭಿನ್ನಕ್ರಿಯಾಚಾರವ ವಿಸರ್ಜಿಸಿ ಸಾವಧಾನ ಸಂಪನ್ನನಾಗಿ ಉಪಾವಸ್ಥೆಯ ಮಾಡುತ್ತಿಹನೆಂಬುದೀಗ, ರಾಟಿಯ ತಿರುಹಲಾರೆ, ಎನ್ನ ಗಂಡ ಕುಟ್ಟಿಹ ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ[23]

23. ಸಕಲಪುರಾತನರ ಜಿಡಗಿನ ವಚನಗಳು—ಸಂ. ಡಾ. ಎಂ. ಎಸ್. ಸುಂಕಾಪುರ ಪುಟ 315-318

ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆ ಹಾಗೂ ಕಾಲಕಣ್ಣಿಯ ಕಾಮಮ್ಮ

ಬಸವರಾಜ ಹೂಗಾರ

ಕಾರಣಾಂತರಗಳಿಂದ ನಶಿಸಿ ಹೋದ ವಚನ ರಾಶಿಯಲ್ಲಿ— (೧) ಕಡಿಮೆ ಪ್ರಮಾಣದಲ್ಲಿ ವಚನ ರಚಿಸಿದ ವಚನಕಾರ ಹಾಗೂ ವಚನಕಾರ್ತಿಯರು. (೨) ಗುಣಾತ್ಮಕವಾಗಿ ಗಣನೀಯರೆನಿಸಿದ ವಚನಕಾರ ಹಾಗೂ ವಚನಕಾರ್ತಿಯರು ಸೇರುತ್ತಾರೆ. ಈ ಎಲ್ಲ ಕುತ್ತಗಳನ್ನು ದಾಟುವಲ್ಲಿ ಕೆಲವು ವಚನಕಾರ ಹಾಗೂ ವಚನಕಾರ್ತಿಯರು ಪೂರ್ಣ ಮುಳುಗಿರುವ ಸಾಧ್ಯತೆಯೂ ಇದೆ. ಕೆಲವರ ವಚನಗಳು ಪ್ರಾತಿನಿಧಿಕವೆನ್ನುವಂತೆ ಒಂದೋ ಎರಡೋ ಲಭ್ಯವಾಗುತ್ತವೆ. ರೇಚಮ್ಮ, ಲಕ್ಷ್ಮಮ್ಮ, ಕಾಳವ್ವೆ, ಕಾಮಮ್ಮ, ಗುಂಡವ್ವೆ, ಸೂಳೆ ಸಂಕವ್ವೆ, ಕೇತಲದೇವಿ, ಗಂಗಮ್ಮ, ಮೊದಲಾದ ವಚನಕಾರ್ತಿಯರು. ಉದ್ದೆಯ ಸೋಮಯ್ಯ, ವರದ ಸಂಕಣ್ಣ, ಶಿವನಾಗಮಯ್ಯ ಮುಂತಾದ ವಚನಕಾರರು ಈ ಸಾಲಿನಲ್ಲಿ ನಿಲ್ಲುತ್ತಾರೆ.

ವರ್ಣಾಶ್ರಮಧರ್ಮದ ಪ್ರಭಾವದಿಂದಾಗಿ ಶತಮಾನಗಳಿಂದ ಭಾರತೀಯ ಸಮಾಜದಲ್ಲಿ ಒಟ್ಟಾರೆ ಎರಡು ವರ್ಗಗಳು ನಿರ್ಮಾಣವಾಗಿದ್ದವು. ಒಂದು ವರ್ಣಾಶ್ರಮ ಧರ್ಮದ ರಕ್ಷೆಯಲ್ಲಿರುವುದು. ಇನ್ನೊಂದು ಇದರ ಹೊರಗಿನ ಕಕ್ಷೆಯಲ್ಲಿರುವುದು. ಎರಡನೆಯ ವರ್ಗದ ಸಮಾಜದಲ್ಲೀ ಕೀಳು ಜಾತಿ ಹಾಗೂ ಕೀಳು ವೃತ್ತಿಯ ಜನಸಮುದಾಯವನ್ನು ಪರಿಗಣಿಸಲಾಗಿದ್ದಿತು. ಮೊದಲನೆಯ ವರ್ಗದಲ್ಲೂ ಸ್ತ್ರೀಗೆ ಪುರುಷರಿಗಿಂತ ಕಡಿಮೆ ಸ್ವಾತಂತ್ರ್ಯ. ಅವಳು ಪುರುಷನ ಭೋಗವಸ್ತುವಾಗಿಯೂ ಸುಖಿಯಾಗಿದ್ದಳು. ಎರಡನೆಯ ವರ್ಗದ ಸಮಸ್ತ ಜನಸಮುದಾಯ ಸಾಮಾಜಿಕವಾಗಿ ಗೌರವಸ್ಥಾನ ಕೊಡುವ ಧಾರ್ಮಿಕವಾಗಿ ಉನ್ನತ ಜೀವನ ರೀತಿ (ವೇ ಆಫ್ ಲೈಫ್) ಒದಗಿಸಿಕೊಡುವ ಒಂದು ಪರ್ಯಾಯ ಸಮಾಜದ ವ್ಯವಸ್ಥೆಗಾಗಿ ಪರಿತಪಿಸುತ್ತಿತ್ತು. ಶರಣರ ಸಮಾಜ ಕಲ್ಪನೆ ಇಂಥ ಒಂದು ಪರ್ಯಾಯ ವ್ಯವಸ್ಥೆಯಾಗುವ ಆಶೆಯನ್ನು ಜನಮನದಲ್ಲಿ ಮೂಡಿಸಿತು.

ಈ ಧರ್ಮವನ್ನು ಅಪ್ಪಿಬಂದ ಶೋಷಿತ ಜನಸಮುದಾಯ ತಮ್ಮ ಎಲ್ಲ ಕೀಳರಿಮೆ (ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್)ಯನ್ನು ಕಳಚಿಕೊಂಡು ನೆಮ್ಮದಿಯಿಂದ

ಉಸಿರಾಡಿಸತೊಡಗಿತು. ಹೊಸದಾಗಿ ಒಂದು ಧಾರ್ಮಿಕ ವ್ಯವಸ್ಥೆಗೆ ಬದ್ಧರಾದವರಲ್ಲಿ ಧರ್ಮದ ವ್ರತ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂಬ ಮಾನಸಿಕ ಒತ್ತಡ ಪ್ರಬಲವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಬ್ಬರು ವಚನಕಾರ್ತಿಯರನ್ನು ಪರಿಶೀಲಿಸಬಹುದು :

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಇವಳ ಜೀವನ ಚರಿತ್ರೆಯ ಬಗೆಗೆ ಏನೂ ತಿಳಿಯದು. "ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ" ಎಂದು ಇವಳನ್ನು ಸಂಬೋಧಿಸಿರುವದನ್ನು ನೋಡಿದರೆ ಸಿದ್ಧಬುದ್ಧಯ್ಯನೆಂಬ ಶರಣನ ಪತ್ನಿ ಇವಳು. ಕಾಳವ್ವೆ ಎಂಬ ಇವಳ ಹೆಸರೇ ಸೂಚಿಸುವಂತೆ ಮೊದಲು ಕೀಳು ಕುಲದವಳಾಗಿದ್ದು, ಮುಂದೆ ವೀರಶೈವ ಧರ್ಮವನ್ನು ಸ್ವೀಕರಿಸಬಹುದು. ಅನೇಕ ಶರಣ–ಶರಣೆಯರು ಕೀಳು ವೃತ್ತಿಯನ್ನು ಅವಲಂಬಿಸಿದ್ದರು. ಅವರ ಹೆಸರುಗಳು ಕೀಳು ಕುಲದವರ ಹೆಸರುಗಳೇ ಆಗಿವೆ. ವೀರಶೈವ ಧರ್ಮವನ್ನು ಸ್ವೀಕರಿಸಿದ ಮೇಲೂ ಇವರು ತಮ್ಮ ಮೂಲ ಹೆಸರನ್ನು ಮತ್ತು ತಮ್ಮ ಕಾಯಕ (ವೃತ್ತಿ)ದ ಹೆಸರನ್ನು ವಿಶೇಷಣವಾಗಿಟ್ಟುಕೊಂಡು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಭೀಮೇಶ್ವರ ಎಂಬ ಅಂಕಿತವುಳ್ಳ ಕಾಳವ್ವೆಯ ಒಂದು ವಚನ ದೊರಕಿದೆ.

ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡರೆ
ಸತ್ತನಾಯ ಕಾಗಿಯ ಕಂಡಂತೆ
ಅವರೊಡನೆ ನುಡಿಯಲಾಗದು ಭೀಮೇಶ್ವರ[1]

ವ್ರತಭ್ರಷ್ಟ ಹಾಗೂ ಲಿಂಗಬಾಹ್ಯ ಇವರನ್ನು ಇಲ್ಲಿ ತರಾಟೆಗೆ ತೆಗೆದುಕೊಂಡಿದ್ದಾಳೆ. ಲಿಂಗಧಾರಿಯಾಗಿಯೂ ಧರ್ಮತತ್ವಗಳನ್ನು ಪಾಲಿಸದಿರುವವನು ವ್ರತಭ್ರಷ್ಟ. ಲಿಂಗಬಾಹ್ಯನೆಂದರೆ ಲಿಂಗವಿಲ್ಲದವ, ಪರಮತೀಯ, ಭವಿ ಎಂದರ್ಥ. ಇಂಥವರು ಸತ್ತ ನಾಯಿ ಹಾಗೂ ಕಾಗೆಗಳಿಗಿಂತಲೂ ಕನಿಷ್ಠವೆಂದೂ ಕಾಳವ್ವೆ ಹೇಳುತ್ತಾಳೆ. ಒಟ್ಟಿನಲ್ಲಿ ಭವಿ ಹಾಗೂ ಭಕ್ತರಲ್ಲಿ ಸಂಪರ್ಕ ಹಾಗೂ ಸಂಕರ ಇರಕೂಡದೆಂಬ ಶರಣತತ್ವದ ಸ್ಪಷ್ಟ ಹಾಗೂ ವಾಚ್ಯವಾದ ನಿಲವು ಇಲ್ಲಿದೆ. ಭವಿಗಳ ಕುರಿತು ಅತಿ ನಿಂದನೆಯ ನುಡಿಗಳನ್ನು ಎಲ್ಲ ಶರಣರೂ ಆಡುತ್ತಾರೆ. ಹಾಗೆಯೇ ಸ್ವಧರ್ಮದ,ವ್ರತಭಷ್ಟರನ್ನೂ ಅತ್ಯಂತ ಕಟುವಾಗಿ ಹೀನಾಯವಾಗಿ ಜರಿಯುವದು ಎಲ್ಲರಲ್ಲೂ ಕಾಣಬರುತ್ತದೆ. ಕಾಳವ್ವೆಯು ಈ ನಿಟ್ಟಿನಲ್ಲಿ ಹಿಂದುಳಿದಿಲ್ಲ.

ಕಾಲಕಣ್ಣಿಯ ಕಾಮಮ್ಮ

ಕಾಳವ್ವೆಯಂತೆ ಇವಳ ಜೀವನ ಚರಿತ್ರೆಯ ಬಗೆಗೆ ಹೆಚ್ಚಿಗೆ ತಿಳಿದು ಬಂದಿಲ್ಲ. (ಕವಿ ಚರಿತೆಕಾರರು ಕಾಲು ಕಣ್ಣಿ ಕಾಯಮ್ಮ ಎಂದು ಹೆಸರಿಸಿ, ಕಾಲ ಸು. ೧೫೦೦ ಎಂದಿದ್ದಾರೆ. ಶಿವ ಶರಣರ ಕಥಾ ರತ್ನಕೋಶದಲ್ಲಿ ತ. ಸು. ಶಾಮರಾಯರು ಕಾಲು ಕಣ್ಣಿ ತಾಯಮ್ಮ ಎಂದು ಹೆಸರಿಸಿ ಕಾಲ. ಸು. ೧೫೦೦ ಎಂದಿದ್ದಾರೆ.) ಕಾಲಕಣ್ಣಿ ಎಂಬ ವಿಶೇಷಣ ಬಹುಶಃ ಇವಳ ಅಥವಾ ಇವಳ ಮನೆತನದ ವೃತ್ತಿಸೂಚಕ ಪದವಾಗಿರಬಹುದು. ಕಣ್ಣಿ ಇದು ದನಕರುಗಳನ್ನು ಕಟ್ಟುವ ಒಂದು ಹಗ್ಗ ವಿಶೇಷ. ಇದನ್ನು ಹೊಸೆದು ಸಿದ್ಧಪಡಿಸುವ ಹಾಗೂ ಮಾರುವ ಕಾಯಕ ಇವಳದಾಗಿರಬಹುದು.

ಇವಳೂ ಮೂಲತಃ ಕೀಳು ಕುಲದವಳೆಂಬುದನ್ನು ಇವಳ ವೃತ್ತಿನಾಮ (ಕಾಲಕಣ್ಣಿ) ಹಾಗೂ ನಾಮ (ಕಾಮಮ್ಮ) ಸೂಚಿಸುತ್ತವೆ. ಮುಂದೆ ವೀರಶೈವ ಧರ್ಮವನ್ನು ಸ್ವೀಕರಿಸಿರಬಹುದು. 'ನಿರ್ಭೀತ ಲಿಂಗ' ಇವಳ ವಚನಗಳ ಅಂಕಿತವಾಗಿದ್ದು, ಒಂದೇ ಒಂದು ವಚನ ಮಾತ್ರ ಲಭ್ಯವಾಗಿದೆ.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ
ಗುರುಲಿಂಗ ಜಂಗಮರ ಕಾಲಕಟ್ಟುವೆ
ವ್ರತಭ್ರಷ್ಟರ ನಿಟ್ಟೊರಸುವೆ
ಸುಟ್ಟು ತುರುತುರುವೆ ನಿರ್ಭೀತ ಲಿಂಗದಲ್ಲಿ[2]

ಇವಳ ಅಭಿವ್ಯಕ್ತಿಯಲ್ಲಿ ಆಳವಿದೆ, ಸಾಹಿತ್ಯಕ ಗುಣವಿದೆ. 'ವ್ರತಭ್ರಷ್ಟ'ರನ್ನು ನಿರ್ಭೀತಿಯಿಂದ ನಿರ್ಭಿಡೆಯಿಂದ ಛೇಡಿಸಿದ್ದಾಳೆ. "ವ್ರತ ಭ್ರಷ್ಟರ ನಿಟ್ಟೊರಸುವೆ ಸುಟ್ಟು ತುರುತುರನೆ ತೂರುವೆ" ಎಂಬಲ್ಲಿ ಆಡುಮಾತಿನ ಗಡುಸಾದ, ಆದರೆ ಸೊಗಸಾದ ಪ್ರಯೋಗವಿದೆ. ಮೊದಲಿನ ಎರಡು ಸಾಲುಗಳಲ್ಲಿ ವೀರಶೈವ ಧರ್ಮದ ಮೌಲಿಕ ತತ್ವಗಳಾದ ಗುರುಲಿಂಗ ಜಂಗಮರ ಸುತ್ತ ಸಾಧಕನ ಮನಸ್ಸು-ಅಂತಃಕರಣಗಳ ವ್ಯಾಪಾರವನ್ನು ಸೊಗಸಾಗಿ ನಿವೇದಿಸಿದ್ದಾಳೆ. ಸದಾ ಸಂಚರಿಸುವ ಕರಣಂಗಳನ್ನು ಲಿಂಗದಲ್ಲಿಯೇ ಕಟ್ಟಿ ಹಾಕಿದ್ದಾಳೆ. "ಕರಣಂಗಳನ್ನು ಲಿಂಗದಲ್ಲಿ ಕಟ್ಟಿ ಹಾಕಿ"ದ ಈ ರೀತಿಯ ಅಭಿವ್ಯಕ್ತಿ ನಿಜಕ್ಕೂ ಅರ್ಥವತ್ತಾದ, ಸಾರ್ಥಕ ಪ್ರಯೋಗ. ಗುರುಲಿಂಗ–ಜಂಗಮರು ವೀರಶೈವರ ನಿತ್ಯ ಆರಾಧನೆಯ ತತ್ವತ್ರಯಗಳು. ಈ ಆರಾಧ್ಯ ತತ್ವಗಳು; ಸದಾ ತನ್ನ ಬಳಿ ಇರಲೆಂಬ ಅಭೀಪ್ಸೆಯಿಂದ ಮಾನವ ರೂಪದಲ್ಲಿ ಗ್ರಹಿಸಿಕೊಂಡು. ಈ ತ್ರಿಮೂರ್ತಿಗಳ ಕಾಲನ್ನು ಕಟ್ಟಿ ಸದಾ ತನ್ನ ಬಳಿ ಇರಿಸಿಕೊಂಡು ಆರಾಧಿಸಬೇಕೆಂಬ ಹಂಬಲವನ್ನು ಸಮರ್ಥವಾಗಿ ವ್ಯಕ್ತಪಡಿಸಿದ್ದಾಳೆ. ಒಟ್ಟಾರೆ ಗುರು–ಲಿಂಗ–ಜಂಗಮರ ಅಂತಃಕರಣ ಪೂರ್ವಕವಾದ ಆರಾಧನೆಯ ಮಹತ್ವವನ್ನು ಪ್ರತಿಪಾದಿಸಿ, ಹಾಗೆ ಪೂಜಿಸದವರೇ ವ್ರತಭ್ರಷ್ಟರೆಂದು ನಿರ್ಭೀತಿಯಿಂದ ಹೇಳುತ್ತಾಳೆ.

○

---

* ಸಿದ್ಧಬುದ್ಧಯ್ಯನೆಂಬ ತಮಿಳುನಾಡಿನ ಶಿವಭಕ್ತನೊಬ್ಬನು, ಲಿಂಗವನ್ನು ಅಷ್ಟ ವಿಧಾರ್ಚನೆಯಿಂದ ಪೂಜಿಸಿ, ಮೂವತ್ತೆರಡು ರಾಗಗಳನ್ನು ಹಾಡಿ ಶಿವನನ್ನು ಮೆಚ್ಚಿಸಿ ಕೈಲಾಸ ಪದವಿಯನ್ನು ಪಡೆದ ಕಥೆಯು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ (ಡಾ. ಆರ್. ಹಿರೇಮಠ ಸಂಪಾದಿತ ಭಾಗ-2) ದಲ್ಲಿ ಬರುತ್ತದೆ. ತಮಿಳುನಾಡಿನ ಈ ಶಿವಭಕ್ತನೇ ಕನ್ನಡ ವಚನಕಾರ್ತಿ ಕಾಳವ್ವೆಯ ಗಂಡನೆಂದು ನಿಶ್ಚಿತವಾಗಿ ಹೇಳಲು ಆಧಾರಗಳಿಲ್ಲ.

1. ಇಪ್ಪತ್ತೇಳು ಶಿವಶರಣೆಯರ ವಚನಗಳು—ಸಂ. ಡಾ. ಆರ್. ಸಿ. ಹಿರೇಮಠ ಪುಟ-117 ವಚನ-237

2. ಅದೇ ಪುಟ-105 ವಚನ-221

ಕಾಳವ್ವೆ–ಗಂಗಮ್ಮ–ಸೂಳೆಸಂಕವ್ವೆ

ವಿಜಯಶ್ರೀ ಸಬರದ

ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಪ್ರಮುಖ ಹರಿಕಾರರೆಂದರೆ ಹನ್ನೆರಡನೇ ಶತಮಾನದ ವಚನಕಾರರು. ಭಾರತೀಯ ಸಂಸ್ಕೃತಿಯ ಸುವರ್ಣಯುಗವೆಂದು ಹೇಳುವ ವೇದಕಾಲದಲ್ಲಿ ಕೇವಲ ಮೂರು–ನಾಲ್ಕು ಮಹಿಳೆಯರು ಮಾತ್ರ ತತ್ವಜ್ಞಾನಿಗಳಾಗಿದ್ದರೆ, ಕರ್ನಾಟಕದ ಬಸವ ಯುಗದಲ್ಲಿ ಅನೇಕ ಮಹಿಳೆಯರು ತತ್ವಜ್ಞಾನಿಗಳಾಗಿ, ಹೋರಾಟಗಾರರಾಗಿ, ಶ್ರೇಷ್ಠ ವಚನಕಾರ್ತಿಯರಾಗಿ, ಅನುಭಾವಿಗಳಾಗಿ ಧಾರ್ಮಿಕ–ಸಾಮಾಜಿಕ–ಸಾಹಿತ್ಯಕ ರಂಗದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಮಾರಯ್ಯಗಳ ಹೆಂಡತಿ ಗಂಗಮ್ಮ ಮತ್ತು ಸೂಳೆ ಸಂಕವ್ವೆಯರ ವಚನಗಳಲ್ಲಿ ಸಾರ್ವಕಾಲಿಕತೆಯನ್ನು, ನಿಜವಾದ ಬಂಡಾಯವನ್ನು ಕಾಣಬಹುದಾಗಿದೆ.

ಇಂದಿನ ಬಂಡಾಯ ಸಾಹಿತಿಗಳಿಗೆ ಒಂದು ದೊಡ್ಡ ಪರಂಪರೆಯಿದೆ 'ಸಂಪ್ರದಾಯವನ್ನು ಅಲ್ಲಗಳೆಯುತ್ತಲೇ ಪರಂಪರೆಯನ್ನು ಬಂಡಾಯ ಸಾಹಿತಿ ಒಪ್ಪುತ್ತಾನೆ. ಸಂಪ್ರದಾಯ ನಿಂತನೀರಾದರೆ, ಪರಂಪರೆ ಹರಿವಹೊಳೆ. ಸಮಾಜದ ಮೌಲ್ಯಗಳು ಸಮಕಾಲೀನ ಸಂದರ್ಭದಲ್ಲಿ ಅರ್ಥಕಳೆದುಕೊಂಡು ಸ್ಥಗಿತಗೊಂಡಾಗ ಸಂಪ್ರದಾಯವಾಗುತ್ತದೆ. ಹಾಗೆ ಸ್ಥಗಿತಗೊಳ್ಳದೆ ಆ ಮೌಲ್ಯಗಳು ಚಲನಶೀಲವಾದರೆ ಅದು ಪರಂಪರೆ. ಪರಂಪರೆ ಸಂಪ್ರದಾಯದ ಪರೆ ಕಳಚಿ ಮುಂದೆ ಸಾಗುತ್ತದೆ. ಇಂದಿನ ಬಂಡಾಯದವರಿಗೆ ವಚನಕಾರರ ದೊಡ್ಡ ಪರಂಪರೆಯಿದೆ. ವಿಶೇಷವಾಗಿ ಅದರಲ್ಲಿ ಕಾಳವ್ವೆ–ಗಂಗಮ್ಮ ಮತ್ತು ಸೂಳೆಸಂಕವ್ವೆಯರ ವಚನಗಳಲ್ಲಿ ಕಾಣುವ ನೋವು, ಪ್ರತಿಭಟನೆ, ವೈಚಾರಿಕತೆ, ನಿರ್ಭಿಡೆ, ಚಿಂತನಾಶೀಲ ಗುಣಗಳು ಸಮಕಾಲೀನ ಜ್ವಲಂತ ಸಮಸ್ಯೆಗಳಿಗೂ ಉತ್ತರ ಕೊಡಬಲ್ಲವುಗಳಾಗಿವೆ.

ಹೆಣ್ಣನ್ನು ಮಾಯೆಯೆಂದು, ರಾಕ್ಷಸಿಯೆಂದು, ಪಾಪಿಯೆಂದು, ನೀಚಳೆಂದು, ಕ್ಷುಲ್ಲಕಳೆಂದು–ಹಲವಾರು ಧರ್ಮದ ಮುಖಂಡರು, ಮಹಾ–ಮಹಾ ಪಂಡಿತರು, ಸಂಸ್ಕೃತಿಯನ್ನು ಗುತ್ತಿಗೆಗೆ ತೆಗೆದುಕೊಂಡ ವೈದಿಕರು ಒಂದೇ ಸಮನೆ ಕೂರೆಯುತ್ತಲಿರುವಾಗ ವಚನಕಾರರು ಹೆಣ್ಣನ್ನು–ಹೆಣ್ಣೆಂದು–ಮಾತೆಯೆಂದು–ಸಾಕ್ಷಾತ್ ಕಪಿಲ

ಸಿದ್ಧ ಮಲ್ಲಿಕಾರ್ಜುನನೆಂದು ಗೌರವಿಸಿದ್ದು, ಸಮಾನಾವಕಾಶ ಕಲ್ಪಿಸಿಕೊಟ್ಟದ್ದು— ಇಂತಹ ಅರ್ಥಪೂರ್ಣ ವಚನಕಾರ್ತಿಯರು ಬರಲಿಕ್ಕೆ ಕಾರಣವಾಯಿತೆನ್ನಬಹುದು. ಅಕ್ಕಮಹಾದೇವಿ ಶರಣೆಯಾಗಿದ್ದಳು.ಅಧ್ಯಾತ್ಮದಲ್ಲಿ ಉನ್ನತಸ್ಥಾನ ತಲುಪಿದಳು ಎಂಬುದಕ್ಕಿಂತ ಆಕೆ ಅನುಭವ ಮಂಟಪದ ಪ್ರಮುಖ ಅಂಗವಾಗಿದ್ದಳೆಂಬುದು ನನಗೆ ಬಹಳ ಮಹತ್ವದ ವಿಷಯ. ಹಾಗೆ ನೋಡಿದರೆ ಅಕ್ಕಮಹಾದೇವಿಗಿಂತ ಕಾಳವ್ವೆ, ಗಂಗಮ್ಮ– ಸೂಳೆಸಂಕವ್ವೆಯರಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ. ಇವರ ವಚನಗಳಲ್ಲಿ ಬಂಡಾಯದ ಕಿಡಿಗಳು ಧಿಮಿಗುಡುತ್ತವೆ. ಹೀಗಿದ್ದರೂ ಅಕ್ಕಮಹಾದೇವಿಗೆ ಸಿಕ್ಕಪ್ರಚಾರ; ಕಾಳವ್ವೆ–ಸೂಳೆಸಂಕವ್ವೆಯಂತವರಿಗೆ ಏಕೆಸಿಗಲಿಲ್ಲವೆಂಬ ಮಾತು ಪ್ರಶ್ನಿಸುವಂತಹದ್ದಾಗಿದೆ. ವಚನಕಾರರ ನಂತರದ ವೀರಶೈವರು ವಚನಗಳಲ್ಲಿ ಬರೀ ಆಧ್ಯಾತ್ಮಕ್ಕೆ ಮಹತ್ವ ಕೊಟ್ಟು ವಚನಕಾರರನ್ನೆಲ್ಲಾ ದೇವರುಗಳನ್ನಾಗಿ ಮಾಡಿ ತಲೆ ಮೇಲೆ ಹೊತ್ತು, ಮೂರ್ತಿ ಮಾಡಿ ನಿಲ್ಲಿಸಿ-ಗುಡಿಕಟ್ಟಿ ಪೂಜೆಮಾಡಿ, ವಚನಕಾರರ ನಿಜವಾದ ತತ್ತ್ವಗಳಿಗೇ ಕಲಂಕತಂದರು. ಅಷ್ಟಾವರಣಗಳ ಗುಂಗಿನಲ್ಲಿ, ಷಟ್‌ಸ್ಥಲಗಳ ಲೆಕ್ಕಾಚಾರದಲ್ಲಿ ಪಂಚಾಚಾರಗಳ ಗೊಂದಲವಲ್ಲೇ ತಲೆಕೆಡಿಸಿಕೊಂಡ ಈ ಜನ ಬದುಕನ್ನೇ ಮರೆತರು. ವಚನಕಾರರು ಮನುಷ್ಯರೆಂಬುದನ್ನು, ಅವರ ನಿಜವಾದ ಹೋರಾಟವನ್ನು, ತೀವ್ರವಾದ ಕಾಳಜಿಯನ್ನು ಅನ್ಯಾಯದ ವಿರುದ್ಧದ ಪ್ರತಿಭಟನೆಯನ್ನು ಇವರು ಅರಿಯಲೇ ಇಲ್ಲ. ಹೀಗಾಗಿ ಬದುಕಿಗೆ ದಟ್ಟವಾಗಿ ಸ್ಪಂದಿಸುವ ಕಾಳವ್ವೆ—ಗಂಗವ್ವ—ಸಂಕವ್ವೆಯಂತಹ ವಚನಕಾರ್ತಿಯರು ಇಂಥವರ ಲೆಕ್ಕಾಚಾರದಲ್ಲಿ ಜಮಾವಾಗದೇ ಹೋಗಿದ್ದಾರೆ.

ಕಾಳವ್ವೆ :

ಪ್ರಮುಖ ಶೂದ್ರ ವಚನಕಾರ ಉರಿಲಿಂಗ ಪೆದ್ದಿಯ ಸತಿಯೇ ಕಾಳವ್ವೆ. ಈ ಶೂದ್ರ ದಂಪತಿಯರು ಬಸವೇಶ್ವರರ ಧಾರ್ಮಿಕ–ಸಾಮಾಜಿಕ ಕ್ರಾಂತಿಯಲ್ಲಿ ಅರ್ಪಣಾಭಾವದಿಂದ ದುಡಿದದ್ದರಿಂದಲೇ ವಚನ ಚಳುವಳಿಗೆ ಕಳೆ ಬಂದದ್ದು. ಎಲೆ ಮರೆಯ ಕಾಯಿಯಂತೆ.ಈ ದಂಪತಿಗಳ ಬದುಕು. ಇವರ ಸೇವಾನಿಷ್ಠೆ, ಪ್ರಾಮಾಣಿಕತನ, ಎದೇಗಾರಿಕೆ, ಹೃದಯ ವೈಶಾಲ್ಯ ಬಸವೇಶ್ವರರಿಗೆ ಮೆಚ್ಚುಗೆಯಾದ್ದವು. ಬದುಕಿನ ಬಗೆಗೆ ತೀವ್ರವಾಗಿ ಚಿಂತಿಸಿದ, ಪ್ರಮುಖ ಕಾಳಜಿಯುಳ್ಳ ಕಾಳವ್ವೆಯಂತಹ ವಚನಕಾರ್ತಿಗೆ ಚರಿತ್ರೆಯಲ್ಲಿ ಪ್ರಮುಖಸ್ಥಾನ ಸಿಗದೇ ಹೋದದ್ದು ಈ ನಾಡಿನ ದುರಂತ. "ಉರಿಲಿಂಗ ಪೆದ್ದಿಗಳರಸ" ಎಂಬುದು ಈಕೆಯ ವಚನಾಂಕಿತ. ಬದುಕಿನ ವಿದ್ಯಾಲಯದಿಂದಲೇ ಪಾಠ ಕಲಿತ ಕಾಳವ್ವೆ ಕನ್ನಡ—ಸಂಸ್ಕೃತ ಎರಡೂ ಭಾಷೆಗಳಲ್ಲಿ ಪರಿಣಿತಳು; ದಟ್ಟ ಅನುಭವ ಪಡೆದವಳು.

ಈಕೆಯ ಹದಿಮೂರು ವಚನಗಳು ಲಭ್ಯವಾಗಿವೆ. ಇನ್ನೂ ಹೆಚ್ಚಿನ ವಚನಗಳನ್ನು ಈಕೆ ಬರೆದಿರಬಹುದು, ಈಗ ಉಪಲಬ್ಧವಿರುವಷ್ಟೇ ವಚನಗಳು ಈಕೆಯ ಹೋರಾಟದ ಬದುಕನ್ನು ಪ್ರತಿಪಾದಿಸುತ್ತವೆ.

ವ್ರತಕ್ಕೆ ಕಾಳವ್ವೆ ಬಹಳ ಮಹತ್ವ ಕೊಡುತ್ತಾಳೆ. ಮೂರು–ನಾಲ್ಕು ವಚನಗಳಲ್ಲಿ ವ್ರತದ ಬಗೆಗೆ ಪ್ರಸ್ತಾಪವಿದೆ. ಆಕೆಯ ಒಟ್ಟು ನಿಲುವನ್ನು ಅರ್ಥೈಸಿದಾಗ 'ವ್ರತ' ಎಂಬುದನ್ನು ನಿಷ್ಠೆ, ಪ್ರಾಮಾಣಿಕತೆ ಎಂಬರ್ಥದಲ್ಲಿ ಉಪಯೋಗಿಸಿರಬಹುದೆಂದು ತಿಳಿಯಬಹುದಾಗಿದೆ:

"ವ್ರತವೆಂಬುದು ನಾಯಕರತ್ನ; ವ್ರತವೆಂಬುದು ಸುಪ್ರಾಣಿಯ ಮುತ್ತು;
ವ್ರತವೆಂಬುದು ಜೀವನಕಳೆ; ವ್ರತವೆಂಬುದು ಸುಯಿಧಾನ
ವ್ರತ ತಪ್ಪಲು, ಉರಿಲಿಂಗಪೆದ್ದಿಗಳರಸನೊಲ್ಲನವ್ವಾ."
(ಶಿ. ಶ. ವ. ೨೦೫. ಪುಟ : ೩೮೭)

"ವ್ರತ ಹೋದಾಗಲೆ ಇಷ್ಟಲಿಂಗದ ಕಳೆ ನಷ್ಟವವ್ವಾ
ಅವರು ಲಿಂಗವಿದ್ದರೂ ಭವಿಗಳು."
—(ಶಿ. ಶ. ವ. ೨೧೨. ಪುಟ : ೩೮೯)

"ಅರ್ಥಪ್ರಾಣಾಭಿಮಾನದ ಮೇಲೆ ಬಂದರು ಬರಲಿ
ವ್ರತಹೀನನ ನೆರೆಯಲಾಗದು."
—(ಶಿ. ಶ. ವ. ೨೧೩. ಪುಟ: ೩೮೯)

ವ್ರತವೇ ಮುತ್ತು–ರತ್ನ; ವೃತವೇ ಜೀವಕಳೆಯೆಂದು ನಂಬಿದ ಕಾಳವ್ವೆ ನಿಷ್ಠೆ-ಪ್ರಾಮಾಣಿಕತೆಯಿಲ್ಲದವರು ಲಿಂಗ ಧರಿಸಿದರೂ ವ್ಯರ್ಥವೆಂದು ಹೇಳುತ್ತಾಳೆ. ಪ್ರಾಣ ಹೋದರೂ ಸರಿ ಅಂಥವರ ಸಂಗ ಸಲ್ಲ–ಎಂಬ ಮಾತಿನಲ್ಲಿ ವಚನಚಳುವಳಿಗೆ ಬದ್ಧಳಾದ ಆಕೆಯ ನಿಷ್ಠೆ–ಪರಾಕಾಷ್ಠೆ ಮುಟ್ಟಿದೆ.

"ಕೃತಯುಗ ಮೂವತ್ತೆರಡು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು. ತ್ರೇತಾಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಕೆ ಮಹಿಷನೆಂಬ ಕರಿ ಎಮ್ಮೆಯ ಮಗನಕೊಂದು ಹೋಮವನಿಕ್ಕಿದರು. ದ್ವಾಪರ ಯುಗ ಎಂಟು ಲಕ್ಷವರುಷದಲ್ಲಿ ಹೋಮವನಿಕ್ಕುವಾಗ ಅಶ್ವನೆಂಬ ಕುದುರೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.

ಕಲಿಯುಗ ನಾಲ್ಕು ಲಕ್ಷವರುಷದಲ್ಲಿ ಹೋಮವನಿಕ್ಕುವಾಗ ಜಾತಿಯಾಡಿನಮಗ ಹೋತನ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು,

"ಶಿವಭಕ್ತ ಹೊತ್ತಾರೆಂದು ಗುರುಲಿಂಗ ಜಂಗಮಕ್ಕೆ ಶರಣೆನ್ನದೆ ಮುನ್ನ
ಒಂಟಿಬ್ರಾಹ್ಮಣನ ಕಂಡು ಶರಣಾರ್ಥಿ ಎಂದಡೆ ಎಂಬತ್ತು ನಾಲ್ಕು ಲಕ್ಷ
ಯೋನಿಯಲ್ಲಿ ಹಂದಿಯ ಬಸುರಲ್ಲಿ ಬಪ್ಪುದು ತಪ್ಪದು ಕಾಣಾ.
ಉರಿಲಿಂಗ ಪೆದ್ದಿಗಳರಸ ಬಲ್ಲನವ್ವಾ"
–(ಶಿ. ಶ. ವ. ೨೧೬, ಪುಟ : ೨೯೧

ಕೃತಯುಗದಿಂದ ಹಿಡಿದು ಕಲಿಯುಗದ ವರೆಗೂ ಆನೆ, ಎಮ್ಮೆ, ಕುದುರೆ, ಹೋತುಗಳನ್ನು ಕೊಂದು ಹೋಮವನಿಕ್ಕಿದ ಬ್ರಾಹ್ಮಣರು, ಹೋಮವನಿಕ್ಕದೆಯೇ ಸಹಸ್ರಾರು ಶೂದ್ರರನ್ನು ಬಲಿತೆಗೆದುಕೊಂಡಿದ್ದಾರೆ. ಶತ ಶತಮಾನಗಳಿಂದಲೂ ನರಿ ಬುದ್ಧಿಯನ್ನು ಪ್ರದರ್ಶಿಸುತ್ತಲೇ ಬಂದಿದ್ದಾರೆ. ಹೊತ್ತಾರೆದ್ದು ಇಂತಹ ದೈತ್ಯಬ್ರಾಹ್ಮಣನಿಗೆ ಶರಣೆಂದರೆ ಅಂಥವರ ಸ್ಥಿತಿ ಏನಾದೀತೆಂಬುದನ್ನು ತಿಳಿಸಿದ ಕಾಳವ್ವೆಯ ಈ ವಚನದಲ್ಲಿ ಶತಮಾನಗಳಿಂದ ನೊಂದ ಧ್ವನಿಯಿದೆ, ಪ್ರತಿಭಟಿಸುವ ಎದೆಗಾರಿಕೆಯಿದೆ, ಕಟು ಸತ್ಯ ದಟ್ಟವಾಗಿ ವ್ಯಾಪಿಸಿದೆ.

ಕೃತಕ ಯುಗದಿಂದ ಕಲಿಯುಗದ ವರೆಗೆ ಬ್ರಾಹ್ಮಣರು ನಡೆಸಿದಪ್ರಾಣಹತ್ಯೆ— ರಕ್ತಪಾತ ಶೋಷಣೆ ನೆನಪಾದಾಗ ನಿಜವಾದ ಮನುಷ್ಯನ ಎದೆಯಲ್ಲಿ ಹೋರಾಟದ ಬೆಂಕಿ ಧಗಧಗಿಸುವದು ಸಹಜ. ಇಡೀ ವಚನ ಕಾರ್ತಿಯರಲ್ಲಿ ಇಂತಹ ಕಾರ್ಯವನ್ನು ನಿರ್ಭಿಡೆಯಿಂದ ಎತ್ತಿ ಹೇಳಿ ಬಂಡಾಯದ ಕಿಡಿಕಾರಿದವರು ಕಾಳವ್ವೆಯಂತವರು ಮಾತ್ರ. ಆದ್ದರಿಂದ ಈಕೆಯ ನುಡಿ ಸಾರ್ವಕಾಲಿಕ ಸತ್ಯವಾಗಿದೆ.

ಕುರಿ, ಕೋಳಿ ತಿನ್ನುವವರಿಗೆಲ್ಲ ಕುಲಜರು ಎಂದು ಕರೆದ ಸಮಾಜ ಅಂಥವರನ್ನು ಊರೊಳಗಿಟ್ಟುಕೊಂಡು ಗೋಮಾಂಸ ತಿನ್ನುವವರನ್ನು ಹೊಲೆ–ಮಾದಿಗರು–ಕೀಳು ಜಾತಿಯವರೆಂದು ಕರೆದು ಊರ ಹೊರಗಿಟ್ಟಿತು. ಇಂತಹ ಸಮಾಜಕ್ಕೆ ಕಾಳವ್ವೆ ಕೇಳುವ ಪ್ರಶ್ನೆ ಗಮನಿಸುವಂತಹದಾಗಿದೆ. ಕುರಿ, ಕೋಳಿಗಳನ್ನು ಎಂದೂ ಯಾರು ಪೂಜಿಸಿಲ್ಲ; ಆದರೆ ಶಿವನಿಗೆ ಪಂಚಾಮೃತ ಕರೆವ ಆಕಳವನ್ನು ಎಲ್ಲರೂ ಪೂಜಿಸುತ್ತಾ ಬಂದಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಶಿವಪೂಜೆಗೆ ಯೋಗ್ಯವಾದ ಪ್ರಾಣಿಯ ಮಾಂಸ ತಿಂದರೆ ಹೊಲೆಯರೆಂದು; ಶಿವಪೂಜೆಗೆ ಯೋಗ್ಯವಲ್ಲದ ಮಾಂಸ ತಿಂದರೆ ಕುಲಜರೆಂದು ನಿರ್ಧರಿಸಿದ ವಿಪ್ರರು ಬುದ್ಧಿಗೇಡಿಗಳೆಂದು, ಅಂಥವರಿಗೆ ನಾಯಕ ನರಕ ತಪ್ಪಿದ್ದಲ್ಲವೆಂದು ಕಾಳವ್ವೆ ಸ್ಪಷ್ಟಪಡಿಸಿದ್ದಾಳೆ.

ಕಾಳವ್ವೆಯ ನುಡಿಗಳಲ್ಲಿ ಬರೀ ರೊಚ್ಚಲ್ಲ; ಜರೆಯುವರನ್ನು ಟೀಕಿಸುವದೇ ಆಕೆಗೆ ಪ್ರಮುಖವಲ್ಲ. ಶತ–ಶತಮಾನಗಳಿಂದಲೂ ತಮ್ಮ ಪಾಂಡಿತ್ಯ ಪ್ರದರ್ಶಿಸಿದ ವೈದಿಕರಿಗೆ ಹೊಳೆಯದ ಹೊಸವಿಚಾರಗಳು ಕಾಳವ್ವೆಯಲ್ಲಿವೆ. ಆಕೆಯಾವುದರ ಬಗೆಗೆ ಪ್ರಸ್ತಾಪಿಸಿದರೂ ಆಧಾರ ಸಹಿತವಾಗಿಯೇ ಹೇಳುತ್ತಾಳೆ. ನಿಜವಾದ ಸಂಶೋಧನಾತ್ಮಕ ಗುಣ ಆಕೆಯ ವಚನಗಳಲ್ಲಿ ಎದ್ದುಕಾಣುತ್ತದೆ. ನೊಂದಬೆಂದ ಬಂದ ನುಡಿಯಲ್ಲಿ ಯಾರೂ ಅಳಿಸಲಾರದ ದಟ್ಟ ಸತ್ಯವಡಗಿದೆ. ಇದು ಕಾಳವ್ವೆಯ ವಚನಗಳ ವೈಶಿಷ್ಟ್ಯ.

ಗಂಗಮ್ಮ :

ಹಾವರದ ಕಾಯಕದ ಮಾರಯ್ಯಗಳ ಹೆಂಡತಿ ಗಂಗಮ್ಮನ ಒಂದೇ ವಚನ ಪ್ರಕಟವಾಗಿದೆ. ಅದೊಂದೇ ವಚನ ಆಕೆಯ ನಿಷ್ಠಾಪೂರ್ಣ ಬದುಕಿಗೆ ಸಾಕ್ಷಿಯಾಗಿದೆ. ಈಕೆಯ ವಚನಾಂಕಿತ ಗಂಗೇಶ್ವರಲಿಂಗ. ನೇರವಾದ ಮಾತು, ಪ್ರಾಮಾಣಿಕ ಅಭಿವ್ಯಕ್ತಿ ಈಕೆಯ ವಚನದ ವೈಶಿಷ್ಟ್ಯ.

"ಆವ ಕಾಯಕವ ಮಾಡಿದರೂ ಒಂದೆ ಕಾಯಕವಯ್ಯ
ಆವ ವ್ರತವಾದರೂ ಒಂದೆ ವ್ರತವಯ್ಯ.
ಆಯು ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕ ನರಕ
ಗಂಗೇಶ್ವರ ಲಿಂಗದಲ್ಲಿ"

—(ಶಿ. ಶ. ವ. ೨೮೯, ಪುಟ : ೩೯೬)

ಈ ವಚನದಲ್ಲಿ ಸಮಾನತೆಯ ತತ್ತ್ವವಿದೆ. ಎಲ್ಲ ಕಾಯಕಗಳ ಬಗೆಗೂ ಸಮಾನ ಗೌರವ ತಾಳಿದ ಗಂಗಮ್ಮನ ದೃಷ್ಟಿಯಲ್ಲಿ ಎಲ್ಲ ವ್ರತಗಳು ಒಂದೇ ಎನಿಸುತ್ತವೆ. ವ್ರತವನ್ನು ಪ್ರಾಮಾಣಿಕತೆಯಂತಹ ಮೌಲ್ಯವನ್ನಾಗಿ ಪ್ರತಿಪಾದಿಸಿದ ಈಕೆ ಪಶು-ಪ್ರಾಣಿಗಳ ಬದುಕಿಗೂ ಮಾನವನ ಬದುಕಿಗೂ ಇರುವ ಅಂತರವನ್ನು ಸೂಕ್ಷ್ಮವಾಗಿ ಗುರುತಿಸಿ ಹೇಳಿದ್ದಾಳೆ.

ಸೂಳೆಸಂಕವ್ವೆ

ಸ್ವಾಭಿಮಾನವನ್ನು ಬೆಳೆಸಿಕೊಂಡು ಪ್ರಾಮಾಣಿಕವಾಗಿ ಬದುಕಿದ ಮತ್ತೊಬ್ಬ ವಚನಕಾರ್ತಿ ಸೂಳೆಸಂಕವ್ವೆ. ಈಕೆಯ ಒಂದೇ ವಚನ ಉಪಲಬ್ದವಿದೆ. "ನಿರ್ಲಜ್ಜೇಶ್ವರಾ" ಎಂಬ ವಚನಾಂಕಿತವೇ ಈಕೆಯಲ್ಲಿರುವ ಎದೆಗಾರಿಕೆ-ನಿರ್ಭಿಡೆಗಳನ್ನು ಸ್ಪಷ್ಟಪಡಿಸುತ್ತದೆ. ಸೂಳೆಯಾಗಿದ್ದ ಈಕೆ ತನ್ನ ಅನುಭವವನ್ನು ಅತ್ಯಂತ ಪ್ರಾಮಾಣಿಕವಾಗಿ ವಚನಿಸಿದ್ದಾಳೆ.

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ,
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನನರಿದು ಬೆರೆದಡೆ,
ಕಾದ ಕತ್ತಿಯಲ್ಲಿ ಕಿವಿಮೂಗ ಕೊಯ್ವರಯ್ಯ.
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ".

—(ಶಿ. ಶ. ವ. ೨೩೬, ಪುಟ : ೪೦೬)

ಬಸವ ಯುಗದ ವಾಸ್ತವ ಚಿತ್ರಣವನ್ನು ಈ ವಚನ ಮಾಡಿಕೊಡುತ್ತವೆ. ವ್ರತಕ್ಕೆ ಆಗಿದ್ದ ಪ್ರಾಮುಖ್ಯತೆ-ಮಹತ್ವವನ್ನು ಎತ್ತಿ ಹೇಳುತ್ತದೆ. ಅಂತಹ ಚಳುವಳಿಯೊಂದಕ್ಕೆ ಬದ್ಧಳಾದ ಸೂಳೆಸಂಕವ್ವೆಯಲ್ಲಿರುವ ಅಸಾಧಾರಣ ಕಾಳಜಿ ಇಲ್ಲಿ ಸ್ಪಷ್ಟವಾಗಿ ಗೋಚರಿಸಿದೆ.

ಈ ಮೂವರು ವಚನಕಾರ್ತಿಯರ ಉಪಲಬ್ಧ ವಚನಗಳು ಬೆರಳೆಣಿಕೆಯಷ್ಟಿದ್ದರೂ ಕೂಡ ಸತ್ವಪೂರ್ಣವಾಗಿವೆ. ಇಲ್ಲಿನ ಭಾಷೆ ಪರಿಣಾಮವತ್ತಾಗಿದೆ. ಸೂಳೆ, ಕುನ್ನಿ, ಜೊಬ್ಬು, ನರಕ, ಒತ್ತೆ, ಬತ್ತಲೆ; ಕಾದಕತ್ತಿ ಈ ಮೊದಲಾದ ಪದಗಳಲ್ಲಿನ ಸೊಗಡು ದೇಸೀತನ-ಗಡಸುಗಾರಿಕೆ ಸಮೃದ್ಧವಾಗಿ ಬಳಕೆಯಾಗಿವೆ. ಎಮ್ಮೆ, ಹೋತ, ಹುಂಜಿ. ನಾಯಿ, ಕುರಿ,ಕೋಳಿ ಕಾಕಪಿಕ ಮೊದಲಾದ ಪ್ರಾಣಿ-ಪಕ್ಷಿಗಳು ಗುಣಸೂಚಕಗಳಾಗಿ ಒಂದು ಅರ್ಥದ ಸೊಗಡನ್ನು ಹೆಚ್ಚಿಸಿವೆ.

ಶತ–ಶತಮಾನಗಳಿಂದಲೂ ಬಾಯಿಮುಚ್ಚಿಕೊಂಡು ಗುಲಾಮಳಾಗಿ, ಗಂಡಿನ ಸಂಭೋಗದ ಸರಕಾಗಿ ಬಾಳಿದ ಸ್ತ್ರೀ; ಒಮ್ಮಿಂದೊಮ್ಮೆಲೇ ಎಚ್ಚೆತ್ತು ಗಂಡಿನೊಂದಿಗೆ ಸರಿ–ಸಮನಾಗಿ ಬದುಕಿ ಸಕಲಹಂತಗಳಲ್ಲೂ ಬೆಳೆದು ನಿಂತದ್ದನ್ನು ಕಂಡಾಗ ಬಸವಾದಿ ವಚನಕಾರರ ನಿಜವಾದ ಸಮಾನತೆಯ ತತ್ತ್ವ; ಸ್ತ್ರೀಯರಿಗೆ ಅವರು ಕೊಟ್ಟ ಸಮಾನ ಅವಕಾಶ–ಎಲ್ಲಾ ಸ್ಪಷ್ಟವಾಗುತ್ತದೆ.

ಅವರಲ್ಲೂ ವಿಶೇಷವಾಗಿ ಯುಗ–ಯುಗಗಳಿಂದ ಎಲ್ಲಾ ಸವಲತ್ತುಗಳಿಂದ ವಂಚಿತಳಾಗಿ, ಶೋಷಣೆಗೊಳಾಗ ಶೂದ್ರಸ್ತ್ರೀಯರು; ವಚನಕಾರ್ತಿಯರಾಗಿ ಆಧ್ಯಾತ್ಮದ ತುತ್ತ ತುದಿಗೇರುವವರ ಜೊತೆಗೆ ಇಹದ ಬದುಕಿನ ತುಂಬ ವಿಜೃಂಭಿಸಿ ಹೊಸ ಮೌಲ್ಯಗಳನ್ನು ಕಂಡುಕೊಂಡದ್ದು ಬಹಳ ಪ್ರಮುಖವಾದ ಅಂಶ. ನಿಗಿನಿಗಿಸುವ ಈ ವಚನಗಳಲ್ಲಿ ನಿಜವಾದ ಬಂಡಾಯ ಎದ್ದು ಕಾಣುತ್ತದೆ.*

○

---

* ಇಲ್ಲಿ ಬಳಸಲಾಗಿರುವ ವಚನಗಳನ್ನು ಡಾ. ಆರ್. ಸಿ. ಹಿರೇಮಠರು ಸಂಪಾದಿಸಿದ "ಶಿವಶರಣೆಯರ ವಚನಗಳು" ಕೃತಿಯಿಂದ ಆಯ್ದುಕೊಂಡಿದೆ.

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಕದಿರ ಕಾಯಕದ ಕಾಳವ್ವೆ ಹಾಗೂ ಕನ್ನಡಿ ಕಾಯಕದ ರೇವಮ್ಮ (ರೆಮ್ಮವ್ವೆ)

ಎಸ್. ವ್ಹಿ. ಅಯ್ಯನಗೌಡರ

ಕನ್ನಡ ಸಾಹಿತ್ಯದಲ್ಲಿ ಶರಣ–ಶರಣೆಯರದೊಂದು ವಿನೂತನ ಅಧ್ಯಾಯ. ಜಾತಿ–ಲಿಂಗ, ಸ್ತ್ರೀ–ಪುರುಷವೆಂಬ ಭೇದವಿಲ್ಲದೆ ಸಮಾನತೆಯನ್ನು ಸಾಧಿಸಿದ ಇವರು ಉನ್ನತಮಟ್ಟದ ವಚನಗಳನ್ನು ರಚಿಸಿ ಸಾಹಿತ್ಯದಲ್ಲಿ, ಜನಮನದಲ್ಲಿ ಚಿರಸ್ಥಾಯಿಯಾಗಿ ನಿಂತಿದ್ದಾರೆ.

ಪ್ರಸ್ತುತ ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ–ಕದಿರ ಕಾಯಕದ ಕಾಳವ್ವೆ, ಕನ್ನಡಿ ಕಾಯಕದ ರೇವಮ್ಮ (ರೆಮ್ಮವ್ವೆ) ಈ ಶರಣೆಯರು ಮುಕ್ತಾಯಕ್ಕ, ಅಕ್ಕ ಮಹಾದೇವಿಯರ ಮಟ್ಟಕ್ಕೇರದಿದ್ದರೂ ತಮ್ಮ ಅನುಭವವನ್ನು ತಾವು ಕೈಕೊಂಡ ಕಾಯಕದ ಪ್ರತಿಮೆಗಳೊಂದಿಗೆ ಬೆರಸಿ ಹಲವಾರು ವಚನಗಳನ್ನು ರಚಿಸಿದ್ದಾರೆ; ಮುಂದಿನ ಸಾಧಕಿಯರಿಗೆ ಮಾರ್ಗದರ್ಶಕರಾಗಿದ್ದಾರೆ. ಇಂಥ ಶರಣೆಯರಲ್ಲಿ ಹಲವರ ಜೀವನ ಚರಿತ್ರೆಯ ಬಗೆಗೆ ನಿಖರವಾದ ಆಧಾರಗಳು ದೊರೆತರೆ ಇನ್ನೂ ಕೆಲವರ ಬಗೆಗೆ ಏನೂ ಮಾಹಿತಿ ದೊರೆಯುವಂತಿಲ್ಲ. ಆದರೆ ಪ್ರಸ್ತುತ ಶರಣೆಯರ ಬಗೆಗೆ ಅಷ್ಟು ನಿರಾಶಾದಾಯಕ ಉತ್ತರವಿಲ್ಲ. ಪುರಾಣ ಕಾವ್ಯಗಳಲ್ಲಿ ದೊರೆಯುವ ಸಂಗತಿಗಳು ಹಾಗೂ ಸ್ವರಚಿತ ವಚನಗಳ ಆಧಾರದಿಂದ ಅವರ ಪರಿಚಯವನ್ನು ಕೆಳಗಿನಂತೆ ಮಾಡಬಹುದು.

೧) ವೀರಮ್ಮ (ದಸರಯ್ಯಗಳ ಪುಣ್ಯಸ್ತ್ರೀ)

ಸಿದ್ಧನಂಜೇಶನ 'ಗುರುರಾಜ ಚಾರಿತ್ರ'ದಲ್ಲ ಉಲ್ಲೇಖಗೊಂಡ ತೆರಕಣಾಂಬಿಯ ವೀರಮ್ಮ ಮತ್ತು ದೀವಿಗೆಯ ಎಣ್ಣೆ ತೀರಲು ಭಕ್ತಿಯಿಂದ ನೀರೆರೆದು ದೀಪ ಉರಿಸಿದ ವೀರಮ್ಮ ಎಂಬವರಿಂದ ಭಿನ್ನಳಾದ ಈಕೆ 'ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ' ಎಂಬ ಅಭಿದಾನದಿಂದ ಪರಿಚಿತಳಾಗಿದ್ದಾಳೆ. 'ದಯವೇ ಧರ್ಮದ ಮೂಲ'ವೆಂಬ ಸೂತ್ರವನ್ನು ಹಿಡಿದು ಅಹಿಂಸೆಯ ಮಹತಿಯನ್ನು ಎತ್ತಿ ತೋರಿಸಿದ, ದಯವೇ ಸಾಕಾರ ಮೂರ್ತಿಯಾದ ದಸರಯ್ಯಗಳ ವೀರಮ್ಮನವರ ಪತಿ ರಾಮುಗೋಡೆಯಲ್ಲಿ ಜನಿಸಿದ ದಸರಯ್ಯನವರು ಸರ್ವಭೂತ ಹಿತವೇ ತಮ್ಮ ವ್ರತವೆಂದು; 'ಜೀವಿಯ ನೋವೆ

ಲಿಂಗದ ನೋವು' ಎಂದು ಭಾವಿಸಿದವರು. ಇವರು ಮೇಲು-ಕೀಳು, ಲಿಂಗ-ಜಾತಿ, ಸುಖ-ದುಃಖ, ಸ್ತುತಿ-ನಿಂದೆ ಮೊದಲಾದ ದ್ವಂದ್ವಗಳನ್ನು ನೀಗಿ ಸಮಾನತೆಯ ಸಮ ದರ್ಶನವನ್ನು ಸಾಧಿಸಿದವರು. ಇಂಥ ಮಹಾನ್ ಶರಣನ ಧರ್ಮಪತ್ನಿ ವೀರಮ್ಮ. ಪತಿಯಂತೆ ಇವಳೂ ಶಿವಾನುಭಾವಿ; ಪತಿಗೆ ಅನುಕೂಲವಾದ ಸತಿ. ಪತಿಯನ್ನು ನೆರಳಿನಂತೆ ಹಿಂಬಾಲಿಸಿದ ಸಾತ್ವಿಕ ಶಿರೋಮಣಿ.

"ಇಪ್ಪತ್ತೇಳು ಶಿವಶರಣೆಯರು ವಚನಗಳು" ಎಂಬ ಗ್ರಂಥದಲ್ಲಿ "ದಾಸರಯ್ಯ ಗಳ ಪುಣ್ಯಸ್ತ್ರೀ ವೀರಮ್ಮನ ವಚನಗಳು" ಎಂಬ ತಲೆಬರಹದ ಕೆಳಗೆ ೩ ವಚನಗಳು, "ಶರಣೆಯರ ಚರಿತ್ರೆಗಳು" ಎಂಬ ಗ್ರಂಥದಲ್ಲಿ ೩ ವಚನಗಳು ಸಂಗ್ರಹವಾಗಿವೆ. "ಚರಣಾಯುಧವು ವೇಳೆಯನರಿವುದಯ್ಯ........"[1] ಎಂಬ ಒಂದು ವಚನ ಮಾತ್ರ ಎರಡೂ ಗ್ರಂಥಗಳಲ್ಲಿ ಒಂದೇ ಆಗಿದ್ದು ಇನ್ನುಳಿದವು ಎರಡೂ ಗ್ರಂಥಗಳಲ್ಲಿ ಭಿನ್ನ ಭಿನ್ನ ವಾಗಿವೆ. ಆದ್ದರಿಂದ ಸದ್ಯ ಈಕೆಯ ಒಟ್ಟು ೫ ವಚನಗಳು ದೊರೆತಂತಾಗಿದೆ. ಅಂಕಿತ "ಗುರು ಶಾಂತೇಶ್ವರಾ".

ಈ ವಚನಗಳಲ್ಲಿ ಭಕ್ತಿ ವ್ರತಹೀನ, ಶರಣ ಸಂದೇಹಿಗಳು, ಪಾದೋದಕ-ಪ್ರಸಾದ, ತನು ಧರ್ಮ ಮದಸಂಚಲತೆ ಮುಂತಾದ ವಿಷಯಗಳ ಕುರಿತು ನಿರುಪಣೆ ಇದೆ. ಉಪಮೆಗೆ ನಿಲುಕನ ಶರಣದ ನಿಲುವನ್ನು ವೀರಮ್ಮ ಹೀಗೆ ವಿವರಿಸಿದ್ದಾಳೆ:

ಪರಿಪೂರ್ಣನಲ್ಲ; ಪ್ರದೇಶಿಕನಲ್ಲ.
ನಿರತಿಶಯದೊಳತಿಯ, ತಾ ಮುನ್ನಲ್ಲ.
ಶರಣನಲ್ಲ, ಐಕ್ಯನಲ್ಲ, ಪರಮನಲ್ಲ, ಜೀವನಲ್ಲ
ನಿರವಯನಲ್ಲ, ಸಾವಯನಲ್ಲ.
ಪರವಿಹವೆಂಬುಭಯದೊಳಲ್ಲದವನು.?
ನಿರಾಲಯ ನಿಜಗುರು ಶಾಂತೇಶ್ವರ ಶರಣನ ನಿಲುವು
ಉಪಮೆಗೆ ತಾನನುಪಮ...[2]

ನಿಜಗುರು ಶಾಂತೇಶ್ವರನಿಂದ ರೂಪುದಳೆದ ವೀರಮ್ಮನು 'ಅಯ್ಯಾ ದುರುಳ ಕಾಮಿನಿಯರಿಗೆ ಎರಗುವ ಹೊಲೆ ಮನಸೆ' ಎಂದು ಮನಸ್ಸಿಗೆ ಛೀ ಹಾಕಿ ಗುರು-ಲಿಂಗ-ಜಂಗಮದ ನೆಲೆಯರಿತು, ಮರಹು ಸ್ಪಷ್ಟವಾಗಿ ಅರುಹು ಕುರಿಗೊಂಡಾತನಾಗ ಬೇಕೆಂದು ಕರೆ ಕೊಡುತ್ತಾಳೆ. ತನು ಧರ್ಮ ತರಹರಿಸಿ ಮನದ ಸಂಚಲವಳಿದು ಒಳಗೆ ನುಣ್ಣಗಾಗಿ ಬೋಳಕಾಕಾರ ತಾಳಬೇಕಲ್ಲದೆ ತಾಯಿ ಸತ್ತ ತಬ್ಬಲಿಯಂತಾಗ ಬಾರದು ಎಂಬ ಮೋನೆಯ ನುಡಿಗಳಲ್ಲಿ ಎದ್ದು ಕಾಣುತ್ತದೆ. ಆಚರಣೆಗೆ ಹೆಚ್ಚು ಬೆಲೆಯನ್ನು ಕೊಟ್ಟ ವೀರಮ್ಮನು ಪ್ರಸಾದದ ಪ್ರಕಾರ ಅದನ್ನು ಸ್ವೀಕರಿಸುವ ವಿಧಾನ.

1. (ಸಂ.) ಆರ್. ಸಿ. ಹಿರೇಮಠ "ಇಪ್ಪತ್ತೇಳು ಶಿವಶರಣೆಯರ ವಚನಗಳು" ಪುಟ 110 ವ, 327. ಕ. ವಿ. ವಿ. ಪ್ರಕಟನೆ ನ. 228.

2. (ಸಂ.) ಆರ್. ಸಿ. ಹಿರೇಮಠ "ಇಪ್ಪತ್ತೇಳು ಶಿವಶರಣೆಯರು ವಚನಗಳು" ಪುಟ 110 ವ. 227.

ಅನರಿಂದ ದೊರಕುವ ಫಲ, ಅದರ ಮಹಿಮೆಗಳನ್ನು ಕೆಳಗಿನ ದೀರ್ಘ ವಚನದಲ್ಲಿ ಅರ್ಥವತ್ತಾಗಿ ನಿರೂಪಿಸಿದ್ದಾಳೆ:

"ಗುರು ಮುಖದಿಂದ ಬಂದುದೇ ಗುರುಪ್ರಸಾದ
ಆ ಪ್ರಸಾದವನು ಲಿಂಗಕ್ಕೆ ಅರ್ಪಿಸಿದಲ್ಲಿ ಲಿಂಗಪ್ರಸಾದ
ಭೋಜ್ಯ ಕಟ್ಟಿ ಲಿಂಗಕ್ಕೆ ಕೊಟ್ಟು ಸಲಿಸುವುದೇ ಜಂಗಮ ಪ್ರಸಾದ.
ತತ್ ಪ್ರಸಾದಿಗಳಲ್ಲಿ ಯೋಚಿಸಿ ಅವರ ಪ್ರಸಾದವ ಕೊಂಬುದೇ
ಪ್ರಸಾದಿಯ ಪ್ರಸಾದ.
ಅಪೇಕ್ಷೆಯಿಂದ ಸಲಿಸುವುದೇ ಆಪ್ಯಾಯನ ಪ್ರಸಾದ.
ಗುರು ಲಿಂಗಜಂಗಮವ ಕಂಡು ಆ ಸಮಯದಲ್ಲಿ ತೆಗೆದು ಕೊಂಬುವುದೇ
ಸಮಯ ಪ್ರಸಾದ.
ಪಂಚೇಂದ್ರಿಯಂಗಳಲ್ಲಿ ಪಂಚವಿಷಯ ಪದಾರ್ಥಗಳನ್ನು ಪಂಚವಿಧ
ಲಿಂಗಕ್ಕೆ ಸಮರ್ಪಣ ಮಾಡುವುದೇ ಪಂಚೇಂದ್ರಿಯ ವಿರಹಿತ ಪ್ರಸಾದ.
ಮನವೇ ಲಿಂಗ, ಬುದ್ಧಿಯೇ ಶಿವಜ್ಞಾನ, ಚಿತ್ತವೇ ಶಿವದಾಸೋಹ,
ಅಹಂಕಾರದಲ್ಲಿ ಶಿವಚಿಂತನೆಯುಳ್ಳವನಾಗಿ ಸಲ್ಲಿಸಿದ್ದೇ ಅಂತಃಕರಣ
ವಿರಹಿತ ಪ್ರಸಾದ.
ತ್ರಿವಿಧಾಂಗದಲ್ಲಿ ತ್ರಿವಿಧ ಲಿಂಗವ ಸಂಬಂಧಿಸಿ
ಆ ಚಿದ್ಘನಲಿಂಗ ತಾನೆಂದರಿದು ಆ ತ್ರಿವಿಧ ಲಿಂಗಕ್ಕೆ ಕೊಡುವುದೇ
ಸದ್ಭಾವ ಪ್ರಸಾದ.
ಬಹಿರಂಗದ ಪ್ರಪಂಚವ ನಷ್ಟಮಾಡಿ ಅರಿವುವಿಡಿದು ಸಲಿಸುವುದೇ ಸಮತಾ
ಪ್ರಸಾದ.
ಶ್ರೀ ಗುರುವಿನ ಪ್ರಸನ್ನತ್ವವೇ ಜ್ಞಾನ ಪ್ರಸಾದ.
ಇಂತೀ ಏಕಾದಶ ಪ್ರಸಾದವನು ಒಳಹೊರಗೆ ಪರಿಪೂರ್ಣಮಾಗಿ
ತಿಳಿವುದೇ ಶಿವತಂತ್ರ, ಗುರುಶಾಂತೇಶ್ವರಾ"[3]

ಇಲ್ಲಿ ಪಂಚೇಂದ್ರಿಯ ಅಂತಃಕರಣ, ತ್ರಿವಿಧಾಂಗಗಳಲ್ಲಿ ಲಿಂಗವ ಸಂಬಂಧಿಸಿ ಗುರು–ಲಿಂಗ–ಜಂಗಮಕ್ಕೆ ಏಕಾದಶ ಪ್ರಸಾದವನ್ನರ್ಪಿಸುವುದು. ಕ್ರಿಯಾಚರಣೆಯನ್ನರಿತು ಒಳ ಹೊರಗೆ ಪರಿಪೂರ್ಣವಾಗಿ ತಿಳಿದಾಚರಿಸುವುದು; ಹಾಗೆ ಆಚರಿಸಿದ ಪ್ರಸಾದದ ಪ್ರಸನ್ನತ್ವವೇ ಶಿವ ತಂತ್ರ, ಎಂದು ಹೇಳುವಲ್ಲಿ ವೀರಮ್ಮನು ಪ್ರಸಾದಕ್ಕೆ ಮತ್ತು ಅದರ ಆಚರಣೆಗೆ ಕೊಟ್ಟ ಮಹತಿಯನ್ನು ಕಾಣುತ್ತೇವೆ. ಪ್ರಸಾದ ಸ್ವೀಕರಿಸುವಲ್ಲಿ 'ಮನವೇ ಲಿಂಗ, ಬುದ್ಧಿಯೇ ಶಿವಜ್ಞಾನ, ಚಿತ್ತವೇ ಶಿವದಾಸೋಹ, ಅಹಂಕಾರದಲ್ಲಿ ಶಿವಚಿಂತನೆಯುಳ್ಳಾತನಾಗಬೇಕೆಂದು ಹೇಳುವ ಈ ಮಾತಗಳು ಮನನೀಯ ಇವು ಅವಳ ಅಂತರಂಗದ ಅನುಭವಕ್ಕೆ ಹಿಡಿದ ಕನ್ನಡಿ.

3. (ಸಂ) ಫ. ಗು. ಹಳಕಟ್ಟಿ "ಶಿವಶರಣೆಯರ ಚರಿತ್ರೆಗಳು" ಪುಟ 57-58; 195

ಹಾಗೆಯೇ ಇವಳು ಇನ್ನೊಂದು ವಚನದಲ್ಲಿ ಪಾದೋದಕದ ಮಹತ್ವವನ್ನು ತಿಳಿಸುತ್ತ ತನ್ನ "......ಇಂತೀ ದಶವಿಧ ಪಾದೊದಕವನ್ನು ಎನ್ನಂತರಂಗದಲ್ಲಿ ತೀದು ನಾನು ಸದ್ಯೋನ್ಮುಕ್ತಳಾದೆನಯ್ಯಾ ಗುರು ಶಾಂತೇಶ್ವರ" ತಾನು ಮುಕ್ತಳಾದ ಬಗೆಯನ್ನು ಅರಹೂತ್ತಾಳೆ; ತನ್ನ ಅನುಭವ ಬುತ್ತಿಯನ್ನು ವಚನಗಳ ಮುಖಾಂತರ ಹಂಚುತ್ತಾಳೆ; ಅದನ್ನುಂಡು ಎಲ್ಲರೂ ಸದ್ಯೋನ್ಮುಕ್ತರಾಗಬೇಕೆಂಬ ಮಾರ್ಗ ತೋರಿಸುತ್ತಾಳೆ. ಒಟ್ಟಿನಲ್ಲಿ ವೀರಮ್ಮ, ದಸರಯ್ಯಗಳ ಜೊತೆ ಆದರ್ಶ ಜೀವನನಡೆಸಿ ಶರಣೆಯರ ಗಣದಲ್ಲಿ ತೊಳಗಿ ಬೆಳಗುವ ಒಂದು ಜ್ಯೋತಿಯಾಗಿದ್ದಾಳೆ.

೨) ಕದಿರ ಕಾಯಕದ ಕಾಳವ್ವೆ :

'ಕಾಳವ್ವೆ' ಎಂಬ ಹೆಸರಿನಲ್ಲಿ 'ಉರಿಲಿಂಗ ಪೆದ್ದಿಗಳರಸಾ' ಎಂಬ ಅಂಕಿತದಿಂದ ೧೩ ವಚನ ರಚಿಸಿದ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, 'ಕರ್ಮಹರ ಕಾಳೇಶ್ವರಾ' ಎಂಬ ಅಂಕಿತದಿಂದ ೨ ವಚನ ರಚಿಸಿದ ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರಿ ಕಾಳವ್ವೆ, 'ಭೀಮೇಶ್ವರಾ' ಎಂಬ ಅಂಕಿತದಿಂದ ಒಂದು ವಚನ ರಚಿಸಿದ ಸಿದ್ಧ ಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, 'ಗುಮ್ಮೇಶ್ವರಾ' ಎಂಬ ಅಂಕಿತದಿಂದ ೧ನೇ ವಚನ ರಚಿಸಿದ ಕದಿರ ಕಾಳವ್ವೆ ಎಂಪು ನಾಲ್ವರು ಶಿವಶರಣೆಯರಿದ್ದಾರೆ.

ರಾಟಿಯಿಂದ ನೂಲನ್ನು ತೆಗೆಯುವ ಕಾಯಕ ಕೈಗೊಂಡ ಕದಿರ ರೆಮ್ಮವ್ವೆಯಂತೆಯೇ ಕದಿರ ಕಾಳವ್ವೆಯೂ ನೂಲು ತೆಗೆಯುವ ಕಾಯಕದಲ್ಲಿ ನಿರತಳಾದ ಶರಣೆ. ಈಕೆ ಕದಿರ ಕಾಯಕದ ಕಾಳವ್ವೆ ಎಂಬ ಹೆಸರಿನಿಂದ ಚಿರಪರಿಚಿತಳಾಗಿದ್ದಾಳೆ. ಈ ನಾಲ್ವರೂ ಸುಮಾರು ೧೧೬೦ನಲ್ಲಿದ್ದು ಶರಣರ ಜೊತೆ ಹೊಯ್-ಕಯ್ಯಾಗಿ ನಿಂತು ಕಾರ್ಯಕೈಗೊಂಡವರು.ವ್ರತಾಚರಣೆಯಲ್ಲಿ ಕರಿಗೊಂಡ ಈ ಶರಣೆಯರು. ವ್ರತನಿಷ್ಠೆಯ ಮಹತಿಯನ್ನು ತಮ್ಮ ವಚನಗಳಲ್ಲಿ ಮಾರ್ದನಿಸಿದ್ದಾರೆ.ಹಾಗೆಯೇ ಕದಿರ ಕಾಳವ್ವೆಯು ತನ್ನ ಒಂದು ವಚನದಲ್ಲಿ

"ಕದಿರು ಮುರಿಯೆ ಏನೂ ಇಲ್ಲ.
ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ"[4]

ಎನ್ನುವಲ್ಲಿ ಕದಿರು ಮುರಿದರೆ ಕಾಯಕ ಹೇಗೆ ಬಂದಾಗುವುದೋ ಹಾಗೆ ವ್ರತಹೀನನನ್ನು ನೆರೆದರೆ ಆಗುವದೆಂಬ ಆಶಯವನ್ನು ವ್ಯಕ್ತಪಡಿಸಿದ್ದಾಳೆ. ಈ ಸರಣೆಯ ಬಗೆಗೆ ಮೇಲೆ ಉಲ್ಲೇಖಿಸಿದ ಎರಡು ಸಾಲಿನ ವಚನವನ್ನು ಹೊರತು ಪಡಿಸಿ ಮತ್ತಾವ ಸಂಗತಿಗಳೂ ದೊರೆಯುವದಿಲ್ಲ.

೨) ರೇವಮ್ಮ : (ಕನ್ನಡಿ ಕಾಯಕದ ರೇವಮ್ಮ, ರೆಮೊಮ್ಮ ರೆಮ್ಮವ್ವೆ):

'ರೆಮ್ಮವ್ವೆ' ಎಂಬ ಈ ಹೆಸರಿಗೆ ಸರಿಸಮಾನವಾಗಿ ರೇಮಮ್ಮ, ರೆಬ್ಬವ್ವೆ, ರೇಮವ್ವೆ ಎಂಬ ಪರ್ಯಾಯ ಪದಗಳು ಬಳಕೆಗೊಂಡುದು ಕಂಡು ಬರುತ್ತದೆ. ಅವರ ಹೆಸರುಗಳನ್ನು ಗುರುತಿಸುವಾಗ ತಮ್ಮ ಮೂಲ ಹೆಸರಿನೊಂದಿಗೆ ತಾವು ಕೈಕೊಂಡ

4. ಆರ್. ಸಿ. ಹಿರೇಮಠ (ಸಂ) ಇಪ್ಪತ್ತೇಳು ಶಿವಶರಣೆಯರ ವಚನಗಳು, ಪುಟ 114 ವ 234

ವೃತ್ತಿಯನ್ನೂ (ಅಂದರೆ ವೃತ್ತಿನಾಮ–ನಾಮ) ಸೇರಿಸಿಕೊಂಡು ಕನ್ನಡಿ ಕಾಯಕದ ರೇವಮ್ಮ, ಕದಿರ ಕಾಯದ ರೇವಮ್ಮ, ಎಂದು ಮೊದಲಾಗಿಕರೆಯಲು ಕಂಡುಬರುತ್ತದೆ.

'ಕದಿರೆ ರೆಮ್ಮಿಯೊಡೆಯ ಗುಮ್ಮೇಶ್ವರಾ' ಎಂಬ ಅಂಕಿತದಲ್ಲಿ ೪ ವಚನ ರಚಿಸಿದ ಕದಿರ ಕಾಯಕದ ರೆಮ್ಮವ್ವೆ, ಏಲೇಶಕೇತಯ್ಯನ ಏಲೇರಿ ಗ್ರಾಮದಲ್ಲಿ ನೆಲೆಸಿ ಏಲೇಶ್ವರನ ಹೆಸರಿನಲ್ಲಿ 'ಏಲೇಶ್ವರ ಲಿಂಗ' ಎಂಬ ಅಂಕಿತದಲ್ಲಿ ೨೩ ವಚನ ರಚಿಸಿದ ರೆಮ್ಮವ್ವೆ, 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ವೆಂಬ ವಚನಾಂಕಿತವುಳ್ಳ ರೆಮ್ಮವ್ವೆ, ಕಥಾಸಾಗರ, ಸೋಮನಾಥ ಪುರಾಣಗಳಲ್ಲಿ ಉಲ್ಲೇಖಗೊಂಡ ಭಕ್ತರ ಸತಿಯರಿಗೆ ಶಿವ ಕಥೆ ಹೇಳುವ ಕಾಯಕ ಕೈಗೊಂಡ ರೆಮ್ಮವ್ವೆ, 'ಆದಿಲಿಂಗ' ಎಂಬ ಅಂಕಿತವುಳ್ಳ ರೆಮ್ಮವ್ವೆ ಎಂಬ ಐವರು ಶಿವಶರಣೆಯರಿಂದ ಭಿನ್ನಳಾದ ಶಿವಶರಣೆ ಕನ್ನಡಿ ಕಾಯಕದ ರೇವಮ್ಮ (ರೆಮ್ಮವ್ವೆ).

ಭಕ್ತಿಯ ಹಿರಿಮೆಯನ್ನು ಕಾಯಕದ ಮಹಿಮೆಯನ್ನು ಎತ್ತಿ ತೋರಿಸುತ್ತ ವ್ರತಾಚರಣೆಯ ಮುಖಾಂತರ ಸರ್ವಾರ್ಪಣ ಭಾವದಿಂದರ್ಪಿಸಿ ಪ್ರಸಾದ ಸ್ವೀಕರಿಸುವದರಿಂದಾಗುವ ಪರಿಣಾಮವನ್ನು ಇವರೆಲ್ಲರ ವಚನಗಳಲ್ಲಿ ಕಾಣುತ್ತೇವೆ.

ಪ್ರಸ್ತುತ ಕನ್ನಡಿ ಕಾಯಕದ ರೇವಮ್ಮಳ ಜೀವನ ಚರಿತ್ರೆಯ ಬಗೆಗೆ ಏನೂ ತಿಳಿದು ಬರುವದಿಲ್ಲ. ಕನ್ನಡಿ ಕಾಯಕ ಎಂಬ ಈ ವಿಶೇಷಣ ಪದವು ಇವಳ ಅಥವಾ ಇವಳ ಮನೆತನದ (ಕ್ಷೌರಿಕ ಜಾತಿಯ) ವೃತ್ತಿಸೂಚಕ ಪದವಾಗಿದೆ. 'ಸದ್ಗುರು ಸಂಗ ನಿರಂಗ ಲಿಂಗ' ಎಂಬುದು ಇವಳ ವಚನಾಂಕಿತ. ಈಕೆಯ ಒಂದೇ ಒಂದು ವಚನ ಮಾತ್ರ ಈಗ ಲಭ್ಯವಾಗಿದೆ.

> ಕೈಯಲು ಕನ್ನಡಿ ಇರಲು ತನ್ನ ತಾ ನೋಡಬಾರದೆ?
> ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?
> ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಿಯಲ್ಲ
> ಪಡಿಹಾರನ ಪಾದರಕ್ಷೆಯ ನಿಕ್ಕವೆ.
> ಮುಂಡಿಗೆಯನೆತ್ತಿರೊ ಭ್ರಷ್ಟ ಭವಿಗಳಿರಾ;
> ಎತ್ತಲಾಜಿವಡೆ, ಸತ್ತ ಕುನ್ನಿಯ ಬಾಲವ ನಾಲಗೆಯ
> ಮುರುಟಿರೊ, ಸದ್ಗುರು ಸಂಗ ನಿರಂಗಲಿಂಗದಲ್ಲಿ 5

ಇಲ್ಲಿ ಸ್ವಸ್ವರೂಪದ ಅರುಹಿನ ಕುರುಹಾದ ಇಷ್ಟಲಿಂಗವೆಂಬ ಕನ್ನಡಿ ಕೈಯಲ್ಲಿರಲು ಅವರನುಸಂಧಾನದಿಂದ ಲಿಂಗ ಜಂಗಮಕ್ಕರ್ಪಿಸಿದ ಪ್ರಸಾದ ಸ್ವೀಕರಿಸಬೇಕು; ಈ ಕ್ರಮ ನಿಯಮವನ್ನು ತಪ್ಪಿದ ಧರ್ಮ ವಿರೋಧಿಗಳನ್ನು ಕೊಲ್ಲುವದರಲ್ಲಿ ತಪ್ಪೇನೂ ಇಲ್ಲ ಎಂಬ ತನ್ನ ಗಣಾಚಾರ ನಿಷ್ಠೆಯ ವಾದವನ್ನು ಮಂಡಿಸಿದ್ದಾಳೆ—ರೇವಮ್ಮ. 'ಕೊಂದಡೆ ಮುಕ್ತಿಯಿಲ್ಲವೆಂಬರ ಬಾಯಿಯಲ್ಲಿ ಪಡಿಹಾರನ ಪಾದರಕ್ಷೆಯ ನಿಕ್ಕುವ'

---

5. ಸಕಲ ಪುರಾತನರ ವಚನಗಳು-೩ (ಸಂ) ಎಂ. ಎಸ್. ಸುಂಕಾಪುರ ಪುಟ 67 ವ; 134 ಕ. ವಿ. ವಿ. 1978.

ಎಂಬ ಕಠೋರವಾದ ಮಾತಿನಿಂದ ಚುಚ್ಚಿ ಸವಾಲನ್ನೊಡ್ಡಿ 'ಮುಂಡಿಗೆಯ ನೆತ್ತಿರೊ ಭ್ರಷ್ಟ ಭವಿಗಳಿರಾ' ಎಂದು ಭವಿಗಳಿಗೆ ಎಚ್ಚರಿಕೆ ನೀಡಿದ್ದಾಳೆ. ಎತ್ತಬಾರದೆ ಇದ್ದಂಥ ಹೇಡಿ ಭವಿಗಳಿಗೆ 'ಸತ್ತ ಕುನ್ನಿಯ ಬಾಲವ ನಾಲಗೆಯ ಮುರುಟಿರೊ' ಎಂದು ಹೇಳು ವಲ್ಲಿ ಅವಳಲ್ಲಿ ಘಟ್ಟಿಗೊಂಡ ಪ್ರಚಾರಣೆಯ ನಿಷ್ಠೆಯನ್ನು ಕಾಣುತ್ತೇವೆ.

ಒಟ್ಟಿನಲ್ಲಿ ಪಾದೊದಕ—ಪ್ರಸಾದಗಳ ಮಹತಿಯನ್ನು ಬಿಂಬಿಸಿದ ದಸರಯ್ಯ ಗಳ ಪುಣ್ಯಸ್ತ್ರೀ ವೀರವ್ಮ್ಮ, ವ್ರತ ನಿಷ್ಠೆಯನ್ನು ಮೆರೆದ ಕದಿರ ಕಾಳವ್ವೆ, ಗಣಾಚಾರ ನಿಷ್ಠೆಯ ವಾದವನ್ನು ಮಂಡಿಸಿದ ಕನ್ನಡಿ ಕಾಯಕದ ರೇವಮ್ಮ ಈ ಎಲ್ಲ ಶಿವಶರಣೆ ಯರಲ್ಲಿ ಸಾಮಾನ್ಯವಾಗಿ ಕಾಣುವ ಒಂದು ವಿಶಿಷ್ಟ ಅಂಶವೆಂದರೆ ವ್ರತ ನಿಷ್ಠೆಯೇ ಆಗಿದೆ.

○

ಬಾಚಿಕಾಯಕದ ಬಸವಪ್ಪಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕ್ಕಮ್ಮ ಮತ್ತು ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ

ಪ್ರಭಾ ಗುಂಜಟ್ಟಿ

೧೨ನೆಯ ಶತಮಾನ, ಲೋಕದ ಮಹಿಳೆಯರ ಭಾಗ್ಯದ ಬಾಗಿಲನ್ನು ತೆರೆದ ಯುಗ. ತನ್ಮೂಲಕ ಶತಮಾನಗಳ ಶಾಪವಿಮೋಚನೆಯಾಯಿತು; ಸಮಾನತೆಯ ಪರಿಮಳ ಹೊಮ್ಮಿತು. ಈ ಸುಗಂಧವನ್ನು ಸೂಸಲು ಕಾರಣರಾದವರು ವೀರಶೈವ ಶರಣರು. ಶರಣರ ವೈಚಾರಿಕ ಕ್ರಾಂತಿಯಿಂದ ಸಾಂಸ್ಕೃತಿಕ ಕ್ರಾಂತಿ ಕಾಣಿಸಿಕೊಂಡು ಜೀವನದ ಎಲ್ಲ ವಿಧಾನಗಳಲ್ಲೂ ಹೊಸ ಮೌಲ್ಯದ ಆಚಾರ ವಿಚಾರಗಳು ಹಣಿಕಿಕ್ಕಿದವು. ಸ್ತ್ರೀ ಪುರುಷನಿಗೆ ಸಮಾನಳಾಗಿ ಬದುಕುವ ಕ್ಷಣ, ಪುರುಷನ ಹೆಗಲೆಣೆಯಾಗಿ ನಿಲ್ಲುವ ಕ್ಷಣ ಪ್ರಾಪ್ತವಾಯಿತು. ಇದರ ಪರಿಮಳದಿಂದ ತಮ್ಮ ಜೀವನವನ್ನು ಅರಳಿಸಿಕೊಂಡವರು ಅನೇಕರು. ಅವರಲ್ಲಿ ಬಾಚಿಕಾಯಕದ ಪುಣ್ಯಸ್ತ್ರೀ ಕಾಳವ್ವೆ, ರೇಕಮ್ಮ ಹಾಗೂ ಮಸಣಮ್ಮ ಸಮಾವೇಶಗೊಂಡಿದ್ದಾರೆ.

ಈ ಮೂವರು ಶರಣೆಯರು ಹಲಗೆ ಬಳಪವನ್ನು ಹಿಡಿದವರಲ್ಲ. ಎತ್ತಲಾಗದ ಭಾರವಾದ ಹೊತ್ತಗೆಗಳನ್ನು ಓದಿದವರಲ್ಲ. ಲೌಕಿಕವಾದ ಬಾಳಿನಲ್ಲಿ ತಾವು ಪಡೆದ ಅನುಭವದ ಹಿನ್ನೆಲೆಯಲ್ಲಿ ಆಧ್ಯಾತ್ಮ ದರ್ಶನವನ್ನು ಮಾಡಿಕೊಂಡವರು. ಅವರ ಮಾತಿನ ರೀತಿಯಲ್ಲಿ ಅವರ ವಿಚಾರ, ಆಲೋಚನೆಗಳ ಮಿಂಚು ಕಣ್ಣು ಕೋರೈಸುತ್ತಿದೆ. ಅವರ ಅಗಾಧವಾದ ಜ್ಞಾನಕ್ಕೆ ಬೆಕ್ಕಸ ಬೆರಗಾಗುತ್ತೇವೆ.

ಬಾಚಿಕಾಯಕದ ಬಸವಪ್ಪಯ್ಯಗಳ ಪುಣ್ಯಸ್ತ್ರೀ ಕಾಳವ್ವೆ :

ಕಾಳವ್ವೆ ಬಾಚಿಕಾಯಕದ ಬಸವಪ್ಪನವರ ಅರ್ಧಾಂಗಿ. ಸತಿಪತಿಗಳೊಂದಾದ ಭಕ್ತಿ ಶಿವನಿಗೆ ಹಿತವಪ್ಪಂತೆ ಅನುರೂಪವಾದ ದಾಂಪತ್ಯ ನಡೆಸಿದವರು. ಪತಿಯ ಪರಿಸರದಲ್ಲಿಯೇ ತಾನೂ ವಚನರಚನೆಗೆ ತೊಡಗಿದವಳು, ಕಾಳವ್ವೆ. ಇವಳು ಎಷ್ಟು ವಚನ ರಚನೆ ಮಾಡಿದಳೆಂಬುದು ಇನ್ನೂ ತಿಳಿದಿಲ್ಲವಾದರೂ ಈಗ ದೊರೆತ ಎರಡು ವಚನಗಳು ಅವಳ ಪ್ರತಿಭೆ, ಪಾಂಡಿತ್ಯವನ್ನು ಎತ್ತಿ ಸಾರುವಂತಿವೆ. ಈ ವಚನಗಳಲ್ಲಿ ಅವಳ ಅನುಭಾವದ ನಿಲುವನ್ನು ಅರಿಯಬಹುದೇ ಹೊರತು ಕಾವ್ಯಸೌಂದರ್ಯವನ್ನಲ್ಲ.

ಕೊಡಲಿಯ ಕಾವು ಕುಲಕ್ಕೆ ಮುಳುವಾದಂತೆ ನಾವು ಮಾಡುವ ಕಾಯಕದಲ್ಲಿ ಕಿಂಚಿತ್ ಕ್ಲೇಶವಾದರೂ ಅದರಿಂದ ನಮ್ಮ ಬದುಕಿಗೇ ಗಾಯವಾಗುವುದಲ್ಲದೆ ಅನ್ಯರಿಗಲ್ಲ. ಬಡಿಗನು ಉಳಿಯಿಂದ ಕಟ್ಟಿಗೆಯನ್ನು ಕೆತ್ತುತ್ತಿರುವಾಗ ಎಚ್ಚರತಪ್ಪಿದರೆ ಅದರ ಹೊಡೆತ ಕಾಲಿಗೆ ಬಡಿಯುವ ಸಂಭವವುಂಟು. ಅದರಂತೆ ಮನುಷ್ಯನು ತನ್ನ ಬದುಕನ್ನು ಪರಿಪೂರ್ಣಗೊಳಿಸುವ ದಾರಿಯನ್ನು ಬಿಟ್ಟು ಅಲ್ಲದ ಮಾರ್ಗದಲ್ಲಿ ನಡೆದರೆ ಆತನ ಬದುಕು ನರಕಮಯವಾಗುವದು. ಮನುಷ್ಯ ತನ್ನ ಬಾಯಿಯನ್ನು ಹತೋಟಿಯಲ್ಲಿಟ್ಟುಕೊಂಡರೆ ಮಾತ್ರ ಅವನ ಏಳ್ಗೆ: ಬಾಳಿಗೊಂದು ಬೆಲೆ. ಮಾತಿಗಿಂತ ಮೌನ ಮೇಲು. ಅರ್ಥವಿಲ್ಲದೆ ಗಳಪುವದು ಮಾತೆನಿಸಲಾರದು. ಆಡುವ ಮಾತು ಮುತ್ತಾಗಿರಬೇಕು. ಜ್ಯೋತಿರ್ಲಿಂಗವಾಗಬೇಕು. ಶಶಿಯುದಿಸಿ ಬಂದಂತಿರಬೇಕು. ವ್ರತಹೀನನ ಸಂಗ ಒಳ್ಳೆಯದಲ್ಲ. ದುರ್ಜನರ ಸಂಗದಿಂದ ದೂರವಿರುವುದು ಉಚಿತವೆಂದು ಹೇಳಿದ್ದಾಳೆ. ಕಾಳವ್ವೆಯು ಮನುಷ್ಯ ಮೈಯೆಲ್ಲ ಕಣ್ಣಾಗಿ ಎಚ್ಚರದಿಂದಿರುವ ವಿಷಯವನ್ನು ಮಾತಿನ ಮರ್ಮವನ್ನು, ಸತ್‌ಸಂಗದಹಿರಿಮೆಯನ್ನು ಬಣ್ಣಿಸಿದ್ದಾಳೆ. ಕಾಳೇಶ್ವರನನ್ನು ಒಲಿಸುವ ಪರಿಯನ್ನು ವಿವರಿಸಿದ್ದಾಳೆ.

ಇನ್ನೊಂದು ವಚನದಲ್ಲಿ ಕಾಯಕದ ಮಹತ್ವವನ್ನು ಎತ್ತಿ ತೋರಿದ್ದಾಳೆ. ಕಾಯಕ ತಪ್ಪಿನುಡಿಯಬಾರದು. ಕಾಯಕ ಮಾಡುವಲ್ಲಿ ಕಿಂಚಿತ್ತೂ ವಿಳಂಬವಾಗಕೂಡದು. ಆ ವಿಳಂಬವನ್ನು ಸಹಿಸಕೂಡದೆಂದು ಎಚ್ಚರಿಸಿದ್ದಾಳೆ.

ಇಹಪರ ಜೀವನಕ್ಕೆ ಪೋಷಕವಾಗುವ ವ್ರತದ ಪಾಲನೆಯಲ್ಲಿ ಕಟ್ಟುನಿಟ್ಟಿರಬೇಕೆನ್ನುತ್ತಾಳೆ. ವ್ರತಾಚರಣೆಯೆಂದು, ಉಪವಾಸ–ವನವಾಸ, ಗಿಡಸುತ್ತುವದು, ಕಲ್ಲುಪೂಜೆ ಮಾಡುವದು, ಪಂಚಾಗ್ನಿ ಮಧ್ಯೆ ನಿಂತು ತಪಸ್ಸು ಮಾಡುವದು ಮೊದಲಾದವಲ್ಲ. ಮನಶುದ್ಧಿ, ಸದ್ಗುಣಮಯವಾದ ಜೀವನವೇ ನಿಜವಾದ ವ್ರತಚರಣೆ ಇದರಲ್ಲಿ ವಿಚಲಿತಗೊಳ್ಳದಂತೆ ಪರಿಪಾಲಿಸಬೇಕೆಂದು ಹೇಳಿರುವಳು.

ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕ್ಕಮ್ಮ :

ರೇಕ್ಕಮ್ಮ ರೇವಣಸಿದ್ಧಯ್ಯಗಳ ಆದರ್ಶಪತ್ನಿ. ಶ್ರೀ ಗುರುಸಿದ್ಧೇಶ್ವರ ಎಂಬುದು ಇವಳ ವಚನದ ಮುದ್ರೆ. ನಿಜವಾದ ವೀರಶೈವ ಹೇಗಿರಬೇಕು ಎಂಬುದನ್ನು ಬಹು ಮಾರ್ಮಿಕವಾಗಿ ತಿಳಿಸಿದ್ದಾಳೆ.

ಲಿಂಗದಿಂದ ದೂರವಿದ್ದವನನ್ನು, ಆಚಾರಹೀನನನ್ನು, ವ್ರತಾಚಾರ ತಪ್ಪಿದವನನ್ನು, ಪಾದೋದಕ ಪ್ರಸಾದ ವಿಭೂತಿಯನ್ನು ನಿಂದಿಸುವವನನ್ನು ಕಂಡವರು ತಮ್ಮಲ್ಲಿ ಶಕ್ತಿಯಿದ್ದರೆ ಆ ಸ್ಥಳದಲ್ಲಿಯೇ ಸಂಹರಿಸಬೇಕು. ಆ ಧೈರ್ಯವಿಲ್ಲದಿದ್ದರೆ ನಿಜವಾದ ಶರಣನು ಕಿವಿ ಮುಚ್ಚಿಕೊಂಡು ಶಿವಮಂತ್ರವನ್ನು ಜಪಿಸುತ್ತ ಆ ಸ್ಥಳವನ್ನು ತ್ಯಜಿಸುವದು ಒಳ್ಳೆಯದು. ಅದನ್ನು ಮಾಡುವವರು ತುಂಬೀಪಾತಕ ನಾಯಕ ನರಕಕ್ಕೆ ಸಲ್ಲುತ್ತಾರೆಂದು ಹೇಳಿದ್ದಾಳೆ.

ಇವಳದು ಮಹೇಶ್ವರ ನಿಷ್ಠೆ. ವೀರಶೈವ ದರ್ಶನದ ಆಚಾರಕ್ಕೆ ಒಂದಿನಿತು ಕುಂದಾದರೂ ಅವಳ ಹೃದಯ ಸಹಿಸದು. ಹೆಣ್ಣಾದರೂ ಅವಳ ನಿಯಮ ಪಾಲನೆಯ ಮನಸ್ಸು ಕಠೋರ. ಆತ್ಮದ ಸಾಕ್ಷಾತ್ ಚಿಂತನೆಯಲ್ಲಿ ಓಲಾಡುವಂಥದು. ಲಿಂಗ

ವಂತ ಧರ್ಮದ ಆಚರಣೆಯನ್ನು ಆಚರಿಸುವ ಖಂಡಿತ ಆಚಾರವಂತೆಯವಳು. ಇವಳ ಒಂದೇ ಒಂದು ವಚನ ದೊರೆತಿದೆ.

ಎಡೆ ಮಠದ ನಾಗಿ ದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ :

ಇವಳು ಎಡೆಮಠದ ನಾಗಿದೇವಯ್ಯನವರ ಹೆಂಡತಿ. ಇವಳು ಬರೆದ ಒಂದು ವಚನಮಾತ್ರ ಈಗ ಲಭ್ಯವಿದೆ. ಇವಳು ತನ್ನ ವಚನದಲ್ಲಿ ಲೋಕಕ್ಕೆ ಮರುಳಾಗಿ ತೋರುವ ಶಿವಭಕ್ತರು ತಮ್ಮ ಸಚ್ಚಾರಿತ್ರ್ಯದಿಂದ.ಶುದ್ಧ ನಡೆ-ನುಡಿಯಿಂದ, ಉಳಿದವರಿಗಿಂತ ಹೇಗೆ ಭಿನ್ನರಾಗಿ ನಿಲ್ಲುವರೆಂಬುವದನ್ನು ಯಥೋಚಿತವಾದ ಹೋಲಿಕೆಗಳಿಂದ ಸ್ಪಷ್ಟ ಪಡಿಸಿದ್ದಾಳೆ.

ಅಜ್ಞಾನದಿಂದ ಹುಟ್ಟುವ ಅಹಂಕಾರವನ್ನು ಗೆದ್ದವರಿಲ್ಲ. ಪ್ರತದಿಂದ ಮೂರಾಪವನೊಡನೆ ಕೈ ತೊಳೆದವರಿಲ್ಲ.ನಾಯಿಯು ಕೊಬ್ಬರಿಯನ್ನು ತಿನ್ನುವದಿಲ್ಲವಂತೆ. ಪರಟಿಯನ್ನು ತೆಗೆದು ಕೊಬ್ಬರಿ ತಿನ್ನುವ ಕ್ರಮ ಅದಕ್ಕೆ ತಿಳಿಯದು. ಅದರಂತೆ ಮನುಷ್ಯ ಕೂಡ ಪಂಚತ್ವದ ಸುಖಗಳನ್ನು ಕಂಡು ಹಾತೊರೆದು ಧಾವಿಸುತ್ತಾನೆ. ಆದರೆ ಅದರ ಸುತ್ತಲಿರುವ ಲೌಕಿಕ ಆಕರ್ಷಣೆಯ ಸೊಟ್ಟೆಯನ್ನು ತೆಗೆಯುವಷ್ಟು ಪುರುಸೊತ್ತು, ತಾಳ್ಮೆ, ಬುದ್ಧಿವಂತಿಕೆ ಆತನಲ್ಲಿರುವದಿಲ್ಲ. ಆ ಪರಟೆಯನ್ನು ತೆಗೆದು ಒಳಗಿನ ತಿರುಳನ್ನು ಪಡೆಯುವ ದಾರಿಯನ್ನರಿಯದೆ ಸೋತು ವಿಫಲನಾಗುತ್ತಾನೆ. ಅಜ್ಞಾನವನ್ನು ಗೆಲ್ಲುವದು, ಪರತತ್ವದ ಚಿಂತನೆ, ವ್ರತವು ಶಿವಭಕ್ತನಿಗೆ ಸಲ್ಲುವದಲ್ಲದೆ ಸಾಮಾನ್ಯ ಮನುಷ್ಯನಿಗಲ್ಲ. ಇದನ್ನು ನಿಜೇಶ್ವರಲಿಂಗವ ಸಾಕ್ಷಿಯಾಗಿ ಸಿದ್ಧಪಡಿಸುತ್ತೇನೆಂದಿದ್ದಾಳೆ.

ವಚನಗಳಲ್ಲಿ ಅಭಿವ್ಯಕ್ತಗೊಂಡ ಈ ಶರಣೆಯರ ಅನುಭವಗಳು ಆಕಾಶಮಲ್ಲಿಗೆಯಲ್ಲ. ಕಲ್ಪನೆಯ ಕನಸುಗಳಲ್ಲ. ಜೀವನದ ಕಾವಿನಲ್ಲಿ ಬೆಂದವು. ಮಣ್ಣಿನ ವಾಸನೆಯ ಕಸುವನ್ನುಂಡು ಬೆಳೆದವು.

ಅದಕ್ಕಾಗಿ ನಮಗೆ ಹತ್ತಿರವಾಗಿ ತೋರುವವು. ಸಾಹಿತ್ಯಕ ದೃಷ್ಟಿಯಿಂದ ಕಲ್ಪನೆಯ ಪ್ರಪಂಚದಲ್ಲಿಯೇ ಓಲಾಡುವ ಮಹಿಳೆಯರಿಗೆ ಮಾರ್ಗದರ್ಶನ ಮಾಡುವಂಥವಾಗಿವೆ. ವಿಕೃತರೂಪದ ಪದರುಗಳನ್ನು ಬಿಚ್ಚಿತೋರಿಸಿ ಅವು ಸುಕೃತ ರೂಪ ಹೊಂದಿ ಹಸನಾಗಿ ಸಮಾಜದ ಸ್ವಾಸ್ಥ್ಯ ಕಾಯಬೇಕೆನ್ನುವ ಕಳಕಳಿ ಇಲ್ಲಿದೆ.ಸಮಾಜವು ಅಂಧಶ್ರದ್ಧೆಯ ಕಂದಾಚಾರಗಳ ಮಲೆತುನಿಂತ ಮಡುವಾಗದೆ, ಸತ್-ಪರಂಪರೆಯು ಹರಿವ ಅಳಜಲವಾಗಬೇಕೆನ್ನುವ ಆಶಯವಿದೆ. ವ್ಯಕ್ತಿ ಸರ್ವಾಂಗ ಸುಂದರನಾಗಬೇಕೆನ್ನುವ ಕಳಕಳಿ ಇದೆ.

ಇಂದು,ಎಲ್ಲೆಡೆಯಲ್ಲಿ ಕೇಳಬರುತ್ತಿರುವ, "ಮಹಿಳಾ ಸಾಹಿತ್ಯ ವ್ಯಾಪ್ತಿಯ ಹರವು ಕಡಿಮೆ, ಅನುಭವದಲ್ಲಿ ಆಳವಿಲ್ಲ"ಎಂಬುದಕ್ಕೆ ೧೨ನೇ ಶತಮಾನದಲ್ಲಿ ಆಗಿಹೋದ ಶರಣೆಯರ ವಚನಗಳು ಅಪವಾದವಾಗಿವೆ. ಹೀಗೆ ಈ ಮೂವರು ಶರಣೆಯರು ಕ್ರಾಂತಿ ಯುಗದ ಪ್ರತಿನಿಧಿಗಳಾಗಿ ಮಿನುಗುತ್ತಾರೆ.

ಗಂಗಾಂಬಿಕೆ

ಶಶಿಕಲಾ ನೋಳದಿ

ಗಂಗಾಂಬಿಕೆ ಬಲದೇವ ಮಂತ್ರಿಯ ಮಗಳು. ಇವಳ ಬಾಲ್ಯಚಿತ್ರಣ, ಶಿಕ್ಷಣ ಮುಂತಾದವುಗಳ ಬಗ್ಗೆ ಕಾವ್ಯಗಳು ಮೌನತಾಳಿವೆ.

ಗಂಗಾಂಬಿಕೆ ಬಸವೇಶ್ವರನಿಗೆ ಯೋಗ್ಯ ಸಹ ಧರ್ಮಿಣಿಯೆಂದು ಕವಿಗಳು ಕಂಡಿದ್ದಾರೆ. ಗಂಗಾಂಬಿಕೆಯ ಪಾತ್ರವನ್ನು ಚಿಕ್ಕದಾದರೂ ಚೊಕ್ಕವಾಗಿ ಚಿತ್ರಿಸಿದ್ದಾರೆ. ಅವಳ ಸ್ಫುರದ್ರೂಪವನ್ನು ಚಿತ್ರಿಸಿದಂತೆ ಅವಳ ಪತಿ ಪರಾಯಣತೆ ಮತ್ತು ಉದಾರತೆಗಳನ್ನು ಬಿಂಬಿಸುವ ಸನ್ನಿವೇಶಗಳನ್ನೂ ಬಿಡಿಸಿದ್ದಾರೆ. "ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಾದೇವಿಯರೊಡನೆ ವಿವಾಹ ಸಂಪದದಿಂ ಸಂತ ಸುಖಮಿರ್ದು."[1] ಎಂದು ಅವರ ದಾಂಪತ್ಯ ವರ್ಣನೆಯನ್ನು ಹರಿಹರ ಒಂದೇ ವಾಕ್ಯದಲ್ಲಿ ಮುಗಿಸುತ್ತಾನೆ. ಆದರೆ ಭೀಮಕವಿ, ಷಡಕ್ಷರದೇವ, ಲಕ್ಕಣ್ಣ ದಂಡೇಶ, ಸಿಂಗಿರಾಜರು ಅವಳ ಸೌಂದರ್ಯವನ್ನು, ಮದುವೆಯ ಸಂಭ್ರಮೋತ್ಸವವನ್ನು ವರ್ಣಿಸಿದ್ದಾರೆ. ಬಸವಪುರಾಣದ ನಾಲ್ಕನೆಯ ಸಂಧಿಯ ೭೬ ನೆಯ ಪದ್ಯದಲ್ಲಿ ಬಸವೇಶ್ವರನ ವಿವಾಹ ವಿಸ್ತಾರದ ಕಥೆಯಿದೆ. ಗಂಗಾಂಬಿಕೆಯ ಸೌಂದರ್ಯ ವರ್ಣನೆ ಪ್ರೌಢಕಾವ್ಯಗಳ ಮಾದರಿಯಲ್ಲಿ ಮುಂದುವರಿಯುತ್ತದೆ.

> "ಮದಪಿಕಂ ಮುಟ್ಟದ ತಳಿರೊ, ಷ
> ಟ್ಪದಿಯೆರಗದರಲೋ, ಶುಕಂ ಮು
> ಟ್ಟದ ಫಳವೊ....,.... ಫಣಿಹಿಡಿಯದ
> ಸುಧಾಕರ ಬಿಂಬವೊ"[2]

ಎನಿಸಿ ಮಿಗಿಲಾದ ಚೆಲುವು ಅವಳದು. ಅದಕ್ಕೆ ತಕ್ಕ ಗುಣವೂ ಇದ್ದಿತು. ಗುಣಕ್ಕೆ ತಕ್ಕ ಉಜ್ವಳ ತಾರುಣ್ಯ, ಅದಕ್ಕೆ ತಕ್ಕ ನವಭಾವ, ಹೊಂದಿಕೊಂಡ ಪ್ರೌಢಿಮೆ ಮತ್ತು ಶಿವೈಕಭಕ್ತಿಗಳು ಅವಳಲ್ಲಿದ್ದವು. ಗಂಗಾಂಬಿಕೆಯನ್ನು ಬಲದೇವನು ಧರ್ಮ ವಿಧಿಯಿಂದ ಬಸವನಿಗೆ ಮದುವೆ ಮಾಡುತ್ತಾನೆ.

---

1. ಬಸವರಾಜ ದೇವರ ರಗಳೆ : ಪುಟ 34.
2. ಬಸವ ಪುರಾಣ : ಪುಟ 67

ಬಸವರಾಜನು ಕೈಕೊಂಡು ನಡೆಸುತ್ತಲಿಹ ಹಲವು ವಿಧದ ಪ್ರತಿಜ್ಞಾನ ಪೂರ್ತಿಕೆಯಲ್ಲಿ ಗಂಗಾಂಬಿಕೆ ನೆರವಾದಳು. ಇದನ್ನು ಒಂದು ಸಂದರ್ಭದಿಂದ ಸ್ಪಷ್ಟಗೊಳಿಸಬಹುದು. ವೇಶ್ಯೆಯ ದಾಸಿಯೊಬ್ಬಳು ಗಂಗಾಂಬಿಕೆಯುಟ್ಟ ವಸ್ತ್ರವನ್ನು ಮೆಚ್ಚಿ ಅದಕ್ಕೆ ಸಮನಾದ ಮತ್ತೊಂದಂಬರವಿಲ್ಲೆಂದು ತನ್ನ ಒಡತಿಗೆ ಹೇಳಲು, ಅವಳು ಆ ದುಕೂಲವನ್ನಪೇಕ್ಷಿಸಿ ವಿಟಜಂಗಮನಿಗೆ ಅದನ್ನು ತರಲು ಒತ್ತಾಯ ಮಾಡಿ ಬಸವನಲ್ಲಿ ಕಳಿಸಿದಳು. ಅವನು ಆಸ್ಥಾನಕ್ಕೆ ಬಂದು ಕೇಳಲು ಒಡನೆಯೇ ಗಂಗಾಂಬಿಕೆಯು ಸೀರೆಯನ್ನು ಭಕ್ತಿಭಾವದಿಂದ ಜಂಗಮನಿಗೆ ತೆಗೆದಿತ್ತನೆಂದು ಬಸವ ಪುರಾಣ ಮತ್ತು ಸಿಂಗಿರಾಜ ಪುರಾಣಗಳಲ್ಲಿ ಬರುತ್ತದೆ. ಇದು ಬಸವನ ಪರೀಕ್ಷೆಯಂತೆ ಗಂಗಾಂಬಿಕೆಯ ಪರೀಕ್ಷೆಯೂ ಆಗಿದೆ.

ನೀಲಲೋಚನೆಯೂ ಪತಿಯಾಜ್ಞೆಯನ್ನು ತಲೆಯ ಮೇಲೆ ಹೊತ್ತು ನಡೆದವಳೇ. ಆದರೆ ಅವಳು ಸ್ವತಂತ್ರ ಮನೋಭಾವದವಳು. ಗಂಗಾಂಬಿಕೆ ಮಾತ್ರ ಸಂಪ್ರದಾಯ ಶೀಲ ಸತಿ. ಅಲ್ಲಮಪ್ರಭು ಗಂಗಾಂಬೆಯ ಪತಿಯಾಜ್ಞಾಪಾಲನೆಯ ಗುಣವನ್ನು :

ಪತಿಯ ಸೇವಿಸಿ ಲಿಂಗಧ್ಯಾನದಲ್ಲಿಪ್ಪುದು ಅತ್ಯಂತ ಘನ
ಬಸವನ ಸತಿ ಸತಿಯಳಲ್ಲ, ಬಸವನ ಸತಿ ಲೋಕದ ಹೆಣ್ಣಲ್ಲ.
ಬಸವನ ಸತಿ ಗುಹೇಶ್ವರಲಿಂಗದ ಪ್ರಾಣಲಿಂಗ ಕೇಳಾ ಮಡಿವಾಳಯ್ಯಾ

ಎಂದು ಕೊಂಡಾಡುತ್ತಾನೆ. ಗಂಗಾಂಬಿಕೆಗೆ ಪತಿಯ ಆಜ್ಞಾಪಾಲನೆಯೇ ಪರಮಾತ್ಮ ಪೂಜೆ. ಅನ್ಯನಿಷ್ಠೆ ಅವಳಿಗಿಲ್ಲ.

ಪತಿಯಾಜ್ಞೆಯಲ್ಲಿ ಚರಿಪ ಸತಿಗೇಕೆ ಪ್ರತಿಜ್ಞೆಯು ?
ಪತಿ ಕರೆದಲ್ಲಿ ಪೋಪದಿರೆ ಯಾತನೆಯಲ್ಲವೆ !
ಇವಳ ಲಿಂಗನಿಷ್ಠೆ ಇವಳಿಗೆ, ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾಪ್ರಿಯ ಕೂಡಲಸಂಗಮದೇವಾ !

ಎಂದು ಹೇಳುವ ಗಂಗಾಂಬೆಯ ಮಾತಿನಲ್ಲಿ ಪತಿಭಕ್ತಿಯನ್ನು ಕಾಣಬಹುದು.

ಇತರ ಶರಣೆಯರಂತೆ ಮನೆಯ ಹೊರಗೆ ಅನುಭವ ಮಂಟಪಾದಿ ಕಡೆಗಳಲ್ಲಿ ಅವಳ ಕಾರ್ಯಚಟುವಟಿಕೆ ಕಾಣದು. ಅವಳ ಕಾರ್ಯಕ್ಷೇತ್ರ ಬಸವರಸನ ಮಹಾಮನೆ. ಹೀಗಿದ್ದೂ ಪರಿಸರದ ಪ್ರಭಾವದಿಂದ ಇವಳೂ 'ಗಂಗಾಪ್ರಿಯ ಕೂಡಲಸಂಗಮದೇವ' ಮುದ್ರಿಕೆಯಿಂದ ವಚನ ಬರೆದಿದ್ದಾಳೆ. ಈ ವರೆಗೆ ಇವಳ ೮ ವಚನಗಳು ಲಭ್ಯವಾಗಿವೆ. ಪ್ರಭುದೇವ, ಮಡಿವಾಳ ಮಾಚಯ್ಯ, ಸಿದ್ಧರಾಮಯ್ಯ. ಬಸವಣ್ಣನವರನ್ನು ನೆನೆದು ಬರೆದಿದ್ದರೂ ಇವುಗಳಲ್ಲಿ ಬಹಳಷ್ಟು ಚೆನ್ನಬಸವಣ್ಣನನ್ನು ಉದ್ದೇಶಿಸುತ್ತಿರುವುದೊಂದು ವಿಶೇಷ. ಅಭಿವ್ಯಕ್ತಿಯಲ್ಲಿ ಅನುಭಾವ, ವ್ಯಂಜಕತೆಗಳು ಸಾಮಾನ್ಯವಾಗಿರುವುದು ಶರಣರ ಆಂದೋಲನದ ವಿಷಯವಾಗಿ ಅವಳಿಗಿದ್ದ ತಕ್ಕ ಮಟ್ಟಿನ ನಿರ್ಲಿಪ್ತತೆಯನ್ನು ಸೂಚಿಸುತ್ತದೆ.

ಭಾಗ–೩

ವೀರಶೈವ ರಾಣಿಯರು

ಸಂಪಾದಕರು :

‘ಶಾಂತರಸ’

ಆರನೆಯ ವಿಕ್ರಮಾದಿತ್ಯನ ಪಿರಿಯರಸಿ ಲಕ್ಷ್ಮೀಮಹಾದೇವಿ

ಬಿ. ಆರ್. ಹಿರೇಮಠ

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅವಧಿ ಬಸವಪೂರ್ವ ವೀರಶೈವದ ಘಟ್ಟವೆನಿಸಿಕೊಂಡಿದೆ. ವೀರಶೈವದ–ಆಚಾರ–ವಿಚಾರ–ವಚನಸಾಹಿತ್ಯಗಳು ಆಕಾರ ಪಡೆಯುತ್ತಲಿದ್ದ ಕಾಲವದು. ಈ ಸಮಯದಲ್ಲಿ ವೀರಶೈವಕ್ಕೆ ಆಕಾರಮುದ್ರೆಯನ್ನು ಕೊಡುವ ಕಾರ್ಯದಲ್ಲಿ ನಿರತರಾದ ಶರಣರೇ ಹನ್ನೆರಡನೆಯ ಶತಮಾನದ ಶಿವಶರಣರು ಸೂಚಿಸುವ 'ಆದ್ಯ' ರಾಗಿರುವ ಸಾಧ್ಯತೆಯಿದೆ. ಕಲ್ಯಾಣ ಚಾಲುಕ್ಯ ಇಮ್ಮಡಿ ತೈಲಪನ ತಾಯಿ ಜೊಂತಾದೇವಿ, ದೇವರ ದಾಸಿಮಯ್ಯ, ಸುಗ್ಗಲೆ, ಚಾಲುಕ್ಯ ವಂಶದ ಕೋವೂರ ಬ್ರಹ್ಮಯ್ಯ, ಲಕ್ಷ್ಮೀಮಹಾದೇವಿ, ತೆಲುಗು ಜೊಮ್ಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಈ ಘಟ್ಟದಲ್ಲಿ ಕಾಣಸಿಗುವ'ಆದ್ಯ'ರು. "ಡೋಹಾರ ಕಕ್ಕಯ್ಯ, ಕರಿಕಾಲ ಚೋಳನ ಸಮಕಾಲೀನನಾದ ಮಾದಾರ ಚೆನ್ನಯ್ಯ, ಕೆಂಭಾವಿ ಭೋಗಣ್ಣ, ಮಾರುಡಿಗೆ ನಾಚಯ್ಯ, ದಶಗಣ ಸಿಂಗಿದೇವ, ಮುಸುಟೆಯ ಚಾವುಂಡರಾಯ ಇವರು ಇದೇ ಸಮಯದವರಿರಬಹುದೆಂದು ತೋರುತ್ತದೆ" ಎಂಬ ಡಾ. ಎಂ. ಎಂ. ಕಲಬುರ್ಗಿಯವರ1 ಅಭಿಪ್ರಾಯದಿಂದ ಈ "ಆದ್ಯ"ರ ಸಂಖ್ಯೆ ಇನ್ನೂ ಹೆಚ್ಚುತ್ತದೆ. ಈ ಆದ್ಯರ ಶ್ರೇಣಿಯ ಸ್ತ್ರೀಯರಲ್ಲಿ ಗಮನಾರ್ಹಳೆನಿಸಿದ ಪಿರಿಯರಸಿ ಲಕ್ಷ್ಮೀಮಹಾದೇವಿಯ ಚರಿತ್ರೆಯನ್ನು ಶಾಸನ ಹಾಗೂ ಕಾವ್ಯಗಳಿಂದ ಹೀಗೆ ಸಂಗ್ರಹಿಸಬಹುದು:

ಆರನೆಯ ವಿಕ್ರಮಾದಿತ್ಯ (ಕ್ರಿ. ಶ. ೧೦೭೬–೧೧೨೬) ಚಾಲುಕ್ಯ ಚಕ್ರವರ್ತಿ. ಕಲ್ಯಾಣ ಇವನ ರಾಜಧಾನಿ. ಈತನ ಸುಮಾರು ೧೬ ಜನ ಪ್ರಮುಖ ರಾಣಿಯರಲ್ಲಿ ಲಕ್ಷ್ಮೀದೇವಿ ಹೆಚ್ಚು ರಾಜಾನುರಾಗಿಯೂ ಪ್ರಜಾನುರಾಗಿಯೂ ಆಗಿದ್ದಳು. ಶರಣ ತೆಲುಗು ಜೊಮ್ಮಯ್ಯ ಸೇವಕನಾಗಿಯೂ ಶರಣ ಕೊಂಡಗುಳಿಕೇಶಿರಾಜ ದಂಡನಾಯಕನಾಗಿಯೂ ಆರನೆಯ ವಿಕ್ರಮಾದಿತ್ಯನಲ್ಲಿದ್ದರು. ಲಕ್ಷ್ಮೀದೇವಿ ಇಂಥ ರಾಜಕೀಯ ಪರಿಸರ, ಶರಣಸಂಗದಲ್ಲಿ ಬೆಳೆದವಳು.

ಲಕ್ಷ್ಮೀಮಹಾದೇವಿಯ ವಿಷಯವಾಗಿ ಹಲವು ಸಂಗತಿಗಳನ್ನು ತಿಳಿಸುವಲ್ಲಿ ಹರಿ

1. ಕೊಂಡಗುಳಿ ಕೇಶಿರಾಜನ ಕೃತಿಗಳು : ಪ್ರಸ್ತಾವನೆ—ಪುಟ : vii

ಹರನ ತೆಲುಗು ಜೊಮ್ಮಯ್ಯನ ರಗಳೆಯೂ[2] ದೋಣಿ (ಕ್ರಿ. ಶ. ೧೦೮೦),[3] ಸೂಡಿ (ಕ್ರಿ. ಶ. ೧೦೮೪),[4] (ಡಂಬಳ ಕ್ರಿ. ಶ. ೧೦೯೫–೯೬),[5] ದೋಣಿ (ಕ್ರಿ. ಶ. ೧೦೯೭),[6] ಸಿಡಸಿಂಗಿ (ಕ್ರಿ. ಶ. ೧೧೧೦–೧೧),[7] ಹೇಡಗಿ (ಸು. ಶ. ೧೧–೧೨)[8] ಶಾಸನಗಳೂ ಪ್ರಮುಖ ಪಾತ್ರ ವಹಿಸುತ್ತವೆ.

ಶಾಸನಗಳು ಲಕ್ಷ್ಮಾದೇವಿ, ಲಕ್ಷ್ಮೀದೇವಿ, ಪಿರಿಯರಸಿ ಲಕ್ಷ್ಮೀಮಹಾದೇವಿ, ಪಿರಿಯರಸಿ ಲಕ್ಷ್ಮಾದೇವಿಯೆಂದೂ, ತೆಲುಗು ಜೊಮ್ಮಯ್ಯನರಗಳೆ ಲಕುಮಾದೇವಿ ಯೆಂದೂ ಈಕೆಯನ್ನು ಹೆಸರಿಸಿದೆ. ಕಂಕೋಜ, ಮಸಣಿಕವ್ವೆ ನಾಯಕಿತಿಯರು ಲಕ್ಷ್ಮೀ ಮಹಾದೇವಿಯ ತಂದೆ–ತಾಯಿಗಳೆಂದು ಹೇಡಗಿ ಶಾಸನ ತಿಳಿಸುತ್ತದೆ.[9] ಈಕೆಯ ತವ ರುಮನೆ ಹೇಡಗಿ (ಇಂಡಿ ತಾಲೂಕ) ಆಗಿರಬಹುದೆ? ವಿಚಾರಣೀಯ. 'ಕಂಕೋಜ' (ಕಂಕ+ಓಜ) ಹೆಸರಿನಾಂತ್ಯದ'ಓಜ' ಶಿಲ್ಪಕರ್ಮ ಅಥವಾ ಲೋಹಕರ್ಮದವನೆಂಬು ದನ್ನು ಸೂಚಿಸುವಂತಿದೆ. ಆದುದರಿಂದ ಲಕ್ಷ್ಮೀಮಹಾದೇವಿ ಶಿಲ್ಪಕರ್ಮ ಅಥವಾ ಲೋಹಕರ್ಮ ಮನೆತನದವಳೆಂದು ಭಾವಿಸಬೇಕಾಗುತ್ತದೆ.

'ಪಿರಿಯರಸಿ', ರಾಣಿವರ್ಗವೆಂಬುದನ್ನೂ 'ಪಿರಿಯ ಪಟ್ಟಮಹಾದೇವಿ ಪಟ್ಟದ ರಾಣಿ ಅಥವಾ ಪಟ್ಟಮಹಿಷಿ ಎಂಬುದನ್ನೂ ಸೂಚಿಸುವಂತೆ ಕಾಣುತ್ತದೆ. ಶಾಸನ, ರಗ ಳೆಗಳಲ್ಲಿ ಲಕ್ಷ್ಮೀಮಹಾದೇವಿಯನ್ನು ಆರನೆಯ ವಿಕ್ರಮಾದಿತ್ಯನ 'ಪಿರಿಯರಸಿ' ಎಂದು ಮಾತ್ರ ಕರೆಯಲಾಗಿದೆ. ಕಾರಣ ಈಕೆ ಪಟ್ಟದರಾಣಿ ಆಗಿರದೆ, ರಾಣಿವರ್ಗಕ್ಕೆ ಸೇರಿದವ ಳಾಗಿದ್ದಳೆಂದು ಹೇಳಬೇಕಾಗುತ್ತದೆ. ಆರನೆಯ ವಿಕ್ರಮಾದಿತ್ಯನ ಉಳಿದ ರಾಣಿ ವರ್ಗದ ವರಿಗಿಂತ ಭಿನ್ನವಾದ, ವೈಶಿಷ್ಟ್ಯಪೂರ್ಣವಾದ, ವೈಭವಪೂರ್ಣವಾದ ವ್ಯಕ್ತಿತ್ವ ಲಕ್ಷ್ಮೀಮಹಾದೇವಿಯದು.

ಕ್ರಿ. ಶ. ೧೦೮೦ರ ಪೂರ್ವದಲ್ಲಿಯೇ ಈಕೆಯ ಲಗ್ನವಾಗಿದ್ದಿತು. ಈ ಸಮಯಕ್ಕಾ ಗಲೇ (೧೦೮೦) ಲಕ್ಷ್ಮೀಮಹಾದೇವಿ ಪ್ರಬುದ್ಧಾವಸ್ಥೆಯನ್ನು ಹೊಂದಿದವಳಾಗಿದ್ದಳು. ಯುವತೀ ಮುಖ ತಿಳಕಳೂ ಪುರಾಣಲಕ್ಷ್ಮಿಯೂ ಎನಿಸಿದ್ದ ಲಕ್ಷ್ಮೀಮಹಾದೇವಿಯ ರೂಪ, ಯೌವನ, ಕಂಠಮಾಧುರ್ಯಗಳನ್ನು ದೋಣಿ ಶಾಸನ[10]

ಘನಜಘನದಿಂದುಬಿಂಬಾ
ನನದ ಸರೋಜಾತನಯನದತಿ ನಿಬಿಡ ಘಟ

2. ಡಾ. ಫ. ಗು. ಹಳಕಟ್ಟಿ (ಸಂ) : ಹರಿಹರನ ರಗಳೆಗಳು—ಪುಟ: 336-347.
3. SII. XI-ii 126 ದೋಣಿ (ತಾ) ಮುಂಡರಗಿ
4. EI. XV P 100-103 ಸೂಡಿ (ತಾ) ರೋಣ
5. IA. X P. 185 ಡಂಬಳ (ತಾ) ಮುಂಡರಗಿ
6. SII. XI-ii 140 ದೋಣಿ (ತಾ) ಮುಂಡರಗಿ
7. ARIE. 1947-48 ನಂ 222 ಸಿಡಸಿಂಗಿ (ತಾ) ಹಾನಗಲ್ಲ
8. SII. XX 94 ಹೇಡಗಿ (ತಾ) ಇಂಡಿ
9. ಅದೇ.
10. SII XI-ii 140 ದೋಣಿ (ತಾ) ಮುಂಡರಗಿ (ಕ್ರಿ. ಶ. 1097)

ಸ್ತನ ಪರಪುಷ್ಟ ಸಿನದದ
ವನಿತಾ ಜನತಿಳಕಮಲ್ತೆ ಲಕ್ಷ್ಮೀದೇವಿ ||

ಎಂದು ಬಾಯ್ತುಂಬ ಬಣ್ಣಿಸುತ್ತದೆ.

"ಸತ್ಯನವರತಪರಮಕಲ್ಯಾಣಾಭ್ಯುದಯಸಹಸ್ರಫಳಭೋಗ
ಭಾಗಿನಿ ಸಂಸಾರಸಾರಸ್ವಸ್ತಿಸಂಪದಾಭೋಗಿನಿ ರಾಯನಾರಾಯಣ ವಿಶಾಳ
ವಕ್ಷಸ್ಥಳಸ್ಥಿತ ಪ್ರತ್ಯಕ್ಷಲಕ್ಷ್ಮೀ ಯೌವನವನವಸನ್ತಲಕ್ಷ್ಮೀ ಸಕಳಕಳಾಲಾ
ಪಲೀಲಾಧರೆ
ವಿಳಾಸವಿದ್ಯಾಧರೆ ವಿಕ್ರಮಾದಿತ್ಯದೇವ ಮನೋರಂಜನಿ ಸ್ವಸ್ತಿಮದಭುಂಜನಿ
ಚಾಳುಕ್ಯರಾಮ ಹೃದಯಹರ್ಷೋತ್ಕರ್ಷೆ ಸನ್ತತಾರ್ಘ್ಯಮಣಿ ಕನಕವಂಕಣ
ವರ್ಷೆ ನಿತ್ಯಪರಮಪುಣ್ಯಪ್ರಭಾವಚರಿತ್ರ ಪವಿತ್ರೆ ಸಲ್ಲಲಿತಗಾತ್ರೆ ಸುಜಾಣ
ರಾಣೀಯ
ಪಾತ್ರಶಿರೋಮಣಿ ದಾನಚಿನ್ತಾಮಣಿ ಅಮಳಸವತಿಮದಖಣ್ಡನಿ
ಸಮಸ್ತಾನ್ತಃಪುರ
ಮುಖಮಣ್ಡನಿ ಶ್ರೀಮತ್ ತ್ರಿಭುವನಮಲ್ಲದೇವ ವಿಶಾಳವಕ್ಷಸ್ಥಳ
ನಿವಾಸಿನಿಯರ್"

ಎಂಬ ಸೂಡಿಯ ಶಾಸನದ11 ಪ್ರಶಸ್ತಿಗದ್ಯವು ಲಕ್ಷ್ಮೀಮಹಾದೇವಿಯ ಬಹುಮುಖ ವ್ಯಕ್ತಿತ್ವವನ್ನೂ ಗುಣವಿಶೇಷಗಳನ್ನೂ ಎಳೆಎಳೆಯಾಗಿ ಬಿಡಿಸಿ ಹೇಳುತ್ತದೆ.

ಅರಸು ಆರನೆಯ ವಿಕ್ರಮಾದಿತ್ಯ ತನ್ನ ಆಡಳಿತದ ಸುವ್ಯವಸ್ಥೆ ಹಾಗೂ ಅನುಕೂಲತೆಗಾಗಿ ರಾಜಕೀಯ ಸೂತ್ರಗಳನ್ನು ತನ್ನ ರಾಣಿಯರಿಗೂ ವಹಿಸಿಕೊಟ್ಟಿದ್ದನು. ಅಂಥ ರಾಣಿಯರಲ್ಲಿ ಲಕ್ಷ್ಮೀಮಹಾದೇವಿಯೂ ಒಬ್ಬಳು. ವಿಕ್ರಮಾದಿತ್ಯVIನ ಆಳಿಕೆಯ ೫ನೆಯ ವರ್ಷ(ಕ್ರಿ.ಶ. ೧೦೮೦)ದಲ್ಲಿಯೇ ದೋಣಿ(ಮುಂಡರಗಿ ತಾಲೂಕು)ಯನ್ನಾಳಲು ಪ್ರಾರಂಭಿಸಿದ್ದಳು.12 ಕ್ರಿ. ಶ. ೧೦೮೪ದಲ್ಲಿ ಕಲ್ಯಾಣವನ್ನೂ ೧೦೯೫-೯೬ರಲ್ಲಿ ಹದಿನೆಂಟು ಅಗ್ರಹಾರ ಮತ್ತು ಡಂಬಳವನ್ನೂ ೧೧೧೦-೧೧ರಲ್ಲಿ ನಿಡಸಿಂಗಿಯನ್ನೂ ಸು. ಶ. ೧೧-೧೨ರಲ್ಲಿ ಜೇಡಗಿಯನ್ನೂ ಆಳುತ್ತಿದ್ದಳೆಂಬ ಸಂಗತಿ ಶಾಸನಗಳಿಂದ ಗೊತ್ತಾಗುತ್ತದೆ. ಹೀಗೆ ಲಕ್ಷ್ಮೀಮಹಾದೇವಿ ವಿಕ್ರಮಾದಿತ್ಯVIನ 'ಪಾದಪದ್ಮೋಪಜೀವಿ'ಯಾಗಿ (ಕ್ರಿ. ಶ. ೧೦೮೦ ರಿಂದ ೧೧೧೦-೧೧) ೩೦ ವರ್ಷಗಳ ವರೆಗೆ ಅವಿರತವಾಗಿ ಬೇರೆ ಬೇರೆ ಪ್ರದೇಶಗಳಿಂದ ರಾಜ್ಯಾಡಳಿತ ನಡೆಸಿದಳು.

ಅನವದ್ಯಾಂಗಜರಾಜ್ಯಲಕ್ಷ್ಮೀಲಲನಾರತ್ನಂ ವಿಳಾಸೋತ್ಪಳಂ
ಜನಿತಶೇಷಜಗಜ್ಜನಾಭಿಮತೆಯೊ ವಿಪ್ರಾಪ್ತ ಕಲ್ಪದ್ರುಮಂ
ದ್ಯುನದಿನಿರ್ಮ್ಮಳಕೀರ್ತ್ತಿ ವಿಶ್ವಜಗತೀಭೃದ್ವಿಕ್ರಮಾದಿತ್ಯ ಚ
ಕ್ರಿ ನಿಸರ್ಗ್ಗೋದಿತ ಪುಣ್ಯದೇವತೆಯೆ ಲಕ್ಷ್ಮಾದೇವಿ ಭೂಚಕ್ರದೊಳ್ ||

---

11. EI. XV P. 100-130. ಸೂಡಿ (ತಾ) ರೋಣ (ಕ್ರಿ. ಶ. 1084).
12. ಕ್ರಿ. ಶ. 1097ರಲ್ಲಿಯೂ ದೋಣಿಯನ್ನಾಳುತ್ತಿದ್ದಳು (SII.XI-ii 140).

ಎಂದು ಸೂಡಿಯ ಶಾಸನ13 ಈಕೆಯನ್ನು ವರ್ಣಿಸುತ್ತದೆ. ಇಲ್ಲಿ ಬರುವ 'ರಾಜ್ಯ ಲಕ್ಷ್ಮೀಲಲನಾರತ್ನಂ', 'ಜಗಜ್ಜನಾಭಿಮತೆ', 'ದ್ಯುನದಿನಿರ್ಮಳಕೀರ್ತ್ತಿ', 'ಪುಣ್ಯ ದೇವತೆ' ಎಂಬ ವಿಶೇಷಣಗಳನ್ನು ಅವಶ್ಯ ಗಮನಿಸಬೇಕು.

ಬಸವಪೂರ್ವ ವೀರಶೈವದ ಘಟ್ಟದಲ್ಲಿ ಲಿಂಗಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ, ದಾನಕಾರ್ಯಗಳು ಪ್ರಚಲಿತವಿದ್ದವು. ಈ ಪರಂಪರೆಯ ಪ್ರವಾಹದಲ್ಲಿಯೇ ನಡೆದುಬಂದವಳು ಲಕ್ಷ್ಮೀಮಹಾದೇವಿ. ಬೇಡಗಿಗ್ರಾಮದಲ್ಲಿರುವ ಕಂಕೇಶ್ವರದೇವಾ ಲಯವನ್ನು ಲಕ್ಷ್ಮೀಮಹಾದೇವಿ, ತಂದೆ ಕಂಕೋಜನ ಹೆಸರಿನಲ್ಲಿ ಕಟ್ಟಿಸಿರುವುದನ್ನು 'ತಮ್ಮ ಕಂಕೇಶ್ವರದೇವರ್ಗ್ಗೆ' ಎಂಬುದು ಖಚಿತಗೊಳಿಸಿಕೊಡುತ್ತದೆ. ಈ ದೇವಾಲ ಯದ ಪೂಜೆಪುರಸ್ಕಾರಗಳಿಗಾಗಿ ಭೂಮಿ, ನಿವೇಶನ, ಹೂದೋಟಗಳನ್ನು ಈಕೆ ದಾನ ವಾಗಿ ನೀಡಿದ ವಿಷಯ ಬೇಡಗಿ ಶಾಸನದಲ್ಲಿದೆ. ಸೂಡಿಯ ಅಚಲೇಶ್ವರದೇವಾಲಯದ ತಪೋಧನರ ಆಹಾರದಾನ, ವಿದ್ಯಾದಾನ, ಅಂಗಭೋಗಗಳಿಗಾಗಿ ಸ್ಥಾನಾಚಾರ್ಯ ಸೋಮೇಶ್ವರ ಪಂಡಿತದೇವರಿಗೆ ಕಿಸುಕಾಡು-೭೦ರ ಬಳಿಯ 'ಪೊಂಗರಿ' ಗ್ರಾಮವನ್ನು ದಾನವಾಗಿ ಕೊಟ್ಟ ವಿಷಯವನ್ನು ಸೂಡಿಯ ಶಾಸನ ತಿಳಿಸುತ್ತದೆ. ಹೀಗೆ ಲಕ್ಷ್ಮೀ ಮಹಾದೇವಿ 'ಮಹಾದಾನವಿನೋದೆ', 'ದಾನಚಿನ್ತಾಮಣಿ' ಆಗಿದ್ದಳೆಂಬುದನ್ನು ಶಾಸನ ಗಳು ಬೆರಳೆತ್ತಿ ಹೇಳುತ್ತವೆ.

ತೆಲುಗು ಜೊಮ್ಮಯ್ಯನ ರಗಳೆಯಲ್ಲಿ ಹರಿಹರನು ಈಕೆ 'ಪರಮಶಿವಲಿಂಗಾರ್ಚ ನಾನಿರತೆ', 'ಜಂಗಮಸ್ನೇಹಿ', 'ಸತ್ಯಭಕ್ತೆ'ಯಾಗಿದ್ದಳೆಂಬುದನ್ನು ಹೇಳುತ್ತಾನೆ. ಈ ರಗಳೆಯಲ್ಲಿ ಲಕ್ಷ್ಮೀಮಹಾದೇವಿಗೆ ಸಂಬಂಧಿಸಿದಂತೆ ಬರುವ ಎರಡು ಪ್ರಸಂಗಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು :

೧. ಗುಣಶಾಂತೆಯಾದ ಲಕುಮಾದೇವಿ, ಶರಣ ಜೊಮ್ಮಯ್ಯನ ಏಕನಿಷ್ಠೆ, ಅಚಲ ಬಲುಪು, ಶಿವಭಕ್ತಿಯ ಉತ್ಸಾಹಗಳನ್ನು ಕೇಳಿ ಪರಮಸಂತೋಷಗೊಂಡಿದ್ದಳು. ಜೊತೆಗೆ ಹೊಸಹೊಸ ವಸ್ತ್ರ, ಚಂದನ, ಕರ್ಪೂರ, ಅಗಿಲು, ಧೂಪ, ಸಾದು, ಕಸ್ತೂರಿ ಹಾಗೂ ಹೂಗಳನ್ನು ಶಿವಭಕ್ತ ಜೊಮ್ಮಯ್ಯನಿಗೆ ದಿನನಿತ್ಯ ಕಳಿಸುತ್ತಿದ್ದಳು. ರಾಣಿ ಕಳಿಸಿದ ಈ ವಸ್ತುಗಳಿಂದ ಆತನು ಅತ್ಯಂತ ಸಂತೋಷದಿಂದ ಶಿವಲಿಂಗಾರ್ಚನೆ ಮಾಡುತ್ತಿದ್ದ.

೨. ಒಂದುದಿನ ಜೊಮ್ಮಯ್ಯನು ತನ್ನ ಮನೆಯಿಂದ ಅರಮನೆಗೆ ಹೊರಟು ಬಂದನು. ಅರಮನೆಯಲ್ಲಿ ಪುರಾಣಿಕನೊಬ್ಬನು 'ವೈಷ್ಣವ ಪುರಾಣ'ವನ್ನು ಓದುತ್ತ "ಆಕಾಶಗಂಗೆ ಮುನ್ನು ಳ್ಳುದದನಟವಟಿಸಿ | ...ಹುಸಿಯ ನುಡಿಯನುಚ್ಚರಿಸಲಳವಡಿಸಿ | ವಿಷ್ಣುಪದವೆಂದು ಗಗನನಾಮವಲ್ಲಿರ್ದು | ವಿಷ್ಣುಪದಿಯಾದಳೆಂಬ..." ವಿಷಯವನ್ನು ವಿವರಿಸುತ್ತಿದ್ದನು. ಈ ಶಿವನಿಂದೆ ಜೊಮ್ಮಯ್ಯನಿಗೆ ಕೇಳಿಸಿತು. ಉಗ್ರಕೋಪವನ್ನು ತಾಳಿದ ಈತನು ಹರನಿಂದೆ ಮಾಡಿದ ಪುರಾಣಿಕನನ್ನು ಕೊಂದುಹಾಕಿದನು.

"ಪುರಾಣಭಟ್ಟಂಗೆ ಮನಂ ಪಗೆಯಾದುದಂ, ಪುಸಿನುಡಿ ವಿಷವಾದುದಂ, ಶಿವ

13. EI. XV-p. 100-103 ಸೂಡಿ (ತಾ) ರೋಣ (ಕ್ರಿ. ಶ. 1084)

ನಿಂದೆಯೇ ಕೊಂದುದು” ಎಂಬುದನ್ನು ತಿಳಿಯಲಾರದ ವಿಕ್ರಮಾದಿತ್ಯVIನು ಸೇವಕರನ್ನು ಕರೆದು “ಪಾರ್ವನೇಕೆ ಪುರಾಣಮಂ ಪೇಳದುಸುರದಿರ್ದಪನೆಂದು” ವಿಚಾರಿಸುವನು. ಜೊಮ್ಮಿ ತಂದೆಯೇ ಆತನನ್ನು ಕೊಂದವನೆಂದು ಹೇಳುವ ಧೈರ್ಯ ಒಬ್ಬರಿಗೂ ಇಲ್ಲ. ಕೈಸನ್ನೆ ಬಾಯಿಸನ್ನೆಯಿಂದ ಹೇಗೊ ವಿವರಿಸಿದರು. ಅದೇ ಕಾಲಕ್ಕೆ ವಿಷ್ಣುಪ್ರತಿಮೆ ತನ್ನಿಂದಾದ ಶಿವನಿಂದೆಯಿಂದ ಕಣ್ಣೀರು ಸುರಿಸುತ್ತಿದ್ದುದನ್ನು ಕಂಡ ಅರಸನು, ಇದು ಅಪಶಕುನವೆಂದು ತಿಳಿದು ಥಟ್ಟನೆ ನಡೆದುಬರುವಷ್ಟರಲ್ಲಿ “ಕಾಳ್ಪುರಾಣ ಒಂದೆಸೆ ತಾನೊಂದೆಸೆಯಾಗಿ ಕರುಳು ಕುಪ್ಪಳಿಸುತ್ತಿರ್ದ ನಿತ್ಯನರಕಿಯುಂ” ಕಂಡನು. ಆಮೇಲೆ ಸಿಂಹಾಸನಾರೂಢನೂ ಕೋಪಾರೂಢನೂ ಆಗಿ ಜೊಮ್ಮಯ್ಯನನ್ನು ಕರೆತರಲು ದೂತರಿಗೆ ಆಜ್ಞಾಪಿಸಿದನು. “ಶಿವನಿಂದೆ ವಿಪ್ರವಧೆ ನಿಮಿತ್ತವರಸಂ ಜೊಮ್ಮಣ್ಣಂಗೆ ಮುನಿದು ಕರೆಯಲ್ಕಳುಪಿ ಕುಪಿತನಾಗಿರ್ಪನೆಂಬ ಕಠಿಣವಾರ್ತೆಯುಂ” ಕೇಳಿದ ಲಕುಮಾದೇವಿ ಜೊಮ್ಮಯ್ಯನಿಗೆ ಒದಗಬಹುದಾದ ಅನಾಹುತವನ್ನು ತಪ್ಪಿಸಲು “ಮುನ್ನೆಂದುಂಪೊಡಮುಡದ ಜೊಮ್ಮಣ್ಣನಿಂದು ಪೊಡಮುಡೆ ತನಗೆ ಪೊಡಮಟ್ಟನೆಂದರಸಂ ಮನ್ನಿಸುವನೆಂಬ ಬಗೆಯಿಂ” ತನ್ನ ಪ್ರಾಣಲಿಂಗವನ್ನು ಸಿಂಗರಿಸಿ, ಮಾಣಿಕ್ಯಸಿಂಹಾಸನದಲ್ಲಿರಿಸಿದಳು. ಆ ಸಿಂಹಾಸನವನ್ನು ತಾನು ಹಾಗೂ ಶಿವಭಕ್ತೆಯರು ಅರಸನಿಗೆ ಗೊತ್ತಾಗದಂತೆ ಸಭಾನಿಲಯದಲ್ಲಿ ಹಿಡಿದುಕೊಂಡು ನಿಂತರು. ಅರಸನ ಕರೆಯನ್ನು ಮನ್ನಿಸಿ ಬಂದ ಜೊಮ್ಮಯ್ಯನು ಸಭಾನಿಲಯವನ್ನು ಪ್ರವೇಶಿಸಿ, ಮೇಲೆ ನೋಡುವಷ್ಟರಲ್ಲಿಯೇ ಎದುರಿನ ಶಿವಲಿಂಗದ ಬೆಳಕು ಗೋಚರಿಸಿತು. “ನಿಜಭಕ್ತಿಯ ಭರದಿಂ ಪೊಡಮುಡಲ್ಕೆಯೆತ್ತುತ್ತಿಲ್ಲದೆ ನಿಂದು ಭವಿಯ ಪಿಂದಿರಲೇಕೆ ಪೊಡಮುಡಿಸಿಕೊಳಲೊಲಿವರೆ ಕೆಲಕ್ಕೆ ಬಿಜಯಂಗೈವುದು” ಎಂದು ಎತ್ತಿದಕೈಯಿಂದ ಮತ್ತೊಂದು ದಿಕ್ಕಿಗೆ ಸನ್ನೆಮಾಡುವನು. ಆಗ ಶಿವಲಿಂಗ ಸಿಂಹಾಸನವನ್ನು ಬಿಟ್ಟು ಭಕ್ತನ ಕೈಯೊಂದಿಗೆ ಸಮೀಪಬಂದು ಗಗನಸಿಂಹಾಸನದಲ್ಲಿ ನಿಲ್ಲುವುದು. ನಂತರ ಜೊಮ್ಮಯ್ಯನು ಆ ಲಿಂಗಕ್ಕೆ ನಮಸ್ಕರಿಸುವನು. “ಶಿವಲಿಂಗವಂ ಕೈಸನ್ನೆಯಿಂ ಬರಿಸಿದ ಸಾಮರ್ಥ್ಯಮಂ, ಬಿಜಯಂಗೈಸಿದ ಸ್ನೇಹಮುಂ” ಕಂಡ ವಿಕ್ರಮಾದಿತ್ಯ VIನಲ್ಲಿ ಕೋಪಭಾವ ಅಳಿದು ಭಕ್ತಿಭಾವ ಉದಯಿಸಿತು. ಹೀಗೆ ಅರಸನ ಸಿಟ್ಟಿನ ಪ್ರಸಂಗವನ್ನು ಶಿವಭಕ್ತಿಯ ಪ್ರಕಾಶವನ್ನಾಗಿಸಿದ ಹಿರಿಮೆ ಲಕ್ಷ್ಮೀಮಹಾದೇವಿಯದು. ಇದರಿಂದ ವ್ಯಕ್ತವಾಗುವ ಸಂಗತಿಗಳು ಹೀಗಿವೆ:

೧. ಲಿಂಗಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ, ದಾನ ಕಾರ್ಯಗಳು ಪ್ರಚಲಿತವಲ್ಲಿದ್ದವು.
೨. ಅರಸನ ರಾಣಿಯರು ಶರಣರ ಭಕ್ತಿಯ ಪ್ರಭಾವಕ್ಕೆ ಒಳಗಾಗಿದ್ದರು.
೩. ಲಿಂಗವನ್ನು ಕೊರಳಲ್ಲಿಯೂ ಧರಿಸುವ, ಸಿಂಹಾಸನದ ಮೇಲೆಯೂ ಇಟ್ಟು ಪೂಜಿಸುವ ಪರಿಪಾಠವಿದ್ದಿತು.

ಲಕ್ಷ್ಮೀಮಹಾದೇವಿಯ ವೀರಶೈವದ ಒಲುಮೆ ಕ್ರಮೇಣ ಗಟ್ಟಿಗೊಳ್ಳತೊಡಗಿತು; ವೈಯಕ್ತಿಕ ಸಾಧನೆ ಪರಿಪಕ್ವಗೊಳ್ಳುತ್ತ ನಡೆಯಿತು. ಕ್ರಿ. ಶ. ೧೧೧೦–೧೧ರ ತರುವಾಯದ ಶಾಸನಗಳು ಲಕ್ಷ್ಮೀಮಹಾದೇವಿಯನ್ನು ಉಲ್ಲೇಖಿಸುವುದಿಲ್ಲ. ಈ ಸಮಯಕ್ಕಾಗಲೇ ಈಕೆ ಲಿಂಗೈಕ್ಯಳಾಗಿದ್ದಳೋ ಅಥವಾ ರಾಜಕೀಯದಿಂದ ನಿವೃತ್ತಿ

ಹೊಂದಿದ್ದಳೋ ಗೊತ್ತಾಗುವುದಿಲ್ಲ. ಹರಿಹರ ಹೇಳುವ ತೆಲುಗು ಜೊಮ್ಮಯ್ಯನ ಪ್ರಸಂಗ ಕ್ರಿ. ಶ. ೧೦೮೦–೧೧೧೦ರ ಮಧ್ಯ ಜರುಗಿರುವ ಸಾಧ್ಯತೆಯನ್ನು ಮರೆಯಲಾಗದು.

ಆರನೆಯ ವಿಕ್ರಮಾದಿತ್ಯನ ಒಲುಮೆಯ ಕಾಂತೆಯೂ ಪಿರಿಯರಸಿಯೂ ಆದ ಲಕ್ಷ್ಮೀಮಹಾದೇವಿಯದು ಸ್ವತಂತ್ರವಾಗಿ ಆಡಳಿತ ನಡೆಸಿದ ರಾಣಿಯರಲ್ಲಿ ಬಹು ದೊಡ್ಡ ಹೆಸರು. ಈಕೆ ಲಿಂಗಪ್ರತಿಷ್ಠಾಪನೆ, ದೇವಾಲಯ ನಿರ್ಮಾಣ, ದಾನಕಾರ್ಯಗಳನ್ನು ನೆರವೇರಿಸಿದ ಪುಣ್ಯವಂತೆ; 'ಶಿವಲಿಂಗಾರ್ಚನೆ'ಯಿಂದ ಶಿವಭಕ್ತಿ ಸಂಪತ್ತನ್ನು ಸಂಪಾದಿಸಿದ ಸಿರಿವಂತೆ; ಶರಣ ಜೊಮ್ಮಯ್ಯನ ಶಿವಭಕ್ತಿಯ ಪ್ರಭಾವಳಿಯಲ್ಲಿ ಬೆಳಗಿದ ಭಾಗ್ಯವಂತೆ. ಹೀಗೆ ರಾಜಶಕ್ತಿ, ಶಿವಭಕ್ತಿಯನ್ನು ಬಯಸಿದ ಪಿರಿಯರಸಿ ಲಕ್ಷ್ಮೀಮಹಾದೇವಿ ಬಸವಪೂರ್ವದ ವೀರಶೈವ ರಾಣಿಯರಲ್ಲಿ ಅಗ್ರಗಣ್ಯಳಾಗಿದ್ದುದು ಸ್ಪಷ್ಟವಾಗುತ್ತದೆ.*

---

* ಉಪಯುಕ್ತ ಸಲಹೆ ನೀಡಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ಬೆಲೆಯುಳ್ಳ ಮಾಹಿತಿ ಒದಗಿಸಿದ ಪ್ರೊ. ಚೆನ್ನಕ್ಕ ಎಲಿಗಾರ ಅವರಿಗೂ ಕೃತಜ್ಞತೆಗಳು.

ರಾಣಿ ರುದ್ರಮ ದೇವಿ

ಎಂ. ಎಸ್. ಮಹಾಂತಯ್ಯ

ಇತಿಹಾಸದ ಪುಟಗಳನ್ನು ತಿರುವಿನೋಡಿದಾಗ ಪ್ರಜಾಜೀವನಕ್ಕಿಂತ, ರಾಜ ರಾಣಿಯರ ಚರಿತ್ರೆ ವಿಶೇಷವಾಗಿ ಕಂಡುಬರುತ್ತದೆ- ಇಲ್ಲಿ ರಾಜರಿಗಿಂತ ರಾಣಿಯರ ಸಂಖ್ಯೆ ಕಡಿಮೆ; ಬೆರಳೆಣಿಕೆಯಲ್ಲಿ ಬರುವಷ್ಟು ಜನ ಮಾತ್ರ ಪ್ರಸಿದ್ಧರು. ಅಂಥವರಲ್ಲಿ ೧೩ನೆಯ ಶತಮಾನದ ಕಾಕತೀಯ ವಂಶದ ರಾಣಿ ರುದ್ರಮದೇವಿ ಒಬ್ಬಳು. ಈಕೆ ಕ್ರಿ. ಶ. ೧೨೫೯ ರಿಂದ ೧೨೯೫ರವರೆಗೆ ರಾಜ್ಯವಾಳಿದಂತೆ ಚರಿತ್ರೆಯಿಂದ ತಿಳಿದು ಬರುತ್ತದೆ.

ಭಾರತದ ಛಪ್ಪನ್ನ ದೇಶಗಳಲ್ಲಿ ಆಂಧ್ರವೂ ಒಂದು ನಾಡು. "ಆಂಧ್ರ ದೇಶ ಚರಿತ್ರೆಯಲ್ಲಿ ಕಾಕತೀಯ ಯುಗವು ಮಹೋಜ್ವಲವಾದುದು. ಓರುಗಲ್ಲು (ಏಕ ಶಿಲಾನರ, ಇಂದಿನ ವರಂಗಲ್ಲು) ರಾಜಧಾನಿಯಾಗಿ ತೆಲುಗುನಾಡೆಲ್ಲವನ್ನೂ ಸುಮಾರು ಇನ್ನೂರು ವರ್ಷ ಆಳಿ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ, ತೆಲುಗು ಜಾತಿಗೊಂದು ಪ್ರತ್ಯೇಕತೆಯನ್ನು ರೂಪ್ರೊದಿಸಿದ ರಾಜವಂಶವು ಕಾಕತೀಯರದು. ಈ ರಾಜರು ಕ್ರಿ. ಶ. ೧೧೫೦ ರಿಂದ ೧೩೨೩ರವರೆಗೆ ಸ್ವತಂತ್ರವಾಗಿ ರಾಜ್ಯವನ್ನಾಳಿದರು. ಅದಕ್ಕೂ ಮುಂಚೆ ಸುಮಾರು ೧೫೦ ವರ್ಷ ಪಶ್ಚಿಮ ಚಾಲುಕ್ಯರ ಸಾಮಂತರಾಗಿ ಅನುಮಕೊಂಡ ಪ್ರಾಂತವನ್ನಾಳಿದರು."1 ಇವರಲ್ಲಿ ಗುಂಡಮ ರಾಜನ ಮಗನಾದ ಗರುಡ ಬೇತರಾಜನೆಂಬವನು ಚಾಳುಕ್ಯರ ಸಾಮಂತರಾಜನು. ಇವನು ಸುಮಾರು ಐವತ್ತು ವರ್ಷಗಳ ಕಾಲ (ಕ್ರಿ. ಶ. ೯೯೫–೧೦೫೨) ಹನ್ಮಕೊಂಡ ವಿಷಯವನ್ನಾಳಿದ ಮೊದಲನೆಯ ಕಾಕತೀಯ ವಂಶದ ರಾಜನಾಗಿರುವನು. ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಕಾಕತಿರುದ್ರದೇವನು ಚಾಲುಕ್ಯ, ಕಲಚೂರ್ಯ ರಾಜರ ಹಿಡಿತದಿಂದ ದೂರನಾಗಿ, ಸ್ವತಂತ್ರವಾಗಿ ರಾಜ್ಯವಾಳಿದ ಮೊದಲನೆಯ ಸ್ವತಂತ್ರ ಕಾಕತೀಯ ರಾಜನು. ಈ ಕಾಕತೀಯ ರಾಜರೆಲ್ಲ ಪರಮ ಶಿವಭಕ್ತರು. ರುದ್ರನ ತರುವಾಯ ಬಂದವರಲ್ಲಿ ಮಹಾದೇವನ ಮಗನಾದ ಗಣಪತಿದೇವನು ಮುಖ್ಯನು" ಈತನು ಕ್ರಿ.ಶ. ೧೧೯೯ರಲ್ಲಿ ರಾಜ್ಯಕ್ಕೆ ಬಂದನು; ರಾಜಧಾನಿಯನ್ನು ಅನುಮ ಕೊಂಡದಿಂದ ವರಂಗಲ್ಲಿಗೆ

1. ಡಾಕ್ಟರ ಪರಬ್ರಹ್ಮ ಶಾಸ್ತ್ರಿ, ಪಿ. ವಿ. ಕಾಕತೀಯ ಚರಿತ್ರೆ, 1977, ಪುಟ 1

ಬದಲಾಯಿಸಿದನು; ವರಂಗಲ್ಲಿಗೇ ಓರುಗಲ್ಲು, ಏಕಶಿಲಾನಗರವೆಂದು ಹೆಸರು. ಗಣಪತಿದೇವ ಮಹಾರಾಜನು ವರಂಗಲ್ಲಿನಲ್ಲಿ ಭಾರೀ ಕೋಟೆಯೊಂದನ್ನು ನಿರ್ಮಿಸಿದನು.[2] ಗಣಪತಿದೇವನು ತೀರಾಂಧ್ರದೇಶದ ವೆಲನಾಡಿನ ಪೃಥ್ವೀಶ್ವರನ ಸಾಮಂತನಾದ ಜೋಡಿರಾಜನನ್ನು ಸೋಲಿಸಿ ಆತನ ಮಕ್ಕಳಾದ ನಾರಮಾಂಬೆ, ಪೇರಮಾಂಬೆಯರನ್ನು ಮದುವೆಯಾದನು; ತನ್ನ ಮಡದಿಯರ ಸೋದರನಾದ ಜಾಯಪನಲ್ಲಿ ಅಭಿಮಾನ ತೋರಿ, ಆತನನ್ನು ತನ್ನ ಗಜಸೈನ್ಯಕ್ಕೆ ಅಧಿಪತಿಯನ್ನಾಗಿಸಿದನು. ಸಕಲಾಂಧ್ರಾವನಿಯನ್ನು ಒಂದು ಮಾಡುವ ಉದ್ದೇಶದಿಂದ, ಗಣಪತಿದೇವನು ನೆರೆಹೊರೆಯ ಸಣ್ಣಪುಟ್ಟ ರಾಜರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡನು. ಈ ಮಹಾರಾಜನು ಹೆಚ್ಚುಕಾಲ ಯುದ್ಧದಲ್ಲಿ ಕಳೆದರೂ, ದಕ್ಷತೆಯಿಂದ ಬಹುಕಾಲ (ಸುಮಾರು ೬೩ ವರ್ಷ) ರಾಜ್ಯವಾಳಿದನು. ಈತನಿಗೆ ಗಂಡುಮಕ್ಕಳಿಲ್ಲ. ರುದ್ರಮಾಂಬೆ, ಗಣಪಾಂಬೆ ಎಂಬ ಇಬ್ಬರು ಹೆಣ್ಣುಮಕ್ಕಳೀತನಿಗೆ. ರುದ್ರಮಾಂಬೆ ತನ್ನ ತರುವಾಯ ಪಟ್ಟವೇರಬೇಕೆಂದು ಬಯಸಿ ಗಣಪತಿ ದೇವನು ಆಕೆಯನ್ನು ಗಂಡಿನಂತೆಯೇ ಬೆಳೆಸಿದನು. ಆಕೆ ಸಕಲ ಶಾಸ್ತ್ರಗಳನ್ನೂ ಕಲಿತುದಲ್ಲದೆ, ಯುದ್ಧೋಪಯೋಗಿ ವೀರವಿದ್ಯೆಗಳೆಲ್ಲದರಲ್ಲೂ ಪರಿಣತಳಾದಳು. ಬಹುಕಾಲ ಆಕೆಯನ್ನು ಗಂಡೆಂದೇ ಭಾವಿಸಿತ್ತು ಜನ. ಜಾಯಪನ ಮಗಳಾದ ಮುಮ್ಮಡುಂಬೆಯನ್ನು ಕೊಟ್ಟು 'ರುದ್ರದೇವ' ಹೆಸರಿನ ರುದ್ರಮದೇವಿಗೆ ಮದುವೆಯೂ ಮಾಡಲಾಗಿತ್ತು.

"ಗಣಪತಿದೇವನಿಗೆ ಸೋಮದೇವಿ ಎಂಬ ಮಡದಿಯಿದ್ದಂತೆ ತಿಳಿದುಬರುತ್ತದೆ. ಈಕೆಯೇ ರುದ್ರಮದೇವಿಯ ತಾಯಿ ಎಂದು ವಿದ್ಯಾನಾಥನ "ಪ್ರತಾಪರುದ್ರಯಶೋಭೂಷಣ" ಗ್ರಂಥಾಧಾರದಿಂದ ಚಿಲಕೂರಿ ವೀರಭದ್ರರಾವು ಅವರು ಊಹಿಸಿದ್ದಾರೆ.[3] ಅಲ್ಲಿ ಬಂದಿರುವ ಶ್ಲೋಕ ಇಂತಿದೆ—

"ಸೊಪ್ರೋಮಾಚೇತಿ ನಿರ್ದಿಷ್ಟಾ ಸೋಮಾಚೇತಿ ಪ್ರಥಾಮಗಾತ್
ತವಮಾತಾ ಶಿವಾಸಾಕ್ಷಾದ್ದೇವೋ ಗಣಪತಿ: ಪಿತಾ"[4]

ಆದರೆ ಈ ಸೋಮದೇವಿಯ ವಿಚಾರವಾಗಿ ಚರಿತ್ರಕಾರರಲ್ಲಿ ಅಭಿಪ್ರಾಯಭೇದವಿದೆ. ಗಣಪತಿದೇವನು ವೃದ್ಧನಾಗಿ ಅಸ್ವಸ್ಥನಾಗಲು, ರುದ್ರಮ್ಮದೇವಿ ರುದ್ರದೇವನೆಂಬ ಹೆಸರಿನಿಂದ ತನ್ನ ತಂದೆಯ ಹೆಸರಿನಲ್ಲೇ ರಾಜ್ಯಭಾರ ಮಾಡುತ್ತಾಳೆ. ಕೆಲವು ಕಾಲ ಕಳೆದ ನಂತರ ಗಣಪತಿ ಅವನು ರಾಜಗುರುವೂ, ಮಂತ್ರಿಯೂ ಆದ ಶಿವದೇವಯ್ಯನವರ ಆದೇಶದಂತೆ, ರಾಜ್ಯವಾಳುತ್ತಿರುವ ರುದ್ರದೇವನು ರುದ್ರಮ್ಮದೇವಿ ಎಂತಲೂ, ತನ್ನ ತರುವಾಯ ಆಕೆಯೇ ಕಾಕತೀಯ ಸಿಂಹಾಸನಕ್ಕೆ ಉತ್ತರಾಧಿಕಾರಿಣಿಯೆಂತಲೂ ಆಕೆಯನ್ನು ತಮ್ಮ ಚಕ್ರವರ್ತಿನಿಯಾಗಿ ಸ್ವೀಕರಿಸಬೇಕೆಂತಲೂ ಮಂತ್ರಿ. ಸಾಮಂತ.

---

2. ಮಲ್ಲಂಪಲ್ಲಿ ಸೋಮಶೇಖರ ಶರ್ಮ, ಆಂಧ್ರದೇಶಚರಿತ್ರ ಸಂಗ್ರಹಮು; (ಪ್ರಮು. 1948) ಪುಟ 64
3. ಖಂಡವಲ್ಲಿ ಲಕ್ಷ್ಮೀರಂಜನಂ : ಕಾಕತೀಯ ಯುಗಮು, (ಪ್ರ. ಮು. 1975) ಪು. 46
4. ಕಾಸೆಸರ್ವಪ್ಪ : ಶ್ರೀ ಸಿದ್ಧೇಶ್ವರ ಚರಿತ್ರಮು : 1960, ಪೀಠಿಕೆ, ಪುಟ 1×1 ಅಡಿಟಿಪ್ಪಣಿ 2

ಪ್ರಜಾಸಭೆಯಲ್ಲಿ ಘೋಷಿಸುವನು. ರುದ್ರದೇವನು ಹೆಣ್ಣೆಂದು ತಿಳಿದು ಕೂಡಲೆ ಕೆಲವರು ಸಾಮಂತರು ಒಳಗೊಳಗೇ ಕುದಿಯುವರು. ಆದರೆ ಗಣಪತಿದೇವನು ಜೀವಿಸಿರುವವರೆಗೆ ಯಾರೊಬ್ಬರೂ ಆಕೆಯ ವಿರುದ್ಧ ಕೈಎತ್ತಲಿಲ್ಲ. ಇದೇ ಹೊತ್ತಿಗೆ ರುದ್ರಮದೇವಿಗೆ ತಕ್ಕವರನೆಂದು ಚಾಲುಕ್ಯ ವೀರಭದ್ರರಾಜನೊಡನೆ ಮದುವೆಯೂ ಆಯಿತು. ಆಕೆ ಕೈ ಹಿಡಿದಿದ್ದ ಮುಮ್ಮುಡಮ್ಮನನ್ನು ವೀರಭದ್ರರಾಜನ ತಮ್ಮನಾದ ಮಹಾದೇವರಾಜನಿಗಿತ್ತು ಮದುವೆ ಮಾಡಲಾಯಿತು.

ರುದ್ರಮದೇವಿ ಯಾರ ಹಸ್ತಕ್ಷೇಪವೂ ಇಲ್ಲದೆ ದಕ್ಷತೆಯಿಂದ ರಾಜ್ಯವನ್ನಾಳಿದಳು. ಮದುವೆಯಾದರೂ ವೀರಭದ್ರರಾಜನು ರಾಣಿಗೆ ಬಲಗೈಯಂತೆ ಇದ್ದನೆ ಹೊರತು ಆಕೆಯೊಡನೆ ಅರ್ಧಾಸನದಲ್ಲಿ ಕುಳಿತು ರಾಜ್ಯವಾಳಲಿಲ್ಲ. ಕಾಕತೀಯ ಸಾಮ್ರಾಜ್ಯದ ನೆರೆಯ ರಾಜರಾದ ಚೋಳ, ಪಾಂಡ್ಯ, ಪಲ್ಲವ, ಕಳಿಂಗ, ಸೇವುಣಾದಿಗಳು ಗಣಪತಿದೇವನು ಕಣ್ಣು ಮುಚ್ಚಿದ ಕೂಡಲೇ ಕಾಕತೀಯ ಸಾಮ್ರಾಜ್ಯವನ್ನು ವಿಚ್ಛಿನ್ನಗೊಳಿಸಿ ಅದನ್ನು ಕಬಳಿಸಬೇಕೆಂಬ ಹಂಚಿಕೆಯಲ್ಲಿರುತ್ತಾರೆ. ಇವರಿಗೆ ಸರಿದೊರೆಯಾಗಿ ಕಾಕತೀಯ ರಾಜ್ಯದಲ್ಲಿಯೂ ಕೆಲವರು ಸಾಮಂತರು ಒಳಗೊಳಗೇ ಒಳಸಂಚುಗಳನ್ನು ಮಾಡುವ ಹಂಚಿಕೆಯಲ್ಲಿರುತ್ತಾರೆ. ಆದರೆ ಗಣಪತಿದೇವನು ಜೀವಿಸಿರುವವರೆಗೂ ಹೆಚ್ಚು ತೊಂದರೆಯಿಲ್ಲದೆ ರಾಣಿ ರುದ್ರಮ ರಾಜ್ಯಭಾರ ನಡೆಸುತ್ತಾಳೆ.

ಗಣಪತಿದೇವನಂತೆ ರುದ್ರಮದೇವಿಗೂ ಗಂಡುಸಂತಾನವಿಲ್ಲ. ಆಕೆಗೆ ಇಬ್ಬರು ಹೆಣ್ಣುಮಕ್ಕಳು; ಮುಮ್ಮುಡಮ್ಮ, ರುಯ್ಯಮ್ಮ ಎಂದು. ಮುಮ್ಮಡಮ್ಮನನ್ನು ಮಹಾದೇವ ರಾಜನಿಗೆ ಕೊಟ್ಟು ಮದುವೆ ಮಾಡುವಳು. ಈ ಮಹಾದೇವರಾಜನು ಯಾರೋ ತಿಳಿದು ಬಂದಿಲ್ಲ. ರುಯ್ಯಮ್ಮನನ್ನು ಇಂದು ಊರಿ ಅನ್ನಯ್ಯನಿಗೆ ಕೊಟ್ಟುಮದುವೆ ಮಾಡುವಳು. ಹಿರಿಯಮಗಳು ಗರ್ಭವತಿ ಎಂದು ತಿಳಿದು ಸಂತಸಗೊಂಡ ರಾಣಿ ಸಂತಾನವಾಗಲೆಂದು ವರಂಗಲ್ಲಿನ ಸಿದ್ಧೇಶ್ವರ, ಪದ್ಮಾಕ್ಷಿ (ಪಾರ್ವತೀ) ದೇವಿ, ಕುಲದೇವತೆಯಾದ ಕಾಕತಿದೇವಿಯರಿಗೆ ಪೂಜೆ ಮಾಡಿಸುವಳು.

ವರಂಗಲ್ಲಿನ ಶ್ರೀ ಸ್ವಯಂ ಭೂದೇವರಿಗೆ ಅಭಿಷೇಕಾದಿಗಳನ್ನು ಮಾಡಿಸುವಳು. ಮಗಳಿಂದ ನಂದೀಶ್ವರ ವ್ರತವನ್ನು ಕೂಡ ಮಾಡಿಸುವಳು. ಇದೇ ಸಂದರ್ಭದಲ್ಲೇ ನೊಗಿಲಿ ಚರ್ಲಕ್ಕೆ ಹೋಗಿ ಅಲ್ಲಿನ ದೇವತೆಗೂ, ಏಕವೀರಾದೇವಿಗೂ ಪೂಜೆ ಮಾಡಿಸುವಳು. ಈ ಸಂದರ್ಭವನ್ನು ಪುರಸ್ಕರಿಸಿಕೊಂಡು ಆಕೆಯ ಮಲತಮ್ಮಂದಿರಾದ (ಗಣಪತಿದೇವನಿಗೆ ಬಂಗಾರದವಳಲ್ಲಿ ಜನಿಸಿದವರು) ಹರಿಹರದೇವ, ಮುರಾರಿದೇವ ಎಂಬವರು ಓರುಗಲ್ಲಿನ ಕೋಟೆಯನ್ನು ಆಕ್ರಮಿಸಿ ರಾಣಿ ಒಳಗೆ ಬಾರದಂತೆ ತಡೆಯುವರು. ಆದರೆ ರುದ್ರಮ ಎದೆಗುಂದದೆ ತನ್ನ ನೆಚ್ಚಿನ ನಾಯಕ ಮಣಿಗಳ ನೆರವಿನಿಂದಲೂ, ಜನತೆಯ ಸಹಕಾರದಿಂದಲೂ, ಓರುಗಲ್ಲಿನ ಒಳಗೆ ಪ್ರವೇಶಿಸಿ ಮಲ ತಮ್ಮಂದಿರನ್ನು ಸೆರೆಗೆಯ್ಯುವಳು. ಇತರರಿಗೆ ಬುದ್ಧಿ ಬರುವುದಕ್ಕಾಗಿ ಆ ಇಬ್ಬರನ್ನೂ ಕೊಲ್ಲಿಸಿ, ಅವರ ಸಂಪತ್ತನ್ನು ರಾಜ್ಯದ ಬೊಕ್ಕಸಕ್ಕೆ ಸೇರಿಸುವಳು. ದಂಗೆ ಏಳಬಯಸುವವರಿಗೆ ಇದೊಂದು ಗುಣ ಪಾಠವಾಗುವುದು.

ರಾಣಿ ರುದ್ರಮನ ಹರಕೆ ಫಲಿಸುವುದು. ಶಿವದೇವಯ್ಯ ಮಂತ್ರಿಗಳ ಭವಿಷ್ಯದಂತೆ

ಮುಮ್ಮಡಮ್ಮನಿಗೆ ಗಂಡು ಮಗುವೇ ಜನಿಸುವುದು. ಆ ಮಗುವು ಶುಭಮುಹೂರ್ತ ದಲ್ಲಿ ಜನಿಸುವುದು. ಅದಕ್ಕೆ ಪ್ರತಾಪರುದ್ರನೆಂಬ ಹೆಸರನ್ನಿಡುವರು. ಈ ಪ್ರತಾಪ ರುದ್ರನು ತುಂಬ ಜಾಣನು. (ಕ್ರಿ. ಶ. ೧೬೦೦ರಲ್ಲಿದ್ದ ಕಾಸೆಸರ್ವಪ್ಪನೆಂಬ ಕವಿ "ಶ್ರೀ ಸಿದ್ಧೇಶ್ವರ ಚರಿತ್ರಮು" ಎಂಬ ದ್ವಿಪದಿಕಾವ್ಯವನ್ನು ಬರೆದಿರುವನು. ಇದರಲ್ಲಿ ಕಾಕ ತೀಯ ರಾಜರ ಚರಿತ್ರೆಯೊಡನೆ ಪ್ರತಾಪರುದ್ರನ ಚರಿತ್ರೆಯೂ ಬಂದಿದೆ.) "ಪ್ರತಾಪ ರುದ್ರನು ಕ್ರಿ. ಶ. ೧೨೫೪ ಆನಂದ ಸಂವತ್ಸರದಲ್ಲಿ ಜನಿಸಿದಂತೆ ಕೆಲವು ಆಧಾರಗಳಿಂದ ತಿಳಿದು ಬರುತ್ತದೆ. ಗಣಪತಿದೇವನ ಆಜ್ಞೆಯಂತೆ ಈ ಬಾಲಕನನ್ನು ಭವಿಷ್ಯಚಕ್ರ ವರ್ತಿಯಾಗಿ ರುದ್ರಮದೇವಿ ಸ್ವೀಕರಿಸಿದಳು."[5] ಮೊಮ್ಮಗನನ್ನು ದತ್ತು ತೆಗೆದುಕೊಂಡ ರಾಣಿ ಕೆಲವು ಕಾಲ ಸಂತೋಷದಿಂದ ನಲಿದಾಡಿದಳು. ಆದರೆ ಆ ಸಂತೋಷ ಬಹು ಕಾಲ ಉಳಿಯಲಿಲ್ಲ. ವಿಧಿ ಆಕೆಯನ್ನು ಬೇರೊಂದು ರೀತಿಯಲ್ಲಿ ವಂಚಿಸಿತು. "ವಿಧಿ ವಕ್ರಿಸಿ ಆಕೆಯ ಪತಿ ವೀರಭದ್ರನು ಕ್ರಿ. ಶ. ೧೨೬೬ರಷ್ಟು ಹೊತ್ತಿಗೇ ಶಿವೈಕ್ಯನಾದಂತೆ ಆತನ ತಾಯಿ ಉದಯ ಮಹಾದೇವಿ ಪಾಲಕೊಲ್ಲು ಶಾಸನದಿಂದ ಊಹಿಸಲಾಗಿದೆ.[6]" ಗಾಯದ ಮೇಲೆ ಬರೆ ಹಾಕಿದಂತೆ ರುದ್ರಮದೇವಿಗೆ ತಂದೆಯ ವಿಯೋಗವೂ ಜರುಗು ತ್ತದೆ. "ಶಾಲಿವಾಹನ ಶಕೆ ೧೧೮೪ (ಕ್ರಿ. ಶ. ೧೨೬೨) ರುಧಿರೋದ್ಗಾರಿ ಸಂವತ್ಸರ ಮಾಘ ಬ: ಚತುರ್ದಶಿ ರಾತ್ರಿ ಶಿವರಾತ್ರಿ ಮಹಾಪುಣ್ಯದಲ್ಲಿ ತನ್ನ ಕೋಟೆಯಲ್ಲಿ ನಮಕ ಮಂತ್ರಯುಕ್ತವಾಗಿ ಶಿವಾಭಿಷೇಕ ಮಾಡುತ್ತ ಶ್ರೀ ಶ್ರೀ ಗಣಪತಿ ರುದ್ರದೇವ ಸಪ್ತಮ ಚಕ್ರವರ್ತಿ ಶಿವಸಾಯುಜ್ಯವನ್ನು ಹೊಂದಿದರು."[7] ಗಂಡ, ಮತ್ತು ತಂದೆಯ ಸಾವಿನಿಂದ ರಾಣಿ ರುದ್ರಮದೇವಿ ನಿರ್ವಿಣ್ಣಳಾಗಿ ರಾಜ್ಯಾಡಳಿತವನ್ನು ಕೈಬಿಡುವಳು. ಇದನ್ನರಿತ ರಾಜಗುರುವೂ ಮಂತ್ರಿಯೂ ಆದ ಶಿವದೇವಯ್ಯನವರು ರುದ್ರಮದೇವಿಗೆ ಕರ್ತವ್ಯವನ್ನುಪದೇಶಿಸುವರು. "ಈ ಸಿದ್ಧೇಶ್ವರ ಚರಿತಮು"ದಲ್ಲಿ ಆ ಉಪದೇಶ ವಿಂತಿದೆ.

............"ಪಣತಿನೀಕಗುವೆ?
ವೀರಶೈವಾಚಾರ ವಿಮಲುಲ ಕೆಟ್ಟ
ದೂರವಿಚಾರ ವಿಸ್ಫಾರತವಲದೆ
ಜೀವುಡು ಶಿವುನಾಜ್ಞ ಜನಿಯಿಂಚುಚುಂಡು
ಜೀವುಡಡಯನು ಶಿವುನಾಜ್ಞನೆವುಡು
ಕಾನ ನಿಜಾ ಸ್ವತಂತ್ರತಗಲ, ಶಿವುನಿ
ಗಾನ ಬೋಯಿನ ಜೀವಿ ಗಾನಕ ಯೇಡ್ಚು
ಮಾನಿನಿ ಜಡಮತಿ ಮಾನಿನಿಂ ಬಲೆನು
ನೂನಿನ ಜಡತಮೋಜ್ಞಾನಾಂಧಕಾರ
ಮಾನವೂ ನಸಮಾನ ಮಹದೇವಲಿಂಗ

5. ಹಂಡದಲ್ಲಿ ಲಕ್ಷ್ಮೀರಂಜನಂ : ಕಾಕತೀಯ ಯುಗಮು; (ಪ್ರ.ಮು. 1975) ಪು. 47
6. ಅದೇ ಪುಟ 47
7. ಅಡವಿ ಬಾಪಿರಾಜು : ಗೋನಗನ್ನಾರೆಡ್ಡಿ, (ಚತುರ್ಥ ಮುದ್ರಣ 1967), ಪುಟ 210

ಸಾರಮತಿ ಜ್ಞಾನ ಸವಿತ್ಯಜೇ ನಡಪು
ಮದಿಗಾಕ ರಾಜ್ಯಮರಾಜಕಂಬೈನ
ನದಿಯುದು ದ್ವಿಮತುಲು ಕಾಂಕ್ಷದೈವಾರ"8

(ದೇವಿ ಇಂಥ ಅಜ್ಞಾನ ನಿನಗಾಗಿ ಬೇಕೆ ? ವೀರಶೈವಾಚಾರ ವಿಮಲರಿಗಿಂತಹ ದೂರ ವಿಚಾರ ಬೇಡವೇ ? ಶಿವನ ಆಜ್ಞೆಯಂತೆ ಜೀವನುದಯಿಸುವನು. ಆತನ ಆಜ್ಞೆಯಂತೆಯೆ ಸದಾಕಾಲ ಜೀವನು ಸಾಯುವನು. ಆದುದರಿಂದ ಸರ್ವಸ್ವತಂತ್ರನಾದ ಶಿವನನ್ನು ನೋಡಹೋದ ಜೀವನಿಗಾಗಿ ಅಳುವುದು ಜಡಮತಿಗಳಿಗೆ ಸರಿ. ಮಾನವತಿಯಾದ ನೀನು ಸಾಮಾನ್ಯ ಮಾನಿನಿಯಂತೆ ದುಃಖಿಸುವುದು ಒಳಿತಲ್ಲ. ಅದೂ ಅಲ್ಲದೆ ರಾಜ್ಯವು ಅರಾಜಕವಾದುದಾದರೆ ರಾಜ್ಯಕಾಂಕ್ಷೆಯಿಂದ ದುಷ್ಟರು ತಲೆ ಎತ್ತುವರು.) ಅವರ ಆದೇಶದಂತೆ ರಾಣಿ ತನ್ನ ದುಃಖವನ್ನು ನೀಗಿ ರಾಜ್ಯಾಡಳಿತವನ್ನು ಕೈಗೆತ್ತಿಕೊಳ್ಳುವಳು. ಶುಭಮುಹೂರ್ತದಲ್ಲಿ (ಕ್ರಿ. ಶ. ೧೨೬೧ರಲ್ಲಿ) ರುದ್ರದೇವನೆಂಬ ಹೆಸರಿನಿಂದ ಆಕೆ ಪಟ್ಟವೇರಿ ಅಷ್ಟನು ಚಕ್ರವರ್ತಿಯೆನಿಸಿಕೊಳ್ಳುತ್ತಾಳೆ. ಮಂತ್ರಿ, ಸಾಮಂತ, ಸೇನಾಪತಿ, ಪಂಡಿತ, ಪ್ರಜೆಗಳ ಜಯಕಾರದೊಡನೆಯೂ, ವಂದಿಮಾಗಧರ ಕೈವಾರದೊಡನೆಯೂ, ಪಟ್ಟಮಹೋತ್ಸವವು ಕಣ್ಣಿಗೆ ಹಬ್ಬವನ್ನುಂಟು ಮಾಡುವುದು. ರಾಜ್ಯಸೂತ್ರಗಳನ್ನು ಕೈಯಲ್ಲಿ ಹಿಡಿದ ರಾಣಿ ರುದ್ರಮ ಮೆಲ್ಲ ಮೆಲ್ಲನೆ ಕುಮಾರನಾದ ಪ್ರತಾಪರುದ್ರದೇವನಿಗೆ ರಾಜ್ಯಾಡಳಿತದಲ್ಲಿ ವಿಶೇಷವಾದ ಆಸಕ್ತಿಯುಂಟಾಗುವಂತೆ ಮಾಡುವುದಲ್ಲದೆ, ಆತನನ್ನು ಸಕಲ ವಿದ್ಯಾ ಪಾರಂಗತನನ್ನಾಗಿ ಮಾಡಿ, ಆಗಾಗ ಯುದ್ಧ ರಂಗಗಳಿಗೆ ತನ್ನೊಡನೆ ಕರೆದೊಯ್ಯುತ್ತಿದ್ದಳು. ರುದ್ರಮದೇವಿ ಪುರುಷ ವೇಷಧಾರಿಣಿಯಾಗಿ ಸಭೆಗೆ ಬಂದು, ಶಿವದೇವಯ್ಯ ಮಂತ್ರಿ, ಜಾಯಪಸೇನಾನಿ, ಪ್ರಸಾದಾದಿತ್ಯ ದಂಡಾಧಿಪತಿಗಳೊಡನೆಯೂ, ವಿವಿಧ ನಿಯೋಗಿಗಳೊಡನೆಯೂ, ಎಲ್ಲ ನಾಡುಗಳ ಕುರಿತು, ಜನರ ಕುರಿತು, ರಾಜ್ಯದ ರೇವುಗಳಲ್ಲಿ ಪ್ರಮುಖವಾದ ಮೋಟುಪಲ್ಲಿ, ಶ್ರೀ ಕಾಕುಳ, ಮಚಲೀಪಟ್ಟಣ, ಶಂಬರದೀವಿ, ಕುರಂಗೇಶ್ವರ ಪುರಗಳಲ್ಲಿ ನಡೆಯುವ ಸಾಗರ ವ್ಯಾಪಾರಗಳ ಕುರಿತು; ಸುಂಕಗಳು, ರಾಜ ಭೋಗಗಳು, ಕಪ್ಪಕಾಣಿಕೆಗಳು, ಅರಣ್ಯಗಳು, ಗನಿಗಳು, ವ್ಯಾಪಾರ, ನಾಣ್ಯಗಳು, ಮೊದಲಾದ ಆರ್ಥಿಕ ವಿಷಯುಗಳ ಕುರಿತು; ಮಳೆ, ಬೆಳೆ, ವ್ಯವಸಾಯ, ಗ್ರಾಮಗಳು, ಪಶುಗಳು ಇತ್ಯಾದಿಯಾದ ಪ್ರಜಾಜೀವನವನ್ನು ಕುರಿತು; ಗ್ರಾಮದ ಹಿರಿಯರಿಂದ ಮೊದಲು ಮಾಡಿ ಮಂತ್ರಿಗಳವರೆಗಿನ ರಾಜ್ಯಪಾಲನಾ ನೀತಿಯನ್ನು ಕುರಿತು; ಮಹಾರಾಜ ಪಥಗಳು, ಸತ್ರಗಳು ಮೊದಲಾದವುಗಳ ಕುರಿತು; ಜನ ವೈದ್ಯ, ಪಶು ವೈದ್ಯ ಶಾಲೆಗಳ ಕುರಿತು, ವಿದ್ಯಾಲಯುಗಳು, ಆಶ್ರಮಗಳು, ಪರಿಷತ್ತುಗಳು, ದೇವಾಲಯುಗಳು, ಶಾಸನಗಳು, ಮಠಗಳು, ವಿವಿಧ ಸಂಪ್ರದಾಯುಗಳು, ಮತಾಚಾರ್ಯರು, ಮೊದಲಾದ ಧಾರ್ಮಿಕ ವಿಷಯಗಳ ಕುರಿತು; ಕವಿ, ಪಂಡಿತ, ಶಿಲ್ಪಿ, ಗಾಯಕರ ಕುರಿತು : ಗ್ರಂಥಗಳು, ಸರಸ್ವತೀ ನಿಲಯಗಳು, ನಾಟ್ಯಕೋವಿದರು, ಶಿಲ್ಪಶಾಸ್ತ್ರಜ್ಞರು ಮೊದಲಾದವರ

8. ಕಾಸೆ ಸರ್ವಪ್ಪ, ಶ್ರೀ ಸಿದ್ಧೇಶ್ವರ ಚರಿತ್ರಮು; (1960), ಪುಟ 128; ಸಾಲು 5 ರಿಂದ 13

ಕುರಿತು; ಆ ಮಹಾರಾಣಿ ಸಂಪೂರ್ಣವಾಗಿ ಚರ್ಚಿಸುತ್ತಾ, ಸೂಕ್ತ ಸಲಹೆಗಳನ್ನೀಯುತ್ತಾ, ಆಡಳಿತದ ಭಾರವನ್ನು ಹೊತ್ತಿದ್ದಳು.[9]

ಕಾಕತೀಯ ಅರಸರ ಕಾಲದಲ್ಲಲ್ಲದೆ, ರುದ್ರಮದೇವಿಯ ಕಾಲದಲ್ಲಿಯೂ ರಾಜ್ಯವು ಸುಸ್ಥಿರವೂ, ಸುಭಿಕ್ಷವೂ ಆಗಿತ್ತು. ಕಾಡನ್ನು ಸವರಿ, ನಾಡಾಗಿಸಿ, ಗ್ರಾಮಗಳನ್ನು ಹೆಚ್ಚಿಸಿ, ವ್ಯವಸಾಯಕ್ಕೆ ಅನುವುಮಾಡಿಕೊಟ್ಟರು ಅರಸರು. ಪ್ರತಿ ಗ್ರಾಮದಲ್ಲೂ ಕನಿಷ್ಟಪಕ್ಷ ಒಂದಾದರೂ ಕೆರೆಯಿರುವಂತೆ ನೋಡಿಕೊಂಡರು. ರಾಜರೇ ಅಲ್ಲದೆ ಅವರ ಸಾಮಂತರು, ವ್ಯಾಪಾರಿಗಳು ಕೂಡ ಭಾವಿ, ಕೆರೆಗಳನ್ನು ನಿರ್ಮಾಣ ಮಾಡಿಸಿ, ಆ ನೀರು ವ್ಯವಸಾಯಕ್ಕೆ ನೆರವಾಗುವಂತೆ ನೋಡಿಕೊಂಡರು. ಕಾಕತೀಯರು ನಿರ್ಮಿಸಿದ ಕೆರೆಗಳನೇಕ ತೆಲಂಗಾಣದಲ್ಲಿವೆ. ಪಾಕಾಲ, ರಾಮಪ್ಪ, ಲಕ್ನವರ, ಬಯ್ಯಾರ, ಕೇಸಮುದ್ರ, ಕುಂದವರ, ಘನಪುರ ಮೊದಲಾದ ಕಡೆ ಇಂಥ ಕೆರೆಗಳು ಈಗಲೂ ಇವೆ. ಅನೇಕ ಎಕರೆಗಳ ಸಾಗುವಳಿ ಆಗುತ್ತಿತ್ತು. ಬತ್ತ ವಿಶೇಷವಾಗಿ ಬೆಳೆಯುತ್ತಿತ್ತು. ರಾಜ್ಯವು ಆಹಾರ ಧಾನ್ಯದ ವಿಷಯದಲ್ಲಿ ಸ್ವಯಂ ಸಮೃದ್ಧವಾಗಿತ್ತು. ರೇವು ಪಟ್ಟಣಗಳಿಂದ ಆಮದು-ರಫ್ತುಗಳಾಗುತ್ತಿದ್ದುವು. ಆಮದು ಮಾಡಲ್ಪಟ್ಟ ವಸ್ತುಗಳ ಮೇಲೆ ಸುಂಕವು ವಸೂಲಾಗಿ ರಾಜ್ಯದ ಕೋಶವನ್ನು ತುಂಬುತ್ತಿತ್ತು. ಶ್ರೀಗಂಧ, ಕರ್ಪೂರ, ಮುತ್ತು, ದಂತ, ಲೋಹಗಳು, ನೂಲು ಬಟ್ಟೆ, ಕಂಬಳಿ, ಸುಗಂಧ ದ್ರವ್ಯ, ರತ್ನಗಳು ಇತ್ಯಾದಿ ವಸ್ತುಗಳು ರಫ್ತಾಗುತ್ತಿದ್ದುವು. ಚೀನಿ ಚೀನಾಂಬಕಗಳು, ಸಕ್ಕರೆ, ಜಾತ್ಯಶ್ವಗಳು ಆಮದಾಗುತ್ತಿದ್ದುವು. ಮಾರ್ಕೊಪೋಲೋ ಎಂಬ ವೆನಿಸ್ ಯಾತ್ರಿಕನು ಆ ಕಾಲದಲ್ಲಿ ವಿದೇಶಗಳಿಗೆ ರಫ್ತಾಗುತ್ತಿದ್ದ ಬಟ್ಟೆಗಳನ್ನು ಕುರಿತು ಹೀಗೆ ಬರೆದಿರುವನು : "ಈ ಕಾಕತೀಯರ ರಾಜ್ಯದಲ್ಲಿ ಶ್ರೇಷ್ಠವಾದ ನವಿರಾದ ವಸ್ತ್ರಗಳು ನೇಯಲ್ಪಡುತ್ತಿವೆ. ಇವುಗಳ ಬೆಲೆ ಅತಿ ಪ್ರಿಯವಾದುದು. ಆ ವಸ್ತ್ರಗಳು ಜೇಡರ ಹುಳದ ದಾರದಂತೆ ನವಿರಾದ ದಾರದಿಂದ ತಯಾರಾಗುತ್ತಿದ್ದುವು. ಪ್ರಪಂಚದಲ್ಲಿನ ರಾಜರು, ರಾಣಿಯರು ಆ ಬಟ್ಟೆಗಳನ್ನೇ ಬಯಸುತ್ತಿರುವರು."[10] ರಾಣಿ ರುದ್ರಮದೇವಿಯ ಕಾಲದಲ್ಲೂ ಈ ಬಗೆಯ ಉತ್ಕೃಷ್ಟವಾದ ವಸ್ತ್ರ ನಿರ್ಮಾಣವಿತ್ತು. ಆಕೆಯ ಕಾಲದಲ್ಲಿ ಸ್ತ್ರೀಯರಿಗಾಗಿ ಪ್ರಸೂತಿ ಚಿಕಿತ್ಸಾಲಯಗಳು ನಿರ್ಮಿತವಾಯಿತೆಂದೂ, ಬಡವ ಬಲ್ಲಿದರೆಂಬ ಭೇದವಿಲ್ಲದೆ ಅಲ್ಲಿ ಸಕಲರಿಗೂ ಉಚಿತವಾದ ರೀತಿಯಲ್ಲಿ ಚಿಕಿತ್ಸೆ ನಡೆಯುತ್ತಿತ್ತೆಂದೂ ಚರಿತ್ರೆಕಾರರ ಕಥನ. ರಾಣಿ ರುದ್ರಮದೇವಿ ತಾನು ವೀರಶೈವಳಾದರೂ, ಜಾತಿ ಮತ ಭೇದವಿಲ್ಲದೆ ಸರ್ವ ಮತ ಸಹಿಷ್ಣುವಾಗಿ ರಾಜ್ಯವಾಳಿದಳೆಂದೂ, ಎಲ್ಲ ಬಗೆಯ ದೇವಾಲಯ, ಮಂದಿರ, ಬಸದಿಗಳ ಕೈಂಕರ್ಯಗಳಿಗೆಂದು ರಾಜ್ಯದ ಕೋಶಾಗಾರದಿಂದ ಹಣ ಸಂದಾಯವಾಗುವಂತೆ ನೋಡಿಕೊಳ್ಳುತ್ತಿದ್ದಳೆಂದೂ ತಿಳಿದು ಬರುತ್ತದೆ.

ಹೀಗೆ ರಾಜ್ಯವು ಸುಭಿಕ್ಷವಾಗುವಂತೆ ರಾಣಿ ಹೆಣಗುತ್ತಿರುವಲ್ಲಿ, ಮೊದಲೇ

---

9 ಅಡಪ ಬಾಪಿ ರಾಜು : ಗೋನಗನ್ನಾರೆಡ್ಡಿ; (ಚ. ಮು. 1967) ಪುಟ 211.

10. ಡಾಕ್ಟರ್, ಪರಬ್ರಹ್ಮ ಶಾಸ್ತ್ರಿ. ಪಿ. ವಿ., ಕಾಕತೀಯ ಚರಿತ್ರ; (1977), ಪುಟ 64.

ಸೂಚಿಸಿದಂತೆ “ಹೆಣ್ಣು ರಾಜ್ಯವಾಳುವುದನ್ನು ಸಹಿಸದ ಪಾಪಿ ಪೊತ್ತ ಕೆಲ ಅಣ್ಣಂದಿರು ಒಬ್ಬೊಬ್ಬರಾಗಿ ಮಲೆತು ನಿಂತು ತಮ್ಮ ಸ್ವತಂತ್ರವನ್ನು ಪ್ರಕಟಿಸಲು ಯತ್ನಿಸುವರು. ಕಾಕತೀಯ ಸಾಮಂತರಲ್ಲೊಬ್ಬರಾದ ಕಂದೂರಿನ ಕೇಶಿನಾಯಕ ನೆಂಬವನೂ, ರೇಚರ್ಲ ಪ್ರಭುಗಳು ರಾಜ್ಯದ ಬೊಕ್ಕಸಕ್ಕೆಂದು ಕೊಂಡೊಯ್ಯುತ್ತಿದ್ದ ಅಪಾರವಾದ ಧನ ರಾಶಿಯನ್ನೂ, ಭರುಕಚ್ಛದಿಂದ ಬಂದಿದ್ದ ಅಮೂಲ್ಯ ವಸ್ತು ಸಮುದಾಯವನ್ನು ಓರುಗಲ್ಲಿಗೆ ತಲುಪುವ ಮುನ್ನವೇ ಮಧ್ಯೇ ಮಾಗದಲ್ಲಿ ಕೊಳ್ಳೆ ಹೊಡೆದು, ರೇಚರ್ಲದವರನ್ನು ಕೊಂದಿಕ್ಕುವನು. ಈ ವಿಷಾದ ಸಂಘಟನೆ ರಾಣಿಗೆ ತಿಳಿಯುವುದು. ರಾಣಿಯ ಬಲಭುಜದಂತಿದ್ದ (ವರ್ಧಮಾನಪುರದ ಗೋನ ಬುದ್ಧಾ ರೆಡ್ಡಿಯ ಮಗನಾದ) ಗೋನುಗನ್ನರೆಡ್ಡಿ ತನ್ನ ಮಿಂಚಿನ ದಂಡಿನೊಡನೆ ಕಂದೂರಿಗೆ ಹೋಗಿ ಕೇಶಿನಾಯಕನನ್ನು ಯುದ್ಧದಲ್ಲಿ ಕೊಂದು ಅವನು ಸೂರೆ ಮಾಡಿ ತಂಗಿದ್ದ ಸಂಪತ್ತೆಲ್ಲವನ್ನು ರಾಣಿಗೆ ಕಳಿಸಿಕೊಡುವನು.

ಮತ್ತೊಬ್ಬ ಸಾಮಂತ ವರ್ಧಮಾನ ಪುರದರಸನು ಗೋನ ಲಕುಮಯಾರೆಡ್ಡಿ; ಇವನು ಗೋನ ಬುದ್ಧಾರೆಡ್ಡಿಯ ತಮ್ಮ. ತಮ್ಮನನ್ನು ನಂಬಿ ರಾಜ್ಯವನ್ನು ತನ್ನ ಮೂವರು ಮಕ್ಕಳನ್ನು ಲಕುಮಯನಿಗೊಪ್ಪಿಸಿ ಬುದ್ಧಾರೆಡ್ಡಿ ಕಣ್ಣು ಮುಚ್ಚಿದ. ದುರ್ಬುದ್ಧಿ ಹುಟ್ಟಿ ಲಕುಮಯನು ರಾಜ್ಯವನ್ನು ತಾನೇ ಕಬಳಿಸಿ, ತಮ್ಮನ ಮಕ್ಕಳಾದ ಗನ್ನಯ್ಯ, ವಿಠಲಯ್ಯ, ಕುಪ್ಪಾಂಬಿಕೆಯರನ್ನು ದೂರ ಮಾಡುವನು. ಗನ್ನಾರೆಡ್ಡಿ ತನ್ನ ತಮ್ಮ ಅಕ್ಕಂದಿರೊಡನೆ ರಾಜ್ಯತೊರೆದು ಶ್ರೀಶೈಲ ಕ್ಷೇತ್ರದ ನಿಬಿಡಾರಣ್ಯದಲ್ಲಿ ಬೀಡು ಬಿಟ್ಟು ಅಲ್ಲಿಯೇ ತನ್ನ ಮಿಂಚಿನ ದಂಡನ್ನು ಕಟ್ಟಿ. ಕಾಕತೀಯ ರಾಜ್ಯಕ್ಕೆ ದ್ರೋಹ ಬಗೆಯುವವರನ್ನು ಹುಡುಕಿ ಹುಡುಕಿ ನಾಶ ಮಾಡತೊಡಗುವನು. ಹೀಗಿ ರುವಾಗ ಲಕುಮಯಾರೆಡ್ಡಿ ಒಳಸಂಚುಮಾಡಿ ಶ್ರೀಶೈಲ ಯಾತ್ರಾ ನೆಪದಿಂದ ವಿಶೇಷ ಸೇನೆಯೊಡನೆ ಶ್ರೀಶೈಲವನ್ನು ಸೇರಿ ಕಾಕತೀಯ ಸಿಂಹಾಸನಕ್ಕೆ ಒಳತಾಗಲೆಂದು ನೆಪ ಮಾತ್ರಕ್ಕೆ ಶ್ರೀ ಮಲ್ಲಿಕಾರ್ಜುನನಿಗೆ ಮಂಡಲ ಪೂಜೆ ಮಾಡಿಸುವನು. ಇವನ ಸುಳು ವನ್ನು ತಿಳಿದ ಗನ್ನಾರೆಡ್ಡಿ ಮಾಯೋಪಾಯದಿಂದ ಲಕುಮಾರೆಡ್ಡಿಯನ್ನು ಬಂಧಿಸಿ ಪರಿಮಿತ ಪರಿವಾರದೊಂದಿಗೆ ಕೇಚರ್ಲ ಪ್ರಭುವೂ, ದಂಡಾಧಿಪತಿಯೂ ಆದ ಪ್ರಸಾದಾ ದಿತ್ಯನ ಬಳಿ ಕಳಿಸುವನು. ಆತನೀತನನ್ನೂ, ಈತನ ಕೂಡ ಬಂದಿಯಾಗಿ ಬಂದಿದ್ದ ಸೇನಾಪತಿ ರುದ್ರ ನಾಯಕನನ್ನೂ ಶಿವದೇವಯ್ಯ ಮಂತ್ರಿಗಳ ಬಳಿಗೆ ಕಳುಹುವನು. ಅವರು ರಾಣಿಗೆ ಉಪದೇಶಿಸಿ, ಲಕುಮಯನನ್ನು ನಗರ ಬಂಧನದಲ್ಲಿರಿಸುವಂತೆ ಮಾಡು ವರು. ರಾಣಿ ಅದೇ ರೀತಿ ಮಾಡಿ, ವರ್ಧಮಾನ ಪುರದಲ್ಲಿನ ಅವನ ಅಶೇಷ ಸೈನ್ಯ ವನ್ನು ವಿಚ್ಛಿನ್ನಗೊಳಿಸಿ, ಮತ್ತೆ ತಲೆಯೆತ್ತದಂತೆ ಮಾಡುವಳು. ಕಾದುಕಾಲಾಗಿದ್ದ ಗನ್ನರೆಡ್ಡಿಗೆ ವರ್ಧಮಾನ ಪುರವನ್ನಾಳಿಕೊಂಡಿರಲು ಅವಕಾಶ ನೀಡುವಳು.

ಒಂದು ಕಡೆಯಿಂದ ವ್ಯವಸ್ಥೆ ಮಾಡುವಷ್ಟರಲ್ಲಿ, ರಾಣಿಗೆ ಮತ್ತೊಂದು ಕಡೆ ವಿಪತ್ತುವುಂಟಾಗುವುದು. ತನ್ನ ತಂಗಿ ಗಣಪಾಂಬೆ, ಆಕೆಯ ಪತಿ ಕೋಟ ಭೇತ ಮಹಾರಾಜನು ಮಿತ್ರರಂತೆ ಬಂದು ಸೇರಿದ್ದ ಕೋಟ ಪೆಮ್ಮಾಡಿರಾಯ ಮತ್ತು ತೇರಾಲ ಕಾಟಯ್ಯರ ಒಳಸಂಚಿನಿಂದಾಗಿ ಧಾನ್ಯ ಕಟಕದಲ್ಲಿ ಅಂತಃಪುರ ಬಂದಿಗಳಾದ

ಸುದ್ದಿ ರಾಣಿ ರುದ್ರಮದೇವಿಗೆ ತಿಳಿಯಿತು. ಆ ದ್ರೋಹಿಗಳ ನೆರವಿಗೆ, ತನಗೆ ಸಾಮಂತನಾಗಿದ್ದು, ಶೂರನೆನಿಸಿದ್ದ ಗುಂಟೂರಿನ ನಾಗದೇವನು ಸಸೈನ್ಯ ಹೊರಟಿರುವ ನೆಂಬ ಸುದ್ದಿ ತಿಳಿಯುತ್ತದೆ. ಇದನ್ನರಿತ ರಾಣಿ ರುದ್ರಮ ತನ್ನ ತಂಗಿಯನ್ನು ಆಕೆಯ ಪತಿಯನ್ನೂ ಈ ಮೂವರು ದುಷ್ಟರಿಂದ ಉಳಿಸುವ ಉದ್ದೇಶದಿಂದ ತಾನು ಸರ್ವ ಸೈನ್ಯಾಧ್ಯಕ್ಷಳಾಗಿ, ಪಡಿಕದ ಬಾಪ್ಪದೇವನನ್ನು ಪ್ರಧಾನ ಸೇನಾನಿಯಾಗಿಸಿ, ವಿಶೇಷ ಸೈನ್ಯದೊಡನೆ ಹೊರಡುವಳು. ನಗರ ರಕ್ಷಣೆಯ ಹೊಣೆಯನ್ನು ಜಾಯಪ ಮತ್ತು ಪ್ರಸಾದಾದಿತ್ಯರಿಗೆ ವಹಿಸಿ ಪ್ರಯಾಣ ಮಾಡುವಳು. ಧಾನ್ಯ ಕಟಕವತ್ತ ಸಾಗಿದ್ದ ನಾಗದೇವನಕಡೆ ಶರವೇಗದಿಂದ ಸಾಗುವಳು. ಇತ್ತ ಈ ವಿಷಯ ತಿಳಿದ ಗೋನಗನ್ನಾರೆಡ್ಡಿ ತನ್ನ ದಂಡಿನೊಡನೆ ಬಂದು ಧಾನ್ಯ ಕಟಕವನ್ನು ಮುತ್ತುವನು. ಜೆಕೋಟಿಯೊಳಗಿದ್ದು ಗುಂಟೂರಿನ ನಾಗದೇವನ ಬರವನ್ನೆ ಕಾಯುತ್ತಿದ್ದ ಪೆರ್ಮಾಡಿ ರಾಯ, ಕಾಟಯ್ಯರಿಗೆ ಗನ್ನಾರೆಡ್ಡಿಯ ಹೆಸರು ಕೇಳಿದೊಡನೆಯೆ ಭೀತಿಯುಂಟಾಗು ವುದು. ತಾವು ಬಂಧುಗಳಂತೆ, ಮಿತ್ರರಂತೆ ಭೀತ ಮಹಾರಾಜರಲ್ಲಿ ಬಂದಿದ್ದೂ, ಅವರು ಮೈಮರೆತು ನಿದ್ರಿಸಿದ ಹೊತ್ತು ಎಲ್ಲರನ್ನೂ ಬಂಧಿಸಿ ರಾಜ್ಯ ಕೈವಶ ಮಾಡಿ ಕೊಂಡ ಸುದ್ದಿ ಗನ್ನಾರೆಡ್ಡಿಗೆ ತಿಳಿದುದೇ ಆಶ್ಚರ್ಯವೆಂದು ಭಾವಿಸಿ, ಚಿಂತಿಸುತ್ತಿರಲು, ಗನ್ನಾರೆಡ್ಡಿಯ ಮುತ್ತಿಗೆ ಬಲಗೊಂಡು ಕೋಟೆ ಹೆಚ್ಚು ಪ್ರತಿಭಟನೆಯಿಲ್ಲದೆ ಗನ್ನಾ ರೆಡ್ಡಿಯ ವಶವಾಗುವುದು. ಕೋಟೆ ಪೆರ್ಮಾಡಿರಾಯ, ತೇರಾಲ ಕಾಟಯರು ಭೀತ ಮಹಾರಾಜ ಮತ್ತು ಗಣಪಾಂಬೆಯರ ಕ್ಷಮೆ ಬೇಡುವರು. ರಾಜ-ರಾಣಿಯರು ಆ ಕೆಲಸವನ್ನು ಗನ್ನಾರೆಡ್ಡಿಗೆ ಒಪ್ಪಿಸುವರು. ಗನ್ನಾರೆಡ್ಡಿ ಅವರಿಬ್ಬರಿಂದಲೂ ಅಪಾರ ನಾದ ಚಿನ್ನದ ನಾಣ್ಯಗಳನ್ನು ತಪ್ಪು ದಂಡವಾಗಿ ತೆಗೆದುಕೊಂಡು ಮುಂದೆ ಭೀತ ಮಹಾರಾಜನಿಗೆ ಅವರಿಬ್ಬರೂ ಇಮ್ಮಡಿ ಕಾಣಿಕೆಗಳನ್ನು ಪ್ರತಿವರ್ಷವೂ ಸಲ್ಲಿಸುವ ಷರತ್ತಿನ ಮೇಲೆ ಬಿಡುಗಡೆ ಮಾಡುವನು.

ಇತ್ತ ಕಡೆ ಗುಂಟೂರು ನಾಗದೇವನಿಗೆ ತನ್ನ ಮಿತ್ರರಿಗಾದ ಮುಖಭಂಗದ ಸುದ್ದಿ ಬೇಹಿನವರಿಂದ ತಿಳಿದು, ನೇರವಾಗಿ ಓರುಗಲ್ಲಿನ ಕಡೆ ತನ್ನ ಸೈನ್ಯವನ್ನು ತಿರು ಗಿಸುವನು. ಚಾರರ ಮೂಲಕ ಈ ವಿಷಯ ತಿಳಿದ ಗನ್ನಾರೆಡ್ಡಿ ಭೀತರಾಜನೊಡ ಗೂಡಿ ನಾಗದೇವನನ್ನು ಕೃಷ್ಣಾ ತೀರದಲ್ಲಿ ಎದುರಿಸಲು ಹೊರಡುವನು. ಆ ಕಡೆ ದಂಡಿನೊಡನೆ ಹೊರಟಿದ್ದ ರಾಣಿ ರುದ್ರಮದೇವಿಗೆ ನಾಗದೇವನ ವಿಷಯ ತಿಳಿದು, ಆಕೆ ಬಾಪ್ಪ ದೇವನೊಡನೆ ಕೃಷ್ಣಾ ತೀರಕ್ಕೆ ನಡೆಯುವಳು. ನಾಗದೇವನು ಕೃಷ್ಣೆ ಯನ್ನು ದಾಟಿದ ಮೇಲೆ, ರಾಣಿಯ ಆದೇಶದಂತೆ ಎಲ್ಲರೂ ಮೂರು ದಿಕ್ಕುಗಳಿಂದ ಗುಂಟೂರು ನಾಗದೇವನನ್ನು ತಟ್ಟುವರು.ಮಹಾ ವೀರನೂ, ಯುದ್ಧ ವ್ಯೂಹ ಚತುರನೂ ಆದ ನಾಗದೇವನು ಅವರ ದಾಳಿಗೆ ನಿಲ್ಲಲಾರದೆ ಪೂರ್ವದಿಕ್ಕಿನಲ್ಲಿ ತಿರೋಗಮಿಸುವನು. ನಾಲ್ಕು ನಿಟ್ಟಿನಿಂದಲೂ ಅವನ ಸೇನೆಗೆ ನಿರೋಧವುಂಟಾಗಲು ಎಲ್ಲರನ್ನೂ ಎದುರಿಸಿ ಯುದ್ಧ ಮಾಡುವನು. ಪಡಿಕದ ಬಾಪ್ಪದೇವನು ತನ್ನ ನಾಲ್ಕು ಸಾವಿರ ವೀರ ಯೋಧರೊಡನೆ ಮುನ್ನುಗ್ಗಿ, ನಾಗದೇವನ ಚಕ್ರಬಂಧವನ್ನು ಭೇದಿಸಿ, ನಾಗದೇವ ನನ್ನೆದುರಿಸುವನು. ವ್ಯೂಹವು ಒಡೆಯಲು, ರುದ್ರದೇವ, ಭೀತರಾಜಾದಿಗಳೂ ಮುನ್ನು

ಗ್ಗುವರು. ಬಾಪ್ಪದೇವ ನಾಗದೇವರ ನಡುವೆ ದ್ವಂದ್ವ ಯುದ್ಧವೇ ನಡೆದು ಕೊನೆಗೆ ಬಾಪ್ಪದೇವನು ವೀರಾವೇಶದಿಂದ ನಾಗದೇವನನ್ನು ಕೊಂದು "ಗುಂಟೂರು ನಾಗದೇವ ತಲಗೊಂಡ ಗಂಡ ! ಜೈ ಪಡಿಕದ ಬಾಪ್ಪ ದೇವಾ !" ಎಂಬ ಸ್ತುತಿ ಪಾತ್ರಕ್ಕೆ ಗುರಿಯಾಗುವನು.

ಜಟಾವರ್ಮ ಸುಂದರ ಪಾಂಡ್ಯನೊಡನೆ ಮುತ್ತುಕೂರಿನ ಬಳಿ ಕದನವಲ್ಲಿ ಮಾತ್ರ ಕಾಕತೀಯ ಸೇನೆ ಹಿಮ್ಮೆಟ್ಟಬೇಕಾಯಿತು. ಜಟಾವರ್ಮನು ಚೋಳ ರಾಜನು ಸೇರಿ ಕಾಕತೀಯ ಸಾಮಂತ ರಾಜ್ಯವಾದ ನೆಲ್ಲೂರನ್ನು ಆಕ್ರಮಿಸುವರು. ಕಾಕತೀಯರು ಎಷ್ಟೇ ಶೌರ್ಯದಿಂದ ಹೋರಾಡಿದರೂ, ಮುತ್ತುಕೂರಿನ ಬಳಿ ಸೋತು ಹಿಮ್ಮೆಟ್ಟಿದವರು. ಈ ಸೋಲು ಕೆಲವು ಸಾಮಂತರಿಗೆ ಪ್ರಚೋದನೆ ನೀಡುವುದು. ಕಾಯಸ್ಥ ಅಂಬದೇವನಂತಹವನು ಸ್ವಾತಂತ್ರ್ಯವನ್ನು ಪ್ರಕಟಿಸುವನು. ಮಾರ್ಜವಾಡಿಯಿಂದ ಪಾನುಗಂಟಿವರೆಗೆ ರಾಜ್ಯವಾಳಿದ ಮಹಾಸಾಮಂತನು ಗಂಡಪೆಂಡೇರ ಜನ್ನಿಗದೇವನು. ಅವನ ತರುವಾಯ ಅವನ ತಮ್ಮನಾದ ತ್ರಿಪುರಾರಿ ಕೆಲವು ಕಾಲ ರಾಜ್ಯವಾಳಿದನು. ತ್ರಿಪುರಾರಿಯ ತರುವಾಯ ಅವನ ಸೋದರನಾದ ಅಂಬದೇವನು (ಕ್ರಿ. ಶ. ೧೨೭೨) ರಾಜ್ಯಕ್ಕೆ ಬಂದನು. ಕಾಕತೀಯ ಸಾಮ್ರಾಜ್ಯವನ್ನು ಎದುರಿಸಿ ನಿಂತನು. ಆದರೂ ರಾಣಿ ಧೃತಿಗುಂದದೆ ಅಂಬದೇವನ ಮೇಲೆ ದಾಳಿಯಿಕ್ಕುವಳು; ಅವನಿಗೆ ಬುದ್ಧಿ ಕಲಿಸುವಳು.

ರಾಣಿ ರುದ್ರಮ ದೇವಿಯ ಬಾಳಿನ ಹೋರಾಟದಲ್ಲಿ ಆಕೆ ತೋರಿದ ಶೌರ್ಯ ಸಾಹಸಾದಿಗಳು ಅಪ್ರತಿಮವಾದುವು. ಚರಿತ್ರೆಯಲ್ಲಿ ಸೇವುಣರೊಡನೆ ಆದ ಯುದ್ಧವು ಆಕೆಗೆ ಕೀರ್ತಿಯನ್ನು ತಂದಿದೆ. ರಾಣಿ ರುದ್ರಮ ಸಾಮಾನ್ಯ ಹೆಂಗಸೆಂದು ಭಾವಿಸಿ, ಸುಮಾರು ಎಂಟು ಲಕ್ಷ ಸೈನ್ಯದೊಡನೆ ಸೇವುಣರ ರಾಜನಾದ ಮಹಾದೇವರಾಜನು ದೇವಗಿರಿಯಿಂದ ಓರುಗಲ್ಲಿಗೆ ಬರುವನು. ಈ ದುರಾಕ್ರಮಣದಿಂದ ಗುಪ್ತ ಚರರಿಂದ ತಿಳಿದ ರಾಣಿಯು ಸಾಮಂತರಾದ ಗನ್ನಾರೆಡ್ಡಿ ಪಿಠಲಧರಣೀಶ, ಜಗ್ಗಂಡಸೇನಾನಿ, ಸಬ್ಬ ಪ್ರಭುವು, ಸೂರನ ರೆಡ್ಡಿ, ಚಿಕ್ಕ ದಾಮಾ ನಾಯಕ ಮೊದಲಾದವರು ಜಾಗೃತರಾಗುತ್ತಾರೆ. ಮಹಾದೇವರಾಯನು ಯುದ್ಧ ಯಾತ್ರೆ ಆರಂಭಿಸಿದಂದಿನಿಂದಲೂ ಮಾರ್ಗ ಮಧ್ಯದಲ್ಲಿ "ಕಿರುಕುಳ" ಯುದ್ಧವನ್ನು ಮಾಡುತ್ತಾ ಬರುತ್ತಾರೆ. ಸೇವುಣರ ಸೈನ್ಯ ನದಿ ದಾಟುವಾಗ, ಕಣಿವೆಗಳಲ್ಲಿ ಹಾದು ಬರುವಾಗ, ಇಕ್ಕಟ್ಟಿನ ದಾರಿಗಳಲ್ಲಿ ನಡೆಯುವಾಗ ಈ ವೀರರಿಂದ ಅಪಾರ ನಷ್ಟಕ್ಕೆ ಒಳಗಾಗುತ್ತದೆ. ಮಹಾದೇವ ರಾಜನ ಸೇನೆ ಓರುಗಲ್ಲು ಕೋಟೆಯನ್ನು ಮುತ್ತುವ ಹೊತ್ತಿಗೆ ಆರು ಲಕ್ಷಕ್ಕಿಳಿದಿರುತ್ತದೆ. ಮುತ್ತಿಗೆಯ ಸುದ್ದಿಯನ್ನು ತಿಳಿದ ರಾಣಿ ರುದ್ರಮದೇವಿ ಗುರುಗಳೊಡನೆ, ಮಂತ್ರಿ, ಸಾಮಂತ, ಸೇನಾ ಪರಿವಾರದೊಡನೆ ಸಮಾಲೋಚಿಸಿ ಯುದ್ಧ ತಂತ್ರವನ್ನು ನಿರೂಪಿಸುವಳು. ಓರುಗಲ್ಲಿನ ರಕ್ಷಣೆಗೆ ಮೂರುಕೋಟೆಗಳಿವೆ. ಹೊರ ಆವರಣದ ಕೋಟೆ ಮುಳ್ಳಿನ ಕೋಟೆ; ಒಳ ಆವರಣದ್ದು ಮಣ್ಣಿನ ಕೋಟೆ; ಪೂರ್ತಿ ಒಳಗಿರುವ ಕೋಟೆ ಕಲ್ಲಿನ ಕೋಟೆ. ಈ ಮೂರೂ ಕೋಟೆಗಳಲ್ಲೂ ಭದ್ರವಾದ ಕಾವಲನ್ನು ಏರ್ಪಡಿಸಿ ತಕ್ಕ ಯೋಧರನ್ನು, ದಳಪತಿಗಳನ್ನು ನಿಯಮಿಸುತ್ತಾಳೆ. ಸುಮಾರು

ಹದಿನೈದು ದಿನಗಳವರೆಗೆ ಕಾಕತೀಯರಿಗೂ, ಸೇವುಣರಿಗೂ ಘೋರ ಕಾಳಗವಾಗುತ್ತದೆ. ಕಾಳಗದಲ್ಲಿ ದೇವಗಿರಿ ರಾಜನಿಗೆ ಅಪಾರವಾದ ಜನ, ಧನ ನಷ್ಟವುಂಟಾಗಿ, ಪಲಾಯನ ಮಾಡುವನು. ರಾಣಿ ರುದ್ರಮ ಅವನನ್ನು ದೇವಗಿರಿಯವರೆಗೂ ಅಟ್ಟಿಸಿಕೊಂಡು ಹೋಗುವಳು. ಕೊನೆಗೆ ದೇವಗಿರಿ ದುರ್ಗಕ್ಕೇನೆ ಮುತ್ತಿಗೆ ಹಾಕುವಳು. ರಾಣಿಯ ದಾಳಿಯನ್ನು ಎದುರಿಸಲಾರದ ಮಹಾದೇವರಾಜನು ಸಂಧಿಗಾಗಿ ಯಾಚಿಸುವನು. ರಾಣಿ ಕರುಣಿಸಿ, ಅವನಿಂದ ತಪ್ಪು ಕಾಣಿಕೆಯಾಗಿ ಸುಮಾರು ಮೂರು ಕೋಟಿ ಸುವರ್ಣ ರಾಶಿಯನ್ನು ತೆಗೆದುಕೊಂಡು ಒಂದು ಕೋಟಿಯನ್ನು ಸಾಮ್ರಾಜ್ಯದ ಬೊಕ್ಕಸಕ್ಕೂ, ಒಂದು ಕೋಟಿ ತನ್ನ ಸೇವಕರಿಗೂ, ಮತ್ತೊಂದು ಕೋಟಿಯನ್ನು ಯುದ್ಧದಲ್ಲಿ ಮೃತರಾದ ವೀರರ ಕುಟುಂಬಗಳಿಗೂ ಸಲ್ಲುವ ಏರ್ಪಾಡು ಮಾಡುವಳು. ಮಹಾದೇವರಾಜನ ರಾಜ್ಯವನ್ನವನಿಗೇ ಬಿಟ್ಟು ಕೊಟ್ಟು, ಗೋದಾವರೀ ಮಂಜೀರಾ ಸಂಗಮದ ವರೆಗಿನ ಉತ್ತರದ ಸೀಮೆಯು ಸೇವುಣರ ಗಡಿಯೆಂದು ನಿರ್ಣಯಿಸಿ, ವಿಜಯಸ್ತಂಭಗಳನ್ನು ನೆಡಿಸುವಳು. ಈ ಘನ ವಿಜಯವನ್ನು ಕಂಡ ವಂದಿ ಮಾಗಧರು "ಜಯ ಜಯ ಶ್ರೀ ಶ್ರೀ ಸಮಧಿಕ ಪಂಚ ಮಹಾ ಶಬ್ದ! ಜಯ ಜಯ ಮಹಾ ಮಂಡಲೇಶ್ವರ! ಜಯ ಜಯ ಪರಮ ಮಹೇಶ್ವರ! ಜಯ ಜಯ ವಿನಯ ಭೂಷಣ! ಜಯ ಜಯ ಶೌಣದೇಶ ಕಟಕ ಸೂರೆಕಾರ! ಜಯ ಜಯ ಮಹಾದೇವರಾಯ ಗರ್ವಾಪಹರಣ! ಜಯ ಜಯ ಅನುಮ ಕೊಂಡ ಪುರವರಾಧೀಶ್ವರ! ಜಯ ಜಯ ಚತುಸ್ಸಮುದ್ರವಲಯ ದಿಕ್ಪೂರಿತ ಕೀರ್ತಿ! ಜಯ ಜಯ ರಾಜರಾಜೇಶ್ವರ! ಜಯ ಜಯ ಮೂರು ರಾಯ ಜಗದಾಳ! ಜಯ ಜಯ ಶ್ರೀ ಸ್ವಂಭೂ ದೇವರ ಶ್ರೀ ಪಾದ ಪದ್ಮಾರಾಧಕ! ಜಯ ಜಯ ಶ್ರೀ ಅಷ್ಟಮ ಚಕ್ರವರ್ತೀ"[11] ಎಂದು ಕೈವಾರಿಸುವರು. ಹೀಗೆ ರಾಣಿ ರುದ್ರಮ ದೇವಿ ವಿಶೇಷ ವಿಜಯೋತ್ಸವದೊಂದಿಗೆ ಓರುಗಲ್ಲಿಗೆ ಬೀದರು ಮಾರ್ಗವಾಗಿ ಹಿಂತಿರುಗುವಳು; ಬೀದರಿನ ಮಾರ್ಗವಾಗಿ ಹಿಂತಿರುಗಿದಂತೆ ಬೀದರಿನ ಶಾಸನದ ಮೂಲಕ ತಿಳಿಯುತ್ತದೆ. "ಶಾಸನದಲ್ಲಿ ರುದ್ರಮದೇವಿ ಹೆಸರು ಪ್ರತ್ಯಕ್ಷವಾಗಿ ಕಾಣಬರದು. ಶಾಸನದಲ್ಲಿನ ಶಿಲಾ ಭಾಗ ಸ್ವಲ್ಪ ಮುಕ್ಕಾಗಿದೆ. ಕಾಕತೀಯ ರುದ್ರದೇವ, ಮಹಾದೇವನ ಹೆಸರುಗಳಿವೆ."[12] ರಾಣಿ, ರಾಜ್ಯದ ಇತರ ಕಡೆಗಳಲ್ಲಾದ ಯುದ್ಧಗಳಲ್ಲಿ ಪಾಂಡ್ಯ, ಚೋಳ, ಕಳಿಂಗಾದಿಗಳನ್ನು ಹತ್ತಿಕ್ಕುತ್ತಾಳೆ. ಅಂಬಯ ದೇವನೊಡನಾದ ಯುದ್ಧದಲ್ಲಿ ಅವನನ್ನು ಹಿಮ್ಮೆಟ್ಟಿಸುತ್ತಾಳೆ. ಆಕೆಯ ಕಾರ್ಯದಲ್ಲಿ ನೆರವಾಗಿ ನಿಂತ ವೀರರಲ್ಲಿ ಅಡಿದಮು ವೀರ ಮಲ್ಲು. ಗೋನಗನ್ನಾರೆಡ್ಡಿಯಂತಹ ವೀರರು; ನಿಷ್ಠಾವಂತ ಸಾಮಂತರು. "ಕ್ರಿ. ಶ. ೧೨೯೬ ರ ಅಡಿದಮು ಮಲ್ಲು ತ್ರಿಪುರಾಂತಕ ಶಾಸನದಲ್ಲಿ 'ರುದ್ರದೇವ ದಕ್ಷಿಣ ಭುಜಾದಂಡ' ಎಂಬ ಬಿರುದನ್ನು ಮಲ್ಲು ಸೇನಾನಿ ಪಡೆದಂತೆ ತಿಳಿಯುತ್ತದೆ. ಅದರಲ್ಲಿ ರುದ್ರದೇವ (ರಾಣಿ ರುದ್ರಮದೇವಿ). ಪ್ರತಾಪ ರುದ್ರದೇವರ ಹೆಸರುಗಳೆರಡೂ ಬಂದಿವೆ. ಅದೇ

---

11. ಅಡವಿ ಬಾಪಿ ರಾಜು; ಗೋನಗನ್ನಾರೆಡ್ಡಿ; (ಜ. ಮು. 1957), ಪುಟ 301.
12. ಖಂಡವಲ್ಲಿ ಲಕ್ಷ್ಮೀ ರಂಜನಂ; ಕಾಕತೀಯ ಯುಗಮು; (ಪ್ರ. ಮು. 1975), ಪುಟ 50

ಕಾಲದ ರಾಯಚೂರಿನ ಶಾಸನ ಒಂದರಲ್ಲಿ ಗೋನಗನ್ನಾರೆಡ್ಡಿ ಕೂಡ 'ರುದ್ರದೇವ ದಕ್ಷಿಣ ಭುಜಾದಂಡ' ಬಿರುದಾಂಕಿತನಾಗಿದ್ದಂತೆ ಸ್ಪಷ್ಟವಿದೆ".13

ರಾಣಿ ರುದ್ರಮ ದೇವಿಯ ಕೌಟುಂಬಿಕ ಜೀವನ ಹೆಚ್ಚಾಗಿ ತಿಳಿಯದು. ಆಕೆ ಕ್ರಿ. ಶ. ೧೨೨೦ರಲ್ಲಿ ಜನಿಸಿದಂತೆ ತಿಳಿದುಬರುತ್ತದೆ. ಸಾಮಂತ ಚೂಡಾಮಣಿಯಾದ ಚಾಲುಕ್ಯ ವೀರಭದ್ರ ರಾಜನನ್ನು ಮದುವೆಯಾಗಿ ಕೆಲವು ಕಾಲ ಸಾಂಸಾರಿಕ ಜೀವನವನ್ನು ನಡೆಸುವಳು. ವೀರಭದ್ರ ರಾಜನು ಕ್ರಿ. ಶ. ೧೨೬೬ರಲ್ಲಿ ಶಿವೈಕ್ಯನಾದಂತೆ ಆತನ ತಾಯಿ ಉದಯಮಹಾದೇವಿ ನಡೆಸಿದ ದಾಲ ಕೊಲ್ಲಿ ಶಾಸನದ ಆಧಾರದಿಂದ ಊಹಿಸಲಾಗಿದೆ. ಯಾವುದೋ ಯುದ್ಧದಲ್ಲಿ ವೀರ ಮರಣವನ್ನು ಹೊಂದಿರಬಹುದೆಂದು ಕೆಲವರು ಚರಿತ್ರಕಾರರ ಅಭಿಪ್ರಾಯ. ಮೊಮ್ಮಗನಾದ ಪ್ರತಾಪ ರುದ್ರದೇವನು ಪಟ್ಟಕ್ಕೆ ಬರುವವರೆಗೂ (ಕ್ರಿ. ಶ. ೧೨೯೫ರವರೆಗೂ) ರಾಣಿ ಜೀವಿಸಿದ್ದಳೆಂದು ಚರಿತ್ರಕಾರರ ಕಥನ. ಕೆಲವರು ಚರಿತ್ರಕಾರರು ಅಂಬಯ ದೇವನೊಡನೆ ಆದ ಯುದ್ಧದಲ್ಲಿ ರಾಣಿ ಮತ್ತು ಆಕೆಯ ಅಂಗರಕ್ಷಕನಾದ ಮಲ್ಲಿಕಾರ್ಜುನನು ವೀರಮೃತ್ಯುವನ್ನೈದಿದರೆಂದು ಹೇಳುವುದುಂಟು. ಇದಕ್ಕಾಗಿ ಕ್ರಿ. ಶ. ೧೨೮೯ ರ ನಲ್ಲಗೊಂಡ ಜಿಲ್ಲಾ ಚಂದು ಪಟ್ಲಗ್ರಾಮದ ಶಿವಾಲಯ ಪ್ರಾಂಗಣದಲ್ಲಿನ ಒಂದು ಶಿಲೆಯ ಮೇಲೆ ಕೆತ್ತಲಾದ ಶಾಸನದ ಆಧಾರವನ್ನು ಹೇಳುವುದುಂಟು. ಅಂಬದೇವನೊಡನಾದ ಕದನದಲ್ಲಿ ರಾಣಿ ಗಾಯಗೊಂಡಿರಬೇಕೆಂದೂ, ಅವನನ್ನೂ ಅವನ ಮಿತ್ರರನ್ನು ಸೋಲಿಸುವ ವರೆಗೂ ಪ್ರತಾಪರುದ್ರನು ಪಟ್ಟವೇರಲಿಲ್ಲವೆಂದೂ ಮತ್ತೆ ಕೆಲವರ ವಾದ. ಪ್ರತಾಪರುದ್ರನು ಮಾತ್ರ ತನ್ನ ಮಾತಾಮಹಿಯ ತರುವಾಯ ಕ್ರಿ. ಶ. ೧೨೯೫ ರಲ್ಲಿ ಪಟ್ಟವೇರಿದನೆಂದು ಬಹು ಜನರು ಅಭಿಪ್ರಾಯಪಡುತ್ತಾರೆ.

ರಾಣಿ ರುದ್ರಮನ ರಾಜ್ಯವು ಸುಭಿಕ್ಷವಾಗಿಯೂ, ಪ್ರಜಾರಂಜಕವಾಗಿಯೂ ಇತ್ತೆಂದೂ, ವ್ಯಾಪಾರವು, ಆಂಧ್ರಸಾಮ್ರಾಜ್ಯವು ದೂರದವರೆಗೆ ಹಬ್ಬಿತ್ತೆಂತಲೂ, ವಿದ್ಯಾಲಯ, ವೈದ್ಯ ಸೌಕರ್ಯಾದಿಗಳಿಗೆ ಕೊರತೆಯಿರಲಿಲ್ಲವೆಂತಲೂ ಪ್ರವಾಸಿಗರ ಕಥನದಿಂದ ತಿಳಿದು ಬರುತ್ತದೆ.

ಒಟ್ಟಿನಲ್ಲಿ ರಾಣಿ ರುದ್ರಮದೇವಿ ತಂದೆಯ ಆಶೋತ್ತರಗಳಿಗೆ ತಕ್ಕ ಮಗಳಾಗಿ, ವೀರರಾಣಿಯಾಗಿ, ಬಹುಕಾಲ (ಕ್ರಿ. ಶ. ೧೨೯೫ರವರೆಗೆ) ದಕ್ಷತೆಯಿಂದ ರಾಜ್ಯವಾಳಿದ ವೀರಶೈವ ವೀರನಾರಿಮಣಿ. ಈಕೆಯನ್ನು ಕುರಿತು ಪ್ರಸಿದ್ಧ ಚರಿತ್ರೆಕಾರರಾದ ಮಲ್ಲಂಪಲ್ಲಿ ಸೋಮಶೇಖರ ಶರ್ಮ ಮತ್ತು ಡಾ. ನೇಲಟೂರಿ ವೆಂಕಟರಮಣಯ್ಯ ಇವರು ಬರೆಯುತ್ತಾ ಹೀಗೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ: "ಆಂಧ್ರ ಪ್ರದೇಶದ ಪಾಲಕರಲ್ಲಿ ರುದ್ರಮದೇವಿ ನಿಸ್ಸಂದೇಹವಾಗಿ ಮಹಾಘನತೆವೆತ್ತ ವ್ಯಕ್ತಿ. ಆಕೆ ಹೆಂಗಸಾದರೂ, ಹೆಂಗಸರಿಗಿರುವ ತೊಡಕುಗಳು ತಾನಾಕ್ರಮಿಸಿದ ಮಹೋನ್ನತ ಸ್ಥಾನಕ್ಕೆ ಸಂಬಂಧಿಸಿದ ವಿಧಿಗಳ ನಿರ್ವಹಣೆಯಲ್ಲಿ ಎಳ್ಳಷ್ಟು ಕೂಡ ಅಡ್ಡ ಬರುವಂತೆ ಮಾಡಿ ಕೊಳ್ಳಲಿಲ್ಲ. ರಾಜ ಧರ್ಮ ವಿಧಿಗಳನ್ನು ಆಕೆ ನಿರ್ವಹಿಸಿದ ರೀತಿಯಿಂದ ತಂದೆ

13. ಅದೇ, ಪುಟ 54

ಆಕೆಗೆ ಕರುಣಿಸಿದ ಪುರುಷ ನಾಮ—ರುದ್ರದೇವ—ಎಲ್ಲ ವಿಧದಲ್ಲೂ ಸಾರ್ಥಕವಾಗಿದೆ. ದೇಶ ಪರಿಪಾಲನೆಯಲ್ಲಿ ಆಕೆ ಚೈತನ್ಯವಂತವಾದ ಪಾತ್ರ ವಹಿಸಿದ್ದಾಳೆ. ಪುರುಷವೇಷದಲ್ಲಿ ನಿತ್ಯವೂ ರಾಜದರ್ಬಾರವನ್ನು ಅಧಿಷ್ಠಿಸಿದ್ದಾಳೆ. ವಿದೇಶ ರಾಯಭಾರಿಗಳಿಗೆ ದರ್ಶನವಿತ್ತಿದ್ದಾಳೆ. ಚಾರರು ತಂದ ವಾರ್ತೆಗಳನ್ನು ಕಿವಿಗೊಟ್ಟು ಲಾಲಿಸಿದ್ದಾಳೆ. ಅಮಾತ್ಯರೊಡನೆಯೂ, ದಂಡನಾಥರೊಡನೆಯೂ ಸಮಾಲೋಚನೆಗಳನ್ನು ಮಾಡಿದ್ದಾಳೆ. ರಾಷ್ಟ್ರಾಭಿವೃದ್ಧಿಗೆ ಅವಶ್ಯವಾದ ಸಲಹೆಗಳನ್ನೂ ಆಜ್ಞೆಗಳನ್ನೂ ಅವರಿಗೆ ಸಲ್ಲಿಸಿದ್ದಾಳೆ. ಆಕೆ ಧೈರ್ಯ ಸಾಹಸಗಳುಳ್ಳ ಯೋಧಳೊಂದೇ ಅಲ್ಲದೆ, ಅತಿಶಯ ವ್ಯೂಹಾತಂತ್ರಜ್ಞಳು. ಸೇನಾ ನಾಯಕಳಾಗಿ ಆಕೆ ಅಮೋಘವಾಗಿ ಪ್ರಕಾಶಿಸಿದ್ದಾಳೆ. ಮುಖ್ಯವಾಗಿ ಸೇವುಣರ ರಾಜ ಮಹಾದೇವನು ಯಃಕಶ್ಚಿತ ಸ್ತ್ರೀಯೆಂದು ಪರಿಗಣಿಸಿ ಓರುಗಲ್ಲಿನ ಮೇಲೆ ದಾಳಿಯಿಟ್ಟು ಹೊತ್ತು ರುದ್ರಮದೇವಿ ಆ ಬಾಂಪ್ಬಡಿಕನಿಗೆ ಒಳ್ಳೆಯ ಗುಣಪಾಠವನ್ನು ಕಲಿಸಿದ್ದಾಳೆ. ಆಕೆ ರಾಜ್ಯವಾಳಿದ ಕಾಲದಲ್ಲಿ ಆಗಾಗ ಯುದ್ಧದ ತೊಂದರೆಯಾಗುತ್ತಿದ್ದರೂ, ಆಕೆಯ ಪ್ರಜೆಗಳು ಸಂತುಷ್ಟರಾಗಿಯೂ, ಸಂಪ್ರೀತರಾಗಿಯೂ ಸುಖಿಸಿದ್ದಾರೆ”14 ರುದ್ರಮದೇವಿಯನ್ನು ಕುರಿತ ಈ ಪ್ರಶಂಸೆ ಸರ್ವಥಾ ಯೋಗ್ಯವಾಗಿದೆ.

ಗ್ರಂಥ ಋಣ

೧. ಕಾಕತೀಯ ಯುಗಮು : ರಚನೆ : ಖಂಡವಲ್ಲಿ ಲಕ್ಷ್ಮೀರಂಜನಂ, ಪ್ರ. ಮು. ೧೯೭೫.

೨. ರುದ್ರಮದೇವಿ (ಕಾದಂಬರಿ) : ರಚನೆ : ಕವಿ ಸಾಮ್ರಾಟ್ ನೋರಿ ನರಸಿಂಹಶಾಸ್ತ್ರಿ, ತೃ. ಮು. ೧೯೬೦.

೩. ಗೋನಗನ್ನಾರೆಡ್ಡಿ (ಕಾದಂಬರಿ) : ರಚನೆ : ಅಡವಿ ಬಾಪಿ ರಾಜು, ಚ. ಮು. ೧೯೬೭.

೪. ಕಾಕತೀಯ ಚರಿತ್ರೆ : ರಚನೆ : ಡಾ. ಪಿ. ವಿ. ಪರಬ್ರಹ್ಮಶಾಸ್ತ್ರಿ, ೧೯೭೭.

೫. ಶ್ರೀ ಸಿದ್ಧೇಶ್ವರ ಚರಿತ್ರಮು (ಕಾಕತೀಯ ರಾಜುಲ ಚರಿತ್ರಮು–ಪ್ರತಾಪಚರಿತ್ರ) ದ್ವಿಪದಿ, ಕಾಸೆ ಸರ್ವಪ್ಪ ಪ್ರಣೀತಮು– ಸಂ. ಆಚಾರ್ಯ ಖಂಡವಲ್ಲಿ ಲಕ್ಷ್ಮೀರಂಜನಂ ೧೯೬೦.

೬. ಪ್ರಾಚೀನ ಆಂಧ್ರನಗರಮುಲು : (ಮೊದಟಿ ಭಾಗಮು) : ರಚನೆ : ಆದಿರಾಜು ವೀರಭದ್ರರಾವು, ೧೯೫೦.

೭. ಆಂಧ್ರದೇಶ ಚರಿತ್ರ ಸಂಗ್ರಹಮು : (ಕ್ರಿ. ಶ. ೧೫೭೭ವರಕು) : ರಚನೆ : ಮಲ್ಲಂಪಲ್ಲಿ ಸೋಮಶೇಖರ ಶರ್ಮ, ಮೊ. ಮು. ೧೯೪೮. ("ಏಡವ ಪ್ರಸಂಗಮು; ಕಾಕತೀಯ ಯುಗಮು, ಪುಟ ೬೨ ನುಂಡಿ ೭೨ವರಕು)

○

14. ಖಂಡವಲ್ಲಿ ಲಕ್ಷ್ಮೀ ರಂಜನಂ : ಕಾಕತೀಯ ಯುಗಮು : (ಪ್ರ. ಮು. 1975), ಪುಟ 46

ಕೆಳದಿಯ ಭದ್ರಮ್ಮಾಜಿ–ವೀರಮ್ಮಾಜಿ

ಎಚ್. ದೇವೀರಪ್ಪ

ಕೆಳದಿ ಎಂಬುದು ಶಿವಮೊಗ್ಗೆ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿರುವ ಒಂದು ಚಿಕ್ಕ ಗ್ರಾಮ. ಸಣ್ಣದಾದರೂ ಪ್ರಭಾವಶಾಲಿಯೂ ಶಕ್ತಿಯುತವೂ ವಿಸ್ತವಿಖ್ಯಾತವಾದ ಒಂದು ರಾಜ್ಯದ ಉಗಮ ಸ್ಥಾನವಾಯಿತು ಅದು. ಅದರ ಹೆಸರೇ ಆ ರಾಜ್ಯಕ್ಕೂ ಬಿದ್ದಿತು. ಆ ಸಂಸ್ಥಾನದ ರಾಜಧಾನಿ ಮೊತ್ತ ಮೊದಲಿಗೆ ಕೆಳದಿ, ಕೆಲವು ವರ್ಷಗಳ ಮೇಲೆ ಇಕ್ಕೇರಿ, ಆನಂತರ ಬಿದನೂರು ಅಥವಾ ಬಿದರೂರು. ಈ ಮೂರು ಹೆಸರುಗಳಲ್ಲಿ ಕೆಳದಿ ಎಂಬುದೇ ಸಮುಚಿತವಾದುದು ಮತ್ತು ಚರಿತ್ರೆಕಾರರಲ್ಲಿ ಹೆಚ್ಚು ಬಳಕೆಯಲ್ಲಿರುವುದು.

ಈ ರಾಜ್ಯವು ಅಸ್ತಿತ್ವದಲ್ಲಿದ್ದುದು ೨೬೫ ವರ್ಷ ೧ ತಿಂಗಳು ೨೫ ದಿನ; ಒಬ್ಬರಾದ ಮೇಲೊಬ್ಬರಂತೆ ೧೮ ಜನರು ಈ ರಾಜ್ಯವನ್ನಾಳಿದರು. ವಿಜಯನಗರವು ಹಾಳಾದ ಮೇಲೆ (ಕ್ರಿ. ಶ. ೧೫೬೫) ಇದು ಸ್ವತಂತ್ರ ರಾಜ್ಯವಾಗಿ ಮೆರೆದುದು ಸುಮಾರು ಎರಡು ನೂರು ವರ್ಷಗಳ ಕಾಲ (೧೫೭೦–೧೭೬೩). ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈ ಸಂಸ್ಥಾನವು ಶಿವಮೊಗ್ಗೆ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳನ್ನೂ ಒಳಕೊಂಡು ಉತ್ತರಕ್ಕೆ ಗೋವೆಯವರೆಗೂ ದಕ್ಷಿಣಕ್ಕೆ ಕಣ್ಣಾನೂರಿನವರೆಗೂ ಹಬ್ಬಿದ್ದಿತು. ಹೈದರನು ಸರ್ವಾಧಿಕಾರಿಯಾಗುವ ಮೊದಲು ಮೈಸೂರು ರಾಜ್ಯ ಇದರ ಅರ್ಧದಷ್ಟೂ ಇರಲಿಲ್ಲ.

ಈ ರಾಜ್ಯವನ್ನಾಳಿದವರಲ್ಲಿ ಪ್ರಸಿದ್ಧರಾದವರು ಕೆಳದಿಯ ಸದಾಶಿವ ನಾಯಕ, ಇಕ್ಕೇರಿಯ ಹಿರಿಯ ವೆಂಕಟಪ್ಪ ನಾಯಕ, ಬಿದನೂರಿನ ಶಿವಪ್ಪ ನಾಯಕ ಮತ್ತು ಹಿರಿಯ ಬಸವಪ್ಪನಾಯಕರು. ರಾಣಿಯರಲ್ಲಿ ಇಕ್ಕೇರಿಯ ರಾಣಿ ಭದ್ರಮ್ಮಾಜಿ. ಬಿದನೂರು ರಾಣಿಯರಾದ ಚನ್ನಮ್ಮಾಜಿ(ಕೆಳದಿಯ ಚನ್ನಮ್ಮರಾಣಿ).ವೀರಮ್ಮಾಜಿಯರು ಪ್ರಸಿದ್ಧರು. ಇವರಲ್ಲಿ ಮೊದಲನೆಯ ಮತ್ತು ಕಡೆಯ ಇಬ್ಬರು ರಾಣಿಯರ ವೃತ್ತಾಂತವನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಿದೆ.

ಭದ್ರಮ್ಮಾಜಿ

~~ಇಕ್ಕೇರಿಯ ವೆಂಕಟಪ್ಪನಾಯಕ(೧೫೮೬–೧೬೨೯)ನು ತನ್ನ ಪತ್ನಿಯರಲ್ಲೊಬ್ಬ~~

ಭದ್ರಮ್ಮಾಜಿ

ಇಕ್ಕೇರಿಯ ವೆಂಕಟಪ್ಪನಾಯಕ (೧೫೮೨-೧೬೨೯)ನು ತನ್ನ ಪತ್ನಿಯರಲ್ಲೊಬ್ಬಳಿಂದ ವೀರಮಾಂಬೆಯ ಹೆಸರಿನಲ್ಲಿ ಅಭಿನವ ವೀರಾಂಬಾಪುರ ಎಂಬ ಅಗ್ರಹಾರವನ್ನು ಕಟ್ಟಿಸಿ ಸರ್ವಬ್ರಾಹ್ಮಣರಿಗೆ 'ಶಿವಾರ್ಪಿತವಾಗಿ ಧಾರೆಯನೆರೆದು ಸ್ಥಿರ ಶಾಸನಮಂ ಬರೆಸಿ' ಕೊಟ್ಟನಲ್ಲದೆ ಬಾರಕೂರು ಜಿಲ್ಲೆ ಹಳ್ಳಿ ಅರಗ ಶಂಕರನಾರಾಯಣ ಸಾಗರ ಬೋಕೂರು ಕೊಡಿಯಾಲಗಳಲ್ಲಿ ಮಹತ್ತಿನ ಮಠಗಳನ್ನು ಕಟ್ಟಿಸಿ 'ಶಿವ ಜಂಗಮಾರ್ಥಂ ಶಿವಾರ್ಪಿತವಾಗಿ ಧಾರೆಯನೆರೆದು ಸ್ಥಿರ ಶಾಸನಮಂ ಬರೆಸಿ' ಕೊಟ್ಟನೆಂದು ಗೊತ್ತಾಗುತ್ತದೆ. ಆದರೆ ಭದ್ರಾಂಬೆಯ ಹೆಸರನ್ನು ಯಾವ ಶಾಸನವೂ ಹೊಗಳುವುದಿಲ್ಲ. ಇಟಲಿ ದೇಶದ ಪಿಯಟ್ರೋ ಡೆಲ್ಲವೆಲ್ಲೆ ಎಂಬುವನು ತನ್ನ ಪ್ರವಾಸ ಕಥನದಲ್ಲಿ ಭದ್ರಮ್ಮಾಜಿಯ ವೃತ್ತಾಂತವನ್ನು ತಿಳಿಸಿ ಆ ತಾಯಿಯ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದ್ದಾನೆ; ಆ ಮಹಾತಾಯಿಯ ವೃತ್ತಾಂತವನ್ನು ಆತನೇ ಹೇಳಲಿ :

'೨೨ನೆಯ ತಾರೀಕು (೨೨-೧೦-೧೬೨೩) ವೆಂಕಟಪ್ಪ ನಾಯಕನ ಮೆಚ್ಚಿನ ರಾಣಿ ತೀರಿಕೊಂಡಳೆಂಬ ಸುದ್ದಿ ಬಂತು. ವಯಸ್ಸಾದ ಆಕೆಯ ಹೆಸರು ಬದ್ರ ಅಮಾ (Badra Ama=ಭದ್ರಮ್ಮ). 'ಲಿಂಗವಂತ್' (Lingvant) ಮನೆತನದ ಶ್ರೀಮಂತನೊಬ್ಬನ ಮಗಳು ಆಕೆ. ವೆಂಕಟಪ್ಪ ನಾಯಕನೂ ಲಿಂಗವಂತ. ಭದ್ರ ಎಂಬುದು ಆಕೆಯ ಹೆಸರು; ಅಮಾ ಎಂದರೆ ರಾಣಿ ಅಥವ ಒಡತಿ........ ರಾಣಿಯ ಮರಣ ಹಾಗೂ ಉತ್ತರ ಕ್ರಿಯೆಗಳು ನಾವು ಇಲ್ಲಿಂದ ಹೊರಡುವುದನ್ನು ಎಷ್ಟು ಕಾಲ ನಿಧಾನ ಮಾಡುತ್ತವೋ ಎಂದು ಹೇಳಲಾರೆ.

ಈ ರಾಣಿಯನ್ನು ಕುರಿತು ಹೇಳುವ ಒಂದು ಕಥೆಯನ್ನು ನಾನು ಹೇಳದಿರಲಾರೆ. ಇಲ್ಲಿಗೆ ಹನ್ನೆರಡು ಹದಿಮೂರು ವರ್ಷಗಳ ಹಿಂದೆ, ಅಂದರೆ ರಾಣಿಗೆ ಮೂವತ್ತೈದು ವರ್ಷ ವಯಸ್ಸಾಗಿರುವಾಗ ವೆಂಕಟಪ್ಪ ನಾಯಕ ಒಬ್ಬ ಮೂರು(ಮುಸಲ್ಮಾನ)ಹೆಂಗಸಿನಲ್ಲಿ ಅನುರಕ್ತನಾಗಿ ಆಗಾಗ್ಗೆ ಆಕೆ ಇದ್ದ ಒಂದು ಕೋಟೆಗೇ ಹೋಗಿ ಬರುತ್ತಿದ್ದನೆಂಬ ವಿಚಾರ ಬದ್ರ ಅಮಾಳ ಕಿವಿಗೆ ಬಿತ್ತು. ಬದ್ರ ಅಮಾ ಗಂಡನಿಗೆ ಬುದ್ಧಿ ಹೇಳಿದಳು. ಕೂಡಿದ ಹೆಂಡತಿ ಬಿಟ್ಟು ಪರಸ್ತ್ರೀ ಸಹವಾಸ ಮಾಡಿದ್ದೂ ಒಂದು ತಪ್ಪಾದರೆ, ಹೆಂಡ ಕುಡಿದು ಖಂಡತಿನ್ನುವ ಮೂರ್ ಹೆಂಗಸಿನ ಸಹವಾಸ ಬೆಳೆಸಿ ತನ್ನ ಕುಲವನ್ನೇ ಕೆಡಿಸಿಕೊಂಡದ್ದು ಇನ್ನೊಂದು ತಪ್ಪು ಎಂದಳು. ಹೆಣ್ಣಿನ ಆಸೆ ಇದ್ದರೆ ಸ್ವಜಾತಿಯವಳೊಬ್ಬಳನ್ನು ಕಟ್ಟಿಕೊಳ್ಳಬಹುದಾಗಿತ್ತು; ಅದನ್ನು ತಾನು ಸಹಿಸಿಕೊಳ್ಳುತ್ತಿದ್ದಳು. ಅದು ಬಿಟ್ಟು ಮೂರ್ ಹೆಂಗಸಿನ ಸಹವಾಸ ಬೆಳೆಸಿದ್ದು. ಈ ಕಾರಣ ತನಗೂ ಆತನಿಗೂ ಯಾವ ಸಂಬಂಧವೂ ಇಲ್ಲವೆಂದು ಹೇಳಿ ಬಿಟ್ಟಳು. ಹಾಗೆ ಹೇಳಿ ಬಿಟ್ಟು ಆಕೆ ಮುಂದೆ ತಾವಿಬ್ಬರು ತಂದೆ ಮಗಳೋಪಾದಿಯಲ್ಲಿ ಇರತಕ್ಕದ್ದೆಂದು ಶಪಥ ಮಾಡಿದಳು. ಅಂದಿನಿಂದ ಬದ್ರ ಅಮಾ ಗಂಡನನ್ನು ತಂದೆಯಂತೆ ನೋಡಿಕೊಂಡು ಆತನ ಮನೆಯಲ್ಲಿ ಕಾಲ ಕಳೆದಳು.

ಮನ ಮೆಚ್ಚಿದ ರಾಣಿಯ ಮನಸ್ಸನ್ನು ಬದಲಿಸಲು ವೆಂಕಟಪ್ಪನಾಯಕ ಬಹಳ

ಪ್ರಯತ್ನಿಸಿದ; ಯಾವ ಪ್ರಾಯಶ್ಚಿತ್ತಕ್ಕೂ ತಾನೊಪ್ಪುವೆನೆಂದು ಹೇಳಿದ. ೨೦೦೦೦ ಪಗೋಡ ಹಣವನ್ನು ದಾನಮಾಡಿ ಪಾಪ ಪರಿಹಾರ ಮಾಡಿಕೊಳ್ಳುವುದಾಗಿಯೂ ಹೇಳಿದ. ಆದರೆ ಅವೆಲ್ಲ ಬದ್ರ ಅಮ್ಮನ ಮನಸ್ಸನ್ನು ಬದಲಿಸಲು ಶಕ್ಯವಾಗಲಿಲ್ಲ. ಸಾಯುವವರೆಗೆ ಆಕೆ ತನ್ನ ಶಪಥವನ್ನು ಮುರಿಯಲಿಲ್ಲ. ಈ ಕಾರಣದಿಂದ ಆಕೆಯನ್ನು ವೆಂಕಟಪ್ಪನಾಯಕ ಕೊನೆಕೊನೆಗೆ ಇನ್ನೂ ಹೆಚ್ಚು ಪ್ರೀತಿಸುವಂತೆ ಮಾಡಿತು. ಹೀಗಾಗಿ ಆಕೆಯ ಮರಣ ನಾಯಕನಿಗೆ ಬಹಳ ದುಃಖವನ್ನುಂಟು ಮಾಡಿತು.

(ಪ್ರವಾಸಿ ಕಂಡ ಇಂಡಿಯಾ ನಂ. ೪, ಪುಟ ೨೧೪; ಅನು–ಎಚ್. ಎಲ್. ನಾಗೇಗೌಡ)

ಕೆಳದಿಯ ರಾಣಿಯರಲ್ಲನೇಕರು ತಮ್ಮ ಗಂಡಂದಿರು ಲಿಂಗೈಕ್ಯರಾದರೆ ಅವರೊಂದಿಗೇ ಹೂಳಿಸಿ ಕೊಳ್ಳುತ್ತಿದ್ದರು. ಇದಕ್ಕೆ ಹಲವು ಉದಾಹರಣೆಗಳುಂಟು. (ಕೆಲವರು ಮಾತ್ರ ರಾಜ್ಯದ ಹಿತರಕ್ಷಣೆಯ ದೃಷ್ಟಿಯಿಂದ; ವಿಧವೆಯರಾಗಿಯೂ ಬದುಕಿರುತ್ತಿದ್ದರು). ಆದರೆ ಬದ್ರಮ್ಮಾಜಿಗೆ ಮೊದಲೇ ವೆಂಕಟಪ್ಪನಾಯಕನೇನಾದರೂ ಸತ್ತಿದ್ದರೆ ನಿಜವಾಗಿಯೂ ಆತನೊಟ್ಟಿಗೆ ಸಮಾಧಿಸ್ಥಳಾಗುತ್ತಿರಲಿಲ್ಲ. ಕೆಳದಿಯ ರಾಜಮನೆತನದ ಮಹಿಳೆಯರು ಶೀಲ ಸೌಜನ್ಯ ಸದಾಚಾರ ಸತ್‌ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುತ್ತಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಭದ್ರಮ್ಮ ಅಂತಹ ಮಹಾಮಾನಿನಿಯ ಪ್ರತಿನಿಧಿ ಎನ್ನಬಹುದು.

ಶ್ರೀಮಂತರ ಮನೆಯಲ್ಲಿ ಹುಟ್ಟಿದಳು; ಮಹಾಮುತ್ಸದ್ದಿಯೂ ಮಹಾಪರಾಕ್ರಮಿಯೂ ಆದ ದೊರೆಯ ಕೈ ಹಿಡಿದಳು. ಆದರೆ ತಾನು ಏನೆಂಬುದನ್ನು ತೋರಿಸಿ ಕೊಟ್ಟಳು. ಭದ್ರಮ್ಮ ರಾಣಿ ಹುಟ್ಟಿದ ಮನೆಗೂ ಹೊಕ್ಕ ಮನೆಗೂ ಹೆಸರು ಬರುವಂತೆ ನಡೆದುಕೊಂಡಳು. ನಡೆನುಡಿಗಳ ಶ್ರೀಮಂತಿಕೆಯೇ ಶ್ರೀಮಂತಿಕೆ ಎಂಬುದನ್ನು ಅರಿತು ಅದರಂತೆ ಆಚರಿಸಿದ ಮಹಾಮಹಿಳೆ ಈಕೆ.

ವೀರಮ್ಮಾಜಿ :

ಈಕೆಯು ಪಾಳ್ಯದ ಶಿವಲಿಂಗಪ್ಪನ ಕುಮಾರಿಯಾಗಿದ್ದಾಗ ಚನ್ನವೀರಮ್ಮ, ಕಿರಿಯ ಬಸವಪ್ಪನಾಯಕ (೧೭೩೯–೧೭೫೪) ರನ್ನು ವರಿಸಿದ ಮೇಲೆ ವೀರಮ್ಮಾಜಿ. ಆದರೆ ಈಗ ಬಿದನೂರಿನ ವೀರರಾಣಿ ಎಂಬುದೇ ಈಕೆಗೆ ಒಪ್ಪುವಂತಹ ಹೆಸರು ಮತ್ತು ಬಿರುದು.

ಪತಿಯ ಮರಣಾನಂತರ ದತ್ತುಪುತ್ರ ಚನ್ನಬಸವನಾಯಕನ ಹೆಸರಿನಲ್ಲಿ ತಾನೇ ರಾಜ್ಯ ಕಾರಬಾರಗಳನ್ನು ದಕ್ಷತೆಯಿಂದಲೂ ಚಾಣಾಕ್ಷತೆಯಿಂದಲೂ ನಡೆಸಿದಳು. ಹೊರಗಿನ ಶತ್ರುಗಳನ್ನು ನೆರೆಕೆರೆಯ ಪುಡಿಯರಸುಗಳನ್ನು ಚತುರೋಪಾಯದಿಂದ ಅಡಗಿಸಿದಳು. ರಾಜ್ಯದಲ್ಲಿದ್ದ ಮಠಮಂದಿರಗಳಿಗೂ ದೇವಸ್ಥಾನಗಳಿಗೂ ಉದಾರವಾಗಿ ಪ್ರೋತ್ಸಾಹವಿತ್ತಳು. ಡಂಬಳದ ಸಿದ್ಧೇಶ್ವರನಿಗೆ ಉಂಬಳಿ ಉತ್ತಾರಗಳನ್ನು ಬಿಟ್ಟಳಲ್ಲದೆ ಅಲ್ಲಿ ರಥೋತ್ಸವವೇ ಮೊದಲಾದ ದೇವತಾಕಾರ್ಯಗಳು ಸಾಂಗವಾಗಿ ನೆರವೇರಲು ಬೇಕಾದ ಏನೆಲ್ಲವನ್ನೂ ಮಾಡಿದಳು. ಹಂಗರವಳ್ಳಿದ್ದ ಮುರುಗಿಸಮಯದ ಮಠಕ್ಕೆ

ಚನ್ನವೀರದೇವರನ್ನು ನಿಯಮಿಸಿ ಪ್ರಜೆಗಳಲ್ಲಿ ಸದಾಚಾರ ಸದ್ಭಕ್ತಿಗಳು ನೆಲೆಗೊಳ್ಳುವಂತೆ ಮಾಡಿದಳು.

ಸರ್ವಾಧಿಕಾರಿಯಾಗಿದ್ದ ಮುಹದೇವ ಪುರದ ದೇವಪ್ಪನನ್ನು ಆತನ ವಿರೋಧಿಗಳು ಕೊಲೆ ಮಾಡಿದರು. ರಾಣಿ ಧೃತಿಗೆಡಲಿಲ್ಲ. ಆ ಕೂಡಲೆ ಬಸವಲಿಂಗಯ್ಯನನ್ನು ಸರ್ವಾಧಿಕಾರಿಯಾಗಿ ನೇಮಿಸಿಕೊಂಡು ಎಂದಿನಂತೆ ರಾಜ್ಯದ ಕಾರ್ಯವನ್ನು ನಿರ್ವಹಿಸಿದಳು. ಈ ಮಧ್ಯೆ ದತ್ತುಪುತ್ರನಾದ ಚನ್ನಬಸವನಾಯಕನು ರೋಗಪೀಡಿತನಾಗಿ ಇನ್ನೂ ಹದಿಹರೆಯದವನಾಗಿದ್ದಾಗಲೇ ತೀರಿಕೊಂಡನು. ರಾಣಿಯು ಈ ಆಘಾತವನ್ನು ತಡೆದುಕೊಂಡಳು. ತನ್ನ ಸೋದರಮಾವನಾದ ಬಂಕಾಪುರದ ಚನ್ನವೀರಶೆಟ್ಟರ ಕಿರಿಯ ಮಗನನ್ನು ರಾಜ್ಯದ ಮುಖ್ಯರ ಮತ್ತು ಗುರಿಕಾರರ ಸಮ್ಮತಿಯನ್ನು ಪಡೆದು ದತ್ತು ತೆಗೆದುಕೊಂಡಳು. ಆತನೇ ಕೆಳದಿ ಸಂಸ್ಥಾನದ ಕಡೆಯ ರಾಜಕುಮಾರನಾದ ಸೋಮಶೇಖರನಾಯಕ.

ವೀರಮ್ಮಾಜಿಯು ರಾಜ್ಯಕಾರ್ಯದ ಜಂಜಾಟದಲ್ಲಿಯೂ ಧರ್ಮಕಾರ್ಯಗಳಲ್ಲಿಯೂ ನಿರತಳಾಗಿಯೇ ಇರುತ್ತಿದ್ದಳು. ಸೋಮಶೇಖರನಾಯಕನನ್ನು ದತ್ತು ತೆಗೆದುಕೊಂಡ ಹೊಸತರಲ್ಲಿಯೇ ಆಗ ಶೃಂಗೇರಿ ಮಠಾಧೀಶರಾಗಿದ್ದ ಅಭಿನವ ಸಚ್ಚಿದಾನಂದ-ಭಾರತಿ ಸ್ವಾಮಿಗಳನ್ನು ರಾಜಧಾನಿಗೆ ಬರಮಾಡಿಕೊಂಡಳು. ನಾಮದ ಚಾವಡಿಯಲ್ಲಿ ಅವರ ಬಿಡಾರಕ್ಕೆ ಏರ್ಪಾಡಾಯಿತು. ಬಣ್ಣದ ಚಾವಡಿಯಲ್ಲಿ ಸ್ವಾಮಿಗಳ ಸಂದರ್ಶನ ಮಾಡಿ ಆಶೀರ್ವಾದ ಪಡೆದಳಲ್ಲದೆ ಅವರಿಗೆ ಸುಯೋಗ್ಯವಾದ ಉಡುಗೊರೆಗಳನ್ನಿತ್ತು ಗೌರವಿಸಿದಳು. ಆಕೆಯ ಅಪ್ಪಣೆಯಂತೆ ಭಕ್ತಾದಿಗಳು ಬಸವಬೀಣವನ್ನು ಬಹುಸೊಗಸಾಗಿ ಸಿಂಗರಿಸಿದರಲ್ಲದೆ ಶ್ರೀ ಸ್ವಾಮಿಗಳನ್ನು ಅಲ್ಲಿಗೆ ಬಿಜಯ ಮಾಡಿಸಿಕೊಂಡು ಭಕ್ತಿ ಕಾಣಿಕೆಗಳನ್ನು ಒಪ್ಪಿಸಿದರು. ಹೀಗೆಯೇ ನಗರದ ವರ್ತಕರೂ ಗುರಿಕಾರರೂ ಉನ್ನತಾಧಿಕಾರಿಗಳೂ ಶ್ರೀ ಗುರುಗಳನ್ನು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ದು ದರ್ಶನಾಶೀರ್ವಾದಗಳನ್ನು ಪಡೆದು ಕಾಣಿಕೆಗಳನ್ನು ಅರ್ಪಿಸಿದರು. ಅನಂತರ, ಲಿಂಗಣ್ಣಕವಿಯೇ ಹೇಳುವಂತೆ ರಾಣಿಯು 'ಸ್ವಾಮಿಗಳ್ಗತ್ಯಂತ ದಿವ್ಯವಾದ ಸ್ಫಟಿಕಲಿಂಗಮುಮಂ ಅನರ್ಘ್ಯರತ್ನ ಖಚಿತ ಗೋಪಾಲ ಕೃಷ್ಣಮೂರ್ತಿಯುಮಂ ಪದಕ ತಾಳಿ ಸರಪಣಿ ಸಹಿತಂ ಶಿವಾರ್ಪಿತವಾಗಿ ಧಾರೆಯನೆರೆದಳಲ್ಲದೆ ವಿದ್ಯಾಶಂಕರ ದೇವರಿಗೆ ಎಪ್ಪತ್ತುನಾಲ್ಕು ವರಹದ ಭೂಸ್ವಾಸ್ಥೆಯನ್ನು ಮಠಕ್ಕೆ ಬೇರೆ ಮುನ್ನೂರು ವರಹದ ಭೂಸ್ವಾಸ್ಥೆಯನ್ನು 'ಶಿವಾರ್ಪಿತವಾಗಿ ಉತ್ತಾರವಂ' ಮಾಡಿಸಿದಳು. ಇದೂ ಸಾಲದೆಂಬಂತೆ ಅನಿಯತ ಕಾಲದಲ್ಲಿ ಅರಮನೆಗೆ ಕೊಡಬೇಕಾಗಿದ್ದ ಉತ್ತಾರಪೊಗದಿಯನ್ನು ಮನ್ನಾಮಾಡಿದಳು; ಮಠದ ಸಾಲವನ್ನು ತಾನೇ ತೀರಿಸಿದಳು. ಹೀಗೆ, ಶೃಂಗೇರಿ ಮಠವು ವೀರಮ್ಮರಾಣಿಯಿಂದ ಎಲ್ಲ ಬಗೆಯ ನೆರವನ್ನೂ ಪಡೆಯಿತು. ಅಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳು ರಾಣಿಯ ವಿಶಾಲಭಾವನೆಯನ್ನು, ಧರ್ಮ ನಿಷ್ಠೆಯನ್ನು ಅತಿಶಯವಾಗಿ ಕೊಂಡಾಡಿ ಹರಸಿದರು.

ಪಶ್ಚಿಮ ಕರಾವಳಿಯಲ್ಲಿ ತಳವೂರಿದ್ದ ಆಂಗ್ಲ ವ್ಯಾಪಾರಿಗಳು ಈಕೆಯಲ್ಲಿಗೆ ಬಂದು ಹೊನ್ನಾವರದಲ್ಲಿ ಒಂದು ಕೋಟೆ ಕಟ್ಟಿಕೊಳ್ಳುವುದಕ್ಕೆ ಅನುಮತಿ ಬೇಡಿದರು. ವೀರ

ಮ್ಮಾಜಿಯು ಅನೇಕ ನಿಬಂಧನೆಗಳನ್ನು ಹಾಕಿ ಅವರಿಗೆ ಅನುಮತಿ ನೀಡಿದಳು. ಆ ನಿಬಂಧನೆಗಳಲ್ಲಿ ಒಂದು ತನ್ನ ರಾಜ್ಯದಲ್ಲಿ ಪ್ರಾಣಿವಧೆ ಮಾಡಕೂಡದು ಎಂಬುದು; 'ದಯವೇ ಧರ್ಮದ ಮೂಲವಯ್ಯಾ' ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು'ಎಂಬ ಧರ್ಮಸೂತ್ರಗಳ ಉದ್ದೇಶವನ್ನು ಅರಿತು ಅವುಗಳನ್ನು ರಾಜ್ಯಾಡಳಿತ ಸೂತ್ರಗಳನ್ನಾಗಿಯೂ ಮಾಡಿಕೊಂಡಿದ್ದುದು ಈ ತಾಯಿಯ ವೈಶಿಷ್ಟ್ಯ.

ಎರಡೂವರೆ ಶತಕಗಳ ಕಾಲ ಕೆಳದಿಯ ನಾಯಕರು ಕಟ್ಟಿ ಬೆಳೆಸಿ ಬಲಿಸಿ ಬೆಳಗಿಸಿದ ಮಲೆನಾಡು ರಾಜ್ಯವೂ ಅವರ ಮಕುಟಮಣಿ ಎನಿಸಿದ ಬಿದನೂರು ನಗರವೂ ವೀರಮ್ಮಾಜಿಯ ಆಳ್ವಿಕೆಯಲ್ಲಿಯೂ ತನ್ನ ಪೆಂಪು ಪ್ರತಿಷ್ಠೆಪವಿ ಪ್ರಭಾವವನ್ನು ಉಳಿಸಿಕೊಂಡೇ ಇದ್ದುವು. ನಾಡು ಕಾಡುಗಳೆರಡೂ ಸಂಪದ್ಭರಿತವಾಗಿ ಕಂಗೊಳಿಸುತ್ತಿದ್ದುವು. ಭತ್ತ, ಕಬ್ಬು, ತೆಂಗು, ಅಡಕೆ, ಏಲಕ್ಕಿ, ಮೆಣಸು ಮುಂತಾದುವು ಹೊಲಗದ್ದೆ ತೋಟಗಳಲ್ಲಿಯೂ ಶ್ರೀಗಂಧ, ತೇಗ, ಸಂದಿ ಮತ್ತಿ ಜಿತ್ತ, ಬಿದರು ಮುಂತಾದ ಮರಗಿಡ ಬಳ್ಳಿ ಹುಲ್ಲು ಪೊದರುಗಳು ಬೆಳೆದಿದ್ದ ಆ ನಿಬಿಡಾರಣ್ಯದಲ್ಲಿ ಬೆಳಕಿಗೆ ಕಾಲಿಡಲಿಂಬಿಲ್ಲ; ಅಲ್ಲಿಯ ಗಿರಿಕಂದರಗಳು ಭಯಂಕರ, ಸುಂದರ ನಿರಂತರವೂ ಮೃಗ ಪಕ್ಷಿ ಕ್ರಿಮಿಕೀಟ ಹಾವು ಹದ್ದುಗಳಿಂದ ಬಗೆಬಗೆಯ ಗರ್ಜನೆ, ಕೂಜನಗಳಿಂದ ಮೊರೆಯುತ್ತಿದ್ದಿತು. ಇಡೀ ರಾಜ್ಯವೇ ಸೌಂದರ್ಯ ಸೌಭಾಗ್ಯ ಸಂಪತ್ತುಗಳ ನೆಲೆವನೆಯಾಗಿದ್ದಿತು. ಕೆಳದಿ ರಾಜ್ಯದ ಮತ್ತೊಂದು ಹೆಚ್ಚುಗಾರಿಕೆ, ಅಲ್ಲಿಯ ಗಿರಿದುರ್ಗ ವನದುರ್ಗಗಳು. ಹೊಗಲಿಡೆಯಿಲ್ಲ, ಎಡೆಯಿದ್ದ ಕಡೆ ಕಡು ಭಯಂಕರವಾದ ಕಾಡಾನೆ, ಹುಲಿ. ಚಿರತೆ, ಮಿಕ, ಕಾಳಿಂಗಸರ್ಪ, ಹೆಬ್ಬಾವು, ಇಂಬುಳ.

ಬಿದನೂರು ನಗರದ ವೈಭೋಗವನ್ನು ಎಷ್ಟು ವರ್ಣಿಸಿದರು ತೀರದು. ಐಶ್ವರ್ಯ ಸೌಂದರ್ಯಗಳಲ್ಲಿ ಪ್ರೌಢದೇವರಾಯನ ಕಾಲದ ವಿಜಯ ನಗರವನ್ನು ನಡೆ ನುಡಿ ನಯ ನಾಜೂಕುಗಳಲ್ಲಿ ಕಲ್ಯಾಣ ಪಟ್ಟಣವನ್ನೂ ಹೋಲುತ್ತಿದ್ದಿತು. ಪ್ರವಾಸಿಯೊಬ್ಬನು ಈ ನಗರವನ್ನು ದಕ್ಷಿಣ ಭಾರತದ ಉಗ್ರಾಣವೆಂದು ಕರೆದಿದ್ದಾನೆ.

ಮೈಸೂರಿನ ನವಾಬ್ ಹೈದರಲ್ಲಿ ಖಾನನು ಚಾಣಕ್ಯದಿಂದ ಆಕ್ರಮಿಸಿ ಕೊಳ್ಳಲಿದ್ದ ಬಿದನೂರು ನಗರವು ಶಾಂತಿ ಸಮೃದ್ಧಿ ಸಲ್ಮೆಗಳಿಂದ ನಳನಳಿಸುತ್ತಿದ್ದಿತು. ಅದರ ಸುತ್ತಳತೆ ಮೂರು ಯೋಜನದಷ್ಟು. ಸುದೀರ್ಘವೂ ಅಗಲವೂ ಆದ ರಸ್ತೆಗಳು; ರಸ್ತೆಗಳ ಇಕ್ಕೆಲಗಳಲ್ಲಿಯೂ ಅನವರತವೂ ನೆರಳು ಕೊಡಬಲ್ಲ ಸಾಲುಮರಗಳು. ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುವ ತಿಳಿಗೊಳಗಳು, ಗದ್ದೆಗಳು, ತೋಟಗಳು, ಅವುಗಳ ನಡುವೆ ಎದ್ದು ಕಾಣುವ ದೊಡ್ಡ ದೊಡ್ಡ ಉಪ್ಪರಿಗೆ ಮನೆಗಳು. ಬಹುಪಾಲು ಶ್ರೀಮಂತರವೂ ಉನ್ನತಾಧಿಕಾರಿಗಳವೂ ಆಗಿದ್ದವು. ಕ್ರೈಸ್ತರೂ ಮುಸಲ್ಮಾನರೂ ಸೇರಿ ಎಲ್ಲ ಜನಾಂಗದವರೂ ಪ್ರೇಮಸೌಹಾರ್ದ ಸಹಕಾರಗಳಿಂದ ಬಾಳುತ್ತಿದ್ದರಲ್ಲ. ವೀರಬಣಂಜುಗಳು ವಿವಿಧ ಕಲೆಗಾರರು, ವಿದೇಶಿ ಪ್ರವಾಸಿಗಳು ನಿಯೋಗಿಗಳು ರಾಜಪರಿವಾರದವರು ಮೊದಲಾದವರಿದ್ದ ಆ ನಗರದ ಜನಸಂಖ್ಯೆ ೬೦೦೦೦ಕ್ಕೆ ಮಿಕ್ಕಿದ್ದಿತು. ಆದರೂ ಜನವೇ ಇಲ್ಲವೇನೋ ಎನ್ನಿಸುವಷ್ಟು ಪ್ರಶಾಂತತೆ, ಪ್ರಸನ್ನತೆ.

ಬಿದನೂರು ಅಂದಿನ ಭಾರತದ ಅತ್ಯಂತ ಸಂಪದ್ಭರಿತ ನಗರವೆಂಬುದನ್ನು ಅರಿತ ಶ್ರೀ
ಪಟ್ಟಣದ ಸರ್ವಾಧಿಕಾರಿಯಾಗಿದ್ದ ನವಾಬ್ ಹೈದರಲೀಖಾನನು ಅದನ್ನು ಆಕ್ರಮಿ
ಸಬೇಕೆಂಬ ಮಹತ್ವಾಕಾಂಕ್ಷೆಯಿಂದ ದಂಡೆತ್ತಿ ಬಂದನು. ವೀರರಾಣಿ ವೀರಮ್ಮಾಜಿಯು
ಆತನನ್ನು ಧೈರ್ಯದಿಂದ ಎದುರಿಸಿ ಒಂದು ತಿಂಗಳು ಕಾಲ ಕಾದಿದಳು. ಕೊನೆಗೆ ಶತ್ರು
ಗಳ ಪರಾಧೀನ; ಸೋತಳು. ಕರ್ನಾಟಕದ ಇತಿಹಾಸದಲ್ಲಿ ವೀರರಾಣಿ ಎಂಬ ಖ್ಯಾತಿ
ಯನ್ನು ಪಡೆದಳು. ಆ ದುಃಖಕರ ಸಂಗತಿಯನ್ನು ಇಲ್ಲಿ ನಿರೂಪಿಸಲು ಪ್ರಯತ್ನಿಸಿದೆ.

ಬಸವಪ್ಪನಾಯಕನಿದ್ದಾಗಲೇ ಸತಿಪತಿಯರಿಬ್ಬರೂ ದೇವರ ಮತ್ತು ಸಮಾಜದ
ವರ ಸಮ್ಮುಖದಲ್ಲಿ ಚನ್ನಬಸವಪ್ಪನಾಯಕನನ್ನು ಮಗನನ್ನಾಗಿ ಮಾಡಿಕೊಂಡಿದ್ದ
ರಷ್ಟೆ. ಆ ದತ್ತು ಪುತ್ರನು ಇನ್ನೂ ಹದಿವಯಸ್ಸಿನವನಾಗಿದ್ದಾಗಲೇ ಅಕಾಲ ಮರಣಕ್ಕೆ
ತುತ್ತಾದ ಘಟನೆಯೂ ವೀರಮ್ಮಾಜಿಯು ಸೋಮಶೇಖರ ನಾಯಕ ಎಂಬ ಮಗು
ವನ್ನು ಮತ್ತೆ ದತ್ತು ಪಡೆದ ವಿಷಯವೂ ವಿರೋಧಿಗಳ ಚಟುವಟಿಕೆಗಳಿಗೆ ವಿಶೇಷ ಅವ
ಕಾಶವನ್ನು ಒದಗಿಸಿದುವು.

ಈ ವಿರೋಧಿಗಳಲ್ಲಿ ಪ್ರಮುಖ ಹೈದರಲ್ಲೀಖಾನ್. ಅವನ ಹಸ್ತಕರನ್ನು ಬಿದ
ನೂರು ರಾಜ್ಯದಲ್ಲೆಲ್ಲಾ ಹರಿಯ ಬಿಟ್ಟು. ಆ ಹಸ್ತಕರೂ ಸ್ವಾರ್ಥಲಂಪಟರಾದ ಕೆಲವು
ಜನ ಬಿದನೂರು ರಾಜ್ಯದ ಮುಖಂಡರೂ ರಾಣಿಯ ಬಗೆಗೆ 'ಹೌದು ಹೌದು' ಎನ್ನು
ವಂತೆ ಕಥೆಗಳನ್ನು ಕಟ್ಟಿ ರಾಜ್ಯದ ಪ್ರಜೆಗಳಲ್ಲಿ ರಾಜ್ಯವನ್ನು ನೋಡಲು ಬಂದ ಪ್ರವಾ
ಸಿಗರಲ್ಲಿ ಪ್ರಚಾರ ಮಾಡಿದರು.

ರಾಣಿಯು ನಿಂಬಯ್ಯನೆಂಬವನನ್ನು ಸರ್ವಾಧಿಕಾರಿಯಾಗಿ ನೇಮಿಸಿಕೊಂಡು
ಅವನೊಂದಿಗೆ ಅನೀತಿಯುತವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾಳೆ. ಯುವ
ರಾಜ ಚನ್ನಬಸವನಾಯಕನು ಈ ಸಂಬಂಧದ ಭ್ರಷ್ಟಾಚಾರಕ್ಕೆ ಅಡ್ಡಿ ಪಡಿಸುತ್ತಿರುವ
ನೆಂದು ರಾಣಿಯೇ ಅವನನ್ನು ಗೋಣು ಹಿಚುಕಿ ಹೂಳಿಸಿಬಿಟ್ಟಳು. ಅನಂತರ,
ಇನ್ನೂ ಎಳೆಯ ಕೂಸಾದ ಒಂದು ಗಂಡು ಮಗುವನ್ನು ದತ್ತು ತೆಗೆದುಕೊಂಡು
ಅದಕ್ಕೆ ಸೋಮಶೇಖರನಾಯಕ ಎಂದು ಹೆಸರಿಟ್ಟುಕೊಂಡಳು. ರಾಜ್ಯದ ಎಲ್ಲೆಡೆ
ಗಳಲ್ಲಿಯೂ ಅರಾಜಕತೆ, ಅನಾಚಾರ, ಭ್ರಷ್ಟಾಚಾರ; ಆಡಳಿತದಲ್ಲಿ ಬಿಗಿಯಿಲ್ಲ; ದಕ್ಷ
ಸೇನಾನಿಗಳ ಅಭಾವದಿಂದ ದುಷ್ಟ ಶಿಕ್ಷಣ ಶಿಷ್ಟಪರಿಪಾಲನಾ ಕಾರ್ಯಗಳು ನಿಂತೇ
ಹೋಗಿವೆ; ಸೈನ್ಯದಲ್ಲಿ ಶಿಸ್ತು ಸಂಘಟನೆಗಳಿಲ್ಲ —ಎಂದು ಮುಂತಾಗಿ ಪ್ರಚಾರ
ಮಾಡಲು ಆರಂಭಿಸಿದರು. (ಈ ಕಟ್ಟುಕತೆಗಳನ್ನು ನಿಜವಾಗಿಯೂ ನಡೆದ ಸಂಗತಿ
ಗಳೆಂದರಿತು ಇಬ್ಬರು ಲೇಖಕರು ಎರಡು ಬರಡು ಕಾದಂಬರಿಗಳನ್ನು ಬರೆದಿದ್ದಾರೆ.)

ಆ ಕಾಲದಲ್ಲಿ ವೇಷಧಾರಿಗಳ ಹಾವಳಿ ವಿಶೇಷವಾಗಿತ್ತು. ರಾಜ್ಯಕ್ಕೆ ತಾವೇ
ನಿಜವಾದ ಹಕ್ಕುದಾರರೆಂದೂ ತಮ್ಮನ್ನು ಮೋಸದಿಂದ ಗದ್ದೆಯಿಂದ ಹಕ್ಕು
ದಾರರಲ್ಲದವರನ್ನು ಕುಳ್ಳಿರಿಸಿರುವರೆಂದೂ ಹೇಳಿಕೊಳ್ಳುತ್ತ ನಿರುದ್ಯೋಗಿಗಳಾದ ಪುಂಡ
ರನ್ನು ಕಟ್ಟಿಕೊಂಡು ನಾಡೆಬ್ಬಿಸುವುದೂ (ದಂಗೆ) ಪಿತೂರಿಮಾಡುವುದೂ ಅವರು
ಬಳಸುವ ತಂತ್ರಗಳಾಗಿದ್ದುವು. 'ಕುಶ್ಚಿತ ಶಿವಪ್ಪನಾಯಕನ ಮಗನು ವೇಷಧಾರಿ
ನಾಮನಾಂತು ಇರುತ್ತಿದ್ದನು. ಆ ವೇಷಧಾರಿಯನ್ನು ಗುತ್ತಳದ ಹನುಮಂತಗೌಡನ

ಮುಖದಲ್ಲಿ ಹಿಡಿತರಿಸಿ ಮರಿಯಪ್ಪ ಸೆಟ್ಟರು ಶಿರಚ್ಛೇದನ ಮಾಡಿದರು' ಎಂದು ಲಿಂಗಣ್ಣ ಕವಿಯೇ ಹೇಳಿದ್ದಾನೆ. (ಕೆಳದಿನೃಪ ವಿಜಯ, ಪ್ರ ೧೯-೨೧, ಪು. ೧೭೩) ಆರ್ಕಾಟ ನವಾಬನಾಗಲು ಹವಣಿಸುತ್ತಿದ್ದ ಚಂದಾಸಾಹೇಬನೂ 'ವೇಷಧಾರಿ'ಯೇ. ಈ ಕುಟಿಲತಂತ್ರವನ್ನು ಹೈದರನೂ ಅವನ ಹಸ್ತಕರೂ ಬಳಸಿಕೊಂಡು ಒಬ್ಬ ವೇಷ ಧಾರಿಯನ್ನು ಸೃಷ್ಟಿದರು. ಆತನೇ ಸಮಾಧಿಯಿಂದ ಎದ್ದು ಬಂದ 'ಚನ್ನಬಸವ ನಾಯಕ'.

ಈ ಚನ್ನಬಸವನಾಯಕನ ವಿಚಾರವಾಗಿ 'ಹೈದರನಾಮಾ' ಎಂಬ ಪುಸ್ತಕದಲ್ಲಿ ಒಂದು ರಮಣೀಯವಾದ ಕತೆಯುಂಟು. ಅದನ್ನೇ ಇಲ್ಲಿ ಉಲ್ಲೇಖಿಸಬಹುದು. 'ರಾಣಿಯ ಜಟಿ ಕ್ಯೆಯ್ಯಿಂದ್ದಾಯಂಣೆ ಒತ್ತುವಾಗ ಕ್ರಿತ್ತಿಮದಿಂದ್ದ ಚನ್ನಬಸಪ್ಪ ನಾಯಕನ ಕೊರಳು ಹಿಸುಕಿಸಿ, ಗುಣಿಯಲ್ಲಿ ಹಾಕಿ,........ಸದರಹು ಚನ್ನಬಸಪ್ಪ ನಾಯ್ಕನು ಪುರಾಪ್ರಾಣ ಹೋಗಿಯಿರಲಿಲ್ಲಾ, ಪ್ರಸುದುತಿರುಗಿ ಗುಣಿಯಿಂದಾ ಯದ್ದು ಬಂದು ಚಿತ್ರಕಲ್ಲಲ್ಲಿ ತನ್ನಬಳಿ ಯಿಧಾನೆ ಯಿದನಿಗ ಬಿದನೂರುರಾಜ್ಯ ಕೊಡ್ಸಿ ಬೇಕೆಂದು ಮದಕೆರೆನಾಯ್ಕರು ಹೇಳಲಾಗಿ ಅದೇ ಪ್ರಕಾರ ಮಾಡಿಸುತ್ತೇನೆಂದು ನವಾಬರು ಹೇಳಲಾಗಿ, ಅದೇ ಪ್ರಕಾರ ಆ ಸುಳ್ಳುಮಾತಿನ ಗೈಬುರಾಜನೆಂಬುವನಕರಶಿ ಭೇಟೀ ತೆಗೆದುಕೊಂಡು ಸಂಗಡ ಮದಕೆರೆ ನಾಯಕರ ಫವುಜು ಸಹಾ ಕರೆದುಕೊಂಡು ನಗರದ ಶೀಮೆಮೇಲೆ ಹೊರಟು ನವಾಬರು ಫವುಜ ಸುದಾಬಂದರು'.

ಹೈದರನು ಈ 'ಸುಳ್ಳುಮಾತಿನ ಗೈಬುರಾಜನನ್ನು' ಆನೆಯ ಮೇಲೆ ಅಂಬಾರಿ ಯಲ್ಲಿ ಅರಸನನ್ನಾಗಿ ಮಾಡುವೆನೆಂದು ಸುದ್ದಿಹರಡುತ್ತ ಇಕ್ಕೇರಿ ಸೀಮೆಯೊಳಕ್ಕೆ ಅಡಿಯಿರಿಸಿದನು.

'ಕೌಟಿಲ್ಯದಲ್ಲಿ ಚಾಣಕ್ಯನೆನಿಸಿದ್ದ ಹೈದರನು ತನ್ನ ಹಸ್ತಕರ ಮೂಲಕ ರಾಣಿ ವೀರಮ್ಮಾಜಿಯ ವಿಷಯದಲ್ಲಿ ಅಪಪ್ರಚಾರನಡೆಸಿ ಮಲೆನಾಡಿನ ಮುಗ್ಧ ಮಂದಿಯ ಮನವನ್ನು ಮಲಿನಗೊಳಿಸಿದ್ದನು. ಆ ಜನರು, ಹೈದರನು ತಮ್ಮ ರಾಜ್ಯವನ್ನೂ ತಮ್ಮ ರಾಜನನ್ನೂ ಉಳಿಸಲು ಬಂದಿರುವ ಮಹಾನುಭಾವನೆಂದು ಬಗೆದರು. ನಿಜವಾದ ಚನ್ನ ಬಸವನಾಯಕನನ್ನು ಎಂದೆಂದೂ ನೋಡಿರದ ಅವರು 'ಗಾಯಿಬುರಾಜ' ನನ್ನೆ ಚನ್ನ ಬಸವನಾಯಕನೆಂದು ಭ್ರಮಿಸಿಬಿಟ್ಟರು. ಹೈದರನಿಗೂ 'ವೇಷಧಾರಿ'ಗೂ ಎಲ್ಲಾ ಸಹಾಯ ಸಲಕರಣೆಗಳನ್ನು ಒದಗಿಸಿದರು. ಕಿಲ್ಲೇದಾರರು ಬಲು ಸಂತೋಷದಿಂದ ಅವರನ್ನು ಸ್ವಾಗತಿಸಿದರು. ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು 'ಖಾಸಾ ಸೈನ್ಯ' ಪರಿಜನರಿಂದ ಸುತ್ತುವರಿಯಲ್ಪಟ್ಟ ಹೈದರನ ಸೈನಿಕರು ಸುತ್ತುಗಾವಲಿನಲ್ಲಿ ಮೆರೆಯುತ್ತ ಮುಂದುವರಿಯುತ್ತಿದ್ದ 'ರಾಜಕುಮಾರ ವೇಷಧಾರಿ'ಯನ್ನು ಅವನ ಹತ್ತಿರಕ್ಕೆ ಹೋಗಿ ಕಣ್ಣಾರೆ ನೋಡಿ ಪರೀಕ್ಷಿಸಿ ಮಾತಾಡಿಸುವವನಿಗೆ ಎಂಟೆದೆ ಬೇಕು. ಅಂಥವರು ಯಾರಿದ್ದರು ಆಗ ? ಹೈದರನ ಕಪಟ ನಾಟಕ ಸಂಪೂರ್ಣ ಯಶಸ್ವಿಯಾ ಯಿತು. ಸಂತೇ ಬೆನ್ನೂರು ಮುಟ್ಟಿದ, ಅಲ್ಲಿಂದ ಬೆಂಕಿಪುರಕ್ಕೆ ಬಂದ. ಅಲ್ಲಿಂದ ಶಿವ ಮೊಗ್ಗೆಗೆ, ಅಲ್ಲಿಂದ ಕುಂಸಿಗೆ. ಆದರೆ ಮುಂದಿನ ದಾರಿ ಸುಗಮವಾಗಿರಲಿಲ್ಲ. (ಹೈದ ರನು ದಂಡೆತ್ತಿ ಬರುವ ಸಮಾಚಾರ ಬೇಹುಗಾರರ ಮೂಲಕ ರಾಣಿ ವೀರಮ್ಮಾಜಿಗೆ

ತಿಳಿಯಿತು. ಒಳಗಿನ ಶತ್ರುಗಳ ಕೈವಾಡದಿಂದಲೇ ಹೈದರು ರಾಜ್ಯದ ಗಡಿಯನ್ನು ದಾಟಿ ರಾಜಧಾನಿಯತ್ತ ಹರಿದು ಬರುತ್ತಿರುವನೆಂಬುದನ್ನು ಸರಿಯಾಗಿಯೇ ಊಹಿಸಿದಳು. ಸಂಧಾನದ ಮೂಲಕವೇ ಆತನನ್ನು ಹಿಂದಕ್ಕೆ ಕಳಿಸುವುದು ಸೂಕ್ತವೆಂದು ತೀರ್ಮಾನಿಸಿದಳು. ನಾಲ್ಕು ಲಕ್ಷ ವರಹಗಳನ್ನು ಕೊಡುವೆನೆಂದು ಹೇಳಿಕಳಿಸಿದಳು. ಅಷ್ಟು ಹೊತ್ತಿಗಾಗಲೇ ಹೈದರನಿಗೆ ಬಿದನೂರಿನ ವರೆಗೆ ಮುಂದುವರಿಯುವುದು ಮೃತ್ಯುವಿನ ದವಡೆಯನ್ನು ಹೊಕ್ಕಂತಾಗುವುದೆಂದು ಅರಿವಾಗಿತ್ತು. ಸಂಧಾನವನ್ನು ನೆಪ ಮಾಡಿಕೊಂಡು, ರಾಣಿಯು ಕಪ್ಪವನ್ನು ಕೊಡಲು ಒಪ್ಪಿದಳೆಂದು ಸಾರುತ್ತ ಹಿಂತಿರುಗುತ್ತಿದ್ದನೋ ಏನೋ. ಆದರೆ ಅದೇ ಸಮಯದಲ್ಲಿ ಕುಂಸಿಯ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದಿದ್ದ ಮೂಡಬಿದಿರೆಯ ಲಿಂಗಪ್ಪನೆಂಬುವನು ಮಾಗು ಚಾಚಿದ. ಆತನು ಹೈದರನನ್ನು ಕಂಡು, ತಾನು ಬಿದನೂರು ಸರ್ವಾಧಿಕಾರಿಯಾಗಿದ್ದವನೆಂದೂ ಅಲ್ಲಿಗೆ ಕೊಂಡೊಯ್ಯುವ ಹಾದಿ ತನಗೆ ಚೆನ್ನಾಗಿ ಗೊತ್ತೆಂದೂ ಅವನನ್ನು ಬಿದನೂರು ಕೋಟೆಯ ಹೆಬ್ಬಾಗಿಲಿಗೇ ಕರೆದೊಯ್ಯುವೆನೆಂದೂ ಭರವಸೆ ಕೊಟ್ಟನು. ಆದುದರಿಂದ ವೀರಮ್ಮಾಜಿಯು ನಡೆಸ ತಿಳಿಸಿದ ಸಂಧಾನ ಮುರಿದು ಬಿತ್ತು; ಹೈದರನಲ್ಲಿ ಧೈರ್ಯೋತ್ಸಾಹಗಳು ತುಂಬಿಕೊಂಡವು. ರಾಣಿಯು ತನಗೆ ಕೂಡಲೇ ಶರಣಾಗತಳಾಗಬೇಕೆಂದೂ ತಾನು ಕೊಡಿಸುವ ಪಿಂಚಣಿಯನ್ನು ಪಡೆದು ಶ್ರೀರಂಗಪಟ್ಟಣದಲ್ಲಿ ನಿರುಮ್ಮಳವಾಗಿರಬಹುದೆಂದೂ ಹೇಳಿಕಳಿಸಿದನು.

ಇದನ್ನು ಮೊದಲೇ ಊಹಿಸಿದ್ದ ರಾಣಿಯು ಸವಣೂರಿನ ನವಾಬ ಅಬ್ದುಲ್ ಹಕೀಮ ಖಾನನ ಬೆಂಬಲ ಪಡೆದು ಹೈದರನನ್ನು ಎದುರಿಸಿ ಸೋಲಿಸುವೆನೆಂದು ಪಣ ತೊಟ್ಟಳು. ಕೂಡಲೇ ಅಲ್ಲಿಗೆ ರಾಯಭಾರಿಯನ್ನು ಅಟ್ಟಿದಳು. ಸವಣೂರು ನವಾಬನು ತತ್ ಕ್ಷಣವೇ ೨೦೦೦ ರಾವುತರನ್ನೂ ೪೦೦೦ ಕಾಲಾಳು ಅಟ್ಟಿದನಲ್ಲದೆ ತಾನೂ ಸುಸಜ್ಜಿತ ಸೈನ್ಯದೊಂದಿಗೆ ಬಾಲಾ ಎಂಬ ನದಿಯ ತೀರದಲ್ಲಿ ಪಾಳೆಯ ಬಿಟ್ಟನು.

ಮೂವತ್ತು ದಿನಗಳ ಕಾಲ ಘನಘೋರ ಸಂಗ್ರಾಮ ನಡೆಯಿತು. ರಾಣಿಯು ಪ್ರತ್ಯಕ್ಷ ರುದ್ರಕಾಳಿಯೇ ಆಗಿ ದಳವಾಯಿ ವೀರಭದ್ರನಾಯಕನನ್ನು ಇತರ ಸಿಪಾಯಿಗಳನ್ನು 'ಜೈ ವೀರಭದ್ರ' ಎಂದು ಜಯಘೋಷಿಸುತ್ತ ಹುರಿದುಂಬಿಸುತ್ತಿದ್ದಳು. ಬಿದನೂರಿನ ವೀರರ ಸಿಪಾಯಿಗಳ ಕಡು ನಿಷ್ಠೆಯಿಂದಲೂ ವೀರಭದ್ರಾವೇಶದಿಂದಲೂ ಕಾದಾಡುತ್ತಿದ್ದರು. ಹೈದರನೇನೋ ಮುಂದುವರಿಯುತ್ತಿದ್ದನು. ಹೆಣಗಳ ಬಣವೆಯ ಮೇಲೆ, ಒಂದೊಂದು ಅಂಗುಲ ನೆಲಕ್ಕೂ ತಾನು ತೆಗೆದ ಬೆಲೆ ದುರಾಪ್ಯವಾಗಿರುತ್ತಿದ್ದಿತು. ಒಬ್ಬ ಹೆಂಗಸನ್ನು ಸೋಲಿಸಲು ಈ ಪರಿಯಲ್ಲಿ ಹೆಣಗ ಬೇಕಾಯಿತಲ್ಲ ಎಂದು ಕುದಿಯುತ್ತಿದ್ದನು. ಮುಸಲ್ಮಾನನಾದ ತನನ್ನು ಎದುರಿಸಿ ಕಾದಲು ಮುಸಲ್ಮಾನನ ಸಹಾಯವನ್ನೇ ಪಡೆದ ರಾಣಿಯ ಮುತ್ಸದ್ದಿತನವನ್ನು ಕಂಡು ಬೆರಳು ಕಚ್ಚಿದನು.

ಮಳೆಗಾಲ ಸಮೀಪಿಸುತ್ತಿದ್ದಂತೆ ಹೈದರನ ತಳಮಳವು ಬೆಳೆಯ ತೊಡಗಿತ್ತು. ಮಳೆ ಬೀಳುವುದರೊಳಗೆ ಬಿದನೂರು ವಶವಾದರೆ ಆದಾಗೇ; ಇಲ್ಲದಿದ್ದರೆ ತಾನು ತನ್ನ ಸೈನಿಕರೂ ಸ್ವಯಂ ಚನ್ನಬಸವನಾಯಕನೂ ಪರಿಪರಿಯ ಬವಣೆಗೊಳಗಾಗ

ಶ್ರೀರಂಗಪಟ್ಟಣಕ್ಕೆ ತೆರಳಬೇಕಾಗುವುದೇನೋ ಎಂದು ಯೋಚನೆಗೊಳಗಾದನು. ತನ್ನ ಕಡೆಯ ಸೈನಿಕರನ್ನು ಪ್ರಚೋದನೆಗೊಳಿಸುವುದೊಂದೇ ಮಾರ್ಗ ಎಂದೆನ್ನಿಸಿತವನಿಗೆ.

‘ನನ್ನ ನೆಚ್ಚಿನ ಸಿಪಾಯಿಗಳೇ, ಇಂದೇ, ಈಗಲೇ ನಮಗೆ ಜಯ ಲಭಿಸಲಿದೆ. ನಗರ ಪ್ರವೇಶ ಮಾಡಿದ ಕೂಡಲೇ, ನೀವು ಮನೆಮನೆಗೆ ನುಗ್ಗಿ ಲೂಟಿಮಾಡಲು ‘ಪರವಾನಿಗೆ’ ಕೊಟ್ಟಿದ್ದೇನೆ. ನೀವು ಲೂಟಿ ಮಾಡಿದ ವಸ್ತುಗಳೇನಿದ್ದರೂ ಚಿನ್ನ, ಬೆಳ್ಳಿವಡವೆ, ವಸ್ತ್ರ –ಎಲ್ಲವೂ ನಿಮ್ಮದೇ’ ಎಂದು ಘೋಷಿಸಿದನು. ಆಗ ಈತನ ಸೈನಿಕರೆಲ್ಲರೂ ಸ್ವಾರ್ಥಮತ್ತರಾಗಿ ಆರ್ಭಟಿಸುತ್ತ ಮದ್ದು ಗುಂಡುಗಳನ್ನು ಹಾರಿಸುತ್ತ ಒಂದೇ ಹಂತಕ್ಕೆ ಲಗ್ಗೆಯೇರಿದರು. ಬಿದನೂರಿನ ವೀರರೂ ಸವಣೂರಿನ ಸೈನಿಕರೂ ತಮ್ಮಲ್ಲಿ ಒಂದೇ ಒಂದು ತೊಟ್ಟು ರಕ್ತವಿದ್ದಾಗಲೂ ತಮ್ಮ ಶೌರ್ಯ ಸಾಹಸಗಳನ್ನು ಮೆರೆದು ವೀರಸ್ವರ್ಗವನ್ನು ಪಡೆದರು. ಬಲು ಬಿರುಸಿನಿಂದ ನಡೆದಿತ್ತು ಕದನ.

ವೀರರಾಣಿ ವೀರಮ್ಮಾಜಿಯು ಪರಿಸ್ಥಿತಿ ಅನುಕೂಲವಾಗಿಲ್ಲವೆಂಬುದನ್ನು ಅರಿತಳು. ಹೈದರನು ಆ ನಗರದ ಅಪಾರ ಐಶ್ವರ್ಯಕ್ಕಾಗಿ ಬಿದನೂರನ್ನು ಆಕ್ರಮಿಸಲು ಆಶಿಸಿದ್ದನಷ್ಟೆ. ಆ ಐಶ್ವರ್ಯವು ಅವನಿಗೊದಕ್ಕೆ ಬಾರದು, ದಕ್ಕಕೂಡದು ಎಂದು ನಿಶ್ಚಯಿಸಿದಳು. ತನ್ನ ಅಚ್ಚುಮೆಚ್ಚಿನ ಅಕ್ಕರೆಯ ಅರಮನೆಗೂ ಲಕ್ಷ್ಮೀದೇವಿಯು ನೆಲಮನೆಯೆನಿಸಿದ್ದ ತನ್ನ ಶಯ್ಯಾಗೃಹಕ್ಕೂ ಬೆಂಕಿಯಿಡಿರೆಂದೂ ಆಜ್ಞೆಮಾಡಿದಳು. ಆ ಅರಮನೆಯೇನು ಸಾಮಾನ್ಯವಾದುದಾಗಿರಲಿಲ್ಲ. ಕಲಾರಸಿಕನೂ ಶೂರಾಗ್ರಣಿಯೂ ಆದ ಸೋಮಶೇಖರನಾಯಕನು ತಾನೇ ನಿಂತು ಕಟ್ಟಿಸಿದುದಾಗಿತ್ತು. ಅದರ ನಿರ್ಮಾಣಕ್ಕಾಗಿಯೇ ಚೀನಾದೇಶದ ಇಟ್ಟಂಗಿಗಳನ್ನು ಹೆಂಚುಗಳನ್ನು ತರಿಸಿತ್ತು. ಈ ದಿವ್ಯಹರ್ಮ್ಯದ ಒಂದೊಂದೆ ಕರುಮನೆಯ ಗೋಡೆಗೋಡೆಗೂ ಬಂಗಾರದ ತಗಡುಗಳನ್ನು; ಬಾಗಿಲು ಬೆಸಗೆಗೂಡುಗಳಿಗೆ ಮುತ್ತು ರತ್ನ ವಜ್ರ ವೈಢೂರ್ಯಗಳ ಅಲಂಕಾರ; ಅವೆಲ್ಲವೂ ಉರಿದು ಒಡೆದು ಸಿಡಿದು ಪುಡಿ ಪುಡಿಯಾದುವು. ರಾಣಿಯ ಅತ್ಯಮೂಲ್ಯ ಒಡವೆ ವಸ್ತ್ರವಸ್ತುಗಳೂ ಬೆಂಕಿಗೆ ಆಹುತಿಯಾದುವು, ಇಲ್ಲವೆ, ಕಲ್ಲುಗಾಣದಲ್ಲಿ ಹುಡಿ ಹುಡಿಯಾದುವು. ಅದನ್ನೆಲ್ಲಾ ನೋಡಿ ಕಡು ದುಗುಡದಿಂದಕೂಡಿ, ಮೂರೋ ನಾಲ್ಕೋ ಜನ ನಂಬುಗೆಯ ಸೇವಕರನ್ನು ಕರೆದುಕೊಂಡು ಅರಮನೆಯ ಜಲಹರಿಯ ಮೂಲಕ ಹೊರಬಂದಳು ಬೆಡಗಿನ ಬಿದನೂರಿನ ರಾಣಿ. ನಿಬಿಡಕಾನನದ ನಡುವಿನ ಹಾದಿಯಲ್ಲಿ ಯಾರಿಗೂ ಕಾಣದಂತೆ, ಸದ್ದುಗದ್ದಲ ಮಾಡದೆ ಭುವನಗಿರಿದುರ್ಗ (ಕವಲೆದುರ್ಗ)ದ ಹಾದಿ ಹಿಡಿದಳು. ತನ್ನ ಹಿರಿಯರೂ ತಾನೂ ನೂರಾರು ವರ್ಷಗಳಿಂದ ಕೂಡಿಟ್ಟಿದ್ದ ಅತುಲೈಶ್ವರ್ಯವನ್ನು ಸಕಲಸಂಪತ್ಪೂರಿತವಾದ ಬಿದನೂರು ನಗರವನ್ನೂ ಶತ್ರುಗಳಿಗೊಪ್ಪಿಸಿ ಕಾಡಿನ ಪಾಲಾದಳು. ಅಲ್ಲಿಂದ ಭುವನ ಗಿರಿದುರ್ಗವನ್ನು ಹೊಕ್ಕವಳೇ ಆ ದುರ್ಗವನ್ನು ಭದ್ರಪಡಿಸಿದಳು. ಅಲ್ಲಿ ಬಿದನೂರಿನ ಸಮಾಚಾರಕ್ಕಾಗಿ ಕಾತರತೆಯಿಂದ ಕಾಯುತ್ತಲಿದ್ದ ಆಕೆಯ ಅಳಲನ್ನು ಮಾತುಗಳಿಂದ ಅಳೆಯಲಾದೀತೆ ? ಅರಮನೆಯೂ ಅದರ ಅಕ್ಕಪಕ್ಕದ ಮಹಲುಗಳೂ ಉರಿಯುತ್ತಲೇ ಇದ್ದುವು. ಹೈದರನು

ಈ ಸುದ್ದಿಯನ್ನು ಕೇಳಿದ ಕೂಡಲೇ ತಾನೇ ತನ್ನ ನಂಬುಗೆಯ ಸಿಪಾಯಿಗಳನ್ನು ಕರೆದೊಯ್ದು ಬೆಂಕಿಯನ್ನಾರಿಸಿದನು. ನಗರ ರಕ್ಷಣೆಗೂ ಅರಮನೆಯ ಸುರಕ್ಷಿತತೆಗೂ ಏರ್ಪಾಡುಮಾಡಿ ಭುವನಗಿರಿ ದುರ್ಗಕ್ಕೆ ಧಾವಿಸಿದನು. ಅಲ್ಲಿಯೂ ಹಳೆಯ ಬಿದ ಸಿಪಾಯಿಗಳ ವಿರೋಧವನ್ನು ಎದುರಿಸಬೇಕಾಯಿತು. ಕಡೆಗೂ ಸೋತಳು ವೀರರಾಣಿ ವೀರಮ್ಮಾಜಿ. ಆಕೆಯನ್ನು ಬಂಧಿಸಿ ಮದ್ದುಗಿರಿಯ ಕೋಟೆಯಲ್ಲಿ ಇಡಲಾಯಿತು.

ನಾಲ್ಕು ವರ್ಷಗಳ ಮೇಲೆ ೧೭೬೭ರ ಚಳಿಗಾಲದಲ್ಲಿ ಮರಾಠಿಯವರು ಬಂದು ವೀರಮ್ಮಾಜಿಯನ್ನು ಬಿಡುಗಡೆ ಮಾಡಿದರು. ಆಕೆಯನ್ನು ಪುಣೆಗೆ ಕರೆದೊಯ್ಯುವಾಗ ದಾರಿಯಲ್ಲಿಯೇ ಕಾಯಿಲೆಯಾಗಿ ಶಿವಾಧೀನಳಾದಳು. ಯಾವ ಕಣ್ಸನ್ನೆಗೆ ಒಂದು ಗಟ್ಟಲೇ ಸೇವಕ ಸೇವಕಿಯರು ಕಾದಿರುತ್ತಿದ್ದರೋ, ಯಾವಾಕೆಯು ಬಿದನೂರಿನ ಐಶ್ವರ್ಯಲಕ್ಷ್ಮಿಯಂತೆ ವಿಜೃಂಭಿಸುತ್ತಿದ್ದಳೋ ಅಂತಹವಳು ನೋಡುವವರಿಲ್ಲದೆ ಮಾತಾಡಿಸುವರಿಲ್ಲದೆ ನಿರ್ಗತಿಕಳಂತೆ ಅಕ್ಷರಶಃ ಪರದೇಶಿಯಾಗಿ ಪರಂಧಾಮವನ್ನೈದಿದಳು. ವಿಧಿವಿಲಾಸ.

ಈಗ ಬಿದನೂರಿನ ಕತೆಯನ್ನು ಮತ್ತಷ್ಟು ಕೇಳಿ. ರಾಣಿ ವೀರಮ್ಮಾಜಿಯ ಶರೀರವು ಭುವನಗಿರಿದುರ್ಗದಲ್ಲಿದ್ದರೂ ಆಕೆಯ ಜೀವವೆಲ್ಲಾ ಬಿದನೂರಿನಲ್ಲಿಯೇ ಇದ್ದಿತ್ತು. ಬಿದನೂರೆಂದರೆ ಈಗ ವೀರರಾಣಿಯೇ. ಆದುದರಿಂದ ಬಿದನೂರಿನ ಕತೆಯನ್ನು ಹೇಳುವುದೆಂದರೆ ರಾಣಿಯ ಕತೆಯನ್ನು ಹೇಳಿದಂತೆಯೇ. ಇತಿಹಾಸಕಾರರೊಬ್ಬರು ಆ ನಗರವು ಹಾಳಾದುದನ್ನು ಕುರಿತು ಹೀಗೆ ಬರೆಯುತ್ತಾರೆ.

ಪೂರ್ವಖಂಡದಲ್ಲಿಯೇ ಅತ್ಯಂತ ಸಂಪದ್ಭರಿತವಾದ ವ್ಯಾಪಾರ ಕೇಂದ್ರ ಬಿದನೂರು; ರಾಷ್ಟ್ರದ ಹಲವು ನಗರ, ಪಟ್ಟಣಗಳಿಂದ ವ್ಯಾಪಾರಿಗಳನ್ನೂ ಕುಶಲಕಲೆಗಾರರನ್ನು ಕರೆತಂದು ಆಶ್ರಯವಿತ್ತ ಶಿವಪ್ಪನಾಯಕನ ಹೆಮ್ಮೆಯ ಬಿದನೂರು; ಎರಡನೆಯ ಸೋಮಶೇಖರನಾಯಕನು, ಮಾತಿನ ಮೆಲಕಿಗೆ ಸಿಗದಷ್ಟು ನಿರತಿಶಯವಾಗಿ ಚೆಲುವುಗೊಳಿಸಿದ ಬಿದನೂರು; ಪಾಶ್ಚಾತ್ಯ ದೇಶಗಳಿಂದ ಬರುತ್ತಿದ್ದ ಘನತೆವೆತ್ತ ಪ್ರವಾಸಿಗಳ ಹೃನ್ಮನಗಳನ್ನು ಸೂರೆಗೊಂಡ ಬಿದನೂರು; ನೂರುವರುಷಗಳಷ್ಟು ಸುದೀರ್ಘಕಾಲ ಸಂಗ್ರಾಮ ಕ್ಷಾಮ ಡಾಮರಗಳ ಹಾವಳಿಗೆ ಸಿಕ್ಕದಿದ್ದು ಈಗ ಹೈದರನಾಯಕನಿಂದ ಲೂಟಿಗೊಂಡ ಬಿದನೂರು : ಐವತ್ತು ಸಾವಿರ ಶಸ್ತ್ರಸಜ್ಜಿತ ಸೈನಿಕರ ಸಂರಕ್ಷಣೆಯಲ್ಲಿ ಶಾಶ್ವತ ಸುಖಶಾಂತಿಗಳನ್ನು ಅನುಭವಿಸುತ್ತ ಯುದ್ಧಗೊಂದಲಗಳ ದುಷ್ಪರಿಣಾಮವೇನೆಂಬುದನ್ನೇ ಅರಿಯದ ಬಿದನೂರಿನ ನಿವಾಸಿಗಳೆಲ್ಲ ನಾಳೆ ನಾಡಿದುಗಳ ಚಿಂತೆಯನ್ನೇ ಮಾಡದೇ ಸುತ್ತಮುತ್ತಿನ ಕಾಡಿನೊಳಕ್ಕೆ ಹೋಗಿ ಅಡಗಿಕೊಂಡರು.

'ಎಂಟು ಮೈಲಿಗಳಷ್ಟು ಪರಿಧಿಯುಳ್ಳ ಸುವಿಶಾಲವಾದ ಆ ನಗರವು ಸುಂದರವೂ ಸಮುನ್ನತವೂ ಆದ ದಿವ್ಯಹರ್ಮ್ಯಗಳಿಂದಲೂ ಶ್ರೀಮಂತರಾದ ವರ್ತಕರಿಂದಲೂ ಉದ್ಯಮಿಗಳಿಂದಲೂ ವಜ್ರವಡಿ ವ್ಯಾಪಾರಿಗಳಿಂದಲೂ ತುಂಬಿ ನೆರೆಯುತ್ತಿದ್ದಿತು. ನಯನಮನೋಹರವಾದ ವರ್ಣರಂಜಿತ ಉದ್ಯಾನಗಳು, ಕಾಮುಕನಿಷ್ಠೆ, ಕರ್ಮನಿರತ ಜನಸಂದಣಿ, ಅಸಂಖ್ಯಾತ ದೇವಮಂದಿರಗಳು, ಕ್ರಿಶ್ಚಿಯನ್ನರ ಇಗರ್ಜಿಗಳು—ಎಲ್ಲವೂ

ಬೆಂಕಿಯ ದೆಸೆಯಿಂದಲೂ ವಿಜಯೋನ್ಮತ್ತ ಸಿಪಾಯಿಗಳು ಅಂದು ಪಡೆದಿದ್ದ ವಿಚಿತ್ರತರವಾದ ಅನುಕೂಲ್ಯಗಳನ್ನು ಬಳಸಿಕೊಂಡು ಸುಲಿಗೆ ಲೂಟಿಗಳನ್ನು ಮಾಡಿದುದರ ಪರಿಣಾಮವಾಗಿಯೂ ಅತಿಶಯವಾದ, ತುಂಬಲಾಗದ ನಷ್ಟಕ್ಕೀಡಾದುವು. ಸಿಪಾಯಿಗಳೂ ಸವಾರರೂ ಲೂಟಿ ಮಾಡುವುದರಲ್ಲಿ ಒಬ್ಬರನ್ನೊಬ್ಬರು ಮೀರಿಸಿದರು. ಇವರು–ವರದಿಗಾರರೊಬ್ಬರು ಹೇಳುವಂತೆ–ಕೈಗೆ ಏನೇನು ಸಿಕ್ಕಿತೊ ಅದೆಲ್ಲವನ್ನೂ ತೆಗೆದುಕೊಂಡು; ಚಿನ್ನ ಬೆಳ್ಳಿಯ ಗಟ್ಟಿಗಳು, ನಾಣ್ಯಗಳು, ಬೆಲೆಬಾಳುವ ವಸ್ತುಗಳು, ಒಡವೆ ಮುತ್ತು ರತ್ನಗಳು, ಬಗೆಬಗೆಯ ಹತ್ಯಾರಗಳು, ಚೆಲುವಾದ ಕುದುರೆಗಳು, ಸಾಯುವವರೆಗೆ ಕುಳಿತು ತಿನ್ನುವಷ್ಟು ಬೇಕಾದುದನ್ನೆಲ್ಲ ಪಡೆಯುವಷ್ಟು ಐಶ್ವರ್ಯವನ್ನು ದೋಚಿಕೊಂಡರು.

ಲೂಟಿಯ ಅವಸರದಲ್ಲಿದ್ದವರು ಬೆಂಕಿಯನ್ನು ಆರಿಸಲೇ ಇಲ್ಲ. ಅರಮನೆಗೆ ಸಮೀಪದಲ್ಲಿದ್ದ ಮನೆಗಳೂ ಅಗ್ನಿದೇವನಿಗೆ ಆಹುತಿಯಾದವು. ಒಟ್ಟಿನಲ್ಲಿ ಅರಮನೆಯೂ ಸುಟ್ಟಿತು. ಬಿದನೂರು ಸುಟ್ಟುಹೋಯಿತು. ಬಿದನೂರು ಪ್ರಜೆಗಳು ಅಂದು ಮತ್ತು ಇಂದು,

ಬಿದನೂರು ಸುಟ್ಟು ಮಣ್ಣಾಯಿತು,
ಬಿದನೂರು ರಾಣಿ ಹೋದಳು,
ಬಿದನೂರು ಹೆಸರು ಹೋಯಿತು,
ಬಿದನೂರು ಇನ್ನು ಬಿದನೂರು ಅಲ್ಲ.

–ಎಂದು ತಮ್ಮ ಪ್ರಾಂತದ ಪ್ರಾಚೀನವೈಭವವನ್ನು ಅದರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಸೋತರೂ ಶರಣಾಗತಳಾಗದ ವೀರರಾಣಿಯನ್ನೂ ಹೆಮ್ಮೆಯಿಂದಲೂ ಕೃತಜ್ಞತೆಯಿಂದಲೂ ನೆನೆಯುತ್ತಿರುತ್ತಾರೆ.

ರಾಣಿ ವೀರಮ್ಮಾಜಿಯು ಇದೇ ವಂಶದ ಕೆಳದಿ ಚನ್ನಮ್ಮಾಜಿ, ಕಿತ್ತೂರು ರಾಣಿ ಚನ್ನಮ್ಮ, ಝಾನ್ಸಿ ಲಕ್ಷ್ಮೀಬಾಯಿ ಮುಂತಾದ ವೀರರಾಣಿಯರ ಸಾಲಿನಲ್ಲಿ ಸೇರಿ ಶೋಭಿಸುತ್ತಿರುವಳು.

ಗ್ರಂಥಋಣ :

೧. ಲಿಂಗಣ್ಣ ಕವಿಯ ಕೆಳದಿನೃಪ ವಿಜಯ ಪ್ರ. ೧೯೨೧
೨. ನಲ್ಲಪ್ಪ ವಿರಚಿತ ಹೈದರ್‌ನಾಮಾ (ಸಂ: ತಿ. ತಾ. ಶರ್ಮಾ). ೧೯೭೧
೩. C. Hayavadana Rao : History of Mysore : vol, II
೪. K. D. Swaminathan : The Nayaks of Ikkeri
೫. Lewis Rice : Mysore—A Gazetteer compiled for Government.

ಕೆಳದಿಯ ಚೆನ್ನಮ್ಮ ರಾಣಿ

ಕೆಳದಿ ಗುಂಡಾ ಜೋಯಿಸ್

ದಕ್ಷಿಣ ಭಾರತದಲ್ಲಿ ಕೆಳದಿ ಸಂಸ್ಥಾನ

ಭಾರತದ ಅದರಲ್ಲೂ ದಕ್ಷಿಣ ಭಾರತೀಯ ಇತಿಹಾಸದಲ್ಲಿ ವಿಜಯನಗರದ ನಂತರ (ಕ್ರಿ. ಶ. ೧೫೬೫) ಕೆಳದಿಯು ಪ್ರಮುಖ ಸ್ಥಾನವನ್ನು ಪಡೆದುಕೊಂಡಿರುವ ದನ್ನು ಇತಿಹಾಸದ ವಿದ್ವಾಂಸರೆಲ್ಲರೂ ಒತ್ತಿ ಹೇಳಿದ್ದಾರೆ. ಉತ್ತರದಲ್ಲಿ ಗಂಗಾವತಿ ನದಿ, ಪೂರ್ವಕ್ಕೆ ಚಿಕ್ಕನಾಯಕನ ಹಳ್ಳಿ ಹಾಗೂ ಹೊಳಲ್ಕೆರೆ; ದಕ್ಷಿಣಕ್ಕೆ ಬಲಿಯಾ ಪಟಮ್; ಪಶ್ಚಿಮದಲ್ಲಿ ಅರಬ್ಬೀ ಸಮುದ್ರದ ಕಡಲ ತೀರದ ಪ್ರದೇಶಗಳು ಕೆಳದಿಗೆ ಮೇರೆಯಾಗಿದ್ದವು.[1]

ಭಾರತದ ಮಲೆನಾಡಿನ ಭಾಗ ಹಾಗೂ ಕಡಲ ತೀರದ ಸುಂದರ ಪ್ರದೇಶ ವೆಲ್ಲವೂ ಕೆಳದಿಯ ಅಧೀನಕ್ಕೊಳಪಟ್ಟಿತ್ತು. ಕ್ರಿ. ಶ. ೧೪೯೯ ರಿಂದ ೧೭೬೩ರವರೆಗೆ ಈ ರಾಜ್ಯವನ್ನು ಚೌಡಪ್ಪನಾಯಕನಿಂದ ಆರಂಭಿಸಿ ರಾಣಿ ವೀರಮ್ಮಾಜಿಯವರೆಗೂ ಸುಮಾರು ಹದಿನೆಂಟು ಅರಸರುಗಳು ರಾಜ್ಯವಾಳಿದರು. ಆರಂಭದಲ್ಲಿ ಕೆಳದಿ ಮೂಲ ಸಂಸ್ಥಾನವೆಂದು ನಾಮಾಂಕಿತಗೊಂಡು ಕೆಳದಿ, ಇಕ್ಕೇರಿ ಹಾಗೂ ಬಿದನೂರು (ಈಗಿನ ಹಳೇನಗರ)ಗಳನ್ನು ಈ ರಾಜ್ಯವು ರಾಜಧಾನಿಯನ್ನಾಗಿ ಮಾರ್ಪಡಿಸಿಕೊಂಡಿತ್ತು.[2] ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ (ಕ್ರಿ. ಶ. ೧೫೮೬–೧೬೨೯) ಇಟಾಲಿಯನ್ ಪ್ರವಾಸಿ ಪಿಯತ್ರೋ ಡೆಲ್ಲಾ ವಾಲ್ಲಿ (೬–೧೧–೧೬೨೩)[3] ವೀರಭದ್ರನಾಯಕನ

1. Keladi Polity P. XIII By Dr. Chitnis, Poona
2. ಇಕ್ಕೇರಿ ಅರಸರೆಂದೂ. ಬಿದನೂರು ಅರಸರೆಂದೂ ಹೇಳುವುದುಂಟು; ಇದು ಸರಿಯಲ್ಲ. ಇಕ್ಕೇರಿ ಹಾಗೂ ಬಿದನೂರು ಕೇವಲ ರಾಜಧಾನಿಯಾಗಿದ್ದು ಇಲ್ಲಿಂದ ಈ ನಾಯಕರು ರಾಜ್ಯವಾಳಿದರೇ ಹೊರತು ಕೆ.ನೃ.ವಿ.ನಲ್ಲಿಯೇ ನಿರೂಪಿಸಿದಂತೆ "ತದಾರಭ್ಯ ಕೆಳದಿ ಮೂಲ ಸಂಸ್ಥಾನದ ಮನ್ನೆಯ ಚೌಡಪ್ಪನಾಯಕನೆಂದು ಕರೆಯುವರೆಂದು ನಿಯಮಿಸಿ ಪ್ರಖ್ಯಾತನಾಸ್ಸಂತು ನಾಲ್ಗಡೆಯೊಳಿರ್ಪ ಮನ್ನೆಯರ್ಗಂ......... ಮೂಲ ಸಂಸ್ಥಾನವನ್ನು ಮಾರ್ಪಡಿಸದೆ ಕೆಳದಿ ಅರಸರೆಂದೇ ಪ್ರಖ್ಯಾತಿಗಳಾಗಿದ್ದಾರೆ.
3. Nayakas of Ikkeri, p. 46 (Dr. K. D. Swaminathan, University of Madras.

ಕಾಲದಲ್ಲಿ (೧೬೩೦–೧೬೪೬) ಇಂಗ್ಲೆಂಡಿನ ಪ್ರವಾಸಿ ಪೀಟರ್ ಮಂಡಿಯೂ (೨೫–೧–೧೬೩೭)[4] ಇಕ್ಕೇರಿಗೆ ಸಂದರ್ಶನವಿತ್ತು ತಾನು ಕಂಡ ವಸ್ತುಗಳ ಮತ್ತು ಅನುಭವಿಸಿದ ವಿಷಯಗಳ ಬಗೆಗೆ ಸವಿಸ್ತಾರವಾಗಿ ಬರೆದಿದ್ದಾನೆ.[5] ಇವನಲ್ಲದೆ ಫ್ರೋಬ್ಸ್‌ರ್. ಡಾ. ಫ್ರಾಯರ್ ಅಬೇಕರಿ, ಅಲೆಗ್ಸಾಂಡರ್ ಹ್ಯಾಮಿಲ್ಟನ್ ಮುಂತಾದವರು ಭಾರತವನ್ನು ಸಂದರ್ಶಿಸಿದ್ದರು. ಇವರ ಪ್ರವಾಸ ಕಥನಗಳಲ್ಲಿ ಕೆಳದಿ ರಾಜ್ಯ ಮತ್ತು ನಾಯಕರನ್ನು ಕುರಿತು ಅನೇಕ ಉಲ್ಲೇಖನಗಳು ಬಂದಿವೆ. ಡಾ. ಜಾನ್ ಫ್ರಾಯರನು ಕ್ರಿ. ಶ. ೧೬೭೨–೧೬೮೧ ಈ ಕಾಲಾವಧಿಯಲ್ಲಿ ಇಲ್ಲಿಗೆ ಸಂಚರಿಸಿದ್ದನು.[6] ಇಂತಹ ಅನೇಕ ಸಂಗತಿಗಳು ಇತಿಹಾಸದ ಮರೆಯಲ್ಲಿದ್ದು ಅವುಗಳು ಐತಿಹಾಸಿಕ ಅಧ್ಯಯನಕ್ಕೆ ಯೋಗ್ಯ ಮೂಲ ಸಾಮಗ್ರಿಗಳೆನಿಸಿವೆ.

ಕೆಳದಿಯನ್ನಾಳಿದ ವೀರರಮಣಿಯರು

ಕೆಳದಿ ರಾಜ್ಯವನ್ನಾಳಿದ ದೊರೆಗಳಲ್ಲಿ ಇಬ್ಬರು ವೀರರಮಣಿಯರು ಪ್ರಖ್ಯಾತರಾಗಿದ್ದಾರೆ. ಪ್ರಸಿದ್ಧವಾದ ಶಿಸ್ತಿನ ಶಿವಪ್ಪನಾಯಕನ ಸೊಸೆ ವೀರರಾಣಿ ಚೆನ್ನಮ್ಮಾಜಿ (ಕ್ರಿ. ಶ. ೧೬೭೧–೧೬೯೬) ಹಾಗೂ ಕೊನೆಯ ದೊರೆ ರಾಣಿ ವೀರಮ್ಮಾಜಿ (ಕ್ರಿ. ಶ. ೧೭೫೭–೧೭೬೩). ಕೆಳದಿ ಚೆನ್ನಮ್ಮಾಜಿಯು ಅಹಲ್ಯಾಬಾಯಿ ಹೋಳ್ಕರ್, ಕಾಕತೀಯ ಮಹಾರಾಣಿ ರುದ್ರಮದೇವಿ, ರಾಣಿ ಎಲಿಜಬೆತ್, ವಿಕ್ಟೋರಿಯಾ ಮಹಾರಾಣಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಬೆಳವಡಿ ರಾಣಿ ಮಲ್ಲಮ್ಮ ಮುಂತಾದವರ ಸಾಲಿಗೆ ಸೇರಿದ ಶ್ರೇಷ್ಠ ರಾಜಮಾತೆಯಾಗಿದ್ದಾಳೆ. ದೆಹಲಿಯ ಬಾದಷಹ ಔರಂಗಜೇಬನನ್ನು ಹಂಗಿಸಿ ಸೋಲಿಸಿದ ಕೆಳದಿ ಚೆನ್ನಮ್ಮಾಜಿಯ ಇತಿಹಾಸವು ಕೇವಲ ಕನ್ನಡ ನಾಡಿಗೇ ಸೀಮಿತಗೊಳ್ಳದೇ ಇಡೀ ಭಾರತದ ಆಸೇತು ಹಿಮಾಚಲಕ್ಕೂ ತಿಲಕಪ್ರಾಯವಾದುದೆಂದರೆ ಅತಿಶಯೋಕ್ತಿಯಾಗಲಾರದು.[7] ಪ್ರತಿಯೊಬ್ಬ ಕನ್ನಡಿಗನೂ ಹಾಗೂ ಭಾರತೀಯನೂ ಈ ವೀರರಮಣಿಯ ಚರಿತ್ರೆಯನ್ನು ಅರಿತಿರುವುದು ಸೂಕ್ತ.

ಕೆಳದಿ ಸೋಮಶೇಖರನಾಯಕನ ಅಂತ್ಯ

ಕ್ರಿ. ಶ. ೧೬೬೦ ರಿಂದ ೧೬೬೨ರವರೆಗೆ ಕೆಳದಿಯನ್ನು ಆಳಿದ ಚಿಕ್ಕವೆಂಕಟಪ್ಪನಾಯಕರ ತರುವಾಯ ಶಿವಪ್ಪನಾಯಕನ ಜೇಷ್ಠಪುತ್ರ ಭದ್ರಪ್ಪನಾಯಕನು ರಾಜ್ಯವಾಳಿದನು. ಈತನ ನಂತರ ಶಿವಪ್ಪನಾಯಕನ ಕನಿಷ್ಠ ಪುತ್ರ ಸೋಮಶೇಖರನಾಯಕ

---

4. Ibid pp. 78–80
5. ಅನುಬಂಧ I ನೋಡಿರಿ
6. ಕೆಳದಿ ನಾಯಕರು, ಡಾ. ಜಿ. ಎಸ್. ದೀಕ್ಷಿತ್ ಪು. 55 ಕರ್ನಾಟಕ ವಿಶ್ವವಿದ್ಯಾನಿಲಯ—1969
7. ಸಾಗರದಲ್ಲಿ ಚೆನ್ನಮ್ಮಾಜಿಯ ಸ್ಮಾರಕವೊಂದು ನಿರ್ಮಿಸುವಲ್ಲಿ ಪೂಜ್ಯ ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರೊಂದಿಗೆ ವ್ಯವಹರಿಸಿ ಪ್ರಯತ್ನ ನಡೆಸುತ್ತಿದ್ದೇನೆ. ನನ್ನ ಈ ಬೃಹದಾಸೆ ಎಂದಿಗೆ ಕೈಗೂಡುವುದೋ ? ಕಿತ್ತೂರು ರಾಣಿ ಚೆನ್ನಮ್ಮನನ್ನು ಕುರಿತು ಮನೆಮಾತಾಗುವಷ್ಟು ಹೇರಳ ಅಭಿವೃದ್ಧಿ ಕಾರ್ಯಗಳು ಜರುಗಿದ್ದರೂ ಈಕೆಯನ್ನು ಕುರಿತು ಯಾಕೆ ಮುಂದೆ ಬಾರದಿರುವುದು ದುರ್ದೈವವಲ್ಲದೆ ಮತ್ತೇನು ?

ನಿಗೆ ವೇಣುಪುರದ[8] ಅರಮನೆಯಲ್ಲಿ ಪಟ್ಟವಾಯಿತು. ಈತನು ಕ್ರಿ. ಶ. ೧೬೬೪ ರಿಂದ ೧೬೭೨ರವರೆಗೆ ಆಳಿದನು. ಈ ನಾಯಕನು ಮೈಸೂರು, ತರೀಕೆರೆ ಮುಂತಾದ ಅರಸರನ್ನು ಗೆದ್ದು ಅವರ ಮಹೋದ್ರೇಕವನ್ನು ನಿವಾರಿಸಿದನು. ಲಿಂಗಣ್ಣ ಕವಿಯು ನಿರೂಪಣೆಯಂತೆ–

ಚಿಕ್ಕೋಡಂ ಬೆಳಗೋಡಂ
ಮಿಕ್ಕಾ ಕಣತೂರನಬ್ಬಿಣವ ಬೇಲೂರಂ
ಚಕ್ಕನೆ ಕೊಂಡಾ ಶಿವನೃಪ
ನಕ್ಕರಿನಣುಗಂ ಬಲಾತಿಶಯಮಂ ಮೆರೆದಂ

ಹೀಗೆ ಇತರ ಅನೇಕ ಸಂಸ್ಥಾನದ ಪಾಳೆಯ ಪಟ್ಟುಗಳನ್ನು ಕೈವಶಪಡಿಸಿ ಕೊಂಡನು.

ಈ ಸೋಮಶೇಖರ ನಾಯಕನು ಸುಂದರಿಯಾಗಿಯೂ ಹಾಗೂ ವಿದ್ಯಾವಂತಳಾಗಿಯೂ ಇರುವ ಕನ್ನಿಕೆಯನ್ನೇ ವಿವಾಹವಾಗಬೇಕೆಂದೂ, ಅಂತಹ ವಧು ಸಿಕ್ಕದಿದ್ದಲ್ಲಿ ತನಗೆ ವಿವಾಹ ಬೇಡವೆಂದೂ ಮುಷ್ಕರ ಮಾಡಿಕೊಂಡಿದ್ದನು. ಕಾಲಾಂತರದಲ್ಲಿ ನಿಯತಕಾಲಕ್ಕಿಂತ ತಡವಾಗಿ ಕೋಟಿಪುರದ ಸಿದ್ಧಪ್ಪಶೆಟ್ಟರ ಕುಮಾರಿ ಚೆನ್ನಮ್ಮಾಜಿಯೆಂಬ ಪೆಣ್ಮಣಿ ದೊರೆತು ಅತ್ಯಂತ ಸಂಭ್ರಮದಿಂದ ಆಕೆಯೊಂದಿಗೆ ಈತನ ವಿವಾಹವು ಜರುಗಿತು.

ಈ ಅರಸನು ಪೋರ್ಚುಗೀಸರಿಗೆ ೧೪–೨–೧೬೭೧ರಲ್ಲಿ ವಿಧಿಸಿದ ಹಲವಾರು ಷರತ್ತುಗಳು ಆತನ ದೇಶಭಕ್ತಿ ಹಾಗೂ ಸನಾತನ ಧರ್ಮದಲ್ಲಿರುವ ಅಚಲ ನಿಷ್ಠೆಗಳನ್ನು ಪ್ರತಿಪಾದಿಸುತ್ತದೆ.[9] ಈತನು ಅನೇಕ ಮಠಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಉದಾರವಾಗಿ ಸಹಾಯ ಸಲ್ಲಿಸಿದನು. ಈ ದೊರೆಯ ಕೊನೆಯ ದಿನಗಳು ಬಹು ದುರಂತವಾಗಿದ್ದುವು. ಕವಿ ಲಿಂಗಣ್ಣನು ಇದನ್ನು ಪ್ರಸ್ತಾಪಿಸುತ್ತಾ–

ವ|| ಇಂತಾ ಸೋಮಶೇಖರನಾಯಕಂ ಸದ್ಧರ್ಮದಿಂ ರಾಜ್ಯಪ್ರತಿಪಾಲನಂಗೆಯ್ಯುತ್ತಂ ಸುಖಮಿರ್ಪ ಕಾಲದೊಳ್ ಬರಮ ಪಾಪ್ರತನೆಂಬೋರ್ವ ಕ್ಷುಲ್ಲಕಂ ನೀಚಾಸೆಯ ಮದಮಂ ಸೇವಿಸಲ್ ಶರೀರದೊಳಾವುದರಲ್ಲಿಯು ಬಲಕರವಾಗಿರ್ಪುದೆಂದೊಡಂಬಡಿಸಲ್ ದೈವವಶದಿಂದಾ ದುರ್ಬೋಧೆಗೊಡಂಬಟ್ಟ ಸೋಮಶೇಖರನಾಯಕನಾನೆಯುಮದಮಂ ಸೇವಿಸಿ ತನ್ಮೂಲದಿಂದೊಗೆದುನ್ಮಾದಾವಸ್ಥೆಯಿಂ ಭ್ರಮಿತನುಂ ನಿತ್ಯಮು ವ್ಯವಸ್ಥಿತಚಿತ್ತನುಮಾಗಿ ಕ್ಷುಪ್ರಜನರೊಡನೆ ಪೇಳ ಪೇಳದಿಂ ಸ್ವೇಚ್ಛಾವ್ಯಾಪಾರದಿಂ ಮನಂಬಂದಂತೆ ವರ್ತಿಸುತ್ತು ಮಿರಲಾ–

8. ವೇಣುಪುರ > ಬಿದನೂರು > ನಗರ (ಹಳೇನಗರ)
9. ಕೆಳದಿ ಅರಸರು ಹಾಗೂ ಪೋರ್ತುಗೀಜರು ಪು. 127 (Dr. B. S. Shastry Goa)—Biker, J.F.J. Collecao de tratadose concertos de Prizes IV, PP. 192-4.

ಎಂಬಂತೆ ಹಲವಾರು ದ್ವೇಷಗಳು ಹಾಗೂ ಕುಹಕಿಗಳು ಸಂಚು ಹೂಡಿ ಸೋಮ ಶೇಖರನನ್ನು ಇರಿದು ಕೊಂದು ಹಾಕಿದರು.10

ಕೆಳದಿ ರಾಜ್ಯದ ಅತಂತ್ರ ಸ್ಥಿತಿ

ಹಿರಿಯ ಸೋಮಶೇಖರ ನಾಯಕನನ್ನು ಸಂಚು ಹೂಡಿ ಕೊಲ್ಲಲು ಹಾಗೂ ಈ ಸಂದರ್ಭವನ್ನು ಕಾಯುತ್ತಿದ್ದ ಬಿಜಾಪುರದ ಸುಲ್ತಾನನು ನಾಯಕನ ಹಾಗೂ ರಾಜ್ಯದ ದುರವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳಲೆತ್ನಿಸಿ ಮುಜಬರ್ ಖಾನನನ್ನೂ ಹಾಗೂ ಅವನ ವಕೀಲ ಜನ್ನೋಪಂತನನ್ನೂ ಕೆಳದಿ ರಾಜಧಾನಿ ಬಿದನೂರಿಗೆ ಕಳುಹಿಸಿದ್ದನು. ರಾಜಧಾನಿಯಲ್ಲಿ ಹಲವಾರು ಕುಹಕಿಗಳೂ ಇವರೊಂದಿಗೆ ಸೇರಿಕೊಂಡು ಸೋಮಶೇಖರನನ್ನು ಕೊಲ್ಲಲು ಪಿತೂರಿ ನಡೆಸಿದ್ದರು. ಇಂತಹ ಸನ್ನಿವೇಶದಲ್ಲಿ ಈ ವಾರ್ತೆಯನ್ನು ಕೇಳಿದ ಈತನ ಪತ್ನಿ ಚೆನ್ನಮ್ಮಾಜಿಗೆ ದಿಕ್ಕೇ ತೋಚದಂತಾಯಿತು. ಒಂದೆಡೆ ಪತಿಯ ಮರಣದ ದುಃಖ; ಮಗುದೊಂದೆಡೆ ರಾಜ್ಯದ ಅತಂತ್ರ ಸ್ಥಿತಿ.ಆದರೂ ಈ ಸಾಧ್ವೀಮಣಿಯು ಧೃತಿಗೆಡದೆ ಇಂತಹ ವಿಷಮ ಪರಿಸ್ಥಿಯನ್ನೂ ಎದುರಿಸಿ, ಈ ದುಷ್ಕಾರ್ಯಗಳಿಗೆ ಕಾರಣೀಕರ್ತರಾದವರನ್ನೆಲ್ಲಾ ಉಪಾಯದಿಂದ ಹಿಡಿತರಿಸಿ ಕೊಲ್ಲಿಸಿದಳು. ತರೀಕೆರೆಯಲ್ಲಿ ತುರುಕರ ಸೇನಾನಿ ಶೇಕ್‌ಬಾಬಾನನ್ನು ಚೆನ್ನಮಾಜಿಯ ಸೇನೆಯು ಎದುರಿಸಿ ಸೋಲಿಸಿದ್ದರಿಂದ ಆತನೂ ಕೊಲ್ಲಲ್ಪಟ್ಟನು. ಹೀಗೆ ರಾಣಿಯು ವಿವಿಧೋಪಾಯ ಹಾಗೂ ರಾಜಕೀಯ ಚಾತುರ್ಯಗಳಿಂದ ಜನ್ನೋಪಂತನನ್ನು ಎದುರಿಸಿ ಹಿಮ್ಮೆಟ್ಟಿಸಿದಳು. ಹಲವು ಪಿತೂರಿಗಾರರನ್ನು ದೇಶಭ್ರಷ್ಟರನ್ನಾಗಿಸಿ ರಾಜ್ಯದಲ್ಲಿ ಬಿಗಿ ಬಂದುಕಟ್ಟು ಹಾಗೂ ಸರಕಾರದ ಭಯ ಬೇರೂರುವಂತೆ ಮಾಡಿದಳು. ಹಲವು ದೇಶದ್ರೋಹಿಗಳು ಇಷ್ಟಕ್ಕೂ ಸುಮ್ಮನಾಗದೆ ರಾಣಿಯ ಅತ್ತಿಗೆಯ ಮಗ ಬಸವಲಿಂಗನಾಯಕನನ್ನು ಮುಂದು ಮಾಡಿಕೊಂಡು ಸಿಂಹಾಸನವನ್ನು ಆಕ್ರಮಿಸತೊಡಗಿದರು. ಚೆನ್ನಮ್ಮಾಜಿಯು ಇದನ್ನು ಸಮರ್ಥ ರೀತಿಯಿಂದ ಎದುರಿಸಿ ಅವನನ್ನು ಕೊಲ್ಲಿಸಿದಳು. ಕವಿ ಲಿಂಗಣ್ಣನು ಇದನ್ನು ಸರಕಾರದ ವರದಿಯೋಪಾದಿಯಲ್ಲಿ—

ವ॥ ತತ್ ಸೋಮಶೇಖರನಾಯಕರ ಪಟ್ಟದರಸಿ ಚನ್ನಮ್ಮಾಜಿ ತನ್ನ ಪತಿಗೆ ವಿಘಾತಿಯಂ ನೆನೆದ ಕುಹಕಿ ಜವರ್ಕಳನಿಪರಿಯಿಂ ಶಿಕ್ಷಿಸ್ಗೈಸಿ ವರ್ತಿಸುತ್ತುಮಿರಲ್ ತದನಂತರಂ ರಾಜ್ಯಾಧಿಕಾರವನಪೇಕ್ಷಿಸಿ ಕುಹಕಿಗಳ ದುರ್ಬೋಧೆಗೊಳಗಾದ ವೈದುನ ಬಸವಲಿಂಗನಾಯಕನಂ ಸ್ಥಳಾಂತರಕ್ಕೆಕಳುಪಿ ಅಂಗವಿಕಲವಂ ಮಾಡಿಸಿ11 ರಾಜ್ಯಂಗೆಯ್ಯುತ್ತುಮಿರಲ್ ಮತ್ತಂ ಕ್ವಚಿತ್ 'ಕಾಲದೊಳ್ ಮರಿಜೋಯಿ ಕಂದಾಚಾರದ ಲಕ್ಷ್ಮಯ್ಯ ವೀರಭದ್ರಯ್ಯ ಮುಂತಾದ ಕೆಲಂಬರ್ ಕೂಡಿ ಚನ್ನಮಾಜಿಯಂ ಮಾಣ್ದು ರಾಜತ್ವಕ್ಕೆ ಬೇರೊರ್ವರನಧಿಕಾರಿಯಂ ಮಾಡಿ ನಡೆಸಬೇಕೆಂದು ಪುರಾಲೋಚನೆಯಂ

10 ಇದು ಕ್ರಿ. ಶ. 1671 ನೇ ಡಿಸೆಂಬರ್; Came Abbe; Travelr of tr Fawcelt and Fawcelt Voe iii, p 699; E F. 1670-1677, p 308. (ಕೆ. ಅ, ಹಾಗೂ ಪೋರ್ತುಗೀಜರು Ibid-p 128

11 'ಗ' ಪ್ರತಿಯಲ್ಲಿ 'ಚನ್ನಮ್ಮಾಜಿಯವರು ಗಾ' ಎಂದಿರುತ್ತದೆ. ಕೆ. ನೃ. ವಿ. ಪು 114 ಮೈ. ವಿ. ನಿ. (ದ್ವಿ. ಮು 1973)

ರಚಿಸಿ ಪ್ರಾಕು ಪೊಸಂಗಡಿ ಪರಿಸ್ತರಣಮೊಳಂಕೆಯೊಳಿರುತಿರ್ದ ಅಂಧಕ ವೆಂಕಟಯ್ಯಂಗೆ ಪರಿಚರ್ಯಮಂ ರಚಿಸುತಿರ್ದ ಪೊರಹೆಣ್ಣಿನೊಳಂ ಪುತ್ರನುದಿಸಿರಲಾತನಂ ಬರಿಸಿ ಆ ಅಂಧಕ ವೆಂಕಟಯ್ಯನೆಂಬಾತಂ ಗುಪ್ತವಿಸಿದ ಕುಮಾರಂ ಬಿದಿಯ ವೆಂಕಟಪ್ಪನಾಯಕರ ಮಗಳು ಹಿರಿಯಮ್ಮನ ಮಗ ಸದಾಶಿವಯ್ಯಂಗೆ ಪೊಣ್ಣುಗನಾದುದರಿಂದಮಾ ಅಂಧಕ ವೆಂಕಟಯ್ಯನ ಮಗಂಗೆ ಶಿವಪ್ಪನಾಯಕನೆಂದು ನಾಮಾಂಕಿತಮಂ ಮಾಡಿ ಆತನ ತಂದೆ ಅಂಧಕ ವೆಂಕಟಯ್ಯನೆಂಬಾತನುಮಂ ಸಮೀಪದೊಳಿಟ್ಟುಕೊಂಡು ಅವರ ಮುಖದಲ್ಲಿಯೇ ಸಂಸ್ಥಾನದ ಆರಭಾರಮಂ ನಡೆಸುತ್ತುಮಿರಲಾ ಕಾಲದೊಳ್

ಕಂ|| ಆ ಸೋಮಶೇಖರೊರ್ವೀ
ವಾಸವನಂತರದೆ ಸಾರ್ಧಮಾಸತ್ರಯಮಾ
ಭಾಸಂ ಶಿವನೃಪನೆಂದೆನಿ
ಪಾ ಪಮುಚಿತರಹಿತನಾತನರಸೆನಿಸಿರ್ದಂ.

ಕುತ್ಸಿತ ಶಿವಪ್ಪನಾಯಕ

ವ|| ಇಂತು ಕುತ್ಸಿತ ಶಿವಪ್ಪನಾಯಕನೆಂಬಾತನಂ ಕರ್ತೃವಂ ಮಾಡಿಕೊಂಡು ವರ್ತಿಸುತ್ತುಮಿರುತಿರಲ್ ಬರಮೆಸಾವುತ ಮುಂತಾದ ಕುಹಕಿಗಳ್ ರಚಿಸಿದ ಛಿದ್ರಮಾದಿನಂ ನಿತ್ತರಿಸಲಮ್ಮದೆ ಸ್ಥಳದಿಂ ಮುನ್ನಮೆ ತೊಲಗಿ ಪೋಗಿ ಬೀಗಿ ಸೀಮೆಯ ಪ್ರಾಂತದೊಳಿರುತಿರ್ದ ಕಾಸರಗೋಡ ತಿಮ್ಮಣ್ಣನೆಂಬಾತನುಂ ಸಬ್ಬುನೀಸ ಕೃಷ್ಣಪ್ಪಯ್ಯನುಮೀವೃತ್ತಾಂತಮಂ ಕೇಳ್ದು ಜಾತಪ್ಪನ ಮಗ ಭದ್ರಯ್ಯನ ಮಗನಂ ರಾಜಾಧಿಕಾರಕ್ಕೆ12 ನಿಲ್ಲಿಸಬೇಕೆಂದು ಆಲೋಚನೆಯಂ ಮಾಡಿಕೊಂಡು ಮೊದಲ್ಕೈತಂದಿರ್ದ ಜನ್ನೋಪಂತನಂ ಸಹಾಯಕ್ಕೆ ಬರಿಸಿಕೊಂಡು ಬೀಗಿಯವರ ಸೈನ್ಯಮಂ ಕೂಡಿಕೊಂಡು ಬಂದು ನಿಲಲಾ ಕಾಲದೊಳ್ ಅಂಧಕ ವೆಂಕಟಯ್ಯನ ಮುಖದಿಂ ರಾಜ್ಯಾಧಿಕಾರಮಂ ನಡೆಸುತಿರ್ದ ಮರೆಜೋಪಿ ಕೆಂದಾಚಾರದ ಲಕ್ಷ್ಮಯ್ಯ ವೀರಭದ್ರಯ್ಯ ಮುಂತಾದವರೊಂದಾಗಿ ಯುದ್ಧಮಂ ರಚಿಸವೇಳ್ಕೆಂದು ಯೋಚಿಸಿ ಮಂದಿಯಂ ಕೂಡಿಸಿ ಚಿಟನೀಸ ಗಿರಿಯಪ್ಪನಮರಲೋಕಮಂ ಪಡೆಯಲೊಡನೀದವರ್ ನಿತ್ತರಿಸಲಮ್ಮದೆ ಮುರಿದು ಹಳೆಪೈಕದ ಹೆಮ್ಮ ವೀರಭದ್ರಣ್ಣ13 ಸಹಿತಂ ತಿರುಗಿ ಬರಲೊಡನೆ ಮರಜೋಪಿಯ ಶಿರಚ್ಛೇದನಮಂ ಮಾಡಿಸಿ ಅಕ್ಕಟ್ಟನೊಳಿಂತಿರ್ಪ ವಿಷಮ ಕಾಲದೊಳಾರ್ಮಾರ್ಪುದನುಚಿತಮೆಂದು ಘೋಷಿಸಿ14 ಚನ್ನಮಾಜಿ ವೇಣುಪುರದರಮನೆಯಿಂ ತೆರಳ್ದು ಭುವನಗಿರಿಯ ದುರ್ಗದರಮನೆಯಂ ಸಾರ್ದು ಕಾಸರಗೋಡು ತಿಮ್ಮಣ್ಣನಾಯಕ ಸಬ್ಬನೀಸ ಕೃಷ್ಣಪ್ಪಯ್ಯರಂ ನಂಬುಗೆಯ ಮೇಲೆ ಬರಿಸಿಕೊಳಲೊಡನೆ ಅವರೆಲ್ಲರುಂ ಭುವನ

---

12 ರಾಜ್ಯಾಧಿಕಾರಕ್ಕೆ ಅರ್ಹನೆಂದು ಪರಿಗಣಿಸಲ್ಪಡುವ ಈತನ ವಿಚಾರವೂ ಕುತೂಹಲಕರವೆನಿಸಿದೆ.

13 ದೀವರ ಜನಾಂಗಕ್ಕೆ ಹಳೇಪೈಕದವರೆಂದೂ ಹೇಳುವುದುಂಟು. ಸಾಗರ, ಸೊರಬ, ಶಿದ್ದಾಪುರ ತಾಲ್ಲೂಕಿನಲ್ಲಿ ಇವರ ಜನಸಂಖ್ಯೆ ಅಪಾರ.

14 ಕೆ. ನೃ. ವಿ. 'ಗ' ಪ್ರತಿಯಲ್ಲಿ ಸಿ ಅಂಧಕ ವೆಂಕಟಯ್ಯನ ಪುತ್ರ ಶಿವಪ್ಪನಾಯಕ ....ಎಂಬ ಹೆಚ್ಚಿನ ಭಾಗವಿದೆ.

ಗಿರಿಯ ದುರ್ಗದ ಪರಿವಾರದವರ್ ಸಹಿತವೊಂದಾಗಿ ತಮ್ಮ ತಮ್ಮ ರಾಗದ್ವೇಷಮಂ ಮಾಣ್ದು ಏಕಮತದಿಂ ಮಂತ್ರಾಲೋಚನೆಯಂ ರಚಿಸಿ ಜಾತಪ್ಪನ ಭದ್ರಪ್ಪನಯ್ಯನಮಗಂಗೆ ರಾಜ್ಯಾಧಿಕಾರಕ್ಕೆ ಸಂಬಂಧವಿಲ್ಲವೆಂಬುದಂ ನಿಶ್ಚಯಂ ಮಾಡಿ ಚನ್ನಮ್ಮಾಜಿಯರ ಸಮ್ಮತಿವಿಡಿದು ಅಂಧಕ ವೆಂಕಟಯ್ಯನುಮಂ ತತ್ಪುತ್ರನುಮಂ ಮುನ್ನಿನಂತೆ ಹೊಸಂಗಡಿಯ ಪರಿಸ್ತರಣಕ್ಕೆ ಕಳುಪಿ ತದ್ವೆಂಕಟಯ್ಯನ ಮಗ ಕುತ್ಸಿತ ಶಿವಪ್ಪನಾಯಕನೆಂಬಾತನವಂಗ ವಿಕಲನಂ ಮಾಡಿಸಿ ರಾಜತ್ವಕ್ಕೆ ಚೆನ್ನಮ್ಮಾಜಿಯನೆ ಕರ್ತಳಂ ಮಾಡಿಕೊಂಡಿಂತು ಸಂಸ್ಥಾನದ ಕಾರ್ಯಂಗಳನೆಲ್ಲಮಂ ಚನ್ನಮಾಜಿಯ ಮುಖದಲ್ಲಿಯೇ ನಡೆಸುತ್ತುಮಿರಲ್ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೯೪ನೆಯ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಬಹುಳ ೧೦ಯಲ್ಲಿ ಭುವನಗಿರಿಯ ದುರ್ಗದರಮನೆಯಲ್ಲಿ15 ಸೋಮಶೇಖರನಾಯಕರ ಪತ್ನಿ ಚನ್ನಮ್ಮಾಜಿಗೆ ರಾಜಪಟ್ಟವಾಗಲೊಡನೆ ಚನ್ನಮಾಜಿ ಸಕಲ ಸೈನ್ಯ ಸಮೇತಳಾಗಿ ಭುವನಗಿರಿದುರ್ಗದರ ಮನೆಯಿಂ ತೆರಳ್ದು ವೇಣುಪುರದ ಕೋಂಟೆಯಂ ಪೊಕ್ಕು ರಾಜಾಲಯಮುಮಂ ಸಾರ್ದು

ಕು॥ ನೆರೆ ರಾಜಧರ್ಮಮಾರ್ಗದ
ಪರಿಯಂ ಬಲ್ಲವನಿಪಾಲರೊಳ್ ಮಿಗಿಲೆನಿಪಾ
ತರುಣೀನಿಕರಶಿರೋಮಣಿ
ವರಚನ್ನಮ್ಮಾಜ ಕೆಳದಿಯಿಳೆಗರಸಾದಳ್16

ಐತಿಹಾಸಿಕವಾಗಿ ಅಚ್ಚುಕಟ್ಟನಿಂದ ನಿರೂಪಿಸಿದ್ದಾನೆ. ಹೀಗೆ ಕ್ರಿ. ಶ. ೧೬೭೨ರಲ್ಲಿ ಚೆನ್ನಮ್ಮಾಜಿಯು ಕೆಳದಿಯ ಆಧಿಪತ್ಯವನ್ನು ವಹಿಸಿಕೊಂಡಳು.

ಕೆಳದಿಯ ರಾಣಿ ಚೆನ್ನಮ್ಮ

ಕ್ರಿ. ಶ. ೧೬೭೨ ರಲ್ಲಿ ಚೆನ್ನಮ್ಮಾಜಿಯು ಪಟ್ಟಕ್ಕೆ ಬಂದ ಕೂಡಲೇ ಅಹಂಕಾರ ಪಡದೇ ಬಂಧುಗಳು, ಮಿತ್ರರು, ಮಂತ್ರಿವರ್ಗದವರು, ಅಧಿಕಾರಿಗಳು, ಸೇವಕರಾದಿಯಾಗಿ ಸಕಲರನ್ನೂ ಅವರವರ ಯೋಗ್ಯತಾನುಸಾರವಾಗಿ ಪ್ರೀತಿಯಿಂದ ನಡೆಸಿಕೊಳ್ಳುತ್ತಾ ಧರ್ಮದಿಂದ ರಾಜ್ಯಭಾರವನ್ನು ಕೈಗೊಳ್ಳಲಾರಂಭಿಸಿದಳು. ಕೆಳದಿಗೆ ನೆರೆ ರಾಜ್ಯದವರಿಂದ ಒದಗಿದ ಉಪಟಳಗಳನ್ನು ನಿವಾರಿಸಿದಳು. ಈ ರಾಣಿಯು ಸೇನಾನಿ ತಿಮ್ಮಣ್ಣನ ಬಂಡಾಯದ ವಿರುದ್ಧವಾಗಿ ಶಿವಾಜಿಯ ನೆರವನ್ನು ಯಾಚಿಸಿದಳೆಂದು ಖ್ಯಾತ ಮರಾಠಾ ಇತಿಹಾಸಕಾರ ಸರ್ ದೇಸಾಯಿಯವರು ಹೇಳಿದ್ದಾರೆ. ಲಿಂಗಣ್ಣನು ಕೆಳದಿ ನೃಪ ವಿಜಯದಲ್ಲಿಯೇ ಪ್ರಸ್ತಾಪಿಸಿದಂತೆ ಚೆನ್ನಮ್ಮಾಜಿಯ ವಿರುದ್ಧ ಬಂಡಾಯವೆದ್ದಾಗ ಇದರ ನಾಯಕತ್ವವನ್ನು ಕಾಸರಗೋಡು ತಿಮ್ಮಣ್ಣ ಹಾಗೂ ಮಲುಸೇಸ ಕೃಷ್ಣಪ್ಪ ಇವರುಗಳು ವಹಿಸಿದ್ದರು. ಕ್ರಿ. ಶ. ೧೬೭೭ರಲ್ಲಿ ತನ್ನ ರಾಜ್ಯದ ಸಮೀಪಕ್ಕೆ ಬಂದಿದ್ದ ಶಿವಾಜಿಯ ಸಹಾಯವನ್ನು ಯಾಚಿಸಿರುವುದು ಅಸಂಭವವೇನಲ್ಲವೆಂಬುದಾಗಿ

---

15 ಈಗಿನ ಕೌಲೇದುರ್ಗವೇ ಭುವನಗಿರಿದುರ್ಗ; ಇದು ತೀರ್ಥಹಳ್ಳಿ ತಾಲ್ಲೂಕಿನಲ್ಲಿದೆ.

16 ಸಂಪೂರ್ಣ ಅರ್ಥಗಳಿಗೆ ಕೆ.ನೃ.ವಿ. ಗದ್ಯಾನುವಾದ ನೋಡಿರಿ. ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 18.

ಡಾ. ಸೂರ್ಯನಾಥ ಕಾಮತ್‌ರವರ ಅಭಿಪ್ರಾಯವಾಗಿದೆ.[17] ಶತ್ರುವಶವಾಗಿದ್ದ ಜಡೆ ಹೊನ್ನಾಳಿ, ತಪಸಿಧಿ ಕೋಟೆಗಳನ್ನು ಈ ರಾಣಿಯು ಸ್ವಾಧೀನ ಪಡಿಸಿಕೊಂಡಳು. ಸೋದೆಯ ರಾಮಚಂದ್ರನಾಯಕನನ್ನು ಈಕೆಯು ಸೋಲಿಸಿದಳು. ಕವಿ ಲಿಂಗಣ್ಣನು–

ಕ|| ಪಿರಸೆಯ ಸೋದೆಯ ಸುಪರಿ
ಸ್ತರಣಗಳಂ ಕೊಂಡು ತತ್‌ಸುಧಾಪುರದವನೀ
ಶ್ವರನ ಬಿರುದಗಳನೀಳ್ದಾ
ದೊರೆ ಚನ್ನಮ್ಮಾಜಿ ಮೆರೆದಳತಿವಿಕ್ರಮಮಂ
ಧುರದೊಳ್ ಕಡವೂರ್ ಬಾಣಾ
ವರ ಹಾಸನಮಂ ಸುರಮ್ಯ ಬೇಲೂರ ಪರಿ
ಸ್ತರಣಮುಮಂ ಕೊಂಡು ಮಹ
ತ್ತರ ಮೈಸೂರವರ ಮದವನುರೆ ಮುಗ್ಗಿಸಿದಳ್.
ಮೆರೆವ ಮೊಳಕಾಲಬಾಸಿಗ
ದುರುಬಿರುದಂ ಧರಿಸಿ ಶೌರ್ಯದಿಂ ಮಾರ್ಮಲೆವಾ
ಜರಿಮಲೆಯುರಸನುಮಂ ಸಂ
ಗರದೊಳ್ ಸೆರೆವಿಡಿದು ಬಾಹುಬಲಮಂ ಮೆರೆದಳ್

ಈ ರೀತಿ ಅವಳ ದಿಗ್ವಿಜಯವನ್ನು ವರ್ಣಿಸಿದ್ದಾನೆ. ರಾಣಿಯು ಐಗೂರಿನ ಜೊತೆ ಸೇರಿಕೊಂಡು ಕೆಳದಿಯ ವಿರುದ್ಧವಾಗಿ ದಂಡೆತ್ತಿ ಬಂದ ಮೈಸೂರಿನ ದಳವಾಯಿ ಕುಮಾರಯ್ಯನನ್ನು ಹಾಸನದ ಬಳಿ ಸೋಲಿಸಿ (ಕ್ರಿ. ಶ. ೧೬೭೪–೭೫) ವಸುಧಾರೆ ಮುಂತಾದ ಕೋಟೆಗಳನ್ನು ಗೆದ್ದುಕೊಂಡಳು. ತುಳುವ[18] ಕಾರ್ಕಳ, ಮಲ್ಲಿಕಾರ್ಜುನ ಮುಂತಾದ ಪಾಳೆಯ ಪಟ್ಟುಗಳು ಕೆಳದಿಯ ವಶವಾದವು. ಬೇಲೂರ ಮತ್ತು ಅರಕಲ ಗೂಡಿನ ನಾಯಕರ ಸಮೂಹದೊಂದಿಗೆ ಗೋಲ್ಕೊಂಡ ಮತ್ತು ಬಿಲ್ಬಲ್‌ಖಾನ್‌ನ ಕೈಯಲ್ಲಿ ಸೇನೆಯೊಂದು ದಿಗ್ವಿಜಯಕ್ಕೆ ಹೊರಟಿತ್ತು. ಕೆಳದಿಯವರಾದ ಕಾಸರಗೋಡು ತಿಮ್ಮಣ್ಣ ಹಾಗೂ ಸಬುನೀಸು ಕೃಷ್ಣಪ್ಪಯ್ಯ ಮುಂತಾದ ಸೇನಾನಿಗಳು ಕೆಳದಿ ಸೇನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.[19] ಕ್ರಿ. ಶ. ೧೬೭೪ರಲ್ಲಿ ಚಿಕ್ಕದೇವರಾಜ ಒಡೆಯರವರ ಕಡೆಯ ದಳವಾಯಿ ಕುಮಾರಯ್ಯನು ಇವರನ್ನು ಎದುರಿಸಲು ಸಜ್ಜಾದನು. ಕೆಳದಿ ಸೇನೆಯು ಅವರನ್ನು ಸೋಲಿಸಿತು.

ಚೆನ್ನಮ್ಮರಾಣಿಯು ರೂಪಿಸಿದ ಯುದ್ಧ ತಂತ್ರಗಳನ್ನು ಸೇನಾಪತಿಗಳು ಮೆಚ್ಚಿ ತಲೆದೂಗುತ್ತಿದ್ದರು. ಸೈನಿಕರು ರಾಣಿಯ ಮೇಲಿನ ಅಪಾರ ಪ್ರೇಮದಿಂದ ಮನಮುಟ್ಟಿ ಹೋರಾಡಿ ವಿಜಯಕ್ಕೆ ಕಾರಣರಾಗುತ್ತಿದ್ದರು. ರಾಣಿಯ ಪ್ರತಾಪವನ್ನು ಕೇಳದ ವೈರಿ

---

17 Keladi Nayakas and Márathas DrS· U. Kamath, QJMS Journal-1

18 Studies in Tulunadu History and Culture, p· 54 Dr. Gururaja Bhat

19 K.N.V. ıX and RamaRajiamu

ಗಳು ಹಲವು ವರ್ಷಗಳ ಕಾಲ ಕೆಳದಿ ರಾಜ್ಯದಲ್ಲಿ ಕಾಲಿಕ್ಕದಂತಾದರು.

ರಾಣಿಯ ದತ್ತು ಸ್ವೀಕಾರ

ಚೆನ್ನಮ್ಮಾಜಿಗೆ ಸಂತಾನಭಾಗ್ಯವಿರಲಿಲ್ಲ. ರಾಜ್ಯಕ್ಕೆ ಉತ್ತರಾಧಿಕಾರಿಗಳ ಅಗತ್ಯವಿತ್ತು. ಇದನ್ನು ಮನಗಂಡು ಮಂತ್ರಿಗಳು ಹಾಗೂ ಪ್ರಜಾಜನರುಗಳೊಂದ ಸಮಾಲೋಚನೆ ನಡೆಸಿದಳು. ಕವಿ ಲಿಂಗಣ್ಣನ ಈ ಕೆಳಕಂಡ ಹೇಳಿಕೆಯಂತೆ—

....ಮುಂದೆ ಕೆಳದಿ ಧರ್ಮಸಂಸ್ಥಾನದ ರಾಜತ್ವಕರ್ಹನಾಪೂರ್ವಕುಮಾರ ನಾಗಲ್ವೇಳ್ಕೆಂದು ಮಂತ್ರಿಜನ ನಿಯೋಗಿಜನ ಬಂಧುಜನರೊಳಾಲೋಚಿಸಿ ಶಿವಪ್ಪ ನಾಯಕರ ಜೇಷ್ಠಪುತ್ರರಾದ ಭದ್ರಪ್ಪನಾಯಕರುಂ ತಮ್ಮರಸ ಸೋಮರಸನಾಯಕರುಂ ಸಹೋದರರಾದುದರಿಂದೆಯುಂ ಆ ಭದ್ರಪ್ಪನಾಯಕರ ಪತ್ನಿ ಸಿದ್ದಮ್ಮಾಜಿಯವರ್ ನಂಜೆಣ್ಣಶೆಟ್ಟರ ಮಗ ಮರಿಯಪ್ಪಶೆಟ್ಟರ ಪತ್ನಿಯಾದ ಗೌರಮ್ಮನವರ್ ಈಯಿ[1]ರ್ವರುಮೇ[2] ಸೋದರಿಯರಾದುದರಿಂದೆಯುಂ ಆ ಮರಿಯಪ್ಪಶೆಟ್ಟರ ಪತ್ನಿ ಗೌರಮ್ಮನ ಕುಮಾರರಾದ ಬಸಪ್ಪನವರ್ ಶಿವಪ್ಪನಾಯಕರ ಜೇಷ್ಠಕುಮಾರ ಭದ್ರಪ್ಪನಾಯಕರ್ಗೆ ಪುತ್ರವಾವೆಯಾದ ಕಾರಣಮಾ ಭದ್ರಪ್ಪನಾಯಕರನುಜನಾದ ತಮಗೆ ವಲ್ಲಭನಾದ ಸೋಮಶೇಖರನಾಯಕರ್ಗಂ ಪುತ್ರವಾವೆಯೇ ಆದುದರಿಂದಮಾ ಮರಿಯಪ್ಪಶೆಟ್ಟರ ಕುಮಾರ ಬಸಪ್ಪನವರ್ ಕೆಳದಿ ಧರ್ಮ ಸಂಸ್ಥಾನದ ರಾಜತ್ವಕ್ಕರ್ಹರಹುದೆಂದು ಬಸವಪ್ಪನವರಂ ರಾಜತ್ವಕ್ಕೆ ನಿಲಿಸಬೇಕೆಂದು ನಿಶ್ಚಯಂಗೈದು ಸರ್ವಜನಸಮ್ಮತಿಯಿಂದಮಾ ಬಸಪ್ಪನವರ್ಗೆ ಕೆಳದಿ ನೃಪಾಲ ಬಸಪ್ಪನಾಯಕರೆಂದು ನಾಮಕರಣಮಂ ರಚಿಸಿ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೯೪ನೆಯ ಪರೀಧಾವಿ ನಾಮ ಸಂವತ್ಸರದ ಶ್ರಾವಣ ಶುದ್ಧ 2೧೪2 ಯ ದಿವಸಮಾ ಬಸವಪ್ಪನಾಯಕರಂ ಗೃಹೀತ ಪುತ್ರನಂ ಮಾಡಿಕೊಂಡು ಸರ್ವಸಂಭ್ರಮದಿಂದರಮನೆಗೆ ಬಿಜಯಂಗೈಸಿ ತಂದಾಕುಮಾರಬಸವಪ್ಪನಾಯಕರಂ ಓದು ಸಾಧನೆ ಗಜ ತುರಗ ವೈಹಾಳಿ ಮುಂತಾದ ರಾಜೋಪಯುಕ್ತವಾದ ಸಮಸ್ತವಿದ್ಯೆಗಳಲ್ಲಿಯುಂ ಪರಿಣತರಂ ಮಾಡಿಸಿ ಕುಮಾರ ಬಸವಪ್ಪನಾಯಕರಂ ಮುಂದಿಟ್ಟುಕೊಂಡು ಸದ್ಧರ್ಮದಿಂ ರಾಜ್ಯಂಗೆಯ್ಯುತ್ತುಮಿರ್ದು...

ಹೀಗೆ ಕ್ರಿ. ಶ. ೧೬೭೩ ರಲ್ಲಿ ಬಸವಪ್ಪನಾಯಕನಿಗೆ ದತ್ತು ಸ್ವೀಕಾರದೊಂದಿಗೆ ರಾಜ್ಯಾಭಿಷೇಕವಾಯಿತು.[19]

ಇದೇ ಸಮಯದಲ್ಲಿಯೇ ಸರಪನ್ ಮಲ್ಲಿಕ್ ಎಂಬ ತಾಮ್ರಮುಖಿನ[20]

---

1. ಕೆ. ನೃ. ವಿ. 'ಕ' ಪ್ರತಿಯಲ್ಲಿ 'ಬ್ಬರು ಹೆಣ್ಣುಮಕ್ಕಳುಯೇ' ಎಂಬ ಅಂಶವೂ ಇದಕ್ಕೆ ಪುಷ್ಟಿ ನೀಡುತ್ತದೆ.
2. ಅದೇ........ 'ಳ' ಎಂದು ಉಲ್ಲೇಖಿಸಿರುವುದು ದಿನಮಾನದಲ್ಲಿನ ವ್ಯತ್ಯಾಸವನ್ನು ಸೂಚಿಸುತ್ತದೆ.
19. ಪುತ್ರವಾವೆಯ ವಾಂಸು ಪಕ್ಕನ್ನು ತೋರಿಸುವ ವಂಶವೃಕ್ಷವನ್ನು ಅನುಬಂಧ II ನೋಡಿರಿ.
20. ಈ ಸರಪನ್ ಮಲ್ಲಿಕ್ ಯಾರೆಂಬುದು ಕುತೂಹಲಕರ ಅಂಶವೆನಿಸಿದೆ.

ದಿವಾಣದ ವಕೀಲನಾಗಿ ವರ್ತಿಸುತ್ತಾ, ಪಂಚಮಹಲಿನೊಳಗಿನ ಮಿಡಿಜೆ ಕೋಟೆಯನ್ನು ಆಕ್ರಮಿಸಿಕೊಂಡು ಅಲ್ಲಿ ಹನುಮನಾಯಕನೆಂಬ ಅಧಿಕಾರಿಯನ್ನು ನಿಯಮಿಸಿದ್ದನು. ಕಾಸರಗೋಡು ತಿಮ್ಮಣ್ಣನು ಕೆಳದಿ ಸೇನೆಯೊಂದಿಗೆ ಹೊರಟು–

ಕಂ|| ಹನುಮನಾಯಕನ ದರ್ಪದ
ಮೊನೆಯಂ ಮುರಿದಾ ಸುಧಾಪುರಾಧಿಪರೊಳಗಿ
ರ್ದನುಪಮ ಮಿಡಿಜೆಯ ಕೋಂಟೆಯ
ನನುವರದೊಳ್ ಕೊಂಡು ಮೆರೆದನತಿಸಾಹಸಮಂ

ಈ ರೀತಿ ಸಾಹಸದಿಂದ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡನು.

ಚೆನ್ನಮ್ಮಾಜಿ ಹಾಗೂ ಪೋರ್ತುಗೀಜರು

ಕ್ರಿ. ಶ. ೧೬೭೮ ರಿಂದ ೧೬೯೫ ರವರೆಗೆ ಚೆನ್ನಮ್ಮಾಜಿಯೊಂದಿಗೆ ಪೋರ್ಚುಗೀಸರ ಸಂಬಂಧ ಉತ್ತಮವಿತ್ತೆಂದು ಕಂಡುಬರುತ್ತದೆ. ಆದರೆ ೧೬೯೫ ರಲ್ಲಿ ಅರಬ್ಬರ ನೌಕಾದಳವೊಂದು ಮಂಗಳೂರಿನಲ್ಲಿದ್ದ ಪೋರ್ಚುಗೀಸರ ಹಡಗುಗಳ ಮೇಲೆ ಬಿದ್ದು ಕೆಲವನ್ನು ಸುಟ್ಟು ಮತ್ತೆ ಕೆಲವನ್ನು ಹಾಳು ಮಾಡಿತು. ಇದಕ್ಕೆ ಚೆನ್ನಮ್ಮಾಜಿಯೇ ಕಾರಣವಿರಬಹುದೆಂದೂ ಮಂಗಳೂರಿನಲ್ಲಿರುವ ಈಕೆಯ ಅಧಿಕಾರಿಯು ಅರಬರಿಗೆ ಸಹಾಯ ಮಾಡಿರಬಹುದೆಂದೂ ಅವರು ಅಭಿಪ್ರಾಯಪಟ್ಟರು. ಚೆನ್ನಮ್ಮಾಜಿಯಿಂದ ಪರಿಹಾರ ಕೇಳಲು ಮಂಗಳೂರಿನಲ್ಲಿದ್ದ ಪೋರ್ಚುಗೀಸ್ ವರ್ತಕ ಕಾರ್ಯಭಾರಿಯನ್ನು ಬಿದನೂರಿಗೆ ಕಳುಹಿಸಲಾಯಿತು. ಅರಬರು ಆಕೆಯೊಂದಿಗೆ ನಡೆಸುತ್ತಿದ್ದ ಸಂಧಾನಕ್ಕೆ ತಡೆಹಾಕಲು ಕೂಡ ಕಾರ್ಯಭಾರಿಗೆ ಅಪ್ಪಣೆಯಾಯಿತು.*21 ಆದರೆ ಪೋರ್ಚುಗೀಸರ ರಾಯಭಾರದ ಪರಿಣಾಮವೇನಾಯಿತೆಂಬುದಕ್ಕೆ ಇನ್ನೂ ಐತಿಹಾಸಿಕ ಆಧಾರಾಂಶಗಳು ದೊರಕಿರುವುದಿಲ್ಲ.

ಕ್ರಿ. ಶ. ೧೬೭೮ರಲ್ಲಿನ ಒಪ್ಪಂದದ ಮೇರೆಗೆ ಕೆಳದಿ ರಾಜ್ಯದ ಹಡಗುಗಳು ಅರೇಬಿಯಾದ ರೇವುಗಳಿಗೆ ವ್ಯಾಪಾರಕ್ಕಾಗಿ ಹೋದರೆ ಆ ಹಡಗುಗಳನ್ನು ಪೋರ್ಚುಗೀಸರು ವಶಪಡಿಸಿಕೊಳ್ಳಬಹುದಾಗಿತ್ತು. ಕ್ರಿ. ಶ. ೧೬೯೫ರ ಉತ್ತರ ಭಾಗದಲ್ಲಿ ಮಸ್ಕತ್ ಪ್ರದೇಶದಲ್ಲಿ ಅಕ್ಕಿಯ ಅಭಾವವು ಅತಿಯಾಗಿತ್ತು. ಇದನ್ನು ಅರಿತಿದ್ದ ಬಿದನೂರಿನ ವರ್ತಕರು ಅಲ್ಲಿಗೆ ಅಕ್ಕಿಯನ್ನು ಸಾಗಿಸತೊಡಗಿದರು. ಆದರೆ ಪೋರ್ಚುಗೀಸರು ಆ ಹಡಗುಗಳನ್ನು ಸಮುದ್ರದಲ್ಲಿ ತಡೆಹಿಡಿದು ಗೋವೆಗೆ ತರಲು ನಿಶ್ಚಯಿಸಿದರು. ಕನ್ನಡಿಗ ವರ್ತಕರು ಕ್ರಿ. ಶ. ೧೬೭೮ರ ಒಪ್ಪಂದದಂತೆ ಕೊಂಗೋ ದೇಶದೊಂದಿಗೆ ವ್ಯಾಪಾರ ಮಾಡಲು ಹಡಗುಗಳಿಗೆ ಅಧಿಕಾರಪತ್ರ ಕೇಳಲು ಹೋದಾಗ ಪೋರ್ಚುಗೀಸರು ಕೂಡಲೇ ಅನುಮತಿ ಕೊಡುವುದಕ್ಕೆ ಬದಲಾಗಿ, ಚೆನ್ನಮ್ಮಾಜಿಯ ರಾಯಭಾರಿಯು ಬಂದು ಕೇಳುವವರೆಗೆ ಕಾಯುವುದೆಂದು ನಿರ್ಣಯಿಸಿದರು. ವೇಳೆ ಕಳೆಯುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಒಂದು ವರ್ಷ ಮಸ್ಕತಿಗೆ ಅಕ್ಕಿ ಪೂರೈಕೆ ಆಗದಿದ್ದರೆ ಅರಬರು ನಿರ್ಬಲರಾಗುವರೆಂದು ಅವರ ಭಾವ

21. Assentos, IV, PP, 487-8; ಕೆಳದಿ ಅರಸರು ಹಾಗೂ ಪೋರ್ತುಗೀಜರು— B. S. Shastry, Goa; P 137

ಯಾಗಿತ್ತು.[22] ದಿ. ೧೫-೧೨-೧೬೭೮ರ ಒಪ್ಪಂದವೊಂದು ಪೋರ್ಚುಗೀಸರು ೩೦,೦೦೦ ಕ್ಸೆರಾಫಿನ್ ಯುದ್ಧದ ವೆಚ್ಚಕ್ಕಾಗಿ ಈ ರಾಣಿಗೆ ಕೊಡಬೇಕಾಗಿತ್ತೆಂದು ಹೇಳಲಾಗಿದೆ.[23]

ಚೆನ್ನಮ್ಮಾಜಿಯ ಕಾಲದಲ್ಲಿ ರಾಜ್ಯದ ಮೇರೆಯು ಡಾ. ಚಿಟ್ನೀಸ್‌ರವರೇ ಅಭಿಪ್ರಾಯಪಟ್ಟಿರುವಂತೆ—

Speaking about the extent of the kingdom under Chennammaji, John Fryer observes, "Before I left Mirjn, I received the information from the natives that the canatic country reaches from Gangola to the Lamerhin's country of the Malabara,along the sea and Island up to the pepper Mountains of Sunda, and the precinct of Sergi camn" (of Bijapur). In 1678 AD, "Mirzeo (Mirjan), Chander (Chandavar) Bhatkal and Kalyan" were definitiely under the sway of Keladi,....

It may be noted that under Keladi Basavappa Nayaka I, according to the 'Sivatatwa Ratnakara, the kingdom comprised the provinces of Gorashtra (Goa?) Julu (Juluva), Maleyala (Kerala), Mallarashtra and Traigatra–a statement which cannot be corroborated by the evidence supplied by other sources....[24]

ಚೆನ್ನಮ್ಮಾಜಿ ಹಾಗೂ ದೆಹಲಿಯ ಬಾದಷಹ

ಕೆಳದಿಯ ಇತಿಹಾಸದಲ್ಲಿ ಭಾರತದ ಚರಿತ್ರೆಯಲ್ಲಿಯೇ ಪ್ರಸ್ತಾಪಿಸಲ್ಪಡಬಹುದಾದಂತಹ ಘಟನೆಯೊಂದು ಈ ರಾಣಿಯ ಕಾಲದಲ್ಲಿ ಜರುಗಿತು. ಶಿವಾಜಿಯ ಮಗ ರಾಜಾರಾಮನು ಔರಂಗಜೇಬನ ಸೈನ್ಯವನ್ನು ಎದುರಿಸಲಾಗದೆ ತಪ್ಪಿಸಿಕೊಂಡು ಕೆಳದಿಯ ರಾಜಧಾನಿ ಬಿದನೂರಿಗೆ ಬಂದು ರಾಣಿ ಚೆನ್ನಮ್ಮಾಜಿಯ ಮೊರೆ ಹೊಕ್ಕು ಆಶ್ರಯ ಬೇಡಿದನು. ಇದು ರಾಣಿಗೆ ವಿಷಮ ಪರಿಸ್ಥಿತಿಯನ್ನುಂಟು ಮಾಡಿತು. ಶರಣಾಗತನಾದ ಹಿಂದೂ ರಾಜನನ್ನು ರಕ್ಷಿಸುವುದು ಒಂದೆಡೆಯಾದರೆ, ಮಗುದೊಂದೆಡೆಯಲ್ಲಿ ದೆಹಲಿಯ ಬಾದಷಹ ಔರಂಗಜೇಬನನ್ನು ಎದುರಿಸುವುದೂ ಅಷ್ಟೇ ಕಠಿಣ ಸಮಸ್ಯೆಯಾಗಿತ್ತು. ಇದು ಸತ್ವಪರೀಕ್ಷೆಗೆ ಎಡೆಗೊಟ್ಟಿತ್ತು. ಚೆನ್ನಮ್ಮಾಜಿಯು ಧೈರ್ಯಗೆಡದೆ ರಾಜಾರಾಮನಿಗೆ ಆಶ್ರಯವಿತ್ತಳು. ಕವಿ ಲಿಂಗಣ್ಣನು ಈ ಘಟನೆಯನ್ನು ಪ್ರಸ್ತಾಪಿಸುತ್ತಾ—

22. ಅದೇ ಪು. 499.

23. Danvers : Portuguese Records, P 75, Portunguese in India, Vol. II, 365.

24. (a) John Fryer, Travels, II, iii P 41, (b): Danvers Portuguese in India II, P 365; also see P.D D.No.30—B/1757, P 453 (c) S. K. Iyengar Sources, P 350.

ಕಂ|| ಭೂಮಹಿತ ಯವನರೊಳ್ ಸಂ
ಗ್ರಾಮದೆ ಮುರಿದೈದಿ ಪೊಕ್ಕ ಮನ್ನೆಯ ರಾಜೇ
ರಾಮನನುರೆ ಕಾಯ್ದು ನೃಪ
ಸ್ತೋಮದೊಳತ್ಯಧಿಕಕೀರ್ತಿಯಂ ಮಿಗೆ ಪಡೆದಳ್

ಆ ವಿವರಣವೆಂತೆಂದೊಡೆ....

ತೆರಳ್ದಲ್ಲಿಂ ಪೊನ್ನಾಳಿಗೆ
ಬರೆ ರಾಜೇರಾಮನವನ ಬೆಂಗೊಂಡವರ್ಗಳ್
ಬರೆ ಚನ್ನಮ್ಮಾಜಿಯುವರ್
ನೆರೆ ದಾಂಟಿಸಲೈದಿ ಚಂದಿಯಂ ನೆರೆಪೊಕ್ಕಂ
ಚಳಕದೊಳಂ ಪೊನ್ನಾಳಿಯೊ
ಳಿಳಿದಾರಣಮಸ್ತಖಾನ ಮುಖ್ಯವಜೀರರ್
ಮುಳಿಸಿಂದೆಗರ್ನಿಮಂ ನಿ
ವ್ಮೊಳಪೊಕ್ಕೊಡಸಿರ್ದನವನರ್ನಿವೃದೆನುತ್ತುಂ
ಕೇಳಿಸೆ ಚನ್ನಮ್ಮಾಜಿಯು
ವಾಳೋಚಿಸಿ ತಮ್ಮ ರಾಷ್ಟ್ರಕಾಗಿಯುವಂ ಬಿ
ಚ್ಚಾಳಾಗಿ ಪೋದುದಹುದಾ
ವಾಳುತ್ತಿರ್ಪಿಳೆಯೊಳಿಲ್ಲವೆಂದರುಹಿಸಿದಳ್

....

ಇದನ್ನು ಕೇಳಿದ ಮೊಗಲ್ ಬಾದಷಹನು ಬಹು ಕೋಪಗೊಂಡು ದೊಡ್ಡ ದಂಡನ್ನು ಕೆಳದಿ ಸಂಸ್ಥಾನವನ್ನು ಕಬಳಿಸಲು "ಶಾಲಿವಾಹನ ಶಕ ವರ್ಷ ೧೬೧೨ನೆಯ 1ಶುಕ್ಲ1 ಸಂವತ್ಸರದ ವೈಶಾಖ ಬಹುಳದ2ಲ್ಲಿ2 ವೇಣುಪುರಕ್ಕೆ ಬಂದಿಳಿದು ತತ್ಪರಿಸ್ಥರಣಮಂ ವೇಷ್ಟೈಸುವನಿತರೊಳ್ ಚನ್ನಮ್ಮಾಜಿಯುವರಲ್ಲಿಂ ತೆರಳ್ದು ಭುವನಗಿರಿಯ ಮಾರ್ಗದೊಳ್ ನಿಂದು ಹೇರಳ ಪದಾತಿಯುಂ ತೆರಳ್ಚಿ ಕಳುಹಿ....

ಕಂ|| ತೊಳಪ ಬಿದುರೂರು ಕೋಂಟೆಗೆ
ತಳಿಗಳನಡಿಗಡಿಗೆ ನಡೆಪ ಮೊಗಲರ ಸೇನಾ
ಜಲಧಿಯನಂಕದೊಳಂತಕ
ನಿಳಯವನುರೆ ಪುಗಿಸಿ ಮೆರೆದಳತಿಸಾಹಸಮಂ
ಕಗ್ಗೊಲೆಯಂ ಬಿದ್ದಂಕದೊ
ಳಗ್ಗಳೆಯುರೆಸಿಪ್ಪ ತತ್ತುರುಷ್ಕರ ಫೌಜಂ
ನುಗ್ಗುನುಸಿಮಾಡಿ ರಣದೊಳ್
ನುಗ್ಗಿಸಿ ಬಹುಮುಖದೆ ಪುಗಿಸಿದಳ್ ಜವಪುರಮಂ

---

1. ಕೆ. ನೃ. ಪಿ. 'ಮ' ಪ್ರತಿಯಲ್ಲಿ 'ಶುಭಕೃತ್' ಎಂದಿರುವುದು ವಿಚಾರಾರ್ಹವಾಗಿದೆ.
2. ಕೆ. ನೃ. ಪಿ. 'ಮ' ಪ್ರತಿಯಲ್ಲಿ 'ಲ್ಲಿ ಮೊಗಲರ ಫೌಜು' ಎಂದು ಸ್ಪಷ್ಟ ಉಲ್ಲೇಖಿಸಿದೆ.

ನೆರೆಕಂಡಿ ಕಣಿವೆ ಪಥಗಳ
ನುರೆ ಬಂಧಿಸಿ ಬಲೆಯೊಳಂ ಸಿಲುಂಕಿದ ಮತ್ಸ್ಯೋ
ತ್ಕರಮೆನಲಾಗಿಸಿ ತದ್ಯವ
ನರ ಸೈನ್ಯವನಾಜಿರಂಗದೊಳ್ ಬರಿಕೈದಳ್
....

ಇನ್ನೊಳಗುಸಿರ್ದಂತು ಕೆಳದಿಯ ಚನ್ನಮ್ಮಾಜಿಯವರ್ ಶುಕ್ಲ ಸಂವತ್ಸರದಲ್ಲಿ[25] ಏಕಚಕ್ರಾಧಿಪತಿಯಾದ ಡಿಲ್ಲಿಯ ಅವರಂಗಜೇಬ ಪಾತುಶಾಹನ ಮೇಲೆ ಕೈಗೆಯ್ದು ಸಮರ ಸಂಧಾನದ ಮೇಲೆ ತತ್ಪಾತುಶಾಹಸೈನ್ಯಮಂ ಪಿಂದೆಗೆಸಿ ತನ್ನಂ ಮರೆವೊಕ್ಕ ಆರೆಯ ಗಧಿರಾಜನಾದ ಶಿವಾಜಿಯ ಪುತ್ರನಾದ ರಾಮರಾಜನಂ ಕಡೆಹಾಯಿಸಿ ಮನ್ನೆಯರ್ಕಳೊಳ್ ಪರಮ ಪ್ರಖ್ಯಾತಿಯಂ ಪಡೆದು ವಿರಾಜಿಸುತಿರ್ದಳಂತುಮಲ್ಲದೆಯುಂ.

ಕವಿ ಲಿಂಗಣ್ಣನು ಅವಳ ಜಯವನ್ನು ಹೀಗೆ ಉಲ್ಲೇಖಿಸಿದ್ದಾನೆ: ಡಾ. ಪಿ. ಬಿ. ದೇಸಾಯಿಯವರು ಬಾದಷಹನು ಚೆನ್ನಮ್ಮಾಜಿಯ ಧೈರ್ಯ ಹಾಗೂ ಸನ್ನಡತೆಯನ್ನು ಗಮನಿಸಿ ಉಚಿತ ಉಡುಗೊರೆಯನ್ನಿತ್ತು ಗೌರವಿಸಿದುದಾಗಿ ಹೇಳಿದ್ದಾರೆ.[26] ಪೂನಾದ ಡಾ. ಚಿಟ್ನೀಸ್‌ರವರು. Chennammaji as is wellknown, sheltered the fugitive Raja Ram, Son of the famous Shivaji, by facing the formidable Mughal army ಎಂದಿದ್ದಾರೆ.[27] ಡಾ. ಸಾಲೆತೊರೆ ಪಿ.ಎಸ್. ಜೋಶಿ[28] ಹಾಗೂ ಮಹಾರಾಷ್ಟ್ರದ ಪ್ರಸಿದ್ಧ ಚರಿತ್ರಕಾರ ಡಾ. ಶೆಜ್ವಾಲ್‌ಕರ್‌ರವರು ರಾಣಿಯನ್ನು ಕುರಿತು ಮಹಾರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯನ್ನು "a noble service rendered on a most critical occasion in the life of the Maratha State'' ಎಂದಿದ್ದಾರೆ.[29] ಸ್ವದೇಶದ ದ್ರೋಹಿಗಳೂ ಪರದೇಶದ ಶತ್ರುಗಳೂ ಸೇರಿ ಎರಡೂ ಕಡೆಯಿಂದ ಎದುರಿಸಿದರೂ ರಾಣಿ ಚೆನ್ನಮ್ಮಾಜಿಯು ತನ್ನ

---

25 ಕೆ. ನೃ. ವಿ. ಪುಟ 141 (ಮೈ.ವಿ.ವಿ. ದ್ವಿ. ಮು) ಅಡಿಟಿಪ್ಪಣಿಯಲ್ಲಿನ ಸಂ. 3 ಇಂತು ಪೂರ್ವವೃತ್ತಾಂತಭ್ಯ (ಪುಟ 124 ಪಂಕ್ತಿ -5) ಎಂಬಲ್ಲಿಂದ ಇಲ್ಲಿಯವರೆಗೆ ಇರತಕ್ಕ ಭಾಗವು ಓಲೆಯ ಪುಸ್ತಕದಲ್ಲಿ ಬಿಟ್ಟು ಹೋಗಿದೆ ಎಂಬ ಅಂಶಗಳು ಹಾಗೂ ಅದೇ ಪುಟದಲ್ಲಿನ ಅಡಿಟಿಪ್ಪಣಿ ಸಂ. 7ರಲ್ಲಿ ಹೇಳಿದ 'ಮ' ಪ್ರತಿಯ 'ಶುಭಕೃತ್' ಸಂವತ್ಸರ ಹಾಗೂ ಅದೇ 144ನೇ ಪುಟ 27ನೇ ಪಂಕ್ತಿಯಲ್ಲಿ 141ನೇ ಪುಟದ ಪಂಕ್ತಿ 22ರಲ್ಲಿ ಶುಕ್ಲ ಸಂವತ್ಸರವು ಪುನರುಕ್ತಿಯಾಗಿರುವುದರಿಂದ 'ಶುಭಕೃತ್' ಆಗುವುದಿಲ್ಲವೆಂಬುದನ್ನು ವ್ಯಕ್ತಪಡಿಸಿರುವುದರಿಂದ ಇವುಗಳೆಲ್ಲವೂ ಸಂಶೋಧನೆಗೆ ಗಮನಾರ್ಹ ಅಂಶಗಳೆನಿಸಿವೆ.

26 Karnataka Darshana Vol presented to Shri R. R. Diwakar on his 60th Birth day, p. 366 (1955)

27 Glimpses of Medieval Indian Ideas and Institutions, Poona—1974.

28 Karnataka State Gezetteer, Shimoga District P. 78. (Shri Abhishankar, Chief Editor)

29 Vijayanagar Sex centenary Commemoration vol. p. 133

ಶೀಲ ಶುದ್ಧಿಯಿಂದ ಗೆದ್ದು ಬದುಕಿದಳು ಎಂಬುದಾಗಿ ಜಿ. ಪಿ. ರಾಜರತ್ನಂ ಪ್ರತಿಪಾದಿಸಿದ್ದಾರೆ.30 ಹೀಗೆ ಮಹಾರಾಷ್ಟ್ರದ ಘನತೆಯು ಕನ್ನಡ ಸಾಹಸ ಕೆಳದಿ ಪುರದಿಂದ ರಕ್ಷಿಸಿ ಪುನರುಜ್ಜೀವನಗೊಳಿಸಲ್ಪಟ್ಟಿತು.

ಈ ರಾಣಿಯು ಔರಂಗಜೇಬನನ್ನು ಎದುರಿಸಿದ ಪ್ರಸ್ತಾಪವನ್ನು ಕುರಿತು ಜಾನಪದ ಗೀತೆಯೊಂದು ಡಾ. ಬಿ. ಎಸ್. ಗದಗೀಮಠರವರಿಂದ ಸಂಪಾದಿಸಲ್ಪಟ್ಟಿದೆ ಅದರ ಪಾಠವು ಈ ರೀತಿ ಹೇಳುತ್ತದೆ.

ಮೊಗಲಖಾನರಿಗಂಜಿ ಮರಾಠಿ ಮರಿಯರಸ |
ಮಲೆನಾಡ ರಾಣಿಗೆ ಬೆನ್ನಿಗೆ ಬಿದ್ದ ಜಾಣೆ ||
ಮೊಗಲಶಾಹಿ ಪರಂಗಖಾನ ಬಿಗುವಿಲಿ ಕೆಳದಿಗೆ ಇಳಿದ |
ಹಗಲಿರುಳು ದಿಗಿಲಾಗ ದಿನದಿನಕ ಜಾಣೆ ||
ಮುನ್ನೊಡೆ ಕೊಡಹೇಳೊ ಚೆನ್ನಮ್ಮ ರಾಜಾರಾಮ್ನ |
ಕನ್ನ ಕೊಲಿ ಸುಲಗಿ ಇಲದಿರಕ ಜಾಣೆ ||
ಖಾನರ ಕರಿಸ್ಯಾಳ ಅರಮನಿಗೆ ಇಳಿಸ್ಯಾಳ |
ನೆನಣಿಸಿಟ್ಟ ಬಿಗಿಸಿ ಹುಗಿಸ್ಯಾಳ ಜಾಣೆ ||
ಜೆಳಗಾಗಿ ಹೌಹಾರಿ ಮೊಗಲರ ಇಡಿದಂಡು |
ಕಾಲಕಿತ್ತು ಓಡ್ಯಾರೊ ಖಾನರು ಜಾಣೆ ||
ಉಳವಿಯ ಚೆನ್ನಬಸವ ಉಳಿಸಿದ ನಪ್ಮ್ಯಾನ |
ಕಳಸವ ಕಟ್ಟಿ ಕೈಮುಗಿದು ಜಾಣೆ ||
ಕೆಳದಿಯ ಶಿವರಾಜ್ಯ ಬೆಳಿಯಲಿ ಶಿವಶಿವನೆ |
ಇಳಿವ್ಯಾಗ ಸೊಗವಲಿದು ಉಂಡುಟ್ಟು ಜಾಣೆ ||31

ಚೆನ್ನಮ್ಮಾಜಿಯ ರಾಜ್ಯಭಾರಕ್ರಮ

ಈ ರಾಣಿಗೆ ಸಹಾಯುಪೆಸಗಲು ಗುರುಬಸಪ್ಪದೇವರು ಮುಖ್ಯಮಂತ್ರಿಯಾಗಿದ್ದರು. ಇದಲ್ಲದೆ ಈ ಕೆಳಗಿನಂತೆ ಇತರ ಅಧಿಕಾರಿಗಳೂ ಕೆಳದಿ ಸರಕಾರದಲ್ಲಿ ಸಹಾಯಕರಾಗಿ ನಿಂತು ಆಡಳಿತದಲ್ಲಿ ಸುಧಾರಣೆಯನ್ನು ತಂದರು.

ಹಣಕಾಸು ಖಾತೆ—ಶ್ರೀನಿವಾಸಯ್ಯ
ಲೆಖ್ಖಪತ್ರ ಹಾಗೂ ಪರಿಶೋಧನೆ—ತಿಮ್ಮಯ್ಯ
ಕರಣಿಕರು—ವೆಂಕಟಪ್ಪಯ್ಯ
ಕೋಟಿಪುರದ ಶಿವ್ಪಪ್ಪಶೆಟ್ಟರು—(ಖಾತೆ?)
ಖಜಾನೆ ಅಧಿಕಾರಿ—ಚೊಕ್ಕಸದ ಸಿದ್ಧಬಸವಯ್ಯ
ಕೋಳಾಲದ ವೆಂಕಟಪ್ಪಯ್ಯ (ಖಾತೆ?)
ಕಂದಾಚಾರ ಲಕ್ಷ್ಮಯ್ಯ (ಖಾತೆ?)

---

30 ಬಿದನೂರಿನ ರಾಣಿ ವೀರಮ್ಮಾಜಿ ಜಿ. ಪಿ. ರಾಜರತ್ನಂ—1958

31 Journal of the Karnatak University, Dharwar vol II No. 2 1958, p. 53 (Prof. G. S. Halappa)

ಕಾಸರಗೋಡು ತಿಮ್ಮಪ್ಪ (ರಕ್ಷಣೆ)
ಸಬುನೀಸ ಕೃಷ್ಣಪ್ಪಯ್ಯ (")
ಗುರುಭದ್ರಪ್ಪದೇವರು
ಕರಣಿಕ ಬಿಳಿಗಿ ಸುಬ್ಬಯ್ಯ
ವೆಂಕಟಪ್ಪಯ್ಯ
ರಾಯಸದ ವೆಂಕಟಪ್ಪಯ್ಯ

ಈ ರೀತಿ ವಿವಿಧ ರೀತಿಯ ಅಧಿಕಾರಿಗಳನ್ನೊಳಗೊಂಡು ರಾಜ್ಯಭಾರವನ್ನು ಸುವ್ಯವಸ್ಥಿತವಾಗಿ ನಡೆಸಿ ರಾಜ್ಯಕ್ಕೆ ನೆಮ್ಮದಿಯನ್ನು ತಂದಳು. ಸರ್ವ ಧರ್ಮದವರಿಗೂ ಸಮಾನ ಅವಕಾಶಗಳನ್ನಿತ್ತು ಧಾರ್ಮಿಕ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಿದಳು. ಶೃಂಗೇರಿ ಮಠ ಹಾಗೂ ದೇವಾಲಯಗಳಿಗೆ ಅನೇಕ ರೀತಿಗಳಲ್ಲಿ ಉಂಬಳಿ–ಉತ್ತಾರಗಳನ್ನಿತ್ತು ಪರಿಪಾಲಿಸಿದಳು.32 ಮಹಂತರ ಮಠಗಳಿಗೂ ಉಂಬಳಿಯನ್ನಿತ್ತು ಧಾರ್ಮಿಕ ಕಾರ್ಯಗಳು ಸುರಳೀತವಾಗಿ ಜರುಗುವಂತೆ ಏರ್ಪಡಿಸಿದಳು.33 ಅನೇಕ ಜಂಗಮ ಮಠಗಳನ್ನು ಸ್ಥಾಪಿಸಿದಳು. ಭುವನಗಿರಿಯಲ್ಲಿರುವ ಮಠಕ್ಕೆ ಉಂಬಳಿಗಳನ್ನಿತ್ತು ಶಾಸನಗಳನ್ನು ಬರೆಸಿದಳು. ಕೆಳದಿಯ ದೇಗುಲವನ್ನು ಅಭಿವೃದ್ಧಿಪಡಿಸಿ ಧ್ವಜಸ್ತಂಭವನ್ನು ಸ್ಥಾಪಿಸಿದಳು. ಬಾಬಾಬುಡನ್‌ಗಿರಿಯ ದೇಗುಲವೂ ಇವಳಿಂದ ನಿರ್ಮಿಸಲ್ಪಟ್ಟಿರುವುದಾಗಿ ಅಧಿಕೃತ ಮೂಲವೊಂದು ಉದ್ಗರಿಸುತ್ತದೆ.34 ತನ್ನ ಪತಿ ಸೋಮಶೇಖರನಾಯಕನ ನಾಮಾಂಕಿತದಲ್ಲಿ ಸೋಮಶೇಖರಪುರವೆಂಬ ಅಗ್ರಹಾರವನ್ನು ನಿರ್ಮಿಸಿದಳು. ಹುಲಿಕೆರೆಯಲ್ಲಿರುವ ಕೋಟೆಯನ್ನು ಬಲಪಡಿಸಿ ಚೆನ್ನಗಿರಿ ಕೋಟೆಯೆಂಬುದಾಗಿ ನಾಮಾಂಕಿತವನ್ನಿಟ್ಟಳು.35 ಬಿದನೂರಿನ ಶ್ರೀ ನೀಲಕಂಠೇಶ್ವರ ದೇವರ ರಥೋತ್ಸವ ವ್ಯವಸ್ಥಿತವಾಗಿ ನಡೆಯಲು ಏರ್ಪಡಿಸಿದಳು. ಕೊಲ್ಲೂರು ಶ್ರೀ ಮೂಕಾಂಬಾ ದೇವಿಗೆ ಹೇರಳ ಸೇವೆ ಜರುಗುವಂತೆ ವ್ಯವಸ್ಥೆ ಮಾಡಿಸಿದಳು. ಕಾಶಿ, ರಾಮೇಶ್ವರ, ಶ್ರೀಶೈಲ, ತಿರುಪತಿ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ವರ್ಷಾಶನದ ಕಟ್ಟಳೆಗಳನ್ನು ನಿರ್ಮಿಸಿ ಧಾರೆಯೆರೆದಳು. ಈ ರಾಣಿಯ ಕಾಲದಲ್ಲಿ ಡಾ. ಫ್ರಾಯರ್ ಎಂಬ ವಿದೇಶೀಯ ಪ್ರವಾಸಿಯು ಕೆಳದಿ ರಾಜ್ಯದ ನೆಮ್ಮದಿ ಹಾಗೂ ಸುವ್ಯವಸ್ಥೆಯನ್ನು ಕಂಡು ತಾನು ನೋಡಿದ, ಕೇಳಿದ ಸಂಗತಿಯನ್ನು ಮನೋಜ್ಞವಾಗಿ ಪ್ರವಾಸಿಕಥನದಲ್ಲಿ ಉಲ್ಲೇಖಿಸಿದ್ದಾನೆ.

ಚನ್ನಮ್ಮಾ ರಾಣಿಯ ಕೊನೆಯ ದಿನಗಳು

ರಾಣಿ ಚೆನ್ನಮ್ಮಾಜಿಯು ದತ್ತು ಕುಮಾರ ಬಸವಪ್ಪನಾಯಕನಿಗೆ ರಾಜೋಪಯೋಗ್ಯವಾದ ವಿದ್ಯೆಗಳನ್ನು ಕಲಿಸಿ, ಆತನಿಗೆ ಹೆಬ್ಬೆ ಮಹಂತಯ್ಯನ ಕುಮಾರಿ ಚೆನ್ನಮ್ಮಾಜಿ ಹಾಗೂ ಚೆನ್ನವೀರಪ್ಪನ ಪುತ್ರಿ ಬಸವಮ್ಮಾಜಿ ಈ ಈರ್ವರನ್ನೂ ತಂದು

32 ಅನುಬಂಧ III a, III b, and c ನೋಡಿರಿ.

33 ಅದೇ IV ನೋಡಿರಿ.

34 M.A.R. (1931 p. 21)

35 ಈಗಲೂ ಚೆನ್ನಗಿರಿಯಲ್ಲಿನ ಕೋಟೆಯನ್ನು ಅವಲೋಕಿಸಬಹುದಾಗಿದೆ.

ಕೊಂಡು ವಿವಾಹವನ್ನು ನೆರವೇರಿಸಿದಳು. ತಾನು ಸುಬ್ರಹ್ಮಣ್ಯ ಹಾಗೂ ಗೋಕರ್ಣ ಮುಂತಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದಳು. ಈಕೆಯ ನಂತರ ಬಸವಪ್ಪ ನಾಯಕನಿಗೆ ಪಟ್ಟವಾಯಿತು. ಬಸವಪ್ಪನಾಯಕನಿಗೆ ನೀಡಿದ ರಾಣಿಯ ಉಪದೇಶವು ಮನೀಯವಾಗಿವೆ. ಲಿಂಗಣ್ಣನು

ಕಂ|| ಉನ್ನತಶುಭಗುಣಗಣಸಂ
ಪನ್ನತೆಯಿಂ ಕ್ಷಾತ್ರದಾನಧರ್ಮಾದಿಗಳಿಂ
ಚನ್ನಮ್ಮಾಜಿಗೆ ಸರಿಯಹ
ಮನ್ನೆಯರಿಲ್ಲೆನಿಸಿ ರಾಜ್ಯಮಂ ರಕ್ಷಿಸಿದಳ್

ಎಂಬುದಾಗಿ ರಾಣಿಯನ್ನು ಕೊಂಡಾಡಿ, ಈ ಚನ್ನಮ್ಮಾಜಿಯವರ್ ಭುವನಗಿರಿಯ ದುರ್ಗದೊಳ್ ತಮಗೆ ಪಟ್ಟವಾದ ಶಾಲಿವಾಹನ ಶಕ ವರ್ಷ ೧೫೯೪ ನೆಯ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಶುದ್ಧ ೧೦ ಆರಭ್ಯ ಈಶ್ವರ ನಾಮ ಸಂವತ್ಸರದ ಶ್ರಾವಣ ಶುದ್ಧ ೧೪ ವರೆಗೆ ವರ್ಷ ೨೫ ತಿಂಗಳು ೪ ದಿನ ೨೦ ಪರ್ಯಂತಂ ಸದ್ಧರ್ಮದಿಂ ರಾಜ್ಯಂಗೈದು ಶಿವಸಾಯುಜ್ಯಮಂ ಪಡೆದರ್ ಎಂದು ಮುಕ್ತಾಯಗೊಳಿಸಿದ್ದಾನೆ. ಪೋರ್ಚುಗೀಸ್ ದಾಖಲೆಯೊಂದು ಗೋವೆಯಲ್ಲಿ ಕ್ರಿ. ಶ. ೧೬೯೭ ಮಾರ್ಚಿ ೨೯ ರಂದು ಸೇರಿದ ಮಂತ್ರಾಲೋಚನಾ ಸಭೆಯ ವರದಿಯಿಂದ ಅದಕ್ಕೆ ಕೆಲವು ದಿನಗಳ ಮುಂಚೆ ಚೆನ್ನಮ್ಮಾಜಿಯು ತೀರಿಕೊಂಡಳೆಂದು ತಿಳಿದುಬರುತ್ತದೆ ಎಂಬುದಾಗಿ ಉದ್ಧರಿಸುತ್ತದೆ (ವಿಶದೀಕರಿಸುತ್ತದೆ).ಇದಕ್ಕೆ ಗೋವಾದ ಶ್ರೀ ಡಾ. ಬಿ. ಎಸ್. ಶಾಸ್ತ್ರಿಗಳು ಹಲವಾರು ರೀತಿಯಲ್ಲಿ ಸಮರ್ಥನೆಗೈದಿದ್ದಾರೆ. ಇವರು ಮುಂದುವರಿದು ನಂತರ ಬಸವಪ್ಪನು ನಾಯಕನಾದನು ಹಾಗೂ ಪೋರ್ಚುಗೀಸರು ಆತನಿಗೆ ಶುಭಾಶಯ ಮತ್ತು ಪಾರಿತೋಷಕಗಳನ್ನು ಕಳುಹಿಸಲು ಏರ್ಪಡಿಸಿರುವುದೂ ಕಂಡುಬರುತ್ತದೆ ಎಂಬುದಾಗಿ ಹೇಳಿದ್ದಾರೆ.*36 ಶಿವತತ್ವರತ್ನಾಕರ VIII ನೇ ಕಲ್ಲೋಲದಲ್ಲಿ ಉಕ್ತವಾಗಿರುವಂತೆ ಚೆನ್ನಮ್ಮ ರಾಣಿಯು ಬಸಪ್ಪನಾಯಕನಿಗೆ ಉಪದೇಶಿಸಿದ ವಾಕ್ಯಗಳು ಈ ತಲೆಮಾರಿನ ಹಾಗೂ ಮುಂದಿನ ರಾಜಕೀಯ ಪೀಳಿಗೆಗೆ ಸನ್ಮಾರ್ಗದಲ್ಲಿ ಮುನ್ನಡೆಯಲು ಅಮೃತ ವಾಕ್ಯಗಳೆನಿಸಿವೆ! ಭುವನಗಿರಿಯಲ್ಲಿ ಈಕೆಯು ಕಾಲವಾಗಿದ್ದು ಬಿದನೂರು ಕೊಪ್ಪಲು ಮಠದಲ್ಲಿ ರಾಣಿಯ ಸಮಾಧಿಯಾಯಿತು.*37

ಭಾರತದ ವೀರ ರಮಣಿಯರ ಸಾಲಿಗೆ ಸೇರಿದ ಈ ರಾಣಿಯ ಸ್ಮಾರಕವನ್ನು ಮುಂದಿನ ತಲೆಮಾರಿನ ಮಾರ್ಗದರ್ಶನಕ್ಕಾಗಿ ಮಲೆನಾಡಿನಲ್ಲಿ (ಸಾಗರದಲ್ಲಿ) ಇನ್ನಾದರೂ ತಡಮಾಡದೇ ಕನ್ನಡಿಗರು ನಿರ್ಮಿಸುವರೇ? ಕಾದು ನೋಡಬೇಕು!

---

1. ಕೆ. ನೃ. ವಿ. ನ ಪು. 147 ರ ಅಡಿಟಿಪ್ಪಣಿ - 'ಗ' ಪ್ರತಿಯಲ್ಲಿನ 'ಬ' ಎಂಬ ಉಲ್ಲೇಖವು 'ಬಸುಳೆ'ವನ್ನು ಸೂಚಿಸುವುದೇ ವಿಚಾರಾರ್ಹವಾಗಿದೆ.

*36 Assentos v. p. 42 (ಕೆಳದಿ ಅರಸರು ಹಾಗೂ ಪೋರ್ತುಗೀಜರು p. 138.

*37 ಚನ್ನಮ್ಮಾಜಿಯ ಸಮಾಧಿಯ ಫೋಟೋ ನೋಡಿರಿ!

ಅನುಬಂಧ ।

Peter Mundy and the other English Ambassadors were entertained to supper by King Virabhadra Nayaka. Mundy gives details about it as follows :-

"On 28th February, 1637 the King invited us for supper, where out table cloth and dishes were of plantaine leaves sowed together. We had at least 20 severall sorts of Achare (achar), to say, pickled fruifs as Mangoes, Cardamum, Green pepper, etc· to relish meates, as we use cloves, capers, cow-cumbers etc. In our dishes we had milk both sweet and sower and sirruppes of several sorfs. Rice was dressed in sundry manners all spread in Divers parcells on the plain leaves, as was the achare. The king himself rate us with a rod in his hand, pointing to this or that we would have us eate, being desirous we should tasfe of all. Our Drinke was such as he himselffe dranck even perfumed water. We sate on the ground. They neither eate flesh nor fish nor Drinck, Strong; besides our touching any of their implements is odions to them and that vessell elts held unclean"

Peter Mundy, Travels, III, pp 81. ff : ಇಲ್ಲಿ ಕಂಡು ಬರುವ ಆ ಕಾಲದ ಇಂಗ್ಲೀಷ್ ಭಾಷಾ ಸ್ವರೂಪವನ್ನು ಗಮನಿಸಬಹುದಾಗಿದೆ.

ಡಾ. ಚಿಟ್ನೀಸ್‌ರವರು ರಾಣಿಯ ಪುತ್ರಸ್ವೀಕಾರದ ಸಂಗತಿಯನ್ನು ಹೀಗೆ ವಿವೇಚಿಸಿದ್ದಾರೆ.

The monarch could adopt a son in case he had neither direct heirs nor collateral heirs. There are three instances of adoptai in the Keladi dynasty viz, those of Basavappa Nayaka, Chennabasavappa Nayak and Somasekhara Nayaka III. The adoption of Basavappa Nayaka. It has been much debated, Dr. Barnet says that the Basavappa was the real son of Somashekhara Nayak I* 1 whereas R. Sewel maintaiùs that he was the adopted son* 2, although there is practically no difference according to Hindu traditions between a real son and an adopted son........ Chennammaji sought the counsel of her ministers, councillors and reltives while adopting Basayappa.

---

*1 JRAS., 1910, pp 149–50, 487

*2 Ibid, p 488; R. Sewell, LISDSI, p. 178.

ಅನುಬಂಧ II

ಶಿವಪ್ಪನಾಯಕ

|

ಈತನಿಗೆ ಐವರು ಪತ್ನಿಯರು

- ಲಿಂಗಮ್ಮಾಜಿ
  - ಸಿದ್ದಮ್ಮಾಜಿ
  - (ಪ) ಪೆರಘಲಮಲ್ಲಿ ಕಾರ್ಜುನಯ್ಯ
- ಶಾಂತಮ್ಮಾಜಿ
  - ಭದ್ರಪ್ಪನಾಯಕ*
  - (ಪ) ಜೊಮ್ಮಮ್ಮಾಜಿ
  - (ಅ) ಸಿದ್ದಮ್ಮಾಜಿ*
    - (ಅ) ಸಿದ್ದಮ್ಮಾಜಿಯ ಸಹೋದರಿ ಗೌರಮ್ಮ
    - (ಪ) ಮರಿಯಪ್ಪಶೆಟ್ಟರು s/o. ನಂಜಣ್ಣಶೆಟ್ಟಿ.
      - ಬಸಪ್ಪ ಅಥವಾ ಬಸವಪ್ಪನಾಯಕ *
- ಭದ್ರಮ್ಮಾಜಿ
  - ಬಸವಲಿಂಗಮ್ಮಾಜಿ
  - (ಪ) ಬಸವಲಿಂಗಮ್ಮಾ
  - ಸೋಮಮ್ಮ
  - (ಪ) ಚನ್ನವೀರ ಒಡೆಯರು
- ನಾಗಾಜಮ್ಮಾಜಿ
- ಬಸವಲಿಂಗಮ್ಮಾಜಿ
  - *ಸೋಮಶೇಖರನಾಯಕ
  - (ಪ) ಚೆನ್ನಮ್ಮಾಜಿ (ರಾಣಿ)

ಈ ಬಸಪ್ಪನು ಭದ್ರಪ್ಪನಾಯಕ ಹಾಗೂ ಹಿರಿಯ ಸೋಮಶೇಖರ ನಾಯಕನಿಗೆ ಪುತ್ರನಾದೆಯಾಗುತ್ತಾನೆ.

ಪ = ಪತಿ ಅಥವಾ ಪತ್ನಿ

* = ಪುತ್ರನಾದೆ.

ಅನುಬಂಧ III (a)

ಕೊಪ್ಪ ತಾಲ್ಲೂಕು ಕಿಗ್ಗದ ಹೋಬಳಿ ಕಸಬಾ ಗ್ರಾಮದ ಶೃಂಗೇಶ್ವರ ದೇವ ಸ್ಥಾನದಲ್ಲಿ ಉತ್ಸವ ವಿಗ್ರಹದ ಪೀಠದಲ್ಲಿರುವ ಶಾಸನ.

೧. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ
೨. ೧೬೦೦ ನೆಯ ಕಾಳಯುಕ್ತಾಕ್ಷಿ ಸಂವತ್ಸರದ ಆಶ್ವಿಜ ಶು. ೧೦ ಆದಿವಾರದಲ್ಲು
೩ ಶ್ರೀಮತ್ಕೆಳದಿ ಚೆಂನಮ್ಮಾಜಿಯವರೂ ಸುಖಸಂತೋ
೪ ಷದಿಂ ರಾಜ್ಯವನಾಳುತ್ತಿಹ ಕಾಲದಲ್ಲಿ ಪ್ರಧಾನಿ ಗುರುಬಸಪ್ಪದೇ
೫ ವರೂ ಮಾಡಿಸಿ ಕಿಗ್ಗದ ಶೃಂಗೇಶ್ವರ ಸ್ವಾಮಿಗೆ ಸಮರ್ಪಿಸಿದ
ಸೇವೆ ಮಂಗಳಮಹಾ ಶ್ರೀ.

(ಇದರ ಕಾಲ ಸುಮಾರು ೧೫–೯–೧೬೯೮ರ ಭಾನುವಾರ M.A.R. ೧೯೩೨.)

ಅನುಬಂಧ III (b)

ಲೇಖನ ೨೧*

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ; ಪದವಾಕ್ಯ ಪ್ರಮಾಣ ಪಾರಾವಾರಪಾರೀಣ, ಯಮನಿಯಮಾದ್ಯಷ್ಟಾಂಗಯೋಗ ನಿರತರಾದ ಶೃಂಗೇರಿ ಶ್ರೀ ನರಸಿಂಹಭಾರತೀಸ್ವಾಮಿಗಳಿಗೆ; ಕೆಳದಿ ಚನ್ನಮ್ಮಾಜಿಯವರು ಮಾಡುವ ಬಿನ್ನಹ, ಕಳುಹಿದ ಆಶೀರ್ವಾದ ಪತ್ರಿಕೆಯಿಂದೆಲ್ಲಾ ಕೇಳಿ ಮನಸ್ಸಿಗೆ ತಂದೆವು. ಶೃಂಗೇರಿ ಮಠದ ಧರ್ಮಕ್ಕೆ ತಂದಂಥಾ ಜಿನಸಿಗೆ ಸುಂಕ ಬರಬೇಕೆಂದು ಕೇಳುತಿಧಾರೆ; ಸುಂಕದ ಕೇಳದ ರೀತಿ ಕಟ್ಟು ಮಾಡಿಸಬೇಕೆಂಬ ಹಾಗೆ ಬರೆಸಿದಿರಿ. ಮಠದ ಧರ್ಮಕ್ಕೆ ಎಂದಿನ ರೀತಿ ತಂದುಕೊಂಬಂಥಾ ಜಿನಸಿಗೆ ಸುಂಕ ಬರಬೇಕೆಂದು ಕೇಳದ ಹಾಗೆ ಸುಂಕದ ಪಾರುಪತ್ಯಗಾರರಿಗೆ ಬರೆಸಿಧೇವಾಗಿ ಬಿನ್ನಹ.

ಅನುಬಂಧ III (c)

ಶೃಂಗೇರಿ ಮಠದ ಕಡಿತದ ದಾಖಲೆ

ಅಂಗಲಾಪುರದ ಗ್ರಾಮದ ಬಗ್ಯೆ ಅಂಮಾಜಿಯವರ ಸಿ|ರೂ|ಪ| ಪ್ರತಿ|

ದುರ್ಮುಖಿ ಸಂವತ್ಸರದ ನಿಜ ಆಶ್ವಿಜ ಶು. ೧೦ ಲು ಶ್ರಿಮತ್ಕೆಳದಿ ಚೆಂನಮಾಜಿಯುವರು ಭದ್ರೈಯಗೆ ಬರಶಿ ಕಳುಹಿದ ಕಾರ್ಯ್ಯ ಕೊಡಲಿಯಲ್ಲಿ ಖಿಾಸ್ತ್ಯ। ಶ್ರಿಂಗೇರ್ರಿ ಮಠದಲ್ಲಿ "ಧರ್ಮವ ನಡಸುವ ಬಗ್ಯೆ ಕಡಲೂರ ಸಿಮೆ ಹಿರಿಯಂಗಳ ಕಾಲುತಳಿ ಅಂಗಲಾಪುರದ ಗ್ರಾಮ|ವಂನ್ನು ಪ್ರಾಕು ಉತ್ತಾರದ ಕೊಟ್ಟದಲ್ಲಿ ಶಾವರರಿ ಸಂವತ್ಸರದಲು | ಆ ಅಂಗಲಾಪುರದ ಗ್ರಾ|ಮದ ಶ್ರಿಂಗೇರ್ರಿ ವಶವ ಮಾಡಿ ದ್ದೆವೆಂಮ ಕಕದಲೂರ ಪಾರುಪತ್ಯಗಾರ ವೀರಂಕಾಗೆ ಸಿರೂಪಾ ಬರಶಿ ಕೊಟ್ಟದಲಿ ಯೀಗ ಆ ಗ್ರಾಮಲು ನಮಗೆ ನಡದು ಬರುವದಿಲ್ಲ ಯೆಂದಿನ ರ್ರಿತ್ತಿ ತಂಮ ಹವಾಲೆ

* ಇದಕ್ಕೆ ಕಾಲಮಾನದ ಉಲ್ಲೇಖವಿಲ್ಲ; ಸನ್ 1696 ರ ಒಳಗಾಗಿ ಬರೆಸಿರುವುದಾಗಿ ಕಂಡುಬರುತ್ತದೆ–ಶೃಂಗೇರಿ ಶ್ರೀ ಮಠೀಯ ಪ್ರಾಕ್ತನ ಲೇಖನಮಾಲಾ ಸಂಗ್ರಹ, ಪುಟ 35–36.

ಮಾಡಿಶಿ ಕೊಡಬೆಕೆಂದು । ಶ್ರಿಂಗೆರಿ ಸ್ವಾಮಿಗಳು । ಬರಶಿ ಕಳುಹಿಶಿದ್ದ ಆ ಅಂಗಳಾಪುರದ ಗ್ರಾಮವನ್ನು ಶ್ರಿಂಗೆರಿ ಮಠದ ಧರ್ಮಕೆ ನಡದು ಬರುವ ಕ್ರಿತ್ತಿ ಕಟ್ಟು । ಮಾಡಿಶಿಯಿದ್ದೆವೆ ಆ ಗ್ರಾಮವನ್ನು ಸ್ವಾಮಿಗಳ ಬಗೆ ಮನುಷ್ಯನ ವಶಾಲಿ ಮಾಡಿಕೊಟ್ಟು ಯೀ ಕಾಗದವ ಸಾನಭಾಗರ ಕಡಿಕಕೆ ಬರಶಿ ತಿಗ್ರಿಗಿ ಯಿವರ ಬಗೆಯವರ ವಶಕೆ । ಕೊಡುವದು ಶಿವೆರಾಕಿದ ಕಾಗದ ಪ್ರತಿ...

ಪಸ್ತಾಂತಕ್ಕೆ ಬರೆದು

(Vol. 175, P. 4)

Note : A copy of the Nirupa issued by Rani Chennammaji (AD 1661-1697) wife of Somashekhara Nayaka I to a a person named Bhadraiah states that Angalapura Grama (situated in Kadalur Sinc) should be given back to the Swamiji of Sringeri, Shri Narasimha Bharatti VI (AD 1662-1705), for the maintainance of the Mathas Dharma. When the Rani came to know that duties were demanded of the Sringeri Matha by the Manujagara (local manager) in respect of the Mathas sarva mnnya village in Mukkarnad, she issued orders to the officers concerned cancelling them as irregular collections (AD 1691-92) and instructed that the Mathas previleges should be left free to be enjoyed by it without any hindrance, Chennammaji advised her adopted son Basavappa Nayaka to know the essence of the Advaita Siddhanta as expounded by the Sringeri Matha. She also issued orders to the Toll collectors not to collect the Toll on articles meant for the Matha.

(A History of Sringeri—By Dr. A. K. Shastry—unpublished Ph.D., Thesis–1976 and contents of the Kaditas of Sringeri Muttt—unpublished – Govt of Karnataka state Archives—compiled by Dr. A. K. Shastry-1974-P.336).

ಅನುಬಂಧ IV

ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಕವಿಲೆ ದುರ್ಗದ ಮಹಂತು ಮಠದಲ್ಲಿರುವ ೪ನೇ ತಾಮ್ರಶಾಸನ. (ಒಂದು ಹಲಗೆ)

ಮುಂಭಾಗ

೧ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ ತ್ರೈಲೋ

೨ ಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ ಜ

೩ ಯಾಭ್ಯುದಯ ಶಾಲಿವಾಹನ ಶಕ ವರುಷ ೧೫೯೫ನೆ

೪ ಯ ಪ್ರಮಾದಿ ಸಂವತ್ಸರದ ಮಾರ್ಗಶಿರ ಶು. ೧೫ಲು ಶ್ರೀಮ

೫ ತ್ಸಜನ ಶುಭ ಶಿವಾಚಾರ ಸಂಪಂನ ದ್ಯಾವಾಪೃಥ್ವಿ ಮಹಾ


೬ ಮಹತಿನವಳಗಾದ ಕೆಸನೂರ ಸೀಮೆ ವಳಗಣ ಉಳುವೆ
೭ ಯುಗ್ರಾಮದಲು ಕರ್ತರಯುನವರು ತಂಮ ತಾಯಿ ಲಿಂ
೮ ಗಂಮಾಜಿಯುವರ ಹೆಸರಲು ಕಟಿಸಿದ ಮಹತಿನ ಮ
೯ ಟವ ಧರ್ಮಕೆ ಶ್ರೀಮದ್ದೆಡವಮುರಾರಿ ಕೋಟಿಕೋಳಾಹಳವಿ
೧೦ ಶುಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಟಾಪಕ ಶಿವಗುರು
೧೧ ಭಕ್ತಿಪರಾಯಣರಾದ ಕೆಳದಿಸದಾಶಿವರಾಯನಾಯಕ
೧೨ ರ ವಂಶೋದ್ಭವರಾದ ಸಂಕಂಣನಾಯಕರ ಪ್ರಪೌತ್ರರು
೧೩ ಸಿದ್ದಪ್ಪನಾಯಕರ ಪೌತ್ರರು ಶಿವಪ್ಪನಾಯಕರ ಪುತ್ರರು
೧೪ ಸೋಮಶೇಖರನಾಯಕರ ಧರ್ಮಪತ್ನಿಯರಾದ ಚೆಂ
೧೫ ನಂಮಾಜಿಯುವರು ಬರಸಿಕೊಟ ಯೆತ್ತಿನಮಾನ್ಯ ಪ
೧೬ ಶಾಸನದ ಕ್ರಮವೆಂತ್ತೆಂದರೆ ಮಟಧರ್ಮಕೆ ೨೫ ಇಪತ್ತೈದು
೧೭ ಯೆತ್ತಿನ ಮಾನ್ಯವನು ಶಿವಾರ್ಪಿತವಾಗಿ ಬಿಟಿದ್ದೇವೆ | ಅಡ
೧೮ ಕೆ ಮೆಣಸು ಝುಲಿಪಟಿ ಖೊಬರಿ ಕವಾಡ ಮುಂತಾದ ಗಡಿಸಿನ
೧೯ ಸರಕು ಹೊರತಾಗಿ ಅಕಿ ಭತ ರಾಗಿ ಯೆಂಣೆ ತುಪ್ಪ ಾಾಯಿ
೨೦ ಜೆಲ್ಲ ವಿದುಳ ಮುಂತಾಗಿ ಯಿಕೇರಿ ದುರ್ಗದ ಹೋಬಳಿ

ಹಿಂಭಾಗ

೨೧ ಘಟಕೆಳಗಣ ಸುಂಕದ ಠಾಣೆಗಳಲಿ ಯೆತುಗಳ ವರ್ನ
೨೨ ವಯುಸ ಬರಸಿ ಹೇರಿಕೊಂಡು ಶಡ್ದರುಷೆನಕು ನಿಧಿವಾ
೨೩ ಡಿಕೊಂಡು ಮಹತು ಪರಂಪರೆಯಾಗಿ ಮಟಧರ್ಮ ನಡ
೨೪ ಸಿಕೊಂಡು ಬಾಹದೆಂದು ಕೊಟ ಧರ್ಮಶಾಸನ ಶ್ರೀ
೨೫ ಸದಾಶಿವ

MAR-1943 PH24.

ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಮೊಹಮ್ಮದ್ ಶರೀಫ್‌ರವರು ಕವಲೇದುರ್ಗ ಮಠದ ಶಾಸನಗಳನ್ನು ಅಧ್ಯಯಿಸಿ 'ಕವಲೇದುರ್ಗ, ಒಂದು ಐತಿಹಾಸಿಕ ಅವಲೋಕನ' ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ (ಮಾ. ಕ. ಸಂ. ೪ ಸಂ. ೩, ೧೯೭೪)



ವೀರರಾಣಿ ಚೆನ್ನಮ್ಮಾಜಿಯು ಭುವನಗಿರಿ ದುರ್ಗದಲ್ಲಿ ಕಾಲವಾಗಿದ್ದು ಬಿದನೂರು ಕೋಪ್ಪಲು ಮಠದಲ್ಲಿ ಸಮಾಧಿಯಾಯಿತು ಎಂಬುದಾಗಿ ಕೆಳದಿ ನೃಪವಿಜಯದಲ್ಲಿ ಲಿಂಗಣ್ಣ ಕವಿಯು ಉಲ್ಲೇಖಿಸಿದ್ದಾನೆ. ಈಗಿನ ಹಳೇನಗರದಲ್ಲಿರುವ (ಬಿದನೂರು) ಕೊಪ್ಪಳು ಮಠವಿತ್ತೆಂದು ಹೇಳಲಾದ ಪ್ರದೇಶದಲ್ಲಿ ಮೇಲ್ಕಂಡ ದೇಗುಲವೊಂದಿದೆ. ಈ ದೇಗುಲದಲ್ಲಿರುವ ವಿವಿಧ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಹಲವಾರು ಚೆನ್ನಮ್ಮಾಜಿಯನ್ನು ಕುರಿತು ಚರಿತ್ರೆಯ ಘಟನೆಗಳನ್ನೊಳಗೊಂಡ ಚಿತ್ರೀಕರಣಗಳು ಕಂಡುಬರುತ್ತವೆ. ಇದು ಚೆನ್ನಮ್ಮಾಜಿಯ ಸಮಾಧಿಗೆ ಸಂಬಂಧಪಟ್ಟ ಅವಶೇಷವಾಗಿರಬಹುದೇ ? ಸಂಶೋಧನೆ ನಡೆಸಿ ಕಾದು ನೋಡಬೇಕು !

ಬೆಳವಡಿ ಮಲ್ಲಮ್ಮ

ಚೆನ್ನಕ್ಕ ಎಲಿಗಾರ

ಕರ್ನಾಟಕದ ವೀರಶೈವ ರಾಜಮನೆತನಗಳಲ್ಲಿ ಬೆಳವಡಿ ಸಂಸ್ಥಾನವೂ ಒಂದು. ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನಿಂದ ೧೨ ಮೈಲು ದೂರದಲ್ಲಿರುವ ಈ ಹಳ್ಳಿ ಒಂದು ಕಾಲಕ್ಕೆ ವೀರತ್ವ ಪ್ರಕಟಪಡಿಸಿದ ಪ್ರಸಿದ್ಧ ಕೇಂದ್ರವೆನಿಸಿದ್ದಿತು. ಇದರ ಉಗಮವನ್ನು "ರಟ್ಟರಾಜಾನ್ವಯಸ್ತತ್ರ ರಾಷ್ಟ್ರಕೂಟ ಕ್ರಮಾಗತಃ" ಎಂದು "ತುರುಕಾರಿ ಪಂಚಮರ ಇತಿಹಾಸ"ದಲ್ಲಿ ಪ್ರಕಟವಾದ ದಾನಶಾಸನ ಕರೆಯುವಲ್ಲಿ ಇವರು ರಾಷ್ಟ್ರಕೂಟರಿಗೆ ಸಂಬಂಧಿಸಿದ ಸೌಂದತ್ತಿಯ ರಟ್ಟರಾಜರ ಶಾಖೆಯವರು ಎಂದು ತಿಳಿದುಬರುತ್ತದೆ. ಅಲ್ಲಿಂದ ಕವಲೊಡೆದು ಸುಮಾರು ೩೦೦ ವರ್ಷಗಳ ಹಿಂದೆ ೩೬೦ ಹಳ್ಳಿಗಗಳನ್ನೊಳಗೊಂಡು ಬೆಳವಡಿ ಸಂಸ್ಥಾನ ಸ್ವತಂತ್ರ ಅಸ್ತಿತ್ವ ಪಡೆಯಿತೆಂದು ತೋರುತ್ತದೆ. ಈ ಮನೆತನ ತನ್ನ ಆದ್ಯಂತ ಇತಿಹಾಸವನ್ನು ನಮಗೆ ತಿಳಿಸದಿದ್ದರೂ ಸುಮಾರು ೧೬೭೮ರಲ್ಲಿ ನಡೆದಿರಬಹುದಾದ ಬೆಳವಡಿಯ ಹೋರಾಟದ ಮೂಲಕ ನಮಗೆ ತನ್ನ ಐತಿಹಾಸಿಕ ಮಹತ್ವವನ್ನು ಸಾರುತ್ತದೆ.

ಕ್ರಿ. ಶ. ೯೮೦ರ ಮೊಗಲ ಶಾಸನ ಇದನ್ನು ಬೆಳವಾ", ಕ್ರಿ. ಶ. ೧೦೭೫ ರ ಬೆಳವಡಿ ಶಾಸನ 'ಬೆಳ್ವಾಡಿ' ಎಂದೂ ಕರೆದರೆ ಇತ್ತೀಚಿನ ಮರಾಠಿ ಶಕಾವಲಿ ಮತ್ತು ಬಖೈರುಗಳಲ್ಲಿ ಬಲೀವಡಿ, ಬಲವಾಡಾ, ಜೀಲವಾಡಿ, ಬಾಲೀವಾಡಿ ಎಂಬ ಉಲ್ಲೇಖಗಳಿವೆ. ಕ್ರಿ. ಶ. ೧೬೮೦ರ "ತುರುಕಾರಿ ಪಂಚಮರ ಇತಿಹಾಸ"ದಲ್ಲಿ ಪ್ರಕಟವಾದ ದಾನಶಾಸನ 'ಅಸ್ತಿಕರ್ನಾಟಕೇ ರಮ್ಯೇ ಬೆಳವಾಡಿಪುರಂ' ಎಂದು ಕರೆದಿದೆ. ಅಲ್ಲಿಯ ಜನಪದರು 'ಶಿವನ ಪೂಜೆಗೆ ಶ್ರೇಷ್ಠವಾದ ಬಿಲ್ವಮರಗಳ ಸಮೂಹವೇ ಬೆಳವಡಿ' ಎಂದು ನಿಷ್ಪತ್ತಿ ಹೇಳುತ್ತಾರೆ, ಈ ವಿಭಿನ್ನನಾಮಗಳು ಕಾರಣವಾಗಿ ಈ ಗ್ರಾಮದ ನಿಜವಾದ ಹೆಸರನ್ನು, ಅದರ ಅರ್ಥವನ್ನು ಹೇಳುವುದು ಇದು ಸಾಧ್ಯವಾಗದೆ ಹೋದರೂ ಇದರ ಪ್ರಾಚೀನತೆ ೧೦ನೆಯ ಶತಮಾನದಷ್ಟು ಹಿಂದೆ ಹೋಗುವುದು ನಿರ್ವಿವಾದ.

ಕನ್ನಡಿಗರ ಐತಿಹಾಸಿಕ ಪ್ರಜ್ಞೆಯ ಅವಜ್ಞೆ ಕಾರಣವಾಗಿ ಐತಿಹಾಸಿಕ ಆಧಾರಸಾಮಗ್ರಿಯ ಕೊರತೆ ಸಂಶೋಧಕನ ಪಾಲಿಗೆ ಬಹುದೊಡ್ಡ ಸಮಸ್ಯೆ

ಯಾಗಿದ್ದು ಬೆಳವಡಿಯ ಮಲ್ಲಮ್ಮನ ಇತಿಹಾಸ ಇದಕ್ಕೆ ಹೊರತಾಗಿಲ್ಲ. ೩೦೦ ವರ್ಷಗಳ ಅವಧಿಯಲ್ಲಿ ಕನ್ನಡ ದಾಖಲೆಗಳು ನಶಿಸಿ ಹೋಗಿದ್ದರೂ ಇದರ ಕೊರತೆಯನ್ನು ತಕ್ಕಮಟ್ಟಿಗೆ ತುಂಬಿಕೊಡುವವು ಮರಾಠಿ ಬಖೈರುಗಳು. ಅವುಗಳಲ್ಲಿ ಮುಖ್ಯವಾದುವು ಜೇಡೆ, ಶಕಾವಲಿ, ಸಭಾಸದ ಬಖೈರ, ಚಿತ್ರಗುಪ್ತ ಬಖೈರ, ೯೧ ಕಲಮಿ ಬಖೈರ, ಶಿವದಿಗ್ವಿಜಯ ಬಖೈರ, ಚಿಟ್ನೀಸ ಬಖೈರ ಮತ್ತು ಶೇಡಗಾಂವಕರ ಬಖೈರ ಇವು ಮಲ್ಲಮ್ಮನ ಸಮಕಾಲೀನವಾಗಿರದೆ ಮುಂದಿನ ಇನ್ನೂರು ವರ್ಷಗಳ ಗಡುವಿನಲ್ಲಿ ರಚಿತವಾದುದರಿಂದ ಇವುಗಳಲ್ಲಿ ಬರುವ ವಿಷಯವನ್ನು ತುಂಬ ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

ಸುಮಾರು ೧೭ನೆಯ ಶತಮಾನದಲ್ಲಿ ಈಶಪ್ರಭುವೆಂಬವ ಬೆಳವಡಿಯ ಆಡಳಿತ ನೋಡಿಕೊಳ್ಳುತ್ತಿದ್ದ. ೩೬೦ ಹಳ್ಳಿಗಳ ಆಧಿಪತ್ಯವನ್ನು ಕೈಕೊಂಡ ಈಶಪ್ರಭು ಪರಾಕ್ರಮಿ, ಒಳ್ಳೆಯ ಆಡಳಿತಗಾರನೆನಿಸಿದ್ದ. ವಿಜಯನಗರದ ಪಾಳೆಯಗಾರರಲ್ಲಿ ಒಬ್ಬರಾದ ಸ್ವಾದಿ ಮಧುಲಿಂಗನಾಯಕನ ಮಗಳು ಮಲ್ಲಮ್ಮ ಈಶಪ್ರಭುವಿನ ಧರ್ಮಪತ್ನಿ. ಮಲ್ಲಮ್ಮನನ್ನು ಈ ಬಖೈರುಗಳು ಹಲವಾರು ಹೆಸರುಗಳಿಂದ ಕರೆದಿವೆ. ಕ್ರಿ. ಶ. ೧೬೮೦ರ ಶಾಸನ ಇವಳನ್ನು 'ಮಲ್ಲಮಾಂಬಾ' 'ಮಲ್ಲನಾಯಕಿಣಿ' ೯೧ನೆಯ ಕಲಮಿಬಖೈರ ಮತ್ತು ಶಿವದಿಗ್ವಿಜಯ ಬಖೈರಗಳು 'ಸೌಭಾಗ್ಯವತಿ ಸಾವಿತ್ರಿ', 'ಸಾವಿತ್ರಿಬಾಈ' ಎಂದು, ಚಿತ್ರಗುಪ್ತ ಬಖೈರ 'ಲಾಲಬೀ', ಚಿಟ್ನೀಸ್ ಬಖೈರ 'ಮಲ್ಲವ್ವಾಈ', ಶೇಡಗಾಂವಕರ ಬಖೈರ 'ಮಲಪಾಈ' ಎಂದು ಕರೆದಿರುವುದುಂಟು. ಇವುಗಳಲ್ಲಿ 'ಸಾವಿತ್ರಿ' ಎಂಬುದು ದುರುದ್ದೇಶದಿಂದ ಮಾಡಿದ ನಾಮಾಂತರವಾಗಿರಬಹುದು 'ಲಾಲಬೀ' ಎಂಬುದು ಕವಿತಪ್ಪಿನಿಂದ ಸಂಭವಿಸಿರಬಹುದು. 'ಮಲ್ಲವಾಈ' ಎಂಬುದು ಅವಳ ಹೆಸರಿನ ಜನಸಾಮಾನ್ಯ ಉಚ್ಚಾರ. ಇದರ ಕೈತಪ್ಪು ಮಲಪಾಈ. ಈಕೆಯನ್ನು 'ದೇಸಾಯಿತಿ' ಎಂದು ಕೆಲ ಬಖೈರುಗಳು ಕರೆದರೆ 'ಪಾಟೀಲತಿ' ಎಂದಿದ್ದ ಕೆಲವು ಉಲ್ಲೇಖಗಳಿವೆ. ಮಲ್ಲಮ್ಮನನ್ನು ತುರುಕಾರಿ ಪಂಚಮರ ಇತಿಹಾಸದಲ್ಲಿ ಪ್ರಕಟವಾದ ಶಾಸನ "ಸರ್ವೇ ಪಾತೀವ್ರತ್ಯೇ ಸತೀಂ ಪರಾಕ್ರಮೇ ಕಾಲೀಂ ರಣೇದುರ್ಗಾಂ ರಾಜತಂತ್ರೇ ಪ್ರಮೀಲಿಕಾಂ ಸೌಂದರ್ಯೇಚ ರತಿಂ ಸಾಕ್ಷಾದ್ವಿದಾಯಾಂ ಚ ಸರಸ್ವತೀಂ ವಿಜ್ಞಾನೇ ಚ ತಥಾ ಗಾರ್ಗೀಂ ದಾನೇ ಕಲ್ಪಲತಾಮಿತಿ" ಎಂದು ವರ್ಣಿಸಿದೆ.

ಈಶಪ್ರಭು ಮಲ್ಲಮ್ಮ ಸುಖಸಂತೋಷದಿಂದ ರಾಜ್ಯಭಾರಗೈಯುತ್ತಿದ್ದ ಕಾಲ ಹಿಂದೂಧರ್ಮ ಸಾಮ್ರಾಜ್ಯಸ್ಥಾಪನೆಯ ಕಾರ್ಯದಲ್ಲಿ ಉದ್ಯುಕ್ತನಾದ ಶಿವಾಜಿ ದಕ್ಷಿಣದ ತಾಂಜಾವೂರನ್ನು ಗೆದ್ದು ಮರಳಿ ಹೋಗುವಾಗ ಸಂಪಗಾವಿಯ ಬಳಿ ಬೀಡುಬಿಟ್ಟಿದ್ದ. ಈ ಸಂದರ್ಭದಲ್ಲಿ ಅವನ ಸೈನ್ಯ ಸಮೂಹಕ್ಕೆ ಆಹಾರ, ದೈನಂದಿನ ವಸ್ತುಗಳ ಸರಬರಾಜಿನ ಅವ್ಯವಸ್ಥೆಯುಂಟಾಗಿ "ದಂಡಿನವರು ಹಾಲಿನ ದೆಸೆಯಿಂದ ಸುತ್ತಲಿನ ಗ್ರಾಮಗಳಲ್ಲಿರುವ ಗೋವುಗಳನ್ನು ಹೊಡೆದುಕೊಂಡು ಹೋಗಲಾರಂಭಿಸಿ" ದುದೇ ಯುದ್ಧಕ್ಕೆ ಕಾರಣವೆಂದು ತುರುಕಾರಿ ಪಂಚಮರ ಇತಿಹಾಸ ತಿಳಿಸಿದೆ. ಇನ್ನು ಹಲವಾರು ಗ್ರಂಥಗಳಲ್ಲಿ ಯುದ್ಧದ ಬೇರೆ ಬೇರೆ ಕಾರಣಗಳನ್ನು ಹೀಗೆ ಸೂಚಿಸ

ಶಾಸನದಲ್ಲಿ ಬೆಳವಡಿ ಮಲ್ಲಮ್ಮ



(ಉಲ್ಲೇಖ : ಪುಟ ೨೨೦–೨೨೧)

ಲಾಗಿದೆ. 'ಶಿವಾಜಿ ಮತ್ತು ಸಮಕಾಲೀನ' ಎಂಬ ಜದುನಾಥ ಸರಕಾರರ ಗ್ರಂಥ ಮತ್ತು ಸಭಾಸದ ಬಖೈರುಗಳು 'ಸಾವಿತ್ರಿಬಾಯಿ ಶಿವಾಜಿಯ ದವಸಧಾನ್ಯಗಳನ್ನು ಹೊತ್ತುಕೊಂಡ ಅನೇಕ ಎತ್ತುಗಳನ್ನು 'ಒಡಿಸಿಕೊಂಡು ಹೋದಳು' ಎಂದು ತಿಳಿಸಿವೆ. ಈ ಕಾರಣ ಏನೇ ಇರಲಿ ಶಿವಾಜಿಯು ಸೈನ್ಯ ಮಲ್ಲಮ್ಮನ ವಿರುದ್ಧ ಯುದ್ಧ ಹೂಡಿ ತೆಂಬುದಂತೂ ಸತ್ಯ.

ಈಶಪ್ರಭು ಕೋಟೆಯನ್ನು ಭದ್ರಪಡಿಸಿ ಯುದ್ಧಕ್ಕೆ ತಕ್ಕ ಸಿದ್ಧತೆ ಕೈಕೊಂಡ. ದಕ್ಷಿಣ ಭಾರತವನ್ನು ಅಲುಗಿಸಿ ಬಂದ ಶಿವಾಜಿಯ ಸೈನಿಕರಿಗೆ ಬೆಳವಡಿಯು ಕೋಟೆ ಮಣಿಯಲಿಲ್ಲ. ಅನೇಕ ದಿವಸಗಳ ಮುತ್ತಿಗೆ ವಿಫಲಗೊಳ್ಳುವ ಸಂದರ್ಭ ಬಂದಾಗ ಶಿವಾಜಿಯ ಅಧಿಕಾರಿಗಳು ಕುಹಕಕೃತ್ಯಗಳ ಮೂಲಕ ಕೋಟೆಯ ಬಾಗಿಲು ತೆಗೆಯಿಸಲು ಪ್ರಯತ್ನಿಸತೊಡಗಿದರು. ಮದ್ದು, ಗುಂಡು, ಕೊಳ್ಳಿ ಪ್ರಯೋಗದಿಂದ ಅವರು ಕೋಟೆಯ ಒಳಭಾಗದ ಕೆಲವು ಪ್ರದೇಶವನ್ನು ನಾಶಗೊಳಿಸಲು ಈಶಪ್ರಭು ಈ ಬೆಂಕಿಯನ್ನಾರಿಸಲು ಪ್ರಯತ್ನಿಸುತ್ತಿದ್ದಾಗಲೇ ಕೋಟೆಯ ಬಾಗಿಲು ತೆರೆದು ಶಿವಾಜಿ ಸೈನಿಕರು ಬೆಳವಡಿಯುವರನ್ನು ತರಿದೊಟ್ಟತೊಡಗಿದರು. ಇಂಥ ಸಂದಿಗ್ಧ ಸಂದರ್ಭದಲ್ಲಿ ಧೈರ್ಯಗುಂದದ ಈಶಪ್ರಭು ತನ್ನ ಸಮಸ್ತಸೈನ್ಯ ಸಮೇತ ಯುದ್ಧ ಕೈಕೊಳ್ಳಬೇಕಾಯಿತು. ಆದರೆ ವೈರಿಗಳ ಬಲ ಮೇಲಾಗಿ ಈಶಪ್ರಭು ಹೋರಾಡುತ್ತ ವೀರಸ್ವರ್ಗವೇರಿದ.

ಪ್ರಭುವಿನ ಮರಣ ಬೆಳವಡಿಯ ವೀರರನ್ನು ಕಣಕಾಲ ಧೃತಿಗೆಡಿಸಿತು. ಆದರೆ ಪ್ರಜೆಗಳ ರಕ್ಷಣೆಯೊಂದನ್ನೇ ಮೂಲಗುರಿಯಾಗಿಟ್ಟುಕೊಂಡ ಮಲ್ಲಮ್ಮ ಪತಿಮರಣ ದಿಂದ ಎದೆಗುಂದಲಿಲ್ಲ. ತೊಟ್ಟಿಲ ಮಗುವನ್ನು ಕೈಬಿಟ್ಟು ತಕ್ಷಣ ಯುದ್ಧದ ಸಿದ್ಧತೆ ಕೈಕೊಂಡು ಹಿಂಜರಿಯುತ್ತಿದ್ದ ತನ್ನ ಸೈನಿಕರನ್ನು ಹುರಿದುಂಬಿಸುತ್ತ, ಕೋಟೆ ಪ್ರವೇಶ ಮಾಡಿದ ವೈರಿಗಳ ಮೇಲೇರಿ ಹೋಗಿ ಅವರನ್ನು ಹೊರಹಾಕಿ ಕೋಟೆಯ ಬಾಗಿಲು ಮುಚ್ಚಿಸಿದಳು. ಮರಾಠರಿಗಾದ ಈ ಸೋಲು ಶಿವಾಜಿಯ ಮನಸ್ಸನ್ನೇ ಬಡಿದೆಬ್ಬಿಸಿರಲು ಸಾಕು. ಒಬ್ಬ ಹೆಣ್ಣುಮಗಳಿಂದ ತನ್ನ ಸೈನ್ಯ ಹಿಂಜರಿದು ಬಂದು ದನ್ನು ಕಂಡ ಶಿವಾಜಿ ಕೋಪಾವೇಶದಿಂದ ದಳಪತಿ ದಾದಾಜಿ ರಘುನಾಥನ ಹಿರಿತನ ದಲ್ಲಿ ಬೆಳವಡಿಗೆ ಮತ್ತೆ ಮುತ್ತಿಗೆ ಹಾಕಿಸಿದ. ಮಲ್ಲಮ್ಮ ಕೋಟೆಯ ಒಳಗಿದ್ದು ಮುಂಬರುವ ಆಘಾತವನ್ನೆದುರಿಸಲು ತಕ್ಕ ಸಿದ್ಧತೆ ಮಾಡಿಕೊಂಡಳು. ಸುಮಾರು ೨೭ ದಿವಸಗಳವರೆಗೆ ಕೋಟೆಯನ್ನು ಮುತ್ತಿನಿಂತ ಮರಾಠಾ ಸೈನಿಕರು ಕಂಗೆಡುವಂತೆ ಮಾಡಿದಳು. ಆದರೆ ಕೋಟೆಯ ಒಳಗಿದ್ದ ಆಹಾರಧಾನ್ಯಸಂಗ್ರಹ ಮುಗಿಯುತ್ತ ಬಂದಿತು. ಪ್ರಜೆಗಳ ಕರುಣಾಜನಕ ಸ್ಥಿತಿಯನ್ನು ನೋಡಲಾರದ ಮಲ್ಲಮ್ಮ ತಾನಾ ಗಿಯೇ ಕೋಟೆಯ ಬಾಗಿಲು ತೆಗೆಯಿಸಬೇಕಾಯಿತು. ಬೆಳವಡಿಯ ಸೈನಿಕರು ಮರಾಠರ ಸೈನ್ಯದ ಮೇಲೆ ಬಿದ್ದು ಹೋರಾಡಲಾರಂಭಿಸಿದರು. ಮಲ್ಲಮ್ಮ ತಾನು ಖಡ್ಗಧಾರಿಯಾಗಿ ವೈರಿಗಳನ್ನು ಸದೆಬಡಿಯತೊಡಗಿದಳು. ಇದೇ ಸಂದರ್ಭವನ್ನು ಸಾಧಿಸಿ ಮರಾಠರ ದಂಡನಾಯಕ ದಾದಾಜಿ ಹಿಂದಿನಿಂದ ಬಂದು ಮಲ್ಲಮ್ಮ ಕುಳಿತ ಕುದುರೆಯ ಹಿಂಗಾಲುಗಳನ್ನು ಕತ್ತರಿಸಿ ಹಾಕಿದ. ಕುದುರೆಯ ಮೇಲಿಂದ ಕೆಳಗುರುಳಿ

ಬಿದ್ದ ಮಲ್ಲಮ್ಮ ಹೆದರಲಿಲ್ಲ. ಆಕ್ರಮಣಕಾರರೊಡನೆ ಭಾವಾವೇಶದಿಂದ ನಿಂತು ಕೊಂಡೇ ಯುದ್ಧಮಾಡುತ್ತಿದ್ದ ಸಂದರ್ಭದಲ್ಲಿ ಬಲಗೈಗೆ ಉಂಟಾದ ಗಾಯದಿಂದ ಬಸವಳಿದು ಮೂರ್ಛೆಹೋಗಲು ಅಸಹಾಯಕಳಾಗಿ ಬಿದ್ದ ಮಲ್ಲಮ್ಮನನ್ನು ಸೈನಿಕರು ಬಂಧಿಸಿ ಶಿವಾಜಿಯ ಸಮ್ಮುಖಕ್ಕೆ ಕರೆದೊಯ್ದರು.

ಆದರೆ, ಬಂಧಿಸಲ್ಪಟ್ಟ ಅವಳನ್ನು ಶಿವಾಜಿಯ ಎದುರಿನಲ್ಲಿ ಕರೆತಂದಾಗ ಎಷ್ಟೋ ದಿವಸಗಳ ನಂತರ ತನ್ನ ಸೋದರಿಯನ್ನು ಕಂಡ ಭಾವನೆ ಶಿವಾಜಿಯಲ್ಲುದಯಿಸಿತು. ನಾಡಿನ ರಕ್ಷಣೆಗೆ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ಈ ಮಹಿಳೆಯನ್ನು ಕಂಡು ತನ್ನ ಸೈನಿಕರು ಮಾಡಿದ ತಪ್ಪಿಗೆ ಖಿನ್ನನಾದ ಶಿವಾಜಿ ಮಲ್ಲಮ್ಮನ ಬಂಧನ ಬಿಡಿಸಿ ಅವಳ ಸಾಹಸ ಪರಾಕ್ರಮಗಳಿಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ. ಅಲ್ಲದೆ ಅವಳನ್ನು ಮುಂದೆ ಎಂದೆಂದೂ ಸಹೋದರಿಯ ರೂಪದಲ್ಲಿ ಕಾಣುವುದಾಗಿ ಭಾಷೆಕೊಟ್ಟು ಗೆದ್ದ ರಾಜ್ಯವನ್ನು ಅವಳಿಗೆ ಮರಳಿ ಅವಳ ಮಗ ನಾಗಭೂಷಣನ ಸಮಸ್ತ ಜವಾಬ್ದಾರಿಯನ್ನು ತಾನೇ ನಿರ್ವಹಿಸಿಕೊಂಡ. ಈ ಬಾಂಧವ್ಯದ ಸವಿನೆನಪಿಗಾಗಿ ೪೦ ಹಳ್ಳಿಗಳನ್ನು ಮರಾಠರಿಗೂ, ೪೦ ಹಳ್ಳಿಗಳನ್ನು ಸಾಹುಕಾರ ವೀರಪ್ಪ ಸುಬೇದಾರರಿಗೂ ಉಳಿದ ೩೨೦ ಹಳ್ಳಿಗಳನ್ನು ಮಲ್ಲಮ್ಮನಿಗೆ ಮರಳಿ ಕೊಟ್ಟ. ಮಲ್ಲಮ್ಮನಿಗೆ ಕೊಟ್ಟ ೩೨೦ ಹಳ್ಳಿ, ಸಾಹುಕಾರ ವೀರಪ್ಪ ಸುಬೇದಾರನಿಗೆ ಕೊಟ್ಟ ೪೦ ಹಳ್ಳಿಗಳು ಮಲ್ಲಮ್ಮನ ಒಟ್ಟು ರಾಜಕೀಯ ವಿಸ್ತಾರವನ್ನು ಸೂಚಿಸುವವು. ಆದರೂ ಇಲ್ಲಿ ಮರಾಠರಿಗೆ ೪೦ ಹಳ್ಳಿ ಬಿಟ್ಟುದು ಸಂದಿಗ್ಧವೆನಿಸಿದರೂ ಶಿವಾಜಿ ತನ್ನ ಗೌರವಾರ್ಥ ಮಲ್ಲಮ್ಮನ ಹೆಸರಿನಿಂದ ಈ ೪೦ ಹಳ್ಳಿ ಕೊಟ್ಟದ್ದು ಅವಳು ಅವನ್ನು ಮರಾಠರಿಗೆ ಒಪ್ಪಿಸಿದಳೆಂದೂ ಊಹಿಸಬಹುದು. ಮಲ್ಲಮ್ಮನೊಡನೆ ಕ್ಷುಲ್ಲಕ ರೀತಿಯಲ್ಲಿ ವರ್ತಿಸಿದ ಸಬೂಜಿ ಗಾಯಕವಾಡನನ್ನು ಕಣ್ಣು ಕಿತ್ತಿಸಿ ಶಿಕ್ಷೆ ವಿಧಿಸಿದ.

ಶಿವಾಜಿ ಮತ್ತು ಬೆಳವಡಿಯ ಬಾಂಧವ್ಯ ಪ್ರಸಂಗವನ್ನು ಪ್ರತಿನಿಧಿಸುವ ಶಿಲ್ಪವೊಂದು ಯಾದವಾಡದಲ್ಲಿದೆ. ಮೂರು ಅಡಿ ಎತ್ತರವಾಗಿರುವ ಶಿಲ್ಪ ಎರಡು ಭಾಗಗಳನ್ನೊಳಗೊಂಡಿದ್ದು ಕೆಳಗಿನ ಭಾಗದಲ್ಲಿ ಮತ್ತೆ ಅಡ್ಡವಾಗಿ ಮೂರು ಭಾಗಗಳನ್ನು ಮಾಡಿಕೊಳ್ಳಲಾಗಿದೆ. ಮೇಲ್ಭಾಗದ ಶಿಲ್ಪದ ಮಧ್ಯದಲ್ಲಿ ಕಿರೀಟ, ಖಡ್ಗಧಾರಿಯಾದ ವೀರನೊಬ್ಬ ಎಡಭಾಗಕ್ಕೆ ಮುಖವಾಡಿ ಕುದುರೆಯ ಮೇಲೆ ಕುಳಿತಿದ್ದು ಅವನ ಹಿಂದೆ ಛತ್ರ ಹಿಡಿದ ಒಬ್ಬ ಸೇವಕ, ಹೂಜಿ ಹಿಡಿದ ಒಬ್ಬ ಸೇವಕ, ಕುದುರೆಯ ಕಾಲಡಿಯಲ್ಲಿ ಓಡುತ್ತಿರುವ ನಾಯಿ, ಅವನ ಮುಂಭಾಗದಲ್ಲಿ ಪುರುಷನೊಬ್ಬನ ಚಿತ್ರವನ್ನು ಕಂಡರಿಸಲಾಗಿದೆ. ಶಿಲ್ಪದ ಕೆಳಭಾಗದ ಮಧ್ಯದಲ್ಲಿ ಓರ್ವ ಪುರುಷನ ತೊಡೆಯ ಮೇಲೆ ಮಗುವೊಂದು ಕುಳಿತಿದ್ದು ಆ ವ್ಯಕ್ತಿ ಕೈಯಲ್ಲಿ ಬಟ್ಟಲೊಂದನ್ನು ಹಿಡಿದಂತೆ ಕಂಡು ಬರುವುದು. ಪುರುಷನ ಇಕ್ಕೆಲಗಳಲ್ಲಿ ಹೂಜಿ ಹಿಡಿದ ಇಬ್ಬರು ಮಹಿಳೆಯರು, ಹೂಜಿ, ಬಿಲ್ಲು ಹಿಡಿದು ನಿಂತ ಇಬ್ಬರು ಪುರುಷ ವಿಗ್ರಹಗಳಿವೆ. ಒಟ್ಟು ಚಿತ್ರ ಸುಂದರವಾಗಿದ್ದು ಸುಸ್ಪಷ್ಟವಾದ ರೀತಿಯಲ್ಲಿದೆ. ಈ ಚಿತ್ರ ಗಮನಿಸಿದರೆ ಶಿವಾಜಿ ಹಾಲಿನ ಬಟ್ಟಲು ಹಿಡಿಯುವುದರ ಮೂಲಕ ಮಲ್ಲಮ್ಮನ ಮಗ ನಾಗಭೂಷಣನಿಗೆ ರಕ್ಷಣೆಯ

ಭರವಸೆಯನ್ನೊದಗಿಸಿದುದು ಸ್ಪಷ್ಟವಾಗುತ್ತದೆ. ಈ ಸಂಗತಿಯನ್ನು ಪುರಂದರ ಲಿಖಿತ 'ರಾಜಾ ಛತ್ರಪತಿ' ಎಂಬ ಗ್ರಂಥದ ಉತ್ತರಾರ್ಧದಲ್ಲಿಯೂ ಕಾಣಬಹುದಾಗಿದೆ.

ತನ್ನ ಶೌರ್ಯ, ಪ್ರಜಾಪ್ರೇಮಗಳಿಂದ ಮೆರೆದ ಮಲ್ಲಮ್ಮನ ವ್ಯಕ್ತಿತ್ವನಿರ್ಮಾಣದಲ್ಲಿ ಪ್ರಾಚೀನ ಮಠಗಳಲ್ಲೊಂದಾದ ಹೂಲಿಯ ಬೃಹನ್ಮಠ ಮಹತ್ವದ ಪಾತ್ರ ವಹಿಸಿದೆ. ಈ ಬೃಹನ್ಮಠದ ೩೮ನೆಯ ಚರಪಟ್ಟಾಧಿಕಾರಿಗಳಾದ ಸಿದ್ಧವೀರಶಿವಾಚಾರ್ಯರ ರಾಜನೀತಿ, ಧರ್ಮಶ್ರದ್ಧೆ ಮಲ್ಲಮ್ಮನಂತಹ ಧರ್ಮವಂತಳನ್ನು ರೂಪಿಸಿದವು. ಈ ಗುರುಗಳಲ್ಲಿ ತುಂಬು ನಂಬಿಕೆಯನ್ನಿರಿಸಿದವಳು ಮಲ್ಲಮ್ಮ. ಸವದತ್ತಿಯ ದಟ್ಟಮನೆತನದ ವಂಶಜರು ವಿಜಾಪುರದ ಬಾದಶಹರ ಕಾಲದಲ್ಲಿ ಈ ಗುರುಗಳ ಅನುಗ್ರಹದ ಮೇರೆಗೆ ತುರುಕರನ್ನು ಜಯಿಸಿದ್ದರಿಂದ ಗುರುಗಳು ಅವರನ್ನು "ತುರುಕಾರಿ (ತುರುಕರ ವೈರಿ) ಪಂಚಮ"ರೆಂದು ಕರೆದರು. ಈ ತುರುಕಾರಿ ಪಂಚಮವರ್ಗಕ್ಕೆ ಸೇರಿದ ಬೆಳವಡಿ ಸಂಸ್ಥಾನಕ್ಕೆ ಹತ್ತಿದ "ಸಿದ್ಧವೀರ ಶಿವಾಚಾರ್ಯೋ ದತ್ತ ಶಾಪವಿಮೋಚನಂ । ಕೃತ್ವಾ ಸರ್ವತುರುಷ್ಕಾರಿ ಪಂಚಮಾನಾಂ ಗೃಹೇ ಗೃಹೇ" ಅಂದರೆ ಗುರುಗಳಿಂದ ಬಂದ ಶಾಪವನ್ನು ಪರಿಹರಿಸಿದ ಕೀರ್ತಿ ಮಲ್ಲಮ್ಮನಿಗೆ ಸಲ್ಲುವುದನ್ನು ದಾನಶಾಸನದಲ್ಲಿ ಅರಿಯಬಹುದಾಗಿದೆ. ಆದರೆ ಶಾಸನದಲ್ಲಿ ಶಾಪದ ಸಂದರ್ಭ, ಕಾರಣಗಳು, ವ್ಯಕ್ತವಾಗದೇ ಹೋದುದು ದುರ್ದೈವದ ಸಂಗತಿ.

ಮಲ್ಲಮ್ಮನ ಹೋರಾಟದ ನಂತರ ನಾಗಭೂಷಣನ ಚೌಲಕರ್ಮದ ನಿಮಿತ್ತ ಪೂವಲ್ಲಿ ಪಂಚವಣ್ಣಿಗಿಮಠದ ಸಿದ್ಧವೀರ ಮಹಾಸ್ವಾಮಿಗಳಿಗೆ ಪಟ್ಟಿಹಾರಪುರವನ್ನು, ಸಹಸ್ರನಾಣ್ಯಗಳನ್ನು ದಾನವಾಗಿ ಕೊಟ್ಟಿರುವುದನ್ನು

ಗುರುಂ ಸಮಭ್ಯರ್ಚ್ಯ ಯಥಾ ವಿಧಾನಂ ಗವಾಶತಂ ನಿಷ್ಕಸಹಸ್ರ ಕಂ ಚ
ಸಮರ್ಪ್ಯ ಪಟ್ಟಾಳಪುರಂ ತಥೈವ ವಿರುಜತೇಸ್ಮಿನ್ ಭುವಿ ಮಲ್ಲಮಾಂಬಿ ||

ಎಂಬ ಶಾಸನವಾಕ್ಯ ತಿಳಿಸುತ್ತದೆ. ಮುಂದೆ ಮಗನ ವಿವಾಹ ಸಂದರ್ಭದಲ್ಲಿ ಸೊಗಲ ಕ್ಷೇತ್ರದಲ್ಲಿ ಪಾರ್ವತಿ ಪರಮೇಶ್ವರರಿಗೆ ವಿವಾಹ ಮಂಟಪ ಕಟ್ಟಿಸಿ ದೇವರ ಪೂಜೆ ಪುರಸ್ಕಾರಕ್ಕೆ ಕೆಲವು ಭೂಮಿ ಬಿಟ್ಟಿರುವಳು. ಬೆಳವಡಿಯ ವೀರಭದ್ರ ದೇವರ ಪೂಜೆಗೆ ಶ್ರೀಪಾದಭಟ್ಟ ಜೋಶಿ ಎಂಬವರಿಗೆ ಗುಡಿಕಟ್ಟಿಗ್ರಾಮದ ಒಂದು ಮಾರು ಹೊಲವನ್ನು ವಂಶಪರಂಪರೆಯಾಗಿ ದಾನಕೊಟ್ಟ ಕೀರ್ತಿ ಇವಳದು. ಇಂತಹ ಉದಾರ ಹೃದಯವುಳ್ಳ ಮಲ್ಲಮ್ಮನನ್ನು "ವೀರಪತ್ನೀ ವೀರಮಾತಾಃ" ಎಂದು ಶಾಸನ ಕರೆದು ತನ್ನ ಗೌರವ ವ್ಯಕ್ತಪಡಿಸಿದೆ.

ಮಲ್ಲಮ್ಮ ನ್ಯಾಯವಿಚಾರಣೆಯ ಸಂದರ್ಭದಲ್ಲಿ ಗೌಡ ಹಿರೇಮನಿ, ಸಿದ್ಧಮನಿ, ಸಾವಿ, ರೊಟ್ಟಿ, ಹುಂಬಿ ಎಂಬ ಪಂಚರ ಮೂಲಕ ನಿರ್ಣಯ ಕೊಡಿಸುತ್ತಿದ್ದಂತೆ, ಜಮೀನಿನ ಕರ ತೆರಿಗೆ ವಸೂಲಿಗಳಿಂದ ಜನತೆಗೆ ಅನ್ಯಾಯವಾಗದಂತೆ ತುರಾಯಿ, ತಾಶೀಲದಾರ, ದೊಡ್ಡಮನಿ ಮತ್ತು ಕಿಮಸಿ ಎಂಬ ನಾಲ್ಕು ಜನರನ್ನು ನಿಯಮಿಸಿದ್ದಂತೆ ತಿಳಿದುಬರುತ್ತದೆ. ಕೋಟೆಯ ದೊಡ್ಡ ಮತ್ತು ಚಿಕ್ಕದ್ವಾರಗಳ ಕಾವಲುಗಾರ

ರನ್ನು, ಜಟ್ಟಿಗಳ ಕೆಲಸಗಾರರನ್ನು ಇನ್ನುಳಿದ ಅಧಿಕಾರಿಗಳನ್ನು ನಿಯಮಿಸಿಕೊಂಡು ಅವರಿಗೆ ಸಂಬಳಕ್ಕೆ ಬದಲು ಉಂಬಳಿ ಹಾಕಿಕೊಟ್ಟಿರುವಳು.

ಶಿವಾಜಿಯ ಹೋರಾಟದ ನಂತರದಲ್ಲೂ ಸುಮಾರು ೨೫ ವರ್ಷಗಳ ತುಂಬು ಬಾಳನ್ನು ಸಾಗಿಸಿದ ಮಲ್ಲಮ್ಮನ ಕೊನೆಯ ದಾನ ಕ್ರಿ. ಶ. ೧೭೧೩ರಲ್ಲಿ ಜರುಗಿರುವುದರಿಂದ ವಿದ್ವಾಂಸರ ಪ್ರಕಾರ ಕ್ರಿ. ಶ. ೧೭೧೩ ರಿಂದ ಕ್ರಿ. ಶ. ೧೭೧೮ರ ಅವಧಿಯಲ್ಲಿ ಈಕೆ ಲಿಂಗೈಕ್ಯಳಾಗಿರಬಹುದು.

ಕೆಲವು ಜನ ಇತಿಹಾಸಕಾರರ ಪ್ರಕಾರ ಕಿತ್ತೂರಿನ ಮಲ್ಲಸರ್ಜನಿಂದ ಬೆಳವಡಿ ನಾಶವಾಯಿತೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಆದರೆ ಇಂದು ಕಿತ್ತೂರು ಚನ್ನಮ್ಮನಂತೆ ಬೆಳವಡಿ ಮಲ್ಲಮ್ಮನ ಹೆಸರು ಕನ್ನಡಿಗರ ಮನದಾಳದಲ್ಲಿ ನೆಲೆ ನಿಂತಿದ್ದರೂ ಬೆಳವಡಿಯ ಇತಿಹಾಸಕ್ಕೆ ಸಂಬಂಧಿಸಿದ ಯಾವ ಐತಿಹಾಸಿಕ ಆಧಾರ ಸಾಮಗ್ರಿಯೂ ಕನ್ನಡದಲ್ಲಿ ದೊರೆಯದೆ ಹೋದುದು ಒಂದು ಬಹುದೊಡ್ಡ ಕೊರತೆ ಎನ್ನಬಹುದು. ಈ ಕೊರತೆಯನ್ನು ತುಂಬಿಕೊಂಡಲ್ಲಿ ಮಲ್ಲಮ್ಮನ ಚರಿತ್ರೆ ಕನ್ನಡನಾಡಿನ ವೀರಶೈವ ಇತಿಹಾಸದಲ್ಲಿ ಇನ್ನೂ ಮಹತ್ವಪೂರ್ಣ ಘಟಕವಾಗಿ ಕಂಗೊಳಿಸಬಹುದಾಗಿದೆ.

ಅನುಬಂಧ
ಮಲ್ಲಮ್ಮನ ದಾನ ಶಾಸನ*

ಶ್ರೀ ಗಣೇಶಾಯ ನಮಃ ಶ್ರೀ ಸಿದ್ಧನಂಜೇಶ್ವರಾಯ ನಮಃ । ನಮಃ ಶಿವಾಯ ಸೋಮಾಯ ಸರ್ವಸಿದ್ಧಿ ಪ್ರದಾಯಿನೇ ॥ ಸಚ್ಚಿದಾನಂದ ರೂಪಾಯ ಶಂಕರಾಯ ಪರಮಾತ್ಮನೇ । ಅಸ್ತಿ ಕರ್ನಾಟಕಕೇ ರಮ್ಯೇ ಬೆಳವಾಡಿಪುರಂ । ವರಂ ॥ ಸರ್ವೈಶ್ವರ್ಯ ಸಮೋಪೇತಂ ಸರ್ವದೇಶೇಷು ವಿಶ್ರುತಂ ॥ ರಟ್ಟರಾಜಾನ್ವಯ ಸ್ತತ್ರ ರಾಷ್ಟ್ರಕೂಟ ಕ್ರಮಾಗತಃ ॥ ಪೂವಲ್ಲಿ ಸಿದ್ಧನಂಜೇಶ ಕೃಪಾ ಛತ್ರಪವರ್ಧಿತಃ ॥ ತಸ್ಮಿನ್ ರಾಜಾನ್ವಯೇಕಾಚಿತ್ ಮಲ್ಲಮಾಂಬೇತಿ ವಿಶ್ರುತಾ ॥ ವೀರಪತ್ನೀ ವೀರಮಾತಾ

ಕ್ರಿ. ಶ. ೯೮೦ರ ಸೊಗಲದ ಶಾಸನವೊಂದರಲ್ಲಿ ಬೆಳವಾಡಿಯ ಕರಿಯ ಕೇತಿಮಯ್ಯನ ಮಡದಿ 'ಪರಮಮಾಹೇಶ್ವರಿ' ಎನಿಸಿದ ಧನಗರಗೋತ್ರದ ಕಂಚಿಕಬ್ಬೆ ಸೊಗಲಕ್ಷೇತ್ರದಲ್ಲಿ ಕೆಲ ದಾನ ಕಾರ್ಯ ಕೈಕೊಂಡ ಉಲ್ಲೇಖವಿದ್ದು, ಈ ಕ್ಷೇತ್ರದಲ್ಲಿ ತುಂಬು ನಂಬಿಕೆಯನ್ನಿರಿಸಿದ ಮಲ್ಲಮ್ಮನೂ ಕೆಲ ಮಹತ್ವದ ದಾನ ಕೈಕೊಂಡಿರುವಳು. ಇದರಂತೆ ಮಲ್ಲಮ್ಮನ ವಂಶಕ್ಕಿದ್ದ ತುರುಕಾರಿ ಎಂಬ ಪದವನ್ನು ತುರುಕರ+ಅರಿ ಎಂದು ಸಂಧಿ ಬಿಡಿಸಲು ಸಾಧ್ಯವಿಲ್ಲದುದರಿಂದ ತುರುಗಾಹಿ>ತುರುಕಾರಿ ಪದ ಬಂದಿರುವ ಸಾಧ್ಯತೆ ಇದೆ. ಇದರಿಂದ ಬೆಳವಡಿ ಮಲ್ಲಮ್ಮನ ವಂಶಜರು ಶಾಸನೋಕ್ತ ಕಂಚಿಕಬ್ಬೆಗೆ ಸಂಬಂಧಿಸಿದಂತೆ ಧನಗರ (ಕುರುಬ) ಗೋತ್ರದವರಿರಬಹುದೇ? ಎಂಬ ಊಹೆ ಮೂಡುತ್ತದೆ. ಬೆಳವಡಿಯ ಇತಿಹಾಸದ ಮೇಲೆ ಹೆಚ್ಚಿನ ಅಧ್ಯಯನ ಕೈಕೊಳ್ಳುವ ವಿದ್ವಾಂಸರು ಗಮನಿಸಬೇಕಾದ ಸಂಗತಿ ಇದು.

* ತುರುಕಾರಿ ಪಂಚಮರ ಇತಿಹಾಸ–ಪೇ. ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು

ಮಹಾರಾಜ್ಞೀ ವಿರಾಜತೆ || ಯಶ್ಯಾಂ ಕೃಪಾ ವಿಶೇಷಣ ಪೂಲೀ ಸಿಂಹಾಸನೇಶ್ವರಃ|| ಸಿದ್ಧವೀರ ಶಿವಾಚಾರ್ಯೋ ದತ್ತಶಾಪವಿಮೋಚನಂ ಕೃತ್ವಾ ಸರ್ವ ತುರುಷ್ಕಾರಿ ಪಂಚ ಮಾನಾಂ ಗೃಹೇ ಗೃಹೇ || ಅನ್ಯೋನ್ಯ ನಿರಪೇಕ್ಷೇಣ ಸಂಪತ್ಸಂತಾನಯೋಃ ಸ್ಥಿತಿಃ|| ಪ್ರಾಬಲ್ಯಂ ಚತಥಾ ಸ್ತ್ರೀಣಾ ಮಸ್ತು ಸರ್ವ ಸರ್ವತ್ರ ಸರ್ವದಾ || ಇತಿ ಪ್ರಸಾದ ವಾಕ್ಯೇ ನರರಾಕ್ಷಸ ಜಗದ್ಗುರುಃ ತಾಮಾಹುರ್ವಿಬುಧಾಃ ಸರ್ವೇ ಪಾತಿವೃತ್ಯೇ ಸತೀಂ ಪರಾ || ಕೋಪೆ ಕಾಲಿಂ ರಣೇ ದುರ್ಗಾಂ ರಾಜತಂತ್ರೇ ಪ್ರಮೀಲಾಕಾಂ || ಸೌಂದ ರ್ಯೇಚ ರತಿಂ ಸಾಕ್ಷಾದ್ವಿಧಾಯಾಂ ಚ ಸರಸ್ವತೀಂ | ವಿಜ್ಞಾನೇ ಚ ತಥಾ ಗಾರ್ಗೀಂ ದಾನೇ ಕಲ್ಪಲತಾಮಿತಿ || ಸೇಯಂ ಮಹಾರಾಜ್ಞೀ ಸ್ವಸ್ತಿ ಶ್ರೀಶಕ ೧೬೦೨ ತಮ ರೌದ್ರ ನಾಮಸಂವತ್ಸರೇ ಕಾರ್ತಿಕ ಶುಕ್ಲಪಕ್ಷ ದ್ವಾದಶ್ಯಾಂ ತಿಥೌ ಶ್ರೀ ವಿಶ್ವ ರಾಧ್ಯ ಚಿತ್ಕಲಾರೂಪ ಪೂವಲ್ಲೀ ಪಂಚವರ್ಣ್ಣಿಗಿ ಸಿದ್ಧನಂಜೇಶ ಪರಂಪರಾಗತ ನಿಜಗುರು ಸಿದ್ಧಬಸವ ಸಿದ್ಧವೀರ ಮಹಾಸ್ವಾಮಿನಾಂ ಸನ್ನಿಧಾನೇ ಸ್ವಪುತ್ರಸ್ಯ ನಾಗಭೂಷಣ ರಾಜಸ್ಯ ಚೌಲಕರ್ಮ ನಿಮಿತ್ತೇನ—

ಗುರುಂ ಸಮಭ್ಯರ್ಚ್ಯ ಯಥಾ ವಿಧಾನಂ ಗವಾಂ ಶತಂ ನಿಷ್ಕಸಹಸ್ರ ಕಂ ಚ
ಸಮರ್ಪ್ಯ ಪಟ್ಯಾಳಪುರಂ ತಥೈವ ವಿರುಜತೇಸ್ಮಿನ್ ಭುವಿ
ಮಲ್ಲಮಾಂಬಾ ||

ಸ್ವದತ್ತಾದ್ಧಿಗುಣಂ ಪುಣ್ಯಂ ಪರದತ್ತಾನುಪಾಲನಂ
ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್ ||
ಸ್ವದತ್ತಾಂ ಪರದತ್ತಾಂ ವಾಯೋ ಹರತಿ ವಸುಂಧರಾಂ ||
ಷಷ್ಠಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ||
ಇತಿ ಶ್ರೀಮಂಗಳಮಹಾ ಶುಭಂ ಭದ್ರಂ ಭೂಯಾತ್ ||

ರುಜು–ಬೆಳವಾಡಿ ಮಾಮಲೇಪರಗಣೀ

ಗ್ರಂಥಋಣ

೧. "ವೀರರಾಣಿ ಮಲ್ಲಮ್ಮ ಬೆಳವಡಿ ೩ನೆಯ ಶತಮಾನೋತ್ಸವದ ಸ್ಮರಣ ಸಂಚಿಕೆ" ಕೆಲವು ಲೇಖನಗಳನ್ನು ಉಪಯೋಗಿಸಲು ಅವಕಾಶ ನೀಡಿದ ಪ್ರಧಾನ ಸಂಪಾದಕ ಶ್ರೀ ಬಿ. ಆರ್. ಜಕಾತಿ ಮತ್ತು ಈ ಲೇಖನ ಸಿದ್ಧಪಡಿಸುವಲ್ಲಿ ಸಮಯೋಚಿತ ಸಲಹೆ ಸೂಚನೆ ನೀಡಿದ ಡಾ. ಎಂ. ಎಂ. ಕಲಬುರ್ಗಿಯವರಿಗೆ ಧನ್ಯವಾದಗಳು.

೨. ತುರುಕಾರಿ ಪಂಚಮರ ಇತಿಹಾಸ–ವೇ. ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು.

೩. ಶ್ರೀ ಪೂವಲ್ಲಿಯ ಸಿಂಹಾಸನ ಬೃಹನ್ಮಠದ ಸಂಕ್ಷಿಪ್ತ ಇತಿಹಾಸ–ಶ್ರೀ ನೀಲಕಂಠ ಶಿವಾಚಾರ್ಯರು.

೪. ಎ. ಇ. XVI ಪು. ೩. ಸೊಗಲ (ತಾ) ಸಪಪತ್ತಿ (ಕ್ರಿ. ಶ. ೯೮೦)

ಸಿರಸಂಗಿ-ನವಲಗುಂದ ರಾಣಿ ಚೆನ್ನಮ್ಮ (ಚೆನ್ನಾಂಬೆ)

ದೇವೇಂದ್ರಕುಮಾರ ಹಕಾರಿ

ಸಿರಸಂಗಿ ಸಂಸ್ಥಾನವನ್ನು ಸಿರಸಂಗಿ-ನವಲಗುಂದ ಸಂಸ್ಥಾನ ಎಂದೇ ಕರೆಯಲಾಗಿದೆ. ಸಿರಸಂಗಿ ಈ ಸಂಸ್ಥಾನದ ಮುಖ್ಯ ಪ್ರದೇಶವಾಗಿ ರೂಪಗೊಂಡದ್ದೇ ಇದಕ್ಕೆ ಕಾರಣ. ಆರಂಭದಲ್ಲಿ ಈ ಸಂಸ್ಥಾನದ ಮೂಲ ಪುರುಷರು ನವಿಲ್ಗುಂದ ನಾಡಿನ ಒಡೆಯರಾಗಿದ್ದು ಕಾಲಾಂತರದಲ್ಲಿ ಸಿರಸಂಗಿಗೆ ತಮ್ಮ ಸಂಸ್ಥಾನದ ಕಾರ್ಯ ಚಟುವಟಿಕೆಗಳನ್ನು ಕೇಂದ್ರೀಕರಿಸಿದುದರಿಂದ ಸಂಸ್ಥಾನದ ಹೆಸರಿನಲ್ಲಿ ಸಿರಸಂಗಿ ಸಮಾವೇಶಗೊಂಡಿತು. ಆದ್ದರಿಂದ ಸಿರಸಂಗಿ ದೇಸಗತಿ ಅಥವಾ ಸಿರಸಂಗಿ ಸಂಸ್ಥಾನ ಎಂದಾಗಲಿಲ್ಲ ಸಿರಸಂಗಿ-ನವಿಲ್ಗುಂದ ಸಂಸ್ಥಾನ ಎಂದೇ ಭಾವಿಸಲಾಗುತ್ತಿತ್ತು.

ಸಿರಸಂಗಿ ಇಂದು ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲೂಕಿನ ಒಂದು ಚಿಕ್ಕ ಗ್ರಾಮ.

ಪ್ರಸ್ತುತ ಚೆನ್ನಾಂಬೆ ಅಥವಾ ಚೆನ್ನಮ್ಮ ರಾಣಿ ಈ ಸಂಸ್ಥಾನದ ಒಡತಿಯಾಗುವ ಕಾಲ ೧೭೧೬ಕ್ಕೆ ಮೊದಲೇ ಸುಮಾರು ೨೦೦ ವರುಷ ಪೂರ್ವದಿಂದ ಈ ಸಂಸ್ಥಾನದ ಚರಿತ್ರೆ ಆರಂಭ.

ಉತ್ತರ ಕರ್ನಾಟಕ ಸೊನ್ನಲಿಗೆ-ಸೊಲ್ಲಾಪುರ-ಅಂದು 'ಎರೆನಾಡು' ಎಂದು ಪ್ರಸಿದ್ಧಿ ಪಡೆದಿತ್ತು. ಈ ಎರೆನಾಡಿನ ಭೀಮಾನದಿಯ ತಟದಲ್ಲಿ ಅವರಾದಿ ಗ್ರಾಮ. ಅಲ್ಲಿಯ ಗ್ರಾಮಾಧಿಪತಿ ಅಥವಾ 'ಗಾವುಂಡ' ಚಂದ್ರಗೌಡ. ಈತ ಕುಡುವಕ್ಕಲಿಗ ಮತಸ್ಥ. ಈತನ ಮಗ ವಿಟ್ಟಪ್ಪಗೌಡ.

ವಿಟ್ಟಪ್ಪಗೌಡ ವಿಜಾಪುರದ ಇಬ್ರಾಹಿಮ್ ಆದಿಲ್ ಶಾಹನನ್ನು ತನ್ನ ಶೌರ್ಯ ಪರಾಕ್ರಮಗಳಿಂದ ಮೆಚ್ಚಿಸಿದನು. ಯುದ್ಧ ಪ್ರಸಂಗವೊಂದರಲ್ಲಿ ತೀರಿದ ವಿಟ್ಟಪ್ಪಗೌಡನ ಪರಾಕ್ರಮಕ್ಕೆ ಮೆಚ್ಚಿದ ಬಾದಶಹ ಈ ಕೊಕಟ ನೂರು ಪರಗಣೆಯ ಒಡೆತನ ಕೊಟ್ಟ. ಇಬ್ರಾಹಿಮ್ ಆದಿಲ್‌ಶಾಹ್ ಸತ್ತ ಬಳಿಕ ಸೋದರ ಅಲಿ ಆದಿಲ್ ಶಾಹ್‌ನ ಆಳ್ವಿಕೆ. ವಿಜಯನಗರದ ರಾಮರಾಯ ಮತ್ತು ಆದಿಲ್ ಶಾಹ್ ಅವರ ಸಂಸ್ಥಾನದ ಒಡೆತನವನ್ನು ಸಮರ್ಥವಾಗಿ ಸಾಗಿಸಿಕೊಂಡು ಬಂದ ಲಿಂಗಗೌಡ ೧೭೧೬ರಲ್ಲಿ ಕಾಲವಶನಾದ. ಆಗ ಆತನ ಕಿರಿಯ ಪತ್ನಿ ಲಿಂಗಾಂಬೆ ಗರ್ಭಿಣಿ.

(೧೭೧೬–೧೭೩೪) ಪತಿಯ ಮರಣಾನಂತರ ಆತನ ಹಿರಿಯ ಪತ್ನಿ ಚೆನ್ನಾಂಬೆ ಸಂಸ್ಥಾನದ ರಾಜ್ಯಭಾರವನ್ನು ತಾನು ವಹಿಸುವುದಾಗಿ ನವಾಬರಿಗೆ ತಿಳಿಸಿದಳು. ಲಿಂಗಗೌಡರ ಪರಾಕ್ರಮ ಪ್ರಾಮಾಣಿಕತೆ; ಚೆನ್ನಾಂಬೆಯ ಉನ್ನತ ವ್ಯಕ್ತಿತ್ವದ ಬಗೆಗೆ ಗೌರವ ವಿಶ್ವಾಸಗಳನ್ನು ತಾಳಿದ್ದ ಸವಣೂರ ನವಾಬನು ಈ ಸೂಚನೆಗೆ ಸಮ್ಮತಿಯಿತ್ತು ಸಂಸ್ಥಾನದ ಕಾರ್ಯನಿರ್ವಹಣೆ ನಿರಾತಂಕವಾಗಿ ಸಾಗಲಿ, ತಮ್ಮಿಂದ ಮತ್ತೆ ಯಾವುದೇ ವಿಧವಾದ ನೆರವು ಬೇಕಾದರೂ ಪಡೆಯಬಹುದು ಎಂದು ಚೆನ್ನಾಂಬೆಯ ಆಡಳಿತಕ್ಕೆ ಶುಭ ಕೋರಿದನು.

ಸಿರಸಂಗಿ ಸಂಸ್ಥಾನದ ಆಡಳಿತದಲ್ಲಿ ನೇರವಾಗಿ ಪ್ರವೇಶ ಮಾಡಿ ಅದರ ಎಲ್ಲ ಮುಖ್ಯ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ತನ್ನ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಪ್ರಥಮ ಮಹಿಳೆ ಚೆನ್ನಾಂಬೆ.

ಧರ್ಮನಿಷ್ಠೆ, ಉನ್ನತ ಗುಣ ಶೀಲಗಳಿಂದ ಸಂಸ್ಥಾನದ ಜನತೆಯ ಪ್ರೀತಿ ವಿಶ್ವಾಸಗಳಿಸಿದ ಚೆನ್ನಾಂಬೆ ತನ್ನ ಸುತ್ತ ಮುತ್ತಣ ಆಳರಸರ ಮಹತ್ತರ ಕಾರ್ಯಗಳಲ್ಲಿಯೂ ತನ್ನ ತನವನ್ನು ಮೆರೆದು ತಾನು ಯಾವ ರೀತಿಯಲ್ಲೂ ಇತರರಿಗೆ ಕಡಿಮೆಯಲ್ಲ ಎನ್ನುವುದನ್ನು ಸಿದ್ಧಪಡಿಸಿದಳು.

ಸಂಸ್ಥಾನದ ಒಂದು ಭಾಗಕ್ಕೆ (ಪುಣ್ಯಪತ್ತನ) ಪುಣೆಯ ಪೇಶ್ವೆಯವರ ಆಳ್ವಿಕೆ. ಕರವೀರಪುರದ ಮರಾಠ ಅರಸು ಛತ್ರಪತಿ ಶಂಭುವಿಗೆ ತೊರಗಲ್ಲು ಒಂದು ತಲೆನೋವು. ತೊರಗಲ್ಲಿನ ಒಡೆಯ ಮರಾಠರಿಗೆ ಕಪ್ಪ ಕಾಣಿಕೆ ಕೊಡಲು ನಿರಾಕರಿಸಿದಾಗ ಛತ್ರಪತಿ ಶಂಭು ಸಿರಸಂಗಿಯ ರಾಣಿ ಚೆನ್ನಾಂಬೆಗೆ ನಿರೂಪ ಕಳಿಸಿ ನೆರವು ಕೋರಿದ. ಚಾಣಾಕ್ಷ ಮತಿ ಚೆನ್ನಾಂಬೆ ಮೊದಲು ಸೂಕ್ಷ್ಮವಾಗಿ ತೊರಗಲ್ಲು ಕೋಟೆಯ ಒಡೆಯನಿಗೆ ವಿಷಯ ತಿಳಿಸಿ ವಿಧೇಯರಾಗಿರಲು ಸೂಚಿಸಿದಳು. ವಿಧೇಯನೆ ಸ್ವಂತ ಶೈಲಿಯ ತೊರಗಲ್ಲು ಕೋಟೆಯ 'ಒಡೆಯ' ಜನರಿಗೆ ಅನೇಕ ಉಪದ್ರವಗಳನ್ನು ಕೊಡತೊಡಗಿದ. ಮತ್ತೆ ಮರಾಠ ಅರಸರಿಂದ ಚೆನ್ನಾಂಬೆಗೆ ಕೋರಿಕೆಗಳು ಬಂದವು. ಮರಾಠರ ಸೈನ್ಯಕ್ಕೆ ತನ್ನ ಸಂಸ್ಥಾನದ ಸೈನಿಕರನ್ನು ಕಳಿಸಿ ತೊರಗಲ್ಲು ಕೋಟೆ ಮತ್ತು ಆ ಪ್ರದೇಶದ ಜನತೆಯ ಹಿತರಕ್ಷಣೆಯ ಕಾರ್ಯದಲ್ಲಿ ಸಂಪೂರ್ಣ ಸಹಕಾರವಿತ್ತಳು. ಪುಣೆಯ ಪೇಶ್ವೆಯವರು ಚೆನ್ನಾಂಬೆಯ ಹಿರಿಮೆಯನ್ನು ಗುರುತಿಸಿ ತಮ್ಮ ಒಡೆತನದ ಬೆನಕನಕಟ್ಟೆ ಮತ್ತು ಬಸರಿಗೆ ಗ್ರಾಮಗಳನ್ನು ಉಂಬಳಿಯಾಗಿತ್ತರು.

ಸುಮಾರು ಇದೇ ಅವಧಿಯಲ್ಲಿ ಶಾಲಿವಾಹನ ಶಕೆ ೧೬೩೮ರಲ್ಲಿ ಲಿಂಗಗೌಡನ ಕಿರಿಯ ಪತ್ನಿ ಲಿಂಗಾಂಬೆ ಗಂಡು ಮಗುವಿಗೆ ಜನ್ಮವಿತ್ತಳು. ರಾಣಿ ಚೆನ್ನಾಂಬೆಯ ಹರ್ಷ ಸೀಮಾತೀತ. ಸಂಸ್ಥಾನದ ಗಾದಿ ಪಾಲಕ ಮೂಡಿದ ಎಂದು ಎಲ್ಲ ಕಡೆಗೆ ಡಂಗೂರ ಹೊಡೆಸಿ ಬಡಬಗ್ಗರಿಗೆ ಅನ್ನಸಂತರ್ಪಣೆ ನೆರವೇರಿಸಿದಳು. ಸಂಸ್ಥಾನದ ವಂಶದೀಪವನ್ನು ಬೆಳಗಿಸಿದ ಲಿಂಗಾಂಬೆಯನ್ನು ತಂಗಿಯಂತೇ ಪ್ರೀತಿಸಿ, ಹುಟ್ಟಿದ ಮಗುವಿಗೆ ಜಾಯಗೊಂಡ ಎಂದು ನಾಮಕರಣ ಮಾಡಿ ಮಗನ ಜೋಪಾನದ ಎಲ್ಲ ಹೊಣೆ ತಾನೇ ಹೊತ್ತಳು. ಈಗ ಆಕೆಯ ದೃಷ್ಟಿಯಲ್ಲಿ ಜಾಯಗೊಂಡನ ಜೋಪಾನಕ್ಕೆ

ಅತ್ಯಂತ ಮಹತ್ವದ್ದಾಗಿತ್ತು. ಆತ ಬೆಳೆದು ದೊಡ್ಡವನಾಗಿ, ಸಂಸ್ಥಾನದ ಸುತ್ತ ಮುತ್ತಣ ಪರಿಸ್ಥಿತಿಯನ್ನು ಎದುರಿಸುವ ಧೈರ್ಯಶಾಲಿಯಾಗಬೇಕು; ಯಾವುದೇ ಪ್ರಸಂಗದ ವಿಷಯಗಳನ್ನು ತಟ್ಟನೆ ಅರ್ಥಮಾಡಿಕೊಳ್ಳುವ ತೀಕ್ಷ್ಣಮತಿಯಾಗಿರಬೇಕು: ಜನಹಿತ,ಲೋಕ ಕಲ್ಯಾಣ ಕಾರ್ಯಗಳನ್ನು ಸಮರ್ಥನಾಗಿ ಮುನ್ನಡೆಯಿಸಿಕೊಂಡು ಹೋಗುವ ಬುದ್ಧಿಶಾಲಿಯಾಗಿರಬೇಕು. ಇಂಥ ಭಾವನೆಗಳಿಂದ ಪ್ರೇರಿತಳಾದ ಚೆನ್ನಾಂಬೆ ಮಗು ಜಾಯಗೊಂಡನನ್ನು ತನ್ನ ಕಣ್ಣ ಬೆಳಕಾಗಿ ಕಾಪಾಡಿದಳು. ಬೆಳೆಸಿದಳು.

ಜಾಯಗೊಂಡನ ಶಿಕ್ಷಣಕ್ಕಾಗಿ ಅಂದು ಪ್ರಸಿದ್ಧರೆನಿಸಿದ ಪಂಡಿತರನ್ನು ಸಂಸ್ಥಾನಕ್ಕೆ ಕರೆಯಿಸಿ, ಅವರಿಂದ ವೇದ, ಸ್ಮೃತಿ, ಜ್ಯೋತಿಷ್ಯ ಮುಂತಾದ ಸಕಲ ಶಾಸ್ತ್ರಗಳ ಅಧ್ಯಯನದ ಏರ್ಪಾಡು ಮಾಡಿದಳು. ಸಂಸ್ಕೃತ, ಮರಾಠಿ, ಕನ್ನಡ ಮುಂತಾದ ನಾಲ್ಕಾರು ಭಾಷೆಗಳ ಆಳವಾದ ಅಭ್ಯಾಸ ಮಾಡಿದ ಜಾಯಗೊಂಡ ಹೆತ್ತ ತಾಯಿ ಲಿಂಗಾಂಬೆಗಿಂತ, ಚೆನ್ನಾಂಬೆಯನ್ನೇ ನೆರಳಾಗಿ ಹಿಂಬಾಲಿಸಿದ.ಲಿಂಗಾಂಬೆ ಚೆನ್ನಾಂಬೆಯರಿಬ್ಬರ ಪ್ರೀತಿ ವಾತ್ಸಲ್ಯದಲ್ಲಿ ಜಾಯಗೊಂಡ ಬೆಳೆದ ನಿಜ; ಆದರೆ ಜನತೆಯ ದೃಷ್ಟಿಯಲ್ಲಿ ಜಾಯಗೊಂಡ ಚೆನ್ನಾಂಬೆಯ ಮಗನೇ ಎನ್ನುವಷ್ಟು ಆತ ತನ್ನ ದೊಡ್ಡವ್ವನಿಗೆ ಅಚ್ಚುಮೆಚ್ಚಾದನು.

ಜಾಯಗೊಂಡ ತನ್ನ ೧೦–೧೨ನೆಯ ವಯಸ್ಸಿಗೆ ತಾಯಿ ಚೆನ್ನಾಂಬೆಯ ಮಾರ್ಗದರ್ಶನದಲ್ಲಿ ಕುದುರೆಸವಾರಿ, ಬಿಲ್ವಿದ್ಯೆ, ಕತ್ತಿವರಸೆಗಳನ್ನು ಕಲಿಯಲು ಆರಂಭಿಸಿದ. ಸಮಕಾಲೀನರಲ್ಲಿ ಪ್ರಸಿದ್ಧರಾಗಿದ್ದ ಬೇರೆ ಬೇರೆ ಭಾಗದ ಜಟ್ಟಿಗಳನ್ನು ಕರೆಸಿದ ರಾಣಿ.ಜಾಯಗೊಂಡನಿಗೆ ಮಲ್ಲಯುದ್ಧಕ್ಕೆ ಸಂಬಂಧಿಸಿದ ತರಬೇತಿಗೂ ಅನುಕೂಲ ಮಾಡಿಕೊಟ್ಟಳು. ತನ್ನ ೧೫–೧೬ನೆಯ ವಯಸ್ಸಿಗೆ ಜಾಯಗೊಂಡ ೬೪ ಕಲೆಗಳಲ್ಲಿ ನಿಷ್ಣಾತನಾದನು. ಕೊಲ್ಲಾಪುರ, ಸವಣೂರು, ಪುಣೆ ಮುಂತಾದ ಕಡೆಯ ಕತ್ತಿವರಸೆ, ಮಲ್ಲಯುದ್ಧ ಸ್ಪರ್ಧೆಗಳಲ್ಲಿ ಭಾಗವಹಿಸಿ ತನ್ನ ನೈಪುಣ್ಯದಿಂದ ಎಲ್ಲರ ಗಮನ ಸೆಳೆದು ಮಲ್ಲಯುದ್ಧ ಪ್ರವೀಣನೆಂದು ಹೆಸರು ವಾಸಿಯಾದ. ಜಾಯಗೊಂಡನ ಈ ವಿಧದ ಬೆಳವಣಿಗೆಗೆ ಟೊಂಕ ಕಟ್ಟಿದ ರಾಣಿ ಚೆನ್ನಾಂಬೆಯನ್ನು ಸಿರಸಂಗಿ ಸಂಸ್ಥಾನದ ಜನ ಅತ್ಯಂತ ಗೌರವದಿಂದ ಕಾಣುತ್ತಿದ್ದುದು ಸಹಜವೇ.

ರಾಣಿ ಚೆನ್ನಾಂಬೆ ಮತ್ತು ಆಕೆಯ ಮಗ ಜಾಯಗೊಂಡನ ಶೌರ್ಯ ಪರಾಕ್ರಮಗಳ ಕೀರ್ತಿ ಸವಣೂರ ನವಾಬರ ಕಿವಿಗೆ ಬಿದ್ದಾಗ ಅವರು ಅತ್ಯಂತ ಹರ್ಷಪಟ್ಟರು. ತಮ್ಮ ಅಧೀನ ಸಂಸ್ಥಾನವೊಂದು ಇಂಥ ಗೌರವ, ಜನಾನುರಾಗಕ್ಕೆ ಪಾತ್ರನಾಗಿರುವುದು ತಮಗೂ ಶ್ರೇಯಸ್ಕರವೆಂದು ಭಾವಿಸಿದರು.

ಇದೇ ಅವಧಿಯಲ್ಲಿ ಸಿರಸಂಗಿ ನವಿಲ್ಗುಂದ ಸಂಸ್ಥಾನ ಮತ್ತು ಸವಣೂರ ನವಾಬರ ಸಂಬಂಧಗಳು ತುಂಬ ಗಾಢವಾಗುವಂಥ ಸಂದರ್ಭ ಒದಗಿ ಬಂದಿತು.

ಯಾವಗಲ್ಲ ವೆಂಕಟಗಿರಿ ಸ್ವಲ್ಪ ದುರಹಂಕಾರಿ. ಮತ್ತು ನಯವಂಚಕ. ಸ್ವಲ್ಪ ಅವಕಾಶ ಬಿಡದ ಇವನು ಸವಣೂರ ನವಾಬ ಅಬ್ದುಲ್ ಗಫಾರ ಖಾನರಿಗೆ ವಿಧೇಯರಾಗಿರಲು ಒಪ್ಪದೆ ಕಪ್ಪಕಾಣಿಕೆ ಕೊಡಲು ನಿರಾಕರಿಸಿದ. ಆಗ ನವಾಬ ಗಫಾರ

ಖಾನರು ತಮ್ಮ ಗೌರವಕ್ಕೆ ಪಾತ್ರರೂ, ತಮಗೆ ನಿಷ್ಠಾವಂತರೂ ಆಗಿದ್ದ ಸಿರಸಂಗಿ ಸಂಸ್ಥಾನದ ರಾಣಿ ಚೆನ್ನಾಂಬೆಗೆ ನಿರೂಪಿಕಳಿಸಿ, ಯಾವಗಲ್ಲಿನ ವೆಂಕಟಗಿರಿಯ ಬಗೆಗೆ ತಮಗಾದ ಅಸಮಾಧಾನ, ಆತಂಕಗಳನ್ನು ತಿಳಿಸಿ ಈ ವಿಷಯದ ಎಲ್ಲ ಹೊಣೆಯನ್ನು ರಾಣಿ ಚೆನ್ನಾಂಬೆಯೇ ಹೊತ್ತು ಕಾಯದೆ ಪೂರೈಸಿ ತಮ್ಮ ಮೇಲಿನ ನಿಷ್ಠೆಯನ್ನು ಸಾಬೀತು ಗೊಳಿಸಬೇಕಾಗಿ ಸೂಚಿಸಿದರು. ಸವಣೂರ ನವಾಬರ ನಿರೂಪವಲ್ಲಿ ಯಾವುದೇ ವಿಧವಾದ ನಿರ್ಲಕ್ಷ್ಯ, ಕೊಂಕುಗಳು ಇರಲಿಲ್ಲ: ಆದರೆ ನಿಷ್ಠೆಯನ್ನು ಸಾಬೀತುಗೊಳಿಸುವ ಮಾತು ರಾಣಿ ಚೆನ್ನಾಂಬೆಯ ಸ್ವಾಭಿಮಾನವನ್ನು ಕೆರಳಿಸಿತು. ಸವಣೂರ ನವಾಬರ ನಿರೂಪಕ್ಕೆ ಉತ್ತರ ಬರೆಯಿಸಿ, ತಮ್ಮ ಸಂಸ್ಥಾನ ಸಂಬಿವರಿಗೆ ಸದಾ ನಿಷ್ಠವಾಗಿರುವದಾಗಿಯೂ ಹಿಂದೆ ಬೆಟ್ಟಗೇರಿಯ ಮಾಂಡಲಿಕನು ಸವಣೂರ ನವಾಬರಿಗೆ ಅವಿಧೇಯತೆಯನ್ನು ತೋರಿದಾಗ ತಾವು ವ್ಯಕ್ತ ಪಡಿಸಿದ ನಿಷ್ಠೆ ಶ್ರದ್ಧೆಗಳು ಇಂದಿಗೂ ಜ್ವಲಂತವಾಗಿರುವುದೇ ಈ ರೀತಿಯ ಆತಂಕಕ್ಕೆ ಕಾರಣಗಳಿಲ್ಲವೆಂದೂ ನಮ್ರವಾಗಿ ತಿಳಿಯ ಪಡಿಸಿದಳು.

ಸವಣೂರ ನವಾಬ ನರಗುಂದದ ಅರಸರಿಗೂ ಈ ವಿಷಯದಲ್ಲಿ ನೆರವು ಕೇಳಿದ್ದರೂ ಅವರಿಂದ ಯಾವುದೇ ಬಗೆಯ ನಿಶ್ಚಿತ ಆಶ್ವಾಸನೆ ದೊರಕಿರಲಿಲ್ಲ. ಆದರಿಂದಾಗಿ ಸ್ವಲ್ಪ ಅಸ್ತವ್ಯಸ್ತರಾಗಿದ್ದ ನವಾಬರಿಗೆ ಚೆನ್ನಾಂಬೆಯ ಆಶ್ವಾಸನೆಯಿಂದ ನೆಮ್ಮದಿಯೆನಿಸಿತು.

ನರಗುಂದದ ಸಚಿವನಾಗಿದ್ದ ರಾಮರಾಯ ಕೆಲವು ಆಂತರಿಕ ಕಾರಣಗಳಿಂದಾಗಿ ಯಾವಗಲ್ಲ ವೆಂಕಟಗಿರಿಯ ತಂಟೆಗೆ ಹೋಗಿರಲಿಲ್ಲ. ಆದರೆ ವೆಂಕಟಗಿರಿಯ ಉಛೃಂಖಲ ವೃತ್ತಿ ಕ್ಷುಲ್ಲಕತನ, ಮೋಸ, ವಂಚನೆಗಳಿಂದಾಗಿ ನರಗುಂದದವರೂ ಒಳಗೊಳಗೇ ಇವನಶತ್ರುಗಳಾಗಿದ್ದರು, ಏಕೆಂದರೆ ನರಗುಂದ ಪ್ರದೇಶದಲ್ಲಿ ಒಳನುಗ್ಗಿ ಲೂಟಿ ಮಾಡಿಸುವುದು, ಕೊಳ್ಳೆ ಹೊಡೆಯುವುದು ಮುಂತಾದ ದುಷ್ಟಕಾರ್ಯಗಳಿಗೆ ಈ ವೆಂಕಟಗಿರಿ ಕಾರಣನಾಗಿದ್ದುದು ಅವರಿಗೆ ತಿಳಿದಿತ್ತು.ಇಷ್ಟಿದ್ದರೂ ನೇರವಾಗಿ ಅವನ ಮೇಲೆ ಯಾವದೇ ಸೈನಿಕ ಕ್ರಮ ಕೈಕೊಳ್ಳಲು ಹಿಂದೇಟು ಹಾಕುತ್ತಿದ್ದರು.ಇಂಥ ಕೆಲವು ಸಂಗತಿಗಳಿಂದ ಪ್ರಚೋದಿತನಾದ ವೆಂಕಟಗಿರಿ ಯಾವಗಲ್ಲ ಯಾರ ಆಧೀನವೂ ಇಲ್ಲ; ಸವಣೂರ ನವಾಬರಿಗೆ ನಾವು ಕಪ್ಪ ಕಾಣಿಕೆ ಸಲ್ಲಿಸುವುದಿಲ್ಲ ಎಂದು ಮುಂತಾಗಿ ಸಾರಿದ್ದೇ ಅಲ್ಲದೆ ಇತ್ತ ಸವಣೂರ ಸಂಸ್ಥಾನದ ಒಳ ಪ್ರದೇಶಗಳಿಗೂ ನುಗ್ಗಿ ಜನರಿಗೆ ಉಪದ್ರವ ಕೊಡುತ್ತಿದ್ದನು. ಇವನ ಈ ರೀತಿಯ ಹಾವಳಿ ಹೆಚ್ಚಾದ ಸಂದರ್ಭದಲ್ಲಿಯೇ ಸವಣೂರ ನವಾಬನು ಸಿರಸಂಗಿ ಸಂಸ್ಥಾನದ ರಾಣಿ ಚೆನ್ನಾಂಬೆಯ ನೆರವು ಕೇಳಿದ್ದು, ಅಷ್ಟೇ ಅಲ್ಲ, ಅವರ ನಿಷ್ಠೆಯ ಪ್ರಶ್ನೆಯನ್ನು ಅದರಲ್ಲಿ ಅಡಕಗೊಳಿಸಿದ್ದು.

ರಾಣಿ ಚೆನ್ನಾಂಬೆ ಗೂಢಚಾರರನ್ನು ಯಾವಗಲ್ಲಿನ ಭಾಗಗಳಿಗೆ ಕಳಿಸಿದ್ದಲ್ಲದೆ, ಕೆಲವು ನಿಷ್ಠಾವಂತ ಸೈನಿಕ ಅಧಿಕಾರಿಗಳನ್ನು ವಸ್ತು ಸ್ಥಿತಿಯ ನೇರ ತಿಳುವಳಿಕೆಗಾಗಿ ಇತರ ಕಡೆಗಳಿಗೂ ಕಳಿಸಿದಳು.ವೆಂಕಟಗಿರಿಯ ಸೈನ್ಯ;ಅದರ ಶಕ್ತಿ ವಿವರಗಳು;ಜೊತೆಗೆ ಅವನ ಬೆಂಗಾವಲಾಗಿನಿಂತ ತರಬೇತು ಇಲ್ಲದ ಕೆಲವು ಪುಂಡ ಪುಢಾರಿಗಳ ದರೋಡೆಕೋರರ ವಿಷಯಗಳು ಈ ಎಲ್ಲ ಮಾಹಿತಿಗಳನ್ನು ತರಿಸಿ ಯಾವಗಲ್ಲ ಮೇಲೆ ನೇರವಾಗಿ

ದಾಳಿ ಮಾಡುವ ನಿರ್ಧಾರ ಕೈಕೊಂಡಳು. ತಾಯಿಯ ಈ ನಿರ್ಧಾರಕ್ಕೆ ಹರ್ಷಿತನಾದ ಜಾಯಗೊಂಡ ಈ ಪ್ರಸಂಗ ತನ್ನ ಶೌರ್ಯದ ಒರೆಗಲ್ಲು ಎಂದು ಭಾವಿಸಿದ.

ಚೆನ್ನಾಂಬೆ ತನ್ನ ನಿಷ್ಠಾವಂತ ಶೂರ ಸೈನಿಕ ಪಡೆಯೊಂದನ್ನು ಕೂಡಿ, ಯಾವಗಲ್ಲನ್ನು ಮುತ್ತಿ, ವೆಂಕಟಗಿರಿಯ ದರೋಡೆಗಾರರ ಪುಂಡರ ಗುಂಪನ್ನು ಸದೆ ಬಡಿದಳು: ಜಾಯಗೊಂಡ ತಾಯಿಯ ರುದ್ರರೂಪದಿಂದ ಪ್ರೇರಣೆ ಪಡೆದು ಅತಿ ಪರಾಕ್ರಮದಿಂದ ಹೋರಾಡಿ ತಾಯಿಯ ಮೆಚ್ಚುಗೆಗೆ ಪಾತ್ರನಾದ. ಆದರೆ ವೆಂಕಟಗಿರಿಯು ಸುತ್ತಲೂ ಇದ್ದ ಗುಂಪು ಹೋರಾಟವನ್ನು ಎದುರಿಸದೆ ಅಲ್ಲಿಂದ ಪಲಾಯನ ಗೈದುದರಿಂದ ಜಾಯಗೊಂಡ ತನಗಾದ ನಿರಾಸೆಯನ್ನು ತಾಯಿಯೆದುರು ಆಡಿಯೂ ತೋರಿಸಿದ. ಆ ಬಳಿಕ ಸೊಕ್ಕಿಳಿದು ಶರಣಾಗತನಾದ ಚೆನ್ನಾಂಬೆಯ ಈ ದಾಳಿಯಿಂದ ತತ್ತರಿಸಿದ ವೆಂಕಟಗಿರಿ, ಸೋಲೊಪ್ಪಿ ಶರಣಾಗತನಾಗಬೇಕಾಯಿತು. ಸುಪ್ರೀತರಾದ ಸವಣೂರ ನವಾಬರು ಯಾವಗಲ್ಲು ಗ್ರಾಮವನ್ನು ಚೆನ್ನಾಂಬೆಗೆ ಉಂಬಳಿಯಾಗಿ ನೀಡಿ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು. ಸಿರಸಂಗಿ ರಾಣಿಯ ಈ ದಿಟ್ಟ ಕ್ರಮ, ಮತ್ತು ಸಾಹಸಗಳಿಗೆ ಮೆಚ್ಚಿ ನರಗುಂದ ಸೀಮೆಯ ಕೆಲವು ಫಲವತ್ತಾದ ಹೊಲಗಳನ್ನು ನರಗುಂದದ ಸಚಿವ ರಾಮರಾಯರು 'ಕುಪ್ಪಸಗಯ್' ಗಳೆಂದು ಸಿರಸಂಗಿ ನವಿಲ್ಗುಂದ ಸಂಸ್ಥಾನಕ್ಕೆ ಕಾಣಿಕೆಯಾಗಿ ಸಲ್ಲಿಸಿದರು.

ಅಬ್ದುಲ್ ಗಫಾರಖಾನ ಅವರ ಕಾಲಾನಂತರ ಮುಜೀದಖಾನನು ಸವಣೂರ ಸಂಸ್ಥಾನದ ನಡೆಯುನಾದನು. ಈತನು ಸಂಸ್ಥಾನದ ರಾಜ್ಯಭಾರದ ಹೊಣೆಹೊತ್ತ ಕೂಡಲೇ ತನ್ನ ಅಧೀನದ ಎಲ್ಲ ಹಿರಿ ಕಿರಿಯ ಸಂಸ್ಥಾನ ದೇಶಗತಿಗಳಿಗೆ ನಿರೂಪಕಳಿಸಿ ಎಲ್ಲರೂ ಈ ವೊಗಲಿನಂತೆ ಸವಣೂರ ನವಾಬರಿಗೆ ನಿಷ್ಠರಾಗಿ ಉಳಿದು ಎಂದಿನಂತೆ ತಮ್ಮ ಸೇವೆಯನ್ನು ಮುಂದುವರೆಸಬೇಕೆಂದು ಸೂಚಿಸಿದ. ಹುಯಿಲಗೋಳದ ದೇಶಗತಿಯವರು ಮಾತ್ರ ನವಾಬನ ಆಜ್ಞೆಯನ್ನು ಉಲ್ಲಂಘಿಸಿ ತಾವು ಯಾರಿಗೂ ಅಧೀನರಲ್ಲ ಎಂದು ಸಾರಿದರು. ನವಾಬನು ಖೇಧಖಿನನು ತನ್ನ ತಂದೆಯ ಕಾಲದಲ್ಲಿ ನಡೆದ ಯಾವಗಲ್ಲ ಪ್ರಸಂಗ, ಮತ್ತು ಆಗ ತಮಗೆ ನಿಷ್ಠರಾಗಿ ನಿಂತ ಸಿರಸಂಗಿ ಸಂಸ್ಥಾನವನ್ನು ಸ್ಮರಿಸಿಕೊಂಡು ಚೆನ್ನಾಂಬೆಗೆ ಈ ವಿಷಯ ವಿವರಗಳನ್ನು ತಿಳಿಸಿ ಹಿಂದಿನಂತೆ ಈಗಲೂ ತಮಗೆ ಒದಗಿ ಬಂದ ಅಡ್ಡಿ ಆತಂಕಗಳನ್ನು ನಿವಾರಿಸುವಂತೆ ಕೇಳಿಕೊಂಡನು. ಹುಯಿಲಗೋಳ ದೇಶಗತಿಯ ಈ ಧೋರಣೆಗೆ ಅಲ್ಲಲ್ಲಿರುವ ಸಣ್ಣಪುಟ್ಟ, ಗೌಡ ದೇಸಾಯರೂ, ಪುಂಡರೂ ಬೆಂಬಲವಾಗಿ ನಿಂತರು. ಇದನ್ನು ಬಲಿಯಗೊಡಬಾರದೆಂದೂ ಈ ಪುಂಡರ ಮೇಲೆ ನೇರವಾಗಿ ಸವಣೂರ ನವಾಬರ ದಂಡು ದಾಳಿಮಾಡುವದೆಂದೂ ಸಿರಸಂಗಿಯ ರಾಣಿ ತನ್ನ ಶೂರ ಸಿಪಾಹಿಗಳೊಂದಿಗೆ ಸೇರಿ ಕಾದಾಡಿ ಗೆಲುವು ತಂದುಕೊಡಬೇಕೆಂದೂ ಮುಜೀದಖಾನನು ರಾಣಿ ಚೆನ್ನಾಂಬೆಯನ್ನು ಕೇಳಿಕೊಂಡನು.

ಚೆನ್ನಾಂಬೆಯ ಸೈನಿಕರ ಜೊತೆಗೂಡಿ ಸವಣೂರ ನವಾಬರ ದಂಡು ಹುಯಿಲಗೋಳದ ದೇಶಗತಿಯ ಬೆಂಬಲಕ್ಕಿದ್ದ ಪುಂಡರ ಮೇಲೆ ದಾಳಿ ಮಾಡಿತು. ಹುಯಿಲಗೋಳದಲ್ಲಿ ನಡೆದ ಯುದ್ಧದಲ್ಲಿ ಚೆನ್ನಾಂಬೆ ಮತ್ತು ಜಾಯಗೊಂಡ ನೇರವಾಗಿ ಹೋರಾಡಿ

ನವಾಬರ ಪ್ರತಿಷ್ಠೆಗೆ ಕಳಸವಿಟ್ಟರು. ಚೆನ್ನಾಂಬೆ ಜಾಯಗೊಂಡರ ಈ ಸಾಮೂಹಿಕ ಸಹಾಯದ ಸ್ಮರಣಾರ್ಥ ಸವಣೂರ ನವಾಬನು ಸವದತ್ತಿ, ಕರಿಕಟ್ಟಿ ಹಂಚಿನಾಳ ಗುರ್ಲಹೊಸೂರ ಮುಂತಾದ ಗ್ರಾಮಗಳನ್ನು ಸಿರಸಂಗಿ ನವಿಲ್ಗುಂದ ಸಂಸ್ಥಾನಕ್ಕೆ ಕಾಣಿಕೆಯಾಗಿ ಕೊಟ್ಟು ಪರಸ್ಪರ ವಿಶ್ವಾಸ ಸಹಕಾರಗಳು ಹೀಗೆಯೇ ಮುಂದುವರೆಯಬೇಕೆಂದು ಕೋರಿದನು.

ಈ ಮೇಲಿನ ಘಟನೆಗಳಿಂದ ವ್ಯಕ್ತವಾಗುವ ಸಂಗತಿಗಳು:

೧) ಸಿರಸಂಗಿ ನವಿಲ್ಗುಂದ ಸಂಸ್ಥಾನದ ಚರಿತ್ರೆಯಲ್ಲಿ ಸಂಸ್ಥಾನದ ಒಡೆತನವನ್ನು ಆಡಳಿತ ಸೂತ್ರಗಳನ್ನು ಕೈಗೆ ತೆಗೆದುಕೊಂಡ ಪ್ರಥಮ ಮಹಿಳೆ ರಾಣಿ ಚೆನ್ನಾಂಬೆ.

೨) ಸಂಸ್ಥಾನದ ಹಿತ ರಕ್ಷಣೆಯ ದೃಷ್ಟಿಯಿಂದ ಅನಿವಾರ್ಯವಾಗಿ ಬೇರೆ ಬೇರೆ ಪ್ರಸಂಗಗಳಲ್ಲಿ ಜರುಗಿದ ಯುದ್ಧಗಳಲ್ಲಿ ರಣರಂಗವನ್ನು ಪ್ರವೇಶಿಸಿ ನೇರವಾಗಿ ಹೋರಾಡಿದ ಮಹಿಳೆ ರಾಣಿ ಚೆನ್ನಾಂಬೆ.

೩) ಪತಿಯ ಮರಣಾನಂತರ ತಾನು ಸಂಸ್ಥಾನದ–ವಂಶದ ಕುಡಿ ಜಾಯಗೊಂಡನನ್ನು ತನ್ನ ಸ್ವಂತ ಮಗನಿಗಿಂತ ಅಧಿಕ ಪ್ರೀತಿಯಿಂದ ಪೋಷಿಸಿ ಸಕಲವಿದ್ಯಾಪಾರಂಗತನನ್ನಾಗಿ ರೂಪಿಸಿ, ಸಂಸ್ಥಾನದ ಘನತೆಗೆ ತಕ್ಕ ಪರಾಕ್ರಮ ಸಾಹಸಗುಣಗಳನ್ನು ಆತನಲ್ಲಿ ತುಂಬಿ, ಆಡಳಿತದ ಎಲ್ಲ ಸ್ಥಳಗಳಲ್ಲೂ ಆತನಿಗೆ ಮಾರ್ಗದರ್ಶನ ನೀಡಿದ ಉದಾತ್ತ ನೀತಿ ಮತ್ತೆಯಿಂದ ಬಾಳಿದ ತಾಯಿ ರಾಣಿ ಚೆನ್ನಾಂಬೆ.

೪) ಕೇವಲ ತನ್ನ ಸಂಸ್ಥಾನದ ಹಿತ ರಕ್ಷಣೆಯನ್ನು ಮಾತ್ರ ಗಮನಿಸದೆ, ತನ್ನ ಉನ್ನತ ಆದರ್ಶಗಳಿಂದಾಗಿ ತನ್ನ ಪೋಷಕ ಸಂಸ್ಥಾನಗಳಿಗೆ ಪ್ರಸಂಗ ಒದಗಿದಾಗಲೆಲ್ಲ ಪ್ರತ್ಯಕ್ಷ ನೆರವು ನೀಡಿ, ಸಮಾನ ಪ್ರತಿಷ್ಠೆ ವಿಶ್ವಾಸಗಳನ್ನು ಗಳಿಸಿ ಸಂಸ್ಥಾನದ ಘನತೆ ಗೌರವಕ್ಕೆ ಪಾತ್ರಳಾದ ವ್ಯಕ್ತಿ ರಾಣಿ ಚೆನ್ನಾಂಬೆ

೧೭೧೬ ರಿಂದ ೧೭೩೪ ವರೆಗೆ ಸಿರಸಂಗಿ ನವಿಲ್ಗುಂದ ಸಂಸ್ಥಾನದ ಆಧಿಪತ್ಯ ವಹಿಸಿದ ರಾಣಿ ಚೆನ್ನಾಂಬೆ ಕೇವಲ ೧೮ ವರುಷಗಳ ತನ್ನ ಆಡಳಿತದ ಅವಧಿಯಲ್ಲಿ ಸಂಸ್ಥಾನದ ಪ್ರತಿಷ್ಠೆಯನ್ನು ಹೆಚ್ಚಿಸುವುದರ ಜೊತೆಗೆ ಅದರ ಆರ್ಥಿಕ ಸ್ಥಿತಿಗತಿಗಳನ್ನು ಭದ್ರಗೊಳಿಸಿದಳು ಈ ಅವಧಿಯಲ್ಲಿ ಕೃಷಿ ಕಾರ್ಯಕ್ಕಾಗಿ ಅಲ್ಲಲ್ಲಿ ಕೆರೆ ಕಟ್ಟಿ ಕಾಲುವೆಗಳ ಯೋಜನೆಗಳನ್ನು ಕಾರ್ಯಗತಗೊಳಿಸಲಾಯಿತು. ಸಂಸ್ಥಾನದ ಕೆಲವು ಆಯಕಟ್ಟಿನ ಬಾಗು ಪ್ರದೇಶಗಳಲ್ಲಿ ಬಡಜನರಿಗಾಗಿ ಧರ್ಮಾರ್ಥ ಅನ್ನದಾಸೋಹ ಮತ್ತು ಅರವಟಿಗೆಗಳ ಏರ್ಪಾಡಾಯಿತು. ರಾಜ್ಯದ ಬೊಕ್ಕಸದಿಂದ ಪ್ರಜೆಗಳಿಗೆ ಉಚಿತ ವೈದ್ಯಕೀಯ ಸೇವೆ ಸಲ್ಲಿಸಲಾಗುತ್ತಿತ್ತು. ಗ್ರಾಮದೇವತೆ ಕಾಳಿಕಾಂಬೆ, ವಿನಾಯಕ, ಈಶ್ವರ ಮುಂತಾದ ದೇವ ದೇವತೆಗಳ ಜಾತ್ರೆ ಉತ್ಸವಗಳು, ಪುರಾಣ ಪುಣ್ಯಕಥೆಗಳು,ಬಯಲಾಟ, ಗ್ರಾಮೀಣ ಕಲೆಗಳ ಪ್ರದರ್ಶನ ಹೀಗೆ ಹಲವಂದ ಪ್ರಜಾಹಿತ ಕಾರ್ಯಗಳು ವರ್ಷದುದ್ದಕ್ಕೂ ಜರುಗಿ ಸಿರಸಂಗಿ ಸಂಸ್ಥಾನದ ಸರ್ವತೋಮುಖ ಏಳಿಗೆಗೆ ರಾಣಿ ಚೆನ್ನಾಂಬೆ ಸಲ್ಲಿಸಿದ ಬಹುಮುಖ ಸೇವೆ, ಒಂದು ಸಂಸ್ಥಾನದ ಸೀಮಿತ

ಕಕ್ಷೆಯಲ್ಲಿ ನಡೆದಿದ್ದರೂ ತಮ್ಮ ನಾಡಿನ ಚರಿತ್ರೆಯಲ್ಲಿ ಗಮನಾರ್ಹವಾದ ಸಂಗತಿಯಾಗಿದೆ.

ಜಾಯಗೊಂಡನು ಪ್ರಾಪ್ತ ವಯಸ್ಕನಾದ ಬಳಿಕ ಚೆನ್ನಾಂಬೆ ತನ್ನ ಈ ಧೀರ ಪುತ್ರನಿಗೆ ಸಂಸ್ಥಾನದ ಪಟ್ಟಗಟ್ಟಿ, ತಾನು ಆತನಿಗೆ ಬೆಂಬಲವಾಗಿ ನಿಂತಳು. ಮುಂದೆ ಸುಮಾರು ಹತ್ತು ವರುಷಗಳ ವರೆಗೂ ಸಂಸ್ಥಾನದ ಉಜ್ವಲ ಬೆಳವಣಿಗೆಯನ್ನು ಕಂಡು ಸಂತೃಪ್ತ ಜೀವನ ಸಾಗಿಸಿದ ಈ ರಾಣಿ ಸು ೧೭೪೪ ರಲ್ಲಿ ಕಣ್ಮರೆಯಾದಳು: ಆದರೆ ಆಕೆಯ ತೇಜೋಮಯ ವ್ಯಕ್ತಿತ್ವ ಜಾಯಗೊಂಡನಿಗೆ; ಆಬಳಿಕ ಬಂದ ಸಂಸ್ಥಾನದ ಅಧಿಪತಿಗಳಿಗೆ ನಿರಂತರ ಸ್ಫೂರ್ತಿಯ ಸಂಕೇತವಾಯಿತೆನ್ನುವುದನ್ನು ಯಾರೂ ಮರೆಯಲಾರರು.

○

ಕಿತ್ತೂರ ಚೆನ್ನಮ್ಮಾಜಿ

ವ್ಹಿ. ಜಿ. ಮಾರಿಹಾಳ

ಕಿತ್ತೂರ ಚನ್ನಮ್ಮ ಸುತ್ತೂರ ಒಡತ್ಯಾಗಿ
ಕತ್ತಿ ಕವಚಗಳ ಉಡುಪುಟ್ಟೊ;
ಕತ್ತಿ ಕವಚಗಳ ಉಡುಪುಟ್ಟೊ;
ಅಬ್ಬರದಿ ಬತ್ತಲಗುದರಿಯ ಜಿಗಿದಾಳೊ;

—ಸಮಕಾಲೀನ ಜಾನಪದ ದುಂದುಮಿ

ಪೀಠಿಕೆ :

ಮಧ್ಯಯುಗದ ಕೊನೆಗೆ, ದಕ್ಷಿಣಭಾರತದಲ್ಲಿ, ತನ್ನ ವೈಭವದಲ್ಲಿ ಪರಾಕಾಷ್ಠೆಯನ್ನು ನಿಲುಕಿದ ವಿಜಯನಗರ ಸಾಮ್ರಾಜ್ಯವು ಪತನವಾಯಿತು. ಈ ಪರ್ವಕಾಲದಲ್ಲಿ ಬಹಳಷ್ಟು ಚಿಕ್ಕ ಪುಟ್ಟ ಸಂಸ್ಥಾನಗಳು ಮತ್ತೊಮ್ಮೆ ಕನ್ನಡನಾಡಿನಲ್ಲಿ ತಲೆಯೆತ್ತಿದವು. ಅವುಗಳಲ್ಲಿ ಕಿತ್ತೂರ ನಾಡು ಅಗ್ರಗಣ್ಯವಾದುದು. ಕ್ರಿ. ಶ. ೧೫೮೫ ರಿಂದ ೧೮೨೪ ರವರೆಗೆ, ೨೩೯ ವರ್ಷಕಾಲ, ಹನ್ನೆರಡು ಜನ ರಾಜರು ಈ ರಾಜ್ಯವನ್ನು ಆಳಿದರು.

ಅನ್ಯಾಯ–ದಬ್ಬಾಳಿಕೆಗಳನ್ನು ಪ್ರಾಣದ ಹಂಗುದೊರೆದು ಎದುರಿಸಿ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯನ್ನು ಹಾಡಿದ ನೇತಾರರಲ್ಲಿ ಮಹಾರಾಣಿ ಚನ್ನಮ್ಮಾಜಿ ಹಿರಿಮಣಿ.

ರಾಜವಂಶಾವಳಿ :

ವಿಜಯನಗರ ಸಾಮ್ರಾಜ್ಯದ ಪತನಾನಂತರ ಬೆಳಗಾಂವಿಯು ವಿಜಾಪುರದ ಆಡಳಿತದಲ್ಲಿ ಬಂದಿತು. ಈ ಪ್ರದೇಶಕ್ಕೆ ಆಗ ಅಸದ್ ಖಾನನೆಂಬ ಸರದಾರನು ಅಧಿಪತಿ. ಬೆಳಗಾಂವಿಯ ಕಿಲ್ಲೆಯ ಕಟ್ಟುವಿಕೆಗಾಗಿ, ಸೈನ್ಯಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳ ಒದಗಣೆಗಾಗಿ ಸಾಗರ ಪ್ರಾಂತದ ಇಬ್ಬರು–ಹಿರಿಯ ಮಲ್ಲಶೆಟ್ಟಿ, ಕಿರಿಯ ಮಲ್ಲಶೆಟ್ಟಿ, ಎಂಬ ಸಹೋದರರು ಆದಿಲ್ ಶಾಹಿ ರಾಜರಿಂದ ನಿಯೋಜಿಸಲ್ಪಟ್ಟರು. ಸಮಕಾಲೀನ ಜಾನಪದ ಹೇಳುತ್ತದೆ.1

---

1. ನಿಂಗಣ್ಣ ಸಣ್ಣಕ್ಕಿ : ಜಾನಪದದಲ್ಲಿ ಕಿತ್ತೂರು ಪುಟ 59.
ಶಿವಲಿಂಗಪ್ಪ ಭಾವಿಕಟ್ಟಿ : ಶ್ರೀಗಿರಿ ಪ್ರಕಾಶನ ಅಕ್ಕತಂಗೇರ ಹಾಳ, 1979.

ಬಣಜೀಗ ಮಲ್ಲಣ್ಣ ಜನದಾನ ಖಣಿಯಾದ;
ಕುಣಿಸಿ ಲಕ್ಕುಸಮಿಯ ನಾಡಾಗ;
ಕುಣಿಸಿ ಲಕ್ಕುಸಮಿಯ ನಾಡಾಗ;
ಕಿತ್ತೂರ ಆತೋ ಕಣಜ ಮುತ್ತು ಮಾಣಿಕದ;
ಕಾಡಾನೆ ಕಾಡಯ್ಯ, ಬಾಡರ ಬೀಡಯ್ಯ;
ನಾಡಾಗಿ ಮಾಡಿ ಮಲ್ಲಣ್ಣ;
ನಾಡಾಗಿ ಮಾಡಿ ಮಲ್ಲಣ್ಣ ಕಿತ್ತೂರ
ಗೂಡಿಗೆ ಗುಡಿಯ ಸೇರಿಸಿದೊ;

ಈ ರಾಜಮನೆತನದ ಹಿರಿಯಮಲ್ಲಶೆಟ್ಟಿ ೧೫೮೫ರಲ್ಲಿ ಈ ಸಂಸ್ಥಾನದ ಬುನಾದಿಯನ್ನು ಹಾಕಿದನು. ಒಟ್ಟು ೨೩೯ ವರ್ಷ ಹನ್ನೆರಡು ರಾಜರು ರಾಜ್ಯವನ್ನಾಳಿದರು. ಮೊದಲು ಮುಗುಟಖಾನ ಹುಬ್ಬಳ್ಳಿಯಲ್ಲಿ, ನಂತರ ಸಂಪಗಾಂವಿಯಲ್ಲಿ. ಅಮೇಲೆ ನಿರಂತರ ಕಿತ್ತೂರಿನಲ್ಲಿ ಅವರು ರಾಜ್ಯವಾಳಿದರು.

ರಾಜ ವಂಶಾವಳಿ :[1]

೧) ಹಿರೇಮಲ್ಲಪ್ಪಶೆಟ್ಟಿ—೧೫೮೫-೧೫೯೧.
೨) ಹಿರೇನಾಗನಗೌಡಾ ಸರದೇಶ ಪಟ್ಟಣಶೆಟ್ಟಿ—೧೫೯೧-೧೬೩೪.
೩) ಚಿಕ್ಕನಾಗನಗೌಡ—೧೬೩೪-೧೬೫೬.
೪) ಚೆನ್ನಪ್ಪ ಬಿಚ್ಚಗತ್ತಿ—೧೬೭೬-೧೬೬೦.
೫) ಅಲ್ಲಪ್ಪಗೌಡಾ ಸರದೇಸಾಯಿ—೧೬೬೦-೧೬೯೧.
೬) ಮುದಿ ಮಲ್ಲಪ್ಪ ಸರದೇಸಾಯಿ—೧೬೯೧ ೧೬೯೬.
೭) ಚಿಕ್ಕಮಲ್ಲಪ್ಪ ದೇಸಾಯಿ—೧೬೯೬-೧೭೧೭.
೮) ಶಿವನಗೌಡಾ ಸರದೇಸಾಯಿ—೧೭೧೭-೧೭೩೪.
೯) ಮಲ್ಲಪ್ಪ ರುದ್ರಗೌಡಾ—೧೭೩೪-೧೭೪೯.
೧೦) ವೀರಪ್ಪಗೌಡ ಸರದೇಸಾಯಿ—೧೭೪೯-೧೭೮೨.
೧೧) ಮಲ್ಲಸರ್ಜ ಪ್ರತಾಪರಾವ ಶಮಶೀರಜಂಗ—೧೭೮೨-೧೮೧೬.
೧೨) ಶಿವಲಿಂಗ ರುದ್ರ ಸರ್ಜ—೧೮೧೬-೧೮೨೪.

ಇವರಲ್ಲಿ ಹನ್ನೊಂದನೆಯವನಾದ ಮಲ್ಲಸರ್ಜ ದೊರೆಗೆ ಇಬ್ಬರು ರಾಣಿಯರು. ಹಿರಿಯ ರಾಣಿ ರುದ್ರಮ್ಮ, ತಲ್ಲೂರ ದೇಸಾಯರ ಮಗಳು. ಕಿರಿಯ ರಾಣಿ ಚನ್ನಮ್ಮನು ಕಾಕತಿ ದೇಸಾಯರ ಮಗಳು. ಹಿರಿಯ ಹೆಂಡತಿಗೆ ಶಿವಲಿಂಗ ರುದ್ರ ಸರ್ಜ ಹಿರಿಯ ಮಗನು. ಚನ್ನಮ್ಮನಿಗೆ ಶಿವಬಸಪ್ಪ (ಬಾಳಾಸಾಹೇಬ) ಎಂಬ ಮಗನಿದ್ದನು.

ರಾಣಿ ಚನ್ನಮ್ಮ :

ಬೆಳಗಾಂವಿಗೆ ಸಮೀಪವಿರುವ ಕಾಕತಿ, ರಾಣಿ ಚನ್ನಮ್ಮನ ತವರು. ತಂದೆ ಧೂಳಪ್ಪ ದೇಸಾಯಿ, ತಾಯಿ ಪದ್ಮಾವತಿ. ೧೭೭೮ರಲ್ಲಿ ರಾಣಿ ಚನ್ನಮ್ಮ ಜನಿಸಿದಳು.

1. ತಲ್ಲೂರ ರಾಯನಗೌಡ : ಕಿತ್ತೂರ ಬಂಡಾಯ. ಪು. 24
ಕಿತ್ತೂರ ಚನ್ನವ್ಮಾ ರಾಣಿ ಇತಿಹಾಸ ಮಂಡಲ, ಬೈಲಹೊಂಗಲ 1947

ದೈವನಿಯಾಮಕದಂತೆ, ರಾಣಿ ಚನ್ನಮ್ಮ ಕಿತ್ತೂರಿನ ಅರಮನೆಗೆ ರಾಣಿಯಾಗಿ ಆಗಮಿಸಿದಳು. ಚನ್ನಮ್ಮನಿಗೇ ಮೊದಲು ಗಂಡು ಮಗುವಾಯಿತು. ನಂತರ ಕೆಲವು ವರ್ಷಗಳ ಮೇಲೆ ರುದ್ರಮ್ಮನಿಗೂ ಗಂಡು ಮಗುವಾಯಿತು. ಚನ್ನಮ್ಮನ ಮಗನಿಗೆ ಶಿವಬಸಪ್ಪನೆಂದು ಹೆಸರು. ರುದ್ರಮ್ಮನ ಮಗನ ಹೆಸರು, ಶಿವಲಿಂಗ ರುದ್ರ ಸರ್ಜ. ಮಲ್ಲಸರ್ಜನ ಪ್ರೀತಿಯ ಹೆಂಡತಿ ಚನ್ನಮ್ಮ. ಆಕೆಯ ಗಂಡು ಮಗ ವಯಸ್ಸಿನಲ್ಲಿ ಹಿರಿಯ. 'ಅವನೇ ಗಾದಿಗೆ ಮಾಲಕ'ನಾಗಬಹುದೆಂಬ ಕುಚೇಷ್ಟೆ ಸಮಾಜದಲ್ಲಿ ಮೈದಳೆಯಿತು. ಕೇಳಿನೊಂದ ಚನ್ನಮ್ಮರಾಣಿ, ತನ್ನ ಮಗನು ಗಾದಿಗೆ ಅಧಿಕಾರಿಯಾಗದಂತೆ ಅಂದಿನ ರೂಢಿಯಂತೆ ಅವನ ಕೈಗೆ "ಭೈರವ ಕಂಕಣ ಕಟ್ಟಿದಳಂತೆ; ಚನ್ನಮ್ಮನ ವ್ಯಕ್ತಿತ್ವವನ್ನು ಶ್ರೀ ತೇಲ್ಕರರು ಬಹು ಮನೋಜ್ಞವಾಗಿ ರೂಪಿಸಿದ್ದಾರೆ"..........

"Along with Kannada she learnt Urdu and Marathi and read a number of books in all these languages· She studeid Basava Purana› Ramayana, Mahabharat and took a keen interest in, contemparary history. She practised Yoga as revealed in Veershaiva philosophy-shatshala; learnt horse riding fencing, swimming and spear throwing. She was a good shikari and enjoyed putting on male costumes"2

ಆಡಳಿತ ವೈಖರಿ :

ಮಲ್ಲಸರ್ಜ ದೊರೆಯ ಹಣೇ ಬರಹ-ಅವನು ಅನೇಕರ ಕೈದಿಯಾಗಿ ಬಾಳಬೇಕಾಯಿತು. ಚಿಕ್ಕಂದಿನಲ್ಲಿ ಟಿಪ್ಪೂಸುಲ್ತಾನ, ಸವಣೂರಿನ ನವಾಬ. ನಂತರ ಪೇಶ್ವೆಗಳು ಅವನನ್ನು ಪುಣೆಯ ಮುಧೋಳಕರ ವಾಡೆಯಲ್ಲಿ ನಜರುಬಂದಿನಲ್ಲಿಟ್ಟಿದ್ದರು. ಅವನ ಕೊನೆಯ ಘಳಿಗೆಯಲ್ಲಿ ಕಿತ್ತೂರಿಗೆ ಅವನನ್ನು ಕಳಿಸಿಕೊಡಲಾಯಿತು. ಮಲ್ಲಸರ್ಜ ತೀರಿಕೊಂಡ ಮೇಲೆ ಉತ್ತರಾಧಿಕಾರಿಯ ಪ್ರಶ್ನೆ ಉಳಿದಿರಲಿಲ್ಲ. ಚನ್ನಮ್ಮನ ಮಗ ಬೆಳಗಾವಿಯ ಯುದ್ಧದಲ್ಲಿ (ಪೇಶ್ವೆಗಳೊಡನೆ) ಮಡಿದಿದ್ದ. ಶಿವಲಿಂಗರುದ್ರಸರ್ಜ ರಾಜ್ಯ ಗದ್ದುಗೆಗೆ ಉತ್ತರಾಧಿಕಾರಿಯಾದನು. ಈ ಸಮಯದಲ್ಲಿ ಬ್ರಿಟಿಷರಿಗೂ, ಕಿತ್ತೂರಿನವರಿಗೂ ಸ್ನೇಹ ಒಪ್ಪಂದವಾಯಿತು.1 ಅದರ ರೀತ್ಯ ಸಾಂಗಲಿ ಪಟವರ್ಧನ, ಕಿತ್ತೂರಿನ ರಾಜರು ಈರ್ವರಿಗೂ ವಿಶೇಷ ಪ್ರಾಶಸ್ತ್ಯವನ್ನು ಕೊಡಲಾಯಿತು. ಅವರು "Tributary princes" (ಆಶ್ರಿತರಾಜ)ರೆಂದು ಗಣಿಸಲ್ಪಟ್ಟು, ಒಳ ಆಡಳಿತದಲ್ಲಿ ಪೂರ್ಣವಾಗಿ ಅವರು ಸ್ವತಂತ್ರರೆಂದು ಬ್ರಿಟಿಷರು ಒಪ್ಪಿಕೊಂಡರು. ಪೇಶ್ವೆಗಳೊಡನಿದ್ದ ಸಂಬಂಧಗಳೇ ಈಗ ಬ್ರಿಟಿಷರೊಡನೆ ಮುಂದುವರಿಸಲ್ಪಟ್ಟವು. ಹಿರಿಯ ರಾಣಿ ಇಷ್ಟರಲ್ಲಿಯೇ ಮಡಿದಿದ್ದರಿಂದ, ರಾಣಿ ಚನ್ನಮ್ಮ, ಮಲತಾಯಿಯಾಗಿದ್ದರೂ ಶಿವಲಿಂಗರುದ್ರಸರ್ಜನಿಗೆ ವಿಶೇಷ ರೀತಿಯಲ್ಲಿ ಮಾರ್ಗದರ್ಶಿಯಾಗಿದ್ದಳು. ೧೮೧೮ರಲ್ಲಿ

2. Shridhar Telkar: Kittur Channamma Rani Page : 22-23 Kittur Channamma Rani Itihas Mandal, Bailhongal, 1957

1. ಶಿವರಾಮು : "ಕಿತ್ತೂರ ರಾಣಿ ಚನ್ನಮ್ಮ" ಕನ್ನಡದ ಕಡುಗಲಿಗಳು; ಪುಟ : 154 ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 1971.

ಪೇಶ್ವೆಯ ರಾಜ್ಯವನ್ನು ಇಂಗ್ಲೀಷರು ನುಂಗಿದರು. ಅನಂತರ ಕಿತ್ತೂರಿನ ಮೇಲೆ ಅವರ ಕಣ್ಣು ಬಿತ್ತು......ಅದಕ್ಕೆ ಜತೆಯಾಗಿ ಇಡೀ ದೇಶವನ್ನು ತಮ್ಮ ದಾಸ್ಯದ ಷಡ್ಯಂತ್ರದಲ್ಲಿ ಬಿಗಿಯುವ ಯೋಜನೆಯೂ ಸೇರಿತ್ತು.......ಅದೇ ವರ್ಷ ಸರ್ ಥಾಮಸ್ ಮನ್ರೋ ಕಿತ್ತೂರಿನೊಡನೆ ಒಪ್ಪಂದದ ನಾಟಕ ಹೂಡಿದನು.[2] ಆಂತರಿಕ ಆಡಳಿತ ಕಿತ್ತೂರಿನವರಾದರೂ ಗೋವೆಗೆ ಸಲ್ಲಗ್ನವಾಗಿದ್ದ ಖಾನಾಪುರ ಪ್ರದೇಶವನ್ನು ಬ್ರಿಟಿಷರು ಕಾಣಿಕೆ ರೂಪದಲ್ಲಿ ಕಿತ್ತೂರಿನಿಂದ ಪಡೆದರು. ಈ ಗುಟ್ಟು ಚನ್ನಮ್ಮನಿಗೆ ತಿಳಿದಂತೆ, ಶಿವಲಿಂಗರುದ್ರಸರ್ಜನಿಗೆ ತಿಳಿಯದೇ ಇದ್ದುದು ದೈವದುರ್ವಿಪಾಕ; ಚನ್ನಮ್ಮನ ವಿರೋಧವನ್ನು ಆಗ ಯಾರೂ ಲಕ್ಷಿಸಲಿಲ್ಲ. ಈ ಪರಿಸ್ಥಿತಿ–೧೮೨೪ರ ವರೆಗೂ ನಡೆದೇ ಇತ್ತು. ಬ್ರಿಟಿಷರ ಮೋಸವನ್ನು ರಾಣಿ ಚನ್ನಮ್ಮ ಆಗಾಗ ತನ್ನ ಮಗನಿಗೆ ಹೇಳುತ್ತಲೇ ಇದ್ದರೂ ಯಾವ ಪ್ರಯೋಜನವಾಗಲಿಲ್ಲ. ರಾಜನಿಗೆ ಎಳೆ ವಯಸ್ಸಿನಲ್ಲಿ ಕ್ಷಯವುಂಟಾಯಿತು. ಅದಕ್ಕೂ ಬ್ರಿಟಿಷ ವೈದ್ಯರೇ ಬಂದರು. ಉತ್ತರಾಧಿಕಾರಿಯ ಪ್ರಶ್ನೆಯೂ ಬಂತು. ಆಗ ರಾಜ ಮಾಡಿದ ಮಹತ್ವದ ನಿರ್ಣಯವೆಂದರೆ–ತನ್ನ ವಂಶಾವಳಿಯಲ್ಲಿ ಓರ್ವ ಉತ್ತರಾಧಿಕಾರಿಯನ್ನು ಹುಡುಕಿದ್ದು.

ಜನಸಾಮಾನ್ಯರ ಮೇಲಿನ ಪ್ರೀತಿ :

ಕಿತ್ತೂರಿನ ಆಡಳಿತದಲ್ಲಿ ಜನಸಾಮಾನ್ಯರು ಗೌರವಿಸಲ್ಪಟ್ಟಿದ್ದರು. "The Desayi of Kittur had always been regarded with offection by the poorer classes in the country"[3]

ಕಿತ್ತೂರ ನಾಡು ಒಂದು ಸಣ್ಣ ಜಗತ್ತಾಗಿತ್ತು. ಅಂದು ಬೆಳಕಿನಲ್ಲಿದ್ದ ಅನೇಕ ಪರದೇಶಗಳಿಂದ ಜನರು ಬಂದು ಇಲ್ಲಿ ನೆಲೆಸಿದ್ದರು. ಅಬಿಸಿನಿಯಾ, ತುರ್ಕಸ್ಥಾನ, ಇರಾಣ, ಅರಬಸ್ತಾನ, ಮುಂತಾದ ಪ್ರದೇಶಗಳಿಂದ ಜನರು ಬಂದು ಇಲ್ಲಿ ರಾಜ್ಯದ ಸೈನ್ಯದಲ್ಲಿದ್ದರು. ಇನಾಮುದಾರಿಕೆಯನ್ನು ಕಿತ್ತೊಗೆದು ರಾಣಿಯು ರಾಜ್ಯದ ಜಮೀನುಗಳನ್ನು ಬಡವರಿಗೆ ಹಂಚಿದ್ದಳು. 'ಗೌಡ' 'ಕರಣಿಕರು' ರಾಜ್ಯದ ಪಗಾರಿ ಕಾರಕೂನರಾದರು. ರೈತರ ಹಿತರಕ್ಷಣೆಯಾಯಿತು. ಒಕ್ಕಲುತನಕ್ಕೆ ಪ್ರೋತ್ಸಾಹನೆಯನ್ನು ಕೊಡಲಾಯಿತು. ತೋಟಗಾರಿಕೆಯೇ ಒಂದು ಆಡಳಿತ ವಿಭಾಗವಿತ್ತು. ನಾಡಿನ ತರುಣರಿಗೆ ಯೋಗ್ಯ ತರಬೇತಿಗಾಗಿ 'ಗರಡಿಮನೆ'ಗಳನ್ನು ಸಂಘಟಿಸಿದ್ದರು. ಅನೇಕ ಸಾಹಿತಿಗಳು, ಕಲಾವಿದರು ಇಲ್ಲಿ ನೆಲೆಸಿ ಸಾಹಿತ್ಯ ರಚನೆ ಮಾಡಿದರು. ವ್ಯಾಪಾರಕ್ಕಾಗಿ ವಿಶೇಷ ರೀತಿಯ ಸಂರಕ್ಷಣೆಗಳನ್ನು ರಚಿಸಲಾಯಿತು. ಎಲ್ಲ ಧರ್ಮೀಯರನ್ನು ಸಮಾನತೆಯಿಂದ ರಾಣಿಯು ಕಂಡಳು. ವೀರಶೈವರಿಗೆ ಮಠಗಳು, ಬ್ರಾಹ್ಮಣರಿಗೆ ಅಗ್ರಹಾರಗಳು, ಮುಸಲ್ಮಾನರಿಗೆ ಮಸೀದೆಗಳು, ಶಾಕ್ತರಿಗೆ, ಗೋರಖ ಸಂಪ್ರದಾಯದವರಿಗೆ

---

2. ಬ್ರಿಟಿಷ ಅಧಿಕಾರಿ ಮನ್ರೊ, ಮತ್ತು ಕಿತ್ತೂರಿನ ರಾಜ, ಶಿವಲಿಂಗರುದ್ರ ಸರ್ಜರಲ್ಲಿ ಒಪ್ಪಂದವಾಯಿತು. ಟೀಪೂ, ಪೇಶ್ವೆಗಳು ಸವಣೂರ ನವಾಬ, ಸಾಂಗಲಿ ಪಟವರ್ಧನರಿಂದ ಸಾಕಷ್ಟು ಘಾಸಿಯಾಗಿದ್ದ ಕಿತ್ತೂರಿನವರು ಇವರೆಲ್ಲರ ವೈರಿ ಬ್ರಿಟಿಷರೊಡನೆ ಸ್ನೇಹ ಮಾಡಬೇಕಾದ ವಿಚಿತ್ರ ಸನ್ನಿವೇಶ ಒದಗಿತು.
3. H. J. Stokes—An Historical accounts of the Belgaum District Government of Bombay, 1870.

ಅವರವರ ಮಠಗಳಿದ್ದವು. "In Kittur of old, Hindus, Muslims, Lingayats and evenuntouchables lived in peace and harmony. There were no riots and no jealousy. They were free to wor ship in accordence with the tenets of their respective faiths1

ಈ ಪ್ರೀತಿಯೇ ಕೊನೆಯವರೆಗೂ ಈ ನಾಡಿನ ಜನತೆಯ ಮೂಲಮಂತ್ರವಾಯಿತು. ಸಮಕಾಲೀನ ಜಾನಪದ ಹೇಳುತ್ತದೆ; ಜನಸಾಮಾನ್ಯರ ಅಭಿಮಾನದ ಪ್ರತೀಕದಂತೆ ಇದು ಇಂದಿಗೂ ಇದೆ ಕಿತ್ತೂರಿನ ವೀರರು ರಾಣಿ ಚನ್ನಮ್ಮನ ಎದುರಿಗೆ ಪ್ರತಿಜ್ಞೆ ಮಾಡುತ್ತಾರೆ:

ಗೆದ್ದ ಕಿತ್ತೂರಿನ ತಂಪ ಉದ್ದ ಬೀಳುವೆ ತಾಯಿ;
ಕದ್ದ ಮಾತಲ್ಲ ನಿಮ್ಮಾಣೆ;
ಕದ್ದ ಮಾತಲ್ಲ ನಿಮ್ಮಾಣೆ; ಇಲದಿರಕ
ಬಿದ್ದು ಹೋಗುವೆ ರಣದಾಗೊ;

ಈ ಧ್ವನಿಯು ಅಂದು ಕಿತ್ತೂರ ನಾಡಿನ ಸಿಂಹನಾದವಾಯಿತು;

ಜಂಗಮ ಪ್ರಾಣಿ :

ಕಿತ್ತೂರಿನ ಅರಸರ ಭಕ್ತಿಗಳಲ್ಲಿ ಜಂಗಮಭಕ್ತಿ ಗಾದೆಯ ಮಾತಿನಂತೆ ಉಳಿಯಿತು. ಪುಣೆಯಲ್ಲಿ ಕೈದಿಯಾಗಿದ್ದ ಮಲ್ಲಸರ್ಜನಿಗೆ ಪ್ರತಿದಿನ ಕುದುರೆ ಸವಾರರ ಮುಖಾಂತರ ಕಲ್ಮಠದಿಂದ ಪಾದೋದಕ ಮುಟ್ಟುತ್ತಿತ್ತು. ಈ ಪಾದೋದಕ ಸ್ವೀಕರಿಸಿ, ಅವನು ಪ್ರಸಾದ ಸ್ವೀಕರಿಸುತ್ತಿದ್ದನಂತೆ; ತಾವು ದೇಹ ಬಿಟ್ಟ ಮೇಲೆ ಅವುಗಳ ಸಮಾಧಿ ಕಲ್ಮಠದಲ್ಲಿ ನಡೆಯುತ್ತಿತ್ತು. ಈ ಸಮಾಧಿಗಳು ಸ್ವಾಮಿಗಳ ಪಾದದಲ್ಲಿಯೇ ನೆರವೇರಬೇಕೆಂಬ ಅಭಿಲಾಷೆ ಅವರದಾಗಿತ್ತು. ಕಲ್ಮಠ ಆವಾರದಲ್ಲಿ ಎಲ್ಲ ರಾಜರ ಸಮಾಧಿಗಳಿವೆ; ಮುದಿಮಲ್ಲಪ್ಪ ದೇಸಾಯರ ಸಮಾಧಿಯು ಕಲ್ಮಠದ ಶ್ರೀಗಳ ಪೂಜಾ ಕೋಣೆಯಲ್ಲಿದೆ; ಆ ಸಮಾದಿಯ ಮೇಲೆಯೇ ಅವರ ಶಿವಪೂಜೆ ಇಂದಿಗೂ ನಡೆಯುತ್ತದೆ; ಫಕೀರ ರುದ್ರಸರ್ಜರ ಸಮಾಧಿಯ ಮೇಲೆ ಸ್ವಾಮಿಗಳ ವಿಶ್ರಾಂತಿಕೋಣೆಯಿದೆ. ಕಿತ್ತೂರ ಸಂಸ್ಥಾನದ ೮೦೦ ಹಳ್ಳಿಗಳಲ್ಲಿಯೂ ಒಂದೊಂದು ಮಠ, ಅದಕ್ಕೆ ತಕ್ಕ ಜಮೀನು;ಅದಕ್ಕೊಬ್ಬ ಸ್ವಾಮಿಗಳಿದ್ದರು. ಮಠಕ್ಕೆ ಬಂದ ಅತಿಥಿ ಅಭ್ಯಾಗತರಿಗೆ ಅಲ್ಲಿ ಆಶ್ರಯ ದೊರೆಯುತ್ತಿತ್ತು. ಈ ಆಡಳಿತಕ್ಕಾಗಿ "ಸಾವಿರಮಠ"ಎಂಬ ಗುರು ಪೀಠವನ್ನು ನಿರ್ಮಿಸಲಾಯಿತು. ಆ ಸಾವಿರಮಠವು ಎಲ್ಲ ಮಠಗಳ ಉಸ್ತುವಾರಿ ಮಾಡುತ್ತಿತ್ತು. ಕಿತ್ತೂರು ಥ್ಯಾಕರೆಯ ದುರಾಡಳಿತಕ್ಕೆ ಸಿಕ್ಕು, ಅಲ್ಲಿ ಎಲ್ಲವೂ ಮುದ್ರೆಯಲ್ಲಿ ಸಿಕ್ಕಿಕೊಂಡಾಗ, ಕಸವಿಸಿಗೊಂಡ ರಾಣಿ ಚನ್ನಮ್ಮ ಬ್ರಿಟಿಷ್ ಗರ್ವರ್ನನಿಗೆ ಬರೆದಪತ್ರ ಇಂಗ್ಲೀಷಿನಲ್ಲಿದೆ. ಅದರ ಕೆಲವು ಮಾತು ಇಲ್ಲಿ ಬರೆಯಬಹುದಾಗಿದೆ: "Mr. Thackeray repuested an interview with us. we feeling that the samsthan was in his hands and that to him we must look for every thing replied to all respecting which he asked us........Many jangams are

1 Shridhar Telkar-Kittur Rani Channamma. page 5

constantly coming here for giving alms to whom no appropriate place has been reserved. We never go out for friendship's sake. However, we had an interview with Mr. Thackaray. To this God has redueced us"[2]

ಸರ್ವಧರ್ಮಪ್ರೇಮಿ :

ಮೊದಲು ಜವುಗು ಪ್ರದೇಶವಾಗಿದ್ದ ಕಿತ್ತೂರ ನಾಡಿಗೆ ಅನೇಕ ಕಡೆಗಳಿಂದ ಜನರು ಬಂದು ಸೇರಿ ತಮ್ಮದೇ ಆದ ಒಂದು ಸಂಸ್ಕೃತಿಯನ್ನು ನಿರ್ಮಿಸಿದರು. ಉತ್ತರದಿಂದ ಬಂದ ಗುರುಸಿದ್ಧಪ್ರಭುಗಳು, ಸೂಫಿಸಂತ ಮರ್ತುಜಾ, ಗೋಸ್ವಾಮಿ ಸಾಧು ದೇವೇಂದ್ರಪುರಿಗಳು ಇಲ್ಲಿ ಸರ್ವಧರ್ಮಗಳ ಸಮನ್ವಯಕ್ಕೆ ಊರುಗೋಲಾದರು. ರಾಣಿ ಚನ್ನಮ್ಮನ ಅಂಗರಕ್ಷ-ಅಮಟೂರಿನ ಸೈಪನವರ ಬಾಳಾಸಾಹೇಬನಿದ್ದ. ಸಂಗೊಳ್ಳಿ ರಾಯಣ್ಣ ಕುರುಬರವನೆಂದು ಹೇಳಬಹುದೇ? ಅವನ ಸಂಗಾತಿಗಳು ಅನೇಕರು ವಿವಿಧ ಧರ್ಮ ಜಾತಿ ಮತ ಪಂಥದವರಾಗಿದ್ದರು.ಆದರೆ ಈ ನಾಡಿನ ಹಿತರಕ್ಷಣೆಗೆ ಅವರೆಲ್ಲ ಒಂದಾಗಿದ್ದರು. ಈ ನಾಡಿನಲ್ಲಿ ಪ್ರಚಲಿತವಿದ್ದ ಒಂದು ಸುಪ್ರಸಿದ್ಧ ದುಂದುಮಿ ಪದ ರಾಯಣ್ಣನ ಇತಿಹಾಸ ಹೇಳುತ್ತದೆ. ಅಲ್ಲಿ ಬರುವ ಒಂದು ಚಕಳಿಯನ್ನು ನೋಡಿರಿ[1]

"ಊಟಾನ ಉಣುವವಗ ಊಟಾನ ಕೊಡರೆಪ್ಪ
ಇಲದಿರಕ ಒಣಾ ಉಲಪಿಯ ಕೊಡರೆಪ್ಪ"

ಅಂದು ರೂಢಿಯಲ್ಲಿದ್ದ ಊಟದ ಪ್ರತ್ಯೇಕತೆಯನ್ನು ಅವರು ತೊಡೆದು ಹಾಕಿ ಎಲ್ಲರೂ ಸೇರಿ ಅಡಿಗೆಮಾಡಿ, ಊಟವನ್ನೂ ಕೂಡಿಯೇ ಮಾಡಿದ್ದನ್ನು ಇಲ್ಲಿ ನಾವು ಕಾಣುತ್ತೇವೆ. ಆಡಳಿತದಲ್ಲಿಯೂ ಅನೇಕ ಧರ್ಮೀಯರು ತಮ್ಮ ಪಾತ್ರಗಳನ್ನು ವಹಿಸಿದಂತದೆ. ಅಲ್ಲಿ ರತ್ನಾಗಿರಿಯ ಲಿಂಗೋಪಂತರಿದ್ದಾರೆ; ರಜಪೂತ ಹಿಮ್ಮತಸಿಂಗರಿದ್ದಾರೆ; ಕಂಚಿ ಆಚಾರ್ಯರಿದ್ದಾರೆ. ಜಂಗಮ ಸರದಾರ ಗುರು ಸಿದ್ಧಪ್ಪನವರಿದ್ದಾರೆ; ಕಮ್ಮಾ ಇಮಾಮರಿದ್ದಾರೆ. ಇವರೆಲ್ಲರಿಗೂ ಚನ್ನಮ್ಮ ಅಧಿದೇವತೆ. ದುಂದುಮಿ ಪದದ ಒಂದು ಪದ್ಯ ಹೀಗೆ ಹೇಳುತ್ತದೆ: "ಚಂಡಿಯೋ ಮಾರಿಯೋ ಮಸಣಿಯೋ| ಕಂಡಿತ ಮಾನವಿ ಇವಳಲ್ಲ| ಗಂಡುಗಲಿಗಳ ಮೀರಿ ರುಂಡವ ತರಿವಳು| ಮಹಾ ಮಾಯಿ ಅಲ್ಲದೆ ಬ್ಯಾರೆಲ್ಲ" ಚನ್ನಮ್ಮರಾಣಿಯವರನ್ನು ನಮ್ಮ ನಾಡಿನವರು ಕಂಡರೀತಿಯಂತೂ ವಿಸ್ಮಯಕಾರಿಯಾಗಿದೆ. ಆಕೆಯನ್ನು ದೇವಿಯ ಅವತಾರವೆಂದೇ ಅವರು ನಂಬಿದರು;ಪೂಜಿಸಿದರು.... ಕೇವಲ ಚನ್ನಮ್ಮ ರಾಣಿಯ ಮೇಲೆ ಕಟ್ಟಿದ ಪದಗಳು ಅನೇಕವಿದ್ದು ಈಗಾಗಲೇ ಕೆಲವು ಪ್ರಕಟಣೆಯನ್ನು ಕಂಡಿವೆ. ಜನಸಾಮಾನ್ಯರಲ್ಲಿ ಜನಪ್ರಿಯಳಾಗಿದ್ದ ಈ ತಾಯಿಯನ್ನು ಅವರು ಸ್ಮರಿಸುವುದು ಅನೇಕ ರೀತಿಗಳಲ್ಲಿ ತಮ್ಮ ಮಕ್ಕಳಿಗೆ ಆಕೆಯ ಹೆಸರ

---

2 M. V. Krishna Rao, G. S. Halappa: Freedom Movement in Karnatak. 1962. Government of Mysore. page 130

1 ದೊಡ್ಡ ಭಾವಪ್ಪ ಮೂಗಿ ಕಿತ್ತೂರ ಕಾಳಗ;ರುದ್ರಗಡ ಪ್ರಕಾಶನ ಬೈಲಹೊಂಗಲ. 1959

ನ್ನಿಟ್ಟರು. ತಮ್ಮ ಓಣಿಗಳಿಗೆ, ಕೇರಿಗಳಿಗೆ, ಬಾವಿಗಳಿಗೆ,ಕೆರೆಗಳಿಗೆ ಆಕೆಯಹೆಸರುಗಳಿವೆ ನಾವು ಸಪ್ತರ್ಷಿಮಂಡಲನೆಂದು ಕರೆಯುವ ನಕ್ಷತ್ರಗಳ ಮಂಡಲಕ್ಕೆ"ಚನ್ನಮ್ಮನದಂಡೆ" ಎಂದು ಕರೆಯುತ್ತಾರೆ"2

ಬ್ರಿಟಿಷರೊಡನೆ ಹೋರಾಟ :

ಪೇಶ್ವೆಗಳು ಕಿತ್ತೂರನಾಡನ್ನು ಕೈವಶ ಮಾಡಿಕೊಳ್ಳಲು ಸತತ ನಲವತ್ತು ವರ್ಷ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. "The Kitture Desai was a powerfull rebel in Karnatak Allthough the Peshwas tried for 40 years to subdue and control kittur, he did not succeed in his effort3

ಕಿತ್ತೂರಿನವರಿಗೂ, ಬ್ರಿಟಿಷರಿಗೂ, ಇದ್ದ ಸ್ನೇಹ, ನಂತರ ಚನ್ನಮ್ಮರಾಣಿಯವರ ಆಡಳಿತದಲ್ಲಿ ನಿಕರಕ್ಕೆ ಬಂದಿತು.ಮನ್ರೋ ಒಪ್ಪಂದದಂತೆ ಕಿತ್ತೂರಿನವರು ಒಳ ಆಡಳಿತದಲ್ಲಿ ಸ್ವತಂತ್ರರೆಂಬವಾದ ರಾಣಿ ಚನ್ನಮ್ಮನದಾಗಿತ್ತು.ಆ ಪ್ರಕಾರ ಅನೇಕ ಪತ್ರಗಳನ್ನು ಆಕೆ ಬ್ರಿಟಿಷರಿಗೆ ಬರೆದಿದ್ದಾಳೆ.ಕಿತ್ತೂರಿನವರು ಬ್ರಿಟಿಷರವಮಾಂಡಲಿಕರೆಂಬವಾದ ಬ್ರಿಟಿಷರದಾಗಿತ್ತು. ಸ್ವಾಭಿಮಾನಿಚನ್ನಮ್ಮ ಇದನ್ನು ಒಪ್ಪಲಿಲ್ಲ.ಅದಕ್ಕಾಗಿ ಮತ್ಸದ್ದಿಯಂತೆ ಅವರೊಡನೆ ವಾದ-ವಿವಾದದಲ್ಲಿಇಳಿದರೂ ಯಾವ ಪ್ರಯೋಜನವಾಗಿಲ್ಲ.ಬಲಾಢ್ಯರಾದ ಬ್ರಿಟಿಷರನ್ನು ಯಾವ ರೀತಿ ಎದುರಿಸಬೇಕೆಂಬುದೇ ಅವಳ ಚಿಂತೆಯಾಗಿತ್ತು. ವಿಷಯಲಂಪಟ, ರಾಕಸೀಮಹತ್ವಾಕಾಂಕ್ಷಿ, ಥ್ಯಾಕರೆಯ ಸಂಕುಚಿತ ದೃಷ್ಟಿಯಿಂದಾಗಿ ಈ ಹೋರಾಟ ನಡೆಯಬೇಕಾಯಿತು. ರಾಣಿ ಚನ್ನಮ್ಮ ತನ್ನ ಘನತೆ ಗೌರವಗಳನ್ನು ಬದಿಗಿರಿಸಿ, ಶಾಂತರೀತಿಯಿಂದ ಸಹಿಸಿದಳು. ಅರಮನೆಯ ಎಲ್ಲ ಕೋಣೆಗಳಿಗೆ ಕೀಲಿಗಳು ಹಾಕಲ್ಪಟ್ಟರೂ ಸುಮ್ಮನಾದಳು. ಪ್ರತಿದಿನ ಭಿಕ್ಷೆಗೆ ಬಂದವರನ್ನು ಬರಿಗೈಯಿಂದ ಕಳಿಸುವಂತಾಯಿತು. ರಾಜ್ಯದ ವಿರುದ್ಧ ಆಸ್ಥಾನದ ಅನೇಕರನ್ನು ಕಾರಸ್ಥಾನಿಗಳನ್ನಾಗಿ ಬ್ರಿಟಿಷರು ಮಾಡಿದರು. ಆ ವರ್ಷದ ದಸರೆಯ ಉತ್ಸವ ಏನೂ ಇಲ್ಲದೆ ಭಣಗುಟ್ಟಿತು. ಕಿತ್ತೂರ ಆಸ್ಥಾನದ ಮೇಲ್ವಿಚಾರಣೆಗೆ ಬಂದ ಥ್ಯಾಕರೆಯ ದುರ್ವರ್ತನೆಯನ್ನು ಕುರಿತು ಒಂದು ಸೋಬಾನ ಪದ ಹೀಗೆ ನುಡಿಯುತ್ತದೆ.

ಖಜಾನಿ ಕೋಲಿಗೆ ನಡದಾನ| ಅದಕೊಂದ ಕೀಲಿ ಜೋಡಿಸ್ಯಾನ|
ಥ್ಯಾಕರೆ ಮುಸುವ ಬೂಟುಗಾಲಲಿ ಒಳಗ ಹೊಕ್ಕ್ಯಾನಪ್ಪ|
ನೋಡಿದ ಚನ್ನವ್ವಗ ತಡಿಯಾವು ತಾಪುಗಳು|
ಒಳಬಳಗ ಹಲ್ಲು ಕಡಿಬಾಳೂ|

ಭೈರವ ಕಂಕಣ :

ರಾಣಿ ಚನ್ನಮ್ಮನ ಕೀರ್ತಿಗೆ ಕಲಶವಿಟ್ಟಂತೆ ಬರುವ ವಿವಿಧ ದಂತಕತೆಗಳಲ್ಲಿ

---

2 ವ್ಹಿ. ಜಿ. ಮಾರೀಹಾಳ "ಕಿತ್ತೂರಿನ ಕಲ್ಲುಗಳು ಹೇಳುವ ಕಥೆ" ಎಂ. ಎಸ್. ಸುಂಕಾಪೂರ. (ಸಂ) ಜಾನಪದ ಸಾಹಿತ್ಯದರ್ಶನ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1974 ಪುಟ: 203

3 V. V. Khare (Ed)- Historical Marathi Records Vol. XV. P. p. 8054. Bharatiya Itihas Mandal poona.

ಭೈರವ ಕಂಕಣದ ಐತಿಹ್ಯ ಕಿತ್ತೂರ ನಾಡಿನಲ್ಲಿ ಇಂದಿಗೂ ಪ್ರಚಲಿತವಿದೆ. ಮಲ್ಲಸರ್ಜ ದೊರೆಗೆ ಇಬ್ಬರು ಹೆಂಡಂದಿರು; ಹಿರಿಯ ರಾಣಿ ರುದ್ರಮ್ಮ ತಲ್ಲೂರ ದೇಸಾಯರ ಕುವರಿ. ಕಿರಿಯ ರಾಣಿ ಚನ್ನಮ್ಮ ಕಾಗತಿದೇಸಾಯರ ಮಗಳು. ಹಿರಿಯರಾಣಿಗೆ ಮಕ್ಕಳಾಗಲಿಲ್ಲ. ಆಗ ಚನ್ನಮ್ಮರಾಣಿಯವರು ಎರಡನೆಯ ರಾಣಿಯಾಗಿ ಕಿತ್ತೂರಿನ ಅರಮನೆಗೆ ಬಂದರು. ದೈವೇಚ್ಛೆಯೇ ಇರಬೇಕು-ರಾಣಿ ಚನ್ನಮ್ಮನಿಗೇ ಮೊದಲ ಮಗುವಾಯಿತು; ಅವನು ಶಿವಬಸಪ್ಪ; ನಂತರ ಕೆಲವು ವರ್ಷಗಳ ಮೇಲೆ ರುದ್ರಮ್ಮನಿಗೆ ಗಂಡು ಮಗುವಾಯಿತು; ಅವನು ಶಿವಲಿಂಗರುದ್ರಸರ್ಜ.ಚನ್ನಮ್ಮನ ಮಗನನ್ನು ಪ್ರೀತಿಗಾಗಿ ಬಾಳಾಸಾಹೇಬ ಎಂದೂ ಕರೆಯುತ್ತಿದ್ದರು. ಶಿವಬಸಪ್ಪನಿಗೆ ಲಗ್ನವಾಗಿತ್ತು. ಅವನ ಹೆಂಡತಿ-ಜಾನಕಿ ಬಾಯಿ ಸೋಲ್ಲಾಪುರದವಳು. ಶಿವಲಿಂಗ ರುದ್ರಸರ್ಜನಿಗೂ ಲಗ್ನವಾಗಿತ್ತು. ಅವನ ಹೆಂಡತಿ ವೀರಮ್ಮ ಶಿವನಗುತ್ತಿರಾಜರ ಮಗಳು. ಮಲ್ಲಸರ್ಜ ದೊರೆಯ ಅವಸಾನ ಕಾಲದಲ್ಲಿ ರಾಜಗದ್ದುಗೆಗೆ ವಾರಸುದಾರನ ಬಗ್ಗೆ 'ಗುಜು ಗುಜು' ನಡೆಯಿತು. 'ಪ್ರೀತಿಯ ಹೆಂಡತಿ ಚನ್ನಮ್ಮ' ವಯಸ್ಸಿನಲ್ಲಿ ಆಕೆಯ ಮಗನೇ ಹಿರಿಯ. ಪಟ್ಟಕ್ಕೆ ತನ್ನ ಮಗನನ್ನೇ ತರುವಳೆಂದು ಕೆಲವರು ಆಡಿಕೊಂಡರು. ಚನ್ನಮ್ಮ ಮನಸ್ಸು ಮಾಡಿದ್ದರೆ ಆಕೆಗೆ ಅಶಕ್ಯವೂ ಇದ್ದಿಲ್ಲ. ಆಕೆ ವಿಚಾರ ಮಾಡಿದ ರೀತಿಯೇ ಬೇರೆ.

'ಹಿರಿಯ ಹೆಂಡತಿ ರುದ್ರಮ್ಮನ ಸಂತತಿಯೇ ರಾಜ್ಯಕ್ಕೆ ಬಾಧ್ಯಸ್ತರು. ಕಾರಣ, ಈ ವಿಚಾರದಲ್ಲಿ ತನ್ನ ಮಕ್ಕಳು ಅಧಿಕಾರಕ್ಕೆ ಬೇಡ; ಆದರೆ ಅವರು ಈ ನಾಡಿನ ಆಗುಹೋಗುಗಳ ರಕ್ಷಕರಾಗಲೆಂದು ವಿಚಾರಿಸಿದಳು. ತನ್ನ ಮಗು ಶಿವಬಸಪ್ಪನ ಕೈಗೆ ಭೈರವ ಕಂಕಣ ಕಟ್ಟಿದಳು. ಇದರ ವೈಶಿಷ್ಟ್ಯವೆಂದರೆ: ಈ ಕಂಕಣ ಕಟ್ಟಿಸಿಕೊಂಡವರು ತಾವು ರಾಜ್ಯದ ಯಾವ ಅಧಿಕಾರಕ್ಕೆ ಬರುವಂತಿಲ್ಲ. ಯಾವ ಅನುಕೂಲತೆಗಳನ್ನೂ ಮಾಡಿಕೊಳ್ಳುವಂತಿಲ್ಲ. ರಾಜನಿಗೆ ಅಂಗರಕ್ಷನಾಗಿರಬೇಕು. ರಾಜ್ಯಕ್ಕೆ ಗಂಡಾಂತರ ಬಂದಾಗ ತಮ್ಮ ಪ್ರಾಣಗಳನ್ನು ಮೊದಲು ಬಲಿಕೊಡಬೇಕು. ಹಿಂದೆ ಹೊಯ್ಸಳರ ಕಾಲಕ್ಕೆ 'ಗರುಡ' ರೆಂಬ ಜನರಿದ್ದರಂತೆ; ಅದೇ ರೀತಿ ಈ ಭೈರವರು. ಕಿತ್ತೂರ ನಾಡಿ ನಲ್ಲಿದ್ದರು.[1]

ಪತ್ರವ್ಯವಹಾರ :

ಮಹಾರಾಣಿ ಚನ್ನಮ್ಮಾಜಿಯವರು ಮಾಡಿದ ಅನೇಕ ಪತ್ರ ವ್ಯವಹಾರಗಳಲ್ಲಿ ಕೆಲವಾದರೂ ಐತಿಹಾಸಿಕತೆಯ ದೃಷ್ಟಿಯಿಂದಮಹತ್ವದಾಗಿವೆ. ಸುದೈವಕ್ಕೆ ಈ ಪತ್ರಗಳೆಲ್ಲ ಇಂದು ಇಂಗ್ಲಂಡಿನಲ್ಲಿ, ಭಾರತದಲ್ಲಿ ಅನೇಕ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಬಿದ್ದುಕೊಂಡಿವೆ. ಅದರಲ್ಲಿ ಸುಮಾರು ೭೦ ಪತ್ರಗಳು ವಿಶೇಷ ಮಹತ್ವವನ್ನು ಪಡೆದಿವೆ. ಈ ಪತ್ರಗಳೇ ಸಾಕು. -ರಾಣಿ ಚನ್ನಮ್ಮಾಜಿಯವರ ಚರಿತ್ರೆಯನ್ನು ನಾವು ರೂಪು

---

1 ದೊಡ್ಡ ಭಾವೆಪ್ಪ ನೂಗಿ: ಕಿತ್ತೂರ ಕಾಳಗ; ರುದ್ರಗಡ ಪ್ರಕಾಶನ, ಬೈಲಹೊಂಗಲ, 1959 ಪುಟ: 15

ಸ್ಥಿ. ಜಿ. ಮಾರೀಹಾಳ: ಕಿತ್ತೂರಿನ ಇತಿಹಾಸ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1976 ಪುಟ: 73.

ಗೊಳಿಸಬಹುದು; ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿ, ಎಡಿನಬರ್ಗದಲ್ಲಿರುವ ಸ್ಕಾಟಿಷ್ ಲೈಬ್ರರಿ, ದಿಲ್ಲಿಯ ನಮ್ಮ ದೇಶದ ಕಡತಗಳ ಲೈಬ್ರರಿ, ಹೈದರಾಬಾದು, ಪುಣೆಗಳಲ್ಲಿಯ ಭಾಂಡಾರಗಳು ನಮ್ಮ ಇತಿಹಾಸ ರಚನೆಗೆ ಮುಖ್ಯ ಆಕರಗಳಾಗಿವೆ. ಕಿತ್ತೂರಿನ ಒಂದು 'ಗದ್ದಲ' ಬ್ರಿಟಿಷರನ್ನು ಯಾವರೀತಿ ಚಿಂತೆಗೀಡುಮಾಡಿತೆಂಬುದನ್ನು ಈ ಪತ್ರಗಳು, ಅವರಲ್ಲಿಯೂ ಅವರ ಗುಪ್ತಪತ್ರಗಳು ತೋರಿಸುತ್ತವೆ.

ಮೊದಲು ಸೌಮ್ಯವಾಗಿದ್ದ ಕಿತ್ತೂರಿನ ಪತ್ರಗಳು ನಂತರ ಉಗ್ರವಾಗಿವೆ. ತುದಿಗೆ ಬಂದಾಗ ಪರಿಸ್ಥಿತಿ ಹದಗೆಡುತ್ತದೆ. ಯುದ್ಧವಾದ (ಮೊದಲನೆಯ) ನಂತರ ಬ್ರಿಟಿಷರು ಸೋತ ಪತ್ರ ಇಲ್ಲಿದೆ.

Directores[1]
Ride-Ride
Any officer whatever. Belgaum
Speed, all speed

Sir or Sirs.

For God's sake send a force immediately withoutdelay to Kittur. The Artillary one out to pieces-Mr.Thackaray supposed to be killed captain Black killed and cut to pieces: Sewel expected to die-Dighton killed and Thacharay's two assisl ants Blliot and Stevenson not heard of............"

ಕಿತ್ತೂರಿನಲ್ಲಿ ಬಂದಿಯಾಗಿದ್ದ ಬ್ರಿಟಿಷ ಅಧಿಕಾರಿ ಬರೆಯುತ್ತಾನೆ.[2] The fort It believe is strong and there is a going from 4 to 5000 men-the leaders are despe rate and there ten if attacked................"

ಈ ಪತ್ರವ್ಯವಹಾರ "ಯುದ್ಧಸ್ಯ ವಾರ್ತಾರಮ್ಯಂ" ಎಂದು ಹೇಳುತ್ತವೆ. ಯಾವ ಪ್ರಯತ್ನಗಳೂ ಯಶಸ್ವಿಯಾಗದ ಕಿತ್ತೂರವರು, ಸ್ವತಃ ಶೂರರಾಗಿ ಯುದ್ಧದಲ್ಲಿ ಧುಮ್ಮುಕ್ಕಿದರು. ಅದನ್ನು ಲಾವಣಿಕಾರ ಹಾಡುತ್ತಾನೆ.[3]

ಚನ್ನವ್ವನ ಮಾಲಿಗೆ ಬಿತ್ತ ಗೇರಾ
ಸಿಟ್ಟು ಆದಾಳು ಬಹುಬಾರ
ಚನ್ನವ್ವ ತಾಳಿ ಶಕ್ತಿ ಅವತಾರ
ಉಗ್ರ ಕೋಪ ತಾಳ್ಯಾಳು ಬಹುಬಾರ
ತುಂಬಿದ ತೋಫ ಇತ್ತ ಐನೂರ

---

1 ಧಾರವಾಡದ ಅಸಿಸ್ಟಂಟ್ ಕಲೆಕ್ಟರ್ ವಾಕರ್‌ಫುಲರ್ ಟನ್ ಬರೆಪತ್ರ 1824 ಅಕ್ಟೋಬರ್, 23 ರಾತ್ರಿ 8 ಘಂಟೆಗೆ.

2 ಥ್ಯಾಕರೆಯ ಅಧೀನ ಸ್ಟಿವನ್ ಸನ್ ಕಿತ್ತೂರಿನಿಂದ ಬರೆದ ಪತ್ರ ಅಕ್ಟೋಬರ್ 24. 1824

3 ದೊಡ್ಡ ಭಾವೆಪ್ಪ-ಮೂಗಿ-ಕಿತ್ತೂರ ಕಾಳಗ; ರುದ್ರಗಡ ಪ್ರಕಾಶನ, ಜೈಲಹೊಂಗಲ, 1959 ಪುಟ: 31.

ಸರಭತ್ತಿ ಮಾಡಲಿಂಣಾ ಭರ ಭರ
ಬಾಣವ ಬಿಟ್ಟರೊಂದ ಐನೂರ
ಬೆಂಕಿ ಮಳಿಗರಿಸಿದ ಪರಮೇಶ್ವರ
ಕಾವಲಿ ತುಂಬ ಹರಿದು ನೆತ್ತರ
ಭೂತಗಳುಂಡ ಡೇಗ್ಯಾವು ಥರ ಥರ

ಯುದ್ಧವೇನೋ ಸಣ್ಣದಾದರೂ ಬ್ರಿಟಿಷರು ಯೋಜಿಸಿದ ವ್ಯೂಹ ಗಮನಾರ್ಹ ವಾಗಿದೆ. ಕಿತ್ತೂರಿನಿಂದ ನಾಲ್ಕು ದಿಕ್ಕುಗಳಿಗೂ ಸೈನ್ಯ ಸಜ್ಜಾಗಿರುವಂತೆ ಕಿತ್ತೂರನ್ನು ದಿಗ್ಬಂಧಗೊಳಿಸುವಲ್ಲಿ ಅವರು ಯಶಸ್ವಿಯಾದರು. ಬ್ರಿಟಿಷರಿದ್ದ ಕಿತ್ತೂರಿಗೆ ಸಹಾಯ ಸಲ್ಲಿಸಲು ಸೊಲ್ಲಾಪೂರನಲ್ಲಿ, ಬಳ್ಳಾರಿ ಗುತ್ತಿಗಳಲ್ಲಿ, ವೆಂಗುರ್ಲೆಯಲ್ಲಿ ಮೈಸೂರಿನಲ್ಲಿ ಸೈನ್ಯ ಸಜ್ಜಾಯಿತು ನೂರಾರು ಮೈಲುಗಳ ಈ ಸರ್ಪಗಾವಲಿನಲ್ಲಿ ಕಿತ್ತೂರಿನವರು ಅಸಹಾಯರಾದರೂ ತಮ್ಮ ಛಲವನ್ನು ಕೊನೆಯವರೆಗೂ ಬಿಡಲಿಲ್ಲ. ಒತ್ತೆಯಾಳು ಗಳಾಗಿದ್ದ ಬ್ರಿಟಿಷ ಅಧಿಕಾರಿಗಳು ಅವರ ಹೆಂಡಂದಿರು, ಮಕ್ಕಳು ಕಿತ್ತೂರವರ ವಶದಲ್ಲಿದ್ದರು. ಸರಿಯಾದ ಕರಾರುಗಳಿಗೆ ಒಪ್ಪದಿದ್ದಲ್ಲಿ ಈ ಒತ್ತೆಯಾಳುಗಳನ್ನು ಬಿಡುವುದಿಲ್ಲವೆಂಬ ಹಠ ಅವರದಾಗಿತ್ತು. ಮೂರು ತಿಂಗಳುಗಳ ವರೆಗೂ ಎರಡೂ ಸೈನ್ಯಗಳ ಮಧ್ಯದಲ್ಲಿ ಒಪ್ಪಂದಕ್ಕಾಗಿ ಮುತ್ಸದ್ದಿಗಳು ಓಡಾಡಿದರೂ ಯಾವ ಪ್ರಯೋ ಜನವಾಗಲಿಲ್ಲ. ಬಾಯಿ ಮಾತಿನ ವಿಶ್ವಾಸಕ್ಕೆ ನಂಬಿ ಒತ್ತೆಯಾಳುಗಳನ್ನು ಕಿತ್ತೂ ರವರು ಮುಕ್ತ ಮಾಡಿದರು. ಮುಂದಿನ ಐದು ನಿಮಿಷಗಳಲ್ಲಿ ಬ್ರಿಟಿಷ ಸೈನ್ಯ ಕಿತ್ತೂರನ್ನು ಎಲ್ಲ ದಿಕ್ಕುಗಳಿಂದಲೂ ಮುತ್ತಿತ್ತು.

ಆಂತರಿಕವಾಗಿ, ಮದ್ದು ಕೆಡಿಸಲ್ಪಟ್ಟಿತು. ಬೇರೆ ಸಹಾಯ ಬರಲಿಲ್ಲ. ಯುದ್ಧದಲ್ಲಿ ಸಾವಿರಾರು ಸೈನಿಕರು ತಮ್ಮ ಪ್ರಾಣದ ಹಂಗುದೊರೆದು ಕಾದಿದರು, ಅರಮನೆಯ ಖಜಾನೆಯನ್ನು ಒಡೆದು ಆನೆ, ಕುದುರೆ, ಒಂಟೆಗಳ ಮೇಲೆ ಹೇರಿ ಕಳ್ಳದಾರಿಯಿಂದ ಹೊರಕ್ಕೂ ಸಾಗಿಸಲಾಯಿತು. ಬ್ರಿಟಿಷರ ೮೦೦ ತೋಫುಗಳ ಗರ್ಜನೆಯಲ್ಲಿ ಕಿತ್ತೂರಿನ ಕಾಲಾಳುಗಳ ಸ್ಥಿತಿ ಶೋಚನೀಯವಾಯಿತು.

ಅಂತರಿಕ ಒಡಕು

ಶಿವಲಿಂಗರುದ್ರ ಸರ್ಜನ ಮರಣದಿಂದ ಆಸ್ಥಾನದಲ್ಲಿ ಎರಡು ಪಕ್ಷಗಳು, ಸಾರ್ವ ಜನಿಕವಾಗಿಯೇ ನಿರ್ಮಾಣಗೊಂಡವು. ರಾಜನ ಹೆಂಡತಿ, ೧೨ ವರ್ಷದ ಕುಮಾರಿ, ವೀರಮ್ಮನನ್ನು ಮುಂದಿಟ್ಟುಕೊಂಡು ಅಧಿಕಾರದ ಲಾಲಸೆಯಿಂದ ಮಲ್ಲಪ್ಪ ಶೆಟ್ಟಿ, ವೆಂಕಟರಾವ ರಾವಜಿ, ಸರದಾರ ಮಲ್ಲಪ್ಪ, ಮುಂತಾದವರು ಮುಂದಾದರು. ಇವ ರಿಗೆ ಪ್ರತಿಯಾಗಿ ರಾಣಿ ಚನ್ನಮ್ಮನವರನ್ನು ಮುಂದಿಟ್ಟುಕೊಂಡು ಸರದಾರ ಗುರು ಸಿದ್ಧಪ್ಪ, ಅವರಾದಿ ವೀರಪ್ಪ, ಸಂಗೊಳ್ಳಿ ರಾಯಣ್ಣ, ಹಿಮ್ಮತ್ ಸಿಂಗ್, ಕಮ್ಮಾ ಇಮಾಮು ಮುಂತಾದ ವೀರರಿದ್ದರು. ಈ ಗುಂಪಿನಲ್ಲಿ ಥ್ಯಾಕರೆ ನೈಸರ್ಗಿಕವಾಗಿಯೇ ತನ್ನ ಬಾಲ ಬಡುಕರ ತಂಡಕ್ಕೆ ಆಸ್ಪದ ಕೊಟ್ಟನು. ಅವರ ಹೇಳಿಕೆಗಳಿಗೆ ಪ್ರಾಧಾನ್ಯ ಕೊಟ್ಟು ರಾಜ್ಯದ ಸ್ಥಿತಿ, ಏನೂ ಇಲ್ಲ ಹೋಗಿರಿ, ಎಂದು ಹೇಳುವಂತಾಯಿತು. ಈ

ದುಃಸ್ಥಿತಿಯನ್ನು ರಾಣಿ ಚನ್ನಮ್ಮ ಆಗಿನ ಗವ್ಹರ್ನರ್ ಎಲ್ಫಿನ್‌ಸ್ಟನ್‌ಗೆ ಹೇಳು ವಂತಾಯಿತು.

ಕೊನೆಯ ರಾಜನು ಸಾಯುವ ಸಮಯದ ಒಂದು ಸನ್ನಿವೇಶ ಇಲ್ಲಿ ಹೃದಯ ದ್ರಾವಕವಾಗಿದೆ : ರಾತ್ರಿ ೧ ಘಂಟೆಗೆ ಪ್ರಾಣ ಬಿಡುತ್ತಿದ್ದ ರಾಜನ ಸಮೀಪ ಅರಮನೆಯ ವಾರಸುದಾರರು ಯಾರು ಇಲ್ಲ. ರಾಜನ ಹೆಂಡತಿ ಇಲ್ಲ; ರಾಣಿ ಚನ್ನಮ್ಮ ಇಲ್ಲ: ರಾಜಪರಿವಾರದವರಿಲ್ಲ; ಕೇವಲ ಈ ಫಿತೂರಿಗಳು ಮಾತ್ರ ಇದ್ದರು. ಖಜಾನೆಗೆ ಪತ್ರಿಯೊಬ್ಬನಲ್ಲಿಯೂ ಪ್ರತ್ಯೇಕ ಪ್ರತಿ ಕೀಲಿ ಕೈಗಳಿದ್ದವು. ಸಾಕಷ್ಟು ಹಣ ವನ್ನು ಆಗ ಅವರು ದೋಚಿದ ವರದಿ ಈಗ ಇಂಗ್ಲಂಡಿನಲ್ಲಿಂದ ಬಂದಿದೆ.* "We called Kunnur Veerappa who succeeded iu opening the lock of them and then went down The contents of tne box about one lakhe and twenty thousand rupees were sent to the sleeping asostment of........"

ರಾಜನ ವಿನಂತಿಯ ಮೇರೆಗೆ ರಾಣಿಯನ್ನು ಕರೆಸಲಾಯಿತು. ಆಕೆಗೆ ಕೈಗೆ ರತ್ನಾಭರಣಗಳ ಒಂದು ತಬಕವನ್ನು ರಾಜನು ಕೊಟ್ಟನು. ತತ್‌ಕ್ಷಣ ಮಲ್ಲಪ್ಪನು ಅದನ್ನು ತನ್ನ ಕೈಗೆ ತಕ್ಕೊಂಡನು. ಅನೇಕ ಹಣದ ಪೆಟ್ಟಿಗೆಗಳನ್ನು ಈ ದೂರ್ತರು ರಾಜನ ಹೆಣದ ಸಮ್ಮುಖದಲ್ಲಿಯೇ ಪರಭಾರೆ ಮಾಡಿದರು; ಸತ್ತ ರಾಜನ ಶವ ಸಂಸ್ಕಾರಕ್ಕಾಗಿ ಯೋಚಿಸದೆ ಈ ಧೂರ್ತರ ಹಣದ ಹಂಚುವಿಕೆಗಾಗಿ ಬೆಳತನಕ ಓಡಾಡಿದರು;

ಕೊನೆಯ ಯುದ್ಧದ ಪ್ರಯತ್ನಗಳು :

ಕೊನೆಗೂ ಚನ್ನಮ್ಮ ಬ್ರಿಟಿಷರೊಡನೆ ಹೋರಾಡಲೇ ಬೇಕಾಯಿತು. ಸಮ ಕಾಲೀನ ಜಾನಪದ ಒಂದು ಚಕಳಿ–ಬಹುತರ, ಅದರಷ್ಟು ಬರಹಗಳಲ್ಲಿ ಉಪಯೋಗಿ ಸಲ್ಪಟ್ಟದು ವಿರಳ,–ಚನ್ನಮ್ಮನನ್ನು ವಿವರಿಸುತ್ತದೆ :

ಚಂಡಿಯೋ ಚೌಡಿಯೋ ಮಾರಿಯೋ ಮಸಣಿಯೋ
ಖಂಡಿತ ಮಾನವಳಿವಳಲ್ಲ |
ಗಂಡುಗಲಿಗಳ ಮೀರಿ ರುಂಡವ ತರಿವಳು
ಮಹಾಮಾಯಿಯಲ್ಲದೆ ಬ್ಯಾರೆಲ್ಲ |
ಪುಂಡರಕ್ಕಸರ ಹಿಂಡು ಮುರಿದ ಚಾಮುಂಡಿಯೇ
ಈ ಕೆಯು ಸುಳ್ಳಲ್ಲ |
ಚಂಡ ಪ್ರಚಂಡರ ತಂಡ ವೇ ಕುಂದಿತು
ಎಂಬುವ ಶಬ್ದವೆ ರಣವೆಲ್ಲ.

ಬ್ರಿಟಿಷರೊಡನೆ ಹೋರಾಡಲು ನೆರೆಹೊರೆಯ ರಾಜರನ್ನು ಬಿನ್ನವಿಸುವ ಪತ್ರಗಳು ಅನೇಕ ಕಡೆಗೆ ಹೋದವು. ಹೋರಾಟದಲ್ಲಿ ಸಕ್ರಿಯವಾಗಿ ಸಹಾಯ ಮಾಡುವ

---

* ನಂತರದಲ್ಲಿ ಬ್ರಿಟಿಷ ಅಧಿಕಾರಿಗಳ ಎದುರಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟ ಹೇಳಿಕೆ ಗಳ ವರದಿಯಲ್ಲಿ ಈ ಮಾತುಗಳ ನಮೂದಾಗಿವೆ. ಇಂಗ್ಲಂಡಿನಿಂದ ಬರೆದ ಕಾಗದ ಪತ್ರದಲ್ಲಿ ಈ ಸುಧೀರ್ಘ ಹೇಳಿಕೆ ಬಂದಿದೆ.

ಆಶ್ವಾಸನೆಗಳೂ ಬಂದವು. ತನ್ನ ಸೈನಿಕರನ್ನು ಚನ್ನಮ್ಮನು ಅನೇಕ ರೀತಿಯಲ್ಲಿ ಹುರಿದುಂಬಿಸಿದಳು. ಕಿತ್ತೂರ ನಾಡಿನಲ್ಲಿ ದುಂದುಮಿ ಪದವೆಂದು ಪ್ರಚಲಿತವಿರುವ ಈ ಹಾಡಿನ ಮೋಡಿಯನ್ನು ನೋಡಿ :

ಅಪರಾದಿ ಈರಪ್ಪನ ಕರಿ | ಸಿಪ್ಪಾಣಿಗೆ ಕಾಗದ ಬರಿ
ದಂಡು ಮುಂದಿ ಬರಲು ಕುಮರಿ | ಕಡದಾವಗ ಕೊಡತಾಳೊ ಬೆಳ್ಳಿಮರಿ
ಹಲ್ಲು ತಿಂತಾಳೊ ಕರಕರಿ
ಹಬ್ಬಾದ ಮರುದಿನ ಸಬ್ಬುರಾಜೇಕ ಬರವಾಳೊ ಒಕ್ಕೊಟಿ |

ಇನ್ನೊಂದು ಕೋಲುಪದದಲ್ಲಿ ಚನ್ನಮ್ಮನು ತನ್ನ ಸೈನ್ಯವನ್ನು ಸಂಘಟಿಸಿದ ವಿಷಯ ಬರುತ್ತದೆ.*

ಬಳ್ಳೋಡಿ ಗ್ರಾಮುಕ ಬಂದಾಳೊ ಚನ್ನಮ್ಮ
ಚೌಬಾರಿಗೆ ಫೇರಿ ಹೊಡಿಸ್ಯಾಳ । ಕೋಲ
ಚೌಬಾರಿಗೆ ಫೇರಿ ಹೋಡಿಸ್ಯಾಳ ಚೆನ್ನವ್ವ || ಹತ್ತನೂರ
ಹಳಬರ ಬಂದಾರ || ಕೋಲ ||
ಹತ್ತನೂರ ಹಳಬರ ಒತ್ತಿಲಿ ಐದಾರ || ಏಳುಸಾವಿರ
ಬಂಟರ ಬರತಾರ || ಕೋಲ ||

ಕಿತ್ತೂರಿನ ಸೋಲಿಗೆ ಕಾರಣಗಳು :

ಕಿತ್ತೂರಿನ ಹೋರಾಟ ನಡೆದು ನೂರೈವತ್ತು ವರ್ಷಗಳ ನಂತರದಲ್ಲಿ ಈಗ ನಾವು ಆ ಹೋರಾಟವನ್ನು ವಿಮರ್ಶಿಸುತ್ತಿದ್ದೇವೆ. ಅಂದಿನ ಜಗತ್ತಿನಲ್ಲಿ ಪ್ರಬಲರಾಗಿದ್ದ ಈ ಬ್ರಿಟಿಷರನ್ನು ಕಿತ್ತೂರಿನಂತಹ ಒಂದು ಸಣ್ಣ ಸಂಸ್ಥಾನವು ಕೆಣಕಬಹುದಿತ್ತೇ ಎಂಬುದು ಯಕ್ಷಪ್ರಶ್ನೆ. ಉಳಿದ ಎಂಟು ನೂರು ಸಂಸ್ಥಾನಿಕರಂತೆ ಇವರೂ ಶರಣಾಗತರಾಗಿರಬಹುದಿತ್ತಲ್ಲವೆಂಬ ಮಾತು ಅಂದಿನಿಂದ ಇಂದಿನ ವರೆಗೂ ಜಿಜ್ಞಾಸೆಗೆ ಒಳಗಾಗಿದೆ. 'ಹೆಣ್ಣು ಮಗಳ' ಹಿರಿಯತನದಿಂದ ಈ ರೀತಿ ಆಯಿತೇನೋ ಎಂದು ಮುಲುಗಿದವರೂ ಉಂಟು. ಕಿತ್ತೂರಿನವರು ಈ ಹೋರಾಟದಲ್ಲಿ ಅಸಹಾಯಸ್ಥಿತಿಗೆ ಸಿಲುಕಿದರೂ, ಸೋಲನ್ನೆಂದೂ ಒಪ್ಪಿಕೊಳ್ಳಲಿಲ್ಲ. ಈ ಹೋರಾಟದಲ್ಲಿ ಪ್ರಮುಖರಾಗಿದ್ದ ಸರದಾರ ಗುರುಸಿದ್ದಪ್ಪನೇ ಆದಿಯಾಗಿ ಅತಿಮುಖ್ಯ ನಲವತ್ತು ವೀರರು ಬೆಳಗಾವಿಯಲ್ಲಿ ಗಿಡಕ್ಕೆ ತೂಗುಹಾಕಲ್ಪಡಬೇಕಾದರೆ ಅಂದಿನ ಸೈಜಸ್ಥಿತಿಯ ಅರ್ಥವಾಗಬಹುದು. ಐದು ಹಳ್ಳಿಗಳ ಇನಾಮು ತಕ್ಕೊಂಡು ಸುಮ್ಮನಿರಬೇಕೆಂದು ಬ್ರಿಟಿಷರು ಹೇಳಿ ಕಳಿಸಿದುದನ್ನು ರಾಣಿ ಚನ್ನಮ್ಮ, ಸೊಸೆ ವೀರಮ್ಮ ನಿರಾಕರಿಸಿ ಜೇಲು ವಾಸಮಾಡಿದರು.

"ಏಳು ಹಳ್ಳಿ ಇನಾಮು ಕೊಡಲೇನು | ಬಡಾಯಕ ನನಗೂಡ ಬರಬ್ಯಾಡ" | ತಮ್ಮ ಅಸ್ತಿತ್ವವನ್ನೇ ಈ ಹೋರಾಟವು ಪ್ರಶ್ನಿಸಿದ್ದರೂ, ಹಿಡಿದ ಛಲ ತತ್ವಗಳನ್ನು ಬಿಡದೆ ರಾಣಿ ಚನ್ನಮ್ಮ ಕೊನೆಯವರೆಗೂ ಹೋರಾಡಿದಳು. "ಬಚ್ಚ ಮನುಷ್ಯ

* ಛಾಪಪ್ಪ ಮೂಗಿ :– ಕಿತ್ತೂರ ಕಾಳಗ ರುದ್ರಗಡ ಪ್ರಕಾಶನ ಬೈಲಹೊಂಗಲ. ಪಿ.ಪಿ.19

ಇರುವವರೆಗೂ ಹೋರಾಟ ಮಾಡುತ್ತೇವೆಂಬ" ಪ್ರತಿಜ್ಞೆಯನ್ನು ನಾವು ಅಲ್ಲಿ ಕೇಳುತ್ತೇವೆ.

ಅದು ಅಕ್ಷರಶಃ ಕಿತ್ತೂರ ನಾಡಿನಲ್ಲಿ ಪಾಲಿಸಲ್ಪಟ್ಟಿತು. ಕಾಶಿಗೆ, ಮಾಲೇಗಾಪಕ್ಕೆ (ಖಾನದೇಶ ಜಿಲ್ಹೆ) ಕಳಿಸಿಕೊಡುತ್ತೇವೆಂದು ತಿಳಿಸಿದರೂ ಚನ್ನಮ್ಮ-ವೀರಮ್ಮ ತಮ್ಮ ಸಂಸ್ಥಾನದಲ್ಲಿ ಕೈದಿಗಳಾಗಿ ಉಳಿಯಲು ಬಯಸಿದರು.

ತ್ವರಿತ ಸ್ವಾರ್ಥ, ಮಹತ್ವಾಕಾಂಕ್ಷೆಗಳಿಂದಾಗಿ ಕಿತ್ತೂರ ನಾಶವಾಯಿತು. ಬ್ರಿಟಿಷ ಕುಟಿಲ ನೀತಿಯಿಂದಾಗಿ ಅನೇಕರು ಮೋಸಹೋದರು. ಭಾರತದ ಅನೇಕ ಕಡೆಗಿದ್ದ ಸಂಸ್ಥಾನಿಕರಲ್ಲಿ ಒಮ್ಮತವಿರಲಿಲ್ಲ. ಕಿತ್ತೂರ ವರೆಗೆ ತನ್ನ ಸೈನ್ಯದೊಡನೆ ಬಂದ ಕೊಲ್ಹಾಪೂರ ಸಂಸ್ಥಾನಿಕನು ಕೊನೆಯ ಗಳಿಗೆಯಲ್ಲಿ ತನ್ನ ನಿರ್ಣಯ ಬದಲಿಸ ಬೇಕಾಯಿತು. ಬ್ರಿಟಿಷ್ ದಿಗ್ಬಂಧನವನ್ನೂ ಹರಿದೆಸೆಯಲು ಸಾಧ್ಯವಾಗಬಹುದಾಗಿದ್ದ ಪಶ್ಚಿಮದ ಪೋರ್ತುಗೀಜ ಪ್ರದೇಶದಿಂದ ಕಿತ್ತೂರಿಗೆ ಯಾವ ಸಹಾಯವೂ ದೊರೆಯಲಿಲ್ಲ, ಬ್ರಿಟಿಷ್ ತೋಫುಗಳ ಮುಂದೆ, ಕಿತ್ತೂರಿನ ಕಾಲ್ಬಳವು ನಿಷ್ಕ್ರಿಯ ವಾಯಿತು.

ಬ್ರಿಟಿಷರ ದೃಷ್ಟಿಯಲ್ಲಿ ಚನ್ನಮ್ಮ :

ಬ್ರಿಟಿಷ್ ಇತಿಹಾಸಕಾರರು ರಾಣಿ ಚನ್ನಮ್ಮನನ್ನು, ಹಾಗೂ ಉಳಿದ ವೀರರನ್ನು ನೋಡಿದ ದೃಷ್ಟಿ ಬಹುಉದಾರವಾದದ್ದು. ತಮ್ಮ ವೈರಿಗಳಿಂದಲೂ ಕಿತ್ತೂರಿನವರು ಮೆಚ್ಚುಗೆಯನ್ನು ಪಡೆದರು. ಅಂದಿನ ಸ್ಥಿತ್ಯಂತರಗಳನ್ನು ವಿದ್ಯಮಾನಗಳನ್ನು ಕಾಣಬೇಕಾದರೆ ಸಮಕಾಲೀನ ಬ್ರಿಟಿಷ್ ಅಧಿಕಾರಿಗಳ ಪತ್ರವ್ಯವಹಾರಗಳನ್ನು ಪರಾಂಬರಿಸಬೇಕು. ತಾವು-ತಾವು ಗೌಪ್ಯವಾಗಿ ಬರೆದುಕೊಂಡಿರುವ ಪತ್ರಗಳು ಕಿತ್ತೂರಿನ ಇತಿಹಾಸದ ಪ್ರಬಲ ದಾಖಲೆಗಳಾಗಿವೆ.

ಥ್ಯಾಕರೆಯ 'ಹಾವಳಿಯನ್ನು ಉದ್ಧರಿಸಿ ಗವ್ಹರ್ನರನಿಗೆ ಬರೆದ ಪತ್ರ* ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಮೈಲಿಕಲ್ಲು; ಇನ್ನೊಂದು ಪತ್ರ- ಥ್ಯಾಕರೆಯು ಕಿತ್ತೂರ ಆಸ್ಥಾನವನ್ನೂ ಮೊಹರಬಂದ ಮಾಡಿದಾಗಿನದು- ಇವೆರಡು ಶ್ರೇಷ್ಠಮಟ್ಟದ ರಾಜನೀತಿಯನ್ನು ಅಭಿವ್ಯಕ್ತಗೊಳಿಸುತ್ತವೆ.

ಕಿತ್ತೂರಿನ ಪತನಾನಂತರ ರಾಣಿವಾಸದವರನ್ನು ಕನ್ನಡನಾಡಿನಾಚೆ ಕಾಶಿಗೋ ಮಾಲೇಗಾಪಕ್ಕೊ (ಖಾನದೇಶ ಜಿಲ್ಹೆ) ಕಳಿಸುವ ಎತ್ತುಗಡೆ ಇತ್ತು. ಆದರೆ ಅದು ಸಾಧ್ಯವಾಗಿಲ್ಲ. ಚನ್ನಮ್ಮ ಬರೆದ ಒಂದು ಪತ್ರದಲ್ಲಿ ತನ್ನ ಸಾತ್ವಿಕ ಸಂತಾಪವನ್ನು ತೋಡಿಕೊಂಡಿದ್ದಾಳೆ."We never go out; for friendship's sake how ever, we had an interview with Mr. Thackaray. To this God has reduced us. We have endused every thing patients....*"

ಕಿತ್ತೂರಿನ ಮೊದಲನೆಯ ಯುದ್ಧದಲ್ಲಿ ಸೆರೆಯಾಳಾದ ಬ್ರಿಟಿಷ್ ಅಧಿಕಾರಿ ಸ್ಟೀವ್ಹನ್‌ಸನ್ ತಾನು ಬರೆದ ಇನ್ನೊಂದು ಪತ್ರದಲ್ಲಿ ರಾಣಿ ಚನ್ನಮ್ಮನವರನ್ನು

---

* ಚನ್ನಮ್ಮನು ಬ್ರಿಟಿಷ್ ಅಧಿಕಾರಿ ಚಾಪ್ಲಿನ್‌ನನಿಗೆ ಬರೆದ ಪತ್ರ. ಪಿ. ಪ್ರೀ. ಮಾ. ಕ. ಪು. 129.

ಮುಕ್ತಕಂಠದಿಂದ ಹೊಗಳಿದ್ದಾನೆ. ಸೆರೆಸಿಕ್ಕಿದ್ದ ಅಧಿಕಾರಿಗಳು ತಮ್ಮ ಅಧಿಕಾರಿಗಳೊಡನೆ ಪತ್ರವ್ಯವಹಾರ ಮಾಡುವಷ್ಟು ಆಗ ಅವರಿಗೆ ಸ್ವಾತಂತ್ರ್ಯ ದೊರೆತುದು ಗಮನಾರ್ಹ ವಿಷಯವಾಗಿದೆ. ಯುದ್ಧವನ್ನು ತಪ್ಪಿಸಿ ಶಾಂತರೀತಿಯಲ್ಲಿ ಈ ಘರ್ಷಣೆಯನ್ನು ತಪ್ಪಿಸಲು ಅವರು ಮಾಡಿದ ಪ್ರಯತ್ನ ಸ್ತುತ್ಯವಾದರೂ, ಬ್ರಿಟಿಷರ ಕುಟಿಲ ನೀತಿಯಿಂದಾಗಿ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಹೋರಾಟವಾಗಲೇ ಬೇಕಾಯಿತು.

ಕಿತ್ತೂರ ವೀರರು ಕಂಡ ಚನ್ನಮ್ಮ :

ರಾಣಿ ಚನ್ನಮ್ಮನ ಬಗ್ಗೆ ಕಿತ್ತೂರನಾಡು ಇರಿಸಿದ ಶ್ರದ್ಧೆಯ ಪ್ರತೀಕವಂತೆ, ಒಂದು ದುಂದುಮಿ ಚಕಳಿ ದೊರೆಯುತ್ತದೆ :

ಗೆದ್ದ ಕಿತ್ತೂರ ತಂದ ಉದ್ದ ಬೀಳುವೆ ತಾಯಿ
ಕದ್ದ ಮಾತಲ್ಲ ನಿಮ್ಮಾಣೆ । ಕದ್ದಮಾತಲ್ಲ ನಿಮ್ಮಾಣೆ । ಇಲದಿರಕ
ಬಿದ್ದು ಹೋಗುವೆ ರಣದಾಗೋ ।

ಇಂತಹ ವೀರಪರಂಪರೆಗೆ ತಾಯಿತನವನ್ನು ನಿತ್ತರಿಸುವ ಭಾಗ್ಯ ರಾಣಿಚನ್ನಮ್ಮನದಾಯಿತು. ಅಮಟೂರ ಸೈದನವರು ಬಾಳಾಸಾಹೇಬ ರಾಣಿಯಾಜ್ಞೆ ಬಂದಕೂಡಲೆ, ಥ್ಯಾಕರೆಗೆ ಗುಂಡು ಹಾಕಿದ ಸಂದರ್ಭ ರೋಮಾಂಚಕಾರಿಯಾದಷ್ಟೇ, ಹಬಸಿ* ಗಜಬಾ ಅವನ ರುಂಡವನ್ನು ತನ್ನ ಭಾಲೆಗೆ ಸಿಕ್ಕಿಸಿ ಕುಣಿದಾಡಿದ. ರಾಣಿಚನ್ನಮ್ಮನವರ ಆಜ್ಞೆಯಾದಕೂಡಲೇ ಎರಡು ಘಂಟೆಗಳ ಅವಧಿಯಲ್ಲಿ ಹನ್ನೆರಡು ಸಾವಿರ ಜನ ವೀರರು ಕಿತ್ತೂರಿನ ಕಿಲ್ಲೆಗೆ ಬಂದ ವೃತ್ತಾಂತವು ಆ ಮಹಾತಾಯಿಯ ನೇತಾರ ಗುಣವನ್ನು ಪ್ರದರ್ಶಿಸುತ್ತದೆ. ಸರದಾರ ಗುರುಸಿದ್ಧಪ್ಪನವರು, ಅವರಾದಿ ವೀರಪ್ಪ, ಹಿಮ್ಮತಸಿಂಗ್, ಲಿಂಗೋಪಂತ, ಅಗಸೆಬಾಗಿಲು ರಾಮಪ್ಪ, ಕಮ್ಮಾ ಇಮಾಮ ಮುಂತಾದವರು, ತಾವು ಕೊನೆಗೆ ಬೆಳಗಾವಿಯಲ್ಲಿ ಉಳಿದ ನಲವತ್ತು ವೀರರೊಡನೆ ತೂಗು ಹಾಕಲ್ಪಟ್ಟರೂ ತಮ್ಮ ಒಡತಿಗೆ ಎರಡುಬಗೆಯಲಿಲ್ಲ. ಪ್ರಾಣ ಹೋದರೂ ಅಭಿಮಾನವನ್ನು ತೊರೆಯಲಾರೆವೆಂಬ ಛಲ ನಿಜವಾಗಿಯೂ ಮಹತ್ವದ ಮಾತಾಗಿದೆ.

ಬ್ರಿಟಿಷರ ಕಡುವಿರೋಧ, ನಂತರದ ಸಂಗೊಳ್ಳಿ ರಾಯಣ್ಣ ಸ್ಫೂರ್ತಿಗೊಳ್ಳಲು ಮಹಾರಾಣಿ ಚನ್ನಮ್ಮನವರನ್ನು ಜೈಲಹೊಂಗಲದಲ್ಲಿ ಜಂಗಮವೇಷದಲ್ಲಿ ಭೇಟಿಯಾದದ್ದೇ ಕಾರಣವಾಯಿತು. ಯಾವ ಫಲಾಪೇಕ್ಷೆಯಿಲ್ಲದ ಈ ವೀರನು ಕಿತ್ತೂರ ನಾಡಿನ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಮಾಡಿದ ಪ್ರಯತ್ನಕ್ಕೆ ರಾಣಿಯವರ

* 'ಹಬಸಿ' ಇದು ಅಬಿಸೀನಿಯನ್‌ದ ತದ್ಭವ. ನಿಗ್ರೋ ಬುಡಕಟ್ಟಿನ ಈ ಜನರು ಎಷ್ಟೋ ನೂರು ವರ್ಷಗಳಿಂದ ಕಿತ್ತೂರ ಸಂಸ್ಥಾನದ ಅವಿಭಾಜ್ಯ ಅಂಗವಾಗಿದ್ದರು. ಇವರಲ್ಲಿ ಇನ್ನೊಬ್ಬ ಹಬಸಿ ರಾಮನು ಸಂಗೊಳ್ಳಿ ರಾಯಣ್ಣನ ಕಾಲದಲ್ಲಿ ಪ್ರಸಿದ್ಧನಾಗಿದ್ದನು.

* ಥ್ಯಾಕರೆಯ ಈರ್ವರು ಮಕ್ಕಳೂ ಈ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ವಿಚಾರ ಕಿತ್ತೂರ ನಾಡಿನ ಜಾನಪದದಲ್ಲಿ ಬರುತ್ತದೆ. 1924ರಲ್ಲಿ ಶ್ರೀ ಶಿವಲಿಂಗಸ್ವಾಮಿ ಹಾವಳಗಿಮಠರು ಬರೆದ ಚೆನ್ನಮ್ಮನ ನಾಟಕದಲ್ಲಿಯೂ ಈ ಪ್ರಸ್ತಾಪ ಬರುತ್ತದೆ. ಕಲ್ಮಠ ಶ್ರೀಗಳು ಈ ಮಕ್ಕಳನ್ನು ಜೋಪಾನ ಮಾಡಿದ್ದೂ ರಾಣಿಚನ್ನಮ್ಮನು ಅವರ ಯೋಗಕ್ಷೇಮವನ್ನು ಸ್ವತಃ ವಹಿಸಿದ್ದು ಅಲ್ಲಿ ಬರುತ್ತದೆ.

ಪ್ರೋತ್ಸಾಹನೆ ಮುಖ್ಯ ಕಾರಣವಾಯಿತು. ಹೋರಾಟಕ್ಕೆ ಸಹಾಯಕಾರಿಯಾಗಿ ಸ್ವತಃ ತನ್ನ ಆಭರಣಗಳನ್ನು ಗುಪ್ತವಾಗಿ ರಾಯಣ್ಣನಿಗೆ ಚನ್ನಮ್ಮರಾಣಿಯು ಕಳಿಸಿದಳು. ಈ ವಿಶ್ವಾಸವನ್ನು ಅವನು ಎಂದಿಗೂ ಮರೆಯಲಿಲ್ಲ.

ನಾಡಿನ ವೀರರಲ್ಲಿ ಅಪ್ರತಿಹತವಾದ ಸ್ವಾಭಿಮಾನವನ್ನು ತುಂಬಿ, ಅವರು ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವಲ್ಲಿ ರಾಣಿಚನ್ನಮ್ಮನವರು ಅಗಾಧರೀತಿಯಿಂದ ತಮ್ಮ ಪರಿಸರವನ್ನು ಪ್ರಭಾವಯುತವನ್ನಾಗಿರಿಸಿರಲೇ ಬೇಕು.

ಚನ್ನಮ್ಮನ ರಾಜನೀತಿ :

ಅಂದಿನ ಭಾರತವನ್ನೇ ತಮ್ಮ ಚಾಣಾಕ್ಷತೆಯಿಂದ ಪಾದಾಕ್ರಾಂತ ಮಾಡಿಕೊಂಡಿದ್ದ ಬ್ರಿಟಿಷರನ್ನು ಆರುತಿಂಗಳು ನೀರು ಕುಡಿಸಿದ ಶ್ರೇಯಸ್ಸು ಚನ್ನಮ್ಮನದಾಗಿದೆ. ಅದೇ ಛಲ, ಅಭಿಮಾನ, ಆತ್ಮಗೌರವ, ಸಮಸ್ಯೆಗಳನ್ನು ಪರಸ್ಪರ ತಿಳುವಳಿಕೆಗಳಿಂದ ಬಿಡಿಸಿಕೊಳ್ಳುವ ವಿಧಾಯಕ ವಿಚಾರಸರಣಿ, ವಚನಗಳಿಗೆ ಗೌರವ ಮುಂತಾದ ಸದ್ಗುಣಗಳನ್ನು ಈ ತಾಯಿ ಅನನ್ಯವಾಗಿ ಮೆರೆದಳು–ತನ್ನ ರಾಜನೀತಿಯಿಂದ ಕಿತ್ತೂರಿನ ಆಸ್ಥಾನದಿಂದ ರಾಣಿ ಚನ್ನಮ್ಮನ ಹಸ್ತಾಕ್ಷರಗಳಲ್ಲಿ ಬ್ರಿಟಿಷರಿಗೆ ಹೋದ ಅನೇಕ ಪತ್ರಗಳು ಈ ಮಾತನ್ನು ಸ್ಪಷ್ಟೀಕರಿಸುತ್ತವೆ. ಸಂಧಾನಯುಕ್ತ ವ್ಯಕ್ತಿಗೌರವ, ಮಾನವೀಯಗುಣಗಳ ಪ್ರದರ್ಶನ, ಸಹನಶೀಲ ವರ್ತನೆಗಳಿಂದಾಗಿ ಆಕೆಯು ತನ್ನ ವೈರಿಗಳ ಮನಸ್ಸನ್ನೂ ಸೂರೆಗೊಂಡಿದ್ದಾಳೆ. ಶಾಂತಿ ಮಾರ್ಗದಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂಬ ಆಕೆಯ ಪ್ರಯತ್ನ ಕೊನೆಯವರೆಗೂ ನಡೆಯಿತು.

ಚನ್ನಮ್ಮನ ಬಗೆಗಿನ ಸಾಹಿತ್ಯ ರಚನೆ*

ಅಂದಿನ ಬ್ರಿಟಿಷ ಭಾರತದ ಎಂಟುನೂರು ಸಂಸ್ಥಾನಗಳಲ್ಲಿ ತೀರ ಚಿಕ್ಕ ಒಂದು ಸಂಸ್ಥಾನದ, ಓರ್ವ ರಾಣಿಯ ಬಗ್ಗೆ, ಕನ್ನಡದಲ್ಲಿ ಇಷ್ಟೆಲ್ಲ ಸಾಹಿತ್ಯರಚನೆಯಾದುದು ಅಗಾಧ ವಿಷಯವಾಗಿದೆ. ಪಾಶ್ಚಾತ್ಯರು ಬರೆದಿಟ್ಟಿರುವ ಸಂಗ್ರಹಿಸಿರುವ ಸಾಹಿತ್ಯ, ಇಂಗ್ಲೀಷ್, ಪರ್ಶಿಯನ್, ಮರಾಠಿ, ಕನ್ನಡವಲ್ಲಿದ್ದರೆ, ಕನ್ನಡಿಗರ ಸಾಹಿತ್ಯದ ವೈವಿಧ್ಯ–ಗ್ರಾಂಥಿಕವಾಗಿರುವಂತೆ, 'ತೋಂಡಿ'ಯಾಗಿಯೂ, ಇಂದಿಗೂ ಹೇರಳವಾದ ಜಾನಪದ ಕನ್ನಡನಾಡಿನದ್ಯಾಂತ ಇದೆ. ೧೮೬೭ರಷ್ಟು ಹಿಂದೆಯೇ ಭಾರತಕ್ಕೆ ಬಂದ ಫ್ಲೀಟ್‌ರು ಮುಂಬಯಿ ಪ್ರಾಂತದಲ್ಲಿ ಅಧಿಕಾರಿಗಳಾದರು. ಕನ್ನಡನಾಡಿನಲ್ಲಿ ಸಂಚರಿಸಿ, ಜಾನಪದ ಸಾಹಿತ್ಯದ ಸಂಗ್ರಹಣೆಗೆ ಪ್ರಯತ್ನಪಟ್ಟುದು ಅಪೂರ್ವವಿಚಾರವಾಗಿದೆ. ಅವರು ಸಂಗ್ರಹಿಸಿದ ಕನ್ನಡವಾಣಿಗಳಲ್ಲಿ ಕಿತ್ತೂರಿನ ಇತಿಹಾಸ ಅತ್ಯಂತ ಸ್ಪೈಜವಾಗಿ ಬರುತ್ತದೆ.

ಇತ್ತೀಚಿಗೆ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ ಭಾಷೆಗಳಲ್ಲಿ ಅನೇಕ ಗ್ರಂಥಗಳು ಬಿಡಿಲೇಖನಗಳು ಹಾಡುಗಳು ಬಂದಿವೆ, ಬರುತ್ತಲಿವೆ. ಈ ಗ್ರಂಥಗಳನ್ನೇ ಪಟ್ಟಿ

---

* ಲೇಖನದ ಕೊನೆಗೆ, ಕಿತ್ತೂರಿನ ಬಗ್ಗೆ ಈಗಾಗಲೇ ಪ್ರಕಟವಾಗಿರುವ ಗ್ರಂಥಗಳ ಒಂದು ಪಟ್ಟಿಯನ್ನು ಕೊಡಲಾಗಿದೆ. ಅದು ಎಲ್ಲ ಲೇಖನಗಳನ್ನು ಕೊಡದಿದ್ದರೂ ಮುಖ್ಯವಾದವುಗಳನ್ನು ಸಂಕ್ಷೇಪಿಸುತ್ತದೆ.

ಮಾಡಿವೆ ಸುಮಾರು ನಲವತ್ತಾದರೂ ನಮ್ಮ ಲೆಕ್ಕಗೆ ಸಿಗುತ್ತವೆ. ಕೆಲವು ವಿಶ್ವ ವಿದ್ಯಾಲಯಗಳಿಂದ ಪ್ರಕಟಿಸಲ್ಪಟ್ಟರೆ, ಕೆಲವು ಸರಕಾರದಿಂದ ಪ್ರಕಟಗೊಂಡಿವೆ. ಖಾಸಗಿ ಪ್ರಯತ್ನಗಳೂ ಇದರಲ್ಲಿ ಸೇರಿವೆ. ೧೯೪೭ರ ಸುಮಾರಿಗೆ ಬೈಲಹೊಂಗಲದಲ್ಲಿ ಸ್ಥಾಪಿಸಲ್ಪಟ್ಟ ಕಿತ್ತೂರ ಚನ್ನಮ್ಮರಾಣಿ, ಇತಿಹಾಸ ಸಂಶೋಧನ ಮಂಡಲವು ನಾಲ್ಕಾರು ಚಿಕ್ಕ ಪುಸ್ತಕಗಳನ್ನು ಪ್ರಕಟಿಸುವ ಪ್ರಯತ್ನಮಾಡಿದೆ. ಅದರಲ್ಲಿ 'ಕಿತ್ತೂರ ಬಂಡಾಯ' 'ಮಲ್ಲಸರ್ಜಕಾವ್ಯ' 'ಪಾರಸಿ ಕಾಗದ ಪತ್ರಗಳು' 'ಕಿತ್ತೂರ ರಾಜ್ಯೋದಯ' ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಇತ್ತೀಚೆಗೆ ಲಿಂ. ಪ್ರೊ. ಜಿ. ಎಸ್. ಹಾಲಪ್ಪನವರು ವಿಶೇಷ ಶ್ರಮವಹಿಸಿ, Freedom Movement In Karnatka ಗ್ರಂಥವನ್ನು ಹೊರತಂದಿದ್ದಾರೆ, ಅದರ ಸಂಕ್ಷಿಪ್ತ ಪುಸ್ತಿಕೆ 'ಭಾರತದ ಸ್ವಾತಂತ್ರ್ಯ ಬೆಳ್ಳಿಚುಕ್ಕೆ–ಚನ್ನಮ್ಮ' ಕನ್ನಡನಾಡಿನ ಮಕ್ಕಳಿಗೆ ಕೆಲವುಕಾಲ ಪಠ್ಯಪುಸ್ತಕವಾಯಿತು. ಇತ್ತೀಚೆಗೆ ಕರ್ನಾಟಕ ವಿಶ್ವವಿದ್ಯಾಲಯವು ಕಿತ್ತೂರನಲ್ಲಿ, ೧೫೦ ವರ್ಷಗಳ ವಿಜಯೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ ಮಾಲೆಯನ್ನು ಏರ್ಪಡಿಸಿ, ಒಂದು ಗ್ರಂಥವನ್ನು ಹೊರತಂದಿದೆ. ಆದರೆ ನಾಡಿನ ಇಕ್ಕೆಲಗಳಲ್ಲಿ ಇಂದಿಗೂ ದೊರೆಯುವ ಜಾನಪದದ ಸಾಹಿತ್ಯ ಈಗ ಸಂಗ್ರಹಿಸಲ್ಪಡಬೇಕು. ಅವುಗಳ ಧ್ವನಿಗಳನ್ನು ಧ್ವನಿಮುದ್ರಣಮಾಡಿಕೊಳ್ಳಬೇಕು.

ಜಾನಪದದಲ್ಲಿ ಚನ್ನಮ್ಮ :

ರಾಣಿ ಚನ್ನಮ್ಮನನ್ನು ನೆನಪಿಟ್ಟವರು ಇಬ್ಬರು. ಒಬ್ಬರು ಕಿತ್ತೂರನಾಡಿನ ವೈರಿಗಳಾದ ಬ್ರಿಟಿಷರು. ತಮ್ಮ ಕಾಗದ ಪತ್ರಗಳಲ್ಲಿ ಇಡಿಯ ಕಿತ್ತೂರಿನ ಇತಿಹಾಸವನ್ನು ಅವರು ನಮಗೆ ಕೊಡುತ್ತಾರೆ. ಇನ್ನೊಬ್ಬರು ಕಿತ್ತೂರ ನಾಡಿನ ಜನಸಾಮಾನ್ಯರು. ತಮ್ಮ ಹಾಡುಗದ್ಯಗಳಿಂದ ತಮ್ಮ ನೆಚ್ಚಿನ ರಾಣಿಯನ್ನು ಅವರು ತಲೆತಲಾಂತರಗಳಿಂದ ಸ್ಮರಿಸುತ್ತಿದ್ದಾರೆ. ಈ ಜಾನಪದ ವೈವಿಧ್ಯ ಅಭ್ಯಾಸಯೋಗ್ಯವಾಗಿದೆ. ಈ ನಾಡಿನ ದುಂದುಭಿ, ದುಂದುಮೆ, ಲಾವಣಿ, ಗೀಗೀ, ಸೋಬಾನ, ಭಲಾರಿ, ರಿಯಾಸತ ಕರ್ಬಲಾ ಪದಗಳು, ಚೆಣಿಕೋಲುಪದಗಳು ತಮ್ಮ ಧ್ವನಿ ವೈವಿಧ್ಯದಿಂದ, ಐತಿಹಾಸಿಕ ಸತ್ಯತೆಯ ಅವಗುಂಠನದಿಂದ ಶ್ರೇಷ್ಠ ಮಟ್ಟದ ಕೃತಿಗಳಾಗಿವೆ. ಹಾಗುಂಡಿ ಬಸವ 'ಮಲಸರ್ಜದುಂದುಮಿ' ಚೌಪದಿ ರೀತಿಯಲ್ಲಿ ಯಾವ ಕಾವ್ಯಕ್ಕೂ ಹಿಂದಿಲ್ಲ.

ದುಂದುಮಿ :

ರಾಣಿಯಳಾಡಿದ ಮಾತಿಗೆ ಬಂಟರ
ತ್ರಾಣವ ಇನ್ನೇನು ಹೇಳಲಿ ಮಾ
ಕೋಣೆಯೊಳೆಲ್ಲರ ತಲೆಯು ಬೀಳುವ ತನಕ
ಕಾಣೆಗೊಡೆವು ಚಿಂತಿ ಬಿಡೇದರಾಗ

ದುಂದುಭಿ :

ಮಲ್ಲಸರ್ಜನ ನಾರಿ ಮೂಲೋಕ ಸುಂದರಿ
ನಾಲೊಳಗೆ ರತ್ನದಾ ಹಳ್ಳ । ಚನ್ನಮ್ಮ
ಆರತಿ ಬೆಳಕ ನಗಿಯವಳ ।

ಸೋಬಾನ ಪದ :

ಹೊಂಗಲ ಮಠದಾಗ ಲಿಂಗಪೂಜೆಯ ಮಾಡಿ
ಭಂಗಾಗುದೆಂದು ಎದೆಗುಂದಿ । ಚೆನ್ನಮ್ಮ
ವಜ್ಜರದ ಉಂಗುರ ನುಂಗ್ಯಾಳೋ ।

ಚಿಣಿಕೋಲ ಪದ :

ಸಾಯುವಾಗ ರುದ್ರವ್ವ ಯಾರಾರ್ನ ಕರಿಸ್ಯಾಳ
ತಂಗಿ ಚನ್ನವ್ವ ಕರಿಸ್ಯಾಳ । ಕೋ
ತಂಗಿ ಚನ್ನವ್ನ ಕರಿಸ್ಯಾಳ । ಹೇಳತಾಳ
ಅರಮನಿ ಸಯ್ತು ಬಲು ಜ್ವಾಕ್ಯ ।

ಭಲಾರಿ :

ಕಿತ್ತೂರ ಚಾಮುಂಡಿ ಹತ್ತಿ ಬತ್ತಲಗುದರಿ
ಕುತ್ತ ತಂದಾಳೋ ವೈರೀಗೆ ।
ಗಂಡ್ಸೂರ ಗೊತ್ತಿಗ್ಹಚ್ಯಾಳೋ ರಣದಾಗೊ ।
ಕತ್ತಿ ಒಗದಾಳೊ ಎದುರಾದ ವೈರೀನ್ನ
ಮುತ್ತು ಮಾಡ್ಯಾಳೋ ಆ ವೈರಿ । ಕುಫುಗಳ
ನಿತ್ತ ನೋಡಿದ ವೈರಿ ದಂಗಾದೋ ।

ಲಾವಣಿ :

ಕಾಳಗ ಹತ್ತೇತಿ ಕಡಿ ಮೊದಲಿಲ್ಲದ । ಹೇಳಲಿನ್ನ್ಯಾವ ಪರಿ
ಮಡಿದು ಹ್ವಾದ ಕಿತ್ತೂರ ದೊರಿ । ನಮುಗ ಬಂದಿತು ರಣ ರಾತರಿ
ಅವರಾದಿ ಈರಪ್ಪನ ಕರಿ । ಸಿಪ್ಪಾಣಿಗೆ ಕಾಗದ ಬರಿ ।
ದಂಡು ಮುಂದಿ ಬರಲು ಕುಮರಿ । ಕತಪಾವಗ ಕೊಡತಾಳು ಬೆಳ್ಳಿವರಿ
ಹಲ್ಲ ತಿಂತಾಳೊ ಕರಿಕರಿ । ಹಬ್ಬದ ಮರ್ರ್ಹಿನ ಸಬ್ಬ ರಾಜೀಕ ಬರದಾಳೋ
ಲಕ್ಕುಟಿ.

ಕೋಲಿ ಪದ :

ಬಳ್ಳೋಡಿ ಗ್ರಾಮುಕ ಬಂದಾಳ ಚನ್ನವ್ವ । ಚೌಬಾರಿಗೆ ಡೇರೆ ಹೆ
ಹೋಡಿಸ್ಯಾಳ । ಕೋಲ ॥ ಚೌಬಾರಿಗೆ ಡೇರಿ ಹೋಡಿಸ್ಯಾಳ ಚನ್ನವ್ವನ
ಹತ್ತನೂರ ಹಳಬರ....ಬಂದಾರ ॥ ಕೋಲ

ಸೋಬಾನ ಪದ :

ಥ್ಯಾಕರೆ ಮುಸುವ ಬೂಟುಗಾಲಲಿ ಒಳಗ ಹೊಕ್ಯಾನವ್ವ
ನೋಡಿದ ಚನ್ನವ್ವಗ ತಡೆಯೂವು ತಾಪಗಳು
ಒಳಗೊಳಗ ಹಲ್ಲ ಕಡದಾಳೊ ॥

ತಾಯಿಯವರ ಧಾಟಿ :*

ಚನ್ನಮ್ಮ ರಾಣಿಯು ಚಿಮ್ಮಿದ ನೆತ್ತರ
ಚಿನುಮಯಲಿಂಗಗ ಮಜ್ಜನ
ಚಿನುಮಯ ಲಿಂಗಗ ಮಜ್ಜನ–ಎರದೀತ
ಜನ್ಮವು ಹೂ ಆಗಿ ಸಲ್ಲೀತ.

ಇನ್ನೊಂದು ಲಾವಣಿ :

ಅಕ್ಕ ಚನ್ನವ್ವ ಅತ್ತಂಥ ಕಣ್ಣೀರು
ಚಿಕ್ಕ ಹೊಳಿಯಾಗಿ ಹರದಾವೊ

ರಿಯಾಸತ್ :

ಆಗ ಚನ್ನವ್ವನವರು ಚಿಂತೆಗೊಳಗಾಗಿ ಕಾಂತನ ನೆನಿಸಿ ಅಳತಾರೊ ।
ದೊರಿ ಮಲ್ಲಸರಜ್ಯಾ ಮರಿಯಾದ ಮಣ್ಣಿಗಿ ವೀರಪ್ಪ ದೇಸಾಯಿ ಇರಲಿಲ್ಲ ॥
ಹೋಗಿ ಶಿವಲಿಂಗಸರಜ್ಯಾ ಮಾವಂದಿರಿಗೆ ಕೇಡು ಬದಿಂತೋ ನಮಗ ॥
ಕಾಂತನ ನೆನಸಿ ಅಳತಾಳೊ ಚನ್ನವ್ವನ ಚಿಂತಿಗೆ ಬುವಿ ಬಳಲಿತೊ ॥

ಗುಂಜು ಗುಂಜು ಮಾಪುರ :

ಕಿತ್ತೂರ ಕಿಲ್ಲೇಕ ಉತ್ರೀಕರ್‍ಯಾಂಲ್ಲ । ಉಕ್ಕಿನ ಗುಂಡ್ಹಚಿ ಬಗೆದಾರ ।
ಚನ್ನವ್ವ ಹಕ್ಯಾಗಿ ಬಾಯ ಬಿಡತಾಳವ್ವ ।
ಉಕ್ಕಿನ ಗುಂಡಿಕ್ಕೆ ಬಗೆಯುವ ಹೊತ್ತಿಗ । ನಿಂತರು ಆನಿ ಬಳಲ್ಯಾವವ್ವ
ಹಾಲ ಕಾಸೊತ್ತಿಗೆ ಹಾಳಾದ್ಯಾ ಕಿತ್ತೂರ । ಹಾದಿ ಬಿದ್ದಾವ ಅರಮನಿ
ಚನ್ನವ್ವನ ರಾಜ ಮಕ್ಕಳಿಗೆ ವನದೇಸ ।

ಗೀ ಗೀ :

ಪಟ್ಟಗಟ್ಟಿತೀವ ಪಾದಕ ಎರಗೇವು
ಹಿಮ್ಮತ ಬಹಳ ಹಿಡಿಯವ್ವ ॥ಗೀಗೀ॥
ಹಿಮ್ಮತ ಹಿಡಿದಾಳ ಹಿಂದ ಮುಂದ ನೋಡಲಿಲ್ಲ
ಮುಂದಿನೆಲ್ಲಾ ಕೂಡ ಹಾಕಿ
ಸದರಿನ ಮುಂದ ಸಾಲ ಬಜಾರ ಹೆಂದರಾಕಿ
ಕಿರಿಕಿರಿಯರನೆಲ್ಲಾ ಕರಿಸಿ
ತಂದನಿಲಿಸ್ಯಾಳ ಸಾಲ ಬುರಕಿ ಹಾಕಿಸಿ
ಹೊಸಗಿನ ನಗಾರಿ ಮ್ಯಾಲ ಚಾಪ ಹಾಕಿ
ಹುಸಿ ಮದ್ದು ಹಾಕಿ ಪರಂಗಿ ಜಡಿಸಿ
ಹಿಮ್ಮತ್ತು ಬಾಳ ಹಿಡಿದಾಳು ಚನ್ನವ್ವ
ವೊಮ್ಮಗ ಪಟ್ಟಗಟ್ಟಿ ॥ಗೀ ಗೀ॥

---

* ಜಯದೇವಿ ತಾಯಿ ಲಿಗಾಡೆ: ತಾಯಿಯ ಪದಗಳು ಕನ್ನಡ ಕೋಟಿ,1959 ಪುಟ : 125

ಕರ್ಬಲಾ ಪದ :

ಮುಚ್ಚಿನ ಕಾಳಗ ಮೆಚ್ಚ್ಯಾಳೋ ಚನ್ನವ್ವ
ಉಚ್ಚಿ ಬೆಳ್ಳಿಗಳ ಕೊಡುತಾಳೊ
ಉಚ್ಚಿ ಬೆಳ್ಳಿಗಳ ಕೊಡುತಾಳೊ–ಬಂಟರಿಗೆ
ಹೆಚ್ಚಿನ ರೋಜ* ಬರಿಸ್ಯಾಳೊ |

ಚರಿತ್ರೆಯಲ್ಲಿನ ಕೆಲವು ಸಂಶಯಗಳು :

ಚನ್ನಮ್ಮಾರಾಣಿಯವರ ಚರಿತ್ರೆಯಲ್ಲಿ ಬರುವ ವಿವಿಧ ಸಂಗತಿಗಳು ಕೆಲವರ ದೃಷ್ಟಿಯಲ್ಲಿ ಸಂಶಯಾಸ್ಪದವಾಗಿ ಉಳಿದಿವೆ :

೧. ರಾಣಿ ಚನ್ನಮ್ಮಾ ಕುದುರೆ ಹತ್ತಿದ ಚಿತ್ರ ಎಲ್ಲಿಡೆ ಇದೆ. ಆಕೆಯು ಕುದುರೆ ಹತ್ತಿ ಕತ್ತಿ–ಢಾಲುಗಳನ್ನು ಹಿಡಿದು, ಸ್ವತಃ ಯುದ್ಧ ಮಾಡಿದಳೇ ?

೨. ದೊಡ್ಡ ಶಕ್ತಿಯಾಗಿ ಇಡಿಯ ಭಾರತವನ್ನು ಆಕ್ರಮಿಸಿದ್ದ ಬ್ರಿಟಿಷ್ ಅಧಿಕಾರವನ್ನು ಆಕೆ ನಿಜವಾಗಿಯೂ ಎದುರಿಸಿದಳೇ ?

೩. ಬ್ರಿಟಿಷರಿಗೆ ಸಹಾಯಕನಾಗಿದ್ದ ಮಲ್ಲಪ್ಪಶೆಟ್ಟಿ ನಿಜವಾಗಿಯೂ ಅವ ನೊರ್ವನೇ ಖಳನಾಯಕನೇ ? ಅಥವಾ ಇನ್ನಾರಾರು ಇದ್ದರು ?

೪. ಚನ್ನಮ್ಮಾರಾಣಿಯವರನ್ನು ಬೈಲಹೊಂಗಲದ ಕಾರಾಗೃಹದಲ್ಲಿ ಇಟ್ಟಿದ್ದು ನಿಜವೇ ?

೫. ಸೊಸೆ ವೀರಮ್ಮನಿಗೂ, ರಾಣಿ ಚನ್ನಮ್ಮನಿಗೂ ವೈಮನಸ್ಸು ಇತ್ತೆ ?

೬. ಮಲಮಗನ ಮರಣಾನಂತರವೇ ರಾಣಿ ಚನ್ನಮ್ಮನ ಚರಿತ್ರೆಗೆ ವೇಗ ಬರುತ್ತದೆ; ಅದಕ್ಕೂ ಪೂರ್ವದಲ್ಲಿಯ ಆಕೆಯ ಚರಿತ್ರೆ ಏನು ?

೭. ಮಾನವ ಸಹಜ ಹಾಗೂ ಮಿತಿ ಮೀರಿದ ಅಸಾಮಾನ್ಯ ಅಪರೂಪದ ಅಂಶಗಳೇನಾದರೂ*** ಸೇರಿವೆಯೇ ? (ಚನ್ನಮ್ಮನ ಚರಿತ್ರೆಯಲ್ಲಿ)

ಇಂತಹ ಅನೇಕ ಸಮಸ್ಯೆಗಳನ್ನು ಕೆಲವು ಸಂಶೋಧಕರು ಮುಂದೆ ತಂದಿದ್ದಾರೆ. ಚನ್ನಮ್ಮ ಅಶ್ವಾರೂಢಳಾಗಿರುವ ಚಿತ್ರವು ಪರಂಪರೆಯಿಂದ ಬಂದ ಚಿತ್ರ. ಅದು ಆಕೆಯ ಬಗೆಗಿನ ಪರಿಕಲ್ಪನೆ. ಅದನ್ನು ನಾವು ಜನಮನದಿಂದ ಅಳಿಸಲಾರೆವು. ನಮ್ಮ ಜಾನಪದ ಈ ವರ್ಣನೆಗಳಿಂದ ಪರಿಪ್ಲುತವಾಗಿದೆ. ಚನ್ನಮ್ಮ ಬ್ರಿಟಿಷರನ್ನು ಕೊನೆಯ ನಿಮಿಷಗಳವರೆಗೂ ಎದುರಿಸಿದುದು ಐತಿಹಾಸಿಕ ಸತ್ಯ. ಮಲ್ಲಪ್ಪಶೆಟ್ಟಿ ಕಿತ್ತೂರ ಸಂಸ್ಥಾನದಲ್ಲಿ ಒಂದು ರಾಜಕೀಯ ಗುಂಪಿಗೆ ಸೇರಿದ ಸ್ವಾರ್ಥಿಗಳ ಹಿರಿಮಣಿ. ಇನ್ನೊಂದು ಗುಂಪಿಗೆ ಸರದಾರ ಗುರುಸಿದ್ದಪ್ಪ ಹಿರಿಮಣಿ. ಇವರೀರ್ವರ ವೈಯಕ್ತಿಕ ಜಗಳವೂ ಮಹತ್ವದ ಅಂಶವಾಗಿದೆ. ಚನ್ನಮ್ಮ ರಾಣಿಯವರನ್ನು ಬೈಲಹೊಂಗಲ

---

* 'ರೋಜ' ಈ ಪದವನ್ನು ಕೆಲವರು 'ರೋಷ' ಎಂದು ಬರೆದಿದ್ದಾರೆ. ಕಿತ್ತೂರ ನಾಡಿನಲ್ಲಿ 'ರೋಜ' ಎಂದೇ ಜನರು ಹಾಡುತ್ತಾರೆ. ಅದಕ್ಕೆ ಅರ್ಥವೂ ಉಂಟು. 'ರೋಜ' ಇದು ಅವರ 'ಸಂಬಳ' ವೆಂದು ಆಗುತ್ತದೆ (ದಿನರೋಜ).

*** ಎಸ್. ಶೆಟ್ಟರ್ : "ಕಿತ್ತೂರ ಸಂಸ್ಥಾನದ ಇತಿಹಾಸ" ಕಿತ್ತೂರ ನಾಡಿನ ಇತಿಹಾಸ ಮತ್ತು ಸಂಸ್ಕೃತಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976 ಪುಟ 109

ದಲ್ಲಿ ಕಾರಾಗೃಹದಲ್ಲಿ ಇಟ್ಟದ್ದು ಸತ್ಯ. ಈಗದು "ಪಾದರಿ ಬಂಗ್ಲೆ" ಎಂದು ಕರೆಯಲ್ಪಡುತ್ತದೆ. ಸೊಸೆ ವೀರಮ್ಮ ಆಗ ಕೇವಲ ಹನ್ನೊಂದು ವರ್ಷದ ಹುಡುಗಿ. ಅಲ್ಲಿ ವೈಮನಸ್ಸು ಇದ್ದದ್ದು ಆಕೆಯನ್ನು ಹಿಂಬಾಲಿಸಿದ ಗುಂಪಿಗಾಗಿ. ಚನ್ನಮ್ಮನ ಬಗ್ಗೆ ಅನೇಕ ಅಸಾಮಾನ್ಯ ಅಂಶಗಳನ್ನು ನಮ್ಮವರು ಸೇರಿಸಿದ್ದು-ಜನತೆಯಲ್ಲಿ ಆಕೆಯ ಬಗೆಗಿನ ಅಭಿಮಾನವೂ ಹೌದು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಚನ್ನಮ್ಮ :

ಭಾರತದ ಸ್ವಾತಂತ್ರ್ಯದ ಇತಿಹಾಸ ಇನ್ನೊಮ್ಮೆ ಬರೆಯಲ್ಪಟ್ಟರೆ, ಕಿತ್ತೂರ ಚನ್ನಮ್ಮನ ಚರಿತ್ರೆಗೆ ಅಲ್ಲಿ ಅಗ್ರ ಪೂಜೆ ಸಲ್ಲಲೇಬೇಕು. ೧೮೫೭ ಕ್ಕಿಂತ ಪೂರ್ವದಲ್ಲಿಯೇ ಈ ಹೋರಾಟ ಕಿತ್ತೂರಿನಲ್ಲಿ ಪ್ರಾರಂಭವಾದುದನ್ನು ಇಂದು ಕೇಂದ್ರ ಸರಕಾರವೂ ಒಪ್ಪಿ ಮಹಾರಾಣಿಯವರ ಹೆಸರಿಗೆ ಒಂದು ಅಂಚೆಚೀಟಿಯನ್ನು ಬಿಡುಗಡೆ ಮಾಡಿರುದನ್ನು ಇಲ್ಲಿ ಸ್ಮರಿಸಬೇಕು. ಈ ಕನ್ನಡನಾಡಿನ ಹೋರಾಟವು ನಂತರದ ಭಾರತೀಯ ಹೋರಾಟಕ್ಕೆ ನಾಂದಿಯಂತೆ ಜರುಗಿ ಹೋಯಿತು. ಒಂದು ಸಣ್ಣ ಸಂಸ್ಥಾನವು ತನ್ನ ಉಳುವಿಗಾಗಿ ನಡೆಸಿದ ಯುದ್ಧ ಇದು ಆಗಲಾರದು. ಅಕ್ಟೋಬರ್ ೨೩, ೧೮೨೪ ರ ಸಂದರ್ಭ ಇಂದು ಮಹಿಳಾ ದಿನಾಚರಣೆಗೆ ಬುನಾದಿಯನ್ನು ಹಾಕುವಷ್ಟು ಪ್ರಬಲವಾದ ಹಿನ್ನೆಲೆಯನ್ನು ಹೊಂದಿದೆ. ನಮ್ಮ ನಾಡಿನ ಈ ಹೋರಾಟವು ೧೯೪೭ರ ಸ್ವಾತಂತ್ರ್ಯ ಪ್ರಾಪ್ತಿಗೆ ಮೂಲವನ್ನು ಕಲ್ಪಿಸಿಕೊಟ್ಟಿದೆ. ಓರ್ವ ಮಹಿಳೆ ಕಿತ್ತೂರ ನಾಡಿನಲ್ಲಿ ಉದಯಿಸಿ, ಅಗಾಧ ರೀತಿಯಲ್ಲಿ ಜನತೆಯನ್ನು ಸಂಘಟಿಸಿ, ಪ್ರಬಲರಾದ ಬ್ರಿಟಿಷರನ್ನು ಎದುರಿಸಿದ ಚರಿತ್ರೆಗೆ ಸಂವಾದಿಯಾದ ಒಂದೇ ಒಂದು ಚರಿತ್ರೆ ನಮಗೆ ದೊರೆಯುವುದು-ಫ್ರಾನ್ಸ ದೇಶದಲ್ಲಿ ಜೋನ್ ಆಫ್ ಆರ್ಕಳ ಚರಿತ್ರೆ!

ಭಾರತದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧೀಯವರು ಚನ್ನಮ್ಮನ ಕಿತ್ತೂರಿನಲ್ಲಿ ಮಹಾರಾಣಿಯವರ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟ 'ರೆಸಿಡೆನ್ಸಿಯಲ್' ಕನ್ಯಾ ಶಾಲೆಯ ಅಡಿಗಲ್ಲು ಇಡುವಾಗ ಹೇಳಿದ ಈ ಮಾತಿಗೆ ಒತ್ತು ಕೊಡುತ್ತದೆ.[1]

High among the names of those who fought the establishment of British rule in India is that of the brave Karnatak queen Rani Channamma of kittur. Long will she be remembered and continued to inspire our young people.

I Salute the herione.

Smt. Indira Gandhi,
Prime Minister of India.

ಉಪಸಂಹಾರ :

ಇಂದು,- ಹಿಂದಿನ ಆ ವೈಭವವಿಲ್ಲ. ಮಹಾರಾಣಿ ಕಿತ್ತೂರ ಚನ್ನಮ್ಮನ ಆ ಕಿತ್ತೂರು ಇಂದು ಇಲ್ಲ. ಸಮಗ್ರ ಎರಡುನೂರೈವತ್ತು ವರ್ಷಗಳ ಪರ್ಯಂತ

---

1. ಈ ಪತ್ರವನ್ನು ಪ್ರೊ. ಜಿ. ಎಸ್. ಹಾಲಪ್ಪನವರು ಬರೆದ ತಮ್ಮ ಪುಸ್ತಕ ಭಾರತ ಸ್ವಾತಂತ್ರ್ಯ ಚಳವಳಿ (1967) ಪುಟ 7ರಲ್ಲಿ ಉದಾಹರಿಸಿದ್ದಾರೆ.

ಫಡಫಡಿಸಿದ ಕಿತ್ತೂರಿನ ನಂದೀ ಧ್ವಜವು ಮೊನ್ನೆ ಮೊನ್ನೆಯಷ್ಟೇ ಮತ್ತೊಮ್ಮೆ ಹಾರುವಂತಾಯಿತು.[2] ಕಿತ್ತೂರ ನಾಡಿನ ಅಭಿಮಾನದ ಗಡಾದಮರಡಿಯ ಮೇಲೆ ಹಾರಾಡಲು ಸಾಕಷ್ಟು ವರ್ಷಗಳೇ ಬೇಕಾಯಿತು. ಗುಳಿಗಿ ಮುತ್ತಗ್ಯಾವಿ ಜೊಣ್ಣ, ಕಂಟಿಕಮಾನಡಗಲಿ, ಚಿಲಕತ್ತು, ತಲೆಗೆ ತುರಾಯಿ ಮುಂಡಾಸ—'ಶಮನಾ' ನಡುವಿನಲ್ಲಿ ಕತ್ತಿ, ಕೈಗಳಲ್ಲಿ ಬಾಕು, ಚೂರಿ, ಪಿಸ್ತೂಲು, ಬಂದೂಕು, ಡಾಲಪಟ್ಟಿಗಳನ್ನು ಹಿಡಿದು ಸೇತಸನದಿಗಳಿಂದು ಇಲ್ಲ. ವೀರರನ್ನು ರಣೋನ್ಮಾದಕ್ಕೆ ಕೊಂಡೊಯ್ಯು ರಣಹಲಿಗೆ, ಕಾಳಿ ಕರ್ಸಿ, ಕರಡಿ ಮಜಲು, ಡೊಳ್ಳು, ಸಂಬಾಳ, ಸಂಪರದಾನಿ, ಭೇರಿಗಳ ರಣದುಂಧುಭಿಗಳಿಲ್ಲ. ಸಂಸ್ಥಾನದ ಎಂಟನೂರು ಹಳ್ಳಿಗಳಲ್ಲಿ, ಜನಸಾಮಾನ್ಯರಲ್ಲಿ ಭಕ್ತಿಪ್ರವಾಹವನ್ನು ಉಕ್ಕೇರಿಸಿದ್ದ ದೇವಾಲಯಗಳು, ಮಠಗಳು. ಮಾನ್ಯಗಳಲ್ಲಿ ಘಂಟಾನಾದಗಳು ಇಂದು ಇಲ್ಲವಲ್ಲ! 'ಬ್ರಿಟಿಷರಿಗೆ ಸಿಂಹಸ್ವಪ್ನರೂ. ಆಶ್ಚರ್ಯದ ವಸ್ತುಗಳೂ ಆಗಿದ್ದ ಸೇತಸನದಿಗಳು, ವಾಲೀಕಾರರು, ಸರದಾರ–ಸುಭೇದಾರರು. ಜೊಪದಾರರು, ಉಘೇ–ಉಘೇ ಎಂದು ಉಗ್ಗಡಿಸುತ್ತಿದ್ದ, ಆ ವೀರಗರ್ಜನೆ– "ಹರ ಹರ ಮಹಾದೇವ" ಎಲ್ಲ ಆಸ್ಥಾನದ ಸವರಿನಲ್ಲಿ ವೈಭವದಿಂದ ನಡೆಯುತ್ತಿದ್ದ ನೃತ್ಯ. ಸಂಗೀತ, ಸಾಹಿತ್ಯ ವಿನೋದಗಳು ಎತ್ತ ಹೋದವೋ ?' ಈ ನಾಡಿನ ವೀರ ಪರಂಪರೆಯ ಅಧಿದೇವತೆ, ತಿಲಕಪ್ರಾಯಳಾದ ಆ ಮಹಾದೇವಿ ಚೆನ್ನಮ್ಮ ರಾಣಿಯವರು, ಅಲಂಕೃತ ಪಂಚಕಲ್ಯಾಣಿ ಕುದುರೆಯ ಮೇಲೆ 'ರಾಣಿಯರುಡುವ ರಾಗಾವಳಿ' ಸೀರೆಯನುಟ್ಟು ವಜ್ರ-ವೈಢೂರ್ಯಗಳಿಂದ ಕೂಡಿದ ದಾಗೀನಗಳನ್ನು ತೊಟ್ಟು ನಡುವಿನಲ್ಲಿ ರತ್ನ ಖಚಿತ 'ವಡ್ಯಾಣ'ವನ್ನು ಧರಿಸಿ, ಮೈಗೆ ಚಿಲಕತ್ತು ಹಾಕಿಕೊಂಡು ಹಣೆಯ ಮೇಲೆ ತ್ರಿಪುಂಡ್ರವನ್ನು ಹೊಂದಿದ ಆ ತಾಯಿಯ ಬರುವಿಲ್ಲ—ಈಗ. ಅರಬರ ಕುದುರೆ ವ್ಯಾಪಾರವೆಲ್ಲಿ? ಪೋರ್ತುಗೀಜರ ಅಕ್ಕಿಯ ವ್ಯಾಪಾರವೆಲ್ಲಿ ? ಮುತ್ತು-ರತ್ನಗಳ ವ್ಯಾಪಾರವೆಲ್ಲಿ ? ಎಲ್ಲವೂ ಕಾಲನ ಗರ್ಭದಲ್ಲಿ ಹುಗಿದು ಹೋಯಿತೆ ?

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಿತ್ತೂರ ಪುಟ ರಕ್ತರಂಜಿತ–ಪ್ರಥಮ ಪುಟವಾಗಿದೆ. ಈ ನೆಲದ ಕೆಂಪುಮಣ್ಣಿನಲ್ಲಿ, ಗಾಳಿಯಲ್ಲಿ, ಜೀಕಿನಲ್ಲಿ ಈ ಜೀವಸತ್ತ್ವ ಬದುಕಿದೆ. ಸಾತ್ತ್ವಿಕ ಜೀವನದ ಚಿರಂತನ ಮೌಲ್ಯಗಳಾದ ಸ್ವಾಭಿಮಾನ, ಸ್ವಾರ್ಥವಿರೋಧ, ಸ್ವಾರ್ಥತ್ಯಾಗ, ದೇಶಪ್ರೀತಿ, ಸೇವೆ, ಇವು ಎಲ್ಲಿಯವರೆಗೆ ಗೌರವಿಸಲ್ಪಡುವವೋ ಅಲ್ಲಿಯವರೆಗೆ ಕಿತ್ತೂರು ಅಮರ; ರಾಣಿ ಚನ್ನಮ್ಮಾಜಿಯವರ ಚರಿತ್ರೆಯು—ಅಜರಾಮರ !

ಕಿತ್ತೂರ ಕಿಲ್ಲೇಕ ಉತ್ರಿಕರ‍್ಯಾರಿಲ್ಲ । ಉಕ್ಕಿನಗುಂಡ
ಬಗದಾರ । ಚನ್ನವ್ವ ಹಕ್ಯಾಗಿ ಬಾಯಿ ಬಿಡತಾಳವ್ವ ।

---

2. ಪ್ರೊ. ಜ. ಮಾರೀಹಾಳ—ಕಿತ್ತೂರಿನ ಇತಿಹಾಸ
1. ಕಿತ್ತೂರ ನಾಡಿನ ಈ ನಂದಿಧ್ವಜವನ್ನು 1974ರಲ್ಲಿ ಜರುಗಿದ 150 ವರ್ಷಗಳ ವಿಜಯೋತ್ಸವದಂದು ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು ಕಿತ್ತೂರ ಕಿಲ್ಲೆಯಲ್ಲಿ ಮತ್ತೊಮ್ಮೆ ಹಾರಿಸಿದರು. ಪುಟ 75–76.

ಉಕ್ಕಿನ ಗುಂಡಿಕ್ಕಿ ಒಗೆಯುವ ಹೊತ್ತಿಗೆ
ನಿಂತಿರು ಆನಿ ಬಳಿಲ್ಯಾವವ್ವ | ಹಾಲಿಕ್ಯಾ ಸೊತ್ತಿಗೆ
ಹಾಳಾದ್ಯಾ ಕಿತ್ತೂರು | ಹಾದಿ ಬಿದ್ದಾದ ಅರಮನಿ
ಚನ್ನವ್ವನ | ರಾಜಮಕ್ಕಳಿಗೆ ವನವೇಸವ್ವ |

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಈ ತಾಯಿಯು ವಹಿಸಿದ ಪಾತ್ರವನ್ನು ಇಂದು ಸಮಾಜವು ಕೃತಜ್ಞತೆಯಿಂದ ಸ್ಮರಿಸಿದೆ. ೧೯೭೭ರಲ್ಲಿ ಜರುಗಿದ ನೂರೈವತ್ತು ವರ್ಷಗಳ ವಿಜಯೋತ್ಸವದ ಅಂಗವಾಗಿ ಕೇಂದ್ರಸರಕಾರದ ಅಂಚೆ ಇಲಾಖೆ, ರಾಣಿಯವರ ಅಂಚೆ ಚೀಟಿಯನ್ನು ಬಿಡುಗಡೆಮಾಡಿತು. ಅದೇ ವರ್ಷ ಜನೆವರಿ ೨೬ರ ಗಣರಾಜ್ಯೋತ್ಸವದಂದು ದಿಲ್ಲಿಯ ಉತ್ಸವದಲ್ಲಿ ರಾಣಿ ಚನ್ನಮ್ಮಾಜಿಯವರ ವೇಷ ಧರಿಸಿ, ಕುದುರೆಯ ಮೇಲೆ ಮಂಡಿಸಿದ ಕನ್ನಡನಾಡಿನ ಹೆಣ್ಣುಮಗಳು ಆ ದೊಡ್ಡ ಮೆರವಣಿಗೆಯ ಮುಂಚೂಣಿಯಲ್ಲಿದ್ದಳು. ಇತ್ತೀಚಿನ ವರ್ಷಗಳಲ್ಲಿ ಅಕ್ಟೋಬರ್ ೨೩ನೆಯ ದಿನಾಂಕವು 'ಮಹಿಳಾದಿನಾಚರಣೆ'ಯಂತೆ ಆಚರಿಸಲ್ಪಡುತ್ತಲಿದೆ. ಕಿತ್ತೂರಿನ ವಸ್ತುಸಂಗ್ರಹಾಲಯ, ಕನ್ಯಾವಸತಿ ಶಾಲೆಗಳು ಈ ತಾಯಿಯ ಇತಿಹಾಸದ ಸಜೀವಸಾಕ್ಷಿಗಳಾಗಿವೆ.

1. G. S. Halappa & M. V. Krishna Rao—Freedom Movement in Karnatak; Government of Mysore, 1972.
2. Sadashiva Wodeyar—Rani Channamma; National Book Trust, Inadia, New Delhi, 1977.
3. Shridhar Telkar—Kittur Channamma Rani Kittur Channamma Rani Itihasa Mandala, Bailhongal, 1957.
4. Ashok Jathar —Rani Channamma of Kittur, Lion's club Dharwar, 1976
5. H. J. Stokes—An Historical Account of the Belgaum District, Government of Bombay, 1870.

೬. ಪ್ರಸಾರಾಂಗ ವಿಸ್ತರಣ ಪ್ರಕಟನ ವಿಭಾಗ—ಕಿತ್ತೂರ ನಾಡಿನ ಇತಿಹಾಸ ಮತ್ತು ಸಂಸ್ಕೃತಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬.

೭. ಬಿ. ಜಿ. ಮಾರೀಹಾಳ—ಕಿತ್ತೂರಿನ ಇತಿಹಾಸ; ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬.

೮. ಗ. ಸ. ಹಾಲಪ್ಪ—ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ–ಕಿತ್ತೂರ ರಾಣಿ ಚನ್ನಮ್ಮ; ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ, ೧೯೬೬.

೯. ತಿ. ತಾ. ಶರ್ಮ—ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ; ಮೈಸೂರು. ಸಂಸ್ಥಾನದ ಸರಕಾರ, ೧೯೫೭.

೧೦. ಟಿ. ಎಸ್. ರಾಜಪ್ಪ (ಸಂ.)—ಬೆಳಗಾಂ ಜಿಲ್ಲೆಯ ಲಾವಣಿಗಳು; ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

೧೧. ಕ್ಯಾತನಹಳ್ಳಿ ರಾಮಣ್ಣ (ಸಂ.)–ಪಿಸೀಟರ್ ಸಂಗ್ರಹಿಸಿದ, ಐದು ಐತಿಹಾಸಿಕ ಲಾವಣಿಗಳು; ಮೈಸೂರು ವಿಶ್ವವಿದ್ಯಾನಿಲಯ, ೧೯೭೨.

೧೨. ತಲ್ಲೂರ ರಾಯನ ಗೌಡ—ಮಲಸರ್ಜ ಕಾವ್ಯ; ಕಿತ್ತೂರ ಚನ್ನಮ್ಮರಾಣಿ ಇತಿಹಾಸ ಮಂಡಲ, ಬೈಲಹೂಂಗಲ, ೧೯೪೮.

೧೩. ದೊಡ್ಡ ಭಾವೆಪ್ಪ ಮೂಗಿ (ಸಂ.)—ಫಾರಸಿ ಕಾಗದ ಪತ್ರಗಳು; ಕಿತ್ತೂರ ಚನ್ನಮ್ಮರಾಣಿ ಇತಿಹಾಸ ಮಂಡಲ, ಬೈಲಹೊಂಗಲ, ೧೯೪೮.

೧೪. ಈಶ್ವರ ಸಣಕಲ್ಲ—ಶ್ರೀ ಮಡಿವಾಳ ಶಿವಯೋಗಿ, ಗರಗ; ಶ್ರೀ ಮಡಿವಾಳ ಶಿವಯೋಗಿಗಳ ಮಠ, ಗರಗ, ೧೯೭೭.

೧೫. ಬಸವರಾಜ ಕಟ್ಟೀಮನಿ—ಪೌರುಷ ಪರೀಕ್ಷೆ; ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೬೧.

೧೬. ಬಿ. ಎಸ್. ಗದ್ದಗಿಮಠ—ಕನ್ನಡ ಜಾನಪದ ಗೀತೆಗಳು; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೯.

೧೭. ನಿಂಗಣ್ಣ ಸಣ್ಣಕ್ಕಿ ಹಾಗೂ ಶಿವಲಿಂಗಪ್ಪ ಭಾವಿಕಟ್ಟಿ—ಜಾನಪದವಲ್ಲಿ ಕಿತ್ತೂರು; ಶ್ರೀಗಿರಿ ಪ್ರಕಾಶನ; ಅಕ್ಕತಂಗೇರಹಾಳ, ೧೯೭೭.

೧೮. ಎಂ. ಎಸ್. ಸುಂಕಾಪೂರ—ಜಾನಪದ ಸಾಹಿತ್ಯದರ್ಶನ; ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೧೯. ಮಿರ್ಜಿ ಅಣ್ಣಾರಾಯ—ಬೆಳಗಾವಿಯ ಬಳುವಳಿ; ಬೆಳಗಾವಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಸಮಿತಿ, ೧೯೭೧.

೨೦. ಅ. ನ. ಕೃಷ್ಣರಾಯ—ವೀರರಾಣಿ ಕಿತ್ತೂರ ಚನ್ನಮ್ಮ; ಐ. ಬಿ. ಎಚ್. ಪ್ರಕಾಶನ; ೧೯೭೧.

೨೧. ಬಿ. ಬಿ. ಮಹೀಶವಾಡಿ—ಜಾನಪದವೀರಗೀತೆಗಳು; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧.

೨೨. ತಲ್ಲೂರ ರಾಯನಗೌಡ—ಕಿತ್ತೂರ ಬಂಡಾಯ; ಕಿತ್ತೂರ ಚನ್ನಮ್ಮ ರಾಣಿ ಇತಿಹಾಸ ಮಂಡಲ, ಬೈಲಹೊಂಗಲ, ೧೯೪೭.

೨೩. ಸೋಮಶೇಖರ ಇಮ್ರಾಪೂರ—ಜಾನಪದ ಕಿತ್ತೂರಿನ ಕಿಡಿಗಳು; ಚೇತನಾ ಪ್ರಕಾಶನ, ಧಾರವಾಡ, ೧೯೭೯.

೨೪. ಸೂರ್ಯನಾಥ ಕಾಮತ—ಕರ್ನಾಟಕದ ವೀರರಾಣಿಯರು; ಹಂಸಧ್ವನಿ ಪ್ರಕಾಶನ, ಬೆಂಗಳೂರು, ೧೯೭೩.

೨೫. ನಾಗೇಶ—ಸ್ವಾತಂತ್ರ್ಯದೇವಿ ಕಿತ್ತೂರ ಚನ್ನಮ್ಮರಾಣಿ. ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮.

೨೬. ಬಸವರಾಜ ಕಟ್ಟೀಮನಿ—ಸಂಗೊಳ್ಳಿ ರಾಯಣ್ಣನಾಯಕ; ಶ್ರೀಸಾಯಿ ಪಬ್ಲಿಶಿಂಗ್ ಹೌಸ್, ಧಾರವಾಡ, ೧೯೭೩.

೨೭. ಜಯದೇವಿತಾಯಿ ಲಿಗಾಡೆ—ತಾಯಿಯ ಪದಗಳು; ಕನ್ನಡ ಕೋಟಿ, ಪ್ರಕಾಶನ, ಸೊಲ್ಲಾಪುರ, ೧೯೫೯.

೨೮. ಬಿ. ಶಿವಮೂರ್ತಿ ಶಾಸ್ತ್ರೀ—ವೀರಶೈವ ಸಾಹಿತ್ಯ ಮತ್ತು ಇತಿಹಾಸ; ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು, ೧೯೬೧.

೨೯. ಎಂ. ಎಸ್. ಸುಂಕಾಪೂರ—ಜೀವನ ಜೋಕಾಲಿ (ಭಾಗ ೫) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೩೦. ಕೃಷ್ಣಮೂರ್ತಿ ಪುರಾಣಿಕ—ವೀರರಾಣಿ ಕಿತ್ತೂರ ಚನ್ನಮ್ಮ; ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೭೩.

೩೧. ಶಿವರಾಮು—ಸಂಗೊಳ್ಳಿ ರಾಯಣ್ಣ; ಐ. ಬಿ. ಎಚ್. ಪ್ರಕಾಶನ; ಬೆಂಗಳೂರು, ೧೯೭೩.

೩೨. ಬಿ. ಆರ್. ಜಕಾತಿ ಹಾಗೂ ಗುರುಪಾದಸ್ವಾಮಿ ಹಿರೇಮಠ—ಕಿತ್ತೂರ ನಾಡಿನಲ್ಲಿ ಸ್ವಾತಂತ್ರ್ಯ ಸಮರ, ಕಿತ್ತೂರ ನಾಡ ಸ್ವಾತಂತ್ರ್ಯ ಯೋಧರ ಇತಿಹಾಸ ಮಂಡಲ, ಕಿತ್ತೂರ, ೧೯೭೫.

೩೩. ಭೀ. ಪ. ಕಾಳೆ—ಗದಗದ ಮಡಿವಾಳಪ್ಪನವರು; ಶ್ರೀ ಶೇಷಾಚಲ ಪ್ರೆಸ್, ಧಾರವಾಡ, ೧೯೧೯.

೩೪. ದೊಡ್ಡಭಾವೆಪ್ಪ ಮೂಗಿ (ಸಂ.)—ಕಿತ್ತೂರ ಕಾಳಗ, ರುದ್ರಗಡ ಪ್ರಕಾಶನ, ಬೈಲಹೊಂಗಲ, ೧೯೫೯.

೩೫. ಕೆ. ಆರ್. ಭಟ್ಟ—ಸಂಗೊಳ್ಳಿ ರಾಯಣ್ಣ (ನಾಟಕ), ಶ್ರೀಗುರು ರಾಘವೇಂದ್ರ ಪ್ರಕಾಶನ, ಹೊಸಪೇಟೆ, ೧೯೭೨.

೩೬. ಜಿ. ಟಿ. ಸ್ವಾಮಿ—ವೀರಮಾತೆ ಕಿತ್ತೂರ ಚೆನ್ನಮ್ಮ (ನಾಟಕ), ಶಾಬಾದಿಮಠ ಬುಕ್ ಡಿಪೋ, ಗದಗ, ೧೯೭೧.

೩೭. ಲಕ್ಷ್ಮಣರಾವ ಪುರಿ—ವೀರರಾಣಿ ಕಿತ್ತೂರ ಚನ್ನಮ್ಮ; ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ.

೩೮. ಎಚ್. ಎನ್. ಹೂಗಾರ—ಸ್ವಾತಂತ್ರ್ಯ ಹುಲಿ ಸಂಗೊಳ್ಳಿ ರಾಯಣ್ಣ, ಮಲ್ಲಪ್ಪ ವ್ಹಿ. ಅರಳಿ, ಬುಕಸೆಲ್ಲರ್, ಗದಗ, ೧೯೬೯.

೩೯. ಎಸ್. ವ್ಹಿ. ಪಾಟೀಲ—"ಚನ್ನಮ್ಮನ ನಾಡಿನಲ್ಲಿ", ಕರ್ಮವೀರ ಮಾಸಪತ್ರಿಕೆ. ಜನವರಿ ೫, ೧೯೭೫.

೪೦. Government of Mysore—Women's Day (23rd Oct. 1965), Government of Mysore, Bangalore, 1965.

೪೧. ಶಿವರಾಮು—ಕನ್ನಡದ ಕಡುಗಲಿಗಳು; ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೭೧.

೪೨. ರಂಗರಾವ ದಿವಾಕರ—ಸ್ವಾತಂತ್ರ್ಯಯುದ್ಧ ೧೮೫೭, ಲೋಕ ಶಿಕ್ಷಣ ಟ್ರಸ್ಟ, ಹುಬ್ಬಳ್ಳಿ.

೪೩. ಸಿಂಪಿ ಲಿಂಗಣ್ಣ—ಸ್ವರ್ಗದೋಲೆಗಳು.

೪೪. ಸರಸ್ವತಿದೇವಿ ಗೌಡರ—ಭಾರತದ ವೀರಮಹಿಳೆಯರು.

೪೫. ಜೋಗ—ಭಾರತದ ಸ್ತ್ರೀರತ್ನಗಳು.

೪೬. ಕೆ. ಶಿವರಾಮ ಕಾರಂತ—ಕಿತ್ತೂರ ರಾಣಿ ಚನ್ನಮ್ಮ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೭೯.

○

ಭಾಗ–೪

ಧರ್ಮಗಳ ದೃಷ್ಟಿಯಲ್ಲಿ ಮಹಿಳೆ

ಸಂಪಾದಕರು :


ಡಾ. ಸರೋಜಿನಿ ಶಿಂತ್ರಿ



ಮಾತೋಶ್ರೀಯವರ ತ್ಯಾಗದ ಮೊದಲ ಕುರುಹು— ಬಿ. ಬಿ. ಕೆ. ಹೈಸ್ಕೂಲು ಕಟ್ಟಡ



ಹೈಸ್ಕೂಲಿನ ನೂತನ ಕಟ್ಟಡ ಉದ್ಘಾಟನೆ— ಸನ್ಮಾನ್ಯ ಶಿಕ್ಷಣ ಸಚಿವ ಶ್ರೀ ಕಂಠಿ ಆಗಮನ



ಡಿ. ಐ. ಸಿ. ಹೈಸ್ಕೂಲಿನ ನೂತನ ಕಟ್ಟಡದ ಉದ್ಘಾಟನೆ
ಪೂಜ್ಯ ಶ್ರೀ ಬಂಥನಾಳ ಶಿವಯೋಗಿಗಳು ಮತ್ತು ಸನ್ಮಾನ್ಯ ಶ್ರೀ ಕಂಠಿಯವರು

ವೈದಿಕ ದೃಷ್ಟಿಯಲ್ಲಿ ಸ್ತ್ರೀ

ಸುಶೀಲಾ ಕಡ್ಡೀಪುಡಿ

ಮಾನವನು ಸಮಾಜ ಜೀವಿಯಾಗಿದ್ದಾನೆ. ಸಮಾಜವಿಲ್ಲದೆ ಮಾನವನು ಬಾಳಲಾರ. ಮಾನವ ಯಾವದೇ ಸಮಾಜದಲ್ಲಿ ಜೀವಿಸಿರಲಿ, ಸ್ತ್ರೀ ಪುರುಷರಿಬ್ಬರೂ ಒಂದೇ ಸಮಾಜದ ಸದಸ್ಯರಾಗಿ ಜೀವಿಸುವದು ಅನಿವಾರ್ಯ. ಹೀಗಾಗಿ ಪ್ರಾಪಂಚಿಕ ಜೀವನದ ಕೆಲವೊಂದು ವಿಷಯಗಳ ಬಗ್ಗೆ ವೈದಿಕ ಧರ್ಮವು ವಿವರಿಸುವಾಗ, ಅದು ಪುರುಷ ಮತ್ತು ಸ್ತ್ರೀ ಇವರಿಬ್ಬರ ಜೀವನದ ಬಗೆಗೂ ತನ್ನ ನಿರ್ದಿಷ್ಟವಾದ ನಿಲುವೆಯನ್ನು ಸ್ಪಷ್ಟ ಪಡಿಸಿದೆ. ಸ್ತ್ರೀಯ ಬಗ್ಗೆ ವೈದಿಕ ಧರ್ಮದ ಕಲ್ಪನೆ ಏನಿದ್ದಿತು ? ಅವಳಿಂದ ಅದು ಏನೆಲ್ಲ ಅಪೇಕ್ಷಿಸುತ್ತಿತ್ತು? ಅವಳಿಗೆ ಯಾವ ಹಕ್ಕು ಬಾಧ್ಯತೆಗಳನ್ನೂ ಸ್ಥಾನಮಾನವನ್ನೂ ಕೊಟ್ಟಿತ್ತು? ಅದರ ಜೊತೆಗೆ ಅವಳ ಮೇಲೆ ಎಂಥ ನಿರ್ಬಂಧಗಳನ್ನು ಹೇರಿತ್ತು? ಒಟ್ಟಿನಲ್ಲಿ ವೈದಿಕ ಧರ್ಮವು ಮತ್ತು ಆ ಕಾಲದ ಸಮಾಜವು ಸ್ತ್ರೀಯನ್ನು ಹೇಗೆ ಕಾಣುತ್ತಿತ್ತು? ಎಂಬುದನ್ನು ವಿವರಿಸುವದೇ ಈ ಲೇಖನದ ಉದ್ದೇಶ.

ವೇದಕಾಲದ ಕಾಲಮಾನದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಬಾರದಿದ್ದರೂ, ಕ್ರಿ.ಪೂ ೨೫೦೦ ರಿಂದ ಕ್ರಿ.ಪೂ ೧೫೦೦ರ ವರೆಗೆ ಎಂದು ಸಾಮಾನ್ಯವಾಗಿ ಬಹಳಷ್ಟು ವಿಚಾರವಾದಿಗಳು ಒಪ್ಪಿದಂತಾಗಿದೆ. ಈ ಕಾಲದಲ್ಲಿ ಗ್ರೀಸ್, ರೋಮ, ಪೆಲೆಸ್ಟೈನ ಮುಂತಾದ ದೇಶಗಳಲ್ಲಿಗಿಂತ ಅತಿ ಭಿನ್ನವಾದ ಸ್ಥಾನಮಾನವನ್ನು ಭಾರತೀಯ ಸ್ತ್ರೀಯರು ಪಡೆದದ್ದು. ನಮಗೆ ಕಂಡು ಬರುತ್ತದೆ.

ವೇದಕಾಲದಲ್ಲಿ ಜನರು ಸಾಮಾನ್ಯವಾಗಿ ಮಗಳ ಜನನಕ್ಕಿಂತ ಮಗನ ಜನನವನ್ನೇ ಹೆಚ್ಚು ಬಯಸುತ್ತಿದ್ದರು. ಜನಿಸುವ ಮಗುವು ಗಂಡಾಗಲೆಂದು ಮಾಡಬಹುದಾದ ಎಷ್ಟೋ ವಿಧಿಗಳನ್ನು ಅಥರ್ವ ವೇದವು ವಿವರಿಸುತ್ತದೆ. ಆದರೂ ಕೂಡ ಹೆಣ್ಣು ಶಿಶುವಿನ ಜನನವನ್ನು ಅವರೆಂದೂ ಅಸಡ್ಡೆಯಿಂದ ಕಾಣಲಿಲ್ಲ. ಅಲ್ಲದೆ ಸುಸಂಸ್ಕೃತ ಪಿತೃಗಳು ಹೆಣ್ಣುಮಕ್ಕಳ ಜನನವನ್ನು ಗಂಡುಮಕ್ಕಳ ಜನನದಷ್ಟೇ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು. ವಿನಯಶೀಲ ಹಾಗೂ ವಿಧೇಯಳಾದ ಹೆಣ್ಣು ಮಗಳು ಮನೆತನಕ್ಕೆ ಗೌರವವೆಂದು ತಿಳಿಯಲಾಗುತ್ತಿತ್ತು. ಹೆಣ್ಣು ಶಿಶು

ಪತ್ನಿಯ ಆಚರಣೆಯ ಬಗ್ಗೆ ಯಾವ ಆಧಾರಗಳೂ ಇಲ್ಲ. ಕುಟುಂಬದ ಸರ್ವ ಸದಸ್ಯರೂ ಅವಳನ್ನು ದಯೆ, ಪ್ರೀತಿ, ವಾತ್ಸಲ್ಯಗಳಿಂದ ಪೋಷಿಸುತ್ತಿದ್ದರು. ತಂದೆ ತಾಯಿಗಳು ಹೆಚ್ಚು ಮುದ್ದು ಮಾಡಿ ಹಟಮಾರಿಗಳಾದ ಹೆಣ್ಣುಮಕ್ಕಳ ಕೆಲವೊಂದು ಉದಾಹರಣೆಗಳು ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುತ್ತವೆ. ಕುಮಾರಿಯರೆಂದರೆ ಶುಭ ಲಕ್ಷಣವೆಂದೂ, ಅವರಲ್ಲಿ ಲಕ್ಷ್ಮಿ ವಾಸಿಸುವಳೆಂದೂ ತಿಳಿದಿದ್ದರು.

ಮಕ್ಕಳಿಗೆ ಯೋಗ್ಯ ಶಿಕ್ಷಣವನ್ನು ಕೊಡುವುದು, ನಂತರ ಸಂಸಾರವನ್ನು ಸರಿದೂಗಿಸಿಕೊಂಡು ಹೋಗಲು ಅವರನ್ನು ಅಣಿಗೊಳಿಸುವುದು ತಂದೆತಾಯಿಗಳ ಕರ್ತವ್ಯವಾಗಿತ್ತು. ಹೆಣ್ಣು ಗಂಡೆಂಬ ಭೇದವಿಲ್ಲದೆ ತಂದೆತಾಯಿಗಳು ಈ ಕರ್ತವ್ಯವನ್ನು ಪಾಲಿಸುತ್ತಿದ್ದರು.

ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಉಪನಯನವನ್ನು ಮಾಡಲಾಗುತ್ತಿತ್ತು. ಉಪನಯನದ ನಂತರ ವಿವಾಹದ ವರೆಗೆ ಅವರಿಗೆ ಶಿಕ್ಷಣವು ಲಭ್ಯವಾಗುತ್ತಿತ್ತು. ಶಿಕ್ಷಣದ ಜೊತೆಗೆ ಸಂಯಮ ಜೀವನವೂ ಪ್ರಾರಂಭವಾಗುತ್ತಿತ್ತು. ವಿವಾಹದಲ್ಲಿ ಸರಿಯಾದ ಸಂಗಾತಿಯನ್ನು ದೊರಕಿಸಲು ಇವೆರಡೂ ಅವಶ್ಯವಾಗಿದ್ದವು. ಆ ಕಾಲಕ್ಕೆ ಶಿಕ್ಷಣವೆಂದರೆ ವೇದಾಭ್ಯಾಸವಾಗಿತ್ತು. ಜ್ಞಾನ ಸಂಪಾದನೆಯಲ್ಲಿ ಸ್ತ್ರೀಯರು ಪುರುಷರಿಗಿಂತ ಹಿಂದೆ ಇರಲಿಲ್ಲ. ತಮ್ಮ ಅಸಾಧಾರಣ ಪಾಂಡಿತ್ಯದಿಂದ ವೇದಾಭ್ಯಾಸದಲ್ಲಿಯೂ ಕೂಡ ತಮ್ಮ ವಿದ್ವತ್ತನ್ನು ಮೆರೆಸಿದ ಸ್ತ್ರೀಯರು ಅನೇಕ. ಲೋಪಾಮುದ್ರಾ, ವಿಶ್ವಾವರಾ, ಘೋಷಾ, ಸುಲಭಾ, ಗಾರ್ಗಿ, ಮೈತ್ರೇಯಿ ಇವು ಕೆಲವು ಉದಾಹರಣೆಗಳು. ವಿದ್ಯಾರ್ಥಿನಿಯರನ್ನು ನಾವು ಎರಡು ಪಂಗಡಗಳಲ್ಲಿ ವಿಂಗಡಿಸಬಹುದು. ಕೆಲವರಿಗೆ ಸದ್ಯೋದ್ವಾಹಾ ಎಂದು ಹೆಸರು. ಇವರು ವಿವಾಹದ ವರೆಗೆ ಶಿಕ್ಷಣವನ್ನು ಪಡೆಯುವಂಥವರು. ನಿತ್ಯ ಮತ್ತು ನೈಮಿತ್ತಿಕ ವಿಧಿಗಳ ಸಮಯದಲ್ಲಿ ಸಲ್ಲಿಸಬೇಕಾದ ಪ್ರಾರ್ಥನೆಗಳನ್ನೂ, ವಿವಾಹದ ನಂತರ ಕೈಕೊಳ್ಳಬೇಕಾಗಬಹುದಾದ ಯಜ್ಞಯಾಗಾದಿಗಳಿಗೆ ಅವಶ್ಯವಿರುವ ಮಂತ್ರಗಳನ್ನೂ ಇವರು ಕಲಿಯುತ್ತಿದ್ದರು. ೧೬–೧೭ ವಯಸ್ಸಿನ ವರೆಗೆ, ಎಂದರೆ ಅವರು ಸಾಮಾನ್ಯವಾಗಿ ವಿವಾಹವಾಗುವ ವಯಸ್ಸಿನ ವರೆಗೆ ಈ ವಿದ್ಯಾಭಾಸವು ಮುಂದುವರೆಯುತ್ತಿತ್ತು. ಇನ್ನೊಂದು ತರಹ ವಿದ್ಯಾರ್ಥಿನಿಯರಿಗೆ ಬ್ರಹ್ಮವಾದಿನಿಯರೆಂದು ಹೆಸರು. ಅದ್ವಿತೀಯ ಪಾಂಡಿತ್ಯವನ್ನು ಪಡೆಯುವುದೇ ಇವರ ಧ್ಯೇಯ. ಇವರು ವೈದಿಕ ಮತ್ತು ತಾತ್ವಿಕ ಅಭ್ಯಾಸಗಳಲ್ಲಿ ಹೆಚ್ಚಿನ ಶ್ರದ್ಧೆವಹಿಸಿದ್ದು ಕಂಡು ಬರುತ್ತದೆ. ವೈದಿಕ ಯಜ್ಞಯಾಗಾದಿಗಳ ಕುರಿತಾದ ಪೂರ್ವ ಮೀಮಾಂಸವೆಂಬ ವಿಮರ್ಶಾತ್ಮಕ ಅಭ್ಯಾಸದಲ್ಲಿಯೂ ಕೂಡ ಇವರು ವಿಶೇಷವಾದ ಪರಿಣತಿಯನ್ನು ಪಡೆದಿದ್ದರು. ಜ್ಞಾನ ಸಂಪಾದನೆಯಲ್ಲಿ ಹೆಚ್ಚಿನ ಆಸ್ಥೆಯುಳ್ಳ ಕೆಲವು ಸ್ತ್ರೀಯರು ತಮ್ಮ ಸಂಪೂರ್ಣ ಜೀವನವನ್ನೇ ಅದಕ್ಕೆ ಮುಡಿಪಾಗಿಟ್ಟು, ಆ ಕಾರಣದಿಂದ ಅವಿವಾಹಿತರಾಗಿಯೇ ಉಳಿದಿದ್ದು ನಮಗೆ ಕಂಡುಬರುತ್ತದೆ. ಇಂಥ ಕೆಲವರು ಶಿಕ್ಷಕ ವೃತ್ತಿಯನ್ನು ಕೈಕೊಂಡಿರಬೇಕು. ಸಂಸ್ಕೃತ ಭಾಷೆಯ 'ಉಪಾಧ್ಯಾಯ' ಎಂಬ ಶಬ್ದವನ್ನು ಶಿಕ್ಷಕಿಯರು ಎಂಬ ಅರ್ಥದಲ್ಲಿಯೇ ರೂಪಿಸಿರಬೇಕು. ಅಂದ ಮೇಲೆ ಅವರ ಸಂಖ್ಯೆ ಸಾಕಷ್ಟಿರಬೇಕು ಎಂದು ಎ. ಎಸ್.

ಅಳತೇಕರರು ತಮ್ಮ ಗ್ರಂಥದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಾಮಾನ್ಯ ಕನ್ಯೆಯರು ತಮ್ಮ ತಮ್ಮ ಕುಟುಂಬದಲ್ಲಿಯೇ ಶಿಕ್ಷಣವನ್ನು ಪಡೆಯುತ್ತಿದ್ದರು. ವಿಶೇಷವಾದ ಜ್ಞಾನವನ್ನು ಪಡೆಯಲಿಚ್ಛಿಸುವವರು ಮಾತ್ರ ಶ್ರೇಷ್ಠ ಗುರುಗಳನ್ನು ಹುಡುಕಿಕೊಂಡು ಹೋಗಿ ಅವರ ಸಾನಿಧ್ಯದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದರು.

ಸುಶಿಕ್ಷಿತ ಪ್ರಬುದ್ಧ ಕನ್ಯೆಯರು ಕುಟುಂಬದಲ್ಲಿ ಎಷ್ಟೋ ಕಾರ್ಯಕಲಾಪಗಳನ್ನು ಕೈಕೊಳ್ಳುತ್ತಿದ್ದರು. ಅತಿಥಿಸತ್ಕಾರವು ಅವರ ವಿಶೇಷವಾದ ಕರ್ತವ್ಯವಾಗಿರುತ್ತಿತ್ತು. ತಮ್ಮ ಕೆಲಸದ ಜೊತೆಗೆ ಅವರು ಸಾಕಷ್ಟು ಮನೋರಂಜನೆಯನ್ನು ಪಡೆಯುತ್ತಿದ್ದರು. ಸಂಗೀತ ಮತ್ತು ನೃತ್ಯಗಳು ಮನೋರಂಜನೆಯ ಪ್ರಮುಖ ಸಾಧನೆಗಳಾಗಿದ್ದವು. ನಾಟ್ಯ ಪ್ರದರ್ಶನಗಳಿಗೂ ಕೂಡ ಅವರು ಹೋಗುತ್ತಿದ್ದರೆಂದು ಕಂಡುಬರುತ್ತದೆ. ಪ್ರಗತಿಪರ ಕುಟುಂಬಗಳಲ್ಲಿ ಚಂಡಿನಾಟವು ಕನ್ಯೆಯರಿಗೆ ಹೊರಾಂಗಣ ಕ್ರೀಡೆಯಾಗಿತ್ತು. ಅವರು ಕಣ್ಣುಮುಚ್ಚಾಲೆ ಆಟವನ್ನೂ ಆಡುತ್ತಿದರೆಂದು ತಿಳಿದು ಬರುತ್ತದೆ. ಸಂಗೀತ, ನೃತ್ಯ ಮತ್ತು ಚಿತ್ರಕಲೆಯಲ್ಲಿ ಸ್ತ್ರೀಯರು ಸಾಕಷ್ಟು ಪರಿಣತಿಯನ್ನು ಪಡೆದಿದ್ದರು.

ಋಗ್ವೇದ ಕಾಲದಿಂದಲೂ ವಿವಾಹ ಸಂಸ್ಥೆಯು ಭದ್ರವಾದ ತಳಹದಿಯ ಮೇಲೆ ಬೆಳೆದು ನಿಂತಿದ್ದು ನಮಗೆ ಕಂಡುಬರುತ್ತದೆ. ವಿವಾಹವು ವ್ಯಕ್ತಿಯ ಜೀವನಕ್ಕೆ ಒಂದು ಹೊಸ ತಿರುವನ್ನು ಕೊಟ್ಟು, ಭಿನ್ನ ತರದ ಕರ್ತವ್ಯಗಳನ್ನೂ ಹೊಣೆಗಾರಿಕೆಯನ್ನು ವ್ಯಕ್ತಿಯ ಮೇಲೆ ಹೇರುತ್ತಿತ್ತು. ವಿವಾಹಿತರಾದ ಸ್ತ್ರೀ ಪುರುಷರಿಬ್ಬರೂ ಗೃಹಸ್ಥಾಶ್ರಮವನ್ನು ಪ್ರವೇಶಿಸಿ,ತಮ್ಮ ವಿವಾಹಕ್ಕೆ ಸಾಕ್ಷಿಯಾಗಿ ನಿಂತಂಥ ಪವಿತ್ರವಾದ ಅಗ್ನಿಯ ಸಂರಕ್ಷಣೆಯನ್ನು ಮಾಡುವದು; ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ನರಯಜ್ಞ ಮತ್ತು ಭೂತಯಜ್ಞಗಳೆಂಬ ಪಂಚ ಮಹಾಯಜ್ಞಗಳನ್ನು ಕೈಕೊಳ್ಳುವದು; ಅರ್ಥ ಮತ್ತು ಕಾಮ ಎಂಬ ಪುರುಷಾರ್ಥಗಳ ಸಂತೃಪ್ತಿಯನ್ನು ಪಡೆಯುವುದರ ಮುಖಂತರ ಕುಟುಂಬದ ಸದಸ್ಯರನ್ನಷ್ಟೇ ಅಲ್ಲದೆ, ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸಶ್ರಮಗಳಲ್ಲಿರುವ ವ್ಯಕ್ತಿಗಳನ್ನು ಪೋಷಿಸುವದು; ಅದರ ಜೊತೆಗೆ ಸಮಾಜದಲ್ಲಿ ಅಸಹಾಯಕರಿಗೆ ಎಲ್ಲ ತರದ ಸಹಾಯವನ್ನು ಒದಗಿಸುವದು ಮುಂತಾದ ಗೃಹಸ್ಥನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸ್ತ್ರೀಯು ಪುರುಷನಿಗೆ ಸಮಭಾಗಿಯಾಗಿ ಸೇವೆ ಸಲ್ಲಿಸಬೇಕಿತ್ತು. ವಿವಾಹವು ಸರ್ವ ಸಾಮಾನ್ಯವಾಗಿ ಎಲ್ಲರಿಗೂ ಕಡ್ಡಾಯವಾಗಿದ್ದರೂ, ಕೆಲವೊಂದು ಸ್ತ್ರೀಯರು ಅವಿವಾಹಿತರಾಗಿ ಉಳಿದು ತಮ್ಮ ತಂದೆ ತಾಯಿಗಳ ಮನೆಯಲ್ಲಿಯೇ ಜೀವನ ಕಳೆಯುತ್ತಿದ್ದಂಥ ಉದಾಹರಣೆಗಳು ವೇದಕಾಲದ ಸಾಹಿತ್ಯದಲ್ಲಿ ಆಗೀಗ ದೊರಕುವವು. ಕೆಲವು ಸಲ ಆ ಸ್ತ್ರೀಯರಲ್ಲಿಯ ಕುಂದುಕೊರತೆಯೇ ಅವರು ಅವಿವಾಹಿತರಾಗಿ ಉಳಿಯಲು ಕಾರಣವಾಗಿರುತ್ತಿತ್ತು.

ವಿವಾಹವು ಪವಿತ್ರವಾದ ಹಾಗೂ ಮುರಿಯಲು ಬಾರದ ಬಂಧನವಾಗಿತ್ತು. ಪತಿ ಪತ್ನಿಯರಲ್ಲಿ ಸಾಮರಸ್ಯವನ್ನು ಬಿಂಬಿಸುವುದಕ್ಕಾಗಿ ಅನೇಕ ವಿವಾಹ ಕ್ರಿಯಾ ವಿಧಿಗಳನ್ನು ಆಚರಿಸಲಾಗುತ್ತಿತ್ತು. ವಿವಾಹದ ಸಮಯಕ್ಕೆ ಕನ್ಯೆಯರು ಸಾಕಷ್ಟು ಪ್ರಬುದ್ಧರಾಗಿರುತ್ತಿದ್ದರು. ವಿವಾಹದ ವಯಸ್ಸು ೧೬-೧೭ ಇದ್ದಿರಬೇಕು. ವಧು

ವನ್ನು ತರುಣಿಯಿಂದೂ, ಯುವತಿಯಿಂದೂ ಸಂಬೋಧಿಸುವವನ್ನು ಕಂಡಾಗ ಅವರು ಪ್ರಾಪ್ತವಯಸ್ಕಳೆಂಬುದು ಖಚಿತವಾಗುತ್ತದೆ. ವೇದಕಾಲದಿಂದಲೂ ಬಾಲ್ಯವಿವಾಹ ಪದ್ಧತಿಯಿತ್ತೆಂಬುವ ವಿಚಾರವನ್ನು ಒಪ್ಪುವದು ಸಾಧ್ಯವಿಲ್ಲ. ಅದು ನಂತರ ಬೆಳೆದು ಬಂದ ಸಂಪ್ರದಾಯ. ಆಗ ಸಮಾಜದಲ್ಲಿ ನೈತಿಕ ಮಟ್ಟವು ಉನ್ನತವಾಗಿದ್ದುದರಿಂದ ಪ್ರೌಢವಿವಾಹಗಳಿಂದ ಯಾವ ಅಪಾಯವೂ ಇರಲಿಲ್ಲ. ವಿವಾಹವನ್ನು ನಿಶ್ಚಯಿಸುವಲ್ಲಿ ಕನ್ಯೆಯ ಪಾತ್ರವು ಪ್ರಮುಖವಾಗಿರುತ್ತಿತ್ತು. ತಂದೆತಾಯಿಗಳು ಅವರಿಗೆ ಮಾರ್ಗದರ್ಶನ ನೀಡುತ್ತಿದ್ದರೂ, ಕೆಲವು ಸುಂದರ ತರುಣಿಯರು ತಮ್ಮ ಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಕ್ಷತ್ರಿಯರಲ್ಲಿ ಸ್ವಯಂವರ ಪದ್ಧತಿ ಇದ್ದಿತು. ಗಾಂಧರ್ವ ವಿವಾಹದ ಉದಾಹರಣೆಗಳು ಹೇರಳವಾಗಿವೆ. ಪ್ರೇಮಿಗಳು ಒಬ್ಬರಿಗಾಗಿ ಒಬ್ಬರು ಪರಿತಪಿಸುವದು, ಕಾಣಿಕೆಗಳನ್ನು ಕಳಿಸುವದು ಸಂತೋಷದಲ್ಲಿ ಕಾಲಕಳೆಯುವುದು—ಮುಂತಾದ ವಿಷಯಗಳ ಬಗ್ಗೆ ವೈದಿಕ ಸಾಹಿತ್ಯದಲ್ಲಿ ಉಲ್ಲೇಖವಿದೆ. ಆದರೂ ಕೂಡ ಪ್ರೇಮ ವಿವಾಹಗಳು ಕ್ಷತ್ರಿಯರಲ್ಲಿ ಹಾಗೂ ಹೆಚ್ಚು ಮುಂದುವರಿದ ವರ್ಗಗಳಲ್ಲಿ ಮಾತ್ರ ಕಂಡುಬರುತ್ತಿರಬೇಕು. ಸಾಮಾನ್ಯವಾಗಿ ಬಹಳಷ್ಟು ವಿವಾಹಗಳನ್ನು ತಂದೆತಾಯಿಗಳೇ, ಕನ್ಯೆಯರ ಒಪ್ಪಿಗೆಯನ್ನು ಪಡೆದು ನಿಶ್ಚಯಿಸುತ್ತಿದ್ದರು. ವಿವಾಹವನ್ನು ನಿಶ್ಚಯಿಸುವಾಗ ಸಂಪತ್ತು, ಸೌಂದರ್ಯ, ವಿದ್ಯೆ, ಆರೋಗ್ಯ, ಮನೆತನ ಮುಂತಾದ ಅನೇಕ ವಿಷಯಗಳನ್ನು ತಂದೆತಾಯಿಗಳು ವಿಚಾರಿಸುತ್ತಿದ್ದರು. ಸಗೋತ್ರ ಮತ್ತು ಸಂಪ್ರವರ ವಿವಾಹದ ಮೇಲೆ ಯಾವ ನಿರ್ಬಂಧಗಳೂ ಇರಲಿಲ್ಲ. ಅನುಲೋಮ ವಿವಾಹಗಳೂ ಕೂಡ ಆ ಸಮಾಜದ ಮನ್ನಣೆಯನ್ನು ಪಡೆದಿದ್ದವು.

ಬ್ರಾಹ್ಮ, ದೈವ, ಆರ್ಶ, ಪ್ರಜಾಪತ್ಯಗಳೆಂಬ ನಾಲ್ಕು ಪ್ರಕಾರದ ವಿವಾಹಗಳು ಹೆಚ್ಚಾಗಿ ಕಂಡುಬರುತ್ತಿದ್ದವು. ಇವುಗಳಲ್ಲಿ ತಂದೆಯೇ ಕನ್ಯಾದಾನವನ್ನು ಮಾಡುತ್ತಿದ್ದನು. ಇವಲ್ಲದೆ ಗಾಂಧರ್ವ ಮತ್ತು ರಾಕ್ಷಸ ವಿವಾಹ ಪ್ರಕಾರಗಳೂ ಆಚರಣೆಯಲ್ಲಿದ್ದವು. ಅಸುರ ವಿವಾಹವು ಎಂದರೆ ಕನ್ಯಾಶುಲ್ಕವನ್ನು ಪಡೆದು ಕನ್ಯೆಯನ್ನು ಕೊಡುವದು ಆಚರಣೆಯಲ್ಲಿದ್ದರೂ, ಅದು ಅಷ್ಟೊಂದು ಒಳ್ಳೆಯ ಪದ್ಧತಿಯಲ್ಲವೆಂಬ ಭಾವನೆ ಇದ್ದಿತು. ಪೈಶಾಚ ವಿವಾಹವು ಹೀನವಾದ ಪದ್ಧತಿಯೆಂದು ತಿಳಿಯಲಾಗುತ್ತಿತ್ತು.

ವಿವಾಹವು ಪವಿತ್ರವಾದ ಧಾರ್ಮಿಕ ಬಂಧನವಾಗಿತ್ತು. ಪತಿ ಪತ್ನಿಯರಿಬ್ಬರೂ ಒಬ್ಬರಿಗೊಬ್ಬರು ಪೂರಕವಾಗಿ ಧರ್ಮ, ಅರ್ಥ, ಕಾಮ, ಮೋಕ್ಷ ಸಾಧನೆಯಲ್ಲಿ ನಿರತರಾಗಬೇಕಿತ್ತು. ಕೊನೆಯುಸಿರಿನವರೆಗೂ ಅವರು ಕೂಡಿ ಬಾಳಿ ಬದುಕಬೇಕಿತ್ತು. ವೈದಿಕ ಧರ್ಮ ಗ್ರಂಥಗಳಲ್ಲಿ ಒಂದೆರಡು ಕಡೆಗೆ ಮಾತ್ರ ವಿವಾಹ ವಿಚ್ಛೇದನದ ಉಲ್ಲೇಖವಿದ್ದರೂ, ಆಚರಣೆಯಲ್ಲಿ ಇದ್ದುದು ಕಂಡುಬರುವದಿಲ್ಲ.

ವಿವಾಹವಾಗಿ ಪತಿಯ ಮನೆಯನ್ನು ಸೇರಿದ ಸ್ತ್ರೀಯು ಎಲ್ಲರ ಪ್ರೀತಿ. ವಿಶ್ವಾಸ ಹಾಗೂ ಆದರಕ್ಕೆ ಪಾತ್ರಳಾಗುತ್ತಿದ್ದಳು. ಅವಳೂ ಕೂಡ ಹಿರಿಯರಿಗೆ ವಿಧೇಯಳಾಗಿ, ಗೃಹಕೃತ್ಯದಲ್ಲಿ ತನ್ನ ಜವಾಬ್ದಾರಿಯನ್ನು ವಹಿಸಬೇಕಾಗುತ್ತಿತ್ತು. ಪತಿ ಪತ್ನಿಯರಿಬ್ಬರಿಗೂ ಕೂಡಿ ದಂಪತಿ ಎಂಬ ಶಬ್ದವನ್ನು ಉಪಯೋಗಿಸುವ ವೇದಕಾಲದ

ಪರಿಪಾಠವು ಅವರ ಸಾಮೂಹಿಕ ಜವಾಬ್ದಾರಿಯನ್ನು ಸೂಚಿಸುತ್ತದೆ. ಪತ್ನಿಯು ಅತ್ಯಂತ ಗೌರವಕ್ಕೆ ಪಾತ್ರಳಾಗಿದ್ದಳು. ಅವಳು ಮನೆತನದ ಲಕ್ಷ್ಮೀ ಎನಿಸಿದ್ದಳು. ಸೇವಕರಿಗೆ ಅವರ ಕೆಲಸವನ್ನು ಒಪ್ಪಿಸಿ, ಹಿರಿಯರ, ಅತಿಥಿಗಳ. ಪತಿಯ, ಮಕ್ಕಳ ಹಾಗೂ ಕುಟುಂಬಕ್ಕೆ ಸೇರಿದ ಪಶುಪ್ರಾಣಿಗಳ ಯೋಗಕ್ಷೇಮವನ್ನೂ ನೋಡುವದು ಅವಳ ಕರ್ತವ್ಯವಾಗಿತ್ತು. ಈ ರೀತಿ ತನ್ನ ಕರ್ತವ್ಯವನ್ನು ನಿಭಾಯಿಸುವ ಪತ್ನಿಯನ್ನು ಪತಿಯು, ಪ್ರೀತಿ.ವಿಶ್ವಾಸಗಳಿಂದ ಕಾಣುತ್ತಿದ್ದನಲ್ಲದೇ, ಮನೆತನದ ಎಲ್ಲ ವಿಷಯಗಳನ್ನು ಇತ್ಯರ್ಥ ಮಾಡುವಲ್ಲಿ ಅವಳ ಅಭಿಪ್ರಾಯವನ್ನು ಪಡೆಯುತ್ತಿದ್ದನು. ಪತಿ, ಪತ್ನಿಯರ ಸಂಪೂರ್ಣ ಸಮರಸವೇ ಸಮರಸ ಜೀವನಕ್ಕೆ ನಾಂದಿಯಾಗಿತ್ತು. ಪುರುಷನು ಅಪೂರ್ಣನೆಂದೂ, ವಿವಾಹದಲ್ಲಿ ಪತ್ನಿಯು ಜೊತೆಗೂಡಿ ಮಕ್ಕಳನ್ನು ಪಡೆದಾಗಲೇ ಪರಿಪೂರ್ಣನಾಗುವನೆಂಬ ವಿಚಾರವು ಆ ಕಾಲದಲ್ಲಿತ್ತು. ಪತ್ನಿಯನ್ನು ಸಖಿಯೆಂದೂ ಅರ್ಧಾಂಗಿಯೆಂದೂ ವೇದಗ್ರಂಥಗಳು ಕರೆದಿವೆ. ಪತ್ನಿಯನ್ನು ಪೋಷಿಸುವದೂ, ಸಂರಕ್ಷಿಸುವದೂ ಪತಿಯ ಧರ್ಮವು. ಇದನ್ನು ಮಾಡದವನು ಪತಿಯೇ ಅಲ್ಲ ಎಂಬುವಂತಿತ್ತು. ಆಗಿನ ವಿಚಾರ. ಅದೇ ರೀತಿ ಪತ್ನಿಯೂ ತನ್ನ ಪತಿಯನ್ನು ಸುಖದಲ್ಲಿಡಲು ಶಕ್ತಿಮೀರಿ ಪ್ರಯತ್ನಿಸಬೇಕು. ಪತಿಯು ಮಾಡುವ ಸಹಾಯವನ್ನು ತಂದೆಯಾಗಲಿ, ತಾಯಿಯಾಗಲಿ, ಮಕ್ಕಳಾಗಲಿ. ಮಿತ್ರರಾಗಲಿ ಯಾರೂ ಮಾಡಲಾರರು. ಹೀಗಾಗಿ ಪತಿಯೇ ಸರ್ವಸ್ವವೆಂದು ತಿಳಿದು ಸತಿಯು ಸುಖದಲ್ಲಿಯೂ ಕಷ್ಟದಲ್ಲಿಯೂ ಅವನನ್ನು ಅನುಸರಿಸಬೇಕು. ಪತಿವ್ರತೆಯಾಗಿದ್ದು, ಗೃಹಕೃತ್ಯಗಳೇ ತನ್ನ ಪ್ರಮುಖ ಕರ್ತವ್ಯವೆಂದು ತಿಳಿಯಬೇಕು. ಎಲ್ಲ ಕಾರ್ಯಗಳಲ್ಲಿಯೂ ಪತಿಯ ಅಭಿಪ್ರಾಯವನ್ನೂ ಪಡೆದು, ಕುಟುಂಬದ ಆದಾಯ–ವೆಚ್ಚವನ್ನು ಸರಿದೂಗಿಸಿ ಕೊಂಡು ಹೋಗಬೇಕು. ಪತಿಯು ತಪ್ಪಿದ್ದಲ್ಲಿ ಅವನನ್ನು ತಿದ್ದಬೇಕು. ಈ ರೀತಿಯಾಗಿ ಸತಿಯ ಕರ್ತ್ಯವ್ಯಗಳನ್ನು ವರ್ಣಿಸಲಾಗಿದೆ. ಹೀಗೆ ಕೌಟುಂಬಿಕ ಜೀವನದಲ್ಲಿ ಅವರಿಬ್ಬರೂ ಸಮಭಾಗಿಗಳಾಗಿದ್ದರೂ, ಆಚರಣೆಯಲ್ಲಿ ಪತಿಯದೇ ಮೇಲುಗೈಯಾಗಿತ್ತು. ಅವಳು ಅವನಿಗೆ ವಿಧೇಯಳಾಗಿರುತ್ತಿದ್ದಳು.

ವೇದಕಾಲದಲ್ಲಿ ಸಹಗಮನ ಪದ್ಧತಿ ಇರಲಿಲ್ಲ. ಅದಕ್ಕೆ ಬದಲಾಗಿ ಸಮಾಜವು ವಿಧವಾ ವಿವಾಹಕ್ಕೆ ಉತ್ತೇಜನ ನೀಡಿದ್ದು ಕಂಡುಬರುತ್ತದೆ. ವಿಧವೆಯಾಗಿಯೇ ಕೊನೆಯವರೆಗೂ ಉಳಿಯುವದು ಸ್ತ್ರೀಗೆ ಸಾಧ್ಯವಿತ್ತು. ಇಲ್ಲವಾದರೆ ಅವಳು ಮರು ವಿವಾಹವಾಗಲೂ ಸಾಧ್ಯವಿತ್ತು. ಅದು ಬೇಡವಾಗಿದ್ದಲ್ಲಿ ನಿಯೋಗ ಪದ್ಧತಿಯನ್ನು ಅನುಸರಿಸಿ ಮಕ್ಕಳನ್ನು ಪಡೆಯಬಹುದಿತ್ತು. ಪುತ್ರಸಂತಾನವಿಲ್ಲದೆ ಪತಿಯು ಮರಣ ಹೊಂದಿದಾಗ ಅವನ ಮನೆತನವನ್ನು ಮುಂದುವರೆಸಿಕೊಂಡು ಹೋಗಲು ದತ್ತಕ ಪುತ್ರನಿಗಿಂತಲೂ, ಅವನ ಪತ್ನಿಯು ಪತಿಯ ಸಹೋದರನಿಂದ (ನಿಯೋಗದಿಂದ) ಪಡೆದ ಪುತ್ರನೇ ಲೇಸು ಎಂಬ ವಿಚಾರವು ಆಗ ಜನರಲ್ಲಿತ್ತು. ವಿಧವೆಯು ತನ್ನ ಮುಖವನ್ನು ವಿಕ್ರತಗೊಳಿಸಿಕೊಳ್ಳುವ ವಿಚಾರವು ಆಗ ಇರಲಿಲ್ಲ.ಇದರಿಂದಾಗಿ ವಿವಾಹ ಪೂರ್ವದಲ್ಲಿ, ವೈವಾಹಿಕ ಜೀವನದಲ್ಲಿ ಹಾಗೂ ಪತಿಯ ಮರಣದ ನಂತರ ವೇದಕಾಲದ ಸಮಾಜವು ಸ್ತ್ರೀಯನ್ನು ಒಳ್ಳೆಯ ದೃಷ್ಟಿಯಿಂದ ನೋಡಿದ್ದು ನಮಗೆ ಕಂಡುಬರುತ್ತದೆ.

ಇನ್ನು ಸಾರ್ವಜನಿಕ ಜೀವನದಲ್ಲಿ ವೈದಿಕ ಧರ್ಮವು ಸ್ತ್ರೀಯರಿಗೆ ಯಾವ ಸ್ಥಾನಮಾನವನ್ನು ಕೊಟ್ಟಿತ್ತೆಂಬುದನ್ನು ನಾವು ಅವಲೋಕಿಸಬಹುದು. ಆಗಿನ ಸಾಹಿತ್ಯ ಮತ್ತು ರೀತಿ. ನೀತಿಗಳನ್ನು ನೋಡಿದಾಗ, ಸ್ತ್ರೀಯರು ಸ್ವತಂತ್ರರಾಗಿ ಸಮಾಜದಲ್ಲಿ ವಿಹರಿಸುವದು ನಮಗೆ ಕಂಡುಬರುತ್ತದೆ. ಆಗಲೂ ಕೂಡ ಸಹಶಿಕ್ಷಣ ವಿದ್ದಿತು. ಸ್ತ್ರೀಯರು ಆಟಪಾಟಗಳಲ್ಲಿ, ನಾಟಕಗಳನ್ನು ನೋಡುವದರಲ್ಲಿ ಆಸಕ್ತಿ ವಹಿಸುತ್ತಿದ್ದರು. ಪ್ರೇಮಿಗಳು ಭೆಟ್ಟಿಯಾಗುವ, ವಿವಾಹವಾಗುವ ಉದಾಹರಣೆಗಳು ಲಭ್ಯವಿವೆ. ಸಾರ್ವಜನಿಕ ಜೀವನದ ಮೇಲೆ ನಿರ್ಬಂಧವಿದ್ದರೆ, ಇಲ್ಲವೆ ಘೋಷಾ ಪದ್ಧತಿ ಇದ್ದಿದ್ದರೆ. ಇವೆಲ್ಲ ಸಾಧ್ಯವಾಗುತ್ತಿರಲಿಲ್ಲ. ವಿವಾಹದ ನಂತರವೂ ಕೂಡ ಅವರು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರೆಂದು ತಿಳಿಯುತ್ತದೆ.

ಸಾರ್ವಜನಿಕ ಜೀವನದಲ್ಲಿ ಸ್ವಾತಂತ್ರ್ಯವಲ್ಲದೆ, ತಮಗೆ ಬೇಕಾದ ವೃತ್ತಿಯನ್ನು ಅಭಿರುಚಿಯಿದ್ದವರು ಅನುಸರಿಸಲೂ ಸ್ವಾತಂತ್ರವಿದ್ದಿತು. ಎಷ್ಟೋ ಸ್ತ್ರೀಯರು ಶಿಕ್ಷಕ ವೃತ್ತಿಯನ್ನು ಅನುಸರಿಸುತ್ತಿರಬೇಕು. ಇವರನ್ನು ಆಚಾರ್ಯಾ ಇಲ್ಲವೆ ಉಪಾಧ್ಯಾಯಾ ಎಂದು ಸಂಬೋಧಿಸುತ್ತಿದ್ದರು. ಇವರಲ್ಲಿ ಕೆಲವರು ಧರ್ಮಶಾಸ್ತ್ರ. ತತ್ವಶಾಸ್ತ್ರ ಗಳಂಥ ಕಠಿಣವಾದ ವಿಷಯಗಳಲ್ಲಿಯೂ ಕೂಡ ಪರಿಣತಿಯನ್ನು ಪಡೆದವರಿದ್ದರು. ವ್ಯಾಕರಣ, ಕಾವ್ಯ ಮತ್ತು ಸಾಹಿತ್ಯವನ್ನು ಕಲಿಸುವ ಶಿಕ್ಷಕಿಯರ ಸಂಖ್ಯೆ ಹೆಚ್ಚಾಗಿತ್ತು. ಕೆಲವರು ತಮ್ಮ ವಾಕ್ಚಾತುರ್ಯ ಮತ್ತು ಆಳವಾದ ಜ್ಞಾನಕ್ಕಾಗಿ ಪ್ರಸಿದ್ಧಿಯನ್ನು ಪಡೆದಿದ್ದರು. ಸಂಗೀತ ಹಾಗೂ ನೃತ್ಯಕಲೆಯಲ್ಲಿಯೂ ಎಷ್ಟೋ ಸ್ತ್ರೀಯರು ಮುಂದು ವರೆದಿದ್ದರು. ಆದರೆ ಈ ಕಲೆಗಳನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುವದು ಗೌರವಸ್ಥ ಕುಟುಂಬದ ಸ್ತ್ರೀಯರಿಗೆ ಸಾಧ್ಯವಿರಲಿಲ್ಲ. ಪುರುಷರು ಇಲ್ಲವೆ ನೃತ್ಯಗಾತಿಯರ ವರ್ಗಕ್ಕೆ ಸೇರಿದವರು ಮಾತ್ರ ಇವುಗಳನ್ನು ವೃತ್ತಿಗಳನ್ನಾಗಿ ಮಾಡಿಕೊಳ್ಳ ಬಹುದಿತ್ತು.

ರಾಜಕೀಯ ರಂಗದಲ್ಲಿ ಸ್ತ್ರೀಯರಿಗೆ ಕೆಲವೊಂದು ನಿರ್ಬಂಧಗಳು ಇದ್ದವೆಂದು ಹೇಳಬಹುದು. ಯಾಕೆಂದರೆ ಸ್ತ್ರೀಯು ರಾಜಕೀಯ ಆಡಳಿತೆಯಲ್ಲಿ ಮುಖ್ಯಸ್ಥಾನ ವನ್ನು ವಹಿಸಿದ ಉದಾಹರಣೆಗಳು ಇಲ್ಲ. ಆದರೆ ಸಾಮಾನ್ಯ ಸ್ತ್ರೀಯರಲ್ಲಿ ಕೆಲವರು ಸ್ಥಾನಿಕ ರಾಜಕೀಯ ಸಭೆಗಳಲ್ಲಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು.

ಧಾರ್ಮಿಕ ಆಚರಣೆಗಳೂ ಈಗ ತಮ್ಮ ಮಹತ್ವವನ್ನು ಕಳೆದುಕೊಂಡಿದ್ದರೂ. ಆ ಕಾಲಕ್ಕೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಬಹಳ ಮಹತ್ವವಿತ್ತು. ಸ್ತ್ರೀಯು ನಿಯತ ಕಾಲಿಕವಾಗಿ ಮಲಿನಳೂ ಅಸ್ಪೃಶ್ಯಳೂ ಎಂಬ ಭಾವನೆ ವೇದಕಾಲದ ಜನರಲ್ಲಿ ಇದ್ದಿತು. ಈ ಅವಧಿಯಲ್ಲಿ ಅವರ ದರ್ಶನವನ್ನು ಮಾಡುವದೂ. ಅವರ ಧ್ವನಿ ಯನ್ನು ಕೇಳುವದೂ ನಿಷೇಧವಾಗಿತ್ತು. ಇದು ಅವರಿಗೆ ಸಂಪೂರ್ಣ ವಿಶ್ರಾಂತಿಯ ಅವಧಿಯಾಗಿತ್ತು. ಇದಿಷ್ಟನ್ನು ಹೊರತುಪಡಿಸಿದರೆ, ಉಳಿದೆಲ್ಲ ಅವಧಿಯಲ್ಲಿ ಧಾರ್ಮಿಕ ಆಚರಣೆಗಳಿಗೆ ಸ್ತ್ರೀಯರಿಗೆ ಸಂಪೂರ್ಣವಾದ ಅವಕಾಶವಿದ್ದಿತು. ಸ್ತ್ರೀಯರಿಗೂ ಉಪ ನಯನವನ್ನು ಮಾಡಲಾಗುತ್ತಿತ್ತು. ಅದಾದನಂತರ ಪುರುಷರಂತೆ ಅವರೂ ಬ್ರಹ್ಮ

ಚರ್ಯಾಶ್ರಮವನ್ನು ಪ್ರವೇಶಿಸುತ್ತಿದ್ದರು. ಈ ಅವಧಿಯಲ್ಲಿ ಸ್ತ್ರೀಯರು ವೇದಾಭ್ಯಾಸವನ್ನು ಮಾಡುತ್ತಿದ್ದರು. ಆದರೆ ಸಾಮಾನ್ಯವಾಗಿ ಸ್ತ್ರೀಯರು ಕುಟುಂಬದಲ್ಲಿಯೇ ವೇದವಿದ್ಯೆಯನ್ನು ಪಡೆಯುತ್ತಿದ್ದರು. ಬ್ರಹ್ಮಚಾರಿಗಳಿಗೆ ಕಡ್ಡಾಯವಾದ ನಿತ್ಯದ ಆಹಾರವನ್ನು ಬೇಡಿ ತರುವ ಕೆಲಸವನ್ನು ಸ್ತ್ರೀಯರು ಕೈಕೊಳ್ಳುತ್ತಿರಲಿಲ್ಲ.

ವಿವಾಹದ ನಿಶ್ಚಿತಾರ್ಥದ ನಂತರ, ಸ್ತ್ರೀಯರು ವಿದ್ಯಾಭ್ಯಾಸವನ್ನು ಅಲ್ಲಿಗೆ ನಿಲ್ಲಿಸುತ್ತಿದ್ದರು. ಕೆಲವರು ಮಾತ್ರ ತಮ್ಮ ಮನಸ್ಸಿಗೆ ತೃಪ್ತಿಯಾಗುವವರೆಗೆ ವೇದಾಭ್ಯಾಸವನ್ನು ಮುಂದುವರಿಸುತ್ತಿದ್ದರು. ಇಂಥವರಿಗೆ ಬ್ರಹ್ಮವಾದಿನಿ ಎಂದು ಕರೆಯುತ್ತಿದ್ದರು. ಕೆಲವು ಸ್ತ್ರೀಯರು ವೈದಿಕ ಮಂತ್ರಗಳನ್ನೂ ಕೂಡ ಬರೆದಿದ್ದಾರೆ ಅಲ್ಲದೆ ಕೆಲವು ಸ್ತ್ರೀಯರು ಸ್ವತಂತ್ರರಾಗಿ ಯಜ್ಞಯಾಗಾದಿಗಳನ್ನು ಕೈಕೊಳ್ಳುವದು ಕಂಡು ಬರುತ್ತದೆ ಧಾರ್ಮಿಕ ಆಚರಣೆಯಲ್ಲಿ ಸ್ತ್ರೀಯು ಪುರುಷನಿಗೆ ಅಡ್ಡಿಯಾಗಿರಲಿಲ್ಲ. ಯಾಕೆಂದರೆ ಎಷ್ಟೋ ಧಾರ್ಮಿಕ ವಿಧಿಗಳನ್ನು ಪತಿ ಪತ್ನಿಯರಿಬ್ಬರೂ ಕೂಡಿಯೇ ಕೈಕೊಳ್ಳಬೇಕಿತ್ತು. ಅಲ್ಲದೆ ಧಾರ್ಮಿಕ ದೃಷ್ಟಿಯಿಂದ ವಿವಾಹವು ಅತಿ ಅವಶ್ಯವಾಗಿತ್ತು. ಪುತ್ರಸಂತಾನವೂ ಅವಶ್ಯವಿದ್ದಿತು. ಹೀಗಾಗಿ ಧಾರ್ಮಿಕ ರಂಗದಲ್ಲಿ ಸ್ತ್ರೀಗೆ ಪುರುಷಸಮಾನವಾದ ಸ್ಥಾನಮಾನವಿದ್ದಿತು. ಸೀತಾ, ರುದ್ರಬಲಿ, ರುದ್ರಯಾಗ ಮುಂತಾದ ಕೆಲವು ಯಜ್ಞಗಳು ಸ್ತ್ರೀಯರಿಗೆ ಮಾತ್ರ ಮೀಸಲಾಗಿದ್ದವು.

ಆಸ್ತಿಯನ್ನು ಪಡೆಯುವ ವಿಷಯದಲ್ಲಿ ಮಾತ್ರ, ವೇದಕಾಲದ ಸಮಾಜವು ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರಲಿಲ್ಲ. ಸ್ತ್ರೀಯರೇ ಪುರುಷನಿಗೆ ಸೇರಿದವರು ಎಂಬ ಭಾವನೆ ಇದ್ದಿತು. ಪುರುಷನು ಅವರನ್ನು ಕಾಣಿಕೆಯಾಗಿ, ದಾನವಾಗಿ ಕೊಡಬಹುದಿತ್ತು. ಜೂಜಾಟದಲ್ಲಿ ಪತ್ನಿಯನ್ನು ಪಣಕ್ಕೆ ಹಚ್ಚಿದ ಬಗ್ಗೆ ಋಗ್ವೇದದಲ್ಲಿ ಉಲ್ಲೇಖವಿದೆ. ಆದರೂ ಕೂಡ ಇದು ಜನರಲ್ಲಿ ಅಷ್ಟೊಂದು ಸಾಮಾನ್ಯವಾಗಿರಲಿಲ್ಲ. ಸುಸಂಸ್ಕೃತರಲ್ಲಿ ಸ್ತ್ರೀಯು ಪತಿಯ ಜೊತೆಗೆ ಕೌಟುಂಬಿಕ ಆಸ್ತಿಯ ಮೇಲೆ ಅಧಿಕಾರವನ್ನು ಹೊಂದಿದ್ದಳು. ಸಾಮಾನ್ಯವಾಗಿ ಸ್ತ್ರೀಯು ವಿವಾಹದ ಸಮಯದಲ್ಲಿ ಪಡೆಯುವ ಎಲ್ಲ ಕಾಣಿಕೆಗಳೂ, ಆಭರಣಗಳೂ ಅವಳಿಗೇ ಸೇರುತ್ತಿದ್ದವು. ಆದರೆ ಕುಟುಂಬದ ಸ್ಥಾವರ ಆಸ್ತಿಯ ಮೇಲೆ ಪತಿ ಪತ್ನಿಯರಿಬ್ಬರ ಅಧಿಕಾರವಿದ್ದರೂ, ಪತಿಯದೇ ಮೇಲುಗೈಯಾಗಿತ್ತು. ಅವನ ನಂತರ ಅವನ ಗಂಡುಮಕ್ಕಳು ಆಸ್ತಿಯನ್ನು ಪಡೆಯುವ ಪರಿಪಾಠವಿತ್ತು. ಹೆಣ್ಣುಮಕ್ಕಳಿಗೆ ಈ ಅಧಿಕಾರವಿರಲಿಲ್ಲ. ಗಂಡು ಸಂತಾನವಿಲ್ಲದಾಗ, ಹೆಣ್ಣು ಮಗಳ ಮಗನಿಗೆ ಆಸ್ತಿಯನ್ನು ಪಡೆಯುವ ಅಧಿಕಾರವಿತ್ತು. ಈ ರೀತಿಯಾಗಿ ಹೆಣ್ಣುಮಕ್ಕಳಿಗೆ ಆಸ್ತಿಯ ಮೇಲೆ ಅಧಿಕಾರವಿಲ್ಲದ್ದರಿಂದ, ವಿಧವೆಗೂ ವೇದಕಾಲದ ಸಮಾಜವು ಆ ಅಧಿಕಾರವನ್ನು ಕೊಟ್ಟಿರಲಿಲ್ಲ.

ಉಡಿಗೆ ತೊಡಿಗೆ, ಆಭರಣ ಅಲಂಕಾರಗಳೆಂದರೆ ಸ್ತ್ರೀಯರಿಗೆ ಯಾವಾಗಲೂ ಪ್ರೀತಿ. ವೇದಕಾಲದ ಸಾಹಿತ್ಯವು ಇದರ ಬಗೆಗೂ ಒಂದೆರಡು ಅಂಶಗಳನ್ನು ತಿಳಿಸುತ್ತದೆ. ಆಗಿನ ಕಾಲದ ಸ್ತ್ರೀಯರು ನಡುವಿನ ಕೆಳಗೆ ಒಂದು, ಮೇಲೆ ಇನ್ನೊಂದು ಹೀಗೆ ಎರಡು ತರದ ಉಡುಪನ್ನು ತೊಡುತ್ತಿದ್ದರೆಂದು ಕಾಣುತ್ತದೆ. ಆ ಕಾಲದಲ್ಲಿ

ಸ್ತ್ರೀಯರ ಮತ್ತು ಪುರುಷರ ಉಡುಪಿನಲ್ಲಿ ಅಷ್ಟೊಂದು ವ್ಯತ್ಯಾಸ ಕಂಡುಬರುವುದಿಲ್ಲ ಆದರೂ ಸ್ತ್ರೀಯರ ಉಡುಪು ಬಣ್ಣದ ಬಟ್ಟೆಯದಿರುತ್ತಿತ್ತು. ಈ ಬಟ್ಟೆಗಳನ್ನು ಸೂಜಿ ದಾರಗಳ ಸಹಾಯದಿಂದ ಹೊಲಿದಿರುತ್ತಿದ್ದರೆಂದು ಋಗ್ವೇದದಲ್ಲಿ ಹೇಳಲಾಗಿದೆ. ಆದರೂ ಇದು ಅಷ್ಟಾಗಿ ಬಳಕೆಯಲ್ಲಿದ್ದುದು ಕಂಡುಬರುವುದಿಲ್ಲ. ಬಹುಜನರು ಬಿಡಿ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದರು.

ಸ್ತ್ರೀ ಪುರುಷರಿಬ್ಬರೂ ಅನೇಕ ತರದ ಮನಮೋಹಕವಾದ ಆಭರಣಗಳನ್ನು ಉಪಯೋಗಿಸುತ್ತಿದ್ದುದು ಕಂಡುಬರುತ್ತದೆ. ಕೈಯ್ಯಲ್ಲಿ ಸುಂದರವಾದ ಬಳೆಗಳನ್ನೂ ಕಾಲುಗಳಲ್ಲಿ ಹಾಲುಗಡಗಗಳನ್ನೂ ಅವರಿಬ್ಬರೂ ಧರಿಸುತ್ತಿದ್ದರು. ಬೆರಳುಗಳಲ್ಲಿ ಉಂಗುರಗಳು ಶೋಭಿಸುತ್ತಿದ್ದವು. ತೋಳುಗಳಲ್ಲಿ ತೋಳಬಂದಿ, ವಂಕಿ, ನಾಗಮುರಿ ಮುಂತಾದ ಆಭರಣಗಳನ್ನು ಧರಿಸುತ್ತಿದ್ದರು. ಕೊರಳಲ್ಲಿಯ ಸರಗಳು ಎದೆಯವರೆಗೂ ಮುಟ್ಟುತ್ತಿದ್ದವು ಕಿವಿಗಳಲ್ಲಿ ಕರ್ಣಶೋಭನಗಳೆಂಬ ಆಭರಣಗಳೂ, ತಲೆಯಲ್ಲಿ ಕುಂಭ ಎಂಬ ಆಭರಣವನ್ನು ಧರಿಸುತ್ತಾರೆಂದು ತಿಳಿಯುತ್ತದೆ. ಈ ಎಲ್ಲ ಆಭರಣಗಳು ಬಂಗಾರ, ಬೆಳ್ಳಿ ಇಲ್ಲವೆ ಬೆಲೆಯುಳ್ಳ ಹರಳುಗಳಿಂದ ಮಾಡಲ್ಪಟ್ಟಿರುತ್ತಿದ್ದವು. ಮೂಗುತಿ ಮತ್ತು ಕಾಲುಂಗುರಗಳ ಬಗ್ಗೆ ಮಾತ್ರ ಉಲ್ಲೇಖವಿದ್ದಂತೆ ಕಂಡುಬರುವದಿಲ್ಲ. ಈ ಆಭರಣಗಳಲ್ಲದೆ, ದೇಹದ ಸೌಂದರ್ಯವನ್ನು ಹೆಚ್ಚಿಸಲು ಗಂಧ ಮತ್ತು ಕೇಶರದ ಲೇಪವನ್ನೂ ಮಾಡಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಕುಂಕುಮವು ಹಣೆಗೂ, ಸಿಂಧೂರವು ತಲೆಗೂ ಅಲಂಕಾರವಾಗಿದ್ದವು. ಈ ಎಲ್ಲ ಆಭರಣಗಳು ಸ್ತ್ರೀಯರ ಸೌಂದರ್ಯಸಾಧನೆಗಳಷ್ಟೇ ಅಲ್ಲದೆ ಅವರ ಆಸ್ತಿಯೂ ಆಗಿದ್ದವು.

ಒಟ್ಟಿನಲ್ಲಿ ಹೇಳುವದಾದರೆ, ವೇದಕಾಲದಲ್ಲಿ ಸ್ತ್ರೀಯರಿಗೆ ಅತಿ ಉನ್ನತವಾದ ಸ್ಥಾನವಿದ್ದಿತು. ಸಮಾಜವು ಅವರಿಗೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಲ್ಲದೆ ಸ್ವಾತಂತ್ರ್ಯವನ್ನೂ ಕೊಟ್ಟಿತ್ತು. ಅವರ ಬಗ್ಗೆ ದಯೆ, ಕರುಣೆ ಅನುಕಂಪವನ್ನೂ ತೋರಿಸಿತ್ತು. ಸ್ತ್ರೀ ಏನೇತಪ್ಪು ಮಾಡಲಿ ಅವಳು ಕ್ಷಮಾರ್ಹಳು ಎಂಬ ವಿಚಾರವಿದ್ದಿತು. ಸ್ತ್ರೀಹತ್ಯೆ ಮಹಾಪಾಪವೆಂದು ತಿಳಿದಿದ್ದರು. ತಂದೆ, ಪತಿ ಹಾಗೂ ಮಕ್ಕಳು ಯಾವಾಗಲೂ ಅವಳನ್ನು ದಯೆ ಮತ್ತು ಪ್ರೀತಿಯಿಂದ ಕಾಣುತ್ತಿದ್ದರು. ಕೆಲವೊಂದು ಕಡೆಗೆ ಸ್ತ್ರೀ ಚಂಚಲಳು, ಸ್ವಾರ್ಥಿಯೂ, ಅನಿಯಂತ್ರಿತಳು ಎಂಬ ಮಾತುಗಳು ಕಂಡುಬಂದರೂ, ಅವು ಕೆಲವು ಪ್ರಸಂಗಗಳಲ್ಲಿ ಹೇಳಿದುವು ಮಾತ್ರ ಆಗಿದ್ದವಲ್ಲದೆ, ಜನರ ಸಾಮಾನ್ಯವಾದ ಅಭಿಪ್ರಾಯವಾಗಿರಲಿಲ್ಲ.

ಯಾವುದೇ ಸಮಾಜದ ಸಂಸ್ಕೃತಿಯ ಮಟ್ಟವನ್ನು ಸ್ತ್ರೀಯರಿಗೆ ಕೊಟ್ಟಿರುವ ಸ್ಥಾನಮಾನದ ಮೇಲಿಂದ ನಿರ್ಧರಿಸುವದು ಸಮಾಜ ವಿಜ್ಞಾನಿಗಳ ಪರಿಪಾಠ. ಈ ದೃಷ್ಟಿಯಲ್ಲಿ ವೇದಕಾಲದಲ್ಲಿ ನಮ್ಮ ಸಮಾಜವು ಸ್ತ್ರೀಗೆ ಕೊಟ್ಟಿದ್ದ ಹಕ್ಕು, ಸ್ವಾತಂತ್ರ್ಯ, ಅವಳನ್ನು ನೋಡಿದ, ನಡೆಸಿಕೊಂಡ ಬಗ್ಗೆ, ಅವಳ ಬಗೆಗಿನ ವಿಚಾರಗಳನ್ನು ಅವಲೋಕಿಸಿದರೆ, ನಮ್ಮ ಸಂಸ್ಕೃತಿಯು ಅತ್ಯುಚ್ಚ ಮಟ್ಟವನ್ನು ಮುಟ್ಟಿತ್ತೆಂಬುದು ನಮಗೆ ಕಂಡುಬರುತ್ತದೆ. ಆಸ್ತಿಯ ಮೇಲಿನ ಅಧಿಕಾರ ಹಾಗೂ ರಾಜಕೀಯ ಅದೇರೀತಿ

ಕಾರವನ್ನು ಹೊರತುಪಡಿಸಿ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅವಳು ಪುರುಷನಿಗೆ ಸರಿಸಮಾನಳಾಗಿದ್ದಳೆಂದು ಹೇಳಬಹುದು.

ಕಾಲವು ಕಳೆದಂತೆ ನಮ್ಮ ಸಾಮಾಜಿಕ ರಚನೆಯಲ್ಲಿ ಹಾಗೂ ಜನರ ಆಚಾರ ವಿಚಾರಗಳಲ್ಲಿ ಎಷ್ಟೋ ಬದಲಾವಣೆಗಳಾದವು. ಈ ಬದಲಾವಣೆಗಳ ಪ್ರಭಾವವು ಸ್ತ್ರೀಯ ಸ್ಥಾನಮಾನದ ಮೇಲೆಯೂ ಆಯಿತು. ಹಿಂದು ಕಾಯಿದೆಗಳಿಗೆ ಪಿತಾಮಹನೆನಿಸಿದ ಮನು ಸ್ತ್ರೀಯರು ಗೌರವಕ್ಕೆ ಪಾತ್ರರೆಂದೂ, ಅವರು ಗೌರವಿಸಲ್ಪಡುವ ಸ್ಥಾನದಲ್ಲಿ ದೇವತೆಗಳು ವಾಸವಾಗಿರುತ್ತಾರೆಂದೂ, ಮಾತೆಯು ದೇವತೆಯೆಂದೂ (ಮಾತೃ ದೇವೋ ಭವ) ಹೇಳಿದನಾದರೂ, ಸ್ತ್ರೀ ಪುರುಷರು ಅಸಮಾನರು ಎಂದು ಪರಿಗಣಿಸಿದನು. ಸ್ತ್ರೀಯ ಬಗ್ಗೆ ಅವನು ವ್ಯಕ್ತಪಡಿಸಿದ ಎಷ್ಟೋ ಅಭಿಪ್ರಾಯಗಳು ಈ ಭಾವನೆಯ ಮೇಲೆಯೇ ಆಧಾರಿತವಾಗಿವೆ. ಸ್ತ್ರೀಯು ಮೃದು ಸ್ವಭಾವದವಳೂ, ಚಂಚಲಳೂ, ಚಿಕ್ಕಪುಟ್ಟ ಆಸೆಗಳಿಗೂ ಮನ ಸೋಲುವವಳು ಎಂದು ಮನು ನಂಬಿದ್ದನು. ಹೀಗಾಗಿ ಸ್ತ್ರೀಯು ಸದಾಕಾಲ ರಕ್ಷಿತಳಾಗಿರಬೇಕು. ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ವೃದ್ಧಾಪ್ಯದಲ್ಲಿ ಮಕ್ಕಳೂ ಅವಳನ್ನು ರಕ್ಷಿಸುತ್ತಾರೆ. ಹೀಗಾಗಿ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅನರ್ಹಳು ಎಂಬ ವಿಚಾರವನ್ನು ಮನು ಪ್ರತಿಪಾದಿಸಿದನು. ಗೃಹಕಾರ್ಯವಷ್ಟೇ ಅವಳ ಕರ್ತವ್ಯವೆಂದು ತಿಳಿಯಲ್ಪಟ್ಟುದರಿಂದ ಈ ಮೊದಲು ಅವಳಿಗೆ ಕೊಡಮಾಡಿದ ಎಲ್ಲ ಹಕ್ಕು ಬಾಧ್ಯತೆಗಳು ಒಂದೊಂದಾಗಿ ಅವಳ ಕೈಬಿಡಹತ್ತಿದವು.

ಜ್ಞಾನ ಸಂಪಾದನೆಗೆ ಸ್ತ್ರೀಯು ಅಶಕ್ತಳು. ವೇದಾಧ್ಯಯನಕ್ಕೆ ಅಯೋಗ್ಯಳು ಎಂದು ತಿಳಿಯಲ್ಪಟ್ಟಿದ್ದರಿಂದ ವಿದ್ಯಾಭ್ಯಾಸ ಮಾಡುವ ಹಕ್ಕನ್ನು ಅವಳು ಕಳೆದುಕೊಂಡಳು. ವೇದಾಭ್ಯಾಸವು ಶೂದ್ರರಿಗೆ ನಿಷಿದ್ಧವಾದಂತೆ ಸ್ತ್ರೀಗೂ ನಿಷಿದ್ಧವಾಯಿತು. ಎಂಟು ವರ್ಷಕ್ಕೆ ಮಾಡಬೇಕಾಗಿದ್ದ ಉಪನಯನದ ಬದಲಾಗಿ ಅವಳ ವಿವಾಹವನ್ನು ಮಾಡುವ ಪರಿಪಾಠವು ಬೆಳೆದು ಬಂದಿತು. ಈ ರೀತಿ ಬಾಲ್ಯ ವಿವಾಹ ಪದ್ಧತಿ ಬೆಳೆದಿದ್ದರಿಂದ, ಬಾಲ್ಯತನದ ಸವಿಯನ್ನು ಕಾಣದೆ, ಎಳೆ ವಯಸ್ಸಿನಲ್ಲಿಯೇ ಗೃಹಕೃತ್ಯದ ಗುರುತರ ಭಾರವನ್ನು ಹೊತ್ತು, ಪತಿಯ ಸೇವೆ ಮತ್ತು ಮಕ್ಕಳ ಪಾಲನೆ ಪೋಷಣೆಯಲ್ಲಿಯೇ ತನ್ನ ಸರ್ವಸ್ವವನ್ನು ಕಾಣಬೇಕಾಯಿತು. ಮನೆತನದ ಆಸ್ತಿಯ ಮೇಲೆ ಅವಳಿಗೆ ಅಧಿಕಾರವು ಇಲ್ಲವಾಯಿತು. ಯಾವ ಧಾರ್ಮಿಕ ಕಾರ್ಯವನ್ನೂ ಅವಳು ಪ್ರತ್ಯೇಕವಾಗಿ ಕೈಗೊಳ್ಳದೆ ಎಲ್ಲ ಕಾರ್ಯಗಳಲ್ಲಿಯೂ ಪತಿಯನ್ನು ಅನುಸರಿಸಬೇಕಾಯಿತು.

ವಿವಾಹದ ಪಾವಿತ್ರ್ಯವನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ನಮ್ಮ ಸಮಾಜದಲ್ಲಿ ಪಾತಿವ್ರತ್ಯಕ್ಕೆ ಬಹಳ ಮಹತ್ವವಿತ್ತು. ರಾಮ–ಸೀತೆಯರ ಆದರ್ಶವನ್ನು ಎತ್ತಿ ಹಿಡಿದ ನಮ್ಮ ಸಮಾಜ ಸ್ತ್ರೀಯು ಪತಿಗೆ ನಿಷ್ಠಳಾಗಿರಬೇಕಲ್ಲದೆ, ಪತಿಯ ಮರಣದ ನಂತರವೂ ಅವನದೇ ಧ್ಯಾನದಲ್ಲಿ ಅನುರಕ್ತಳಾಗಿ ತನ್ನ ಉಳಿದ ಜೀವನವನ್ನು ಕಳೆಯಬೇಕಾಗಿತ್ತು. ಈ ರೀತಿ ಜೀವನವನ್ನು ಕಳೆಯುವ ವಿಧವೆಯರ ಮೇಲೆ ಅನೇಕ ನಿರ್ಬಂಧನೆಗಳು ಹೇರಲ್ಪಟ್ಟವು. ಮುಖವನ್ನು ವಿರೂಪಗೊಳಿಸಿ

ಕೊಂಡು, ಎಲ್ಲ ಅಲಂಕಾರ ಶೃಂಗಾರಗಳನ್ನು ತ್ಯಜಿಸಿ, ಬಿಳಿ ಇಲ್ಲವೆ ಕೆಂಪು ಸೀರೆಯನ್ನುಟ್ಟು, ಏಕಭುಕ್ತಾಚರಣೆಯಿಂದ ಯಾವತ್ತೂ ಪೂಜೆ, ಧ್ಯಾನ, ವ್ರತ, ನಿಯಮಗಳನ್ನು ಮಾಡುತ್ತ ಅಗಲಿದ ಪತಿಯನ್ನು ಆದಷ್ಟು ಬೇಗನೆ ಕೂಡಿಕೊಳ್ಳುವ ಮಹದಾಸೆಯಿಂದ ಕಾಲವನ್ನು ನೂಕಬೇಕಾಯಿತು. ಶುಭ ಪ್ರಸಂಗಗಳಲ್ಲಿ ಅವಳ ದರ್ಶನವೇ ಅವಲಕ್ಷಣವೆನಿಸಿತು. ಸುಖಜೀವನ, ಮರುವಿವಾಹದ ಕನಸನ್ನೂ ಅವಳು ಕಾಣದಾದಳು.

ಆಗ ರಾಜಕೀಯ ಸ್ಥಿತಿ ಬದಲಾಗುತ್ತ ನಡೆದಿತ್ತು, ಮುಸಲ್ಮಾನರ ಆಕ್ರಮಣಕ್ಕೆ ಭಾರತ ಬಲಿಯಾಯಿತು. ಈ ಆಕ್ರಮಣಕಾರರ ಭಯವೂ ಕೂಡ ನಮ್ಮ ಸಮಾಜವು ಸ್ತ್ರೀಯನ್ನು ನೋಡುವ ದೃಷ್ಟಿಯಲ್ಲಿ ಬದಲಾವಣೆಯನ್ನು ತಂದಿತು. ದಾಳಿಕಾರರ ದೃಷ್ಟಿಯಿಂದ ತಮ್ಮ ಸ್ತ್ರೀಯರನ್ನು ರಕ್ಷಿಸುವದಕ್ಕಾಗಿ ಘೋಷಾ ಪದ್ಧತಿಯನ್ನು ಆಚರಣೆಯಲ್ಲಿ ತಂದರು. ಸ್ತ್ರೀ ಸಂಪೂರ್ಣವಾಗಿ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇರಬೇಕಾಯಿತು. ಆದಷ್ಟು ಬೇಗನೆ ಮಗಳ ಹೊಣೆಗಾರಿಕೆಯನ್ನು ಕಳೆದುಕೊಳ್ಳಬೇಕೆಂಬ ತಂದೆಯ ಆಸೆಯಿಂದಾಗಿ, ವಿವಾಹವಯೋಮಿತಿಯು ಇನ್ನೂ ಕೆಳಕ್ಕಿಳಿಯಿತು. ಪತಿಯನ್ನು ಕಳೆದುಕೊಂಡ ಸ್ತ್ರೀಯನ್ನು ರಕ್ಷಿಸುವದು ಕಷ್ಟವೆಂದೆನಿಸಿ ಸಹಗಮನ ಪದ್ಧತಿಯನ್ನು ಬೆಳೆಸಿಕೊಂಡು ಬಂದರು ಇದರಿಂದಾಗಿ ಪತಿಯ ಮರಣದ ನಂತರ ಸತಿಗೆ ಜೀವಿಸಿರುವ ಹಕ್ಕೂ ಇಲ್ಲದಾಯಿತು.

ಸಂಗೀತ, ನೃತ್ಯ ಕೆಲವೇ ಸ್ತ್ರೀಯರಿಗೆ ಮೀಸಲಾಗಿ ನೃತ್ಯಗಾರ್ತಿಯರ ಸಂಗಡವೇ ಬೆಳೆಯಿತು. ಸಂಗೀತ ಪ್ರೇಮಿಗಳು, ಕಾಮಾಸಕ್ತರು ಅವರ ಸಾನಿಧ್ಯವನ್ನುಬಯಸಿ, ಅದಕ್ಕಾಗಿ ಹಣವನ್ನು ವೆಚ್ಚಮಾಡುವ ಪ್ರವೃತ್ತಿ ಬೆಳೆದು ವೇಶ್ಯಾವೃತ್ತಿಯು ಬೆಳೆದು ಬಂದಿತು. ಎಷ್ಟೋ ರಾಜರು ಕಟ್ಟಿಸಿದ ಹಿಂದೂ ದೇವಾಲಯಗಳಲ್ಲಿ, ದೇವರ ಸೇವೆಗಾಗಿ, ನೃತ್ಯಗಾರ್ತಿಯರನ್ನು ನಿಯಮಿಸುವ ಸಂಪ್ರದಾಯವು ರೂಢಿಯಲ್ಲಿ ಬಂದಿತು. ಇದರಿಂದಾಗಿ ದೇವದಾಸಿ ಪದ್ಧತಿಯು ಬೆಳೆಯಿತು.

ಸ್ತ್ರೀಯ ಅವನತಿಯು ಸಾರ್ವಜನಿಕ ಜೀವನದಲ್ಲಿಯೂ ಕಂಡುಬರುವದು. ಸಭೆ ಮತ್ತು ಚರ್ಚೆಗಳಲ್ಲಿ ಸ್ತ್ರೀಯರು ಭಾಗವಹಿಸುವದು ಕ್ರಮೇಣ ಕಡಿಮೆಯಾಯಿತು. ರಾಜಮನೆತನಕ್ಕೆ ಸೇರಿದ ಕೆಲವು ಸ್ತ್ರೀಯರು ರಾಜ್ಯವನ್ನು ಆಳಿದ ಹಾಗೂ ತಮ್ಮ ಶೌರ್ಯ ಸಾಹಸವನ್ನು ತೋರಿಸಿದ ಉದಾಹರಣೆಗಳಿದ್ದರೂ, ಸಾಮಾನ್ಯ ಸ್ತ್ರೀಯರಿಗೆ ರಾಜಕೀಯ ಆಡಳಿತೆಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ.

ಈ ರೀತಿಯಾಗಿ ವೇದಕಾಲದಲ್ಲಿ ಸ್ತ್ರೀಯು ಪುರುಷನಿಗೆ ಸರಿಸಮಾನಳು ಎಂದು ತಿಳಿದು, ಅವಳಿಗೂ ಎಲ್ಲ ಹಕ್ಕು ಬಾಧ್ಯತೆಗಳನ್ನು ಕೊಟ್ಟಿದ್ದ ವೈದಿಕ ಧರ್ಮ, ಕಾಲಕ್ರಮೇಣ ಅವಳಿಂದ ಒಂದೊಂದಾಗಿ ಹಕ್ಕನ್ನು ಕಸಿದು, ಅವಳನ್ನು ಕೀಳು ಸ್ಥಾನಕ್ಕೆ ತಳ್ಳಿತು. ಸ್ತ್ರೀಯು ದುರ್ಬಲಳು, ಪುರುಷರಿಗೆ ಸರಿಸಮಾನಳು ಎಂಬ ಭಾವನೆ ಸಮಾಜದಲ್ಲಿ ಬಲವಾಗಿ ಬೇರೂರಿತು.

ಬೌದ್ಧ ಧರ್ಮದ ದೃಷ್ಟಿಯಲ್ಲಿ ಸ್ತ್ರೀ

ಸರೋಜಿನಿ ಶಿಂತ್ರಿ

ಕ್ರಿ. ಪೂ. ಆರನೆಯ ಶತಮಾನದಷ್ಟೊತ್ತಿಗೆ ಉತ್ತರ ಹಿಂದೂಸ್ಥಾನದಲ್ಲಿ ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ಎಲ್ಲ ವಿಧಗಳಲ್ಲಿಯೂ ಎತ್ತಿ ಹಿಡಿಯುವ ಹಿಂದೂ ಧರ್ಮ ಪ್ರಚಾರದಲ್ಲಿ ಬಂದಿತ್ತು. ವರ್ಣಾಶ್ರಮಗಳು ಎಲ್ಲೆಡೆಯಲ್ಲಿಯೂ ಪುರಸ್ಕಾರವನ್ನು ಪಡೆದಿದ್ದವು. ವೇದಾಧ್ಯಯನವು ಬ್ರಾಹ್ಮಣರಿಗಷ್ಟೇ ಕಟ್ಟುನಿಟ್ಟಾಗಿ ಸೀಮಿತವಾಗಿತ್ತು. ಬ್ರಾಹ್ಮಣರೆಂದರೆ ಈ ಜಗತ್ತಿನ ದೇವರೆಂದು ಭಾವಿಸುವ ಕಾಲ ಒದಗಿ ಬಂದಿತ್ತು. ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು, ಅನೇಕ ಯಜ್ಞ–ಯಾಗಾದಿಗಳಿಗೆ, ಇಲ್ಲದ ಪ್ರಾಶಸ್ತ್ಯವನ್ನು ಅವರು ತಂದುಕೊಟ್ಟರು. ದೇವರ ಸಂತೃಪ್ತಿಗಾಗಿ ಅನೇಕ ಪಶುಗಳನ್ನೂ ಬಲಿಕೊಡುವುದು ನಿಯಮವಾಯಿತು. ಧರ್ಮದ ಹೆಸರಿನಲ್ಲಿ ಅನೇಕ ಅನಾಚಾರಗಳು ನಡೆದವು. ಉಪನಿಷತ್ಕಾಲದಲ್ಲಿದ್ದ ಚಿಕಿತ್ಸಕ ಬುದ್ಧಿಯನ್ನು ಪೂರ್ಣ ಹಾಳು ಮಾಡಿ, ಮೂಢನಂಬಿಕೆಗಳಿಗೆ ಆಸ್ಪದ ಕೊಡಲಾಯಿತು. ಧರ್ಮವೆಂದರೆ, ವೇದವನ್ನೋದಿದ ಬ್ರಾಹ್ಮಣರು ಹೇಳಿದಂತೆ ಆಚರಿಸುವುದು ಎಂಬ ಸ್ಥಿತಿಗೆ ಬಂದು ನಿಂತಿತ್ತು. ಇಂತಹ ಪರಿಸ್ಥಿತಿಯಲ್ಲಿ, ಕೆಲವಾದರೂ ಬುದ್ಧಿಜೀವಿಗಳು ಜೀವಿಸಿದ್ದುದು ಒಂದು ಸುದೈವ. ಧರ್ಮದ ಹೆಸರಿನಲ್ಲಿ ನಡೆದ ಈ ಡಾಂಭಿಕತನಕ್ಕೆ ವಿರೋಧ ಬಂದದ್ದು, ಉತ್ತರ ಹಿಂದೂಸ್ಥಾನದಲ್ಲಿ ನೆಲೆಸಿದ ಕೆಲವು ಕ್ಷತ್ರಿಯ ಜನಾಂಗದವರಿಂದ. ಈ ತಾತ್ವಿಕ ವಿರೋಧವೇ ಮುಂದೆ ಬೌದ್ಧ ಧರ್ಮಕ್ಕೆ ಜನ್ಮ ಕೊಟ್ಟಿತು. ಇದೇ ಸುಮಾರಿಗೆ ಮಹಾವೀರನ ಮೂಲಕ ಜೈನ ಧರ್ಮವೂ ಹೊಸ ಬಣ್ಣ ಪಡೆಯಿತು. ಈ ಎರಡೂ ಧರ್ಮಗಳ ಪ್ರವರ್ತಕರು ಕ್ಷತ್ರಿಯ ರಾಜಕುಮಾರರು. ಆಗ ಹಿಂದೂಸ್ಥಾನದ ಬಹುಭಾಗವನ್ನು ಆಳುತ್ತಿದ್ದ ಮೌರ್ಯವಂಶದ ಅಶೋಕ ಚಕ್ರವರ್ತಿಯು ಸ್ವತಃ ಬೌದ್ಧ ಧರ್ಮವನ್ನು ಸ್ವೀಕರಿಸಿದುದರಿಂದ, ಅದಕ್ಕೆ ಈ ದೇಶದಲ್ಲಿಯಷ್ಟೇ ಅಲ್ಲ, ಸಿಲೋನ್, ಜಾವಾ, ಸುಮಾತ್ರ, ಮಲಾಯಾ, ಕೋರಿಯಾ ಮತ್ತು ಚೀನಾ ದೇಶಗಳಲ್ಲಿಯೂ ಪುರಸ್ಕಾರ ದೊರೆಯಿತು. ಮುಂದೆ ಮುಸಲ್ಮಾನರ ದಾಳಿಯವರೆಗೂ ಈ ಧರ್ಮ ಹಿಂದುಸ್ಥಾನದಲ್ಲಿ ಊರ್ಜಿತಾವಸ್ಥೆಯಲ್ಲಿಯೇ ಇತ್ತು. ಉಳಿದೆಲ್ಲ ದೇಶಗಳಿಂದ ಬುದ್ಧನ ನಾಡಾದ ಈ ದೇಶಕ್ಕೆ ಬೌದ್ಧ ಭಿಕ್ಷುಕರು ಬರುವುದು, ಮತ್ತು ಇಲ್ಲಿಂದ

ಅವರು ಧರ್ಮ ಪ್ರಚಾರಕ್ಕಾಗಿ ಬೇರೆ ಬೇರೆ ದೇಶಗಳಿಗೆ ಹೋಗುವುದು ಎಷ್ಟೋ ವರ್ಷಗಳವರೆಗೆ ನಡೆದಿತ್ತು. ಬೌದ್ಧ ಧರ್ಮವು ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಮೇಲೆ ಅಂತೆಯೇ ಜನಜೀವನದ ಮೇಲೆ ಬಹಳಷ್ಟು ಪ್ರಭಾವ ಬೀರಿರುವುದು ನಿರ್ವಿವಾದವಾದ ಸಂಗತಿ. ಈ ಧರ್ಮದ ದೃಷ್ಟಿಯಲ್ಲಿ ಸ್ತ್ರೀಯರ ಸ್ಥಾನಮಾನಗಳೇನು ಎಂದು ವಿವೇಚಿಸಬಹುದು.

ಕಪಿಲವಸ್ತುವಿನ ರಾಜಕುಮಾರ ಸಿದ್ಧಾರ್ಥನೇ ಮುಂದೆ ಬುದ್ಧನೆಂಬ ಹೆಸರಿನಿಂದ ಬೌದ್ಧ ಧರ್ಮವನ್ನು ಸಂಸ್ಥಾಪಿಸಿದನು. ಅವನಿಗೆ ಹದಿನಾರು ವರ್ಷಕ್ಕೆ ದಂಡಪಾಣಿಯೆಂಬ ದಳಪತಿಯ ಮಗಳಾದ ಯಶೋಧರೆಯೊಂದಿಗೆ ಮದುವೆಯಾಯಿತು. ಅವಳಿಗೂ ಆಗ ಹದಿನಾರು ವರ್ಷ. ಅವರಿಗೆ ಒಬ್ಬನೇ ಮಗ ರಾಹುಲ. ರಾಹುಲನಿನ್ನೂ ಹಸುಳೆಯಾಗಿದ್ದಾಗಲೇ ಸಿದ್ಧಾರ್ಥನು ಮನೆ, ಹೆಂಡತಿ, ಮಗ. ಮತ್ತು ರಾಜ್ಯವನ್ನು ತ್ಯಜಿಸಿ, ಜ್ಞಾನಾರ್ಥಿಯಾಗಿ ಹೊರಟ.

ಹಿಂದೂ ಧರ್ಮವು ಪುರಸ್ಕರಿಸುತ್ತಿದ್ದ ಯಜ್ಞ–ಯಾಗಾದಿಗಳಲ್ಲಿ ಬುದ್ಧನಿಗೆ ವಿಶ್ವಾಸವಿರಲಿಲ್ಲ. ಅಂತೆಯೇ ಯಜ್ಞದಿಂದ ಪಾಪವನ್ನು ನೀಗಬಹುದೆಂದು ಆತ ನಂಬಿರಲಿಲ್ಲ. ಮನುಷ್ಯನ ಮೋಕ್ಷಕ್ಕಾಗಿ ಒಬ್ಬ ಪುತ್ರನಿರಲೇಬೇಕೆಂಬ ವಿಚಾರಕ್ಕೂ ಆತನ ಸಮ್ಮತಿಯಿರಲಿಲ್ಲ. ಹೆಚ್ಚಿನ ಜ್ಞಾನಾರ್ಜನೆಗೆ ಹೆಂಡತಿ, ಮಕ್ಕಳು, ಆತಂಕವೆಂದೇ ಆತನ ಸರ್ವಸಾಧಾರಣ ನಂಬಿಕೆಯಾಗಿತ್ತು. ಬ್ರಹ್ಮಚರ್ಯವು ಸಂಸಾರಜೀವನಕ್ಕಿಂತ ಕಠೋರವಾದದ್ದು, ಮತ್ತು ಶ್ರೇಷ್ಠವಾದದ್ದು ಎಂದು ಆತನ ಭಾವನೆ. ಸಂಸಾರಿಕರಾದವರು ನಿರ್ವಾಣವನ್ನು ಹೊಂದುವುದು ದುರ್ಲಭ. ಸ್ವತಃ ಬುದ್ಧನೇ ಮದುವೆಯಾದ ಒಂದು ವರ್ಷದ ತರುವಾಯ ಕಟ್ಟುನಿಟ್ಟಾದ ಬ್ರಹ್ಮಚರ್ಯವನ್ನು ಆಚರಿಸಿದನು. ಮದುವೆ ಮತ್ತು ಸಂಸಾರದ ವಿಷಯವಾಗಿ ಆತನ ವಿಚಾರಗಳು ಎಷ್ಟು ಕಠೋರವಾಗಿದ್ದುವೆಂಬುದು ಬೌದ್ಧ ಸಾಹಿತ್ಯದಲ್ಲಿ ಪ್ರಚಲಿತವಾದ ಒಂದು ಕತೆಯಿಂದ ಗೊತ್ತಾಗುತ್ತದೆ. ಸಂಗಮಜೀ ಎಂಬವನು ಮದುವೆಯ ತರುವಾಯ ಹೆಂಡತಿ ಮಕ್ಕಳನ್ನು ತೊರೆದು ಬೌದ್ಧ ಭಿಕ್ಷುಕರನ್ನು ಕೂಡಿಕೊಂಡನು. ಇದನ್ನು ಕೇಳಿ ದುಃಖಿತಳಾದ ಹೆಂಡತಿ, ಆತನ ಮನಸ್ಸೊಲಿಸಲು ಪ್ರಯತ್ನಿಸಿ ವಿಫಲಳಾಗಿ, ಕೊನೆಗೆ ಮಗುವನ್ನು ಅವನೆಡೆಗೆ ತೆಗೆದುಕೊಂಡು ಹೋಗುತ್ತಾಳೆ. ಆತ ಒಂದು ಗಿಡದ ಒಂದು ಅಡಿಯಲ್ಲಿ ತಪಸ್ಸು ಮಾಡುತ್ತ ಕುಳಿತಿದ್ದ. ಮಗುವನ್ನು ಆತನ ಎದುರಿಗೆ ಮಲಗಿಸಿ, "ಇಗೋ ಭಿಕ್ಷುಕನೇ, ಇಲ್ಲಿದೆ ನಿನ್ನ ಮಗು, ಅವನನ್ನು ಸಾಕಲು. ಅವನ ತಾಯಿಯನ್ನೂ ಸಹ" ಎಂದು ಹೇಳಿದಳು. ಧ್ಯಾನ ಮಾಡುತ್ತ ಕುಳಿತಿದ್ದ ಆ ಭಿಕ್ಷುಕನು ಆಕೆಯನ್ನಾಗಲೀ, ಮಗುವನ್ನಾಗಲೀ, ಕಣ್ಣೆತ್ತಿ ಕೂಡ ನೋಡಲಿಲ್ಲ. ಇದನ್ನು ನೋಡಿದ ಬುದ್ಧನು ಉಳಿದ ಭಿಕ್ಷುಕರನ್ನು ಕುರಿತು, "ಆಕೆ ಬಂದುದು ಆತನಿಗೆ ಆನಂದವಿಲ್ಲ, ಆಕೆ ಹೋದುದಕ್ಕೆ ಆತನಿಗೆ ದುಃಖವಿಲ್ಲ, ಅಂತಹ ರಾಗದ್ವೇಷಗಳಿಂದ ಮುಕ್ತನಾದವನನ್ನು ನಾನು ನಿಜ ಭಿಕ್ಷುಕನೆಂದು ಕರೆಯುತ್ತೇನೆ" ಎಂದು ಹೇಳಿದನು. ಮಕ್ಕಳನ್ನು ಹೆರೆಯುವುದರಲ್ಲಿ ಮನುಷ್ಯನ ಹಿರಿಮೆಯಿದೆ ಎಂದು ಆತ ತಿಳಿದಿರಲಿಲ್ಲ. ಪಶುಪ್ರಾಣಿಗಳಾದರೂ ಅದನ್ನು ಮಾಡಬಲ್ಲವು. ಯಾವನು ತನ್ನ ಮನಸ್ಸನ್ನು ತನ್ನ

ಅಧೀನದಲ್ಲಿಟ್ಟುಕೊಂಡು ಧ್ಯಾನಾಸಕ್ತನಾಗಬಲ್ಲನೋ, ಅವನು ಅಸಾಮಾನ್ಯ ಮನುಷ್ಯ. ಹೀಗೆ ಬುದ್ಧನಿಗೆ ಸಂಸಾರಿಕ ಜೀವನದ ಬಗ್ಗೆ ಅಷ್ಟೊಂದು ಮೆಚ್ಚುಗೆ ಇದ್ದಿರಲಿಲ್ಲ.

ಮಗ ರಾಹುಲ ಬೌದ್ಧಧರ್ಮ ಸ್ವೀಕರಿಸಿ ಭಿಕ್ಷುಕನಾದರೂ, ಬುದ್ಧನಿಗೆ ಆತ ಆನಂದನಂತೆ ತುಂಬ ವಿಶ್ವಾಸಿಕನಾಗಿರಲಿಲ್ಲ. ಬುದ್ಧ ಆತನಲ್ಲಿ ಯಾವ ಹೆಚ್ಚಿನ ಆಸಕ್ತಿಯನ್ನೂ ತೋರಿಸಲಿಲ್ಲ. ಬೌದ್ಧ ಸಂಘದಲ್ಲಿ ರಾಹುಲನು ಯಾವುದೇ ಮಹತ್ವದ ಸ್ಥಾನವನ್ನು ವಹಿಸಲಿಲ್ಲ. ಆತನನ್ನು ನೋಡಿದಾಗೊಮ್ಮೆ ಬುದ್ಧನಿಗೆ ತನ್ನ ಹಳೆಯ ವಿಲಾಸಿ ಜೀವನದ ನೆನಪಾಗಿ ತನ್ನನ್ನು ತಾನೇ ಹಳಿದುಕೊಳ್ಳುವ ಹಾಗೆ ಜಿಗುಪ್ಸೆಯು ಉಂಟಾಗುತ್ತಿತ್ತೋ ಏನೋ ಎಂದು ಅನಿಸುತ್ತದೆ. ಆತನಿಗಾಗಲಿ ಆತನ ಅನುಯಾಯಿಗಳಿಗಾಗಲಿ, ಮದುವೆ ಎಂದರೆ ಧಾರ್ಮಿಕ ಬಂಧನವೆಂಬುದರಲ್ಲಿ ನಂಬುಗೆಯಿರಲಿಲ್ಲ. ಅದು ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಒಂದು ಗಂಡು ಮತ್ತು ಒಂದು ಹೆಣ್ಣಿನ ನಡುವಿನ ಒಪ್ಪಂದ. ಅವರೀರ್ವರಲ್ಲಿ ಯಾರಿಗೂ ಸರಿ ಎನಿಸಿದಾಗ ಮದುವೆಯ ಸಂಬಂಧವನ್ನು ಮುರಿದು ಭಿಕ್ಷುಕರಾಗಬಹುದು. ಬೌದ್ಧ ಧರ್ಮದ ಊರ್ಜಿತ ಕಾಲದಲ್ಲಿ, ಹೀಗೆ ಅನೇಕ ಸ್ತ್ರೀ–ಪುರುಷರು, ಸಂಸಾರ ಜೀವನವನ್ನು ತ್ಯಜಿಸಿ ಭಿಕ್ಷುಕರಾದುದುಂಟು. ಈಗಲು ಬೌದ್ಧ ಧರ್ಮವು ಪ್ರಚಲಿತವಿರುವ ಏಶಿಯಾ ಖಂಡದ ಅನೇಕ ದೇಶಗಳಲ್ಲಿ ಹೀಗಾಗುವದುಂಟು.

ಸ್ತ್ರೀಯರ ವಿಷಯವಾಗಿ ಬುದ್ಧನು ಉಚ್ಚ ವಿಚಾರಗಳನ್ನಿಟ್ಟುಕೊಂಡಿರಲಿಲ್ಲವೆಂಬುದನ್ನು ಒಪ್ಪಿಕೊಳ್ಳಲೇಬೇಕು. ಭಿಕ್ಷುಕಿಯರ ಸಂಘವನ್ನು ಪ್ರಾರಂಭಿಸಲು ಆತನು ಮೊದಲು ಒಪ್ಪಲೇ ಇಲ್ಲ. ಸ್ವತಃ ಆತನ ಸಾಕು ತಾಯಿಯಾದ ಮಹಾಪ್ರಜಾಪತಿಯು ತನ್ನನ್ನು ಭಿಕ್ಷುಕಿಯನ್ನಾಗಿ ಸ್ವೀಕರಿಸಲು ಕೇಳಿಕೊಂಡಾಗ ಆತ ನಿಷ್ಠುರವಾಗಿ ನಿರಾಕರಿಸಿದ. ಆಕೆ ನಿರಾಶೆಯನ್ನು ಹೊಂದದೆ ಬುದ್ಧನ ಪ್ರಿಯ ಶಿಷ್ಯನಾದ ಆನಂದನ ಮೊರೆಹೊಕ್ಕಳು. ಆಕೆ ಕಪಿಲವಸ್ತುವಿನಿಂದ ವೈಶಾಲಿಯವರೆಗೆ ನಡೆಯುತ್ತ ಬಂದಿದ್ದರಿಂದ ಪಾದಗಳು ಬಬ್ಬಿ, ತೀರ ಆಯಾಸಗೊಂಡಿದ್ದರೂ, ಧ್ಯೇಯಕ್ಕೇನೂ ಚ್ಯುತಿ ಬಂದಿರಲಿಲ್ಲ. ಆನಂದನು ಆಕೆಯ ಪರವಾಗಿ ಮಾತನಾಡಲು ಪ್ರಾರಂಭಿಸಿದ ತಕ್ಷಣವೇ ಬುದ್ಧನು ಆದಾಗದು ಎಂದು ಹೇಳಿದ. ಆದ್ದರಿಂದ ನಿರಾಶನಾಗದೆ ಆನಂದನು ಬುದ್ಧನೊಂದಿಗೆ ವಾದಿಸುತ್ತ "ಹೆಣ್ಣು ಮಕ್ಕಳೂ ನಿರ್ವಾಣವನ್ನು ಹೊಂದಲು ಶಕ್ತರೆಂದು ತಾವೇ ಒಮ್ಮೆ ಹೇಳಿದ್ದುಂಟು" ಎಂದು ಕೇಳಿದಾಗ, ಬುದ್ಧನು "ಹೌದು ನಾನು ಹಾಗೆ ಅಂದದ್ದು ನಿಜ" ಎಂದು ಹೇಳಿದನು. "ಹಾಗಿದ್ದ ಪಕ್ಷದಲ್ಲಿ ನೀವು ನಿಮಗೆ ಉಣ್ಣಿಸಿ, ತಿನ್ನಿಸಿ ದೊಡ್ಡವನನ್ನಾಗಿ ಮಾಡಿದವಳನ್ನು ಭಿಕ್ಷುಕಿಯನ್ನಾಗಿ ಸ್ವೀಕರಿಸಲು ನಿರಾಕರಿಸುವುದು ಯೋಗ್ಯವೇ?" ಎಂದು ಕೇಳಿದ. ಈಗ ಬುದ್ಧನು ಆನಂದನ ಮಾತನ್ನು ಒಪ್ಪಲೇ ಬೇಕಾಯಿತು. ಆದರೂ ಆನಂದನಿಗೆ ಒಂದು ಎಚ್ಚರಿಕೆಯನ್ನು ಕೊಟ್ಟ: "ಈ ಹೆಣ್ಣುಮಕ್ಕಳನ್ನು ನಾವು ನಮ್ಮ ಸಂಘಕ್ಕೆ ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಈ ಧರ್ಮವು ಸಾವಿರಾರು ವರ್ಷಗಳ ವರೆಗೆ ಬಾಳಬಹುದಾಗಿತ್ತು. ಈಗ ಅದು ಐದುನೂರು ವರ್ಷಗಳವರೆಗೆ ಬಾಳುವದೂ ಕಷ್ಟ." ಆದರೆ ಬುದ್ಧನ ಭವಿಷ್ಯ ನುಡಿ ಸುದೈವದಿಂದ ಸುಳ್ಳಾಗಿದೆ. ೨೫೦೦ ವರ್ಷಗಳ ತರು

ನಾಯವೂ, ಬೌದ್ಧ ಧರ್ಮವು ಏಶಿಯಾ ಖಂಡದ ಕೆಲವು ದೇಶಗಳಲ್ಲಿ ಊರ್ಜಿತಾವಸ್ಥೆಯಲ್ಲಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ, ಸ್ತ್ರೀಯರ ವಿಷಯದಲ್ಲಿ ಬುದ್ಧನ ವಿಚಾರಗಳು ಯಾವ ರೀತಿಯಲ್ಲಿಯೂ ಪರಿವರ್ತನವಾಗಲಿಲ್ಲ. ಒಮ್ಮೆ ಆನಂದನು ಬುದ್ಧನನ್ನು ಕುರಿತು, ಬೌದ್ಧ ಭಿಕ್ಷುಕಿಯರೊಂದಿಗೆ ಹೇಗೆ ವರ್ತಿಸಬೇಕೆಂದು ಕೇಳಿದನು. ತಕ್ಷಣ ಬುದ್ಧನು "ಹೆಣ್ಣುಮಕ್ಕಳ ಕಡೆಗೆ ದೃಷ್ಟಿಯನ್ನು ಹರಿಸಲೇಬಾರದು" ಎಂದು ಉತ್ತರಿಸಿದನು. "ಅಕಸ್ಮಾತ ಅವರನ್ನು ನಾವು ನೋಡಿದ್ದೇ ಆದರೆ ಏನು ಮಾಡಬೇಕು" ಎಂದು ಆನಂದ ಕೇಳಿದಾಗ, "ಹಾಗಿದ್ದಲ್ಲಿ ಅವರೊಂದಿಗೆ ಮಾತನಾಡಬೇಡಿ", ಎಂದ ಬುದ್ಧ. "ಅವರಾಗಿಯೇ ನಮ್ಮನ್ನು ಮಾತನಾಡಿಸಿದರೆ ಏನು ಮಾಡಬೇಕು ?" ಎಂದಾಗ "ತುಂಬ ಎಚ್ಚರದಿಂದ ಇರಬೇಕು" ಎಂದು ಬುದ್ಧನು ಹೇಳಿದನು.

ಹೀಗೆ ಎಲ್ಲ ಧರ್ಮಗಳಂತೆ ಬೌದ್ಧ ಧರ್ಮವು ಸ್ತ್ರೀಯರು ಪುರುಷರಿಗಿಂತ ಕೀಳು ಎಂಬ ಭಾವನೆಯನ್ನು ಹೊಂದಿದ್ದರೂ ಅವರ ವಿಷಯದಲ್ಲಿ ಹೆಚ್ಚು ಉದಾರ ಭಾವನೆಯನ್ನು ತಳೆದಿದೆಯೆಂಬ ಅಂಶವನ್ನು ಯಾರಾದರೂ ಒಪ್ಪಲೇಬೇಕು. ವೇದಗಳ ಕಾಲದಲ್ಲಿ ಸ್ತ್ರೀ ವ್ಯಕ್ತಿತ್ವಕ್ಕೆ ಮಾನ್ಯತೆಯೇನೋ ಇತ್ತು. ಆದರೆ ಕಾಲಾಂತರದಿಂದ ಆಕೆಯನ್ನು ಗುರುತಿಸಿದುದು ತಾಯಿ ಅಥವಾ ಹೆಂಡತಿಯ ಪಾತ್ರಗಳಲ್ಲಿಯೇ. ಸ್ತ್ರೀಯೂ ವಿವಾಹಿತಳೇ ಇರಲಿ, ಅಥವಾ ಅವಿವಾಹಿತಳೇ ಇರಲಿ, ಆಕೆ ಸ್ವತಂತ್ರವಾಗಿ ಮೋಕ್ಷ ಪಡೆಯಬಹುದೆಂದು ಬೌದ್ಧಧರ್ಮವು ಪ್ರತಿಪಾದಿಸುತ್ತದೆ. ಅನೇಕ ಬೌದ್ಧ ಭಿಕ್ಷುಕಿಯರೇ ಇದಕ್ಕೆ ಸಾಕ್ಷಿ. ವೇದ ಕಾಲದ ಪೂರ್ವದಲ್ಲಿ ಬ್ರಹ್ಮವಾದಿನಿಯರು ಇದ್ದಂತೆ, ಬೌದ್ಧ ಧರ್ಮದ ಕಾಲಕ್ಕೆ ಥೇರಿಗಳು ಇದ್ದರು. ಬ್ರಹ್ಮವಾದಿನಿಯರಂತೆ ಇವರೂ ಅನೇಕ ಧಾರ್ಮಿಕ ಪದಗಳನ್ನು ಕಟ್ಟಿ ಹಾಡಿದ್ದಾರೆ. ಇವುಗಳಿಂದ ರಚಿಸಲ್ಪಟ್ಟ ಥೇರಿಗಾಥಾ ಎಂಬುದು ಬೌದ್ಧ ಸಾಹಿತ್ಯದ ಒಂದು ಅವಿಭಾಜ್ಯ ಅಂಗ. ಕೆಲವು ಪದಗಳು ಈ ಥೇರಿಗಳ ಜೀವನ ವಿಷಯಕ್ಕೆ ಸಂಬಂಧಿಸಿದವುಗಳಾಗಿವೆ. ಅಲ್ಲಿ ಅವರು ಸಾಂಸಾರಿಕ ಜೀವನವನ್ನು ತ್ಯಜಿಸಿದ್ದೇಕೆ, ಹೇಗೆ ಮತ್ತು ಧರ್ಮದಲ್ಲಿ ತಮಗೆ ಹೇಗೆ ಆಸ್ಥೆ ಉಂಟಾಯಿತು ಎಂಬ ವಿಷಯವನ್ನು ಬಹು ಸುಂದರವಾಗಿ ಹೇಳಿದ್ದಾರೆ. ಈ ಥೇರಿಗಳು ಆಗಿನ ಸಮಾಜದ ಎಲ್ಲ ಭಾಗಗಳಿಂದಲೂ ಬಂದವರಾಗಿದ್ದರು. ಅವರು ಬ್ರಾಹ್ಮಣರೇ ಆಗಿರಲಿ ಅಥವಾ ವೈಶ್ಯರೇ ಆಗಿರಲಿ, ಒಮ್ಮೆ ಬೌದ್ಧಧರ್ಮವನ್ನು ಸ್ವೀಕರಿಸಿದರೆ ಸಾಕು ಅವರನ್ನು ಥೇರಿಗಳೆಂದೇ ಗುರುತಿಸಲಾಗುತ್ತಿತ್ತೇ ವಿನಃ ಅವರ ಮೊದಲಿನ ಸ್ಥಿತಿಗಳಿಂದಲ್ಲ. ಆದ್ದರಿಂದ ಬೌದ್ಧಧರ್ಮವು ವರ್ಣಾಶ್ರಮದ ವಿರುದ್ಧ ತಾತ್ವಿಕವಾಗಿ ಹೋರಾಡಿ ಜಯಗಳಿಸಿತೆಂದೇ ಹೇಳಬೇಕು. ಕೆಲವು ಥೇರಿಗಳು ಅರಮನೆಯಿಂದ ಬಂದವರಾದರೆ, ಮತ್ತೆ ಕೆಲವರು ವೇಶ್ಯಾಗೃಹಗಳಿಂದ ಬಂದವರಾಗಿದ್ದರು. ತಾವು ಮಾಡಿದ ಪಾಪದ ಅರಿವು ಹೇಗಾಯಿತು; ಪಶ್ಚಾತ್ತಾಪಪಟ್ಟದ್ದು ಹೇಗೆ ಎಂದು ಕೆಲವರು ವಿವರಿಸಿದ್ದಾರೆ. ಸುಮೇಧಾ ಎಂಬ ಥೇರಿಯ ಗಾಥೆಯು ಎಲ್ಲಕ್ಕಿಂತಲೂ ಉದ್ದವಾಗಿದೆ. ಈಕೆ ಕ್ರೌಂಚ ಎಂಬ ರಾಜ್ಯದ ರಾಜಕುವರಿ. ಚಿಕ್ಕಂದಿನಿಂದಲೂ ಈಕೆಗೆ ಧಾರ್ಮಿಕ ಜೀವನದ ಕಡೆಗೆ ಸೆಳೆತ. ವಾರಣಾವತೀ ರಾಜ್ಯದ

ರಾಜಕುಮಾರನು ಈಕೆಯನ್ನು ವರಿಸಲು ಬಂದಾಗ, ಆತನನ್ನು ತಿರಸ್ಕರಿಸಿ, ತಂದೆ ತಾಯಿಗಳ ಅಪ್ಪಣೆಯನ್ನು ಪಡೆದು, ಬೌದ್ಧ ಭಿಕ್ಷುಕಿಯಾದಳು. ಇನ್ನೊಬ್ಬ ಭಿಕ್ಷುಕಿ ಇಶಿದಾಸಿಯ ಕತೆಯೇ ಬೇರೆ. ತನ್ನ ಅನೇಕ ಗಂಡಂದಿರಿಂದ ಸಿರಾಶೆ ಹೊಂದಿದವಳಾಗಿ, ಈಕೆ ಕೊನೆಗೆ ಬೌದ್ಧ ಭಿಕ್ಷುಕಿಯಾದಳು. ಸಕಲಗುಣ ಸಂಪನ್ನೆಯಾದರೂ, ಮೊದಲಿನ ಗಂಡ ಈಕೆಯನ್ನು ಪ್ರೀತಿಸಿದಾಗ ಈಕೆ ಎಲ್ಲರ ಅನುಮತಿಯನ್ನು ಪಡೆದು ಅವನಿಂದ ವಿವಾಹ ವಿಚ್ಛೇದನವನ್ನು ಪಡೆದಳು. ಎರಡನೆಯ ಮತ್ತು ಮೂರನೆಯ ಗಂಡಂದಿರೊಂದಿಗೂ ಅವಳಿಗೆ ಇದೇ ಅನುಭವವಾಯಿತು. ಕೊನೆಗೊಮ್ಮೆ ತಂದೆ ತಾಯಂದಿರು ಈಕೆಗೆ ಬೌದ್ಧ ಭಿಕ್ಷುಕಿಯಾಗಲು ಅನುಮತಿ ನೀಡಿದರು. ಇಶಿದಾಸಿಗೆ ಯಾವ ಕುಂದು-ಕೊರತೆಗಳೂ ಇರಲಿಲ್ಲವೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಆಕೆಯ ದುಃಖಕ್ಕೆ ಪುರುಷರ ಸ್ವಾರ್ಥಸಾಧಕತನ ಮತ್ತು ಮೂರ್ಖತನವೇ ಕಾರಣ. ತನ್ನ ಗಾಥಾದಲ್ಲಿ ಇಶಿದಾಸಿಯು ಪುರುಷರು ಹೇಗೆ ವಿಚಿತ್ರ ಸ್ವಭಾವದವರು ಇರುತ್ತಾರೆಂಬುದನ್ನು ವಿವರವಾಗಿ ಹೇಳಿದ್ದಾಳೆ.

ಹೀಗೆ ಅನೇಕ ಸ್ತ್ರೀಯರು-ರಾಜಕುಮಾರಿಯರು, ವಣಿಕ ಪುತ್ರಿಯರು, ಬ್ರಾಹ್ಮಣರ ಮಕ್ಕಳು ಮತ್ತು ವೇಶ್ಯೆಯರು ಬೌದ್ಧ ಧರ್ಮವನ್ನು ಸ್ವೀಕರಿಸಿ ಭಿಕ್ಷುಕಿಯಾದರು. ಅಶೋಕ ಚಕ್ರವರ್ತಿಯ ಮಗಳು ಸಂಘಮಿತ್ರಾ (ಈಕೆ ಚಕ್ರವರ್ತಿಯ ತಂಗಿಯೆಂದು ಕೆಲವು ಇತಿಹಾಸ ತಜ್ಞರು ಹೇಳುತ್ತಾರೆ) ಭಿಕ್ಷುಕಿಯಾದಳಷ್ಟೇ ಅಲ್ಲ, ಸಿಂಹಳ ದೇಶಕ್ಕೆ ಹೋಗಿ ಬೌದ್ಧ ಧರ್ಮವನ್ನು ಪ್ರಸಾರ ಮಾಡಿದಳು. ಈ ಭಿಕ್ಷುಕಿಯರು ಬರೆದಿಟ್ಟ ಗಾಥಾಗಳು ಬೌದ್ಧ ಧರ್ಮಕ್ಕಷ್ಟೇ ಅಲ್ಲದೆ, ಸಾಹಿತ್ಯಕ್ಕೂ ಸಹ ಮಹಾಕೊಡುಗೆಗಳಾಗಿವೆ. ವೇಶ್ಯೆಯರನ್ನೂ ಸಹ ಬೌದ್ಧಧರ್ಮ ಭಿಕ್ಷುಕಿಯರನ್ನಾಗಿ ಸ್ವೀಕರಿಸಿತೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಈ ಮೊದಲು ನೋಡಿದಂತೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅವರು ರಾಜಕೀಯ ದೃಷ್ಟಿಯಲ್ಲಿ ಸಮಾಜದ ಒಂದು ಮಹತ್ವದ ಅಂಗವೆಂದೇ ಭಾವಿಸಲ್ಪಟ್ಟಿದ್ದರು. ಬುದ್ಧನ ಕಾಲಕ್ಕೆ ಅವರ ಸ್ಥಾನಮಾನಗಳು ಹೆಚ್ಚಿದವೆಂದೇ ಹೇಳಬೇಕು. ಎಷ್ಟೋ ಸಲ ರಾಜ್ಯದ ಹಿರಿಯರು, ನೆರೆ ರಾಜ್ಯದ ಮುಖ್ಯ ಗಣಿಕೆಯರನ್ನು ಹೇಗೆ ಆಕರ್ಷಿಸಬೇಕೆಂದು ಆಲೋಚನೆಯನ್ನು ಕೂಡ ಮಾಡುತ್ತಿದ್ದರು. ಈ ಗಣಿಕೆಯರನ್ನು ಮತ್ತು ಅವರದಾದ ಉದ್ಯೋಗವನ್ನು ಯಾರೂ ತುಚ್ಛ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಇಲ್ಲಿ ಪ್ರಸಿದ್ಧ ವೇಶ್ಯೆ ಅಮ್ರಪಾಲಿಯ ಕತೆಯನ್ನು ಉದಾಹರಿಸಬಹುದು.

ಎಂಭತ್ತು ವರ್ಷದ ವೃದ್ಧನಾದ ಬುದ್ಧನು ವೈಶಾಲೀ ರಾಜ್ಯಕ್ಕೆ ಆಗಮಿಸಿದನು. ಬರುತ್ತಲೇ ಅವನಿಗೆ ಅಂಬಪಾಲಿಯಿಂದ ತನ್ನ ಮನೆಗೆ ಅತಿಥಿಯಾಗಿ ಬರಬೇಕೆಂದು ಆಮಂತ್ರಣವು ಬಂದಿತು. ಬುದ್ಧನು ಆಮಂತ್ರಣವನ್ನು ಸ್ವೀಕರಿಸಿದನು. ಈ ಸುದ್ದಿ ಮುಟ್ಟುತ್ತಲೇ ಆ ರಾಜ್ಯದ ದಳಪತಿಗೆ ಅಸಮಾಧಾನವಾಯಿತು. "ನಮ್ಮನ್ನು ಬಿಟ್ಟು, ಆ ಮಾವಿನ ಹಣ್ಣುಗಳನ್ನು ಮಾರುವ ಹುಡುಗಿ (ಅಂಬಾಪಾಲಿಯ ಹೆಸರಿನಲ್ಲಿ ಮಾವಿನ ಹಣ್ಣಿನ ದೊಡ್ಡ ತೋಪುಗಳಿದ್ದವು)ಯ ಮನೆಗೆ ಹೋಗಿ ಆಕೆಯ ಆತಿಥ್ಯವನ್ನು ಸ್ವೀಕರಿಸಬಹುದೇ ? ಎಂದುಕೊಂಡರು. ಬುದ್ಧನನ್ನು ಕಂಡು ಆ

ಆಮಂತ್ರಣವನ್ನು ತಿರಸ್ಕರಿಸಲು ಹೇಳಿದರು. ಬುದ್ಧನು ಅದಕ್ಕೆ ಒಪ್ಪದಾಗಲು, ಅಂಬಪಾಲಿಯು ಕಡೆಗೆ ಧಾವಿಸಿ, ಆಕೆಯೇ ತಾನು ಕೊಟ್ಟ ಆಮಂತ್ರಣವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡರು. ಆವಳೂ ಒಪ್ಪಲಿಲ್ಲ. ಬುದ್ಧನು ಆಕೆಯ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿ ಮುಂದೆ ನಡೆದನು. ಅಂಬಪಾಲಿಯೂ ಮುಂದೆ ಭಿಕ್ಕುಣಿಯಾಗುತ್ತಾಳೆನ್ನೋ ನಿಜ. ಆದರೆ ಬುದ್ಧನು ಆಕೆಗೆ ವೇಶ್ಯಾವೃತ್ತಿಯನ್ನು ಬಿಡಲು ಉಪದೇಶಿಸಿದ ಬಗೆಗೆ ಅಥವಾ ಆಕೆಯೇ ಪಶ್ಚಾತ್ತಾಪಪಟ್ಟು, ಆತನ ಕಾಲ ಮೇಲೆ ಬಿದ್ದು, ಬೌದ್ಧ ಧರ್ಮವನ್ನು ಸ್ವೀಕರಿಸಿದ ಬಗೆಗೆ ಯಾವ ಪ್ರಸ್ತಾಪವೂ ಇಲ್ಲ. ಬೌದ್ಧ ಧರ್ಮವು ಈ ವೇಶ್ಯೆಯರ ವಿಷಯವಾಗಿ ಉದಾರ ಭಾವನೆ ತಳೆದಿತ್ತೆಂದು ಹೇಳಬಹುದು. ಅದರರ್ಥ ವೇಶ್ಯಾವೃತ್ತಿಗೆ ಬುದ್ಧನ ಯಾವ ವಿರೋಧವೂ ಇರಲಿಲ್ಲವೆಂದಲ್ಲ. ಸಂಸಾರ ಜೀವನವನ್ನೇ ತಿರಸ್ಕಾರದಿಂದ ನೋಡಿದ ಬುದ್ಧನಿಗೆ ವಿಲಾಸೀ ಜೀವನವೆಂದಾದರೂ ರುಚಿಸಬಹುದೇ? ಬೌದ್ಧಧರ್ಮವು ಮೇಲು–ಕೀಳು ಎನ್ನದೆ ಸಮಾಜದ ಎಲ್ಲ ಜನರಿಗೂ ತನ್ನ ದ್ವಾರವನ್ನು ತೆರೆದು ಇಟ್ಟಿತ್ತು. ಆದುದರಿಂದಲೇ ಡಾ. ಅಂಬೇಡಕರರು, ತಮ್ಮ ಅನುಯಾಯಿಗಳಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಲು ಹೇಳಿದರೆಂಬುದನ್ನಿಲ್ಲಿ ಸ್ಮರಿಸಬಹುದು. ಬೌದ್ಧ ಧರ್ಮವನ್ನು ಸ್ವೀಕರಿಸಿದ ಎಲ್ಲ ಸ್ತ್ರೀಯರೂ ಭಿಕ್ಷುಕಿಗಳಾಗಲೇಬೇಕೆಂದು ಬುದ್ಧನು ಎಲ್ಲಿಯೂ ಹೇಳಿಲ್ಲ. ಅದು ಎಲ್ಲರಿಗೂ ಸಾಧ್ಯವಿಲ್ಲವೆಂಬುದನ್ನು ಆತ ತಿಳಿದವನಾಗಿದ್ದ. ನಿರ್ವಾಣ ಪದವಿಯನ್ನು ಪಡೆಯಬೇಕಾದರೆ ಕಠಿಣ ಸಾಧನೆ ಅವಶ್ಯ. ಕೆಲವರು ಸಂಸಾರದಲ್ಲಿ ಇದ್ದುಕೊಂಡೇ ಅತ್ತ ಕಡೆಗೆ ಒಲವನ್ನು ತೋರಿಸಬಹುದು. ಬೌದ್ಧ ಧರ್ಮವು ಸಾಮಾನ್ಯ ಜನರಿಗಾಗಿಯೇ ಇದೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದು. ಆದುದರಿಂದಲೇ ಬೌದ್ಧ ಸಾಹಿತ್ಯದಲ್ಲಿ ತಾಯ್ತನದ ಹೊಗಳಿಕೆಯೂ ಇದೆ. ತಾಯಿಯ ಹೆಗ್ಗಳಿಕೆಯೂ ಇದೆ. ಹಟಮಾರಿ ಹೆಂಡತಿಯ ತೆಗಳಿಕೆಯೂ ಇದೆ. ಒಮ್ಮೆ ಬುದ್ಧನು ಭಿಕ್ಷೆ ಬೇಡುತ್ತ, ಅನತ್ತ ಪಿಂಡಿಕಾನ ಮನೆಯ ಮುಂದೆ ನಿಂತಾಗ, ಒಳಗಿನಿಂದ ಚೀರಾಡುವ ಧ್ವನಿ ಕೇಳಿ ಬಂದಿತು. ಮನೆಯೊಡೆಯನನ್ನು ಕರೆದು ಅದಕ್ಕೆ ಕಾರಣವೇನೆಂದು ಕೇಳಿದಾಗ, ತನ್ನ ಸೊಸೆಯು ಕುಟುಂಬದ ಇತರ ಜನರೊಂದಿಗೆ ಜಗಳಾಡುತ್ತಿರುವಳೆಂದೂ, ಆಕೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಕಠಿಣವಾಗಿದೆಯೆಂದೂ ಪಿಂಡಿಕಾನು ಅಸಹಾಯಕನಾಗಿ ಹೇಳಿದನು. ಬುದ್ಧನು ಸೊಸೆ ಸುಜಾತೆಯನ್ನು ಮಾತನಾಡಿಸಿ ಕೆಲವು ಬುದ್ಧಿ ಮಾತುಗಳನ್ನು ಹೇಳಿದನು. ಆಗ ಆಕೆ ಕೈಮುಗಿದು "ನನ್ನ ಗಂಡನಿಗೆ ನಮ್ರ ಸೇವಕಿಯಾಗಿರುವೆ" ಎಂದು ಹೇಳಿದಳು. ಬುದ್ಧನ ಪ್ರಕಾರ ಹೆಂಡಂದಿರು ತಮ್ಮ ಪತಿಯ ಜೊತೆಗೆ ನಿಷ್ಠೆಯಿಂದ ನಡೆದುಕೊಳ್ಳಬೇಕಿತ್ತು. ಆದರೆ ಇದನ್ನು ಬ್ರಾಹ್ಮಣರ ಕಾಲದಲ್ಲಿ ಪ್ರಚಾರಕ್ಕೆ ಬಂದ ಕಟ್ಟುನಿಟ್ಟುಗಳಿಗೆ ಹೋಲಿಸುವದು ತಪ್ಪಾದೀತು. ಬೌದ್ಧ ಧರ್ಮವು ಸ್ತ್ರೀಗೂ ಒಂದು ವ್ಯಕ್ತಿತ್ವವಿದೆಯೆಂಬುದನ್ನು ಅನುಮೋದಿಸಿದೆ. ಇದು ಮಹತ್ವದ ವಿಷಯ.

○

ಜೈನ ದೃಷ್ಟಿಯಲ್ಲಿ ಸ್ತ್ರೀ

ಕಮಲಾ ಹಂಪನಾ

ಜೈನಧರ್ಮ ಭಾರತದ ಪುರಾತನ ಧರ್ಮಗಳಲ್ಲೊಂದು. ಮಾನವ ಜನ್ಮಕ್ಕೆ ಜೈನಧರ್ಮ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಜಗತ್ತಿನ ಮತ್ತಾವ ಧರ್ಮವೂ ಕೊಟ್ಟಿಲ್ಲ. ಮಾನವನ ಮಾತು ಹಾಗಿರಲಿ, ದೇವತೆಗಳೂ ಕೂಡ ಮುಕ್ತರಾಗಬೇಕಾದರೆ ಮಾನವರಾಗಿಯೇ ಹುಟ್ಟಬೇಕೆಂದು ಜಿನಧರ್ಮ ಸ್ಪಷ್ಟವಾಗಿ ಸಾರಿದೆ. ಮಾನವ. ಮುಕ್ತಿಯ ಮೊದಲ ಮೆಟ್ಟಲೆಂಬುದನ್ನು ಈ ಧರ್ಮ ದೃಢವಾಗಿ ನಂಬಿದೆ. ತೀರ್ಥಂಕರನಾಗಬೇಕಾದರೂ ಆತ ಮಾನವನ ಮೂಲಕವೇ ಹಾಯಬೇಕು.

ಹೀಗೆ ಮಾನವ ಜನ್ಮ ದೊಡ್ಡದೆಂದು ಲೋಕಕ್ಕೆ ಶ್ರುತಪಡಿಸಿದ ಈ ಜೈನ ಧರ್ಮದಲ್ಲಿ ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನಗಳು ಪರಿಭಾವನಾರ್ಹವಾದ ಗಹನ ವಿಚಾರವಾಗಿದೆ. ದಿಗಂಬರ ಹಾಗೂ ಶ್ವೇತಾಂಬರ ಎಂಬ ಎರಡು ಪ್ರಧಾನ ಜೈನಧರ್ಮದ ಶಾಖೆಗಳಿಂದ, ಕೆಲವು ಸ್ತ್ರೀ ಪಾತ್ರಗಳನ್ನು ಆರಿಸಿಕೊಂಡು ನನ್ನ ಈ ಲೇಖನವನ್ನು ನಿರೂಪಿಸಲು ತೊಡಗಿದ್ದೇನೆ.

ಜೈನಧರ್ಮದಲ್ಲಿ ಬಹಳ ಹಿಂದಿನಿಂದಲೂ ಮಹಿಳೆಯರಿಗೆ ವಿಶೇಷವಾದ ಮಹತ್ವವನ್ನೂ ಹೆಚ್ಚಿನ ಗೌರವವನ್ನೂ ಕೊಟ್ಟಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ ಒಂದೆರಡನ್ನು ಉಲ್ಲೇಖಿಸಬಹುದು. ಬೆಂಕಿ, ಆಕಸ್ಮಿಕ, ಲೂಟಿ ಮತ್ತು ದರೋಡೆ ಮುಂತಾದ ಸಂದರ್ಭಗಳಲ್ಲಿ ಮೊಟ್ಟ ಮೊದಲು ಮಹಿಳೆಯರನ್ನು ರಕ್ಷಿಸಬೇಕೆಂದು ಜೈನ ಧಾರ್ಮಿಕ ಗ್ರಂಥಗಳಲ್ಲಿ ಹೇಳಿಕೆಗಳಿವೆ. ತೀರ್ಥಂಕರರ ತಾಯಂದಿರಿಗೆ ಹೆಚ್ಚಿನ ಗೌರವ ಸಂದಿದೆ. ಜಿನನ ಜನನಿಯರು ತಮ್ಮ ಚಿಕ್ಕ ಮಕ್ಕಳಾದ ತೀರ್ಥಂಕರರನ್ನು ತೊಡೆಯ ಮೇಲೆ ಕೂಡಿಸಿಕೊಂಡಿರುವ ಕಲ್ಲಿನ ವಿಗ್ರಹಗಳನ್ನು ದೇಶದ ಹಲವು ಕಡೆಗಳಲ್ಲಿ ಕಾಣಬಹುದು. ಇಂಥ ವಿಗ್ರಹಗಳನ್ನು ಪೂಜಿಸುವುದೂ ಉಂಟು. ಈಗಲೂ ಆಬು, ಗಿರಿನಾರ, ಪಾಟನ್ ಮೊದಲಾದ ಕೆಲವು ಸ್ಥಳಗಳಲ್ಲಿ ಈ ಜಿನ-ಜನನಿಯರ ಮೂರ್ತಿಗಳಿಗೆ ವಿಶೇಷ ಪೂಜೆ ನಡೆಯುತ್ತದೆಂದು ತಿಳಿದು ಬರುತ್ತದೆ.

ಜೈನ ದಿಗಂಬರ ಸಂಪ್ರದಾಯದಲ್ಲಿ 'ಮಹಾಪುರಾಣ' ಮಾನ್ಯವಾದ ಪ್ರಮಾಣ ಗ್ರಂಥ. ಅದರ ಆಧಾರದಿಂದ, ಪುರುಷರಿಗೆ ಹೇಗೋ ಹಾಗೆಯೇ ಸ್ತ್ರೀಯರಿಗೂ

ಲೌಕಿಕ ವಿದ್ಯಾಭ್ಯಾಸವು ಅಗತ್ಯ ಎಂಬುದನ್ನು ಕಾಣಬಹುದು. ಮೊದಲನೆಯ ತೀರ್ಥಂಕರನಾದ ಋಷಭದೇವನು ಗೃಹಸ್ಥನಾಗಿದ್ದ ಕಾಲದಲ್ಲಿ, ತನ್ನ ಗಂಡುಮಕ್ಕಳಿಗೆ ವಿದ್ಯೆ ಕಲಿಸುವ ಮೊದಲು ತನ್ನ ಹೆಣ್ಣುಮಕ್ಕಳಿಗೆ ತಾನೇ ಅಕ್ಷರಗಳನ್ನೂ, ಗಣಿತವನ್ನೂ ಹೇಳಿಕೊಟ್ಟನಂತೆ. ಇಬ್ಬರು ಹೆಣ್ಣುಮಕ್ಕಳನ್ನು ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು

ಇದಂ ವಪುರ್ವಯಶ್ಚೇದಮಿದಂ ಶೀಲಮನೀದೃಶಂ |
ವಿದ್ಯಯಾ ಚೇದ್ವಿಭೂಷ್ಯೇತ ಸಫಲಂ ಜನ್ಮವಾಮಿದಂ ||
ವಿದ್ಯಾವಾನ್ ಪುರುಷೋಲೋಕೇ ಸಮ್ಮತಿಂ ಯಾತಿ ಕೋವಿದೈಃ |
ನಾರೀಚ ತದ್ವತೀ ಧತ್ತೇ ಸ್ತ್ರೀ ಸೃಷ್ಟೇರಗ್ರಿಮಂ ಪದಂ ||

"ನಿಮ್ಮ ಈ ಶರೀರವೂ ಈ ವಯಸ್ಸೂ ಅಸಮಾನವಾದ ಈ ಶೀಲವೂ ವಿದ್ಯೆಯಿಂದ ಅಲಂಕೃತವಾದರೆ ನಿಮ್ಮ ಈ ಜನ್ಮವು ಸಫಲವಾಗುತ್ತದೆ. ಲೋಕದಲ್ಲಿ ವಿದ್ಯಾವಂತನಾದ ಪುರುಷನು ವಿದ್ವಾಂಸರುಗಳಿಂದ ಸನ್ಮಾನ ಪಡೆಯುತ್ತಾನೆ. ಅದರಂತೆಯೇ ವಿದ್ಯಾವತಿಯಾದ ಸ್ತ್ರೀಯೂ ಸ್ತ್ರೀ ಸೃಷ್ಟಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆಯುತ್ತಾಳೆ."

ವಿಭುಃ ಕರದ್ವಯೇನಾಭ್ಯಾಂ ಲಿಖನ್ನಕ್ಷರ ಮಾಲಿಕಾಂ |
ಉಪಾದಿಶಲ್ಲಿಪಿಂ ಸಂಖ್ಯಾಸ್ಥಾನಂ ಚಾಂಕೈರನುಕ್ರಮಾತ್ ||

'ಪ್ರಭುವು (ಋಷಭನಾಥನು) ತನ್ನ ಎರಡು ಕೈಗಳಿಂದಲೂ ಅಕ್ಷರ ಮಾಲಿಕೆಯನ್ನು ಬರೆದು, ಆ ಮಕ್ಕಳಿಗೆ ಲಿಪಿಯನ್ನೂ, ಒಂದು ಎರಡು ಮೊದಲಾದ ಅಂಕಿಗಳಿಂದ ಕ್ರಮವಾಗಿ ಸಂಖ್ಯಾಸ್ಥಾನವನ್ನೂ ಉಪದೇಶ ಮಾಡಿದನು. ಹೀಗೆ ಗುರುವಿನ ಅನುಗ್ರಹದಿಂದ ವಿದ್ಯೆಗಳನ್ನು ನಿಃಶೇಷವಾಗಿ ವಶಪಡಿಸಿಕೊಂಡ ಆ ಇಬ್ಬರು ಕನ್ಯೆಯರೂ ಸರಸ್ವತಿಯ ಅವತಾರಕ್ಕೆ ಯೋಗ್ಯತೆಯನ್ನು ಪಡೆದರು.' ಹೀಗೆ ಋಷಭದೇವನು ತನ್ನ ನಲ್ಮೆಯ ಪುತ್ರಿಯರಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಮೊದಲು ಲೌಕಿಕ ವಿದ್ಯೆಯನ್ನು ಹೇಳಿಕೊಟ್ಟು, ಅನಂತರ ಭರತ, ಬಾಹುಬಲಿ ಮೊದಲಾದ ಪುತ್ರರಿಗೆ ಇತರ ವಿದ್ಯೆಗಳನ್ನು ಹೇಳಿಕೊಡುತ್ತಾನೆ. ಇದು ಆದಿ ತೀರ್ಥಂಕರನು ಹೆಣ್ಣಿಗೆ ಕೊಟ್ಟ ಪ್ರಥಮ ಸ್ಥಾನ.

ಲೌಕಿಕವಾದ ವಿದ್ಯೆಗಳಲ್ಲಿ ಮಾತ್ರವಲ್ಲದೆ ಪಾರಲೌಕಿಕವಾದ ವಿದ್ಯೆಗಳಲ್ಲಿಯೂ ಸ್ತ್ರೀಗೆ ಪುರುಷನಂತೆಯೇ ಗಣ್ಯವಾದ ಸ್ಥಾನವುಂಟು ಎಂಬುದನ್ನು ತೀರ್ಥಂಕರನ 'ಸಮವಸರಣ' ಎಂಬ ಧರ್ಮಸಭೆಯ ವರ್ಣನೆಯಿಂದ ತಿಳಿಯಬಹುದು. ಆ ಮಂಟಪದ ಮೂರನೆಯ ಕೋಷ್ಠಕದಲ್ಲಿ ಆರ್ಯಿಕೆಯರು ಮತ್ತು ನರಸ್ತ್ರೀಯರು ಇರುತ್ತಾರೆ. ಇವರಲ್ಲಿ ಆರ್ಯಿಕೆಯರು ಸನ್ಯಾಸ ಧರ್ಮವನ್ನು ಆಚರಿಸುತ್ತಾರೆ. ಆದರೆ ಅವರು ಒಂದು ಮಟ್ಟದವರೆಗೆ ಮಾತ್ರ ಆಚರಿಸಬಹುದು. "ಸ್ವಭಾವದಿಂದ ಊರ್ಧ್ವಗಾಮಿಯಾದ ಜೀವ ತನ್ನ ಸಂಸಾರಾವಸ್ಥೆಯಿಂದ ಮುಕ್ತಿ ಪದವನ್ನು ಮುಟ್ಟಬೇಕಾದರೆ ಅದು ಹದಿನಾಲ್ಕು ಗುಣಸ್ಥಾನಗಳೆಂಬ ಮೆಟ್ಟಿಲುಗಳನ್ನು ಏರಿ ದಾಟ

ಬೇಕು. ಆದರೆ ಸ್ತ್ರೀ ದೇಹವನ್ನು ಪಡೆದ ಜೀವ, ಆ ಸ್ತ್ರೀ ದೇಹಕ್ಕೆ ಸಂಬಂಧಿಸಿದ ಕೆಲವು ನೈಸರ್ಗಿಕ ಧರ್ಮಗಳಿಂದಾಗಿ, ತಾನು ಸಂಪೂರ್ಣ ದಿಗಂಬರಾಚಾರವನ್ನು ನಡೆಸಲಾರದು. ಆದ್ದರಿಂದ ಇಂಥ ಜೀವ ಐದನೆಯ ಗುಣಸ್ಥಾನದಿಂದ ಆಚೆ ಏರಲಾರದು. ಆದ್ದರಿಂದಲೇ ಮಾಘನಂದಿ ಆಚಾರ್ಯರು ತಮ್ಮ 'ಶಾಸ್ತ್ರಸಾರಸಮುಚ್ಚಯ' ಎಂಬ ಗ್ರಂಥದಲ್ಲಿ ಮೇಲಿನದನ್ನೆಲ್ಲ ಸ್ಪಷ್ಟಪಡಿಸಿ, ಸ್ತ್ರೀಯರಿಗೆ ಮೋಕ್ಷ ಸಾಧ್ಯವಾಗದೆಂದೂ ಸಹ ಹೇಳಿದ್ದಾರೆ. ಆದರೆ ಅನೇಕ ಸ್ತ್ರೀಯರು ಸನ್ಯಾಸ ಧರ್ಮವನ್ನು ಸ್ವೀಕರಿಸಿ ಸಲ್ಲೇಖನ ಮೊದಲಾದವುಗಳನ್ನು ಆಚರಿಸಿ ಸ್ವರ್ಗಾಗ್ರವನ್ನೇರಿದುದನ್ನು ನಾವು ಜೈನ ಸಾಹಿತ್ಯದಲ್ಲಿ ಕಾಣಬಹುದು. ಅಲ್ಲದೆ ಗಂಡಾಗಲಿ ಹೆಣ್ಣಾಗಲಿ, ಧರ್ಮದಲ್ಲಿ ಧರ್ಮದಂತೆ ಧರ್ಮದಿಂದ ನಡೆದವರನ್ನು ಆ ಧರ್ಮವೇ ರಕ್ಷಿಸುತ್ತದೆ ಎನ್ನುತ್ತದೆ ಜೈನಧರ್ಮ."

ದಿಗಂಬರ ಪಂಥದ ಪ್ರಕಾರ ಹೆಣ್ಣಿಗೆ ಮೋಕ್ಷ ಸಿದ್ಧಿಸದು ಎಂದು ಹೇಳಿದರೆ, ಶ್ವೇತಾಂಬರ ಪಂಥದ ಪ್ರಕಾರ ಅದೇ ಹೆಣ್ಣಿಗೆ ಮೋಕ್ಷ ಸಿದ್ಧಿಸಿದೆ, ಎಂದು ಹೇಳಿದ್ದಾರೆ. ಮೊದಲನೆಯ ತೀರ್ಥಂಕರನಾದ ಋಷಭನಾಥನು ಮುಕ್ತಿ ಪಡೆಯುವುದಕ್ಕೆ ಮೊದಲೇ ಆತನ ಕೇವಲ ಜ್ಞಾನೋತ್ಪತ್ತಿಯ ವೈಭವವನ್ನು ಕಂಡ ಮಾತ್ರದಿಂದಲೇ ಆತನ ತಾಯಿಯಾದ ಮರುದೇವಿ ತಾನೂ ಕೇವಲ ಜ್ಞಾನವನ್ನು ಪಡೆದು ಅದೇ ಕ್ಷಣದಲ್ಲಿಯೇ ದೇಹತ್ಯಾಗಮಾಡಿ, ಮುಕ್ತಿಯನ್ನು ಪಡೆದಳೆಂದು ಶ್ವೇತಾಂಬರರ ತ್ರಿಷಷ್ಟಿ ಲಕ್ಷಣ ಮಹಾಪುರುಷ ಚರಿತವು ಕೊಂಡಾಡುತ್ತದೆ.

ಈ ಪಂಥದಲ್ಲಿ ಹತ್ತೊಂಬತ್ತನೆಯ ತೀರ್ಥಂಕರರು 'ಮಲ್ಲಿ' ಎಂಬ ಒಬ್ಬ ಹೆಣ್ಣು ಮಗಳು. ಹೆಣ್ಣಿಗೆ ಎಂಥ ಉಚ್ಚಸ್ಥಾನ ದೊರಕಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನವಿಲ್ಲ. ತೀರ್ಥಂಕರತ್ವವನ್ನು ಪಡೆಯುತ್ತಿರುವ ಆ ಜೀವ ಹೆಣ್ಣು ಜೀವ. 'ಮಲ್ಲಿ' ಎಂಬ ಹೆಸರಿನ ರಾಜಕುಮಾರಿ. ಆಕೆಯ ಸೌಂದರ್ಯಕ್ಕೆ ಮರುಳಾಗಿ ದಂಡೆತ್ತಿ ಬಂದ ರಾಜಕುಮಾರರನ್ನು ಸಂದರ್ಶಿಸಿ, ಅವರಿಗೆ ದೇಹದ ನಶ್ವರತೆಯನ್ನು ಉಪದೇಶಿಸಿ, ತಾನೂ ಲೌಕಿಕದ ವಿಷಯದಿಂದ ಬಿಡುಗಡೆ ಹೊಂದಿ, ಅಜ್ಜಿಕೆಯಾದಳು. ಹಂತಹಂತವಾಗಿ ಸಿದ್ಧಿಯ ಮೆಟ್ಟಿಲನ್ನೇರಿ ತೀರ್ಥಂಕರತ್ವವನ್ನು ಪಡೆದಳು. ಜೈನ ಮಹಿಳೆಯ ಸಂಯಮ ಪೂರ್ಣವಾದ ಸ್ಥಿರ ಚಿತ್ರವನ್ನು ಇಲ್ಲಿ ಕಾಣಬಹುದು.

ದಿಗಂಬರ ಪಂಥದ ಪ್ರಕಾರ ಎಲ್ಲ ಸ್ತ್ರೀಯರಿಗೂ ಮೋಕ್ಷ ಉಂಟೆಂದು ವಾದಿಸುವುದಿಲ್ಲ. ಮುಕ್ತಿ ಕಷ್ಟ ಸಾಧ್ಯವಾದುದು. ಆದರೂ ಅದನ್ನು ಸ್ತ್ರೀಯರೂ ಸಾಧಿಸಬಲ್ಲರು ಎನ್ನುತ್ತಾರೆ. ಹೀಗೆ ಕಷ್ಟಸಾಧ್ಯವಾದುದನ್ನು ಸಾಧಿಸಿದವರಲ್ಲಿ ರಾಜೀಮತಿ ಪ್ರಸಿದ್ಧಳಾದವಳು. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥಸ್ವಾಮಿಯನ್ನು ಆಕೆ ಮದುವೆಯಾಗಬೇಕಿತ್ತು. ಆದರೆ ಮದುವೆಗೆ ಹೋಗುತ್ತಿದ್ದಾಗಲೇ, ನೇಮಿನಾಥನಿಗೆ ವೈರಾಗ್ಯ ಉದಯವಾಗಿ ಯತಿಯಾದನು. ರಾಜೀಮತಿಗೂ ಇದರಿಂದ ವೈರಾಗ್ಯ ಹುಟ್ಟಿತು. ಆಕೆಯೂ ಅಜ್ಜಿಕೆಯಾಗಿ ತನ್ನ ಪತಿಯನ್ನು ಹಿಂಬಾಲಿಸಿ ತಪಸ್ಸಿನಲ್ಲಿ ತೊಡಗಿದಳು. ಅವರೀರ್ವರನ್ನೂ ಹಿಂಬಾಲಿಸಿ, ತಾನೂ ತಪಸ್ಸಿಗೆ ನಿಂತ ನೇಮಿನಾಥನ ತಮ್ಮ ರತ್ನನೇಮಿ, ಆತ್ಮನಿಗ್ರಹ ಸಾಲದೆ ಅತ್ತಿಗೆಯಲ್ಲಿ ಆಸಕ್ತನಾದನು. ಆಗ

ರಾಜೀಮತಿ, ತನ್ನ ಮೈದುನನಿಗೆ ಧರ್ಮೋಪದೇಶಮಾಡಿ, ಆತನನ್ನು ತಿದ್ದಿದಳು. ತಾನೂ ಕಠಿಣ ತಪಸ್ಸುಮಾಡಿ ಮೋಕ್ಷಗಳಿಸಿದಳು. ಜೈನ ಧಾರ್ಮಿಕ ಗ್ರಂಥವಾದ ಉತ್ತರಾಧ್ಯಯನ ಸೂತ್ರದಲ್ಲಿ "ರಾಜೀಮತಿ–ರತ್ನನೇಮಿ" ಪ್ರಸಂಗ ಒಂದು ಸುಂದರ ಜಾನಪದ ಗೀತೆಯೆನಿಸಿದೆ. ಇದು ರಾಜೀಮತಿಯ ಪಾತಿವ್ರತ್ಯದ ಪೆಂಪನ್ನೂ, ಪರಿಶುದ್ಧ ಶೀಲದ ಹಿರಿಮೆಯನ್ನೂ ತೋರಿಸುತ್ತದೆ.

ಜೈನಧರ್ಮ ಗೃಹಸ್ಥ–ಗೃಹಿಣೀ, ಸನ್ಯಾಸಿ–ಸನ್ಯಾಸಿನಿ ಈ ನಾಲ್ಕು ಗುಂಪಿಗೂ ಹೆಚ್ಚಿನ ಮಹತ್ವ ಕೊಟ್ಟಿರುವುದಲ್ಲದೆ ಈ ಚತುರ್ವರ್ಣವನ್ನೂ ಪರಿಸಮಾನವಾಗಿ ಕಂಡಿದೆ. ಮಹಾವೀರನ ಸಮಕಾಲೀನಳೂ ಆತನ ಚಿಕ್ಕಮ್ಮನೂ ಆದ ಚಂದನಬಾಲೆ ಮಹಾವೀರನ ಮೊಟ್ಟ ಮೊದಲ ಸ್ತ್ರೀ ಅನುಯಾಯಿಯಾದಳು. ಆಕೆ ತನ್ನ ನೇತೃತ್ವ ದಲ್ಲಿ ಮುವ್ವತ್ತಾರು ಸಾವಿರ ಆರ್ಯಿಕೆಯರ ಸಂಘವನ್ನು ಸ್ಥಾಪಿಸಿ ಜೈನಧರ್ಮ ಪ್ರಚಾರಕ್ಕೆ ಹೊಸ ಶಕ್ತಿಯನ್ನು ತುಂಬಿದಳು. ಈ ಆರ್ಯಿಕೆಯರು ಕೇಶವಿಚ್ಛೇದನ ವನ್ನು ಮಾಡಿಕೊಳ್ಳಬೇಕಿತ್ತು. ಇವರಿಗೆ ಜೈನ ಧರ್ಮ ನಗ್ನತೆಯನ್ನು ವಿಧಿಸಿಲ್ಲ. ಬಿಳಿಯ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬಟ್ಟೆಗಳನ್ನು ಬಿಸಿಲಲ್ಲಿ ಒಣಗಿಸಬಹುದು. ಆದರೆ ನೀರಿನಲ್ಲಿ ಹಾಕಿ ಒಗೆಯಕೂಡದು ಎಂಬ ನಿಯಮಗಳಿದ್ದುವು. ಈ ಅಜ್ಜಿಕೆಯರಿಗೆ ಅನೇಕ ಶಿಷ್ಯ ಶಿಷ್ಯೆಯರಿದ್ದರು. ಬಹುಶಃ ಇವರಿಗೆ ಪ್ರತ್ಯೇಕ ಮಠಗಳಿದ್ದುವು. ವಿಕ್ರಮಪುರದ ಜಿನಾಲಯದಲ್ಲಿ ಅಜ್ಜಿಕೆಯರು ಇದ್ದಂತೆ ಶಾಸನಗಳಿಂದ ತಿಳಿದು ಬರುತ್ತದೆ. ತಮಿಳುನಾಡಿನಲ್ಲಿ ಕಂತಿಯರ ಸಂಘಗಳೇ ಇದ್ದು ಅನೇಕ ದೊಡ್ಡ ಮಠಗಳಿಗೆ ಪ್ರಧಾನಾಧಿಕಾರಿಗಳಾಗಿದ್ದರೆಂದು ತಿಳಿಯುತ್ತದೆ. ಕಂತಿ, ಆರ್ಯಿಕೆ, ಅಜ್ಜಿಕೆ, ಅಜ್ಜಿ, ಸನ್ಯಾಸಿನಿ, ಪರಿವ್ರಾಜಿಕೆ–ಹೀಗೆ ಜೈನ ಸನ್ಯಾಸಿನಿಯರನ್ನು ನಾನಾ ಪರ್ಯಾಯ ಶಬ್ದಗಳಿಂದ ಹೆಸರಿಸಿದ್ದಾರೆ. ಆದರೂ ಇವುಗಳಲ್ಲಿ ಕಂತಿ, ಅಜ್ಜಿಕೆ ಎಂಬುದೇ ಹೆಚ್ಚು ರೂಢಿಯಲ್ಲಿರುವ ರೂಪಗಳು. ಕೌಶಾಂಬಿಯ ದೊರೆ ಶತಾನೀಕನ ತಂಗಿಯಾದ ಜಯಂತಿ ಮಹಾವೀರನ ಉಪನ್ಯಾಸಗಳನ್ನು ಕೇಳುತ್ತಿದ್ದು ಆಧ್ಯಾತ್ಮಿಕ ಹಾಗೂ ಭೌತಿಕ ವಿಷಯಗಳನ್ನು ಚರ್ಚಿಸಿ, ತನ್ನ ರಾಜಭೋಗವನ್ನು ತ್ಯಜಿಸಿ ಅಜ್ಜಿಕೆಯಾದಳು.

ಹತ್ತನೆಯ ಶತಮಾನದ ಕನ್ನಡ ಗದ್ಯಗ್ರಂಥವಾದ ವಡ್ಡಾರಾಧನೆಯಲ್ಲಿ ಕಮಳಶ್ರೀ, ಬ್ರಹ್ಮಿಲೆ, ಗುಣಮತಿ, ಪ್ರಭಾವತಿ, ಸುದರ್ಶನ ಮೊದಲಾದ ಕಂತಿಯರ ಗುಣಗಾನವಿದೆ. ಸುಮಾರು ಕ್ರಿ. ಶ. ೭೦೦ರಲ್ಲಿ ರಚಿತವಾದ ಶ್ರವಣಬೆಳುಗೊಳದ ಶಾಸನ ೨೬ರಲ್ಲಿ ಸಸಿಮತಿಗಂತಿಯರು ಮುಡಿಪಿದ ವಿವರ ಹೀಗೆ ವರ್ಣಿತವಾಗಿದೆ :

ನೆಱೆವಾಗ ವ್ರತ–ಶೀಲ–ನೋಂಪಿ ಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ
ಕಱೆಯಿಲ್ ಸಲ್ತಪಧರ್ಮದಾ ಸಸಿಮತಿ ಶ್ರೀಗಂತಿಯರ್ ವಂದುಮೇಲ್
ಅಱಿದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಬ್ಬಪ್ಪಿನುಳ್
ತೊಱೆದಾರಧನೆನೋಂತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱಿದಾರ್

ಇದೇ ಶ್ರವಣಬೆಳುಗೊಳದ ೩೫ನೆಯ ಶಾಸನದಲ್ಲಿ (ಕಾಲ ೧೧೧೯) ವಿವಾ

ಕರಣಂದಿಯ ಶಿಷ್ಯೆ ಶ್ರೀಮತಿ ಗಂತಿಯರು ಸನ್ಯಸನ ವಿಧಿಯಿಂದ ಮುಡಿಪಿದರೆಂಬ ಸಂಗತಿಯನ್ನು ಸ್ವಾರಸ್ಯವಾಗಿ ನಿರೂಪಿಸಿದೆ :

ಆಮುನಿ ದೀಕ್ಷೆಯಂ ಕುಡೆ ಸಮಗ್ರತಪೋನಿಧಿಯಾಗಿ ದಾನಚಿಂ
ತಾಮಣಿಯಾಗಿ ಸದ್ಗುಣಗಣಾಗ್ರಣಿಯಾಗಿ ಮಯೂವಮ ಕ್ಷಮಾ ।
ಶ್ರೀಮುಖ ಲಕ್ಷ್ಮಿಯಾಗಿ ವಿನಯಾರ್ಣವ ಚಂದ್ರಿಕೆಯಾಗಿ ಸಂತತಂ
ಶ್ರೀಮತಿ ಗಂತಿಯರ್ ನೆಗಟ್ಟುರುರ್ವಿಯೊಳುರ್ವರೆ ಕೂರ್ತುಕೀರ್ತಿಸಲ್ ॥

ಅಂದಿನ ಜೈನ ಸಮಾಜದ ಮೇಲೆ ಯತಿಗಳಷ್ಟೇ ಈ ಸನ್ಯಾಸಿನಿಯರೂ ಗಾಢವಾದ ಪ್ರಭಾವವನ್ನು ಬೀರಿದರು; ಅವರ ವರ್ಚಸ್ವೀ ವ್ಯಕ್ತಿತ್ವ ಅನುಪಮವಾಗಿತ್ತು. ಜೈನ ಕಂತಿಯರಲ್ಲಿ ವಿದ್ಯೆ, ಬುದ್ಧಿವಂತಿಕೆ, ಪಾಂಡಿತ್ಯ, ಶೀಲಸಂವರ್ಧನೆ, ತ್ಯಾಗ-ಮೊದಲಾದ ಉದಾತ್ತಗುಣಗಳಿಂದ ಶೋಭಿತರಾದ ಎಷ್ಟೋ ಜನರ ವಿವರ ಸಿಗುತ್ತದೆ. ಸ್ಥೂಲಭದ್ರನ ಏಳುಮಂದಿ ಸಹೋದರಿಯರಾದ ಯಕ್ಷ ಮೊದಲಾದವರು ಅದ್ಭುತ ಜ್ಞಾಪಕಶಕ್ತಿಯ ಕುರುಹಾಗಿದ್ದರು. ಕ್ರಿ. ಶ. ೧ನೆಯ ಶತಮಾನದ ಆರ್ಯವ್ರಜನು ಆರು ವರುಷದ ಕಿಶೋರನಾಗಿರುವಾಗಲೇ ಜೈನ ಸನ್ಯಾಸಿಯರ ಬಳಿ ವಿದ್ಯಾಭ್ಯಾಸ ಮಾಡಿದನು. ಕಂತಿಯರ ಅನುಗ್ರಹದಿಂದ ಚೆನ್ನಾಗಿ ವಿದ್ಯೆಕಲಿತು ಹಿರಿಯ ವಿದ್ವಾಂಸನಾದನು.

ಆ ಸನ್ಯಾಸಿನಿಯರಲ್ಲೆಲ್ಲಾ ಯಾಕಿನಿ ಮಹತ್ತರಾ ಎಂಬವಳು ಮಹಾ ವಿದುಷಿ. ಹರಿಭದ್ರಸೂರಿ ಎಂಬ ಬ್ರಾಹ್ಮಣ ಪಂಡಿತನು ತನ್ನನ್ನು ವಾದದಲ್ಲಿ ಯಾರು ಸೋಲಿಸುವರೋ ಮತ್ತು ಯಾರ ಪ್ರವಚನವನ್ನು ಅರ್ಥಮಾಡಿಕೊಂಡು ವಿವರಿಸಲು ತನಗೆ ಅಸಾಧ್ಯವಾಗುವುದೋ ಅಂಥವರನ್ನು ತನ್ನ ಗುರುವೆಂದು ಒಪ್ಪಿಕೊಳ್ಳುವುದಾಗಿ ತಿಳಿಸಿದನು. ಜೈನ ಕಂತಿಯಾದ ಯಾಕಿನಿ ಮಹತ್ತರಾ ಅವನನ್ನು ವಾದದಲ್ಲಿ ಸೋಲಿಸಿ ಜೈನಧರ್ಮಕ್ಕೆ ಪರಿವರ್ತಿಸಿದಳು. ಭಾರತೀಯ ಸಾಹಿತ್ಯಕ್ಕೂ, ಜೈನ ಧರ್ಮಕ್ಕೂ, ದೊರೆತಿರುವ ಹರಿಭದ್ರಸೂರಿಯ ಕಾಣಿಕೆಯ ಮೌಲ್ಯವನ್ನು ಅರ್ಥಮಾಡಿಕೊಂಡರೆ, ಅಂತಹ ಘನ ಪಂಡಿತನನ್ನೂ ಸೋಲಿಸಿದ ಯಾಕಿನಿಯ ಪಾಂಡಿತ್ಯದ ಘನತೆಯನ್ನೂ ಔನ್ನತ್ಯವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಹರಿಭದ್ರಸೂರಿ ಸಂತೋಷದಿಂದ ಜೈನಧರ್ಮವನ್ನು ಸ್ವೀಕರಿಸಿದ್ದೇ ಅಲ್ಲದೆ ತನ್ನನ್ನು "ಯಾಕಿನಿ ಮಹತ್ತರಾಸೂನು" ಎಂದು ಕರೆದುಕೊಂಡಿದ್ದಾನೆ.

ಕ್ರಿ. ಶ. ೯೦೬ರಲ್ಲಿ ಸರಸ್ವತೀ ಪ್ರತೀಕದಂತಿದ್ದ ಸಿದ್ಧರ್ಷಿಯು, 'ಉಪಮಿತಭವ ಪ್ರಪಂಚ ಕಥಾ' ಎಂಬ ಗ್ರಂಥವನ್ನು ಕುರಿತು ಉಪನ್ಯಾಸ ಮಾಡಿದಾಗ ಆ ಅಲಂಕಾರ ಗ್ರಂಥದ ಮೊಟ್ಟಮೊದಲ ಪ್ರತಿಯನ್ನು ಸಿದ್ಧಗೊಳಿಸಿದವಳು ಗುಣಸಾಧ್ವಿ ಎಂಬ ಜೈನಕಂತಿ. ಇದರಂತೆ ಕ್ರಿ. ಶ. ೧೧೧೮ರಲ್ಲಿ ಸಿದ್ಧರಾಜ ಜಯಸಿಂಹನ ಕಾಲದಲ್ಲಿ ಮಹಾನಂದ ಶ್ರೀ ಮಹತ್ತರಾ ಮತ್ತು ಗಣಿನಿವೀರಮತಿ ಎಂಬ ಇಬ್ಬರು ಕಂತಿಯರು ಜಿನಭದ್ರನ 'ವಿಶೇಷಾವಶ್ಯಕ ಭಾಷಾ' ಎಂಬ ಗ್ರಂಥಕ್ಕೆ ವಿವರವಾದ ಟೀಕೆಯನ್ನು ಬರೆಯಲು ಹೇಮಚಂದ್ರನಿಗೆ ಬಹುವಾಗಿ ಸಹಾಯಮಾಡಿದರು. ಕ್ರಿ. ಶ. ೧೧೫೦ರಲ್ಲಿ

ಗುಣಸಮೃದ್ಧಿ ಮಹತ್ತರಾ ಎಂಬ ಕಂತಿ 'ಅಂಜನ ಸುಂದರೀ ಚರಿತ್ರ' ಎಂಬ ಪ್ರಾಕೃತ ಗ್ರಂಥವನ್ನು ರಚಿಸಿದಳು.

ಈವರೆಗೂ ಅಜ್ಜಿಕೆಯರಲ್ಲಿ ಕೆಲವರ, ಹಿರಿಯ ವ್ಯಕ್ತಿತ್ವವನ್ನು ಸ್ಥೂಲವಾಗಿ ಪರಿಶೀಲಿಸಿದ್ದಾಯಿತು. ಇನ್ನು ಮುಂದೆ ಶ್ರಾವಿಕೆಯರಾಗಿ ದಿನನಿತ್ಯ ಜೀವನದಲ್ಲಿ ತಮ್ಮ ಅಮೂಲ್ಯ ಗುಣ–ಶೀಲಗಳಿಂದ ತಮ್ಮ ಹೆಸರನ್ನು ಶಾಶ್ವತಗೊಳಿಸಿಕೊಂಡಿರುವ ಕೆಲವರನ್ನು ಪರಿಚಯಿಸಿಕೊಳ್ಳಬಹುದು. ಕ್ರಿ. ಶ. ಎರಡನೆಯ ಶತಮಾನದ 'ಶಿಲಪ್ಪದಿಗಾರಂ' ಎಂಬ ತಮಿಳು ಕಾವ್ಯದಲ್ಲಿ ಸ್ತ್ರೀಯರ ಪಾತಿವ್ರತ್ಯದ ಹಿರಿಯ ಉದಾಹರಣೆಯಾಗಿ ಕೆಲವು ಕತೆಗಳನ್ನು ಕೊಟ್ಟಿದೆ. ಅವುಗಳಲ್ಲಿ ದಕ್ಷಿಣ ಭಾಗದ ಸ್ತ್ರೀಯರ ಕತೆಗಳಲ್ಲಿ ಕನ್ನಗಿಯ ಕತೆ ಬರುತ್ತದೆ. ಈ ಕತೆ ಜೈನಸ್ತ್ರೀಯ ಅಕಳಂಕ ಪತಿಭಕ್ತಿ ಮತ್ತು ಪತಿನಿಷ್ಠೆಯನ್ನು ಸಾರುವುದಾಗಿದೆ. ಇಂದಿಗೂ ಆಕೆಯನ್ನು ತಮಿಳರು ಪತಿವ್ರತಾದೇವಿಯೆಂದು ಪೂಜಿಸುತ್ತಾರೆ. ಸಿಲೋನಿನಲ್ಲಿ 'ಪತ್ತಿನಿದೇವಿ' ಎಂಬ ಹೆಸರಿನಿಂದ ಪೂಜೆಯನ್ನು ಇಂದಿಗೂ ಸ್ವೀಕರಿಸುತ್ತಿದ್ದಾಳೆ.

ರಾಜತಂತ್ರ ನಿಪುಣೆಯರನ್ನೂ, ವೀರಮಹಿಳೆಯರನ್ನೂ ಜೈನಧರ್ಮ ಒಳಗೊಂಡಿದೆ. ಶೀಲಸಂಪನ್ನೆಯೂ ರಾಜತಂತ್ರಜ್ಞಳೂ ಆದ ಮೃಗವತಿಯ ಪೌರುಷ ಮೆಚ್ಚುವಂತದ್ದಾಗಿದೆ. ಉಜ್ಜಯಿನಿಯ ದೊರೆಯಾದ ಪ್ರದ್ಯೋತನು ಮೃಗಾವತಿಯನ್ನು ಅಪಹರಿಸಲು ಕೌಶಾಂಬಿಯನ್ನು ಮುತ್ತಿಗೆ ಹಾಕಿದನು. ಯುದ್ಧ ನಡೆಯುತ್ತಿದ್ದಾಗ ಮೃಗವತಿಯ ಪತಿ ಶತಾನೀಕ ಖಾಯಿಲೆಯಿಂದಾಗಿ ಮರಣಹೊಂದಿದನು. ಆದರೆ ಆಗ ರಾಜತಂತ್ರ ಚತುರೆಯಾದ ಮೃಗವತಿ ಪತಿಯನ್ನು ಕಳೆದುಕೊಂಡ ದುಃಖವನ್ನು ನುಂಗಿಕೊಂಡು ದೂರದೃಷ್ಟಿಯಿಂದ ರಾಜ್ಯದ ದೊರೆ ಅನಾರೋಗ್ಯದಿಂದ ಇರುವನೆಂದು ಮಾತ್ರ ಸುದ್ದಿ ಹಬ್ಬಿಸಿ, ತಾನೇ ಸೈನ್ಯದ ಮುಂದಾಳಾಗಿ ನಿಂತು, ಪ್ರದ್ಯೋತನನ್ನು ಗಡಿಯಿಂದ ಆಚೆಗೆ ಓಡಿಸಿದ ತರುವಾಯ ರಾಜ ಸತ್ತ ಸುದ್ದಿಯನ್ನು ಜನತೆಗೆ ತಿಳಿಸಿದಳು. ಆದರೆ ಆ ವೇಳೆಗೆ ಸೈನಿಕರಿಗೆ ಬಹಳ ಆಯಾಸವಾಗಿದ್ದುದರಿಂದ ತಮ್ಮ ಮೇಲೆ ನುಗ್ಗಿ ಬರುತ್ತಿದ್ದ ಪ್ರದ್ಯೋತನ ಸೈನ್ಯವನ್ನು ತಡೆಯಲಾಗಲಿಲ್ಲ. ಆಗಲೂ ಮೃಗವತಿ ತುಂಬ ಕುಶಲತೆಯಿಂದ ತನ್ನ ರಾಜಧಾನಿಯ ಸುತ್ತ ಬಲವಾದ ಕೋಟೆಯನ್ನು ಕಟ್ಟಿ ತನ್ನ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿದಳು. ಆಗ ತಾನು ಪ್ರದ್ಯೋತನ ಅಂತಃಪುರವನ್ನು ಪ್ರವೇಶಿಸುವುದಾಗಿ ಹೇಳಿಕಳುಹಿಸಿದಳು. ಆ ಒಪ್ಪಂದವಾದ ಮೇಲೆ ಅವಳು ಮಹಾವೀರನ ಸಭಾಮಂಟಪಕ್ಕೆ ಬಂದು, ಅಲ್ಲಿ ಕುಳಿತಿದ್ದ ಪ್ರದ್ಯೋತನ ಅಪ್ಪಣೆ ಪಡೆದು ಸನ್ಯಾಸಿನಿಯಾದಳು. ಪ್ರದ್ಯೋತನೂ ಮಹಾವೀರನ ಉಪದೇಶದ ಪ್ರಭಾವದಿಂದ ಪವಿತ್ರಾಂತಃಕರಣನಾಗಿ ತನ್ನ ಅಂತಃಪುರದ ಇನ್ನೂ ಹಲವು ಸ್ತ್ರೀಯರಿಗೆ ಮಹಾವೀರನಿಂದ ದೀಕ್ಷೆ ಕೊಡಿಸಿದನು.

ಕನ್ನಡನಾಡಿನಲ್ಲಿ ಜಿನಶಾಸನ ದೇವತೆಗಳಂತೆ ಬಾಳಿದ ಸಾವಿಯಬ್ಬೆ, ಜಕ್ಕಿಯಬ್ಬೆ, ಅಬ್ಬಕ್ಕದೇವಿ ಮೊದಲಾದ ಜೈನಸ್ತ್ರೀಯರ ಜೀವನವೂ ಮೃಗಾವತಿಯ ಜೀವನದಂತೆ ಉದ್ಬೋಧವಾಗಿದೆ. ಲೋಕವಿದ್ಯಾಧರನ ಮಡದಿಯಾದ ಸಾವಿಯಬ್ಬೆ ಪತಿಗೆ

ಸಹಕರಿಸಿ, ಸಾಹಸದಿಂದ ರಣರಂಗದಲ್ಲಿ ಶತ್ರುಗಳೊಡನೆ ಹೋರಾಡಿ ವೀರಸ್ವರ್ಗವನ್ನು ಪಡೆದ ಸಂಗತಿಯನ್ನು ಕನ್ನಡನಾಡಿನ ಶಾಸನಗಳು ಹೆಮ್ಮೆಯಿಂದ ಸಾರಿವೆ :

ಶ್ರಾವಕ ಧರ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸಂದ ರೇವತೀ
ಶ್ರಾವಕೀ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ ರೂಪಿನೊಳ್ ।
ದೇವಕಿ ತಾನೆ ಪೆಂಪಿನೊಳರುಂಧರೆ ತಾನೆ ಜಿನೇಂದ್ರ ಭಕ್ತಿ ಸ
ದ್ಭಾವದೆ ಸಾವಿಯಬ್ಬೆ ಜಿನಶಾಸನ ದೇವತೆ ತಾನೆ ಕಾಣಿರೆ ॥

ರಾಷ್ಟ್ರಕೂಟರ ದೊರೆ ಎರಡನೆಯ ಕೃಷ್ಣನ ಕಾಲದಲ್ಲಿ ನಾಗರಖಂಡ ಎಪ್ಪತ್ತಕ್ಕೆ 'ನಾಳ್ಗಾವುಂಡ' ನಾಗಿ ಆಳುತ್ತಿದ್ದ ನಾಗಾರ್ಜುನನು ಕಾಲಾತೀತನಾಗಲು ಆತನ ಪತ್ನಿಯು 'ನಾಳ್ಗಾವುಂಡ' ಪದವಿಯನ್ನು ಸ್ವೀಕರಿಸಿ ಬಹು ಸಾಮರ್ಥ್ಯದಿಂದ ರಾಜ್ಯಭಾರ ಮಾಡಿದಳು. ಚೆಲುವೆಯೂ ಧೀರೆಯೂ ಆದ ಅವಳ ಸಾಮರ್ಥ್ಯವನ್ನು ವರ್ಣಿಸುವ ಪದ್ಯ ಹೀಗಿದೆ : 'ಉತ್ತಮ ಪ್ರಭುಶಕ್ತಿಯುಕ್ತೆ ಜಿನೇಂದ್ರ ಶಾಸನ ಭಕ್ತೆ ಕಾಂತ್ಯಾತ್ತ ವಿಭ್ರಮೆ ಜಕ್ಕಿಯಬ್ಬೆ ಸಮಂತು ನಾಗರಖಂಡಮೆಪ್ಪತ್ತುಮಂ ವಧುವಾಗಿಯುಂ ನಿಜವೀರ ವಿಕ್ರಮಗರ್ಭದಿಂ ಪೆತ್ತಮಂ ಪ್ರತಿಪಾಲಿಸುತೊಸದಿರ್ದ್ದಳ್...." ಈಕೆಯು ಸ್ತ್ರೀಯಾಗಿದ್ದರೂ ಬಹು ಧೈರ್ಯದಿಂದ ನಾಡನ್ನು ಆಳಿದಳೆಂದು ಶಾಸನವು ಹೊಗಳುತ್ತದೆ. ಕಡೆಗೆ ಅವಳು ಈ ಪ್ರಾಪಂಚಿಕ ಸುಖದಿಂದ ವಿಮುಖಳಾಗಿ ಸಲ್ಲೇಖನ ವ್ರತವನ್ನು ಸ್ವೀಕರಿಸಿದಳು.

ವಿದೇಶೀಯರಾದ ಪೋರ್ಚುಗೀಸರನ್ನು ಹೊಡೆದೋಡಿಸಲೆತ್ನಿಸಿದ ೧೬ನೆಯ ಶತಮಾನದ ರಾಣಿ ಅಬ್ಬಕ್ಕದೇವಿ ಚೌಟರ ಚಿಗುರು, ಜೈನದೊರೆಯ ಮಡದಿ ಎಂಬುದನ್ನು ನೆನಸಿಕೊಂಡರೆ ರೋಮಾಂಚನವಾಗುತ್ತದೆ. ಹೀಗೆ ಜೈನ ಸಾಮಂತ ಮಹಿಳಾ ಶಾಸಕಿಯರಲ್ಲಿ ಬಂಗ ವಂಶದಲ್ಲಿ ಶಂಕರದೇವಿ (೧೩೬೪–೧೩೪೯), ತಿರುಮಲಾದೇವಿ (೧೫೮೨–೧೬೦೬) ಮತ್ತು ಜೈಲಂಗಡಿ ಮೂಲರ ವಂಶದಲ್ಲಿ ಸೋಮಲಾದೇವಿ ಮೊದಲಾದ ಜೈನ ಮಹಿಳೆಯರು ತುಂಬ ಪ್ರಸಿದ್ಧರು.

ಶಿವಮೊಗ್ಗ ಜಿಲ್ಲೆಯ ಹೊಂಬುಜವೆಂಬ ಸುಪ್ರಸಿದ್ಧ ಜೈನಕ್ಷೇತ್ರವನ್ನು ಸ್ಥಾಪಿಸಿದ ಜಿನದತ್ತರಾಯನ ವಂಶದವರು ಹಿರಣ್ಯಗರ್ಭನೆಂಬುವನ ಕಾಲದಲ್ಲಿ ಈಗಿನ ತೀರ್ಥಹಳ್ಳಿ ತಾಲ್ಲೂಕಿನ ಸಾಂತಳಿಗೆ ಎಂಬ ಪ್ರದೇಶವನ್ನು ವಶಪಡಿಸಿಕೊಂಡರು. ಅದರಿಂದ ಮುಂದೆ ಆ ವಂಶದವರಿಗೆ ಸಾಂತರ ವಂಶವೆಂದು ಹೆಸರು ಬಂದಿತು. ಈ ಹೆಸರಾಂತ ಸಾಂತರ ವಂಶದಲ್ಲಿ ಚಾಕಲದೇವಿ, ಕಾಳಲಾದೇವಿ ಮುಂತಾದ ಹಲವು ಜನ ವೀರ ಮಹಿಳೆಯರು ರಾಜ್ಯಭಾರ ಮಾಡಿದರು. ತುಂಬ ದಕ್ಷತೆಯಿಂದಲೇ ಈ ಜೈನ ಮಹಿಳೆಯರು ಆಳಿದುದಾಗಿ ಪ್ರತೀತಿಯಿದೆ. ಸಾಂತರವಂಶದ ಜೈನ ಸ್ತ್ರೀಯರು ರಾಜನೀತಿಯಲ್ಲಿ, ಸಾಹಿತ್ಯ ಸೇವೆಯಲ್ಲಿ ಸಾಕಷ್ಟು ಸುಪ್ರಸಿದ್ಧರು. ಅದರಲ್ಲಿಯೂ ವಿಶೇಷವಾಗಿ ವಿಕ್ರಮ ಸಾಂತರನ ಮಗಳಾದ ಚಂಪಾದೇವಿ ಎಂಬಾಕೆ ಪರಮಪಂಡಿತೆಯಾಗಿದ್ದಳೆಂದು ತಿಳಿದುಬರುತ್ತದೆ. ಅವಳಿಗೆ 'ಶಾಸನದೇವತೆ' ಎಂಬ ಬಿರುದೂ ಬಂದಿತ್ತು.

ತಾಯಿಯಾದವಳಿಗೆ ತನ್ನ ಮಗುವನ್ನು ತ್ಯಾಗಮಾಡುವುದು ಸುಲಭವಲ್ಲ. ಆದರೆ ಜೈನ ಮಹಿಳೆಯರು ಎಂಥ ತ್ಯಾಗಕ್ಕೂ ಸಿದ್ಧ. ಪಾಹಿನಿಯದು ಮಹಾತ್ಯಾಗ ಮಾಡಿದ ಉದಾತ್ತ ಪಾತ್ರ. ಜೈನಧರ್ಮದ ಗುರುವಾದ ಆಚಾರ್ಯ ಹೇಮಚಂದ್ರಾಚಾರ್ಯನನ್ನು ಪಾಹಿನಿ ಉದಾರವಾಗಿ ತ್ಯಾಗಮಾಡದಿದ್ದರೆ ಭಾರತಕ್ಕೆ ಅಂಥ ಒಬ್ಬ ವಿದ್ವಾಂಸ ತಪ್ಪಿಹೋಗುತ್ತಿದ್ದ.

ಉಳಿದ ಎಲ್ಲ ಧರ್ಮಗಳಿಗಿಂತ ಹೆಚ್ಚಾಗಿಯೇ ಜೈನಧರ್ಮ ಸ್ತ್ರೀಯರಿಂದ ಉಪಕೃತವಾಗಿದೆ. ಪೋಚಿಕಬ್ಬೆ ಎನ್ನುವವಳು ತನ್ನ ಸಮಸ್ತವನ್ನೂ ಜೈನಧರ್ಮಕ್ಕೆ ಮೀಸಲಿಟ್ಟು ಹಲವಾರು ಚೈತ್ಯಾಲಯಗಳನ್ನು ಮಾಡಿಸಿದಳು. ಅವಳ ಸಲ್ಲೇಖನ ವ್ರತವನ್ನು ನಿರೂಪಿಸುವುದು ರೋಮಾಂಚನವನ್ನು ತರುತ್ತದೆಂದು ಶಾಸನವು ವರ್ಣಿಸುತ್ತದೆ. ಅವರಲ್ಲಿ ಹಲವರು ಬಹು ಉದಾರಬುದ್ಧಿಯುಳ್ಳವರಾಗಿದ್ದರು. ಚಾಗಲದೇವಿ ಎಂಬಾಕೆಯು ಸ್ವತಃ ಜೈನಳಾಗಿದ್ದರೂ ಬಳ್ಳಿಗಾವೆಯಲ್ಲಿ ಚಾಗೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿ ಹಲವಾರು ಬ್ರಾಹ್ಮಣರಿಗೆ ಕನ್ಯಾದಾನ ಮೊದಲಾದ ದಾನಗಳನ್ನು ಮಾಡಿದಳೆಂದು ತಿಳಿಯುತ್ತದೆ.

ಬಸದಿ, ಕೆರೆ, ಕಟ್ಟೆ, ಕಲ್ಯಾಣಿಗಳನ್ನು ಕಟ್ಟಿಸುವುದು ಇಲ್ಲವೆ ಜೀರ್ಣೋದ್ಧಾರ ಮಾಡುವುದು, ಕವಿಗಳಿಗೆ ಆಶ್ರಯವಿತ್ತು ಮಹಾಕಾವ್ಯಗಳನ್ನು ಬರೆಸುವುದು, ಇಲ್ಲವೆ ಪ್ರತಿ ಮಾಡಿಸುವುದು ಜೈನ ಸ್ತ್ರೀಯರ ಅನುಕರಣೀಯವಾದ ಆದರ್ಶ ಗುಣವಾಗಿದೆ. ಜೈನಧರ್ಮ, ಜೈನ ಸಂಸ್ಕೃತಿ, ಕಲೆಗಳಲ್ಲಿ ಜೈನ ಮಹಿಳೆಯರಿಗೆ ಬಹಳ ಹಿಂದಿನಿಂದಲೂ ಆಸಕ್ತಿ ಇರುವುದು ಕಾಣುತ್ತದೆ. ಇಂಥವರ ಹಿರಿಮೆಯನ್ನು ಶಿಲಾಶಾಸನಗಳೂ, ಓಲೆಗರಿ ಗ್ರಂಥಗಳೂ ಇತರ ಸಾಹಿತ್ಯ ಕೃತಿಗಳೂ ಮುಕ್ತಕಂಠದಿಂದ ಹೊಗಳಿವೆ.

ದಕ್ಷಿಣ ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕದಲ್ಲಿ ಬಸದಿ ಕಟ್ಟಿಸಿದ, ಕಾವ್ಯ ಬರೆಯಿಸಿದ, ಗ್ರಂಥಗಳನ್ನು ಪ್ರತಿ ಮಾಡಿಸಿದ ಉಲ್ಲೇಖಗಳು ಉಪಲಬ್ಧವಾಗಿವೆ. ತಿಪಟೂರಿನ ಶಾಸನದಲ್ಲಿ ಸತಿಹರ್ಯಲೆ ಸಮಾಧಿ ವಿಧಿಯಿಂದ ಮುಡಿಪಿದ ಸನ್ನಿವೇಶವನ್ನು ಸ್ವಾರಸ್ಯವಾಗಿ ವರ್ಣಿಸಲಾಗಿದೆ. ಅವಳ ಬರವನ್ನು ಕೇಳಿ ಅಮರಾವತಿಪುರದ ದೇವಿ ಶಂಕುಲವು ಸಮೀಪಿಸಿ ನೂಪುರವನ್ನೂ ಮುತ್ತಿನ ಹಾರವನ್ನೂ ಕಟಕ ಕೇಯೂರ, ವಜ್ರದುಂಗುರ ಹಾಗೂ ಮಾಣಿಕ್ಯದ ಓಲೆಯನ್ನು ತೊಡಿಸಿ ತಾವು ತಂದ, ದೇವಲೋಕದ ವಿಮಾನವನ್ನು ಹತ್ತುವಂತೆ ಅವರು ಹರ್ಯಲೆಯನ್ನು ಪ್ರಾರ್ಥಿಸುತ್ತಾರೆ :

ಏಱಿ ವಿಮಾನಂ ಬರೆ ಸುರಾಂಗನೆಯರ್ ನಳಿತೋಳ ನುಣ್ಬೊಗರ್ |
ತೋಱುವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾಸಕಸ್ವನಂ ||
ಮೀಱಿಘನಾಘನಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ!
ಬೀಱಿ ವಿಲಾಸದಿಂ ಪಿಡಿದು ಚಾಮರಮಿಕ್ಕೆ ಸಮಂತು ಪೊಕ್ಕಳಾ |
ನೀಱೆ ಮಹಾನುಭಾವೆ ಸತಿ ಹರ್ಯಲದೇವಿ ಸುರೇಂದ್ರ ಲೋಕಮಂ ||

ಐದು ಸಾಲಿನ ಈ ವೃತ್ತ ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ವೃತ್ತವಾಗಿದೆ. ಇವರಲ್ಲಿ ನಿರೂಪಿತಳಾಗಿರುವ ಸತಿ ಹರ್ಯಲೆಯ ಜೀವನ ಒಂದು ಅಪೂರ್ವ ವೃತ್ತಾಂತವಾಗಿದೆ.

ಇದರಂತೆ ಶಾಂತಲಾದೇವಿ, ಅತ್ತಿಮಬ್ಬೆ, ಗುಂಡಮಬ್ಬೆ, ಸಾವಿಯಬ್ಬೆ, ಜಾಗಲದೇವಿ, ಚಟ್ಟಲದೇವಿ, ಬಾಚಲದೇವಿ, ಏಚಲೆ ಮೊದಲಾದ ಹತ್ತಾರು ಜನ ಶ್ರೇಷ್ಠ ಗುಣಸಂಪನ್ನರೂ ಸತೀಸಾಧ್ವಿಯರೂ ಆದ ಜೈನ ಸ್ತ್ರೀ ರತ್ನಗಳ ಬಾಳಿನ ಮಹೋನ್ನತಿಯನ್ನು ಕನ್ನಡನಾಡಿನ ಎಲ್ಲ ಭಾಗಗಳ ಶಿಲಾಶಾಸನಗಳೂ ಆಚಂದ್ರಾರ್ಕ ಸ್ಥಾಯಿಯಾಗಿ ಸಾರಿ ಹೇಳುತ್ತಿವೆ.

ಹತ್ತನೆಯ ಶತಮಾನದ ಪೂರ್ವಭಾಗದಲ್ಲಿದ್ದ ಚಾಲುಕ್ಯ ಚಕ್ರವರ್ತಿ ಎರಡನೆಯ ದಂಡನಾಯಕನಾದ ಮಲ್ಲಪ್ಪಯ್ಯನಿಗೆ ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬಿಬ್ಬರು ಹೆಣ್ಣುಮಕ್ಕಳಿದ್ದರು. ಮಲ್ಲಪ್ಪಯ್ಯ ವಿದ್ಯಾವಿಶಾರದನಾಗಿದ್ದನು. ಮಲ್ಲಪ್ಪಯ್ಯ ತನ್ನ ಈ ಹೆಣ್ಣುಮಕ್ಕಳಿಬ್ಬರನ್ನೂ ಚಾಲುಕ್ಯರ ಸೇನಾಧಿಪತಿಯಾಗಿದ್ದ ನಾಗದೇವನಿಗೆ ಕೊಟ್ಟು ಮದುವೆಮಾಡಿದನು. ಹೀಗಿರುವಾಗ, ಒಮ್ಮೆ ಕಾಳಗ ಒಂದರಲ್ಲಿ ನಾಗದೇವ ಮರಣಹೊಂದಿದನು. ಆಗ ಗುಂಡಮಬ್ಬೆ ತನ್ನ ಪತಿಯೊಡನೆ 'ಸತಿ' ಅಥವಾ ಸಹಗಮನ ಆಚರಿಸಿದಳು. ಜೈನ ಮಹಿಳೆ ಹೀಗೆ ಸಹಗಮನವನ್ನು ಆಚರಿಸುವುದು ಒಂದು ಅಪರೂಪ ಪ್ರಸಂಗವಾಗಿದೆ.

ಅತ್ತಿಮಬ್ಬೆ ತನ್ನ ಮಗ ಅಣ್ಣಿಗದೇವನನ್ನು ರಕ್ಷಿಸಲು 'ಸತಿ' ಆಚರಿಸದೆ ಉಳಿದಳು. ಅತ್ತಿಮಬ್ಬೆಗೆ ಬಾಲ್ಯದಿಂದಲೂ ಇದ್ದ ಜೈನಧರ್ಮದ ಆಸಕ್ತಿ-ಶ್ರದ್ಧೆ ದ್ವಿಗುಣಗೊಂಡಿತು. ಇಂದಿಗೆ ಸರಿಯಾಗಿ ಒಂದು ಸಾವಿರ ವರುಷದ ಹಿಂದೆ ಚಾಲುಕ್ಯ ರಾಜ್ಯದಲ್ಲಿ ಬಾಳಿ ಬೆಳಗಿದ ಮಹಾಸಾಧ್ವಿ ಅತ್ತಿಮಬ್ಬೆಯು ಭವ್ಯವಾದ ಬಾಳು ದಿವ್ಯವಾದ ಕಾವ್ಯವಾಗಿ ಮಹಾಕವಿ ರನ್ನನ ರಸದೊರತೆಯಾಗಿ ರೂಪಗೊಂಡಿದೆ, ಅವಳ ಪರಮ ಪವಿತ್ರವಾದ ಉದಾತ್ತ ಜೀವನದ ವಿವರಗಳು ಕವಿಯ ಪವಿತ್ರಾಂತಃಕರಣದಿಂದ ಹೊರಹೊಮ್ಮಿದೆ. ಆಕೆ ಕಾವ್ಯವನ್ನು ಬರೆಯದೆ ಇದ್ದರೂ ಮಹಾಕಾವ್ಯದ ಬಾಳನ್ನು ಬಾಳಿದಳು, ಬೆಳಗಿದಳು, ಆಳಿದಳು.

ಮಹಾಕವಿ ಪೊನ್ನನಿಂದ ರಚಿತವಾಗಿದ್ದ ಶಾಂತಿಪುರಾಣ ಕಾವ್ಯದ ಸಾವಿರ ಓಲೆ ಪ್ರತಿಗಳನ್ನು ಮಾಡಿಸಿ ಅವರ ಜೊತೆಗೆ ತೀರ್ಥಂಕರರ ಸಾವಿರ ಪ್ರತಿಮೆಗಳನ್ನೂ, ಆ ಪ್ರತಿಮೆಗಳನ್ನಿಡಲು ಸಾವಿರ ಮಂಟಪಗಳನ್ನೂ, ಸಾವಿರ ಜಯಘಂಟೆಗಳನ್ನೂ ಬಂಗಾರದಲ್ಲಿ ಮಾಡಿಸಿ ದಾನಮಾಡಿದಳು. ಇದರಿಂದ ದಾನಚಿಂತಾಮಣಿ ಅತ್ತಿಮಬ್ಬೆ ಎಂಬ ಶಾಶ್ವತ ಕೀರ್ತಿಗೆ ಪಾತ್ರಳಾದಳು. ಇದಲ್ಲದೆ ಮಹಾಕವಿ ರನ್ನನಿಂದ ಅಜಿತ ಪುರಾಣವನ್ನು ಬರೆಸಿದಳು. ರನ್ನ ತನ್ನ ಈ ಕಾವ್ಯದಲ್ಲಿ ಅತ್ತಿಮಬ್ಬೆಯ ಚರಿತವನ್ನು ಕುರಿತು 'ಅಳುರದು ಕೀರ್ತಿ ಮುಟ್ಟದು ವಿಷಾದ ಮಹಾಸತಿಯರ್ಗ ಮಂಡಲಂ ಬೆಳೆವುದು ಬೇಡಿದಂತೆ ಮಳೆಕೊಳ್ವುದೆನಿಪ್ಪ ಜಸಕ್ಕೆ ನೋಂತು ಭೂತಳಕ ಪವಿತ್ರೆಯುಂ ಗುಣಪವಿತ್ರೆಯನಾಸತಿಯುಂ ಮಹಾಸತಿತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ ॥ ಎಂದು ಮುಕ್ತಕಂಠದಿಂದ ಕೊಂಡಾಡಿದ್ದಾನೆ. ಈ ಕೊಂಡಾಟ

ಕೇವಲ ಕವಿಯ ಕೃತಜ್ಞತೆಯ ಕಾಣಿಕೆಯಷ್ಟೇ ಆಗಿರದೆ ಅತ್ತಿಮಬ್ಬೆಯ ಧವಳಕೀರ್ತಿಯನು ಸಾರುವ, ಅವಳ ಪರಮ ಪವಿತ್ರ ಶೀಲದ ಅಕಳಂಕತೆಯನ್ನು ಬಿತ್ತರಿಸುವ ಅನ್ಯಾದೃಶ ಜಯಘೋಷವಾಗಿದೆ. ಅತ್ತಿಮಬ್ಬೆ, ಜಗತ್ತಿನ ಸ್ತ್ರೀಯರ ಸಾಲಿನಲ್ಲಿ ಅಗ್ರಮಾನ್ಯಳಾಗಿ ಅಲಂಕರಿಸುವಾಕೆಯಾಗಿದ್ದಾಳೆ.

ಪ್ರಸಿದ್ಧ ಸೇನಾಧಿಕಾರಿ ಗಂಗರಾಜನ ಪತ್ನಿ ಅಕ್ಕಲೆ ವ್ಯಾಪಾರದಲ್ಲಿ ಸತ್ಯವಂತೆ, ಯುದ್ಧದಲ್ಲಿ ಜಯದೇವತೆಯಂತೆ ಇದ್ದಳು. ೧೧೨೦ರಲ್ಲಿ ಶ್ರವಣಬೆಳಗೊಳದಲ್ಲಿ ಜಿನಾಲಯವನ್ನು ಕಟ್ಟಿಸಿ, ಅನ್ನ, ವಸತಿ, ಔಷಧಿ ಮತ್ತು ವಿದ್ಯಾದಾನಗಳನ್ನು ಮಾಡಿದಳು.

ಹೊಯ್ಸಳ ವಿಷ್ಣುವರ್ಧನನ ಮಹಾರಾಣಿ ಶಾಂತಲಾದೇವಿ ಲಾವಣ್ಯವತಿಯೂ ನೃತ್ಯಪ್ರವೀಣೆಯೂ, ಲಲಿತ ಕಲೋಪಾಸಕಳೂ ಆಗಿದ್ದಳು. ಕ್ರಿ. ಶ. ೧೧೨೩ರಲ್ಲಿ ಈಕೆ ಶ್ರವಣಬೆಳಗೊಳದಲ್ಲಿ ಒಂದು ಬಸದಿ ಕಟ್ಟಿಸಿ, ಒಂದು ಉದ್ಯಾನವನ್ನು ಮಾಡಿಸಿ ಭಕ್ತಜನರ ನಿತ್ಯಪೂಜೆಗೋಸ್ಕರ ಒಂದು ಹಳ್ಳಿಯನ್ನೇ ದತ್ತಿಯಾಗಿ ಬಿಟ್ಟುಕೊಟ್ಟಳು. ಹತ್ತಾರು ಶಿಲಾಶಾಸನಗಳು ಈ ಜೈನ ಮಹಿಳೆಯಾದ ಶಾಂತಲಾದೇವಿಯು ಎಸಗಿದ ಜೈನಧರ್ಮದ ಪ್ರಚಾರ ಕಾರ್ಯವನ್ನು ಪ್ರಶಂಸಿಸಿವೆ. ವಿಷ್ಣುವರ್ಧನ ಮತ್ತು ಶಾಂತಲೆಯರ ದಾಂಪತ್ಯವು ಆದರ್ಶದ ಚರಮಸೀಮೆಯನ್ನು ಮುಟ್ಟಿದ್ದಿತು. ಅವಳ ಪತಿಭಕ್ತಿ ವಿಷ್ಣುವರ್ಧನನ ಸಂಪೂರ್ಣ ವ್ಯಕ್ತಿತ್ವವನ್ನೇ ಆವರಿಸಿತ್ತು. ಇದಕ್ಕೆ ನಿದರ್ಶನವಾಗಿ ಒಂದು ಪದ್ಯವನ್ನು ನೋಡಬಹುದು :

'ಸತತಂ ನೋಟಿಸ್ಪೊಡೆ ಲಕ್ಷ್ಮಿದೇವತೆ ರಣ ವ್ಯಾಪಾರದೊಳ್ ಷಟ್ಗಿದೇ !
ವತೆ ಬಿಣ್ಪಿಂದಮೆ ಭೂಮಿದೇವತೆ ಜನಕ್ಕೆಲ್ಲಂದದಿಂ ಪುಣ್ಯದೇ ।
ವತೆ ವಾಗ್ದೇವತೆ ವಿದ್ಯೆಯೊಳ್ ಸಕಲಕಾರ್ಯೋದ್ಯೋಗದೊಳ್ ಮಂತ್ರದೇ।
ವತೆ ನಾಥಂಗೆನೆ ಶಾಂತಿದೇವಿಯನದಿನ್ನೇವಣ್ಣಿಪಂ ಬಣ್ಣಿಪಂ ॥

ತುಂಬು ಯೌವನದಲ್ಲಿ, ತನ್ನ ಕೀರ್ತಿಯ ಪರಾಕಾಷ್ಠೆಯಲ್ಲಿ ಶಾಂತಲೆಯು ಸನ್ಯಸನವಿಧಿಯನ್ನು ಅಂಗೀಕರಿಸಿ ಪ್ರಾಣತ್ಯಾಗ ಮಾಡಿದಳು. ಅತ್ತಿಮಬ್ಬೆಯ ಕಾರ್ಯಕ್ಷೇತ್ರವು ಧರ್ಮವಾದರೆ, ಶಾಂತಲೆಯ ಕಾರ್ಯಕ್ಷೇತ್ರವು ಮುಖ್ಯವಾಗಿ ಕಲೆಯಾಗಿತ್ತು. ಒಬ್ಬಳು ಗಂಡನ ಸಾವಿನ ನಂತರ 'ಮಹಾಸತಿ'ಯಾದರೆ ಮತ್ತೊಬ್ಬಳು ಮುತ್ತೈದೆಯಾಗಿಯೇ ಮಹಾಸತಿಯಾದಳು.

ಹೊಯ್ಸಳ ಮನೆತನದ ಪ್ರಸಿದ್ಧ ಬಲ್ಲಾಳನ ಆಸ್ಥಾನವನ್ನು ಬೆಳಗಿಸಿದ ಕೀರ್ತಿ ಕಂತಿಯದು. ಈಕೆಯ ಅಸ್ತಿತ್ವದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಕಂತಿ ಮತ್ತು ನಾಗಚಂದ್ರನಿಗೆ ಆಗಾಗ್ಗೆ ಕಾವ್ಯ ವಿಚಾರದಲ್ಲಿ ಸ್ಪರ್ಧೆ ನಡೆಯುತ್ತಿತ್ತು. ಕಂತಿ-ಹಂಪರ ಸಮಸ್ಯೆಗಳು ಕನ್ನಡಸಾಹಿತ್ಯದಲ್ಲಿ ಸ್ವಾರಸ್ಯವಾದ ಭಾಗವಾಗಿದೆ. ಅನೇಕ ವರ್ಷಗಳಾದ ಮೇಲೆ ೧೫೬೦ರಲ್ಲಿ ಇದ್ದ ಬಾಹುಬಲಿಯೆಂಬ ಕನ್ನಡದ ಕವಿ ಕಂತಿಯನ್ನು ಕುರಿತು 'ಅಭಿನವ ವಾಗ್ದೇವಿ'ಯೆಂದು ಕರೆದು ಮುಕ್ತಕಂಠದಿಂದ ಹೊಗಳಿದ್ದಾನೆ.

ಹೀಗೆ ಜೈನ ಮಹಿಳೆಯರು ದಾನಿಗಳಾಗಿ, ಅನನ್ಯ ಪತಿಭಕ್ತೆಯರಾಗಿ, ಕಂತಿಯರಾಗಿ, ತ್ಯಾಗಿಗಳಾಗಿ, ಆದರ್ಶ ಮಾತೆಯರಾಗಿ, ಮತೋದ್ಧಾರಕರಾಗಿ, ಧರ್ಮ

ದೇವತೆಯರಾಗಿ, ಜಂಗಮ ಜಿನಶಾಸನದಂತೆ ಶೋಭಿಸಿ ಘನತೆ ಗೌರವಗಳಿಂದ ಲೋಕ ವಿಖ್ಯಾತರಾಗಿದ್ದಾರೆ. ಅವರ ಆದರ್ಶ ಗುಣಗಳ ಸಮೂಹ ಸಾರವನ್ನು ಕನ್ನಡದ ಕವಿಯೊಬ್ಬ ಹೀಗೆ ಬಣ್ಣಿಸಿದ್ದಾನೆ :

ಗುಣದೊಳ್ ರೂಪಿನೊಳ್ ಒಳ್ಪಿನೊಳ್ ಸೊಬಗಿನೊಳ್ ಶೃಂಗಾರದೊಳ್ ಸೌಮ್ಯ ಲ |
ಕ್ಷಣದೊಳ್ ಮೈಮೆಯೊಳ್ ಓಜೆಯೊಳ್ ವಿಭವದೊಳ್ ಶಿಲಂಗಳೊಳ್ ಭೃತ್ಯ ಪೋ |
ಕ್ಷಣದೊಳ್ ಭೋಗದೊಳಾರ್ಪಿನೊಳ್ ವಿಭೂತಿಯೊಳ್ ಕಾರುಣ್ಯದೊಳ್ ಪೋಲಿಸ |
ಲ್ಕೆಣೆಯಾರ್ ಗೆಲ್ವ ಜಿಡಂಗಿಗೆಂದನುದಿನಂ ವಿದ್ವಜ್ಜನಂ ಬಣ್ಣಿಕುಂ ||

ಆಧಾರ ಗ್ರಂಥಗಳು ಮತ್ತು ಲೇಖನಗಳು

೧. ಆದರ್ಶ ಜೈನ ಮಹಿಳೆಯರು : ವಿದ್ಯಾಭೂಷಣ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳು
೨. ಆದರ್ಶ ಜೈನ ಮಹಿಳೆಯರು : ಕಮಲಾ ಹಂಪನಾ
೩. ಜೈನಪುರಾಣಗಳಲ್ಲಿ ಭವಾವಳಿ : ಜಿ. ಪಿ. ರಾಜರತ್ನಂ
೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ॥ ಎಂ. ಚಿದಾನಂದ ಮೂರ್ತಿ
೫. ಕಂತಿಯರು (ಲೇಖನ) 'ಆರತಿ'–ಕಮಲಾಹಂಪನಾ
೬. ನುಡಿತೋರಣ (ಲೇಖನ) 'ದಾನ ಚಿಂತಾಮಣಿ'–ಕಮಲಾ ಹಂಪನಾ
೭. ಶಾಸನ ಪದ್ಯಮಂಜರಿ : ಆರ್. ನರಸಿಂಹಾಚಾರ್

○

ಕ್ರೈಸ್ತ ಧರ್ಮದಲ್ಲಿ ಸ್ತ್ರೀ

ಲೀಲಾ ಶಾಂತಕುಮಾರಿ

ಕ್ರೈಸ್ತ ಧರ್ಮದಲ್ಲಿ ಸ್ತ್ರೀಯು ಒಂದು ಗೌರವಸ್ಥಾನ ಪಡೆದಿದ್ದಾಳೆ. ಕ್ರೈಸ್ತರ ಧರ್ಮಗ್ರಂಥವಾದ ಸತ್ಯವೇದದಲ್ಲಿ ಆದಿಕಾಂಡದಿಂದ ಹಿಡಿದು ಪ್ರಕಟನೆ[1] ಗ್ರಂಥದವರೆಗೆ ನೋಡುವುದಾದರೆ ಸ್ತ್ರೀಯು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಮಹತ್ವವಾದ ಪಾತ್ರವಹಿಸಿದ್ದಳೆಂಬುದು ತಿಳಿದುಬರುತ್ತದೆ.

ಸತ್ಯವೇದದಲ್ಲಿ ಸ್ತ್ರೀಯ ಉತ್ಪತ್ತಿಯ ಬಗ್ಗೆ ಎರಡು ಹೇಳಿಕೆಗಳಿವೆ. ಒಂದು ಹೇಳಿಕೆಯ ಪ್ರಕಾರ—ದೇವರು ತನ್ನ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡಿ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಮತ್ತೊಂದು ಅಭಿಪ್ರಾಯದಂತೆ ಭೂಮಿಯನ್ನೂ, ಆಕಾಶವನ್ನೂ ಅವರಲ್ಲಿರುವ ಸಮಸ್ತವನ್ನು ಉಂಟುಮಾಡಿದ ದೇವರು ತನ್ನದೇ ಆದ ರೂಪದಲ್ಲಿ, ಮಣ್ಣಿನಿಂದ ಮನುಷ್ಯನನ್ನು ರೂಪಿಸಿ, ತನ್ನ ಉಸಿರಿನಿಂದ ಅವನಲ್ಲಿ ಜೀವ ತುಂಬಿ, ಅವನನು ಎಲ್ಲಾ ಪ್ರಾಣಿಗಳ ಮೇಲೆ ಒಡೆಯನನ್ನಾಗಿ ಮಾಡಿದನು. ಆದರೆ ಅವನಿಗೆ ತನ್ನ ಈ ಎಲ್ಲಾ ಸೃಷ್ಟಿಯಲ್ಲಿ ತಾನೇ ಸೃಷ್ಟಿಸಿದ ಈ ಮನುಷ್ಯನಿಗೆ ಸರಿಬೀಳುವ ಸಹಕಾರಿ ಕಾಣಿಸಲಿಲ್ಲ. ಆದ್ದರಿಂದ ಇವನಿಗೆ ಒಬ್ಬ ಸಂಗಾತಿಯನ್ನು ನಿರ್ಮಿಸಬೇಕೆಂದುಕೊಂಡು, ಆ ಮನುಷ್ಯನಿಗೆ ಗಾಢವಾದ ನಿದ್ರೆ ಬರಮಾಡಿ, ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ, ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯನ್ನಾಗಿ ಮಾಡಿದನು. ಹೀಗೆ, ನರನಿಂದ ಉತ್ಪತ್ತಿಯಾದ ಕಾರಣ ಸ್ತ್ರೀ ನಾರಿ ಎನ್ನಿಸಿಕೊಂಡಳೆಂಬುದು ತಿಳಿದುಬರುತ್ತದೆ. ಈ ಹೇಳಿಕೆಗಳಿಂದ, ಪುರುಷನಂತೆಯೇ ಸ್ತ್ರೀಯೂ ಕೂಡ ದೇವರಿಂದ ಸೃಷ್ಟಿಯಾದಳೆಂಬುದು ಸ್ಪಷ್ಟವಾಗುತ್ತದೆ.

"ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂ"ಬುದು ದೇವರು ತನ್ನ ಜನರಿಗೆ ನೀಡಿದ ದಶಾಜ್ಞೆಗಳಲ್ಲಿ ಒಂದಾಗಿದೆ. ಅನಂತರದ ಕಾಲದಲ್ಲೂ ಈ ಕಟ್ಟಳೆ ನಾರಿ

---

1. ಸತ್ಯವೇದದಲ್ಲಿ ಹಳೆಯ ಒಡಂಬಡಿಕೆ (Old Testament) ಮತ್ತು ಹೊಸ ಒಡಂಬಡಿಕೆ (New Testament) ಗಳೆಂಬ ಎರಡು ಭಾಗಗಳಿದ್ದು, ಇವು ಅನೇಕ ಪುಸ್ತಕಗಳನ್ನೊಳಗೊಂಡಿವೆ. ಇವರಲ್ಲಿ ಆದಿಕಾಂಡ ಎಂಬುದು ಮೊದಲನೆಯ ಪುಸ್ತಕವಾದಂತೆ ಪ್ರಕಟನೆ ಗ್ರಂಥವು ಸತ್ಯವೇದದ ಕಡೆಯ ಪುಸ್ತಕವಾಗಿದೆ.

ಯಲ್ಲಿದ್ದು (ಮತ್ತು ಈಗಲೂ ಇದೆ) ಕಂಡು ಬರುತ್ತದೆ. ಮಗನು ತಂದೆ ತಾಯಿಗಳ ಮಾತನ್ನು ಮೀರಿ ಸ್ವೇಚ್ಛೆಯಾಗಿ ನಡೆದು ತಪ್ಪಿನಲ್ಲಿ ಸಿಕ್ಕಿಬಿದ್ದರೆ, ತಂದೆ ತಾಯಿಗಳು ಅಂಥ ಮಗನನ್ನು ಶಿಕ್ಷಿಸುತ್ತಿದ್ದರು, ಆದರೂ ಅವರ ಮಾತನ್ನು ಮೀರಿ ಅವನು ನಡೆಯುತ್ತಿದ್ದರೆ ಅವರು ಅವನನ್ನು ಊರ ಹಿರಿಯರ ದಂಡನೆಗೆ ಗುರಿಯಾಗುತ್ತಿದ್ದನು. ಅಂಥವನನ್ನು ಊರ ಹೊರಗೆ ಒಯ್ದು ಕಲ್ಲೆಸೆದು ಅವನನ್ನು ಕೊಲ್ಲಬೇಕೆಂಬುದು ಆಗಿನ ಕಾಲದ ಒಂದು ಕಟ್ಟಳೆಯಾಗಿತ್ತು. ಇದರಿಂದ ತಂದೆಯ ಸ್ಥಾನದಷ್ಟೇ ತಾಯಿಯ ಸ್ಥಾನವೂ ಗೌರವಕ್ಕೆ ಪಾತ್ರವಾಗಿತ್ತೆಂದು ವಿಶದವಾಗುತ್ತದೆ.

ಮನೆಯ ಕೆಲಸ ಹಾಗೂ ಮಕ್ಕಳ ಪಾಲನೆ, ಪೋಷಣೆ, ಮಹಿಳೆಯ ಆದ್ಯ ಕರ್ತವ್ಯವಾಗಿತ್ತು. ಮಗು ಹುಟ್ಟಿದ ನಂತರ, ಸೂತಕದ ದಿನವನ್ನು ಕಳೆದುಕೊಂಡು ಅವಳು ಮಗುವನ್ನು ದೇವಾಲಯಕ್ಕೆ ಒಯ್ದು ಅಲ್ಲಿ ಅರ್ಚಕರಿಂದ ಅದನ್ನು ಶುದ್ಧಿಗೊಳಿಸುವದರಿಂದ ಹಿಡಿದು ಮಗುವಿನ ವಿದ್ಯಾಭ್ಯಾಸ ಹಾಗೂ ಅದನ್ನು ದೈವಭಕ್ತಿಯಲ್ಲಿ ನಡೆಸುವ ಹೊಣೆಗಾರಿಕೆ ಅವಳು ಹೊತ್ತಿದ್ದಳು.

ಧಾರ್ಮಿಕ ಕೂಟಗಳಿಗೆ ಹೋಗಲು ಅವಳಿಗೆ ಯಾವ ತೆರನಾದ ಅಡ್ಡಿ ಆತಂಕಗಳು ಇರಲಿಲ್ಲ. ಯಜ್ಞಗಳನ್ನು ಸಮರ್ಪಿಸುವಾಗ ಸ್ತ್ರೀಯು ತನ್ನ ಪತಿಗೆ ಸಹಾಯಕಳಾಗಿರುತ್ತಿದ್ದಳು. ಮತ್ತು ತನ್ನನ್ನು ತಾನು ದೇವರಿಗೆ ಪ್ರತಿಷ್ಠೆ ಪಡಿಸಿಕೊಳ್ಳುವ ಅವಕಾಶ ಸ್ತ್ರೀಗಿತ್ತು. (ಪ್ರತಿಷ್ಠೆಪಡಿಸಿಕೊಳ್ಳುವುದು ಎಂದರೆ– ಆಗಿನ ಕಾಲದಲ್ಲಿ ಹಲವು ಪುರುಷರು ದೇವರಿಗೆ ತಮ್ಮನ್ನು ಮೀಸಲಾಗಿಸಿಕೊಳ್ಳುತ್ತಿದ್ದರು. ಅಂಥವರು ಹಲವು ನಿಯಮಗಳನ್ನು ಅಂದರೆ ಮದ್ಯಪಾನ, ದ್ರಾಕ್ಷಾರಸಪಾನ ಮತ್ತು ಇನ್ನೂ ಇತರ ನಿಯಮಗಳನ್ನೂ ಪಾಲಿಸುತ್ತಿದ್ದರು. ಅದೇ ಪ್ರಕಾರ ಸ್ತ್ರೀಯರಿಗೂ ತಮ್ಮನ್ನು ತಾವು ದೇವರಿಗೆ ಪ್ರತಿಷ್ಠೆಪಡಿಸಿಕೊಳ್ಳುವ ಅವಕಾಶವಿತ್ತು.)

ಮದುವೆಯ ವಿಚಾರದಲ್ಲಿಯೂ ಸ್ತ್ರೀಗೆ ಸಾಕಷ್ಟು ಸ್ವಾತಂತ್ರ್ಯವಿದ್ದಿತೆಂದು ತಿಳಿದು ಬರುತ್ತದೆ. ಉದಾ : ಅಬ್ರಹಾಮ ಎಂಬುವನು, ತನ್ನ ಮಗನಾದ ಈಸಾಕ ಎಂಬುವವನಿಗೆ, ತನ್ನ ಸ್ವದೇಶದಿಂದ, ಹೆಣ್ಣನ್ನು ತರಬೇಕೆಂಬ ಇಚ್ಛೆಯುಳ್ಳವನಾಗಿದ್ದು ಈ ಕಾರ್ಯಕ್ಕಾಗಿ ಎಲಿಯಾಜರ ಎಂಬುವನನ್ನು ಕಳುಹಿಸಿದನು. ಅವನು ಅಬ್ರಹಾಮನ ಸ್ವಂತ ದೇಶಕ್ಕೆ ಹೋಗಿ ಅಲ್ಲಿ ಅಬ್ರಹಾಮನ ಹತ್ತಿರದ ಸಂಬಂಧಿಯೇ ಆಗಿದ್ದ ರೆಬೆಕ್ಕ ಎಂಬವಳನ್ನು ತನ್ನ ಒಡೆಯನ ಮಗನಿಗಾಗಿ ಆರಿಸಿಕೊಳ್ಳುವುದರಲ್ಲಿ ಯಶಸ್ವಿಯಾದನು. ಮತ್ತು ಆ ಹುಡುಗಿಯ ತಂದೆ ತಾಯಿಗಳಲ್ಲಿ ತನ್ನ ಇಚ್ಛೆಯನ್ನು ಪ್ರಸ್ತಾಪಿಸಿದಾಗ ಅವರು ಸಂತೋಷದಿಂದ ಈ ಮದುವೆಗೆ ತಮ್ಮ ಒಪ್ಪಿಗೆಯನ್ನಿತ್ತರು. ಆದರೆ ಮರುದಿನವೇ ಎಲಿಯಾಜರನು ಹೊರಟು ನಿಂತಾಗ ಅವರಿಗೆ ಮಗಳನ್ನು ಅಷ್ಟು ಬೇಗ ಅಗಲುವ ಮನಸ್ಸಿರಲಿಲ್ಲ. "ಇನ್ನೂ ಎಂಟು ಹತ್ತು ದಿನ ಮಗಳು ನಮ್ಮಲ್ಲಿರಲಿ" ಎಂದರು. ಅದಕ್ಕೆ ಅವನು ಒಪ್ಪಲಿಲ್ಲ. ತನ್ನ ಒಡೆಯನಿಗೆ ಈ ವಿಚಾರ ತಿಳಿಸುವ ಕಾತರವನ್ನು ವ್ಯಕ್ತಪಡಿಸಿ ತನ್ನನ್ನು ಅವರು ತಡೆಯಬಾರದೆಂದೂ ಕೇಳಿಕೊಂಡನು. ನಿರುಪಾಯರಾದ ರೆಬೆಕ್ಕಳ ತಂದೆ ತಾಯಿಗಳು ಮಗಳ ಇಂಗಿತವನ್ನು ಕೇಳಿದಾಗ ಅವರಿಗೆ ರೆಬೆಕ್ಕಳಿಗೆ ಹೋಗುವದಕ್ಕೆ ಸಮ್ಮತಿ ಇದೆ ಎಂದು ತಿಳಿಯಿತು. ಆಗ ಅವರು

ಅವಳಿಗೆ ಕೊಡಬೇಕಾದುದನ್ನು ಕೊಟ್ಟು ದಾಸಿಯರ ಜೊತೆಗೆ ಆಕೆಯನ್ನು ಕೂಡಿಸಿ ಎಲಿಯಾಜರನ ಸಂಗಡ ಕಳುಹಿಸಿಕೊಟ್ಟರು.

ವಿಧವಾ ವಿವಾಹಕ್ಕೆ ಸಮ್ಮತಿ ಇದ್ದಿತು. ಮಕ್ಕಳಿಲ್ಲದ ಸ್ತ್ರೀ, ಆಸ್ತಿಗೆ ತಾನೇ ಹಕ್ಕುದಾರಳಾಗುತ್ತಿದ್ದಳು. ಒಮ್ಮೊಮ್ಮೆ ಮಕ್ಕಳಾಗದಿದ್ದಲ್ಲಿ ಪತ್ನಿ ತನ್ನ ದಾಸಿಯರನ್ನು ಪತಿಗೆ ಒಪ್ಪಿಸಿ ಅವಳಿಂದ ಮಕ್ಕಳನ್ನು ಪಡೆಯುತ್ತಿದ್ದರು. ಉದಾ : ಸಾರಾ ಎಂಬವಳು ಬಹಳ ಕಾಲದವರೆಗೆ ತನಗೆ ಮಕ್ಕಳಾಗದೆ ಹೋದುದರಿಂದ ತನ್ನ ದಾಸಿಯಾದ ಹಾಗರ ಎಂಬವಳನ್ನು ತನ್ನ ಪತಿಗೆ ಒಪ್ಪಿಸಿದುದು ಕಂಡುಬರುತ್ತದೆ. ಆದರೆ ಈ ರೀತಿ ಮಾಡುವುದರಿಂದ ಪತ್ನಿಯ ಸ್ಥಾನಕ್ಕೆ ಯಾವ ಧಕ್ಕೆಯೂ ಇರಲಿಲ್ಲವೆಂದು ಹೇಳಬಹುದು.

ಇಷ್ಟೆಲ್ಲಾ ಸ್ವಾತಂತ್ರ್ಯವಿದ್ದರೂ ಸ್ತ್ರೀ ಸಮಾಜದ ನಿಯಮಗಳಿಗನುಗುಣವಾಗಿ ನಡೆಯಬೇಕಾಗಿತ್ತು. ಲಜ್ಜಾಹೀನಳಾಗಿ ನಡೆದುಕೊಂಡಲ್ಲಿ ಶಿಕ್ಷೆಗೆ ಗುರಿಯಾಗುತ್ತಿದ್ದಳು. ಅದೇ ರೀತಿ ಮದುವೆಯಾದ ಸ್ತ್ರೀ ವ್ಯಭಿಚಾರಿಣಿ ಎಂದು ತಿಳಿದು ಬಂದಲ್ಲಿ ಅಂಥವಳನ್ನು ಊರ ಹೊರಗೆ ಒಯ್ಯು ಕಲ್ಲೆಸೆದು ಕೊಲ್ಲಲಾಗುತ್ತಿತ್ತು. ಅದರಂತೆ ಅವಿವಾಹಿತ ಹುಡುಗಿಯ ಮೇಲೆ ವ್ಯಭಿಚಾರಿಣಿ ಎಂಬ ಮಿಥ್ಯಾಪವಾದ ಹೊರಿಸಿದವರು ದಂಡನೆಗೆ ಪಾತ್ರರಾಗುತ್ತಿದ್ದರು. ಮತ್ತು ಅವಳನ್ನು ಬಲಾತ್ಕರಿಸಿದವರಿಗೆ ಶಿಕ್ಷೆ ತಪ್ಪುತ್ತಿರಲಿಲ್ಲ.

ಆಗಿನ ಕಾಲದಲ್ಲಿ ಗುಲಾಮ (ಅಥವಾ ಬಿಟ್ಟಿದುಡಿಯುವ) ಪದ್ಧತಿ ಇದ್ದಿತೆಂದು ತಿಳಿದು ಬರುತ್ತದೆ. ಅಂಥ ಗುಲಾಮರಲ್ಲಿ ಸ್ತ್ರೀಯರೂ ಇರುತ್ತಿದ್ದರು. ಅವರು, ಪುರುಷರಂತೆ, ಸಬ್ಬತ್ ದಿನ (ಅಂದರೆ ಪವಿತ್ರದಿನವಾದ ಏಳನೆಯದಿನ) ದಂದು ವಿಶ್ರಾಂತಿ ಪಡೆಯುತ್ತಿದ್ದರು. ಒಮ್ಮೊಮ್ಮೆ ಅಂಥ ಗುಲಾಮರನ್ನು ಮಾರುವ ಪದ್ಧತಿ ಇದ್ದಿತು. ಅಂಥವರು, ಒಂದು ಅವಧಿ (ಅಂದರೆ ಮೂರು ಅಥವಾ ಐದು ವರ್ಷ) ಮುಗಿದ ನಂತರ ಪುರುಷರಂತೆಯೇ ಬಂಧ–ಮುಕ್ತರಾಗುತ್ತಿದ್ದರು.

ಆ ಕಾಲದಲ್ಲಿ ರಾಜಕೀಯ, ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ ಹಲವು ಮಹಿಳೆಯರನ್ನು ಇಲ್ಲಿ ಸ್ಮರಿಸಬಹುದು. ಉದಾ : ಮೇಲೆ ಹೇಳಿದ ಸಾರ ಎಂಬವಳು. ಇವಳು ಅಬ್ರಹಾಮನೆಂಬ ಪ್ರತಿಷ್ಠಿತ ಪುರುಷನ ಪತ್ನಿಯಾಗಿದ್ದಳು. ವಿಧೇಯತೆಗೆ ಹೆಸರಾದ ಇವಳು ಪತಿಯಂತೆ ದೈವಭಕ್ತಳಾಗಿದ್ದಳಲ್ಲದೆ ಪತಿಗೆ ಅನೇಕ ವಿಧವಲ್ಲಿ ಸಹಾಯಕಳಾಗಿದ್ದಳು.

ದೈವಭಕ್ತಿಯಲ್ಲಿ ನಡೆದು ದೇವರ ಕೃಪೆಗೊಳಗಾದ ಹಲವು ಪ್ರವಾದಿನಿಯರಿದ್ದರು. ಉದಾ : ಮಿರಿಯಾಮ ಎಂಬವಳು. ಈಕೆ ಮೋಶೆ ಮತ್ತು ಆರೋನ ಎಂಬವರ ಸಹೋದರಿ. ಮೋಶೆ, ಆರೋನರು, ದೇವರ ಆದೇಶದ ಮೇರೆಗೆ, ಇಸ್ರಾಯೇಲ್ ಜನಾಂಗವನ್ನು ಐಗುಪ್ತರ ಹಿಡಿತದಿಂದ ಬಿಡಿಸುವ ಜವಾಬ್ದಾರಿ ಹೊತ್ತಿದ್ದರು. ಮಿರಿಯಾಮಳೂ ಅವರಂತೆ ಆ ಜನರನ್ನು ನಡೆಸುವ ನಾಯಕಿಯಾಗಿದ್ದಳು. ವಿರೋಧೀ ಸೈನಿಕರು ಇಸ್ರಾಯೇಲ್ ಜನರನ್ನು ಹಿಡಿಯಲು ಅವರ ಬೆನ್ನು ಹತ್ತಿ ಬಂದಾಗ ಮಿರಿಯಾಮಳು ಇಸ್ರಾಯೇಲ್ ಸ್ತ್ರೀಯರು ಸಮುದ್ರ

ವನ್ನು ದಾಟುವುದರಲ್ಲಿ ಸಹಾಯಕಳಾದಳು. ಮಿರಿಯಾಮಳಂತೆ ದೆಬೋರ ಎನ್ನುವ ಮತ್ತೊಬ್ಬ ಪ್ರವಾದಿನಿಯಿದ್ದಳು. ಇವಳು ಲಪ್ಪಿದೋತ ಎಂಬುವನ ಪತ್ನಿ. ಇವಳು ಒಮ್ಮೆ, ಬಾರಾಕನೆಂಬವನಿಗೆ ಯಾಬೀನನೆಂಬ ಅರಸನ ಸೇನಾಧಿಪತಿಯಾದ ಸೀಸರ ನೆಂಬುವನನ್ನು ದೇವರು ನಿನ್ನ ಕೈಗೆ ಒಪ್ಪಿಸಿಕೊಡುತ್ತಾನೆ. ನೀನು ಅವನ ಮೇಲೆ ಯುದ್ಧಕ್ಕೆ ಹೋಗು ಎಂಬ ಪ್ರವಾದನೆ ನುಡಿದಳು. ಇಸ್ರಾಯೇಲ್ ಜನಾಂಗಕ್ಕೆ ತಾಯಿಯಂತಿದ್ದ ಇವಳು ಬಾರಾಕನ ಇಚ್ಛೆಯ ಮೇರೆಗೆ ಅವನೊಂದಿಗೆ ಹೋಗಿ ಅವನ ವಿಜಯಕ್ಕೆ ಕಾರಣಳಾದಳು. ಇವಳು 'ನ್ಯಾಯಾಧೀಶಳೂ' ಆಗಿದ್ದಳು. ಎಫ್ರಾಯಿಮ್ ಬೆಟ್ಟದ ಸೀಮೆಯಲ್ಲಿದ್ದ ರಾಮ ಎಂಬ ಸ್ಥಳಕ್ಕೂ ಬೇತೇಲ್ ಎಂಬ ಪ್ರದೇಶಕ್ಕೂ ನಡುವೆ ಇದ್ದ ದೆಬೋರಳ ಖರ್ಜೂರವೃಕ್ಷವೆಂದು ಹೆಸರುಗೊಂಡ ಒಂದು ಮರದ ಕೆಳಗೆ ಆಸೀನಳಾಗಿರುತ್ತಿದ್ದ ಇವಳಲ್ಲಿಗೆ, ಇಸ್ರಾಯೇಲ್ ಜನರು ನ್ಯಾಯ ನಿರ್ಣಯಕ್ಕಾಗಿ ಬರುತ್ತಿದ್ದರು.

ರಾಜಕೀಯ ರಂಗದಲ್ಲಿ ತಮ್ಮ ಪ್ರಭಾವವನ್ನು ಬೀರಿದ ಹಲವು ಸ್ತ್ರೀಯರಲ್ಲಿ ಅತಲ್ಯ ಮತ್ತು ಈಜಬೆಲ ಎಂಬವರು ಮುಖ್ಯರಾಗಿದ್ದಾರೆ. ಅತಲ್ಯಳು ಜೋದಾ ರಾಜ್ಯದ ಅರಸನಾದ ಜೋಹೋರಾಮನೆಂಬವನ ರಾಣಿಯಾಗಿದ್ದಳು. ಈಕೆ ತನ್ನ ದಿಟ್ಟತನಕ್ಕೆ ಹೆಸರಾಗಿದ್ದಾಳೆನ್ನಬಹುದು. ಇವಳ ಮಗನಾದ ಅಹಜ್ಯನು ಒಂದು ವರ್ಷ ಆಳಿದ ನಂತರ ಮೃತನಾದಾಗ ಇವಳು ಕೂಡಲೇ ರಾಜಸಂತಾನದವರನ್ನೆಲ್ಲಾ ಸಂಹರಿಸಿ ಆರು ವರ್ಷಗಳ ಕಾಲ ತಾನೇ ರಾಜ್ಯವಾಳಿದಳು. ಆದರೆ ಇವಳು ಅಧಿಕಾರ ದಲ್ಲಿ ಬಹಳ ಕಾಲ ಉಳಿಯಲಿಲ್ಲ. ಏಳನೆಯ ವರ್ಷದಲ್ಲಿ ಇವಳ ಕೊಲೆಯಾಯಿತು. ಈಜಬೆಲಳು ಆಹಾಬ ಎಂಬ ಅರಸನ ಪತ್ನಿ. ಇವಳೂ ದಿಟ್ಟ ಹಾಗೂ ಸ್ವೇಚ್ಛೆಯಿಂದ ನಡೆಯುವ ಸ್ತ್ರೀಯಾಗಿದ್ದಳು. ಇವಳು ಯೆಹೋವನ ಅಂದರೆ ದೇವರ ಇಚ್ಛೆಗೆ ವಿರುದ್ಧವಾಗಿ ಬಾಳನ ವಿಗ್ರಹವನ್ನು ಪೂಜಿಸುತ್ತಿದ್ದಳು. ಇದರಿಂದ ದೈವ ಪುರುಷನಾದ ಎಲೀಯ ಎಂಬವನೊಡನೆ ವೈರತ್ವ ಬೆಳೆಯಲು ಕಾರಣವಾಯಿತು. ರಾಣಿಯಾಗಿದ್ದ ಇವಳಿಗೆ ಜನಸಾಮಾನ್ಯರ ಬಗ್ಗೆ ಯಾವ ತೆರನಾದ ಅನುಕಂಪವೂ ಇರಲಿಲ್ಲ. ಒಮ್ಮೆ, ಅರಸನಾದ ಆಹಾಬನು ತನ್ನ ರಾಜ್ಯದಲ್ಲಿದ್ದ ನಾಬೋತ ಎಂಬವನ ದ್ರಾಕ್ಷೆಯ ತೋಟ ವನ್ನು ಪಡೆಯಬೇಕೆಂಬ ಪ್ರಯತ್ನದಲ್ಲಿ ವಿಫಲನಾಗಿ ದುಃಖಿಸುತ್ತಿದ್ದುದನ್ನು ಕಂಡ ಈಜಬೆಲಳು ನಾಬೋತನು ರಾಜದ್ರೋಹಿ ಎಂದು ಬೇರೆ ಇಬ್ಬರಿಂದ ಸುಳ್ಳು ಸಾಕ್ಷಿ ಹೇಳಿಸಿ ನಾಬೋತನ ಕೊಲೆಗೆ ಕಾರಣಳಾದಳು ಮತ್ತು ಅವನ ತೋಟವು ಅರಸನ ಕೈ ಸೇರುವಂತೆ ಮಾಡಿದಳು. ಆಹಾಬನ ಮರಣಾನಂತರ ಇವಳು ಹತ್ತು ವರ್ಷಗಳ ವರೆಗೆ ಇಸ್ರಾಯೇಲ್ ಜನಾಂಗದ ಮೇಲೆ ಒಡೆತನ ನಡೆಸಿದಳು. ಆದರೆ ಆನಂತರ ಇವಳು ಕೊಲೆಗೆ ಗುರಿಯಾದಳು.

ಅತಲ್ಯ, ಈಜಬೆಲರಂಥ ದಿಟ್ಟ ಸ್ತ್ರೀಯರಷ್ಟೇ ಅಲ್ಲದೆ ಎಸ್ತೇರಳಂಥ ಉತ್ತಮ ರಾದ ರಾಣಿಯರೂ ಇದ್ದರು. ಯೆಹೂದ್ಯ ಜನಾಂಗಕ್ಕೆ ಸೇರಿದ್ದ ಇವಳು ಪರ್ಶಿಯಾ ದೇಶದ ಅರಸನ ಪಟ್ಟದ ರಾಣಿಯಾಗಿದ್ದಳು. ಮೊದಲಿಗೆ ಸಾಮಾನ್ಯಳಾಗಿದ್ದ ಇವಳನ್ನು ದೇವರು ವಿಶೇಷವಾದ ರೀತಿಯಲ್ಲಿ ನಡೆಸಿ ಈ ಉನ್ನತ ಪದವಿಯನ್ನು

ಕೊಟ್ಟಿದ್ದ. ಇವಳು ಆಶ್ಚರ್ಯಕರವಾದ ರೀತಿಯಲ್ಲಿ ತನ್ನ ಜನಾಂಗದ ಜನರನ್ನು ವೈರಿಗಳಿಂದ ಬಿಡಿಸಿದಳೆಂದು ತಿಳಿದು ಬರುತ್ತದೆ.

ಹೀಗೆ ಹಳೇ ಒಡಂಬಡಿಕೆ ಭಾಗದಲ್ಲಿ ಸ್ತ್ರೀಯರಿಗೆ ಗೌರವವಾದ ಸ್ಥಾನವಿದ್ದು ಅವರು ಅನೇಕ ರಂಗಗಳಲ್ಲಿ ಪಾತ್ರವಹಿಸಿದ್ದುದು ಕಂಡುಬರುತ್ತದೆ. ಆದರೆ ಕಾಲ ಬದಲಾದ ಹಾಗೆಲ್ಲ ಯೆಹೂದ್ಯರ ಮನೋದೃಷ್ಟಿ ಬದಲಾಗಿ ಸ್ತ್ರೀಯರಿಗಿದ್ದ ಸ್ವಾತಂತ್ರ್ಯ ಕ್ಷಯಿಸುತ್ತ ಹೋಯಿತೆಂದು ಹೇಳಬಹುದು. ಪುರುಷನಿಗಿಂತ ಕೀಳಾದ ದೃಷ್ಟಿಗೆ ಒಳಗಾದ ಇವಳಿಗೆ ದೇವಾಲಯಗಳಲ್ಲಿಯೂ ಪ್ರತ್ಯೇಕ ಸ್ಥಾನ ಕೊಡಲ್ಪಟ್ಟಿತ್ತಲ್ಲದೆ ಇವಳು ತನ್ನ ವ್ಯಕ್ತಿತ್ವವನ್ನೂ, ಸ್ವಾತಂತ್ರ್ಯವನ್ನು ಕಳೆದುಕೊಂಡು ಕೇವಲ ಒಂದು ಭೋಗದ ವಸ್ತುವಾಗಿ ಉಳಿದಳೆನ್ನಬಹುದು.

ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರು ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯ ಕೊಟ್ಟಿರಲಿಲ್ಲವೆಂದು ಹೇಳಬಹುದು. ಆದರೆ ಯೇಸುಕ್ರಿಸ್ತನು ಸ್ತ್ರೀಯ ಬಗ್ಗೆ ಬಹಳ ಉದಾರವಾಗಿ ನಡೆದುಕೊಂಡಿರುವುದು ಹೊಸ ಒಡಂಬಡಿಕೆಯಿಂದ ತಿಳಿದು ಬರುತ್ತದೆ. ಕ್ರಿಸ್ತನ ದೃಷ್ಟಿಯಲ್ಲಿ ಸ್ತ್ರೀಯು ಪುರುಷನಂತೆಯೆ. ಸಮಾಜದಲ್ಲಿ. ಕ್ರೈಸ್ತ ಸಭೆಗಳಲ್ಲಿ ಗೌರವಕ್ಕೆ ಪಾತ್ರಳಾಗಿದ್ದಳು. ಈ ಹೊತ್ತಿಗೆ ದೈವಭಕ್ತಿಯಲ್ಲಿ ನಡೆಯುತ್ತಿದ್ದ ಅನೇಕ ಸ್ತ್ರೀಯರಿದ್ದರು. ಉದಾ : ಮರಿಯಳು ಈಕೆ ಯೇಸು ಕ್ರಿಸ್ತನ ತಾಯಿ. ಇವಳ ದೈವ ಭಕ್ತಿ ಅಪಾರವಾಗಿತ್ತು. ಇದರಿಂದ ಈಕೆ ದೈವಾಶೀರ್ವಾದ ಪಡೆದವಳಾದಳು. ಎಲಿಜಬೆತ್ ಎನ್ನುವ ಸ್ತ್ರೀಯೂ ಅತ್ಯಂತ ದೈವ ಭಕ್ತಿಯುಳ್ಳ ಸ್ತ್ರೀ. ಅನ್ನ ಎನ್ನುವ ಮತ್ತೊಬ್ಬಳೂ ಭಕ್ತೆಯಾಗಿದ್ದಳಲ್ಲದೆ ಕ್ರಿಸ್ತನ ಜನನ ಮಹತ್ವವನ್ನರಿತ ಪ್ರವಾದಿನಿಯಾಗಿದ್ದಳು.

ಯೇಸುಕ್ರಿಸ್ತನಿಗೆ ಆಗಿನ ಕಾಲದ ಸಮಾಜದ ಪರಿಸ್ಥಿತಿಯ ಬಗ್ಗೆ ತಿಳಿದಿದ್ದರೂ ಕೂಡ ಸ್ತ್ರೀಯರ ಬಗ್ಗೆ ಅವನು ಅಪಾರವಾದ ದಯೆ, ಕರುಣೆ, ಅನುಕಂಪ ಉಳ್ಳವನಾಗಿದ್ದನು. ಅನೇಕ ವೇಳೆ ಅವರನ್ನು ಕಾಯಿಲೆ ಮತ್ತು ಇತರ ತೊಂದರೆಗಳಿಂದ ಮುಕ್ತಗೊಳಿಸುತ್ತಿದ್ದನು. ಸತ್ತವಳು ಸ್ತ್ರೀಯೆಂದು ಭೇದ ಮಾಡದೆ ಜೀವದಾನ ಮಾಡುತ್ತಿದ್ದನು. ದಾರಿತಪ್ಪಿ ನಡೆದ ಸ್ತ್ರೀಯನ್ನು ಜನರು ಕಲ್ಲೆಸೆದು ಕೊಲ್ಲಬೇಕಾಗಿದ್ದ ಸಮಯದಲ್ಲೂ ಆ ಹೆಂಗಸನ್ನು ಆ ಶಿಕ್ಷೆಯಿಂದ ತಪ್ಪಿಸಿದನಲ್ಲದೆ ಆಕೆಗೆ 'ನಾನೂ ಕ್ಷಮಿಸುತ್ತೇನೆ ಪುನಃ ತಪ್ಪು ಮಾಡಬೇಡ' ಎಂದು ತಿಳಿಸಿ ಹೇಳಿದನು. ಹೀಗೆ, ಸ್ತ್ರೀಯರು ಪವಿತ್ರರಾಗಲಿ, ಪಾಪಾತ್ಮರಾಗಿರಲಿ ಅವರನ್ನು ಉದಾರ ಮನಸ್ಸಿನಿಂದ ದೈವೀಕ ಮಾರ್ಗದಲ್ಲಿ ನಡೆಸಲು ಪ್ರಯತ್ನಿಸುತ್ತಿದ್ದನು. ಯಾಕೆಂದರೆ, ಸ್ತ್ರೀಯರಾಗಲೀ ಪುರುಷರಾಗಲಿ ಅವರು ದೇವರ ದೃಷ್ಟಿಯಲ್ಲಿ ಸಮಾನರು. ಅವರಲ್ಲಿ ಯಾರೂ ಹಾಳಾಗುವುದು ಅವನಿಗೆ ಮನಸ್ಸಿರಲಿಲ್ಲ. ಆದುದರಿಂದ ಅವರು ಸರಿಯಾದ ಮಾರ್ಗದಲ್ಲಿ ನಡೆಯಲು ದಾರಿತೋರಿಸುತ್ತಿದ್ದನು. ಅವನ ಈ ದಯಾಗುಣ ಪುರುಷರನ್ನೂ ಸ್ತ್ರೀಯರನ್ನೂ ಅವನೆಡೆಗೆ ಆಕರ್ಷಿಸಿತು. ಪರಿಣಾಮವಾಗಿ ಅನೇಕ ಹೆಣ್ಣು ಮಕ್ಕಳೂ ಅವನ ಅನುಯಾಯಿಗಳಾದರು. ಮತ್ತು ಕ್ರಿಸ್ತನನ್ನು ಅವನ ಶಿಲುಬೆಯವರೆಗೂ ಹಿಂಬಾಲಿಸುವಷ್ಟು ಅವನ ಹಿಂಬಾಲಕರಾದರು. ಅವನ ಸಮಾಧಿಯನ್ನು ಗುರುತಿಟ್ಟುಕೊಂಡು ಆತನಿಗೆ ತಮ್ಮ ಅಂತಿಮ ಭಕ್ತಿಯನ್ನು ಸಲ್ಲಿಸಲು ಮುಂದಾದರು.

ಅವನು ಪುನರುತ್ಥಾನನಾದಾಗ ಅವನ ಮೊದಲ ದರ್ಶನ ಪಡೆದವರು ಸ್ತ್ರೀಯರಾಗಿದ್ದರು.

ಯೇಸುಕ್ರಿಸ್ತನ ದಿವಾರೋಹಣದ ನಂತರವೂ ಅವನ ಅನುಯಾಯಿಗಳಲ್ಲಿ ಹಲವು ಸ್ತ್ರೀಯರಿದ್ದರು. ಅವರಲ್ಲಿ ಹಲವರು ತಮ್ಮ ಆಸ್ತಿಯನ್ನು ಮಾರಿ ದೇವರ ಸೇವೆ ಮುಂದುವರೆಯಲು ಅವಕಾಶ ಮಾಡಿ ಕೊಟ್ಟರೆಂದು ನಾವು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ. ಅಲ್ಲದೆ, ಮತ್ತಾಯ ಎಂಬ ಯೇಸುಕ್ರಿಸ್ತನ ಶಿಷ್ಯನೊಬ್ಬನನ್ನು ಆರಿಸುವುದರಲ್ಲಿ ಹಲವು ಸ್ತ್ರೀಯರು ಸಹಾಯಕರಾಗಿದ್ದುದು ತಿಳಿದುಬರುತ್ತದೆ. ಅದರಂತೆ ಪವಿತ್ರಾತ್ಮನನ್ನು ಸ್ವೀಕರಿಸುವಷ್ಟರವುಟ್ಟಿಗೆ ದೈವಭಕ್ತಿಯಲ್ಲಿ ಮುಂದುವರೆದ ಹೆಣ್ಣುಮಕ್ಕಳೂ ಇದ್ದರು. ಮಾರ್ಕ ಎಂಬ ಶಿಷ್ಯನೊಬ್ಬನ ತಾಯಿಯಾದ ಮೇರಿ ಎಂಬವಳ ಮನೆ ದೇವಾಲಯವಾಯಿತು. ಲಿಡಿಯ ಎಂಬ ಸ್ತ್ರೀ ಪೌಲನೆಂಬ ಶಿಷ್ಯನಿಂದ ಮತಾಂತರಗೊಂಡಳು. ಫಿಲಿಪ್ಪನೆಂಬ ಶಿಷ್ಯನ ಮಕ್ಕಳು ಪ್ರವಾದಿನಿಯರಾಗಿದ್ದರು. ದೀನದಲಿತರ ಸೇವೆಗೆ ಬದ್ಧ ಕಂಕಣಳಾಗಿ ನಿಂತವಳು ತಬಿಥ ಎಂಬ ಸ್ತ್ರೀ. ಈಕೆ ಸತ್ಕ್ರಿಯೆಗಳನ್ನು ಮಾಡುವುದರಲ್ಲಿ ಮುಂದಾಳಾಗಿದ್ದಳು. ಬಡವರ ಬಂಧುವಾಗಿದ್ದು ಹೇರಳವಾಗಿ ದಾನ ಧರ್ಮಗಳನ್ನು ಮಾಡುವುದರಲ್ಲಿ ನಿರತಳಾಗಿರುತ್ತಿದ್ದ ಇವಳು ಬಡವರಿಗೆ ಬಟ್ಟೆ ಹೊಲಿದುಕೊಟ್ಟು ಅವರ ಸೇವೆ ಮಾಡುತ್ತಿದ್ದಳು. ಹೀಗೆ ಅನೇಕ ಸ್ತ್ರೀಯರು ತಮ್ಮ ಕೈಲಾದಮಟ್ಟಿಗೆ ದೇವ ಸೇವೆ ಮಾಡುತ್ತಿದ್ದುದು ಸತ್ಯವೇದದಲ್ಲಿ ಕಂಡುಬರುತ್ತದೆ.

ಹೀಗಿದ್ದರೂ ಕೂಡ ಯೇಸುಕ್ರಿಸ್ತನ ಶಿಷ್ಯನಾಗಿದ್ದ ಪೌಲನೆಂಬುವನು ಸ್ತ್ರೀಯರು ಪುರುಷನ ಪ್ರಭಾವದಿಂದುಂಟಾಗಿರುವುದರಿಂದಲೂ ಮತ್ತು ಅವನಿಗಾಗಿ ನಿರ್ಮಾಣವಾಗಿರುವುದರಿಂದಲೂ ಸ್ತ್ರೀಯು ಪುರುಷನ ಅಧಿಕಾರ ಸೂಚಕವಾದ ಮುಸುಕನ್ನು, ಪ್ರಾರ್ಥನೆಯ ಸಮಯದಲ್ಲಿ, ತಲೆಯ ಮೇಲೆ ಹೊದ್ದುಕೊಳ್ಳಬೇಕೆಂದು ಹೇಳಿರುವುದರಿಂದ ಸ್ತ್ರೀ ಪುರುಷರಲ್ಲಿ ಸಮಾನತೆ ಇರಲಿಲ್ಲ ಎಂದೆನ್ನಿಸುತ್ತದೆಯಾದರೂ ಅವನು ಹಾಗೆ ಹೇಳಲು ಬೇರೆ ಕಾರಣಗಳಿದ್ದವು ಮತ್ತು ಸ್ತ್ರೀಯರೂ, ಪುರುಷರೂ ಸಮಾನರು, ಸ್ತ್ರೀಯಿಲ್ಲದೆ ಪುರುಷನು ಸಂಪೂರ್ಣನಲ್ಲ ಎಂದು ಅವನೇ ಹೇಳಿರುವುದರಿಂದ ಸ್ತ್ರೀ ಪುರುಷರಿಬ್ಬರೂ ಸಮಾನರೆಂದು ತಿಳಿದುಬರುತ್ತದೆ.

ಈಗಲೂ, ಕ್ರೈಸ್ತಧರ್ಮವು ಸ್ತ್ರೀಯರ ಬಗ್ಗೆ ಹೆಚ್ಚು ಉದಾರವಾಗಿ ನಡೆದುಕೊಳ್ಳುತ್ತಿದೆ ಮತ್ತು ಹೆಚ್ಚು ಪ್ರೋತ್ಸಾಹ ಕೊಡುತ್ತಿದೆ. ವಿದೇಶೀಯರ ಆಗಮನದಿಂದ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ದೊರೆತು ಅವಳು ಪುರುಷನಂತೆ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗಿದೆ. ಈಗ ಕ್ರೈಸ್ತ ಸಭೆಗಳಲ್ಲಿ ಸ್ತ್ರೀಯರಿಗೆ ಹೆಚ್ಚಿನ ಗೌರವಸ್ಥಾನವಿದೆ. ದೇವಾಲಯದ ಚಟುವಟಿಕೆಗಳ ಜವಾಬ್ದಾರಿ ಪಡೆದ (Pastorate members) ಹಿರಿಯರ ಗುಂಪಿನಲ್ಲಿ ಈಗ ಸ್ತ್ರೀಯರಿದ್ದಾರೆ. ಅಷ್ಟೇ ಅಲ್ಲದೆ ಈಗ ಸಭೆಯ ಪೂರ್ಣ ಜವಾಬ್ದಾರಿ ಹೊರಲು ಅರ್ಹತೆ ಪಡೆದ ಸ್ತ್ರೀ ಸಭಾ ಪಾಲಕರೂ (pastors) ಅನೇಕ ಸಭೆಗಳಲ್ಲಿದ್ದಾರೆ. ಆದರೆ ಸ್ತ್ರೀಯರಿಗೆ

ordination ಅಂದರೆ ಗುರುದೀಕ್ಷೆ ಕೊಡಬೇಕೆಂಬುದರ ಬಗ್ಗೆ ಚರ್ಚೆ ನಡೆದಿದ್ದರೂ ಕೂಡ ಉತ್ತರ ಭಾರತ, ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲಿ ಸ್ತ್ರೀಯರಿಗೆ ಗುರುದೀಕ್ಷೆ ನೀಡಲಾಗಿದೆ.

ಹಿಂದೂ ಧರ್ಮದಲ್ಲಿ ಶರಣ ಶರಣೆಯರಿರುವಂತೆ ಕ್ರೈಸ್ತ ಧರ್ಮದಲ್ಲೂ, (ಅದೂ ಕ್ಯಾಥೋಲಿಕ್ ಪಂಗಡದಲ್ಲಿ) ಇದೆ. ಪ್ರೊಟೆಸ್ಟೆಂಟ್ ಪಂಗಡದಲ್ಲಿ ಶರಣೆಯರಿದ್ದಾರೆ.

ಹೀಗೆ ದೇವಾಲಯಗಳಲ್ಲಿ ಮಾತ್ರವಲ್ಲದೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಗೆ ದುಡಿಯುವ ಅವಕಾಶವಿದೆ. ಮತ್ತು ಪ್ರೋತ್ಸಾಹವೂ ಇದೆ. ಹೀಗೆ ಕ್ರೈಸ್ತ ಧರ್ಮದಲ್ಲಿ ಸ್ತ್ರೀ ಒಂದು ಗೌರವದ ಸ್ಥಾನ ಪಡೆದಿದ್ದಾಳೆಂದು ಹೇಳಬಹುದಾಗಿದೆ.

ಇಸ್ಲಾಂ ದೃಷ್ಟಿಯಲ್ಲಿ ಸ್ತ್ರೀ

ಕೆ. ಶರೀಫಾ

ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಸ್ತ್ರೀಯರ ಸ್ಥಾನಮಾನ ಹಕ್ಕುಬಾಧ್ಯತೆಗಳನ್ನು ವಿಶ್ಲೇಷಿಸಬೇಕಾದರೆ– ನಾವು ಚರಿತ್ರೆಯ ಕಡೆ ತಿರುಗುವದು ಅನಿವಾರ್ಯ. ಮುಸ್ಲಿಂಮರ ಪವಿತ್ರ ಗ್ರಂಥವಾದ ಕುರಾನಿನಲ್ಲಿ ಸ್ತ್ರೀಯರ ಕುರಿತಂತೆ ಅನೇಕ ವಿಷಯಗಳು ಹೇಳಲ್ಪಟ್ಟಿವೆ. ಆದ್ದರಿಂದ ಸ್ತ್ರೀಯರ ಸ್ಥಾನಮಾನದ ಬಗ್ಗೆ ಕುರಾನ್ ಏನು ಹೇಳುತ್ತದೆ ? ಎಂದು ನೋಡುವುದು ಕೂಡಾ ತೀರ ಅವಶ್ಯಕವಾಗಿದೆ.

ಜಗತ್ತಿನಲ್ಲಿ ಒಬ್ಬ ಹೆಂಗಸಿಗೆ ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ ಹೆಚ್ಚು ಕಡಿಮೆ ಒಂದೇ ತರದ ಸ್ಥಾನ ಮಾನಗಳನ್ನು ಕಾಣುವೆವಾದರೂ, ಬೇರೆ ಬೇರೆ ಜಾತಿಗಳಲ್ಲಿ ಅವಳ ಸ್ಥಾನಮಾನಗಳು ಬೇರೆ ಬೇರೆ ರೀತಿಯದಾಗಿವೆ. ಜಗತ್ತಿನ ಎಲ್ಲ ಹೆಂಗಸರಿಗಿಂತ ಮುಸ್ಲಿಂ ಹೆಂಗಸರು ಅತ್ಯಂತ ಹೆಚ್ಚಿನ ಏಕಾಂತವಾಸಿನಿಯರಾಗಿದ್ದಾರೆ. ಹಾಗೆ ನೋಡಿದರೆ ಎಲ್ಲ ಜಾತಿಯ ಹೆಂಗಸರೂ ಒಂದಿಲ್ಲೊಂದು ಬಗೆಯಿಂದ ನಾಲ್ಕು ಗೋಡೆಗಳ ಮಧ್ಯ ಬಂಧಿಸಿಯರಾಗಿ ಬದುಕುತ್ತಿದ್ದಾರೆ. ಇಂತಹ ಬದುಕನ್ನು ಬದುಕುತ್ತಿರುವ ಮಹಿಳೆಯರು, ಹೆಚ್ಚಾಗಿ ಮೇಲ್ವರ್ಗಕ್ಕೆ, ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಆದರೆ ಕೆಳವರ್ಗದ ಹೆಂಗಸರಿಗೆ ಏಕಾಂತವಾಸದ ಭಯವಿಲ್ಲ. ಏಕೆಂದರೆ ಅವರೂ ಗಂಡಸರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹೊಲ ಮನೆ ಗದ್ದೆಗಳೆನ್ನದೆ ದುಡಿಯುತ್ತಿದ್ದಾರೆ. ಆದರೆ ಗಮನಿಸಬೇಕಾದ ಅಂಶವೇನೆಂದರೆ, ಮುಸ್ಲಿಂಮರಲ್ಲಿ ಕೇವಲ ಮೇಲ್ವರ್ಗದ, ಮಧ್ಯಮವರ್ಗದ ಹೆಂಗಸರಷ್ಟೇ ಅಲ್ಲದೆ ಕೆಳವರ್ಗದ ಹೆಂಗಸರೂ ಕೂಡಾ ಏಕಾಂತವಾಸಿನಿಯರಾಗಿದ್ದಾರೆ ಎಂಬುದು.

ಸುಮಾರು ೬ನೇ ಶತಮಾನದ ಅರಬರು ಅಲೆಮಾರಿ ಜೀವನ ನಡೆಸುತ್ತಿದ್ದು, ಒಂದು ಗುಂಪಿನ ಜನ ಇನ್ನೊಂದು ಗುಂಪಿನ ಮೇಲೆ ದಾಳಿ ಮಾಡುವದು ಸರ್ವ ಸಾಮಾನ್ಯವಾಗಿತ್ತು. ಈ ದಾಳಿಯಿಂದ ಸೋತು ಹೋದ ಗುಂಪಿನವರ ಹೆಂಗಸರನ್ನು ಗೆದ್ದ ಗುಂಪಿನವರು ಕೊಂಡೊಯ್ದು ತಮ್ಮ ಭೋಗ ವಿಲಾಸಗಳಿಗೆ ಬಳಸುತ್ತಿದ್ದರು. ಅವರು ಬೇಡವಾದಾಗ ಮಾರಾಟದ ಸರಕನ್ನಾಗಿ ಮಾಡುತ್ತಿದ್ದರು. ಈ ಒಂದು ಘಟನೆಯಿಂದಲೇ ಆಗ ಸಾರ್ವತ್ರಿಕವಾಗಿ ಮಹಿಳೆಗೆ ಎಂತಹ ಸ್ಥಾನ ಮಾನಗಳಿದ್ದು

ವೆಂದು ಗೊತ್ತಾಗುತ್ತದೆ. ಆಗ ಪ್ರಚಲಿತವಿದ್ದ ಇಂತಹ ಪದ್ಧತಿಗಳನ್ನು ಚರಿತ್ರೆಯಿಂದ ಮರೆಮಾಚಲು ಸಾಧ್ಯವಿಲ್ಲ. ನಮ್ಮಲ್ಲಿ "ಹೆಣ್ಣು ದೇವತೆ" "ಅವಳು ಪೂಜಿಸಲ್ಪಡುತ್ತಾಳೆ" ಎಂಬ ವಿಚಾರಗಳಿಗೆ ಪ್ರಚಾರ ದೊರೆತರೂ ಸಹ ಗೊಡ್ಡು ಸಂಪ್ರದಾಯಗಳ ಮಧ್ಯ ಪುರುಷರ ಗುಲಾಮಳಾಗಿ ಅವಳು ಎಂತಹ ಜೀವನ ನಡೆಸುತ್ತಿದ್ದಳು ಎಂಬುದನ್ನು ಮರೆಮಾಚಲು ಯಾರಿಂದಲೂ ಸಾಧ್ಯವಿಲ್ಲ.

ಇಸ್ಲಾಂ ಪೂರ್ವ ಅರಬಸ್ಥಾನವಲ್ಲಿ ಅನೇಕ ದೇವರುಗಳು ಪೂಜಿಸಲ್ಪಡುತ್ತಿದ್ದವು. ಆಗ ವಿವಿಧ ಕಲ್ಲು ಮೂರ್ತಿಗಳ ಆರಾಧನೆ ಜಾರಿಯಲ್ಲಿತ್ತು. ಆದರೆ ಮುಹಮ್ಮದ ಪೈಗಂಬರರು ನೂರೆಂಟು ದೇವರುಗಳು ಪೂಜಿಸಲ್ಪಡುತ್ತಿದ್ದ ಆ ಕಾಲದಲ್ಲಿ ಏಕದೇವತಾರಾಧನೆಯನ್ನು ಜಾರಿಗೊಳಿಸಿದರು. ದೇವರು ಒಬ್ಬನೇ ಇರುವನು. ಅವನೇ "ಅಲ್ಲಾಹ" ಎಂದು ಘೋಷಿಸಿದರು.

ಅನೇಕ ಜನ ಮುಸ್ಲಿಂಮರು ಖುರಾನ್ ಗ್ರಂಥವನ್ನು ಅಲ್ಲಾಹ್‌ನು ಪೈಗಂಬರರ ಮುಖಾಂತರ ಭೂಮಿಗೆ ಕಳುಹಿಸಿರುವರು ಎಂದು ನಂಬಿದ್ದಾರೆ. ಆದರೆ ಅದು ಮಹಮ್ಮದ ಪೈಗಂಬರರು ಮಾಡಿದ ಒಟ್ಟು ೧೧ರ ಭಾಷಣಗಳ ಒಂದು ಸಂಗ್ರಹ ಗ್ರಂಥವಾಗಿದೆ. ಇದನ್ನು ಸಂಗ್ರಹ ಮಾಡಿ ಗ್ರಂಥ ರೂಪದಲ್ಲಿ ತಂದು ಪ್ರಚಾರ ಮಾಡಿದವರು ಜೈದ್‌ಬಿನ್ ಶಾಬಿತ್ ಅನಸಾರಿಯವರು.

ಇಸ್ಲಾಂ ಧರ್ಮದ ಆದಿ ಕಾಲದಲ್ಲಿ ಅರಬ್ ದೇಶದ ಸ್ತ್ರೀಯರಿಗೆ ಯಾವ ಸ್ಥಾನಮಾನಗಳೂ ಇರಲಿಲ್ಲ ಅಷ್ಟೆ ಏಕೆ? ಒಂದು ಹೆಣ್ಣು ಮಗು ಜನಿಸುವದೂ ಕೂಡಾ ಅಪರಾಧವಾಗಿತ್ತು. ಹೆಣ್ಣು ಮಗು ಜನಿಸಿದರೆ ಅದನ್ನು ಜೀವಂತವಾಗಿ ಸುಡುವ ಅಥವಾ ಹುಗಿಯುವ ಕ್ರೂರ ಪದ್ಧತಿ ಜಾರಿಯಲ್ಲಿತ್ತು. ಒಬ್ಬ ಮಹಿಳೆಗೆ ಹೆಣ್ಣು ಮಗುವಿಗೆ ಜನ್ಮ ಕೊಡುವ ಹಕ್ಕು ಕೂಡಾ ಇರಲಿಲ್ಲ. ಹೆಣ್ಣು ಮಗು ಹುಟ್ಟಿದರೆ ಅದೊಂದು ಅನಿಷ್ಟ ಅಥವಾ ಅದು ತಮ್ಮ ದುರ್ದೈವವೆಂದು ಭಾವಿಸಲಾಗುತ್ತಿತ್ತು. ಇದು ಕೋರಿಯಾ ಮತ್ತು ಕಿಂಧದ ಜನಾಂಗಗಳಲ್ಲಿ ಜಾರಿಯಲ್ಲಿತ್ತು. ಇಂತಹ ಕ್ರೂರವಾದ ಮತ್ತು ಅಮಾನುಷವಾದ ಪದ್ಧತಿಯನ್ನು ಮುಹಮ್ಮದ ಪೈಗಂಬರರು ನಿಷೇಧಿಸಿದರು. ಹೆಣ್ಣು ಮಗುವನ್ನು ಜೀವಂತ ಹುಗಿಯುವ ಪದ್ಧತಿಯನ್ನು ನಿಲ್ಲಿಸಿದರಷ್ಟೇ ಅಲ್ಲದೆ ಅವಳನ್ನು ಸಮಾನತೆಯಿಂದ ಕಾಣಲು ಬೋಧಿಸಿದರು "ತಾಯಿಯ ಚರಣಗಳಲ್ಲಿ ಸ್ವರ್ಗವಿದೆ" ಹೆಣ್ಣನ್ನು ಗೌರವಿಸುವದು ನಮ್ಮ ಧರ್ಮವೆಂದು ತಿಳಿಸಿ ಹೇಳಿದರು. ಅಲ್ಲದೆ ಗಂಡಸಿಗೆ ಹೆಂಗಸಿನ ಮೇಲೆ ಅಧಿಕಾರವಿರುವಂತೆ, ಹೆಂಗಸಿಗೆ ಗಂಡಸಿನ ಮೇಲೆ ಅಧಿಕಾರವಿದೆ ಎಂದು ಹೇಳಿದರು. ಪೈಗಂಬರರಲ್ಲಿಯ ಇಂತಹ ಕೆಲವು ಅಂಶಗಳನ್ನು ಗಮನಿಸಿದಾಗ ಆ ಮಟ್ಟಿಗೆ ನಾವು ಅವರನ್ನು ಸಮರ್ಥಿಸಿಕೊಳ್ಳಬಹುದಾದರೂ, ಕೆಲವೊಂದು ವಿಷಯಗಳಲ್ಲಿ ಅವರಲ್ಲೂ ಮಹಿಳೆಯ ವಿಷಯದಲ್ಲಿ ಎರಡು ಬಗೆದಿರುವವನ್ನು ನಾವು ಕುರಾನಿನ ತುಂಬೆಲ್ಲ ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಅವಳು ರಾಷ್ಟ್ರದ ಎರಡನೇ ಪ್ರಜೆ, ಮೊದಲನೆಯವನು ಗಂಡಸು ಎಂಬ ಧೋರಣೆ ಅಲ್ಲಿ ಕಂಡುಬರುತ್ತದೆ.

"ಪುರುಷರು ಸ್ತ್ರೀಯರ ಮೇಲ್ವಿಚಾರಕರು, ಪೋಷಕರು ಮತ್ತು ಪಾಲಕರೂ ಆಗಿದ್ದಾರೆ. ಏಕೆಂದರೆ ಭಗವಂತನು ಒಂದು ಸಮೂಹಕ್ಕಿಂತ ಹೆಚ್ಚಾಗಿ (ಬಲವನ್ನು) ಇನ್ನೊಂದಕ್ಕೆಕೊಟ್ಟಿದ್ದಾನೆ. ಏಕೆಂದರೆ ಅವರ ಆಸ್ತಿಯಿಂದ ಅವರನ್ನು (ಸ್ತ್ರೀಯರನ್ನು) ಪೋಷಿಸುತ್ತಾರೆ. ನಿಮ್ಮ ಪತ್ನಿಯರು ನಿಮ್ಮ ಆಜ್ಞೆ ಮೀರಿ ನಡೆಯುವರೆಂಬ ಶಂಕೆ ನಿಮಗಿದ್ದರೆ ಅವರಿಗೆ ನೀವು ಉಪದೇಶಿಸಿರಿ, ಮಲಗುವಲ್ಲಿ ಅವರನ್ನು ಬಿಟ್ಟು ದೂರವಿರಿ, ಅವಶ್ಯವಿದ್ದಾಗ ಅವರನ್ನು ಹೊಡೆಯಿರಿ" (ಕುರಾನ್ ೪-೩೪)ರಲ್ಲಿ ಹೇಳಲಾಗಿದೆ. ಇದರಿಂದ ಪೈಗಂಬರರು ಹೆಚ್ಚಿನ ಸ್ವಾತಂತ್ರ್ಯ ಕೊಟ್ಟು ಸ್ತ್ರೀಯರನ್ನು ಪುರುಷರ ವಶವನ್ನಾಗಿ ಮಾಡಿದ್ದಾರೆ ಎಂಬುದು ಸ್ಪಷ್ಟ.

ಮೇಲಿನ ಕುರಾನ್ ಉಕ್ತಿಯಲ್ಲಿ ಪೈಗಂಬರರು ಕೇವಲ ಆಜ್ಞೆ ಮೀರುವ ಆ ಶಂಕೆ ಕಂಡುಬಂದರೇನೇ ಅವರನ್ನು ಹೊಡೆಯಿರಿ, ಬಡೆಯಿರಿ, ಮಲಗುವಲ್ಲಿ ತ್ಯಜಿಸಿರಿ, ಎಂದು ಹೇಳುವರಾದರೂ ಗಂಡಸು ಅಧಃಪತನಕ್ಕಿಳಿದರೆ ಅಂದರೆ ಒಂದಲ್ಲ ಎರಡಲ್ಲ, ನಾಲ್ಕು ಜನ ಹೆಂಡಂದಿರ ವರೆಗೂ ಮದುವೆಯಾದರೆ ಅದು ತಪ್ಪಲ್ಲ. ಎಂದು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಆಗಿನ ಸಂದರ್ಭದಲ್ಲಿ ಈ ಕಾರ್ಯ ಸರಿಯಾಗಿದ್ದಿರಬಹುದಾದರೂ ಇಂದಿನ ಈ ೨೦ನೇ ಶತಮಾನದಲ್ಲೂ ಜಾರಿಗೊಳಿಸುವದು ಯಾವ ನ್ಯಾಯ? ಕಾನೂನುಗಳು ಮಾನವನಿಂದ ಮಾನವನ ಹಿತಕ್ಕಾಗಿ ಹುಟ್ಟಿಕೊಂಡಿವೆ. ಅಷ್ಟೇ ಅಲ್ಲದೆ ಅವು ಮಾನವನ ಅನುಕೂಲತೆಗನುಗುಣವಾಗಿ ಬದಲಾಗುತ್ತಲೇ ಇರುತ್ತವೆ. ಬದಲಾಗಲೇಬೇಕಾಗುತ್ತದೆ. ಏಕೆಂದರೆ ಕಾನೂನಿನಿಂದ ಮಾನವನಾಗಿಲ್ಲ-ಮಾನವನಿಂದ ಕಾನೂನಾಗಿದೆ.

"ತಾವು ಬಯಸಿದ ವಸ್ತುಗಳನ್ನು ಪ್ರೀತಿಸುವದು ಮನುಷ್ಯರ ದೃಷ್ಟಿಯಲ್ಲಿ ನ್ಯಾಯವಾದುದು. ಸ್ತ್ರೀಯರು ಮತ್ತು ಮಕ್ಕಳು, ಚಿನ್ನ ಬೆಳ್ಳಿ, ಮುದ್ರಿತ ಅಶ್ವಗಳು, ಗೋವು-ಫಲವತ್ತಾದ ಭೂಮಿ ಇವುಗಳೆಲ್ಲ ಪ್ರಪಂಚ ಜೀವನದ ಆಸ್ತಿಗಳು" ಎಂದು (ಕುರಾನ್ ೩-೧೪)ರಲ್ಲಿ ಹೇಳಲಾಗಿದೆ. ಇಲ್ಲಿ ಸ್ತ್ರೀಯರಿಗೆ ಕೇವಲ ಒಂದು ವಸ್ತುವಿಗೆ ಕೊಡುವ ಸ್ಥಾನಮಾನಗಳನ್ನು ಕೊಡಲಾಗಿದೆ. ಆದರೆ ಹೆಣ್ಣು ಕೇವಲ ಒಂದು ವಸ್ತುವಲ್ಲ. ಅದರಂತೆ ಮನೆಯಲ್ಲಿ ಶೋಭಿಸುವ ಅಲಂಕಾರದ ಆಭರಣವೂ ಅಲ್ಲ. ಅವಳೂ ಕೂಡ ರಕ್ತ ಮಾಂಸಗಳಿಂದ ಕೂಡಿ, ಭಾವನೆಗಳುಳ್ಳ ಮಾನವಳಾಗಿದ್ದಾಳೆ. ಎಂಬುವನ್ನು ಮಾನವರಾದರು ಮೊದಲು ಅರ್ಥ ಮಾಡಿಕೊಳ್ಳಬೇಕು.

"ಸ್ತ್ರೀಯರು ಹೊರಗಾಗಿರುವಾಗ ಅಪಾಯಕರು ಮತ್ತು ಮಲಿನರು ಆಗಿರುತ್ತಾರೆ." ಎಂದು ಕುರಾನ್‌ದಲ್ಲಿ (೨೮-೨೨೨) ಹೇಳಲಾಗಿದೆ. ಆದರೆ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಯಾವಾಗ ಹೆಂಗಸಿನ ಮುಟ್ಟೇ ಇಷ್ಟು ಅಪಾಯಕಾರಕವಾಗಿರುವಾಗ, ಆ ಮುಟ್ಟು ನಿಂತು ಹುಟ್ಟಿದ ಆ ಮಗು (ಗಂಡಸು) ಎಷ್ಟು ಅಪಾಯಕರವಾಗಿರಲಿಕ್ಕಿಲ್ಲ? ಎಂಬುದು. ಹೀಗೆ ಈ ಎಲ್ಲ ಕಾನೂನುಗಳೂ ಪುರುಷನ ಪ್ರಾಧಾನ್ಯತೆಯನ್ನು ಸಮರ್ಥಿಸುತ್ತವೆ. ಹೆಣ್ಣು ಅಬಲೆ, ಗಂಡಸಿಗೆ ಪೂರಕವಾಗಿ ಮಾತ್ರ ಅವಳ ಅಸ್ತಿತ್ವ ಎಂದು ಬೋಧಿಸುತ್ತವೆ.

ಮುಸ್ಲಿಂ ಸ್ತ್ರೀಯು ಗಂಡಿನ ನಾಲ್ಕು ಗೋಡೆಗಳ ಮಧ್ಯೆ ಜೀವಿಸುವ ಸಾಕು ಪ್ರಾಣಿಯಾಗಿದ್ದಾಳೆ. ಇವಳು ಕೇವಲ ಗಂಡಸಿನ ವಿಲಾಸದ ವಸ್ತುವಾಗಿದ್ದಾಳೆ. ಅವನ ಸೇವಕಿಯಾಗಿ ಅವನ ಮಕ್ಕಳ ತಾಯಿಯಾಗಿ ಅವನ ಮಕ್ಕಳನ್ನು ಹಡೆಯುವ ಯಂತ್ರವಾಗಿ ಬಿಟ್ಟಿದ್ದಾಳೆ. ಬಿಸಿಲಿನ ಮುಖವನ್ನೇ ಕಾಣದ ಇವಳು ವರ್ಷಕ್ಕೊಂದು ಮಗುವನ್ನು ಹೆತ್ತು ಬೆಳೆಸಿಕೊಳ್ಳುತ್ತಾಳೆ.

ಕುರಾನಿನಲ್ಲಿ ಒಬ್ಬ ಹೆಂಗಸಿಗೆ ಒಬ್ಬನೇ ಗಂಡಸಿರಬೇಕೆಂದು ಹೇಳಿದರೂ ಏಕ ಕಾಲದಲ್ಲಿ ಒಬ್ಬ ಗಂಡಸು ಅನೇಕ ಜನ ಹೆಂಡಂದಿರನ್ನು ಹೊಂದಲು ಧಾರ್ಮಿಕ ಮನ್ನಣೆ ಯಿದೆ. ಸಾಮಾನ್ಯವಾಗಿ ಒಬ್ಬ ಗಂಡಸು ಸುಮಾರು ನಾಲ್ಕು ಜನ ಹೆಂಡಂದಿರನ್ನು ಏಕಕಾಲದಲ್ಲಿ ಹೊಂದಲು ಅವಕಾಶ ಕೊಡುತ್ತದೆ.

> "ಅನಾಥರೊಂದಿಗೆ ನ್ಯಾಯವಾಗಿ ನಡೆದುಕೊಳ್ಳಲು ಆಗುವದಿಲ್ಲವೆಂದಾದರೆ
> ನಿಮಗಿಷ್ಟಬಂದ ೨, ೩ ಅಥವಾ ೪ ಜನ ಸ್ತ್ರೀಯರನ್ನು ಮದುವೆ
> ಯಾಗಿರಿ. ಆದರೆ ಅವರೆಲ್ಲರೊಂದಿಗೆ ನ್ಯಾಯವಾಗಿ ವರ್ತಿಸಿರಿ"
>
> (೩:೪ ಕುರಾನ್)

ಎಂದು ಹೇಳಲಾಗಿದೆ. ಆದರೆ ಅವನು ಏಕಕಾಲದಲ್ಲಿ ನಾಲ್ವರು ಹೆಂಡಂದಿರನ್ನು ಹೊಂದಿದ್ದರೂ ಎಲ್ಲರೊಂದಿಗೆ ನ್ಯಾಯವಾಗಿ ಮತ್ತು ಸಮಾನತೆಯಿಂದ ವರ್ತಿಸಬೇಕೆಂದು ಹೇಳುತ್ತದೆ. ಆದರೆ ಇದು ಎಷ್ಟು ಜನರಿಗೆ ಸಾಧ್ಯ ? 'ಜೆಹದ್' ಯುದ್ಧದ ನಂತರ ಮುಸ್ಲಿಂಮರಲ್ಲಿ ತುಂಬಾ ಜನ ಅನಾಥರೂ ವಿಧವೆಯರೂ ಆದ ಕಾರಣ ಆ ಎಲ್ಲ ಅನಾಥರನ್ನೂ ನ್ಯಾಯವಾಗಿ ನೋಡಿಕೊಳ್ಳಲು ಸಾಧ್ಯವಿಲ್ಲದಿರುವದರಿಂದ ಅವರನ್ನೆಲ್ಲ ಮದುವೆಯಾಗಿ ಸಮಾನತೆಯಿಂದ ನೋಡಿಕೊಳ್ಳಲೆಂದು ಪೈಗಂಬರರು ಈ ಕಾನೂನನ್ನು ಆಗ ಜಾರಿಗೊಳಿಸಿರಬಹುದು. ಆದರೆ ಆಗಿನ ಕಾಲದಲ್ಲಿದ್ದ ಈ ಕಾನೂನನ್ನು ಈಗಲೂ ಜಾರಿಗೊಳಿಸುವದು ಯಾವ ನ್ಯಾಯ ? ಇಂದು ಪುರುಷರ ಸಂಖ್ಯೆಗಿಂತ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಲಿದೆ. ಹೀಗಿರುವಾಗ ಇಂತಹ ಕಾನೂನುಗಳು ಈಗಲೂ ಜಾರಿ ಮಾಡುವದು ಎಷ್ಟರಮಟ್ಟಿಗೆ ಸೂಕ್ತ ಎಂದು ನಾವು ಯೋಚಿಸಬೇಕಾಗಿದೆ.

ಆಗಿನ ಅರಬ್ ದೇಶದಲ್ಲಿ ಮದುಮಗಳನ್ನು ಕೊಂಡುಕೊಳ್ಳುವ ಸಂಪ್ರದಾಯ ಜಾರಿಯಲ್ಲಿತ್ತು. ಮದುವೆಯಾಗುವವನು ಹುಡುಗಿಯ ತಂದೆ ತಾಯಿಗಳಿಗೆ ಅಥವಾ ಪೋಷಕರಿಗೆ ಹಣಕೊಟ್ಟು ಅವಳನ್ನು ತರಬೇಕಾಗಿತ್ತು. ಮಹಮ್ಮದ ಪೈಗಂಬರರು ಆಗ ಚಲಾವಣೆಯಲ್ಲಿದ್ದ ಮದುವೆ ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ತಿದ್ದಿ ಅದಕ್ಕೆ ಹೊಸ ರೂಪಕೊಟ್ಟರು. ಆಗ ಸುಮಾರಾಗಿ ನಾಲ್ಕು ವಿಧದ ಮದುವೆ ಪದ್ಧತಿಗಳು ಪ್ರಚಲಿತವಾಗಿದ್ದವು. ೧) ಹುಡುಗ ಹುಡುಗಿಯ ತಂದೆಗೆ ಮದುವೆಯ ಬಗ್ಗೆ ವಿಚಾರಿಸಿ ಕನ್ಯಾದಕ್ಷಿಣೆಯನ್ನು ನಿರ್ಧರಿಸಿ, ಅವಳನ್ನು ಮದುವೆಯಾಗುವದು ೨) ಹೆಂಗಸು ಮುಟ್ಟಾಗಿ ಮುಗಿದ ನಂತರ ಅವಳು ಗಂಡನ ಕೈಗೆ ಕೊಡಲ್ಪಡುವಳು. ಆಗ ಅವಳ ಗಂಡ ಅವಳನ್ನು ಇನ್ನೊಬ್ಬನೊಂದಿಗೆ ಸಂಭೋಗಕ್ಕೆ ಕಳಿಸುವನು. ಅವಳು ಯಾವಾಗ ಗರ್ಭಿಣಿಯಾಗುವಳೋ ಆವಾಗ ಅವಳ ಗಂಡ ಅವಳೊಂದಿಗೆ ಸಾಮಾನ್ಯ ವಾಗಿ ಸಂಸಾರ ಪ್ರಾರಂಭಿಸುವನು. ೩) ಮೂರನೆಯದೆಂದರೆ ೧೦ ಅಥವಾ ಅದಕ್ಕಿಂತ

ಕಡಿಮೆ ಗಂಡಸರ ಗುಂಪು ಸೇರಿ ಒಬ್ಬ ಹೆಂಗಸನ್ನು ಸಂಭೋಗಿಸುವರು. ಅವಳು ಬಸುರಿಯಾಗಿ ಮಗುವಿಗೆ ಜನ್ಮವಿತ್ತ ನಂತರ ಅವಳು ಆ ಗುಂಪಿಗೆ ಕಳಿಸಲ್ಪಡುವಳು. ಆಗ ಆ ಗುಂಪಿನ ಯಾರೊಬ್ಬರೂ ಅವಳನ್ನು ತಿರಸ್ಕರಿಸುವಂತಿಲ್ಲ. ಅವಳು ತನಗೆ ಇಷ್ಟವಾದ ಒಬ್ಬರನ್ನು ಸೂಚಿಸಿದರೆ ಅವನು ಆ ಮಗುವನ್ನೂ ಅವಳನ್ನೂ ಸ್ವೀಕರಿಸ ಬೇಕಾಗುತ್ತಿತ್ತು. ೪) ಇನ್ನೂ ನಾಲ್ಕನೆಯ ವಿಧವೆಂದರೆ ಕೆಲವು ಗಂಡಸರ ಗುಂಪು ಮನೆಗೆ ನುಗ್ಗಿದಾಗ ಅವಳು (ವೇಶ್ಯೆ) ತಿರಸ್ಕರಿಸುವಂತಿಲ್ಲ. ಅವಳ ಮನೆಯ ಮೇಲೆ ಒಂದು ಪತಾಕೆಯಿರುತ್ತಿತ್ತು. ಅವಳ ಮನೆಗೆ ನುಗ್ಗಿದ ಗಂಡಸರೆಲ್ಲರೂ ಅವಳೊಂದಿಗೆ ಸಂಭೋಗಿಸುವರು. ಅವಳು ಮಗುವಿಗೆ ಜನ್ಮವಿತ್ತನಂತರ ಆ ಮಗು ಗುಂಪಿನಲ್ಲಿ ಯಾರ ಲಕ್ಷಣಗಳನ್ನು ಹೊಂದಿರುತ್ತದೆಯೋ, ಅವರದಾಗುತ್ತದೆ. ಅವನು ಮಗು ವನ್ನೂ, ಅವಳನ್ನು ತಿರಸ್ಕರಿಸುವಂತಿಲ್ಲ. ಇಂತಹ ಮದುವೆಯ ಪದ್ಧತಿಗಳು ಆಗಿನ ಅರಬ್‌ನಲ್ಲಿ ಜಾರಿಯಲ್ಲಿದ್ದವು.

ಆದರೆ ಮಹ್ಮದ ಪೈಗಂಬರರು ಗುಂಪಿನೊಂದಿಗೆ ಸಂಭೋಗ ಮಾಡಿ, ಮಗು ವಾದ ನಂತರ ಮದುವೆಯಾಗುವ ಪದ್ಧತಿಯನ್ನು ನಿಷೇಧಿಸಿದರೂ ಕೂಡಾ ಬಹು ಪತ್ನಿತ್ವವನ್ನು ಬೆಂಬಲಿಸಿದರು. ಏಕೆಂದರೆ ಆಗ ಜೆಹದ್ ಯುದ್ಧದ ನಂತರ ಮುಸ್ಲಿಂರಲ್ಲಿ ಬಹಳಷ್ಟು ಜನ ಅನಾಥ ಹಾಗೂ ವಿಧವೆಯರಿದ್ದರು. ಆ ಕಾರಣದಿಂದ ಆಗ ಪೈಗಂಬರರು ಬಹುಪತ್ನಿತ್ವವನ್ನು ಬೆಂಬಲಿಸಿದ್ದರಿಂದ ಅದನ್ನು ಈಗಲೂ ಅನ್ವಯಿಸು ವದು ಯಾವ ನ್ಯಾಯ? ಭಾರತ ಸರಕಾರದ ಸಂವಿಧಾನವಿದ್ದೂ ಸಹ ಮುಸ್ಲಿಂಮರಿಗೆ ಮುಸ್ಲಿಂ ಕಾನೂನು, ಹಿಂದುಗಳಿಗೆ ಹಿಂದು ಕಾನೂನುಗಳಿರುವದು ಯಾವ ನ್ಯಾಯ? ಒಂದು ಜಾತ್ಯಾತೀತ ರಾಷ್ಟ್ರದಲ್ಲಿ ಜಾತೀವಾರು ರಾಜ್ಯಗಳು, ಜಾತೀಯ ಕಾನೂನು ಗಳಿರುವದು ಎಂತಹ ನೀತಿ? ಈಗಲೂ ಬಹುಪತ್ನಿತ್ವ ಪದ್ಧತಿಯನ್ನು ಬೆಂಬಲಿಸುವ ಗಂಡಸರು ಧರ್ಮದ ರಕ್ಷಣೆಯನ್ನು ಪಡೆಯುತ್ತಿರುವದು ಶೋಚನೀಯ. ಆದರೆ ಇದನ್ನು ಸರಕಾರವೂ ಬೆಂಬಲಿಸುತ್ತಿರುವದು ವಿಚಿತ್ರ ಸಂಗತಿಯಾಗಿದೆ. ಇಂದಿನ ಬೆಲೆ ಏರಿಕೆಯ ಕಾಲದಲ್ಲಿ ಒಬ್ಬ ಹೆಂಡತಿಗೆ ೨ ಮಕ್ಕಳಿಗೆ ಸಾಕುವದರಲ್ಲಿಯೇ ಸುಸ್ತಾ ಗುವ ಗಂಡಸಿಗೆ ೪ ಜನ ಹೆಂಡಂದಿರನ್ನು ಅವರ ಮಕ್ಕಳನ್ನೂ ಸಾಕುವ ಸಾಮರ್ಥ್ಯ ಎಲ್ಲಿಂದ ಬರಬೇಕು? ಆದರೆ ಹೆಂಡಿರು ಮಕ್ಕಳನ್ನು ಬಡತನ, ಅಜ್ಞಾನ ಅನಕ್ಷರತೆಯ ಕ್ರೂರ ಕಂದಕಕ್ಕೆ ತಳ್ಳುವ ಇಂತಹ ಹುರುಳಿಲ್ಲದ ಕಾನೂನುಗಳನ್ನು ಈಗಲೂ ಕೆಲವು ಗಂಡಸರು ಪಾಲಿಸುತ್ತಿರುವದು ವಿಷಾದನೀಯ. ಯಾವದೇ ಕಾನೂನು ಅದು ಕೇವಲ ಇಸ್ಲಾಂ ಕಾನೂನು ಆಗಿರುವದರಿಂದ ಮಾತ್ರ ಅದನ್ನೇ ಪಾಲಿಸಬೇಕು ಎಂಬ ಮನೋಭಾವ ಸಲ್ಲದು. ಅದರಲ್ಲಿ ಅರ್ಥವಿಲ್ಲವೆಂದಾಗ ಅದನ್ನು ಬಿಟ್ಟುಬಿಡುವದು ಉತ್ತಮ. ಇದು ಸ್ತ್ರೀಯರ, ಮಕ್ಕಳ ಮತ್ತು ಭಾರತದ ಭವಿಷ್ಯತ್ತಿನ ದೃಷ್ಟಿಯಿಂದಲೂ ಅರ್ಥಪೂರ್ಣವಾಗುವದರಲ್ಲಿ ಸಂದೇಹವಿಲ್ಲ.

ಪೈಗಂಬರರು ಮದುವೆಯ ಬಗ್ಗೆ ಹೇಳಿರುವಂತೆ ತಲ್ಲಾಕ್‌ಗಳ ಬಗ್ಗೆಯೂ ಕೂಡಾ ಹೇಳಿದ್ದಾರೆ. ಗಂಡಸು ತನಗೆ ಬೇಡವಾದಾಗ ಹೆಂಗಸನ್ನು ಬಿಡುವಂತೆ– ಹೆಂಗಸು ತನಗೆ ಬೇಡವಾದಾಗ ಗಂಡಸನ್ನು ಬಿಡಬಹುದಾದರೂ ಸಹ ಹೆಂಗಸು ಬೇಡ

ಹಾದಾಗ ಗಂಡಸನನ್ನು ಬಿಡಲು ಕಾರಣಬೇಕು–ಆದರೆ ಗಂಡಸು ಬಿಡುಗಡೆಯಾಗಲು ಯಾವ ಕಾರಣಗಳೂ ಬೇಕಿಲ್ಲ. "ಮೆಹರ್" ಕೊಟ್ಟುಬಿಟ್ಟರೆ ಮುಗಿಯಿತು "ಮೆಹರ್" ಎಂದರೆ ಮುಸ್ಲಿಂ ಕಾನೂನಿನ ಪ್ರಕಾರ ಮದುವೆಯಾಗುವಾಗ ಮದುಮಗನು ಮದುಮಗಳಿಗೆ ಇಂತಿಷ್ಟು ಹಣ ಎಂದು ಕಟ್ಟುತ್ತಾನೆ. ಒಂದು ವೇಳೆ ಅವನು ಅವಳನ್ನು ಬಿಟ್ಟುಕೊಡುವದಾದರೆ, ಆ ಮೆಹರ್ ಹಣವನ್ನು ಅವನು ಅವಳಿಗೆ ಕೊಡಬೇಕು ಅಥವಾ ಅವನ ಜೀವಮಾನವಿರುವದರ ಒಳಗಾಗಿ ಅವನು ಆ ಮೆಹರ್ ಹಣವನ್ನು ಹೆಂಡತಿಗೆ ಕೊಡಬೇಕು. ಈ ಮೆಹರ್ ಹಣದ ಮೊತ್ತವು ಆಗಾಗಿನ ಸಾಮಾಜಿಕ ಸ್ಥಿತಿಗತಿಗಳನುಗುಣವಾಗಿ ಬದಲಾಗುತ್ತಿರುತ್ತದೆ.

ಹೀಗೆ ಇಸ್ಲಾಮ್ ಕಾನೂನಿನ ಪ್ರಕಾರ ಹೆಂಡತಿಯನ್ನು ತೀರ ಸರಳವಾಗಿ ಬಿಟ್ಟುಕೊಡಬಹುದಾಗಿದೆ. ಮೂರು ಸಲ ತಲ್ಲಾಕ್ ಎಂದು ಬಿಟ್ಟರಾಯಿತು–ಗಂಡ ಹೆಂಡರ ಸಂಬಂಧ ಅಲ್ಲಿಗೇ ಮುಗಿಯಿತು. ತಲ್ಲಾಕ್ ಕೊಡುವಾಗ ಎದುರಿಗೆ ಹೆಂಡತಿ ಇದ್ದರೂ ನಡೆಯುತ್ತದೆ ಇಲ್ಲದಿದ್ದರೂ ನಡೆಯುತ್ತದೆ. ಇಂತಹ ಕಾನೂನಿರುವದರಿಂದಲೇ ಅನೇಕ ಜನ ಮುಸ್ಲಿಂ ಹೆಂಗಸರು ಸಾಮಾಜಿಕವಾಗಿ ವಿಪರೀತ ನರಳುತ್ತಿದ್ದಾರೆ. ಈ ಬಿಡುಗಡೆಯಲ್ಲಿ ೨ ವಿಧಗಳಿಗೆ ೧) ತಲ್ಲಾಕ್ ಇದನ್ನು ಗಂಡಸು ಕೊಡುತ್ತಾನೆ ೨) ಖುಲಾಹಃ ಇದನ್ನು ಹೆಂಗಸು ಕೊಡುತ್ತಾಳೆ.

ತಲ್ಲಾಕ್ ಹೇಳುವ ಅಧಿಕಾರ ಗಂಡಸರಿಗೆ ಮಾತ್ರ ಉಂಟು. ಒಂದು ವೇಳೆ ಸ್ತ್ರೀಯರಿಗೆ ಗಂಡನೊಂದಿಗೆ ಬಾಳುವದು ಅಸಹನೀಯವೆನಿಸಿದಲ್ಲಿ ಅವಳು ಪತಿಗೆ ಏನನ್ನಾದರೂ ಕೊಟ್ಟು ಅವನಿಂದ ಖುಲಾಹ್ ಪಡೆಯಬಹುದು. ಆದರೆ ಪ್ರಶ್ನೆ ಏನೆಂದರೆ ಅವಳದೆನ್ನುವದೇ ಏನೂ ಇಲ್ಲದಾಗ ಅವಳು ಅವನಿಗೆ ಏನನ್ನಾದರೂ ಕೊಡಲು ಹೇಗೆ ಸಾಧ್ಯ? ಆದರೆ ಖುಲಾಹ್‌ಕ್ಕೆ ಪತಿಯು ಸಿದ್ಧನಾಗಿದ್ದು ಮುಸ್ಲಿಂ ನ್ಯಾಯಾಲಯ ಅದಕ್ಕೆ ಪರವಾನಗಿ ಕೊಟ್ಟರೆ ಮಾತ್ರ ಮಹಿಳೆಯ ಬಿಡುಗಡೆ ಸಾಧ್ಯ. ಆದರೆ ಗಂಡಸಿಗೆ ಹಾಗಲ್ಲ. ಅವನು ಹೆಂಡತಿಗೆ ಎದುರಿಗಿಲ್ಲದಿದ್ದರೂ ಮೂರು ಸಲ ತಲ್ಲಾಕ್ ಎಂದು ಬಿಟ್ಟರಾಯಿತು ಬಿಡುಗಡೆಯಾಗುತ್ತಾನೆ. ಗಂಡಸಿಗೆ ನಾಲ್ಕು ಜನ ಹೆಂಡಂದಿರನ್ನು ಏಕಕಾಲದಲ್ಲಿ ಹೊಂದುವ ಅಧಿಕಾರ ಕುರಾನ್ ನೀಡಿರುವದರಿಂದ ಎರಡನೆಯ ಮದುವೆಗೆ ಮೊದಲನೆಯವಳ ಅಭಿಪ್ರಾಯ ಕೇಳುವ ಅವಶ್ಯಕತೆಯಿಲ್ಲ. ಒಂದು ವೇಳೆ ಅವಳು ಆ ಮದುವೆಗೆ ಅಡ್ಡಿಯಾದರೆ ಅವಳಿಗೇ ಎಲ್ಲಿ ತಲ್ಲಾಕ್ ಕೊಡುವನೋ ಎಂಬ ಭಯವಿದ್ದೇ ಇರುತ್ತದೆ. ಆದರೆ ಒಂದು ವಿಚಿತ್ರವಾದ ವಿಷಯವೆಂದರೆ ನಾಲ್ಕು ಜನರವರೆಗೆ ಮಾತ್ರ ಮದುವೆಯಾಗಬಹುದೆಂದು ಹೇಳಿದ ಪೈಗಂಬರರೇ ೧೧ ಜನ ಹೆಂಡಂದಿರನ್ನು ಮದುವೆಯಾದರು.

ಮುಸ್ಲಿಂ ಕಾನೂನಿನ ಪ್ರಕಾರ ಒಂದು ವೇಳೆ ಹೆಂಡತಿ ಸತ್ತು ಹೋದರೆ ಗಂಡನು ಮರುದಿನವೇ ಮದುವೆಯಾಗಬಹುದು. ಆದರೆ ಹೆಂಗಸು ಮಾತ್ರ 'ಇದ್ದತ್' ನ ಸಮಯದ ವರೆಗೂ ಕಾಯಬೇಕು. ಇದ್ದತ್‌ದ ಸಮಯ ೩ ತಿಂಗಳಿಂದ ೪೦ ದಿನಗಳವರೆಗೆ ಇರುತ್ತದೆ. ಪೈಗಂಬರರು ಆಸ್ತಿಯ ವಿಷಯಕ್ಕೆ ಹೇಳಿರುವದೇನೆಂದರೆ "ಪುರುಷನಿಗೆ ಇಬ್ಬರು ಸ್ತ್ರೀಯರದಕ್ಕೆ ಸಮನಾದ ಪಾಲು" (೪:೩) ಕುರಾನ್‌ನಲ್ಲಿ

ಹೇಳಲಾಗಿದೆ. ಇದರಿಂದ ತಂದೆ ತಾಯಿಗಳು ಸತ್ತ ನಂತರ ಅವರ ಆಸ್ತಿಯ ಹಂಚಿಕೆಯಲ್ಲಿಯೂ ಮಹಿಳೆಯರಿಗೆ ಅನ್ಯಾಯವಾಗುತ್ತಿರುವದನ್ನು ನಾವು ಕಾಣಬಹುದು. ಅಂದರೆ ಒಟ್ಟು ಆಸ್ತಿಯಲ್ಲಿ ಅರ್ಧ ಗಂಡಸು ತೆಗೆದುಕೊಂಡರೆ ಆ ಉಳಿದ ಅರ್ಧದಲ್ಲಿ ಅರ್ಧಪಾಲು ಮಾತ್ರ ಹೆಂಗಸರಿಗೆ ಕೊಡಬೇಕೆಂದಿದೆ. ಇಲ್ಲಿಯೂ ಸ್ತ್ರೀಯರ ಬಗ್ಗೆ ಪಕ್ಷಪಾತ ಮಾಡಲಾಗಿದೆ.

ಮುಸ್ಲಿಂಮರು ಮಸೀದಿಗಳಲ್ಲಿ ಮಹಿಳೆಯರಿಗೆ ಪ್ರವೇಶ ಕೊಟ್ಟಿಲ್ಲ. ಈಗಿನ ಪರದಾ ಪದ್ಧತಿಯಿಂದಾಗಿಯೇ ಇಂತಹ ಮಸೀದಿಗಳಲ್ಲಿ ಮಹಿಳೆಯರನ್ನು ನಿಷೇಧಿಸುವ ವಿಷಯ ಜಾರಿಯಾಯಿತು. ಆದರೆ ಮಹ್ಮದ ಪೈಗಂಬರರ ಕಾಲದಲ್ಲಿ ಇಂತಹ ಪದ್ಧತಿ ಜಾರಿಯಲ್ಲಿರಲಿಲ್ಲ. ಆಗ ಮಹಿಳೆಯರೂ ಸಮಾನವಾಗಿ ಧಾರ್ಮಿಕ ವಿಧಿ ವಿಧಾನಗಳಲ್ಲಿ ಭಾಗವಹಿಸಬಹುದಾಗಿತ್ತು. ಆಗ ಮಹಿಳೆಯರು, ಮಕ್ಕಳು ಗಂಡಸರೊಂದಿಗೆ ಮಸೀದಿಗಳಲ್ಲಿ ನಮಾಜು ಮಾಡುತ್ತಿದ್ದರು. ಒಂದು ಸಲ ಚಿಕ್ಕ ಮಗುವಿನ ತಾಯಿಯೊಬ್ಬಳು ಮಸೀದಿಗೆ ಬಂದು ನಮಾಜು ಮಾಡುತ್ತಿದ್ದಾಗ ಮಗು ಜೋರಾಗಿ ಅಳುತ್ತಿದ್ದುದನ್ನು ಕಂಡು ಮಹ್ಮದರು ತಮ್ಮ ನಮಾಜನ್ನು ಸಂಕ್ಷಿಪ್ತಗೊಳಿಸಿ ಬಂದು ಮಗುವನ್ನು ಎತ್ತಿಕೊಂಡಾಗ ಮಗುವಿನ ತಾಯಿಗೆ ಸಂಕೋಚವಾಯಿತು ಎಂಬ ಉಲ್ಲೇಖ (ಬುಖಾರಿ :೧೦–೬೫ರಲ್ಲಿ) ಬಂದಿದೆ. ಇದರಿಂದ ಆಗ ಮಹಿಳೆಯರಿಗೆ ಮಸೀದಿಗೆ ಹೊಗಲು ಯಾವ ನಿರ್ಬಂಧಗಳೂ ಇರಲಿಲ್ಲವೆಂಬ ವಿಷಯ ತಿಳಿದು ಬರುತ್ತದೆ. ಮಹಮ್ಮದ ಪೈಗಂಬರರು ಮಹಿಳೆಯರು ಮಸೀದಿಗೆ ಹೋಗುವದನ್ನು ಎಂದೂ ನಿಷೇಧಿಸಿರಲಿಲ್ಲ. ಆದರೆ ಇಂದಿನ ಕುರುಡು ಧಾರ್ಮಿಕ ವ್ಯಕ್ತಿಗಳು ಮಹಿಳೆಯರು ಮಸೀದಿಗೆ ಹೋಗದಂತೆ ತಡೆದಿದ್ದಾರೆ. ಅಷ್ಟೇ ಏಕೆ ಅವಳು ಮಲಿನಳು ಆದ್ದರಿಂದ ಅವಳು ದರ್ಗಾದ ಒಳಗೆ ಕಾಲಿಡುವಂತಿಲ್ಲ ಎಂದು ನಿಷೇಧಿಸಿದ್ದಾರೆ. "ಭಗವಂತನ ಮಕ್ಕಳಿಗೆ ಮಸೀದಿಗೆ ಹೋಗುವದನ್ನು ನಿಷೇಧಿಸಬಾರದು (ಬು:೧೧–೧೨ರಲ್ಲಿ) ಹೇಳಲಾಗಿದೆ. ರಾತ್ರಿಯಲ್ಲೂ ಅವಳಿಗೆ ಮಸೀದಿಗೆ ಹೋಗಲು ಅನುಮತಿಯಿತ್ತು. ಮಹಿಳೆಯರು ಮತ್ತು ಪುರುಷರು ಸಾಮೂಹಿಕವಾಗಿ ಮಸೀದಿಗಳಲ್ಲಿ ಪ್ರಾರ್ಥನೆ ಕೈಕೊಳ್ಳಬಹುದಾಗಿತ್ತು. ಮಹಿಳೆಯರು ಮುಟ್ಟಾದಾಗಲೂ ಪ್ರಾರ್ಥನೆಯನ್ನು ಮಾಡಬಹುದಾಗಿತ್ತು. ಆದರೆ ಖಲೀಫರ ಕಾಲದಲ್ಲಿ ಮಹಿಳೆ ಮತ್ತು ಪುರುಷರ ಮಧ್ಯ ಮಸೀದಿಗಳಲ್ಲಿ ಹಗ್ಗ ಕಟ್ಟತೊಡಗಿವರು ನಂತರ ಕಟ್ಟಿಗೆಯಿಂದ ವಿಭಾಗ ಮಾಡತೊಡಗಿದರು. ಇದು ಹೀಗೆಯೇ ಮುಂದುವರಿದು ಪರದಾ ಪದ್ಧತಿಯ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿತು.

"ಗಂಡಸರು ಎದುರಿಗೆ ಬಂದಾಗ ಹೆಂಗಸರು ದೃಷ್ಟಿಯನ್ನು ಕೆಳಗೆ ಮಾಡಿ ನಡೆಯಬೇಕು. ಮುಂಗೈ, ಪಾದ ಮತ್ತು ಮುಖ ಇವುಗಳನ್ನು ಹೊರತುಪಡಿಸಿ ಬೇರೆ ಯಾವದೇ ಅಂಗಾಂಗಗಳನ್ನು ಪ್ರದರ್ಶಿಸಕೂಡದು" (ಕುರಾನ್ ೨೪–೩೧) ರಲ್ಲಿ ಎಂದು ಹೇಳಲಾಗಿದೆ.ಆದರೆ ಮೊದಲ ನಾಲ್ಕು ಜನ ಖಲೀಫರ ನಂತರ ಬಂದ ಮೂಢ ಧಾರ್ಮಿಕ ಮನೋಭಾವದವರು ಖುರಾನಿನ ಈ ಹೇಳಿಕೆಯನ್ನು ಅಲ್ಲಗಳೆದು ಪರದಾ

ಎಂದರೆ ಹೆಣ್ಣಿಗೆ ಎಲ್ಲ ಕಡೆಯಿಂದಲೂ (ಮುಖವನ್ನೂ ಕೂಡ) ಬಟ್ಟೆಯಿಂದ ಮುಚ್ಚುತ್ತಿದ್ದರು. ಆದರೆ ಮುಂದೆ ಬರಬರುತ್ತಾ ಆ ಪರದಾ ಪದ್ಧತಿ ಇಂದಿನ ಬುರಖಾಗಳಾಗಿ ಮಾರ್ಪಟ್ಟಿವೆ. ಈ ಬುರಖಾ ಅವಳ ವ್ಯಕ್ತಿತ್ವಕ್ಕೆ ಹಚ್ಚಿದ ಮುಳ್ಳಿನ ಬೇಲಿಯಾಗಿ, ಅವಳ ವ್ಯಕ್ತಿತ್ವ ಬೆಳವಣಿಗೆಗೆ ಕಂಟಕಪ್ರಾಯವಾಗಿದೆ.

ಅನೇಕ ಹೆಂಗಸರು ತಾವು ಬುರಖಾ ಹಾಕುವದರಿಂದ ಗಂಡಸರನ್ನು ಉದ್ರೇಕಿಸುವದಿಲ್ಲ. ಇದರಿಂದ ನಮಗೆ ಮರ್ಯಾದೆ ಸಿಗುವದು, ನೈತಿಕತೆ ಉಳಿಯುವದು ಎಂದೆಲ್ಲ ಹೇಳಿದರೂ ನಾವಿಂದು ವೇಶ್ಯೆಯರ ಸಂಖ್ಯೆಯನ್ನು ನೋಡಿದರೆ ಅದರಲ್ಲಿ ಹೆಚ್ಚಿನ ಸಂಖ್ಯೆಯ ವೇಶ್ಯೆಯರು ಮುಸ್ಲಿಂ ಹೆಂಗಸರಾಗಿದ್ದಾರೆ. ಬುರ್ಖಾದಲ್ಲಿ ಇಂತಹ ಅನೈತಿಕ ವ್ಯವಹಾರಗಳೇಕೆ ನಡೆಯುತ್ತಿವೆ ಎಂಬುದು ನಮ್ಮ ಮುಂದಿನ ಪ್ರಶ್ನೆ. ಇದರಿಂದ ಎಂತಹ ಧಾರ್ಮಿಕ ಬಿಗಿ ಸಂಪ್ರದಾಯಗಳಿಂದ ನೈತಿಕತೆ ಉಳಿಯಲು ಸಾಧ್ಯವಿಲ್ಲ. ಇಂದು ಒಬ್ಬ ಹೆಂಗಸು ವೇಶ್ಯೆಯಾಗಬೇಕಾದರೆ ಅದಕ್ಕೆ ಅವಳ ಆರ್ಥಿಕ ಪರಿಸ್ಥಿತಿ ಕಾರಣವಾಗಿದೆ. ಇಂದು ಕೊಲೆ, ಸುಲಿಗೆ ದರೋಡೆಗಳಿಗೆಲ್ಲ ಇದೇ ಕಾರಣವಾಗಿದೆ.

ಧಾರ್ಮಿಕ ಸಂಪ್ರದಾಯಗಳನ್ನು ಸ್ತ್ರೀಯರ ಮೇಲೆ ಹೇರುವದರಿಂದ ಅವರ ವಿಮೋಚನೆ ಸಾಧ್ಯವಿಲ್ಲ. ಬದಲಾಗಿ ಅವರನ್ನು ಆರ್ಥಿಕ ಗುಲಾಮಗಿರಿಯಿಂದ ಬಿಡುಗಡೆ ಮಾಡಿ ಸಾಮಾಜಿಕ ಉತ್ಪಾದನಾ ರಂಗದಲ್ಲಿ ತೊಡಗಿಸುವದರಿಂದ ಅವರ ವಿಮೋಚನೆ ಸಾಧ್ಯವಾಗುವದು. ಅವಳು ದೇಶದ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಕ್ರಿಯಾಶೀಲ ಪಾತ್ರ ನಿರ್ವಹಿಸಬೇಕಿದೆ. ಈ ಬುರಖಾದ ಬೇಡಿಯನ್ನು ಕಳಚಲೇಬೇಕಿದೆ. ಏಕೆಂದರೆ ನಾವೇ ಅವರ ನೋವನ್ನು ಅರ್ಥ ಮಾಡಿಕೊಳ್ಳಬಲ್ಲೆವು.

ಮುಸ್ಲಿಂ ಹೆಂಗಸು ಋತುಮತಿಯಾಗುವದೆಂದರೆ ಒಂದು ದೊಡ್ಡ ಅಪರಾಧ ಮಾಡಿದಂತೆ. ದೊಡ್ಡವಳಾದ ತಕ್ಷಣವೇ ಬುರಖಾ ಪದ್ಧತಿಯನ್ನು ಅನುಸರಿಸಬೇಕಾಗುವದು. ಹಾಗೆಂದ ತಕ್ಷಣ ಉಳಿದ ಜನಾಂಗದ ಮಹಿಳೆಯರೆಲ್ಲ ಸ್ವತಂತ್ರರಾಗಿದ್ದಾರೆಂದು ಅರ್ಥವಲ್ಲ. ಪ್ರಪಂಚದ ಎಲ್ಲ ಮಹಿಳೆಯರೂ ಕೂಡಾ ಒಂದಿಲ್ಲೊಂದು ಬಗೆಯಿಂದ ಏಕಾಂತವಾಸಿನಿಯರಾಗಿದ್ದಾರೆ. ತೀವ್ರವಾದ ಧಾರ್ಮಿಕ ಕಟ್ಟುನಿಟ್ಟುಗಳಿಗೆ ಒಳಗಾಗಿದ್ದಾರೆ. ಸ್ತ್ರೀದ್ವೇಷಿ ಸಾಹಿತ್ಯ ರಚನೆ, ಇಂಡಿಯಾದ ಸತಿಪದ್ಧತಿ, ಆಫ್ರಿಕಾದ ಹೆಣ್ಣುಗಳ ಮಾರಾಟ ಪದ್ಧತಿ, ದಾಸ್ಯತನ, ಸೂಳೆಗಾರಿಕೆ, ದೇಹ ವಿಕ್ರಯ ಮುಂತಾದ ಪದ್ಧತಿಗಳು ಪುರುಷ ಪ್ರಧಾನವಾದ ಈ ಸಮಾಜದ ಚರಿತ್ರೆ ಹಾಗೂ ವ್ಯವಸ್ಥೆಯ ಕಾರ್ಯಗಳನ್ನು ಅವುಗಳ ಅಡಿಯಲ್ಲಿ ಸಿಲುಕಿ ಜಜ್ಜಿ ಹೋಗುತ್ತಿರುವ ಸ್ತ್ರೀಯರ ಸ್ಥಿತಿಗತಿಗಳನ್ನು ತೋರಿಸುತ್ತವೆ. ಇದು ವ್ಯವಸ್ಥೆಯು ಮಹಿಳೆಯರ ವಿಷಯದಲ್ಲಿ ಹೊಂದಿರುವ ಪಕ್ಷಪಾತವನ್ನು ನಿರೂಪಿಸುತ್ತದೆ.

ಕುರಾನಿನ ತುಂಬೆಲ್ಲ ನಾವು ಕಾಣುವದು ಆಧ್ಯಾತ್ಮದ ಅತೀ ಭಾವುಕತೆ. ಇಂತಹ ಭಾವುಕ ಮುಸ್ಲಿಂಮರು ಸಮಾಜದ ಹೊಸ ಹೊಸ ಬದಲಾವಣೆಗಳನ್ನು

ಸ್ವಾಗತಿಸುವದಿಲ್ಲ. ಕುರಾನಿನಲ್ಲಿ ಹೇಳಿದ್ದೇ ಕಾನೂನು. ಅದನ್ನೇ ಪಾಲಿಸಬೇಕು ಎಂದು ಹೇಳುತ್ತಾರೆ. ಎಲ್ಲ ಧರ್ಮಗಳ ಗತಿಯೂ ಇದೇ ಆಗಿದೆ. ಜಗತ್ತಿನ ಎಲ್ಲ ಮುಸ್ಲಿಂ ಮಹಿಳೆಯರ ಬಗ್ಗೆ ಮಹಮ್ಮದ ಖತುಬ್ ಹೇಳುವದೇನೆಂದರೆ "ಇಸ್ಲಾಂ ದೇಶಗಳಲ್ಲಿ ಮುಸ್ಲಿಂ ಹೆಂಗಸರು ಕೇವಲ ಹಿಂದುಳಿದಿದ್ದಾರೆ ಮಾತ್ರವಲ್ಲ. ಅವಳಿಗೆ ಯಾವ ಸ್ಥಾನಮಾನಗಳೂ ಇಲ್ಲ ಪ್ರಾಣಿಗಳ ಬದುಕು ಅವಳದಾಗಿದೆ. ಅವಳು ಏಕಾಂತವಾಸಿನಿಯಾಗಿ ನರಳುತ್ತಾಳೆ–ಸುಖದ ಮುಖವನ್ನೇ ಅವಳು ಕಾಣಳು. ಶರಣಾಗತ ಮನೋಭಾವ ಅವಳಲ್ಲಿದೆ" ಎಂದು ಹೇಳುತ್ತಾರಲ್ಲದೆ ಅಮೀರ ಅಲಿ ಯವರು– ಮುಸ್ಲಿಂ ಹೆಂಗಸಿನ ಹಿಂದುಳಿಯುವಿಕೆಯನ್ನು ವಿಶ್ಲೇಷಿಸುತ್ತಾ "ಇಸ್ಲಾಂ ಸ್ತ್ರೀಯರ ಹಿಂದುಳಿಯುವಿಕೆಯೇ ಇಂದು ಅವರಲ್ಲಿ ಸಾಂಸ್ಕೃತಿಕ ಕೊರತೆ ಕಂಡು ಬರಲು ಕಾರಣ" ಎನ್ನುತ್ತಾರೆ.

ಇಂತಹ ಪಕ್ಷಪಾತಗಳು ಎಲ್ಲ ಧರ್ಮಗಳಲ್ಲೂ ಹೆಚ್ಚು ಕಡಿಮೆ ನಿರಂತರವಾಗಿ ಸಾಗಿವೆ.ಹಿಂದು ಧರ್ಮದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಕೊಡಕೂಡದು ಎಂದು ಹೇಳಲಾಗಿದೆ. ಸಹಗಮನ ಪದ್ಧತಿಯನ್ನು ಅದು ಬೆಂಬಲಿಸಿದೆ. ರೋಗಿಷ್ಟ ಗಂಡನನ್ನು ಉಪಚರಿ ಸದಿದ್ದರೆ ಅವಳನ್ನು ಶಿಕ್ಷಿಸಬೇಕೆಂದು ಮನು ಹೇಳುತ್ತಾನೆ, ಆದರೆ ಹೆಂಡತಿ ರೋಗಿಷ್ಟ ಳಾಗಿದ್ದರೆ ಅವಳನ್ನು ಬಿಟ್ಟರೆ ಪಾಪವಿಲ್ಲವೆಂದು ಬೋಧಿಸುತ್ತಾನೆ. ಆದರೆ ಇದರಲ್ಲಿ ಮಾನವತೆಯಾದರೂ ಇದೆಯೇ? ಎಂಬುದು ಮುಖ್ಯ ಪ್ರಶ್ನೆ. ಗಂಡು ಮಗುವಾಗಿ ಹುಟ್ಟುವತನಕ ಮುಕ್ತಿಯಿಲ್ಲವೆಂದು ಜೈನ ಧರ್ಮ ಹೇಳುತ್ತದೆ.

ಸಾಮಾನ್ಯವಾಗಿ ನಮ್ಮಲ್ಲಿ ಬರುವ ಸಂಶಯವೇನೆಂದರೆ– ಜೈನ ಧರ್ಮ, ಹಿಂದು ಧರ್ಮ, ಇಸ್ಲಾಂ ಧರ್ಮ ಎಲ್ಲವೂ ಸ್ತ್ರೀಯರನ್ನು ಇಂತಹ ಪಕ್ಷಪಾತಗಳಿಗೆ ಗುರಿ ಮಾಡಿವೆ. ಹಾಗಾದರೆ ಸ್ತ್ರೀಯರ ಉದ್ಧಾರದ ಕುರಿತು ಯೋಚಿಸುವ ಧರ್ಮ ಯಾವುದು? ಎಂದರೆ ಅದು ಮಾನವೀಯ ಧರ್ಮವೆಂದು ಹೇಳಬಹುದು. ಯಾವ ಧರ್ಮ ಸ್ತ್ರೀಯರ ವಿಮೋಚನೆಗಾಗಿ, ಅವಳ ಸಮಾನತೆಗಾಗಿ, ಅವಳ ಸ್ಥಾನ ಮಾನ ಗಳಿಗಾಗಿ ಹೋರಾಡುವದು ಅದೇ ನಿಜವಾದ ಧರ್ಮ. ಇಂದು ಸ್ತ್ರೀಯರ ನಿಜವಾದ ವಿಮೋಚನೆಯಾಗಬೇಕಾದರೆ ಅವಳು ಎಲ್ಲ ರಂಗಗಳಲ್ಲೂ ಸಕ್ರಿಯ ಪಾತ್ರ ವಹಿಸು ವದರೊಂದಿಗೆ ಆರ್ಥಿಕ ವಿಮೋಚನೆಗಾಗಿ ಹೋರಾಡಬೇಕಿದೆ. ಸ್ತ್ರೀಯರು ಗಳಿ ಸಿದ್ದನ್ನು ಸ್ತ್ರೀಯರು ಅನುಭೋಗಿಸಲಿ ಪುರುಷರು ಗಳಿಸಿದ್ದನ್ನು ಪುರುಷರು ಅನು ಭೋಗಿಸಲಿ ಎಂದು (ಕುರಾನ್ ೪–೩೨ರಲ್ಲಿ) ಹೇಳಲಾಗಿದೆ. ಆದರೆ ಜಡ ಸಂಪ್ರ ದಾಯಗಳ ಅಡಿ ಜಜ್ಜಿ ಹೋದ ಅವಳಿಗೆ ಎದ್ದು ಗಳಿಸಿಕೊಳ್ಳಲು ಅವಕಾಶವಾದರೂ ಎಲ್ಲಿದೆ ?

ಸ್ತ್ರೀಯರ ವಿಮೋಚನೆ ಎಂದಾಕ್ಷಣ ಪುರುಷರ ಬಂಧನವೆಂದು ಅರ್ಥವಲ್ಲ. ಸ್ತ್ರೀ ಪುರುಷರೂ ಸೇರಿದಂತೆ ಮಾನವ ಧರ್ಮದ ಸ್ಥಾಪನೆಗಾಗಿ ಹೋರಾಟ. ಅಂದರೆ ವರ್ಗ, ವರ್ಣ, ಲಿಂಗ ಭೇದಗಳಿಲ್ಲದ ಸಮಾನತೆಯ ವ್ಯವಸ್ಥೆಯೊಂದನ್ನು ಸ್ಥಾಪಿ ಸಲು ಹೋರಾಡುವದು. ಲೆನಿನ್ ಹೇಳುವಂತೆ ಮಹಿಳೆಯರಿಗೆ "ಸಂಪೂರ್ಣ

ಸ್ವಾತಂತ್ರ್ಯವನ್ನು ಎಲ್ಲಿಯವರೆಗೆ ಜಯಿಸಿ ಕೊಡುವದಿಲ್ಲವೋ ಅಲ್ಲಿಯವರೆಗೆ ಶ್ರಮಜೀವಿಯು ತನ್ನ ಪೂರ್ಣ ವಿಮೋಚನೆಯನ್ನು ಹೊಂದಲಾರ" ಎಂದು. ಮಹಿಳೆಯರ ವಿಮೋಚನೆಯಾಗದ ಹೊರತು ಪುರುಷರ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಆದ್ದರಿಂದ ಸ್ತ್ರೀ ಪುರುಷರೂ ಸೇರಿದಂತೆ ಈ ಹೋರಾಟದಲ್ಲಿ ಭಾಗವಹಿಸಬೇಕಿದೆ. ಜಡ ಸಂಪ್ರದಾಯಗಳ ಅಡಿ ಜಜ್ಜಿ ಹೋದ ಮಹಿಳೆಯರ ಮಾನವೀಯ ಹಕ್ಕುಗಳನ್ನು ದೊರಕಿಸಿಕೊಡಬೇಕಾಗಿದೆ.

○

ಭಾಗ–೫

ಸಾಹಿತಿಗಳ ದೃಷ್ಟಿಯಲ್ಲಿ ಮಹಿಳೆ

ಸಂಪಾದಕರು :

ಪ್ರೊ. ಸದಾನಂದ ಕನವಳ್ಳಿ

ಕಾಳಿದಾಸನ ದೃಷ್ಟಿಯಲ್ಲಿ ಸ್ತ್ರೀ

ಕೆ. ಕೃಷ್ಣಮೂರ್ತಿ

ಕಾಳಿದಾಸನು ಭಾರತೀಯ ಸಂಸ್ಕೃತಿಯ ಪ್ರತಿನಿಧಿ; ರಾಷ್ಟ್ರೀಯ ಆದರ್ಶಗಳ ಹರಿಕಾರ; ಶೃಂಗಾರರಸದ ನಿರೂಪಣೆಯಲ್ಲಿ ಸಿದ್ಧಹಸ್ತ. ಅವನು ಮೂರು ನಾಟಕಗಳನ್ನು ಬರೆದಂತೆ–ಎರಡು ಮಹಾಕಾವ್ಯಗಳನ್ನೂ ಎರಡು ಭಾವಗೀತೆಗಳನ್ನೂ ರಚಿಸಿ ಸಂಸ್ಕೃತ ಸಾಹಿತ್ಯದಲ್ಲಿ ನೂತನ ಮಾರ್ಗಗಳನ್ನೂ ನಿರ್ಮಿಸಿದ್ದಾನೆ. ಕಾಳಿದಾಸನ ದೃಷ್ಟಿಯಲ್ಲಿ ಸ್ತ್ರೀಯ ಸ್ಥಾನವನ್ನು ಅರಿಯ ಬಯಸಿದರೆ **ಮೇಘದೂತ–ಋತು ಸಂಹಾರ**ಗಳನ್ನಷ್ಟೇ ನೋಡಿದರೆ ಸಾಲದು; ಮೂರೂ ನಾಟಕಗಳ ನಾಯಕಿಯರ ಪರಿಗಳನ್ನಷ್ಟೇ ಪರಿಕಿಸಿದರೆ ಸಾಲದು; ಎರಡೂ ಮಹಾಕಾವ್ಯಗಳ ಮುಖ್ಯ ಸ್ತ್ರೀಪಾತ್ರಗಳತ್ತಲೂ ಗಮನ ಹರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಕಾಳಿದಾಸನ ಪ್ರತಿಭೆ ಸಾಮಾನ್ಯ ಸ್ತ್ರೀ ಸ್ವರೂಪದಿಂದ ಹಿಡಿದು ಜಗನ್ಮಾತೆ ಪಾರ್ವತಿದೇವಿಯವರೆಗೆ ಕ್ರಮವಾಗಿ ವ್ಯಾಪಿಸಿರುವ ಕಲ್ಪನೆ ನಮಗೆ ದೊರೆಯುತ್ತದೆ. ಇದರಲ್ಲಿ ಮಾನವ ಪ್ರತಿಭೆಯಷ್ಟೇ ಅಲ್ಲ, ದಿವ್ಯಪ್ರಜ್ಞೆ ಹಾಗೂ ಋಷಿದರ್ಶನಗಳೂ ಸಂಗಮವಾಗುತ್ತವೆ. ಸಾಮಾನ್ಯ ಸಾಂಸಾರಿಕ ಅನುಭವಗಳ ಸ್ತರಕ್ಕಿಂತ ಮೇಲೆ ಮೇಲೆ ಏರುತ್ತ ಹೋದಂತೆ ಪೌರಾಣಿಕ ಸಾಂಕೇತಿಕ ನೂತನ ರಸಲೋಕದಲ್ಲಿ ನಾವು ಪ್ರವೇಶಿಸುತ್ತೇವೆ.

ಪುರುಷ ಸ್ವಭಾವಕ್ಕಿಂತ ಸ್ತ್ರೀಯರ ಸ್ವಭಾವವನ್ನೇ ಕಾಳದಾಸ ಚನ್ನಾಗಿ ಬಲ್ಲ. ಸ್ತ್ರೀ ಪಾತ್ರಗಳನ್ನು ಅವನು ಎಷ್ಟು ಹೆಚ್ಚು ಸ್ವೈಜವಾಗಿ, ಸ್ಫುಟವಾಗಿ, ಜೀವಂತವಾಗಿ ಚಿತ್ರಿಸಿದ್ದಾನೆಂದರೆ ವಾಲ್ಮೀಕಿಯ ಸೀತೆಯನ್ನುಳಿದರೆ ಸ್ತ್ರೀಪಾತ್ರ ನಿರೂಪಣೆಯಲ್ಲಿ ಕಾಳಿದಾಸನನ್ನೂ ಮೀರಿಸಿದ ಇನ್ನೊಬ್ಬ ಭಾರತೀಯ ಕವಿಯಿಲ್ಲ.ಭಾರತೀಯ ಸ್ತ್ರೀತ್ವದ ಆದರ್ಶವನ್ನು ಅವನು ವಾಸ್ತವತೆಯನ್ನು ಎಳ್ಳಷ್ಟೂ ಬಿಟ್ಟುಗೊಡದಂತೆ-ರೂಪಿಸಿದ್ದಾನೆ.

ಹಳ್ಳಿಯ ಕೃಷಿಕ ನಾರಿಯರು ಏನೂ ಅರಿಯದ ಮುಗುದೆಯರು ಎಂದು ಕಾಳಿದಾಸ ಚಿತ್ರಿಸಿದ್ದಾನೆ.ಮಳೆಗಾಲದ ಕಾರ್ಮುಗಿಲನ್ನು ಕಂಡೊಡನೆ ಅವರಿಗೆ ದೇವದರ್ಶನವಾದಷ್ಟು ಸಂತೋಷ! ಅವರ ಕೃಷಿ ಸಫಲವಾಗಲು ಮೋಡದ ಕೃಪೆಯೊಂದೇ ಕಾರಣವೆಂಬ ದೃಢ ನಂಬಿಕೆ ಅವರಿಗಿರುವದರಿಂದ ಎಲ್ಲರಿಗಿಂತ ಮುಂಚೆ-ಮೋಡದ ಆಗಮನವನ್ನು ಪ್ರೀತಿಯ ಭರದಿಂದ ಸ್ವಾಗತಿಸುತ್ತಾರೆ. ತಮ್ಮ ಕಣ್ಣಿನಿಂದಲೇ ಮೋಡವನ್ನು

ಕುಡಿದು ಬಿಡುವಂತೆ ಅವರು ಬೀರುವ ಭಾವಪೂರ್ಣ, ಹೃದಯ ಪೂರ್ಣವಾದ ಸರಲ ಪ್ರೇಮದ ನೋಟ ಹುಬ್ಬು ಹಾರಿಸುವ ಪೌರನಾರಿಯರ ಕೃತಕ ಮಂದ ಹಾಸಕ್ಕಿಂತ ನೋಡಕ್ಕೆ ಹಿತವೆನಿಸುತ್ತದೆಂದು ಕಾಳಿದಾಸನ ತರ್ಕ.

'ತ್ವಯ್ಯಾಯತ್ತಂ ಕೃಷಿಫಲಮಿತಿ ಭ್ರೂವಿಲಾಸಾನಭಿಜ್ಞೈಃ
ಪ್ರೀತಿಸ್ನಿಗ್ಧೈಃ ಜನಪದ-ವಧೂ-ಲೋಚನೈಃ ಪೀಯಮಾನಃ'

ಮೇಘಸಂದೇಶ I, ೧೬

ಸಕಲಕೃತ್ರಿಮ ವಿಲಾಸಗಳಿಗೂ ನೆಲೆವೀಡಾಗಿರುವವರೇ ಪೌರನಾರಿಯರು. ಅವರ ಕಡೆಗಣ್ಣ ನೋಟದ ಸೊಬಗು ರಸಿಕರನ್ನೂ ಪರವಶಗೊಳಿಸುವಂತಹದು. ಗಾಢಾಂಧಕಾರದಲ್ಲಿ ಒಮ್ಮೆ ಕೋಲ್ಮಿಂಚು ಬೆಳಗಿದರೆ ಹೇಗೆ ಕಣ್ಣಿಗೆ ಹಬ್ಬವೋ ಹಾಗೆ, ತಟ್ಟನೆ ಚಕಿತಗೊಳಿಸುವ, ಮುದಗೊಳಿಸುವ ಈ ವಿಲಾಸಿನಿಯರ ಕಣ್ಣಮಿಂಚನ್ನು ಕಂಡು ಆನಂದಿಸದಿದ್ದರೆ ಕಣ್ಣಿದ್ದೂ ಇಲ್ಲದಂತೆ.

'ವಿದ್ಯುದ್ದಾಮ ಸ್ಫುರಿತ ಚಕಿತೈಸ್ತತ್ರ ಪೌರಾಂಗನಾನಾಂ
ಲೋಲಾಪಾಂಗೈರ್ಯದಿ ನ ರಮಸೇ ಲೋಚನೈರ್ವಂಚಿತೋಽಸಿ'

ಅದೇ, I, ೨೭.

ಉಜ್ಜಯಿನೀ ಪಟ್ಟಣದಲ್ಲಿ ಕತ್ತಲಾದೊಡನೆ ಸಂಕೇತಸ್ಥಾನಕ್ಕೆ ಕದ್ದು ಹೋಗುತ್ತಿರುವ ಅಭಿಸಾರಿಕೆಯರಿದ್ದಾರೆ; ಮಾತು ಕೊಟ್ಟ ಪ್ರಿಯರು ಬಾರದೆ ಕಳವಳಿಸುವ ಪ್ರೇಯಸಿಯರಿದ್ದಾರೆ; ತಮ್ಮ ಕೇಶಸಂಸ್ಕಾರದ ಧೂಪದ ಹೊಗೆ ಕಿಟಕಿಗಳಿಂದ ಹೊರ ಹೊಮ್ಮಿದಾಗ ಹೊಸ ಮೋಡವೇ ರೂಪ ತಳೆಯಿತೋ ಎಂದೆನಿಸುವ ಸುಂದರಿಯರಿಯರಿದ್ದಾರೆ; ನದೀ ತೀರಗಳಲ್ಲಿ ಬೆಳೆದ ಕಾಡು ಹೂ ಗಳನ್ನು ಕಿತ್ತು ಚೆಲುವಾದ ಹಾರಗಳನ್ನು ಮಾಡಿ ಮಾರುವ ಮಾಲೆಗಾರ್ತಿಯರೂ ಇದ್ದಾರೆ. ಹೀಗೆ ಮೇಘದೂತದಲ್ಲಿ ಬಗೆಬಗೆಯ ಸ್ತ್ರೀವಿಲಾಸಗಳ ಸಹಜಸುಂದರ ವರ್ಣನೆ ಬಂದಿದೆ. ಆದರೆ ಕವಿಪ್ರತಿಭೆಯಲ್ಲಿ ಎಲ್ಲ ನದಿಗಳೂ ಮೇಘರಾಜನ ಮಡದಿಯರಾಗಿ, ಅವನ ಆಗಮನದಿಂದ ಹರ್ಷಗೊಂಡು ಉಬ್ಬುವ ಪ್ರಿಯತಮೆಯರಾಗಿ ಮೇಘನಿಲ್ಲದಾಗ ಅಗಲಿಕೆಯ ನೋವಿನಿಂದ ಕೃಶರಾಗುವ ಹದಿಬದೆಯರಾಗಿ ಕಾಣುತ್ತಾರೆ.

ಶೃಂಗಾರಕ್ಕಾಗಿಯೇ ಬಾಳುವ ಯಕ್ಷಪತ್ನಿಯ ವರ್ಣನೆಯಲ್ಲಿ, ವಿರಹದ ಉರಿಯಲ್ಲಿ ಬೆಂದು ನೊಂದು ಒದ್ದಾಡುವ ಅವಳ ಪ್ರೇಮ ಸ್ವರೂಪ ಕಾಳಿದಾಸನ ಕಾವ್ಯರಸದ ಜೀವಾಳವಾಗಿ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ. ಪತಿಯ ಸಹವಾಸದಲ್ಲಿದ್ದಾಗ ಅರಳಿದ ಪದ್ಮದಂತಿದ್ದ ಅವಳ ಮುಖವಿಂದು ಬಾಡಿ ವಿರಹದಲ್ಲಿ ಕಂಗೆಟ್ಟಿದ್ದರೂ ಅವಳ ಆ ವೇದನೆಯೇ ಓದುವ ರಸಿಕರಿಗೆ ಆನಂದದಾಗರವೆನಿಸುತ್ತದೆ. ಸದಾ ಪುನಸ್ಸಮಾಗಮದ ಕನಸು ಕಾಣುತ್ತ ಸಿಂಗಾರಗಳನೆಲ್ಲ ದೂರ ಮಾಡಿ ಪತಿಯ ಚಿತ್ರ ಬರೆಯುವದರಲ್ಲಿಯೋ, ಪತಿನಾಮವಿರುವ ಹಾಡನ್ನು ಹಾಡುವದರಲ್ಲಿಯೋ ಪತಿಯ ಬಗ್ಗೆ ಗಿಳಿಯನ್ನು ಪ್ರಶ್ನಿಸುವದರಲ್ಲಿಯೋ ಅವಳು ಕಷ್ಟದಿಂದ ಕಾಲ ನೂಕುತ್ತ ಪತಿಯ ಬರವಿಗಾಗಿ ಕಾತರಿಸಿ ಹಂಬಲಿಸುವ ಚಿತ್ರ ಭಾರತೀಯ ಪಾತಿವ್ರತ್ಯದ ಶಾಶ್ವತ ಮಹಾತ್ಮ್ಯವನ್ನು ಎತ್ತಿಹಿಡಿಯುವ ಮಾನಸ್ತಂಭವೆಂದರೂ ಸಲ್ಲುತ್ತದೆ. ವಿರಹಿಣಿಯಾದ ಶಕುಂತಲೆಯಲ್ಲೂ ಇದರ ಪ್ರತಿರೂಪ ಕಾಣಸಿಗುತ್ತದೆ. ಪತಿಯ ಸಹವಾಸದಲ್ಲಿದ್ದಾಗ ಶೃಂಗಾರ



ಲಿಂ. ಪೂಜ್ಯ ಶ್ರೀ ಸಂಗನಬಸವ
ಶಿವಯೋಗಿಗಳು, ಬಂಥನಾಳ
ಶಿಕ್ಷಣ ಸಂಸ್ಥೆಗಳ ಪ್ರೇರಕಶಕ್ತಿ



ಪೂಜ್ಯ ಶ್ರೀ ಮಹಾಂತಸ್ವಾಮಿಗಳವರು
ಹಿರೇಮಠ, ಆಲಮಟ್ಟಿ
ಧರ್ಮದರ್ಶಿಗಳು



ಲಿಂ. ಯಜಮಾನ ಶ್ರೀ ವೀರಪ್ಪನವರು
ಚಿನಿವಾರ
ಮಾತೋಶ್ರೀಯವರ ಆದರ್ಶ ಪತಿ



ಲಿಂ. ಡಾ. ಎಸ್. ಆರ್. ಜಿಗಜಿನ್ನಿ
ಧರ್ಮದರ್ಶಿಗಳು
ಸಂಸ್ಥೆಯ ಪ್ರಗತಿಗೆ ಕಾರಣೀಭೂತರು



ಸನ್ಮಾನ್ಯ ಶ್ರೀ ಜೆ. ಎಸ್. ದೇಶಮುಖ
ವಿಶ್ವಸ್ಥ ಮಂಡಳಿಯ ಕಾರ್ಯದರ್ಶಿಗಳು
ಮಾನ್ಯ ಸಚಿವರು, ಕರ್ನಾಟಕ ಸರಕಾರ



ಸನ್ಮಾನ್ಯ ಶ್ರೀ ಕೆ. ಬಿ. ನಾವದಗಿ
ಪ್ರಧಾನ ನಗರ ಹಾಗೂ ಸೆಶ್ಯನ್ಸ
ನ್ಯಾಯಾಧೀಶರು, ಬೆಂಗಳೂರು



ಶ್ರೀಮತಿ ವಾಸಂತಿದೇವಿ ಎಸ್. ಜಿಗಜಿನ್ನಿ
ಧರ್ಮದರ್ಶಿಗಳು
ಮಾತೋಶ್ರೀಯವರ ಬಳಗ



ಶ್ರೀ ಶಂಕರಪ್ಪನವರು ತಡಸದ
ಧರ್ಮದರ್ಶಿಗಳು
ಸಂಸ್ಥೆಯ ಕ್ರಿಯಾಶೀಲ ಸದಸ್ಯರು

ದಿಂದ ತುಂಬಿದ ಸೌಭಾಗ್ಯ, ಪತಿವಿರಹದಲ್ಲಿ ವ್ರತಾಚರಣೆಯಿಂದ ಪವಿತ್ರವಾದ ತಪೋಭಾಗ್ಯ–ಇವು ಕಾಳಿದಾಸನ ದೃಷ್ಟಿಯಲ್ಲಿ ಸ್ತ್ರೀಯ ಎರಡು ಎದ್ದು ಕಾಣುವ ಮುಖಗಳು.

ಈ ಮಾತಿಗೆ ಕಾಳಿಬಾಸನ ಎಲ್ಲ ಕಾವ್ಯ–ನಾಟಕಗಳಲ್ಲಿ ಪುಷ್ಟಿ ದೊರೆಯುತ್ತದೆ. ದಿಲೀಪನ ರಾಣಿಯಾದ ಸುದಕ್ಷಿಣೆ ರಾಜನೊಂದಿಗೆ ಗೋಸೇವಾವ್ರತದಲ್ಲಿ ಸಹಧರ್ಮಿಣಿಯಾಗಿ ವನವಾಸ ಮಾಡುತ್ತಾಳೆ; ತತ್ಫಲವಾಗಿ ರಘುವಿನಂತಹ ಮಹಾವೀರನ ಮಾತೆಯಾಗುತ್ತಾಳೆ. ದಶರಥನ ಮೂವರು ರಾಣಿಯರೂ ಅವನ ಪುತ್ರಕಾಮೇಷ್ಟಿಯಲ್ಲಿ ಸಹಭಾಗಿನಿಯರಾದ್ದರಿಂದಲೇ ಅವತಾರ ಪುರುಷರಾದ ರಾಮಲಕ್ಷ್ಮಣಾದಿಗಳಿಗೆ ತಾಯಂದಿರಾಗುವ ಭಾಗ್ಯವನ್ನು ಪಡೆಯುತ್ತಾರೆ. ಪತಿಯ 'ಸಹಧರ್ಮಚಾರಿಣಿ'ಯಾದ ಸೀತೆಯ ವನವಾಸ–ಅಜ್ಞಾತವಾಸಗಳ ಕಥೆ ಸುಪ್ರಸಿದ್ಧವಿದೆ. ಕಾಳಿದಾಸನು ಭಾರತೀಯ ಸ್ಮೃತಿ ಪುರಾಣದಲ್ಲಿ ಉಕ್ತವಾದ ಪಾತಿವ್ರತ್ಯದ ಮಹಾಮಹಿಮೆಯನ್ನು ಮೆರೆಯುವದಕ್ಕಾಗಿಯೇ **ರಘುವಂಶ** ಮಹಾಕಾವ್ಯದ ಸ್ತ್ರೀಪಾತ್ರಗಳನ್ನು ಚಿತ್ರಿಸಿದ್ದಾನೆ ಎನ್ನಬಹುದು. ಎಂತಹ ಸತ್ವಪರೀಕ್ಷೆಯ ಪ್ರಸಂಗವೇ ಬರಲಿ, ಎಷ್ಟೇ ದುಃಖಕರವಾದ ಪತಿಯಾಜ್ಞೆಯಿರಲಿ—ಅದನ್ನು ಅತ್ಯಂತ ವಿನೀತ ಭಾವದಿಂದ ಶಿರಸಾ ವಹಿಸುವ ಮನೋಧರ್ಮ ಮತ್ತಾವ ದೇಶದ ಸ್ತ್ರೀಪಾತ್ರಗಳಲ್ಲಿಯೂ ಕಾಣಿಸಿಗದು. ನಿರಪರಾಧಿನಿಯಾದ ಗರ್ಭಿಣಿ ಸೀತೆಯನ್ನೂ ಒಂದು ಮಾತೂ ಹೇಳದೆಯೇ ಲಕ್ಷ್ಮಣನ ಮೂಲಕ ಕಾಡಿಗಟ್ಟುವ ರಾಮನ ವರ್ತನೆ ಯಾರನ್ನಾದರೂ ಕೆರಳಿಸುವಂತಹದು. ಆದರೆ ಸೀತೆ ಅದನ್ನು ಎಷ್ಟೊಂದು ಸಹನೆಯಿಂದ ಸ್ವೀಕರಿಸುತ್ತಾಳೆಂಬುದನ್ನು ಕಾಳಿದಾಸನ ಮಾತಿನಲ್ಲೇ ನೋಡಿ ಅರಿಯಬೇಕು : "ಅಂದು ರಾಜ್ಯಲಕ್ಷ್ಮಿ ಮಾಲೆ ಹಿಡಿದು ನಿನ್ನ ಪತ್ನಿಯಾಗಲು ಎಂದರೆ ನನ್ನ ಸವತಿಯಾಗಲು ಮುಂದೆ ಬಂದಳು. ನೀನು ಅವಳ ಪ್ರಲೋಭನಕ್ಕೆ ಮನಸೋಲದೆ ನನ್ನೊಂದಿಗೆ ವನವಾಸವೇ ಸಾಕೆಂದು ಹೊರಟುಬಂದಿದ್ದೆ. ಅದನ್ನು ಅವಳು ಮರೆಯುವದುಂಟೆ ? ವನವಾಸಾನಂತರ ನೀನು ಅವಳನ್ನು ವರಿಸಿದೊಡನೆ, ಸವತಿಯಾದ ನಾನು ನಿನ್ನೊಂದಿಗೆ ಕ್ಷಣಕಾಲವೂ ಇರಲಾಗದಂತೆ—ಈಗ ಮಾಡಿದ್ದಾಳೆ. ಈ ನನ್ನ ಕಷ್ಟಕ್ಕೆಲ್ಲ ರಾಜ್ಯಲಕ್ಷ್ಮಿಯ ಸವತಿ ಮಾತ್ಸರ್ಯವೇ ಕಾರಣ. ನೀನೇನು ಮಾಡೀಯೆ ?" **ರಘುವಂಶ** XIV, ೬೩.

ಅಲಂಕಾರಮಯವಾದ ಈ ಮಾತಿನಲ್ಲಿ–ಅಥವಾ ಪರ್ಯಾಯೋಕ್ತಿಯಲ್ಲಿ–ರಾಮನ ನಿಂದೆಯಿದೆಯೆಂದು ಯಾರೂ ಭಾವಿಸುವಂತಿಲ್ಲ. ಅದು ಸ್ತುತಿಯ ಒಂದು ಪ್ರಕಾರದಂತೆಯೇ ತೋರುತ್ತದೆ. ಸಾಮಾನ್ಯ ಸ್ತ್ರೀಯಂತೆ ಸೀತೆ ಅಂತಹ ದುರ್ಭರ ದುಃಖ ಪ್ರಸಂಗದಲ್ಲಿಯೂ ಅಧೀರಳಾಗುವದಿಲ್ಲ; ಆತ್ಮಹತ್ಯೆಗೆ ಮನಸೋಲುವದಿಲ್ಲ; ತನ್ನ ಪ್ರಾರಬ್ಧ ಕರ್ಮವನ್ನೇ ಬಯ್ದುಕೊಳ್ಳುತ್ತಾಳೆ. ಸಹನೆಯಿಂದ ವಾಲ್ಮೀಕಿ ಋಷಿಗಳ ಆಶ್ರಮದಲ್ಲಿ ಕಾಲಕಳೆದು ಲವಕುಶರಿಗೆ ತಾಯಿಯಾಗಿ ರಾಮನ ವಂಶವನ್ನೂ ಉದ್ಧರಿಸುತ್ತಾಳೆ.

ಪತಿಯಿಂದ ಪರಿತ್ಯಕ್ತೆಯಾದ ಶಕುಂತಲೆಯಾದರೂ ಹೀಗೆಯೇ. ತನಗೆ ನಿಷ್ಕಾರಣವಾಗಿ ಅನ್ಯಾಯ ಮಾಡಿ ತಾನು ಪತ್ನಿಯೇ ಅಲ್ಲವೆಂದು ನೂಕಿದ ದುಷ್ಯಂತನನ್ನು ಶಕುಂತಲೆ ಕೋಪಾವೇಶದಲ್ಲಿ ಕೂಡ 'ಅನಾರ್ಯ' ಎನ್ನುವದಕ್ಕಿಂತ ಹೆಚ್ಚು ಹೀನಾ

ಮದ ಮಾತನ್ನೇ ಆಡುವುದಿಲ್ಲ. ಅವನ ಸರ್ವಾಪರಾಧವನ್ನು ಪ್ರಶಾಂತಚಿತ್ತದಿಂದ ಮನ್ನಿಸುತ್ತಾಳೆ. ಮುಂದೆ ಪುತ್ರನೊಡನೆ ಪತಿಯ ಪ್ರಸನ್ನನಾಗಲಿಕ್ಕೆ ಕಾಯುತ್ತಾಳೆ. ಈ ನಾಟಕವನ್ನು ಓದುತ್ತ ಹೋದಂತೆ ಪ್ರಕೃತಿಯ ಸುಂದರ ಪುಷ್ಪ–ತರು–ಲತೆಗಳಂತೆ ಸ್ತ್ರೀಯೂ ಪ್ರಕೃತಿ ಕನ್ಯೆಯೇ, ಸೌಂದರ್ಯದ ಪ್ರತೀಕವೇ ಎನ್ನುವ ಮನೋಭಾವ ಓದುಗನಲ್ಲಿ ಸಹಜವಾಗಿ ಮೂಡುತ್ತದೆ. ಅನೇಕ ಆಭರಣಗಳಿಂದ ಒಪ್ಪುವ ಕೃತ್ರಿಮ ಸೌಂದರ್ಯವಾಗಲಿ, ದೇವಲೋಕದ ಮಹಿಮೆಯಿಂದ ಒದಗುವ ದಿವ್ಯ ಸೌಂದರ್ಯವಾಗಲಿ ಭೂಲೋಕದ ಸ್ತ್ರೀಯಲ್ಲಿ ಕಾಣಬರುವ ಸಹಜ ಸೌಂದರ್ಯಕ್ಕಿಂತ ಹೆಚ್ಚಿನದಲ್ಲವೆಂಬುದನ್ನು ಕಾಳಿದಾಸನು ಮತ್ತೆ ಮತ್ತೆ ಎತ್ತಿ ತೋರಿಸಿದ್ದಾನೆ.

ಸ್ತ್ರೀಯ ನಿಸರ್ಗದತ್ತ ಸೌಂದರ್ಯಕ್ಕೆಲ್ಲ ಪತಿಪ್ರೇಮವೇ ಭಾಗ್ಯ, ಸಂತಾನ ಪ್ರಾಪ್ತಿಯಾದಾಗಲೇ ಅದರ ಸಾರ್ಥಕ್ಯ ಎಂಬುದು ಕಾಳಿದಾಸನ ಸಿದ್ಧಾಂತವೆನಿಸುತ್ತದೆ. ಇದನ್ನೇ ಅವನ ಮಹಾಕಾವ್ಯ ಮತ್ತು ನಾಟಕಗಳೆಲ್ಲ ಸ್ಫುಟವಾಗಿ ನಿವೇದಿಸುತ್ತವೆ. ಶಕುಂತಲೆಗೆ ಭರತನಂತಹ ಕುಮಾರನೂ, ಸೀತೆಗೆ ಲವಕುಶರೂ, ಸುದಕ್ಷಿಣೆಗೆ ರಘುವು ಜನಿಸಿ ಅವರ ಜೀವನ ಸಾಫಲ್ಯಮಯವಾದಂತೆ ಪಾರ್ವತಿಗೆ ಕೂಡ ಶಿವನೊಡನೆ ವಿವಾಹ, ಬಳಿಕ ಷಣ್ಮುಖನಂತಹ ಕುಮಾರನ ಸಂಭವ–ಇವೇ ಮುಖ್ಯ ಸಂಗತಿಗಳೆಂಬುದನ್ನು ಕಾಳಿದಾಸನು **ಕುಮಾರ ಸಂಭವ**ವೆಂಬ ಅನ್ವರ್ಥಕ ಕಾವ್ಯನಾಮದಲ್ಲಿಯೇ ಸೂಚಿಸಿದ್ದಾನೆ. ಕಾಮೋನ್ಮಾದಕ್ಕೆ ಕಾಳಿದಾಸನ ಸಹಾನುಭೂತಿಯಿಲ್ಲ; ಅದರ ಆವೇಗವಿಳಿದು ತಪಸ್ಸಿನಿಂದ ಶಾಂತವಾದ ಮೇಲೆ ಸಾಂದ್ರವಾಗಿ ನಿಲ್ಲುವ ನಿಜವಾದ ಪ್ರೇಮವೇ ಸ್ತ್ರೀಯ ಜನ್ಮವನ್ನು ಸಾರ್ಥಗೊಳಿಸಿತು, ತಾಯ್ತನದ ಸಂತೃಪ್ತಿಯನ್ನು ನೀಡಿತು! ದೇವಲೋಕದ ಅಪ್ಸರೆಯಾದ ಊರ್ವಶಿಯೂ ಕೂಡ ಭೂಲೋಕಕ್ಕೆ ಬಂದು ಪುರೂರವನೊಂದಿಗೆ ಕೂಡಿದ ಮೇಲೆ ಈ ನಿಯಮದಿಂದ ಹೊರತಾಗಲಾರಳು. ಆಕೆಗೂ ಆಯುಕುಮಾರನನ್ನು ಪಡೆದ ಮೇಲೆಯೇ ಮತ್ತೆ ದೇವಲೋಕಕ್ಕೆ ಹೋಗುವ ಅರ್ಹತೆ ಬರುತ್ತದೆ.

ಹೆಣ್ಣು ಹುಟ್ಟಿದರೆ ಅನಿಷ್ಟ; ಗಂಡು ಹುಟ್ಟಿದರೆ ಭಾಗ್ಯ ಎಂಬ ಅಪಕ್ವ ಕಲ್ಪನೆ ಕಾಳಿದಾಸನದಲ್ಲ. ಉಮೆಯ ಜನನದಿಂದ ಅವಳ ತಂದೆಯ ಜೀವನ ಪರಿಶುದ್ಧವಾಯಿತು ಹಾಗೂ ಇನ್ನೂ ಸುಂದರವಾಯಿತು–ಎಂದು ಕಾಳಿದಾಸನು ವಿವರಿಸುತ್ತಾನೆ. ಉಮೆಯ ಬಾಲಲೀಲೆ, ಅವಳ ವರ್ಧಿಸುತ್ತಿರುವ ಲಾವಣ್ಯ ಮತ್ತು ಸೌಂದರ್ಯಗಳ ವರ್ಣನೆ ಯಾವುದೇ ಸಾಹಿತ್ಯದಲ್ಲಿಯೂ ಅತಿ ಶ್ರೇಷ್ಠವಾದುದು. ಉಮೆಯ ಜೀವನದ ಆದರ್ಶೀಕರಣ ಹಿಂದೂಗಳು ಬಾಲಿಕೆಯ ಜನನವನ್ನು ಸಂತೋಷದಿಂದ ಸ್ವೀಕರಿಸರು ಎಂಬ ವಾದದ ಟೊಳ್ಳನ್ನೂ ಸುಳ್ಳಾಗಿಸುತ್ತದೆ. ಬಾಲಕನಷ್ಟೇ ಬಾಲಿಕೆಯ ಜನನವೂ ಆನಂದವನ್ನುಂಟುಮಾಡುತ್ತದೆ; ಮಗಳು ಹುಟ್ಟಿದ ಮನೆಯಂತೆ ಮುಂದೆ ಗಂಡನ ಮನೆಯನ್ನು ಬೆಳಗುವ ಭಾಗ್ಯಜ್ಯೋತಿಯಾಗುತ್ತಾಳೆ. ಇದೇ ಭಾವ **ಶಾಕುಂತಲ**ದಲ್ಲೂ ವ್ಯಕ್ತವಾಗುತ್ತದೆ. 'ಹೆಣ್ಣೆಂಬುದು ಇನ್ನೊಬ್ಬರ ಒಡವೆ; ಅದನ್ನು ಗಂಡನಿಗೆ ಒಪ್ಪಿಸಿದ ಮೇಲೆ ನ್ಯಾಸವನ್ನು ಹಿಂದಕ್ಕೆ ಮುಟ್ಟಿಸಿದಂತೆ ಮನಸ್ಸಿಗೆ ಹಗುರವಾಗುತ್ತದೆ. ಎಂಬ ಕಣ್ವರ ನುಡಿ ಪತಿಗೃಹ ಸೇರುವಲ್ಲಿಯೇ ಸ್ತ್ರೀಜೀವನದ ಧನ್ಯತೆ ಅಡಗಿದೆ

ಎಂಬುದನ್ನು ಪ್ರತಿಧ್ವನಿಸುತ್ತದೆ. ಪತ್ನಿಯನ್ನೂ ಪತಿಯ ಸೊತ್ತೆಂದು ಮಾತ್ರ ಕಾಣದೆ ಕಾಳಿದಾಸ ಅವಳನ್ನು ಗೃಹಿಣಿ, ಸಚಿವೆ, ಸಖಿ, ಪ್ರಿಯಶಿಷ್ಯೆಯಾಗಿಯೂ ಕಂಡಿದ್ದಾನೆ (ರಘುವಂಶ, VIII ೬೭.)

ಸ್ತ್ರೀಯರು ಸುಶಿಕ್ಷಿತರೂ, ಸುಸಂಸ್ಕೃತರೂ ಆಗಿರಬೇಕೆಂಬ ಕಲ್ಪನೆ ಕಾಳಿದಾಸನಿಗಿದೆ. ಹಿಂದಿನ ಜನ್ಮದಲ್ಲಿ ಪಡೆದ ವಿದ್ಯೆಗಳೆಲ್ಲ ಉಮೆಯ ಇಂದಿನ ಜೀವನದಲ್ಲಿ ಪ್ರಕಾಶಮಾನವಾಗಿದ್ದವು. (**ಕುಮಾರಸಂಭವ**, I, ೩೦) ತಪೋವನ ಕನ್ಯೆ ಶಕುಂತಳೆ ಗೃಹಕೃತ್ಯಗಳಲ್ಲಿ ಪರಿಣತಳಾಗಿದ್ದಳಲ್ಲದೆ ಸೌಜನ್ಯಮಯಿಯೂ ಆಗಿದ್ದಳು. ತುಂಬಿದ ಸಭೆಯಲ್ಲಿ ತನ್ನ ಮೇಲೆ ದುಷ್ಯಂತ ಹೊರಿಸಿದ ಆರೋಪವನ್ನು ಒಲವಾಗಿ ಅಲ್ಲಗಳೆಯಲು ಆಕೆ ವಿದ್ಯಾವಂತಳೂ ಸಮರ್ಥಳೂ ಆಹುದು. ಅವಳು ಎಷ್ಟೊಂದು ಒಳ್ಳೆಯ ಶಿಕ್ಷಣ ಪಡೆದಿದ್ದಳೆಂದರೆ ಸುಖದಿಂದ ಹಿಗ್ಗದ, ದುಃಖದಿಂದ ಕುಗ್ಗದ ಸಮಭಾವ ಅವಳದು. **ಮೇಘದೂತ**ದ ಯಕ್ಷಿಯೂ ದೇಹ ಸೌಂದರ್ಯದ ಜೊತೆ ಮನೋಸಂಸ್ಕಾರವನ್ನೂ ಪಡೆದವಳು. ಚಿತ್ರಕಲೆ, ಕಾವ್ಯ, ಸಂಗೀತ, ನೃತ್ಯ ಮೊದಲಾದ ಲಲಿತಕಲೆಗಳಲ್ಲಿ ಪರಿಣತಳು. ಮನೆಯಲ್ಲಿ ಸಾಕುಪ್ರಾಣಿಗಳನ್ನು ಪೋಷಿಸುವುದರಲ್ಲಿಯೂ ಅವಳು ಜಾಣೆ. ಮಾಳವಿಕೆಯ ಶಿಕ್ಷಣವನ್ನು ಕುರಿತು ಕವಿ ಅವಳ ಗುರುವಿನ ಬಾಯಲ್ಲಿ ಹೀಗೆ ನುಡಿಸುತ್ತಾನೆ—'ಅವಳು ಗಾಯನನೃತ್ಯಗಳಲ್ಲಿ ಎಷ್ಟು ಬೇಗ ಚತುರೆಯಾದಳೆಂದರೆ ಅವಳು ನಾನು ನೀಡಿದ ಶಿಕ್ಷಣವನ್ನು ಅರಗಿಸಿಕೊಂಡು ಅದನ್ನು ಮತ್ತೂ ಉತ್ತಮಗೊಳಿಸುವ ಮೂಲಕ ನನಗೂ ಪ್ರತಿಯಾಗಿ ಕಲಿಸಿದಳು. ಲಲಿತ ಕಲೆಗಳಲ್ಲಿ ಸ್ತ್ರೀಯರು ಸಹಜವಾಗಿಯೇ ನಿಪುಣರು—ನಿಸರ್ಗ ನಿಪುಣಾಃ ಸ್ತ್ರಿಯಃ—ಎಂಬುದು ಕಾಳಿದಾಸನ ಉಕ್ತಿ (ಮಾಲವಿಕಾಗ್ನಿಮಿತ್ರ, ಅಂಕ–೨).

ಕುಮಾರ ಸಂಭವದ VI. ೧೨ರಲ್ಲಿ ಗೌರವ ವ್ಯಕ್ತಿತ್ವಕ್ಕೆ ಹೊರತು ಲಿಂಗಕ್ಕಲ್ಲ ಎಂದು ಹೇಳಿ ಪುರುಷ–ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿದಿದ್ದಾನೆ ಕಾಳಿದಾಸ. **ಕುಮಾರ ಸಂಭವ**ದ V, ೧೬ರಲ್ಲಿ ದೊಡ್ಡ ದೊಡ್ಡ ಋಷಿಗಳು ತಪೋನಿರತ ಪಾರ್ವತಿಯ ದರ್ಶನಕ್ಕೆ ಬರುತ್ತಿದ್ದರೆಂದು ತಿಳಿಸುತ್ತಾನೆ. ಏಕೆಂದರೆ ಅರಿವು, ಧರ್ಮಗಳ ಪಕ್ವತೆ ಇರುವವರೆಲ್ಲರೂ ಗೌರವಯೋಗ್ಯರು. ಅವಳ ಸ್ತ್ರೀತ್ವವಾಗಲಿ ತಾರುಣ್ಯವಾಗಲಿ ಇಲ್ಲಿ ಗೌಣ.

ಕಾಳಿದಾಸನ ನಾಯಕರೆಲ್ಲ ಬಹುಪತ್ನೀಕರು. ಆಗಿನ ಯುಗದಲ್ಲಿ ರಾಜಕೀಯ ಸಹಯೋಗಕ್ಕಾಗಿ ರಾಜರು ಅನೇಕ ಮಡದಿಯರನ್ನು ಹೊಂದಿರುತ್ತಿದ್ದರು. ಹಾಗಿದ್ದರೂ ಏಕಪತ್ನೀವ್ರತಸ್ಥ ಶ್ರೀ ರಾಮಚಂದ್ರನೇ ಪರಮೋಚ್ಚ ಆದರ್ಶ. ಆದರೆ ನಾಯಕಿಯರೆಲ್ಲ ಪತಿವ್ರತೆಯರು. ಉಮಾ, ಸೀತೆ, ಶಕುಂತಲೆಯರು ಆದರ್ಶ ನಾರೀಮಣಿಗಳು. ಉಮೆ ದೇಹ ಸೌಂದರ್ಯದ ವಿಫಲತೆಯನ್ನು ಮನಗಂಡು ಕಠೋರ ತಪಸ್ಸನ್ನು ಆಚರಿಸಿ ಕೃಶಾಂಗಿಯಾದರೂ ಶಿವ ಅವಳ ಆತ್ಮಸೌಂದರ್ಯವನ್ನು ಮೆಚ್ಚಿ ಅವಳನ್ನು ವರಿಸುತ್ತಾನೆ. ಸ್ತ್ರೀ ಹೃದಯದ ಅತ್ಯಂತ ದಾರುಣವೇದನೆ ರಾಮನಿಂದ ಸೀತೆಯು ವನವಾಸಕ್ಕಟ್ಟಲ್ಪಟ್ಟಾಗ ವ್ಯಕ್ತವಾಗಿದೆ. ಆದರೂ ಅವಳು ತನ್ನ ಧೈರ್ಯವನ್ನು ದೂಷಿ

ಸುವಳೇ ಹೊರತು ರಾಮುನನ್ನಲ್ಲ. ತಪವನ್ನಾಚರಿಸಿ ಮುಂದಿನ ಜನ್ಮದಲ್ಲಿಯೂ ರಾಮುನನ್ನೇ ಪತಿಯಾಗಿ ಪಡೆಯುವೆನೆಂದು ಶಪಥಗೈಯ್ಯುತ್ತಾಳೆ.

ಕಾಳಿದಾಸನ ಸ್ತ್ರೀಯರ ಚಿತ್ರಕಲೆಯಲ್ಲಿ ಸೀತೆ–ಪಾರ್ವತಿಯರ ಗೌರೀ ಶಿಖರದಂತಹ ಆದರ್ಶಗಳಿಗೆಡೆಯಿರುವಂತೆ ಪ್ರಣಯ ಕೋಪದಿಂದ, ಪರಸ್ಪರ ಮೇಲಾಟದಿಂದ ನಾಯಕನ ಪ್ರೇಮಕ್ಕೆ ಭಿನ್ನ ಆಯಾಮುಗಳನ್ನು ಒದಗಿಸುವ ಸವತಿಯರು ಮತ್ತು ವಿವಾಹಪೂರ್ವ ಶಂಕೆ–ಆತಂಕಗಳಿಂದ ಆಗುವ ಭಾವಾನುಭಾವಗಳಿಗೆ ಮಾದರಿಯನ್ನು ಒದಗಿಸುವ ಧಾರಿಣಿ ಇರಾವತಿಯಂತಹ ಸ್ತ್ರೀಯರಿಗೂ ಎಡೆಯಿದೆ. ಆದರೆ ಇಂಥವುಗಳು ವೈನೋದಿಕವಾಗಿದ್ದು, ವೈಚಾರಿಕವೆಂದು ಭಾವಿಸಬಾರದು.

ಪತಿವ್ರತೆಗೆ ಒದಗಬಹುದಾದ ಕಷ್ಟದ ಪರಾಕಾಷ್ಠೆಯನ್ನು ಶಕುಂತಳೆ ಅನುಭವಿಸುತ್ತಾಳೆ. ಪತಿಯಿಂದ ತಿರಸ್ಕೃತಳಾಗಿ ಅವಮಾನಿತಳಾಗುತ್ತಾಳೆ. ಅವಳ ಮನಸ್ಸು ಶೂನ್ಯವಾಗುತ್ತದೆ. ಭಯ, ದುಃಖ, ನಿರಾಶೆಗಳಿಂದ ಕುದಿಯುತ್ತ ಏಕಾಂಗಿನಿಯಾಗಿ ನಿಲ್ಲುತ್ತಾಳೆ. ಪರಿತ್ಯಕ್ತಳಾಗಿ ಅವಳು ತೋರಿದ ಸಹನೆ, ಆ ದುಃಖ ಸಹಿಷ್ಣುತೆ ಮತ್ತು ಪತಿಯನ್ನು ಮತ್ತೆ ಸೇರುವತನಕ ಅವಳ ಸಂಯಮಪೂರ್ಣ ಜೀವನ ಇವು ಉಚ್ಚತರಗತಿಯವು.

ಹೀಗೆ ಭೋಗ ಜೀವನದಲ್ಲಿ ಮಿಂದು, ಯೋಗಜೀವನದಲ್ಲಿ ಬೆಂದು ಪರಿಶುದ್ಧವಾದ ಪ್ರೇಮವನ್ನೇ ಕಾಳಿದಾಸನು ಚಿತ್ರಿಸಿದ ಉಮೆ, ಸೀತೆ ಮತ್ತು ಶಕುಂತಲೆಯರಲ್ಲಿ ಕಾಣುತ್ತೇವೆ.

○

ಹರಿಹರನ ದೃಷ್ಟಿಯಲ್ಲಿ ಸ್ತ್ರೀ

ಡಾ. ಬಿ. ಬಿ. ಹೆಂಡಿ

ನಮ್ಮ ಹಿರಿಯ ಕವಿಗಳು ಜೀವನದ ಪ್ರಮುಖ ವಿಷಯುಗಳ ಬಗೆಗೆ ತಳೆದ ನಿಲುವನ್ನು ಅರಿತು ಕೊಳ್ಳುವದು ಒಂದು ಪ್ರಯೋಜನಕಾರಿ ಸಾಹಿತ್ಯಿಕ ಅಧ್ಯಯನ. ಇಂತಹ ವಿವಿಧ ಮುಖವಾದ ಅಧ್ಯಯನಕ್ಕೆ ಅರ್ಹರಾದ ಕವಿಗಳಲ್ಲಿ ಹರಿಹರನೊಬ್ಬ.

ಸ್ತ್ರೀಯನ್ನು ಕುರಿತು ಹರಿಹರನು ಹೊಂದಿದ ದೃಷ್ಟಿಯ ಸ್ವರೂಪವನ್ನು ಅರಿತು ಕೊಳ್ಳುವ ಪೂರ್ವದಲ್ಲಿ ಒಂದೆರಡು ಅಂಶಗಳನ್ನು ಗಮನಿಸುವದಗತ್ಯ. ಮಹಾಕವಿ ಯಾದವನಿಗೆ ಜೀವನವೂ ಕಾವ್ಯವೂ ಕೇವಲ ಆಡುಂಬೊಲಗಳಾಗಿರದೆ ಗಂಭೀರ ವಿಷಯುಗಳಾಗಿರುತ್ತವೆ. ಆತನ ಕವಿತೆ 'ಬಾಯ ನುಡಿಗಳ ಕೇಳಿ ಕಿವಿಯೊಳಗಾಯೆ ನುತ ಪರಿಣಮಿಸಿ ಹೋದ ವಿದಾಯ' ವಾಗಿರುವದಿಲ್ಲ. ಜೀವನವನ್ನು ಕುರಿತಾದ ಆಳವಾದ ಚಿಂತನ, ಅನುಭವ, ಮೌಲ್ಯ ನಿರ್ದೇಶನ, ಅನ್ವೇಷಣಾದಿಗಳು ಆತ ತಳೆ ದಿರುವ ಸಮಗ್ರ ಜೀವನ ದರ್ಶನದ ಬೆಳಕಿನಲ್ಲಿ ಅವನ ಕಾವ್ಯದಲ್ಲಿ ಪಡಿಮೂಡಿರುತ್ತವೆ. ನಮ್ಮ ಸಾಹಿತ್ಯದಲ್ಲಿ ತಮ್ಮ ವ್ಯಕ್ತಿತ್ವದ ವೈಶಿಷ್ಟ್ಯ, ಉನ್ನತ ಕವಿತಾಶಕ್ತಿಗಳೊಂದೊ ಡಗೂಡಿದ ಮಹಾಕವಿಗಳ ಪಂಕ್ತಿಗೆ ಸೇರುವವರಲ್ಲಿ ಹರಿಹರನೊಬ್ಬ. ಆತನ ಕಾವ್ಯ ವಸ್ತುವಿನ ಯಾವೊಂದು ಅಂಶವನ್ನು ವೀಕ್ಷಿಸಿದರೂ ಅಲ್ಲಿ ಆತನ ಸಮಗ್ರ ಜೀವನ ದರ್ಶನ ಸ್ಪಂದಿಸುತ್ತಿರುವದು ಕಾಣುತ್ತದೆ. ಈ ಕಾರಣದಿಂದಾಗಿ ಸ್ತ್ರೀಯನ್ನು ಕುರಿತು ಹರಿಹರನು ಹೊಂದಿದ್ದ ಅಭಿಪ್ರಾಯ, ಭಾವನೆ, ಅನುಭವಗಳೆಲ್ಲ ಒಟ್ಟು ಮನುಷ್ಯ ಜೀವಿತದ ಬಗೆಗೆ ಆತನ ತಾತ್ವಿಕ ನಿಲುವಿಗೆ ಅನುಗತವಾಗಿರುವದು ಗೋಚರಿಸುತ್ತದೆ.

ಅಲ್ಲದೆ, ಹರಿಹರನ ಕಾವ್ಯ ಮತ್ತು ಅಲ್ಲಿನ ವಿಶಿಷ್ಟ ವಿಚಾರಧಾರೆ ಆತ ಬದು ಕಿದ್ದ ಕಾಲದ ಪ್ರೇರಣೆ ಹಾಗೂ ಸತ್ವಗಳಿಂದ ಪ್ರಭಾವಿತವಾಗಿವೆ, ಪರಂಪರೆಗೆ ಹೊಸ ಅರ್ಥವಮೌಲ್ಯವನ್ನು ತೊಡಿಸುವ ಯತ್ನಗಳಾಗಿವೆ. ಮಹಾಕವಿ ತಾನು ಬದುಕಿದ್ದ ಯುಗದ ಸತ್ವನಾಗಿರುತ್ತಾನೆ. ಇಲ್ಲವೆ ಆ ಯುಗಕ್ಕೆ ವಿಶಿಷ್ಟನಾದ ಹೊಸ ಸತ್ವ ವನ್ನು ಪ್ರೇರಿಸುವವನಾಗಿರುತ್ತಾನೆ. ಆತನ ಪ್ರಜ್ಞೆಯಲ್ಲಿ ಸಮಕಾಲೀನ ಶಕ್ತಿ ದೌರ್ಬಲ್ಯಗಳ ಕ್ರಿಯೆ ಪ್ರತಿಕ್ರಿಯೆಗಳು ಕಾರ್ಯ ಮಾಡುತ್ತಿರುತ್ತವೆ. ಜೊತೆಗೆ

ಪರಂಪರೆಯೂ ಕಾರ್ಯ ಮಾಡುತ್ತಿರುತ್ತದೆ. ಸಾಮಾಜಿಕ ಸಂಬಂಧ ಒಡನ ಸಮಸ್ಯೆ, ವಿಚಾರಗಳನ್ನು ನಿರೂಪಿಸುವಾಗ ಆತ ಒಂದು ಬಗೆಯಲ್ಲಿ ಪರಂಪರೆಯನ್ನು ಸಮಕಾಲೀನ ಪ್ರಭಾವ ಆಹ್ವಾನಗಳ ಬೆಳಕಿನಲ್ಲಿ ಪುನಃ ಅರ್ಥೈಸುತ್ತಲಿರುತ್ತಾನೆ. ಆದುದರಿಂದ ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಕಾವ್ಯ ರಚಿಸಿದ ಹರಿಹರನು ತನ್ನ ಕೃತಿಗಳಲ್ಲಿ ಸ್ತ್ರೀ ಜೀವನವನ್ನು ಅರ್ಥೈಸುವ ರೀತಿ ಕೇವಲ ವೈಯಕ್ತಿಕವಾಗದೆ ಚಾರಿತ್ರಿಕ ಸಂದರ್ಭವೂ ಆಗುತ್ತದೆ. ವೇದಕಾಲದಿಂದ ತೊಟ್ಟು ಕನ್ನಡದ ವಚನ ಯುಗದವರೆಗೆ ನಮ್ಮ ಪರಂಪರೆ ಸ್ತ್ರೀಯನ್ನು ಕುರಿತು ಶತಶತಮಾನಗಳಿಂದ ಬೆಳೆಸಿಕೊಂಡು ಬಂದ ಭಾವನೆ, ನಂಬುಗೆ, ಆದರ್ಶ ಮೊದಲಾದವುಗಳು ಒಂದು ಮುಖವಾಗಿ ಹಾಗೂ ಹನ್ನೆರಡನೆಯ ಶತಮಾನದ ಶರಣರು ಮೂರು ನಾಲ್ಕು ತಲೆಮಾರುಗಳ ಹಿಂದೆ ನೆಲೆಯೂರಿಸಲು ಹೋರಾಡಿದ ಕ್ರಾಂತಿಕಾರಿ ಮನೋಭಾವ ಇನ್ನೊಂದು ಮುಖವಾಗಿ ಆತನ ಪ್ರಜ್ಞೆಯನ್ನು ರೂಪಿಸುವಲ್ಲಿ ಬಹು ಮುಖ್ಯವಾದ ಪಾತ್ರ ವಹಿಸಿವೆ.

ಹರಿಹರನ ಕಾವ್ಯಗಳಲ್ಲಿ ಪೂರ್ಣಾಕಾರದಲ್ಲಿಯೋ ರೇಖಾರೂಪದಲ್ಲಿಯೋ ಮೂರ್ತಿವೆತ್ತು ನಿಂತಿರುವ ಸ್ತ್ರೀ ಲೋಕವು ತಕ್ಕಮಟ್ಟಿಗೆ ವಿಸ್ತೃತವೂ ವೈವಿಧ್ಯಪೂರ್ಣವೂ ಆಗಿದೆ. ಸಂಪೂರ್ಣವಾಗಿ ಒಂದೊಂದು ರಗಳೆಯ ಪರಿಮಿತಿಯಲ್ಲಿ ಕಥಿತರಾದ ಶಿವಶರಣೆಯರು ಇರುವಂತೆ,1 ಇತರ ಶಿವಶರಣರ ಚರಿತ್ರೆ ನಿರೂಪಣಾ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಇಣುಕುನೋಟಕ್ಕೆ ಸಿಕ್ಕುವ ಹಲವಾರು ಶರಣೆಯರೂ ಲೌಕಿಕ ಸ್ತ್ರೀಯರೂ ಆತನ ಕಾವ್ಯಲೋಕದಲ್ಲಿ ಇದ್ದಾರೆ. ಕಾರಿಕಾಲಮ್ಮೆ, ವೈಜಕವ್ವೆ, ಪಾಂಡ್ಯಮಹಾದೇವಿ, ಹೆಸರು ಹೆಂಗೂಸು, ಮಹಾದೇವಿಯಕ್ಕ, ಬಿಜ್ಜಮಹಾದೇವಿ, ಕೋಳೂರ ಕೊಡಗೂಸು, ನಿಂಬಿಯಕ್ಕ ಇವರನ್ನು ಕುರಿತು ಪ್ರತ್ಯೇಕ ರಗಳೆಗಳಿದ್ದರೆ2 ತಿರುನೀಲಕಂಠರ ಸತಿ ಮುತ್ತೈದೆ, ಇಹಃ ಪಗೆಯಾಂಡರ ಸತಿ ಪತಿಹಿತವೆ, ಗಿರಿಜೆಯ ತಾಯಿ ಮೇನೆ, ಉದ್ಭಟದೇವನ ಸತಿ, ನಂಬಿಯಣ್ಣನ ತಾಯಿ ಯಸ್ಯಜ್ಞಾನಿ ಹಾಗೂ ಆತನ ಸತಿಯರಾದ ಪರವೆ, ಸಂಕಿಲಿ, ಆದಯ್ಯನ ಸತಿ ಪದ್ಮಾವತಿ, ಅಲ್ಲಮಪ್ರಭುವಿನ ಸತಿ ಕಾಮಲತೆ, ಮುಲುಹಣನ ಪ್ರೇಯಸಿ ಮುಲುಹಣೆ, ವಾಗೀಶ್ವರನ ಅಕ್ಕ ತಿಲ್ಲವಲ್ಲನಾಚಿ, ಮಾನಕಂಜರನ ಪುತ್ರಿ ತಿರುಮುಡಿಯೊಡೆಯಳು, ಸಿರಿಯಾಳನ ಪತ್ನಿ ಚಂಗಳೆ, ಕಳಚಂಗ ಪೆರುಮಾಳೆಯ ಪತ್ನಿ ಚೋಲ್ಲಡಿನಾಚಿ, ಇಳೆಯಾಂಡ ಗುಡಿಮಾರನ ಪತ್ನಿ, ರೇವಣಸಿದ್ಧೇಶ್ವರನ ಶಿಷ್ಯೆ ಮಾಯಿದೇವಿ, ಕೇಶಿರಾಜದಣ್ಣಾಯಕರ ಪತ್ನಿ ಗಂಗಾದೇವಿ, ಬಸವೇಶ್ವರನ ಪತ್ನಿಯರಾದ ಗಂಗಾದೇವಿ, ಮಾಯಿದೇವಿ, ಪೆರ್ಮಾಡಿರಾಯನ ಪತ್ನಿ ಲಕುಮಾದೇವಿ, ಹಾವಿನಹಾಳ ಕಲ್ಲಯ್ಯನ

1. ಗಿರಿಜೆಯನ್ನು ಕವಿಯು ಲೌಕಿಕ ವ್ಯಕ್ತಿಗಳ ಪಂಕ್ತಿಯಲ್ಲಿ ಸೇರಿಸಿಲ್ಲ.
2. ಇವರಲ್ಲಿ ಕಾರಿಕಾಲಮ್ಮೆ, ವೈಜಕವ್ವೆ, ಮಹಾದೇವಿಯಕ್ಕ, ನಿಂಬಿಯಕ್ಕ ಇವರನ್ನು ಹೊರತುಪಡಿಸಿ ಉಳಿದವರ ಕುರಿತಾದ ರಗಳೆಗಳು ಹರಿಹರ ರಚಿತವಲ್ಲ ಎಂಬ ಅಭಿಪ್ರಾಯ ಶ್ರೀ ದೇವೀರಪ್ಪನವರದಾಗಿದೆ. ನೋಡಿ : 'ಶರಣ ಚರಿತ ಮಾನಸ' ಮತ್ತು 'ಶಿವಶರಣ ಸಂಪುಟ' ಪೀಠಿಕೆಗಳು.

ಸುತೆ ಕಲ್ಲವ್ವೆ, ಮಲುಹಣಿಯ ತಾಯಿ ಪದ್ಮಾವತಿ ಮುಂತಾದವರು ಇತರ ಚರಿತ್ರೆಗಳಲ್ಲಿ ಅಂಶತಃ ಆದರೂ ಸಜೀವವಾಗಿ ಕಾಣುವಂತಹರು. ಇದಲ್ಲದೆ ಗಿರಿಜಾ ಕಲ್ಯಾಣದ ಸಾಂಪ್ರದಾಯಿಕ ವರ್ಣನಾ ಸಂದರ್ಭಗಳಲ್ಲಿ 'ಶಬರಿಯರು', 'ಪಕ್ಕಿಸೋವು ಪಾಮರಿಯರು', 'ಪ್ರಪಾಕಾಮಿನಿಯರು', 'ವಿರಹಿಣಿಯರು', 'ಮುಗ್ಧೆಯರು', 'ವಿದಗ್ಧೆಯರು', 'ಮಧ್ಯಮ ನಾಯಕಿಯರು', ವೇಶ್ಯೆಯರೇ ಮೊದಲಾದ ಲೌಕಿಕ ಪ್ರಪಂಚಕ್ಕೆ ಸೇರಿದ ಸಾಮಾನ್ಯ ಸ್ತ್ರೀವರ್ಗದ ಚಿತ್ರಣ ಪ್ರಮುಖವಾಗಿಯುಳ್ಳದಿದ್ದರೂ ಕಣ್ಣೊತ್ತಾಗಿ ಮೂಡಿ ಬಂದಿದೆ. ಇದರಿಂದ ಕಾವ್ಯವಸ್ತುವಿನ ಬಗೆಗೆ ಹೇಗೋ ಹಾಗೆಯೆ ಸ್ತ್ರೀ ಪ್ರಪಂಚದ ಬಗೆಗೂ ಹರಿಹರನು ವ್ಯಾಪಕವಾದ ಲೋಕಾನುಭವ ಪಡೆದವನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಆತ ಕಂಡ ಸ್ತ್ರೀಲೋಕ ವಿಶಾಲವಾದುದಾದರೂ ಅವನ ಕವಿತ್ವದ ಆದರ, ಸಹಾನುಭೂತಿ, ಶಿವಶರಣೆಯರ ಬಗೆಗೆ ಮಾತ್ರ ವಿಶೇಷವಾಗಿ ಹರಿದಿದೆ. ತನ್ನಲ್ಲಿ ಶೇಖರಣೆಗೊಂಡ ವಿಪುಲವಾದ ಅನುಭವ ಪ್ರಪಂಚಕ್ಕೆ ಉದ್ದೇಶಪೂರ್ವಕವಾಗಿಯೆ, ವಿಶಿಷ್ಟ ಜೀವನ ಮೌಲ್ಯಗಳಿಗೆ ಬದ್ಧವಾದ ಪರಿಮಿತಿಯನ್ನು ಹಾಕಿಕೊಳ್ಳುತ್ತಾನೆ. ಆತ ಮುಡಿಪಿದ ಕವಿ. ಅವನ ಕಾವ್ಯದ ಶಕ್ತಿ—ಮಿತಿಗಳಿರುವುದು ಈ ಮುಖ್ಯಾಂಶದಲ್ಲಿಯೆ.

ಒಂದೊಂದು ರಗಳೆಯ ಗಾತ್ರದಲ್ಲಿ ನಿರೂಪಿತವಾದ ಶರಣೆಯರ ಚರಿತ್ರೆಗಳನ್ನೂ ಇತರ ಚರಿತ್ರೆಗಳಲ್ಲಿ ಸಿಕ್ಕುವ ಸ್ತ್ರೀ ಸಂಬಂಧಿಯಾದ ಸಂದರ್ಭಗಳನ್ನು ಮಾತ್ರ ಪ್ರತ್ಯೇಕವಾಗಿ ಅವಲೋಕಿಸಿದರೆ ಸ್ತ್ರೀಯನ್ನು ಕುರಿತು ಹರಿಹರನ ತಳೆದಿದ್ದ ದೃಷ್ಟಿಯೆಂತಹದೆಂಬುದರ ಪೂರ್ಣ ಕಲ್ಪನೆಯುಂಟಾಗದು. ಆತ ನಿರೂಪಿಸುವ ಪ್ರತಿಯೊಂದು ಚರಿತೆಗೂ ಅದು ಶರಣರದೇ ಇರಲಿ ಶರಣೆಯರದೇ ಇರಲಿ ಅವನದೇ ಆದ ಜೀವನದರ್ಶನ ವಿಶಿಷ್ಟ ಅರ್ಥವನ್ನೂ ಆಕಾರವನ್ನೂ ಇತ್ತಿದೆ. ಆದುದರಿಂದ ಅವನು ಮಾನವ ಜೀವಿತದ ಬಗೆಗೆ ತಳೆದಿದ್ದ ಒಟ್ಟಾರೆಯಾದ ದಾರ್ಶನಿಕ ನಿಲುವಿನ ಸ್ವರೂಪವೆಂತಹದೆಂಬುವನ್ನು ಗಮನಕ್ಕೆ ತಂದುಕೊಳ್ಳುವದು ಅಗತ್ಯವಾಗುತ್ತದೆ.

ಹರಿಹರನ ಜೀವನದರ್ಶನ ತಮಿಳು ಪುರಾತನರು, ಭಾರತದ ಇತರೆಡೆಗಳಲ್ಲಾಗಿಹೋದ ಶರಣ-ಶರಣೆಯರು ಹಾಗೂ ಹನ್ನೆರಡನೆಯ ಶತಮಾನದ ವಚನಕಾರರ ಜೀವಿತ, ಸಾಧನೆ ಹಾಗೂ ಬೋಧನೆಗಳಿಂದ ಪ್ರಭಾವಿತವಾದುದು, ರೂಪಿತವಾದುದು. ಮರ್ತ್ಯಲೋಕದ ಬಾಳನ್ನು ವಚನಕಾರರಂತೆ ಹರಿಹರನೂ ಆತ್ಮೋದ್ಧಾರದ ಸಾಧನ ರಂಗವಾಗಿ ನಂಬಿದವ. ನೈಜ ಶಿವಭಕ್ತರಿಗೆ ಮಾನವ ಜನ್ಮವೆಂದೂ ನಿಕೃಷ್ಟವಲ್ಲ, ತುಚ್ಛವಲ್ಲ ಎಂಬ ಶ್ರದ್ಧೆಯಾತನದು: 'ಇದು ದಲ್ ಅಪೂರ್ವಮೀ ಮನುಜ ಜನ್ಮದೊಳುದ್ಭವಿಸಿರ್ದು ಮೂಗನಾ | ಗದೆ ಸ ಯಂಧನಾಗದಿರೆ ಪಂಗುಳನಾಗದೆ ಕೂನ ದೇಹನಾಗದೆ ವಿಕಟಾಂಗನಾಗದೆ ಕಿವುಂಡನೆಯಾಗದೆ ಹೀನ ವರ್ಣನಾಗದೆ ಮೆಱೆವಲ್ಲಿ.......'[1] 'ಜನಿಯಿಸುತಿರ್ಪ ಕೋಟಿ ಜನನಂಗಳೊಳುತ್ತಮ ಮುತ್ತಮೋತ್ತಮು | ಮನುಜಭವಂ........'[2] ಮನುಷ್ಯ ಜೀವನವನ್ನೆ ತಿರಸ್ಕರಿಸುವ ಮೌಲ್ಯಗಳು ಆತನಿಗೆ

1. ಪಂಪಾಶತಕ, ಪ. 75
2. ಅದೇ, ಪ. 81

ಅರ್ಥವುಳ್ಳವಲ್ಲ. ಮಾನವನಾಗಿ ಹುಟ್ಟುವುದನ್ನಾತ ಶಾಪವಾಗಿ, ಇಲ್ಲವೆ ಶಿಕ್ಷೆಯಾಗಿ ಗಣಿಸದೆ ಶಿಕ್ಷಣವಾಗಿ ಗ್ರಹಿಸುತ್ತಾನೆ. ಅವನ ಶರಣಗಣದ ರಗಳೆಗಳನ್ನು ಓದು ವವರು ಸಹಜವಾಗಿ ತಪ್ಪು ಕಲ್ಪನೆಗೊಳಗಾಗುವ ಸಂಭವವುಂಟು : ಬಸವೇಶ್ವರ, ಅಲ್ಲಮಪ್ರಭು, ಮಹಾದೇವಿಯಕ್ಕ, ನಂಬಿಯಣ್ಣನೇ ಮೊದಲಾದವರು ತಮ್ಮ ಜನ್ಮ ಪೂರ್ವದಲ್ಲಿ ಗಣೇಶ್ವರರೊ ರುದ್ರ ಕನ್ನೆಯರೊ ಆಗಿದುದಕ್ಕಿಂತಲೂ ಆಕಸ್ಮಿಕವಾದ ತಪ್ಪಿನಿಂದಾಗಿ ಮನುಷ್ಯ ಜನ್ಮವೆತ್ತಬೇಕಾಯಿತೆಂತಲೂ ನಿರೂಪಿಸಲಾಗಿದೆ, ನಿಜ. ಆದರೆ ಇಲ್ಲಿಯ ಮಾನವ ಜನ್ಮ ಶಿಕ್ಷೆಯೆಂಬ ಅರ್ಥವನ್ನು ಕವಿ ಇಟ್ಟುಕೊಂಡಿಲ್ಲ. ಆಯಾ ಅವತಾರಿಗಳಿಗೆ ಅದು ಅಲ್ಪ ಪ್ರಮಾಣದಲ್ಲಾದರೂ ತಮ್ಮಂತರಂಗದಲ್ಲಿ ಉಳಿದುಕೊಂಡಿರುವ ಪಾಶವನ್ನು ಛೇದಿಸಿಕೊಳ್ಳಲು ಈಶ್ವರನು ಅಂತಃಕರುಣದಿಂದ ಕರುಣಿಸಿದ ಅವಕಾಶ ಜೊತೆಗೆ ಕವಿಯ ಶ್ರದ್ಧೆಯಲ್ಲಿ ಆಯಾ ಶರಣಶರಣೆಯರು ಈಶ್ವರನ ಉದ್ದೇಶವೊಂದನ್ನು ಲೋಕದಲ್ಲಿ ಮರೆಯುವ ಮಣಿಹವನ್ನು ಹೊತ್ತು ಬಂದವರು, ಕಾರಣಿಕರು. ಈಶ್ವರೇಚ್ಛೆಯನ್ನು ನೆರವೇರಿಸುವಲ್ಲಿಯೆ ಮನುಷ್ಯ ಜೀವನದ ಸಾರ್ಥಕ್ಯವುಂಟೆಂದು ಆತ ನಂಬಿದವನಾಗಿದ್ದಾನೆ. ಮಾನವ ಜೀವಿಗಳೆಲ್ಲ ಈಶ್ವರನು ಆಡಿಸಿದಂತೆ ಆಡುವ ಸೂತ್ರದ ಗೊಂಬೆಗಳು, ಆತನೆ ಯಂತ್ರವಾಹಕ, ಅವರಲ್ಲಿದ್ದು ನಡೆಯಿಸುವವ.[3] ಆದರೂ ಮಾನವನಿಗೆ ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳ ಮೂಲಕ ಈಶ್ವರನು ಕಿಂಚಿತ್ ಸ್ವಾತಂತ್ರ್ಯವನ್ನು ದಯಪಾಲಿಸಿರುತ್ತಾನೆ. ಆ ಶಕ್ತಿತ್ರಯವನ್ನು ಶಿವಭಕ್ತಿಯ ಮೂಲಕ ಶಿವಮಯಗೊಳಿಸಿಕೊಳ್ಳುವದೇ ಜೀವಾತ್ಮರ ಪರಮಗಂತವ್ಯ.

ಈಶ್ವರೇಚ್ಛೆಯೆಂತೆಂಬುದನ್ನು ಅರಿತುಕೊಳ್ಳಲೂ ಅವರೊಡನೆ ತನ್ನ ಶಕ್ತಿ ತ್ರಯವನ್ನು ಸಮಾವಿಷ್ಟಗೊಳಿಸಿಕೊಳ್ಳಲೂ ಮನುಷ್ಯನಿಗಿರುವ ಸಾಧನೆಯೆಂದರೆ ಅನನ್ಯವಾದ ಶಿವಭಕ್ತಿ. ಅದು ಹರಿಹರನ ದರ್ಶನದಲ್ಲಿ ಎಲ್ಲ ಮಹಿಮೆಗಳ ಮಹಿಮೆ. ಜೀವನದ ಸಾರಮಂತ್ರ :

ಪರ್ಬಿ ಪಲ್ಲವಿಪ ಭಕ್ತಿಗೆ ಮನವನೆಡೆಗೊಡುತೆ
ಭಕ್ತಿ ಸುಖದಿಂದಿತರ ಸುಖವದೆಲ್ಲಿಯದೆನಿಸಿ
ಪರುಷಮಂ ಬಿಸುಡೆಂಬ ಸುರಭಿಯುಂ ತೆಗೆಯೆಂಬ
ಸುರತರುವನೊಲ್ಲೆಂಬ ಅಮೃತಮುಂ ಚೆಲ್ಲೆಂಬ
ಸಿಧಿಗಳಂ ನೂಂಕು ಚಿಂತಾಮಣಿಯ ನಿಡು ಎಂಬ
ಮಧುಗಿದುಗಳೆಲ್ಲಿಯವವೇತಱವವೇಕೆಂಬ
ಉರವಣಿಪ ಪರಮ ಭಕ್ತಿಯ ಸುಖದ ಸೊಕ್ಕೇಱಿ
....
....
ಸಂತಸದೊಳಂ ನಿನ್ನನಗಲದೆ ಮನಂಗೊಂಡು
ಅರ್ಚಿಸುತ್ತಿರ್ಪುದಂ ಕರುಣಿಸುವುದೆಲೆ ದೇವ

3. ಓಹಿಲಯ್ಯನ ರ. ಸ್ಥಲ 2.

ಈ ಉಕ್ತಿಗಳು ಆತನ ಜೀವನ ಸೂತ್ರವನ್ನು ವ್ಯಕ್ತಪಡಿಸುವಂತೆ ಅವನ ಕಾವ್ಯದ ಧ್ಯೇಯ ವಾಕ್ಯಗಳೂ ಆಗಿವೆ. ಆದುದರಿಂದ ಆತನ ಕಾವ್ಯ, ಲೋಕರಂಜಕ ರಾಗದ್ವೇಷಾದಿಗಳನ್ನೆ ಆತ್ಯಂತಿಕವಾಗಿ, ಸುಂದರವಾಗಿ ಚಿತ್ರಿಸುವ ಉದ್ದೇಶಕ್ಕೆ ಸೀಮಿತವಾಗುವದಿಲ್ಲ. ಅವನ ಕಾವ್ಯದ ನಾಯಕ–ನಾಯಕಿಯರು ಸಾವ-ಕೆಡುವ, ಅಳುವ–ನಗುವ ಸಾಮಾನ್ಯ ಲೌಕಿಕರಾಗಿರದೆ ಅಲೌಕಿಕ ಉದ್ದೇಶಕ್ಕಾಗಿ ಮುಡಿಪಿದ ಶರಣ–ಶರಣೆಯರಾಗುತ್ತಾರೆ. ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ತನ್ನ ಕಾವ್ಯಶಕ್ತಿಯನ್ನು ನಿರರ್ಥಕವಾಗಿ ವಿನಿಯೋಗಿಸಬಾರದೆಂಬ ಪ್ರತಿಜ್ಞೆಗೆ ಬದ್ಧನಾದವನಾತ. ಹಂಪೆಯಾಳ್ದನನ್ನು ಹೊಗಳುವದನ್ನು, ಅರ್ಚಿಸುವದನ್ನು, ಶರಣರ ಜೀವಿತ ಕಾರ್ಯಗಳ ಉನ್ನತಿಯನ್ನು ಕಥಿಸುವವನ್ನು ಪ್ರಧಾನ ಉದ್ದೇಶವಾಗಿ ಸ್ವೀಕರಿಸಿದ ಆತನ ಕಾವ್ಯದಲ್ಲಿ ಮಾನವ ಸಹಜ ದೌರ್ಬಲ್ಯ, ಶಕ್ತಿ, ಸಾಹಸ, ರಾಗಾದಿಗಳ ನಿರೂಪಣೆ ಗೌಣವಾಗುತ್ತದೆ.

ಹೆಣ್ಣಿರಲಿ, ಗಂಡಿರಲಿ ಮನುಷ್ಯನಾಗಿ ಜನ್ಮವೆತ್ತಿ ಬಂದ ಪ್ರತಿಯೊಬ್ಬನೂ ಸಾಂಸಾರಿಕ ಜೀವನದೊಳಗಿಂದ ಸಾಗಿಕೊಂಡೆ ಪಾರಮಾರ್ಥಿಕ ನಿಲುಗಡೆಯನ್ನು ತಲುಪುವುದು ಅನಿವಾರ್ಯವೆಂಬುದು ಬಸವಾದಿ ಶರಣರಂತೆ ಹರಿಹರನ ನಿಲುವೂ ಹೌದು. ಆ ಕಾರಣಕ್ಕಾಗಿ ಒಂದಿಲ್ಲೊಂದು ವೃತ್ತಿ, ಕೌಟುಂಬಿಕ-ಸಾಮಾಜಿಕ ಸಂಬಂಧ ಆತ ನಿರೂಪಿಸಿರುವ ಶರಣ-ಶರಣೆಯರ ಬಾಳಿನಲ್ಲಿ ಬಂದೇ ಬರುತ್ತವೆ. ಆದರೆ ಆ ಸಂಬಂಧಗಳು ಅವರಲ್ಲಿ ಆಮಿಷದ ಜಾಲವಾಗದೆ ಉದಾತ್ತೀಕರಣದ ಪರಿಪಾಕ ಹೊಂದುತ್ತವೆ. ಆದುದರಿಂದ ಶರಣರು ಪ್ರಪಂಚರಹಿತರು ಎಂಬ ಶ್ರದ್ಧೆ ಆತನದು. 'ಶರಣಂ ಸಂಸಾರಿಯೆಮಾಣ್ ಪುಸಿಪುಸಿ....... ಶರಣಂ ಮರ್ತ್ಯನೇ ಅಲ್ಲನೈ ಕೇಳ್, ಶರಣಂ ನಿರ್ಮಾಯನೆಂತುಂ ಶರಣನತುಳ ನಿಷ್ಕಾಮಿಯೆಲ್ಲಂದದಿಂದಂ ಶರಣಂ ಶಾಂತಂ ಸುಮರ್ತ್ಯಗಂ.....'[1] ಲೋಕ ನಡೆವ ದಾರಿಯಲ್ಲಿ ನಡೆವೂ ಅವರು ನಿಷ್ಪ್ರಪಂಚರು, ಲೋಕೋತ್ತರ ಚರಿತ್ರರು ಎಂದರೆ ಲೋಕವನ್ನು ನಿರಾಕರಿಸಿದವರಲ್ಲ. ಲೌಕಿಕ ಪರಿಧಿಯಿಂದ ಮೇಲೆದ್ದವರು. ಶರಣ-ಶರಣೆಯರ ಜೀವನದಲ್ಲಿ ಲೌಕಿಕ ಮೋಹದ ನಂಟೆಲ್ಲ ಬಿಸಿಲಿಗೆ ಕರಗಿ ಹೋಗುವ ಮಂಜಿನಂತೆ. ಹಾಗೆ ಕರಗುವುದರಲ್ಲಿಯೆ ಅದರ ಸಾರ್ಥಕ್ಯ. ಭಕ್ತಿಯ ಬೀಜ ಮೊಳೆತು ಕುಡಿಯಿಟ್ಟು, ಪಲ್ಲವಿಸಿ, ಹಬ್ಬಿ ಫಲಪ್ರದವಾಗಲು ಸಾಂಸಾರಿಕ ನೆಲ ಹಾಗೂ ಲೌಕಿಕ ಸಂಬಂಧಗಳ ಜಲ ಬೇಕು. ಹೀಗೆ ನರಜನ್ಮವೆತ್ತಿ ಬಂದರೂ ಶರಣ-ಶರಣೆಯರು ಬುದ್ಧಿಜೀವಿಗಳಾಗದೆ ಪಾಶಚ್ಛೇದ ಮಾಡಿಕೊಂಡು ಲೋಕೋತ್ತರ ಪದಕ್ಕೆ ಏರಿದ ಬಗೆ ಎಂತೆಂಬುದು ಹರಿಹರನ ಕಾವ್ಯದ ವಸ್ತು.

ಕವಿಗೆ ಶರಣರ ಮೇಲೆ ಇರುವಷ್ಟೆ ಗಾಢವಾದ ಗೌರವ ಶರಣೆಯರ ಮೇಲೂ ಉಂಟು. ಪುರುಷ-ಸ್ತ್ರೀಯೆಂಬ ತಾರತಮ್ಯವನ್ನಾತ ಮಾಡಿಲ್ಲ. ವಚನಕಾರರಿಂದ ಆತನಲ್ಲಿ ಪ್ರೇರಿತವಾದ ಮನೋಭಾವವಿದೆನ್ನಬೇಕು. ಹೆಣ್ಣು ಗಂಡಿನ ದೇಹ ರಚನೆಯಲ್ಲಿ ನೈಸರ್ಗಿಕ ಭಿನ್ನತೆಯುಂಟು. ಆದರದು ಹೊರಮೈಯ್ಯದು. ಆಂತರಂಗಿಕವಾಗಿ ಸ್ತ್ರೀಯು ಯಾವಂದದಿಂದಲೂ ಪುರುಷನಿಗಿಂತ ಕಡಿಮೆಯಲ್ಲ ಎಂಬುದು ಶರಣರ ದೃಢ ನಿಲುವು.

---

1 ಪಂಪಾಶತಕ 43

ಆಧ್ಯಾತ್ಮಿಕವಾಗಿ ಪುರುಷರು ಏರಬಲ್ಲ ಎತ್ತರಕ್ಕೆ ಸ್ತ್ರೀಯೂ ಏರಬಲ್ಲವಳೆಂಬುದನ್ನು ಶರಣರು ನಿಃಸಂಶಯವಾಗಿ ಕಂಡುಕೊಂಡವರು.

ಶತಶತಮಾನಗಳಿಂದಲೂ ಸ್ತ್ರೀ ವಿಷಯಕವಾಗಿ ನಮ್ಮ ಸಂಪ್ರದಾಯ ಬೆಳೆಯಿಸಿಕೊಂಡುಬಂದಿದ್ದ ಸಂಕುಚಿತ ಮನೋಭಾವಕ್ಕೆ ಶರಣರು ಪ್ರಥಮ ಆಘಾತವನ್ನುಂಟುಮಾಡಿದರು. ಇದರಿಂದಾಗಿ ಅವರ ಕಾಲದಲ್ಲಿ ಅನೇಕ ಮಹಿಳೆಯರು ಪುರುಷರ ಹೆಗಲೆಣೆಯಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ಬೆಳಗುವಂತಾಯಿತು. ವಚನಕಾರರ ಕ್ರಾಂತಿಕಾರಕ ಮತ್ತು ಪ್ರಗತಿಶೀಲವಾದ ಆಚಾರ–ವಿಚಾರಗಳ ಬಿಸುಪು ಇನ್ನೂ ತಣ್ಣಗಾಗಿರದ ಕಾಲಮಾನದಲ್ಲಿ ಬದುಕಿದ್ದ ಮತ್ತು ಅವರು ನೀಡಿದ ಬೆಳಕಿನಿಂದ ತನ್ನಂತರಂಗವನ್ನು ದೀಪ್ತಗೊಳಿಸಿಕೊಂಡಿದ್ದ ಹರಿಹರನು ತನ್ನ ಹಲವಾರು ಕೃತಿಗಳಲ್ಲಿ ಶರಣೆಯರ ಸಾಧನೆ ಮತ್ತು ಘನತೆಯನ್ನು ಮೂರ್ತಿಮಂತಗೊಳಿಸಿದನು. ಆ ಮೂಲಕ ಸ್ತ್ರೀ ಜೀವನದಲ್ಲೂ ಸಾಧಿಸಬಹುದಾದ ಘನತೆಯನ್ನು ಪ್ರತಿಷ್ಠಿತಗೊಳಿಸಿದನು. ವಚನಕಾರರಂತೆ ಹರಿಹರನ ದೃಷ್ಟಿಯಲ್ಲೂ ಸ್ತ್ರೀಯು ಕೇವಲ ಕಾಮಿನಿಯಲ್ಲ. ತನ್ನ ಸೌಂದರ್ಯ ಸವಿಗಳಿಂದ ಪುರುಷನನ್ನು ಸುತ್ತಿ ಬಿಗಿದು ಆತನ ಆತ್ಮೋನ್ನತಿಗೆ ಮಾರಕವಾಗುವ ಮೋಹದ ಬಳ್ಳಿಯಲ್ಲಿ ಸ್ತ್ರೀ ತನ್ನಾತ್ಮಪ್ರಭೆಯಿಂದ ಪುರುಷನನ್ನು ಋಜುಮಾರ್ಗದಲ್ಲಿ ನಡೆಯಿಸಿ ಆತನ ಆತ್ಮೋದ್ಧಾರಕ್ಕೆ ಪ್ರೇರಕವಾಗಬಲ್ಲಳು ಎಂಬುದು ಆತನ ದರ್ಶನ. ಇಂತಹ ದರ್ಶನವನ್ನು ಕವಿಯು ಕೇವಲ ಕಲ್ಪನಾಸುಂದರ ಆದರ್ಶಪ್ರೇರಿತ ಮನೋಭಾವದಲ್ಲಿ ಕಟ್ಟಿಕೊಂಡವನಲ್ಲ. ತನ್ನೆದುರಿಗಿದ್ದ ಹಾಗೂ ಪರಂಪರಾಗತವಾಗಿ ನಡೆದುಕೊಂಡುಬಂದ ಸಾಮಾಜಿಕ ಧಾರ್ಮಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ತ್ರೀಜೀವನವನ್ನು ಸುತ್ತಿಕೊಂಡು ಬಂದಿರುವ ಆವರಣದ ಸ್ವರೂಪವೆಂತಹದೆಂಬ ಪರಿಜ್ಞಾನವೂ ಆತನಿಗಿದೆ. ಅಂತಹ ಆವರಣವನ್ನು ತಮ್ಮ ಆತ್ಮೋನ್ನತಿಗೆ ಶರಣೆಯರು ಹೇಗೆ ಸಾಧಕವಾಗಿ ಮಾರ್ಪಡಿಸಿಕೊಂಡರು, ಅದು ಬಾಧಕವಾದಾಗ ಹೇಗೆ ಅದನ್ನು ಮೆಟ್ಟಿ ಮೇಲಿದ್ದರು ಎಂಬುದನ್ನು ಆತ ಚಿತ್ರಿಸುತ್ತಾನೆ.

ಸಾಮಾಜಿಕ ನೆಲೆಯಲ್ಲಿ ಸ್ತ್ರೀಜೀವನಕ್ಕೆ ಅತಿ ಮುಖ್ಯವೆನ್ನಿಸುವುದು ವಿವಾಹ ಹಾಗೂ ದಾಂಪತ್ಯಜೀವನ. ಹರಿಹರನು ಈ ವಿಷಯದಲ್ಲಿ ತಳೆದ ದೃಷ್ಟಿಕೋನವನ್ನು ಇಲ್ಲಿ ಪರ್ಯಾಲೋಚಿಸಬಹುದು:(ಅ)ಗುರುಹಿರಿಯರು ಪೂರ್ವಭಾವಿಯಾಗಿ ಯೋಚಿಸಿ ಮಾಡುವ ಶಾಸ್ತ್ರೋಕ್ತ ಮದುವೆ (ಬ) ಪ್ರಾಪ್ತ ವಯಸ್ಕರಾದ ತರುಣ ತರುಣಿಯರು ತಾವೇ ಪರಸ್ಪರ ಸಂಧಿಸಿ, ಮೆಚ್ಚಿ ಮಾಡಿಕೊಳ್ಳುವ ಮದುವೆ ಹಾಗೂ (ಕ) ಗುರುಹಿರಿಯರ ಅನುಮತಿ, ಆಶೀರ್ವಾದ, ವಿವಾಹದ ವಿಧಿಕ್ರಿಯೆಗಳೇನೂ ಜರುಗದೆ ಕಟ್ಟಿಕೊಳ್ಳುವ ಸಂಬಂಧ. ಈ ವಿಧದಲ್ಲಿ ಹೆಣ್ಣು ಗಂಡಿನ ದಾಂಪತ್ಯ ಸಂಬಂಧ ಬಹು ಕಾಲದಿಂದಲೂ ನಡೆದು ಬಂದಂತಹದು. ಮೊದಲನೆಯದು ಹೆಚ್ಚು ಇಷ್ಟವಾದುದೂ ಗೌರವಯುತವಾದುದೂ ಎಂದು ಸಾಂಪ್ರದಾಯಿಕವಾಗಿ ಸಮಾಜ ಒಪ್ಪಿಕೊಂಡಿದ್ದರೆ ಕೊನೆಯದನ್ನು ಅನಿಷ್ಟವೆಂದು ತಿರಸ್ಕರಿಸುತ್ತ ಬಂದಿದೆ. ಹರಿಹರನ ಕೃತಿಗಳಲ್ಲಿ ಈ ಮೂರೂ ಮಾದರಿಯ ದಾಂಪತ್ಯ ಸಂಬಂಧವನ್ನು ಕಾಣುತ್ತೇವೆ. ಆದರೆ ಆತನ ಪ್ರಜ್ಞೆ ಕೇವಲ ಸಾಮಾಜಿಕ ಒಪ್ಪಿಗೆಯ ಮುದ್ರೆಯ ಕಾರಣಕ್ಕಾಗಿ ಮೇಲಿನ ಯಾವುದೇ ವಿಧಾನದ

ಒಂದು ದಾಂಪತ್ಯವನ್ನು ಶ್ರೇಷ್ಠವೆಂದಾಗಲಿ ಕನಿಷ್ಠವೆಂದಾಗಲಿ ತೀರ್ಮಾನಿಸಿಲ್ಲ. ಅವನ ದೃಷ್ಟಿಯಲ್ಲಿ ಇಹಃಪಗೆಗ್ರಾಂಡ-ಪತಿಹಿತವೆಯರ ದಾಂಪತ್ಯವಷ್ಟೇ ಮಲುಹಣ-ಮಲುಹಣಿ, ಅಲ್ಲಮ-ಕಾಮಲತೆ ಅಥವಾ ನಂಬಿಯಣ್ಣ-ಪರವೆ ಸಂಕಲಿಯರ ದಾಂಪತ್ಯವೂ ಶ್ರೇಷ್ಠವಾದುದು. ದಾಂಪತ್ಯವೆಂಬುದು ಅವನ ದೃಷ್ಟಿಯಲ್ಲಿ ಕೇವಲ ಲೌಕಿಕ ಆಶೆ ತೃಪ್ತಿಗಳಿಗೆ ಸೀಮಿತವಾದುದಲ್ಲ. ಸತಿಪತಿಗಳ ಸಂಬಂಧ ಶಿವಭಕ್ತಿಯನ್ನು ಬೆಳೆಸಿಕೊಳ್ಳುವದಕ್ಕೂ ಆ ಮೂಲಕ ಜೀವನವನ್ನು ಶಿವಮಯವಾಗಿಸಿಕೊಳ್ಳುವದಕ್ಕೂ ಸಾಧಕವಾಗಬೇಕು.

ಹೆಣ್ಣು-ಗಂಡುಗಳಲ್ಲಿಯ ಆಕರ್ಷಣೆ, ಪ್ರಣಯ, ಕಾಮ ನಿಸರ್ಗಸಹಜವಾದುದು. ಅದು ಜಾತಿ ಸಾಮಾಜಿಕ ಅಂತಸ್ತುಗಳನ್ನು ಮೀರಿ ನಿಂತಂತಹದು ಎಂಬ ವಾಸ್ತವಾಂಶ ಹರಿಹರ ದೃಷ್ಟಿಯಿಂದ ನುಸುಳಿಕೊಂಡಿಲ್ಲ. ಈ ಆಕರ್ಷಣೆಗೆ ಸುತರಾಂ ತಪ್ಪೆಂದಾಗಲಿ ಪಾಪವೆಂದಾಗಲಿ ಆತ ಸಾಂಪ್ರದಾಯಿಕ ಮನೋವೃತ್ತಿಯವರಂತೆ ಗಣಿಸುವದಿಲ್ಲ. ಹಾಗೆಯೆ ಈ ಪ್ರಣಯ ಕಾಮಗಳು ಹಿಂದೆ ಸಂಸ್ಕೃತ ಮಹಾಕವಿಗಳು ನಿರೂಪಿಸಿದ್ದಂತೆ ಕೇವಲ ಐಹಿಕ ಭೋಗ ರಸಿಕತೆಗಳಿಗೆ, ಪರಸ್ಪರ ಹೃದಯ ಸಾಮರಸ್ಯಕ್ಕೆ ಅಥವಾ ಸಂತಾನ ಪ್ರಾಪ್ತಿಗೆ ಸೀಮಿತವೆಂದು ಆತ ಒಪ್ಪಿಕೊಳ್ಳುವದಿಲ್ಲ. ಕಾಳಿದಾಸನಲ್ಲಿ ಆರಂಭದಲ್ಲಿ ಪ್ರಣಯ ಮಾಂಸಲ ಧರ್ಮದ ತಾರುಣ್ಯಸಹಜವಾದ ಹೊರ ಮಿಂಚಿನ ಆಕರ್ಷಣೆ, ಐಂದ್ರಿಕ ಭೋಗಾಸಕ್ತಿ ಪ್ರಧಾನವಾದುದಾದರೂ ಮುಂದದು ನೈಷ್ಠಿಕ ಪ್ರಣಯಿಗಳಲ್ಲಿ ವಿಪ್ರಲಂಭಾಗ್ನಿಯಲ್ಲಿ ಬೆಂದು ಪರಿಶುದ್ಧವಾಗುತ್ತದೆ. ಸ್ವರ್ಗೀಯವಾಗುತ್ತದೆಂಬ ನಿರೂಪಣೆಯಿದೆ. ಭವಭೂತಿ ರಾಮ ಸೀತೆಯರ ದಾಂಪತ್ಯದ ಅನ್ಯೋನ್ಯತೆಯನ್ನು ಪರ್ಯಾಯವಾಗಿ, ದಾಂಪತ್ಯ ಪ್ರೇಮದ ಪರಮಗಂತವ್ಯವನ್ನು ಹೀಗೆ ಬಣ್ಣಿಸುತ್ತಾನೆ: ಸುಖದುಃಖಗಳಲ್ಲಿ ಭಿನ್ನತೆಯಿಲ್ಲದ ಹೃದಯ ಸಾಮರಸ್ಯವುಳ್ಳುದೂ ಎಲ್ಲ ಅವಸ್ಥೆಗಳಲ್ಲಿ ಒಬ್ಬರನ್ನೊಬ್ಬರು ಅನುಸರಿಸಿಕೊಂಡಿರುವಂತಹದೂ ಹೃದಯಕ್ಕೆ ವಿಶ್ರಾಮ ಸ್ಥಾನವಾಗಿರುವಂತಹದೂ ಮುಪ್ಪಿನಿಂದ ಸ್ವಾರಸ್ಯ ಕಳೆಯದಂತಹದೂ ಕಾಲ ಗತಿಸಿದಂತೆ ಪ್ರೀತಿಯಾಗಿ ಪರಿಣಮಿಸುವಂತಹದೂ ಆದ ಅದ್ವಿತೀಯ ಪ್ರೇಮವನ್ನು ಪಡೆದ ಮನುಷ್ಯನೇ ನಿಜವಾಗಿ ಧನ್ಯನು.1 ಇನ್ನೊಂದೆಡೆಯಲ್ಲಿ ಆತನೇ ದಾಂಪತ್ಯಪ್ರೇಮವು ಪರಿಪಕ್ವತೆಯನ್ನು ಕಂಡುಕೊಳ್ಳುವುದು ಸಂತಾನದ ಮೂಲಕ 'ಸಂತಾನವು ಪತಿ ಪತ್ನಿಯರನ್ನು ಬಂಧಿಸುವ ಒಂದು ಆನಂದದ ಗಂಟು' ಎನ್ನುತ್ತಾನೆ. ಇದು ಐಹಿಕ ಸ್ತರದ ಮೇಲೆ ಕಟ್ಟಲಾದ ದಾಂಪತ್ಯಪ್ರೇಮದ ಆದರ್ಶ. ಧಾರ್ಮಿಕವಾಗಿ ಪಿತೃಗಳಿಗೆ ಪಿಂಡೋದಕಗಳನ್ನೀಯಲೂ ವಂಶದ ಬಳ್ಳಿ ಅವ್ಯಾಹತವಾಗಿ ಕುಡಿಯಿಟ್ಟು ಬೆಳೆಯಲೂ ದಾಂಪತ್ಯ ಅಗತ್ಯವೆಂಬ ಮನೋಭಾವ ನಮ್ಮ ಪರಂಪರೆಯಲ್ಲಿ ಬೆಳೆದು ಬಂದಂತಹದು. ಶಿವಭಕ್ತಿಯನ್ನೇ ಜೀವನದ ಸಾರಮಂತ್ರವಾಗಿ ಗಣಿಸಿದ ಹರಿಹರ ದಾಂಪತ್ಯ ಅದರ ಸಾಕ್ಷಾತ್ಕಾರಕ್ಕೆ ಸಾಧಕವಾಗಬೇಕೆನ್ನುತ್ತಾನೆ. ಶರಣೆಯರ ಚರಿತ್ರೆಗಳಲ್ಲಿಯೂ ಈ ಒಳಸೂತ್ರವನ್ನೇ ಪವಣಿಸಿದ್ದಾನೆ; ಪದ್ಮಾವತಿ ಅದಯ್ಯರ ರತಿಕ್ರೀಡೆ

1 ಉತ್ತರ ರಾಮ ಚರಿತ, 1-39

ಯನ್ನು ಬಣ್ಣಿಸುತ್ತ ಅದು 'ಮುಟ್ಟಿದ ಸುಖಮುಂ ಸೋಮನಾಥನ ಸ್ಮರಣೆಯುಂ ಸಸಿವುತಿರ್ಪ ಸಮಯ' ವೆನ್ನುತ್ತಾನೆ. ಸಂಕಿಲಿಯು ನಂಬಿಯಣ್ಣನ ಪ್ರೇಯಸಿಯಾದರೂ ಆಕೆ 'ನಂಬಿಯಣ್ಣಂ ಮಾಳ್ಪ ಶಿವಪೂಜಾರಸ ಪೂರಿತ ಕುಸುಮ ಕರಂಡಗೆಯಂತಿರ್ದ'ಳೆಂದು ಬಣ್ಣಿಸುತ್ತಾನೆ. ಪರವೆ–ನಂಬಿಯಣ್ಣರ ಪ್ರೇಮಾಲಿಂಗನ ರತಿಸುಖವನ್ನು 'ಪ್ರೇಮಾಲಿಂಗನದೊಳ್ ಶಿವಾರ್ಪಿತ ಕಾರಣಮಾಗುತ್ತಿರೆಯುಂ' ಎಂದು ವರ್ಣಿಸುತ್ತಾನೆ. ಮಲುಹಣಿ ತನ್ನ ನಲ್ಲ ಮಲುಹಣನಿಗೆ 'ಎನ್ನ ಮೇಲಿಕ್ಕುವೀ ಚಿತ್ತದಾತುರತೆಯುಂ ಪನ್ನಗಾಭರಣನೊಳ್ಮಾಳ್ಪುದೆನ್ನೊಲ್ಮೆಯುಂ........ಇಂದುಧರನಂ ಬೇಡು, ನಿನ್ನತ್ತ ನಾ ಬಪ್ಪೆ. ಎನ್ನ ಹವಣೇ ಕೋಟಿ ಮಲುಹಣೆಯರಾಗರೇ' ಎಂದು ಉಪದೇಶ ನೀಡಿ ಆತನ ಚಿತ್ತವನ್ನು ಶಿವಭಕ್ತಿಯತ್ತ ತಿರುಗಿಸುತ್ತಾಳೆ. ಆದರಿಂದ ಪ್ರಭಾವಿತನಾದ ಮಲುಹಣ ವಿರಹವನ್ನು ತೆಗೆದು ಹರನ ಮೇಲಿಕ್ಕುತ್ತಾನೆ. ತನಿ ನೇಹವನ್ನು ಶಿವನ ಮೆಲ್ಲಡಿಗೆ ಸಾರ್ಚುತ್ತಾನೆ. ಮುಂದೆ ಶಿವಕೃಪೆಯಾಗಿ ಮಲುಹಣಿಯನ್ನು ಪುನಃ ಪಡೆದಾಗ ಅವನ ಭೋಗವೆಲ್ಲ ಶಿವಮಯವಾಗುತ್ತದೆ:

ಕೂಟಮುಂ ತೃಪ್ತಿಯುಂ ತ್ರಿಣಯನಂಗರ್ಪಿತಂ
ನೋಟಮುಂ ಬೇಟಮುಂ ಪುರಹರಂಗರ್ಪಿತಂ

ಹೀಗೆ ಹರಿಹರನ ದೃಷ್ಟಿಯಲ್ಲಿ ಕಾಮಾರಿಗರ್ಪಿತವಾಗುವುದರಲ್ಲಿಯೆ ಕಾಮದ ಸಾರ್ಥಕ್ಯ. ಈ ಪ್ರಕಾರ ಅರ್ಪಿತವಾಗುವಲ್ಲಿ ಭಕ್ತರ ಪ್ರೇಯಸಿಯರೋ ಸತಿಯರೋ ನಿಮಿತ್ತರಾಗುತ್ತಾರೆ. ತಮ್ಮ ಪತಿಗಳನ್ನು ಸೌಹಾರ್ದ ಮಾಧುರ್ಯಗಳಿಂದ ತಿದ್ದಿ, ಕಾಮದ ಸೆರೆಯಿಂದ ಬಿಡಿಸಿ, ಅವರನ್ನು ಶಿವಬಂಧಿಗಳನ್ನಾಗಿ ಮಾಡುತ್ತಾರೆ. ಅಥವಾ ಅಮನೀಗಿ ಅಗಲಿಹೋಗಿ ಶರಣರ ಅಂತರಂಗವನ್ನಾವರಿಸಿದ ಮಾಯದ ಪರೆಯನ್ನು ಕಿತ್ತುಹಾಕುತ್ತಾರೆ. ಅಂತೂ ಹರಿಹರನ ದೃಷ್ಟಿಯಲ್ಲಿ ಪ್ರಣಯ ಮತ್ತು ದಾಂಪತ್ಯದ ಬಾಳು ಶಿವಪೂಜೆಯಾಗಿ ಉದಾತ್ತೀಕರಣಗೊಳ್ಳುವುದರಲ್ಲಿಯೇ ಸಾಫಲ್ಯ ಪಡೆಯುತ್ತದೆ. ಸಾಮಾಜಿಕ ಇಲ್ಲವೆ ಸಾಂಪ್ರದಾಯಿಕ ಒಪ್ಪಿಗೆ, ಜಾತಿ, ಅಥವಾ ಸಾಮಾಜಿಕ ಸ್ಥಾನಮಾನದ ತಾರತಮ್ಯ ಶಾಸ್ತ್ರಸಮ್ಮತವೆ, ಬಾಹಿರವೆ ಎಂಬಿತ್ಯಾದಿಯಾದ ವಿಚಾರಗಳು, ಶಿವಭಕ್ತಿಯಲ್ಲಿ ಪರ್ಯವಸಾನಗೊಳ್ಳುವ ಪ್ರಣಯ, ಕಾಮ, ದಾಂಪತ್ಯಗಳಲ್ಲಿ ಆತನಿಗೆ ಮುಖ್ಯವೆನಿಸುವದಿಲ್ಲ. ಅಂತೆಯೆ, ಲೋಕದೃಷ್ಟಿಯಲ್ಲಿ ತಿರಸ್ಕಾರ್ಯವೆನ್ನಿಸುವ ನಿಂಬಿಯಕ್ಕನ ದೇಹಾರ್ಪಣೆಯನ್ನೂ ಆತ ಇತರ ದಾಸೋಹಗಳಂತೆ ಪವಿತ್ರವಾಗಿಯೆ ಕಾಣುವಷ್ಟು ದೀರ್ಘಕ್ಕೆ ಹೋಗುತ್ತಾನೆ. ಇಂತಹ ಸಂದರ್ಭಗಳಲ್ಲಿ ಅವನು ತಳೆಯುವ ನಿಲುವು ಚರ್ಚಾಸ್ಪದವಾಗುತ್ತದೆ.

ವಿವಾಹ ಮತ್ತು ದಾಂಪತ್ಯ ವಿಷಯವಾಗಿ ಹರಿಹರನು ಶರಣೆಯರ ಜೀವನ ಚರಿತೆಗಳ ಮೂಲಕ ಪ್ರಕಟಪಡಿಸುವ ಇನ್ನೊಂದು ವಿಚಾರ ಅಸಾಂಪ್ರದಾಯಿಕವೂ ಆ ಕಾಲಕ್ಕೆ ಕ್ರಾಂತಿಕಾರಕವೂ ಎನ್ನಬಹುದಾದದ್ದಾಗಿದೆ. ಕುಟುಂಬದ ಗುರು ಹಿರಿಯರ ಇಚ್ಛೆ ಸಾಮಾಜಿಕಕಟ್ಟುಕಟ್ಟಳೆಗಳು ಎಂದಿನಿಂದಲೂ ಭಾರತೀಯ ಜೀವನದಲ್ಲಿ ಪುರುಷರಿಗಿಂತ ಸ್ತ್ರೀಯರಿಗೇ ಹೆಚ್ಚು ಉಸಿರುಗಟ್ಟಿಸುವಂತಹವಾಗಿವೆ. ತನ್ನ ಜೀವನ ಸಂಗಾತಿ ಎಂತಹನಿರಬೇಕೆಂಬುದನ್ನು ನಿರ್ಣಯಿಸಿಕೊಳ್ಳುವ ಹಕ್ಕಿನಿಂದ ಭಾರತೀಯ ಸ್ತ್ರೀ

ಸಾಮಾನ್ಯವಾಗಿ ಬಹುಕಾಲದಿಂದಲೂ ವಂಚಿತಳು. ಬೇಕೋ ಬೇಡವೋ, ಪಾಲಿಗೆ ಬಂದದ್ದು ಪಂಚಾಮೃತವೆಂದು ಆಕೆ ಬಾಳಬೇಕು. ದೈವ (ಇಲ್ಲಿ ಕೌಟುಂಬಿಕ–ಸಾಮಾಜಿಕ ವ್ಯವಸ್ಥೆ) ತನಗೆ ಗಂಟು ಹಾಕಿದ ಪತಿಯನ್ನೆ 'ಪರದೈವ'ವೆಂಬ ಭಾವನೆ ತಾಳಬೇಕು; ಆತನ ಇಚ್ಛಾನುಸಾರಿಯಾಗಿ ಅವನು ಹಿಡಿದುದನ್ನು ಹಿಡಿದು, ಬಿಟ್ಟುದನ್ನು ಬಿಟ್ಟು ಬಾಳಬೇಕು. ಅದೇ ಆಕೆಯ ಜೀವನದ ಸಾರ್ಥಕ್ಯ, ಪಾತಿವ್ರತ್ಯ ಎಂಬ ಕಟ್ಟುಪಾಡಿನ ವಿಷಯದಲ್ಲಿ ಹರಿಹರನು ವಚನಕಾರರಂತೆ ಲೋಕವಿರೋಧಿ ನಿರ್ಭಯ ಧೋರಣೆಯಾಗಿದ್ದಾನೆ. 'ಮಜಹಿಂಗೆ ಹಿರಿದು ಕಿರಿದುಂಟಲ್ಲದೆ ಅಱುವಿಂಗೆ ಹಿರಿದು ಕಿರಿದುಂಟೆ ?' 'ನಾಮದಲ್ಲಿ ಹೆಣ್ಣು ರೂಪಲ್ಲದೆ ಭಾವಿಸಲು ಗಂಡು ರೂಪು ನೋಡಾ', 'ಕೂಟಕ್ಕೆ ಸತಿಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ' ಎನ್ನುವ ವಚನಕಾರರ ತತ್ವವನ್ನು ಹರಿಹರ ಎತ್ತಿಹಿಡಿಯುತ್ತಾನೆ.

ತನ್ನ ಆತ್ಮೋದ್ಧಾರ ಮಾಡಿಕೊಳ್ಳುವಲ್ಲಿ ಸ್ತ್ರೀಗೂ ಪುರುಷನಷ್ಟೆ ಸ್ವಾತಂತ್ರ್ಯವಿದೆ. ಇದು ಈಶ್ವರದತ್ತವಾದ ಸ್ವಾತಂತ್ರ್ಯ. ಸಾಂಪ್ರದಾಯಿಕ, ಸಾಮಾಜಿಕ ಅಥವಾ ಕೌಟುಂಬಿಕ ಕಟ್ಟುಪಾಡುಗಳೆಲ್ಲ ಈ ಈಶ್ವರೀಸೂತ್ರದೆದುರು ಕ್ಷುಲ್ಲಕವಾದವುಗಳು. ಆತ್ಮೋದ್ಧಾರಕ್ಕೆ ಅಡ್ಡಬರುವ ಯಾವ ಬಂಧನವನ್ನು ಶಿವಭಕ್ತಿಗೆ ತನ್ನನ್ನರ್ಪಿಸಿಕೊಂಡ ಮಹಿಳೆ ಲೆಕ್ಕಿಸಲಾರಳು. ಆ ದೃಷ್ಟಿಯಲ್ಲಿ ಆಕೆ ಲೋಕ ವಿರೋಧಿಯಾದರೂ ಉನ್ನತ ಧರ್ಮಪರಿಪಾಲಕಳು ಎಂಬುದು ಹರಿಹರನ ಶ್ರದ್ಧೆ. ಆತನ ಈ ಆಶಯ ಕಾರಿಕಾಲಮ್ಮೆ, ವೈಜಕವ್ವೆ, ಹೆರೂರ ಹೆಂಗೂಸು, ಮಹಾದೇವಿಯಕ್ಕ ಇವರ ಚರಿತ್ರೆಗಳಲ್ಲಿ ವ್ಯಕ್ತವಾಗುತ್ತದೆ. ಇವರೆಲ್ಲ ಶಿವಭಕ್ತರಲ್ಲದ ಪತಿಗಳ ಕೈಹಿಡಿಯಬೇಕಾಗಿ ಬಂದ ವಿಷಮ ಪರಿಸ್ಥಿತಿಗೊಳಗಾದವರು. ಕೌಟುಂಬಿಕ ಹಾಗೂ ಸಾಂಪ್ರದಾಯಿಕ ಋಣಾನುಬಂಧಕ್ಕೊಳಗಾಗಿ ಕೆಲವು ದೂರ ಸಾಗಿದರೂ ಕೊನೆಗೆ ತಮ್ಮ ಉಜ್ವಲವಾದ ಶಿವಭಕ್ತಿಯಿಂದ ತಮ್ಮ ಪತಿಗಳನ್ನೆ ಶಿವಭಕ್ತಿ ದೀಕ್ಷಿತರನ್ನಾಗಿ ಮಾರ್ಪಡಿಸಿದವರು ಇಲ್ಲವೆ ಶಿವಭಕ್ತಿಯನ್ನೊಪ್ಪದ ಪತಿಗಳನ್ನೆ ತ್ಯಜಿಸಿದವರು. ಕಾರಿಕಾಲಮ್ಮೆ, ಪಾಂಡ್ಯ ಮಹಾದೇವಿ, ವೈಜಕವ್ವೆ ಭವಿಗಳಾದ ತಮ್ಮ ಪತಿಗಳೊಡನೆ ಸಹನಶೀಲವಾದ ಬಾಳನ್ನು ನಡೆಸಿ ಕಾಲಾಂತರದಲ್ಲಿ ಅವರನ್ನು ಭಕ್ತಿ ಮಾರ್ಗದತ್ತ ತಿರುಗಿಸಿದ ಚರಿತ್ರೆಯನ್ನು ಹರಿಹರ ನಿರೂಪಿಸುತ್ತಾನೆ.

ಕಾರಿಕಾಲಮ್ಮೆ ಯಾವ ಒತ್ತಾಯದ ಪರಿಸ್ಥಿತಿಗೆ ಕಟ್ಟುಬಿದ್ದು ವಿಷಮ ದಾಂಪತ್ಯ ಜೀವನಕ್ಕೆ ಕೊರಳೊಡ್ಡಿದಳೆಂಬುದನ್ನು ಕವಿಯು ಚಿತ್ರಿಸಿಲ್ಲ. ಆಕೆಯ ವಿವಾಹಾನಂತರದ ಜೀವನ ಚಿತ್ರಣ ಮಾತ್ರ ರಗಳೆಯಲ್ಲಿದೆ. ತನ್ನ ಪಾಲಿಗೆ ಬಂದ ವಿಷಮ ಬಾಳನ್ನು ಪ್ರತಿರೋಧವಿಲ್ಲದೆ ಸ್ವೀಕರಿಸಿದವಳಾಕೆ. ಧಾರ್ಮಿಕ ಶ್ರದ್ಧೆಯಲ್ಲಿ ಭಿನ್ನತೆಯಿದ್ದರೂ ಪತಿಭಕ್ತಿಯಲ್ಲಿ ಎಳ್ಳಷ್ಟೂ ಕೊರತೆ ಬಾರದಂತೆ ನಡೆದುಕೊಂಡವಳು. ಈಶ್ವರ ಕೃಪೆಯ ಪರ್ವಕಾಲ ಬರುವವರೆಗೆ ತನಗೀ ಬಾಳು ಅನಿವಾರ್ಯವೆಂಬ ಭಾವನೆಯಾಕೆಯದು. ಆಕೆಯ ಬಹಿರಂಗ ಜೀವನದಲ್ಲಿ ಸ್ವಾತಂತ್ರ್ಯವಿರಲಿಲ್ಲದಿದ್ದರೂ ಅಂತರಂಗದ ಭಕ್ತಿ ಸಾಧನೆಯ ಜೀವನದಲ್ಲಿ ಸ್ವಾತಂತ್ರ್ಯವನ್ನಾಕೆ ಕಲ್ಪಿಸಿಕೊಂಡಿದ್ದಳು. ಆ ಸ್ವಾತಂತ್ರ್ಯವೇ ಆಕೆಗೆ ಸಕಲ ತೃಪ್ತಿಯನ್ನೀಯುತ್ತಿದ್ದಿತು. ಬಹಿರಂಗ ಸ್ವಾತಂತ್ರ್ಯ

ವನ್ನಾಕೆ ಬಯಸಿ ಪರಿತಪಿಸುತ್ತಲೂ ಇರಲಿಲ್ಲ. ಪತಿಗೃಹದಲ್ಲಿ ಪ್ರಕಟವಾಗಿ ಶಿವಭಕ್ತಿಯನ್ನಾಚರಿಸಲು ಆಕೆಗೆ ಆಸ್ಪದವಿರಲಿಲ್ಲ. ಅತ್ತೆ, ಮಾವ, ಗಂಡ ಯಾರೊಬ್ಬರಿಗೂ ಗೊತ್ತಾಗದಂತೆ ಆಕೆ ಗುಪ್ತ ಭಕ್ತಿಯಲ್ಲಿ ನಿರತಳಾಗಬೇಕಾಗಿತ್ತು. ತಾನು ಅಡಿಗೆ ಮಾಡುತ್ತಿದ್ದ ಸ್ಥಳವೇ ಅವಳ ಶಿವಾರ್ಚನಾಸ್ಥಳ. ತನ್ನ ಅಂಗೈಯೆ ಶಿವನ ಪೀಠ, ಮನದ ನೆನಹೆ ಎಲ್ಲ ಸ್ತೋತ್ರ, ಮನದ ನಿರ್ಮಲತೆಯೆ ಅಗ್ಗವಣಿ, ಕೈಯ ಶೀಲವೆ ಶಿವನಿಗೇರಿಸುವ ಪುಷ್ಪ, ಭಕ್ತಿಕಂಪಿತ ನೋಟವೆ ಆರತಿ, ನಿಡುಸುಯ್ಯೆ ಗುಗ್ಗುಳ, ಹೀಗೆ ಅಂತರಂಗದಲ್ಲಿ ಸಾಗುತ್ತಲಿದ್ದಿತು, ಆಕೆಯ ಭಕ್ತಿ ಸಾಧನೆ. ಅವಳ ಭಾವದಲ್ಲಿ ಶಿವಭಕ್ತಿ ಎಷ್ಟು ಬಲವಾಗಿ ಬೇರೂರಿತ್ತೆಂದರೆ ರುದ್ರಲೋಕವನ್ನು ತವರೂರೆಂದೂ ಕೈಲಾಸವನ್ನು ತವರು ಮನೆಯೆಂದೂ ಭಾವಿಸಿಕೊಂಡಿದ್ದಳು. ಪಾರ್ವತೀ ಪರಮೇಶ್ವರರು ತಾಯ್ತಂದೆಗಳು, ಷಣ್ಮುಖ–ಗಜಾನನರು ಒಡಹುಟ್ಟಿದವರು ಎಂಬ ಭಾವ ಅವಳಲ್ಲಿ ಬಲಿತಿದ್ದಿತು. ತನ್ನ ಸಂಸಾರದ ಆಸರು ಬೇಸರಗಳನ್ನು ಶಿವಪಾರ್ವತಿಯರಿಗೆ ನಿವೇದಿಸುತ್ತಿದ್ದಳು. ತಾನು ಮಾಡುತ್ತಿದ್ದ ನಿತ್ಯದ ಗೃಹಕೃತ್ಯವೇ ಸರ್ವೇಶ್ವರನ ಅರ್ಚನೆಯಾಗಿದ್ದಿತು. ಕಾರಿಕಾಲಮ್ಮೆಯ ಈ ವಿಧವಾದ ಜೀವನ ಚಿತ್ರಣದಲ್ಲಿ ಶಿವಮುಖವಾದ ಗೃಹಿಣೀಜೀವನ ಹೇಗಿರುತ್ತದೆಂಬುದರ ಬಗೆಗೆ ಹರಿಹರ ತಳೆದಿದ್ದ ದೃಷ್ಟಿ ಗೋಚರಿಸುತ್ತದೆ.

ವೈಜಕವ್ವೆ, ಪಾಂಡ್ಯ ಮಹಾದೇವಿಯರೂ ಕಾರಿಕಾಲಮ್ಮೆಯಂತೆ ಸಹನಶೀಲೆಯರು. ತಮ್ಮ ಆತ್ಮೋದ್ಧಾರವನ್ನು ಬಲಿಕೊಡದೆ ಅದೇ ಕಾಲಕ್ಕೆ ಭವಿಗಳಾದ ತಮ್ಮ ಪತಿಗಳನ್ನು ಪ್ರತಿಭಟಿಸದೆ ತಾಳ್ಮೆಯಿಂದ ಶಿವಕೃಪೆಯ ಅಮೃತಗಳಿಗೆ ಒದಗಿ ಬರುವ ದಾರಿ ಕಾಯ್ದು ಅದು ಒದಗಿಬಂದಾಗ ತಮ್ಮ ಶಿವಭಕ್ತಿ ಮಹಿಮೆಯಿಂದ ತಮ್ಮ ಪತಿಗಳಲ್ಲೂ ಅಮೃತಮಯವಾದ ಪರಿವರ್ತನೆಯನ್ನುಂಟು ಮಾಡಿದವರು.

ಮಹಾದೇವಿಯಕ್ಕ ಹಾಗೂ ಹೆರೂರ ಹೆಂಗೂಸು ಗಂಡೆದೆಯವರು. ತಮ್ಮ ಶಿವಭಕ್ತಿಗೆ ವಿಘ್ನಕಾರಿಯಾದ ದಾಂಪತ್ಯವನ್ನೇ ತಿರಸ್ಕರಿಸಿದವರು. ಒಟ್ಟಾರೆ ಎರಡೂ ವಿಧದ ಪ್ರಕೃತಿಯಲ್ಲಿ ಕಾಣುವ ಕೊನೆಯ ಉದ್ದೇಶ ಒಂದೆ : ಪುರುಷನಂತೆ ಸ್ತ್ರೀಗೂ ಆತ್ಮೋದ್ಧಾರದ ಅಭೀಪ್ಸೆ ಈಶ್ವರದತ್ತವಾದುದು; ಅದನ್ನು ಈಡೇರಿಸಿಕೊಳ್ಳುವಲ್ಲಿಯೆ ಅವಳ ಜೀವನದ ಸಾರ್ಥಕ್ಯವೆಂಬುದು.

ತಾಯ್ತನದ ಹಂಬಲ ಸ್ತ್ರೀ ಹೃದಯದ ನಿಸರ್ಗದತ್ತವಾದ ಸಂಪತ್ತು. ಹರಿಹರನ ಕೃತಿಗಳಲ್ಲಿ ಮಾತೃವಾತ್ಸಲ್ಯದ ಅಮೃತವನ್ನು ಸುರಿಸುವ ತಾಯಂದಿರ ದರ್ಶನವಾಗುತ್ತದೆ. ತಮ್ಮ ಮಕ್ಕಳ ಸೌಭಾಗ್ಯಾತಿಶಯವನ್ನು ಕಂಡು ಹಿಗ್ಗಿ ಆನಂದದಿಂದ ಮೊಲೆ ಹಾಲು ಸುರಿಯುವ ಸತ್ಯಜ್ಞಾನಿ ಹಾಗೂ ಮೇನೆಯರು ನಮ್ಮ ಚಿತ್ತ ಸೆಳೆಯುತ್ತಾರೆ. ಅವರ ತಾಯ್ತನ ಮರ್ತ್ಯದ ಮಾಂಸಲ ವಾತ್ಸಲ್ಯದ ಸೀಮೆಯನ್ನೂ ಮೀರಿ ಶಿವಭಕ್ತಿ ತ್ಯಾಗಗಳಲ್ಲಿ ಲೀನವಾದಂತಹದು. ಇಲ್ಲಿಯೂ ಕವಿ ಸ್ತ್ರೀಸಹಜ ಮನೋಭಾವಕ್ಕೆ ಶಿವಭಕ್ತಿಯ ದೀಕ್ಷೆಯನ್ನೇ ಇತ್ತಿದ್ದಾನೆ. ವಾತ್ಸಲ್ಯವು ಉದಾತ್ತೀಕರಣ

ಗೊಂಡು ಭಕ್ತಿಯಾದ ಉತ್ಕೃಷ್ಟ ನಿದರ್ಶನ ಬಿಜ್ಜಮಹಾದೇವಿಯ[1] ರಗಳೆಯಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಬಾಲ್ಯದಲ್ಲಿಯೆ ವಿಧವೆಯಾದ ಪ್ರಯುಕ್ತ ಆಕೆ ಎಲ್ಲರಂತೆ ಲೋಕದ ಬಾಳಿನಲ್ಲಿ ತಾಯಾಗಿ ಬಾಳುವ ಭಾಗ್ಯವಿಲ್ಲದವಳಾಗಿದ್ದಳು. ಆದರೇನು, ನಿಸರ್ಗಸಿದ್ಧವಾಗಿ ಅವಳ ನರನರಗಳಲ್ಲಿ ನೆಟ್ಟಿದ್ದ ತಾಯ್ತನದ ಮೂಲ ಬೀಜ ವಯೋಮಾನಕ್ಕನುಸರಿಸಿ ಮೊಳಕೆಯೊಡೆಯುತ್ತದೆ. ಬೆಳೆದು ಹೆಮ್ಮರವಾಗುತ್ತದೆ. ಆದರೆ ಅದು ಶಿವಭಕ್ತಿಯ ನೆರಳಲ್ಲಿ, ಲೌಕಿಕ ಭಾವಗಳ ಬಿಸಿಲಿನಲ್ಲಲ್ಲ. ತಾನು ಹಡೆದ ಮಕ್ಕಳಿಲ್ಲದ ಆಕೆ ಅನಾಥನಾದ ಶಿವನನ್ನೇ ಪಡೆದ ಕೂಸಾಗಿ ಭಾವಿಸಿ ಪೋಷಿಸುತ್ತಾಳೆ. ಆಕೆಯ ವಾತ್ಸಲ್ಯ ಶಿವಭಕ್ತಿಯಾಗಿ ದಿವ್ಯ ಪರಿವರ್ತನೆ ಪಡೆಯುತ್ತದೆ, ಬಂಜೆ ಬಾಳನ್ನು ಸಫಲಗೊಳಿಸುತ್ತದೆ.

ಹೀಗೆ, ಹರಿಹರನ ಶರಣೆಯರ ಚರಿತ್ರೆಗಳಲ್ಲಿ ಸ್ತ್ರೀಸಹಜವಾದ ಪ್ರಣಯ, ಕಾಮ, ದಾಂಪತ್ಯ, ವಾತ್ಸಲ್ಯಾದಿಗಳು ಸತಿಪತಿ ಭಾವದ ಭಕ್ತಿ, ಗುಪ್ತ ಭಕ್ತಿ, ಮುಗ್ಧಭಕ್ತಿ, ಸರ್ವಾರ್ಪಣ ಭಾವದ ಭಕ್ತಿಗಳಾಗಿ ವಿಕಾಸಗೊಂಡುದನ್ನು ಕಾಣುತ್ತೇವೆ. ಕವಿಯಾಗಿ ಹರಿಹರನು ಸ್ತ್ರೀಜೀವನ ಅನುಸರಿಸಬಹುದಾದ ಭಕ್ತಿ ಮಾರ್ಗವನ್ನೂ ನಿಲುಕಿಸಬಹುದಾದ ನಿಲುಗಡೆಯನ್ನೂ ಇಲ್ಲಿ ನಿರೂಪಿಸಿದ್ದಾನೆನ್ನಬಹುದು.

ಸ್ತ್ರೀಯ ಸೌಂದರ್ಯವನ್ನು ಕುರಿತೂ ಹರಿಹರನದು ಇಂತಹದೇ ಶಿವಭಕ್ತಿಪೂರ್ಣ ದೃಷ್ಟಿ. ಆತ ಚಿತ್ರಿಸಿದ ಬಹುಮಟ್ಟಿನ ಮಹಿಳೆಯರು ಸುರಸುಂದರಿಯರು. ಅವನ ಮಾತಿನಲ್ಲೇ ಹೇಳುವುದಾದರೆ ರತಿ–ಗಿತಿ, ರಂಭೆ–ಗಿಂಬೆಯರ ಹೋಲಿಕೆ ಅವರಿಗೆ ಸಲ್ಲದು. ಹೀಗಿದ್ದರೂ ಆ ಬಾಹ್ಯ ಸೌಂದರ್ಯವಷ್ಟೆ ಕವಿಯ ಕಣ್ಣು ಕುಕ್ಕಿಸಿಲ್ಲ. ಹೊರಮೈಯ ಸೌಂದರ್ಯಕ್ಕೆ ಬೆಲೆಯನ್ನೂ ಗೌರವವನ್ನೂ ತರುವ ಅವರ ಅಂತರಂಗದ ಸೌಂದರ್ಯದ ಮೇಲೆಯೇ ಆತನ ದೃಷ್ಟಿ ವಿಶೇಷವಾಗಿ ಕೇಂದ್ರೀಕೃತವಾದುದು. ಉದಾಹರಣೆಗಾಗಿ, ಕಾರಿಕಾಲಮ್ಮೆಯ ಸೌಂದರ್ಯದ ಈ ವರ್ಣನೆಯನ್ನು ನೋಡಬೇಕು:

ಮುಗಿದ ಸರಸಿಜವನೇಳಿಸುವ ಕುಚವೊಪ್ಪಿರಲ್
ಮಿಗೆ ಭಕ್ತಿ ರಸದ ಕಲಶದ ಮುಚ್ಚುಳಂತಿರಲ್
....
....
ಕದಪು ಶರ್ವಂ ನೋಳ್ಪದರ್ಪಣದ ತೆರದೋರಿರೆ
ಕಣ್ಣೆರಡು ಚೆಲ್ವಿಂಗೆ ಕಣ್ ಮೂಡಿದಂತೆಯಿರೆ
ತಿಣ್ಣವೆನಿಸುವ ಭಕ್ತಿ ಕಣ್ದೆರೆದ ಪರಿದೋರಿರೆ

ಸ್ತ್ರೀಯ ಸೌಂದರ್ಯ ಉಂಟುಮಾಡುವ ಮಾದಕತೆಯನ್ನು ಕಂಡೂ ಕಾಣದವನಂತೆ ಕವಿಯು ಕಣ್ಮುಚ್ಚಿಕೊಂಡಿರುವನಂತಲ್ಲ. ಮಲುಹಣಿಯ ಮೊದಲಾದವರ ಸೌಂದರ್ಯ

1. ಈ ರಗಳೆ ಹರಿಹರನದಲ್ಲವೆಂದು ಶ್ರೀ ದೇವೀರಪ್ಪನವರ ಅಭಿಪ್ರಾಯ. ಗ್ರಂಥಕರ್ತೃತ್ವ ಚರ್ಚಾಸ್ಪದವಾದರೂ ಇಲ್ಲಿಯ ಭಾವ ಮಾತ್ರ ಹರಿಹರನ ದರ್ಶನಕ್ಕೆ ಅನುಗುಣವಾಗಿದೆಯೆನ್ನಬೇಕು.
2. ಕಾರಿಕಾಲಮ್ಮೆ ರಗಳೆ

ವನ್ನು ವರ್ಣಿಸುವಾಗ ಅಲ್ಲಿಯ ಬಹಿರಂಗ ಆಕರ್ಷಣೆಯನ್ನು ವಿಶದವಾಗಿಯೇ ಚಿತ್ರಿಸಿದ್ದಾನೆ. ಇಷ್ಟೆ ಅಲ್ಲ, 'ಸ್ತ್ರೀ ಮಾತ್ರಂ ನೇತ್ರಪತ್ರಲ್ ಸುಳಿದೊಡೆ ಮನ ವಿಘಾಗಮಾಗುತ್ತೆ ತಾಪಸೇಂದ್ರಿಯಂ ಕೈಮೀಱಿ ಲಜ್ಜಾರಸಮುಡುಗಿ ವಿವೇಕಂ ಕೆಟ್ಟೋಡಿ ರಾಗಂ ಕೈ ಮಿಕ್ಕಿ ನಾವನೇನೆಂದಱಿಯದ ತೆಱನಂ ಮಾಡಲಿರ್ದಪುದು'[1] ಎಂದು ಕಂಠೋಕ್ತವಾಗಿ ಹೇಳುತ್ತಾನೆ. ಆದರೆ ಸ್ತ್ರೀ ಸೌಂದರ್ಯ ನೋಡುವವರ ಮಾನಸಿಕ ಶುದ್ಧಾಶುದ್ಧತೆಗನುಗುಣವಾಗಿ ಪರಿಣಾಮವನ್ನುಂಟು ಮಾಡುತ್ತದೆಂಬುದು ಆತನ ಕಾಣ್ಕೆ. ಮಲಿನಾತ್ಮರಿಗೆ, ಅಜ್ಞಾನಿಗಳಿಗೆ ಅದು ಮಾದಕವಾದರೆ, ಪರಿಶುದ್ಧ ಹೃದಯಿಗಳಿಗೆ ಅದು ಪುಣ್ಯ ರೂಪ : 'ಪಾಪವುಳ್ಳರ್ಗೆ ಸಿಂಗರದಂತೆ ತೋರಿ'ದರೆ 'ಪಾಪವಿಲ್ಲದವರ್ಗೆ ತಾಯಂತೆ ತೋರು'[2]ತ್ತದೆ. ಪವಿತ್ರ ಹೃದಯದಿಂದ ಕಾಣುವವರಿಗೆ ಸ್ತ್ರೀಯ ರೂಪು 'ಮಲ್ಲಿಕಾಲತೆಗೆ ಶಿವಭಕ್ತಿಯೊದವಿದ ತೆಱದೆ, ಸಲ್ಲಲಿತ ಶಶಿಕಳೆಗೆ ನಿಷ್ಟೆಯೊದವಿದ ತೆಱದೆ, ಭಕ್ತಿ ಲತೆ ನಡೆವಂತೆ'...[3] ಪ್ರಸನ್ನತೆಯನ್ನು ಮನಃಶುದ್ಧಿಯನ್ನು ಉಂಟುಮಾಡುವಂತಹದೆಂಬುದು ಆತನ ನಂಬುಗೆ.

ಕೇವಲ ಲೌಕಿಕ ಸ್ತರದಲ್ಲಿ ಬಾಳುವ ಸ್ತ್ರೀಜೀವನದ ಪರಿಚಯ ಕವಿಗಿಲ್ಲವೆಂತಲ್ಲ. ಗಿರಿಜಾಕಲ್ಯಾಣದ ಸಾಂಪ್ರದಾಯಿಕ ವರ್ಣನಾ ಸಂದರ್ಭಗಳಲ್ಲಿ ಅಂತಹರ ಚಿತ್ರಣವಿದೆ. ಕಳಚೆಂಗ ಪೆರುಮಾಳೆಯ ಪತ್ನಿ ಚೊಲ್ಲಡಿನಾಚಿ, ಮಲುಹಣೆಯ ತಾಯಿ ಪದ್ಮಾವತಿ, ವೈಜಕನ್ನೆಯ ಸೋದರತ್ತೆಯ ಮುಂತಾದ ಲೌಕಿಕ ಸಾಮಾನ್ಯರ ಚಿತ್ರಣ ಅತ್ಯಂತ ಸಂಕ್ಷಿಪ್ತವಾಗಿ, ಸೂಚ್ಯವಾಗಿ ಹರಿಹರನ ಕೃತಿಗಳಲ್ಲಿ ಬಂದಿದೆ. ಪ್ರಾಪಂಚಿಕ ನೆಲೆಯಲ್ಲಿಯೆ ಬಾಳಿ ಸುಖದುಃಖಗಳನ್ನನುಭವಿಸಿ ಹೋದವರ ಚರಿತ್ರೆ ಆತನಿಗೆ ಗಂಭೀರ ವಿಷಯವಾಗಿ ಕಂಡಿಲ್ಲ. ಆ ಕಾರಣಕ್ಕಾಗಿ ಬಾಳಿನ ಆ ಮುಖವನ್ನು ನಿರೂಪಿಸುವದರಲ್ಲಾತ ಆಸಕ್ತಿ ತೋರಿಸಿಲ್ಲ. ಸರ್ವ ಸುಖಗಳಲ್ಲಿ ಶಿವಭಕ್ತಿಯನ್ನೆ ಕಂಡ ಸರ್ವ ಭಾವ–ಅನುಭವಗಳನ್ನು ಶಿವಭಕ್ತಿಯಾಗಿ ಉದಾತ್ತೀಕರಣಗೊಳಿಸಿಕೊಂಡ ಮಹಿಳಾ ಜೀವನವನ್ನು ಮಾತ್ರ ಆತ ಅರ್ಥಪೂರ್ಣವಾಗಿ, ಗೌರವಯುತವಾಗಿ ಕಂಡಿದ್ದಾನೆ.

ಒಟ್ಟಾರೆಯಾಗಿ, ಹರಿಹರನು ಸ್ತ್ರೀಯಲ್ಲಿ ಪುರುಷನಷ್ಟೆ ಎತ್ತರಕ್ಕೇರಬಲ್ಲ ಚೈತನ್ಯವನ್ನು ಕಂಡಿದ್ದಾನೆ. ಆಕೆಯ ಸೌಂದರ್ಯ, ಸಹನೆ, ಮಾಧುರ್ಯಾದಿ ನೈಸರ್ಗಿಕ ಸ್ವಭಾವ ಸಂಪತ್ತಿಗೆ ಶೈವೀ ತೇಜದ ಮೆರುಗನ್ನಿತ್ತಿದ್ದಾನೆ. ಅವಳ ಆತ್ಮಸ್ವಾತಂತ್ರ್ಯವನ್ನೂ ಶಕ್ತಿಯನ್ನೂ ಸಂದುಸಂದೇಹವಿಲ್ಲದ ಚಿತ್ತದಿಂದ ಎತ್ತಿಹಿಡಿದಿದ್ದಾನೆ, ಪ್ರತಿಷ್ಠಿತಗೊಳಿಸಿದ್ದಾನೆ.

○

1. ರಕ್ಷಾಶತಕ, ಪದ್ಯ 6
2. ಕಾರಿಕಾಲಮ್ಮೆ ರಗಳೆ
3. ಅದೇ

ಶೇಕ್ಸಪಿಯರ್‌ನ ದೃಷ್ಟಿಯಲ್ಲಿ ಸ್ತ್ರೀ

ಸರೋಜಿನಿ ಶಿಂತ್ರಿ

ಸಾಹಿತ್ಯದ ಸೋಂಕಿಲ್ಲದ ಮನೆತನದಲ್ಲಿ ಹುಟ್ಟಿ ಬೆಳೆದು. ಉಚ್ಚ ಶಿಕ್ಷಣದ ಗಂಧವನ್ನರಿಯದೆ, ಸಾಮಾನ್ಯನಂತೆ ಪುಡಿಪಾತ್ರಗಳನ್ನು ವಹಿಸುವ ನಟನಾಗಿ ಜೀವನವನ್ನು ಪ್ರಾರಂಭಿಸಿ ಕೊನೆಗೆ ಒಬ್ಬ ಅಸಾಮಾನ್ಯ ನಾಟಕಕಾರನೆಂದು ಪ್ರಸಿದ್ಧಿ ಪಡೆದುದು ಯಾವುದೇ ದೇಶದ ಸಾಹಿತ್ಯದ ಇತಿಹಾಸದಲ್ಲಿ ಬಲು ವಿರಳವೆಂದೇ ಹೇಳಬೇಕು. ಕವಿ-ವಿಮರ್ಶಕ ಕೋಲರಿಜ್, ಶೇಕ್ಸ್‌ಪಿಯರ್‌ನ ಪ್ರತಿಭೆ, ಕಲಾ ಪ್ರೌಢಿಮೆ ಕುರಿತು "ಇಂತಹ ಇನ್ನೊಬ್ಬ ವ್ಯಕ್ತಿಯನ್ನು ಜಗತ್ತು ಮುಂದೆ ಎಂದಾದರೂ ಕಾಣಬಹುದೆಂದು ಊಹಿಸುವುದು ಆಶಾವಾದಿತ್ವದ ಪರಾಕಾಷ್ಠೆ" ಎಂದು ಮನತುಂಬಿ ಹೊಗಳಿರುವನು. ಶೇಕ್ಸ್‌ಪಿಯರ್‌ನ ನಾಟಕಗಳನ್ನೆಲ್ಲ ಒಟ್ಟಿಗಿಟ್ಟು ವಿವೇಚಿಸಿದರೆ ನಾಟಕಕಾರನು ಒಂದು ಪ್ರತಿ ಸೃಷ್ಟಿಯನ್ನು ಮಾಡಿರುವನೇನೋ ಎಂದೆನಿಸದಿರದು. ಇಲ್ಲಿ ನಿಜ ಜಗತ್ತಿನ ವೈವಿಧ್ಯತೆ, ವೈಶಾಲ್ಯತೆ, ಸಹಜತೆಗಳೆಲ್ಲವೂ ಇವೆ. ವೈಶಿಷ್ಟ್ಯವೆಂದರೆ ಒಂದು ಸನ್ನಿವೇಶ ಇನ್ನೊಂದರ ಅನುಕರಣೆಯಾಗಿಲ್ಲ, ಒಂದು ಪಾತ್ರ ಮತ್ತೊಂದರ ತದ್ರೂಪವಾಗಿಲ್ಲ.

> Age cannot wither nor custom stale
> Her Infinite variety.

(ಅವಳ ಅನಂತ ವೈವಿಧ್ಯತೆಯನ್ನು ಕಾಲ ಬಾಡಿಸದು, ವಾಡಿಕೆ ಹಳತಾಗಿಸದು.)

ಇದು ಶೇಕ್ಸ್‌ಪಿಯರ್ ಕ್ಲಿಯೊಪಾಟ್ರಳನ್ನು ವರ್ಣಿಸಿದ ಬಗೆ. ಇದೇ ಮಾತನ್ನು ನಾನು ಶೇಕ್ಸ್‌ಪಿಯರ್‌ನ ನಾಟಕ-ಸೃಷ್ಟಿಯ ಬಗೆಗೂ ಯಥೋಚಿತವಾಗಿ ಹೇಳಬಹುದು.

ಶೇಕ್ಸ್‌ಪಿಯರ್‌ನ ವೈವಿಧ್ಯತೆಯನ್ನು ನಾವು ಮುಖ್ಯವಾಗಿ ಪಾತ್ರಗಳ ಚಿತ್ರಣದಲ್ಲಿ ಕಾಣುತ್ತೇವೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಜೀವಿಸಿದ ವಿಮರ್ಶಕ ಜಾನ್ ರಸ್ಕಿನ್ ಶೇಕ್ಸ್‌ಪಿಯರನ ನಾಟಕಗಳನ್ನು ಕುರಿತು "ಇಲ್ಲಿ ಬರೀ ನಾಯಕಿಯರಿದ್ದಾರೆ; ನಾಯಕರು ಇಲ್ಲವೇ ಇಲ್ಲ" ಎಂದಿದ್ದಾನೆ. ಇದರರ್ಥ, ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಸ್ತ್ರೀಪಾತ್ರಗಳಿಗೆ ಪ್ರಾಧಾನ್ಯತೆಯನ್ನು ನೀಡಿರುವನೆಂದೂ ಆಗಬಹುದು, ಆತನಿಗೆ ಅವರ ವಿಷಯದಲ್ಲಿ ಅಧಿಕ ಆಸ್ಥೆ, ಸಹಾನುಭೂತಿ ಇದೆಯೆಂದೂ

ಆಗಬಹುದು. ಹೇಗಾದರೂ ಸರಿಯೆ. ಆತನು ಚಿತ್ರಿಸಿದ ಸ್ತ್ರೀಪಾತ್ರಗಳನ್ನು ಕುರಿತು ಯಾರೂ "Here's God's Plenty" ಎಂದು ಉದ್ಗರಿಸಬಹುದು.

ಶೇಕ್ಸ್‌ಪಿಯರ್‌ನ ಹೆಣ್ಣು ಪಾತ್ರಗಳು ಎಷ್ಟು ? ನೂರಕ್ಕೂ ಹೆಚ್ಚಿವೆಯೆ ? ಇಲ್ಲವೆ ? ಎಂಬ ಪ್ರಶ್ನೆ ಅಪ್ರಸ್ತುತ. ಮಹತ್ವದ ಪ್ರಶ್ನೆಯೆಂದರೆ ಅವುಗಳನ್ನು ಹೇಗೆ ವಿಂಗಡಿಸಿ ಅಭ್ಯಸಿಸಬಹುದೆಂಬುದು. ಹಲವು ವಿಮರ್ಶಕರು ಹಲವು ರೀತಿ ಅನುಸರಿಸಿದ್ದಾರೆ. ಕಾಲಾನುಕ್ರಮಣಿಕೆಯ ಪದ್ಧತಿ ಅವುಗಳಲ್ಲೊಂದು. ಇದು ಸ್ವಾರಸ್ಯಕರವಾದುದೂ ಅಹುದು. ಕಾಲಕಳೆದಂತೆ ಶೇಕ್ಸ್‌ಪಿಯರ್ ನಾಟಕ ರಚನೆಯಲ್ಲಿ ಪರಿಪಕ್ವನಾದುದು, ಅಷ್ಟೆ ಅಲ್ಲ, ಸ್ತ್ರೀಪಾತ್ರಚಿತ್ರಣದಲ್ಲಿ ಆತ್ಮವಿಶ್ವಾಸ ಪಡೆಯುತ್ತ ಸಾಗಿದುದು ಈ ರೀತಿಯ ಅಧ್ಯಯನದಿಂದ ತಿಳಿದು ಬರುವ ಅಂಶ.

ಶೇಕ್ಸ್‌ಪಿಯರ್ ಸೃಷ್ಟಿಸಿದ ಮಹತ್ವದ ಸ್ತ್ರೀ ಪಾತ್ರಗಳು ಇವು :

ಕ್ವೀನ್ ಮಾರ್ಗರೆಟ್, ಜೋನ್ ಆಫ್ ಆರ್ಕ್ (**ಕಿಂಗ್ ಹೆನ್ರೀ VI ಭಾಗ ೧ ಮತ್ತು ೨**), ಕ್ಯಾಥರೀನಾ (**ದ ಟೇಮಿಂಗ ಆಫ್ ದ ಶ್ರೂ**), ಜ್ಯೂಲಿಯಾ ಮತ್ತು ಸಿಲ್ವಿಯಾ (**ಟೂ ಜೆಂಟಲ್‌ಮೆನ್ ಆಫ್ ವೆರೋನಾ**), ಜ್ಯೂಲಿಯೆಟ್ (**ರೋಮಿಯೋ ಅಂಡ ಜ್ಯೂಲಿಯೆಟ್**), ಹರ್ಮಿಯಾ ಮತ್ತು ಹೆಲೆನಾ (**ಎ ಮಿಡ್ಸಮರ್ ನಾಯಟ್ಸ್ ಡ್ರೀಮ್**), ಕಾನ್‌ಸ್ಟನ್ಸ್ (**ಕಿಂಗಜಾನ್**) ಪೋರ್ಶಿಯಾ (**ದಮರ್ಚಂಟ್ ಆಫ್ ವೇನಿಸ್**), ಮಿಸ್ಟ್ರೆಸ್ ಕ್ವಿಕ್ಲಿ ಮತ್ತು ಡಾಲ್ ಟಿಯರ್‌ಶೀಟ್ (**ಕಿಂಗ ಹೆನ್ರಿ IV ಭಾಗ ೧ ಮತ್ತು ೨**) ಬಿಯಟ್ರಿಸ್ (**ಮಚ್ ಅಡೋ**) ರೋಜಲಿಂಡ್ ಮತ್ತು ಸೀಲಿಯಾ (**ಆ್ಯಜ್ ಯು ಲಾಯ್ಕ್ ಇಟ್**), ವಯೊಲಾ ಮತ್ತು ಒಲೀವ್ಹಿಯಾ (**ಟ್ವೆಲಫ್ತ್ ನಾಯಿಟ್**) ಆಫೀಲಿಯಾ ಮತ್ತು ಕ್ವೀನ್ ಗರ್ಟ್‌ರೂಡ್ (**ಹ್ಯಾಮ್ಲೆಟ್**), ಮಿಸೆಸ್ ಫೋರ್ಡ್ ಮತ್ತು ಮಿಸೆಸ್ ಪೇಜ್ (**ದ ಮೇರಿ ವಾಯ್‌ವ್ಜ ಆಫ್ ವಿಂಡ್ಸರ್**), ಕ್ರೆಸೀಡಾ (**ಟ್ರಾಯ್ಲಸ್ ಅಂಡ್ ಕ್ರೆಸೀಡಾ**), ಹೆಲೆನಾ ಮತ್ತು ಬರ್ಟರಮ್‌ನ ತಾಯಿಯಾದ ಕೌಂಟೆಸ್ (**ಆಲ್ ಇಜ್ ವೆಲ್**), ಇಸಬೆಲಾ (**ಮೆಜರ್ ಫಾರ್ ಮೆಜರ್**) ಡೆಸ್ಡಿಮೋನಾ (**ಆಥೆಲೊ**), ಕಾರ್ಡೀಲಿಯಾ, ಗಾನೆರಿಲ್, ರೀಗನ್ (**ಕಿಂಗ್ ಲಿಯರ್**), ಲೇಡಿ ಮ್ಯಾಕ್ಬೆಥ್ (**ಮ್ಯಾಕ್ಬೆಥ್**), ಕ್ಲಿಯೊಪಾತ್ರ (**ಆ್ಯಂಟನಿ ಅಂಡ್ ಕ್ಲಿಯೊಪಾತ್ರ**), ವೊಲುಮ್ನಿಯಾ, ವರ್ಜೀಲಿಯಾ (**ಕೊರಿಯೊಲ್ಯಾನಸ್**), ಮರೀನಾ (**ಪೆರಿಕ್ಲಿಜ್**), ಇಮೋಜಿನ್ (**ಸಿಂಬಲಿನ್**), ಹರ್ಮಿಯೊನಿ ಮತ್ತು ಪರ್ಡಿಟಾ (**ಎ ವಿಂಟರ್ಸ್ ಟೇಲ್**), ಮಿರ್ಯಾಂಡಾ (**ದ ಟೆಂಪೆಸ್ಟ್**).

ಆತ ಆರಂಭ ಕಾಲದಲ್ಲಿ ಮತ್ತು ಕೊನೆಯ ಭಾಗದಲ್ಲಿ ರಚಿಸಿದ ನಾಟಕಗಳ ತಂತ್ರ, ಶೈಲಿ ಮತ್ತು ಜೀವನ ಚಿತ್ರಣಗಳಲ್ಲಿ ವ್ಯತ್ಯಾಸವಿದ್ದಂತೆ ಆಯಾ ಕಾಲದ ನಾಟಕಗಳಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲಿಯೂ ವ್ಯತ್ಯಾಸವಿರುವದು ಖಂಡಿತ. ಕಾಲಾನುಕ್ರಮದಲ್ಲಿ ಆತನು ಸ್ತ್ರೀಯರ ಬಗೆಗೆ ತಳೆದ ಭಾವ ಮತ್ತು ವಿಚಾರಗಳಲ್ಲಾದ ಬದಲಾವಣೆಗಳನ್ನು ಸುಲಭವಾಗಿ ಗುರುತಿಸಬಹುದು. ಪ್ರಾರಂಭದಲ್ಲಿ ಕಾಣುವ ಸ್ತ್ರೀಪಾತ್ರಗಳು ಸಾಮಾನ್ಯವಾಗಿ ಚಂಡಿ ಸ್ವಭಾವದವರು, ಆದರೆ ದುಷ್ಟರಲ್ಲ! ಮಾತು ಬಿರುಸು,

ಹಟಮಾರಿತನ ಹೆಚ್ಚು ಅಷ್ಟೆ. ಅವರನ್ನು ಹತ್ತಿರ ಸೇರಿಸುವದಕ್ಕೆ ಭಯ. ಇನ್ನೊಮ್ಮೆ ಕಾಣಬೇಕೆಂಬ ಆಶೆ ಹುಟ್ಟದು. ಕ್ವೀನ್ ಮಾರ್ಗರೆಟ್‌ಳಂತೂ ತನ್ನ ಕೃತಿಗಳಿಂದ ಭೀಕರಳಾಗಿ ತೋರುತ್ತಾಳೆ. ತನ್ನ ಮಗ ಸಿಂಹಾಸನವನ್ನೇರಬೇಕೆಂಬುದೇ ಆಕೆಯ ಮಹದಾಶೆ. ಮಗನ ಮೇಲಣ ವ್ಯಾಮೋಹ, ತನ್ನ ವೈರಿ ತನ್ನ ಮಗನಿಗಾಗಿ ರೋದಿಸುವದನ್ನು ಕಂಡು "ಅಳು. ಇನ್ನೂ ಅಳು. ಅದನ್ನು ನೋಡಿ ನಾನು ಸಂತೋಷದಿಂದ ನರ್ತಿಸುವೆ" ಎಂದೆನ್ನಿಸುತ್ತದೆ. ಆ್ಯಡ್ರಿಯಾನಾಳದು (**ದ ಕಾಮೇಡಿ ಆಫ್ ಎರರ್ಸ್**) ಇನ್ನೊಂದು ತರಹ. ಕೀಟಲೆ ಕೊಟ್ಟಷ್ಟೂ ತನ್ನ ಪತಿ ತನ್ನಿಂದ ದೂರವಾಗುತ್ತಾನೆಂದು ಅವಳಿಗೆ ತಿಳಿಯುವದೇ ಇಲ್ಲ. ಈ ಅವಧಿಯಲ್ಲಿಯೆ ಶೇಕ್ಸ್‌ಪಿಯರ್ ಮರೆಯಲಾಗದ ಒಂದು ಸ್ತ್ರೀ ಪಾತ್ರ ಸೃಷ್ಟಿಸಿರುವನು. ಆಕೆಯೆ ಮಹಾಚಂಡಿಯೆಂದು ಪ್ರಸಿದ್ಧಳಾದ ಕ್ಯಾಥರೀನಾ. ಆ ಪಾತ್ರವನ್ನು ಶೇಕ್ಸ್‌ಪಿಯರ್ ಇಷ್ಟೊಂದು ಆಸಕ್ತಿಯಿಂದ ಏಕೆ ಚಿತ್ರಿಸಿದ ಎಂದು ಅನೇಕ ವಿಮರ್ಶಕರು ಪ್ರಶ್ನಿಸಿ ತಾವೆ ಉತ್ತರವನ್ನೂ ಹೇಳಿದ್ದಾರೆ. ಆತನ ಹೆಂಡತಿ ಆ್ಯನಾ ಹ್ಯಾಥವೇ ತುಂಬ ಹಟಮಾರಿಯಾಗಿದ್ದಳಂತೆ. ಆಕೆಯ ಚಂಡಿತನಕ್ಕೆ ಬೇಸತ್ತು ಶೇಕ್ಸ್‌ಪೀಯರ್ ತನ್ನ ಹಳ್ಳಿಯಿಂದ ಓಡಿಹೋಗಿ ಲಂಡನ್ ಸೇರಿದನೆಂದೂ ಕೆಲವರು ತರ್ಕಿಸಿದ್ದಾರೆ.*

ಅದೇನೆ ಇರಲಿ. ಲಂಡನ್ನಿಗೆ ಬಂದು ನೆಲೆಸಿದ ಶೇಕ್ಸ್‌ಪಿಯರ್ ನಾಟಕಮಂದಿರಗಳಿಗೆ :ಬರುತ್ತಿದ್ದ ಅನೇಕ ಚೆಲುವೆಯರನ್ನೂ, ಬುದ್ಧಿವಂತೆಯರನ್ನೂ ಕಂಡಿರಲು ಸಾಕು, ನೂರು ಹೋಗಿರಲು ಸಾಕು. ತರುವಾಯದ ರಮ್ಯ ಸುಖಾಂತ ನಾಟಕಗಳಲ್ಲಿ ಕಂಡುಬರುವ ಪಾತ್ರಗಳು—ಪೋರ್ಶಿಯಾ, ಬಿಯಟ್ರಿಸ್, ರೋಜಲಿಂಡ್, ವಯೊಲಾ, ನೆರಿಸಾ—ಯಾರ ಮನಸ್ಸನ್ನೂ ಸೂರೆಗೊಳ್ಳಬಲ್ಲವರೆ. ಈ ಕಾರಣಕ್ಕಾಗಿಯೆ ಡ್ರಾಯಡನ್ "ಯಾವ ಪುರುಷನೂ ಇವರಲ್ಲಿ ಯಾರೊಬ್ಬಳೂ ತನ್ನ ಜೀವನಸಂಗಾತಿಯಾಗಬೇಕೆಂದು ಬಯಸುವದು ಸಹಜ" ಎಂದು ಉದ್ಗರಿಸಿದ್ದಾನೆ. ಬಿಯಟ್ರಿಸ್ ಮಾತಿನಲ್ಲಿ ಬಲು ಚತುರೆ. ವಾಗ್ವಾದಕ್ಕಿಳಿದರೆ ಸಾಕು, ಯುದ್ಧಸನ್ನದ್ಧ ವೀರನಂತೆ ತನ್ನ ಬತ್ತಳಿಕೆಯಲ್ಲಿನ ಎಲ್ಲ ವಾಗ್ಬಾಣಗಳನ್ನು ಸಜ್ಜುಗೊಳಿಸಿಕೊಳ್ಳುವವಳೆ. ಆಕೆಯ ಮಾತಿನ ಗುರಿ ಎಂದೂ ತಪ್ಪದು. ಮೊದಲ ಮಾತೂ ಅವಳದೆ, ಕೊನೆಯ ಮಾತೂ ಅವಳದೆ. ವಾಗ್ವಾದಕ್ಕಿಳಿಯಲು ತನಗೆ ಸರಿಸಮಾನನಾದ ಬೆನೆಡಿಕ್ಟನೆ ಬೇಕು ಅವಳಿಗೆ. ಆದಾಗ್ಯೂ ಅವಳ ಹೃದಯವಂತಿಕೆಯೇನೂ ಕಡಿಮೆಯಿಲ್ಲ. ರೋಜಲಿಂಡ್‌ಳಾದರೂ ಬುದ್ಧಿವಂತೆಯೆ. ಮಾತಿನ ಮೋಡಿಯಿಂದ ಯಾರ ಹೃದಯವನ್ನೂ ಗೆಲ್ಲಬಲ್ಲಳು. ಚಿಕ್ಕಂದಿನಲ್ಲಿಯೆ ತಂದೆಯನ್ನು ಕಳೆದುಕೊಂಡು ಕಕ್ಕನ ಕೃಪಾಶೀರ್ವಾದದಲ್ಲಿ ಬೆಳೆದ ಈಕೆಯ ಜೀವನದಲ್ಲಿ ದುಃಖದ ಛಾಯೆ ಹರಡಿದೆ. ಆದರದು ಅವಳ ಸಹಜ ಲವಲಿಕೆ ಮತ್ತು ಹರ್ಷವೃತ್ತಿಯನ್ನು ಮರೆಮಾಚಿಲ್ಲ. ತನ್ನ ಪ್ರೇಮಪಾಶದಲ್ಲಿ ಬಿದ್ದು ವಿರಹದಿಂದ ಬಳಲುತ್ತಿರುವ ಒರ್ಲ್ಯಾಂಡೊನನ್ನು ಕಂಡು ಆಕೆಗೆ ತೃಪ್ತಿ ಹಾಗೂ ನಗು.

* ತನ್ನ ಹೆಂಡತಿಯನ್ನು ಮಣಿಸುವಲ್ಲಿ ವಿಫಲನಾದ ಶೇಕ್ಸ್‌ಪಿಯರ್ ಪೆಟ್ರೂಶಿಯೊ ಚಂಡಿ ಕ್ಯಾಥರೀನಾಳನ್ನು ಮೆತ್ತಗೆ ಮಾಡಿ ದಾರಿಗೆ ತರುವದರಲ್ಲಿ ತೃಪ್ತಿ ಪಡೆದಿರಬಹುದೆಂದೂ ತರ್ಕಿಸಿದವರುಂಟು.

ಪೋರ್ಶಿಯಾ ಮೊದಲಿನಿಂದಲೂ ದಿಟ್ಟೆಳು. ಮೇಲಾಗಿ ಬುದ್ಧಿವಂತೆ. ಆದರೆ ಆವಳು ಬಿಯಟ್ರಿಸ್‌ಳಂತೆ ಬರೀ ವಾಗ್ವಾದ ಮಾಡಲು ತನ್ನ ಜಾಣತನ ಬಳಸಿಕೊಳ್ಳುವದಿಲ್ಲ. ತನ್ನ ಪತ್ನಿಯೆ ನ್ಯಾಯವಾದಿಯಾಗಿ ಬಂದು ತನ್ನ ಗೆಳೆಯನ ಜೀವ ಉಳಿಸಿದಳೆಂಬುದನ್ನು ಅರಿಯದ ಬಸಾನಿಯೊ ಆಕೆಯ ಗೇಲಿಗೆ ಗುರಿಯಾದ. ಆದರೆ ಆತ ತನ್ನ ಪತಿ, ತನ್ನ ಸರ್ವಸ್ವ ಎಂಬುದನ್ನು ಆಕೆ ಮರೆಯಳು. ಮಹಾಸಂಪತ್ತಿನ ಏಕಮೇವ ಒಡತಿಯಾದ ಅವಳಿಗೆ ಧನಮದವೂ ಇಲ್ಲ, ಸ್ಥಾನಮಾನದ ಹಮ್ಮೂ ಇಲ್ಲ. ವಯೊಲಾ ಮಾತ್ರ ಬಲು ಮೃದು ಸ್ವಭಾವದವಳು. ಆದರೆ ಆರ್ಸಿನೋನನ್ನು ತನ್ನವನನ್ನಾಗಿ ಮಾಡಿಕೊಳ್ಳುವಲ್ಲಿ ಜಿಗುಟುತನವನ್ನೂ ಬುದ್ಧಿವಂತಿಕೆಯನ್ನೂ ಪ್ರದರ್ಶಿಸುತ್ತಾಳೆ. ಈ ಎಲ್ಲ ಪಾತ್ರಗಳೂ ವಸ್ತುನಿಷ್ಠವಾಗಿಯೇ ಮೂಡಿಬಂದಿವೆಯೆಂಬುದನ್ನು ನಾವಿಲ್ಲಿ ಗಮನಿಸಬಹುದು.

ಇಂತಹ ಪಾತ್ರಗಳನ್ನು ನೀಡಿದ ಶೇಕ್ಸ್‌ಪಿಯರ್ ಮುಂದೆ **ಆಲ್ಸ್ ವೆಲ್**ದ ಹೆಲೆನಾಳನ್ನೂ, **ಟ್ರ್ಯಾಯ್ಲಸ್ ಅಂಡ್ ಕ್ರೆಸೀಡಾ**ದ ಕ್ರೆಸಿಡಾಳನ್ನೂ, **ಆ್ಯಂಟನಿ ಅಂಡ್ ಕ್ಲಿಯೊಪಾಟ್ರ**ದ ಕ್ಲಿಯೊಪಾಟ್ರಳನ್ನೂ ಸೃಷ್ಟಿಸಿದನೆಂಬುದನ್ನು ಗಮನಿಸಿದಾಗ ಆತನಿಗೆ ಜೀವನದ ವಿವಿಧ ಮುಖಗಳ ಪರಿಚಯ ಎಷ್ಟೊಂದು ನಿಕಟವಾಗಿತ್ತೆಂಬುದು ನಿದರ್ಶನಕ್ಕೆ ಬರುತ್ತದೆ. ತನ್ನನ್ನು ಮದುವೆಯಾಗಲು ಸರ್ವಥಾ ನಿರಾಕರಿಸಿದ ಮತ್ತು ನಂತರ ಬಲುಮೆಯಿಂದ ವಿವಾಹಕ್ಕೆ ಒಪ್ಪಿದ ಬರ್ಟ್ರಾಮನ ಬೆನ್ನು ಹತ್ತಿ ಹೋಗಿ ಆತ ಹಾಕಿದ ಕರಾರುಗಳನ್ನು ಪೂರ್ತಿಗೊಳಿಸುವ ಹೆಲೆನಾಳ ಬಗೆಗೆ ಸಹಾನುಭೂತಿಪಡಬೇಕೊ ಅಥವಾ ನಾಚಿಕೆ ಪಡೆಯಬೇಕೊ ತಿಳಿಯದು. ತನ್ನೊಂದಿಗೆ ಪ್ರೇಮ ಕೇಳಿಯಾಡಲು ಅವನು ಕರೆದಿದ್ದ ಇನ್ನೊಬ್ಬಳ ವೇಷದಲ್ಲಿ ತಾನು ಹೋಗಿ ಆತನಿಂದ ಗರ್ಭವತಿಯಾಗಿ "ನೋಡು ನಿನ್ನ ಕರಾರುಗಳನ್ನು ಪೂರೈಸಿದ್ದೇನೆ. ನನ್ನನ್ನು ಈಗ ಸ್ವೀಕರಿಸು" ಎಂದು ಹೇಳುವದು ಹೆಣ್ತನಕ್ಕೆ ಅಪಚಾರ. ಆದರೆ ಒಂದು ಮಾತು ಮಾತ್ರ ನಿಶ್ಚಿತ. ಶೇಕ್ಸ್‌ಪಿಯರನ ಸ್ತ್ರೀಪಾತ್ರಗಳು "ಸಂರಕ್ಷಿತ" ಜೀವನ ಸಾಗಿಸುವವರಲ್ಲ. ಅವರು ಬಿಸಿಲು–ನೆರಳು, ಚಳಿ–ಮಳೆಗಳಲ್ಲಿ ಓಡಾಡುವರು. ಅಡೆತಡೆಗಳನ್ನು ಧೈರ್ಯದಿಂದ ಎದುರಿಸುವವರು. ಕ್ರೆಸಿಡಾಳ ಕತೆ ಶೇಕ್ಸ್‌ಪಿಯರನ ಇತರ ಸ್ತ್ರೀಪಾತ್ರಗಳಿಗಿಂತ ಭಿನ್ನ. ಒಂದು ರೀತಿಯಲ್ಲಿ ಅವಳು ಹ್ಯಾಮ್ಲೆಟ್‌ನ ತಾಯಿಯನ್ನು ಮತ್ತು ಟ್ರಾಯ್‌ದ ಹೆಲೆನ್‌ಳನ್ನು ಹೋಲುತ್ತಾಳೆ. ಗ್ರೀಕರ ಕ್ಯಾಂಪಿಗೆ ಹೋಗುವದೊಂದೆ ತಡ, ಕ್ರೆಸಿಡಾ ತಾನು ಈ ಮೊದಲು ಪ್ರೇಮಿಸಿದ್ದ ಟ್ರಾಯ್‌ಲಸ್‌ನನ್ನು ಮರತೇ ಬಿಡುತ್ತಾಳೆ. ಮತ್ತೊಬ್ಬನೊಂದಿಗೆ ತನ್ನ ಆಟವನ್ನಾರಂಭಿಸುತ್ತಾಳೆ. ಇದನ್ನರಿತ ಟ್ರ್ಯಾಯ್ಲಸ್ ಸಿಟ್ಟಿಗೆದ್ದು ಇಡಿ ಸ್ತ್ರೀಕುಲವನ್ನೆ ಧಿಕ್ಕರಿಸಲುದ್ಯುಕ್ತನಾದಾಗ ಆತನ ಗೆಳೆಯ "ನಮಗೆ ಪೂಜ್ಯರಾದ ತಾಯಂದಿರಿದ್ದಾರೆ ಎಂಬುದನ್ನು ಮರೆಯದಿರು" ಎಂದು ಎಚ್ಚರಿಸುವನು. ಮೇಲಿಂದ ಮೇಲೆ "Frailty, thy name is woman" ಎಂಬ ಶೇಕ್ಸ್‌ಪಿಯರ್‌ನ ಉಕ್ತಿಯನ್ನೇ ಉದಾಹರಿಸಿ ದೊಡ್ಡವರೆಲ್ಲರೂ ಹೆಣ್ಣಿನ ವಿಷಯದಲ್ಲಿ ತಳೆದಿರುವದು ಇಂತಹ ಅಭಿಪ್ರಾಯವನ್ನೆ ಎಂದು ಹೇಳುವವರು ಟ್ರ್ಯಾಯ್ಲಸ್‌ನ ಗೆಳೆಯ ಹೇಳಿದ ಮಾತನ್ನು ಗಮನಿಸಬೇಕು. ಹೆಣ್ಣಿನ ಬಗೆಗೆ ಶೇಕ್ಸ್‌ಪಿಯರ್ ತಾತ್ಸಾರ ತಳೆದಿ

ದ್ದರೆ ಮೇಲ್ಕಾಣಿಸಿದ ಸ್ತ್ರೀಪಾತ್ರಗಳು ಆತನಿಂದ ಸೃಷ್ಟಿಯಾಗಲು ಸಾಧ್ಯವಿತ್ತೆ? ಪ್ರಪಂಚ ಬಲು ವಿಶಾಲ. ಅಲ್ಲಿ ಎಲ್ಲ ಸ್ವಭಾವದ ಹೆಣ್ಣುಗಳಿರುವದು ಸಹಜ. ಇಡಿ ಪುರುಷಕುಲವನ್ನು ತನ್ನ ಕಿರುಬೆರಳ ಮೇಲೆ ಕುಣಿಸಬಲ್ಲ ಕ್ಲಿಯೊಪಾಟ್ರಳಿಗೆ ಸ್ಥಾನವಿರು ವಂತೆ ರಕ್ಕಸಿಯರಾದ ಗಾನೆರಿಲ್, ರೀಗನ್ (**ಕಿಂಗ್ ಲಿಯರ್**) ಮತ್ತು ಟೆಮೊರಾ (**ಟಾಯ್ಟಸ್ ಅಂಡ್ರೊನಿಕಸ್**) ಮುಂತಾದವರಿಗೂ ಸ್ಥಾನವುಂಟು. ಆದರೆ ಇಂಥ ಪಾತ್ರಗಳಿಗೆ ಶೇಕ್ಸ್‌ಪಿಯರ್ ಪ್ರಾಧಾನ್ಯ ನೀಡಿಲ್ಲವೆಂಬುದು ಗಮನಿಸಬೇಕಾದ ಅಂಶ.

ಹೆಲೆನಾ ಮತ್ತು ಕ್ರೆಸೀಡಾಳನ್ನು ಸೃಷ್ಟಿಸಿದ ನಂತರ ಶೇಕ್ಸ್‌ಪಿಯರ್‌ನ ಮನಸ್ಸಿಗೆ ಬೇಜಾರಾಗಿರಬೇಕು. 'ಕರಿಯ ಹೆಣ್ಣಿ'ನಿಂದ ಪ್ರೇಮವಂಚಿತನಾದ ಶೇಕ್ಸ್‌ಪಿಯರ್ ಈ ಪಾತ್ರಗಳನ್ನು ಸೃಷ್ಟಿಸಿ ತನ್ನ ಮನದಳಲನ್ನು ತೋಡಿಕೊಂಡಂತೆ ತೋರುತ್ತದೆ. ನಂತರ ಆತ ಸೃಷ್ಟಿಸಿದ್ದು ತಮ್ಮ ಮುಗ್ಧತೆಯಿಂದ ನಮ್ಮ ಹೃದಯಾಂತರಾಳವನ್ನೆ ಕಲಕುವ ಮುದ್ದು ಹುಡುಗಿಯರನ್ನು—ಡೆಸ್ಡಿಮೊನಾ, ಒಫೀಲಿಯಾ, ಕಾರ್ಡೀಲಿಯಾ. ದುರಂತ ನಾಟಕಗಳಲ್ಲಿ ಎಲ್ಲ ಲಕ್ಷ್ಯ ನಾಯಕ ಪಾತ್ರಗಳ ಮೇಲೆ ಕೇಂದ್ರೀಕೃತವಾಗಿದೆ. ಆದರೆ ಈ ಸ್ತ್ರೀ ಪಾತ್ರಗಳು ತಮ್ಮ ಸರಳ, ಮುಗ್ಧ ಮತ್ತು ಪ್ರೇಮಳ ಸ್ವಭಾವದಿಂದ ದುರಂತದ ಪ್ರಖರತೆಯನ್ನು ಹೆಚ್ಚಿಸುತ್ತಾರೆಂಬುದು ನಿಸ್ಸಂಶಯ. ಮತಿಭ್ರಾಂತನಾಗಿದ್ದ ತಂದೆ ಕಿಂಗ್ ಲಿಯರ್‌ನನ್ನು ತನ್ನ ವಾತ್ಸಲ್ಯದಿಂದ ತಿರುಗಿ ಮಾನವನನ್ನಾಗಿ ಮಾಡಿದವಳು ಕಾರ್ಡೀಲಿಯಾ. ಆಕೆಯ ಕಳೇವರವನ್ನು ಕೈಯಲ್ಲಿ ಹಿಡಿದು "ಈ ದಾರುಣ ಕೃತ್ಯವನ್ನು ಕಂಡು ದೇವತೆಗಳೂ ಕಣ್ಣೀರು ಸುರಿಸಬೇಕು" ಎಂದು ಕಿಂಗ್ ಲಿಯರ್ ರೋದಿಸುವ ದೃಶ್ಯ ಹೃದಯ ವಿದ್ರಾವಕ. ಆಫೀಲಿಯಾಳ ದುರಂತವೆಂದರೆ ಹ್ಯಾಮ್ಲೆಟ್‌ನನ್ನು ಪ್ರೀತಿಸಿದ್ದು. ಅದೇ ರೀತಿ ಡೆಸ್ಡಿಮೊನಾಳದು ಕೂಡ. "ಆತನ ಹೃದಯವಂತಿಕೆಯನ್ನು ಪ್ರೀತಿಸಿದ ನನಗೆ ಆತನ ಕಪ್ಪು ಬಣ್ಣದ ಭೀತಿಯೆಲ್ಲಿ?" ಎಂದು ಅಭಿಮಾನವಿಟ್ಟಿದ್ದ ಡೆಸ್ಡಿಮೊನಾ ಆತನ ಕೈಯಲ್ಲಿಯೇ ಮೃತ್ಯುಗೀಡಾದುದು ವಿಧಿವಿಲಾಸ. ಏನೆಂದರೂ ಪ್ರೇಮ ಕುರುಡಲ್ಲವೆ?

ತನ್ನ ಕಲಾಜೀವನದ ಕೊನೆಗೆ ಶೇಕ್ಸ್‌ಪಿಯರ್ ಸೃಷ್ಟಿಸಿದ್ದು ಮುಖ್ಯವಾಗಿ ಸರಳ ಹಾಗೂ ಮುಗ್ಧ ಬಾಲೆಯರನ್ನು ಈಗಾಗಲೆ ಸಾಕಷ್ಟು ಧನವನ್ನೂ ಮಾನವನ್ನೂ ಸೂರೆಗೊಂಡಿದ್ದ ಶೇಕ್ಸ್‌ಪಿಯರ್‌ನಿಗೆ ತನ್ನ ಹಳ್ಳಿಯಲ್ಲಿದ್ದ ಮಗಳ ನೆನಪು ಮರುಕಳಿಸಿರ ಬೇಕು. ಮರೀನಾ, ಇಮೋಜೆನ್, ಪರ್ಡಿಟಾ ಮತ್ತು ಮಿರ್‍ಯಾಂಡಾ ನಡುವೆ ಹೆಚ್ಚು ವ್ಯತ್ಯಾಸವಿಲ್ಲ. ಎಲ್ಲರೂ ಒಬ್ಬರೊಬ್ಬರ ಪಡಿಯಚ್ಚಿನಂತೆ ಎಂದು ಇದರರ್ಥವಲ್ಲ. ಶೇಕ್ಸ್‌ಪಿಯರ್‌ನ ಯಾವದೆ ಪಾತ್ರ ಇನ್ನೊಂದರ ಅನುಕರಣೆಯಾಗಿಲ್ಲ. ಅವರ ಮನಸ್ಸು ಹೂವಿನಂತೆ ಕೋಮಲ, ನಿಷ್ಕಲ್ಮಷ. ಕೆಸರಿನಲ್ಲಿಯ ಕಮಲದಂತೆ ಅವರು ಶೋಭಿಸು ವರು. ತಮ್ಮ ಸುತ್ತಲಿನ ಸುಳ್ಳು—ಮೋಸಗಳ ಸೋಂಕು ಅವರನ್ನು ತಗಲದು. ತನ್ನ ಹೆಸರಿನಂತೆಯೆ ಮಿರ್‍ಯಾಂಡಾ ಕೌತುಕದ ಸೃಷ್ಟಿ. ಆಕೆಯೆ ತನ್ನ ಸರ್ವಸ್ವವೆಂದು ಬಗೆದು ತನ್ನ ವಾತ್ಸಲ್ಯವನ್ನೆಲ್ಲ ಅವಳ ಮೇಲೆ ಧಾರೆಯೆರೆದ ಪ್ರಾಸ್ಪರೊನೆ ಶೇಕ್ಸ್‌ಪಿಯರ್. ತನ್ನ ಅದ್ಭುತ ಮಾಯಾವಿ ಶಕ್ತಿಯಿಂದ ಲಂಡನ್ನಿನ ಜನತೆಗೆ ಜೀವನದ ಅಪೂರ್ವ ದರ್ಶನ ಮಾಡಿಸಿದ ಶೇಕ್ಸ್‌ಪಿಯರ್ ತನ್ನ ಜ್ಞಾನ ಶಕ್ತಿಯನ್ನೆಲ್ಲ ಸಾಗರಾಂತರಾಳದಲ್ಲಿ

ಮುಳುಗಿಸಿದ ಪ್ರಾಸ್ಪರಸ್‌ನಂತೆ ನಿಶ್ಚಿಂತನಾಗಿ ಜೀವನದ ಕೊನೆಯ ಹಂತವನ್ನು ಕಳೆಯಬಯಸುತ್ತಾನೆ. ತನ್ನ ನಾಟಕಕಾರ-ಜೀವನಕ್ಕೆ ನಾಟಕೀಯವಾಗಿಯೆ ಅಂತಿಮ ತೆರೆ ಇಳಿಬಿಡುತ್ತಾನೆ. ಮಹಾಚಂಡಿ ಕ್ಯಾಥರೀನಾಳೊಂದಿಗೆ ಆರಂಭಿಸುವ ಶೇಕ್ಸ್‌ಪಿಯರ್‌ನ ಸ್ತ್ರೀ ಸಂತಾನ ಮಿರ್‍ಯಾಂಡಾಳೊಂದಿಗೆ ಪರಿಸಮಾಪ್ತವಾಗುತ್ತದೆ. ಎಂಥ ವೈವಿಧ್ಯ! ಹೆಂಡತಿಯ ನೆನಪಿನಿಂದ ಆರಂಭಿಸಿ ಮುದ್ದು ಮಗಳ ಸ್ಮರಣೆಯೊಂದಿಗೆ ಶೇಕ್ಸ್‌ಪಿಯರ್ ತನ್ನ ಲೇಖನಿಗೆ ವಿದಾಯ ಹೇಳುತ್ತಾನೆ.

ಶೇಕ್ಸ್‌ಪಿಯರ್‌ನ ಸ್ತ್ರೀಪಾತ್ರಗಳನ್ನು ಇನ್ನೊಂದು ದೃಷ್ಟಿಕೋನದಿಂದಲೂ ಅಭ್ಯಸಿಸಬಹುದು. ಸ್ತ್ರೀಜೀವನದಲ್ಲಿ ಇರುವುದು ನಾಲ್ಕು ಮಹತ್ವದ ಅವಸ್ಥೆಗಳು: ಮಗಳು, ಪ್ರೇಯಸಿ, ಪತ್ನಿ ಮತ್ತು ತಾಯಿ. ಶೇಕ್ಸ್‌ಪಿಯರ್‌ನಲ್ಲಿ ಹೆಣ್ಣಿನ ಈ ಎಲ್ಲ ಅವಸ್ಥೆಗಳ ಆಳವಾದ ಅರಿವು ಕಾಣಸಿಗುತ್ತದೆ. ಮಾನವ ಸ್ವಭಾವದಲ್ಲಿ ಅವನು ಅರಿಯದಿದ್ದುದು ಏನಿದೆ? ಅಂತೆಯೆ ಡ್ರೈಡನ್ ಶೇಕ್ಸ್‌ಪಿಯರ್‌ನನ್ನು 'ಸರ್ವಗ್ರಾಹಿ ಚೇತಸ್ಸು' ಎಂದು ಬಣ್ಣಿಸಿದ್ದಾನೆ.

ಶೇಕ್ಸ್‌ಪಿಯರ್‌ನ ಬಾಲಿಕೆಯರು ಸಾಮಾನ್ಯವಾಗಿ ಸೌಮ್ಯ ಮತ್ತು ಪ್ರೇಮಳ ಸ್ವಭಾವದವರು. ಸಂದರ್ಭಕ್ಕನುಸಾರವಾಗಿ ದಿಟ್ಟ ಹೆಜ್ಜೆ ಇಡಬಲ್ಲವರೂ ಆಹುದು. ಆತ ಚಿತ್ರಿಸಿದ ಹದಿನಾಲ್ಕು ಬಾಲೆಯರಲ್ಲಿ ಹೆಚ್ಚಾಗಿ ತಂದೆಯ ಆಶ್ರಯದಲ್ಲಿಯೆ ಬೆಳೆದವರು ಇದೊಂದು ಗಮನಾರ್ಹ ಅಂಶ. ತಾಯಂದಿರನ್ನು ಕಳೆದುಕೊಂಡ ಇವರು ಸ್ವತಂತ್ರವೃತ್ತಿ ಮೈಗೂಡಿಸಿಕೊಂಡಿದ್ದಾರೆ. ತಾಯಂದಿರ ಪಾತ್ರಗಳನ್ನು ವಹಿಸಲು ಬೇಕಾದ ಸೂಕ್ತ ಹದಿವಯಸ್ಸಿನ ಬಾಲನಟರ ಕೊರತೆಯುಂದಾಗಿ ಶೇಕ್ಸ್‌ಪಿಯರ್ ತಾಯಂದಿರಿಲ್ಲದ ಬಾಲಿಕೆಯರನ್ನು ಸೃಷ್ಟಿಸಿರಲು ಸಾಕು. ಬಾಲಿಕೆಯರು ಪುರುಷವೇಷಧರಿಸುವ ಸನ್ನಿವೇಶಗಳ ವಿಪುಲತೆಗೂ ಇದುವೆ ಕಾರಣವಾಗಿರಬೇಕು. ಆತ ಸೃಷ್ಟಿಸಿದ ಬಾಲಿಕೆಯರಲ್ಲಿ ತಂದೆ ಹೇಳಿದಂತೆ ಹೂಂಗುಟ್ಟುವವರು ವಿರಳ. ಹ್ಯಾಮ್ಲೆಟ್‌ನೊಂದಿಗೆ ಹೆಚ್ಚು ಸಹವಾಸ ತರವಲ್ಲ ಎಂದು ಹೇಳಿದ ಮಾತನ್ನು ಆಫೀಲಿಯಾ ಪಾಲಿಸುತ್ತಾಳೆ. ಹಾಗೆಯೆ ಬಿಯಾಂಕಾ (**ದ ಟೆಮಿಂಗ್ ಆಫ್ ದ ಶ್ರೂ**) ಕೂಡ. ಆದರೆ ಜ್ಯೂಲಿಯಟ್, ಹರ್ಮಿಯಾ, ಇಮೋಜೆನ್, ಡೆಸ್ಡಿಮೋನಾ ಮತ್ತು ಮಿರ್‍ಯಾಂಡಾ? "ನಾನು ಹೇಳುವವನನ್ನೆ ನೀನು ಮದುವೆಯಾಗತಕ್ಕದ್ದು, ಇಲ್ಲವಾದರೆ ಮರಣವನ್ನು ಎದುರಿಸಲು ಅಥವಾ ಅಜಸ್ರ ಬ್ರಹ್ಮಚರ್ಯವನ್ನು ಅನುಭವಿಸಲು ಸಿದ್ಧಳಾಗು" ಎಂದು ಹೇಳುವ ತಂದೆಯ ಕಣ್ಣು ತಪ್ಪಿಸಿ ಆ ರಾತ್ರಿಯೆ ಹರ್ಮಿಯಾ ತನ್ನ ಪ್ರಿಯಕರನೊಂದಿಗೆ ಓಡಿಹೋಗುತ್ತಾಳೆ. "ನನ್ನೆದುರು ಎಂದೂ ಗಟ್ಟಿಯಾಗಿ ಮಾತನಾಡದ, ತನ್ನ ನೆರಳಿಗೆ ಹೆದರುವ ನನ್ನ ಮಗಳು ಅಥೆಲೊನಂತಹ ವಯಸ್ಸಾದ ಕಾಡುಮನುಷ್ಯನನ್ನು ಪ್ರೀತಿಸುವದು ಸಾಧ್ಯವೆ?" ಎಂಬ ತಂದೆಯ ಪ್ರಶ್ನೆಗೆ ಡೆಸ್ಡಿಮೋನಾ "ಆತನ ಮುಖವನ್ನು ನಾನು ಅವನ ಹೃದಯದಲ್ಲಿ ಕಂಡೆ" ಎಂದು ಮಾರುತ್ತರನೀಯುತ್ತಾಳೆ. ಪ್ರೇಮಪಾಶದಲ್ಲಿ ಬಿದ್ದ ಈ ಸ್ತ್ರೀಯರು ಹಿಂದೆಂದೂ ತೋರಿರದ ಧೈರ್ಯವನ್ನೂ, ಸ್ವತಂತ್ರ ವೃತ್ತಿಯನ್ನೂ ತೋರುತ್ತಾರೆ. ರೆಕ್ಕೆ ಬಲಿತ ಹಕ್ಕಿ ತನ್ನ ಗೂಡನ್ನು ಬಿಟ್ಟು ಹಾರಿ ಹೋಗುವಂತೆ ಇವರೂ ಸಹ ಪಿತೃ

ಸುತ್ತಾರೆಂದು ಶೇಕ್ಸ್‌ಪಿಯರ್ ಸೂಚಿಸಬಯಸುತ್ತಾನೆ. ಅದು ನಿಸರ್ಗಸಹಜವಲ್ಲವೆ? ಪ್ರೇಮಿಗಳ ವಿಷಯದಲ್ಲಿ ಆತನಿಗೆ ಸದಾ ಸಹಾನುಭೂತಿ. ತನಗಿಂತಲೂ ವಯಸ್ಸಾದವಳಾದ ಆ್ಯನ್ ಹ್ಯಾಥವೇಳನ್ನು ಪ್ರೇಮಿಸಿ ಮದುವೆಯಾಗಿ ಪಶ್ಚಾತ್ತಾಪಪಟ್ಟ, ಲಂಡನ್ನಿಗೆ ಪಲಾಯನಗೈದು, ಅಲ್ಲಿ 'ಕಪ್ಪು ಚೆಲುವೆ'ಗೆ ಮನಸೋತು, ಆಕೆಯಿಂದ ತಿರಸ್ಕೃತನಾದ ಶೇಕ್ಸ್‌ಪಿಯರ್‌ನದು ಪ್ರೇಮ ವಿರಹಗಳೆರಡನ್ನೂ ಚಿತ್ರಿಸುವಲ್ಲಿ ಎತ್ತಿದ ಕೈ. ರೋಮಿಯೊ–ಜ್ಯೂಲಿಯೆಟ್‌ರ ಕತೆಯಂತೂ ಮರೆಯಲಾಗದ ದುರಂತ ಕತೆ. ಬಿಯಟ್ರಿಸ್‌ಳ (**ಮಚ್ ಅಡೊ**) ಪ್ರೇಮವೆ ಒಂದು ವಿಚಿತ್ರ ರೀತಿಯದು. ಬಿಯಟ್ರಿಸ್–ಬೆನೆಡಿಕ್ಟ್‌ರ ವಾಗ್ವಾದದ ಪ್ರಖರತೆಯನ್ನು ನೋಡಿದರೆ ಇಬ್ಬರಿಗೂ ಒಬ್ಬರನ್ನೊಬ್ಬರು ಕಂಡರೆ ಆಗದೇನೋ ಎಂದೆನಿಸುತ್ತದೆ. ಆದರೆ ಬಿಯಟ್ರಿಸ್ ಏನನ್ನು ಸಹಿಸಿದರೂ ಬೆನೆಡಿಕ್ಟ್ ತನ್ನನ್ನು ನಿರ್ಲಕ್ಷಿಸುವವನ್ನು ಮಾತ್ರ ಸಹಿಸಳು. ಇಬ್ಬರ ಹಿತೈಷಿಗಳೂ ಕೂಡಿ ಅವರು ಒಬ್ಬರನ್ನೊಬ್ಬರು ಪ್ರೀತಿಸುವ ಸನ್ನಿವೇಶವನ್ನೆ ನಿರ್ಮಿಸುತ್ತಾರೆ. ಇಬ್ಬರಿಗೂ ಆಶ್ಚರ್ಯ. ಜೀವನ ಸಂಗಾತಿಗಳಾಗಲು ಹಾತೊರೆಯುತ್ತಾರೆ. ಶೇಕ್ಸ್‌ಪಿಯರ್‌ನಲ್ಲಿ ಭಗ್ನಹೃದಯಿಗಳ ಚಿತ್ರಣ ಕಡಿಮೆ. ಆದರೆ ಮರೆಯುವಂತಹವು. ಪ್ರಿಯಕರನ ತಾತ್ಸಾರಕ್ಕೆ ಗುರಿಯಾದ ಇಮೋಜೆನ್ ಪಡುವ ವ್ಯಥೆ ಮರ್ಮಕ್ಕೆ ಮುಟ್ಟುವಂತಹದು. ವಯೊಲಾ ತಾನೆ ಪ್ರೇಮಿಸುವ ಡ್ಯೂಕ್ ಆರ್ಸಿನೊನ ವಿರಹ–ಸಂದೇಶವನ್ನು ಆಲೀವಿಯಾಳಿಗೆ ತಲುಪಿಸಬೇಕಾಗುತ್ತದೆ. ಪುರುಷವೇಷ ಧರಿಸಿ ತನ್ನೊಂದಿಗೇ ಇರುವ ವಯೊಲಾ ತನ್ನನ್ನೇ ಪ್ರೇಮಿಸುತ್ತಾಳೆಂಬ ಕಲ್ಪನೆ ಆರ್ಸಿನೊನನಿಗೆ ಬರುವದಾದರೂ ಹೇಗೆ? **ಮೇಜರ್ ಫಾರ್ ಮೇಜರ್** ದಲ್ಲಿನ ಮರಿಯಾನಾ ವಿರಹದ ಜೀವಂತ ಚಿತ್ರವಾಗಿದ್ದಾಳೆ. ಶೇಕ್ಸ್‌ಪಿಯರ್ ಒಟ್ಟು ಇಪ್ಪತ್ತೊಂಭತ್ತು ಪ್ರೇಮಿಗಳನ್ನು ಸೃಷ್ಟಿಸಿದ್ದಾನೆ. ಒಂದೊಂದೂ ಇನ್ನೊಂದಕ್ಕಿಂತ ಚೆಂದ. ಇದರಲ್ಲಿ ಇಜಿಪ್ತದ ರಾಣಿ ಕ್ಲಿಯೊಪಾಟ್ರಳದು ವಿಶಿಷ್ಟ ಸ್ಥಾನ. ಜಗತ್ತಿನ ಎಂತಹ ಶೂರನನ್ನೂ ಧೂರ್ತನನ್ನೂ ತನ್ನ ದಾಸನನ್ನಾಗಿ ಮಾಡಬಲ್ಲೆನೆಂಬ ಹೆಮ್ಮೆ ಆವಳದು. "ಸೀಝರ್‌ನು ನನ್ನನ್ನು ನೋಡಿದಾಕ್ಷಣ ಮೋಹಿತನಾಗಲಿಲ್ಲವೆ?" ಎಂಬ ಅಭಿಮಾನ ಅವಳಿಗೆ, ಇಜಿಪ್ತನ್ನು ಗೆಲ್ಲಲು ಹೋದ ಆ್ಯಂಟನಿ ಯುದ್ಧದ ಆರಂಭದಲ್ಲಿಯೆ ಸೋತು ಆಕೆಯ ಸೆರೆಯಾಳಾಗುತ್ತಾನೆ. ಆಕೆಯೆ ತನ್ನ ಸರ್ವಸ್ವವೆನ್ನುವಮಟ್ಟಿಗೆ ಪ್ರೇಮಾಂಧನಾಗುತ್ತಾನೆ. ತನ್ನ ಪ್ರೇಮಿಗಳನ್ನು ಹೇಗೆ ಆಟವಾಡಿಸಬೇಕೆಂಬುದು ಕ್ಲಿಯೊಪ್ಯಾಟ್ರಳಿಗೆ ಗೊತ್ತು. ಆದರೆ ಆ್ಯಂಟನಿಯನ್ನು ಆಟವಾಡಿಸಲು ಹೋಗಿ ತಾನೆ ಆತನಿಗೆ ಮಾರು ಹೋಗುತ್ತಾಳೆ. ಆ್ಯಂಟನಿ–ಕ್ಲಿಯೊಪಾಟ್ರರ ಕತೆ ರೋಮಿಯೊ–ಜ್ಯೂಲಿಯೆಟ್‌ರ ಕತೆಯಂತೆಯೆ ರೋಚಕ, ಜಗದ್ವಿಖ್ಯಾತ.

ಪ್ರೇಮಿಗಳನ್ನು ಚಿತ್ರಿಸುವಲ್ಲಿ ಶೇಕ್ಸ್‌ಪಿಯರ್ ತೋರಿದ ಆಸ್ಥೆ ಮತ್ತು ಸಂವೇದನಾ ಶೀಲತೆ ಪತ್ನಿ ಮತ್ತು ತಾಯಿಯರ ಪಾತ್ರ ಚಿತ್ರಣದಲ್ಲಿ ಕಂಡುಬರುವದಿಲ್ಲ. ಹಟಮಾರಿ ಹೆಂಡತಿಯ ಕೈಯಲ್ಲಿ ಶೇಕ್ಸ್‌ಪಿಯರ್ ಅನುಭವಿಸಿದ ದುಃಖದುಮ್ಮಾನಗಳನ್ನು ಅವನು ಸುಲಭವಾಗಿ ಮರೆತಿರಲಿಕ್ಕಿಲ್ಲ. ಆದರೂ ಆತ ವೈಯಕ್ತಿಕ ಬೇಕು—ಬೇಡಗಳನ್ನು ಮೀರಿ ನಿಲ್ಲಬಲ್ಲ ಶಕ್ತಿಯನ್ನೂ ಬೆಳೆಸಿಕೊಂಡಿದ್ದ. ಆತ ಚಂಡಿ ಸ್ವಭಾವದ

ದಬ್ಬಾಳಿಕೆ ಪ್ರವೃತ್ತಿಯ ಪತ್ನಿಯರನ್ನೂ ಚಿತ್ರಿಸಿದ್ದಾನೆ. ಆದರ್ಶಪತ್ನಿಯರನ್ನೂ ಸೃಷ್ಟಿಸಿದ್ದಾನೆ. ಲೇಡಿ ಮ್ಯಾಕ್‌ಬೆಥಳನ್ನು ಅನೇಕ ವಿಮರ್ಶಕರು ನಾನಾ ರೀತಿಯಲ್ಲಿ ಬಗಳೆದಿದ್ದಾರೆ. "ಡಂಕನ್‌ನನ್ನು ಈ ರಾತ್ರಿ ನೀನು ಕೊಲ್ಲಲೇಬೇಕು. ಹಿಂಜರಿದರೆ ನಿನ್ನಂಥ ಹೇಡಿಯನ್ನು ಮದುವೆಯಾದೆನಲ್ಲ ಎಂದು ನಾನು ಪರಿತಪಿಸಬೇಕಾಗುತ್ತದೆ" ಎಂದು ಗಂಡನನ್ನು ಪ್ರೇರಿಸುವ ಈಕೆ ನಾರಿಯೊ ಮಾರಿಯೊ ಎಂಬ ಸಂದೇಹ ಹುಟ್ಟಿಸುತ್ತಾಳೆ. ತನ್ನ ಸ್ತ್ರೀಸಹಜ ಗುಣಗಳನ್ನು ಕಡೆಗಣಿಸಿ ಪುರುಷನ ಕಠೋರತನ ಪ್ರದರ್ಶಿಸುವ ಈಕೆ ಮನೋರೋಗಿಯಾಗುವದನ್ನೂ ಶೇಕ್ಸ್‌ಪಿಯರ್ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಆಕೆಯ ಬಗೆಗೆ ನಮ್ಮಲ್ಲಿ ಅನುಕಂಪವನ್ನೂ ಹುಟ್ಟಿಸುತ್ತಾನೆ. ಆಕೆ ಹಾಗೆ ವರ್ತಿಸಿದುದಾದರೂ ಏಕೆ? ತಾನು ಕಿರೀಟ ಧರಿಸಿ ಮೆರೆದಾಡಲೆಂದೇ? ಇಲ್ಲ; ತನ್ನ ಪತಿ ಮ್ಯಾಕ್‌ಬೆಥ್ ಸಿಂಹಾಸನವನ್ನೇರಲೆಂದೆ? ಹರ್ಮಿಯೊನಿ (ಅ ವಿಂಟರ್ಸ್ ಟೇಲ್) ನಿಜಕ್ಕೂ ಆದರ್ಶ ಸತಿ. ಸಂಶಯಪಿಶಾಚಿಗಂಡನ ಮಿಥ್ಯಾರೋಪವನ್ನು ಮೊದಮೊದಲು ಈಕೆ ಸಹಿಸಿಕೊಂಡರೂ ಕೊನೆಗೆ ರೊಚ್ಚಿಗೆದ್ದು "ನಾನು ಅನ್ಯರನ್ನು ಪ್ರೀತಿಸುವ ಸಂದೇಹ ನಿನಗಿದ್ದರೆ ದೇವ ವಾಣಿ (oracle)ಯ ಪ್ರಮಾಣ ವಚನವನ್ನು ತರಿಸು" ಎಂದು ಆಹ್ವಾನಿಸುತ್ತಾಳೆ. ಮರುಕ್ಷಣವೆ, ಪತಿಯ ಪ್ರೇಮ–ವಿಶ್ವಾಸಗಳನ್ನು ಕಳೆದುಕೊಂಡು ಜೀವಿಸಿ ಫಲವೇನು ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾಳೆ. ತುಂಬಿದ ಸಭೆಯಲ್ಲಿ ಪತಿ ತನ್ನ ಕೆನ್ನೆಗೆ ಹೊಡೆದರೂ ಡೆಸ್ಡಿಮೊನಾ "ಇದು ನನಗೆ ಅನ್ಯಾಯ" ಎಂದು ಮಾತ್ರ ಹೇಳಿ ಹೊರಗೆ ಹೋಗುತ್ತಾಳೆ. "ಆಥೆಲೊ ಮೊದಲಿನ ಹಾಗೆ ಇಲ್ಲ. ಅವನು ಸಂಶಯದ ಸುಳಿಯಲ್ಲಿ ಸಿಲುಕಿಕೊಂಡಿದ್ದಾನೆ, ಜೋಕೆ" ಎಂದು ಎಮಿಲಿಯಾ ಎಚ್ಚರಿಸಿದಾಗ್ಯೂ "ನನ್ನ ಗಂಡನದು ಹಾಲಿನಂತಹ ಮನಸ್ಸು. ಸಂದೇಹ, ಸಂಶಯ, ಹೊಟ್ಟೆಕಿಚ್ಚು ಅವನನ್ನು ಸೋಕುವದು ಸಾಧ್ಯವಿಲ್ಲ," ಎಂದು ಡೆಸ್ಡಿಮೊನಾ ಪತಿಯನ್ನು ಸಮರ್ಥಿಸುತ್ತಾಳೆ. ಮುಂದೆ ಕೆಲವೇ ಗಂಟೆಗಳ ನಂತರ ಡೆಸ್ಡಿಮೊನಾ ತನ್ನ ಪತಿಯ ಕೈಯಲ್ಲಿ ಮರಣವನ್ನಪ್ಪುತ್ತಾಳೆ. ಈಕೆಯೆ ಶೇಕ್ಸ್‌ಪಿಯರ್ ಚಿತ್ರಿಸಿದ ಆದರ್ಶ ಸತಿ ಇರಬಹುದೆ? ಹರ್ಮಿಯೊನಿಯ ಗಟ್ಟಿಗತನ ಇವಳಲ್ಲಿಯೂ ಇರಬೇಕಿತ್ತು ಎನಿಸುತ್ತದೆ.

ಈ ಅಭಾಗಿನಿಯರಲ್ಲದೆ ಶೇಕ್ಸಪಿಯರ್ ಉಲ್ಲಸಿತ ಮತ್ತು ವಿನೋದಪ್ರಿಯ ಪತ್ನಿಯರನ್ನು ಚಿತ್ರಿಸಿದ್ದಾನೆ. ಅವರೇ ವಿಂಡ್ಸರ್‌ದ ಉಲ್ಲಸಿತ ಪತ್ನಿಯರು. ತನ್ನೊಂದಿಗೆ ಕಾಮಚೇಷ್ಟೆ ಮಾಡಲು ಪ್ರಯತ್ನಿಸುವ ಸರ್ ಜಾನ್ ಫಾಲ್‌ಸ್ಟಾಫ್‌ನನ್ನು ಮೈನುಗ್ಗಾಗುವಂತೆ ಬಡಿದು, ಬಡಿಸಿ, ಸ್ವಾಭಿಮಾನಿ ಪತ್ನಿಯರನ್ನು ತಡವುವದು ತರವಲ್ಲ ಎಂದು ಅವರು ತೋರಿಸಿಕೊಡುತ್ತಾರೆ.

ತಾಯ್ತನದ ಸೊಬಗನ್ನು ಚಿತ್ರಿಸುವದು ಶೇಕ್ಸಪಿಯರ್‌ನಿಗೆ ಕಠಿಣವಾಯಿತೇನೊ ಎಂಬ ಸಂದೇಹ ಮೂಡುತ್ತದೆ. ಅವರ ಸಂಖ್ಯೆ ಕಡಿಮೆ. ಅವರಲ್ಲಿ ಗಮನ

ಸೆಳೆಯುವಂತಹವರು ವಾಲುಮ್ನಿಯಾ, ಕಾನ್‌ಸ್ಟನ್ಸ್ ಮತ್ತು ಕೌಂಟೆಸ್ (**ಆಲ್ಸ್ ವೆಲ್ ದ್ಯಾಟ್ ಎಂಡ್ಸ್ ವೆಲ್**). ವಾಲುಮ್ನಿಯಾ ಮತ್ತು ಕೌಂಟೆಸ್ ಇಬ್ಬರೂ ಆದರ್ಶವಾದಿ ತಾಯಂದಿರು. ಅವರು ಸಹಜವಾಗಿಯೆ ತಮ್ಮ ಮಕ್ಕಳ ಅಭ್ಯುದಯವನ್ನು ಬಯಸುವರು, ಅವರ ಹಿರಿಮೆಗಾಗಿ ಹೆಮ್ಮೆ ತಾಳುವರು. ಅವರ ಮಕ್ಕಳು ದಾರಿ ತಪ್ಪಿ ನಡೆದರೆ ತಾವೇ ಎಲ್ಲರಿಗಿಂತ ಮೊದಲಿಗರಾಗಿ ಅವರನ್ನು ಶಿಕ್ಷಿಸಲೂ ಹಿಂಜರಿಯರು. ಹೆಲಿನಾಳ ನಾಪತ್ತೆ, ಅವಳು ಸತ್ತಿರಬಹುದೇನೊ ಎಂಬ ಆತಂಕ, ಅದರಲ್ಲಿ ತನ್ನ ಮಗ ಬರ್ಟ್ರಮ್‌ನ ಕೈವಾಡವಿರಬಹುದೆಂಬ ಶಂಕೆ ಹುಟ್ಟಿದಾಗ "ಈ ವಿಷಯ ಇತ್ಯರ್ಥವಾಗಲೇಬೇಕು. ತಪ್ಪಿತಸ್ಥ ನನ್ನ ಮಗನೆ ಆಗಿದ್ದರೂ ಅವನಿಗೆ ಶಿಕ್ಷೆ ಆಗಲೇಬೇಕು". ಎಂದು ಕೌಂಟೆಸ್ ರಾಜನನ್ನು ಆಗ್ರಹಪಡಿಸುತ್ತಾಳೆ. ಆಕೆಯ ನೀತಿ–ನಿಷ್ಠೆಯನ್ನು ಮೆಚ್ಚಲೇಬೇಕು. ಕೊರಿಯೊಲ್ಯಾನಸ್‌ನ ತಾಯಿ ವಾಲುಮ್ನಿಯಾ ನಮ್ಮ ಪ್ರಾಚೀನ ರಜಪೂತ ವೀರ ಮಹಿಳೆಯರ ನೆನಪು ಮಾಡುವಂತಿದ್ದಾಳೆ. ವೈರಿಗಳನ್ನು ಸದೆಬಡಿದು ಯುದ್ಧಭೂಮಿಯಿಂದ ಮರಳಿದ ತನ್ನ ಮಗನ ಮೈಮೇಲಾದ ಗಾಯಗಳ ಬಗೆಗೆ ಅವಳಿಗೆ ಹೆಮ್ಮೆ. ಆತನ ಹೆಂಡತಿ ಗಾಯಗಳನ್ನು ಕಂಡು 'ಅಯ್ಯೋ' ಎಂದು ದುಃಖಿಸಿದರೆ "ಮಹಾಯೋಧನ ಪತ್ನಿಗೆ ಇದು ಶೋಭಿಸುವ ವಿಷಯವಲ್ಲ" ಎಂದು ಬುದ್ಧಿ ಹೇಳುತ್ತಾಳೆ. ಮುಂದೆ ರಾಜಕೀಯ ಚದುರಂಗದಾಟದಲ್ಲಿ ಕೊರಿಯೊಲ್ಯಾನಸ್ ತನ್ನ ದೇಶದ ವಿರುದ್ಧ ಏರಿ ಬಂದಾಗ ವಾಲುಮ್ನಿಯಾ "ದೇಶದ ಹಿತಾಸಕ್ತಿಗಳು ನನಗೆ ಹೆಚ್ಚಿನವು, ಮಗನಲ್ಲ" ಎಂದು ಹೇಳುವ ಮೂಲಕ ಉಜ್ವಲ ದೇಶಾಭಿಮಾನ ಪ್ರಕಟಿಸುತ್ತಾಳೆ. ಹ್ಯಾಮ್ಲೆಟ್‌ನ ತಾಯಿ ಕ್ವೀನ್ ಗರ್ಟ್‌ರೂಡ್‌ಳ ಮಾನಸಿಕ ದ್ವಂದ್ವವನ್ನು ಶೇಕ್ಸಪಿಯರ್ ಬಲು ರಮ್ಯವಾಗಿ ಚಿತ್ರಿಸಿದ್ದಾನೆ. ಪತಿಯ ಹಂತಕ ಮೈದುನನ್ನೆ ಲಗ್ನವಾದ ಆಕೆಯಲ್ಲಿ ತಾಯ್ತನದ ಕರುಳು ಇನ್ನೂ ಜೀವಂತವಾಗಿದೆ. ತನ್ನ ತಂದೆಯ ಕೊಲೆಯಲ್ಲಿ ತನ್ನ ತಾಯಿಯ ಕೈವಾಡವಿದೆಯೆ ಎಂಬ ಸಂಶಯ ಹ್ಯಾಮ್ಲೆಟ್‌ನನ್ನು ಕಾಡುತ್ತದೆ. ಗರ್ಟ್‌ರೂಡ್‌ಳಿಗೆ ಒಂದು ಕಡೆ ಗಂಡನ ಮೇಲಿನ ಮೋಹ, ಇನ್ನೊಂದು ಕಡೆ ಮಗನ ಮೇಲಿನ ಮಮತೆ. ಈ ದ್ವಂದ್ವದಲ್ಲಿ ತಾಯ್ತನದ ಕೈಯೆ ಮೇಲಾಗುತ್ತದೆ. ತನ್ನ ಜೀವನವನ್ನೆ ಗಂಡಾಂತರದಲ್ಲಿ ನೂಕಿ ಜನ್ಮ ನೀಡುವ ತಾಯಿ ಯಾವ ತ್ಯಾಗಕ್ಕಾದರೂ ಸಿದ್ಧ ಎಂಬುದು ಶತಸ್ಸಿದ್ಧ. ಕ್ವೀನ್ ಮಾರ್ಗರೆಟ್ (**ಕಿಂಗ್ ಹೆನ್ರಿ VI**) ಭೀಕರಳಾಗಿ ಕಂಡರೂ ಅವಳ ತಾಯ್ತನದ ಕಿಚ್ಚು ಆಕೆಯ ಹೃದಯವನ್ನು ಎಷ್ಟೊಂದು ಸುಡುತ್ತಿರಬಹುದೆಂಬುದನ್ನು ಊಹಿಸಬಹುದು. ತನ್ನ ಮಕ್ಕಳನ್ನು ಕಳೆದುಕೊಂಡ ಕಾನ್‌ಸ್ಟನ್ಸ್‌ಳಿಗೆ ಕಣ್ಣೀರೆ ಕೂಳು. ಆಕೆಯ ಆಕ್ರಂದನ ಯಾರ ಹೃದಯವನ್ನು ತಾನೆ ತಟ್ಟಲಾರದು ?

ಸಮಾಜದ ತೀರ ಹಿಂದುಳಿದ ಸ್ತ್ರೀವರ್ಗವೂ ಶೇಕ್ಸಪಿಯರ್‌ನ ಗಮನ ಸೆಳೆಯದಿರಲಿಲ್ಲ. ಮಿಸೆಸ್ ಕ್ವಿಕ್‌ಲಿ, ಡಾಲಿ ಟಿಯರ್‌ಶೀಟ್ ಮತ್ತು ಜ್ಯೂಲಿಯೆಟ್‌ಳ ನರ್ಸ್ ಇದಕ್ಕೆ ಸಾಕ್ಷಿ. ಇವರ ಭಾಷೆ, ಕೃತಿ ಎಲ್ಲವೂ ವಸ್ತುನಿಷ್ಠ. ಮೇಲ್ವರ್ಗದವರನ್ನು

ಎಷ್ಟು ಚೆನ್ನಾಗಿ ಬಲ್ಲನೊ ಹಾಗೆಯೆ ಕೆಳವರ್ಗದವರನ್ನೂ ಶೇಕ್ಸಪಿಯರ್ ಬಲ್ಲ. ಆತ "ಸಾಸಿರ–ಪ್ರತಿಭೆಯ" ಶೇಕ್ಸ್‌ಪಿಯರ್.

ಹೀಗಿದೆ ಶೇಕ್ಸ್‌ಪಿಯರ್‌ನ ಸ್ತ್ರೀಪಾತ್ರಗಳ ಚಿತ್ರಣ. ಏನೊಂದು ವೈವಿಧ್ಯ. ಅದೆಂಥ ವಸ್ತುನಿಷ್ಠತೆ! ಕೋಲ್ರಿಜ್‌ನ ಮಾತಿನಲ್ಲಿ ಹೇಳುವಹಾಗೆ "ಜಗತ್ತಿಗೊಬ್ಬನೇ ಶೇಕ್ಸ್‌ಪಿಯರ್".

○

ಮೈಥಿಲಿಶರಣಗುಪ್ತರ ದೃಷ್ಟಿಯಲ್ಲಿ ಸ್ತ್ರೀ

ಎಸ್. ರಾಮಚಂದ್ರ

ಈ ಶತಮಾನದ ಆದಿಯಲ್ಲಿ ತಮ್ಮ ಕಾವ್ಯಜೀವನವನ್ನು ಆರಂಭಿಸಿ ಸುಮಾರು ಅರವತ್ತು ವರ್ಷಗಳವರೆಗೆ ಅವಿರತವಾಗಿ ತಮ್ಮ ಪ್ರತಿಭೆಯಿಂದ ಹಿಂದಿ ಕಾವ್ಯ ಸಂಪತ್ತನ್ನು ಬೆಳೆಸಿ ಇತರರಿಂದಲೂ ಅದು ಬೆಳೆಯುವಂತೆ ಪ್ರೋತ್ಸಾಹಿಸಿದವರು ಮೈಥಿಲಿ ಶರಣಗುಪ್ತರು. ಅವರು ಕಟ್ಟಾ ವೈಷ್ಣವ ಸಂಪ್ರದಾಯಸ್ಥರಾದರೂ ನಾಡು–ನುಡಿಗಳ ಸೇವೆಯಲ್ಲಿ ಇವರು ತೋರಿದ ಹೃದಯ ವೈಶಾಲ್ಯವು ಅಸದೃಶವಾದುದು. ಕಂದಾಚಾರಗಳಾವುದಕ್ಕೂ ಸೊಪ್ಪು ಹಾಕದೆ ಕಾಲಧರ್ಮಕ್ಕೆ ತಕ್ಕಂತೆ ಬದಲಾದ ಧೋರಣೆಗಳನ್ನು ವಿಚಾರದ ಒರೆಗಲ್ಲಿಗೆ ಹಚ್ಚಿ ಭಾರತೀಯ ಸಂಸ್ಕೃತಿಯ ವಿಕಾಸದಲ್ಲಿ ಅವನ್ನು ಮೈಗೂಡಿಸಿಕೊಳ್ಳುವ ವಿವೇಕಯುತ ಹಾದಿಯನ್ನು ಗುಪ್ತರು ಎಲ್ಲರಿಗೂ ತೋರಿದರು. ಹಳೆಯ ಮತ್ತು ಹೊಸ ತಲೆಮಾರಿನ ಕವಿಗಳಿಗೆ ಕೊಂಡಿಯಂತಿದ್ದ ಗುಪ್ತರು ತಮ್ಮ ಸಜ್ಜನಿಕೆಯಿಂದ ಹಳಬರಲ್ಲಿ ಹೊಸಬರಾಗಿ, ಹೊಸಬರಲ್ಲಿ ಹಳಬರಾಗಿ ತಮ್ಮ ಸಾಹಿತ್ಯ ಸಾಧನೆಯನ್ನು ಮುಂದುವರಿಸಿದರು. ಈ ಸಾಧನೆಯಿಂದ ತಮ್ಮ ಬಾಳ್ವೆಯನ್ನು ಸಾರ್ಥಕಗೊಳಿಸಿಕೊಳ್ಳುವಂತೆ ಇವರನ್ನು ಪ್ರೇರೇಪಿಸಿದವರು ಆಚಾರ್ಯ ಮಹಾವೀರಪ್ರಸಾದ್ ದ್ವಿವೇದಿ.

ದ್ವಿವೇದಿಯವರು ಸುಮಾರು ೧೯೦೩ರಲ್ಲಿ ಸುಪ್ರಸಿದ್ಧ ಹಿಂದಿ ಸಾಹಿತ್ಯ ಪತ್ರಿಕೆ **ಸರಸ್ವತಿ**ಯ ಸಂಪಾದಕರಾದರು. ಅವರು ಗದ್ಯ–ಪದ್ಯ ಶೈಲಿಗಳಲ್ಲಿ ಏಕರೀತಿಯ ಹಿಂದಿ ಭಾಷೆಯ ಬಳಕೆಯ ಅಗತ್ಯವನ್ನು ಮನಗಂಡು ಹಿಂದಿಯಲ್ಲಿ ಕವನ ಬರೆಯಲು ತರುಣ ಪೀಳಿಗೆಯ ಕವಿಗಳನ್ನು ಪ್ರೇರೇಪಿಸಿದರು. **ಸರಸ್ವತಿ**ಯ ಮುಖಪುಟದಲ್ಲಿ ರಾಜಾ ರವಿವರ್ಮರ ಚಿತ್ರವೊಂದನ್ನು ಮುದ್ರಿಸಿ ಪದ್ಯದಲ್ಲಿ ಅದರ ವಿವರಣೆಯನ್ನು ಕೊಡುವ ಪರಿಪಾಠವನ್ನು ಅವರು ಹಾಕಿಕೊಂಡಿದ್ದರು. ಗುಪ್ತರು ತಮಗೆ ವಹಿಸಲಾಗುತ್ತಿದ್ದ ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಲಾರಂಭಿಸಿದರು. ಹೀಗೆ ಶುರುವಾದ ಗುಪ್ತರ ಬರವಣಿಗೆ ಕಾವ್ಯಶೈಲಿಯ ನಾನಾಹಂತಗಳನ್ನು ದಾಟಿ ಸಂಪದ್ಭರಿತವಾಯಿತು.

ಗುಪ್ತರು ಕವನ ಬರೆಯಲಾರಂಭಿಸಿದಾಗ ಆಧುನಿಕ ಹಿಂದಿ ಕಾವ್ಯದಲ್ಲಿ ನಾರಿಯರ ಬಾಳ್ವೆಯನ್ನು ಚಿತ್ರಿಸುವ ದೃಷ್ಟಿ ಬದಲಾವಣೆಯಾಗಹತ್ತಿತ್ತು. **ಸರಸ್ವತಿ**ಯಲ್ಲಿ **ಕಾಮಿನಿ ಕೌತೂಹಲ** ತಲೆಬರಹದ ಒಂದು ಅಂಗವಾಗಿ ಭಾರತೀಯ ಮಹಿಳಾ ರತ್ನಗಳನ್ನು ಕುರಿತ ಪರಿಚಯವಿರುತ್ತಿತ್ತು. ೧೯೦೪ನೇ ಜನವರಿಯ ಸಂಚಿಕೆಯಲ್ಲಿ ರಾಣಿ ಲಕ್ಷ್ಮೀಬಾಯಿ ಕುರಿತು ಭವಭೂತಿಯ ಈ ಸಾಲು ಅಚ್ಚಾಗಿತ್ತು:

'ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ' (ಗುಣಕ್ಕೆ ಗೌರವವಿರಬೇಕು. ಗುಣವಿದ್ದಲ್ಲಿ ಲಿಂಗಭೇದವಾಗಲಿ ವಯೋಮಾನವಿಚಾರವಾಗಲಿ ಇರಲಾಗದು.)

ಚರಿತ್ರೆಯಲ್ಲಿ ಪ್ರಸಿದ್ಧರೆನಿಸಿದ ಮಹಾಪುರುಷರ, ನಾರೀಮಣಿಯರ ಜೀವನ ವೃತ್ತಾಂತವೂ ಪತ್ರಿಕೆಗಳಲ್ಲಿ ಅಚ್ಚಾಗತೊಡಗಿದವು. ಭಾರತೀಯ ಸಮಾಜದ ಮುನ್ನಡೆಗೆ ನೆರವಾಗುವಂತೆ ಮೈತ್ರೇಯಿ, ಗಾರ್ಗಿ, ಅನುಸೂಯ, ದಮಯಂತಿ, ಮಹಾಶ್ವೇತೆ, ಕೌಶಲ್ಯೆ, ಸುಮಿತ್ರೆ, ಸೀತೆ, ಊರ್ಮಿಳೆ, ಯಶೋದೆ, ರಾಧೆ, ಕುಂತಿ, ದ್ರೌಪದಿ, ಶಕುಂತಲೆ, ಯಶೋಧರೆ, ಪದ್ಮಿನಿ, ಅನಾರ್ಕಲಿ, ನೂರಜಹಾನ, ಲಕ್ಷ್ಮೀಬಾಯಿ ಮುಂತಾದವರ ಜೀವನವನ್ನು ಬಣ್ಣಿಸುವ ನೆಪದಲ್ಲಿ ದೇಶೋದ್ಧಾರಕ್ಕೆ ನೆರವಾಗಬಲ್ಲಂತೆ– ಮಹಿಳೆಯರ ಅಂತಃಸತ್ವದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಯಿತು. ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಹೊಮ್ಮಿದ ಹೊಸ ವಿಚಾರಗಳ ಪರಿಣಾಮವಾಗಿ ಅನ್ಯಕ್ಷೇತ್ರಗಳಲ್ಲಿ ಹೇಗೊ ಹಾಗೆ ಹಿಂದಿ ಸಾಹಿತ್ಯದಲ್ಲಿ ನಾರೀಜೀವನವನ್ನು ಚಿತ್ರಿಸುವ ದೃಷ್ಟಿ ಬದಲಾಯಿಸಿತು. ಸ್ತ್ರೀ ಸ್ವಾತಂತ್ರ್ಯದ ಪ್ರಸ್ತಾಪವಾಗತೊಡಗಿತು. ನಾರಿಯ ಬಾಳಿನಲ್ಲಿ ಪ್ರೇಮ, ಪ್ರೀತಿಗೆ ಮನ್ನಣೆ ದೊರೆಯಿತು. ಅಂತೆಯೇ ಮಹಿಳೆಗೆ ಸೌಂದರ್ಯವು ಸಹಜ ಆಭರಣವೆಂದು ಒಪ್ಪಲಾಯಿತಲ್ಲದೆ ಶಿವತ್ವ, ಸತ್ಯತ್ವ ಇವಕ್ಕೂ ಮಹತ್ವ ದೊರೆಯಿತು. ಪ್ರಾಚೀನ ಸಂಸ್ಕೃತ ಸಾಹಿತ್ಯ, ನವೀನ ಆಂಗ್ಲ ಸಾಹಿತ್ಯದಂತೆ ಹಿಂದಿ ಸಾಹಿತ್ಯದಲ್ಲಿ ಮಹಿಳೆಯರ ಬಗ್ಗೆ ಬದಲಾದ ದೃಷ್ಟಿಗೆ ಬಂಗಾಳದ ವಿಶ್ವಕವಿ ರವೀಂದ್ರನಾಥ ಠಾಕುರ ಅವರ ಧೋರಣೆಯಿಂದ ಪುಷ್ಟಿ ದೊರೆಯಿತು. ಸ್ತ್ರೀ ಸೌಂದರ್ಯವನ್ನು ರವೀಂದ್ರರು ಕವನಗಳ ಮೂಲಕ ಚಿತ್ರಿಸಿ ಸ್ತ್ರೀಯರಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಹಲವಾರು ಪ್ರಬಂಧಗಳನ್ನು ಬರೆದರು. ವನಿತೆಯಾದ ಮಾತ್ರಕ್ಕೆ ವಿಷಯಾಸಕ್ತಿಯ ತವರುಮನೆ ಎಂದು ಆಕೆಯ ಬಗ್ಗೆ ಹೇಯ ಭಾವ ತಳೆಯುವ ಧೋರಣೆಯನ್ನು ಕಟುವಾಗಿ ಟೀಕಿಸಿ ಅವರು ಸಮಾಜದಲ್ಲಿ ಆಕೆಗೆ ಇರಬೇಕಾದ ಸ್ಥಾನಮಾನವನ್ನು ಅರಿಯುವ ಅಗತ್ಯವನ್ನು ಒತ್ತಿ ಹೇಳಿದರು. ಕಾವ್ಯ ಜಗತ್ತಿನಲ್ಲಿ ಅಲಕ್ಷ್ಯಕ್ಕೆ ಗುರಿಯಾಗಿದ್ದ ಸ್ತ್ರೀ ಪಾತ್ರಗಳನ್ನು ಕುರಿತು ಬರೆದ ಅವರ ಪ್ರಬಂಧವನ್ನು ಓದಿ, ಸ್ಫೂರ್ತಿ ಪಡೆದು ಗುಪ್ತರು ತಮ್ಮ ಸಾಕೇತವನ್ನು ರಚಿಸಿದರು.

ಈ ಶತಮಾನದ ಆರಂಭದ ಆ ಯುಗದಲ್ಲಿ ಸಮಾಜಸುಧಾರಣೆಯ ಅಂಗವಾಗಿ ಬಾಲವಿವಾಹ ನಿಷೇಧ, ವಧೂವರರ ವಯೋಮಿತಿಯ ಹೆಚ್ಚಳ, ವಿಧವಾ ವಿವಾಹಕ್ಕೆ ಬೆಂಬಲ, ದೇವದಾಸಿ ಪದ್ಧತಿಯ ರದ್ಧತಿ, ಸ್ತ್ರೀ ಶಿಕ್ಷಣ ಮುಂತಾದ ಚಟುವಟಿಕೆಗಳಿಗೆ

ಸರಕಾರದಿಂದಲೂ ಪ್ರೋತ್ಸಾಹ ದೊರೆಯುವಂತಾಯಿತು. ಸ್ತ್ರೀಯರಿಗೆ ತಮ್ಮ ನಿಜ ಸ್ಥಿತಿಯ ಅರಿವನ್ನು ಮೂಡಿಸಿ ಅವರಿಂದ ನಾಡಿನ ಏಳಿಗೆಗೆ ಆಗಬೇಕಾದ ಕರ್ತವ್ಯದ ಮನವರಿಕೆ ಮಾಡಿಕೊಡುವ ಕಾರ್ಯ ಭರದಿಂದ ಸಾಗಿತು. ಇದರಿಂದ ಸ್ತ್ರೀಸ್ವಾತಂತ್ರ್ಯಕ್ಕೆ ನಾಂದಿಯೂ ಆಯಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ಚಳುವಳಿಯ ಮೂಲಕ ಸ್ತ್ರೀಯರಿಗೂ ಪುರುಷರಂತೆ ಸಮಾಜದಲ್ಲಿ ಸರಿಸಮಾನತೆಯನ್ನು ಪಡೆಯುವ ಅವಕಾಶವುಂಟಾಯಿತು. ಹೀಗಾಗಿ ಕಾವ್ಯಕ್ಷೇತ್ರದಲ್ಲಿ ನಾರಿಯು ತನ್ನ ಅಂಗಾಂಗಗಳಿಂದ ಶೋಭಿಸುವ ಪುತ್ಥಳಿಯಾಗಿ ಉಳಿಯದೆ, ಚೈತನ್ಯದಿಂದ ತುಂಬಿದ ಭಾವಶಕ್ತಿ–ಕ್ರಿಯಾಶಕ್ತಿಯಿಂದ ಸಂಚಾಲಿತಳಾದ ಸಮಾಜಸೇವಕಿಯಾಗಿ ಬೆಳಗಿದಳು.

ಸುಮಾರು ೧೯೩೦ರ ವರೆಗಿನ ಹಿಂದಿ ಕಾವ್ಯದಲ್ಲಿ ಮೇಲೆ ಹೇಳಿದ ವಿಚಾರಗಳ ಪ್ರಭಾವ ನಾರಿಯ ಚಿತ್ರಣದಲ್ಲಿ ಕಾಣಬಂತು. ಶ್ರೀಧರ ಪಾಠಕ, ರಾಮ ನರೇಶ ತ್ರಿಪಾಠಿ, ಅಯೋಧ್ಯಾಸಿಂಹ ಉಪಾಧ್ಯಾಯ, ಮೈಥಿಲಿ ಶರಣ ಗುಪ್ತ ಮುಂತಾದ ಕವಿಗಳು ನವಯುಗದ ನಾರಿಯರ ಆದರ್ಶವನ್ನು ತಮ್ಮ ರಚನೆಗಳಲ್ಲಿ ನಿರೂಪಿಸಿದರು.

ಮೈಥಿಲಿಶರಣ ಗುಪ್ತರು **ಭಾರತ ಭಾರತಿ** ಶೀರ್ಷಿಕೆಯ ತಮ್ಮ ಬೃಹತ್ಕಾವ್ಯದಲ್ಲಿ ಭಾರತೀಯ ಸಮಾಜದಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನಮಾನವಿಲ್ಲದೆ ಇರುವದಕ್ಕೆ ಪುರುಷರೇ ಕಾರಣರೆಂದು ನೊಂದುಕೊಳ್ಳುತ್ತಾರೆ.

'ಕ್ಯಾ ದೋಷ ಉನಕಾ ಕಿಂತು ಜೋ ಉನಮೇ ಗುಣೋಂ ಕೀ ಹೈ ಕಮೀ ।
ಹಾ ! ಕ್ಯಾ ಕರೇಂ ವೇ ಜಬಕಿ ಉನಕೋ ಮೂರ್ಖ ರಖತೇ ಹೈಂ ಹಮೀ ॥'

ಸ್ತ್ರೀಯರಿಗೂ ಶಿಕ್ಷಣದ ಸೌಲಭ್ಯ ದೊರೆತಿದ್ದಾದರೆ ಅವರೂ ದೇಶದ ಏಳ್ಗೆಗೆ ಸಮಾಜದ ಬೆಳವಣಿಗೆಗೆ ಪೋಷಣೆ ನೀಡಬಲ್ಲರೆಂಬುದನ್ನು ಗುಪ್ತರು ಬಿಚ್ಚುಮನಸ್ಸಿನಿಂದ ನುಡಿದಿದ್ದಾರೆ.

ಕ್ಯಾ ಕರ ನಹೀಂ ಸಕತೀಂ ಭಲಾ ಯದಿ ಶಿಕ್ಷಿತಾ ಹೋಂ ನಾರಿಯಾಂ ?
ರಣರಂಗ, ರಾಜ್ಯ, ಸುಧರ್ಮ ರಕ್ಷಾ, ಕರ ಚುಕೀಂ ಸುಕುಮಾರಿಯಾಂ ।

ಪುರುಷರೇ ನಾರಿಯರನ್ನು ಅಲಕ್ಷ್ಯಮಾಡಿ ತಮ್ಮ ತಪ್ಪನ್ನು ಅವರ ಮೇಲೆ ಹೊರಿಸುವ ಹೊಣೆಗೇಡಿತನ ತೋರುವಾಗ ದೇಶದಲ್ಲಿ ಸಮೃದ್ಧಿ ಹೇಗೆ ತಾನೇ ಆದೀತು ? ಹೆಣ್ಣುಮಕ್ಕಳಿಗೂ ನ್ಯಾಯಸಮ್ಮತ ಗೌರವ ದೊರೆತದ್ದಾದರೆ ದೇಶದಲ್ಲಿ ಎಲ್ಲ ರೀತಿಯ ಬೆಳವಣಿಗೆಗೂ ಅವಕಾಶವುಂಟು.

'ಐಸೀ ಉಪೇಕ್ಷಾ ನಾರಿಯೋಂಕೀ ಜಬ ಸ್ವಯಂ ಹಮ ಕರ ರಹೇ ।
ಅಪನಾ ಕಿಯಾ ಅಪರಾಧ ಉನಕೇ ಶೀಶಪರ ಹೈಂ ಧರ ರಹೇ ॥
ಭಾಗೇಂ ನ ಕ್ಯೋಂ ಹಮಸೇ ಭಲಾ ಫಿರ್ ದೂರ ಸಾರೀ ಸಿದ್ಧಿಯಾಂ ।
ಪಾತೀಂ ಸ್ತ್ರಿಯಾಂ ಆದರ ಜಹಾಂ ರಹತೀಂ ವಹೀಂ ಸಬ ಋದ್ಧಿಯಾಂ ॥'

ನಾರಿ ಸರ್ವಮಂಗಳೆ, ಆದಿಶಕ್ತಿ ಎಂಬ ಗೌರವಾನ್ವಿತ ಪದಗಳಿಂದ ವಿಭೂಷಿತಳಾಗಿದ್ದು ಆಕೆಯ ಬಗ್ಗೆ ಸಮಾಜದ ಅನಾದರವನ್ನು ನೋಡಿ ರೊಚ್ಚಿಗೆದ್ದ ಆಧುನಿಕ ಕವಿಗಳಲ್ಲಿ ಗುಪ್ತರು ಅಗ್ರಗಣ್ಯರು. ಅವರು ತಮ್ಮ ಹಲವಾರು ಕೃತಿಗಳಲ್ಲಿ ನವಯುಗದ ಆದರ್ಶವನ್ನು ಬಿಂಬಿಸುವ ಮಹಿಳೆಯರನ್ನಾಗಿ ಸೀತೆ, ಊರ್ಮಿಳೆ, ಯಶೋಧರೆ, ಕೌಶಲ್ಯೆ,

ಯಶೋದೆ, ರಾಧೆ, ಕುಂತಿ, ಸುರಭಿ ಮೊದಲಾದ ಪಾತ್ರಗಳ ಹೊಸ ಅವತರಣಿಕೆಯನ್ನು ನಮಗೆ ನೀಡಿದ್ದಾರೆ. ಸೇವಾಭಾವ, ಕರುಣೆ, ಕ್ಷಮೆ, ಸಹನೆ ಇವು ಈ ಪಾತ್ರಗಳಲ್ಲಿ ಜೀವಂತವಾಗಿ ಮೂಡಿಬಂದಿವೆ. ನಾರೀಶಕ್ತಿ ಕಲ್ಯಾಣಮಯಿಯಾಗಿದೆ; ನಾರಿ ಸಕಲರಿಗೂ ದಿವ್ಯಫಲ ನೀಡಲು ರೂಪ ತಳೆದ ಕಲ್ಪಲತೆ; ಈ ಶಕ್ತಿ–ಸ್ವರೂಪಿಣಿ, ದಿವ್ಯಫಲದಾಯಿನೀ ನಾರಿಯನ್ನು ಅಬಲೆಯೆಂದು ಕರೆಯುವದು ಅವಿವೇಕವೆನಿಸುತ್ತದೆ. ಧೈರ್ಯ, ಗಾಂಭೀರ್ಯಗಳ ಪ್ರತಿಮೂರ್ತಿಯಾದ ನಾರಿಯ ಕುಡಿನೋಟಕ್ಕೆ ಹಾತೊರೆಯುವ ಮಂದಿ ಆಕೆಯನ್ನು ಅಬಲೆ ಎನ್ನಬಹುದೇ ? ನಿಸರ್ಗದ ಸೊಬಗೆಲ್ಲವೂ ಆಕೆಯ ಸಂಪರ್ಕದಿಂದಲೇ ಸ್ವರ್ಗ ಸಮಾನವಾಗುವದೆಂಬುದನ್ನು ಮರೆಯಲಾದೀತೆ ?

೧ 'ಭುಕ್ತಿ ಮುಕ್ತಿ ದೇತೀ ಹೈ ದೋನೋಂ ಮಾ ತೇರಿ ಶುಭದೃಷ್ಟಿ |
ಜೀತೀ ಹೈ ತುಝಸೇ ಹೀ ಜನನೀ ಅಮರ ಹುಈ ಸಬ ಸೃಷ್ಟಿ ||'

೨ 'ಕಲ್ಪವಲ್ಲೀ ಸೀ ತುಮೀ ಚಲತೀ ಹುಈ |
ಬಾಂಟತೀ ಹೋ ದಿವ್ಯಫಲ ಫಲತೀ ಹುಈ ||'

೩ 'ಅಬಲಾ ಅವಶ ತುಮ | ಸಕಲ ಬಲ ವೀರತಾ
ವಿಶ್ವಕೀ ಗಂಭೀರತಾ ಧ್ರುವ ಧೀರತಾ |
ಬಲಿ ತುಮ್ಹಾರೀ ಏಕ ಬಾಂಕೀ ದೃಷ್ಟಿ ಪರ
ಮರ ರಹೀ ಹೈ ಜೀ ರಹೀಹೈ ಸೃಷಿ ಭರ ||
ಭೂಮಿ ಕೇ ಕೋಟರ, ಗುಹಾ, ಗಿರಿ ಗರ್ತಭೀ
ಶೂನ್ಯತಾ ನಭಕೀ ಸಲಿಲ ಆವರ್ತ ಭೀ |
ಪ್ರೇಯಸೀ ಕಿಸಕೇ ಸಂಸರ್ಗಸೇ
ದೀಖತೇ ಹೈಂ ಪ್ರಾಣಿಯೋಂಕೋ ಸ್ವರ್ಗಸೇ ||'

೪ 'ಮಾನಾ ಕಿ ಅಬಲಾ ನಾರಿಯಾಂ ಹೋತೀಂ ಸಹಜ ಸುಕುಮಾರಿಯಾಂ |
ಪರ ವೇ ಚಲಾಸಕತೀ ನಹೀಂ ಸಂಸಾರ ಕ್ಯಾ ||
ಕರುಣಾಮಯೀ, ಮಮತಾಮಯೀ, ಸೇವಾಮಯೀ, ಕ್ಷಮತಾಮಯೀ |
ವೇ ಕರ ನಹೀಂ ಸಕತೀ ಯಹಾಂ ಉಪಕಾರ ಕ್ಯಾ ||'

ಪೃಥ್ವೀಕಲಿ ಕಾವ್ಯರೂಪ ತಾಳಿರುವಂತಿರುವ ನಾರಿಯ ಸೊಬಗನ್ನು ಗುಪ್ತರು ಊರ್ಮಿಳೆಯ ಪಾತ್ರಸೃಷ್ಟಿಯಲ್ಲಿ ಜೀವಂತವನ್ನಾಗಿ ಮಾಡಿದ್ದಾರೆ. **ಸಾಕೇತ** ಕಾವ್ಯದಲ್ಲಿ ಊರ್ಮಿಳೆ ಉಷೆಯ ಪ್ರತಿರೂಪದಂತಿದ್ದಾಳೆ. ಸಜೀವ ಸ್ವರ್ಣಪ್ರತಿಮೆಯಂತಿರುವ ಆ ರೂಪರಾಶಿ–'ಕನಕಲತಾ ಕಮಲಸೀ ಕೋಮಲಾ'–ಸ್ವರ್ಗದ ಸುಮವೇ ಭೂಮಂಡಲದಲ್ಲಿ ಅರಳಿರುವಂತಹ ಈಕೆಯ ಹೆಸರು ಊರ್ಮಿಳೆ ಅನ್ವರ್ಥನಾಮವಾಗಿದೆ.

'ಸ್ವರ್ಗಕಾ ಯಹ ಸುಮನ ಧರತೀ ಪರ ಖಿಲಾ |
ನಾಮ ಹೈ ಇಸಕಾ ಉಚಿತ ಹೀ ಉರ್ಮಿಲಾ ||'

ಲಕ್ಷ್ಮಣನಂತಹ ಪುಣ್ಯಶಾಲಿಗೇ ಈ ಕಲಾಕೃತಿ ಮೀಸಲಾಗಿತ್ತು. ಲಕ್ಷ್ಮಣ–ಊರ್ಮಿಳೆಯರ ದಾಂಪತ್ಯ ಜೀವನದ ಉಲ್ಲಾಸ, ವಿನೋದದ ವರ್ಣನೆ ಅತಿರಮ್ಯವಾಗಿದೆ. ಲಕ್ಷ್ಮಣನಂತಹ ಸತ್ಪಾತ್ರನನ್ನು ಜೀವನ ಸಂಗಾತಿಯಾಗಿ ಪಡೆದ ಊರ್ಮಿಳೆ ಆತನಿ

ಗಾಗಿ ಸರ್ವಸ್ವವನ್ನೂ ಸಮರ್ಪಿಸುವ ಸತೀವ್ರತಸ್ಥಳಾಗಿದ್ದಾಳೆ. ಆಕೆಯ ಪ್ರೀತಿ ನಿರಾಳವಾದದ್ದು. ರಾಮನ ಪಟ್ಟಾಭಿಷೇಕದ ವಿಷಯವಾಗಿ ಚರ್ಚೆ ನಡೆದಿದ್ದಾಗ ಆ ಸನ್ನಿವೇಶವನ್ನು ತನ್ನ ಕಲ್ಪನಾಶಕ್ತಿಯಿಂದ ಚಿತ್ರದಲ್ಲಿ ಮೂಡಿಸಿ ಊರ್ಮಿಳೆ ಅದನ್ನು ಲಕ್ಷ್ಮಣನಿಗೆ ತೋರಿಸುವ ಸಡಗರದಲ್ಲಿ ಆ ಚಿತ್ರಪಟದ ಮೇಲೆ ಅಚಾತುರ್ಯದಿಂದ ಬಿದ್ದ ಮಸಿಯ ಮೂಲಕ ಮುಂದೆ ಬರಬಹುದಾದ ಕಷ್ಟನಷ್ಟಗಳ ಸೂಚನೆ ನೀಡುತ್ತಾಳೆ.

ರಾಮನು ಸೀತೆಯೊಂದಿಗೆ ಕಾಡಿಗೆ ಹೊರಡಲು ಸಿದ್ಧನಾದಾಗ ಲಕ್ಷ್ಮಣನೂ ಆತನನ್ನು ಹಿಂಬಾಲಿಸುವುದು ಊರ್ಮಿಳೆಗೆ ಒಂದು ವಿಕಟ ಪರೀಕ್ಷೆಯಾಗಿ ಪರಿಣಮಿಸುವದು. ತಾಯಿ ಸುಮಿತ್ರೆಯಿಂದ ಆಶೀರ್ವಾದ ಪಡೆದು ಉತ್ಸಾಹದಿಂದ ನಡೆದಿರುವ ಲಕ್ಷ್ಮಣ ಊರ್ಮಿಳೆಯಿಂದ ದೂರವಿರುವದೇ ಹಿತವೆಂದು ಭಾವಿಸುತ್ತಾನೆ. ಈ ವಿಷಮ ಪರಿಸ್ಥಿತಿಯಲ್ಲಿ ಆಕೆಯ ಅಂತಃಕರಣದ ತುಮುಲವನ್ನು ಕವಿ ಈ ರೀತಿ ಬಣ್ಣಿಸುತ್ತಾರೆ :

'ಲಕ್ಷ್ಮಣ ಹುಏ ವಿಯೋಗ ಜಯೀ ?
ಔರ ಉರ್ಮಿಲಾ ಪ್ರೇಮಮಯೀ ?
ವಹ ಭೀ ಸಬ ಕುಛ ಜಾನ ಗಯೀ
ವಿವಶ ಭಾವಸೇ ಮಾನ ಗಯೀ |'

ಸೀತೆಯ ಹೆಗಲ ಮೇಲೆ ಆಕೆಯ ಕಣ್ಣೀರು ಧಾರಾಕಾರವಾಗಿ ಹರಿಯಿತು. ತಂಗಿ ಊರ್ಮಿಳೆಗೆ ಧೈರ್ಯದಿಂದ ಇರಲು ಸಾಂತ್ವನ ಹೇಳಿದಾಗ ಆಕೆ ಈಶ್ವರನೇ ದಿಕ್ಕು ಎಂದು ನುಡಿದು ಸುಮ್ಮನಾದಳು. ಊರ್ಮಿಳೆಯು ಪತಿಯ ನಿರ್ಧಾರಕ್ಕೆ ಅಡ್ಡಬಾರದೆಂದು ತೀರ್ಮಾನಿಸಿದಳು.

'ಹೇ ಮನ !
ತೂ ಪ್ರಿಯಪಥಕಾ ವಿಘ್ನ ನ ಬನ !
ಆಜ ಸ್ವಾರ್ಥ ಹೈ ತ್ಯಾಗ ಭರಾ !
ಹೋ ಅನುರಾಗ ವಿರಾಗ ಭರಾ !
ತೂ ವಿಕಾರ ಸೇ ಪೂರ್ಣ ನ ಹೋ;
ಶೋಕ ಭರಸೇ ಚೂರ್ಣ ನಹೋ !
ಭ್ರಾತೃ–ಸ್ನೇಹ–ಸುಧಾ ಬರಸೇ;
ಭೂಪರ ಸ್ವರ್ಗ ಭಾವ ಸರಸೇ !'

ಕಾಡಿಗೆ ಹೊರಡುವ ವೇಳೆ ಸಮೀಪಿಸಿದೆ. ಆಗ ಎಲ್ಲರ ಸಂಗಡವಿದ್ದ ಊರ್ಮಿಳೆ ದುಃಖವನ್ನು ಸಹಿಸಲಾರದೆ ಮೂರ್ಛೆ ಹೋಗುತ್ತಾಳೆ. ಲಕ್ಷ್ಮಣ ನೋಡಲಾರದೆ ಕಣ್ಣು ಮುಚ್ಚುತ್ತಾನೆ. ಎಲ್ಲರೂ ಕಂಬನಿಗರೆಯುತ್ತಾರೆ. ಸುಮಿತ್ರೆ, ಸೀತೆ ಎಲ್ಲನೂ ಶೈತ್ಯೋಪಚಾರ ಮಾಡುತ್ತಾರೆ. ರಾಮನು ಲಕ್ಷ್ಮಣನನ್ನು ಕಾಡಿಗೆ ತನ್ನ ಸಂಗಡ ಬರಬೇಡವೆಂದು ಕೇಳಿಕೊಳ್ಳುತ್ತಾನೆ. ಆದರೆ ಲಕ್ಷ್ಮಣ ಸ್ವಲ್ಪವೂ ವಿಚಲಿತನಾಗುವದಿಲ್ಲ. ಆಗ

ರಾಮನು ತನ್ನ ತಮ್ಮ ಮತ್ತು ನಾದಿನಿಯರ ಬಗ್ಗೆ ಮೆಚ್ಚುಗೆಯ ಈ ಮಾತುಗಳನ್ನು ಹೇಳುತ್ತಾನೆ :

'ಲಕ್ಷ್ಮಣ, ತುಮ ಹೋ ತಪಸ್ಪೃಹೀ,
ಮೈಂ ವನ ಮೇಂ ಭೀ ರಹಾ ಗೃಹೀ ।
ವನವಾಸೀ ಹೇ ನಿರ್ಮೋಹೀ
ಹುಯೇ ವಸ್ತುತಃ ತುಮ ದ್ರೋಹೀ ।

ರಾಮ, ಸೀತೆ ಮತ್ತು ಲಕ್ಷ್ಮಣ—ಮೂವರೂ ಕಾಡಿಗೆ ಹೋಗಿ ಚಿತ್ರಕೂಟದಲ್ಲಿ ವಿಹಾರ ಹೂಡಿದ್ದಾರೆ. ಅಯೋಧ್ಯೆಗೆ ಮರಳಿದ ಭರತ ತನ್ನ ತಾಯಿಯ ಅಪೇಕ್ಷೆಯಂತೆ ರಾಜ್ಯ ಗ್ರಹಣ ಮಾಡದೆ, ರಾಮನನ್ನು ಕಾಡಿನಿಂದ ಮರಳಿ ಬರುವಂತೆ ಪ್ರಾರ್ಥಿಸಲು ಚಿತ್ರಕೂಟಕ್ಕೆ ಎಲ್ಲರನ್ನೂ ಕರೆದುಕೊಂಡು ಹೋಗಿದ್ದಾನೆ. ಕೃಶಳಾದ ಊರ್ಮಿಳೆಯೂ ರಾಜಪರಿವಾರದೊಂದಿಗೆ ಅಲ್ಲಿಗೆ ಹೋಗಿದ್ದಾಳೆ. ರಾಮನು ಹಿರಿಯರ ಸಂಗಡ ಚರ್ಚೆ ನಡೆಸಿದ್ದಾನೆ. ಆಗ ಸೀತೆ ಲಕ್ಷ್ಮಣನನ್ನು ಕೆಲವು ವಸ್ತುಗಳನ್ನು ತರುವ ನೆಪದಿಂದ ಕುಟೀರಕ್ಕೆ ಕಳಿಸುತ್ತಾಳೆ. ಆ ಪರ್ಣಕುಟಿಯ ಒಂದು ಮೂಲೆಯಲ್ಲಿ ಊರ್ಮಿಳೆಯ ದೇಹಪಂಜರ ಮಾತ್ರ ಕಾಣಬರುತ್ತದೆ. ಆಗ ಚಕಿತನಾದ ಲಕ್ಷ್ಮಣನಿಗೆ ಊರ್ಮಿಳೆ ಹೇಳುತ್ತಾಳೆ :

'ಮೇರೆ ಉಪವನ ಕೇ ಹರಿಣ, ಆಜ ವನಚಾರೀ ।
ಮೈಂ ಬಾಂಧ ನ ಲೂಂಗೀ ತುಮ್ಹೇ ತಜೋ ಭಯ ಭಾರೀ ॥'

ತನ್ನ ಸಹಧರ್ಮಿಣಿಯ ಈ ಔದಾರ್ಯಕ್ಕೆ ಶರಣು ಹೋಗುವದನ್ನು ಬಿಟ್ಟು ಲಕ್ಷ್ಮಣ ಏನೂ ಮಾಡಲಾರದಾದ. ಊರ್ಮಿಳೆಯ ಮುಂದಿನ ಮಾತು ಇನ್ನೂ ಮಾರ್ಮಿಕವಾಗಿದೆ :

'ಹಾ ಸ್ವಾಮೀ ! ಕಹನಾ ಥಾ ಕ್ಯಾ ಕ್ಯಾ
ಕಹ ನ ಸಕೀ, ಕರ್ಮೋಂಕಾ ದೋಷ ।
ಪರ ಜಿಸಮೇಂ ಸಂತೋಷ ತುಮ್ಹೇಂ ಹೋ
ಮುಝೆ ಉಸೀಮೇಂ ಹೈ ಸಂತೋಷ ॥'

ಊರ್ಮಿಳೆಯ ಈ ಸಮರ್ಪಣಾಭಾವದಲ್ಲಿ ದೈನ್ಯಕ್ಕಿಂತ ಆತ್ಮಗೌರವದ ಹೊಳಹು ಗಮನಾರ್ಹವಾದದ್ದು. ಕವಿಯೂ ಹೇಳಿರುವಂತೆ—

'ಡೂಬ ಚಲೀ ಲಕ್ಷ್ಮೀ ಪಾನೀ ಮೇಂ, ಸತೀ ಆಗ ಮೇಂ ಪೈಠ ।
ಜಿಯೇ ಊರ್ಮಿಲಾ, ಕರೇ ಪ್ರತೀಕ್ಷಾ, ಸಹೇ ಸಭೀ ಘರ ಬೈಠ ॥'

(ವಿರಹ ತಾಪವನ್ನು ಸಹಿಸಲಾಗದೆ ಲಕ್ಷ್ಮಿ ನೀರು ಪಾಲಾದಳು. ಸತಿ ಶಿವನ ಅರ್ಧಾಂಗಿ ಬೆಂಕಿ ಪಾಲಾದಳು. ಆದರೆ ಊರ್ಮಿಳೆ ಮನೆಯಲ್ಲಿಯೇ ಪತಿಯ ಆಗಮನವನ್ನು ನಿರೀಕ್ಷಿಸುತ್ತಾ ಬದುಕಿದ್ದಾಳೆ.)

ಲಕ್ಷ್ಮಣನು ಅಯೋಧ್ಯೆಗೆ ಮರಳಿ ಬರುವ ಸುದ್ದಿ ಕೇಳಿ ಊರ್ಮಿಳೆ 'ಹೃದಯ ಕೀ ಪ್ರೀತಿ ಹೃದಯ ಪರ ಹೋತೀ ಹೈ' ಎಂದು ಹೇಳುತ್ತಾಳೆ. ಸಿಂಗರಿಸಿಕೊಂಡು ಪತಿಯನ್ನು ಬರಮಾಡಿಕೊಳ್ಳುವಂತೆ ಸೂಚಿಸಿದ ಸಖಿಯರ ಬಗ್ಗೆ ಕಸಿಕರಪಡುತ್ತಾಳೆ.

ದೀರ್ಘಕಾಲದ ಬಳಿಕ ಮರಳಿ ಬರುವ ಪತಿಯನ್ನು ಸ್ವಾಗತಿಸಿ ಸತ್ಕರಿಸುವ ಆಕೆಯ ರೀತಿ, ಮನೋಧರ್ಮ ಸತಿಶಿರೋಮಣಿಯ ಆದರ್ಶವನ್ನು ನೆನಪಿಸುತ್ತದೆ :

'ವಿರಹ ರುದನ ಮೇಂ ಗಯಾ, ಮಿಲನ ಮೇಂ ಭೀ ಮೈಂ ರೋಊಂ,
ಮುಝೇ ಔರ ಕುಛ ನಹೀಂ ಚಾಹಿಯೇ, ಪದರಜ ಧೋಊಂ ।
ಜಬ ಥೀ ತಬ ಥೀ ಆಲೀ, ಉರ್ಮಿಲಾ ಉನಕೀ ರಾನೀ,
ವಹ ಬರಸೋಂಕೀ ಬಾತ ಆಜ ಹೋ ಗಯೀ ಪುರಾನೀ ।
ಅಬ ತೋ ಕೇವಲ ರಹೂಂ ಸದಾ ಸ್ವಾಮಿ ಕೀ ದಾಸೀ,
ಮೈಂ ಶಾಸನ ಕೀ ನಹೀಂ, ಆಜ ಸೇವಾ ಕೀ ಪ್ಯಾಸೀ ।
ಜಾ ನೀಚೇ ದೋ ಚಾರ ಫೂಲ ಚುನ, ಲೇ ಆ ಡಾಲೀ,
ವನವಾಸೀ ಕೇ ಲಿಯೇ ಸುಮನ ಕೀ ಭೇಂಟ ಭಲೀ ವಹ ।

(ಹದಿನಾಲ್ಕು ವರ್ಷ ಅತ್ತಿದ್ದಾಯಿತು. ಈಗ ಅವರು ಬರುವವರಿದ್ದಾರೆಂದು ತಿಳಿದ ಮೇಲೂ ಅಳುವುದೇ ? ನನಗೆ ಯಾವ ಆಸೆಯೂ ಇಲ್ಲ. ಅವರ ಪಾದಸೇವೆಯೊಂದೇ ಸಾಕು. ಉರ್ಮಿಳೆ ರಾಣಿಯಾಗಿದ್ದ ಕಾಲವೂ ಇತ್ತು. ಆದರೆ ಅದೆಲ್ಲ ಈಗ ಮುಗಿದ ಕತೆ. ಈಗ ನಾನು ಸ್ವಾಮಿಯ ಸೇವಕಿ ಮಾತ್ರ. ನನಗೆ ದಾಹವಿರುವದು ಅಧಿಕಾರ ದ್ದಲ್ಲ, ಸೇವೆಯದು. ತೋಟದಿಂದ ಹೂ ಆಯ್ದು ತಾ. ವನವಾಸಿಗೆ ಅದೇ ನನ್ನ ಕಾಣಿಕೆಯಾಗಲಿ.)

ಪತಿಪತ್ನಿಯರ ಪರಸ್ಪರ ಪ್ರೀತಿಯೇ ಗೌರವವೇ ಮಾನವೀಯ ಆದರ್ಶವಾಗಲಿ ಎಂದು ಆಶಿಸಿದ ಗುಪ್ತರು ತಮ್ಮ **ಸಾಕೇತ** ಕಾವ್ಯದಲ್ಲಿ ಉರ್ಮಿಳೆಯ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ.

ಈ ಕಾವ್ಯದ ಮತ್ತೊಂದು ಆಕರ್ಷಕ ಪಾತ್ರವಾಗಿ ಕೈಕೇಯಿ ಕಾಣಬರುತ್ತಾಳೆ. ಮಂಥರೆಯ ಮೋಡಿಗೆ ಮರುಳಾಗಿ ಮಗನಿಗೆ ಸಿಂಹಾಸನವನ್ನೂ ರಾಮನಿಗೆ ವನ ವಾಸವನ್ನೂ ವರವಾಗಿ ಬೇಡುತ್ತಾಳೆ. ದಶರಥನನ್ನು ಕಾಡುತ್ತಾಳೆ. ಆದರೆ ಇದಕ್ಕೆ ತನ್ನ ಮಗ ಭರತನ ಪ್ರತಿಕ್ರಿಯೆ ಏನು ಎನ್ನುವ ಕಲ್ಪನೆಯೇ ಆಕೆಗೆ ಇರುವ ದಿಲ್ಲ. ಹೀಗಾಗಿ ತನ್ನಿಂದ ಆದ ಅನಾಹುತಗಳಿಂದ ನೊಂದ ಜೀವಿ ಕೈಕೇಯಿ ರಾಜ ಪರಿವಾರದೊಂದಿಗೆ ಚಿತ್ರಕೂಟಕ್ಕೆ ತೆರಳಿ ಅಲ್ಲಿ ರಾಮನನ್ನು ಅಯೋಧ್ಯೆಗೆ ಮರಳು ವಂತೆ ಒತ್ತಾಯಿಸುತ್ತಾಳೆ. ತನ್ನ ತಪ್ಪೊಪ್ಪಿಕೊಂಡು ಮಾತೃತ್ವಕ್ಕೆ ಕಳಂಕಬಾರ ದಂತೆ ರಾಮನು ಕರುಣಿಸಬೇಕೆಂದು ಪ್ರಾರ್ಥಿಸುತ್ತಾಳೆ. ಯಾರೇ ಆಗಲಿ, ತಪ್ಪು ಮಾಡುವದು ಮಾನವ ಸಹಜ. ಆದರೆ ತಪ್ಪು ತಿದ್ದಿಕೊಳ್ಳಲು ಮುಂದಾಗಿ ಪ್ರಾಯ ಶ್ಚಿತ್ತ ಮಾಡಿಕೊಳ್ಳುವದು ದೈವೀಲಕ್ಷಣ. ಕೈಕೇಯಿಯ ಪಾತ್ರಕ್ಕೆ ಅಂಟಿಕೊಂಡಿದ್ದ ಎಲ್ಲ ಕಳಂಕಗಳನ್ನು ತೊಡೆದುಹಾಕಿ ಆಕೆಯಲ್ಲಿನ ಮಾನವೋಚಿತ ಗುಣಗಳಿಗೆ ಬೆಲೆ ಕಟ್ಟುವ ಹೃದಯ ವೈಶಾಲ್ಯ ಗುಪ್ತರಲ್ಲಿ ಕಾಣಬರುತ್ತದೆ. ಇದು ಅಂದಿನ ಯುಗದ ಕವಿಗಳು ನಾರಿಯ ಬಗ್ಗೆ ತಾಳಿದ ಉದಾರ ಮನೋಭಾವದ ಸಂಕೇತವಾಗಿದೆ.

'ಭಲ ಕಿಯಾ ಭಾಗ್ಯನೇ ಮುಝೇ ಅಯಶ ದೇನೇಕಾ,
ಬಲ ದಿಯಾ ಉಸೀನೇ ಭೂಲ ಮಾನಲೇನೇ ಕಾ ।

ಅಬ ಕಟೇ ಸಭೀ ವೇ ಪಾಶ ನಾಶಕೇ ಪ್ರೇರೆ,
ಮೈಂ ವಹೀ ಕೇಕಯೀ, ವಹೀ ರಾಮ ತುಮ ಮೇರೆ !!'

(ದೈವ ದೋಷ ಮಾಡಿತು. ನನಗೆ ಅಪಖ್ಯಾತಿ ತಂದಿತು. ಈಗ ಅದೇ ದೈವವು ನನಗೆ ತಪ್ಪನ್ನು ಒಪ್ಪಿಕೊಳ್ಳುವ ಸದ್ಬುದ್ಧಿ ಕೊಟ್ಟಿದೆ. ನಾಶಕ್ಕೆ ಮೂಲವಾಗಿದ್ದ ಎಲ್ಲ ಪಾಶಗಳೂ ತುಂಡಾಗಿವೆ. ನಾನು ಕೈಕೇಯಿ. ನೀನು ನನ್ನ ರಾಮ. ಇದು ಸತ್ಯವಾಗಲಿ) ಕೈಕೇಯಿಯ ಈ ಉದ್ಗಾರ ಮಾರ್ಮಿಕವಾಗಿದೆ.

ಗುಪ್ತರ ಮತ್ತೊಂದು ಪ್ರಸಿದ್ಧ ಕಾವ್ಯ **ಯಶೋಧರಾ**. ಅವಳ ಬಾಳಿನಲ್ಲಿ ಕರ್ತವ್ಯಪಾಲನೆಯ ಹೊಣೆಗಾರಿಕೆಯೊಂದಿಗೆ ಪ್ರೀತಿಯ ಉಜ್ವಲತೆ ಮತ್ತು ವ್ಯಾಪಕತೆ ಎದ್ದು ಕಾಣುತ್ತದೆ. ಆಕೆಯ ಧೈರ್ಯ ಅಸಾಧಾರಣವಾದುದು. ಆಕೆಯ ಪ್ರಶಾಂತತೆ ಅನುಪಮವಾಗಿದೆ. ತ್ಯಾಗ ಭಾವನೆ ಅದ್ಭುತವಾಗಿದೆ. ನಾರಿ ಕೇವಲ ಇಂದ್ರಿಯಲೋಲುಪತೆಯ ದಾಸಿಯಲ್ಲ. ವಿರಹದಲ್ಲಿಯೂ ಕ್ರಿಯಾಶೀಲ ಜೀವನದ ಮಹತ್ವವನ್ನು ಅರಿತ ಸ್ವಾಭಿಮಾನಿ ಮಹಿಳೆ ಅವಳು.

ದೇವದಹದ ಮಹಾರಾಜ ದಂಡಪಾಣಿಯ ಕುವರಿ ಯಶೋಧರೆ. ಕಪಿಲವಸ್ತುವಿನ ಮಹಾರಾಜ ಶುದ್ಧೋದನನ ಕುಮಾರ ಸಿದ್ಧಾರ್ಥನು ಶಾಸ್ತ್ರಪ್ರವೀಣನೂ ಶಸ್ತ್ರನಿಪುಣನೂ ಆಗಿದ್ದು ತನ್ನ ಮಗಳಿಗೆ ಯೋಗ್ಯವರನೆಂದು ನಿರ್ಧರಿಸಿ ದಂಡಪಾಣಿಯು ಅವನೊಡನೆ ಯಶೋಧರೆಯ ವಿವಾಹವನ್ನು ನೆರವೇರಿಸಿದನು. ಯಶೋಧರೆಯನ್ನು ಗೋಪಾ ಎಂದೂ ಸಿದ್ಧಾರ್ಥನನ್ನು ಗೌತಮನೆಂದೂ ಕರೆಯುತ್ತಿದ್ದರು. ಗೌತಮ ಮತ್ತು ಗೋಪಾರಿಗೆ ರಾಹುಲನೆಂಬ ಪುತ್ರರತ್ನನು ಜನಿಸಿದ. ಗೌತಮನಿಗೆ ಐಹಿಕ ಸುಖೋಪಭೋಗಗಳ ಬಗ್ಗೆ ಆಸಕ್ತಿ ಕಡಿಮೆ. ಸೃಷ್ಟಿಯಲ್ಲಿ ವ್ಯಾಪಿಸಿರುವ ದುಃಖ-ದುಮ್ಮಾನಗಳ ಮೂಲಕಾರಣಗಳನ್ನು ಅರಿಯುವ ಪ್ರಬಲ ಆಕಾಂಕ್ಷೆ ಹೆಚ್ಚಿ, ಗೌತಮನು ರಾಜವೈಭವವನ್ನೂ, ಮಡದಿ-ಮಗನನ್ನೂ ತೊರೆದು ತಪಸ್ಸಿಗಾಗಿ ಕಾಡನ್ನು ಹೊಕ್ಕ. ಗೋಪೇಶ್ವರನಾದ ಗೌತಮನು ಯೋಗೇಶ್ವರನಾಗಲು ತೆರಳಿದಾಗ ಒಂದು ಮಾತೂ ಹೇಳದೆ ಹೋದನೆ ಎಂಬ ವ್ಯಥೆ ಯಶೋಧರೆಯನ್ನು ಕಾಡಿತು. ವೀರಕ್ಷತ್ರಾಣಿಯಾದ ಯಶೋಧರೆಗೆ ತನ್ನ ನಲ್ಲನ ಈ ವ್ಯವಹಾರ ಸರಿ ಎನಿಸದಿದ್ದರೂ, ಆತನ ಸಾಧನೆಗೆ ಯಾವ ಆತಂಕವೂ ತನ್ನಿಂದ ಆಗಬಾರದಂತೆ ಎಚ್ಚರವಹಿಸುತ್ತಾಳೆ.

ಸೃಷ್ಟಿಯ ಸಂತಾಪವನ್ನು ನಿವಾರಿಸಲು ಮುಂದಾಗಿರುವ ಸಿದ್ಧಾರ್ಥನು ನಿರಪರಾಧಿಯಾದ ತನ್ನನ್ನು ಎಂದೂ ಕೈಬಿಡಲಾರನೆಂಬ ನಂಬಿಕೆಯಿಂದ ಯಶೋಧರೆ ರಾಹುಲನ ಲಾಲನೆ ಪಾಲನೆಯಲ್ಲಿ ಆಸಕ್ತಿ ವಹಿಸಿ ಪತಿಯ ಅಗಲಿಕೆಯಿಂದಾದ ವ್ಯಥೆಯನ್ನು ಮರೆಯಲೆತ್ನಿಸುತ್ತಾಳೆ. ಯಶೋಧರೆಗೆ ತಾರುಣ್ಯದಲ್ಲಿ ಒದಗಿದ ವಿಪತ್ತನ್ನೂ ನೆನೆದು ನೊಂದುಕೊಂಡ ಶುದ್ಧೋದನನಿಗೆ ಆಕೆಯೇ ಧೈರ್ಯ ಹೇಳಲು ಮುಂದಾದಾಗ ಅವನಿಗಾದ ಕಸಿವಿಸಿಯನ್ನು ಕವಿ ಹೀಗೆ ಬಣ್ಣಿಸುತ್ತಾನೆ :

'ತೂ ಹೈ ಸತೀ, ಮಾನ್ಯ ರಹೇ ಇಚ್ಛಾ ತುಝ್ಸೇ ಪತಿಕೀ,
ಮೈಂ ಹೂ ಪಿತಾ, ಚಿಂತಾ ಮುಝೇ ಪುತ್ರ ಕೀ ಪ್ರಗತೀ ಕೀ !'

ಶುದ್ಧೋದನನ ಈ ಮರುಳುತನವನ್ನು ಕಂಡು ಯಶೋಧರೆ ಕನಿಕರಪಡುತ್ತಾಳೆ.

ಗೌತಮನಿಗೆ ಸರಿದೂರೆಯಾದ ಸಹ ಧರ್ಮಿಣಿಯಾಗಬೇಕೆಂಬ ಹೊಯ್ದಾಟ ಗೋಪಾಳ ಮನಸ್ಸಿನಲ್ಲಿ ತೀವ್ರವಾಗುತ್ತದೆ. ಆರ್ಯಪುತ್ರನು ಆತ್ಮಸಿದ್ಧಿಯ ದಾರಿಯಲ್ಲಿ ಮುಂದುವರೆದರೆ ಅವನ ಬಾಳ ಸಂಗಾತಿಯಾದ ತಾನೂ ಹಿಂದೆ ಬೀಳಬಾರದೆಂಬ ಆಸೆ ಪ್ರಬಲವಾಗುತ್ತದೆ. ಅವನಿಂದ ಅಲಕ್ಷ್ಯಕ್ಕೆ ಗುರಿಯಾದ ಆಕೆಯ ಕೊರಗು ಅಷ್ಟಿಷ್ಟಲ್ಲ. ಆದರೂ ಕಂಗಾಲಾಗದೆ ಆ ಕನ್ಯಾಮಣಿ ಗೌತಮನಿಗೇ ಸವಾಲು ಹಾಕುತಾಳೆ.

'ಸಿದ್ಧಿಮಾರ್ಗ ಕೀ ಬಾಧಾ ನಾರೀ, ಫಿರ್ ಉಸಕೀ ಕ್ಯಾ ಗತಿ ಹೈ ?
ಪರ ಉನಸೇ ಪೂಛೂಂ ಕ್ಯಾ ಜಿನಕೋ ಮುಝಸೇ ಆಜ ವಿರತಿ ಹೈ ।
ಅರ್ಧ ವಿಶ್ವಮೇಂ ವ್ಯಾಪ್ತ ಶುಭಾಶುಭ ಮೇರೀ ಭೀ ಕುಛ ಮತಿ ಹೈ,
ಮೈಭೀ ನಹೀಂ ಅನಾಥ ಜಗತಮೇಂ, ಮೇರಾ ಭೀ ಪ್ರಭು ಪತಿ ಹೈ ।
ಯಾಸಿ ಮೈ ಪತಿವ್ರತಾ ತೋ ಮುಝಕೋ ಕೌನ ಭಾರ-ಭಯ-ಭಾರೀ ?
ಆರ್ಯಪುತ್ರ ದೇ ಚುಕೇ ಪರೀಕ್ಷಾ. ಅಬ ಹೈ ಮೇರೀ ಬಾರೀ ।'

(ನಾರಿಯನ್ನೂ ಆತ್ಮಸಿದ್ಧಿಮಾರ್ಗದಲ್ಲಿ ಅಡ್ಡಿ ಎನ್ನಬಹುದೇ? ಹೀಗಾದರೆ ಆಕೆಯ ಗತಿ ಏನು ? ನನ್ನನ್ನು ಆಗಲಿಹೋಗಿರುವ ನನ್ನವರನ್ನು ನಾನು ಹೀಗೆ ಕೇಳಲೆ ? ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧವಷ್ಟಿರುವ ನಾರಿಯರ ಒಳಿತು-ಕೆಡಕು ಕೇವಲ ಪುರುಷಾಧೀನವೇ ? ನನಗೂ ಸ್ವಂತ ಬುದ್ಧಿ ಇಲ್ಲವೇ ? ನಾನೇನೂ ಅನಾಥಳಲ್ಲ. ನನ್ನ ಪತಿಯೂ ವೀರಕ್ಷತ್ರಿಯಕುಮಾರನೇ ತಾನೇ ? ಪತಿವ್ರತೆಯಾದವಳಿಗೆ ಜೀವನದಲ್ಲಿ ಯಾವ ಬಾಧೆಯೂ ಇರದು ಭೀತಿಯೂ ಇರದು. ಆರ್ಯಪುತ್ರನ ಸರದಿಯಾದ ಮೇಲೆ ಈಗ ಬಾಳಪರೀಕ್ಷೆಯನ್ನೆದುರಿಸುವ ಸರದಿ ನನ್ನದಾಗಿದೆ).

ಆದರೆ ಮರುಕ್ಷಣವಲ್ಲಿಯೇ ಆಕೆ ಗೌತಮನ ಸಿದ್ಧಿಯ ಪರಿಪೂರ್ಣತೆಯನ್ನೇ ಹಾರೈಸುತ್ತ ತನ್ನ ಆಕ್ರೋಶವನ್ನು ಮರೆಯುತ್ತಾಳೆ.

'ಜಾವೋ ನಾಥ ! ಅಮೃತಲಾವೋ ತುಮ, ಮುಝು ಮೇಂ ಮೇರಾ ಪಾನೀ,
ಚೇರೀ ಹೀ ಮೈಂ ಬಹುತ ತುಮ್ಹಾರೀ, ಮುಕ್ತಿ ತುಮ್ಹಾರೀ ರಾನೀ ।
ಪ್ರಿಯ ತುಮ ತಪೋ, ಸಹೂಂ ಮೈಂ ಭರಸಕ, ದೇಖೂಂ ಬಸ ಹೇ ದಾನೀ
ಕಹಾಂ ತುಮ್ಹಾರೀ ಗುಣಗಾಥಾ ಮೇಂ ಮೇರೀ ಕರುಣ ಕಹಾನೀ ?
ತುಮ್ಹೇ ಅಪ್ಸರಾ– ವಿಘ್ನ ನ ವ್ಯಾಪೇ ಯಶೋಧರಾ ಕರಧಾರೀ ।
ಆರ್ಯಪುತ್ರ ದೇ ಚುಕೇ ಪರೀಕ್ಷಾ. ಅಬ ಹೈ ಮೇರೀ ಬಾರೀ ।'

(ಪ್ರಾಣನಾಥ ! ಅಮೃತ ನಿನ್ನದಾಗಲಿ. ನೀರು ನನ್ನದಾಗಲಿ– ಅಂದರೆ ನನ್ನ ಪಾತಿವ್ರತ್ಯ ಕಳೆಗುಂದದಿರಲಿ. ನಾನು ನಿನ್ನ ದಾಸಿಯಾಗಿಯೇ ಉಳಿಯುವೆ, ಮುಕ್ತಿ ನಿನ್ನ ರಾಣಿಯಾದರೂ ಚಿಂತೆ ಇಲ್ಲ. ನಿನ್ನ ತಪಸ್ಸು ಸರಾಗವಾಗಿ ನಡೆಯಲಿ, ಆದರೆ ನಿನ್ನ ದಯೆಯಿಂದ ನನ್ನ ಸಹನೆಗೆ ಮಿತಿ ಎಂದೂ ಬಾರದಿರಲಿ. ಜಗತ್ತಿನಲ್ಲಿ

ನಿನ್ನ ಗುಣಗಾನದ ಮಧ್ಯೆ ನನ್ನ ಕೊರಗು ಯಾರು ಕೇಳಬೇಕು ? ಯಶೋಧರೆಯು ಕೈಹಿಡಿದ ಪ್ರಭುವಿಗೆ ಅಪ್ಸರೆಯರಿಂದಲೂ ವಿಘ್ನ ಬಾರದಿರಲಿ.)

ಈ ತೆರನ ಮನೋಧರ್ಮದಿಂದಾಗಿ ಯಶೋಧರೆಯ ವ್ಯಕ್ತಿತ್ವಕ್ಕೆ ಒಂದು ಮೆರುಗು ಬಂದಿದೆ. ಆಕೆ ಇಡೀ ಸ್ತ್ರೀ ಕುಲದ ಗೌರವವನ್ನು ಕಾಯ್ದುಕೊಳ್ಳುವ ವೀರ ರಮಣಿಯಾಗಿದ್ದಾಳೆ. ಎಲ್ಲ ದುಃಖವನ್ನು ತಾನು ಸಹಿಸಿ, ಇತರರಿಗೆ ಸುಖವನ್ನೇ ಬಯಸುವ ಆಕೆಯ ನಿಲವು ಇಲ್ಲಿ ಗೌರವಾರ್ಹ.

'ವಧೂವಂಶಕೀ ಲಾಜ ದೈವನೇ ಆಜ ಮುಝೀ ಪರ ಡಾಲೀ ।'

ಗೌತಮನು ವನದಲ್ಲಿ ವಿರಕ್ತನಾಗಿ ತಪಸ್ಸನ್ನಾಚರಿಸುತ್ತಿರುವಾಗ ಗೋಪಾ ರಾಜಭವನದಲ್ಲಿ ತನ್ನ ಶಿಶುವನ್ನು ರಕ್ಷಿಸುತ್ತಾ ಪತಿಯ ಸಾಧನೆಯ ಯಶಸ್ಸಿಗಾಗಿ ಪ್ರತ ಕೈಗೊಂಡಿದ್ದಾಳೆ.

'ಸ್ವಾಮೀ ಮುಝುಕೋ ಮರನೇ ಕಾ ಭೀ ದೇ ನ ಗಯೇ ಅಧಿಕಾರ,
ಛೋಡಗಯೇ ಮುಝುಪರ ಅಪನೇ ಉಸ ರಾಹುಲ ಕಾ ಭಾರ !'

ತನ್ನ ಮಗ ರಾಹುಲನ ರಕ್ಷಣೆಯ ಹೊಣೆಯನ್ನು ತೃಪ್ತಿಕರವಾಗಿ ನಿರ್ವಹಿಸುತ್ತ ತನ್ನ ಪತಿಗೆ ಸಿದ್ಧಿಯ ಫಲ ದೊರೆಯಲಿ, ಅದರಿಂದ ಜಗತ್ತಿಗೇ ಕಲ್ಯಾಣವಾಗಲಿ ಎಂದು ನಮ್ರಳಾಗಿ ನುಡಿಯುತ್ತಾಳೆ.

'ಸ್ವಾಮೀ ಕೇ ಸದ್ಭಾವ ಫೈಲಕರ ಫೂಲ ಫೂಲ ಮೇಂ ಫೂಟೇ !
ಉನ್ಹೇಂ ಖೋಜನೇ ಕೋ ಹೀ ಮಾನೋ ನೂತನ ನಿರ್ಝರ ಛೂಟೇ ।
ಉದಕೇ ಶ್ರಮಕೇ ಫಲ ಸಬ ಭೋಗೇಂ
ಯಶೋಧರಾ ಕೀ ವಿನಯ ಯಹೀ ।'

ದುಃಖದಿಂದ ವಿಕ್ಷಿಪ್ತಳಾಗದೆ ವಿರಹದಲ್ಲಿಯೂ ಕರ್ತವ್ಯ ಪರಾಯಣತೆಯ ಮಹತ್ವವನ್ನು ತನ್ನ ನಡತೆಯಿಂದ ತೋರುವ ಯಶೋಧರೆಯ ಪಾತ್ರನಿರೂಪಣೆ ಮನೋಜ್ಞವಾಗಿದೆ.

ವಾತ್ಸಲ್ಯಮಯಿ ತಾಯಿ, ವಿರಹಿಣಿ ವಧೂ ಹೀಗೆ ಈ ನಾರಿಯ ದ್ವಿವಿಧರೂಪವು ಯಶೋಧರೆಯಲ್ಲಿ ಒಗ್ಗೂಡಿ ಅಂದವಾಗಿ ಬಂದಿದೆ. ಮೊಲೆಹಾಲು ಮಗುವಿಗೆ, ಕಣ್ಣೀರು ನಲ್ಲನಿಗೆ (ಆಂಚಲ ಮೇಂ ಹೈ ದೂಧ ಔರ ಆಂಖೋಂ ಮೇಂ ಪಾನೀ) ಇದು ಯಶೋಧರೆಯ ಬಾಳಗೀತೆ, ಜೀವನದ ಯಾತನೆಯಾಗಿದೆ. ಮಗುವಿನ ಲಾಲನೆ-ಪಾಲನೆ, ಅವನ ಬಾಲಲೀಲೆಯ ವಿನೋದದಲ್ಲಿ ಅವಳು ತನ್ನ ಎಲ್ಲ ನೋವನ್ನು ನುಂಗುತ್ತಾಳೆ.

ಹೀಗೆ ವರ್ಷಗಳು ಉರುಳಿದವು. ಸಿದ್ಧಾರ್ಥನು ಜೀವನ್ಮುಕ್ತನಾಗಿ ಬುದ್ಧದೇವನೆಂದು ಖ್ಯಾತಿ ಪಡೆದನು. ಸಾರನಾಥದಲ್ಲಿ ಧರ್ಮೋಪದೇಶ ಮಾಡಿದ ಸುದ್ದಿ ಕಪಿಲವಸ್ತು ನಗರದಲ್ಲಿ ಹರಡಿದೊಡನೆ ಶುದ್ಧೋದನನು ಬುದ್ಧದೇವನನ್ನು ಕರೆತರಲು ದೂತರನ್ನು ಕಳಿಸುತ್ತಾನೆ. ಅವರೆಲ್ಲರೂ ಬುದ್ಧನ ಅನುಯಾಯಿಗಳಾದರು. ತನ್ನ ಶಿಷ್ಯನೋರ್ವನ ಕೋರಿಕೆಯಂತೆ ಬುದ್ಧದೇವನು ಕಪಿಲವಸ್ತುವಿಗೆ ಬಂದು ನಗರದ ಹೊರಗೇ ರಾತ್ರಿ ತಂಗಿ ಮಾರನೆಯ ದಿನ ಭಿಕ್ಷೆ ಬೇಡುತ್ತಾ ಊರೊಳಗೆ ಬಂದನು. ಅರಮನೆಗೆ

ಆತ ಬರಲಿದ್ದಾನೆಂಬ ಸುದ್ದಿಯಿಂದ ಎಲ್ಲ ಕಡೆಗೆ ಸಡಗರದ ಸಿದ್ಧತೆ ನಡೆಯುತ್ತಿತ್ತು. ಯಶೋಧರೆ ಮಾತ್ರ ಈ ಸಂಭ್ರಮದಲ್ಲಿ ಪಾಲ್ಗೊಳ್ಳದೆ ತಾನಿದ್ದ ಕಡೆಗೇ ಭಗವಂತನು ಬರಬೇಕೆಂದು ಸಂಕಲ್ಪಮಾಡಿ ಸುಮ್ಮನಿದ್ದಳು. ಆಕೆಯ ಆಗಿನ ಮನಸ್ಥಿತಿಯನ್ನು ಕವಿಯು ಹೀಗೆ ಬಣ್ಣಿಸುತ್ತಾರೆ—

'ಸಬ ಅಪನಾ ಸೌಭಾಗ್ಯ ಮನಾವೇಂ।
ದರಸ–ಪರಸ, ನಿಃಶ್ರೇಯಸ ಪಾವೇಂ।
ಉದ್ಧಾರಕ ಚಾಹೇಂ, ತೋ ಆವೇಂ।
ಯ ಹೀಂ ರಹೇ ಯಹ ಚೇರಿ।
ರೇ ಮನ ಆಜ ಪರೀಕ್ಷಾ ತೇರಿ॥'

ಪ್ರಭು ತಾನಿದ್ದಲ್ಲಿಯೇ ಬರಬೇಕೆಂಬ ಆಗ್ರಹ ಸ್ವಾಭಿಮಾನಿನಿ ಯಶೋಧರೆಯದಾಗಿದೆ. ಕಾರಣ ಇಷ್ಟೆ. 'ಏನೂ ಹೇಳದೆ ಹೋದವರು ತಮ್ಮ ಕರ್ತವ್ಯ ಲೋಪವನ್ನು ತಿದ್ದಿ ಕೊಳ್ಳಬಾರದೇಕೆ?'

'ಯದಿ ವೇ ಚಲ ಆಯೇ ಹೈಂ ಇತನಾ
ತೋ ದೋ ಪದ ಉನಕೋ ಹೈ ಕಿತನಾ?
ಕ್ಯಾ ಭಾರೀ ವಹ ಮುಝುಕೋ ಚಿತನಾ?
ಪೀಠ ಉನ್ಹೋನೇ ಫೇರಿ।'

(ಇಷ್ಟು ದೂರ ಬಂದವರಿಗೆ ಎರಡು ಹೆಜ್ಜೆ ಇತ್ತ ಬರಲಾಗದೆ? ಇದೇನೂ ಅವರಿಗೆ ಹೊರೆ ಅಲ್ಲ. ಅವರೇ ನನ್ನನ್ನು ತೊರೆದು ಹೋಗಲಿಲ್ಲವೇ?) ಯಶೋಧರೆಯ ಮನಸ್ಸನ್ನು ಚೆನ್ನಾಗಿ ಅರಿತ ಬುದ್ಧದೇವನೇ ಆಕೆಯ ಕೋಣೆಗೆ ಬಂದಾಗ ತನ್ನ ಮುಂಚಿನ ನಡತೆಗಾಗಿ ಕ್ಷಮೆ ಕೇಳುತ್ತಾನೆ. ಬುದ್ಧದೇವನ ಈ ಕೆಳಗಿನ ವಾಣಿಯಲ್ಲಿ ನಾರಿಯರ ಬಗ್ಗೆ ಕವಿಯ ಭಾವನೆ ಗಮನಾರ್ಹವಾಗಿದೆ:

'ದೀನ ನ ಹೋ ಗೋಪೇ, ಸುನೋ, ಹೀನ ನಹೀಂ ನಾರೀ ಕಭೀ,
ಭೂತದಯಾ ಮೂರ್ತಿ ವಹ ಮನಸೇ, ಶರೀರಸೇ।
ಕ್ಷೀಣಹುವಾ ವನಮೇಂ ಕ್ಷುಧಾಸೇ ಮೈಂ ವಿಶೇಷ ಜಬ,
ಮುಝುಕೋ ಬಚಾಯಾ ಮಾತೃಜಾತಿನೇ ಹೇ ಖೀರಸೇ॥'

ಬುದ್ಧದೇವನ ಈ ಸಾಂತ್ವನ ನುಡಿಗಳಿಂದ ಹರ್ಷಿತಳಾದ ಗೋಪಾ ಧರ್ಮಪಾಲನೆಗಾಗಿ ತನ್ನ ಏಕಮಾತ್ರಪುತ್ರನಾದ ರಾಹುಲನನ್ನೂ ಬುದ್ಧದೇವನ ಪರಂಪರೆಯನ್ನು ಬೆಳೆಸಿ ಕೊಂಡು ಬರಲು ದೀಕ್ಷೆ ಪಡೆಯುವಂತೆ ಪ್ರೇರೇಪಿಸುತ್ತಾಳೆ.

'ಕೃತಕೃತ್ಯ ಹುಯೀ ಗೋಪಾ,
ಪಾಯಾ ಯಹ ಯೋಗ, ಭೋಗ, ಅಬ ಜಾ ತೂ।
ಆ ರಾಹುಲ, ಬಢ ಬೇಟಾ,
ಪೂಜ್ಯ ಪಿತಾಸೇ ಪರಂಪರಾ ಪಾತೂ॥'

ವಿಶ್ವಸುಖಕ್ಕಾಗಿ ತನ್ನ ಜೀವನವೆಲ್ಲಾ ದುಃಖವನ್ನೇ ಉಂಡ ಯಶೋಧರೆಯ ವರ್ಣನೆಗೆ ಈ ಕಾವ್ಯಕೃತಿ ಮೀಸಲಾಗಿದೆ. ಊರ್ಮಿಳೆಯ ಪಾತ್ರಸೃಷ್ಟಿಯೇ ಗೋಪಾಳ ಪಾತ್ರಕಲ್ಪನೆಗೆ ಸ್ಫೂರ್ತಿ ನೀಡಿದಂತಿದೆ,

ತ್ಯಾಗಮಯಿ ಮಾತೃಮೂರ್ತಿ ಮಹಿಳೆಯರ ಪಂಕ್ತಿಯಲ್ಲಿ ಗುಪ್ತರು **ದ್ವಾಪರ** ಕಾವ್ಯದಲ್ಲಿ ದೇವಕಿಯ ಹಾಗೂ **ಬಕಸಂಹಾರ** ದಲ್ಲಿ ಕುಂತಿಯ ವರ್ಣನೆಯನ್ನು ರಸ ವತ್ತಾಗಿ ಮಾಡಿದ್ದಾರೆ. ತನ್ನ ಮಕ್ಕಳಂತೆಯೇ ಇತರರ ಮಕ್ಕಳಲ್ಲಿಯೂ ಅಮಿತ ವಾತ್ಸಲ್ಯ ತೋರುವ ನಿರ್ಮಲ ಭಾವವನ್ನು **ಸಾಕೇತ**ದ ಕೌಶಲ್ಯೆಯಲ್ಲಿ ಕಾಣುತ್ತೇವೆ. ಭರತನನ್ನು ಕಂಡೊಡನೆಯೇ ಕೌಶಲ್ಯೆ ಸಹಜ ಪ್ರೀತಿಯಿಂದ ಹೇಳುವ ಈ ಮಾತು ಇದಕ್ಕೆ ನಿದರ್ಶನವಾಗಿದೆ:

'ವತ್ಸರೇ ಆ ಜಾ ಜುಡಾವಹ ಅಂಕ,
ಭಾನುಕುಲಕೇ ನಿಷ್ಕಲಂಕ ಮಯಂಕ|
ಮಿಲಗಯಾ ಮುಝೇ ತೂ ರಾಮ,
ತೂ ವಹೀ ಹೈ ಭಿನ್ನ ಕೇವಲ ನಾಮ||'

ನಾರಿಯರಲ್ಲಿ ಸಹಜ ಸೌಂದರ್ಯ, ಕಷ್ಟ ಸಹಿಷ್ಣುತೆ, ವಿಶ್ವಪ್ರೇಮ, ಸೇವಾಭಾವ ಮೊದಲಾದ ಆದರ್ಶ ಗುಣಗಳನ್ನು ಕಂಡು ಮೆಚ್ಚಿದ ಗುಪ್ತರು ಕೆಲನಾರಿಯರಲ್ಲಿ ಕಂಡು ಬರುವ ಕೃತಕತೆ, ಮೋಸ, ಕ್ರೌರ್ಯ ಈ ಲಕ್ಷಣಗಳನ್ನು ತಮ್ಮ ಕಾವ್ಯಗಳಲ್ಲಿ ಗುರುತಿ ಸಿದ್ದಾರೆ.

ಮಂಥರೆಯನ್ನು ಹಾಗೂ ಆಕೆಯ ಮಾತಿಗೆ ಮರುಳಾಗಿ ಮಾತೃತ್ವವನ್ನು ಮರೆತು ದುರ್ಗೆಯ ರೂಪ ತಾಳುವ ಕೈಕೇಯಿಯರನ್ನು ನಾವು **ಸಾಕೇತ** ಕಾವ್ಯ ದಲ್ಲಿ ನೋಡುತ್ತೇವೆ. **ಪಂಚವಟಿ** ಕಾವ್ಯದಲ್ಲಿ ಶೂರ್ಪನಖಿಯ ಪಾತ್ರನಿರೂಪಣೆ ಅದ್ಭುತವಾಗಿದೆ. ಅವಳು ರೂಪಗರ್ವಿತೆ. ಸೀತೆಯ ಬಗ್ಗೆ ಅವಳಿಗೆ ಅಸೂಯೆ. ಭೋಗ ಲಾಲಸೆ ಅವಳಲ್ಲಿ ಮೀತಿಮೀರಿದೆ. ತನ್ನ ಇಚ್ಛೆಯಂತೆ ಎಲ್ಲವೂ ನಡೆಯಬೇಕು, ಇಲ್ಲ ದಿದ್ದರೆ ಪ್ರತೀಕಾರ ತಾಳುವೆನೆಂಬ ಹಿಂಸಾತ್ಮಕ ಮನೋಭಾವವೂ ಉಂಟು. ರಾಮ ಲಕ್ಷ್ಮಣರನ್ನು ಪಂಚವಟಿಯಲ್ಲಿ ಕಂಡು ಅವರನ್ನು ತನ್ನ ಮೋಹಪಾಶದಲ್ಲಿ ಸಿಲುಕಿಸಲು ಎಲ್ಲ ತಂತ್ರವನ್ನೂ ಅನುಸರಿಸುತ್ತಾಳೆ. ಅಪೂರ್ವಸುಂದರಿಯಾದರೂ ಅವಳಲ್ಲಿ ಸೌಮ್ಯ ತೆಗಿಂತ ಪ್ರಖರತೆಯೇ ಮೇಲುಗೈ

'ಚಕಾ ಚೌಂಧ ಸೀ ಲಗೀ ದೇಖಕರ ಪ್ರಖರ ಜ್ಯೋತಿ ಕೀ ವಹ ಜ್ವಾಲಾ|
ನಿಸ್ಸಂಕೋಚ ಖಡೀ ಥೀ ಸಮ್ಮುಖ ಏಕ ಹಾಸ್ಯವದನೀ ಬಾಲಾ||'

(ಮಿಂಚಿನ ಕಿಡಿಯಂತೆ, ಝುಗಝುಗಿಸುವ ಜ್ವಾಲೆಯಂತಿರುವ ಆ ಹೆಣ್ಣುಮಗಳು ಯಾವ ಸಂಕೋಚವೂ ಇಲ್ಲದಂತೆ ಮುಗುಳ್ನಗುತ್ತಾ ಎದುರು ನಿಂತಿದ್ದಳು.)

ಲಕ್ಷ್ಮಣನನ್ನು ವರಿಸುವದಕ್ಕಾಗಿ ಆತನಂತೆಯೇ ತಪಸ್ವಿನಿಯಾಗಲೂ ಸಿದ್ಧಳಾ ಗುತ್ತಾಳೆ. ಸ್ತ್ರೀಯೂ ಸಂಪೂರ್ಣ ಸ್ವಂತ್ರಳು, ಅವಳು ಯಾರಿಗೂ ಅಧೀನಳಲ್ಲ. ಪುರುಷ ರಿಂದ ರಚಿಸಲ್ಪಟ್ಟ ಶಾಸ್ತ್ರಗಳಲ್ಲಿ ಸ್ತ್ರೀಯರ ಮೇಲೆ ಮಾತ್ರ ಪ್ರತಿಬಂಧ ಹೇರಿರುವ ದನ್ನೂ, ಪುರುಷರು ತಮ್ಮ ಸ್ವೇಚ್ಛಾಚರಣೆಗೆ ಎಲ್ಲ ಅನುವು ಮಾಡಿಕೊಂಡಿರುವದನ್ನೂ ಅವಳು ಸ್ಪಷ್ಟವಾಗಿ ಖಂಡಿಸುತ್ತಾಳೆ. ರಾಮ–ಲಕ್ಷ್ಮಣರು ಅವಳನ್ನು ಅಪಹಾಸ್ಯ ಮಾಡಿದಾಗ ಅವಳ ಕರಾಳ ರೂಪ ಹೀಗೆ ವ್ಯಕ್ತವಾಗುತ್ತದೆ:

'ಪಕ್ಷಪಾತಮಯ ಸಾನುರೋಧ ಹೈ ಜಿತನಾ ಅಟಲ ಪ್ರೇಮಕಾ ಬೋಧ,
ಉತನಾ ಹೀ ಬಲವತ್ತರ ಸಮಝೋ ಕಾಮಿನಿಯೋಂ ಕಾ ವೈರ ವಿರೋಧ|
ಹೋತಾ ಹೈ ವಿರೋಧ ಸೇ ಭೀ ಕುಛ ಅಧಿಕ ಕರಾಲ ಹಮಾರಾ ಕ್ರೋಧ,
ಔರ ಕ್ರೋಧ ಸೇ ಭೀ ಅಶೇಷ ಹೈ ದ್ವೇಷಪೂರ್ಣ ಅಪನಾ ಪ್ರತಿಶೋಧ||'

(ಒಬ್ಬರನ್ನೇ ನಿಶ್ಚಲವಾಗಿ ಪ್ರೀತಿಸಬೇಕು ಎಂಬ ನಿಯಮ ಪಕ್ಷಪಾತವುಳ್ಳದ್ದು. ಇದನ್ನು ಕಾಮಿನಿಯರು ಬಲವತ್ತರವಾಗಿ ವಿರೋಧಿಸುತ್ತಾರೆ. ನೀವು ಪುರುಷರು ಇದನ್ನು ನಮ್ಮ ಮೇಲೆ ಒತ್ತಾಯದಿಂದ ಹೇರಿದಷ್ಟೂ ನಮ್ಮ ಕ್ರೋಧ, ದ್ವೇಷ ಇನ್ನಷ್ಟು ಭುಗಿಲ್ಲೆನ್ನುತ್ತದೆ.) ಶೂರ್ಪನಖಿಯ ಪಾತ್ರದ ಮೂಲಕ ಕವಿಯು ಸ್ವೈರಾಚಾರಣೆಯಲ್ಲಿ ತೊಡಗಿ ಸಮಾಜದ ಕಟ್ಟುಪಾಡುಗಳನ್ನು ಕಡೆಗಣಿಸುವ ಕನ್ಯಾಮಣಿಗಳತ್ತ ಓದುಗರ ಗಮನ ಸೆಳೆದಿದ್ದಾರೆಂದರೆ ತಪ್ಪಾಗಲಾರದು.

ನಾರಿಯ ಒಂದು ಪ್ರಬಲವಾದ ಅಸ್ತ್ರನೆಂದರೆ ಆಕೆಯ ದೇಹ ಸೌಂದರ್ಯ. ಇದು ನಿಜವಾದರೂ ಅದೇ ಆಕೆಗೆ ಮಾರಕವೂ ಆಹುದು. ಅಂತ ಸ್ಸತ್ವಯುತವಾದ ರೂಪವೇ ನಿಜವಾದ ಶಕ್ತಿ; ಥಳುಕಿನ, ಹೊಳಹಿನ ಹೊರಗಿನ ಹೊದಿಕೆ ಸೌಂದರ್ಯವೆನಿಸಲಾರದು. ಒಂದು ಪುಣ್ಯ. ಪವಿತ್ರತೆಯ ಬೆಳಕಾದರೆ ಇನ್ನೊಂದು ಜ್ಯೋತಿಹೀನ ಕತ್ತಲು. ಇವೆರಡರ ಅಂತರವನ್ನು ಕವಿ ಬಲು ಸೂಚ್ಯವಾಗಿ ಬಣ್ಣಿಸಿದ್ದಾರೆ:

'ಚೌಂಕ ಪಡೀ ಪ್ರಮದಾ ಭೀ ಸಹಸಾ ದೇಖ ಸಾಮನೇ ಸೀತಾಕೋ|
ಕುಮುದ್ವತೀ ಸೀ ದಬೀ ದೇಖಕರ ಉಸ ಪದ್ಮಿನಿ ಪುನೀತಾಕೋ||'

(ಸೀತೆಯನ್ನು ಸಮಕ್ಷಮ ಕಂಡು ಆ ಪ್ರಮದೆಯೂ ಸಹ ಬೆಚ್ಚಿಬಿದ್ದಳು. ಪವಿತ್ರ ಪದ್ಮಿನಿಯು ಕುಮುದ್ವತಿಯಂತೆ ತನ್ನ ಕಾಂತಿಯನ್ನು ಹೊರಬೀಳದಂತೆ ಕಾಯ್ದುಕೊಂಡುದನ್ನು ಕಂಡು ಶೂರ್ಪನಖಿ ಬೆರಗಾದಳು)

ಮೈಥಿಲಿ ಶರಣ ಗುಪ್ತರು ತಮ್ಮ ಕಾವ್ಯಗಳಲ್ಲಿ ನಾರಿಯ ಸಹಜ ಸೌಂದರ್ಯವನ್ನೇ ಮಾನವೀಯ ಮೌಲ್ಯಗಳ ವಿಕಾಸಕ್ಕೆ ಪೋಷಕವನ್ನಾಗಿ ಆರಿಸಿಕೊಂಡಿದ್ದಾರೆ. ಕಷ್ಟ ಸಹಿಷ್ಣುತೆ, ಕರ್ತವ್ಯಪಾಲನೆ, ಪ್ರೇಮವಾತ್ಸಲ್ಯ, ತ್ಯಾಗ, ಸಹನೆ, ಕ್ಷಮೆ, ನ್ಯಾಯ, ನೀತಿ ಮೊದಲಾದ ಸದ್ಗುಣಗಳಿಂದ ವಿಭೂಷಿತಳಾದ ನಾರಿ ಸಮಾಜದಲ್ಲಿ ಸರಿಸಮಾನತೆಯ ಆಧಾರದ ಮೇಲೆ ಪುರುಷನಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ನೆರವಾಗಬಲ್ಲಳು. ಹೀಗೆ ಭಾರತೀಯ ಸಂಸ್ಕೃತಿಯಲ್ಲಿನ ಉದಾತ್ತ ಧ್ಯೇಯಗಳನ್ನು ನವಯುಗದ ಆದರ್ಶಗಳೊಂದಿಗೆ ಸಮತೋಲನೆ ಮಾಡಿ ತಮ್ಮ ಕಾವ್ಯಗಳಲ್ಲಿಯ ಸ್ತ್ರೀ ಪಾತ್ರಗಳಲ್ಲಿ ಸತ್‌ಸ್ವರೂಪವನ್ನೇ ಬಿಂಬಿಸಿದ್ದಾರೆ.

ಶರತ್‌ಚಂದ್ರರ ದೃಷ್ಟಿಯಲ್ಲಿ ಸ್ತ್ರೀ

ಎನ್ಕೆ

'ಶರತರಿಗೆ ನಾರಿಯರ ವಿಷಯದಲ್ಲಿ ಅಪರಿಮಿತ ಅನುಕಂಪ. ಅಂತೆಯೆ ನಾರಿಯರ ಅಂತರಂಗದಲ್ಲಿ ಮಾಧುರ್ಯದ ಅಸೀಮ ಐಶ್ವರ್ಯವು ಅಡಗಿದೆಯೆಂದು ತಿಳಿದು ಅದರ ಶೋಧದಲ್ಲಿ ತಲ್ಲೀನರಾಗಿರುತ್ತಿದ್ದರು. ಸಮಾಜದ ಕಠೋರ ನಿಯಮಗಳ ವಿರುದ್ಧ ಶರತರು ಲೇಖನಿಯನ್ನು ಎತ್ತಿದರು; ವಿಶೇಷವಾಗಿ ಹಿಂದೂ ನಾರಿಯರ, ಅದರಲ್ಲೂ ವಿಧವೆಯರ ವಿರುದ್ಧವಿರುವ ಮತ್ತು ಹೃದಯವನ್ನು ತಳಮಳಗೊಳಿಸುವ ಆಚಾರ— ವಿಚಾರಗಳ ವಿರುದ್ಧ ಲೆಕ್ಕಣಿಕೆಯನ್ನು ಎತ್ತಿದರು.'

ಶರತ್‌ಚಂದ್ರರು ಕಾದಂಬರಿ ರಚನೆಯ ಆರಂಭ ಮಾಡಿದ ಸಮಯದಲ್ಲಿ ಅಂದರೆ ಈ ಶತಮಾನದ ಆದಿಭಾಗದಲ್ಲಿ ಬಂಗಾಲಿ ಸಮಾಜದಲ್ಲಿ ಅತೀವ ಧಾರ್ಮಿಕತೆ ಮಡಿವಂತಿಕೆಗಳು ರೂಢಿಯಲ್ಲಿದ್ದವು. ಬಾಲವಿಧವೆಯರು ಸಮಾಜಕ್ಕೆ ಹೊರೆಯಾಗಿ ಸನಾತನಿಗಳ ಕಣ್ಣಲ್ಲಿ ಕುಕ್ಕುತ್ತಿದ್ದಿರಬೇಕು. ಬಾಲವಿಧವೆಯರಾದರೇನು– ಅವರಿಗೆ ಹೃದಯವಿಲ್ಲವೆ? ಭಾವನೆಗಳಿಲ್ಲವೆ? ಕಾಮನೆಗಳಿಲ್ಲವೆ? ಹುಳಿ–ಉಪ್ಪು ಉಂಡ ದೇಹಕ್ಕೆ ಮನೋವಿಕಾರಗಳಿಲ್ಲವೆ? ಹೆಣ್ಣು ತನ್ನ ಆಶೆ ಆಕಾಂಕ್ಷೆಗಳನ್ನು ಎಷ್ಟೆಂದು ಅದುಮಿಕೊಂಡಿರಲು ಸಾಧ್ಯ?

ತಮ್ಮ ಮೊದಲನೆಯ ಕಾದಂಬರಿ **ಬಡದೀದಿ** ಯಲ್ಲಿ ಮಾಧವಿ ಎಂಬ ಬಾಲ ವಿಧವಾ ಪಾತ್ರವೊಂದನ್ನು ನಿರ್ಮಿಸಿದ ಶರತರು ಅದುಮಿ ಹಿಡಿದ ರತಿಭಾವದ ಮಾನಸಿಕ ಸ್ವರೂಪವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಸನ್ನಿವೇಶ ಹೀಗೆ: ಸುರೇಂದ್ರ ಒಬ್ಬ ಶ್ರೀಮಂತ ಪ್ರತಿಭಾವಂತ ಯುವಕ. ಮಗುವಿನಂತಹ ಸ್ವಭಾವ ಆತನದು. ಕಾಲೇಜು ಶಿಕ್ಷಣವನ್ನು ಉಚ್ಚ ತರಗತಿಯಲ್ಲಿ ಪೂರೈಸಿದ ಸುರೇಂದ್ರ ಸ್ನೇಹಿತರ ಶಿಫಾರಸಿನ ಮೇರೆಗೆ ವಿಲಾಯತಿಗೆ ಹೋಗಿ ಹೆಚ್ಚಿನ ಶಿಕ್ಷಣ ಪಡೆದು ಬರಲು ಮನಸ್ಸು ಮಾಡುತ್ತಾನೆ. ಆದರೆ ಸುರೇಂದ್ರನು ಅಬೋಧ ಶಿಶು ಎಂದು ಕಂಡುಕೊಂಡ ಅವನ ಮಲತಾಯಿ ತನ್ನ ಭಯವನ್ನು ವ್ಯಕ್ತಪಡಿಸಿ ಇದಕ್ಕೆ ಅಡ್ಡಿ ಮಾಡುತ್ತಾಳೆ. ಇದರಿಂದ ಜಿಗುಪ್ಸೆಗೊಂಡ ಸುರೇಂದ್ರ ತನ್ನ ಭಾಗ್ಯವನ್ನು ತಾನೇ ಕಂಡುಕೊಳ್ಳುವೆನೆಂದು ಕಲಕತ್ತೆಗೆ ಹೋಗುತ್ತಾನೆ. ಮನೆಯಿಂದ ದೊರೆಯಬಹುದಾದ ಹಣಕ್ಕೆ ಕೈಚಾಚದೆ ತಾನೇ ಗಳಿಸಿ

ಕೊಳ್ಳುವ ನಿರ್ಧಾರದಲ್ಲಿ ತೊಂದರೆಗೀಡಾಗುತ್ತಾನೆ. ಒಬ್ಬ ಶ್ರೀಮಂತ ಜಮೀನು ದಾರನ ಮಗಳು ಪ್ರಮೀಲೆಗೆ ಖಾಸಗಿ ಶಿಕ್ಷಕನೆಂದು ನೇಮಕಗೊಳ್ಳುತ್ತಾನೆ. ಪ್ರಮೀಲೆಯ ಅಕ್ಕನೇ ಮಾಧವಿ. ಅವಳು ಸುರೇಂದ್ರನ ಮಗುವಿನಂತಹ ಮನಸ್ಸನ್ನು ಗುರುತಿಸಿ ಅವನ ಬಗ್ಗೆ ಮುಗ್ಧಳಾಗಿ ಹೋಗುತ್ತಾಳೆ. ಸಣ್ಣ ಸಣ್ಣ ವಿಷಯದಲ್ಲೂ ಸುರೇಂದ್ರನ ನಿರ್ದುಷ್ಟ ನಿರ್ಮಲ ಸ್ವಭಾವವನ್ನು ಕಾಣುತ್ತ ಸರ್ವವಿಧದಲ್ಲೂ ಆತನ ಕಾಳಜಿ ವಹಿಸುತ್ತ ತನಗೆ ಗೊತ್ತಿಲ್ಲದಂತೆಯೇ ಆತನ ಕಡೆಗೆ ಅತಿಯಾಗಿ ಆಕರ್ಷಿತ ಳಾಗುತ್ತಾಳೆ. ಮನೆಯ ದಾಸದಾಸಿಯರು ಮಾಧವಿಯ ಈ ನಡೆಯನ್ನು ಕಂಡು ಗುಸುಗುಸು ಮಾತನಾಡಲು ಆರಂಭಿಸುತ್ತಾರೆ. ಶ್ರೀಮಂತರ ಸಾಂಪ್ರದಾಯಿಕ ಮನೆ ತನ. ಬಿಗಿಯಾದ ವಾತಾವರಣ. ಇಂಥದರಲ್ಲಿ ಈ ಬಾಲವಿಧವೆ ಮಾಧವಿ ಸುರೇಂದ್ರನ ಬಗ್ಗೆ ಹೀಗೆಲ್ಲಾ ಅತಿ ಉಪಚಾರ ತೋರಬೇಕೆ? ಆದರೆ ಸುರೇಂದ್ರನಿಗೆ ಈ ಬಗ್ಗೆ ಲವಲೇಶ ಕಲ್ಪನೆಯೂ ಇಲ್ಲ. ಮಾಧವಿ ಎದುರಿಗೆ ಇದ್ದರೆ ತನಗೇನೋ ಒಂದು ಹಿತ ಎಂಬುದನ್ನಷ್ಟೇ ಆತ ಬಲ್ಲ. ಒಮ್ಮೆ ಮಾಧವಿ ತನ್ನ ಆಪ್ತಮಿತ್ರೆ ಮನೋರಮೆಗೆ ಬರೆದ ಪತ್ರದಲ್ಲಿ ಅಚಾತುರ್ಯದಿಂದ ಸುರೇಂದ್ರನ ಬಗ್ಗೆ ಆಸಕ್ತಿಯ ಮಾತುಗಳನ್ನಾಡುತ್ತಾಳೆ. ಅಷ್ಟರಿಂದಲೆ ಮಾಧವಿಯ ಮನಸ್ಸಿನ ಸ್ಥಿತಿ–ಗತಿಯು ಅರ್ಥಮಾಡಿಕೊಂಡ ಮನೋರಮೆ ಆಕೆಯನ್ನು ಎಚ್ಚರಿಸಿ ಉತ್ತರ ಬರೆಯುತ್ತಾಳೆ. ಮಾಧವಿಗೆ ತನ್ನ ಮಡಿವಂತಿಕೆಯ, ಸನಾತನ ಸಂಪ್ರದಾಯದ ಪರಿಸರದ ಬಗ್ಗೆ ಎಚ್ಚರವಾಗುತ್ತದೆ. ಇದು ತರವಲ್ಲವೆಂದು ಬಗೆದು ತೀರ್ಥಯಾತ್ರೆಯ ನೆಪದಲ್ಲಿ ಸುರೇಂದ್ರನಿಂದ ದೂರವಾಗಿರಲು ಯತ್ನಿಸುತ್ತಾಳೆ. ಮಾಧವಿ ಇಲ್ಲದ ಮನೆಯಲ್ಲಿ ಪ್ರಮೀಲೆಗೆ ಅಭ್ಯಾಸ ಹೇಳಿಕೊಡುವದು ಸುರೇಂದ್ರನಿಗೆ ಸಾಧ್ಯವಾಗುವದಿಲ್ಲ. ಅಕ್ಕನಿಗೆ ಬಾ ಎಂದು ಹೇಳು ಎಂದು ಪ್ರಮೀಳೆಗೆ ಪತ್ರ ಬರೆಯಲು ಹಚ್ಚುತ್ತಾನೆ. ಈ ಪತ್ರ ನೋಡಿ ಮನಸ್ಸು ತಡೆಯದೆ ಮಾಧವಿ ಹಿಂತಿರುಗುತ್ತಾಳೆ. ಮಾಧವಿ ಮರಳಿ ಬಂದಿರುವಳೆಂದರಿತ ಸಂಭ್ರಮದಲ್ಲಿ ಸುರೇಂದ್ರ ಹಿಂದು–ಮುಂದಿನ ವಿಚಾರವಿಲ್ಲದೆ ಆಕೆಯ ಅಂತಃಪುರದಲ್ಲಿ ನುಗ್ಗುತ್ತಾನೆ. ಸಂಪ್ರದಾಯಶಿಷ್ಟರಾದ ಈ ಶ್ರೀಮಂತರ ಒಳಮನೆಯಲ್ಲಿ ಹೊರಗಿನ ಗಂಡಸರಿಗೆ ಪ್ರವೇಶವಿರುವದಿಲ್ಲ. ಇದರಿಂದ ಮಾಧವಿಗೆ ತಬ್ಬಿಬ್ಬಾಗುತ್ತದೆ. ಮನಸ್ಸಿನ ಶಾಂತಿ ಕದಡುತ್ತದೆ. ಮಾಧವಿ ಇಲ್ಲದ ಮನೆಯಲ್ಲಿ ತಾನು ಅನುಭವಿಸಿದ ಏಕಾಕಿತನದ ವ್ಯಥೆಯನ್ನು ಹೇಳಲೆಂದು ಮುಗ್ಧಮನಸ್ಸಿನ ಸುರೇಂದ್ರ ಮುಂದರಿದು ಬಂದಾಗ ಆತನಿಗೆ ಮನೆಬಿಟ್ಟು ಹೋಗಲು ಆಜ್ಞೆ ಮಾಡು ತ್ತಾಳೆ ಮಾಧವಿ. ಸುರೇಂದ್ರ ಹೊರಟು ಹೋಗುತ್ತಾನೆ. ಮಾಧವಿಯ ಮನಸ್ಸಿನಲ್ಲಿ ಒಂದು ವಿಪ್ಲವ ನಡೆಯುತ್ತದೆ.

ಸುರೇಂದ್ರ ಮಾಧವಿಯಿಂದ ದೂರ ನಡೆದರೂ ಅವಳನ್ನು ಮರೆಯಲಾಗುವ ದಿಲ್ಲ. ಬೇರೊಬ್ಬಳನ್ನು ಮದುವೆಯಾಗುತ್ತಾನೆ. ಪತ್ನಿ ಶಾಂತಿಯೊಡನೆ ಸುಖದಿಂದ ಇರಬೇಕೆಂದು ತನ್ನ ಹಳ್ಳಿಯ ಮನೆಯಲ್ಲಿ ವಾಸಮಾಡಿಕೊಂಡು ತನ್ನ ಹೊಲಮನೆ ನೋಡಿಕೊಂಡಿರುತ್ತಾನೆ.

ಇತ್ತ ಮಾಧವಿಯ ತಂದೆ ತೀರಿಹೋಗಲು ಮಾಧವಿ ತನ್ನ ದಿವಂಗತ ಪತಿಯ ಮನೆಯಲ್ಲಿ ಇರತೊಡಗುತ್ತಾಳೆ. ಆದರೆ ವಿಚಿತ್ರ ಯೋಗಾಯೋಗ ಮಾಧವಿಯ ಸನಿಹದಿಂದ ಓಡಿ ದೂರ ಬಂದ ಸುರೇಂದ್ರ ಈಗ ಮನಶ್ಶಾಂತಿಗಾಗಿ ಪತ್ನಿ ಶಾಂತಿಯೊಡನೆ ಉಳಿದುಕೊಂಡಿರುವದೂ ಇದೇ ಹಳ್ಳಿಯಲ್ಲಿಯೇ. ಒಮ್ಮೆ ಮಾಧವಿ ಎಂಬ ಒಬ್ಬ ಅನಾಥ ಅಬಲೆಯ ಮೇಲೆ ಅತ್ಯಾಚಾರ ನಡೆದಿದೆ ಎಂದು ಸುದ್ದಿ ತಿಳಿಯುತ್ತದೆ. (ಸುರೇಂದ್ರನ ನೌಕರರೇ ಅವಳ ಉಚ್ಚಾಟನೆಗೆ ಕಾರಣರಾಗಿರುತ್ತಾರೆ.) ಮುಗ್ಧ ಸುರೇಂದ್ರ ಕುದುರೆಯನ್ನೇರಿ ವೀರ ಯೋಧನಂತೆ ಅವಳ ಸಹಾಯಕ್ಕಾಗಿ ಧಾವಿಸುತ್ತಾನೆ. ಆದರೆ ಅವಳ ಮನೆಯನ್ನು ತಲುಪಿದಾಗ ಆಕೆ ಮನೆಬಿಟ್ಟು ಹೋಗಿದ್ದಾಳೆಂದು ತಿಳಿಯುತ್ತದೆ. ಕೂಡಲೇ ಅವಳನ್ನು ಹುಡುಕಿಕೊಂಡು ಹೋಗುತ್ತಾನೆ ಸುರೇಂದ್ರ. ಮಾರ್ಗಾಯಾಸ, ಮನೋವ್ಯಥೆ, ಅಪಾರ ಸಂಕಟದಿಂದ ಬಳಲುತ್ತ ಸುರೇಂದ್ರ ನದಿಯ ದಂಡೆಗುಂಟ ನಡೆಯುತ್ತಿರುವಾಗ ದೋಣಿಯಲ್ಲಿ ಹಂಸದಂತೆ ತೇಲಿ ಹೋಗುತ್ತಿರುವ ಶುಭ್ರವಸನಳಾದ ಮಾಧವಿಯನ್ನು ಗುರುತಿಸಿ 'ದೀದೀ, ದೀದೀ' ಎಂದು ಕರುಳು ಕಿತ್ತು ಬರುವಂತೆ ಕೂಗುತ್ತ ಈಸಿಹೋಗಿ ದೋಣಿಯನ್ನು ಹಿಡಿಯುತ್ತಾನೆ. ದೈಹಿಕ ಆಯಾಸ, ಮಾನಸಿಕ ಆಘಾತಗಳಿಂದ ತತ್ತರಿಸಿದ ಸುರೇಂದ್ರ ಕೊನೆಯುಸಿರು ಎಳೆಯುವ ಮುನ್ನ ಆ ಬಡೀ ದೀದಿಯ ತೊಡೆಯ ಮೇಲೆ ತಲೆಯಿಟ್ಟು ನುಡಿಯುತ್ತಾನೆ: 'ದೀದೀ, ಅಂದು ನೀನು ನನ್ನನ್ನು ಮನೆಯಿಂದ ಹೊರಗೆ ಹಾಕಿದೆ. ಇಂದು ನನ್ನ ನೌಕರರು ನಿನ್ನನ್ನು ಹೊರಗೆ ಹಾಕಿದರು. ಮುಯ್ಯಿ ತೀರಿತಲ್ಲವೆ ?'

ಈ ಪುಟ್ಟ ಕಾದಂಬರಿಯ ನಾಯಿಕೆ ಬಾಲವಿಧವೆಯಾಗಿ ಕರುಣೆಗೆ ಪಾತ್ರಳಾದ ಮಾಧವಿ. ಪ್ರೇಮಿಸುವ ಅವಕಾಶವಿಲ್ಲದೆ ಅವಳು ಕಠೋರ ಸಂಯಮದಿಂದ ಇರುವಾಗ ಸುರೇಂದ್ರನ ಮಗುವಿನಂತಹ ಸರಳ ಸ್ವಭಾವ ಕಂಡು ಆತನಲ್ಲಿ ಹಿರಿಯಕ್ಕನ ವಾತ್ಸಲ್ಯ ತೋರುತ್ತಾಳೆ. ಆದರೆ ಈ ವಾತ್ಸಲ್ಯದ ವಾಹಿನಿಯಲ್ಲಿ ಪ್ರೀತಿ ಗುಪ್ತಗಾಮಿನಿಯಾಗಿದ್ದರೆ ಅದು ಅವಳಿಗೆ ತಿಳಿದಿಲ್ಲ. ಅಂತರಂಗದ ಸಖಿ ಈ ವಿಷಯದಲ್ಲಿ ಬೆಳಕು ಚಲ್ಲಿದಾಗಲೆ ಅವರ ಅರಿವಾಗುತ್ತದೆ. ಸುರೇಂದ್ರನ ಮೇಲೆ ಮಾಧವಿ ಹಿರಿಯಕ್ಕನ ಹಕ್ಕು ಚಲಾಯಿಸುತ್ತಿರುವಾಗ, ಆತ ಆಕೆಯ ಚಿಕ್ಕ ಸೋದರನಂತೆ ಸ್ವಾತಂತ್ರ್ಯವಹಿಸಿ ಅವಳ ಅಂತಃಪುರವನ್ನು ಪ್ರವೇಶಿಸಿದಾಗ ಅವಳಿಗೆ ಅವಮಾನವೋ, ಅಂಜಿಕೆಯೋ ಅಂತೂ ಈ ದೊಡ್ಡ ಮಗುವನ್ನು ಮನೆಯಿಂದ ಹೊರಗೆ ತಳ್ಳಿ, ಅಂತಃಕರಣದ ಕಡು ಸಂಕಟಕ್ಕೆ ಈಡಾಗುತ್ತಾಳೆ.

ಈ ಅಸಫಲ ಪ್ರೇಮಕಥೆಯ ದುರಂತಕ್ಕೆ ಕಾರಣವೇನು ? ಈ ಪ್ರಶ್ನೆ ಇಲ್ಲಿ ಅಪ್ರಸ್ತುತ. ನಾವು ಇಲ್ಲಿ ಮುಖ್ಯವಾಗಿ ಗುರುತಿಸಬೇಕಾದದ್ದು ಮಾಧವಿಯ ಕಷ್ಟಸಹಿಷ್ಣುತೆ. ಈ ಬಾಲವಿಧವೆ ಪಾಶ್ಚಾತ್ಯ ಸಮಾಜದಲ್ಲಿ ಜೀವಿಸಿದ್ದರೆ ಸುಲಭವಾಗಿ ಇನ್ನೊಬ್ಬ ಪತಿಯನ್ನು ವರಿಸಬಹುದಿತ್ತು. ಆದರೆ ಆಕೆಯ ಪರಿಸರವೇ ಬೇರೆ. ಅಂತೆಯೇ ಈ ಆಂತರಿಕ ತಾಪ.

ದೇವದಾಸ ಕಾದಂಬರಿಯ ಪಾರು ವಿಧವೆ ಅಲ್ಲದಿದ್ದರೂ ಆ ಹೆಣ್ಣಿನ ಬಾಳೂ ಕಣ್ಣೀರೇ. ಪಾರು, ದೇವದಾಸ ಬಾಲ್ಯದಿಂದಲೂ ಅನ್ಯೋನ್ಯರು. ಇಬ್ಬರೂ ಒಂದೇ ಶಾಲೆಗೆ ಹೋಗುತ್ತಿದ್ದರು. ಪಾರು ಬಡಹುಡುಗಿ. ದೇವದಾಸ ಸಿರಿವಂತರ ಮಗ, ತುಂಟ. ಪಾರುನನ್ನು ಪ್ರೀತಿಸುತ್ತಿದ್ದ. ಆದರೂ ಪಾರುಗೆ ದೇವದಾಸನೆಂದರೆ ಪ್ರೀತಿ. ಆತನ ಯಾವ ಮಾತನ್ನೂ ಮೀರುತ್ತಿದ್ದಿಲ್ಲ. ದೇವದಾಸನಿಗೂ ಆಕೆಯೆಂದರೆ ಅಚ್ಚುಮೆಚ್ಚು.

ದೇವದಾಸ ಕಲಕತ್ತೆಗೆ ಕಲಿಯಲಿಕ್ಕೆಂದು ಹೋದ ಮೇಲೆ ಪಾರೂಳಿಗೆ ಆದ ನೋವು ಬಹಳ. ಆದರೂ ಯಾರ ಮುಂದೆಯೂ ಹೇಳಲಾರಳು. ಬಡವರ ಮಗಳಾದುದರಿಂದ ಸಿರಿವಂತನಾದ ದೇವದಾಸನ ಕೈಹಿಡಿಯುವದು ಕನಸಿನಲ್ಲಿಯೂ ಅಸಾಧ್ಯ; ದೇವದಾಸನಿಗೂ ಆಕೆಯೆಡೆಗೆ ಸೆಳೆತವಿದ್ದರೂ ತಂದೆ-ತಾಯಿಗಳ ಬಿಗುಮಾನದಿಂದಾಗಿ ಅವರನ್ನು ಎದುರಿಸಿ ನಿಲ್ಲಲಾರ.ಹಿಂದೊಮ್ಮೆ ದೇವದಾಸ ಪಾರ್ವತಿಯ ಹಣೆಗೆ ಮಾಡಿದ ಗಾಯವನ್ನೇ ತಮ್ಮಿಬ್ಬರ ಪ್ರೇಮದ ಕುರುಹೆಂದು ಬಗೆದು ಪಾರು ಯಾವಾಗಲೂ ಅದನ್ನೇ ಮುಟ್ಟಿ ಮುಟ್ಟಿ ನೋಡಿಕೊಂಡು ತೃಪ್ತಿಪಟ್ಟುಕೊಳ್ಳುತ್ತಿರುತ್ತಾಳೆ.

ಪಾರುನ ತಂದೆತಾಯಿಗಳು ಅವಳನ್ನು ಆಗಲೇ ಒಬ್ಬ ಮಗಳುಳ್ಳ ಇಮ್ಮನೆವರಸಿಗೆ ಕೊಟ್ಟು ಮದುವೆ ಮಾಡುತ್ತಾರೆ. ಕನ್ಯಾದಾನ ಮಾಡುವದಕ್ಕೆ ಮುನ್ನ ಆಕೆ ಧೈರ್ಯಮಾಡಿ ಒಮ್ಮೆ ದೇವದಾಸನಲ್ಲಿಗೆ ಬರುತ್ತಾಳೆ. ಅವನ ಪಾದ ಹಿಡಿದು 'ನಿಮ್ಮ ದಾಸಿಯನ್ನಾಗಿ ಮಾಡಿಕೊಳ್ಳಿರಿ ನನ್ನನ್ನು' ಎಂದು ಸೆರಗೊಡ್ಡಿ ಬೇಡಿಕೊಳ್ಳುತ್ತಾಳೆ. ದೇವದಾಸ ನಿರುತ್ತರ, ನಿರುಪಾಯ. ಪಾರ್ವತಿ ತನ್ನ ಮುದಿಗಂಡನೇ ತನ್ನ ಹಿರಿಯ ದೇವರೆಂದು ಬಗೆದು ಹೊಸ ಪರಿಸರಕ್ಕೆ ಹೊಂದಿಕೊಳ್ಳುತ್ತಾಳೆ.

ಒಮ್ಮೆ ತವರೂರಿಗೆ ಬಂದ ಈ ನೀರೆ ನೀರಿಗೆಂದು ಹೋದಾಗ ಬಾವಿಯ ಹತ್ತಿರ ದೇವದಾಸನ ದರ್ಶನ. ಆಕೆಯನ್ನು ಅಡ್ಡಗಟ್ಟಿ ನಿಲ್ಲುತ್ತಾನೆ. 'ದಾರಿ ಬಿಡು' ಎನ್ನುತ್ತಾಳೆ. 'ತಾನು ಮದುವೆಯಾದವಳೀಗ. ದೇವದಾಸ ಅನ್ಯ. ಆತ ಈ ಮೊದಲು ತನ್ನ ಪ್ರೇಮ ಭಿಕ್ಷೆ ನಿರಾಕರಿಸಿದವ. ಆದರೆ ತಾನೇನು ಕನ್ಯಾಕುಮಾರಿಯಾಗಿ ಉಳಿಯಲಿಲ್ಲವಲ್ಲ'– ಎಂಬ ಬಿಗುಮಾನವನ್ನು ನಟಿಸುತ್ತಾಳೆ. ದೇವದಾಸನಿಗೆ ಪಾರ್ವತಿಯ ಈ ತೋರಿಕೆಯ ಔದಾಸೀನ್ಯ ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಮತ್ತೆ ಕಲಕತ್ತೆಗೆ ಹೋಗುತ್ತಾನೆ. ಕಾಲೇಜ ವಿದ್ಯಾಭ್ಯಾಸಕ್ಕಲ್ಲ, ದುರ್ವ್ಯಸನಗಳನ್ನು ಕಲಿಯಲಿಕ್ಕೆ. ಚುನಿಲಾಲ ಎಂಬ ದುರ್ಮಾರ್ಗಿ ಮಿತ್ರನ ದೀಕ್ಷೆಯಿಂದ ಮದಿರೆಯನ್ನು ಸೇವಿಸಲು, ಚಂದ್ರಮುಖಿ ಎಂಬ ವೇಶ್ಯೆಯ ಮನೆಗೆ ಹೋಗಲು ಆರಂಭಿಸುತ್ತಾನೆ. ಪಾರುಗೆ ಈ ಕೆಟ್ಟ ಸುದ್ದಿ ತಿಳಿಯುತ್ತದೆ– ದೇವದಾಸ ಹಾಳಾಗುತ್ತಿದ್ದಾನೆ ಎಂದು. ಆದರೆ ಕಣ್ಣೀರು ನುಂಗಿಕೊಂಡು ಒಳಗೊಳಗೇ ಬೇಯುತೊಡಗುವ ವಿನಃ ಅವಳೇನು ಮಾಡಬಲ್ಲಳು ?

ದೇವದಾಸನ ತಂದೆ ತೀರಿಕೊಂಡು ಅವನ ದುರ್ವ್ಯಸನಗಳಿಗೆ ದಾರಿ ಇನ್ನಷ್ಟು ಸರಳವಾದಂತಾಯಿತು. ಕುಡಿತ, ಕುಡಿತ, ಕುಡಿತ ! ಪಾರ್ವತಿ ನಾಚಿಕೆ ಸಂಕೋಚ

ಗಳನ್ನೆಲ್ಲ ಬದಿಗೊತ್ತಿ ಆತನನ್ನು ಊರಿಗೆ ಕರೆದೊಯ್ಯಲು ಕಲಕತ್ತೆಗೆ ಬರುತ್ತಾಳೆ. ಆದರೆ ಆಗಲೇ ದೇವದಾಸ ಊರು ಬಿಟ್ಟಿರುತ್ತಾನೆ. ನಿರಾಶಳಾದ ಪಾರು ಪತಿಯ ಹಳ್ಳಿಗೆ ಹಿಂತಿರುಗುತ್ತಾಳೆ.

ಇತ್ತ ಚಂದ್ರಮುಖಿ ದೇವದಾಸನ ನಿಷ್ಪಾಪ ಹೃದಯದ ಪ್ರಭಾವಕ್ಕೆ ಒಳಗಾಗಿ ಪರಿವರ್ತನೆ ಹೊಂದಿ ತನ್ನ ವೇಶ್ಯಾವೃತ್ತಿಯನ್ನು ತ್ಯಜಿಸಿಬಿಡುತ್ತಾಳೆ. ದೇವದಾಸನ ಚರಣದಾಸಿಯಾಗಿ ಒಳ್ಳೆಯ ಜೀವನ ನಡೆಸಲು ನಿರ್ಧರಿಸುತ್ತಾಳೆ. ಕುಡಿತದಿಂದ ತನ್ನ ದೇಹಾರೋಗ್ಯವನ್ನು ಹಾಳುಮಾಡಿಕೊಂಡ ದೇವದಾಸನಿಗೆ ಔಷಧೋಪಚಾರ ಮಾಡಿಸುತ್ತಾಳೆ. ಚಂದ್ರಮುಖಿಯ ಪ್ರಾಮಾಣಿಕ ಪರಿಚರ್ಯೆಯಿಂದ ದೇವದಾಸನಿಗೆ ಒಂದು ದೊಡ್ಡ ಪ್ರಶ್ನೆ ಎದುರಾಗುತ್ತದೆ. 'ತಾನು ಪ್ರೇಮಿಸುವುದು ಯಾರನ್ನು? ಪಾರ್ವತಿಯನ್ನೋ? ಚಂದ್ರಮುಖಿಯನ್ನೋ?' ಸರಿ. ಚಂದ್ರಮುಖಿಯಿಂದಲೂ ಹೇಳದೆ ಕೇಳದೆ ದೂರ ಹೋಗಿಬಿಡುತ್ತಾನೆ.

ಯಕೃತ್ತಿನ ದುರವಸ್ಥೆಯಿಂದ ದಿನದಿನಕ್ಕೆ ದೇಹ ಕ್ಷೀಣಿಸುತ್ತಿರುವ ದೇವದಾಸ ಅಲಹಾಬಾದ, ಮುಂಬಯಿ, ಬನಾರಸ–ಹೀಗೆ ಊರಿಂದೂರು ಅಲೆಯುತ್ತಾನೆ. ಜ್ವರ ಬಂದು ನರಳುತ್ತಾನೆ. ಈ ದುರವಸ್ಥೆಯಲ್ಲಿ ಆತನನ್ನು ನೋಡಿಕೊಳ್ಳಲು ಯಾರೂ ಇಲ್ಲದಂತಹ ಅನಾಥದೆಸೆ ಆತನಿಗೆ! ಕೊನೆಗೆ ಗಾಡಿಮಾಡಿಕೊಂಡು ಹಾತಿಪ್ರೋತಾಕ್ಕೆಂದು ತೆರಳುತ್ತಾನೆ, ಪಾರು ಇದ್ದಲ್ಲಿಗೆ. ಗಾಡಿಯಲ್ಲೇ ದೇವದಾಸನ ದೇಹಜಾಡ್ಯ ಉಲ್ಬಣಿಸುತ್ತದೆ. ಮೂಗಿನಿಂದ ರಕ್ತ ಸೋರುತ್ತದೆ. ಮತ್ತೆ ಮದಿರೆಗೆ ಮೊರೆ ಹೋಗುತ್ತಾನೆ. ಜ್ವರ ಹೆಚ್ಚಾಗುತ್ತದೆ. ರಾತ್ರಿ ಹತ್ತು ಘಂಟೆಗೆ ಗಾಡಿ ಹಳ್ಳಿಯನ್ನು ತಲುಪುತ್ತದೆ. ಗಾಡಿಯವನು 'ಬಾಬು, ಮಲಗಿದ್ದೀರೇನು?' ಎನ್ನುತ್ತಾನೆ. ಎಬ್ಬಿಸುತ್ತಾನೆ. ಬಾಬು ಏಳಲಾರದಂತಹ ನಿದ್ರೆಯ ವಶಕ್ಕೆ ಹೋಗಿದ್ದ. ಗಾಡಿಯವನು ಒಂದು ಅರಳಿಯ ಮರದ ಕೆಳಗೆ ದೇವದಾಸನನ್ನು ಮಲಗಿಸಿ ಹೋಗಿಬಿಡುತ್ತಾನೆ.

ಬೆಳಗಾದ ಮೇಲೆ ಜನ ಈ ಅನಾಥ ದೇಹದ ಸುತ್ತ ನೆರೆಯುತ್ತಾರೆ. ಡಾಕ್ಟರರೊಬ್ಬರು ಬಂದು ಕೈಹಿಡಿದು ನೋಡಿ 'ಅಂತಿಮಾವಸ್ಥೆ' ಎಂದು ಹೇಳಿ ಹೋಗಿಬಿಡುತ್ತಾರೆ. ಕೆಲಹೊತ್ತಿನ ಮೇಲೆ ತಾಲ ಸೋನಾಪುರದ ದೇವದಾಸ ಮುಖೋಪಾಧ್ಯಾಯ ಹಾದಿಯ ಹೆಣವಾಗಿ ಬಿದ್ದಿದ್ದಾನೆಂಬ ಸುದ್ದಿ ಪಾರ್ವತಿಗೆ ತಲುಪುತ್ತದೆ. ಮೈಯಲ್ಲಿ ಗಾಳಿ ತುಂಬಿದಂತೆ– 'ದೇವದಾಸ, ದೇವದಾಸ' ಎಂದು ತನ್ನೆಲ್ಲ ಶಕ್ತಿಯನ್ನು ಗಂಟಲಲ್ಲಿ ಹಾಕಿ ಕೂಗಿಕೊಂಡಾಗ ಇವಳಿಗೇನು ಹುಚ್ಚು ಹಿಡಿಯಿತೇ? ಎಂದು ಗಾಬರಿಗೊಂಡು ಆಕೆಯ ಪತಿ 'ಹಿಡಿಯಿರಿ, ಹಿಡಿಯಿರಿ' ಎಂದು ಆಕೆಯ ಬೆನ್ನು ಹತ್ತುತ್ತಾನೆ. ಇಷ್ಟು ದಿನ ತನ್ನ ಪತಿಯಿಂದ ಬಚ್ಚಿಟ್ಟ ಪ್ರೇಮವು ಇಂದು ಕಟ್ಟೆಯೊಡೆದು ಸೂಸಿ ಹರಿದಾಗ ಆ ಮುದಿ ಪತಿದೇವನಿಗೆ ಮಂಕು ಕವಿದಂತಾಗಿರಬೇಕು. ಮೂರ್ಛೆ ತಿಳಿದೆದ್ದ ಪಾರ್ವತಿ 'ರಾತ್ರಿಯೆ ಇಲ್ಲಿಗೆ ತಲುಪಿದರೆ? ಅಯ್ಯೋ ಇಡೀ ರಾತ್ರಿ ಹೀಗೇ ಬಿದ್ದಿದ್ದರೇ?' ಎಂದು ಉದ್ಗರಿಸಿದಾಗ ಓದುಗರು ಸಹ ಗದ್ಗದಿತರಾಗಬೇಕು.

ಪರಂಪರೆಯ ದಾಸ್ಯದಲ್ಲಿ ತೊಳಲಾಡುತ್ತಿರುವ ಸನಾತನ ಸಮಾಜದ ದೃಷ್ಟಿಯಿಂದ ನೋಡಿದರೆ ಪಾರ್ವತಿಯು ಸತಿಯಲ್ಲ, ಆದರೂ ಅವಳು ಅವಿಚಲಿತ ಪ್ರೇಮದೇವಿ' ಎಂದು ವಿಮರ್ಶಕರಾಡಿದ ಮಾತು ಸತ್ಯ. ದೇವದಾಸ ಅಗ್ನಿಸಾಕ್ಷಿಯಾಗಿ ವರಿಸಿದ ಗಂಡನಲ್ಲ, ಆದರೂ ಆತನೇ ಆಕೆಯ ಹೃದಯದ ಸ್ವಾಮಿ. ಆ ಸಪ್ತಪದಿಯ ಸ್ವಾಮಿ ಬೇರೆ. ಪಾರ್ವತಿಯಲ್ಲಿ ಸತಿತ್ವ ಮತ್ತು ಪ್ರೇಮಗಳ ದ್ವಂದ್ವ ನಡೆದು ಬಾಳಿನುದ್ದಕ್ಕೂ ಅದು ಅವಳನ್ನು ಘಾಸಿಗೊಳಿಸುತ್ತದೆ. ಈ ಬಗೆಯ ಮಾನಸಿಕ ಕೋಲಾಹಲದ ಮೂರ್ತಿ ಪಾರ್ವತಿ. ಇಂತಹ ಒಂದು ಸ್ತ್ರೀ ಪಾತ್ರವನ್ನು ರಚಿಸುವಲ್ಲಿ ಶರತ್‌ಚಂದ್ರರು ಸಮಕಾಲೀನ ಸಮಾಜದಲ್ಲಿ ಒಂದು ಕ್ರಾಂತಿಯನ್ನೇ ಎಸಗಿದರೆನ್ನಬಹುದು.

ಅದೇ ರೀತಿ ಚಂದ್ರಮುಖಿ ವೇಶ್ಯೆ ಎನಿಸಿಕೊಳ್ಳುವ ಒಬ್ಬ ದಲಿತ ಸ್ತ್ರೀಯಲ್ಲೂ ಗೃಹಿಣಿಪದದ ಹಂಬಲ ಯಾವ ರೀತಿ ಮೇಲುಗೈಯಾಗಿ ಅವಳನ್ನು ಪರಿವರ್ತನಗೊಳಿಸುತ್ತದೆ ಎಂಬುದನ್ನೂ ಚಂದ್ರಮುಖಿಯ ಪಾತ್ರದಲ್ಲಿ ಶರತ್‌ಚಂದ್ರರು ಕರುಳು ಕರಗುವ ಕಲಾತ್ಮಕತೆಯಿಂದ ವರ್ಣಿಸಿದ್ದಾರೆ. ಪಾರ್ವತಿ ಒಂದು ಮಾದರಿಯಾದರೆ, ಚಂದ್ರಮುಖಿ ಇನ್ನೊಂದು ಮಾದರಿ. ಸನಾತನ ಸಮಾಜದ ಕಣ್ಣಿಗೆ ಈ ಎರಡೂ ಮಾದರಿಗಳು ತ್ಯಾಜ್ಯ. ಹೀಗಿದ್ದೂ ಇಂತಹ ಸಾವಿಲ್ಲದ, ಕೇಡಿಲ್ಲದ ಶಾಶ್ವತ ಪಾತ್ರಗಳನ್ನೂ ನಿರ್ಮಿಸಿ ಅಂದಿನ ಸಮಾಜದ ಕಣ್ಣು ಕುಕ್ಕುವಂತೆ ಜೀವಂತ ವ್ಯಕ್ತಿಗಳನ್ನಾಗಿಸಿ ನಿಲ್ಲಿಸಿದ ಶರತ್‌ಚಂದ್ರರ ಧೈರ್ಯ ದೊಡ್ಡದು. ಗಂಡು–ಹೆಣ್ಣುಗಳ ಸಂಬಂಧ ಯಾವ ಪ್ರಕಾರದ್ದು, ಯಾವ ಮಟ್ಟದ್ದು ಎಂಬುದನ್ನು ಈ ಹೃದಯದ್ರಾವಕ ಕಾದಂಬರಿ ಸ್ಫುಟವಾಗಿ ಜೀವಂತವಾಗಿ ಚಿತ್ರಿಸುತ್ತದೆ. ಇದು ಈ ಒಂದು ಮಾನವೀಯ ಮೂಲ ದ್ರವ್ಯದಿಂದಾಗಿ ಮಾದಕತೆಯನ್ನು, ಮೋದಕತೆಯನ್ನು, ಮೋಹಕತೆಯನ್ನು ಮುಪ್ಪುರಿಗೊಂಡಿದೆ.

ಚರಿತ್ರಹೀನ ಎಂಬ ಶೀರ್ಷಿಕೆ ಒಂದಿಷ್ಟು ಸಂದಿಗ್ಧ ಎನಿಸಬಹುದಾಗಿದೆ. ಇಲ್ಲಿ ಚರಿತ್ರಹೀನರಾರು ? ಸಾವಿತ್ರಿಯೆ ? ಸತೀಶನೆ ? ಹೇಳಿ ಕೇಳಿ ಚರಿತ್ರಹೀನನಾದ ಬಿಪಿನ ಮೋಕ್ಷದಾ ಅಂತಹರು ಇಲ್ಲಿ ಕ್ಷುಲ್ಲಕ. ಈ ಕಾದಂಬರಿಯಲ್ಲಿ ಎದ್ದು ಕಾಣುವ ಪಾತ್ರವೆಂದರೆ ಸಾವಿತ್ರಿ. ಅವಳು ಒಬ್ಬ ದಾಸಿಯೆಂದೂ, ನೀಚಕುಲದವಳೆಂದೂ, ಚರಿತ್ರಹೀನಳೆಂದೂ ತಿಳುವಳಿಕೆ. ಆದರೆ ಆಕೆ ಯಾರು, ಏನಿದ್ದವಳು ಏನಾದಳು, ಸತೀಶ ಅವಳನ್ನು ಪ್ರೀತಿಸುತ್ತಿದ್ದರೂ ಅವಳೇಕೆ ಅವನಿಂದ ದೂರನಾದಳು ? ಅವಳು ಸತೀಶನನ್ನು ಪ್ರೀತಿಸುತ್ತಿರಲಿಲ್ಲವೆ ? ಇಲ್ಲದೆ ಏನು–ತನ್ನ ಮನೆಯ ದೇವರಿಗಿಂತ ಹೆಚ್ಚಾದ ಪೂಜ್ಯಭಾವದಿಂದ ಆತನನ್ನು ಪ್ರೀತಿಸಿದಳು, ಪೂಜಿಸಿದಳು. ಆದರೆ ಪತಿತವಾದ ತನ್ನ ದೇಹವನ್ನು ಅಂತಹ ಉಚ್ಚ ಸಜ್ಜನಿಕೆಯ ಸತೀಶನಿಗೆ ಒಪ್ಪಿಸಲು ಆಕೆಯ ಮನಸ್ಸು ಒಪ್ಪಲಿಲ್ಲ. ಕೊನೆಯಲ್ಲಿ ಎಲ್ಲವೂ ಬಯಲಾಗುತ್ತದೆ. ಸಾವಿತ್ರಿ ಸತೀಶನಿಗೆ ಹೇಳುತ್ತಾಳೆ : 'ನಿಮ್ಮನ್ನು ಪ್ರೀತಿಸುತ್ತೇನೊ ಇಲ್ಲವೊ ಎಂಬುದನ್ನು ಕೇಳುತ್ತೀರಾ ? ಇಲ್ಲವೆ ಹೋಗಿದ್ದರೆ ಯಾತರಿಂದ ನನಗೆ ಇಷ್ಟು ಬಲ ಬರುತ್ತಿತ್ತು ? ನನಗೇಕೆ ಇಷ್ಟು ಸುಖ ಆಗುತ್ತಿತ್ತು ? ಮತ್ತು ನನ್ನ ದುಃಖ ಇಷ್ಟು ಹಿರಿದು ಏಕೆ ಆಗುತ್ತಿತ್ತು ? ಇದೇ ಕಾರಣದಿಂದ ನಾನು ನಿಮಗೆ ಇಷ್ಟು ದುಃಖ ಕೊಟ್ಟೆ. ನಾನು ಯಾವ ತರದಿಂದಲೂ

ನನ್ನ ಈ ದೇಹವನ್ನು ನಿಮಗೆ ಒಪ್ಪಿಸಲಿಲ್ಲ. ಈಗಲಾದರೂ ನಿಮ್ಮೆದುರು ಏನನ್ನೂ ಮುಚ್ಚಿಡುವದಿಲ್ಲ. ಈ ದೇಹ ಇನ್ನೂ ನಷ್ಟವಾಗಿಲ್ಲ. ಆದರೆ ನಿಮ್ಮ ಚರಣಗಳಲ್ಲಿ ಅರ್ಪಿಸುವ ಮರ್ಯಾದೆ ಇದಕ್ಕಿಲ್ಲ. ಈ ದೇಹದ ಸಹಾಯದಿಂದ ನಾನು ತಿಳಿದೂ ತಿಳಿದೂ ಅನೇಕರನ್ನು ಮುಗ್ಧಗೊಳಿಸಿದ್ದೇನೆಂಬುದನ್ನು ನಾನು ಒಪ್ಪುವದಿಲ್ಲ. ಇದರಿಂದ ಯಾರದಾದರೂ ಸೇವೆಯಾಗಬಹುದು. ಆದರೆ ನಿಮ್ಮ ಪೂಜೆ ಇದರಿಂದಾಗದು. ನಾನು ಇಷ್ಟು ಪ್ರೀತಿ ಮಾಡದೆ ಹೋಗಿದ್ದರೆ ಬಹುಶಃ ಇಷ್ಟೊತ್ತು ನಿಮ್ಮನ್ನು ಬಿಟ್ಟು ನಾನು ಹೋಗುತ್ತಿದ್ದಿಲ್ಲ.'

ಕೊನೆಯ ವಾಕ್ಯವೊಂದೇ ಸಾಕು, ಸತೀಶನ ಮೇಲಿ ಸಾವಿತ್ರಿಯ ಪ್ರೇಮ ಎಂತಹ ಪವಿತ್ರ ಪ್ರಕಾರದ್ದಾಗಿತ್ತು ಎಂಬುದನ್ನು ಸಿದ್ಧಪಡಿಸಲು. ತನ್ನಂತಹ ಸ್ಥಾನಹೀನ ಸ್ತ್ರೀಯ ಪ್ರೇಮಪಾಶದಲ್ಲಿ ಸಿಲುಕಿ ಆತನ ವ್ಯಕ್ತಿತ್ವ, ಸಾಮಾಜಿಕ ಸ್ಥಾನಮಾನ ಭ್ರಷ್ಟವಾಗಬಾರದೆಂಬುದೆ ಅವಳ ಆಶೆ. ನಿಜವಾಗಿಯೂ ಸಾವಿತ್ರಿಬ್ರಾಹ್ಮಣರ ಮಗಳು. ಒಂಭತ್ತು ವರ್ಷದವಳಿದ್ದಾಗ ವಿಧವೆಯಾದಳು. ಅಂಥವಳು ಒಂದು ಹೊಟೆಲ್‌ನಲ್ಲಿ ಪರಿಚಾರಿಕೆಯಾಗಿ ಉಪಜೀವನ ನಡೆಸುತ್ತಿದ್ದಳೆಂದರೆ ಅವಳು ಉಚ್ಚತರಗತಿಯ ಕುಲವಧು ಎಂದು ಯಾರಾದರೂ ನಂಬಲಿಕ್ಕೆ ಸಾಧ್ಯವೇ ? ದೈವವು ಸಾವಿತ್ರಿಗೆ ವೈಧವ್ಯವನ್ನು ತಂದರೆ ಸಮಾಜವು ಅವಳಿಗೆ ಕಿರುಕುಳ ಕೊಟ್ಟು, ಸತೀಶನಿಗೂ ಅವಳಿಗೂ ಇಲ್ಲದ ಸಂಬಂಧ ಕಲ್ಪಿಸಿತು. ಕೊನೆಗೆ ಉಪೇಂದ್ರನೊಬ್ಬನು ಮಾತ್ರ ತನ್ನ ಅಂತ್ಯಕಾಲದಲ್ಲಿ ಸಾವಿತ್ರಿಯ ಕೈಯಲ್ಲಿ ದಿವಾಕರ ಸತೀಶರ ಭವಿಷ್ಯವನ್ನು ಒಪ್ಪಿಸಿ, 'ನಾನು ಸಾವಿತ್ರಿಯಲ್ಲಿ ಜೀವಿಸಿರುತ್ತೇನೆ. ನೀವು ಅವಳ ಅಪಮಾನ ಮಾಡಬಾರದು' ಎಂದು ಅವರಲ್ಲಿ ಮೊರೆ ಇಡುತ್ತಾನೆ. ಅಂತೂ ಸಾವಿತ್ರಿಯ ನಿಷ್ಕಳಂಕತೆ ಉಪೇಂದ್ರನಿಂದ ಪ್ರಕಟವಾಗುತ್ತದೆ. ಆದರೆ ಜೀವನದುದ್ದಕ್ಕೂ ಆಕೆಗೆ ಒಂಟಿತನ ತಪ್ಪಲಿಲ್ಲ.

ಸಾವಿತ್ರಿಯ ಬಗ್ಗೆ ಸತೀಶ ಆಗಾಗ ಸಂಶಯ ತೆಗೆದುಕೊಳ್ಳುತ್ತಿದ್ದರೂ ಸಾವಿತ್ರಿಯೇ ನಿಂತು ಸತೀಶನಿಗೆ ಸರೋಜಿನಿಯೊಡನೆ ವಿವಾಹ ಮಾಡಿಸಿದಳು. ತಾನು ದೇಹದಿಂದ ಸತೀಶನವಳಾಗದಿದ್ದರೂ ಆಕೆಯ ಮನಸ್ಸಿನ ಪ್ರಭು ಮಾತ್ರ ಸತೀಶನೆ ಎಂದು ದೇವರ ಸಾಕ್ಷಿ ಪ್ರತಿಜ್ಞೆ ಮಾಡಿ ಹೇಳುತ್ತಾಳೆ. 'ಎಲ್ಲಿಯವರೆಗೆ ನಾನು ಬದುಕಿರುವೆನೊ, ಯಾವ ಸ್ಥಿತಿಯಲ್ಲೆ ಆಗಲಿ ಇರುವೆನೊ ಮನಃಪೂರ್ವಕವಾಗಿ ಸದಾ ನಿಮ್ಮ ದಾಸಿಯಾಗಿರುವೆನು' ಎಂದು ನುಡಿಯುತ್ತಾಳೆ.

ಸಾವಿತ್ರಿಯ ತ್ಯಾಗ, ಸಮರ್ಪಣೆ, ನಿಷ್ಠೆಗಳನ್ನು ನೆನೆದಾಗ ಆಕೆ ತನ್ನ ಅನಾಥ ಬಾಲ್ಯದಲ್ಲಿ ಯಾವುದೇ ದೌರ್ಜನ್ಯಕ್ಕೆ ಗುರಿಯಾಗಿದ್ದರೂ ಆಕೆ ನಿರ್ದೋಷಿ, ಗೌರವಯೋಗ್ಯ ಎಂದೇ ನಾವು ಭಾವಿಸಬೇಕಾಗುತ್ತದೆ.

ಆದರೆ ಕಿರಣ್ಮಯಿಯ ಪಾತ್ರ ಒಂದಿಷ್ಟು ವಿಚಿತ್ರವೂ ಕ್ಲಿಷ್ಟವೂ ಆಗಿದೆ. ಅವಳು ಹಾರಾನ್‌ಬಾಬುವನ್ನು ಪಾಣಿಗ್ರಹಣ ಮಾಡಿದಳು. ಆದರೆ ಪ್ರೇಮವೆಂಬ ವಸ್ತುವನ್ನು ಆತನಲ್ಲಿ ಕಾಣಲಿಲ್ಲ. ಚಿರಕಾಲರೋಗಿಯಾದ ಹಾರಾನ್‌ಬಾಬುವಿಗೆ ಉಪಚರಿಸಲು ಬರುತ್ತಿದ್ದ ಡಾಕ್ಟರನು ಕಿರಣ್ಮಯಿಯ ಮೋಹಕ ಚೆಲುವಿಕೆಗೆ ಮುಗ್ಧನಾಗಿ ಆಕೆಯನ್ನು ಒಲಿಸಿಕೊಳ್ಳಲು ಯತ್ನಿಸಿದ. ಆದರೆ ಆಕೆಗೆ ಆತನಿಂದ ದೊರಕಿದುದು

ಹಾಲಾಹಲ. ಉಪೇಂದ್ರನಿಂದ ಆಕೆಗೆ ಅಮೃತ ದೊರಕಬಹುದಿತ್ತು. ಆದರೆ ಉಪೇಂದ್ರ ಅದನ್ನು ಅವಳಿಗೆ ಕೈಚಾಚಿ ನೀಡಲಿಲ್ಲ. ಕೊನೆಗೆ ತನಗಿಂತ ಚಿಕ್ಕವನಾದ ದಿವಾಕರ ನನ್ನು ಒಂದು ಬಗೆಯ ಸೇಡಿನಿಂದ ಪ್ರೇಮಿಸತೊಡಗಿದಳು.

(ಕಿರಣ್ಮಯಿಯ ಪತಿ ಹಾರನ್‌ಬಾಬು ಸಾಯುವ ಮುಂದೆ ತನ್ನ ಮೃತ್ಯುಪತ್ರ ವನ್ನು ಉಪೇಂದ್ರನ ವಶಕ್ಕೆ ಕೊಟ್ಟು ಸಾಯುತ್ತಾನೆ. ಅದರ ಮೇರೆಗೆ ಅವನು ತನ್ನ ಆಸ್ತಿಯನ್ನು ಉಪೇಂದ್ರನ ವಶಕ್ಕೆ ಬಿಟ್ಟು, ಕಿರಣ್ಮಯಿಯನ್ನು ಆತನು ಸಲಹಬೇಕಿತ್ತು ಕಿರಣ್ಮಯಿಯ ಅಭಿಮಾನಕ್ಕೆ ಇದರಿಂದ ಒಳ್ಳೆಯ ಪೆಟ್ಟು ಬಿದ್ದಂತಾಗಿತ್ತು. ತನ್ನ ದೂರದ ತಮ್ಮನಾದ ದಿವಾಕರನನ್ನು ಉಪೇಂದ್ರನೇ ವಿಧವೆಯಾದ ಕಿರಣ್ಮಯಿಯಲ್ಲಿ ಕಲಿಯಲಿಕ್ಕೆಂದು ಇಟ್ಟಿದ್ದ) ಅವನನ್ನು ಓಡಿಸಿಕೊಂಡು ಬರ್ಮಾಕ್ಕೆ ಹೋಗಿಬಿಡು ತ್ತಾಳೆ. ಅಲ್ಲಿ ಸ್ವೇಚ್ಛಾಚಾರ, ಸ್ವೈರಾಚಾರದಿಂದ ಇರತೊಡಗುತ್ತಾಳೆ. ಕಿರಣ್ಮಯಿ-ದಿವಾಕರರಲ್ಲಿ ಜಗಳಕ್ಕೆ ಮೊದಲಾಗಿ ಅವರು ಬೇರೆ ಬೇರೆ ಇರತೊಡಗುತ್ತಾರೆ. ಕಿರಣ್ಮಯಿಗೆ ದಿವಾಕರನಲ್ಲಾಗಲಿ, ಇನ್ನಾರಲ್ಲಾಗಲಿ ನಿಜವಾದ ಪ್ರೇಮ ಇರಲಿಲ್ಲ. ಆಕೆಯ ನಿಜವಾದ ಪ್ರೇಮ ಇದ್ದುದು ಸಾಧ್ವಿಯೂ ಸುಂದರಿಯೂ ಆದ ಸುರಬಾಲೆಯ ಪತಿ ಉಪೇಂದ್ರನಲ್ಲಿ. ಕೊನೆಗೆ ಬರ್ಮಾ ಬದುಕು ಕಹಿಯಾಗಿ ಸತೀಶನೊಂದಿಗೆ ಹಿಂದಿ ರುಗಿದಾಗ ಆಕೆ ಹುಚ್ಚಿಯಾದಂತಾಗಿರುತ್ತಾಳೆ. ಹೀಗೆ ಪ್ರೇಮದ ಸಾಫಲ್ಯವನ್ನು ಕಾಣದ ನಿರಾಶೆಯ ಬದುಕು ಕಿರಣ್ಮಯಿಯದು.

ಕಿರಣ್ಮಯಿಯ ಪಾತ್ರವನ್ನು ನಿಜವಾದ ಪತಿತಳನ್ನಾಗಿ ಚಿತ್ರಿಸಿದ ಶರತರು ಅವಳ ಬಗ್ಗೆ ತಿರಸ್ಕಾರವನ್ನು ತೋರಿಲ್ಲ. ಆದರೆ ಅವಳಿಗಿಂತ ಸುರಬಾಲೆ, ಸಾವಿತ್ರಿ ಯರ ಪಾತ್ರಗಳನ್ನು ಎತ್ತರಿಸಿ ಅದರ ವಿರೋಧಾಭಾಸವನ್ನು ನಮ್ಮ ಊಹೆಗೇ ಬಿಟ್ಟಿ ದ್ದಾರೆ. ನಾರಿಯ ಪತಿತತ್ವ ಸಹಾನುಭೂತಿಗೆ ಅರ್ಹವಾದೀತು ಆದರೆ ಗೌರವಕ್ಕೆ ಪಾತ್ರವಾಗಲಾರದು ಎಂಬ ಮಾತು ನಿಚ್ಚಳವಾಗುತ್ತದೆ.

ಚಂದ್ರನಾಥ ಕಾದಂಬರಿಯ ಸರಯೂ ತನ್ನ ಕಷ್ಟ ಸಹಿಷ್ಣುತೆಯಿಂದಾಗಿ ನಮ್ಮ ಮನಃಪಟಲದ ಮೇಲೆ ಅಚ್ಚಳಿಯದಂತೆ ಮೂಡಿ ನಿಲ್ಲುತ್ತಾಳೆ. ಇಲ್ಲಿ ಒಬ್ಬ ನಾರಿ ಸಬಲೆಯಾಗಿ ಚಿತ್ರಿತಳಾಗಿದ್ದಾಳೆ. ಸರಯೂ ಒಬ್ಬ ಕುಲಹೀನ ವಿಧವೆಗೆ ಹುಟ್ಟಿದ ಮಗಳು ಎಂದು ಅರಿಯದ ಚಂದ್ರನಾಥ ಅವಳನ್ನು ಮದುವೆಯಾಗುತ್ತಾನೆ. ಸರಯೂ ತಾಯಿಯೂ ಆಗಲಿದ್ದಾಳೆ. ಆಗ ಆಕೆಯ ಕುಲವನ್ನು ಶಂಕಿಸಿದ ಚಂದ್ರ ನಾಥನ ಸನಾತನೀ ಮಾಮಾ ಅವಳನ್ನು ತ್ಯಜಿಸಲು ಪ್ರಚೋದಿಸುತ್ತಾನೆ. ಚಂದ್ರನಾಥ ಅವಳಿಗೆ ವಿಷಪಾನ ಮಾಡು ಎಂದು ಹೇಳಲೂ ಹೇಸುವದಿಲ್ಲ. ಸರಯೂ ಚಂದ್ರ ನಾಥನ ಮನೆ ಬಿಟ್ಟು ಹೋಗುತ್ತಾಳೆ. ತಾಯಿಯಾಗಿ ಶಕುಂತಲೆ ಭರತನನ್ನು ಬೆಳೆಸಿ ದಂತೆ, ವನವಾಸಿ ಸೀತೆ ಲವ-ಕುಶರನ್ನು ಬೆಳೆಸಿದಂತೆ ತನ್ನ ಮಗುವನ್ನು ಪೋಷಿಸು ತ್ತಾಳೆ. ಬಾಳಿನ ಬಿರುಗಾಳಿಗೆ ಗಟ್ಟಿಗತನದಿಂದ ಎದೆಯೊಡ್ಡಿ ನಿಲ್ಲುತ್ತಾಳೆ. ಮುಂದೆ ಹೇಗೋ ಸರಯೂ ಮತ್ತು ಚಂದ್ರನಾಥರ ನಡುವೆ ನಿಂತಿದ್ದ ಪೊಳ್ಳು ಕುಲಮರ್ಯಾ ದೆಯ ಗೋಡೆ ಕುಸಿದು ಬಿದ್ದು ಬದುಕು ಸಹ್ಯವೂ ಸುಖಾಂತವೂ ಆಗುತ್ತದೆ.

ಶರತ್ತರು ಈ ಕಾದಂಬರಿಯ ಮುಖಾಂತರ ಸಾಮಾಜಿಕ ಕ್ರಾಂತಿಯ ಸಂದೇಶ ಬೀರಿದ್ದಾರೆ. ಇದರ ಒಂದೊಂದು ಅಕ್ಷರವೂ ಸರಯೂಳ ಒಂದೊಂದು ಕಂಬನಿಯಂತೆ ಮರ್ಮಸ್ಪರ್ಶಿ.

ಶರತ್‌ಚಂದ್ರರು ತಮ್ಮ ಸಮಕಾಲೀನ ಸಮಾಜದ ಮಾನವತಾಹೀನ ಕ್ರೌರ್ಯದ ಕಾಡುರೂಢಿಗಳನ್ನು ಅಳಿಸಿಹಾಕುವಂತೆ, ವಾಚಕರ ಹೃದಯ ಕರಗುವಂತೆ ಹೆಣ್ಣಿನ ವಿಮೋಚನೆಯ ಬಗೆಗಿನ ಸುಮಾರು ನಲವತ್ತು ಕಾದಂಬರಿಗಳನ್ನು ಬರೆದರು. ಸ್ವತಃ ಶರತ್‌ಚಂದ್ರರು ತಮ್ಮ ಜೀವನದಲ್ಲಿ ಮಾನವೀಯ ಸಂಬಂಧಗಳಿಂದ ವಂಚಿತರಾದವರು. ಹೊಟ್ಟೆ ಹೊರೆಯುವದಕ್ಕೆ ಬರ್ಮಾದೇಶಕ್ಕೆ ವಲಸೆ ಹೋಗಿ ರಂಗೂನಿನಲ್ಲಿ ಒಂದು ಕಾರಕೂನಿಕೆಯ ನೌಕರಿ ಹಿಡಿದು ಬಾಳ ನೌಕೆಗೆ ಹುಟ್ಟು ಹಾಕುತ್ತಾರೆ. ದಿನಗಳೆದಂತೆ ಸಮಾಜದ ತುಳಿತಕ್ಕೆ ಸಿಕ್ಕ ಹೆಣ್ಣಿಗಾಗಿ ಕಣ್ಣೀರು ಹಾಕುತ್ತಾರೆ. ಸಂಪ್ರದಾಯದ ಗದ್ದುಗೆಯನ್ನೇರಿ ಹೆಣ್ಣನ್ನು ಗುಲಾಮಳಂತೆ, ಬಂಧಿತಳಂತೆ ನಡೆಸಿಕೊಳ್ಳುವ ಪ್ರತಿಷ್ಠಿತ ಪರಂಪರೆಯ ವಿರುದ್ಧ ಸಾತ್ವಿಕ ಕ್ರೋಧ ತಳೆಯುತ್ತಾರೆ. ರಂಗೂನಿನಂತಹ ಏಕಾಂತ ಸ್ಥಳದಲ್ಲಿ ಕುಳಿತು ತಮ್ಮ ಸಮಾಜದ ಕುರುಡುತನದ ಬಗ್ಗೆ, ತಮ್ಮ ಸಮಾಜದಲ್ಲಿಯ ಹೆಣ್ಣಿನ ದುರವಸ್ಥೆಯ ಬಗ್ಗೆ ಚಿಂತನಶೀಲರಾಗಿ ಪರಿಹಾರವೇನು ಎಂದು ಆಲೋಚನೆ ನಡೆಸುತ್ತಾರೆ. 'ಮಾತೃದೇವೋಭವ' ಎಂಬ ವೇದಮಂತ್ರದಲ್ಲಿ ಶ್ರದ್ಧೆಯಿರಿಸಿ ನಾರಿಯರಲ್ಲಿ ಪೂಜನೀಯ ಗುಣಗಳನ್ನು ಕಂಡು ಕಾದಂಬರಿಗಳಲ್ಲಿ ನಿರೂಪಿಸತೊಡಗುತ್ತಾರೆ. ಹೆಣ್ಣಿನ ಮೇಲಿನ ದಬ್ಬಾಳಿಕೆಯನ್ನು ವಿರೋಧಿಸತೊಡಗುತ್ತಾರೆ.

ಯುಗ ಪ್ರವರ್ತಕ ಗಾಂಧೀಜಿ ಗುಜರಾತಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಆಡಿದ ಈ ನುಡಿಗಳು ಶರತ್‌ಚಂದ್ರರ ಮೇಲೆ ಪ್ರಭಾವ ಬೀರಿದ್ದವೆಂದು ತಿಳಿಯುತ್ತದೆ—"ಸಾಹಿತ್ಯಕ್ಕಾಗಿ ನೀವು ಲೆಕ್ಕಣಿಕೆಯನ್ನು ಎತ್ತಿಕೊಳ್ಳಬೇಕಾದರೆ ಸ್ತ್ರೀಯರು ತಾಯಂದಿರು ಎಂಬುದನ್ನು ಯೋಚಿಸಿ ಎತ್ತಿಕೊಳ್ಳಿರಿ. ಈ ವಿಚಾರದಿಂದ ನೀವು ಬರೆದಾಗ ನಿಮ್ಮ ಲೆಕ್ಕಣಿಕೆಯಿಂದ ಸ್ತ್ರೀಯರ ಬಗ್ಗೆ ಹೊರಬಂದುದು ಪೃಥ್ವಿಯೆಂಬ ಸ್ತ್ರೀಯನ್ನು ಫಲವತಿಯನ್ನಾಗಿ ಮಾಡುವ ಮೋಡಗಳಂತೆ ಸುಂದರವೂ, ಫಲಪ್ರದವೂ ಆಗುವುದು." ಶರತ್‌ಚಂದ್ರರು ಈ ಹಿತವಚನದ ಬಲುಮೆಯಿಂದ, ಅನುಕಂಪದ ಪ್ರೇರಣೆಯಿಂದ ಹೆಣ್ಣಿನಲ್ಲಿ ಮಾತೃತ್ವವನ್ನು ಕಂಡು ಬಂಗಾಲಿ ಸಾಹಿತ್ಯದಲ್ಲಿ **ಚರಿತ್ರಹೀನ**ದ ಸಾವಿತ್ರಿ, **ಚಂದ್ರನಾಥ**ದ ಸರಯೂ, **ಸ್ವಾಮಿ**ಯ ಸೌದಾಮಿನಿ, **ಗೃಹದಾಹ**ದ ಅಚಲಾ, **ಶ್ರೀಕಾಂತ**ದ ರಾಜ್ಯಲಕ್ಷ್ಮಿ, **ಬಾಮುನೇರ ಮೇಯೆ**ಯ ಸಂಧ್ಯಾ, **ಶೇಷಪ್ರಶ್ನೆ**ಯ ಕಮಲರಂತಹ ಪಾತ್ರಗಳನ್ನು ನಿರ್ಮಿಸಿ ಸಮಾಜದ ಕಣ್ಣಲ್ಲಿ ಹೆಣ್ಣಿನ ಸ್ಥಾನಮಾನವನ್ನು ಹೆಚ್ಚಿಸಿದರು.

ಸ್ತ್ರೀಯ ಚೆಲುವಿಕೆಯನ್ನು ಬಣ್ಣಿಸುವಾಗಲೂ ಶರತ್‌ಚಂದ್ರರು ಆ ಶಬ್ದಗಳಿಗೆ ಅಶ್ಲೀಲತೆಯ ಸೋಂಕು-ಛಾಯೆಗಳು ತಗಲದಂತೆ ಎಚ್ಚರವಹಿಸಿದ್ದಾರೆ. ನಾರಿಯ ಅಂತರಂಗದ ಶೀಲ-ಸೌಂದರ್ಯವನ್ನು ಆಕೆಯ ಕಷ್ಟ ಸಹಿಷ್ಣುತೆಯನ್ನು ಹೆಚ್ಚಾಗಿ ಚಿತ್ರಿಸಿದ್ದಾರೆ. ಶೃಂಗಾರ ಸನ್ನಿವೇಶಗಳಲ್ಲಿ ಸಹ ಚುಂಬನ, ಆಲಿಂಗನಗಳನ್ನು ಉದ್ದೇಶಪೂರ್ವಕವಾಗಿ ದೂರ ಇರಿಸಿದರು. ಇಂದಿನ ನವ್ಯ ಕಾದಂಬರಿಕಾರರಂತೆ

ಶರತ್‌ಚಂದ್ರರು ಸ್ವಾತಂತ್ರ್ಯವಹಿಸಿದ್ದರೆ, ಚಂದ್ರಮುಖಿಯ ಮನೆಗೆ ಬರುವ ಕುಡುಕ ವಿಟಪುರುಷರು, ದೇವದಾಸ ಮತ್ತು ಪಾರು ಏಕಾಂತದಲ್ಲಿ ಸಾಧಿಸುವ ಸಂದರ್ಭಗಳು, **ಚರಿತ್ರಹೀನ**ದಲ್ಲಿ ಸಾವಿತ್ರಿ–ಸತೀಶ, ಬಿಪಿನ್–ಸರೋಜ್ಞದಾ ಕಿರಣ್ಮಯಿ–ದಿವಾಕರ ಹೀಗೆ ಅತಿಶೃಂಗಾರಕ್ಕೆ ಅತ್ಯಂತ ಸಮಯೋಚಿತ ಪ್ರಸಂಗಗಳು ದೊರೆಯುತ್ತಿದ್ದೂ ಅವುಗಳನ್ನು ಉಚ್ಛೃಂಖಲ ವೃತ್ತಿಯಿಂದ ಚಿತ್ರಿಸಿ ತೋರಿಸಬಹುದಿತ್ತು. ಆದರೆ ಅವರು ಹಾಗೆ ಮಾಡದೆ ಹೆಣ್ಣು–ಗಂಡಿನ ಸ್ವಭಾವವನ್ನು ಮಾತ್ರ ಚಿತ್ರಿಸಿದರು.

ಚರಿತ್ರಹೀನ ಕಾದಂಬರಿಯ ವಿರುದ್ಧ ಪ್ರದರ್ಶನ ನಡೆಸಲು ಬಂದಿದ್ದ ತರುಣರನ್ನುದ್ದೇಶಿಸಿ ಶರತ್‌ಚಂದ್ರರು ನುಡಿದ ಮಾತುಗಳು ಮನದಾಳದಲ್ಲಿ ನಿರಂತರ ಉಳಿಯಬಲ್ಲವು : “ಬಂಕಿಮ ಬಾಬುಗಳ **ಕೃಷ್ಣಕಾಂತೇರ್ ಉಯಿಲ್** ಮತ್ತು ರವೀಂದ್ರನಾಥರ **ಚೋಖೇರ್‌ಬಾಲಿ** ಇವುಗಳ ಬಗ್ಗೆ ನಿಮಗೆ ವಿರೋಧವಿಲ್ಲ. ನಿಮಗೆ ನನ್ನ ಸಾವಿತ್ರಿಯ ಬಗ್ಗೆ ವಿರೋಧವೇಕೆ ? ಸಾವಿತ್ರಿ ಏನು ತಪ್ಪುಮಾಡಿದ್ದಾಳೆ ? ಅವಳು ಸತೀಶನನ್ನು ಪ್ರೀತಿಸುತ್ತಿದ್ದಳು. ಆದರೆ ಅವಳೇ ತಾನಾಗಿ ಅವನನ್ನು ದೂರ ಸರಿಸಿದಳು. ಆಕೆಗೆ ಭೋಗದ ಲಾಲಸೆಯೂ ಇರಲಿಲ್ಲ. ಹಣದ ಪಿಪಾಸೆಯೂ ಇರಲಿಲ್ಲ. ಸಾವಿತ್ರಿಯೇ ಸರೋಜಿನಿಯೊಡನೆ ಸತೀಶನ ವಿವಾಹ ಮಾಡಿಸಿದಳು. ಸತೀಶನಿಗೆ ಅವಳು ಸರ್ವಸ್ವವನ್ನು ಅರ್ಪಿಸಿದ್ದರೂ ಅವನ ಪತ್ನಿಯಾಗಲಿಲ್ಲ. ಸಾವಿತ್ರಿಯ ಪ್ರೇಮ ಗಂಗೆಯಲ್ಲಿ ಮಿಂದು ಸತೀಶನಂಥ ಉಡಾಳನ ಜೀವನ ಸುಂದರವಾಯಿತು, ಸಾರ್ಥಕವಾಯಿತು. ಇಷ್ಟಿದ್ದರೂ ನಿಮಗೆ ಆಕೆಯಲ್ಲಿ ಒಳ್ಳೆಯತನ ಕಾಣಲಿಲ್ಲವೇ ? ನೀವು ಕೆಸರನ್ನೇ ಕಂಡಿರಿ. ಕೆಸರೇ ನಿಮ್ಮ ದೃಷ್ಟಿಯಲ್ಲಿ ಉಳಿದು ಹೋಗಿರುವದೇ ? ಶರೀರವೇ ಸರ್ವಸ್ವವೇನು ? ಮನಸ್ಸಿಗೆ ಬೆಲೆಯೇ ಇಲ್ಲವೇನು ? ಸಾವಿತ್ರಿಯ ಚರಿತ್ರ ಚಿತ್ರಣ ಮಾಡಿ ನಾನು ಸಮಾಜದ ವಿರುದ್ಧ ಮಾಡಿದ ಆಚರಣೆ ಯಾವುದು ? ನಾನು ಸತೀಶನೊಡನೆ ಸಾವಿತ್ರಿಯ ವಿವಾಹ ಮಾಡಿಸಿಜೆನೆ? ನಿಮ್ಮ ವಿರೋಧವಿರುವದಾದರೂ ಯಾತರ ಬಗ್ಗೆ ? ಸತೀತ್ವ ಮತ್ತು ನಾರೀತ್ವ ಒಂದೇ ಏನು ? ಕ್ಷಣಿಕ ತಪ್ಪಿನಿಂದ, ಮರೆವಿನಿಂದ ಸಾವಿತ್ರಿಯ ಸತ್ವೀತವೇ ನಷ್ಟವಾಯಿತೇನು ? ಆಕೆಯ ಮನುಷ್ಯತ್ವಕ್ಕೆ ಬೆಲೆಯೇ ಇಲ್ಲವೇನು ? ಕಿರಣ್ಮಯಿಯ ಮೂಲಕ ನಾನು ನಾರಿಯ ಜೀವನದ ವ್ಯರ್ಥತೆಯನ್ನು ವರ್ಣಿಸಿದ್ದೇನೆ. ಸಮಾಜದ ವಿರುದ್ಧ ನಾನು ದ್ರೋಹ ಬಗೆದಿಲ್ಲ. ಸಾಹಿತ್ಯದ ಮುಖಾಂತರವೆ ಮನುಷ್ಯ ದೊಡ್ಡವನಾಗುತ್ತಾನೆ. ಅವನ ದೃಷ್ಟಿ ಉದಾರವಾಗುತ್ತದೆ. ಅವನ ಮನಸ್ಸು ಸಹಿಷ್ಣುವಾಗುತ್ತದೆ. ಈ ಮಾತನ್ನು ನೀವು ಒಪ್ಪುವದಿಲ್ಲವೇನು ?”

ಸಮಕಾಲೀನ ಶಿಷ್ಟವರ್ಗದಿಂದ ಅನೀತಿ ವ್ಯಭಿಚಾರಗಳ ಪ್ರಚಾರಕ ಎಂದು ತೆಗಳಿಕೆ ಬಂದರೂ ಶರತರು ಜಗ್ಗಲಿಲ್ಲ. ಅವರಿಗೆ ತಾವು ಸೃಷ್ಟಿಸಿದ ಪಾತ್ರಗಳೆಂದರೆ ತಾವು ಹಡೆದ ಶಿಶುಗಳಿದ್ದಂತೆ ಎನಿಸಿತ್ತು. ತಮ್ಮ ಉಚ್ಚ ಪಾತ್ರಗಳನ್ನು ಪ್ರೀತಿಸಿದಷ್ಟೇ ನೀಚ ಪಾತ್ರಗಳನ್ನೂ ಪ್ರೀತಿಸುತ್ತಿದ್ದರಂತೆ. ನಿಜವಾದ ಕಲಾಭಿಜ್ಞ ಕಾದಂಬರಿಕಾರನ ಯಶಸ್ಸು ಕೇವಲ ಉಚ್ಚ, ಉದಾತ್ತ ಪಾತ್ರಗಳನ್ನು ನಿರ್ಮಿಸುವಲ್ಲಿ ಅಷ್ಟೇ ಅಲ್ಲ, ನೀಚ, ವ್ಯಭಿಚಾರಿ ಪಾತ್ರಗಳನ್ನು ಸಹ ಅಷ್ಟೇ ಯಶಸ್ವಿಯಾಗಿ ನಿರ್ಮಿಸುವಲ್ಲಿ

ಆತನ ಮೇಲ್ಮೈ ಅಡಗಿದೆ. ಕಾದಂಬರಿಕಾರ ತನ್ನ ಪಾತ್ರಗಳೊಂದಿಗೆ ತಾದಾತ್ಮ್ಯ ಹೊಂದಿದರೇನೆ ಆತ ಪ್ರತಿಭಾವಂತ ಕಲಾವಿದನಾಗುತ್ತಾನೆ, ರಸಯೋಗಿಯಾಗುತ್ತಾನೆ. ಕಾದಂಬರಿಯ ಕಥೆ ಸಫಲ ಪ್ರೇಮವೆ ಇರಲಿ, ಅಸಫಲ ಪ್ರೇಮವೆ ಆಗಿರಲಿ, ಸುಖಾಂತವೆ ಇರಲಿ, ದುಃಖಾಂತವೆ ಆಗಿರಲಿ ಕತೆಗಾರ ಕಂಡ ಜೀವನದರ್ಶನ ಅಲ್ಲಿ ಪ್ರತಿಬಿಂಬಿತವಾಗಬೇಕು. ಈ ದೃಷ್ಟಿಯಿಂದ ಶರತರ ಪಾತ್ರಗಳೆಲ್ಲ ಅವರ ಜೀವನ ದರ್ಶನದ ಒಂದೊಂದು ನೋಟವಾಗಿ ಮೂಡಿವೆ; ಒಂದೊಂದು ಪ್ರಭೆಯಾಗಿ ಬೆಳಗಿವೆ. ಅದರಲ್ಲೂ ಅವರ ಸ್ತ್ರೀಪಾತ್ರಗಳು ಜೀವನ ವೃಕ್ಷದ ಜೀವಂತ ಪುಷ್ಪಗಳಾಗಿ ಅರಳಿವೆ.

ಶರತ್‌ಚಂದ್ರರಿಗೆ ಮಾತೃಸ್ವರೂಪಿ ಸ್ತ್ರೀಯರ ಬಗ್ಗೆ ನಡೆಯುತ್ತಿರುವ ಸಮಾಜದ ಅತ್ಯಾಚಾರಗಳನ್ನು ಸಹಿಸಲಾಗುತ್ತಿರಲಿಲ್ಲ. ಅವರು ಶಾಸಕರಾಗಿ, ಪ್ರಚಾರಕರಾಗಿ ವೇದಿಕೆಗಳಿಂದ ನ್ಯಾಯಾಲಯಗಳ ಮೂಲಕ, ಶಾಸನಸಭೆಗಳ ಮೂಲಕ ತಮ್ಮ ವಿಚಾರಗಳನ್ನು ಪ್ರಕಟಿಸದೆ ಕಲಾಭಿಜ್ಞ ಶಿಲ್ಪಿಯಾಗಿ ಜೀವಂತ, ಹೃದಯವಂತ ಸ್ತ್ರೀ ಪಾತ್ರಗಳನ್ನು ನಿರ್ಮಿಸಿ ತನ್ಮೂಲಕ ಸಮಾಜದ ಹೃದಯವನ್ನು ಪರಿವರ್ತಿಸಲು ಪ್ರಯತ್ನಿಸಿದರು.

ಶರತ್‌ಚಂದ್ರರ ಸ್ತ್ರೀಪಾತ್ರಗಳು ಸ್ತ್ರೀ ಹೃದಯದ ಹಲವಾರು ಮುಖಗಳ ದರ್ಶನ ವನ್ನು ನೀಡುತ್ತವೆ. ನಿಜವಾದ ಸ್ತ್ರೀ ಹೃದಯ ಪುರುಷಸಂಬಂಧದಲ್ಲಿಯೆ ಸ್ಫುಟವಾಗಿ ವ್ಯಕ್ತವಾಗುತ್ತದೆ. ಇದೇ ದೃಷ್ಟಿಯಿಂದಲೆ ಶರತರು **ದೇವದಾಸ, ವಿಪ್ರದಾಸ, ಕಾಶೀನಾಥ, ಚಂದ್ರನಾಥ, ಶ್ರೀಕಾಂತ, ಸ್ವಾಮಿ** ಮೊದಲಾದ ಪುರುಷನಾಯಕರ ಹೆಸರಿನ ಕಾದಂಬರಿಗಳನ್ನು ರಚಿಸಿದಂತೆ ಕಾಣುತ್ತದೆ. **ಶೇಷಪ್ರಶ್ನೆ, ಪ್ರೇಮಪಥ, ಹಳ್ಳಿಯ ಸಮಾಜ** ಮೊದಲಾದ ಕಾದಂಬರಿಗಳಲ್ಲಿಯೂ ಕೂಡ ಗಂಡು ಹೆಣ್ಣಿನ ಸಂಬಂಧದ ಒಂದು ಸ್ವರೂಪ, ಒಂದು ಸಮಸ್ಯೆ ಚಿತ್ರಿತವಾಗಿದೆ. ಇವರ ಸ್ತ್ರೀಪಾತ್ರ ಗಳಲ್ಲಿ ಸಾಧ್ವಿಯರಿದ್ದಾರೆ, ಪೂಜನೀಯ ಮಾತೆಯರಿದ್ದಾರೆ, ಪ್ರೇಮದ ಪುತ್ಥಳಿಗಳಾ ಗಿದ್ದಾರೆ, ತ್ಯಾಗಿಗಳಿದ್ದಾರೆ, ಹುತಾತ್ಮಜೀವಿಗಳಿದ್ದಾರೆ, ಕಠೋರ ಹೃದಯಿಗಳಿದ್ದಾರೆ, ಚರಿತ್ರಹೀನರಿದ್ದಾರೆ. ವೃದ್ಧ–ಮುತ್ತೈದೆಯರು, ಬಾಲವಿಧವೆಯರು, ವೇಶ್ಯೆಯರು, ಗೃಹಿಣಿಯರು ವಿಷಮದಾಂಪತ್ಯ ವ್ಯಥಿತೆಯರು, ಪರಿತ್ಯಕ್ತೆಯರು, ವಿಲಾಸಿನಿಯರು, ಸುವಾಸಿನಿಯರು ಹೀಗೆ ಸ್ತ್ರೀ ಸಮಾಜದ ಬಹುಮುಖ, ಬಹುರೂಪೀ ವ್ಯಕ್ತಿಗಳು ಶರತ್ ಚಂದ್ರರ ಮಾನಸಪುತ್ರಿಯರಾಗಿದ್ದಾರೆ.

○

ಕುವೆಂಪು ದೃಷ್ಟಿಯಲ್ಲಿ ಸ್ತ್ರೀ

ಎನ್. ಬೋರಲಿಂಗಯ್ಯ

೧

ಈಗಿರುವಂತೆ ನಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಲೋಪದೋಷಗಳನ್ನು ಕುರಿತು ಚಿಂತಿಸುವಾಗ ಇದಕ್ಕೆ ಬಹುಮಟ್ಟಿಗೆ ಮಹಿಳೆಯ ಬುದ್ಧಿಪೂರ್ವಕವಲ್ಲದ, ಕೇವಲ ಅಂಧಾನುಕರಣೆಯ ಶ್ರದ್ಧಾಜೀವನವೇ ಹೆಚ್ಚು ಗಂಭೀರ ಕಾರಣವಾಗಿ ಕಾಣಿಸುತ್ತದೆ, ಎಂಬುದನ್ನು ನಾವು ಅಲಕ್ಷಿಸುವಂತಿಲ್ಲ. ವಿದ್ಯಾವಿಹೀನಳಾದ ಮಹಿಳೆಯ ಬದುಕು ಒಂದು ಬಗೆಯ ಎಲೆಮರೆಯ ಕಾಯಿಯಂತೆ ಅಜ್ಞಾತ ಬದುಕಾದದ್ದರಿಂದ ಸಾವಿರಾರು ವರ್ಷಗಳಿಂದ ಜಗತ್ತಿನ ಸಕಲ ಧರ್ಮಸಾಹಿತ್ಯ ಶಾಸ್ತ್ರಾದಿಗಳಿಂದಲೂ ಆಕೆ ದೂರವೇ ಉಳಿಯಬೇಕಾಗಿ ಬಂದದ್ದು ಆಶ್ಚರ್ಯವೇನಲ್ಲ. ಸದ್ದುಗದ್ದಲಗಳನ್ನೆ ಮಾನ್ಯ ಮಾಡುವ ನಮ್ಮ ಸಂಸ್ಕೃತಿಯಲ್ಲಿ ಮಹಿಳೆಯ ನೀರವ ಬದುಕು ನಿರ್ಲಕ್ಷ್ಯಕ್ಕೂ ಒಳಗಾದಂತೆ ಮೇಲು ನೋಟಕ್ಕೆ ತೋರುತ್ತದೆ.

ಆದರೆ ಹೀಗೆ ಒಳಗಾದದ್ದು ಕೇವಲ ಅಜ್ಞಾನದಿಂದಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ. ಕೇವಲ ಇತ್ತೀಚೆಗೆ, ಸುಮಾರು ಆರೇಳು ಸಾವಿರ ವರ್ಷಗಳೀಚೀಚೆಗೆ ಮನೆಮಠಗಳನ್ನು ಕಟ್ಟಿಕೊಳ್ಳಲು ಕಲಿತ ಮನುಷ್ಯಸಮಾಜ ಪುರುಷ ಪ್ರಧಾನತೆಯ ಸ್ವರೂಪವನ್ನು ಪಡೆಯಲು ಮಹಾಸ್ವಾರ್ಥ ಸಾಧನೆಯ ಹಾದಿಯನ್ನು ಹಿಡಿಯಿತು. ಅದರ ಮೊದಲ ಬಲಿಪಶು ಮಹಿಳೆ.

ಎಲ್ಲಿಯವರೆಗೆ ಹೋಗಿವೆ ಈ ಪುರುಷ ನಿರ್ಮಿತ ಸ್ತ್ರೀ ಪರವಾದ ಕಟ್ಟುಕಟ್ಟಳೆಗಳು ಎಂದರೆ, ಕೆಲವು ಕಾಡು ಜನಾಂಗಗಳಲ್ಲಿ ಹೆರಿಗೆಯಾದ ಒಂದೆರಡು ದಿನಗಳಲ್ಲಿಯೇ ಕೃಶಕಾಯಳಾದ ರೋಗಿ ಸದೃಶ ಬಾಣಂತಿ, ತಾನು ಎದ್ದು ಓಡಿಯಾಡಿಕೊಂಡು ತನ್ನ ಗಂಡನಿಗೆ ಬಾಣಂತಿತನದ ಎಲ್ಲ ವಿಧಿವಿಧಾನಗಳನ್ನೂ ಆರೈಕೆಗಳನ್ನೂ ಮಾಡಬೇಕಾಗಿತ್ತು. ಬಂದ ನೆಂಟರಿಷ್ಟರೂ ಈ ಕೃತಕ ಪುರುಷ–ಬಾಣಂತಿಯೊಡನೆಯೇ ಕುಶಲ ಸಂವಾದ ನಡೆಸಿ ಹೋಗುತ್ತಿದ್ದರು.

ಇದರ ಹಿಂದಿನ ದಿನಗಳಲ್ಲಿ, ಹೆಣ್ಣು–ಗಂಡುಗಳ ನಡುವಣ ಸಂಬಂಧದಲ್ಲಿ ಬಹುಮಟ್ಟಿಗೆ ಮುಕ್ತತೆ ಇದ್ದ ಕಾಲಗಳಲ್ಲಿ ಮಹಿಳೆಯ ಬದುಕಿನ ಅನಿವಾರ್ಯ, ಪ್ರಾಕೃತಿಕ

ಅವಸ್ಥೆಗಳಿಂದ ಗರ್ಭಧಾರಣೆ ಮತ್ತು ಬಾಣಂತಿತನದ ಸಮಯದ ಎಲ್ಲ ಆರೈಕೆಗಳನ್ನು ಪುರುಷನೇ ಯಾವ ಮುಜುಗರವು ಇಲ್ಲದೆ ಕೇವಲ ಪ್ರಕೃತಿಸಂಬದ್ಧವಾಗಿ ಅನುಸರಿಸುತ್ತಿದ್ದನು. ಮನುಜ ಶಿಶು ಸಾಮಾನ್ಯವಾಗಿ ಪ್ರಾಣಿ ಶಿಶುವಿನಂತಲ್ಲದೆ ಎದ್ದು ನಿಲ್ಲಲೇ ಬಹುಕಾಲದವರೆಗೆ ಬೇರೊಬ್ಬರ ಸಹಾಯವನ್ನು ನಿರೀಕ್ಷಿಸುತ್ತದೆ ಈ ಹೊರೆ-ಹೊಣೆಯನ್ನು ಪುರುಷ ಸ್ವಾಭಾವಿಕವಾಗಿಯೇ ಹೊರುತ್ತಿದ್ದ. ಆಗಿನ ದಿನಗಳಲ್ಲಿ ಅವನಿನ್ನೂ ಮನೆ–ಮಠಗಳನ್ನು ತನಗಾಗಿ, ತನ್ನ ವಂಶಕ್ಕಾಗಿ ಎಂಬಂತೆ ಕಟ್ಟಿಕೊಂಡಿರಲಿಲ್ಲ. ಬಹುಶಃ ಆಗಿನ್ನೂ ಅವನಿಗೆ ತಾನು ಆಗ ಯಾವ ಬಾಣಂತಿ–ಮಗುವಿನ ಸೇವೆ ಮಾಡುತ್ತಿದ್ದನೊ ಆ ಬಾಣಂತಿಯ ಆ ಮಗುವಿನ ಮಲಾಂಶಕ್ಕೂ ತನಗೂ ಇರುವ ಪ್ರಾಕೃತಿಕ ಸಂಬಂಧವ ನಿಜವಾದ ಪರಿವೆ ಅನನಿಗಿರಲಿಕ್ಕಿಲ್ಲ. ಅಥವಾ ತಾನು ಆರೈಕೆ ಮಾಡುತ್ತಿದ್ದ ಆ ಮಗು ತನ್ನದೇ ಆಗಿರಲೇಬೇಕಾನ ಸಾಂಸ್ಕೃತಿಕ ಆವಶ್ಯಕತೆಯೂ ಇರಲಿಲ್ಲ. ಹಾಗಾಗಿ, ಕಾಡು–ಜನಾಂಗಕ್ಕಿಂತಲೂ-ಕಾಡು ಜನಾಂಗವಾಗಿದ್ದ ಆ ಹಿಂದಿನ ದಿನಗಳಲ್ಲಿ ಮಹಿಳೆ ಪ್ರಕೃತಿಯ ಸಹಜ ನಿಯಮಗಳಿಗೆ ಮಾತ್ರವೇ ದಾಸಿಯಾಗಿದ್ದಳು. ಈಗಿನಂತೆ ಕೇವಲ ಪುರುಷನ ದಾಸಿಯಾಗಿರಲಿಲ್ಲ.

ಮಹಿಳೆ ಪುರುಷನ ದಾಸಿಯಾದುದಕ್ಕೆ ಸಾಮಾಜಿಕವಾಗಿ ಬಲವಾದ ಕಾರಣಗಳಿದ್ದಿರಬಹುದು. ಮನೆ—ಮಠಗಳ ವಂಶಪಾರಂಪರ್ಯ ಹಕ್ಕಿನ ಪ್ರಜ್ಞೆ ಆಕೆಯನ್ನು ಭಯಂಕರ ಸಂಸ್ಕೃತಿಯ ಮೂಸೆಯ ಮೂಲಕ ಶೀಲವತಿಯಾಗಿ ಎರಕ ಹೊಯ್ದುಕೊಳ್ಳಲು ಕಾರಣವಾಗಿದ್ದಿರಬಹುದು. ಆದರೆ ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ ಹೊರತು ತಪ್ಪುಗಳು ಬರಿಯ ಕಾರಣಗಳನ್ನು ಹುಡುಕಿಕೊಳ್ಳುವದರ ಮೂಲಕ ಸರಿಹೋಗುವದಿಲ್ಲ. ಅಂತ ಪ್ರಯತ್ನ ಅಂದಿನಿಂದ ಇಂದಿನವರೆಗೆ ಒಟ್ಟು ಮಾನವ ಬದುಕಿನ ಶೋಕವನ್ನು ಶ್ಲೋಕವಾಗಿಸುವ ರೀತಿಯಲ್ಲಿ ಸಹಜ ಕಳಕಳಿಯಿಂದ ಯಾವ ಹಂತದಲ್ಲಿಯೂ ಪ್ರಾರಂಭವಾಗಿರುವಂತೆಯೇ ತೋರುವದಿಲ್ಲ ಇದಕ್ಕೆ ಮುಖ್ಯ ಕಾರಣ, ಬಹುಶಃ ಪುರುಷ–ಪುರುಷರ ನಡುವೆಯೇ ಅಧಿಕಾರ ಅಂತಸ್ತುಗಳನ್ನು ಪಡೆಯುವಲ್ಲಿ ನಡೆಯುತ್ತಿರುವ ಘರ್ಷಣೆಗೇ ಮಿತಿಯಿಲ್ಲದಿರುವದು. ಬಡತನ–ಸಿರಿತನಗಳು ರೂಪಿಸುತ್ತಿರುವ ವರ್ಗಕಲಹದಿಂದಾಗಿ, ಜಾತಿಮತಗಳು ರೂಪಿಸುತ್ತಿರುವ ವರ್ಣಕಲಹದಿಂದಾಗಿ, ಈ ಘರ್ಷಣೆಗೆಸಧ್ಯದಲ್ಲಿ ಮುಕ್ತಿಯಿಲ್ಲದಿರುವದರಿಂದ ಮಹಿಳೆಯ ಬಗೆಗಿನ ಆಲೋಚನೆಗಳು ಅನೇಕವೇಳೆ ಕಣ್ಣೊರಸುವಿಕೆಯಾಗಿಯೇ ಕಾಣಿಸುತ್ತದೆ.

ನಮ್ಮ ಶತಮಾನದ ಪೂರ್ಣದೃಷ್ಟಿಯ ದಾರ್ಶನಿಕ ಕವಿ ಕುವೆಂಪು ಕೂಡ ಇದಕ್ಕೆ ಹೊರತಾಗುವದಿಲ್ಲ.

ಕುವೆಂಪು ಈ ಶತಮಾನದ.ಧೀಮಂತ ಸತ್ವಗಳನ್ನೆಲ್ಲ ಪ್ರಯತ್ನಪೂರ್ವಕವಾಗಿ ಮೈಗೂಡಿಸಿಕೊಂಡ ಚಿಂತನಶೀಲ ಕವಿ. ಬಂಗಾಳಿಯ ಶರತ್‌ಚಂದ್ರ ಚಟರ್ಜಿ, ಕನ್ನಡದ ಕಾರಂತರಂತೆ ಮಹಿಳೆಯ ಸಮಸ್ಯೆಗಳನ್ನು ವಿಮರ್ಶಿಸಿ ನೋಡುವ ಗೋಜಿಗೆ ಕೈ ಹಾಕಿದವರಲ್ಲ. ಕಾಮವನ್ನೆ ಪ್ರಧಾನ ಅಂಶವಾಗಿಸಿಕೊಂಡ ನವ್ಯ ಬರಹಗಾರರಂತೆ ಬೀದಿಯಲ್ಲಿ ಮಂಚ ಹಾಕಿಕೊಂಡು ಮಲಗಿ ನಿಜವಾದ ಸಮಸ್ಯೆಯನ್ನು ಮರೆಸಲು

ಪ್ರಯತ್ನಿಸಿದವರೂ ಅಲ್ಲ. ಭೈರಪ್ಪನವರಂತೆ ಕ್ರಾಂತಿಕಾರಿಯಾಗುವದರಲ್ಲಿ ಬ್ರಾಹ್ಮಣ ಹುಡುಗಿಯರೂ ಶೂದ್ರ ಹುಡುಗರಿಗಿಂತ ವಾಸಿ ಎಂಬ ಹುಂಬ ನಿರ್ಣಯದಿಂದ ಸಮಸ್ಯೆಯನ್ನು ದಾಟಿಸಿದವರೂ ಅಲ್ಲ. ಹಾಗೆಯೆ ಆಧುನಿಕ ಬದುಕಿನ ಜ್ವಲಂತ ಸಮಸ್ಯೆಯಾಗಿ ಮಹಿಳೆಯನ್ನು ನೋಡಿದವರೂ ಅಲ್ಲ ಕುವೆಂಪು.

೨

ಕುವೆಂಪು ಒಂದು ಪ್ರಬಲ ಅಭಿವ್ಯಕ್ತಿ ಶಕ್ತಿಯಾಗಿ ರೂಪುಗೊಳ್ಳುತ್ತಿದ್ದ ಕಾಲದ ಭಾರತೀಯ ಆವರಣದಲ್ಲಿ ಸ್ವತಂತ್ರವಾದ ಅನುಕೂಲತೆಗಳಿಗಾಗಿ ಸಂಘಟನಾತ್ಮಕ ಹೋರಾಟವೊಂದು ಪ್ರಾರಂಭವಾಗಿತ್ತು. ಈ ಹೋರಾಟ ಭಾರತವನ್ನು ರಾಜಕೀಯವಾಗಿ ಬ್ರಿಟಿಶರ ಕೈಯಿಂದ ಮುಕ್ತಗೊಳಿಸುವುದಕ್ಕಾಗಿ ಎಂಬುದು ಎಷ್ಟು ಗಂಭೀರವಾಗಿತ್ತೋ ಬಹುಶಃ ಅದಕ್ಕಿಂತ ಹೆಚ್ಚು ಗಂಭೀರವಾಗಿತ್ತು. ಇದು ಭಾರತವನ್ನು ಕ್ರೈಸ್ತ ಮತದ ಕೆಸರು ಕುಣಿಗೆಬೀಳದಂತೆ ತಡೆಯಬೇಕಾಗಿದ್ದ ಸಾಂಸ್ಕೃತಿಕ ಹೋರಾಟ ಕೂಡ. ಹಾಗೆ ನೋಡಿದರೆ ಭಾರತದಲ್ಲಿ ಸ್ವಾತಂತ್ರ್ಯ ಸಮರ ಪ್ರಾರಂಭವಾದದ್ದೆ ಬಹುತೇಕ ಬ್ರಾಹ್ಮಣ ಧುರೀಣರಿಂದ. ಆದ್ದರಿಂದ ಭಾರತದ ಈ ರಾಜಕೀಯ ಅಸ್ತ್ರ ನೆಪಮಾತ್ರವಾಗಿತ್ತು ಎಂದೇ ಹೇಳಬೇಕಾಗುತ್ತದೆ. ಯಾಕೆಂದರೆ, ಆ ಮುಂಚಿನ ರಾಜಕೀಯ ತಳತಂತ್ರಗಳಿಗೆಲ್ಲ ಮುಂಚೂಣಿಯ ಸಹಕಾರ ಕೊಟ್ಟವರೂ ಬ್ರಾಹ್ಮಣರೇ ಆಗಿದ್ದರು. ಹೇಗೆಂದರೆ ಬ್ರಿಟಿಷರಿಗೆ ಬಹುಮಟ್ಟಿಗೆ ಎಲ್ಲ ಬಗೆಯ ದುಭಾಷಿ ಕೆಲಸ ಮಾಡಿದವರೇ ಅವರು. ಬ್ರಿಟಿಷರಿಂದ ತಮಗಾಗಲೀ ತಮ್ಮ ಧರ್ಮಕ್ಕಾಗಲೀ ಯಾವ ಅನುಕೂಲಗಳು ಒದಗದ ತನಕ ಬ್ರಾಹ್ಮಣ ಚತುರಮತಿಯ ಸಹಕಾರದಿಂದ ಭಾರತದ ರಾಜಕೀಯ ಸೂತ್ರ ಸುಭದ್ರವಾಗಿಯೇ ಇತ್ತು ಬ್ರಿಟಿಷರ ಕೈಯಲ್ಲಿ. ಭಾರತವನ್ನು ಭೌತಿಕವಾಗಿ ಭದ್ರಮಾಡಿಕೊಂಡ ಆಂಗ್ಲಮತಿ ಭಾರತದ ಆತ್ಮವಾದ ಸಾಂಸ್ಕೃತಿಕ ಪರಿವರ್ತನೆಗೂ ಕೈ ಹಾಕಿ, ಅದುವರೆಗೆ ಬ್ರಾಹ್ಮಣ ಧರ್ಮ ಸಾಮಾನ್ಯ ಜನತೆಯನ್ನು ಹೇಗೆ ಶೋಷಿಸಿದೆ ಎಂಬುದನ್ನು ಅನೇಕ ಬಗೆಯಿಂದ ಬಹಿರಂಗಗೊಳಿಸುವುದರ ಮೂಲಕ ತಮ್ಮ ಸ್ವಾರ್ಥ ಸಾಧನೆಯನ್ನು ಮಾಡಿಕೊಳ್ಳಲು ಪ್ರಾರಂಭಿಸಿದ್ದು ಭೂಸುರರಿಗೆ ಅಸಮಾಧಾನವನ್ನು ತಂದಿತು. ಪರಿಸ್ಥಿತಿ ಬಿಗಡಾಯಿಸಿತು. ಬ್ರಿಟಿಷರಿಗೂ ಬ್ರಿಟಿಷರಿಗೆ ರಾಜಕೀಯ ನೆರವು ನೀಡುತ್ತಿದ್ದ ಬ್ರಾಹ್ಮಣ ನಾಯಕರಿಗೂ ಹೀಗೆ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಯಿತು. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಲಿ, ತೊಲಗದಿರಲಿ, ವೈದಿಕ ಕಪಿಮುಷ್ಠಿಯಿಂದ ಮಾತ್ರ ಹರಿಜನರು ಬಿಡುಗಡೆಯನ್ನು ಪಡೆಯಲೇಬೇಕು, ಮಾನವತೆಯ ಹಿತದೃಷ್ಟಿಯಿಂದ ಇದು ನಿಜವಾಗಿ ಅತ್ಯಂತ ಜರೂರಾದ ಕೆಲಸ ಎಂಬುದಾಗಿ ಶ್ರೀ ಅಂಬೇಡ್ಕರ್ ಭಾವಿಸಿದ್ದು ಯಾಕೆ ಮಹತ್ವದ್ದಾಗಿ ತೋರುತ್ತದೆ ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು.

ಕುವೆಂಪು ಅವರು–ಸ್ವಲ್ಪ ಹೆಚ್ಚೂ ಕಡಿಮೆ ಅಂಬೇಡ್ಕರ್ ಅವರ ಈ ನಿಲುವಿಗೆ ಹತ್ತಿರದವರಾದದ್ದರಿಂದ ತಮ್ಮ ಬರವಣಿಗೆಯ ಪ್ರಾರಂಭದಿಂದಲೂ ಯಾಕೆ ರಾಜಕೀಯ ಚಳುವಳಿಗಳಲ್ಲಿ ನೇರವಾಗಿ ಎಂಬಂತೆ ಪಾಲುಗೊಳ್ಳಲಿಲ್ಲ; ಬದಲಿಗೆ ರಾಮಕೃಷ್ಣ ಧೋರಣೆಯ ಸಾಂಸ್ಕೃತಿಕ ಚಳುವಳಿಯಲ್ಲಿ ಮಾತ್ರ ಯಾಕೆ ತೀವ್ರ ತನ್ಮಯತೆಯಿಂದ ಶ್ರಮ

ಪೂರ್ವಕವಾಗಿ ಮಡಿದರು ಎಂಬುದನ್ನು ಈ ನಿಟ್ಟಿನಿಂದಲೇ ಪರಿಶೀಲಿಸಬೇಕಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ ಗಾಂಧಿ ನೇತೃತ್ವದ ರಾಜಕೀಯ ಚಳುವಳಿಗೆ ಕುವೆಂಪು ವಿರೋಧವಾಗಿದ್ದರು ಎಂದೇನೂ ತಿಳಿಯಬೇಕಾಗಿಲ್ಲ. ದೈಹಿಕ ದಾಸ್ಯ ಮಾನಸಿಕ ದಾಸ್ಯಕ್ಕಿಂತ ಹೆಚ್ಚು ಹಗುರುತರ ಎಂದು ತಿಳಿದರೆ ಸಾಕು.

ಕುವೆಂಪು ಅವರ ಬರವಣಿಗೆಯ ಮುಖ್ಯ ಆಶಯ ಒಂದು ಸಾಂಸ್ಕೃತಿಕ ಸ್ಥಿತ್ಯಂತರದ ಆವಶ್ಯಕತೆಗಾಗಿ ಮತ್ತು ಸರ್ವೋದಯ ಸೂತ್ರಧಾರಿತ ಸುಸಂಬದ್ಧ ಮಾನವ ಸಂಸ್ಕೃತಿಯ ಆವಿಷ್ಕರಣಕ್ಕಾಗಿ ರೂಪಗೊಂಡದ್ದು. ಕುವೆಂಪು ಹುಟ್ಟಿಬಂದ ಪರಿಸರದ ಹಿನ್ನೆಲೆಯಿಂದ ಹೇಳಬೇಕೆಂದರೆ, ಅವರಿಗೆ ಸ್ತ್ರೀ–ಪುರುಷರ ನಡುವಣ ಸಮಾನತಾ ದೃಷ್ಟಿಯ ಸಮಸ್ಯೆಗಳಿಗಿಂತ ವರ್ಣ ಮತ್ತು ಜಾತಿ ಭೇದದ ಮಾನವ ಕುಲದ ವಿಭಜನೆಯಿಂದ ಉಂಟಾಗಿದ್ದ ತಾರತಮ್ಯ ನೀತಿಯೇ ಹೆಚ್ಚು ತೀವ್ರಸ್ವರೂಪದ ಕಾಳಜಿಯುಂಟು ಮಾಡಿತ್ತು. ಹಾಗಾಗಿ ಕುವೆಂಪು ಅವರು ಮಹಿಳೆಯ ಮಾನಸಿಕ ವಿಕಾಸಕ್ಕೆ, ಆ ಮೂಲಕ ಬದುಕಿನ ಸರ್ವತೋಮುಖ ಬೆಳವಣಿಗೆಗೆ ಅವಶ್ಯಕವಾಗಿ ಬೇಕಾಗಿರುವ ಸಾಂಸ್ಕೃತಿಕ ಆವರಣದ ನಿರ್ಮಾಣಕ್ಕೆ ಪೂರಕವಾಗುವ ಖಂಡಸೃಷ್ಟಿಯ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕಲಿಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಕುವೆಂಪು ಅವರಿಗೆ ಸ್ತ್ರೀಯರ ಸಮಸ್ಯೆಗಳ ಬಗ್ಗೆ ಅವಜ್ಞೆಯಿತ್ತೆಂದಾಗಲೀ, ಅವು ಯಃಕಶ್ಚಿತ್ತವೆಂದಾಗಲೀ ಭಾವನೆಯಿತ್ತೆಂದು ತಿಳಿಯಬೇಕಾಗಿಲ್ಲ. ಬದುಕನ್ನು ಅದರ ಸಮಗ್ರತೆಯಲ್ಲಿ ಪರಿಭಾವಿಸಿದ ಏಕೈಕ ಕನ್ನಡ ಮಹಾಕವಿ ಕುವೆಂಪು ಅವರ ದೃಷ್ಟಿಯಿಂದ ಸಮಗ್ರ ತತ್ವಕ್ಕೆ ಹಾನಿ ಬರದಂತೆ ಮಹಿಳೆಗೆ ಯಾವ ಸ್ಥಾನಸಿಕ್ಕಬೇಕೋ ಆ ಸ್ಥಾನ ದಕ್ಕಿದೆ ಎಂದು ತಿಳಿಯಲು ಯಾವ ಅಡ್ಡಿ ಆತಂಕಗಳೂ ನನಗೆ ತೋರುವದಿಲ್ಲ. ಯಾಕಂದರೆ **ಕಾನೂರು ಹೆಗ್ಗಡತಿಯ** ಗಂಗೆಯಂತಹ ಹಾದರಗಿತ್ತಿಯರಿಂದ ಹಿಡಿದು ಊರ್ಮಿಳೆಯಂತಹ ನಿಷ್ಕಾಮ ತಪಸ್ವಿನಿಯರವರೆಗೆ ನೂರಾರು ಬಗೆಯ ಸ್ತ್ರೀ ಸ್ವಭಾವಗಳು ಅವೇ ಒಂದು ಅದ್ಭುತ ಲೋಕವೆಂಬಂತೆ, ಅವುಗಳ ಸಹಜ ಚಲನವಲನಗಳೊಡನೆ, ಮುಟ್ಟಿದರೆ ಮುಲುಗುಡುವ ಕಲಾಮಾಧ್ಯಮದಲ್ಲಿ ಎರಕಗೊಂಡಿವೆ. ಎಲ್ಲ ಕಡೆಯೂ ಕುವೆಂಪು ಅವರ ದಾರ್ಶನಿಕ ಜಾಗೃತ ದೃಷ್ಟಿ ಮಾನವ ಸಂಸ್ಕೃತಿಯ ಮರುಹುಟ್ಟಿನ ಕಡೆಗೆ ದಾಪುಗಾಲಿಟ್ಟು ನಡೆಯುತ್ತಿರುವುದರ ಅನುಭವ ತೀವ್ರವಾಗಿಯೇ ಆಗುತ್ತದೆ.

೩

ತಮ್ಮ ಕವಿತ್ವ ರಚನೆಯ ಪ್ರಾರಂಭದ ದಿನಗಳಲ್ಲಿಯೇ ರಚಿಸಿದ **ಬಾಲವಿಧವೆ** ಒಂದು ಸಾಮಾಜಿಕ ಅನ್ಯಾಯದತ್ತ ಬೊಟ್ಟು ಮಾಡುತ್ತದೆ, ಕುವೆಂಪು ಅವರ ದೃಷ್ಟಿ. ಇಲ್ಲಿ ಮಹಿಳೆಯರಿಗಾಗುತ್ತಿರುವ ಅನ್ಯಾಯವನ್ನು ತೀವ್ರವಾಗಿ ಪ್ರತಿಭಟಿಸುತ್ತಾ ಅದಕ್ಕೆ ಕಾರಣವಾಗಿರುವ ವೈದಿಕ ಸಂಸ್ಕೃತಿಯನ್ನು ಉಗ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತದೆ. ವಿಧವೆಗೆ ಬದುಕುವುದೇ ನರಕ, ಸಾವೇ ಸ್ವರ್ಗ ಎಂಬುದನ್ನು ಎಲ್ಲ ವಿಧದಿಂದಲೂ ತಿಳಿವಳಿಕೆಗೆ ತಂದುಕೊಡುವ ಈ ಶಾಸ್ತ್ರೀಯವಾದದ ಮಾನವ ಲೋಕದಲ್ಲಿ 'ಬಾಲವಿಧವೆ' ಬದುಕಿ ಬಾಳುವುದಾದರೂ ಹೇಗೆ? ಹದಿನಾರು ವರ್ಷದ ಹುಡುಗಿ ಸತ್ತ ತನ್ನ ಗಂಡನ ಜತೆಯಲ್ಲಿ ತನ್ನ ಜೀವವನ್ನು ಶಾಶ್ವತವಾಗಿ ನೆಮ್ಮದಿಗೊಳಿಸಲು ಕಲ್ಲೆದೆ ಮಾಡಿ ಸಹು

ರಾತ್ರಿಯಲ್ಲಿ ಹೊರಹೊರಟಳು. ಸಹಗಮನ, ವಿಧವೆಯಾಗಿ ಬದುಕುವದಕ್ಕಿಂತ ಉತ್ತಮವೆಂಬುದು ಅವಳ ಅನಿಸಿಕೆಯಾಗಿತ್ತು. ಬೆಳದಿಂಗಳ ನಡುರಾತ್ರಿಯಲ್ಲಿ ಹೊರಬಂದು ಮರದ ಕರಿನೆರಳಿನಲ್ಲಿ ಕೊರಲ ಕಣ್ಣಿಯನಪ್ಪಿನಿಂತ ಬಾಲವಿಧವೆಯನ್ನು ನೋಡಿ

"ಚಂದಿರನು ಭಯದಿಂದ ಬೆಳ್ಳಗಾದ,
ಕಣ್ಣುಗಳ ಮುಚ್ಚಿದವು ಗಿರಿತರುಗಳೆಲ್ಲ"
"ಅಬಲೆ ಎಂಬರೆ ಅವಳ? ಪಾಪಿ ಎಂಬರೆ ಅವಳ?
ಅವಳೆದುರು ನಡುಗದಿಹನೆ ಯಮರಾಯ ?"

ದೇವರಿಗೆ ಯಜ್ಞಮಾಡಲು ಹೊರಟ ಈ ವನಿತೆಯ ಎದುರಿಗೆ ಶಾಸ್ತ್ರಗಳನ್ನು ನಂಬಿ ಬದುಕುತ್ತಿರುವ ಮಾನವ ಸಮಾಜ ಕಲ್ಲಾಗಿ ನಿಲ್ಲುತ್ತದೆ. ಕವಿ ವ್ಯಗ್ರವಾಗಿ ಅಸಹನೆಯಿಂದ ಕೂಗಿ ಕರೆಯುತ್ತಾರೆ :

ಧರ್ಮಶಾಸ್ತ್ರಜ್ಞರೆ ಬನ್ನಿ ಧರ್ಮವ ತೋರಿ !
ನೀತಿಯಲಿ ಪಂಡಿತರೆ ಬನ್ನಿ ದಾರಿಯ ತೋರಿ !
ಧಾರೆಯನು ಎರೆದವನೆ, ಜೋಯಿಸನೆ ಬಾ ಈಗ
ಕರೆ ನಿನ್ನ ಸಾಕ್ಷಿಗಳ ! ಅಪರಾಧಿ ಯಾರು ?
ಇದನ್ನೆಲ್ಲ ಸರಿಯೆಂದು ಹೊಗಳುವ ಸಮಾಜವೆ
ಎಲ್ಲಿ ಗೊರಕೆಯ ಹೊಡೆವೆ? ಬಾ ಬೇಗ ಇಲ್ಲಿ !
ಇಲ್ಲಿ ನ್ಯಾಯಾಸ್ಥಾನ ! ಇಲ್ಲಿ ಧರ್ಮವ ಹೇಳು !
ಮರದ ಕರಿನೆರಳಿನಲ್ಲಿ ಕೊರಲ ಕಣ್ಣಿಯನಪ್ಪಿ !
ನೇತಾಡುತಿರುವಳ್ಳೆ ಬಾಲವಿಧವೆ !

ಸತಿ ಎಂಬ ಕವನದಲ್ಲಿ ಮುಗ್ಧ ಬಾಲೆಯೊಬ್ಬಳಿಗೆ ಸಿಡಿಲಿನಂತೆ ಎರಗಿಬಂದ ಸಹಗಮನದ ಸಂದರ್ಭವನ್ನು ನಿತ್ಯಸತ್ಯಾವತಾರಿಯಾದ ಸೂರ್ಯನಿಗೂ ನೋಡಲಿಕ್ಕಾಗಲಿಲ್ಲವಂತೆ—

"ಎಂಟು ವರುಷದ ಬಾಲೆ, ಲೋಕದ ಭಾವಗಳನರಿಯದಿಹ ಮುಗ್ಧೆಗೆ
ಸಾವು ಬಾಳುಗಳೆಂಬ ಭೇದವ ತಿಳಿಯದಂಗನೆಗೆ
ಇನಿಯನಂತಕನೂರ ಸೇರಲು ಚಿತೆಯನೇರುವಕಾಲ ಬಂದಿರೆ
ಘೋರದೃಶ್ಯವ ನೋಡುವನೆ ರವಿ ! ಹೊಕ್ಕನಂಬುಧಿಯ"

ನಮ್ಮ ಸಮಾಜದ ನೀತಿನಿಯಮಗಳಲ್ಲಿರುವ ಈ ಅನೈತಿಕ ಅಸಮತೆಯನ್ನು ಕವಿ ಕುವೆಂಪು ಪ್ರಕೃತಿ ನಿಯಮಗಳ ಹಿನ್ನೆಲೆಯಿಂದ ಹೇಗೆ ಪರಿಶೀಲಿಸುತ್ತಾರೆ ಎಂಬುದು ಇಲ್ಲಿ ನಮಗೆ ಗೊತ್ತಾಗುತ್ತದೆ.

ಇದೇ ಸಂಸ್ಕೃತಿ ಕಡೆದು ನಿಲ್ಲಿಸಿರುವ ಮಹಿಳೆಯ ಇನ್ನೊಂದು ಸ್ಥರದಲ್ಲಿ ಕೂಡ ಸ್ವಲ್ಪ ಹೆಚ್ಚು ಕಡಿಮೆ ಸಾಮಾಜಿಕ ಅನ್ಯಾಯವಿದ್ದರೂ ಬೇರೊಂದು ಕಾರಣಕ್ಕಾಗಿ ಕುವೆಂಪು ಮೆಚ್ಚಿ ಹಾಡಿರುವ ಗೃಹಿಣಿಯ ಚಿತ್ರವನ್ನು ಕೂಡ ನಾವಿಲ್ಲಿ ಗಮನಿಸಬೇಕಾಗುತ್ತದೆ. **ಇಕ್ಷುಗಂಗೋತ್ರಿ**ಯಲ್ಲಿ ಪಾಲ್ಗೊಂಡಿರುವ "ಮನೆಮನೆಯ

ತಪಸ್ವಿನಿಗೆ” ಎಂಬ ಕವನ ಚಿತ್ರಿಸುತ್ತಿರುವ ಮಹಿಳೆ ಭಾರತೀಯ ಆದರ್ಶನಾರಿಯ ಪ್ರತಿಕೃತಿ. ದಾಂಪತ್ಯ ಜೀವನದ ಸರಳ ಸುಂದರ ಸಾರ್ಥಕತೆಯನ್ನು ಈ ಕವಿತೆ ಅದ್ಭುತವಾಗಿ ಪ್ರತಿಬಿಸುತ್ತದೆ. ಮನೆಯ ಒಳಗಿನ ಮತ್ತು ಹೊರಗಿನ ಕಾರ್ಯಕಲಾಪಗಳನ್ನು ಸತಿಪತಿಗಳು ಪಚ್ಚುಗೊಳ್ಳುವ ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಸ್ವಲ್ಪಮಟ್ಟಿನ ಪ್ರಾಕೃತಿಕ ನೆರವೂ ಇರುವುದನ್ನು ಕವಿ ಕುವೆಂಪು ಇಲ್ಲಿ ಸೂಕ್ಷ್ಮವಾಗಿ ಗ್ರಹಿಸಿದ್ದಾರೆ ಮಾತ್ರವಲ್ಲ, ಹೆಣ್ಣಿಗಾಗಲಿ ಗಂಡಿಗಾಗಲಿ ಜೀವನದ ಸಾರ್ಥಕತೆಯಿರುವುದು ಒಂದು ಬಗೆಯ ದಿವ್ಯ ನಿರ್ಲಕ್ಷ್ಯದಲ್ಲಿ ಮತ್ತು ಅವ್ಯಕ್ತತೆಯಲ್ಲಿ ಎಂಬುದನ್ನು ಈ ಕವನ ಧ್ವನಿಸುತ್ತದೆ.

ಹಿಡಿಯದಿರಲಿ ನಿನಗಾದರು
ಗಂಡಸರಾ ಕುತ್ತ
ಪ್ರಖ್ಯಾತಿಯ ಪಡೆಯುವೊಂದು
ಪ್ರಾಪಂಚಿಕ ಪಿತ್ತ |
ಹೊಸಲಾಚೆಗೆ ನೀನೋದರೆ
ಹೊಸಲೀಚೆಗೆ ಬೆಳಕಿಲ್ಲ
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ |

ಇಲ್ಲಿಯ ಮೊದಲ ನಾಲ್ಕು ಸಾಲುಗಳಲ್ಲಿ ಗಂಡಸರ ಗಡದಾಟಿನ ನಡವಳಿಕೆಗಳಿಂದಾಗಿ ಸಾಮಾಜಿಕವಾಗಿ ಆಗುತ್ತಿರುವ ಏರುಪೇರುಗಳು, ಕಡೆಯ ನಾಲ್ಕು ಸಾಲುಗಳಲ್ಲಿ ಸಮಾನತೆಯ ಹೆಸರಿನಲ್ಲಿ ಹೆಂಗಸರೂ ಗಂಡಸರ ಈ ದಾರಿಯಲ್ಲಿಯೇ ಮುಂದುವರೆದು ಬಿಟ್ಟರೆ ಆಗಬಹುದಾದ ದುರಂತವೂ ಸದ್ದುಗದ್ದಲವಿಲ್ಲದೆ ಧ್ವನಿತವಾಗುತ್ತದೆ. ಮಾತ್ರವಲ್ಲ, ಗಂಡಸಿನ ಈ ಗಡಿದಾಟಿನ ನಡವಳಿಕೆಗಳು ಗೃಹಸ್ತ್ರೀಯ ಮಡಿವಂತಿಕೆಯಿಂದ ನಿಯಂತ್ರಿತವಾಗಿ ಸಮನ್ವಯಗೊಳ್ಳದಿದ್ದರೆ ಬದುಕಿನಲ್ಲಿ ಅನಿವಾರ್ಯವಾಗಿ ಪುಟಿಯುವ ಹಾಹಾಕಾರವನ್ನು ಪರಿಹರಿಸಿಕೊಳ್ಳುವದಾದರೂ ಹೇಗೆ? ಎಂಬುದು ಬಹಳ ಮುಖ್ಯವಾದ ಪ್ರಶ್ನೆಯಾಗಿ ಕವಿಯನ್ನು ಕಾಡುತ್ತದೆ. ಕವಿಗೆ ಚೆನ್ನಾಗಿ ಗೊತ್ತಿದೆ:

“ನಿನ್ನಿಂದಲೆ ಹಿಮ್ಮೆಟ್ಟಿದೆ
ಜನಜನದಾ ಕುಸಂಸ್ಕೃತಿ
ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ”

ಎಂಬುದು. ಹೌದು, ನೈತಿಕ ಧೈರ್ಯದ ಎದುರಿನಲ್ಲಿ ಅನೈತಿಕ ಅಹಂಕಾರ ಎಂದಿಗೂ ತಲೆಯೆತ್ತಿ ನಿಲ್ಲಲಾರದು. ಮಾತ್ರವಲ್ಲ, ಶಾಶ್ವತ ಸತ್ಯದ ಬೆನ್ನೆಲುಬಾಗಿರುವ ನೀತಿ ಅಸ್ಥಿರ ಉಡಾಫೆಯ ಅಹಂಕಾರದ ಬುಡಕ್ಕೆ ಕೊಡಲಿಯಾಗಿಯೂ ಪರಿಣಮಿಸುತ್ತದೆ. ಗಂಡಸಿನ ಅಹಂಕಾರದ ಮನದಲ್ಲಿ ಹೆಂಗಸಿನ ಸಾಂಸ್ಕೃತಿಕ ನಡವಳಿಕೆ ವಹಿಸಿರುವ ಪಾತ್ರ ಚಾರಿತ್ರಿಕವಾಗಿ ನಿರಂತರವಾದದ್ದು. ಫ್ರಾಯ್ಡ್‌ನಂತಹ ಚಿಂತ

ದೃಷ್ಟಿಯ ಜನಕ್ಕೆ ಇಲ್ಲಿ ಕೆಲಸ ಮಾಡುತ್ತಿರುವುದು ಲೈಂಗಿಕ ಆಕರ್ಷಣೆಯಾಗಿ ತೋರ ಬಹುದು. ಆದರೆ ಲೈಂಗಿಕ ಆಕರ್ಷಣೆಗಳನ್ನು ಊರ್ಧ್ವಮುಖಗೊಳಿಸುವ ಸಾಂಸ್ಕೃತಿಕ ಪ್ರಜ್ಞೆ ಇಲ್ಲಿಯ ನಿಯಂತ್ರಣದ ಅಸ್ತಿವಾರವಾಗಿರುತ್ತದೆ. ಇತಿಹಾಸದ ಪುಟಗಳಲ್ಲಿ ಇದಕ್ಕೆ ನೂರಾರು ನಿದರ್ಶನಗಳಿವೆ. ಕಣ್ಣಿಗೆ ಬಡಿಯದಿದ್ದರೂ ಸಾವಿರಗಟ್ಟಳೆ ನಿದರ್ಶನಗಳು ಬದುಕಿನಲ್ಲಿವೆ. ಕುವೆಂಪು ಅವರ ರಾವಣ ಇವಕ್ಕೊಂದು ಉದಾಹರಣೆ.

"ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ"

ಎಂಬ ಈ ಮಾತು ಆ ದೇಶ ಈ ದೇಶವೆನ್ನದೆ, ಆ ಕಾಲ ಈ ಕಾಲವೆನ್ನದೆ, ಎಲ್ಲ ಕಾಲ ದೇಶಗಳಲ್ಲಿಯೂ ಮನ್ನಣೆಯನ್ನು ಪಡೆದಿರುವಂಥದು. ಬಹುಶಃ ಇದನ್ನು ಮಾನ್ಯ ಮಾಡದ ಭವಿಷ್ಯ ಕೂಡ ಉದ್ಧಾರವಾಗಲಾರದೆಂದೇ ತೋರುತ್ತದೆ. ಈಗ ನಮ್ಮೆದುರಿಗಿರುವ ಸಮಸ್ಯೆಗಳಲ್ಲೆಲ್ಲ ಬಹಳ ತೀವ್ರವಾಗಿರುವ ಸಮಸ್ಯೆಯೆಂದರೆ ಸಾಂಸ್ಕೃತಿಕ ಗೊಂದಲಗಳಿಂದ ಉಂಟಾಗುತ್ತಿರುವ ಸಮಸ್ಯೆ. ಇದರ ಭವಿಷ್ಯ ಪ್ರಾಕೃತಿಕ ನೆಲಗಟ್ಟಿನ ಮೇಲೆ ನಿರ್ಣಾಯಕವಾಗಿ ರೂಪುಗೊಳ್ಳಬೇಕಾದರೆ ಎಚ್ಚರಾ ಗುತ್ತಿರುವ ಜೀವನ ಮೌಲ್ಯಗಳು ಪೋಷಕ ಸಂಸ್ಕೃತಿಯ ನೆರವನ್ನು ಪಡೆಯದೆ ಬೇರೆ ದಾರಿಯೇ ಇಲ್ಲ. ಇದು ಬರಿಯ ಕವಿಯ ಕಲ್ಪನೆಯಲ್ಲ, ಬದುಕಿನ ಸಕಲ ವಿವರ ಗಳನ್ನು ಪರಿಭಾವಿಸಿದ ವಸ್ತುನಿಷ್ಠ ವಿಶ್ವಚೈತನ್ಯ ಅನಿವಾರ್ಯವಾಗಿ ಕೈಗೊಂಡ ನಿರ್ಣಯ. ಪೊಳ್ಳು ಹೆಸರಾಸೆಯ ಅಹಂಕಾರ ದಮನವಾಗದೆ ಸೃಷ್ಟಿಶೀಲ ಸಂಸ್ಕೃತಿಯ ಉದಯ ಅಸಾಧ್ಯ. ಆದ್ದರಿಂದಲೆ—

"ತಾಳುತ್ತಿದೆ, ಬಾಳುತ್ತಿದೆ
ನಿನ್ನಿಂದೆಮ್ಮ ಇಳೆ
ಹೇ ದಿವ್ಯೆ, ಸಾಮಾನ್ಯೆ,
ಮನೆಮನೆಯ ಊರ್ಮಿಳೆ,
ಗೃಹಿಣಿ, ಗರತಿ, ದೇವಿ, ತಾಯಿ,
ಹೆಸರಿಲ್ಲದ ಮಹಿಳೆ.
ಮಣಿವೆನೊ ಇದೊ ನಿನ್ನಡಿ
ಹುಸಿವೆಸರಿಗೆ ಮರುಳಾಗದ
ಹೆಸರೊಲ್ಲದ ಹಸುಳೆ"

ಇಂದು ಮಹಿಳೆ "ಹುಸಿವೆಸರಿಗೆ ಮರುಳಾಗದ" ಪುರುಷ ಹಸುಳೆಯನ್ನು ಪಡೆಯ ಬೇಕಾಗಿದೆ, ಹಿಡಿದೆತ್ತಬೇಕಾಗಿದೆ. ಈ ಮಾತುಗಳು ಸರ್ವಕಾಲಿಕವಾದ ಸತ್ಯವನ್ನು ಹೇಳುತ್ತಿರುವಂತೆಯೆ ಸಾರ್ವತ್ರಿಕವಾದುವನ್ನೂ ಹೇಳುತ್ತಿವೆ. ಯಾಕೆಂದರೆ, ಇನ್ನು ಮುಂದೆ ವೈಜ್ಞಾನಿಕ ಹಾದಿಯಲ್ಲಿ ಮುಂದುವರಿಯುವ ಬದುಕಿಗೆ 'ಜನಾಂಗಕ್ಕೊಂದು ಸಂಸ್ಕೃತಿ' ಎನ್ನುವದು ಅಸಾಧ್ಯವಾಗಿರುವದಲ್ಲದೆ, ತಾಯಿ-ಮಗುವಿನ ಸಂಬಂಧ ಕಾಲ-ದೇಶಾತೀತವಾಗಿ ನಿರಂತರವಾಗಿರುವುದು, ಪುರುಷ ಶಿಶುವಿನ ಬೆಳವಣಿಗೆಯ

ಹಾದಿಯಲ್ಲಿ ಗೃಹಿಣಿಯಾಗಿ, ಗರತಿಯಾಗಿ, ದೇವಿಯಾಗಿ, ತಾಯಿಯಾಗಿ, ಕಾಣಿಸಿಕೊಳ್ಳುವ ಮಹಿಳೆ ಒಂದು ರೀತಿಯಲ್ಲಿ ಸಾಂಸ್ಕೃತಿಕ ಕಡಿವಾಣವಾಗಿ ಈ ಎಲ್ಲ ಸ್ತರಗಳಲ್ಲಿಯೂ ಕೆಲಸ ಮಾಡುತ್ತಿರುವುದು ಚಾರಿತ್ರಿಕ ಅನುಭವವಾಗಿದೆ.

ಆದರೆ ಇದು ಬರಿಯ ಚಾರಿತ್ರಿಕ ಅನುಭವ ಮಾತ್ರವಾಗಿ ಉಳಿಯುವಂತಿಲ್ಲ. ಮನೆಯ ಒಳಗಡೆ ಜಾಜ್ವಲ್ಯಮಾನವಾದ ಬೆಳಕಿಲ್ಲದಿದ್ದರೆ ಮನೆಯ ಮಂದಿಯ ಮನದೊಳಗಡೆ ಕತ್ತಲೆ ಅನಿವಾರ್ಯ. ಮಹಿಳೆ ತನ್ನೆಲ್ಲ ಆಶಯಗಳನ್ನು ಬದುಕಿನ ಈ ಬೆಳಕಿಗಾಗಿ ಆಪುಗೊಟ್ಟುಕೊಳ್ಳುವುದು ಆಧುನಿಕ ಅವಶ್ಯಕತೆಯಾಗಿದೆ ಎಂಬುದನ್ನು ಕವಿತೆ ಪ್ರಸ್ತಾಪಿಸುತ್ತದೆ. ಸಂಸ್ಕೃತಿಯ ಮೌಲ್ಯಗಳನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದು ಆಕೆ ಬದುಕನ್ನು ಮುನ್ನಡೆಸದಿದ್ದರೆ ಪುರುಷನ ಜೀವನಚಕ್ರ ದುರಂತಗತಿಯನ್ನು ಕಂಡುಕೊಳ್ಳುತ್ತದೆ ಮಾತ್ರವಲ್ಲ, ಮಹಿಳೆಯ ಬದುಕೂ ಅತಂತ್ರವಾಗುತ್ತದೆ.

ಆಧುನಿಕ ಪರಿಸರಕ್ಕೆ ಹೆಚ್ಚು ಒತ್ತುಗೊಡುತ್ತಿರುವ ಈ ಕವನ ಮಹಿಳೆಯ ಮನಸ್ಸಿನಲ್ಲಿ ಮೂಡುತ್ತಿರುವ ಹೊಸ ಬಗೆಯ ಆಲೋಚನೆಗಳ ಪರಿಣಾಮದಿಂದಾಗಿ ಮುಂದಿನ ಬದುಕಿನಲ್ಲಿ ಉಂಟಾಗಲಿರುವ ಕೆಲವೊಂದು ವೈಪರೀತ್ಯಗಳನ್ನು ಸೂಕ್ಷ್ಮವಾಗಿ ಸೂಚಿಸುವಂತಿದೆ. ಆರ್ಥಿಕ ಸಮಾನತೆ, ಅಧಿಕಾರದ ಸಮಾನತೆಗಾಗಿ ಹಂಬಲಿಸುತ್ತಿರುವ ಮಹಿಳೆಯ ಬದುಕು ಎಂದಿನಂತೆ ಪುರುಷನ ಬದುಕಿಗೆ ಪೂರಕವಾಗಿ ನಿಂತು ಜೊತೆಗೆ ತಮ್ಮೆರಡೂ ಬದುಕುಗಳನ್ನು ಒಂದಾಗಿಸಿಕೊಂಡು ಸಾರ್ಥಕ ಗುರಿ ಮುಟ್ಟುವ ಅತ್ಯಂತ ಸುಲಭ ಸುಂದರ ಮಾರ್ಗದಿಂದ ದೂರವಾಗುತ್ತಿರುವದು ಸೂಚ್ಯವಾಗಿ ಪ್ರತಿಮಿತವಾಗುತ್ತಿದೆ ಈ ಕವನದಲ್ಲಿ. ಆದ್ದರಿಂದಲೇ ಈ ಕವಿ ಹೃದಯ

ಹೊಸಲಾಚೆಗೆ ನೀನೋದರೆ (ನೀನೋತರೆ?)—
ಹೊಸಲೀಚೆಗೆ ಬೆಳಕಿಲ್ಲ
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೇ ನಮಗಿಲ್ಲ

ಎಂದು ಆರ್ತವಾಗಿ ಗದ್ಗದಿಸುತ್ತಿರುವುದು. ಹೆಣ್ಣು ಗಂಡುಗಳ ನಡುವಣ ಬಾಳಿನ ಸಮನ್ವಯ 'ಸೂತ್ರಕ್ಕೆ ಕಹಳೆಯಂತಿರುವ ಈ ಮಾತುಗಳು ಈಗಾಗಲೇ ಅಲ್ಲಲ್ಲಿ ಏರ್ಪಡುತ್ತಿರುವ ವಿರಸ ದಾಂಪತ್ಯಕ್ಕೆ ಮುನ್ನುಡಿಯ ಉಪದೇಶದಂತಿರುವದನ್ನು ಗಮನಿಸಬೇಕು ಮಾತ್ರವಲ್ಲ, ಬದುಕಿನಲ್ಲಿ ಮಹಿಳೆಗಿರುವ ಪ್ರಾಮುಖ್ಯತೆಯನ್ನು ಪ್ರಾಶಸ್ತ್ಯವನ್ನು ಏಕಕಾಲದಲ್ಲಿಯೇ ಒತ್ತಿ ಹೇಳುತ್ತಿರುವ ಈ ಕವನ, ಇದರಲ್ಲಿ ಸ್ವಲ್ಪ ಹೆಚ್ಚೂ ಕಡಿಮೆಯಾದರೂ ಮುಂದಿನ ಪುರುಷನ ಬದುಕು ಅತಂತ್ರವಾಗುತ್ತದೆ ಎಂಬುದನ್ನು ಹೇಳುತ್ತದೆ. ರಸೆಲ್ ಮುಂತಾದವರು ಯಾವುದನ್ನು ವೈಜ್ಞಾನಿಕವಾಗಿ ಕಂಡರೋ ಅದನ್ನೇ ಕವಿ ಇಲ್ಲಿ ದಾರ್ಶನಿಕವಾಗಿ ಕಂಡಿದ್ದಾನೆ.

೪

ಮಹಿಳೆ ತನ್ನೆಲ್ಲ ತನು-ಮನಗಳನ್ನು ಒಂದು ಹಿರಿಯ ಉದ್ದೇಶಕ್ಕಾಗಿ ಮುಡುಪಿಡುವುದರ ಮೂಲಕ ತನ್ನ ಮನೆಯ ಆವರಣದಲ್ಲಿಯೇ ಸಾಧಕಳಾಗಿ ವಿಕಾಸ

ಹೊಂದಬಹುದಾದ ಸಾಧ್ಯತೆಯನ್ನು ಕವಿ ಕುವೆಂಪು ಅಲ್ಲಗಳೆಯುವದಿಲ್ಲ. ರಾಮಾಯಣ ದರ್ಶನದ ಅಜ್ಞಾತ ತಪಸ್ವಿನಿ ಊರ್ಮಿಳೆಯ ಮಾತು ಹಾಗಿರಲಿ, ಜ್ಞಾತ ತಪಸ್ವಿನಿಯರಾದ ಸೀತೆ ಮಂಡೋದರಿಯರೂ ಇದಕ್ಕೆ ಉತ್ತಮ ಉದಾಹರಣೆಯಾಗುತ್ತಾರೆ. ತಮ್ಮ ತಮ್ಮ ಪತಿಗಳ ಬದುಕಿನ ಉದ್ಧಾರವನ್ನೇ ಹಾರಯಿಸುತ್ತಾ ತಾವೂ ಅಸಾಮಾನ್ಯ ರೀತಿಯಲ್ಲಿ ಉದ್ಧಾರವಾಗುತ್ತಿರುವ ಒಂದು ವಿನೂತನ ಅನುಭವ ಇಲ್ಲಿ ನಮಗಾಗುತ್ತದೆ. ಜನಮನದ ಕುಸಂಸ್ಕೃತಿ ಅಸಂಸ್ಕೃತಿಗಳನ್ನು ತಿದ್ದಿ ತೀಡಿ ಬದುಕನ್ನು ಋಜು ಮಾರ್ಗದಲ್ಲಿ ಕೊಂಡೊಯ್ಯುವ ಹೊಣೆಗಾರಿಕೆಗೆ ಅದು ಹೇಗೊ ಬದ್ಧಳಾಗಿಹೋಗಿರುವ ಮಹಿಳೆಯ ಬದುಕಿನ ಗೊತ್ತು–ಗುರಿಗಳು ತುಂಬ ಜಟಿಲವಾದವುಗಳು ಮತ್ತು ಗುರುತರವಾದವುಗಳು. ಈಗ ಈ ಹೊಣೆಗಾರಿಕೆಯಿಂದ ಕಳಚಿಕೊಳ್ಳುವದೆಂದರೆ ಅಥವಾ 'ನಿನ್ನಂತೆಯೇ ನಾನೂ' ಎಂದು ಅಡ್ಡಗಾಲು ಹಾಕುವದಾದರೆ ಸ್ವರೂಪದಲ್ಲಿ ತುಂಬಾ ಸೂಕ್ಷ್ಮವಾದ ಮಾನವನ ಬದುಕು ಎಡವಿ ಮುಗ್ಗರಿಸುವವರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಸಹನೆ, ಸಂಯಮ, ಪ್ರಾರ್ಥನೆ ಮತ್ತು ತಪಸ್ಸುಗಳಿಗೆ ಪಳಗಿ ಹೋಗಿರುವ ಮಹಿಳೆ ಮಂಡೋದರಿ–ಸೀತೆಯರಂತೆ ಅಕಲ್ಯಾಣ ಗುಣಗಳಿಂದ ಕೂಡಿರುವ ಪುರುಷಸಮೂಹವನ್ನು ಕಲ್ಯಾಣಮುಖಿಯಾಗುವಂತೆ ನೋಡಿಕೊಳ್ಳುವವರ ಹೊರತು ಆಕೆಗೆ ಬೇರೆ ಕರ್ಮವಿಲ್ಲ, ಬೇರೆ ಧರ್ಮವಿಲ್ಲ, ಅದೇ ಆಕೆಯ ಋತುಧರ್ಮ ಮತ್ತು ಬಾಳಿನ ಉದ್ದೇಶ. ಈ ಮಾತುಗಳನ್ನು ಕೇಳುವಾಗ ಯಾರಿಗಾದರೂ ಅನಿಸಬಹುದು— "ಏನು ಹಾಗಾದರೆ, ಮಹಿಳೆಯನ್ನು ಯಾವ ಕಾಲಕ್ಕೂ ಪುರುಷನ ಚರಣದಾಸಿಯನ್ನಾಗಿಯೆ ಉಳಿಸಿಕೊಳ್ಳುವುದು ನಿಮ್ಮ ಅಭಿಮತವೆ ?" ಎಂದು. ಖಂಡಿತ ಇಲ್ಲ. ಆಕೆ ಹಿಂದೆಂದಿಗಿಂತಲೂ ಮುಂದೆ ಪುರುಷನ ಹೃದಯವನ್ನು ಕಟ್ಟಿ ಆಳುವ ಕಲ್ಯಾಣಿಯಾಗಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ ಮಾತ್ರ. ಕುವೆಂಪು ಅವರ ಸೀತೆ ತನ್ನ ಪರಮ ಶತ್ರುವಾದ ರಾವಣನ ಆತ್ಮೋದ್ಧಾರಕ್ಕಾಗಿ ತನ್ನ ಪಾತಿವ್ರತ್ಯವನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುದರ ಮೂಲಕ ತಪಿಸುತ್ತಾಳೆ. ಇದು ಒಂದು ಅಪೂರ್ವ ಅನುಭವವಲ್ಲದೆ ಮತ್ತೇನು ?

ಈ ಅನುಭವಕ್ಕೆ ನಾಂದಿಯಾಗಿ, ಭದ್ರ ಬುನಾದಿಯಾಗಿ ಸೀತೆ ಮಂಡೋದರಿಯರ ನಡುವೆ ಏರ್ಪಡುವ ದುಃಖಾರ್ತ ಸ್ನೇಹ–ಸಂಬಂಧವೊಂದು **ರಾಮಾಯಣ ದರ್ಶನ**ದಲ್ಲಿ ಚಿತ್ರಿತವಾಗಿದೆ. ಈ ಮೂಲಕ ಕವಿ ಕುವೆಂಪು (ಪಂಪಕವಿಯ "ಮಾನವ ಕುಲಂ ತಾನೊಂದೆ ವಲಂ" ಎಂಬ ಮಾತು ನಿಜವಾಗುತ್ತೊ ಬಿಡುತ್ತೊ ಅದು ಬೇರೆಯ ವಿಚಾರ) ಹೆಣ್ಣಿನ ಮನೋಧರ್ಮ ದೇಶಕಾಲಾತೀತವಾಗಿ ಒಂದೇ ಆಗಿದೆ ಎಂಬುದನ್ನು ಧ್ವನಿಸುತ್ತಾರೆ. ಕವಿವಾಣಿ ಹೀಗಿದೆ—

"ಆರಮ್ಮ ತಂಗೆ, ನೀನ್ ? ನೋಡುತಿಹೆನೇಳಿರುಳ್ಗಳಿಂ;
ಬಂದು ಗೋಳಾಡುತಾವುದನೊ ಸಂಕಟವನೊರೆಯುತಿಹೆ;
ಆರನೋ ಕರೆಯುತಿಹೆ; ಆರನೊ ಬೇಡುತಿಹೆ;
ಕೈಮುಗಿದದಾರ್ಗೊ ರಕ್ಷೆಯ ಪಡೆಯಲೋಸುಗಂ

ನೋಂತಪೋಲಿದೆ ನೋಂಪಿಯುಂ. ಬಿದಿರಿದೆನ್ ಮೊದಲ್
ದನುಜ ಕೈತವವೆಂದು. ಕಡೆಗೆ, ನಿನ್ನಯ ಕೊರಳ
ದುಃಖ ಸ್ರೈಜತೆಯೆನಗೆ ಕೆಣಕಿದುದು ಕರುಣೆಯುಂ
ನನ್ನಂತೆ ನೀನುಮಸುರನ ದೌಷ್ಟ್ಯಮೆಳೆತಂದ
ಗರತಿವೆಣ್ಣಿರವೇಳ್ಕುಮ್ ! ಈ ಲಂಕೆಯೊಳಗೆನಿತು
ದುಃಖಿಗಳ ನಮ್ಮನ್ನರೊಳರೊ ?...."
"ನಾನಕ್ಕನೆನ್
ನಿನಗೆ, ತಂಗೆ ವಯಸ್ಸಿನಿಂದಂತೆ ದುಕ್ಕದಿಂ !
ನನ್ನವೋಲತಿದುಃಖಿ, ಲಂಕೆಯೊಳಗಂತಿರ್ಕೆ,
ಸೃಷ್ಟಿಯೊಳಗಿಲ್ಲವೆಂದರಿ...."
"ದೇಶಮುಂ ತ್ಯಜಿಸಿ,
ವನವಾಸಮಂ ವರಿಸಿ, ರಾಕ್ಷಸನ ಪಾಪಕ್ಕೆ
ಬಲಿಯಾದ ದಶರಥಸುತನ್ ಭಾರ್ಯೆಗಿಂ ದುಃಖಿ
ನೀನೆಂಬೆಯೇನ್ ?"
"ದಿಟಂ; ಸೀತೆಗಿನ್ನತಿದುಃಖಿ
ನಾನ್, ಎನಿತೊ ಸೀತೆಯರಳಲ ಪೊತ್ತಿಸಿರ್ಪಂಗೆ ನಾಂ
ಮಡದಿಯೆನ್ !...."
"ಮಂಡೋದರಿಯೆ ನೀಂ ? ಹರ್ಷ ವಿಸ್ಮಯದಿ
ಬೆಸಗೊಂಡವನಿ ಜಾತೆಗಾ ಮಹಿಳೆ"
"ನಿರ್ಭಾಗ್ಯೆದಲ್
ನಾನಪ್ಪೆನಾ ಪೆಸರ್ ಪೆಣ್...."
"ಪೆಸರ್‌ಪೆಣ್, ದಿಟಂ !
ಮುನ್ ಕೇಳೆನಾಂ ನಿನ್ನ ಬೆಳಸವನೆಲೆ ಪೂಜ್ಯೆ;
ಕಂಡಿಂದು ಧನ್ಯೆಯೆನ್ ಪಿರಿಯ್ಗಳೆ ನಮಿಸುವೆನ್"
"ನಾನಸುರಿ ನಮಿಸದಿರೆನಗೆ, ಆರ್ಯೆ !"
"ನೀನಸುರಿ ?
ನೀನಸುರಿಯಲ್ತು; ದೇವತೆ ಪತಿವ್ರತೆಯಾಗಿ
ನಮಗೆಲ್ಲಮಾದರ್ಶಮಾತೆ ನಿನಗಾಂ ನಮಿಸೆ
ಶೀಘ್ರದಿಂದೆನಗೆ ಮಂಗಳಮಪ್ಪುದೆಂದು ನಾಂ
ಬಲ್ಲೆನ್...."

ಪುರುಷಪ್ರಧಾನವಾದ ಈ ಸಮಾಜದಲ್ಲಿ ಅನೇಕ ಕಾರಣಗಳಿಗಾಗಿ ಬಹುಮಟ್ಟಿಗೆ ಒಂದಲ್ಲ ಒಂದು ವಿಧಕ್ಕೆ ದುಃಖಿತೆಯಾಗಿರುವ ಎಲ್ಲ ಮಹಿಳೆಯರನ್ನೂ ಒಗ್ಗೂಡಿಸುತ್ತಿರುವ ಈ ಮಾತುಗಳು ಆಶಿಸುತ್ತಿರುವುದೂ ಒಂದನ್ನೇ— ಶಾಶ್ವತವಾದ ಸ್ತ್ರೀ ಸಂಸ್ಕೃತಿಯ ಗೆಲವನ್ನೆ. ಸೀತೆ–ಮಂಡೋದರಿಯರು ಪರಸ್ಪರ ಶತ್ರುವರ್ಗಕ್ಕೆ ಸೇರಿದ

ಮಹಿಳೆಯರು ಮಾತ್ರವಲ್ಲ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪರಸ್ಪರ ವಿರುದ್ಧ ದಿಕ್ಕಿನವರು. ಆದರೆ ಆ ಇಬ್ಬರನ್ನೂ ಅದಮ್ಯವಾಗಿ ಒಗ್ಗೂಡಿಸುತ್ತಿರುವ ಸಾಮಾನ್ಯ ಲಕ್ಷಣವೆಂದರೆ ತಮ್ಮ ತಮ್ಮ ಪತಿಗಳ ಉದ್ಧಾರದ ವಿಜಯಕ್ಕಾಗಿ ಇಬ್ಬರ ತನುಮನಗಳನ್ನೂ ತುಂಬಿಗೊಂಡಿರುವ ತಪಸ್ಸು. ಮಹತ್ವದ ಸಂಗತಿಯೆಂದರೆ ಪರಸ್ಪರ ಶತ್ರುರಾಜರ ಈ ಪತ್ನಿಯರು ತಮ್ಮ ತಮ್ಮ ಪತಿಗಳ ವಿಜಯವನ್ನೆ ತಮ್ಮ ತಪಸ್ಸಿನ ಗುರಿಯಾಗಿಟ್ಟುಕೊಂಡಿರುವುದೇ ನಿಜವಾದರೆ, ಈ ಇಬ್ಬರೂ ಒಂದಾಗುವು ದಕ್ಕಿಂತ ಎದುರಾಗಿ ಬಡಿದಾಡಬೇಕಿತ್ತು. ಆದರೆ ಈ ಲೌಕಿಕ ಮಾರ್ಗವನ್ನು ಬಿಟ್ಟುಕೊಟ್ಟು ಜೀವನ ಧರ್ಮದ ಆಧಾರದ ಮೇಲೆ ಯಾರು ಯಾರಿಗೆ ಯಾವ ಯಾವ ಗೆಲವು ದೊರೆಯಬೇಕೋ ಆ ಗೆಲವಿಗಾಗಿ ಒಗ್ಗೂಡಿ ಪ್ರಾರ್ಥನೆಯನ್ನು ಸಲ್ಲಿಸುತ್ತಿರುವಂತೆ ಸೇರ್ಪಡಿಸಿಕೊಂಡಿರುವ ಕವಿ ಕುವೆಂಪು ಅವರ ದಾರ್ಶನಿಕ ದೃಷ್ಟಿ ಬಲು ಸೂಕ್ತ.

> "ನಾನಸುರಿ, ನಮಿಸದಿರೆನಗೆ, ಆರ್ಯೆ !"—
> ರಾಕ್ಷಸ ಮಡದಿಯ ಬಿನ್ನಹ
> "ನೀನಸುರಿ ?
> ನೀನಸುರಿಯಲ್ತು; ದೇವತೆ"—
> ಆರ್ಯವನಿತೆಯ ಕಾಣ್ಕೆ

ಈ ರಾಕ್ಷಸಮಡದಿ–ಆರ್ಯವನಿತೆಯರ ಬಿನ್ನಹ ಮತ್ತು ಕಾಣ್ಕೆಗಳು ಲೋಕೋತ್ತರ ವಾದ ಸಮನ್ವಯ ದೃಷ್ಟಿಗೆ ಬರೆದ ಮುನ್ನುಡಿ. ಸರ್ವರಿಗೆ ಸರ್ವಕ್ಷೇಮಗಳನ್ನೂ ಕೋರುವ, ಸರ್ವರಿಗೆ ಸಾಂಸಾರಿಕ ಸುಖ–ಸಮೃದ್ಧಿಗಳನ್ನು ಆಶಿಸುವ, ಸರ್ವೋದಯ ಪ್ರಜ್ಞೆಯಿಂದ ಹೊಮ್ಮಿದ ಸೀತೆ ಮಂಡೋದರಿಯರ ಈ ಸಂವಾದದ ಕೊನೆಯು ಘಟ್ಟ ಘನವಾದ ಸತ್ವದಿಂದ ಕೂಡಿದೆ.

> "ನೀನಸುರಿ ?
> ನೀನಸುರಿಯಲ್ತು; ದೇವತೆ, ನಿನಗಾಂ ನಮಿಸೆ
> ಶೀಘ್ರದಿಂದೆನಗೆ ಮಂಗಳಮಪ್ಪುದೆಂದು ನಾಂ
> ಬಲ್ಲೆನ್"
> "ಆ ಮಂಗಳಂ ನಿನಗೆ ಶೀಘ್ರ ದಿನಕ್ಕೆ !
> ನಿನ್ನ ಮಂಗಳಮೆನಗೆ ಮಂಗಳಂ ! ನನ್ನಂತೆ
> ದೇವಿ ನೀನುಂ ಪ್ರಾರ್ಥಿಸಾ ನನ್ನ ಪತಿಯೆರ್ದೆಗೆ
> ಶುದ್ಧಿ ದೊರೆಕೊಳ್ವಂತೆ, ನಾನವನೆ ಬೇಡಲ್ಕೆ
> ಬರುತಿರ್ದನೀಯೆಡೆಗೆ ನಿನ್ನ ಸಾನ್ನಿಧ್ಯಕ್ಕೆ...."

ಮಂಡೋದರಿ ತನ್ನ ಗಂಡನ ನಡವಳಿಕೆಗಳನ್ನು ಮಹಿಸಿಕೊಂಡು ಮಾತನಾಡುತ್ತಿಲ್ಲ. ಆಕೆಗೆ ಆತ ಮಾಡಿರುವ ತಪ್ಪಿನ ಅರಿವು ಬೇರೆಲ್ಲರಿಗಿಂತ ಹೆಚ್ಚಾಗಿಯೆ ಇದೆ. ಅಲ್ಲದೆ, ಸ್ವತಃ ಪತಿವ್ರತೆಯಾದ ತನಗೆ ಸೀತೆಯ ಪಾತಿವ್ರತ್ಯದ ಶಕ್ತಿಯ ಪರಿವೆಯೂ ಇದೆ. ಹಾಗಿಲ್ಲದಿದ್ದರೆ ತನ್ನ ಗಂಡನೆಡೆಗೆ 'ಶುದ್ಧಿ ದೊರೆಕೊಳ್ವಂತೆ' ಪ್ರಾರ್ಥಿಸುವ ಬದಲು

ಗೆಲುವನ್ನೆ ಆಗ್ರಹಪಡಿಸಬಹುದಿತ್ತು. ಆದರೆ, ತಪ್ಪಿಗೆ ಶಿಕ್ಷೆ, ಪಶ್ಚಾತ್ತಾಪ, ಜೀವನ ಧರ್ಮ ಎಂಬುದನ್ನು ಆಕೆ ಬಲ್ಲಳು. ಇದೇ ಆತ್ಮೋದ್ಧಾರದ ಸೋಪಾನಗಳು ಎಂಬುದನ್ನೂ ಆಕೆ ಬಲ್ಲಳು. ಆದ್ದರಿಂದಲೆ ಪತಿವ್ರತೆಯಾದ ಮಂಡೋದರಿ ತನ್ನ ಹೊಟ್ಟೆಯ ಮಗಳಿಗೆ ಸ್ವಾತಂತ್ರ್ಯವನ್ನೀಯಲು ಬರುವಂತೆ ದುಃಖಾರ್ತೆಯೂ ಪತಿವ್ರತೆಯೂ ಆದ ಸೀತೆಯನ್ನು ಹುಡುಕಿಕೊಂಡು ಬಂದಿದ್ದಾಳೆ. ಹೆಣ್ಣಿನ ಹೃದಯ ಹೆಣ್ಣಿಗೆ ಮಾತ್ರವೇ ಗೊತ್ತು. ಪರಸ್ಪರ ಆದರ್ಶವಾಗುತ್ತಿರುವ, ಪರಸ್ಪರ ಉದ್ಧಾರವನ್ನೂ ಆಶಿಸುತ್ತಿರುವ, ತಮ್ಮ ಭವಿಷ್ಯವನ್ನೂ ಪರಸ್ಪರವಾಗಿ ತಕ್ಕಮಟ್ಟಿಗೆ ಖಚಿತವೆಂಬಂತೆ ಅರಿತುಕೊಂಡಿರುವ ಈ ಹೆಣ್ಣುಗಳು ಪರಸ್ಪರ ಶತ್ರುಪತ್ನಿಯರು ಹೇಗಾದಾರು? ಪರಸ್ಪರ ಜಾತಿ–ಮತ ಗರ್ವಾಂಧತೆಯಿಂದ ತುಂಬಿ ತುಳುಕುತ್ತಿರುವ ಈ ಮಾನವ ಸಮಾಜಕ್ಕೆ ಈ ಮಹಿಳೆಯರ ಆದರ್ಶ ಆಲಿಂಗನ ರಾಮ–ರಾವಣರ ಆದರ್ಶ ಆಲಿಂಗನದ ಕಡೆಗೆ ಸೂಚ್ಯವಾಗಿ ಬೊಟ್ಟು ಮಾಡುತ್ತಿದೆಯಲ್ಲವೆ?

ಮಹಿಳೆಯ ಬದುಕಿನ ಗೊತ್ತು–ಗುರಿಗಳು ಇವಕ್ಕಿಂತಲೂ ಉದಾತ್ತವಾದುದನ್ನು ಕಲ್ಪಿಸಿಕೊಳ್ಳುವದಾದರೂ ಹೇಗೆ? ಅಥವಾ ಇದು ಕೇವಲ ಕಲ್ಪನೆಯೆ? ಅಥವಾ ಕಳೆದು ಹೋದವರ ಬಗೆಗೆ ಕವಿಗಿರುವ ವ್ಯರ್ಥ ಪ್ರೀತಿಯೆ? ನಮ್ಮ ಭವಿಷ್ಯತ್ ಸಮಾಜದ ಮಾನವತೆ ತನ್ನ ಅದಮ್ಯ ಆಶಯಗಳನ್ನು ತುಂಬಿಕೊಳ್ಳುವಲ್ಲಿ ಅದಕ್ಕೆ ಉಳಿದಿರುವ ಏಕೈಕ ಮಾರ್ಗವೇ ಇದು ಎಂಬುದನ್ನು ಗಮನಿಸಬೇಕು. ಆತ್ಮೋನ್ನತಿಯ ಹಾದಿಯಲ್ಲಿರುವ ಪ್ರತಿಯೊಂದು ಜೀವಿಯೂ ರಾಮತ್ವವನ್ನೇ ಪಡೆಯುವದಕ್ಕಾಗಿ ತಪಿಸುತ್ತದೆ. ಅದರ ಸಂಕೇತ ಈ ಆದರ್ಶ ಮಹಿಳೆಯರ ಸಂವಾದಾಲಿಂಗನ.

ದರ್ಪ–ದಾರ್ಷ್ಟ್ಯಗಳ ಆಗರವಾಗಿರುವ ಗಂಡಿಗೆ ಹೆಣ್ಣಿನ ಪಾತಿವ್ರತ್ಯದ ಆಶ್ರಯ ದೊರೆಯದಿದ್ದಲ್ಲಿ ಅವನಿಗೆ ತನ್ನ ಆತ್ಮಸಾಕ್ಷಾತ್ಕಾರದ ಎಲ್ಲ ಹಾದಿಗಳೂ ಮುಚ್ಚಿಹೋಗುತ್ತವೆ ಎಂಬುದನ್ನು ಮಂಡೋದರಿಯ ಮುಂದಿನ ಮಾತುಗಳು ತೀರ ಸ್ಪಷ್ಟವಾಗಿ ಹೇಳಿಬಿಡುತ್ತವೆ.

"ನಿನ್ನ ಸಂಧಿಸಲೆನಗೆ
ಲಂಕೇಶನನುಮತಿಯನಿತ್ತನಿಲ್ಲದರಿಂದೆ
ನಾನೆ ಮೊದಲ್ಕೈತಂದು ನಿನ್ನ ದರ್ಶನದಿಂದೆ
ಧನ್ಯೆಯಾಗದೆ ಹೋದೆನೆಲೆ ಪುಣ್ಯ ಚಾರಿತ್ರೆ...
ಪ್ರಾರ್ಥನೆ ಸಫಲಮಾಯ್ತು, ನೀನೆ ದರ್ಶನವಿತ್ತೆ
ನುಡಿಸಿದೆ ಕೃತಾರ್ಥಳೆಂ,.... ಹದಿಬದೆತನಕೆ ಮೀರ್ವ
ಸಾಧನೆಯಿಲ್ಲ ತಂಗಿ....ಕೊಳೆಗೆ ತುಗುಳಲ್ಕಗ್ನಿ
ಕೊಳೆಯುಮುರಿಯುಪ್ಪುದಂತೆಯೆ ನಿನ್ನ ನೋಂಪಿಯಿಂ
ಕಿಡುಗೆನ್ನ ಪತಿಯ ಹೃದಯದ ಪಾಪ ಕಿಲ್ಬಿಷಂ
ಸನ್ಮತಿಯುದಿಸಿ ಶಾಂತಿ ಸುಖಮಕ್ಕೆ ಸರ್ವರಿಗೆ

ಇಲ್ಲಿಯ ಮೊದಲ ಮೂರು ಸಾಲುಗಳಲ್ಲಿ ಮಂಡೋದರಿ ಗಂಡಸಿನ ಮೇಲಾಳುತನವನ್ನೆ ಮುಂದೆ ಮಾಡುತ್ತಿದ್ದರೂ ಅವಳ ಹೃದಯದಲ್ಲಿ ಅಂತರ್ಗತವಾಗಿರುವ ಪ್ರಾರ್ಥನಾರೂಪದ ಚಿತ್‌ಶಕ್ತಿ ಅದಕ್ಕಿಂತ ಮೇಲಾಳಾಗಿರುವುದನ್ನು ಆಕೆ ಸಾಕ್ಷಿ-ಪುರಾವೆಗಳೊಡನೆ ಮುಂದಿಡುತ್ತಿರುವುದು ಗಮನಾರ್ಹ. ಅಷ್ಟೆ ಅಲ್ಲ, ಸೀತೆಗೆ ಮಂಡೋದರಿ ಹದಿಬದೆತನದ ಮಹಿಮೆಯ ಬಗ್ಗೆ ಉಪದೇಶ ಕೊಡುತ್ತಿರುವಂತೆ ಭಾಸವಾದರೂ ಆಕೆಯ ಹೃದಯಕ್ಕೆ ಗೊತ್ತು ತಾನು ಯಾರಿಗೆ ಉಪದೇಶಿಸುತ್ತಿದ್ದೇನೆಯೋ ಆ ತನ್ನ ತಂಗಿ ಸೀತೆ ಅಜ್ಞನ ಹೆಗಲ ಮೇಲೆ ಕೂತ ಮೊಮ್ಮಗನಂತೆ ತನಗಿಂತ ಮುಂದಿದ್ದಾಳೆ, ಮೇಲಿದ್ದಾಳೆ, ಎಂಬುದು. ಆಕೆಯಲ್ಲಿ ತನ್ನ ಆಸೆಯನ್ನು ತೋಡಿಕೊಂಡರೆ, ಏಕಕಾಲದಲ್ಲಿಯೇ ತಾನೂ ಆಕೆಯೂ ಉದ್ಧಾರವಾಗಬಹುದು ಎಂಬುದು. ಆದ್ದರಿಂದಲೇ ಮಂಡೋದರಿ ಸೀತೆಯ ಕಾಲುಗಳನ್ನು ಮುಟ್ಟಿ ನಮಸ್ಕರಿಸುವುದು ಯಥಾರ್ಥವಾಗಿರುವುದು.

ಸೀತೆಗೆಚ್ಚರಮಪ್ಪ ಮುನ್ನ ಮಾ ಸ್ತ್ರೀಮೂರ್ತಿ
ಮುಡಿ ಚಾಚುತಡಿಮುಟ್ಟಿ ಪಾದಧೂಳಿಯನಾಂತು
ನಡೆದಳಲ್ಲಿಂದೊಡನೆ ಕಣ್ಬೊಲವನತಿಗಳೆದು

ಕುವೆಂಪು ಅವರ ಪಾತಿವ್ರತ್ಯದ ಕಲ್ಪನೆ ಅತ್ಯಂತ ವೈಜ್ಞಾನಿಕವಾದುದು ಎಂಬುದನ್ನು ನಾವಿಲ್ಲಿ ನೆನಪಿಟ್ಟುಕೊಳ್ಳಬೇಕು. “ಸನ್ಮತಿಯುದಿಸಿ ಶಾಂತಿಸುಖಮಕ್ಕೆ ಸರ್ವರಿಗೆ” ಎಂಬ ಮಂಡೋದರಿಯ ಲೋಕೋತ್ತರವಾದ ಮಾತು ನಿಜವಾಗಬೇಕಾದರೆ ಸ್ತ್ರೀಯ ಪಾತಿವ್ರತ್ಯವನ್ನು ಬಿಟ್ಟು ಬೇರೆ ಮಾರ್ಗಗಳೇ ಇಲ್ಲ. ಈ ದೃಷ್ಟಿಯಿಂದ ಕವಿಯ ದಾರ್ಶನಿಕ ಪ್ರಜ್ಞೆಯ ಪಾತಿವ್ರತ್ಯದ ಅರ್ಥ ಅತ್ಯಂತ ವಿಶಾಲವಾಗಿದೆ, ಶ್ರೇಷ್ಠವಾಗಿದೆ; ಪಾತಿವ್ರತ್ಯ ಕೇವಲ ದೈಹಿಕವಾದುವಲ್ಲ, ಮಾನಸಿಕವಾದುದು ಎಂಬ ತಿಳುವಳಿಕೆಯಿಂದಾಗಿ **ರಾಮಾಯಣದರ್ಶನದ** ರಾವಣನ ಉಪಪತ್ನಿ ಧಾನ್ಯಮಾಲಿನಿ ಇದಕ್ಕೊಂದು ಉಜ್ವಲ ಉದಾಹರಣೆ.

೫

ಬಬ್ರುವಾಹನ ಪ್ರಧಾನ ಉಪಾಖ್ಯಾನವಾಗಿ ಜೈಮಿನಿ ಭಾರತದಲ್ಲಿ ನಿರೂಪಿತವಾಗಿದ್ದ ಒಂದು ಕಾಳಗದ ಕತೆ ಕುವೆಂಪು ಅವರ ಕೈಯಲ್ಲಿ ಚಿತ್ರಾಂಗದಾ ಪ್ರಧಾನ ಪ್ರೇಮ ಯಜ್ಞ ಕಥೆಯಾಗಿ ಸೇರ್ಪಟ್ಟಿರುವದು ಮಾನವ ಬದುಕಿನಲ್ಲಿ ಮದುವೆಯ ಗೊತ್ತು–ಗುರಿಗಳನ್ನು ನಿರ್ಣಯಿಸುವ ಇನ್ನೊಂದು ಕಾರಣಕ್ಕಾಗಿ ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಆಧುನಿಕ ಬದುಕೆಲ್ಲವೂ ದೈಹಿಕ ಸ್ವಾತಂತ್ರ್ಯ ಮತ್ತು ಭೌತಿಕ ಸುಖಾಪೇಕ್ಷೆಯ ಕಡೆಗೆ ವಾಲುತ್ತಿರುವಾಗ ಕವಿ ಕುವೆಂಪು ಸ್ವಲ್ಪ ಹೆಚ್ಚುಕಮ್ಮಿ ಅದಕ್ಕೆ ವಿರುದ್ಧವೆಂಬಂತೆ ಈ ಕಾವ್ಯವನ್ನು ರಚಿಸಿದ್ದಾರೆ. ಮಾನವ ಬದುಕು ತನ್ನ ಇತ್ತೀಚಿನ ದಿನಗಳಲ್ಲಿ ಶಾಸ್ತ್ರಾಂಧ ಮತಾಂಧ ಕಟ್ಟುಕಟ್ಟಳೆಗಳನ್ನು ಮೀರಿ ಮುನ್ನುಗ್ಗುತ್ತಿದೆ. ಅದು ಒಂದು ಬಗೆಯಲ್ಲಿ ಉತ್‌ಶೃಂಖಲವಾಗುತ್ತಿದೆ. ಅದಕ್ಕೆ ಆಧುನಿಕ ವೈಜ್ಞಾನಿಕ ದೃಷ್ಟಿ ಸ್ವಯಂಪ್ರೇರಿತ ಸಂಕೋಲೆಯೊಂದನ್ನು ತೊಡಿಸಬೇಕಾಗಿದೆ. ಹಾಗಾಗದಿದ್ದಲ್ಲಿ ಕೊಂಬೆಯಲ್ಲಿ ಕೂತು ಬುಡವನ್ನು ಕಡಿಯುವ

ಗಾಂಪರನ್ನು ಮಾತ್ರವೇ ನಾವು ಇನ್ನು ಮುಂದೆ ಕಣ್ಣಿಟ್ಟ ಕಡೆ ಕಾಣಬೇಕಾಗುತ್ತದೆ. ಹಾಗಾಗಿ, ಮದುವೆ–ಮಾನವ ಸಮಾಜ ತನ್ನ ಆದರ್ಶಮಯ ಅಪೇಕ್ಷೆಗಳನ್ನು ಈಡೇರಿಸಿಕೊಳ್ಳುವದಕ್ಕಾಗಿ ಸತಿಪತಿಗಳ ಹೃದಯದ ಪರಿಪಾಕದಲ್ಲಿ ಕಂಡುಕೊಂಡ ನೀಣೆಯಂತಿರುವ ಮದುವೆ–ಅದಕ್ಕಾಗಿಯೆ ಹುಟ್ಟಿಕೊಂಡ ನಮ್ಮ ಅನೇಕ ಹಳೆಯ ಕಾವ್ಯಗಳು ಹೇಳುವಂತೆ ಶೃಂಗಾರಲೀಲೆಗಾಗಿ ಏರ್ಪಟ್ಟ ಡೊಂಬರಾಟದ ರಂಗಸಜ್ಜಿಕೆ ಯಲ್ಲ. ಅಥವಾ ಆಧುನಿಕ ಗಂಡ–ಹೆಂಡತಿಯರಂತೆ ನರ್ತನಕ್ಕಾಗಿಯೆಂಬಂತೆ ವೇಷಭೂಷಣಗಳನ್ನು ತೊಟ್ಟು ಸ್ಕೂಟರ್–ಕಾರುಗಳಲ್ಲಿ ಮೆರೆದಾಡುವದಕ್ಕಾಗಿ ಕೊಟ್ಟ ಲೈಸನ್ಸ್ ಎಂದಿಗೂ ಅಲ್ಲ. ಆಧ್ಯಾತ್ಮಿಕವಾಗಿ ಹೇಗೋ ಹಾಗೆಯೇ ವೈಜ್ಞಾನಿಕವಾಗಿಯೂ ಮಾನವ ಸಮಾಜದಲ್ಲಿ ಮದುವೆಯ ಉದ್ದೇಶ ಈ ಎಲ್ಲದರಿಂದ ಸಂಪೂರ್ಣ ಬೇರೆಯಾಗಿರುವಂತಹದು. ಅದು ಯಾವ ಅರ್ಥದಲ್ಲಿಯೂ ಯಾವ ಕಾರಣಕ್ಕೂ ಕಾಮಮೂಲವಾದುದಲ್ಲ, ಪ್ರೇಮಮೂಲವಾದುದು. ನಿಷ್ಕಾಮ ಕರ್ಮಕ್ಕೆ, ನಿಸ್ವಾರ್ಥ ಧರ್ಮಕ್ಕೆ ಮಾತ್ರವೇ ಅಲ್ಲಿ ಮನ್ನಣೆ. ಅಹಂಕಾರ ದಮನ ದಲ್ಲಿ ಚಿತ್ತಶುದ್ಧಿಯ ಸನ್ನಿವೇಶದಲ್ಲಿ ಪ್ರೇಮ ಫಲಿಸುತ್ತದೆ. ಅದರ ಉದ್ದೇಶ ಆತ್ಮ ಸಾಕ್ಷಾತ್ಕಾರ. ಫಲ ಸಂತಾನ, ಮಾನವ ಸೃಷ್ಟಿಯ ಮೂಲಕ ಪ್ರಕೃತಿ ನಿರೀಕ್ಷಿಸಿರುವ ಮೂಲಭೂತ ಅಪೇಕ್ಷೆಗಳಿವು. ಆದ್ದರಿಂದಲೆ, ಮಾನವ ಮತಿ ತನ್ನ ಕಲ್ಯಾಣಕ್ಕಾಗಿ ಕಂಡುಕೊಂಡಿರುವ ಸಾಮಾಜಿಕ ಸಂಸ್ಥೆಗಳಲ್ಲಿ ಮದುವೆಗಿಂತ ಹೆಚ್ಚು ಗಂಭೀರವೂ ಗೌರವಾನ್ವಿತವೂ ಅದೇ ಸಮಯದಲ್ಲಿಯೇ ವೈಯಕ್ತಿಕವೂ ಆದ ಮಾನವ ಸಂಘಟನೆ ಬೇರೊಂದಿಲ್ಲ ಎಂಬಂತಾಗಿರುವುದು.

ಕುವೆಂಪು ಕಾವ್ಯ ಕಡೆದು ನಿಲ್ಲಿಸಿರುವ ಚಿತ್ರಾಂಗದೆ ಈ ಪ್ರಥಮ ವರ್ಗಕ್ಕೆ ಸೇರಿದ ಆದರ್ಶ ಸಾಧ್ವಿ. ಕವಿಯ ಆಲೋಚನೆಗಳು ಮಥಿಸಿ ಕೊಡುವುದು ಆದರ್ಶ ಗಳನ್ನೆ. ಆದರೆ, ಈ ಆದರ್ಶಗಳು ಪ್ರಾಯೋಗಿಕ ಬದುಕಿನಿಂದ ಹೊರಗೆ ಉಳಿಯು ವುದು ತುಂಬ ಅಪಾಯ ಎಂಬುದಕ್ಕೆ ವೈಜ್ಞಾನಿಕ ನಿದರ್ಶನಗಳಿವೆ. ಗಂಡಿಗಿಂತಲೂ ಗಂಡಾಗಿ ಬೆಳೆದ ಚಿತ್ರಾಂಗದೆ ಲೋಕೈಕವೀರ ಅರ್ಜುನದೇವನನ್ನೆ ಗಂಡನನ್ನಾಗಿ ಪಡೆಯಲು ತಪಿಸಿದಳು, ಪಡೆದಳು. ಪ್ರೇಮದ ಫಲವಾಗಿ ಮಡದಿಯ ಒಡಲನ್ನು ಬಭ್ರುವಾಹನ ತುಂಬುತ್ತಿದ್ದಂತೆಯೆ ಅರ್ಜುನದೇವ ಕಣ್ಮರೆಯಾದ, ಕಿವಿಮರೆಯಾದ. ಆದರೆ, ಹೃದಯದ ತುಂಬಗಲಕ್ಕೆ ಹಾಸಿ ಮಲಗಿದ. ಮದುವೆಯ ಪ್ರಥಮಾಪೇಕ್ಷೆ ಚಿತ್ರಾಂಗದೆಯ ಪ್ರೇಮಮೂರ್ತಿಯಾದ ಅರ್ಜುನನ ಭೌತಿಕಾಗಮದಲ್ಲಿ ಫಲಿಸಿತು. ಪರಮಾಪೇಕ್ಷೆಯಾದ ಆತ್ಮ ಸಾಕ್ಷಾತ್ಕಾರ ಆತನನ್ನು ಹೃದಯಾಭಿಲಾಷಿಯಾಗಿ ತುಂಬಿಕೊಳ್ಳದೆ ಬೇರೆ ಮಾರ್ಗವೆ ಇಲ್ಲ ಎಂಬುದನ್ನು ಕವಿ ಕುವೆಂಪು ಇಲ್ಲಿ ಅನುಪಮ ವಾಗಿ ಚಿತ್ರಿಸಿದ್ದಾರೆ. ಆ ವೀರಾಂಗನೆ ಪತಿ–ಪುತ್ರರ ಶ್ರೇಯೋಭಿಲಾಷಿಯಾಗಿ ಜೀತ ಹಿಡಿದು ಆಜೀವಪರ್ಯಂತ ತಪಿಸುತ್ತಾಳೆ. ಆ ಮೂಲಕ ಶಿವಸಾಯುಜ್ಯವನ್ನು ಹೊಂದುತ್ತಾಳೆ. ಮಹಿಳೆಗೆ ಮಾನವತೆಯಾಗಲಿ ಮಾನವತೆಗೆ ಮಹಿಳೆಯಾಗಲಿ ಪರಸ್ಪರವಾಗಿ ಸಲ್ಲಿಸಬೇಕಾಗಿರುವ ದೊಡ್ಡ ಕಾಣಿಕೆ ಇದಕ್ಕಿಂತ ಬೇರೆ ಯಾವುದಿದೆ ?

ಮಾನವ ಸಮಾಜದಲ್ಲಿ ಮದುವೆಯ ಉದ್ದೇಶ ಕೇವಲ ಸಂತಾನ ಪ್ರಾಪ್ತಿಗಾಗಿ ಅಲ್ಲ, ಆತ್ಮದ ಅಥವಾ ಮಾನಸಿಕ ವಿಕಾಸಕ್ಕಾಗಿ ಎಂಬುದನ್ನು ಆಧುನಿಕ ಲೈಂಗಿಕ ವಿಜ್ಞಾನಿಗಳು ಒತ್ತಿ ಹೇಳುತ್ತಿರುವವನ್ನು ನಾವಿಲ್ಲಿ ನೆನಪಿಟ್ಟುಕೊಳ್ಳಬೇಕು.

೬

ಇದುವರೆಗೆ ಕಾವ್ಯದ ವಿವರಗಳಲ್ಲಿ ಕೆಲವನ್ನು ಆಯ್ದುಕೊಂಡು ಕುವೆಂಪು ಅವರ ಅಭಿಪ್ರಾಯಗಳನ್ನು ಸ್ತ್ರೀಯರ ವಿಷಯಕ್ಕೆ ಸ್ಥೂಲವಾಗಿ ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಿದ್ದಾಯಿತು. ಈಗ ಮಹಿಳೆಯರಿಗಾಗಿಯೆ ಮುಡಿಪಿಟ್ಟ ಮಹತ್ಕೃತಿ **ಮಲೆಗಳಲ್ಲಿ ಮದುಮಗಳು** ಕಾದಂಬರಿ ಬಗೆಗೆ ಒಂದಿಷ್ಟು ಗಮನ ಹರಿಸೋಣ. ಈ ಕಾದಂಬರಿ ಮೇಲುನೋಟಕ್ಕೆ ಹೆಣ್ಣು–ಗಂಡುಗಳ ನಡುವಣ ಲೈಂಗಿಕ ಸಂಬಂಧಗಳ ಪಟ್ಟಿ ಮಾಡುತ್ತಿರುವ ಕೃತಿಯಾಗಿ ಕಂಡರೂ ಆಳಕ್ಕೆ ಇಳಿದು ಅಧ್ಯಯನಕ್ಕೆ ತೊಡಗಿದಾಗ ಮಾನವತೆಯ ಹೃದಯದಲ್ಲಿ ಚಿರಕಾಲದಿಂದಲೂ ತಪಿಸುತ್ತಿರುವ ಉದ್ಧಾರದ ಆಕಾಂಕ್ಷೆ ಹೆಡೆಯಾಡುತ್ತಿರುವದು ಗೊತ್ತಾಗುತ್ತದೆ. ಆಧುನಿಕ ವಿಚಾರವಂತರಾದ ನಾವು ಯಾವ ವರ್ಗದ ವಿರುದ್ಧ ಬಂಡೆದ್ದು, ಯಾವ ವರ್ಗದ ಉದ್ಧಾರಕ್ಕಾಗಿ ಆಕ್ರೋಶಭರಿತರಾಗಿ ಆವೇಶಭರಿತರಾಗಿ ಹೋರಾಟ ಹೂಡಲು ಕಂಕಣಬದ್ಧರಾಗಿರುವೆವೊ ಅಷ್ಟೇ ಆಕ್ರೋಶ ಆಗ್ರಹಗಳಿಂದ ಅದೇ ವರ್ಗದ ಉದ್ಧಾರಕ್ಕಾಗಿ ಕಂಕಣಕಟ್ಟಿರುವ ಈ ಕಾದಂಬರಿ ನಮಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಆ ವರ್ಗದಲ್ಲಿಯೂ ಉಪೇಕ್ಷಿತ ಭಾಗವಾಗಿರುವ ಸ್ತ್ರೀಯರ ಉದ್ಧಾರದ ಅಪೇಕ್ಷೆಯನ್ನೂ ಪ್ರಕಟಿಸುತ್ತದೆ ಮಾತ್ರವಲ್ಲ, ಮಾರ್ಗಗಳನ್ನೂ ಕಲ್ಪಿಸುತ್ತದೆ. ಇಲ್ಲಿಯ ಉದ್ಧಾರ ಹೆಣ್ಣು–ಗಂಡುಗಳಿಬ್ಬರಿಗೂ ಸಮಾನವಾಗಿದ್ದು ಪರಸ್ಪರಾವಲಂಬನೆಯಿಂದಲೆ ಪೂರೈಕೆಯಾಗುತ್ತಿರುವುದೂ ತುಂಬ ಗಂಭೀರವಾಗಿ ಗಮನಿಸಬೇಕಾದ ಸಂಗತಿ. ತಿಮ್ಮಿಯನ್ನು ಪಡೆದು ಜೀವನಸಾರ್ಥಕತೆಗಾಗಿ ದಿಟ್ಟ ಹೋರಾಟದಲ್ಲಿ ಏಕಾಂಗಿಯಾಗಿ ತೊಡಗಿರುವ ಗುತ್ತಿ ಕೆಳವರ್ಗದವನಾದರೂ ಚಿನ್ನಮ್ಮನನ್ನು ಪಡೆದು ಧನ್ಯನಾಗುವ ಅಪೇಕ್ಷೆಯನ್ನು ಪ್ರಕಟಿಸುತ್ತಿರುವ ಮೇಲುವರ್ಗದ ಮುಕುಂದಯ್ಯನಿಗೆ ಆಸರೆಯಾಗಿ ನಿಲ್ಲದಿದ್ದರೆ ಏನಾಗುತ್ತಿತ್ತು ಮತ್ತು ಏನಾಗುತ್ತಿರಲಿಲ್ಲ ಎಂದು ಊಹಿಸುವದೇ ಕಠಿಣ. ಐತನನ್ನ ಹೊಂದಿ ಬಡ ಗುಡಿಸಲನ್ನೆ ಭವ್ಯ ನಿಲಯವನ್ನಾಗಿ ಮಾಡಿಕೊಂಡಿರುವ, ಕೆಳವರ್ಗದವಳಾದರೂ ಸರ್ವ ಸುಖಶಾಂತಿ ಸಂಪನ್ನೆ, ಆದರ್ಶ ಸತಿಯಾದ ಪೀಂಚಲು ಮೇಲುವರ್ಗದವಳಾದರೂ ಹತಭಾಗ್ಯೆಯಾಗಿದ್ದ ಚಿನ್ನಮ್ಮನಿಗೆ ಧೈರ್ಯದೀಪವಾಗಿ ದಾರಿ ತೋರುತ್ತಾಳೆ. ತನ್ನ ಅತ್ತೆ ನಾಗತ್ತೆಯ ಕುಟಿಲ ವ್ಯೂಹಗಳಲ್ಲಿ ಕಂದಿ ಬೆಂದು ಬಳಲಿ ನಾಗಕ್ಕ ಕಡೆಗೆ ರೂಕ್ಷ ಸ್ವಭಾವದ, ದೈತ್ಯಗಾತ್ರದ ವೆಂಕಟಪ್ಪಗೌಡನ ಬಾಳನ್ನು ತುಂಬದಿದ್ದರೆ ಚಿನ್ನಮ್ಮನ ಭವಿಷ್ಯ ಕರಾಳವಾಗುತ್ತಿತ್ತು. ಇದನ್ನೆಲ್ಲ ಕವಿಸೃಷ್ಟಿ ಒಂದು ವಿಧಿಸೃಷ್ಟಿಯಂತೆ ನಿಯಂತ್ರಿಸುತ್ತಿರುವದನ್ನು ನೆನೆದಾಗ ಕುವೆಂಪು ಅವರ ಸೃಜನಶೀಲತೆಗೆ ಹೊಯ್‌ಕೈಯಾಗಬಲ್ಲ ಇನ್ನೊಂದು ಸೃಷ್ಟಿಯಿದ್ದೀತೆ !

ಆಧುನಿಕ ಭೌತಿಕ ಹಾಗೂ ಯೌಗಿಕ ವಿಜ್ಞಾನಿಗಳು ತಾತ್ವಿಕವಾಗಿ ಯಾವ ನಿಲುವಿಗೆ ಬರುತ್ತಿದ್ದಾರೆಯೊ ಆ ನಿಲುವಿನ ದೃಷ್ಟಿಯಿಂದ ಕುಣಿದು ಕಂಡ ಸ್ತ್ರೀಯನ್ನು ಚಿತ್ರಿಸಲು ಪ್ರಯತ್ನಿಸಲಾಗಿದೆ. ಆಶ್ಚರ್ಯವೆಂದರೆ ಅಧ್ಯಾತ್ಮ ಮತ್ತು ವಿಜ್ಞಾನ ಎರಡೂ ಒಂದನ್ನೇ ಕಾಣುತ್ತಿರುವುದು ಮತ್ತು ಹೇಳುವುದನ್ನೇ ಹಂಬಲಿಸುತ್ತಿರುವುದು. ಮಾನವ ಬದುಕಿನ ಗುರಿ ಆಧ್ಯಾತ್ಮಿಕ ವಿಕಾಸ ಎಂಬುದು ಇದರಿಂದ ಮನದಟ್ಟಾಗುತ್ತದೆ.

○

ಖಾಂಡೇಕರರ ದೃಷ್ಟಿಯಲ್ಲಿ ಸ್ತ್ರೀ

ಎಸ್. ಪಿ. ಪಾಟೀಲ

ಆಧುನಿಕ ಮರಾಠಿ ಸಾಹಿತ್ಯದಲ್ಲಿ ತುಂಬ ಎತ್ತರದ ಸ್ಥಾನವನ್ನಲಂಕರಿಸಿದ ಹೆಸರು ವಿಷ್ಣು ಸಖಾರಾಮ ಖಾಂಡೇಕರ. ಐದು ದಶಕಗಳವರೆಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಮಾಡಿ ಮರಾಠಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಅವರು. ಭಾವುಸಾಹೇಬ ಖಾಂಡೇಕರ ಹೆಸರು ಮರಾಠಿ ವಾಚಕರಿಗೆ ಪ್ರಿಯವಾದುದು. ಅವರ ಪ್ರಥಮ ಕಾದಂಬರಿ **ಹೃದಯಾಚಿಹಾಕ** ೧೯೩೦ರಲ್ಲಿ ಪ್ರಕಟವಾಯಿತು. ಮುಂದೆ **ಕಾಂಚನಮೃಗ** (೧೯೩೧), **ಉಲ್ಕಾ** (೧೯೩೪), **ದೋನಧ್ರುವ** (೧೯೩೪), **ಹಿರವಾ ಚಾಫಾ** (೧೯೩೮), **ದೋನಮನೆ** (೧೯೩೮), **ರಿಕಾಮಾ ದೇವ್ಹಾರಾ** (೧೯೩೯), **ಸುಖಾಚಾ ಶೋಧ** (೧೯೩೯), **ಪಾಂಢರೆ ಢಗ** (೧೯೩೯), **ಪಹಿಲ ಪ್ರೇಮ** (೧೯೪೦), **ಜಳಲೇಲಾ ಮೊಹೊರ** (೧೯೪೧), **ಕ್ರೌಂಚವಧ** (೧೯೪೨), **ಅಶ್ರು** (೧೯೫೪), **ಯಯಾತಿ** (೧೯೫೯). ಮತ್ತು **ಅಮೃತವೇಲ** (೧೯೬೭) ವರೆಗೆ ಅವರ ಕಾದಂಬರಿಯು ಬಳ್ಳಿ ಹಬ್ಬಿ ಫಲ ನೀಡಿದೆ.[1] ಕಾದಂಬರಿಯೊಂದಿಗೆ ನಾಟಕ, ಕಥಾಸಂಗ್ರಹ, ರೂಪಕ ಕಥಾ, ಲಘುನಿಬಂಧ ಸಂಗ್ರಹ, ಸಮೀಕ್ಷೆ, ಸಂಪಾದನೆ, ಚರಿತ್ರ, ಸಂಕೀರ್ಣ, ಅಲ್ಲದೆ ಚಲನ ಚಿತ್ರ ಕಥಾಸಾಹಿತ್ಯವನ್ನು ರಚಿಸಿ ಅವರು ತಮ್ಮ ಬಹುಮುಖ ಸಾಹಿತ್ಯ ಪ್ರತಿಭೆಯನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಸುಮಾರು ನೂರಕ್ಕೂ ಮೇಲ್ಪಟ್ಟ ಕೃತಿಗಳಲ್ಲಿ ಖಾಂಡೇಕರರು ಅನೇಕ ಸಮಸ್ಯೆಗಳನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. **ಯಯಾತಿ** ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ, ಜ್ಞಾನಪೀಠ ಪ್ರಶಸ್ತಿಯೂ ಲಭಿಸಿದುದು ಅವರ ಪ್ರತಿಭೆಗೆ ಸಂದ ಗೌರವಗಳಾಗಿದೆ.

ಖಾಂಡೇಕರರು ಸೃಜನಶೀಲ ವಿಚಾರವಂತರು. ಪ್ರತಿಭಾವಂತ ಕಲಾವಿದರು. “ಒಂದು ಕಲಾಕೃತಿ ಮೂಡಿ ಬರುವಲ್ಲಿ ಜೀವನದಲ್ಲಿಯ ದುಃಖದ ಅರಿವು ಮಹತ್ವಪೂರ್ಣವಾದುದು. ಅದರ ಅನುಭವದಿಂದ ಅಂತಃಕರಣ ಕಲಕುವ ಸಾಹಿತ್ಯ ಜನ್ಮ,

1. ಕಾಂಚನಮೃಗ, ದೋನಧ್ರುವ (ಎರಡುಧ್ರುವ), ಕ್ರೌಂಚವಧ ಮತ್ತು ಯಯಾತಿ ಈ ಕಾದಂಬರಿಗಳು ಕನ್ನಡಕ್ಕೆ ಅನುವಾದವಾಗಿವೆ.

ತಾಳುವವು" ಎಂಬುದು ಅವರ ಖಚಿತ ಅಭಿಪ್ರಾಯ. ಸಾಹಿತಿ ಜಗತ್ತನ್ನು ತಾಯಿಯಂತೆ ಪ್ರೀತಿಸಬೇಕೆನ್ನುವಲ್ಲಿ ಅವರ ಮಾನವೀಯತೆಯು ದರ್ಶನವಾಗುವದು. ಜೀವನ ಹಾಗೂ ಕಲೆಗಳ ಸಮನ್ವಯದಿಂದ ಮಾನವೀಯತೆಯನ್ನು ಸಮೃದ್ಧ–ಸಂಪನ್ನ–ಉಜ್ವಲವಾಗಬೇಕೆಂಬುದನ್ನು ಬಯಸುವ ಮನೋಧರ್ಮ ಅವರದು. ಕಲೆ ಕಲೆಗಾಗಿ ಅಥವಾ ಜೀವನಕ್ಕಾಗಿ ಎಂಬ ತತ್ವ ಅವರಿಗೆ ಒಪ್ಪಿತವಿಲ್ಲ. ಸಾಹಿತ್ಯದ ರೂಪ ಕಲಾತ್ಮಕವಾಗಿದ್ದರೂ ಅದರ ಆತ್ಮ ಸಾಮಾಜಿಕವಾಗಿರಬೇಕೆಂಬ ಉಭಯ ಹಿತವನ್ನು ಬಯಸುವ ಉದ್ದೇಶ ಅವರದು. ಕೇವಲ ಭಾವನೆಗಳನ್ನು ಉದ್ದೀಪನಗೊಳಿಸುವುದಕ್ಕಿಂತ ವೈಚಾರಿಕ ಬೋಧೆ ಹಾಗೂ ಮನವನ್ನು ಉನ್ಮೀಲಿಗೊಳಿಸುವ ಸಾಹಿತ್ಯದತ್ತ ಅವರ ದೃಷ್ಟಿ. ಹೀಗಾಗಿ ಅವರ ಸಾಹಿತ್ಯದಲ್ಲಿ ಮಾನವೀಯ ಅನುಕಂಪ, ಕಲಾತ್ಮಕ ನಿರೂಪಣೆ, ಹಾಗೂ ನೈತಿಕ ಮೌಲ್ಯಗಳ ಪ್ರತಿಪಾದನೆ ಮುಪ್ಪುರಿಗೊಂಡಿವೆ,

ಸ್ವಾತಂತ್ರ್ಯಪೂರ್ವದ ಭಾರತದ ಗ್ರಾಮೀಣ ಪ್ರದೇಶದ ಮಧ್ಯಮ ವರ್ಗದ ಅನೇಕ ಸಮಸ್ಯೆಗಳ ವಿವಿಧ ರೂಪಗಳು ಅವರ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಧ್ಯೇಯವಾದಿ, ಆದರ್ಶವಾದಿ ಖಾಂಡೇಕರರು ಸಮಾಜದಲ್ಲಿಯ ಬಡತನ, ಅಜ್ಞಾನ. ಮೇಲು-ಕೀಳು, ಸಾಮಾಜಿಕ ಅನಿಷ್ಟ ಸಂಪ್ರದಾಯ, ಸ್ತ್ರೀಯ ಶೋಷಣೆ ಮೊದಲಾದವುಗಳ ಮೇಲೆ ಕಲೆಯ ಮಾಧ್ಯಮದ ಮೂಲಕ ಬೆಳಕು ಬೀರಿ ಅವುಗಳ ನಿವಾರಣೆಗಾಗಿ ಪ್ರಯತ್ನಿಸಿದ್ದಾರೆ. ಮಾನವೀಯ ಅನುಕಂಪ ಅವರೆಲ್ಲ ಕೃತಿಗಳ ಸ್ಥಾಯಿಭಾವ. ಪ್ರಸ್ತುತ ಅವರ ಕಾದಂಬರಿಗಳ ಸ್ತ್ರೀ ಪಾತ್ರಗಳ ಮೂಲಕ ವ್ಯಕ್ತವಾದ ಅವರ ದೃಷ್ಟಿಯನ್ನು ನೋಡಬಹುದು.

* * * *

ಖಾಂಡೇಕರರಿಗೆ ತಮ್ಮ ಕೃತಿಗಳಲ್ಲಿಯೇ ತುಂಬ ಪ್ರಿಯವಾದ ಕಾದಂಬರಿ **ಉಲ್ಕಾ** (೧೯೩೪). ಆರಂಭದ ನಾಲ್ಕು ಮಾತುಗಳಲ್ಲಿ ಖಾಂಡೇಕರರು ಕಡುಬಡ, ಶ್ರಮಜೀವಿ ದಲಿತಸ್ತ್ರೀಯ ಬಗೆಗೆ ಹೀಗೆ ಬರೆಯುತ್ತಾರೆ : "ಮರ್ಯಾದೆಯ ರಕ್ಷಣೆಗಾಗಿ ಬಟ್ಟೆ ಇಲ್ಲದ್ದರಿಂದ ಮನೆಯಿಂದ ಹೊರಬೀಳದ ಶ್ರಮಜೀವಿ ಸ್ತ್ರೀಯನ್ನು ಶಿರೋಡದಲ್ಲಿ ನಾನು ಪ್ರಪ್ರಥಮ ಕಂಡೆ.... ಸಾಮಾಜಿಕಕ್ರಾಂತಿ ಹಾಗೂ ಸಾಮಾಜಿಕ ಸುಧಾರಣೆಗಳಲ್ಲಿಯ ವಿಲಕ್ಷಣ ಅಂತರವೂ ನನಗೆ ಇದೇ ಕಾಲಕ್ಕೆ ಅರ್ಥವಾಯಿತು. ಮಧ್ಯಮ ವರ್ಗದ ಸುಶಿಕ್ಷಿತ, 'ಬಿಳಿ ಕೊರಳು ಪಟ್ಟಿಯ' ಜನರ ಜೀವನ ವಿಕಾಸಕ್ಕೆ ಅಡ್ಡಿಯನ್ನುಂಟು ಮಾಡುವ ಧಾರ್ಮಿಕ ಅಂಧರೂಢಿ ಅಥವಾ ಸಾಮಾಜಿಕ ಮೂಢನಂಬಿಗೆಗಳನ್ನು ಇಲ್ಲದಂತೆ ಮಾಡುವದು ಸಾಮಾಜಿಕ ಸುಧಾರಣೆಯ ಅರ್ಥವೆಂದು ನನ್ನ ಚಿಕ್ಕಂದಿನಲ್ಲಿಯ ತಿಳುವಳಿಕೆಯಾಗಿತ್ತು."[1] "ಸ್ತ್ರೀಯರ ದಾಸ್ಯ ಹಾಗೂ ದಲಿತರ ದಾಸ್ಯ ಎರಡೂ ದಾಸ್ಯ ಶತಮಾನಗಳಿಂದ ನಡೆದು ಬಂದಿವೆ; ಧರ್ಮದಿಂದ ಗೌರವಿಸಲ್ಪಟ್ಟಿವೆ, ರೂಢಿಯಿಂದ ಮೈಗೂಡಿ ಹೋಗಿವೆ; ಸಮಾಜದಿಂದ ಪವಿತ್ರವೆನ್ನಿಸಿಕೊಂಡಿವೆ. ಕಿರಿಕಿರಿ ಮಾಡುವ ಕೂಸಿಗೆ ತಿಳುವಳಿಕೆಯಿಲ್ಲದ ತಾಯಿ ಅಫೀಮಿನ ಚೂರನ್ನು ಹಾಕುವಂತೆ ಸಮಾಜವು ಇಂದಿನವರೆಗೆ ಅಸಂಖ್ಯ ದುರ್ದೈವಿ ದಾಸ-ದಾಸಿ

1. ಉಲ್ಕಾ : ಮೂರನೆಯ ಮುದ್ರಣ, 1946. ಪು. 13.

ಯರನ್ನು ಸುಮ್ಮನೆ ಕೂಡ್ರಿಸಿ ಬಿಟ್ಟಿತು. ಆದರೆ ಈ ಸಾಮಾಜಿಕ ಶಾಂತತೆ ಅಂದರೆ ಸ್ಮಶಾನ ಶಾಂತತೆಯಂತಿದ್ದಿತು."[1]

ಸೌಂದರ್ಯ ಮತ್ತು ಸಂಪತ್ತು ಇಲ್ಲದ ಉಲ್ಕಾಳಂತಹ ತರುಣಿ ಅನುಭವಿಸ ಬೇಕಾಗುವ ಕಷ್ಟ, ಶ್ರೀಮಂತರ ದರ್ಪ, ವಿಷಮತೆಯ ಕಿಚ್ಚಿನಿಂದ ಪಾಲಿಗೆ ಬರುವ ದುಃಖ ಮೊದಲಾದವುಗಳ **ಚಿತ್ರಣ ಉಲ್ಕಾ**ದ ಕಥಾವಸ್ತು. ಉಲ್ಕಾ ಮಧ್ಯಮ ವರ್ಗದ ತರುಣಿಯರ ಪ್ರತಿನಿಧಿಯಾಗಿ ಇಲ್ಲಿ ಕಾಣಿಸಿಕೊಂಡಿದ್ದಾಳೆ. ಸೇವಾಭಾವನೆ ಯಿಂದ ಹಳ್ಳಿಯ ಸುಧಾರಣೆಗಾಗಿ ಶಿಕ್ಷಕವೃತ್ತಿಯನ್ನು ಸ್ವೀಕರಿಸಿದ ಆದರ್ಶವಾದಿ ತಂದೆ ಬಾವುಸಾಹೇಬರ ಏಕಮಾತ್ರ ಪುತ್ರಿ ಅವಳು. ಸಾಧಾರಣರೂಪ, ಬಡತನ ಗಳಿದ್ದರೂ ಸಂಸ್ಕಾರ ಹಾಗೂ ಪುಸ್ತಕಗಳ ಅಧ್ಯಯನದಿಂದ ಮನಸ್ಸನ್ನು ಆದರ್ಶ ಗಳಲ್ಲಿ ತೊಡಗಿಸಿಕೊಂಡು ವಿಶಾಲಗೊಳಿಸಿಕೊಂಡವಳು. ತಂದೆ ಭಾವು ಅಂತರ ಜಾತಿಯ ಪುನರ್‌ವಿವಾಹ ಮಾಡಿಕೊಂಡವರು. ಈ ಕಾರಣದಿಂದಾಗಿ ಸಮಾಜದ ಇತರ ಸ್ತ್ರೀಯರಿಂದ ಅವಹೇಳನೆಗೆ ಗುರಿಯಾದ ಅವಳ ತಾಯಿ ಸಮಾಜದ ಯಾವ ಸಮಾರಂಭಗಳಲ್ಲಿಯೂ ಭಾಗಿಯಾಗದೆ ತಮ್ಮ ಮನೆಯಲ್ಲಿಯೇ ತಮ್ಮ ಭಾವವಿಶ್ವ ವನ್ನು ರೂಪಿಸಿಕೊಳ್ಳಬೇಕಾಗುವದು. ಹಳ್ಳಿಯ ಜನರ ಅಜ್ಞಾನ, ಅವರ ರೂಢ ಸಂಪ್ರದಾಯಗಳಿಂದಾಗಿ ಉಲ್ಕಾಳ ತಾಯಿ ಉಪೇಕ್ಷೆಗೆ ಗುರಿಯಾಗಿರುವದು ಸ್ವಾಭಾ ವಿಕ; ಸಮಾಜದ ಪೀಡೆಯೂ ಅಪರಿಹಾರ್ಯ.

ವಸಂತರಾವ ಹಾಗೂ ಮಾಣಿಕರಾವರು ಉಲ್ಕಾಳ ಜೀವನದಲ್ಲಿ ಪ್ರಿಯಕರ ರಾಗಿ ಪ್ರವೇಶಿಸುವರು. ವಸಂತ ಉಲ್ಕಾಳ ತಂದೆಯ ಸೋದರಳಿಯ. ಅವರ ಸಹಾಯದಿಂದ ಶಿಕ್ಷಣ ಮುಂದುವರಿಸಿದವ. ಆದರೆ ಎಲ್. ಎಲ್. ಬಿ. ಆದ ಮೇಲೆ ಶ್ರೀಮಂತ ಮನೆತನದ ಕನ್ಯೆಗಳು ಮುಂದೆ ಬಂದಾಗ ಉಲ್ಕಾಳಂತಹ ಬಡಕನ್ಯೆಯನ್ನು ನಿರಾಕರಿಸಿದ. ಮಾಣಿಕರಾವನೂ ಅಷ್ಟೇ. ಸಮಾಜನಿಷ್ಠೆಗೆ ಅವರಲ್ಲಿ ಮಹತ್ವವಿಲ್ಲ. ಉಲ್ಕಾಳ ಸಮವಯಸ್ಸಿನ ಇಂದುಳ ತಂದೆ ಮುಂಬಯಿಯಲ್ಲಿ ವ್ಯವಹಾರದಲ್ಲಿ ತೊಡ ಗಿದ್ದು, ಅಲ್ಲಿ ಮುಂದಿನ ವಿದ್ಯಾಭ್ಯಾಸಕ್ಕೆ ಅವಳು ಹೋಗುವಳು. ಬಡಜನರಿಗಾಗಿ ಏನಾದರೂ ಮಾಡಬೇಕೆಂಬ ವಿಚಾರವುಳ್ಳವಳು. ಆದರೆ ಅದಕ್ಕೆ ಬೇಕಾದ ವೈಚಾ ರಿಕ ತಳಹದಿಯಾಗಲಿ, ಅದನ್ನು ಕಾರ್ಯರೂಪಕ್ಕೆ ತರುವ ಸಾಮರ್ಥ್ಯವಾಗಲಿ ಇಲ್ಲ ದವಳು. ಉಚ್ಚವರ್ಗದ ಜೀವನನಿಷ್ಠೆಯಲ್ಲಿ ಮಗ್ನಳಾದ ಇಂದು "ಸಮಾಜಕ್ಕಾಗಿ ನೀನು ಏನಾದರೂ ಮಾಡು, ಹೀಗೆ ಸುಮ್ಮನೆ ಕೂಡಬೇಡ" ಎಂದು ಉಲ್ಕಾಳಿಗೆ ಉಪದೇಶಿಸುವಳು. ಇವಳೇ ಮುಂದೆ ಉಲ್ಕಾಳನ್ನು ಪ್ರೀತಿಸಿ, ಮದುವೆಯಾಗಲು ಸಿದ್ಧನಾದ ಮಾಣಿಕರಾವನ ಕೈಹಿಡಿಯುವಳು.

ವಸಂತ ಇಲ್ಲವೆ ಮಾಣಿಕರಾವ ಇವರಲ್ಲಿ ಯಾರೊಬ್ಬರೊಂದಿಗಾದರೂ ಉಲ್ಕಾಳ ವಿವಾಹವಾಗಬೇಕಿತ್ತು. ಆದರೆ ಆಗಲಿಲ್ಲ. ಈ ನಿರಾಶೆಯಲ್ಲಿಯೇ ಉಲ್ಕಾಳ ತಾಯಿಯ ಮರಣವಾಗುವದು. ಉಲ್ಕಾಳ ಜೀವನದಲ್ಲಿ ಕಾಣಿಸಿಕೊಳ್ಳುವ ಇನ್ನೊಬ್ಬ ವ್ಯಕ್ತಿ ಚಂದ್ರಕಾಂತ. ಭಾವು ಅವರ ಧ್ಯೇಯವಾದ ಅವನ ಮನದಲ್ಲಿ ನಾಟಿದ,

1. ಉಲ್ಕಾ : ಮೂರನೆಯ ಮುದ್ರಣ, 1946, ಪು,19.

ಅರಳಿದೆ. ಬುದ್ಧಿವಂತ, ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಮುಂದೆ ಕ್ರಾಂತಿಕಾರಿಯಾಗುವನು. ಶಾಂತಿನಿಕೇತನದಲ್ಲಿ ವಾಸಿಸಿ, ಕೂಲಿಕಾರನಾಗಿ ಜೀವಿಸಲು ಪ್ರಯತ್ನಿಸುವನು. ಹೀಗಾಗಿ ವಿಧುರ ಪಂಡಿತನೊಂದಿಗೆ ಉಲ್ಕಾಳ ವಿವಾಹವಾಗುವಲ್ಲಿ ಭಾವು ಅವರ ಧ್ಯೇಯವಾದಕ್ಕೆ ಸೋಲುಂಟಾಗುವದು. ಜಮೀನ್ದಾರ ಪಂಡಿತ ಕಂದಾಯ ವಸೂಲಿಗೆ ಹೋದಾಗ ನಾವೆ ಮುಳುಗಿ ಸಾಯುವನು. ಆಗ ಉಲ್ಕಾ ತನ್ನ ಆಸ್ತಿಯನ್ನು ಟ್ರಸ್ಟ ಮಾಡಿ ತನ್ನನ್ನು ಸಮಾಜಸೇವೆಗೆ ಸಂಪೂರ್ಣ ಅರ್ಪಿಸಿಕೊಳ್ಳುವಳು. ಅವಳ ಸಮಾಜ ಸೇವಾಭಾವ, ಸಮರ್ಪಣೆಯ ಗುರಿ ಅವಳ ಆದರ್ಶವನ್ನು ಪ್ರತಿಬಿಂಬಿಸುವವು.

ಧ್ಯೇಯವಾದಿಯಾಗಿ ಅಂತರ್‌ಜಾತಿಯ ಪುನರ್‌ವಿವಾಹ ಮಾಡಿಕೊಂಡು ಸಮಾಜದಿಂದಲೂ, ತಂಗಿಯಿಂದಲೂ ಅಪಹಾಸ್ಯಕ್ಕೆ ಗುರಿಯಾಗುವ ಭಾವು ಅವರ ಬಡತನ ಅವರ ಹೆಂಡತಿಯನ್ನೂ, ಮುಗ್ಧ ತರುಣಿ ಉಲ್ಕಾಳನ್ನೂ ಬಲಿ ತೆಗೆದುಕೊಳ್ಳುವದು. ಸುಶಿಕ್ಷಿತನಾದ ವಸಂತ, ಪರದೇಶಕ್ಕೆ ಹೋಗಿ ಬಂದ ಮಾಣಿಕರಾವ, ಇವರ ಪ್ರೀತಿಯ ವ್ಯವಹಾರಿಕ ನೆಲೆ–ಬೆಲೆ. ಸ್ತ್ರೀಯೆಂದರೆ ಕೇವಲ ಭೋಗವಸ್ತುವೆನ್ನುವ ಪಂಡಿತರಾವರ ದೃಷ್ಟಿ ಖಾಂಡೇಕರರ ಅಂತಃಕರಣವನ್ನು ಕಲಕಿ ಲಲಿತ ಕಲಾಕೃತಿಯ ಮೂಲಕ ಇಲ್ಲಿ ರೂಪತಾಳಿ ನಿಂತಿದೆ.

ಉಲ್ಕಾಳ ಬಾಲ್ಯದ ಗೆಳತಿ ನೀರಾ ಕೆಳಜಾತಿಯಲ್ಲಿ ಹುಟ್ಟಿದ ರೂಪವತಿಯಾದರೂ, ಬಡತನದ ಕಿಚ್ಚಿನಿಂದಾಗಿ ಕುಡುಕ ವಿಧುರನನ್ನು ಮದುವೆಯಾಗಿ, ಹಸಿವೆಯಿಂದ ಬಳಲುತ್ತ, ಗಂಡ ಕುರುಡನಾದಾಗ ಹೊಟ್ಟೆಪಾಡಿಗಾಗಿ ವ್ಯಭಿಚಾರವನ್ನವಲಂಬಿಸಬೇಕಾದುದು ಸ್ತ್ರೀಯ ನಿರ್ಗತಿಕ ಬಾಳಿನ ಕರುಣಾಪೂರ್ಣ ಚಿತ್ರವನ್ನೀಯುವದು. ಧ್ಯೇಯವಾದಿ ಭಾವು ಅವರೂ ರೂಢಿಗೆ ತಲೆಬಾಗಿ, ಪರಿಸ್ಥಿತಿಗೆ ಮಣಿದು ಉಲ್ಕಾ ಮಗಳಾದುದರಿಂದ ಅವಳ ಹೆಚ್ಚಿನ ಶಿಕ್ಷಣವನ್ನು ನಿಲ್ಲಿಸಬೇಕಾಗುವದು.

ಒಟ್ಟಿನಲ್ಲಿ **ಉಲ್ಕಾ**ದಲ್ಲಿ ಸ್ತ್ರೀಯ ಸುಖ–ದುಃಖ–ಯಾತನೆ–ವ್ಯಥೆಯ ಕಥೆ ಸಮರ್ಥರೀತಿಯಲ್ಲಿ ಚಿತ್ರಿತವಾಗಿದೆ. ಖಾಂಡೇಕರರ ಆದರ್ಶವಾದ, ಮಾನವೀಯ ಅನುಕಂಪ, ಸ್ತ್ರೀಸಮಾನತೆಯ ವಿಚಾರಗಳು ವ್ಯಕ್ತವಾಗಿದ್ದರೂ ಅಂದಿನ ಸಮಾಜ ಅವನ್ನು ಅರಗಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದುದನ್ನು ಅವರು ಸ್ವೀಕರಿಸಿದಂತೆ ತೋರುವದು. ಶ್ರೀಮತಿ ಕುಸುಮಾವತಿ ದೇಶಪಾಂಡೆ ಅವರು **ಉಲ್ಕಾ** ಕಥಾವಸ್ತುವಿನಲ್ಲಿ ಮೂರು ವಿಚಾರ ಪ್ರವಾಹಗಳನ್ನು ಸರಿಯಾಗಿ ಗುರುತಿಸಿದ್ದಾರೆ: ಮೊದಲನೆಯದಾಗಿ ಸ್ತ್ರೀ ವಿಷಯಕ, ಎರಡನೆಯದು ತ್ಯಾಗಪೂರ್ವಕ ಸಲ್ಲಿಸಿದ ಸಮಾಜಸೇವೆಗೆ ಸಂದ ಪ್ರತಿಫಲ, ಹಾಗೂ ಮೂರನೆಯದಾಗಿ ಆರ್ಥಿಕ ವಿಷಮತೆಯ ವಿರುದ್ಧ ಕುದಿಯೇಳುವ ಕ್ರಾಂತಿಕಾರಕತೆ. ಉಲ್ಕಾ, ಭಾವು, ಚಂದ್ರಕಾಂತರು ಈ ಮೂರು ವೈಚಾರಿಕ ಪ್ರವಾಹಗಳ ಪ್ರತಿಧಿಗಳಾಗಿದ್ದಾರೆ.

* * * *

1. ಕುಸುಮಾವತಿ ದೇಶಪಾಂಡೆ: ಮರಾಠಿ ಕಾದಂಬರಿ: ಪಹಿಲೆ ಶತಕ, ದ್ವಿತೀಯ ಮುದ್ರಣ, 1975, ಪುಟ. 68.

ದೋನಧ್ರುವ–([illegible] ಎರಡು ಧ್ರುವ) ಖಾಂಡೇಕರರ ನಾಲ್ಕನೆಯ ಕಾದಂಬರಿ. (ಉಲ್ಕಾ ಮತ್ತು ಈ ಕೃತಿ ಅವಳಿ ಮಕ್ಕಳಂತೆ ಎಂದು ಅವರೇ ಹೇಳಿಕೊಂಡಿದ್ದಾರೆ) ಜಗತ್ತಿನಲ್ಲಿಯ ದುಃಖದ ಕಾರಣ ಹಾಗೂ ಅವರ ನಿವಾರಣೆಯೇ **ಎರಡುಧ್ರುವ**ದ ವಸ್ತು. ಶ್ರೀಮಂತಿಕೆ ಹಾಗೂ ಬಡತನ–ಎರಡು ಧ್ರುವಗಳು. ಇದರ ನಾಯಿಕೆ ವತ್ಸಲಾಳ ಮನಸ್ಥಿತಿಯನ್ನು ವರ್ಣಿಸುವಾಗ ಖಾಂಡೇಕರರು ಹೀಗೆ ಬರೆಯುತ್ತಾರೆ— "ಕಲೆ ಮತ್ತು ಜೀವನ, ಸುಖವಸ್ತು ಕೆಲಸಗಾರ ಮತ್ತು ಕಾರ್ಮಿಕ. ಭೋಗ ಮತ್ತು ತ್ಯಾಗಗಳ ಎರಡು ಧ್ರುವಗಳ ಜೊತೆ ವತ್ಸಲಾಳಿಗೆ ಸುತ್ತಲೂ ಕಾಣಹತ್ತುವವು. ಧ್ರುವಗಳು ಎರಡೇ ನಿಜ! ಆದರೆ ಅವುಗಳಲ್ಲಿಯ ಈ ಭಯಂಕರ ಅಂತರ! ಈ ಅಂತರದಿಂದಾಗಿಯೇ ಜಗತ್ತಿನಲ್ಲಿಯ ಎಲ್ಲ ದುಃಖಗಳೂ ಹುಟ್ಟಿಕೊಂಡಿವೆ."

ಈ ಕಾದಂಬರಿಯ ಪ್ರಮುಖ ಪಾತ್ರಗಳು ವತ್ಸಲಾ, ರಮಾಕಾಂತ ನಾಯಕ. ಲಲಿತ ಲೇಖಕನಾದ ರಮಾಕಾಂತ ಪಾತರಗಿತ್ತಿಯಂಥ ವೃತ್ತಿಯವ. ಜೀವನವನ್ನು ಗಂಭೀರವಾಗಿ ಕಾಣದೆ ಎಲ್ಲವನ್ನು ಮೋಜಿನಿಂದ ಸ್ವೀಕರಿಸಬಯಸುವವ. ಇವನಿಂದಾಗಿ ವತ್ಸಲೆಯ ಗೋಳು. ಅವಳ ರೂಪ ಅಷ್ಟಕ್ಕಷ್ಟೆ, ಕುರೂಪವೇ ಸರಿ. ಹಿರಿಯರ ಒತ್ತಾಯಕ್ಕಾಗಿ ಮದುವೆಯಾದರೂ ಕುರೂಪಿ ಹೆಂಡತಿಯೊಂದಿಗೆ ಜೀವಿಸುವುದು ಸೌಂದರ್ಯಾಸ್ವಾದನೆಗೆ ಅಡ್ಡಿಯೆಂದು ರಮಾಕಾಂತ ಭಾವಿಸುವನು. ಬಾಹ್ಯ ಸೌಂದರ್ಯ ಮಹತ್ವದ್ದು. ಅಂತಃ ಸೌಂದರ್ಯದ ಪ್ರಯೋಜನೆ ಏನೆಂದು ಬಗೆಯುವನು. ಹೀಗಾಗಿ ಅವಳನ್ನು ಬಿಡುವನು. ಅಲ್ಲಿಂದ ವತ್ಸಲೆಯ ಪರಿಭ್ರಮಣ. ಕೊಂಕಣದ ಗೋಡಂಬಿ ಕಾರ್ಖಾನೆಯಲ್ಲಿ ಕೂಲಿ ಮಾಡುವಳು. ಈ ಹಳ್ಳಿಯ ಓರ್ವ ಕೂಲಿಕಾರಳಾದ ಸುರಂಗಾ ಮುಂಬಯಿಗೆ ಹೋಗಿ ನಟಿಯಾಗುವಳು. ಅವಳ ಹಾಗೂ ರಮಾಕಾಂತನ ಭೇಟಿಯಾಗಿ ಇಬ್ಬರಲ್ಲಿ ಹೊಂದಿಕೆಯಾಗುವಂತೆ ಕಾಣಿಸುವದರಲ್ಲಿ **ಬಕುಲ** ವಾರಪತ್ರಿಕೆಯ ಕಚೇರಿಯಲ್ಲಿ ಸುಲೋಚನೆ ಅವನಿಗೆ ಕಾಣಿಸಿಕೊಳ್ಳುವಳು. ಸುಂದರ ವಿದ್ಯಾವತಿ, ಕಲಾವಿದೆ, ಶ್ರೀಮಂತ ತರುಣಿಯಾದ ಅವಳು ರಮಾಕಾಂತನ ಮನಸ್ಸನ್ನು ಸೆಳೆದುಕೊಳ್ಳುತ್ತಾಳೆ. ಸುಲೋಚನೆ–ಸುರಂಗಾರನ್ನು ಹಿಂಬಾಲಿಸುವದರಲ್ಲಿ ತಾನು ಕಲಾಸೌಂದರ್ಯದ ಆರಾಧನೆ ಮಾಡುತ್ತಿರುವಂತೆ ಅವನಿಗನ್ನಿಸುವದು. ಆದರೆ ಸುರಂಗಾಳ ಮೊದಲ ಮಗುವನ್ನು ಸಾಕುವ ಪ್ರಶ್ನೆ ಬಂದಾಗ ಅವನ ಸೌಂದರ್ಯಾಸಕ್ತಿ ಅಪಾಯದ ಅಂಚನ್ನು ತಲುಪುವದು ಜೀವನವನ್ನು ಅನುಭವಿಸುವದರಲ್ಲಿ ಅವನಿಗೆ ಆನಂದವಿದೆ. ಆದರೆ ಜವಾಬುದಾರಿಗಳನ್ನು ನಿರ್ವಹಿಸುವ ಧೈರ್ಯವಿಲ್ಲ. ರಮಾಕಾಂತ ಸುರಂಗಾಳಲ್ಲಿ ಅನುರಕ್ತನೆಂದು ತಿಳಿದಾಗ ಸುಲೋಚನೆ ವಿದ್ಯಾಧರನನ್ನು ಹಿಂಬಾಲಿಸುವಳು. ರಮಾಕಾಂತನ ಜೀವನ ನಿರಾಶೆಯಿಂದ ಕೂಡಿ, ಅವನಿಗೆ ಪಶ್ಚಾತ್ತಾಪವೆನಿಸುವದು. ಆಗ ವತ್ಸಲಾಳ ಭೇಟಿಯಾಗುವದು. ಅವನ ವಿನಂತಿಯನ್ನು ಮನ್ನಿಸಿ ಮತ್ತೆ ಅವನೊಂದಿಗೆ ಮನೆಗೆ ಹೋಗಲು ನಿರಾಕರಿಸುವಳು. ಆಗ ಅವನು ಏಕಾಕಿಯಾಗುವನು. ಜೀವನದೊಂದಿಗೆ ಸಂಬಂಧವಿರದ ಕಲೆ ಮತ್ತು ಸೌಂದರ್ಯ ಅವನೊಂದಿಗಿರುತ್ತವೆ.

ಸಮಾಜದಲ್ಲಿಯ ಸ್ತ್ರೀಯ ದುಃಖವನ್ನು ಖಾಂಡೇಕರರು ಇಲ್ಲಿ ಚಿತ್ರಿಸಿದ್ದಾರೆ. ವತ್ಸಲೆಯಂಥ ಸುಖವಸ್ತು ತರುಣಿ ರಮಾಕಾಂತನಂಥ ವಿಲಾಸಪ್ರಿಯ ತರುಣನಿಂದಾಗಿ ಸಂಕಟಕ್ಕೆ ಬಲಿಯಾದುದು, ಅವಳ ಶೋಷಣೆ, ಸುರಂಗಾ ನಟಿಯಾಗಿ ತನ್ನ ಮರ್ಯಾದೆ ಬೀದಿಗೀಡಾಗ ಅನುಭವಿಸಬೇಕಾದ ದುಃಖ ಮುಂತಾದವನ್ನು ಖಾಂಡೇಕರರು ಸುತ್ತಲಿನ ಸಮಾಜದಲ್ಲಿ ಕಂಡಿದ್ದಾರೆ. ಅವನ್ನು ಚಿತ್ರಿಸುವ ಮೂಲಕ ತರುಣ–ತರುಣಿಯರನ್ನು ಎಚ್ಚರಿಸಲು ಪ್ರಯತ್ನಿಸಿದ್ದಾರೆ. **ಉಲ್ಕಾ**ದಲ್ಲಿಯ ವಿಚಾರ ಪ್ರಧಾನತೆ ಹಾಗೂ ಕಲ್ಪನಾ ರಮ್ಯತೆಯ ಮಿಶ್ರಣ ಮತ್ತೆ ಇಲ್ಲಿ ಕಾಣಿಸಿಕೊಳ್ಳುವದು. ಆದರೆ ಈ ಮಿಶ್ರಣ **ಉಲ್ಕಾ**ದಲ್ಲಿನಂತೆ ಸಮರಸವಾಗಿಲ್ಲ."[1]

"ಇಂದಿನ ಜಗತ್ತು ಬಡವರದಾಗಿರಲಿಕ್ಕಿಲ್ಲ. ಆದರೆ ನಾಳಿನ ಜಗತ್ತು ಅವರದೇಕೆ ಆಗಬಾರದು ? ಆದರೆ ಜಗತ್ತಿನಲ್ಲಿ ಇಷ್ಟೊಂದು ಬದಲಾವಣೆ ಆದೀತ ? ಈ ಜಗತ್ತಿನಲ್ಲಿ ತನ್ನಷ್ಟಕ್ಕೆ ತಾನೇ ಏನೂ ಆಗುವದಿಲ್ಲ. ಬಡವರಿಗೆ ಶಕ್ತಿಯಿಲ್ಲ, ಶ್ರೀಮಂತರಿಗೆ ಇಚ್ಛೆಯಿಲ್ಲ ! ಈ ಎರಡು ಜಗತ್ತಿನ ಅಂಚಿನಲ್ಲಿರುವ ಮಾನವರು ಕ್ರಾಂತಿಗಾಗಿ ಮುಂದಾಗಬೇಕು...." ಎಂದು ಹೇಳುವ **ಹಿರವಾ ಚಾಫಾ**ದ (೧೯೩೮) ನಾಯಿಕೆ ಸುಲಭಾ **ಎರಡು ಧ್ರುವದ** ಬೇರೆ ಸಂದರ್ಭದ ದರ್ಶನವನ್ನೀಯುವಳು. ಅಲ್ಲಿ ರಮಾಕಾಂತನ ಸ್ವೈರವರ್ತನೆಯನ್ನು ಚಿತ್ರಿಸಿದ ಖಾಂಡೇಕರರು ಇಲ್ಲಿ ಸುಲಭಾ ಒಬ್ಬನಿಂದ ಇನ್ನೊಬ್ಬ ಪ್ರಿಯಕರನನ್ನು ವರಿಸುವದನ್ನು ಚಿತ್ರಿಸಿದ್ದಾರೆ. ಸ್ತ್ರೀ–ಪುರುಷರ ಈ ಚಂಚಲವೃತ್ತಿಯ ಅಪಾಯವನ್ನು ಎತ್ತಿತೋರುವದೇ ಅವರ ಉದ್ದೇಶವಾಗಿದೆ.

ರಿಕಾಮಾದೇವ್ಹಾರಾ (೧೯೩೯) **ದೇವತಾ** ಚಲಚಿತ್ರದ ಕಥೆ. "ಸ್ತ್ರೀ ಕೇವಲ ಭೋಗ್ಯವಸ್ತುವಲ್ಲ, ಅವಳದೇ ಆದ ಕೆಲ ಮೌಲ್ಯಗಳಿವೆ. ಅವಳಿಗೂ ಆಶೆ–ಆಕಾಂಕ್ಷೆ, ಭಾವನೆ ಕಲ್ಪನೆಗಳಿವೆ. ದೇವತೆಯೆಂದು ಅವಳನ್ನು ತಿಳಿಯುವುದಾದರೆ ಸಂಸಾರದಲ್ಲಿ ಅಥವಾ ಸಮಾಜದಲ್ಲಿ ಅವಳ ಪೂಜೆಯಾಗಬೇಕು. ಆದರೆ ಹಾಗಾಗುವದಿಲ್ಲ. ಅಗತ್ಯದ ಮಟ್ಟಿಗೆ ಅವಳು ದೊಡ್ಡವಳಾದರೆ ಅದು ಮುಗಿದಾಕ್ಷಣ ಶೂನ್ಯವಾಗುತ್ತಾಳೆ. ಸ್ತ್ರೀಯ ಸ್ವಾತಂತ್ರ್ಯ ಮೊಟಕುಗೊಳಿಸಿ ಪುರುಷ ತನ್ನದನ್ನು ಹೆಚ್ಚಿಸಿಕೊಳ್ಳುವ ವಿಚಾರವೇ ಸಾಮಾನ್ಯವಾಗಿ ಎಲ್ಲೆಡೆ ಕೇಡು ಬರುವದೆಂಬುದು ಇದ್ದಿನ ಕಥಾವಸ್ತು.

•

ಪಹಿಲ ಪ್ರೇಮ (೧೯೪೦) ಕಾದಂಬರಿ ಪ್ರಥಮದರ್ಶನ ಪ್ರೀತಿಯ ಪರಿಣಾಮದ ವಿಶ್ಲೇಷಣೆಯನ್ನೀಯುವದು. **ಜಳಲೆಲಾ ಮೋಹರ** (೧೯೪೧) ಉದಾತ್ತ ಪ್ರೀತಿಯ ಭಾವನೆ ಮಾನವ ಜೀವನವನ್ನು ಹೇಗೆ ಸಂತೃಪ್ತಗೊಳಿಸುವದೆಂಬುದರ ಚಿತ್ರಣವನ್ನು ನೀಡುವದು. ಸ್ತ್ರೀ–ಪುರುಷರು ಒಂದೆಡೆ ಸೇರಿದ ಮಾತ್ರಕ್ಕೆ ಸಂಸಾರವಾಗುವದಿಲ್ಲ. ಅದರಿಂದ ಸಂತೃಪ್ತಿ ಲಭಿಸುವದಿಲ್ಲ. ಅದಕ್ಕಾಗಿ ಸಹವಾಸ, ತಿಳುವಳಿಕೆ ಬೇಕು. ಇವುಗಳಿಂದ ಪ್ರೀತಿ ಶ್ರೀಮಂತವೂ ಉದಾತ್ತವೂ ಆಗುವದೆಂಬುದನ್ನು ಖಾಂಡೇಕರರು

---

1. ಕುಸುಮಾವತಿ ದೇಶಪಾಂಡೆ : ಮರಾಠಿ ಕಾದಂಬರಿ : ಪಹಿಲೆ ಶತಕ, ಪು. 236

ಇಲ್ಲಿ ಚಿತ್ರಿಸಿದ್ದಾರೆ. ಸ್ತ್ರೀ ಪುರುಷರ ಲೈಂಗಿಕ ವಿಷಯಕ್ಕೆ ಕೈಹಾಕಿದರೂ ಅತಿರೇಕಕ್ಕೆ ಅವಕಾಶವಿರದೆ ಸಾಮಾಜಿಕ ಸಮಸ್ಯೆಯ ಸೂಕ್ಷ್ಮತೆಯನ್ನು ವಿಶ್ಲೇಷಿಸಿದ್ದಾರೆ.

* * * *

ಯಯಾತಿಯ ಪೂರ್ವದಲ್ಲಿ ಖಾಂಡೇಕರರ ಕಾದಂಬರಿಗಳಲ್ಲಿ ಮಹತ್ವಪೂರ್ಣವೆಂದು ತಿಳಿಯಲಾದ ಕೃತಿ **ಕ್ರೌಂಚವಧ** (೧೯೪೨)[1]. ಖಾಂಡೇಕರರು ಗಾಂಧೀವಾದದ ಉದಾತ್ತ ನೈತಿಕತೆಯನ್ನು ಪುರಸ್ಕರಿಸಿದ್ದಾರೆ. ಸಾಮಾಜಿಕ ಕ್ರಾಂತಿಗಾಗಿ ಸರ್ವಾಂಗೀಣ ಕ್ರಾಂತಿ ಅಗತ್ಯ. ಅದು ಕೇವಲ ಬುದ್ಧಿಯನ್ನು ಅವಲಂಬಿಸಿದರೆ ಆಗದು. ಜೀವನವಿಕಾಸಕ್ಕೆ ಬುದ್ಧಿಯಂತೆ ಭಾವನೆಯೂ ಅಷ್ಟೇ ಅಗತ್ಯವಾಗಿದೆ. "ಈವರೆಗಿನ ಸುಧಾರಣೆಗಳ ಇತಿಹಾಸವೆಂದರೆ ಮಾನವೀ ಬುದ್ಧಿಯ ವಿವಿಧ ವಿಲಾಸದ ಇತಿಹಾಸವಾಗಿದೆ....(ಆದರೆ) ಬುದ್ಧಿಯ ಬೆನ್ನುಹತ್ತಿ ಮನುಷ್ಯ ಭಾವನೆಯನ್ನು ಮರೆಯುತ್ತ ಸಾಗಿದ್ದುದೇ ಅದರ ವೈಗುಣ್ಯವಾಗಿದೆ....ನಾಳಿನ ಜಗತ್ತು ಸುಖಿಯಾಗಬೇಕಾಗಿದ್ದರೆ ಜೀವನದಲ್ಲಿ ಭೋಗ ಮತ್ತು ತ್ಯಾಗ, ಕಾವ್ಯ ಮತ್ತು ಕೃತಿ, ಬುದ್ಧಿ ಮತ್ತು ಭಾವನೆ ಇವುಗಳ ಸುಂದರ ಸಮನ್ವಯ ಸಾಧಿತವಾಗಬೇಕು" ಎಂದು ನಿವೇದನೆಯಲ್ಲಿ ವಿವರಿಸಿದ್ದಾರೆ.

ಬುದ್ಧಿ ಮತ್ತು ಭಾವ ಈ ಎರಡೂ ಶಕ್ತಿಗಳ ಸಂಯೋಗದಿಂದ ರೂಪತಾಳುವ ಕೃತಿಯಿಂದ ನಿಜವಾದ ಪ್ರಗತಿ ಸಾಧ್ಯ ಎಂಬುದೇ **ಕ್ರೌಂಚವಧ** ಕಾದಂಬರಿಯ ಕಥಾವಸ್ತು. ಇದು ಸುಲೋಚನೆಯ ಆತ್ಮಕಥೆಯೂ ಆಗಿದೆ. ಅವಳು ದಾದಾಸಾಹೇಬ ದಾತಾರರ ಏಕಮೇವ ಪುತ್ರಿ. ದಾದಾಸಾಹೇಬರು ವರ್ತಮಾನಕಾಲದಲ್ಲಿ ಜೀವಿಸುತ್ತಿದ್ದರೂ ಅವರ ವಿಶ್ವದಲ್ಲಿ ಸ್ಥಾನವಿದ್ದುದು–ಕಾಲಿದಾಸ, ಭವಭೂತಿ, ಸುಲೋಚನೆ ಮತ್ತು ಸತಾರಗಳಿಗೆ ಮಾತ್ರ. ಖಾಂಡೇಕರರೇ ಹೇಳುವಂತೆ ದಾದಾಸಾಹೇಬ ವ್ಯಕ್ತಿನಿಷ್ಠ ಬುದ್ಧಿವಾದದ ಪ್ರತೀಕ. ಸುಲು ದುರ್ಬಲ ಭಾವನೆಗಳ ಪ್ರತೀಕ ಹಾಗೂ ದಿನಕರನ ಜೀವನ ಬುದ್ಧಿ ಹಾಗೂ ಭಾವನೆಗಳ ಸಂಯೋಗದಿಂದ ನಿರ್ಮಾಣವಾಗುವ ಕೃತಿಪರ ವೃತ್ತಿಯ ಪ್ರತೀಕವಾಗಿದೆ. ಬುದ್ಧಿ ಹಾಗೂ ಭಾವನೆಗಳ ಸಂಯೋಗವಾದ 'ಕ್ರೌಂಚವಧ' ರೂಪಕವೂ ಬೇರೆ ಬೇರೆ ಸಂಬಂಧದಲ್ಲಿ ಬೇರೆ ಬೇರೆಯಾಗಿ ಬಳಸಲ್ಪಟ್ಟಿದೆ. ದಾದಾಸಾಹೇಬ ಬುದ್ಧಿಜೀವಿಯಾದರೂ ಬುದ್ಧಿವಾದಿಯಲ್ಲ.

ಸುಲೋಚನ ತಂದೆಯ ಪ್ರೀತಿಯಲ್ಲಿ ಬೆಳೆದವಳು. ಮೂಢ ಸಂಪ್ರದಾಯ ನಂಬದ ವೈಚಾರಿಕ ತಳಹದಿಯನ್ನು ಪಡೆದವಳು. ದಿನಕರನೆಂಬ ಬಡವಿದ್ಯಾರ್ಥಿ ಓದಲು ತಮ್ಮ ಮನೆಯಲ್ಲಿರಲು ಬರುವದು ಅವಳಿಗೆ ತುಂಬ ಆನಂದವನ್ನುಂಟುಮಾಡುವದು. ವಯಸ್ಸು ಬೆಳೆದಂತೆ ಅವನ ಬಗೆಗೆ ಪ್ರೀತಿಯನ್ನು ತಾಳುವಳು. ಆದರೆ

1. ಕ್ರೌಂಚವಧ: ಕನ್ನಡ ಅನುವಾದ: ಗೊರೂರು ರಾಮಸ್ವಾಮಿ ಅಯ್ಯಂಗಾರ, ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರು 1957.
ವಿವರಗಳಿಗಾಗಿ: ಕ್ರೌಂಚವಧ: ಎಸ್. ಪಿ. ಪಾಟೀಲ, ಗೊರೂರು ಗೌರವ ಗ್ರಂಥ, ಸಂ. ಹಾ. ಮಾ. ನಾಯಕ, ಗೊರೂರು ಗೆಳೆಯರ ಬಳಗದ ಪ್ರಕಟಣೆ, ಮೈಸೂರು, 1973; ಪುಟ 158—165.

ಅವನು ಚಳುವಳಿಯಲ್ಲಿ ಭಾಗವಹಿಸಿ ಅವಳಿಂದ ದೂರವಾದಾಗ ಅವಳು ಪಸಪ್ಪೇಧರಿ ಯಾಗುವಳು. ಆದರೆ ಜೀವನದಲ್ಲಿ ತನ್ನ ಬುದ್ಧಿಯ ಕೌಶಲ್ಯವನ್ನು ತೋರುವದಿಲ್ಲ. ಮಹಾರಾಜರ ವೈದ್ಯರಾದ ಡಾ. ಭಗವಂತರಾವರೊಂದಿಗೆ ಮದುವೆಯಾಗುವಳು. ಅವರ ದಾಂಪತ್ಯ ಸುಖಮಯವಾಗಿದ್ದರೂ ದಿನಕರನ ಚಟುವಟಿಕೆ–ರಾಷ್ಟ್ರೀಯ ವಿಚಾರಗಳು ಅವಳನ್ನು ಬಾಧಿಸದೇ ಇರಲಿಲ್ಲ. ರೈತಸಭೆಯ ಕಾಲಕ್ಕೆ ದಿನಕರನ ಪ್ರಾಣಕ್ಕೆ ಅಪಾಯವೆಂದು ಅರಿತು ಅವನನ್ನು ಉಳಿಸಲು ಪ್ರಯತ್ನಿಸುವಳು. ಇತ್ತ ದಿನಕರ ಸುಲೋಚನೆಯೊಂದಿಗೆ ಅವಳ ಮನೆಯಲ್ಲಿರುವಾಗ ಅಲ್ಲಿ ಗೋಳಿಬಾರು ಆಗಿ ಪೋಲೀಸ ಅಧಿಕಾರಿಯೊಬ್ಬ ಮರಣ ಹೊಂದುವನು. ದಿನಕರನೇ ಬೇರೆ ವೇಷದಲ್ಲಿ ಸಭೆಯಲ್ಲಿದ್ದು ಅಧಿಕಾರಿಯ ಕೊಲೆ ಮಾಡಿದನೆಂಬ ಕಾರಣದಿಂದ ಬಂಧಿಸಲ್ಪಡುವನು. ದಿನಕರ ತಮ್ಮ ಮನೆಯಲ್ಲಿ ಇದ್ದನೆಂದು ಜಾಹೀರುಪಡಿಸಿ ಅವನನ್ನು ಸುಲೋಚನೆ ಉಳಿಸಬಹುದಾಗಿತ್ತು. ಆದರೆ ಡಾ. ಭಗವಂತರಾಯರೇ ಮನಃಪರಿವರ್ತನೆ ಹೊಂದಿ ಸತ್ಯಸಂಗತಿಯನ್ನು ಹೊರಗೆಡುವುದರಿಂದ ಅಪಾಯ ತಪ್ಪುವಂತಾಗುತ್ತದೆ.

ಬಾಲ್ಯದ ಸುಲೋಚನೆ ತುಂಟತನ ಚೆಲ್ಲಾಟದಿಂದ ಕೂಡಿದ್ದಾಳೆ. ದೇವರಿಗಿಂತ ಅವಳಿಗೆ ಮನುಷ್ಯರಲ್ಲಿ ಅಪಾರ ನಂಬಿಗೆ. ಪತಿ ಭಗವಂತರಾಯರ ಪ್ರೀತಿ ಗಳಿಸಿದ್ದಾಳೆ. ಆದರೆ ದೇಶಕ್ಕಾಗಿ, ಬಡವರಿಗಾಗಿ ಚಿಂತಿಸುವ ದಿನಕರನ ಬಗೆಗೆ ಆಸಕ್ತಿ, ವಿದ್ವತ್ತಿನಲ್ಲಿ ತಂದೆಯ ವಾರಸು, ದಿನಕರನಿಂದ ಬಡವರಿಗಾಗಿ ಅನುಕಂಪೆ, ಸಹಾನುಭೂತಿ, ರಾಷ್ಟ್ರೀಯ ಭಾವನೆಗಳ ಜಾಗೃತಿ, ಡಾ. ಭಗವಂತರಾಯರೊಂದಿಗೆ ಸ್ವಜೀವನದಲ್ಲಿ ಸುಖ–ಸಮಾಧಾನ ಎಲ್ಲವನ್ನೂ ಏಕಕಾಲಕ್ಕೆ ಪಡೆದರೂ ಮಾನಸಿಕ ತುಮುಲವನ್ನು ಎದುರಿಸುವಳು. "ಬರಿದಾದ ಭಾವವಿವಶತೆಯ ವಿಷಯದಲ್ಲಿ ಸುಲೋಚನೆ ಉಲ್ಕಾಳಿಗಿಂತ ಒಂದು ಕೈ ಮೇಲಾಗಿದ್ದಾಳೆ. ಜೀವನವನ್ನು ಇಡಿಯಾಗಿ ಬದಲಿಸಬಹುದಾದಂಥ ಅನೇಕ ಸನ್ನಿವೇಶಗಳಿದ್ದರೂ ಅವೆಲ್ಲ ನಿರುಪಯುಕ್ತವಾಗುವವು. "ಮಹಾರಾಷ್ಟ್ರದ ೧೯೩೦–೪೦ರ ಕಾಲಖಂಡದಲ್ಲಿ, ಸರ್ವಸಾಮಾನ್ಯವಾಗಿ ಕಂಡುಬರುವ ವೈಚಾರಿಕ ಸಂಘರ್ಷ, ಆ ಕಾಲದ ನಿಷ್ಕ್ರಿಯ ಹಳೆಯ ತಲೆಮಾರಿನ ಜನ ಮತ್ತು ಆದರ್ಶವಾದ ಆವೇಶಭರಿತ ಹೊಸ ಪೀಳಿಗೆ ಇವರ ಚಿತ್ರಣ ಕೊಡುವಲ್ಲಿ ಈ ಕಾದಂಬರಿ ಒಳ್ಳೆಯ ಯಶಸ್ಸನ್ನು ಪಡೆದಿದೆ. ಹಾಗೂ ಈ ಸಾಮರ್ಥ್ಯದಿಂದಾಗಿಯೇ **ಕ್ರೌಂಚವಧ** ಮಹಾರಾಷ್ಟ್ರದಲ್ಲಿಯ ಒಂದು ಅತಿಶಯ ಜನಪ್ರಿಯ ಕಾದಂಬರಿಯಾಗಿರುತ್ತದೆ."[1]

* * * *

ಯಯಾತಿ (೧೯೫೯)ಯ ಕಥೆ ನಲವತ್ತೈದು ವರ್ಷಗಳಿಂದ ಖಾಂಡೇಕರರ ಮನಸ್ಸಿನಲ್ಲಿ ಮನೆಮಾಡಿಕೊಂಡು ಬಂದುದನ್ನು ಅವರೇ ಈ ಕಾದಂಬರಿಯ 'ಪಾರ್ಶ್ವಭೂಮಿ'ಯಲ್ಲಿ ಹೇಳಿಕೊಂಡಿದ್ದಾರೆ. ಪೌರಾಣಿಕ ಕಥಾವಸ್ತುವನ್ನು ಸ್ವೀಕರಿಸಿ, ಅದರಲ್ಲಿಯ ಸಾರ್ವಕಾಲಿಕ ಮೌಲ್ಯಗಳ ರಕ್ತಮಾಂಸವನ್ನು ತುಂಬಿ ಜೀವಂತ ಕಲಾಕೃತಿಯನ್ನು ನಿರ್ಮಿಸುವ ಮೂಲಕ **ಯಯಾತಿ** ರೂಪತಾಳಿದೆ. ಪೌರಾಣಿಕ ವಸ್ತು

1. ಕ. ಸುಮಾವತಿ ದೇಶಪಾಂಡೆ : ಮರಾಠಿ ಕಾದಂಬರಿ : ಪಹಿಲೆ ಶತಕ, ಪುಟ 247.

ವಿನಿಂದ ಕೃತಿ ಹೇಗೆ ನಿರ್ಮಾಣವಾಗುವದೆಂಬುದನ್ನು ಅವರೇ ಹೇಳಿದ್ದಾರೆ. "ತನ್ನ ಪ್ರತಿಭೆಯ ರೂಪ ಎಂಥದು, ಅದರ ಸಾಮರ್ಥ್ಯ ಯಾವ ಬಗೆಯದು, ಅದರ ಇತಿ ಮಿತಿಗಳು ಯಾವವು ಎನ್ನುವದರ ಸರಿಯಾದ ಅರಿವಿದ್ದ ಲೇಖಕ ಸ್ವಂತದ ಅಭಿವ್ಯಕ್ತಿಗಾಗಿ ಯೋಗ್ಯವಾದ ಕಥೆಯೊಂದನ್ನು ಆಯ್ದುಕೊಂಡರೆ, ತಾನು ಬಳಸಬೇಕೆಂಬ ಸಾಹಿತ್ಯ ಮಾಧ್ಯಮದ ಮೇಲೆ ತಕ್ಕಷ್ಟು ಪ್ರಭುತ್ವ ಆತನಲ್ಲಿದ್ದರೆ ಪುರಾಣ ಕಥೆಗಳಲ್ಲಿ ಕಾಣಿಸಿಕೊಳ್ಳುವ ಭವ್ಯ ಭೀಷಣ ಸಂಘರ್ಷಗಳನ್ನು ಕುರಿತು ವಿಚಾರ ಮಂಥನವನ್ನು ಮಾಡಬಲ್ಲ ಚಿಂತನಸಾಮರ್ಥ್ಯ ಆತನಲ್ಲಿದ್ದರೆ, ಒಂದು ಕಡೆಯಿಂದ ನೋಡಿದಾಗ ಜೀವನ ಕ್ಷಣ ಭಂಗುರವಾಗಿ ಕಂಡರೂ ಇನ್ನೊಂದು ಕಡೆಯಿಂದ ನೋಡಿದಾಗ ಅದು ಚಿರಂತನವಾಗಿದೆ. ಭೌತಿಕವಾಗಿದ್ದಷ್ಟು ಆದಿಭೌತಿಕವೂ ಆಗಿದೆ ಎನ್ನುವದನ್ನು ಗ್ರಹಿಸಬಲ್ಲವನಾಗಿದ್ದರೆ, ಪೌರಾಣಿಕ ಕಥೆಯೊಳಗಿನಿಂದ ಉತ್ತಮವಾದ ಲಲಿತ ಕಲೆ ಹೇಗೆ ನಿರ್ಮಾಣವಾಗಬಲ್ಲದು ಎನ್ನುವದನ್ನು ನೋಡುವುದಕ್ಕೆ ಯಾರೂ ವಿದೇಶ ಯಾತ್ರೆ ಹೋಗಬೇಕಾಗಿಲ್ಲ."2 ಈ ಹಿನ್ನೆಲೆಯಲ್ಲಿ ರಚಿತವಾದುದು **ಯಯಾತಿ**.

ಆದರೆ ಪೌರಾಣಿಕ ಯಯಾತಿಯ ಕಥೆ ಇಲ್ಲಿ ನಿಮಿತ್ತ ಮಾತ್ರವಾಗಿದೆ. ಪ್ರಮುಖವಾಗಿರುವದು ಯಯಾತಿಯ ಭೋಗಲಾಲಸೆ, ತೃಪ್ತವಾಗದೆ ಬೆಳೆಯುತ್ತ ಹೋಗುವ ವಿಷಯಲಾಲಸೆ. ವಯಸ್ಸಾದಂತೆ ಈ ವಾಸನೆ ಕಡಿಮೆಯಾಗಬೇಕು. ಆದರೆ ಯಯಾತಿಯ ಇಲ್ಲಿಯ ಚಿತ್ರ ಸಾಮಾನ್ಯ ಮಾನವನೊಂದಿಗೆ ನಿಗದಿತವಾಗಿದೆ. ವಿವಿಧ ಸುಖ ಲಭಿಸಿದರೂ ಸದಾ ಅತೃಪ್ತನಾದ ಯಯಾತಿ ಹೊಸ ಹೊಸ ಸುಖದತ್ತ ಹೊರಳುವನು. ಕ್ಷಣಿಕ ಸುಖವನ್ನೇ ಚಿರಂತನ ಸುಖವೆಂದು ಭಾವಿಸುವನು. ಅನೇಕ ಮುಗ್ಧ ತರುಣಿಯರ ಬಾಳು ಹಾಳಾಗಲು ಕಾರಣನಾಗುವನು. ಜೀವಿನ್ನಾವ ಮೌಲ್ಯಗಳೂ ಅವನಿಗೆ ಅರ್ಥವಾಗುವದಿಲ್ಲ. ಪುರಾತನ ಆತ್ಮಿಕ ಮೌಲ್ಯಗಳನ್ನು ಉಧ್ವಸ್ತಗೊಳಿಸಿಕೊಂಡಿದ್ದಾನೆ. ಹೊಸ ಮೌಲ್ಯಗಳ ನಿರ್ಮಾಣವಾಗಿಲ್ಲ. ಇಂದಿನ ಮಾನವನೂ ಯಯಾತಿಯಂತೆ ಸಂಧಿಕಾಲದಲ್ಲಿದ್ದಾನೆ. ಯಯಾತಿ ಭೋಗ ಮಾರ್ಗವನ್ನು ಪ್ರತಿಪಾದಿಸಿದರೆ ಕಚ ತ್ಯಾಗವನ್ನು ಪ್ರತಿನಿಧಿಸುವನು. ತನ್ನ ಜನಕ್ಕಾಗಿ, ತನಗೆ ಪ್ರಿಯರಾದವರಿಗಾಗಿ ಯಾವ ತ್ಯಾಗಕ್ಕೂ ಸಿದ್ಧನಾದವನು. ದೇವಯಾನಿ ಅಹಂಭಾವ, ಅಹಂಕಾರಗಳ ಮುದ್ದೆಯಾಗಿದ್ದಾಳೆ; ಅಗ್ನಿ ಸಾಕ್ಷಿಯಾಗಿ ಯಯಾತಿಯೊಂದಿಗೆ ಮದುವೆಯಾಗಿದ್ದರೂ ಶರ್ಮಿಷ್ಠೆಯಂತೆ ಅವನಿಗೆ ಶರೀರ ಸುಖವನ್ನು ಕೊಡಲಿಲ್ಲ. ಅವಳ ನಿಜವಾದ ಪ್ರೀತಿ ಕಚನಲ್ಲಿ. ಅದು ಪ್ರೀತಿಯ ಮೊದಲ ಅನುಭವ. ಯಯಾತಿಯನ್ನು ಮದುವೆಯಾದದ್ದು ತನ್ನ ಮಹತ್ವಾಕಾಂಕ್ಷೆಯಿಂದ ಪ್ರೇರಿತಳಾಗಿ. ಶರ್ಮಿಷ್ಠೆಯನ್ನು ದಾಸಿಯನ್ನಾಗಿ ಮಾಡಿದ್ದೂ ಸೇಡಿನ ಸಮಾಧಾನಕ್ಕಾಗಿ, ಹಟಮಾರಿಯಾಗಿ, ಮನಸ್ಸಿನಲ್ಲಿ ಕಹಿಯನ್ನು ತುಂಬಿಕೊಂಡ ದೇವಯಾನಿ ವಿಫಲ ಪ್ರಣಯಕ್ಕೆ ಕಾರಣಳಾದವಳು. ಗಂಡನಿಗೆ ಹೆಂಡತಿಯಿಂದ ದೊರೆಯಬೇಕಾದ

2. ಯಯಾತಿ : ಕನ್ನಡ ಅನುವಾದ : ವಿ. ಎಂ. ಇನಾಮದಾರ, ಉಷಾ ಸಾಹಿತ್ಯಮಾಲೆ, ಮೈಸೂರು. 1977, ಪುಟ 451.

ಆತ್ಮೀಯವಾದ, ಆರ್ದ್ರವಾದ, ಉತ್ಕಟವಾದ, ಉದಾತ್ತವಾದ ಪ್ರೀತಿ ಸಿಗದಿರುವಾಗ ಆಗುವ ವಿಪರೀತ ಪರಿಣಾಮದ ದುರಂತ ಚಿತ್ರ ಇವಳಿಂದಾಗಿ ಇಲ್ಲಿ ಒಡಮೂಡಿದೆ.

ಶರ್ಮಿಷ್ಠೆ ಅರ್ಪಣಾಭಾವದ ತ್ಯಾಗದ ಪುತ್ಥಳಿಯಾಗಿದ್ದಾಳೆ. ರಾಜ ಪುತ್ರಿಯಾದರೂ ತನ್ನ ಜಾತಿ ಬಾಂಧವರಿಗಾಗಿ ತ್ಯಾಗಮಾಡಿ ದೇವಯಾನಿಯ ದಾಸಿಯಾಗಿ ಸೌಜನ್ಯ, ಸಂಯಮದಿಂದ ಕಥೆಯ ಕೇಂದ್ರ ವ್ಯಕ್ತಿಯಾಗುವಳು. ಯಯಾತಿಗೆ ಅತ್ಯಂತ ಪ್ರಿಯಳಾಗುವಳು. ಆಕರ್ಷಣೆ, ಶರೀರಸುಖ, ವಿಶ್ವಾಸ, ಆದರ, ಭಕ್ತಿ ಮೊದಲಾದ ಪ್ರೀತಿಯ ಎಲ್ಲ ಮೆಟ್ಟಿಲುಗಳನ್ನು ದಾಟಿ ಬಂದವಳಾಗಿದ್ದಾಳೆ. ದೇವಯಾನಿ ಕೊಡದ ಶರೀರಸುಖವಾಂಛೆಯ ಸುಖವನ್ನು ಅವಳು ಯಯಾತಿಗೆ ಕೊಟ್ಟಿರಬೇಕು. ಭೋಗಲಾಲಸೆಗಿಂತ ಅದರ ತ್ಯಾಗದಲ್ಲಿ ಹಿರಿಮೆಯನ್ನು ತೋರಿದಳು. ನಿಜವಾದ ಪ್ರೇಯಸಿಯಾಗಿ ನಿರಪೇಕ್ಷವಾದ ಪ್ರೀತಿಯನ್ನು ಕೊಟ್ಟವಳು ಶರ್ಮಿಷ್ಠೆ.

ಸ್ತ್ರೀಯನ್ನು ಕೇವಲ ಭೋಗದ ವಸ್ತುವನ್ನಾಗಿ ಕಾಣುವ ಯಯಾತಿ ಕೊನೆಯಲ್ಲಿ ಕಚನ ಸಂಯಮವನ್ನು ಅರ್ಥಮಾಡಿಕೊಳ್ಳುವನು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಯಯಾತಿ ವಾಸನೆಗಳಿಂದ ಹಸಿದ ಇಂದಿನ ಮಾನವನನ್ನು ಪ್ರತಿನಿಧಿಸುತ್ತಾನೆ. ಈ ಯಯಾತಿಯ ಧರ್ಮ ವಿವಿಧ ಸ್ತರಗಳಲ್ಲಿ ಕಾಣಿಸಿಕೊಳ್ಳುವುದನ್ನು ಖಾಂಡೇಕರರು ಪಾರ್ಶ್ವಭೂಮಿಯಲ್ಲಿ ವಿವರಿಸಿರುವದು ಗಮನಾರ್ಹ. "ಪುರಾಣಕಾಲದಲ್ಲಿಯ ಯಯಾತಿಯ ಸುಖವಿಲಾಸದ ಕಲ್ಪನೆ ಸ್ತ್ರೀಸುಖದ ಮಟ್ಟಿಗೆ ಮರ್ಯಾದಿತವಾಗಿತ್ತು. ಇಂದಿನ ಯಯಾತಿ ಹಾಗಲ್ಲ. ಶಾಸ್ತ್ರ (ವಿಜ್ಞಾನ), ಯಂತ್ರ, ಸಂಸ್ಕೃತಿ ಎಲ್ಲವೂ ಸೇರಿ ನಿರ್ಮಿಸಿದ ಆಧುನಿಕವಾದ, ಸುಂದರವಾದ, ಸಂಪನ್ನವಾದ ಪ್ರಪಂಚ ಆತನೆದುರು ಹರವಿ ನಿಂತಿದೆ. ಸುಖೋಪಭೋಗದ ವಿವಿಧ ಸಾಧನಗಳನ್ನು ತನ್ನ ಕೈಯಲ್ಲಿ ಇರಿಸಿಕೊಂಡು ಕ್ಷಣಕ್ಷಣಕ್ಕೆ, ಹೆಜ್ಜೆ ಹೆಜ್ಜೆಗೆ ಆತನನ್ನು ಮೋಹಕ್ಕೊಳಪಡಿಸುತ್ತಿದೆ."[1] ಎಂದು ಇಂದಿನ ಪರಿಸರದಲ್ಲಿ ಸ್ತ್ರೀ ಹೇಗೆ ಕೇವಲ ಭೋಗವಸ್ತುವಾಗಿ ಉಳಿಯಬಹುದೆಂಬುದರ ವಿಪರೀತ ಪರಿಣಾಮವನ್ನು **ಯಯಾತಿ**ಯ ಮೂಲಕ ಖಾಂಡೇಕರರು ಸ್ಪಷ್ಟಪಡಿಸಬಯಸಿದ್ದಾರೆ.

ಖಾಂಡೇಕರರ ಕಾದಂಬರಿಗಳಲ್ಲಿ ಚಿತ್ರಿತವಾದ ಸ್ತ್ರೀಯ ವಿವಿಧ ಚಿತ್ರಗಳ ಈ ಸ್ಥೂಲ ವಿವೇಚನೆ ಅವರ ಕಾದಂಬರಿ ಪ್ರವಾಹ ವಿಶಾಲವಾಗುತ್ತ, ಸಂಕೀರ್ಣವಾಗುತ್ತ ಸಾಗಿದುದನ್ನು ತೋರುವದು. ಈ ಸ್ತ್ರೀ ಪಾತ್ರಗಳನ್ನು ಚಿತ್ರಿಸುವಲ್ಲಿ ಖಾಂಡೇಕರರ ಜೀವನಾನುಭೂತಿ ವ್ಯಕ್ತವಾಗಿದ್ದು, ಸ್ತ್ರೀ ಜೀವನದ ಅನೇಕ ಸಮಸ್ಯೆಗಳ ಬಗೆಗಿರುವ ಅವರಿಗಿರುವ ಉತ್ಕಟ ಆಕಾಂಕ್ಷೆ ಸ್ಪಷ್ಟವಾಗುವದು. ಅವರ ಎಲ್ಲ ಕಾದಂಬರಿಗಳು ಧ್ಯೇಯವಾದದಿಂದ ಪ್ರೇರಿತವಾಗಿವೆ.

ಉಲ್ಕಾದ ಭಾವುರಾವ ಹಾಗೂ ಚಂದ್ರಕಾಂತರು ಸ್ತ್ರೀಯನ್ನು ಸಮಾನ ಗೌರವ ಭಾವದಿಂದ ಕಂಡರೆ, ಪಂಡಿತರಾವನ ದೃಷ್ಟಿಯಲ್ಲಿ ಅವಳೊಬ್ಬ ಭೋಗವಸ್ತು ಮಾತ್ರ. ನೀರಾಳಂಥ ಕೆಳವರ್ಗದಲ್ಲಿ ಹುಟ್ಟಿ ಬೆಳೆದ ಸ್ತ್ರೀ ಬಡತನದ ಮೂಲಕ

1. ಯಯಾತಿ : ಕನ್ನಡ ಅನುವಾದ— ವಿ. ಎಂ. ಇನಾಮದಾರ, ಪಾರ್ಶ್ವಭೂಮಿ, ಪುಟ 464.

ವಿಧುರನನ್ನು ಮದುವೆಯಾಗಿ, ಅವನೂ ಕಣ್ಣು ಕಳೆದುಕೊಂಡಾಗ ಹೊಟ್ಟೆಯ ಪಾಡಿಗಾಗಿ ವ್ಯಭಿಚಾರಕ್ಕಿಳಿಯಬೇಕಾದುದು ಸಮಾಜದ ಕ್ರೂರ ವ್ಯವಸ್ಥೆಯ ಕಾರಣ ದಿಂದಾಗಿ. ಅವಳನ್ನು ಕೀಳೆಂದು ಬಗೆಯುವ ಸಮಾಜವೇ ಶ್ರೀಮಂತ ಮನೆತನದ ಇಂದುಳ ತಾಯಿಯ ವ್ಯಭಿಚಾರ ಕುರಿತು ಚಕಾರ ಎತ್ತದಿರುವದರಲ್ಲಿ ಸಮಾಜದ ವಿಪರ್ಯಾಸ ಕಂಡುಬರುವದು.

ದೋನಧ್ರುವದ ನಾಯಕ ರಮಾಕಾಂತ ಭೋಗದ ಬೆನ್ನಟ್ಟುವ ಚಂಚಲ ಸ್ವಭಾವದವ. ಸೌಂದರ್ಯಾರಾಧಕನೆಂದು ತೋರಿದರೂ ಬೇಜವಾಬುದಾರನೆಂಬು ದನ್ನು ತೋರುವಲ್ಲಿ ಮುಗ್ಧ ತರುಣಿಯರು ಬಲಿಬೀಳದಂತೆ ಎಚ್ಚರಿಸುವ ಕ್ರಮವನ್ನು ಖಾಂಡೇಕರರು ಅನುಸರಿಸಿದ್ದಾರೆ. **ಯಯಾತಿ** ಖಾಂಡೇಕರರ ಪ್ರತಿಭೆಯ ಪೂರ್ಣ ವಿಕಸಿತ ಕುಸುಮ. ಯಯಾತಿಯ ಭೋಗಲಾಲಸೆ, ತೀರದ ಆಸೆಯನ್ನು ಚಿತ್ರಿ ಸುವದರೊಡಿಗೆ, ಕಚನ ಸಂಯಮ, ಸ್ವಾರ್ಥರಹಿತಬಾಳು ಆದರ್ಶಮಯವಾಗಿ ಪಡೆಯುವ ಸುಖ–ಶಾಂತಿ–ತೃಪ್ತಿಯನ್ನು ನಿರೂಪಿಸುವದು. ದೇವಯಾನಿಯ ಅಹಂಕಾರ, ಅಭಿಮಾನ, ಹಟಮಾರಿತನಗಳೇ ಅವರ ಸಂಸಾರ ಸುಖವನ್ನು ಉಧ್ವಸ್ತ ಗೊಳಿಸುವವು. ವಿವಾಹ ಬಂಧನದ ಪಾವಿತ್ರ್ಯದಲ್ಲಿ ಶರೀರಸುಖದ ಸಮಪಾಲನ್ನು ಪ್ರತಿಪಾದಿಸುವದು. ಯಯಾತಿಯ ಕೈಹಿಡಿದ ದೇವಯಾನಿ ಅವನಿಗೆ ನೀಡದ ಆತ್ಮೀಯತೆ, ಅನುಕಂಪೆ, ಶರೀರಸುಖವನ್ನು ಶರ್ಮಿಷ್ಠೆಯಿಂದ ಅವನು ಪಡೆಯು ವಂತಾಯಿತು. ಯಯಾತಿ–ದೇವಯಾನಿ–ಶರ್ಮಿಷ್ಠೆಯರ ಮೂಲಕ ದಾಂಪತ್ಯದ ಪಾವಿತ್ರ್ಯ, ಭೋಗದ ಅತಿರೇಕದ ಬಗೆಗೂ, ಕಚನ ಮೂಲಕ ತ್ಯಾಗದ ಬಗೆಗೂ ಸಂಕೀರ್ಣ ಅನುಭವಗಳ ಅಭಿವ್ಯಕ್ತಿ ಸಾಧ್ಯವಾಗಿದೆ.

ಉಲ್ಕಾದ ವಸಂತ, ಮಾಣಿಕರಾವ, ಹಾಗೂ **ದೋನಧ್ರುವ**ದ ರಮಾಕಾಂತ ಮೊದಲಾದ ನಾಯಕರು ಪ್ರೀತಿಯ ನಾಟಕವಾಡಿ, ಯಾವೊಂದು ಆದರ್ಶವನ್ನಿರಿಸಿ ಕೊಳ್ಳದ, ಭೋಗವಾದಿ ತರುಣರು ತಮ್ಮ ಚಂಚಲ ಸ್ವಭಾವಗಳ ಮೂಲಕ ಮುಗ್ಧ ತರುಣಿಯರ ಮಾನಸಿಕ ಆಘಾತಕ್ಕೆ ಕಾರಣರಾಗುವದನ್ನು ಖಾಂಡೇಕರರು ತುಂಬ ಮುತುವರ್ಜಿಯಿಂದ ಚಿತ್ರಿಸುವದನ್ನು ಕಾಣುತ್ತೇವೆ. ಈ ರೀತಿಯ ನಾಯಕರ ಹಾಗೂ ಸುರಂಗಾ ಮೊದಲಾದ ತರುಣಿಯರ ಭೋಗಾಸಕ್ತಿಯ ಪಾತ್ರಗಳ ಸೃಷ್ಟಿಯ ಹಿನ್ನೆಲೆಯಲ್ಲಿ ಖಾಂಡೇಕರರ ಖಚಿತ ಮನೋಭೂಮಿಕೆಯಿರುವಂತೆ ತೋರುತ್ತದೆ. ಖಾಂಡೇಕರರು ಕಾದಂಬರಿಗಳನ್ನು ರಚಿಸಲಾರಂಭಿಸಿದ ಕಾಲಖಂಡದಲ್ಲಿಯೇ ತಮ್ಮ ಕಾದಂಬರಿಗಳ ಮೂಲಕ ಪ್ರಸಿದ್ಧರಾದವರು ಪ್ರೊ. ನಾ. ಸಿ. ಫಡಕೆ ಅವರು. ಸಂಖ್ಯೆಯ ದೃಷ್ಟಿಯಿಂದ ಫಡಕೆ ಅವರ ಕಾದಂಬರಿಗಳೇ ಹೆಚ್ಚು. ಅವರ ಕಾದಂಬರಿ ಗಳಲ್ಲಿಯ ಶೃಂಗಾರವರ್ಣನೆ, ಭೋಗಲಾಲಸೆ, ಸೌಂದರ್ಯೋಪಾಸನೆಯ ಸೋಗು, ಕಲ್ಪನಾ ಪ್ರಧಾನ ಸುಖಮಯ ಜಗತ್ತಿನ ಚಿತ್ರ ಇವುಗಳಿಂದಾಗಿ ಅವು ಓದುಗರಲ್ಲಿ ಜನಪ್ರಿಯವಾದುದರಲ್ಲಿ ಸಂದೇಹವಿಲ್ಲ. ಆದರೆ ಸಾಮಾಜಿಕ ಪರಿಸರವನ್ನು ತಮ್ಮ ಸಾಹಿತ್ಯದ ಪರಿಸರವನ್ನಾಗಿಯೂ, ಸಮಾಜನಿಷ್ಠೆಯನ್ನೂ ಜೀವನ ನಿಷ್ಠೆಯನ್ನಾಗಿ ಸ್ವೀಕರಿಸಿದ ಖಾಂಡೇಕರರಿಗೆ ಫಡಕೆ ಪ್ರಣೀತ ಸುಖಾಸೀನ ಕಲ್ಪನಾಮಯ ಜಗತ್ತು

ಒಪ್ಪಿಗೆಯಾಗುವದು ಸಾಧ್ಯವಿರಲಿಲ್ಲ. ಆದುದರಿಂದ ಈ ಕಲ್ಪಸಾಮ್ರಾಜ್ಯ ಜಗತ್ತಿನಿಂದ ಮರಾಠಿ ಕಾದಂಬರಿಯನ್ನು, ತನ್ಮೂಲಕ ಮರಾಠಿ ಓದುಗರನ್ನು ಹೊರತರುವ ಮಹತ್ಕಾರ್ಯಕ್ಕೆ ಖಾಂಡೇಕರರು ಕೈಹಾಕಿದರು, ಅಲ್ಲದೆ ಯಶಸ್ಸಿನ ಶಿಖರವನ್ನೂ ತಲುಪಿದರು.

ಒಟ್ಟಿನಲ್ಲಿ ಖಾಂಡೇಕರರು ಸಮಾಜದಲ್ಲಿಯ ಸ್ತ್ರೀಯ ದುಃಖ, ವೇದನೆ, ಶೋಷಣೆಯನ್ನು ತೀರ ಸಮೀಪದಿಂದ ಕಂಡು ಅದರ ನಿವಾರಣೆಗಾಗಿ ಸಮತೆಯನ್ನು ಧರಿಸಿದ ಸಾಮಾಜಿಕ ಕ್ರಾಂತಿಯ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಅದರಿಂದಾಗಿ ಗಾಂಧೀವಾದ, ಸಾಮ್ಯವಾದ, ಸಮಾಜವಾದ, ಸರ್ವೋದಯಗಳಲ್ಲಿಯ ಉದಾತ್ತ ತತ್ವಗಳನ್ನು ತಮ್ಮ ಕೃತಿಗಳಲ್ಲಿ ಬೆಂಬಲಿಸಿದರು. ಸ್ತ್ರೀಯರ, ಮಧ್ಯಮವರ್ಗದ, ದಲಿತರ ಸಮಸ್ಯೆಗಳನ್ನು ಎತ್ತಿದರು. ಸರ್ವಸಾಮಾನ್ಯ ಸ್ತ್ರೀ–ಪುರುಷರ ದುಃಖಿ ಜೀವನ, ಕಣ್ಣೀರಿನಿಂದ ಕೂಡಿದ ಅಸ್ಪೃಶ್ಯರ ಆರ್ತ ಕರೆ, ಸ್ತ್ರೀಯರ ದಾಸ್ಯ. ಅವರ ಸಾಮಾಜಿಕ ಆರ್ಥಿಕ ಸ್ವಾತಂತ್ರ್ಯ, ಶೋಷಕ ಹಾಗೂ ಶೋಷಿತರ ಸಂಘರ್ಷ, ರೈತ–ಕೂಲಿಕಾರ-ಕಾರ್ಮಿಕರ ಹಕ್ಕಿನ ರಕ್ಷಣೆ, ಇಂಥ ಅನೇಕ ಸಮಸ್ಯೆಗಳ ಸುತ್ತ ಖಾಂಡೇಕರರ ದೃಷ್ಟಿ ಹರಿದಿರುವದನ್ನು ಕಾಣಬಹುದು. ಅವರ ಮಹತ್ವದ ಸ್ತ್ರೀ ಪಾತ್ರಗಳು ಪ್ರಾತಿನಿಧಿಕವಾಗಿಯೂ, ಪ್ರತೀಕಾತ್ಮಕವಾಗಿರುವದು ಈ ಮಾತಿಗೆ ಒಳ್ಳೆಯ ನಿದರ್ಶನ. ಖಾಂಡೇಕರರು ಮರಾಠಿ ಸಾಹಿತ್ಯದಲ್ಲಿಯ 'ಕೊನೆಯ ಸಾಧು ಪುರುಷ' ಎಂದೂ, ಜೀವನ ಕುರಿತು ಅಪಾರ ಕುತೂಹಲ, ತರಳ ಹಾಗೂ ಚಮತ್ಕೃತಿಪೂರ್ಣ ಕಲ್ಪಕತೆ, ನಿಗರ್ಸಜೀವಿ ಕೋಮಲ ಕಾವ್ಯಾತ್ಮಕತೆ, ದಲಿತ–ತುಳಿತಕ್ಕೊಳಪಟ್ಟವರ ಬಗೆಗೆ ಅತಿಶಯ ಕರುಣೆ ಹಾಗೂ ಅಖಿಲ ಮಾನವ ಜಾತಿಯ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅಗಣಿತ ಕೃತಜ್ಞತೆ ಈ ಪಂಚಧಾರೆಯಿಂದ ಅವರ ಜೀವನಸರಿತಾ ಸಮೃದ್ಧವಾಗಿದೆ.[1] ಎಂಬ ಅಭಿಪ್ರಾಯ ಖಾಂಡೇಕರ ದೃಷ್ಟಿಯಲ್ಲಿ ಸ್ತ್ರೀಯನ್ನೂ ಮಾನವ ಜಾತಿಯನ್ನು ಸ್ಪಷ್ಟಪಡಿಸುತ್ತದೆ.

○

1. ಜಾ. ಭ. ಜೋರಕರ, ಗೌರವಿಕಾ, ಪುಟ 334.

ಜಾನಪದ ಸಾಹಿತ್ಯದಲ್ಲಿ ಮಹಿಳೆ

ಸುಕನ್ಯಾ ಮಾರುತಿ

ಭಾರತೀಯ ಪರಿಸರದಲ್ಲಿ 'ಮಹಿಳೆ' ಎಂಬುದು 'ಸಮಸ್ಯೆ' ಎನ್ನುವುದಕ್ಕೆ ಪರ್ಯಾಯ ಪದವಾಗಿ ಪರಿಣಮಿಸಿದೆ. ಪ್ರಕೃತಿದತ್ತವಾದ ದುರ್ಬಲತೆಯನ್ನು ಹೊತ್ತು ಜೀವಿಸುವುದರೊಂದಿಗೆ ಇಲ್ಲಿನ ಸಾಮಾಜಿಕ ನಿಯಮಗಳ ಜೊತೆ ಹೊಂದಿಕೊಳ್ಳುವಲ್ಲಿ ಸ್ತ್ರೀ ಹೆಣಗಾಡುತ್ತಿರುವುದನ್ನು ಇತಿಹಾಸದುದ್ದಕ್ಕೂ ನೋಡುತ್ತಿದ್ದೇವೆ. ಈಗ ಬದುಕಿನ ಎಲ್ಲಾ ರಂಗದಲ್ಲೂ ಮಹಿಳೆ ಪ್ರವೇಶಿಸಿದ್ದರೂ ಆ ಸಂಖ್ಯೆ ಪುರುಷರಿಗೆ ಸರಿಸಮಾನವಿಲ್ಲ. ಹಿಂದಿನಂತೆಯೇ ಇಂದೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಸಂತ್ರಸ್ತೆ. ಇವಳ ಕೌಟುಂಬಿಕ ಸಾಮಾಜಿಕ ಸ್ಥಾನಮಾನಗಳ ಬಗ್ಗೆ ತಿಳಿದುಕೊಳ್ಳಲು ಶಿಷ್ಟ ಸಾಹಿತ್ಯಕ್ಕಿಂತ ಜಾನಪದ ಸಾಹಿತ್ಯವನ್ನು ಅವಲಂಬಿಸಿದರೆ ಹೆಚ್ಚು ಪ್ರಾಮಾಣಿಕ ವಿಷಯಗಳು ಹೊರಬೀಳಲು ಸಾಧ್ಯ.

ಹೆರುವವಳು ಹೆಣ್ಣೇ ಆದರೂ ಹೆಣ್ಣನ್ನು ಹೆರಬಯಸುವುದಿಲ್ಲ. ಕಾರಣ ಹೆಣ್ಣಿನೊಂದಿಗೇ ಹುಟ್ಟುವ ಹಲವಾರು ಸಮಸ್ಯೆಗಳು ಹೆತ್ತವರನ್ನು ಕಂಗೆಡಿಸುತ್ತವೆ. ತಮ್ಮ ಪ್ರತಿಷ್ಠೆಗೆ ತಕ್ಕಂತೆ ತಿದ್ದಿ, ಬೆಳೆಸಿ, ಮಗಳ ಬಗ್ಗೆ ವ್ಯಾಮೋಹ ಬೆಳೆಸಿಕೊಂಡಾಗ ಅನಿವಾರ್ಯವಾಗಿ ಅಗಲಬೇಕಾಗುತ್ತದೆ. ಅದನ್ನು ತಡೆದುಕೊಂಡರೂ ಮುದ್ದಿನಿಂದ ಬೆಳೆಸಿದ ಮಗಳನ್ನು ಗಂಡನ ಮನೆಯವರು ಸರಿಯಾಗಿ ನಡೆಸಿಕೊಳ್ಳದಿದ್ದಲ್ಲಿ ಅದೂ ಒಂದು ದೊಡ್ಡ ಕೊರಗಾಗುತ್ತದೆ. ಮಗಳು ಗಂಡನನ್ನು ಬಿಟ್ಟು ಬಂದರೆ ಅದು ಅಪಮಾನಕರ. ತಂದೆ ತಾಯಿಗಳು ಇದನ್ನೆಲ್ಲ ಸಹಿಸಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲ ಜವಾಬ್ದಾರಿಯನ್ನು ಯಾರು ಹೊರಬಯಸುತ್ತಾರೆ? ಅನಿವಾರ್ಯವಾಗಿ ಹೊರಬೇಕಾದಾಗ ಕೊಂಚ ಹಿಂಜರಿಯುವುದು ಸಹಜವೇ. ಅದಕ್ಕೇ ಹೆಣ್ಣು ಹೆತ್ತ ತಾಯಿ

> ಹೆಣ್ಣು ಹುಟ್ಯಾದಂತ ಹೇಳಿಕಳುವಲಿ ಬ್ಯಾಡ|
> ಹೆಣ್ಣೆಂದರವರು ಹೆದರ್‍ಯಾರ| ಕಂದವ್ವ
> ಹೆಣ್ಣಲ್ಲ ನಮಗ ರವಿಚಿನ್ನ|

ಎಂದು ಹೆತ್ತ ಸುದ್ದಿಯನ್ನು ಕಳಿಸುವಲ್ಲಿ ಉದ್ಭವಿಸುವ ತೊಡಕನ್ನು ತೋಡಿಕೊಳ್ಳುತ್ತಾಳೆ. ಹೆಣ್ಣು ಮಗುವಿನಿಂದ ತಮಗೆ ಯಾವುದೇ ರೀತಿಯ ಲಾಭವಿಲ್ಲ. ಕೊನೆಗೆ

ತಮ್ಮ ಮನೆತನದ ಹೆಸರು ಕೂಡ ಉಳಿಯಲಾರದು ಎಂಬುದೇ ಹೆಣ್ಣಿನ ತಾಯಿಯ ಹಿಂಜರಿತಕ್ಕೆ ಕಾರಣವಾಗಿದೆ. ಇಲ್ಲಿ ವಾತ್ಸಲ್ಯದಲ್ಲಿಯೂ ವ್ಯವಹಾರಿಕತೆ ತಲೆಹಾಕಿದ್ದು ಕಾಣುತ್ತದೆ.

ಹೆಣ್ಮಕ್ಕಳ್ಹುಟ್ಟಿದರ ಹೆರವರಿಗೆ ಸೊಸೆಯಕ್ಕ।
ಗಂಡು ಹುಟ್ಟಿದರ ಮನೆಗಾಗಿ। ಅಪ್ಪಯ್ಯ।
ಎಲ್ಹೋದರೂ ನಿನ್ನ ಹೆಸರಾಗಿ।

ಎಂಬಲ್ಲಿ ಹೆಣ್ಣಿನ ಬಗೆಗಿನ ತಿರಸ್ಕಾರಕ್ಕೆ ಗಂಡಿನ ಹಂಬಲಕ್ಕೆ ಕಾರಣಗಳು ಸ್ಪಷ್ಟವಾಗುತ್ತವೆ.

ಹೆಣ್ಣು ಹುಟ್ಟಿದಮನಿ ಹೆಗ್ಗಣ್ಹತ್ತಿದ್ಹಾಂಗ।
ಗಂಡಸ ಮಗ ಗಜಭೀಮ। ಹುಟ್ಟಿದರ।
ಚಿಲಕಿ ಚಿತ್ತಾರ ನಗತಾವ।

ಎಂಬುದನ್ನು ನೋಡಿದರೆ ಹೆರಿಗೆ ಮನೆಯಲ್ಲಿನ ಮ್ಲಾನತೆ ಸಡಗರಗಳ ಕಲ್ಪನೆಗಳು ಬರಲಿಕ್ಕೂ ಸಾಕು. 'ಮಳೆ ಬಂದರೆ ಕೇಡಲ್ಲ. ಮಗ ಉಂಡರೆ ಕೇಡಲ್ಲ' ಎನ್ನುವ ಜನ ಹೆಣ್ಣು ತವರವರಿಗೆ ನಷ್ಟದ ದಾರಿ ತುಳಿಸುವವಳು ಎಂದು ಭಾವಿಸುತ್ತಾರೆ. ಹೆಣ್ಣು ಮಗುವನ್ನು ಕೇವಲ ಮಗು ಎಂದು ಭಾವಿಸದೆ 'ಹೆಂಗಸೆಂದು ಭಾವಿಸುವುದರಿಂದ ನಮ್ಮಲ್ಲಿ ಹೆಣ್ಣು ಮಗುವಿಗೆ ಬಾಲ್ಯವೆಂಬುದೇ ಇಲ್ಲ. ಬಾಲ್ಯ ವಿವಾಹ ಪದ್ಧತಿಯಲ್ಲಂತೂ ತೊಟ್ಟಲಿಗೇ ತಾಳಿಕಟ್ಟಿ ಅವಳನ್ನು ಗೃಹಿಣಿಯಾಗಿಯೇ ಬೆಳೆಸಲಾಗುತ್ತಿತ್ತು. ಒಂದು ವೇಳೆ ಅವಳು ದೊಡ್ಡವಳಾಗಿ, ಗಂಡು ಸಿಗದೆ ಕಾಲು ಜಾರಿದರೆ ಹೊರಬೇಕಾದ ಹರಲಿಯಿಂದ ಮುಕ್ತರಾಗಲು ಇಂಥ ಪಲಾಯನ ಮಾರ್ಗವನ್ನು ಹೆತ್ತವರು ಅನುಸರಿಸುತ್ತಿದ್ದರು. ಈ ದಾರಿಯಲ್ಲಿರುವಾಗ 'ವರ' ನ ವಯಸ್ಸನ್ನು ಗಣಿಸದಿರುವ ಪ್ರಸಂಗಗಳೇ ಹೆಚ್ಚು.

ಹೆಸರು ಬ್ಯಾಳಿ ಒಯ್ದು ಕೆಸರಾಗ ಚಲ್ಲಿದಂಗ।
ಹಸು ಮಗಳ ಒಯ್ದು ಮುದುಕಾಗ। ಕೊಡುವ್ರೋ।ಕೆ।
ಹಸುವೇನೆ ನಾನು ಹಡದವ್ವ।

ಎಂಬ ಹಸುವಿನಂಥ ಹಸುಮಗಳ ದುರಂತ ಇಲ್ಲಿದೆ. ಅವಳ ತನ್ನವೇ ಆದ ಆಸೆ ಆಕಾಂಕ್ಷೆಗಳಿಗೆ ಎಷ್ಟೊ ಅವಕಾಶವಿರಲಿಲ್ಲ. ಅವಳ ಹಣೆಬರಹವನ್ನು ಹಿರಿಯರೇ ನಿರ್ಧರಿಸಬೇಕಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮಗಳ ಭವಿಷ್ಯಕ್ಕಿಂತಲೂ ತಮ್ಮ ಕರ್ತವ್ಯವೇ ಮುಖ್ಯವೆಂದು ಏನಕೇನ ಪ್ರಕಾರೇಣ ಅವಳ ಮದುವೆ ಮುಗಿಸಿ ಕೈತೊಳೆದುಕೊಳ್ಳುವ ತಾಯ್ತಂದೆಯರನ್ನು ಪಡೆದಿದ್ದಕ್ಕೆ ಅವಳು ಜೀವನವಿಡೀ ಪರಿತಪಿಸಬೇಕಾಗುತ್ತದೆ. ಅವಳ ಹಣೆ ಬರಹ ನೆನೆದು ಹೆತ್ತ ಕರುಳೂ ಕುದಿಯುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿನ ಹುಳುಕುಗಳಿಂದಾಗಿ ಇಂಥ ಪರಿಸ್ಥಿತಿ ಏರ್ಪಡುತ್ತದೆಂಬುದಂತೂ ಸ್ಪಷ್ಟ.

ಮಲ್ಲಿಗಿಯಂಥಾ ಮಗಳೀಗಿ ಎಲ್ಲಿತ್ತೋ ಒಗತಾನ।
ಹುಲ್ಲಾಗ ಬೆಂಕಿ ಒಗೆದಂಗ। ಗುಡ್ಡಾದ।
ಕಲ್ಲೀಗಿ ಧಾರಿ ಎರೆದಂಗ

ಎಂದು ತಮ್ಮ ಕೈಮೀರಿದ ಪರಿಸ್ಥಿತಿಯನ್ನು ಅಸಹಾಯರಾಗಿ ಸಹಿಸುತ್ತಾರೆ.

ಅವಳ ಆಯ್ಕೆಯಲ್ಲದ ಜೀವನ ಅವಳ ಪಾಲಿಗೆ ಬಂದರೂ ಅಲ್ಲಿ ಅವಳು ಯಶಸ್ವಿಯಾಗಲೇಬೇಕೆಂಬ ನಿರೀಕ್ಷೆ ಎಲ್ಲರದು. ಅವಳಿಗೆ ನೂರೆಂಟು ಉಪದೇಶಗಳ ಸುರಿಮಳೆ.

ಅತ್ತೀಯ ಮನಿಯಾಗ ಹತ್ತೆಂಟು ಬೇದಾರ|
ಹಚ್ಚಿಕೋಬ್ಯಾಡ ನನಮಗಳ| ಜನವೆಲ್ಲ|
ಗಂಗವ್ವನೆಂದು ಕರದಾರ|
ಅತ್ತೀಯ ಮನಿಯಾಗ ಮುತ್ತಾಗಿ ಇರಬೇಕ|
ಹೊತ್ತ ನೀಡಿದರ ಉಣಬೇಕ| ತವರವರ|
ಉತ್ತಮರ ಹೆಸರ ತರಬೇಕ|

ಎಂದು ಬಂದ ಬವಣೆಯನ್ನೆಲ್ಲ ವಿರೋಧವಿಲ್ಲದೆ ಅನುಭವಿಸಿ ತವರಿಗೆ ಹೆಸರು ತರಬೇಕೆಂದು ಉಪದೇಶಿಸುವಲ್ಲಿ ಅತ್ತೆಯ ಮನೆಯ ವಿಕೃತ ಚಿತ್ರಣವನ್ನು ಆ ಹೆಣ್ಣಿಗೆ ಕೊಡಲಾಗುತ್ತದೆ. ಆದಕ್ಕೇ ಎಳೆ ಹೆಣ್ಣಿಗೆ ಅತ್ತೆಮನೆಯೆಂದರೆ ವಿಪರೀತಿ ಭಯ. ಆ ಮನೆಗೆ ಕಾಲಿರಿಸಿದಾಗಿನಿಂದ ನಿರಾಳವಾಗಿ ನಿಲ್ಲಲಾರಳು, ಕೂಡಲಾರಳು, ಉಣ್ಣಲಾರಳು, ಉಡಲಾರಳು. ಎಲ್ಲದರಲ್ಲೂ ಸಂಕೋಚ, ಮುಜುಗರ, ಭಯ. ಈ ಭಯವನ್ನು ಹೆಚ್ಚಿಸುವಂಥ ತವರವರ ಬೋಧನೆಗಳು. ಈ ಬೋಧನೆಗಳೇ ಆ ಹೆಣ್ಣು ಅತ್ತೆಯನ್ನು ವಿಪರೀತಾರ್ಥ ಮಾಡಿಕೊಳ್ಳುವಲ್ಲಿ ಸಹಕಾರಿಯಾಗಿವೆ ಅನ್ನಿಸುತ್ತದೆ. ಅತ್ತೆಯ ನಡೆ-ನುಡಿಗಳನ್ನು ಅವಳು ವಿಚಿತ್ರವಾಗಿ ಪರಿಗಣಿಸುವಲ್ಲಿ ಅವಳನ್ನು ಚಿಕ್ಕಂದಿನಿಂದ ಅತ್ತೆಯ ಮನೆಯಲ್ಲಿಹಾಗಿರಬೇಕು, ಹೀಗಿರಬೇಕು ಎಂದು ತರಬೇತುಗೊಳಿಸಿದ್ದು ಹೆಚ್ಚು ಕಾರಣ. ಇದರಿಂದಾಗಿಯೇ ಕೆಲವೊಮ್ಮೆ ಒಳ್ಳೆ ಅತ್ತೆಯನ್ನು ಸೊಸೆ ತಪ್ಪು ತಿಳಿದು ತಾನು ಕೆಟ್ಟ ಸೊಸೆಯಾಗಿ ಪರಿಣಮಿಸುವ ಸಾಧ್ಯತೆಯೂ ಇಲ್ಲದಿಲ್ಲ.

ಸೊಸಿಯು ಬರತಾಳಂತ ಖುಸಿಬಾಳ ಮನದಾಗ|
ಸೊಸಿ ಬಂದು ಮಗನ ಕಸಗೊಂಡು| ಬಾಳ್ವಾಗ|
ಮುಗಿಲೀಗೆ ಬಾಯಿ ಬಿಡತಾಳ|

ಈ ಪದ್ಯದಿಂದ ಅದು ಹೆಚ್ಚು ಖಚಿತವೆನ್ನಿಸುತ್ತದೆ. ಆದರೂ ಸೊಸೆಯಾಗಿದ್ದಾಗ ತಾನು ಅತ್ತೆಯಿಂದ ಅನುಭವಿಸಿದ್ದನ್ನು ಸೊಸೆ ಮೇಲೆ ತೀರಿಸಿಕೊಳ್ಳುವ ಅತ್ತೆಯರೇ ಹೆಚ್ಚು.

ಮಾಡಬಾರದ ಕೆಲಸ ಮಾಡೆಂದಳತ್ತೆಮ್ಮ|
ಕರಡೀಯ ಕಟ್ಟಿ ಹಾಲ ಕರೆಯೆಂದಳು| ದೇವರೇ|
ಹುಲಿಯ ಮುಂಗಾಲ ಹಿಡಿ ಎಂದ್ಲು

ಎನ್ನುವಲ್ಲಿ ಅತ್ತೆಯ ಚಿತ್ರ ಹಿಂಸೆಗೊಳಗಾದ ಸೊಸೆಯ ಬವಣೆಯನ್ನು ನೋಡಬಹುದು. ಗಂಡನ ಮನೆಯೆಂದರೆ ಬರೀ ಗಂಡನವೇ ಅಲ್ಲವಲ್ಲ. ಅತ್ತೆ ಮಾವ, ನಾದಿನಿ, ಮೈದುನ, ಭಾವ, ನೆಗೆಣ್ಣಿಯರು ಕೂಡಿಯೇ ವಾಸಿಸುವ ಒಟ್ಟು ಕುಟುಂಬಗಳೇ ಹೆಚ್ಚು. ಇಂಥಲ್ಲಿ ಎಲ್ಲರೊಡನೆಯೂ ಹೊಂದಿಕೊಂಡು ಆಯುಷ್ಯ ಸವೆಸಬೇಕಾದ ಪರಿಸ್ಥಿತಿ ಪ್ರತಿಯೊಬ್ಬ ಹೆಣ್ಣಿನದು. ಹೀಗಿರುವಾಗ ದಿನನಿತ್ಯ ಒಂದಿಲ್ಲೊಂದು ಚಿಕ್ಕ ಪುಟ್ಟ ಘರ್ಷಣೆಗಳು ಇದ್ದೇ ಇರುತ್ತವೆ.

ಹಣ್ಣು ಮೆಣಸಿನಕಾಯಿ ಕಣ್ಣೀಗಿ ಕೆಂಪಗ।
ಸಣ್ಣಾಕಿ ಏನ ನೇಗೆಣ್ಣಿ। ಆಕಿ ಮಾತು।
ಬೆಣ್ಣ್ಯಾಗ ಮುಳ್ಳು ಮುರಿದ್ಹಂಗ।

ಹೀಗೆ ಅವಳ ಮನಸ್ಸು ಘಾಸಿಗೊಳ್ಳುತ್ತದೆ.

ಮಾರಾಯರು ಬೇದಾರ ಬಾರಾವು ಕಣ್ಣೀರು।
ಮಾರಾಯರ ತಮ್ಮ ಮೈದುನ। ಬೈದಾರ।
ಮಾಡಿಲ್ಲದ ಮಳೆಯು ಸುರಿದಂಗ।

ಎಲ್ಲರಿಂದ ಬೈಸಿಕೊಳ್ಳುವುದೇ ಬಾಳ್ವೆಯಾದಾಗ ಅತ್ತು ಕರೆಯುತ್ತ ದಿನಗಳೆಯಬೇಕಾಗುತ್ತದೆ. ಮಗಳನ್ನು ಮದುವೆ ಮಾಡಿ ಕೊಡುವಾಗ ಇಂಥದನ್ನೆಲ್ಲಾ ನೆನೆದ ತವರವರು ಅವಳನ್ನು ಗಂಡನ ಮನೆಗೆ ಕಳಿಸುವಾಗ ಹೆಚ್ಚು ದುಃಖಿಸುತ್ತಾರೆ. ಪ್ರೀತಿಯಿಂದ ಬೆಳೆಸಿದ ಮಗಳನ್ನು ಅಪರಿಚಿತ ಹಿಂಡಿನಲ್ಲಿ ಸೇರಿಸಬೇಕಾದಾಗ ಅತಿಯಾಗಿ ನೊಂದುಕೊಳ್ಳುತ್ತಾರೆ. ಸಾಮಾಜಿಕ ಜವಾಬ್ದಾರಿ ಮುಗಿದ ತೃಪ್ತಿಯೊಂದಿಗೆ ಕರುಳಿನ ಕುಡಿಯ ಅಗಲಿಕೆಯ ನೋವು ಸೇರಿಕೊಳ್ಳುತ್ತದೆ.

ತಂಗೀಗಿ ಖಳುಸ್ಯಾನ ತೆವರೇರಿ ನಿಂತಾನ।
ಅಂಗೀಲೆ ನೀರು ಒರಸ್ಯಾನ। ನನ್ನಣ್ಣ।
ಇಂದೀಗಿ ತಂಗಿ ಎರವಂದ।

ತಂಗಿಯನ್ನು ಬೀಳ್ಕೊಟ್ಟ ಅಣ್ಣ ತೌರಿಗೆ ಎರವಾದ, ಗಂಡನ ಒಡೆತನಕ್ಕೆ ಸೇರಿದ ಅವಳ ಅವಸ್ಥೆಯಿಂದಾಗಿ ಕಣ್ಣೀರು ಹಾಕುತ್ತಾನೆ. ಇನ್ನು ಮುಂದೆ ಬೇಕೆಂದಾಗ ತಂಗಿಯನ್ನು ನೋಡುವಂತಿಲ್ಲ. ಕರೆತರುವಂತಿಲ್ಲ. ಮುಂದಿನ ಅವಳ ಪಾಲಿನ ಜೀವನದ ಸ್ವರೂಪವನ್ನು ನೆನೆದು ದುಃಖಿಸುತ್ತಾನೆ. ದನಕರುಗಳನ್ನು ವ್ಯಾಪಾರಮಾಡುವುದಕ್ಕೂ ಇದಕ್ಕೂ ಹೆಚ್ಚಿನ ವ್ಯತ್ಯಾಸ ಕಾಣುವದಿಲ್ಲ. ಒಂದು ಮನೆಗೆ ಹೊಂದಿಕೊಂಡ ದನ ಮಾರಿದಾಗ ಮನೆ ಬಿಟ್ಟು ಹೋಗಲೊಪ್ಪದು. ಹೋದರೂ ಕಣ್ತಪ್ಪಿಸಿ ಆಗಾಗ ಮೊದಲಿನ ಮನೆಗೆ ಬರುತ್ತದೆ. ಮನುಷ್ಯಳಾದ ಹೆಣ್ಣಿನ ಪಾಡೂ ಇದೇ. ಗಂಡನ ಮನೆಗೆ ಹೋದಕೂಡಲೇ ಹುಟ್ಟಿಬೆಳೆದ ತವರಿನ ಹಂಬಲ ಹೇಗೆ ಹೋದೀತು? ತವರನ್ನು ಮರೆಸುವಂಥ ಸುಖವೂ ಅಲ್ಲಿ ಸಿಗಲಾರದು. ತಾನು ಹುಟ್ಟಿನಿಂದ ಒಗ್ಗಿಕೊಂಡಂಥ ಪರಿಸರಕ್ಕಿಂತ ಭಿನ್ನವಾದ ಪರಿಸರದಲ್ಲಿ ಬಾಳಬೇಕಾಗಿದ್ದರ ಜೊತೆಗೆ ಆ ಮನೆಯ ಸದಸ್ಯರ ವರ್ತನೆಯ ಹೊಸತನ, ಹಂಗಿಸುವಿಕೆ, ಬೈಗುಳ ಎಲ್ಲವನ್ನೂ ಸಹಿಸಿಕೊಂಡು ಬಾಳುವಾಗ ತೌರಿನ ಹಂಬಲ ತೀವ್ರವಾಗುತ್ತದೆ.

ತಾಯಿಕಾಣದ ಜೀವ ತಾವೂರಿ ಬಾವೂರಿ।
ಭಾಳ ಬಿಸಲಾನ ಅವರೀಯ। ಹೂವಿನ್ಹಾಂಗ।
ಬಾಡತೀನಿ ತಾಯಿ ಕರೆದೊಯ್ಯ।

ಎಂದು ತವರನ್ನು ಬಯಸುತ್ತಾಳೆ.

ಚಿಂತಾಕು ಇಡಲಿಲ್ಲ ಚಿಂತಿಬಿಟ್ಟಿರಲಿಲ್ಲ।
ಎಂಥಲ್ಲಿ ಕೊಟ್ಟಿ ಹಡೆದಮ್ಮ। ನಡುಮನಿ।
ಜಂತಿ ಜರೆದಂಗ ಜರೆದೇನ।

ಎಂದು ತನ್ನ ಅವಸ್ಥೆಯನ್ನು ನೆನೆದು ದುಃಖಿಸುತ್ತಾಳೆ. ಎಷ್ಟೆಲ್ಲಾ ದುಃಖದ ಮಧ್ಯೆ ಗಂಡನೊಬ್ಬ ಸರಿಯಿದ್ದರೆ ಎಲ್ಲವನ್ನೂ ಮರೆಯಲು ಅವಳು ಸಿದ್ಧ. ಆದರೆ ನಮ್ಮ ವ್ಯವಸ್ಥೆಯಲ್ಲಿ ಸ್ತ್ರೀ ಇಲ್ಲೂ ವಂಚಿತಳು. ಅವನು ಎಂಥ ವ್ಯಭಿಚಾರಿಯಿದ್ದರೂ ಅದು ದೋಷವಲ್ಲ. ಹೆಣ್ಣು ಮಾತ್ರ ಕಣ್ಣುಪಟ್ಟಿಕಟ್ಟಿದ ಕುದುರೆಯಂತಿರಬೇಕು. ಗಂಡನ ಕೆಟ್ಟ ಕೆಲಸಗಳನ್ನು ದೊಡ್ಡ ಮನಸ್ಸಿನಿಂದ ಸಹಿಸಿಕೊಳ್ಳಬೇಕೆಂಬುದು ಎಲ್ಲರ ನಿರೀಕ್ಷೆ. ಇದು ಹೆಣ್ಣಿನ ಶೋಷಣೆಯ ಇನ್ನೊಂದು ಮುಖ. ಅವಳಸಹನೆಯನ್ನು ಆದರ್ಶೀಕರಣಮಾಡಿ ಗಂಡು ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳುವ ತಂತ್ರ ಇದು.

ಗಂಡ ಪಂಡಿತರಾಯ ರಂಡೀಯ ಮಾಡಿದರ
ಭಂಡ ಮಾಡುವರ ಮಗಳಲ್ಲ। ಕೊರಳಾನ|
ಗುಂಡು ಬೇಡಿದರ ಕೊಡುವೇನ|

ಎನ್ನುವಲ್ಲಿ ಸಮಾಜದ ಕಣ್ಣಲ್ಲಿ ತಾನು ದೇವತೆಯಾಗುವ ಭ್ರಮೆ ಅವಳಿಗಿರುವುದರೊಂದಿಗೆ ತಾನು 'ಭಂಡ' ಮಾಡಿದರೆ ತನ್ನ ತಾಯ್ತಂದೆಗೆ ಕೆಟ್ಟಹೆಸರು ಬಂದೀತೆಂಬ ಭೀತಿಯೂ ಎದ್ದುಕಾಣುತ್ತದೆ. ಕೊರಳಾನ ಗುಂಡುಕೊಡುವೆನೆನ್ನುವಲ್ಲಿ ಗಂಡನೇ ಒಲಿಯದ ಜೀವಕ್ಕೆ ಗುಂಡಿನ ಅಲಂಕಾರವೇಕೆ ಎಂಬ ನಿರಾಸಕ್ತಿಯೂ ಕಾಣುತ್ತದೆ. ಅಲ್ಲದೆ ಅವನು 'ರಂಡೀಯ ಮಾಡುವಲ್ಲಿ' ಆಸಕ್ತನಾಗಿರುವಾಗ ಅದನ್ನು ಬಿಡಿಸುವಲ್ಲಿ ತನಗಿರುವ ಅಸಹಾಯಕತೆಯ ಕಲ್ಪನೆಯೂ ಅವಳಿಗಿದೆ. ಇದೇ ಭಾವನೆಯನ್ನು

ನಕ್ಕರೆ ನಗಲೆವ್ವ ನಗೆಮುಖದ ಕ್ಯಾದೀಗಿ|
ನಾ ಮುಚ್ಚಿ ಮುಡಿವ ಮಲ್ಲಿಗಿ
ನಾ ಮುಚ್ಚಿ ಮುಡಿವ ಮಲ್ಲಿಗಿಯಾ ಹೂವ
ಅವಳೊಂದು ಘಳಿಗೆ ಮುಡಿಯಲೆ||

ಎನ್ನುವಲ್ಲಿಯೂ ಕಾಣಲು ಸಾಧ್ಯ. ಆದರೆ ಈ ಭಾವನೆಗಳನ್ನು ಇದುವರೆಗೂ ಉದಾತ್ತೀಕರಿಸುತ್ತಾ ಬಂದಿರುವುದೂ ಗಂಡಿನ ದುರ್ವರ್ತನೆಗೆ ಪ್ರಚೋದಕವಾಗಿದೆ. ಒಳಗಿನ ಸತ್ಯ ಮಾತ್ರ ಹೆಚ್ಚಿನ ಅಸಹಾಯಕತೆ. ಅವಳು ಒಳಗೇ ನುಂಗಿಕೊಂಡನೋವನ್ನು ಕಾಣದೆ, ಅವಳನ್ನು ದೇವತೆಯಾಗಿಸುವಲ್ಲಿ ಯಾವ ಪುರುಷಾರ್ಥವೂ ಇಲ್ಲ. ಯಾವ ಹೆಣ್ಣೂ ವಾಸ್ತವದಲ್ಲಿ ತನ್ನ ಗಂಡನ ಪ್ರೀತಿಯನ್ನು ಇನ್ನೊಬ್ಬರೊಡನೆ ಹಂಚಿಕೊಳ್ಳ ಬಯಸುವುದಿಲ್ಲ. ಆದರೆ ಅವಳ ಬಯಕೆಯಂತೆ ಇಲ್ಲಿ ಯಾವುದೂ ನಡೆಯುವುದಿಲ್ಲ.

ಇಂಥ ಕುಂದು ಕೊರತೆಗಳನ್ನು ಸಹಿಸಿಯಾಳು 'ಬಂಜೆಂಬ ಶಬುದ ಹೋದಲಾರೆ' ಎಂದು ಮಕ್ಕಳಾಗದಿದ್ದಾಗ ದಿಗಿಲುಗೊಳ್ಳುತ್ತಾಳೆ. ಎಲ್ಲ ಸರಿಯಾಗಿದ್ದಾಗಲೇ ಅತ್ತೆಮನೆಯ ಕಿರುಕುಳ ಅನುಭವಿಸುತ್ತಿದ್ದ ಹೆಣ್ಣು ತಾನು ಫಲಕೊಡದ ಮರ ಎಂಬ ಲೋಕನಿಂದೆಗೆ, ತಿರಸ್ಕಾರಕ್ಕೆ ಗುರಿಯಾಗಲು ಎಷ್ಟೂ ಇಷ್ಟಪಡುವುದಿಲ್ಲ. ಕಾರಣ

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ|
ಬಾಡೀಗಿ ಎತ್ತು ದುಡಿದಂಗ| ಬಾಳೆಲೆಯ|
ಹಾಸ್ಯುಂಡು ಬೀಸಿ ಒಗೆದಂಗ|

ಎಂಬುದು ಅವಳಿಗೆ ಗೊತ್ತು. ಅದಕ್ಕೆ 'ಕಂದನ ಕೊಡು ಶಿವನೆ ಬಂಧನ ಬಿಡಲಾರೆ' ಎಂದು ಕಂಡ ಕಂಡ ದೇವರಿಗೆ ಹರಕೆ ಹೊರುತ್ತಾಳೆ.

ಬಡತನ ನನಗಿರಲಿ ಭಾಳಮಕ್ಕಳಿರಲಿ|
ಮ್ಯಾಲಗುರುವಿನ ದಯವಿರಲಿ| ಶಿವರಾಯ|
ಬಡತನದ ಚಿಂತೆ ನನಗಿರಲಿ|

ಎನ್ನುವುದನ್ನು ನೋಡುವಂತೆ ಈ ವ್ಯವಸ್ಥೆಯಲ್ಲಿ ಹೆಣ್ಣಿಗೆ 'ಬಡತನಕ್ಕಿಂತಲೂ ಬಂಜೆತನ' ಎಷ್ಟು ಘೋರವಾದದ್ದು ಎಂಬುದು ತಿಳಿಯುತ್ತದೆ.

ಇನ್ನು ವಿಧವೆಯರ ಪಾಡಂತೂ ನಾಯಿಪಾಡು. ಗಂಡನಿದ್ದಾಗಲೇ 'ಪ್ರಾಣಿ'ಯಂತೆ ಬದುಕಿದ ಹೆಣ್ಣು ವಿಧವೆಯಾದಾಗ

ಗಂಡ ಹೆಂಡಿರು ಎಂದು ಕಂಡಾಡಿದವರೆಲ್ಲ|
ಕಂಡಾರ ಮಾರಿ ತಿರುವೂರ। ಗಂಡಿಲ್ದ|
ನಾರೆವ್ವ ನಾರ ಕೊಳಿನೀರ|

ಎನ್ನುವಂತೆ ಎಲ್ಲರ ತಿರಸ್ಕಾರಕ್ಕೆ, ಉದಾಸೀನಕ್ಕೆ ಒಳಗಾಗಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ನೆನೆದೇ

ತಂಬೀಗಿ ತುಂಬಿಟ್ಟು ಗಂಗಾಳ ಬೆಳಗಿಟ್ಟು|
ನಂದಾದೀವಿಗೆ ಮುಡುಪಿಟ್ಟು| ಜೇಡಿಕೊಂಡೆ|
ಮಾರಾಯರ ಮುಂದೆ ಮರಣಾವ|

ಎಂದು ಮುತ್ತೈದೆ ಸಾವನ್ನು ಬಯಸುತ್ತಾಳೆ. ನಮ್ಮಲ್ಲಿ ವಿಧವೆಯರನ್ನು ವಿರೂಪಗೊಳಿಸಿ, ಆಸೆಗಳನ್ನು ಸುಟ್ಟು ಹಾಕುವ ಅಮಾನುಷ ಸಂಪ್ರದಾಯದಲ್ಲಿ ವೈಧವ್ಯವನ್ನು ಹೆಣ್ಣು ಕನಸಿನಲ್ಲಿಯೂ ಬಯಸಲಾರಳು.

ಒಂದು ದೃಷ್ಟಿಯಿಂದ ಭಾರತೀಯರು ಅತಿ ವ್ಯಾವಹಾರಿಕರು ಅನ್ನಿಸುತ್ತದೆ. ಹೆಣ್ಣನ್ನು ಬರೀ ಉಪಯೋಗದ ದೃಷ್ಟಿಯಿಂದಲೇ ನಡೆಸಿಕೊಳ್ಳುವುದನ್ನು ನೋಡಿದರೆ ಆಘಾತವಾಗುವಂತಿದೆ.

ಬಾಳುವೆ ಮಾಡಿದರ ಬಾರವ್ವ ಅಂದಾರ|
ಬಾಳುವೆಗೆಟ್ಟು ಮತಿಗೆಟ್ಟು| ತಿರುಗಿದರ|
ಹೋಗಮೂಳೆಂದು ಕರದಾರ|

ಯಾವಾಗ ಅವಳು ನಿರುಪಯುಕ್ತ ಅನ್ನಿಸುತ್ತಾಳೋ ಅಕ್ಷಣವೇ ಸಮಾಜ, ಬಂಧು, ಬಳಗ ಅವಳ ಕೈ ಬಿಡುತ್ತದೆ.

ಒಟ್ಟಾಗಿ ವಿಶ್ಲೇಷಿಸಿದಾಗ ಹೆಣ್ಣು ಹುಟ್ಟುವುದರಿಂದಾಗುವ ನಷ್ಟವನ್ನು ನೆನೆದು ತವರಿನವರು 'ಹೆಗ್ಗಣ್ಣತ್ತಿದ್ಹಾಂಗ' ಅಂದರೆ, ಅತ್ತೆ ಮನೆಯವರು ಅವಳನ್ನು 'ತೊತ್ತು' ಎಂದು ಭಾವಿಸಿ ಅವಳಿಂದ ಅವಳ ಶಕ್ತಿಮೀರಿ ಕೆಲಸ ತೆಗೆಯುತ್ತಾರೆ. ಗಂಡನಿಗೆ ಅವಳೊಬ್ಬಳ ಸಹವಾಸ ಸಾಕಾಗದೆ ಅವಳ ಮೇಲಿರಬೇಕಾದ ಪ್ರೀತಿ ವಿಶ್ವಾಸವನ್ನು ಬೇರೊಬ್ಬಳೊಡನೆ ಹಂಚಿಕೊಳ್ಳುತ್ತಾನೆ. ಅವನು ಅವಳಿಗೆ ಅನುರೂಪನಲ್ಲದಿದ್ದರೂ ಅವಳು ಬೇರೊಬ್ಬನನ್ನು ಬಯಸಬಾರದು. ಹಾಗೇನಾದರೂ ಅವಳು ಬಯಸಿದರೆ ಗಂಡನ

ಪೌರುಷಕ್ಕೆ ಅಪಮಾನ ಮಾಡಿದಂತೆ, ಮನೆತನದ ಪ್ರತಿಷ್ಠೆ ಹಾಳಾಗುತ್ತದೆಂದು ಭಾವಿಸಲಾಗುತ್ತದೆ. ಅಲ್ಲದೆ 'ತೊತ್ತು' ಇಲ್ಲದ ನಷ್ಟವನ್ನು ಭರಿಸಬೇಕಾಗುತ್ತದೆ. ಕಾರಣ ತೆರಕೊಟ್ಟು ತಂದದ್ದು ಹೆಣ್ಣು. ಅಂಥವಳು ಮನೆತನದ ಕೀರ್ತಿಪತಾಕೆ ಹಾರಿಸಲು ಸಂತಾನ ಬೆಳೆಸುವ ಸಾಮರ್ಥ್ಯವಿಲ್ಲದವಳಾದರೆ ಅದೂ ನಷ್ಟವೆಂದೇ ಪರಿಗಣಿಸಲಾಗುತ್ತದೆ. ಈ ದಿಸೆಯಲ್ಲಿ ದೋಷ ಗಂಡಿನದೇ ಇದ್ದರೂ ಆರೋಪ ಹೆಣ್ಣಿನ ಮೇಲೆ. ಈ ಮೂರ್ಖತನದಿಂದಾಗಿ ಅವಳ ಮೇಲೆ ಹಲವಾರು 'ಸವತಿ'ಯರನ್ನು ತಂದು ಅವರಿಗೂ ಮಕ್ಕಳಾಗದಿರುವ ನಿದರ್ಶನಗಳು ಸಾಕಷ್ಟಿವೆ. ಹೀಗಿದ್ದರೂ ಬಂಜೆಯ ಬಗ್ಗೆ ಸಮಾಜದ ದೃಷ್ಟಿಕೋನ ಬದಲಾಗದಿರುವುದು ದುರದೃಷ್ಟದ ಸಂಗತಿ.

ಇನ್ನು ಹೆಂಡತಿ ಸತ್ತವಸಿಗೆ ಮರುಮದುವೆ ಮಾಡಿದರೆ, ಗಂಡಸತ್ತವಳು ಸನ್ಯಾಸಿಯಂತೆ ಜೀವನ ನಡೆಸಬೇಕು. ಮುಸುಕಿನ ಮರೆಯಲ್ಲೇ ಬೇಯುತ್ತಾ ಜೀವ ಸವೆಸಬೇಕು. ಅವಳ ದರ್ಶನವನ್ನು ಅಪಶಕುನವೆಂದು ಭಾವಿಸುವುದು ಭಾರತೀಯ ಸಂಸ್ಕೃತಿಯ ಹಿರಿಮೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಅನುಭವಿಸುತ್ತಿರುವ ಬವಣೆಯನ್ನು ಜಾನಪದ ಸಾಹಿತ್ಯದಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇಂಥ ವ್ಯವಸ್ಥೆಯಲ್ಲಿ ಬಾಳಲಾಗದೆ ಸಿಡಿದು ನಿಲ್ಲುವ ಬದಲು ಕಳ್ಳತನದಲ್ಲಿ ಕಾಲುಜಾರಿದ ಪ್ರಸಂಗಗಳೂ ಇಲ್ಲಿವೆ. ಗಂಡನ ಮನೆಯಲ್ಲಿ ಹೆಣ್ಣಿನ ಬವಣೆ ಅಂದಿಗೂ ಇಂದಿಗೂ ಅಷ್ಟೇನೂ ಬದಲಾಗಿಲ್ಲ. ಬವಣೆಯ ಮೂಲ ಕಾರಣ ಮಾತ್ರ ಬದಲಾಗಿದೆ. ಆಗ 'ತೆರ' ಕೊಟ್ಟು ಮದುವೆಯಾಗಿ ಅದನ್ನು ಬಡ್ಡಿಸಮೇತ ತೀರಿಸಿಕೊಳ್ಳುವಂತೆ ಬಾಳಿಸಿಕೊಳ್ಳುತ್ತಿದ್ದರು. ಈಗ 'ವರದಕ್ಷಿಣೆ' ಸಾಲದು ಎಂದು ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಲಾಗುತ್ತದೆ. ಅಂದಿಗೂ ಇಂದಿಗೂ ಇಷ್ಟೇ ವ್ಯತ್ಯಾಸ.

○

ಭಾಗ ೬

ಆಧುನಿಕ ಮಹಿಳೆ

ಸಂಪಾದಕರು :
ಪ್ರೊ. ಎಚ್. ವಿ. ನಾಗೇಶ್



ಮಾತೋಶ್ರೀಯವರೊಡನೆ
ಕುಲಪತಿ ಡಾ. ಪಿ. ಎಸ್. ಅಡಕೆ. ಡಾ|| ಜಿಗಜಿನ್ನಿ ಮತ್ತಿತರರು



ತ್ಯಾಗದ ಇನ್ನೊಂದು ಕುರುಹು – ಮಾತೋಶ್ರೀ ಗಂಗಮ್ಮ ಚಿನಿವಾರ ಪ್ರಸೂತಿಗೃಹ



ಶಿಕ್ಷಕರ ತರಬೇತಿ ಕೇಂದ್ರದ ಉದ್ಘಾಟನೆ – ಪೂಜ್ಯ ಶ್ರೀ ಜ. ಚ. ನಿ. ಅವರಿಂದ

ಹಾಲಂಡಿನಲ್ಲಿ ಕುಟುಂಬ ಮತ್ತು ಮಹಿಳೆ

ಹಿರೇಮಲ್ಲೂರ ಈಶ್ವರನ್

ನಾನು ಸಂದರ್ಶಿಸಿದ ಒಂದು ಕುಟುಂಬದ ದಿನಚರಿಯಿಂದ ಹಾಲಂಡಿನ ಜನತೆಯ ದೈನಂದಿನ ಕಾರ್ಯಕ್ರಮವನ್ನು ಇಲ್ಲಿ ಉದಹರಿಸಬಹುದಾಗಿದೆ. ೨೩ ವರುಷದ ವಿದ್ಯಾರ್ಥಿಯೊಬ್ಬನು ತನ್ನ ತಂದೆ ತಾಯಿಯರ ಜೊತೆಯಲ್ಲಿ ಇರುತ್ತಿದ್ದು ತನ್ನ ಮನೆತನದ ದಿನಚರಿಯನ್ನು ಹೀಗೆ ಬಣ್ಣಿಸಿದನು : ಕುಟುಂಬದ ಸದಸ್ಯರಲ್ಲಿ ತಂದೆ ತಾಯಿ (ಇಬ್ಬರಿಗೂ ೫೨ ವರುಷ), ಮಗ (೨೩), ಇಬ್ಬರು ತಂಗಿಯವರು (೨೦, ೧೫ ವರುಷ) ಮತ್ತು ಮೂವರು ತಮ್ಮಂದಿರು (೧೮, ೧೦ ಮತ್ತು ೮ ವರುಷ).

ಬೆಳಗಿನ ೬ : ೬–೩೦. ತಾಯಿ ಮೊದಲು ಏಳುತ್ತಾಳೆ. ಮುಖಮಾರ್ಜನ ಮಾಡಿಕೊಂಡು, ಚಹ ಮಾಡಿ, ಕುಟುಂಬದ ಎಲ್ಲ ಸದಸ್ಯರಿಗೆ ಮುಂಜಾವಿನ ಮೊದಲ ಊಟದ ಸಿದ್ಧತೆ ಮಾಡುವಳು.

೬–೩೦ : ೭. ತಾಯಿ ಎಲ್ಲರನ್ನು ಎಬ್ಬಿಸುವಳು. ಎಲ್ಲರೂ ಕೂಡಿಕೊಂಡು ಚಹ ಕುಡಿಯುವರು. ಅದರ ಜೊತೆಗೆ 'ರಸ್ಕ' (ಡಚ್ ಬಿಸ್ಕಿಟು) ತಿನ್ನುವರು. ಅನಂತರ ಮುಖ ತೊಳೆಯುವ ತೊಟ್ಟಿಯ ಬಳಿಯಲ್ಲಿ ಒಬ್ಬೊಬ್ಬರು ತಮ್ಮ ತಮ್ಮ ಸರದಿಯನ್ನು ಕಾಯ್ದುಕೊಂಡು ನಿಲ್ಲುವರು. ಮನೆಯಲ್ಲಿನ ಆರು ಜನರಿಗೆ ಎರಡು ನೀರಿನ ತೊಟ್ಟಿ. ಎಲ್ಲರೂ ಸರದಿಯ ಪ್ರಕಾರ ಮುಖಮಾರ್ಜನ ಮಾಡಿಕೊಳ್ಳುವರು. ೨೦ ವರುಷದ ಹಿರಿಯ ಹುಡುಗಿ ತನ್ನ ಕಿರಿಯ ತಮ್ಮಂದಿರು ಹಲ್ಲುಗಳನ್ನು ಚೆನ್ನಾಗಿ ಸ್ವಚ್ಛಮಾಡಿಕೊಳ್ಳುವದನ್ನು ನೋಡುವಳು. ಮಕ್ಕಳು ತೊಡುವ ಬಟ್ಟೆಗಳ ಅಚ್ಚುಕಟ್ಟನ್ನು ತಾಯಿ ಪರೀಕ್ಷಿಸುವಳು. ತಂದೆ ಜ್ರೆಡ್ಡನ್ನು ತೆಳುವಾಗಿ ಹೋಳು ಮಾಡುವನು. ನ್ಯಾರಿಯ ನಂತರ ಬಟ್ಟೆ ಹಾಕಿಕೊಳ್ಳುವನು.

೭ : ೭–೩೦. ಎಲ್ಲರೂ ಕೂಡಿ ನ್ಯಾರಿಯನ್ನು ಮುಗಿಸುವರು. ತಂದೆ ಎಲ್ಲರಿಗೂ ಕೇಳಿಸುವಂತೆ ನ್ಯಾರಿಗೆ ಮುನ್ನ ಪ್ರಾರ್ಥನೆ ಮಾಡುವನು. ಊಟದ ನಂತರ ಬೈಬಲ್ಲಿನಿಂದ ಕೆಲ ಅವತರಣಿಕೆಗಳನ್ನು ಓದುವನು.

೭–೩೦ : ೮–೧೫. ತಂದೆಯು ಬಿಸಿನೀರನ್ನು ತೆಗೆದುಕೊಂಡು ಅಟ್ಟದ ಮೇಲಿನ ತೊಟ್ಟಿಯಲ್ಲಿ ಮುಖಸ್ವಚ್ಛಮಾಡಿಕೊಳ್ಳುವನು. ತಾಯಿ ಮತ್ತು ಹಿರಿಯ ಹುಡುಗ

ಯರು ಮಧ್ಯಾಹ್ನಕ್ಕೆ ಮನೆಗೆ ಊಟಕ್ಕೆ ಬರದವರಿಗೆ 'ಸ್ಯಾಂಡವಿಚ್' ಮಾಡಿ ಕಟ್ಟಿ ಕೊಡುವರು. ಅನಂತರ ಅವರು ನ್ಯಾರಿಯ ತಟ್ಟೆಗಳನ್ನು ತೊಳೆಯುವರು. ಹಿರಿಯ ಇಬ್ಬರು ಹೆಣ್ಣುಮಕ್ಕಳು ಕೆಲಸದಲ್ಲಿ ನೆರವಾಗುವರು. ಎರಡು ಚಿಕ್ಕ ಮಕ್ಕಳನ್ನು ಬಿಟ್ಟರೆ ಉಳಿದವರೆಲ್ಲರೂ ತಮ್ಮ ಹಾಸುಗೆಯನ್ನು ತಾವೇ ಸಿದ್ಧಪಡಿಸುವರು.

೮–೧೫ : ೩. ತಾಯೊಬ್ಬಳನ್ನು ಬಿಟ್ಟರೆ ಉಳಿದವರೆಲ್ಲರೂ ತಮ್ಮ ತಮ್ಮ ಕೆಲಸಕ್ಕೆ ಹೊರಡುವರು. ತಂದೆ ಮತ್ತು ಹಿರಿಯಮಗಳು ಇಬ್ಬರೂ ನಗರದ ಬ್ಯಾಂಕನಲ್ಲಿ ಕೆಲಸ ಮಾಡುವರು. ಅವರು ಬಸ್ಸಿನಲ್ಲಿ ಹೋಗುವರು. ೨೩ ವರುಷದ ಹುಡುಗ ಲಾಯಿಡನ್ ವಿಶ್ವವಿದ್ಯಾನಿಲಯದಲ್ಲಿ ವೈದ್ಯಕೀಯ ಅಭ್ಯಾಸವನ್ನು ಮಾಡುತ್ತಿದ್ದು, ರೈಲಿನಲ್ಲಿ ಸಂಚಾರ ಮಾಡುವನು. ೧೫ ವರುಷದ ಇನ್ನೊಬ್ಬಾಕೆ ಹೈಸ್ಕೂಲಿಗೆ ಹೋಗುವಳು. ಆಕೆಯ ಶಾಲೆ ಸಮೀಪ ಇರುವದರಿಂದ ಮಧ್ಯಾಹ್ನ ಮನೆಗೆ ಊಟಕ್ಕೆ ಬರುತ್ತಾಳೆ. ಆಕೆಗೆ ಸೈಕಲ್ಲು ವಾಹನ. ಇಬ್ಬರು ಚಿಕ್ಕ ಹುಡುಗರೂ ಶಾಲೆಗೆ ನಡೆದು ಕೊಂಡು ಹೋಗುವರು. ಹೋಗುವ ಮುನ್ನ ತಾವು ಸಾಕಿದ ಪ್ರಾಣಿಗಳಿಗೆ ಊಟ ಹಾಕಿ, ಕೆಲಹೊತ್ತು ಮನೆಯ ಒಳಗೂ ಹೊರಗೂ ಆಟವಾಡುವರು. ಎಲ್ಲರೂ ಹೊರಟು ಹೋದಮೇಲೆ ತಾಯಿ ಮನೆಯನ್ನು ಚೊಕ್ಕಟವಾಗಿರಿಸಿ, ಹತ್ತಿರದ ರಸ್ತೆಯಲ್ಲಿರುವ ಅಂಗಡಿಯೊಂದರಲ್ಲಿ ಸಾಮಾನುಗಳನ್ನು ಕೊಂಡು ತರುವಳು. ಮಧ್ಯಾಹ್ನದ ಊಟವಾದ ನಂತರ ಕೆಲಕಾಲ ವಿರಮಿಸುವಳು. ಎರಡು ಚಿಕ್ಕ ಹುಡುಗರು ಮತ್ತು ವಿಶ್ವವಿದ್ಯಾನಿಲಯದಲ್ಲಿ ಓದುವವನು. ಮಧ್ಯಾಹ್ನ ಎಲ್ಲರಿಗೂ ಮುನ್ನ ಮನೆಗೆ ಮರಳುವರು.

೩ : ೫. ಶಾಲೆಯಿಂದ ಮತ್ತು ವಿಶ್ವವಿದ್ಯಾನಿಲಯದಿಂದ ಬಂದವರೆಲ್ಲ ಕೂಡಿ ಚಹ ಕುಡಿಯುವರು.

೫ : ೬. ಐದು ಘಂಟೆಗೆ 'ಸೂಪು'–ಎಂದರೆ ತಿಳಿಸಾರು ಕುಡಿಯುವರು. ಅನಂತರ ಮನೆಯ ಕೆಲಸ ಇಲ್ಲವೆ ಶಾಲೆಯ ಕೆಲಸದಲ್ಲಿ ತೊಡಗುವರು. ಚಿಕ್ಕಹುಡುಗರಿಗೆ ಮನೆಯಲ್ಲಿ ಪಾಠಮಾಡುವ ಆವಶ್ಯಕತೆ ಇಲ್ಲ. ಆದ್ದರಿಂದ ಅವರು ಹೊರಗೆ ಆಟವಾಡುವರು.

೬ : ೭. ತಾಯಿ ಸಂಜೆಯ ಊಟದಲ್ಲಿ ನಿರತರಾಗಿರುವರು. ತಂದೆ ಮತ್ತು ಹಿರಿಯ ಮಗಳು ಬಂದ ಕೂಡಲೆ ಆರೂವರೆ ಘಂಟೆಗೆ ಸರಿಯಾಗಿ ಎಲ್ಲರೂ ಕಲೆತು ಒಂದೇ ಮೇಜಿನ ಸುತ್ತಲೂ ಕುಳಿತು ಊಟಮಾಡುವರು. ಊಟದ ಆರಂಭದಲ್ಲಿ ಮತ್ತೊಮ್ಮೆ ತಿಳಿಸಾರು; ಅನಂತರ ಆಲೂಗಡ್ಡೆಯ ಪಲ್ಲೆ, ಇತರ ಕಾಯಿಪಲ್ಲೆಯ ಊಟ. ಕೊನೆಯಲ್ಲಿ ಒಂದು ಸೇಬು, ಇಲ್ಲವೆ ಮೊಸರು, ಮಜ್ಜಿಗೆ, ಪುಡಿಂಗ್ (ಸಿಹಿ); ಕೆಲವೊಮ್ಮೆ ಸೇವಿಗೆ ಮತ್ತು ಅದರ ಜೊತೆಗೆ ಅನ್ನ, ತಿಳಿಸಾರು, ಬೀನ್ಸ ಮುಂತಾದವುಗಳನ್ನು ಸೇರಿಸಿ ಊಟಮಾಡುವರು. ಊಟದ ನಂತರ ತಂದೆಯು ಬೈಬಲ್ಲಿನ ಅವತರಣಿಕೆಗಳನ್ನು ಓದಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವರು. ಆಮೇಲೆ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಹುಡುಗ ತನ್ನ ಬೆನ್ನ ಹಿಂದಿನ ಇಬ್ಬರು ತಂಗಿಯರೊಂದಿಗೆ ಊಟದ ಪಾತ್ರೆಗಳನ್ನು ಸ್ವಚ್ಛಮಾಡುವನು.

೭ : ೮. ತಾಯಿಯು ಇಬ್ಬರು ಚಿಕ್ಕಮಕ್ಕಳನ್ನು ಮಲಗಿಸುವಳು. ಸಂಜೆಯ ಏಳೂವರೆ ಘಂಟೆಗೆ ಅವರಿಬ್ಬರೂ ಮಲಗಿಕೊಳ್ಳುವ ನಿಯಮ. ಅನಂತರ ತಂದೆ ಆ ದಿನದ ವೃತ್ತಪತ್ರಿಕೆಯನ್ನು ಓದುವನು. ಉಳಿದವರು ಶಾಲೆಯ ಅಭ್ಯಾಸದಲ್ಲಿ ನಿರತರಾಗುವರು. ತಾಯಿ ಮತ್ತು ಹಿರಿಯ ಮಗಳು ಸೇರಿ ಮಕ್ಕಳ ಅರಿವೆಗಳು ಹರಿದಿದ್ದರೆ ಅವುಗಳನ್ನು ಹೊಲಿಯುವರು.

೮ : ೧೦. ರಾತ್ರಿ ಎಂಟು ಘಂಟೆಗೆ ಎಲ್ಲರೂ ಸೇರಿ ಕಾಫಿ ಕುಡಿಯುವರು. ಅಟ್ಟದ ಮೇಲೆ ಓದುತ್ತಿದ್ದವರು ತಾಯಿಯ ಕರೆ ಬಂದ ಕೂಡಲೆ ಕೆಳಗಿಳಿದು ಬಂದು ಕಾಫಿ ಸೇವನೆ ಮಾಡುವರು. ತಂದೆಯು ಪತ್ರಿಕೆ ಓದಿದನಂತರ ತಮ್ಮ ಕಾರ್ಯದಲ್ಲಿ ನಿರತನಾಗುವನು. ಚರ್ಚ್‌ದಲ್ಲಿ ಸಭೆಯಿರುತ್ತದೆ. ಇಲ್ಲವೆ ಚರ್ಚ್ ಕೆಲಸದ ನಿಮಿತ್ತ ಹೊರಗೆ ಹೋಗುವನು. ಒಮ್ಮೊಮ್ಮೆ ತಾಯಿಯೂ ಅವರೊಂದಿಗೆ ಹೋಗುವಳು. ಇಲ್ಲವೆ ತನ್ನ ತಾಯಿಯನ್ನು ನೋಡಿಕೊಂಡು ಬರುವಳು. ಕಿರಿಯ ಹುಡುಗ ಹುಡುಗಿಯರೂ ಒಮ್ಮೊಮ್ಮೆ ಹೊರಗೆ ಹೋಗುತ್ತಾರೆ. ಸಾಮಾನ್ಯವಾಗಿ ಅವರೆಲ್ಲರೂ ಸಂಜೆಗೆ ಮನೆಯಲ್ಲಿರುವರು.

೧೦. ರಾತ್ರಿಯ ಹತ್ತು ಘಂಟೆಗೆ ತಾಯಿ ಮತ್ತು ಹಿರಿಯ ಹುಡುಗಿಯರು ಮಲಗುವ ಅಭ್ಯಾಸ. ತಂದೆ ಮತ್ತು ಹಿರಿಯ ಹುಡುಗ ಎಲ್ಲರಿಗಿಂತಲೂ ತಡವಾಗಿ ಮಲಗಿಕೊಳ್ಳುವ ಮುನ್ನ ತಂದೆಯು ಮನೆಯ ಬಾಗಿಲು ಹಾಕಿದೆಯೊ ಇಲ್ಲವೊ ಎನ್ನುವದನ್ನು ಪರೀಕ್ಷಿಸುವನು.

ಈ ದಿನಚರಿಯ ಮೂಲಕ ಹಾಲಂಡಿನ ಕುಟುಂಬ ಜೀವನದ ಪ್ರಾತಿನಿಧಿಕ ಚಿತ್ರವೊಂದು ನಮ್ಮ ಮುಂದೆ ನಿಲ್ಲುವದು. ಸಾಮಾನ್ಯವಾಗಿ ತಂದೆಯು ಸಾಂಪ್ರದಾಯಿಕವಾಗಿ ಬಂದ ಕಾರ್ಯದಲ್ಲಿ ತೊಡಗಿರುವದರ ಜೊತೆಗೆ ಮನೆಯ ನಿಯಂತ್ರಕನೂ ಆಗಿರುವದು ಕಂಡುಬರುತ್ತದೆ. ತಾಯಿಯು ತನ್ನ ಹೆಣ್ಣುಮಕ್ಕಳ ನೆರವಿನಿಂದ ಅಡುಗೆಯ ಮನೆಯ ಕೆಲಸ ಮತ್ತು ಇತರ ಗೃಹಕೃತ್ಯಗಳಲ್ಲಿ ಮುಖ್ಯಪಾತ್ರವಹಿಸುವಳು. ಹುಡುಗರೂ ಕೂಡ ತಾಯಿಗೆ ನೆರವಾಗುವರು.

ಒಟ್ಟಿನಲ್ಲಿ ಹಾಲಂಡಿನ ಜನತೆಯ ಕುಟುಂಬ ಜೀವನ ಔದ್ಯೋಗೀಕರಣದ ಪುರೋಭಿವೃದ್ಧಿಯಿಂದ ಶ್ರೀಮಂತವೂ ಸಂಪನ್ನವೂ ಆದ ಸುವ್ಯವಸ್ಥಿತ ರಾಷ್ಟ್ರವೊಂದರ ಪ್ರತೀಕವಾದಂತಿದೆಯೆಂದು ಹೇಳಬಹುದು. ಚೊಕ್ಕಟವೂ ಸುಯೋಜಿತವೂ ಆದ ಅವರ ಬದುಕು ಅವರ ರಾಷ್ಟ್ರದ ಚಾರಿತ್ರ್ಯದ ದ್ಯೋತಕ. ವೇಗದಿಂದ ಬದಲಾಗುತ್ತಿರುವ ತಾಂತ್ರಿಕಯುಗ ತಂದೊಡ್ಡುತ್ತಿರುವ ಬದಲಾವಣೆಗಳೊಂದಿಗೆ ಅವರ ಕುಟುಂಬಜೀವನ ಹೊಂದಿಕೊಂಡು ಕ್ರಿಯಾತ್ಮಕವಾದ ಸಂಸ್ಥೆಯಾಗಿರುವುದೆಂಬುದನ್ನು ಗುರುತಿಸುವದಕ್ಕೆ ನನಗೆ ಹೆಚ್ಚು ಕಾಲ ಬೇಕಾಗಲಿಲ್ಲ.

ನಗರೀಕರಣದ ಪ್ರಭಾವ ಹಾಲಂಡಿನ ಹಳ್ಳಿಗಳಲ್ಲಿಯೂ ಹಬ್ಬಿರುವದನ್ನು ದೇಶದ ತುಂಬೆಲ್ಲ ಸಂಚರಿಸಿ ಗುರುತಿಸಿದ ನನಗೆ ಆ ರಾಷ್ಟ್ರವೊಂದು ದೊಡ್ಡ ಔದ್ಯಮಿಕ ನಗರವೆಂಬಂತೆ ತೋರಿತು. ಆದರೂ ಆ ದೇಶದ ಉತ್ತರ, ದಕ್ಷಿಣ ಭಾಗ ಹಾಗೂ ಪಡುವಣ ಕರಾವಳಿಗಳಲ್ಲಿ ಒಕ್ಕಲುತನಕ್ಕೆ ಹೆಚ್ಚು ಪ್ರಾಶಸ್ತ್ಯ. ಅವರು ನಡೆಸಿಕೊಂಡು ಬರುತ್ತಿದ್ದ ಒಕ್ಕಲುತನವೂ ಕೂಡ ಯಂತ್ರ ಪ್ರಭಾವಕ್ಕೆ ಒಳಗಾಗಿತ್ತು. ಗೋಪಿನ

ಹಾಲನ್ನು ಹಿಂಡಲು ಯಂತ್ರ, ಹಾಲನ್ನು ಕಡೆದು ಬೆಣ್ಣೆ ಮಾಡಲು ಯಂತ್ರ; ಹಳ್ಳಿ ಪಟ್ಟಣಗಳನ್ನು ಒಂದುಗೂಡಿಸಿ ಅವುಗಳ ನಡುವಿನ ಬದುಕಿನ ಅಂತರವನ್ನು ಮೇಲಿನ ನೋಟಕ್ಕೆ ಗುರುತಿಸುವದಕ್ಕೆ ಸಾಧ್ಯವಾಗದಂತೆ ಬಂಧಿಸಿದ ಸಾರಿಗೆ ಸಂಪರ್ಕದ ಮಾಧ್ಯಮ ಬಹು ಪ್ರಬಲವಾಗಿತ್ತು. ಬಹು ಶೀರಹತ್ತಿರದಿಂದ ನೋಡಿದಾಗ, ಶೀಘ್ರವಾಗಿ ಚಲಿಸುತ್ತಿರುವ ನಗರದ ಜೀವನವನ್ನು ಹಿಂಬಾಲಿಸುವಲ್ಲಿ ಹಳ್ಳಿಯ ಸಾಮಾಜಿಕ ಜೀವನ ಸ್ವಲ್ಪ ಹಿಂದೆ ಬಿದ್ದಂತೆ ಕಂಡು ಬಂದಿತು.

ಹಳ್ಳಿಹಳ್ಳಿಗಳಲ್ಲಿ ಕಳ್ಳುಬಳ್ಳಿಗೆ ಹೆಚ್ಚಿನ ಪ್ರಾಧಾನ್ಯ ಮತ್ತು ಗೌರವವಿದ್ದಂತೆ ತೋರಿತು. ತಂದೆ–ಮಕ್ಕಳ ನಡುವಿನ ಸಂಬಂಧ ಸಾಂಪ್ರದಾಯಿಕವಾದ ದಾರಿಯಲ್ಲಿ ನಡೆದುದನ್ನು ಕಾಣಬಹುದಿತ್ತು. ತಂದೆ ಜೀವಿಸುವವರೆಗೆ ಅವನೇ ಮನೆಯ ಯಜಮಾನ. ಮಕ್ಕಳು ಅವನೊಂದಿಗೆ ಹೊಂದಿಕೊಂಡು ಅವನ ಮಾರ್ಗದರ್ಶನದಲ್ಲಿ ಕೂಡಿ ಕೆಲಸ ಮಾಡುವರು. ತಂದೆಯೇ ಮನೆಯ ಖಜಾಂಚಿ. ಆತನು ನಿವೃತ್ತಿ ಹೊಂದಿದ ಮೇಲೆ, ಮನೆಯ ಒಂದು ಭಾಗದಲ್ಲಿ ವಾಸವಾಗಿದ್ದುಕೊಂಡು ಮಕ್ಕಳಿಗೆ ಮನೆಯ ಉದ್ಯಮವನ್ನು ಬಿಟ್ಟುಕೊಡುವನು.

ಮನೆಯಲ್ಲಿ ಹೆಂಡತಿ ಅಡುಗೆಯ ಮನೆಯ ಎಲ್ಲ ಕೆಲಸವನ್ನು ವಹಿಸಿಕೊಳ್ಳುವಳು. ಆಕೆಯ ಹೆಣ್ಣುಮಕ್ಕಳೂ ಮನೆಗೆಲಸದಲ್ಲಿ ಸಹಾಯ ಮಾಡುವರು. ಹಳ್ಳಿಯ ಹಿರಿಯ ಮನೆತನವೊಂದಕ್ಕೆ ಸೇರಿದ ಹೆಣ್ಣುಮಗಳೊಬ್ಬಳು ಒಕ್ಕಲಿಗನ ಹೆಂಡತಿಯ ದಿನಚರಿಯೊಂದನ್ನು ವಿವರಿಸುತ್ತ ಹೀಗೆ ಬಣ್ಣಿಸಿರುವದುಂಟು :

'ಬೇಸಿಗೆಯಲ್ಲಿ ಹಳ್ಳಿಯ ತಾಯಿ ಬೆಳಗಿನ ಐದು ಇಲ್ಲವೆ ಐದುವರೆ ಘಂಟೆಗೆ ಚಳಿಗಾಲದಲ್ಲಿ ಆರು ಘಂಟೆಗೆ ಏಳುವಳು. ಎದ್ದ ಕೂಡಲೆ ಒಲೆಯನ್ನು ಹೊತ್ತಿಸುವಳು, ಹಾಲನ್ನು ಕರೆಯುವಳು, ಮನೆಯ ಜಾನುವಾರುಗಳಿಗೆ ಆಹಾರವನ್ನೊದಗಿಸುವಳು. ಆ ನಂತರ ಮನೆಯವರಿಗೆಲ್ಲ ನ್ಯಾರಿಯನ್ನು ತಯಾರಿಸುವಳು. ಆಮೇಲೆ ಎಲ್ಲರೂ ಕೈ ಮೈ ತೊಳೆದುಕೊಂಡು, ಸ್ವಚ್ಛವಾದ ಬಟ್ಟೆಯನ್ನುಟ್ಟುಕೊಂಡು ತಮ್ಮ ದೈನಂದಿನ ಕಾರ್ಯಕ್ರಮದಲ್ಲಿ ತೊಡಗುವರು. ದೂರದ ಶಾಲೆಗೆ ಹೋಗುವ ಮಕ್ಕಳಿಗೆ ಸ್ಯಾಂಡ್‌ವಿಚ್ ಕಟ್ಟಿಕೊಟ್ಟ ನಂತರ ಮನೆಯಲ್ಲಿ ಉಳಿಯುವಾಕೆ ಆಕೆಯೊಬ್ಬಳೇ. ಮಧ್ಯಾಹ್ನದ ಹೊತ್ತು ತಿರುಗುವ ಮುನ್ನ ಮನೆಯಲ್ಲಿ ಆಕೆಗೆ ಕೈತುಂಬ ಕೆಲಸ. ಮನೆಯ ಖೋಲಿಗಳನ್ನು ಸ್ವಚ್ಛ ಮಾಡುವದು, ಮಧ್ಯಾಹ್ನದ ಊಟದ ಸಿದ್ಧತೆ, ಮನೆಯ ಸಲ್ಲಿಯ ಸುತ್ತಲೂ ಹಾಕಿದ ಕಿರು ರಸ್ತೆಯನ್ನು ಹಸನು ಮಾಡುವದು, ಹಾಲಿನ ಡಬ್ಬಿಗಳನ್ನು ತೊಳೆಯುವದು– ಹೀಗೆ ಹಲವಾರು ಕೆಲಸ. ಮಧ್ಯಾಹ್ನದ ಊಟ, ದೊಡ್ಡ ಊಟ. ನಗರಗಳಲ್ಲಿನ ಜನತೆ ರಾತ್ರಿ ಮುಖ್ಯ ಊಟ ಮಾಡಿದರೆ, ಹಳ್ಳಿಗಳಲ್ಲಿ ಒಕ್ಕಲಿಗರಿಗೆ ಮಧ್ಯಾಹ್ನದ ಊಟ ಮಹತ್ವ. ಊಟವಾದ ಮೇಲೆ ಮತ್ತೆ ತಾಟುಗಳನ್ನು ಸ್ವಚ್ಛ ಮಾಡುವದು, ಹರಿದ ಕಾಲುಚೀಲ, ಬಟ್ಟೆಗಳನ್ನು ಹೊಲಿಯುವದು. ಬೇಸಿಗೆಯಲ್ಲಿ ಮನೆಯ ಮುಂದಿನ ಹೂದೋಟ. ಹಿತ್ತಲ ಕಾಯಿಪಲ್ಲೆಯ ತೋಟದಲ್ಲಿ ಆಕೆಯ ಕೆಲಸ. ನಾಲ್ಕು ಘಂಟೆಗೆ ಸರಿಯಾಗಿ ಎಲ್ಲರಿಗೂ ಚಹ. ಮತ್ತೆ ಗೋವಿನ ಹಾಲು ಕರೆಯುವದು ಮತ್ತು ಅವುಗಳಿಗೆ ಸೊಪ್ಪು ಹಾಕುವದು. ಸಂಜೆಯ ಊಟದ ವೇಳೆ

ಹತ್ತಿರದಲ್ಲೇ ಇದೆ. ಊಟಕ್ಕೆ ತಯಾರಿ. ಊಟವಾದ ನಂತರ ಮಕ್ಕಳನ್ನು ಮಲಗಿಸುವದು. ಇನ್ನೊಂದು ದೈನಂದಿನ ಕೊನೆಯ ಕೆಲಸ, ನಾಳೆಯ ಊಟಕ್ಕೆ ಆಲೂಗಡ್ಡೆಯನ್ನು ಸುಲಿಯಬೇಕು. ಅದಾದನಂತರ ದೈನಂದಿನ ವಾರ್ತಾ ಪತ್ರಿಕೆಯನ್ನು ಓದುವಳು. ಆಗೊಮ್ಮೆ ಈಗೊಮ್ಮೆ ಸಂಜೆ ತನ್ನ ನೆರೆಮನೆಯ ಹೆಣ್ಣುಮಗಳೊಂದಿಗೆ ಮಾತುಕತೆಗೆ ಹೋಗುವಳು. ಇದು ಹಾಲಂಡಿನ ರೈತನ ಹೆಂಡತಿಯ ಜೀವನ. ಎಲ್ಲರೂ ಮಲಗಿಕೊಂಡ ಮೇಲೆ ಆಕೆಯ ಸರದಿ. ಹತ್ತು-ಹನ್ನೊಂದು ಘಂಟೆಯ ಸುಮಾರಿಗೆ ನಿದ್ರೆಹೋಗುವಳು.

ಒಕ್ಕಲುತನವನ್ನು ಆಧರಿಸಿಕೊಂಡು ಬೆಳೆದುಬಂದಿರುವ ಹಾಲಂಡಿನ ಬಹು ಭಾಗದಲ್ಲಿ ಮನೆಯ ಒಡೆತನ ಹಾಗೂ ಅಧಿಕಾರ ತಂದೆಯ ಕೈಯಲ್ಲಿ. ಮಕ್ಕಳ ಧಾರ್ಮಿಕ ಜೀವನ, ನೈತಿಕ ಜೀವನ ಮತ್ತು ಅವರ ಮದುವೆಯ ವಿಷಯದಲ್ಲಿ ಅಪ್ಪನ ಮಾತೇ ಕೊನೆಯ ಮಾತು. ಮನೆಯ ಮಕ್ಕಳು ತಮಗಿಂತ ಕಡಿಮೆ ವರ್ಗದವರೊಂದಿಗೆ ಮದುವೆಯಾಗುವದನ್ನು ಆತನು ಸಹಿಸಲಾರನು. ಚಿಕ್ಕಮಕ್ಕಳು ತಮಗಿಂತ ಹಿರಿಯರಾದವರ ಜೊತೆಗೆ ಗೌರವದಿಂದ ನಡೆದುಕೊಳ್ಳಬೇಕೆನ್ನುವದು ಆತನ ನಿರ್ದೇಶ.

ಹಾಲಂಡಿನ ಒಕ್ಕಲು ಭೂಮಿ ಔದ್ಯೋಗಿಕ ಪ್ರಗತಿಯ ಹಿಡಿತಕ್ಕೆ ಸಿಕ್ಕು ಮುನ್ನಡೆದಂತೆ, ಅಲ್ಲಿನ ಕುಟುಂಬ ಜೀವನ ನಗರದ ಕುಟುಂಬ ಜೀವನದ ಆದರ್ಶಗಳನ್ನು ಅನುಕರಿಸಲಾರಂಭಿಸಿತು. ತಂದೆಯ ಕೈಯಲ್ಲಿ ಕೇಂದ್ರೀಕೃತವಾಗಿದ್ದ ಅಧಿಕಾರದ ಹಿಡಿತ ಸಡಿಲು ಹೊಂದಿ, ಸಮಾನ ಸೂತ್ರಗಳು ಕುಟುಂಬದಲ್ಲಿ ಪ್ರಚಾರಕ್ಕೆ ಬರುವಂತಾಯಿತು. ಈಗ ಮನೆಯ ಹುಡುಗ ಹುಡುಗಿಯರು ಹತ್ತಿರದ ಪಟ್ಟಣಗಳಲ್ಲಿ ಕೆಲಸ ಮಾಡುವದಕ್ಕೆ ಆರಂಭ ಮಾಡಿರುವರು. ಮನೆಯ, ಹೊಲದ ಕೆಲಸವನ್ನು ನೋಡಿಕೊಳ್ಳುವದಕ್ಕೆ ಒಬ್ಬ ಮಗ ಮಾತ್ರ ಉಳಿದಾನು. ಉಳಿದವರೆಲ್ಲರ ದೃಷ್ಟಿ ಪಟ್ಟಣದ ಕಡೆಗೆ. ನಗರದ ಮೌಲ್ಯಗಳ ಅನುಕರಣೆಯಿಂದಾಗಿ ಹಳ್ಳಿಯ ಜೀವನ, ಸಾಂಪ್ರದಾಯಿಕ ಕಟ್ಟಳೆಗಳು ಅವರಿಗೆ ಹಿತವಾಗಿ ತೋರದಾದವು. ಮದುವೆಯಾಗಲಿರುವ ಹುಡುಗ ಹುಡುಗಿಯರು ತಮಗೆ ಸರಿಜೋಡಿಯನ್ನು ಹುಡುಕುವಲ್ಲಿ ಸ್ವಾತಂತ್ರ್ಯವನ್ನು ಅನುಭವಿಸಲಾರಂಭಿಸಿದರು. ಮುಪ್ಪಿನ ವಯಸ್ಸಿನಲ್ಲಿದ್ದ ತಂದೆ ತಾಯಿಗಳನ್ನು ಬಿಟ್ಟು ಅವರು ಪಟ್ಟಣಗಳಲ್ಲಿ ವಾಸವಾಗ ತೊಡಗಿದರು.

ಹಾಲಂಡಿನ ಆಧುನಿಕ ಹಳ್ಳಿ ಪಟ್ಟಣಗಳಲ್ಲಿ ಗಂಡ ಹೆಂಡಂದಿರ ಸ್ಥಾನಮಾನ ಸರಿಸಮಾನವಾಗಿದೆ. ತಂದೆ ಮಕ್ಕಳ ಸಂಬಂಧ ಗೆಳೆಯರ ನಡುವಿನ ಸಂಬಂಧದಂತೆ ಕಂಡುಬಂದರೂ ಮಕ್ಕಳು ಹದಿನಾರರ ಪ್ರಾಯಕ್ಕೆ ಬರುವವರೆಗೂ ತಂದೆ ತಾಯಿಯರ ಮಾತನ್ನು ಗೌರವಿಸುವರು. ಅನಂತರವೂ ಅವರನ್ನು ಕೇಳಿ ಮಹತ್ವದ ನಿರ್ಣಯವನ್ನು ಕೈಕೊಳ್ಳುವರು.

ಮಕ್ಕಳ ಮದುವೆಯ ಸ್ವಾತಂತ್ರ್ಯ ಪಾಶ್ಚಿಮಾತ್ಯರ ಕುಟುಂಬಜೀವನದ ಒಂದು ಮಹತ್ವದ ಲಕ್ಷಣ. ತಮ್ಮ ಸಹಜೋಡಿಯನ್ನು ತಾವೇ ಆರಿಸಿಕೊಳ್ಳುವರು.

ಆದರೂ ತಂದೆ ತಾಯಿ, ಕಕ್ಕಬಕ್ಕಿಯ ಆಸೆ ಅಭಿಲಾಷೆಗಳನ್ನು ಸಹಜವಾಗಿ ಕಡೆಗಣಿಸುವದಿಲ್ಲ. ತಮ್ಮ ಧರ್ಮದ ಪಂಗಡಕ್ಕೆ, ತಮ್ಮ ವರ್ಗಕ್ಕೆ ಸೇರಿದ ಜೋಡಿಯನ್ನು ಆರಿಸಿಕೊಳ್ಳುವದು ರೂಢಿಯಾಗಿ ಬೆಳೆದು ಬಂದಿದೆ. ಭಾರತದಲ್ಲಿ ನಮ್ಮ ಜಾತಿ, ನಮ್ಮ ಧರ್ಮಕ್ಕೆ ಸೇರಿದವರನ್ನು ನಾವು ಮದುವೆಯಾಗುವಂತೆ, ಹಾಲಂಡಿನಲ್ಲಿಯೂ ಅವರು ತಮ್ಮ ತಮ್ಮ ಜಾತಿ, ಧರ್ಮಗಳಲ್ಲಿಯೇ ವಧೂವರರನ್ನು ಹುಡುಕುವರು. ತಮ್ಮ 'ಗುಂಪಿ'ಗೆ ಸೇರಿದವರೊಂದಿಗೆ ಮದುವೆಯಾಗುವ ಪದ್ಧತಿ ಮಾನವಕುಲಕ್ಕೆ ಸಹಜವಾದ ಒಂದು ನಡತೆಯೆಂದು ಆಗ ನಾನು ತಿಳಿದಂತೆ ಈಗಲೂ ಖಚಿತಪಡಿಸಿಕೊಂಡಿದ್ದೇನೆ.ಆದರೂ ಪಾಶ್ಚಿಮಾತ್ಯ ಜಗತ್ತಿನಲ್ಲಿ ಮಕ್ಕಳಿಗೆ ಮದುವೆಯ ವಿಷಯದಲ್ಲಿ ಇರುವ ಸ್ವಾತಂತ್ರ್ಯಕ್ಕೂ ಪೌರ್ವಾತ್ಯ ರಾಷ್ಟ್ರಗಳಲ್ಲಿರುವ ಸಂಪ್ರದಾಯಕ್ಕೂ ನಡುವೆ ಇರುವ ಅಂತರ ಬಹು ವಿಸ್ತಾರವಾದದ್ದು.

ಹಾಲಂಡ ಧಾರ್ಮಿಕ ಜಾಗೃತಿಯಿಂದ ಎಚ್ಚತ್ತಿರುವ ಕ್ರಿಯಾತ್ಮಕ ರಾಷ್ಟ್ರ. ಭಾರತ ದೇಶ ಜಾತಿ ತಳಹದಿಯ ಮೇಲೆ ಬೆಳೆದು ಬಂದಂತೆ, ಹಾಲಂಡ ದೇಶ ಧಾರ್ಮಿಕ ತತ್ವಗಳನ್ನು ಆಧರಿಸಿ ನಿಂತಿದೆ. ಶಾಲೆ, ಕಾಲೇಜು, ಬಾನುಲಿ ಕೇಂದ್ರಗಳು, ವೃತ್ತಪತ್ರಿಕೆ, ವಾಣಿಜ್ಯವ್ಯವಹಾರ, ರಾಜಕೀಯ ಪಕ್ಷಪಂಗಡಗಳು ಕ್ರೈಸ್ತ ಧರ್ಮಕ್ಕೆ ಸೇರಿದ ಪಂಗಡಗಳನ್ನಾಧರಿಸಿ ರಚಿತವಾಗಿವೆ. ಅಲ್ಲಿನ ದಕ್ಷಿಣ ಪ್ರದೇಶದ ಎರಡು ರಾಜ್ಯಗಳಾದ ಉತ್ತರ ಬ್ರ್ಯಾಬಂಟ ಮತ್ತು ಲಿಂಬರ್ಗಗಳಲ್ಲಿ ನೂರಕ್ಕೆ ೯೫ರಷ್ಟು ಜನ ಕೆಥೊಲಿಕ್ ಪಂಗಡಕ್ಕೆ ಸೇರಿದವರು. ಉತ್ತರ ಪ್ರಾಂತ್ಯಗಳಾದ ಫ್ರೀಜಲ್ಯಾಂಡ್ ಮತ್ತು ಗ್ರೋನಿಂಗನ್‌ಗಳಲ್ಲಿ ನೂರಕ್ಕೆ ೯೫ರಷ್ಟು ಪ್ರೊಟೆಸ್ಟಂಟರು. ದಕ್ಷಿಣ ರಾಜ್ಯದ ಹುಡುಗಿ ತಪ್ಪಿ ಪ್ರೊಟೆಸ್ಟಂಟನನ್ನು ಮದುವೆಯಾದರೆ ತನ್ನ ಊರು, ರಾಜ್ಯವನ್ನು ಬಿಟ್ಟು ತಲೆಮರೆಸಿ ಮಧ್ಯಮ ಪ್ರಾಂತ್ಯಗಳಲ್ಲಿ ಬಂದು ನೆಲಸುವಳು. ಹಾಗೆಯೆ ಉತ್ತರ ಪ್ರಾಂತ್ಯಗಳಲ್ಲಿಯೂ ಪ್ರೊಟೆಸ್ಟಂಟರು ಮದುವೆಯ ಕಟ್ಟುನಿಟ್ಟುಗಳನ್ನು ಚಾಚು ಬಿಡದೆ ನಡೆಸಿಕೊಂಡು ಬರುವರು.

ಧರ್ಮದ ಸೂತ್ರಗಳು ಹಾಲಂಡಿನ ಕೌಟುಂಬಿಕ ಜೀವನದ ಭದ್ರತೆಯನ್ನು ಬಹುದಕ್ಷತೆಯಿಂದ ಕಾಯ್ದುಕೊಂಡು ಬಂದಿವೆ. ಕೌಟುಂಬಿಕ ಜೀವನದ ಗತಿಯನ್ನೂ ವಿವಾಹಾಭೀಷ್ಟತೆಯನ್ನೂ ಮದುವೆಯ ಪಾವಿತ್ರ್ಯವನ್ನೂ ಪೋಷಿಸಿಕೊಂಡು ಬರುವಲ್ಲಿ ಕ್ರೈಸ್ತಧರ್ಮದ ಜೊತೆಗೆ ಅದರ ಪಂಗಡಗಳೂ ವಹಿಸಿದ ಪಾತ್ರ ನನಗೆ ಸ್ಮರಣಾರ್ಹವಾಗಿ ತೋರಿತು. ಮಧ್ಯಕಾಲೀನ ಯುರೋಪಿನಂತೆ ಹಾಲಂಡ ದೇಶವೂ ಕೆಲ ಕಾಲ ಕೆಥೊಲಿಕ್ ಮತ್ತು ಪ್ರೊಟೆಸ್ಟಂಟ ಪಂಗಡಗಳ ನಡುವಿನ ದ್ವೇಷಕ್ಕೆ ತುತ್ತಾಗಿರುವದನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಆದರೆ ಆಧುನಿಕ ಹಾಲಂಡ ಎಲ್ಲ ಮತ ಪಂಗಡಗಳ ಮೈತ್ರಿಯನ್ನು, ವರ್ಣಗಳ ನಡುವಿನ ಅಂತರವನ್ನೂ ತೊಡೆದು ಹಾಕಿ ಒಟ್ಟು ಐಕ್ಯತೆಯನ್ನೂ ಸಾಮರಸ್ಯವನ್ನೂ ಸಾಧಿಸಿಕೊಂಡು ಬಂದಿರುವದನ್ನು ನಾಡಿನ ತುಂಬ ಹರಡಿದ ಕುಟುಂಬಗಳ ಸಂಪರ್ಕದಿಂದಲೂ,

ಶಾಸ್ತ್ರೋಕ್ತವಾದ ಅಧ್ಯಯನ ಹಾಗೂ ಅನುಭವದಿಂದಲೂ ಗುರುತಿಸುವುದಕ್ಕೆ ಸಾಧ್ಯವಾಯಿತು.

ಪಶ್ಚಿಮವಲಯಕ್ಕೆ ಸೇರಿದ ಇತರ ರಾಷ್ಟ್ರಗಳಲ್ಲಿನ ಕೌಟುಂಬಿಕ ಜೀವನ ತನ್ನ ಭದ್ರತೆಯನ್ನು ಕಳೆದುಕೊಂಡು ದಿನಬೆಳಗಾದಂತೆ ವರ್ಧಿಸುತ್ತಿರುವ ವಿವಾಹ ವಿಚ್ಛೇದನಗಳ ಪ್ರಭಾವಕ್ಕೆ ಸಿಕ್ಕು ಘರ್ಷಣೆ ಹಾಗೂ ತುಡಿತಗಳಿಂದ ಬಳಲುತ್ತಿರುವುದನ್ನು ಹಾಲಂಡಿನಲ್ಲಿ ನಾನು ಕಾಣಲಿಲ್ಲ. ಅವರ ಧರ್ಮ ಅವರಿಗೆ ನೆಮ್ಮದಿಯನ್ನೂ, ಬದುಕಿನ ಹಿರಿಯ ಮೌಲ್ಯಗಳನ್ನೂ, ಕುಟುಂಬ ಜೀವನದ ಸೌಖ್ಯವನ್ನೂ ತಂದು ಕೊಟ್ಟಿದನ್ನು ಕ್ಷಣ ಕ್ಷಣಕ್ಕೂ ಗುರುತಿಸಿದ ನನಗೆ 'ನಿಮ್ಮ ಸಮಾಜ ಸ್ಥೈರ್ಯದಿಂದ ತುಂಬಿದೆ. ನಿಮ್ಮ ಕೌಟುಂಬಿಕ ಜೀವನ ಜೀವಂತವೂ ಕ್ರಿಯಾತ್ಮಕವೂ ಚಿಂತನವೂ ಆಗಿದೆ' ಎಂದು ಹೇಳುವ ಭಾಗ್ಯ ಹಾಗೂ ಅವಕಾಶ ದೊರಕಿತ್ತು.

("ವಲಸೆ ಹೋದ ಕನ್ನಡಿಗನ ಕತೆ"ಯಿಂದ)

○

ಕೆನಡಾ ದೇಶದ ಸ್ತ್ರೀಯರ ಬದಲಾಗುತ್ತಿರುವ ಪಾತ್ರ ಮತ್ತು ಸ್ಥಾನಮಾನ

ದಾನೇಶ ಎ. ಚೆಕ್ಕಿ

ಕೆನಡಾ ದೇಶದಲ್ಲಿ ಕಳೆದ ಶತಮಾನದ ಆದಿಭಾಗದಲ್ಲಿ ಸ್ತ್ರೀಯರು ತಮ್ಮ ಸಾಂಪ್ರದಾಯಿಕ ಕುಟುಂಬದಲ್ಲಿ ಯಾವ ಸ್ಥಾನಮಾನ ಹೊಂದಿದ್ದರು ಮತ್ತು ಯಾವ ಪಾತ್ರವನ್ನು ನಿರ್ವಹಿಸುತ್ತಿದ್ದರು ಎಂಬುದನ್ನು ಲಕ್ಷಿಸಿದರೆ ಈ ಶತಮಾನದಲ್ಲಿ ಉಂಟಾದ ಬದಲಾವಣೆಗಳನ್ನು ಸರಿಯಾಗಿ ಗ್ರಹಿಸಬಹುದು. ಕಳೆದ ಶತಮಾನದಲ್ಲಿ ನೂರಕ್ಕೆ ಐವತ್ತಕ್ಕಿಂತಲೂ ಹೆಚ್ಚಿನ ಕೆಲಸಗಾರರು ಕೃಷಿಯಲ್ಲಿ ನಿರತರಾಗಿದ್ದರು. ಪ್ರತಿಯೊಬ್ಬರೂ ಮದುವೆಯಾಗಿ ಮಕ್ಕಳನ್ನು ಪಡೆಯಬೇಕೆಂದು ನಿರೀಕ್ಷಿಸಲಾಗುತ್ತಿತ್ತು. ಜನರಲ್ಲಿ ಕುಟುಂಬ ಜೀವನದ ಬಗ್ಗೆ ತುಂಬ ಆಸ್ಥೆಯಿತ್ತು. ಧಾರ್ಮಿಕ ಹಾಗೂ ಆರ್ಥಿಕ ಕಾರಣಗಳಿಗಾಗಿ ಹೆಚ್ಚು ಮಕ್ಕಳನ್ನು ಹಡೆಯುವದಕ್ಕೆ ಸ್ವಾಗತವಿತ್ತು. ಹೀಗಾಗಿ ಕುಟುಂಬದ ಗಾತ್ರ ಸಾಮಾನ್ಯವಾಗಿ ದೊಡ್ಡದಾಗಿರುತ್ತಿತ್ತು. ವಿಸ್ತೃತ ಬಂಧು-ಬಳಗ ಸಂಬಂಧಗಳು ಪ್ರಚಲಿತವಾಗಿದ್ದವು. ಕುಟುಂಬದ ಏಕತೆಯನ್ನು ಕಾಪಾಡುವದರಲ್ಲಿ ಹಾಗೂ ಕ್ರಿಯಾವಿಧಿಗಳ ಆಚರಣೆಯ ವಿಷಯದಲ್ಲಿ ಧರ್ಮವು ಮಹತ್ವದ ಪಾತ್ರವಹಿಸಿತ್ತು. ಸ್ತ್ರೀ–ಪುರುಷರು ಹಾಗೂ ಮಕ್ಕಳ ಮೌಲ್ಯ ಮತ್ತು ವರ್ತನೆಗಳ ಮೇಲೆ ಧರ್ಮಪೀಠದ ಪ್ರಭಾವ ಪ್ರಬಲವಾಗಿತ್ತು.

ಸ್ತ್ರೀ ಪುರುಷರಿಗೆ ಪ್ರತ್ಯೇಕವಾದ ಕೆಲಸ–ಅಧಿಕಾರ–ಪಾತ್ರಗಳಿದ್ದವು. ಪುರುಷರು ಹೊಲಗದ್ದೆಗಳ ಕೆಲಸವನ್ನೂ ಮೈಕಷ್ಟದ ಇತರ ಕೆಲಸಗಳನ್ನೂ ಮಾಡುತ್ತಿದ್ದರು. ಸ್ತ್ರೀಯರು ಅಡಿಗೆ ಮಾಡುವದರಲ್ಲೋ, ಮಕ್ಕಳ ಪಾಲನೆ ಪೋಷಣೆಯಲ್ಲೋ. ನೇಯುವದು ಅಥವಾ ಬಟ್ಟೆ ತೊಳೆಯುವದರಲ್ಲೋ ಕಾಲಕಳೆಯುತ್ತಿದ್ದರು. ಕುಟುಂಬದಲ್ಲಿ ತಂದೆಯೇ ಅಧಿಕಾರವುಳ್ಳ ವ್ಯಕ್ತಿಯಾಗಿದ್ದ. ಕುಟುಂಬದ ಮುಖ್ಯ ನಿರ್ಣಯಗಳನ್ನು ತೆಗೆದುಕೊಳ್ಳುವವನು ಅವನೇ. ಗೃಹಿಣಿಯಾಗಿ ಹಾಗೂ ತಾಯಿಯಾಗಿ ಹೆಣ್ಣು ಅಧೀನ ಸ್ಥಾನಮಾನ ಹೊಂದಿದ್ದಳು. ಕುಟುಂಬದಲ್ಲಿ ಗಂಡನೂ ತಂದೆಯೂ ಆಗಿದ್ದ ಗಂಡಸು ಪ್ರಬಲ ಸ್ಥಾನದಲ್ಲಿದ್ದನು. ಸ್ತ್ರೀಯರು ಆರ್ಥಿಕವಾಗಿ ಸ್ವತಂತ್ರರಾಗಿರಲಿಲ್ಲ. ಹಾಗೆಯೇ ಅವರಿಗೆ ರಾಜಕೀಯ ಹಕ್ಕುಗಳೂ ಇರಲಿಲ್ಲ.

ಅವರಲ್ಲಿ ಬಹುತೇಕ ಮಂದಿಗೆ ಶಿಕ್ಷಣಾವಕಾಶಗಳೂ ಇರಲಿಲ್ಲ. ಸಾರ್ವಜನಿಕ ಜೀವನ ದಲ್ಲಿ ಅವರು ಪಾಲ್ಗೊಳ್ಳುತ್ತಿದ್ದುದು ತೀರ ಕಡಿಮೆ.

ತಂತ್ರಜ್ಞಾನ ಮತ್ತು ಆರ್ಥಿಕತೆ, ನಗರಜೀವನ ಮತ್ತು ಶಿಕ್ಷಣ, ವಿಚಾರ ಧಾರೆಗಳು ಮತ್ತು ಕಾನೂನು ಇವೆಲ್ಲ ಕೆನಡಾದ ಸ್ತ್ರೀಯರ ಪಾತ್ರ ಮತ್ತು ಸ್ಥಾನ ಮಾನಗಳಲ್ಲಿ ಬದಲಾವಣೆ ತರುವದರಲ್ಲಿ ಮಹತ್ವದ ಅಂಶಗಳಾಗಿವೆ. ಈ ಉಪವ್ಯವಸ್ಥೆ ಗಳಲ್ಲಿ ಉಂಟಾದ ಬದಲಾವಣೆಗಳು ಕುಟುಂಬದ ಒಳಗೂ ವಿಸ್ತೃತ ಸಮಾಜವಲ್ಲಿಯೂ ಸ್ತ್ರೀಯರ ಸ್ಥಾನಮಾನಗಳನ್ನು ಹೇಗೆ ಪರಿವರ್ತಿಸಿದವು ಎಂಬುದನ್ನು ಈಗ ವಿಶ್ಲೇಷಿಸೋಣ.

ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರಗಳಲ್ಲಿ ಉಂಟಾದ ಶೀಘ್ರ ಪ್ರಗತಿಯು ಸ್ತ್ರೀ ಪುರುಷರಿಬ್ಬರ ಆಯುರ್ಮಾನವನ್ನೂ ಹೆಚ್ಚಿಸಿದೆ. ೧೯ನೆಯ ಶತಮಾನದ ಪ್ರಾರಂಭದಲ್ಲಿ ಅವರ ಆಯುರ್ಮಾನ ಕೇವಲ ಸುಮಾರು ೩೬ ವರ್ಷ ಗಳಷ್ಟಿತ್ತು. ಆದರೆ ೧೯೬೮ರಲ್ಲಿ ಕೆನಡಾದ ಸ್ತ್ರೀಯರ ಆಯುರ್ಮಾನ ೭೬ ಕ್ಕೆ ಏರಿತ್ತು. ಇದಕ್ಕೆ ಹೋಲಿಸಿದರೆ ಪುರುಷರ ಆಯುರ್ಮಾನ ೬೯ ಮಾತ್ರ. ಹಿಂದಿನ ಕಾಲದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಪುರುಷರ ಪ್ರಮಾಣ ಸ್ತ್ರೀಯರ ಪ್ರಮಾಣಕ್ಕಿಂತ ಹೆಚ್ಚಿರುವದನ್ನು ಕಾಣುತ್ತೇವೆ. ಆದರೆ ಈ ಪ್ರಮಾಣ ಇಳಿಯುತ್ತ ಹೋಗಿ ೧೯೩೧ ರಲ್ಲಿ ೧೦೦ ಸ್ತ್ರೀಯರಿಗೆ ೧೦೭ ಪುರುಷರಾಗಿ, ಮುಂದೆ ೧೯೭೧ರಲ್ಲಿ ೧೦೦ ಸ್ತ್ರೀಯರಿಗೆ ೧೦೦ ಪುರುಷರಾದರು.

ಇತರ ಅನೇಕ ಪಾಶ್ಚಿಮಾತ್ಯ ದೇಶಗಳಂತೆ ಕೆನಡಾದಲ್ಲಿಯೂ ಜನನ ಪ್ರಮಾಣ ನಿಧಾನವಾಗಿ ಇಳಿಯುತ್ತ ಹೋಯಿತು. ೧೯೨೧ರಲ್ಲಿ ಈ ಪ್ರಮಾಣ ೨೯.೩ ಇದ್ದುದು, ೧೯೭೧ರಲ್ಲಿ ೧೬.೮ ಕ್ಕೆ ಇಳಿಯಿತು. ಅದೇ ರೀತಿಯಾಗಿ ಕೆನಡಾದ ಕುಟುಂಬದ ಸರಾಸರಿ ಗಾತ್ರವು ೧೯೪೧ರಲ್ಲಿ ೪.೫ ಇದ್ದುದು ೧೯೭೧ರಲ್ಲಿ ೩.೭ಕ್ಕೆ ಇಳಿಯಿತು. ಅಂದರೆ ಈಗ ಮಕ್ಕಳನ್ನು ಹೆರುವ ಕೆಲಸ ಸ್ತ್ರೀಯರ ಜೀವನದಲ್ಲಿ ಹಿಂದಿನಷ್ಟು ಮಹತ್ವದ್ದಾಗಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಆದ ಬದಲಾವಣೆಗಳು ಬಹು ಅಲ್ಪ ಅವಧಿಯಲ್ಲಿಯೇ ಸ್ತ್ರೀಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಲ್ಲಿಯೂ ಮಹತ್ವದ ಬದಲಾವಣೆಗಳನ್ನು ತಂದವು. ಕೆನಡಾ ದೇಶದ ಇತಿಹಾಸದಲ್ಲಿ ಹಿಂದೆ ಶಿಕ್ಷಣವೆನ್ನು ವದು ಕೇವಲ ಗಣ್ಯರೆನಿಸಿಕೊಳ್ಳುತ್ತಿದ್ದವರ ಸೊತ್ತಾಗಿತ್ತು. ಆದರೆ ಈಗ ಬಾಲಕ ಬಾಲಕಿಯರಿಗೆ ಅವರ ೧೪ ವರ್ಷ ಪ್ರಾಯದವರೆಗೆ ಉಚಿತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಿಗುತ್ತದೆ. ಇದಕ್ಕೂ ಹೆಚ್ಚಿನ ಶಿಕ್ಷಣ ಪಡೆಯಬೇಕೆನ್ನುವವರಿಗೆ ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳಿಂದ ಅನುದಾನ ಮತ್ತು ಸಾಲಗಳು ಲಭ್ಯವಾಗಿವೆ.

೨

ಮಾಧ್ಯಮಿಕ ಹಂತದಲ್ಲಿ ಶಾಲೆಗೆ ಸೇರುವ ಬಾಲಕ ಬಾಲಕಿಯರ ಪ್ರಮಾಣ ಸುಮಾರಾಗಿ ಸರಿಸಮನಾಗಿದೆ. ಈ ಹಂತದಲ್ಲಿ ಹುಡುಗರಿಗಿಂತ ಹುಡುಗಿಯರೇ

ಉತ್ತಮ ಗ್ರೇಡು ಗಿಟ್ಟಿಸುವುದನ್ನು ಕಾಣುತ್ತೇವೆ. ಅನಂತರದ ವಿಶ್ವವಿದ್ಯಾಲಯದ ಹಂತದಲ್ಲಿ ಸ್ತ್ರೀಯರ ಪ್ರಮಾಣವು ಸಾಧಾರಣವಾಗಿ ಒಟ್ಟು ಪ್ರವೇಶದ ಮೂರರಲ್ಲಿ ಒಂದು ಪಾಲು ಮಾತ್ರ ಇರುತ್ತದೆ. ಆದರೆ ಈಗ ಪದವಿ ವರ್ಗಗಳಲ್ಲಿಯೂ ಕೂಡ ಸ್ತ್ರೀಯರ ಪ್ರವೇಶದ ಪ್ರಮಾಣವು ನಿಧಾನವಾಗಿ ಏರುತ್ತಿದೆ. ಈ ಪ್ರಮಾಣ ೧೯೬೧ ರಲ್ಲಿ ೧೬.೩% ಇದ್ದುದು ೧೯೭೭–೭೮ರಲ್ಲಿ ೩೪.೨%ಕ್ಕೆ ಏರಿತು. ಒಟ್ಟಿನಲ್ಲಿ ವಿಶ್ವವಿದ್ಯಾಲಯಗಳಿಗೆ ಹೋಗುವ ಹುಡುಗಿಯರ ಸಂಖ್ಯೆ ಹುಡುಗರ ಸಂಖ್ಯೆಗಿಂತ ಕಡಿಮೆಯಿದ್ದು, ಇವರು ಹೆಚ್ಚಾಗಿ ಕಲೆ, ಶಿಕ್ಷಣ, ನರ್ಸಿಂಗ್ ಮತ್ತು ಸಮಾಜಕಾರ್ಯ ವಿಭಾಗಗಳಲ್ಲಿ ಪ್ರವೇಶ ಪಡೆದಿರುತ್ತಾರೆ.

ಕೈಗಾರಿಕೀಕರಣ, ನಗರೀಕರಣ ಮತ್ತು ತಂತ್ರಜ್ಞಾನದ ಶೀಘ್ರಪ್ರಗತಿ ಇವೆಲ್ಲ ಕೆನಡಾ ದೇಶದ ಕುಟುಂಬ ಮತ್ತು ಸಮಾಜಗಳ ಮೇಲೆ ಅಗಾಧವಾದ ಪ್ರಭಾವ ಬೀರಿವೆ. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಉತ್ಪಾದನಾ ಕಾರ್ಯವು ಮನೆಯಿಂದ ಕಾರ್ಖಾನೆಗಳಿಗೆ ಸ್ಥಳಾಂತರವಾದೊಡನೆ ಸ್ತ್ರೀಯರು ಕಾರ್ಖಾನೆಗಳಲ್ಲಿ ಕೆಲಸಗಾರರಾಗಿ ಸೇರಿದರು. ಆದರೆ ಸ್ತ್ರೀಯರು ಪುರುಷರಿಗಿಂತ ಕೀಳೆಂಬ ಸಾಂಪ್ರದಾಯಿಕ ಭಾವನೆ ಮತ್ತು ಪೂರ್ವಾಗ್ರಹಗಳಿಂದಾಗಿ ಅವರಿಗೆ ಪುರುಷರಿಗಿಂತ ಕಡಿಮೆ ಸಂಬಳ ಸಿಗುತ್ತಿತ್ತು. ೧೮೯೧ ರಲ್ಲಿ ಕೆನಡಾದ ಶ್ರಮಿಕಬಲದ ಎಂಟರಲ್ಲಿ ಒಂದು ಪಾಲು ಸ್ತ್ರೀಯರಿದ್ದರೂ ಅವರ ಅಗ್ಗದ ಅ-ಕುಶಲ ಶ್ರಮವನ್ನು ಶೋಷಿಸಲಾಗುತ್ತಿತ್ತು. ಸಾಂಪ್ರದಾಯಿಕವಾಗಿ ಸ್ತ್ರೀಯರಿಗಾಗಿಯೇ ಮೀಸಲು ಎನ್ನಿಸಿಕೊಳ್ಳುತ್ತಿದ್ದ ಉದ್ಯೋಗಗಳಲ್ಲಿಯೇ ಅವರು ಹೆಚ್ಚಾಗಿ ಸೇರಿಕೊಳ್ಳುತ್ತಿದ್ದರು.

ಕೈಗಾರಿಕೀಕರಣದೊಂದಿಗೆ ಕೆನಡಾದ ಆರ್ಥಿಕತೆಯು ಹೆಚ್ಚು ಹೆಚ್ಚಾಗಿ ನಗರೀಕರಣಗೊಳ್ಳುತ್ತಿದೆ. ಕೆನಡಾದ ಜನಸಂಖ್ಯೆಯ ಬಹುಪಾಲು ಈಗ ೧೭ ಮಹಾನಗರ ಪ್ರದೇಶಗಳಲ್ಲಿ ವಾಸಿಸುತ್ತಿದೆ. ನಗರಜೀವನ ಮತ್ತು ಉಪನಗರವಾಸ ಇವುಗಳಿಂದಾಗಿ ಸ್ತ್ರೀಯರ ಶಿಕ್ಷಣ, ವಿಚಾರಧಾರೆ ಮತ್ತು ಜೀವನ ದೃಷ್ಟಿಗಳಲ್ಲಿ ಬದಲಾವಣೆಗಳುಂಟಾಗಿ ವಿವಿಧ ಉದ್ಯೋಗಾವಕಾಶಗಳಿಗೆ ಸುಲಭ ಪ್ರವೇಶ ದೊರೆತು ಅವರಿಗೆ ಹೆಚ್ಚು ಸ್ವಾತಂತ್ರ್ಯ ಸಿಗುವಂತಾಗಿದೆ. ಆದರೆ ಅದೇ ಸಮಯದಲ್ಲಿ. ಹೊಸ ಸಮಸ್ಯೆಗಳೂ ಸಂಘರ್ಷಗಳೂ ಸೃಷ್ಟಿಯಾಗಿವೆ.

ಆಧುನಿಕ ಗೃಹೋಪಯೋಗಿ ಯಂತ್ರಗಳು ಹಾಗೂ ಉಪಕರಣಗಳು ಗೃಹಿಣಿಯ ಮನೆಗೆಲಸದ ಭಾರವನ್ನು ಬಹುಮಟ್ಟಿಗೆ ಹಗುರಗೊಳಿಸಿವೆ. ಹೀಗೆ ಒಂದೆಡೆ ಗೃಹಕೃತ್ಯದ ಭಾರ ಕಡಿಮೆಯಾಗಿ ವಿರಾಮವೇಳೆ ಹೆಚ್ಚಿದುದರಿಂದ ಹಾಗೂ ಇನ್ನೊಂದೆಡೆ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಉದ್ಯೋಗಾವಕಾಶಗಳು ಹೆಚ್ಚಿದುದರಿಂದ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಶ್ರಮಬಲವನ್ನು ಸೇರುವಂತಾಗಿದೆ. ೧೯೭೮ ರಲ್ಲಿ ಕೆನಡಾದ ಶ್ರಮಬಲದಲ್ಲಿ ೩೪.೪%ರಷ್ಟು ಮಹಿಳಾ ಕಾರ್ಮಿಕರಿದ್ದರು. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ವಿವಾಹಿತರು.

೩

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಕೆಲಸಗಾರರ ಕೊರತೆಯಿದ್ದುದರಿಂದ ಅನೇಕ ಸಂಘಟನೆಗಳು ವಿವಾಹಿತ ಸ್ತ್ರೀಯರನ್ನು ಕೆಲಸಕ್ಕೆ ತೆಗೆದುಕೊಂಡವು. ಅವರಿಗೆ ಅರೆ–ಅವಧಿಯ ಉದ್ಯೋಗ ಕೆಲಸದ ವೇಳೆಯಲ್ಲಿ ಹೊಂದಾಣಿಕೆ, ಕೆಲಸದ ಅವಧಿಯಲ್ಲಿ ಮಕ್ಕಳ ಯೋಗಕ್ಷೇಮ ಮೊದಲಾದ ಸೌಲಭ್ಯಗಳನ್ನು ಒದಗಿಸಿದವು. ಈವರೆಗೆ ಅವರಿಗೆ ನಿಷೇಧಿಸಲ್ಪಟ್ಟಿದ್ದ ವಿವಿಧ ಉದ್ಯೋಗಗಳನ್ನು ಸ್ತ್ರೀಯರು ಸಮರ್ಥ ರೀತಿಯಿಂದ ನಿರ್ವಹಿಸಬಲ್ಲರು ಎಂಬುವನ್ನು ಈ ಮಹಾಯುದ್ಧ ತೋರಿಸುವಂತಾಯಿತು. ಮನೆಯೊಳಗೆ ಗೃಹಿಣಿ ಮತ್ತು ಕುಟುಂಬದ ಹೊರಗೆ ಸಂಬಳದ ಕೆಲಸಗಾರಳು ಹೀಗೆ ಎರಡೂ ಪಾತ್ರಗಳನ್ನು ತಾವು ನಿರ್ವಹಿಸಬಲ್ಲೆವು ಎಂಬುದನ್ನು ವಿವಾಹಿತ ಮಹಿಳೆಯರು ಅರಿತುಕೊಂಡರು.

ಕೆನಡಾದ ಸಮಕಾಲೀನ ಸಮಾಜದಲ್ಲಿ ಸ್ತ್ರೀಯು ಸಂಬಳದ ಉದ್ಯೋಗದಲ್ಲಿ ಪಾಲ್ಗೊಳ್ಳುವದು ಈಗ ಸರ್ವಸಾಮಾನ್ಯ ಸಂಗತಿಯಾಗಿದೆ. ಒಂದು ಶತಮಾನದ ಹಿಂದೆ ಪ್ರಬಲ ಆರ್ಥಿಕ ಕಾರಣಗಳಿಲ್ಲದಿರುವಾಗ ವಿವಾಹಿತ ಸ್ತ್ರೀ ಕೆಲಸ ಮಾಡುವದನ್ನು ಸಮಾಜ ಒಪ್ಪುತ್ತಿರಲಿಲ್ಲ. ಆದರೆ ಇಂದು ಮಧ್ಯಮ ವರ್ಗದ ವಿವಾಹಿತ ಸ್ತ್ರೀಯು ಸಂಬಳದ ಉದ್ಯೋಗ ಮಾಡುವದು ಸಾಮಾಜಿಕ ಮನ್ನಣೆಯನ್ನು ಪಡೆದ ಮಾತಾಗಿದೆ. ಸಾಮಾನ್ಯವಾಗಿ ಬಹುತೇಕ ಸ್ತ್ರೀಯರು ತಮ್ಮ ಮಕ್ಕಳ ಜನನದ ನಡುವಿನ ಅವಧಿಯಲ್ಲಿ ಶ್ರಮಬಲವನ್ನು ಸೇರಿಕೊಂಡು ನಂತರ ಬಿಟ್ಟುಬಿಡುತ್ತಾರೆ. ಅಥವಾ ತಮ್ಮ ಕೊನೆಯ ಮಗುವು ಶಾಲೆಗೆ ಸೇರಿದ ಮೇಲೆ ಶಾಶ್ವತವಾಗಿ ಶ್ರಮಬಲದಲ್ಲಿ ಉಳಿದುಕೊಳ್ಳಬಹುದು. ದುಡಿಯುವ ಸ್ತ್ರೀಯರಲ್ಲಿ ೨೦–೪೪ ವಯೋಗುಂಪಿನವರ ಪ್ರಮಾಣವು ಅತಿ ಹೆಚ್ಚಾಗಿರುವದನ್ನು ಅಂಕೆ–ಸಂಖ್ಯೆಗಳು ತೋರಿಸುತ್ತವೆ. ಈ ಪ್ರಮಾಣ ೫೦ ವಯಸ್ಸಿನ ನಂತರ ಕ್ರಮೇಣ ಕಡಿಮೆಯಾಗಿ ಮುಂದೆ ಶೀಘ್ರವಾಗಿ ಇಳಿಯುತ್ತದೆ.

ಸ್ತ್ರೀಯರು ಆರ್ಥಿಕ ವ್ಯವಸ್ಥೆಯಲ್ಲಿ ಮುಖ್ಯವಾಗಿ ಸೇವೆಗಳ ವಲಯದಲ್ಲಿಯೂ ಬಿಳಿಕಾಲರ್ ಉದ್ಯೋಗಗಳಲ್ಲಿಯೂ ತೊಡಗಿರುವದನ್ನು ಕಾಣುತ್ತೇವೆ. ಉಳಿದೆಲ್ಲ ಉದ್ಯೋಗಕ್ಕಿಂತ ಅವರು ಕಾರಕೂನ ಹುದ್ದೆಗಳನ್ನು ಹಿಡಿದಿರುತ್ತಾರೆ. ಎರಡನೆಯ ಸ್ಥಾನದಲ್ಲಿ ಸೇವೆಗಳು ಮತ್ತು ಮನೋರಂಜನೆ ಬರುತ್ತವೆ. ನಂತರ ವಿವಿಧ ವೃತ್ತಿಗಳೂ ತಾಂತ್ರಿಕ ಉದ್ಯೋಗಗಳೂ ಬರುತ್ತವೆ. ಮಹಿಳಾ ಉದ್ಯೋಗಿಗಳಲ್ಲಿ ಮೂರರಲ್ಲಿ ಎರಡು ಪಾಲು ಈ ಮೂರು ಗುಂಪುಗಳಿಗೆ ಸೇರಿದವರಿದ್ದಾರೆ. ಕಾರ್ಯದರ್ಶಿ, ಶೀಘ್ರಲಿಪಿಕಾರಳು, ಬೆರಳಚ್ಚುಗಾರಳು, ಟೆಲಿಫೋನ್ ಆಪರೇಟರ್, ಗೃಹಕೃತ್ಯ ಮೇಲ್ವಿಚಾರಕಳು ಮತ್ತು ಗೃಹ ಅರ್ಥಶಾಸ್ತ್ರಜ್ಞೆ— ಇವೆಲ್ಲ ಸಾಂಪ್ರದಾಯಿಕವಾಗಿ ಮಹಿಳೆಯ ಉದ್ಯೋಗಗಳು.

೧೯೬೫ರಲ್ಲಿ ಪ್ರತಿಯೊಂದು ರೀತಿಯ ಉದ್ಯೋಗದ ಲೆಕ್ಕ ಹಿಡಿದಾಗಲೂ ಪುರುಷ ಕೆಲಸಗಾರರ ಸರಾಸರಿ ಆದಾಯವು ಸ್ತ್ರೀ ಕೆಲಸಗಾರರ ಆದಾಯಕ್ಕಿಂತ ಬಹುಮಟ್ಟಿಗೆ ಹೆಚ್ಚಾಗಿತ್ತು. ಸ್ತ್ರೀಯರು ದೊಡ್ಡ ಪ್ರಮಾಣದಲ್ಲಿ ಅರೆ–ಅವಧಿ

ಉದ್ಯೋಗಗಳಲ್ಲಿ ಇದ್ದರೆಂಬುದನ್ನು ಗಣಿಸಿಗೆ ತೆಗೆದುಕೊಂಡರೂ ಕೆಲಮಟ್ಟಿಗಾದರೂ ಆದಾಯದಲ್ಲಿರುವ ಈ ಭಿನ್ನತೆಗಳು ಜನರ ಸಾಂಪ್ರದಾಯಿಕ ಮನೋಭಾವ ಮತ್ತು ಪೂರ್ವಾಗ್ರಹಗಳಿಂದ ಉದ್ಭವಿಸಿವೆ ಎಂದರೆ ತಪ್ಪಾಗದು.

ಸ್ತ್ರೀ-ಪುರುಷರ ನಡುವಿನ ತಾರತಮ್ಯದಿಂದಾಗಿಯೇ ಪ್ರಾಯಶಃ ಸ್ತ್ರೀಯರು ಕಡಿಮೆ ಸಂಬಳದ ಉದ್ಯೋಗಗಳಲ್ಲಿಯೇ ಉಳಿದಿದ್ದಾರೆ. ಅವರಿಗೆ ಪುರುಷರಂತೆ ಬಡಲಿ ಉದ್ಯೋಗಳು ಸುಲಭವಾಗಿ ಸಿಗದಿರುವದೂ ಇದಕ್ಕೊಂದು ಕಾರಣವಾಗಿದೆ. ಸ್ತ್ರೀಯರ ವಿವಾಹ ಹಾಗೂ ಹೆರಿಗೆಯ ಪ್ರಮೇಯದಿಂದಾಗಿ ಅವರಿಗೆ ಸಿಗಬಹುದಾದ ಬಡಲಿ ಉದ್ಯೋಗಗಳು ಮಿತವಾಗಿವೆ. ಇಂದೂ ಕೂಡ ಅನೇಕ ಹುಡುಗಿಯರಿಗೆ ಉದ್ಯೋಗವೆಂದರೆ ವಿವಾಹ ಪೂರ್ವದಲ್ಲಿ ಮಾಡಿಕೊಳ್ಳುವ ಒಂದು ತಾತ್ಕಾಲಿಕ ವ್ಯವಸ್ಥೆ ಮಾತ್ರ. ಅವರು ಸುಲಭವಾಗಿ ಸಿಗಬಹುದಾದ ಕೆಲಸವನ್ನು ಹುಡುಕುತ್ತಾರೆಯೇ ಹೊರತು ಉತ್ತಮ ಮತ್ತು ಬಹುವ್ಯಾಪ್ತಿಯ ಉದ್ಯೋಗಗಳಿಗೆ ಬೇಕಾದ ಅರ್ಹತೆಗಳನ್ನು ಪಡೆಯಲು ಹವಣಿಸುವದಿಲ್ಲ.

ನಾವು ಈವರೆಗೆ ಕೊಟ್ಟ ಚಿತ್ರಣದಿಂದ ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣವನ್ನು ಪಡೆಯುವ ಸ್ತ್ರೀಯರ ಶೇಕಡಾವಾರು ಪ್ರಮಾಣವು ಕ್ರಮೇಣವಾಗಿ ಹೆಚ್ಚಿದ್ದು ಸೂಚಿತವಾಗುತ್ತದೆ. ಅದೇ ಕಾಲಕ್ಕೆ ಮಹಿಳಾ ಕೆಲಸಗಾರರ ಪ್ರಮಾಣವು ಈ ಶತಮಾನದ ಆರಂಭದಲ್ಲಿದ್ದ ಪ್ರಮಾಣವನ್ನು ಹೋಲಿಸಿದರೆ ಎರಡು ಪಟ್ಟಿಗಿಂತಲೂ ಮಿಗಿಲಾಗಿ ವೃದ್ಧಿಸಿದೆ. ಸಮಕಾಲೀನ ಕೆನಡಾ ಸಮಾಜದಲ್ಲಿ ಕೆಲವೊಂದು ಪ್ರತಿಕೂಲಗಳಿದ್ದರೂ, ಸ್ತ್ರೀಗೆ ಉನ್ನತ ಮಟ್ಟದ ಶಿಕ್ಷಣ ಲಭ್ಯವಾಗಿದೆ. ಅಷ್ಟೇ ಅಲ್ಲ, ಹೆಚ್ಚು ಕಡಿಮೆ ಪುರುಷನಿಗೆ ಸರಿಸಮನಾದ ಆದಾಯ ತರುವ ಉದ್ಯೋಗವೂ ಸಿಗುತ್ತಿದೆ. ಈಗ ನಾವು ಸಮಾಜದಲ್ಲಿಯ ಇಂಥ ಬದಲಾವಣೆಗಳು ಸ್ತ್ರೀಯರ ಪಾತ್ರ ಮತ್ತು ಕುಟುಂಬದಲ್ಲಿಯ ಅವರ ಸ್ಥಾನಮಾನದ ಮೇಲೆ ಎಂಥ ಪ್ರಭಾವವನ್ನು ಬೀರಿವೆ ಎಂಬುದನ್ನು ಪರಿಶೀಲಿಸೋಣ.

೪

ತಂತ್ರಜ್ಞಾನ ಮತ್ತು ಅರ್ಥವ್ಯವಸ್ಥೆ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿಯ ಬದಲಾವಣೆಗಳು ಕೆನಡಾ ದೇಶದ ಸ್ತ್ರೀಯರ ಕುಟುಂಬದೊಳಗಿನ ಸ್ಥಾನಮಾನ ಮತ್ತು ಪಾತ್ರಗಳ ಮೇಲೆ ದೂರಗಾಮಿ ಪರಿಣಾಮಗಳನ್ನು ತಂದಿವೆ. ಸ್ಥೂಲವಾಗಿ ಜನಾಂಗ, ಧರ್ಮ, ಹಾಗೂ ವರ್ಗಗಳಲ್ಲಿರುವ ಭೇದಗಳಿಗನುಗುಣವಾಗಿ ಕುಟುಂಬದೊಳಗಿನ ಸ್ಥಾನಮಾನ ಹಾಗೂ ಪಾತ್ರಗಳಲ್ಲಿಯೂ ಭಿನ್ನತೆ ಇರುವದನ್ನು ಕಾಣುತ್ತೇವೆ. 'ಕ್ರೆಸ್ಟ್‌ವುಡ್ ಹ್ಯಾಟ್ಸ್' ಎಂಬ ಗ್ರಂಥದಲ್ಲಿ ಆ ಹೆಸರಿನ ಒಂದು ಮೇಲ್ವರ್ಗದವರ ಉಪನಗರ-ಸಮುದಾಯವನ್ನು ಅಧ್ಯಯನ ಮಾಡಿದ ಲೇಖಕರು, ಪಾತ್ರ ಸರೀಕ್ಷೆಯ ವಿಷಯದಲ್ಲಿ ಪುರುಷರಿಗಿಂತ ಸ್ತ್ರೀಯ ಮೇಲೆಯೇ ಹೆಚ್ಚಾಗಿ ಒತ್ತಡ ಹೇರಲಾಗುತ್ತಿದೆಯೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಒಬ್ಬ ಗಂಡಸು ಅತಿ ಯಶಸ್ವಿಯಾದ ಗಳಿಕೆದಾರನಾದರೂ ಗಂಡನಾಗಿ, ತಂದೆಯಾಗಿ, ಹಾಗೂ ನಾಗರಿಕನಾಗಿ ವಿಫಲನಾಗುವದು ಸಾಧ್ಯವಿದೆ. ಆದರೆ ಒಬ್ಬ ಹೆಣ್ಣು ಮಗಳು ಶ್ರೇಷ್ಠ ತಾಯಿಯಾಗುವದರ ಜೊತೆಗೆ

ಸಾಮಾಜಿಕ ಪ್ರಜ್ಞೆಯುಳ್ಳ ವ್ಯಕ್ತಿಯೂ ಆಗಿರಬೇಕೆಂದು ಆಶಿಸಲಾಗುತ್ತದೆ. ಅವಳು ಈ ಎರಡೂ ಪಾತ್ರಗಳನ್ನು ಸರಿದೂಗಿಸಿಕೊಂಡು ಹೋಗಬೇಕೆಂಬ ನಿರೀಕ್ಷೆಯಿದೆ. ಗಂಡಸಿನ ವಿಷಯದಲ್ಲಿ ಇಂಥ ನಿರೀಕ್ಷೆಯಿಲ್ಲ. ಮಕ್ಕಳನ್ನು ಹದ್ದು ಬಸ್ತಿನಲ್ಲಿಡುವದರಲ್ಲಿಯೂ ಕೂಡ ತಾಯಿಯ ಪಾತ್ರ ಮಹತ್ವದ್ದು. ಈ ಅಧ್ಯಯನದ ಪ್ರಕಾರ ಆ ಸಮುದಾಯದಲ್ಲಿ ನಿರ್ಣಯ ತೆಗೆದುಕೊಳ್ಳುವ ಕೆಲಸವನ್ನು ಗಂಡ-ಹೆಂಡಿರಿಬ್ಬರೂ ಸಮನಾಗಿ ಹಂಚಿಕೊಂಡಿದ್ದರು.

ಇನ್ನು ಶ್ರಮಿಕ ವರ್ಗದ ಗಂಡ ಹೆಂಡಿರುಗಳ ಪಾತ್ರಗಳ ಬಗ್ಗೆ ಹೇಳಬೇಕಾದರೆ ಈ ಪಾತ್ರಗಳು ಸಂಪ್ರದಾಯಕ್ಕೆ ಅನುಗುಣವಾಗಿಯೇ ಇವೆಯೆಂದು ಕ್ರಿಸ್‌ಡೇಲ್ ಎಂಬವನ ಅಧ್ಯಯನ ಹೇಳುತ್ತದೆ. ಕುಟುಂಬದಲ್ಲಿ ನಿರ್ಣಯ ತೆಗೆದುಕೊಳ್ಳುವ ವಿಷಯದಲ್ಲಿ ಸಮಾಜದಲ್ಲಿ ಪಾಲ್ಗೊಳ್ಳುವ ವಿಷಯದಲ್ಲಿ ಮತ್ತು ಮಕ್ಕಳನ್ನು ನಿಯಂತ್ರಿಸುವ ವಿಷಯದಲ್ಲಿ ಶ್ರಮಿಕ ವರ್ಗದ ಪುರುಷನೇ ಪ್ರಶ್ನಾತೀತವಾಗಿ ಅಧಿಕಾರ ಹೊಂದಿರುತ್ತಾನೆ. ಫ್ರೆಂಚ್ ಕೆನೆಡಿಯನ್ನರ ಕುಟುಂಬಗಳ ಬಗ್ಗೆ ಗಾರಿಗ್ ಹೀಗೆ ತಿಳಿಸುತ್ತಾನೆ. "ಅಧಿಕಾರ ಚಲಾಯಿಸುವದು, ತಪ್ಪು ವರ್ತನೆಗೆ ಶಿಕ್ಷೆ ಕೊಡುವದು, ರಕ್ಷಣೆ ಮತ್ತು ಆರ್ಥಿಕ ಬೆಂಬಲ ಕೊಡುವದು ಇವೆಲ್ಲ ಗಂಡನ ಹೊಣೆಗಳೆಂದು ತಿಳಿಯಲಾಗುತ್ತದೆ. ಅಂತೆಯೇ ಕುಟುಂಬದ ಕಲ್ಯಾಣ, ವಿರಾಮ ವೇಳೆಯನ್ನು ನಿರ್ವಹಿಸುವದು, ಮಕ್ಕಳನ್ನು ಸಾಕುವದು, ಅವರಿಗೆ ಶಿಕ್ಷಣ ಕೊಡುವದು ಇವೆಲ್ಲ ಹೆಂಡತಿಯ ಹೊಣೆಗಾರಿಕೆಗಳು."

ಅಧಿಕಾರ ಸ್ಥಾಪಿಸುವ ಗಂಡ ಹಾಗೂ ವಿಧೇಯಳಾದ ಹೆಂಡತಿ ಎಂಬೀ ಪರಂಪರಾಗತ ಮೌಲ್ಯಗಳೂ ಪಾತ್ರಗಳೂ ಈಗ ಬದಲಾಗುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಸಮಾನತೆಗೆ ಮಹತ್ವ ಕೊಡಲಾಗುತ್ತಿದೆ. ಅವರ ಸಂಬಂಧಗಳು ಒಂದು 'ಪಾಲುದಾರಿಕೆ' ಎಂದು ಗ್ರಹಿಸಲಾಗುತ್ತಿದೆ.

ವಿವಾಹಿತ ಮಹಿಳೆಯರು ಹೆಚ್ಚು ಹೆಚ್ಚು ಸಂಖ್ಯೆಯಲ್ಲೀಗ ಕುಟುಂಬದ ಹೊರಗೆ ಸಂಬಳಕ್ಕಾಗಿ ದುಡಿಯುತ್ತಿದ್ದಾರೆ. ಇದು ಕುಟುಂಬದಲ್ಲಿ ರಾಚನಿಕ ಪುನರ್ಘಟನೆಗೆ ಎಡೆಮಾಡಿಕೊಟ್ಟಿದೆ. ದುಡಿಯುವ ಹೆಂಡತಿಯಿರುವ ಕುಟುಂಬಗಳಲ್ಲಿ ಸ್ತ್ರೀಪುರುಷರಿಬ್ಬರೂ ದುಡಿಯದ ಹೆಂಡತಿಯಿರುವ ಕುಟುಂಬದ ಪಾತ್ರಗಳಿಗಿಂತ ಭಿನ್ನವಾದ ಪಾತ್ರಗಳನ್ನು ನಿರ್ವಹಿಸಲೇಬೇಕಾಗುತ್ತದೆ. ದುಡಿಯುವ ಹೆಂಡತಿಯು ಗೃಹಕೃತ್ಯ ಮತ್ತು ಮನರಂಜನೆಯ ಮೇಲೆ ಹೆಚ್ಚು ಸಮಯ ಕಳೆಯಲಾರಳಾದರೂ ಅವಳಿಗೆ ಮನೆಗೆಲಸದಿಂದ ಪೂರ್ಣವಾದ ಮುಕ್ತಿಯಿಲ್ಲ, ಉದ್ಯೋಗವು ಅವಳ ವೈವಾಹಿಕ ಜೀವನ ಹಾಗೂ ಮಕ್ಕಳ ಮೇಲೆ ಎಂಥ ಪರಿಣಾಮವನ್ನುಂಟುಮಾಡುತ್ತದೆ ಎಂಬುದು ಈ ಪ್ರಬಂಧದ ವ್ಯಾಪ್ತಿಗೆ ಮೀರಿದ ವಿಷಯ. ಆದರೆ ಸಂಬಳಕ್ಕಾಗಿ ಅವಳು ದುಡಿಯುವದರಿಂದ ಗಂಡ ಹೆಂಡಿರ ಪಾತ್ರಗಳಲ್ಲಿ ಹಾಗೂ ಪರಸ್ಪರ ಸಂಬಂಧಗಳಲ್ಲಿ ಕೆಲವು ಮಹತ್ವದ ವ್ಯತ್ಯಾಸಗಳು ಉಂಟಾಗುತ್ತಿವೆ ಎಂಬುದು ಸ್ಪಷ್ಟ. ಹೆಣ್ಣು ದುಡಿಯುವಾಗ ಅವಳ ಮನೆಗೆಲಸದಲ್ಲಿ ಗಂಡ ಮತ್ತು ಮಕ್ಕಳು ಸ್ವಲ್ಪ ಹೆಚ್ಚು ಸಹಾಯ ಮಾಡಬೇಕಾಗುತ್ತದೆ. ಕುಟುಂಬವು ಕೈಕೊಳ್ಳುವ ನಿರ್ಣಯಗಳಲ್ಲಿ ದುಡಿಯದೇ ಇರುವ

ಹೆಣ್ಣಿಗಿಂತ ದುಡಿಯುವ ಹೆಣ್ಣು ಹೆಚ್ಚು ಪ್ರಭಾವ ಬೀರುತ್ತಾಳೆ. ಗಂಡ ಹೆಂಡಿರಲ್ಲಿ ಭಿನ್ನಾಭಿಪ್ರಾಯ ಬಂದ ಸಂದರ್ಭಗಳಲ್ಲಿ ಹೆಣ್ಣಿನ ಮಾತೇ ಮೇಲಾಗುವ ಸಂಭವ ಹೆಚ್ಚು. ದುಡಿಯುವ ಹೆಣ್ಣಿನ ಆರ್ಥಿಕ ಸ್ವಾತಂತ್ರ್ಯವು ಕುಟುಂಬದ ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ಅವಳಿಗೆ ಹೆಚ್ಚು ಸ್ವಾತಂತ್ರ್ಯವನ್ನು ತಂದು ಕೊಟ್ಟಿರಬಹುದು. ಆದರೂ ಸಂಪ್ರದಾಯಶೀಲ ಮೌಲ್ಯ ಸಮುಚ್ಚಯವು ಅವಳ ಮೇಲೆ ಪ್ರಭಾವ ಬೀರಿಯೇ ಬೀರುತ್ತದೆ. ಈಗಲೂ ಅವಳು ಮನೆಯೇ ತನ್ನ ಜೀವನದ ಕೇಂದ್ರವೆಂದು ಭಾವಿಸುತ್ತಾಳೆ. ಅವಳ ದೃಷ್ಟಿಯಲ್ಲಿ ಉದ್ಯೋಗ ಅನಂತರದ್ದು.

ವಿವಾಹದ ವಯಸ್ಸಿನಲ್ಲಿ, ಕುಟುಂಬದ ಗಾತ್ರದಲ್ಲಿ ಹಾಗೂ ಸರಾಸರಿ ಆಯುರ್ಮಾನದಲ್ಲಿ ಉಂಟಾದ ಬದಲಾವಣೆಗಳು ಸ್ತ್ರೀಯರ ಪಾತ್ರದ ವಿಷಯದಲ್ಲಿಯೂ ಆಗಾಧವಾದ ಪ್ರಭಾವ ಬೀರಿರುವದನ್ನು ಕಾಣಬಹುದು. ಹಿಂದಿನ ತಲೆಮಾರುಗಳಿಗೆ ಹೋಲಿಸಿ ನೋಡಿದರೆ, ೧೯೫೦ರಲ್ಲಿ ಸರಾಸರಿ ೨೪.೪ ವರ್ಷಪ್ರಾಯದಲ್ಲಿ ಮದುವೆಯಾಗುತ್ತಿದ್ದ ಕೆನಡಾದ ಯುವತಿಯರು ಇಂದು ೨೨.೫ ವರ್ಷ ಪ್ರಾಯದಲ್ಲಿ ಮದುವೆಯಾಗುತ್ತಾರೆ. ಕೆನಡಾದಲ್ಲಿ ಇತ್ತೀಚಿನ ವರ್ಷಗಳಲ್ಲಿ ಆದ ಒಟ್ಟು ವಿವಾಹಗಳಲ್ಲಿ ಕಾಲುಭಾಗದಷ್ಟು ವಿವಾಹಗಳು ಸ್ತ್ರೀಯರ ೨೦ ವರ್ಷ ಪ್ರಾಯದೊಳಗೆ ನಡೆದಿವೆ. ೧೯೪೧ ರಿಂದ ೧೯೭೧ರ ವರೆಗಿನ ಅವಧಿಯಲ್ಲಿ ಕುಟುಂಬದ ಸರಾಸರಿ ಗಾತ್ರ ೪.೫ ರಿಂದ ೩.೭ಕ್ಕೆ ಇಳಿದಿದೆ. ಗರ್ಭನಿರೋಧಕ ಗುಳಿಗೆಗಳು ವ್ಯಾಪಕವಾಗಿ ಬಳಸಲ್ಪಡುವದರಿಂದ, ಹಾಗೂ ಗರ್ಭಪಾತಗಳಿಗೆ ಅವಕಾಶ ಇರುವದರಿಂದ, ಈ ಗತಿ ಹೀಗೆಯೇ ಮುಂದುವರೆಯಬಹುದು. ಈಗ ವಿವಾಹಿತ ಮಹಿಳೆಯು ಸಾಮಾನ್ಯವಾಗಿ ತನ್ನ ೩೦ನೇ ವರ್ಷದ ಸುಮಾರಿಗೆ ತನ್ನ ಕೊನೆಯ ಮಗುವನ್ನು ಹೆರುತ್ತಾಳೆ. ಆ ಮಗು ಶಾಲೆಗೆ ಸೇರಿದ ನಂತರ ಅವಳಿಗೆ ಯಾವುದಾದರೊಂದು ಉದ್ಯೋಗ ಮಾಡಲು ಅಥವಾ ಬೇರೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಬೇಕಾದಷ್ಟು ಕಾಲಾವಕಾಶವಿದೆ. ಆದರೆ ಇದೇ ಹೊತ್ತಿಗೆ ಈ ತಾಯಿಗೆ ಮಕ್ಕಳನ್ನು ಸಾಕುವ ಹಾಗೂ ಸಮಾಜೀಕರಣ ಮಾಡುವ ಬಹುದೊಡ್ಡ ಭಾರವೂ ಇದೆ. ಅವಳಿಗೆ ಹಿಂದಿನಂತೆ ಎಲ್ಲರೂ ಒಟ್ಟಿಗೆ ವಾಸಿಸುವ ವಿಸ್ತೃತ ಕುಟುಂಬದ ಸಹಾಯ ಸಿಗುವದಿಲ್ಲ.

ಕೆನಡಾ ದೇಶದ ಸ್ತ್ರೀಯರು ಇಂದು ಅರ್ಧಶತಮಾನದ ಹಿಂದೆ ಇದ್ದುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಹಿಂದಿನ ಪಿತೃ ಪ್ರಧಾನ ಕುಟುಂಬವು ಮಾಯವಾಗಿದ್ದರೂ, ಗಂಡನೇ ಕುಟುಂಬದಲ್ಲಿ ಅಧಿಕಾರ ಸ್ಥಾನದಲ್ಲಿದ್ದಾನೆ. ಆದರೂ ಈಗಿನ ಗಂಡಂದಿರು ಹಿಂದಿನಂತೆ ಹೆಂಡಂದಿರಿಂದ ಸಂಪೂರ್ಣವಾದ, ಪ್ರಶ್ನಾತೀತವಾದ, ವಿಧೇಯತೆಯನ್ನು ನಿರೀಕ್ಷಿಸುವದಿಲ್ಲ ಎಂಬ ಮಾತು ಸತ್ಯ.

ಸ್ತ್ರೀಯರ ಕಾನೂನುಬದ್ಧ ಅಧಿಕಾರಗಳಲ್ಲಿ ಬದಲಾವಣೆಗಳು ಉಂಟಾಗಿವೆಯಾದರೂ, ಅವರ ಬಗೆಗೆ ಇರುವ ಸಾಂಪ್ರದಾಯಿಕ ಮನೋಭಾವಗಳು ಅದೇ ಪ್ರಮಾಣದಲ್ಲಿ ಬದಲಾಗಿಲ್ಲವೆಂದರೆ ತಪ್ಪಿಲ್ಲ. ಪ್ರಧಾನ ಪುರುಷ, ವಿಧೇಯ ಸ್ತ್ರೀ, ಎಂಬ ಪರಂಪರಾಗತ ಮನೋಭಾವ ಇನ್ನೂ ಸೂಕ್ಷ್ಮ ರೀತಿಯಲ್ಲಿ ಉಳಿದುಕೊಂಡಿದೆ. ಈಗಲೂ ಕೇವಲ ಗೃಹಿಣಿಯರಾಗಿ ಇರುವ ಸ್ತ್ರೀಯರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ.

ಅಮೇರಿಕೆಯ ಸಮಾಜಕ್ಕೆ ಹೋಲಿಸಿದರೆ ಕೆನಡಾದಲ್ಲಿ ವಿವಾಹ ವಿಚ್ಛೇದನದ ಪ್ರಮಾಣ ಕಡಿಮೆಯಿದ್ದು ಅಲ್ಲಿಯ ಜನನ ಪ್ರಮಾಣ ಅಧಿಕವಾಗಿಯೇ ಉಳಿದಿದೆ.

೫

ಕೆಲವು ಅಪವಾದಗಳನ್ನು ಬಿಟ್ಟರೆ ಕೆನಡಾ ದೇಶದಲ್ಲಿ ಒಬ್ಬ ವಿವಾಹಿತ ಸ್ತ್ರೀಯ ಸ್ಥಾನವನ್ನು ಅವಳ ಗಂಡನ ಸ್ಥಾನಮಾನದಿಂದಲೇ ಅಳೆಯಲಾಗುತ್ತದೆ. ಅವಳು ತನ್ನ ಗಂಡ ಹಾಗೂ ಮಕ್ಕಳ ಸಾಧನೆಗಳಿಂದಲೇ ತೃಪ್ತಿ ಪಡುತ್ತಾಳೆ. ಆರ್ಥಿಕ ಮತ್ತು ಇತರ ಕಾರಣಗಳಿಂದಾಗಿ ಅನೇಕ ವಿವಾಹಿತ ಸ್ತ್ರೀಯರು ಕುಟುಂಬದ ಹೊರಗೆ ದುಡಿಯುತ್ತಾರೆಂಬುದು ಸುಳ್ಳಲ್ಲ. ಆದರೆ ಅವರು ಎರಡು ರೀತಿಯ ಪಾತ್ರಗಳನ್ನು ನಿರ್ವಹಿಸುವದರಿಂದ ಕುಟುಂಬದ ಒಳಗೂ ಹೊರ ಜಗತ್ತಿನಲ್ಲೂ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಬಹುತೇಕ ಸ್ತ್ರೀಯರು ಉಭಯತ್ರ ಕೆಡಕುಗಳಾಗದಂತೆ ಎರಡೂ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಹೀಗಿದ್ದರೂ ಈ ಉದ್ಯೋಗಸ್ಥ ಮಹಿಳೆಯರು ಮಾನಸಿಕ ಹಾಗೂ ಸಾಮಾಜಿಕ ಸಂಘರ್ಷಗಳಿಂದಲೂ ಬಿಗುವು ಒತ್ತಡಗಳಿಂದಲೂ ಮುಕ್ತರಾಗಿಲ್ಲ.

ಸ್ತ್ರೀಯರ ಸ್ಥಾನಮಾನದ ಬಗೆಗಿರುವ ರಾಯಲ್ ಕಮಿಶನ್ನಿಗೆ ಮನವಿ ಸಲ್ಲಿಸಿದ ಬಹುತೇಕ ಸ್ತ್ರೀಯರು ಕುಟುಂಬದೊಳಗಿನ ತಮ್ಮ ಪಾತ್ರವನ್ನು ಒಪ್ಪಿಕೊಂಡಿದ್ದರೂ, ತಮಗೆ ಕುಟುಂಬದಲ್ಲಿ ಸಮಾನ ಪಾಲುದಾರರ ಸ್ಥಾನ ಸಿಗಬೇಕೆಂದು ಇಚ್ಛಿಸಿದ್ದಾರಲ್ಲದೆ ಕುಟುಂಬದ ಧೋರಣೆಯನ್ನು ರೂಪಿಸುವದರಲ್ಲಿಯೂ ನಿರ್ಣಯ ತೆಗೆದುಕೊಳ್ಳುವದರಲ್ಲಿಯೂ ಪಾಲು ಸಿಗಬೇಕೆಂದಿದ್ದಾರೆ. ಗಮನಿಸಬೇಕಾದ ಒಂದು ವಿಷಯವೆಂದರೆ, ಬಹಳ ಸ್ತ್ರೀಯರು ತಮ್ಮ ತಮ್ಮ ಮಕ್ಕಳ ಮತ್ತು ಮನೆಯ ಖರ್ಚಿಗೆ ಬೇಕಾದ ಹಣ ಕೊಡಲು ತಯಾರಿದ್ದಾರೆ. ಇದಕ್ಕೆ ಪ್ರತಿಯಾಗಿ ತಮ್ಮ ಗಂಡಂದಿರು ಮನೆ ಮತ್ತು ಮಕ್ಕಳ ಕೆಲಸ ಹಾಗೂ ಹೊಣೆಗಾರಿಕೆಗಳನ್ನು ತಮ್ಮೊಡನೆ ಅಷ್ಟಿಷ್ಟಾದರೂ ಹಂಚಿಕೊಳ್ಳಬೇಕೆಂದು ಅವರು ನಿರೀಕ್ಷಿಸುತ್ತಾರೆ.

ಈಗ ಅರ್ಹ ಸಂಗಾತಿಗಳ ವೃತ್ತ ವಿಶಾಲವಾಗಿದೆ; ಸಂಗಾತಿಗಳ ಆಯ್ಕೆಯಲ್ಲಿ ಸ್ವಯಂ ನಿರ್ಧಾರದ ಸ್ವಾತಂತ್ರ್ಯ ಹೆಚ್ಚಿದೆ; ವಿವಾಹ ಪೂರ್ವ ಮತ್ತು ವಿವಾಹಬಾಹಿರ ಲೈಂಗಿಕ ಸ್ವಾತಂತ್ರ್ಯವಿದೆ; ಹೆಣ್ಣಿಗೊಂದು ಸಂಹಿತೆ, ಗಂಡಿಗೊಂದು ಸಂಹಿತೆಯೆಂಬ ಧೋರಣೆ ಹೋಗುತ್ತಿದೆ. ಇದರಿಂದಾಗಿ ಸ್ತ್ರೀಯರ ಸ್ಥಾನಮಾನ ಮತ್ತು ಪಾತ್ರಗಳಲ್ಲಿ ಮಹತ್ವದ ಬದಲಾವಣೆಗಳು ಬಂದಿವೆ. ಕಳೆದ ಹತ್ತು ವರ್ಷಗಳಲ್ಲಿ ಸ್ತ್ರೀ ವಿಮೋಚನಾ ಚಳುವಳಿ, ನವಸ್ತ್ರೀವಾದಿಗಳು ಮತ್ತು ಇತರ ಸದೃಶ ಗುಂಪುಗಳೂ, ಚಳುವಳಿಗಳೂ ತಲೆಯೆತ್ತಿದ್ದು ಅವು ಮಕ್ಕಳನ್ನು ಹಡೆಯುವದೇ ಮುಂತಾದ ಸ್ತ್ರೀಯರ ಅನಿವಾರ್ಯ ಪಾತ್ರಗಳನ್ನು ಕೂಡ ಪ್ರಶ್ನಿಸುತ್ತಿವೆ. ಅದಲ್ಲದೆ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಲೈಂಗಿಕ ತಾರತಮ್ಯವನ್ನು ನಿವಾರಿಸುವ ಮತ್ತು ಸ್ತ್ರೀ–ಪುರುಷರ ಸಮಾನತೆಯನ್ನು ತರುವ ಪ್ರಯತ್ನದಲ್ಲಿ, ಶಾಸನದಲ್ಲಿಯೂ ಸಮಾಜದಲ್ಲಿಯೂ ಆಮೂಲಾಗ್ರ ಬದಲಾವಣೆಯನ್ನು ತರಬೇಕೆಂದು ಆಗ್ರಹ ಪಡಿಸುತ್ತಿದ್ದಾರೆ. ಕೆನಡಾದಲ್ಲಿ ಕಮ್ಯೂನ

ಗಳಂಥ ಹೊಸ ಕುಟುಂಬ ಪದ್ಧತಿಗಳನ್ನು ಸಣ್ಣ ಪ್ರಮಾಣದಲ್ಲಿ ಪ್ರಯೋಗಿಸುವುದೂ ಆಗಿದೆ.

ಅನೇಕ ವಯಸ್ಕ ಸ್ತ್ರೀ ಪುರುಷರು ಮತ್ತು ಅವರ ಮಕ್ಕಳೆಲ್ಲ ಒಟ್ಟಾಗಿ ಸಾಮೂಹಿಕ ಮನೆತನ ನಡೆಸುವ ಹೊಸ ವ್ಯವಸ್ಥೆಯೇ ಈ ಕಮ್ಯೂನು. ಇದೂ ಅಲ್ಲದೆ ಹೆಣ್ಣಿಗೊಂದು ಪಾತ್ರ, ಗಂಡಿಗೊಂದು ಪಾತ್ರ ಎಂಬ ಭೇದವನ್ನೇ ತೊಡೆದು ಹಾಕಬೇಕೆಂಬ ಗುರಿಹೊಂದಿದ ಹಿಪ್ಪೀ ಉಪಸಂಸ್ಕೃತಿಯನ್ನು ನಾವು ಇಲ್ಲಿ ಪ್ರಸ್ತಾಪಿಸಬಹುದು.

ಸದ್ಯದ ಒಲವುಗಳನ್ನು ಸಾಮಾಜಿಕ ಮತ್ತು ಸಾಂಘಿಕ ಮಟ್ಟಗಳಲ್ಲಿ ಮುಂದಿನ ಮೂರು ದಶಕಗಳಲ್ಲಿ ನಿರೀಕ್ಷಿಸಬಹುದಾದ ಬದಲಾವಣೆಗಳನ್ನು ಆಧಾರವಾಗಿಟ್ಟು ಕೊಂಡು ಹೇಳುವದಾದರೆ, ಇಪ್ಪತ್ತೊಂದನೆ ಶತಕದ ಪ್ರಾರಂಭದಲ್ಲಿ ಸ್ತ್ರೀ ಪುರುಷರ ನಡುವೆ ಸಾಮಾಜಿಕ ಪಾತ್ರ ಹಾಗೂ ಸ್ಥಾನಮಾನಗಳ ವಿಷಯಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸುವದೇ ಕಷ್ಟವಾಗಬಹುದು ಎಂದು ಭವಿಷ್ಯ ನುಡಿಯಬಹುದೇನೋ.*

○

* 'ಸೋಸಿಯೋಲೊಜಿಯಾ ಇಂಟರ್ ನ್ಯಾಶನಾಲಿಸ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಂಗ್ರಹಾನುವಾದ.

ಶ್ರೀಲಂಕೆಯ ಮಹಿಳೆಯರು

ಲೀಲಾ ಫಡ್ನೀಸ್

ಶ್ರೀಲಂಕೆ ಗಾತ್ರದಲ್ಲಿ ಕರ್ನಾಟಕದ ಮೂರರಲ್ಲಿ ಎರಡುಭಾಗದಷ್ಟಿದೆ. ಜನ ಸಂಖ್ಯೆಯ ದೃಷ್ಟಿಯಲ್ಲಿ ಅದು ಕರ್ನಾಟಕದ ಅರ್ಧದಷ್ಟಿದೆ. ಆದರೆ ಅಂತರ್ ರಾಷ್ಟ್ರೀಯ ಕ್ಷೇತ್ರದಲ್ಲಿ ಅದರ ಪ್ರಭಾವ ತನ್ನ ಗಾತ್ರ ಹಾಗೂ ಜನಸಂಖ್ಯೆಗಿಂತ ಎಷ್ಟೋ ಪಾಲು ಹೆಚ್ಚಾಗಿದೆ. ಕೆಲವೊಮ್ಮೆ ಅದು ಅಂತರ್‌ರಾಷ್ಟ್ರಿಯ ಕ್ಷೇತ್ರದಲ್ಲಿ ಭಾರತದಂಥ ವಿಶಾಲ ರಾಷ್ಟ್ರಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುವುದನ್ನೂ ನಾವು ನೋಡಬಹುದು.

ಶ್ರೀಲಂಕೆ ಔದ್ಯಮಿಕವಾಗಿ ಬಹಳ ಹಿಂದುಳಿದ ದೇಶ. ಆದರೆ ಕೃಷಿ ಅಭಿವೃದ್ಧಿಗೆ ಹಾಗೂ ಪ್ಲಾಂಟೇಶನ್ನು ಕೃಷಿಗೆ ಅಲ್ಲಿ ಒಳ್ಳೆಯ ಅವಕಾಶಗಳಿವೆ. ಈಗಾಗಲೇ ಈ ಅವಕಾಶಗಳನ್ನು ಶ್ರೀಲಂಕೆ ಬಳಸಿಕೊಂಡಿದೆ; ಮುಂದೆ ಮತ್ತಷ್ಟು ಊರ್ಜಿತಗೊಳಿಸಿ ಕೊಳ್ಳಬಹುದು. ಸದ್ಯ ಅದು ರಬ್ಬರ್, ತಂಬಾಕು, ಚಹಾ, ಸಾಂಬಾರ ಜೀನಸುಗಳು, ಮೀನು, ಮರಮುಟ್ಟು ಮತ್ತು ಚರ್ಮದ ಸಾಮಾನುಗಳನ್ನು ವಿಪುಲವಾಗಿ ಉತ್ಪಾದಿಸಿ, ಅವುಗಳನ್ನು ಹೊರದೇಶಗಳಿಗೆ ರಫ್ತುಮಾಡಿ ತನ್ನೆಲ್ಲ ಆದಾಯವನ್ನು ಪಡೆಯುತ್ತಿದೆ. ಈ ದೇಶವು ಬರಗಾಲವನ್ನು ಕಂಡಿಲ್ಲ ಎನ್ನುತ್ತಾರೆ. ನಿಜ, ಬರಗಾಲ ಇಲ್ಲಿ ಬರಲಾರದು. ದೇಶದ ಉದ್ದಗಲ ವಿಪುಲವಾಗಿ ಮಳೆಯಾಗುತ್ತದೆ. ವರ್ಷದಲ್ಲಿ ಸುಮಾರು ೨೬೫ ದಿನಗಳ ಕಾಲ ಇಲ್ಲಿ ೩೦ ಅಂಗುಲದಿಂದ ಹಿಡಿದು ೧೦೦ ಅಂಗುಲ ಮಳೆ ಬೀಳುತ್ತದೆ. ಇದು ದೇಶದ ಎಲ್ಲ ಕಡೆಗಳಲ್ಲಿ ಸಮನಾಗಿ ಹಂಚಿ ಹೋಗುತ್ತದೆ. ಬೆಟ್ಟಗಳೇ ಇರಲಿ ಅಥವಾ ತಪ್ಪಲುಗಳೇ ಇರಲಿ, ಚಹಾ ತೋಟಗಳೇ ಇರಲಿ ಅಥವಾ ಭತ್ತದ ಗದ್ದೆಗಳೇ ಇರಲಿ, ದೇಶದ ಮುಕ್ಕಾಲು ಭಾಗ ಸದಾ ಹಚ್ಚಹಸುರಾಗಿ ಕಾಣಿಸುತ್ತಿರುತ್ತದೆ. ನೆಲದ ಮಕ್ಕಳಿಗೆ—ಹೆಣ್ಣಿರಲಿ ಗಂಡಿರಲಿ ಈ ದೇಶದಲ್ಲಿ ಸದಾ ಕೆಲಸವಿದೆ.

ಶ್ರೀಲಂಕೆಯ ಮಹಿಳೆಯರು ತಮ್ಮ ದೇಶದ ರಾಷ್ಟ್ರೀಯ ಅಭಿವೃದ್ಧಿ ಕಾರ್ಯ ದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಸಂಖ್ಯಾದೃಷ್ಟಿಯಿಂದ ನೋಡಿದರೆ ಇಲ್ಲಿ ಪುರುಷರಿಗಿಂತ ಸ್ತ್ರೀಯರೇ ತುಸು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಇವರಲ್ಲಿ ಶೇಕಡಾ ೭೦ ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಾರೆ.

ಗ್ರಾಮೀಣರೇ ಇರಲಿ, ನಗರವಾಸಿಗಳೇ ಇರಲಿ, ಸ್ತ್ರೀಯರು ಪುರುಷರಿಗೆ ಸರಿಸಮಾನವಾಗಿ ದುಡಿಯುತ್ತಾರೆ; ಸರಿಸಮಾನಾಗಿ ಸ್ಪರ್ಧಿಸುತ್ತಾರೆ. ಅವರು ತಮ್ಮ ಉಡಿಗೆ–ತೊಡಿಗೆ, ರೀತಿ–ನೀತಿ ಮತ್ತಿತರ ವಿಷಯಗಳಲ್ಲಿ ತೀರ ಸರಳ. ಒಂದು ಲುಂಗಿ ಹಾಗೂ ತೋಳಿರುವ ಒಂದು ನಡುವಂಗಿ ಇದು ಅವರ ದಿನನಿತ್ಯದ ಉಡಿಗೆ. ಅಪರೂಪವಾಗಿ ಆಗೊಮ್ಮೆ ಈಗೊಮ್ಮೆ ಸೀರೆ ಉಡುತ್ತಾರೆ. ಶ್ರೀಲಂಕೆಯ ಬಹುಭಾಗದಲ್ಲಿ ಉಷ್ಣ ಹವಾಗುಣವಿರುವುದರಿಂದ ಹಾಗೂ ವರ್ಷದ ಹೆಚ್ಚಿನ ಭಾಗದಲ್ಲಿ ಮಳೆ ಬೀಳುತ್ತಿರುವುದರಿಂದ ಹೊಲದಲ್ಲಿ ಸೀರೆಯುಟ್ಟು ದುಡಿಯುವುದು ಅನುಕೂಲಕರವಾಗಿಲ್ಲ. ಹೀಗಾಗಿ ಅವರು ಸದಾ ಅತಿ ಕಡಿಮೆ ಬಟ್ಟೆಬರೆಗಳಿಂದ ತೃಪ್ತಿಪಟ್ಟುಕೊಳ್ಳುತ್ತಾರೆ.

ಗ್ರಾಮೀಣರೇ ಇರಲಿ ಅಥವಾ ನಗರವಾಸಿಗಳೇ ಇರಲಿ, ಶ್ರೀಲಂಕೆಯ ಮಹಿಳೆಯರು ಸಾಮಾನ್ಯವಾಗಿ ಶ್ರಮಪಟ್ಟು ದುಡಿಯುತ್ತಾರೆ. ಅವರು ಕುಶಾಗ್ರಮತಿಗಳು; ಸಾಮಾಜಿಕ ಪರಿವರ್ತನೆಯನ್ನು ಸ್ವಾಗತಿಸುವವರು. ಅಲ್ಲಿನ ಪ್ರಮುಖ ಧರ್ಮ ಬೌದ್ಧ ಧರ್ಮ. ದೇಶದ ಜನಸಂಖ್ಯೆಯಲ್ಲಿ ಶೇಕಡಾ ೬೫ ರಷ್ಟು ಬೌದ್ಧರು; ಉಳಿದ ಶೇಕಡಾ ೩೫ ರಲ್ಲಿ ಕ್ರಿಸ್ತೀಯರೇ ಬಹುಪಾಲು; ಮಹಮ್ಮದೀಯರೂ ಹಿಂದೂಗಳೂ ಇನ್ನುಳಿದ ಸಣ್ಣ ಪಾಲು. ಆದರೆ ಸಾಮಾಜಿಕವಾಗಿ ಶ್ರೀಲಂಕೆಯ ಜನರು ಸಮೈಕ್ಯ ಭಾವನೆಯುಳ್ಳ ಒಂದೇ ಸಮುದಾಯಕ್ಕೆ ಸೇರಿದವರಂತೆ ಕಂಡುಬರುತ್ತಾರೆ. ಬೇರೆ ಬೇರೆ ಮತಧರ್ಮಗಳಿಗೆ ಸೇರಿದ್ದರೂ ಇವರ ಆಹಾರ, ಸಾಮಾಜಿಕ ಸಂಪ್ರದಾಯ ಆಚರಣೆಗಳು ಆಶ್ಚರ್ಯಕರವಾದ ರೀತಿಯಲ್ಲಿ ಒಂದೇ ತೆರನಾಗಿವೆ. ಆದರೆ ಇಲ್ಲಿಯ ಭಾರತೀಯ ಸಮುದಾಯಗಳಲ್ಲಿ ಹೀಗಿಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಅವರಲ್ಲಿ ಭಿನ್ನತೆಗಳು ಎದ್ದು ಕಾಣುತ್ತವೆ.

ಶ್ರೀಲಂಕೆಯ ಮಹಿಳೆಯರು ಸಾಮಾಜಿಕವಾಗಿ ಅಥವಾ ಯಾವುದೇ ದೃಷ್ಟಿಯಿಂದ ನೋಡಿದರೂ ಸಮಾನ ಗುಣಲಕ್ಷಣಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಜಾತಿಯ ಗೋಡೆಗಳು ಅಲ್ಲಿಲ್ಲ. ಭಾರತೀಯ ಮಹಿಳೆಯರನ್ನು ಹೋಲಿಸಿ ನೋಡಿದರೆ ಶ್ರೀಲಂಕೆಯ ಮಹಿಳೆಯರು ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಹೆಚ್ಚು ಸ್ವತಂತ್ರರು. ಎಲ್ಲ ಮಹಿಳೆಯರೂ ಅಲ್ಲಿ ದುಡಿಯುತ್ತಾರೆ ಹಾಗೂ ಗಳಿಸುತ್ತಾರೆ. ಪ್ರಾಯಶಃ ಇದೇ ಕಾರಣಕ್ಕಾಗಿ ಅವರು ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ.

ಈ ದ್ವೀಪದಲ್ಲಿ ಆಧುನಿಕತೆ ಮತ್ತು ಸಂಪ್ರದಾಯಗಳು ಹಿತಮಿತವಾಗಿ ಸಂಮಿಳಿತಗೊಂಡಿವೆ. ಶ್ರೀಲಂಕೆಯ ಮಹಿಳೆಯರು ಹೊಲಗದ್ದೆಗಳಲ್ಲಿ ದುಡಿಯುವುದರಲ್ಲಿ ಹೇಗೆ ಮುಂದಿದ್ದಾರೋ ಹಾಗೆಯೇ ಕಠಿಣತಮವಾದ ಕೆಲಸಗಳಲ್ಲೂ ಆಡಳಿತ ನಡೆಸುವ ಉದ್ಯೋಗಗಳಲ್ಲೂ ಪರಿಣತಿ ಸಾಧಿಸಿದ್ದಾರೆ. ಇಲ್ಲಿ ಹೆಣ್ಣುಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಬಸ್ ಕಂಡಕ್ಟರುಗಳಾಗಿ, ಪೋಲಿಸ್ ಪೇದೆಗಳಾಗಿ, ಸಂಚಾರ ನಿಯಂತ್ರಣ ಅಧಿಕಾರಿಗಳಾಗಿ ದುಡಿಯುವುದನ್ನು ನೋಡಬಹುದು. ಒಟ್ಟಿನಲ್ಲಿ ಇಲ್ಲಿನ ಮಹಿಳೆಯರು ಮಾಡದಿರುವ ಕೆಲಸಗಳೇ ಇಲ್ಲ.

ಭಾರತದ ಸ್ತ್ರೀಯರಿಗಿಂತ ಶ್ರೀಲಂಕೆಯ ಸ್ತ್ರೀಯರಲ್ಲಿ ಸಾಕ್ಷರತೆ ಹೆಚ್ಚು. ಸ್ತ್ರೀಯರಿಗೆ ವಿವಾಹ ವಿಚ್ಛೇದನದ ಹಕ್ಕನ್ನು ಕೊಡಲಾಗಿದೆ. ಈ ಹಕ್ಕನ್ನು ಶ್ರೀಲಂಕಾ ಸಮಾಜ ಒಪ್ಪಿಕೊಂಡಿದೆ. ವಿವಾಹ ವಿಚ್ಛೇದನ ಹೊಂದಿದ ಸ್ತ್ರೀಯ ಬಗ್ಗೆ ಯಾವ ಕಳಂಕವನ್ನೂ ಹೊರಿಸುವುದಿಲ್ಲ. ಹೀಗೆ ಭಾರತದ ಸ್ತ್ರೀಯರಿಗಿಂತ ಹೆಚ್ಚಿನ ಸ್ವಾತಂತ್ರ್ಯಗಳು ಶ್ರೀಲಂಕೆಯ ಸ್ತ್ರೀಯರಿಗೆ ಲಭ್ಯವಿವೆ.

ಇನ್ನೊಂದು ಕುತೂಹಲಕರವಾದ ಹಾಗೂ ವೈಶಿಷ್ಟ್ಯಪೂರ್ಣವಾದ ವಿಷಯ ವೆಂದರೆ, ಶ್ರೀಲಂಕೆಯ ಮಹಿಳೆಯರು ಚಿಕ್ಕ ಕುಟುಂಬದ ಆದರ್ಶವನ್ನು ಸಹಸಾ ಒಪ್ಪಿಕೊಂಡು ಆಚರಿಸುತ್ತಿದ್ದಾರೆ. ಕುಟುಂಬ ಯೋಜನೆ ಶ್ರೀಲಂಕೆಯಲ್ಲಿ ಪೂರ್ಣ ಯಶಸ್ವಿಯಾಗಿದೆ ಎನ್ನಬೇಕು. ಈ ಯಶಸ್ಸಿನ ಬಹುಪಾಲು ಶ್ರೇಯಸ್ಸು ಮಹಿಳೆ ಯರಿಗೇ ಸಲ್ಲುತ್ತದೆ. ಬಹಳಷ್ಟು ಸ್ತ್ರೀಯರು ಬಹಳ ತಡವಾಗಿ ವಿವಾಹವಾಗುತ್ತಾರೆ. ದ್ವಿಪತ್ನಿತ್ವ ಇಲ್ಲಿ ಕಾಣಸಿಗುವುದಿಲ್ಲ. ಇದಕ್ಕೊಂದು ಮುಖ್ಯ ಕಾರಣವೆಂದರೆ ಶ್ರೀಲಂಕಾ ಸಮಾಜವು ಹಾಗೂ ಶ್ರೀಲಂಕೆಯ ಸಂವಿಧಾನವು ವಿವಾಹ ವಿಚ್ಛೇದನದ ಬಗ್ಗೆ ಹೆಚ್ಚು ಉದಾರವಾದ ನಿಲುವು ತಳೆದಿದೆ. ಎಲ್ಲ ಸಮುದಾಯಗಳೂ ಸರಳವಾದ ಸಾಮಾಜಿಕ ಹಾಗೂ ಧಾರ್ಮಿಕ ಸಂಪ್ರದಾಯಗಳನ್ನು ತಪ್ಪದೇ ಪಾಲಿಸುತ್ತವೆ. ಕ್ರಿಯಾವಿಧಿ ಮತ್ತು ಸಂಸ್ಕಾರಗಳನ್ನು ಬಹುಮಟ್ಟಿಗೆ ಕೈಬಿಡಲಾಗಿದೆ. ಕಟ್ಟಾ ಸನಾತನತ್ವ ಅಥವಾ ಸಂಪ್ರದಾಯ ಪ್ರಿಯತೆ ಅಲ್ಲಿಯ ಜನರಿಗೆ ಹೆಚ್ಚು ಕಡಿಮೆ ಅಪರಿಚಿತವಾದ್ದು ಎಂದರೆ ತಪ್ಪಿಲ್ಲ. ಈ ದೃಷ್ಟಿಯಲ್ಲಿ ಇವರು ಸನಾತನಿ ಭಾರತೀಯರನ್ನು– ಅದರಲ್ಲೂ ಲಂಕಾನಿವಾಸಿ ಭಾರತೀಯರನ್ನು— ಖಂಡಿತವಾಗಿ ಹೋಲುವುದಿಲ್ಲ. ಉದಾಹರಣೆಗೆ, ಶ್ರೀಲಂಕೆಯ ವಿವಾಹ ಸಮಾರಂಭಗಳು ಒಂದು ತಾಸಿನಲ್ಲಿ ಮುಗಿದುಹೋಗುತ್ತವೆ. ವಿವಾಹ ಸಮಾರಂಭವು ಬಹುಮಟ್ಟಿಗೆ ಕುಟುಂಬದ ಜನರಿಗೆ ಮಾತ್ರ ಸೀಮಿತವಾದ ಸಮಾರಂಭವೆಂದರೆ ತಪ್ಪಾಗಲಾರದು. ವಧೂವರರ ಕುಟುಂಬಗಳಿಗೆ ಸೇರಿದ ಕೆಲವು ಹತ್ತಿರದ ಸಂಬಂಧಿಕರಿಗೆ ಹಾಗೂ ಕೆಲವೇ ಕೆಲವು ಸ್ನೇಹಿತರಿಗೆ ಮಾತ್ರ ಅದು ಸಂಬಂಧಿಸಿದ್ದು. ಒಂದು ಸಾಮಾನ್ಯ ಗ್ರಾಮೀಣ ಕುಟುಂಬದಲ್ಲಿ ನಡೆಯುವ ವಿವಾಹ ಸಮಾರಂಭದಲ್ಲಿ ೨೦ ರಿಂದ ೫೦ ಜನರಿಗೆ ಮಾತ್ರ ಆಮಂತ್ರಣ ಹೋಗುತ್ತದೆ ಹಾಗೂ ಅಷ್ಟು ಜನ ಬರುತ್ತಾರೆ. ಭಾರತದಲ್ಲಿರುವ ಹಾಗೆಯೇ ಶ್ರೀಲಂಕೆಯಲ್ಲಿಯೂ ವರದಕ್ಷಿಣೆ ಪದ್ಧತಿಯಿದೆ. ಆದರೆ ಅದು ಶ್ರೀಮಂತ ವರ್ಗಗಳಿಗೆ ಮಾತ್ರ ಸೀಮಿತವಾಗಿದೆ.

ಒಟ್ಟಿನಲ್ಲಿ ಶ್ರೀಲಂಕೆಯ ಮಹಿಳೆಯರು ಸಾಮಾಜಿಕವಾಗಿಯೂ ಆರ್ಥಿಕ ವಾಗಿಯೂ ಭಾರತದ ಮಹಿಳೆಯರಿಗಿಂತ ಅನುಕೂಲಕರ ಸ್ಥಿತಿಯಲ್ಲಿದ್ದಾರೆ. ಅವರಿಗೆ ಉದ್ಯೋಗಾವಕಾಶಗಳು ವಿಪುಲವಾಗಿವೆ, ಶಿಕ್ಷಣದ ಅವಕಾಶಗಳೂ ಬೇಕಾದಷ್ಟಿವೆ. ಅವರ ಸಾಮಾಜಿಕ ಸಂಪ್ರದಾಯಗಳು ಇಲ್ಲಿಗಿಂತ ಹೆಚ್ಚು ಉದಾರವಾಗಿವೆ ಹಾಗೂ ಹೆಚ್ಚಿನ ಸ್ಥಾನಮಾನ ಹಾಗೂ ಸ್ವಾತಂತ್ರ್ಯಗಳು ಲಭ್ಯವಿವೆ, ಪುರುಷರಿಗೆ ಸರಿಸಮನಾಗಿ- ಕೆಲವೊಮ್ಮೆ ಪುರುಷರಿಗಿಂತ ಮಿಗಿಲಾಗಿ–ದುಡಿಯುವ ಅವಕಾಶಗಳಿವೆ.

ಇಷ್ಟೇ ಸಾಲದೆಂಬಂತೆ, ಈಗ ಶ್ರೀಲಂಕೆಯಲ್ಲಿ ಗ್ರಾಮೀಣ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಶಕ್ತಿ ಮತ್ತು ಸ್ಥಾನಮಾನಗಳನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದ ಹೊಸ ಚಳುವಳಿಯೊಂದು ನಡೆದಿದೆ. ○

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನಗಳು

ಎಂ. ನಂಜಮ್ಮಣ್ಣಿ

ಸ್ವಾತಂತ್ರ್ಯದ ನಂತರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಉತ್ತಮ ಪಡಿಸಲು ಸತತ ಪ್ರಯತ್ನಗಳು ನಡೆದವು. ಸ್ತ್ರೀಯರ ಸ್ಥಾನಮಾನಗಳಲ್ಲಿ ಕ್ರಾಂತಿ ಕಾರಕ ಬದಲಾವಣೆಗಳಾದವು. ಭಾರತ ಸಂವಿಧಾನವು ಸ್ತ್ರೀ ಪುರುಷರ ಸಮಾನತೆ ಯನ್ನು ಒಪ್ಪಿಕೊಂಡಿದೆ. "ಧರ್ಮ, ಬುಡಕಟ್ಟು, ಜಾತಿ, ಲಿಂಗ, ವಾಸಸ್ಥಳ ಅಥವಾ ಬೇರೆ ಯಾವುದಾದರೂ ಒಂದರ ಆಧಾರದ ಮೇಲೆ ಸ್ತ್ರೀ ಅಥವಾ ಪುರುಷ ನಿಗೆ ರಾಜ್ಯವು ಯಾವ ಪಕ್ಷಪಾತವನ್ನು ಮಾಡುವುದಿಲ್ಲ" ಎಂಬುದಾಗಿ ಸಂವಿ ಧಾನದ ೧೫ನೆಯ ಕಲಮಿನಲ್ಲಿ ಘೋಷಿಸಲಾಗಿದೆ. ಹಿಂದೂ ಕೋಡ್ ಮಸೂದೆ ಯನ್ನು ಪರಿಶೋಧಿಸಿ, ಅದರಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಿ ಅವುಗಳನ್ನು ಕ್ರೋಢೀ ಕರಿಸಲಾಗಿದೆ. ೧೯೫೪ರ ವಿಶೇಷ ವಿವಾಹ ಕಾನೂನಿನ ಪ್ರಕಾರ ಅಂತರ್ಜಾತೀಯ ವಿವಾಹಕ್ಕೆ ಅವಕಾಶ ಕೊಡಲಾಗಿದೆ. ೧೯೫೫ರಲ್ಲಿ ಹಿಂದೂ ವಿವಾಹದ ಕಾನೂನನ್ನು ಜಾರಿಗೆ ತರಲಾಗಿದೆ. ಈ ಕಾನೂನು ಸ್ತ್ರೀಯರಿಗೆ ಬಹುಪತ್ನಿತ್ವಕ್ಕೆ ವಿರೋಧವಾಗಿ ರಕ್ಷಣೆಯನ್ನು, ವಿವಾಹ ವಿಚ್ಛೇದನದ ಹಕ್ಕನ್ನು ಒದಗಿಸಿದೆ. ತನ್ನ ಪತಿ ಮತಾಂತರ ಹೊಂದಿದ್ದರೆ, ವ್ಯಭಿಚಾರಿಯಾಗಿದ್ದರೆ, ಇನ್ನೂ ಒಬ್ಬಳನ್ನು ವಿವಾಹವಾಗಿದ್ದರೆ, ಮೂರು ವರ್ಷಗಳ ಕಾಲ ಮನೋವಿಕಲ್ಪಕ್ಕೆ ಒಳಗಾಗಿದ್ದರೆ, ಮೂರು ವರ್ಷಗಳ ಕಾಲ ಕೆಟ್ಟ ಕಾಯಿಲೆಯಿಂದ ತನ್ನ ಹೆಂಡತಿಯ ಸಂಗಡ ದಾಂಪತ್ಯ ಜೀವನ ನಡೆಸದಿದ್ದರೆ, ಸ್ತ್ರೀಯು ತನ್ನ ಗಂಡನಿಂದ ವಿಚ್ಛೇದನ ಪಡೆಯಬಹುದು. ಇಚ್ಛೆ ಪಟ್ಟಲ್ಲಿ ಪುನರ್ವಿವಾ ಹವಾಗಬಹುದು. ಈ ಕಾನೂನಿನಲ್ಲಿ ಬರುವ ಹಿಂದೂ ಎಂಬ ಶಬ್ದ ಸಿಖ್ಖರನ್ನು, ಜೈನರನ್ನು, ಬೌದ್ಧರನ್ನು ಒಳಗೊಂಡಿದೆ. ೧೯೫೬ರ ಹಿಂದೂ ಉತ್ತರಾಧಿಕಾರದ ಕಾಯಿದೆಯು ಉಯಿಲು ಬರೆದಿಡದೆ ಮೃತನಾದವನ ಉತ್ತರಾಧಿಕಾರಕ್ಕೆ ಸಂಬಂಧಿ ಸಿದ್ದು ತಿದ್ದುಪಡಿಯಾಗಿ ಕ್ರೋಢೀಕೃತವಾಗಿದೆ. ತಂದೆಯ ಆಸ್ತಿಯಲ್ಲಿ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಭಾಗ ಪಡೆಯುವ ಹಕ್ಕನ್ನು ಮೇಲಿನ ಕಾನೂನು ಒದಗಿಸಿದೆ. ೧೯೫೬ರ ಹಿಂದೂ ದತ್ತು ಸ್ವೀಕಾರ ಹಾಗೂ ಜೀವನಾಂಶದ ಮಸೂದೆಯು ಪತ್ನಿ, ಅವಿವಾಹಿತ ಹೆಣ್ಣುಮಕ್ಕಳು, ವಿವಾಹಿತ ಸ್ತ್ರೀ, ವಿವಾಹ ವಿಚ್ಛೇದನ ಪಡೆದ ಸ್ತ್ರೀಯರು

ಹಾಗೂ ವಿಧವೆಯರಿಗೆ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಹಕ್ಕನ್ನು, ಅಪ್ರಾಪ್ತ ವಯಸ್ಕರ ಪೋಷಕರಾಗುವ ಅಧಿಕಾರವನ್ನು, ಹೆಣ್ಣುಮಗಳಿಗೆ ದತ್ತುವಾಗುವ ಹಕ್ಕನ್ನು ಒದಗಿಸಿದೆ. ಈ ಕಾನೂನುಗಳೆಲ್ಲವೂ ಹಿಂದೂ ಸ್ತ್ರೀಯರಿಗೆ ಮಾತ್ರ ಅನ್ವಯಿಸುತ್ತವೆ. ೧೯೬೧ರಲ್ಲಿ ವರದಕ್ಷಿಣಾ ನಿಷೇಧ ಕಾನೂನು ಜಾರಿಗೆ ಬಂದಿದೆ. ಅದರ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾಧವೆನಿಸುತ್ತದೆ. ೧೯೭೬ರಲ್ಲಿ ಹಿಂದೂ ವಿವಾಹ ಶಾಸನವನ್ನು ತಿದ್ದುಪಡಿಸಲಾಗಿದೆ. ಇದರಿಂದ ಶಾಸನದ ಅನೇಕ ವಿಧಿಗಳನ್ನು ಮಾರ್ಪಾಡು ಮಾಡಲಾಗಿದೆ. ಈ ತಿದ್ದುಪಡಿಯ ಪ್ರಕಾರ ಸ್ತ್ರೀಯನ್ನು ನಿಕೃಷ್ಟವೆನಿಸುವ ಯಾವ ಕೆಲಸದಲ್ಲೂ ತೊಡಗಿಸುವುದು ಇಲ್ಲವೇ ಆ ಕೆಲಸದಲ್ಲಿ ತೊಡಗಲು ಪ್ರಚೋದಿಸುವುದು ನಿಷೇಧವೆನಿಸುತ್ತದೆ. ಇದರ ಪ್ರಕಾರ ಸ್ತ್ರೀಯರನ್ನು ವೇಶ್ಯಾವೃತ್ತಿಗೆ ಪ್ರೇರೇಪಿಸುವುದು ಇಲ್ಲವೇ ಅವರನ್ನು ತೊಡಗಿಸಿ ಅವರ ಗಳಿಕೆಯಿಂದ ಜೀವಿಸುವ ಮತ್ತು ಅವರನ್ನು ವಸ್ತುಗಳಂತೆ ಮಾರಾಟ ಮಾಡುವ ಕೃತ್ಯಗಳು ಅಪರಾಧವೆನಿಸುತ್ತವೆ. ಸ್ತ್ರೀಯರ ಮೇಲೆ ನಡೆಸುವ ಅತ್ಯಾಚಾರವನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಸ್ತ್ರೀಯಿಂದ ಪುರುಷನಿಗೆ ವರ್ಗಾಯಿಸಲಾಗಿದೆ.

ಸ್ತ್ರೀಯರನ್ನು ಹಣ ಸಂಪಾದನೆಗಾಗಿ ವ್ಯಭಿಚಾರಕ್ಕೆ ಎಳೆಯದಂತೆ ವ್ಯಭಿಚಾರವನ್ನು ತಡೆಗಟ್ಟುವ ಶಾಸನವನ್ನು ಜಾರಿಗೆ ತರಲಾಗಿದ್ದು, ವೇಶ್ಯಾಗೃಹಗಳನ್ನು ಮುಚ್ಚಲು ಏರ್ಪಾಡು ಮಾಡಲಾಗಿದೆ. ಸ್ತ್ರೀಯರ ಆರೋಗ್ಯ ರಕ್ಷಣೆ ಮತ್ತು ಕ್ಷೇಮಾಭಿವೃದ್ಧಿಗಳ ದೃಷ್ಟಿಯಿಂದ ಗಣಿ ಉದ್ಯಮದಲ್ಲಿ ಅವರಿಗೆ ಕೆಲವು ವಿಶೇಷ ರಿಯಾಯಿತಿಗಳನ್ನು ಕೊಡಲಾಗಿದೆ. ಕಾಫಿ, ಟೀ ತೋಟಗಳಲ್ಲಿ, ಮತ್ತಿತರ ಕಾರ್ಮಿಕ ಕ್ಷೇತ್ರದಲ್ಲಿ ದುಡಿಯುವ ಸ್ತ್ರೀ ಕಾರ್ಮಿಕರಿಗೆ ಪ್ರತ್ಯೇಕವಾದ ವೇತನ ಹಾಗೂ ಇನ್ನಿತರ ಸವಲತ್ತು ಸೌಲಭ್ಯಗಳನ್ನು ಒದಗಿಸಲಾಗಿದೆ. ಅವರ ದುಡಿಮೆಯನ್ನು ಒಂದು ನಿಯಮಿತ ಕ್ರಮಕ್ಕೆ ಒಳಪಡಿಸಲು ಕೆಲವು ಕಾನೂನುಗಳನ್ನು ರಚಿಸಲಾಗಿದೆ. ಸಂಜೆ ೭ ಗಂಟೆಯಿಂದ ಬೆಳಿಗ್ಗೆ ೬ ಗಂಟೆಯವರೆಗೆ ಸ್ತ್ರೀಯರನ್ನು ಗಣಿಯೊಳಗಿನ ಕೆಲಸ ಮಾಡಲು ನೇಮಿಸುವಂತಿಲ್ಲ. ದಿನಕ್ಕೆ ೯ ಗಂಟೆಗಳಿಗೆ ಮೀರಿ ಕೆಲಸ ಮಾಡುವಂತಿಲ್ಲ. ಭಾರ ಎತ್ತುವುದರಲ್ಲಿ ಒಂದು ಮಿತಿಯನ್ನು ಹಾಕಲಾಗಿದೆ. ಗರ್ಭಿಣಿಯರಿಗೆ ಪ್ರಸವಕ್ಕೆ ಮುನ್ನ ೩ ವಾರಗಳು, ನಂತರ ೬ ವಾರಗಳವರೆಗೆ ಸಂಬಳ ಸಹಿತ ರಜೆಯು ದೊರೆಯುತ್ತದೆ. ೫೦ ಕ್ಕಿಂತ ಹೆಚ್ಚು ಮಂದಿ ಸ್ತ್ರೀಯರು ಒಂದೇ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿದ್ದರೆ ಪ್ರತ್ಯೇಕವಾದ ಶಿಶು ಸಂರಕ್ಷಣಾ ಕೇಂದ್ರಗಳನ್ನು ಕೈಗಾರಿಕಾ ಮುಖಂಡರೇ ತೆರೆದು ಅವುಗಳ ಕಾರ್ಯ ನಿರ್ವಹಣೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಸ್ತ್ರೀಯರ ಕಲ್ಯಾಣಕ್ಕಾಗಿ ಕೇಂದ್ರ ಸಮಾಜ ಕಲ್ಯಾಣ ಮಂಡಲಿಯು ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಪಂಚವಾರ್ಷಿಕ ಯೋಜನೆಗಳಲ್ಲಿಯೂ ಸ್ತ್ರೀಯರ ಉದ್ಧಾರಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಸ್ತ್ರೀಯರ ಆರೋಗ್ಯವನ್ನು ಕಾಪಾಡಲು, ಅವರು ದೃಢಕಾಯಕದ ಮಕ್ಕಳನ್ನು ಹಡೆದು, ಪಾಲಿಸಿ ಪೋಷಿಸಲು, ಅಕಾಲ ಮರಣಕ್ಕೆ ತುತ್ತಾಗುವ ಮಕ್ಕಳ ಸಂಖ್ಯೆ

ಯನ್ನು ಕಡಿಮೆ ಮಾಡಲು ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯವರು ವಿಶೇಷವಾಗಿ ಹಣ ವೆಚ್ಚ ಮಾಡುತ್ತಿದ್ದಾರೆ. ದಾದಿಯರಿಗೆ ವಿಶೇಷ ತರಬೇತಿ ನೀಡಿದ್ದಾರೆ. ಬೊಂಬಾಯಿ, ದೆಹಲಿ,ಮುಂತಾದ ಕಡೆ ಶಿಶು ಸಂರಕ್ಷಣಾ ಕೇಂದ್ರಗಳನ್ನು ತೆರೆದಿದ್ದಾರೆ. ಇವಕ್ಕಾಗಿ ವಿಶ್ವ ಸಂಸ್ಥೆಯ ಅಂಗವಾದ ವಿಶ್ವ ಆರೋಗ್ಯ ಸಂಸ್ಥೆಯವರು ಭಾರತಕ್ಕೆ ವಿಶೇಷ ಧನಸಹಾಯ ಒದಗಿಸುತ್ತಿದ್ದಾರೆ. ಜೊತೆಗೆ ಕುಟುಂಬ ಯೋಜನೆಯ ಪ್ರಚಾರ ಗಳನ್ನು ಕೈಗೊಳ್ಳಲು ಅನೇಕ ತಜ್ಞರನ್ನು ತರಬೇತಿ ಮಾಡಿ ಗ್ರಾಮಾಂತರ ಪ್ರದೇಶ ಗಳಿಗೆ ಕಳುಹಿಸುತ್ತಿದ್ದಾರೆ.

ಶೇಖರಣೆ ಹಾಗೂ ಮಿತವ್ಯಯದ ಮೂಲಕ ಉಳಿತಾಯವನ್ನುಂಟು ಮಾಡುವ ಉದ್ದೇಶದಿಂದ ಮಹಿಳಾ ಉಳಿತಾಯ ಚಳವಳಿಯನ್ನು ವ್ಯವಸ್ಥೆ ಮಾಡಲಾಗಿದೆ. ಸ್ತ್ರೀಯರು ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳುವದರ ಸಲುವಾಗಿ ದೆಹಲಿ, ಹೈದ ರಾಬಾದ, ಪುಣೆ, ಹಾಗೂ ವಿಜಯವಾಡದಲ್ಲಿ ಬೆಂಕಿಕಡ್ಡಿ ತಯಾರಿಸುವ ಕಾರ್ಖಾನೆ ಗಳನ್ನು ನಿರ್ಮಿಸಲಾಗಿದೆ. ಅಧಿಕ ಸಂಖ್ಯೆಯಲ್ಲಿ ಸ್ತ್ರೀಯರು ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವೈಯಕ್ತಿಕ ಅಪಾಯಗಳಿಂದಲೂ,ಸಾಮಾಜಿಕ ದೋಷಗಳಿಂದಲೂ, ಶಿಕ್ಷಾ ಗೃಹಗಳಿಂದಲೂ ರಕ್ಷಿತರಾದ ಸ್ತ್ರೀಯರಿಗೆ ಆಶ್ರಯ ನೀಡಿ ಪುನರ್ವಸತಿಯನ್ನು ನಿರ್ಮಿಸಲು ರಕ್ಷಿತರ ಆಶ್ರಯ ಗೃಹಗಳನ್ನು ತೆರೆಯಲಾಗಿದೆ. ಈ ರೀತಿ ಭಾರತವು ಸ್ವಾತಂತ್ರ್ಯ ಗಳಿಸಿದ ಮೇಲೆ ಸ್ತ್ರೀಯರು ಯುಗ ಯುಗಾಂತರಗಳಿಂದ ಸಿಲುಕಿಕೊಂಡ ಸಂಪ್ರದಾಯಗಳ ಶೃಂಖಲೆಯಿಂದ ಬಿಡುಗಡೆ ಹೊಂದುವ ಉದ್ದೇಶದಿಂದ ಒಂದು ಚಳ ವಳಿಯನ್ನೇ ಪ್ರಾರಂಭಿಸಿ ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳಬಹುದು.

ಭಾರತ ಸಂವಿಧಾನವು ಸ್ತ್ರೀಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮತ ಚಲಾಯಿ ಸುವ ಹಕ್ಕುಗಳನ್ನು ಘೋಷಿಸಿದೆ ಸ್ತ್ರೀಯರು ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗ ವಹಿಸಿ, ಅಸಂಖ್ಯಾತ ಮತಗಳನ್ನು ಗಳಿಸಿ ಜಯಗಳಿಸಿ ಶಾಸಕರಾಗಿದ್ದಾರೆ, ಮಂತ್ರಿಗ ಳಾಗಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ಸಾಮಾನ್ಯ ಹಾಗೂ ಉನ್ನತ ಶಿಕ್ಷಣ ಪಡೆದು ಇಂಜಿನಿಯರ್, ವೈದ್ಯ, ವಕೀಲ, ಆರಕ್ಷಕ, ಅಧ್ಯಾಪಕ, ದಾದಿ, ಬೆರಳಚ್ಚುಗಾರ, ಶೀಘ್ರ ಲಿಪಿಕಾರ, ಗಗನ ಸಖಿ, ಕಾರಕೂನ, ಮಂತ್ರಿ, ಶಾಸಕ ಮುಂತಾದ ಹುದ್ದೆಗ ಳಿಗೆ ಸೇರಿ ಸೇವೆಸಲ್ಲಿಸುತ್ತಿದ್ದಾರೆ.ಗ್ರಾಮಾಂತರ ಪ್ರದೇಶಗಳಲ್ಲಿಯೂ ಸ್ತ್ರೀಯರು ಪಂಚಾ ಯತಿ ಸದಸ್ಯರು, ಅಧ್ಯಕ್ಷರು ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸ್ತ್ರೀ ಅಬಲೆಯಲ್ಲ. ಪುರುಷ ಮಾಡುವ ಎಲ್ಲ ಕೆಲಸಗಳನ್ನು ಆಕೆ ಮಾಡಬಲ್ಲಳು ಎಂಬ ಅರಿವು ದಿನೇ ದಿನೇ ಹೆಚ್ಚು ತ್ತಿದೆ. ಇದರಿಂದ ಸ್ವಲ್ಪ ಮಟ್ಟಿಗೆ ಸ್ತ್ರೀಯರ ಸ್ಥಾನಮಾನ ಉತ್ತಮಗೊಂಡಿದೆ ಎಂದು ಭಾವಿಸಬಹುದು. ಆದರೆ ಸಂಪ್ರದಾಯ ಶರಣ ವ್ಯಕ್ತಿಗಳು ಸ್ತ್ರೀಯರಿಗೆ ಸಮಾನ ಹಕ್ಕು ಗಳನ್ನು ಕೊಟ್ಟಿರುವುದಿಲ್ಲ. (ಅದರಲ್ಲಿಯೂ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ) ಸಂವಿಧಾನವು ಕೆಲವು ಬಗೆಯ ಸ್ವಾತಂತ್ರ್ಯಗಳನ್ನು ಘೋಷಿಸಿದ್ದರೂ, ಕೆಲವು ಕಾನೂ ನುಗಳನ್ನು ಜಾರಿಗೆ ತಂದಿದ್ದರೂ ಅವುಗಳ ಭಾಷೆ ಕ್ಲಿಷ್ಟವಾಗಿರುವುದರಿಂದಲೂ ಜನರ ಅಜ್ಞಾನದಿಂದಲೂ ಹಕ್ಕುಗಳನ್ನು ಚಲಾಯಿಸುವುದಿರಲಿ, ಅವುಗಳನ್ನು ಅರ್ಥಮಾಡಿ ಕೊಳ್ಳಲು ಅಧಿಕಮಂದಿ ಅಸಮರ್ಥರಾಗಿದ್ದಾರೆ. ಮಧ್ಯಮ ಹಾಗೂ ಕೆಳಮಧ್ಯಮ

ವರ್ಗದ ಸ್ತ್ರೀಯರ ಮೇಲೆ ಶಿಕ್ಷಣ ಹಾಗೂ ಸ್ವಾತಂತ್ರ್ಯಗಳು ಅನೇಕ ಪ್ರತಿಕ್ರಿಯೆಗಳನ್ನುಂಟು ಮಾಡಿವೆ. ಕೆಲವರಿಗೆ ಇವುಗಳಿಂದ ಅಲ್ಪಸ್ವಲ್ಪ ಪ್ರಯೋಜನಗಳಾಗಿದ್ದರೂ ಹಲವರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ರೀತಿ ಸಮರ್ಪಕವಾಗಿಲ್ಲ. ದೊಡ್ಡ ದೊಡ್ಡ ವ್ಯಾಪಾರ, ವಾಣಿಜ್ಯ ಸಂಸ್ಥೆಗಳು, ಉದ್ಯಮಗಳು ಪುರುಷರ ಕೈಯಲ್ಲಿವೆ. ಎಂದು ಸ್ತ್ರೀಯರು ಪರಸ್ಪರ ಸಹಕಾರದಿಂದ. ಸ್ವತಂತ್ರವಾಗಿ ಕೈಗಾರಿಕೋದ್ಯಮಗಳನ್ನು ಸ್ವಂತವಾಗಿ ನಿರ್ವಹಿಸಲು ಸಮರ್ಥರಾಗುತ್ತಾರೋ ಅಂದು ಅವರು ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳನ್ನು ಹೊಂದಲು ಅರ್ಹರಾಗುತ್ತಾರೆ.

ಪ್ರಗತಿಶೀಲ ಸಮಾಜಗಳಲ್ಲಿರುವಂತೆಯೇ ಭಾರತದಲ್ಲಿಯೂ ಉದ್ಯೋಗಸ್ಥ ಮಹಿಳೆಯು ಸಮಾಜದಲ್ಲಿ ಬಹು ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಕೆಲವು ಸಂಪ್ರದಾಯಸ್ಥರು ಮಹಿಳೆಯು ಮನೆಯ ಹೊರಗೆ ದುಡಿಯುವುದು ಅಪಮಾನಕರವೆಂದೂ ಆಕೆ ಮನೆಯ ಒಳಗೇ ಇದ್ದುಕೊಂಡು ಉತ್ತಮ ಗೃಹಿಣಿಯೂ, ಮಾತೆಯೂ ಆಗಿ ಕಾರ್ಯ ನಿರ್ವಹಿಸಿದರೆ ಆಕೆಯ ಘನತೆ ಗೌರವಗಳು ಹೆಚ್ಚುತ್ತವೆಂದೂ ಭಾವಿಸುತ್ತಾರೆ. ಬೆಲೆ ಏರಿಕೆ, ಅನಂತ ಅಗತ್ಯಗಳು ಇತ್ಯಾದಿ, ಇತ್ಯಾದಿ ಕಾರಣಗಳಿಂದ ಪುರುಷನಷ್ಟೇ ದುಡಿದು ಸಂಪಾದಿಸಿದರೂ ಕುಟುಂಬದ ಆದಾಯ ಯಾವುದಕ್ಕೂ ಸಾಕಾಗುವುದಿಲ್ಲ. ಈ ಕಾರಣದಿಂದ ವಿವಾಹಿತ ಅಥವಾ ಅವಿವಾಹಿತ ಉದ್ಯೋಗಸ್ಥ ಮಹಿಳೆಯು ಕುಟುಂಬ ಹಾಗೂ ಉದ್ಯೋಗ ಈ ಎರಡು ಕ್ಷೇತ್ರಗಳಲ್ಲಿಯೂ ಪುರುಷರಿಗೆ ಸರಿಸಮಾನಳಾಗಿ ದುಡಿಯಬೇಕಾಗಿದೆ. ಆಕೆಯು ಈ ಎರಡೂ ಕಾರ್ಯಕ್ಷೇತ್ರಗಳಲ್ಲಿಯೂ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಜೊತೆಗೆ ಮನೆಯಲ್ಲಿ ರೋಗಿಗಳ, ಅತಿಥಿಗಳ, ಅಸಹಾಯಕ ಆಶ್ರಿತರ ಪಾಲನೆ ಪೋಷಣೆಗಳ ಕಡೆ ಗಮನಕೊಡಬೇಕು. ಕೆಲವು ಸಂದರ್ಭಗಳಲ್ಲಿ ಅಧಿಕ ವರದಕ್ಷಿಣೆ ತೆತ್ತು ವಿವಾಹವಾಗಿ ಬಂದಿದ್ದರೂ ಬೆಳಗಿನಿಂದ ಸಂಜೆಯ ವರೆಗೆ ಮನೆಯ ಒಳಗೆ ಹಾಗೂ ಹೊರಗೆ ತೊತ್ತಿನಂತೆ ದುಡಿದು, ತನ್ನ ಸಂಪಾದನೆಯನ್ನೆಲ್ಲ ಮನೆಯ ಹಿರಿಯರಿಗೆ ಅಥವಾ ತನ್ನ ಗಂಡನಿಗೆ ಒಪ್ಪಿಸಿ, ತನ್ನ ಬಸ್ ಚಾರ್ಜ, ಕಾಫಿ ತಿಂಡಿ ವಗೈರೆಗೆ ಆತನ ಮುಂದೆ ಕೈ ಚಾಚಬೇಕು. ಆಕೆಯು ಆರ್ಥಿಕವಾಗಿ ಸ್ವಾವಲಂಬಿಯಾಗುವದನ್ನು ಆತ ಸೈರಿಸುವದಿಲ್ಲ. ಏಸಿದ್ದರೂ ಆತನ ಅಧೀನಳಾಗಿಯೇ ಇದ್ದರೆ ಆಕೆ ತನ್ನ ಉದ್ಯಮದಲ್ಲಿ ಮುಂದುವರಿಯಬಹುದು. ತನ್ನ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ಚಕಾರವೆತ್ತಿದರೆ ಆಕೆಯ ಕಥೆ ಮುಗಿದಂತೆಯೇ. ಜೋರು ಮಾಡಿದರೆ ತನ್ನ ಪರಿಸ್ಥಿತಿ ಚಿಂತಾಜನಕವಾಗುವದೆಂದು ಯೋಚಿಸಿ ತನ್ನ ಉದ್ಯೋಗದಲ್ಲಿ ಮುಂದುವರಿಯುವ ಸಲುವಾಗಿ ಅವರೆಲ್ಲ ಹೇಳಿದ ಹಾಗೆ ಕೇಳಿಕೊಂಡಿರುತ್ತಾಳೆ. ಕೆಲವರು ಇತರರ ಕೂಡ ಇವರ ಬಗ್ಗೆ ಮಾತಾಡಿದರೆ ತಮ್ಮ ಮನೆತನದ ಗೌರವ ಬೀದಿಪಾಲಾಗುತ್ತದೆಂದು ತೆಪ್ಪಗೆ ಸಹಿಸಿಕೊಂಡಿರುತ್ತಾರೆ. ವರದಕ್ಷಿಣೆಯ ದರ ದಿನೇ ದಿನೇ ಏರುತ್ತಿರುವದರಿಂದ ಕೆಲವು ಅವಿವಾಹಿತ ತರುಣಿಯರು ಆಜೀವ ಪರ್ಯಂತ ಅವಿವಾಹಿತರಾಗಿಯೇ ಉಳಿಯುವ ಸಂಭವವಿದೆ. ಇಂದು ಉದ್ಯೋಗ ಸ್ಥಿರತರಾದ ಹೆಣ್ಣುಮಕ್ಕಳನ್ನು ವಿವಾಹವಾಗಲು ತರುಣರು ಮುಂದೆ ಬರುತ್ತಿದ್ದಾರೆ. ಅವರಲ್ಲಿಯೂ

ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ತರುಣಿಯರು ಕುಟುಂಬದ ವರಮಾನವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಮನೆಯ ಹೊರಗೆ ದುಡಿಯುವದು ಅನಿವಾರ್ಯವಾಗಿದೆ. ಮಧ್ಯಮ ವರ್ಗದ ಮಹಿಳೆಯರು ಸಮಯವನ್ನು ಸದುಪಯೋಗಪಡಿಸಿಕೊಳ್ಳುವ ಸಲುವಾಗಿ, ತಮ್ಮ ಪ್ರತಿಭೆಯನ್ನು ಪ್ರಕಾಶಗೊಳಿಸುವದಕ್ಕಾಗಿ, ತಮ್ಮ ಸ್ವಂತ ಖರ್ಚಿಗಾಗಿ ಒಂದು ಹವ್ಯಾಸವಾಗಿ ಉದ್ಯೋಗಕ್ಕೈಕೊಳ್ಳುತ್ತಿರುವದು ವಿಶೇಷವಾಗಿ ಕಂಡುಬರುತ್ತಿದೆ. ಈಗೀಗ ಮನೆಯಿಂದ ಹೊರಗೆದುಡಿಯುವದು ಅವಮಾನವಲ್ಲವೆಂಬ ಭಾವನೆ ಮೂಡುತ್ತಿರುವ ಸೂಚನೆ ಕಂಡು ಬರುತ್ತಿದೆ.

ಇಂದೂ ಮಹಿಳೆಯರು ಪುರುಷರಿಗೆ ಸರಿಸಮಾನವಾದ ಸ್ಥಾನಮಾನಗಳನ್ನು ನಿಧಾನವಾಗಿ ಪಡೆಯುತ್ತಿದ್ದರೂ ವಿಧವಾ ವಿವಾಹಕ್ಕೆ ನಿಷೇಧ, ವರದಕ್ಷಿಣೆ ಮುಂತಾದ ಪದ್ಧತಿಗಳು ಮುಂದುವರಿಯುತ್ತಿದ್ದು ಅವರಿಗೆ ಒಂದು ಶಾಪವಾಗಿ ಪರಿಣಮಿಸಿದೆ. ಕುಟುಂಬದಲ್ಲಿ ಅತ್ತೆ ಸೊಸೆಯರ ಸಂಬಂಧವನ್ನೇ ನಿದರ್ಶನವನ್ನಾಗಿ ತೆಗೆದುಕೊಂಡರೆ, ಕೌಟುಂಬಿಕ ರಚನೆಯಲ್ಲಿ ಯಾವ ಬದಲಾವಣೆಯೂ ಕಂಡು ಬರುತ್ತಿಲ್ಲ. ಬಾಲ ವಿಧವೆಯು ಪುನರ್ವಿವಾಹವಾಗಲು ಕಾನೂನು ಅವಕಾಶ ಕೊಟ್ಟಿದ್ದರೂ ಆಕೆಯು ಆಜೀವ ಪರ್ಯಂತ ವಿಧವೆಯಾಗಿಯೇ ಬಿಟ್ಟಿ ಚಾಕರಿಮಾಡಿಕೊಂಡು ಜೀವಿಸಬೇಕಾಗಿದೆ. ೧೯೬೧ ರಲ್ಲಿ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ಒಂದು ಅಪರಾಧವೆಂದು ಪರಿಗಣಿತವಾಗಿದ್ದರೂ ಆ ದುಷ್ಟಪದ್ಧತಿ ಕಂಡೂಕಾಣದ ಹಾಗೆ ಮುಂದುವರಿಯುತ್ತಿದ್ದು ಅನೇಕಾನೇಕ ಹದಿಹರೆಯದ ಯುವತಿಯರನ್ನು ಬಲಿತೆಗೆದುಕೊಳ್ಳುತ್ತಿದೆ. ಕೆಲವರಿಗೆ. ಈ ಕಾಯಿದೆ ಜಾರಿಯಲ್ಲಿರುವುದು ತಿಳಿಯದಿರಬಹುದು; ಮತ್ತೆ ಕೆಲವರು ತಮ್ಮ ಹೆಣ್ಣುಮಕ್ಕಳ ಸುಖ ಸಂತೋಷಗಳಿಗೆ ಅಡ್ಡಿ ಆತಂಕಗಳು ಬರದಿರಲೆಂದು ಕೊಡಬೇಕಾದ್ದು ತೆತ್ತು ತೆಪ್ಪಗಿರುತ್ತಾರೆ. ವರದಕ್ಷಿಣೆಯ ಕಾರಣಕ್ಕಾಗಿ ಹಲವಾರು ವಿವಾಹಿತ ತರುಣಿಯರು ಆತ್ಮಹತ್ಯೆ ಮಾಡಿಕೊಂಡಿರುವ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಸಂಗಗಳನ್ನು ದಿನನಿತ್ಯ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಧರ್ಮದ ಆಧಾರ ಹಾಗೂ ಸಾಮಾಜಿಕ ಬೆಂಬಲ ಪಡೆದ ವರದಕ್ಷಿಣೆ ಪದ್ಧತಿಯು ಮುಂದುವರಿಯುತ್ತಿದೆ. ಏಕೆಂದರೆ ಹೆಣ್ಣನ್ನು ಹಿಂದೂ ಸಮಾಜದಲ್ಲಿ ಭರಿಸಲಾರದಹೊರೆ ಎಂದು ಪರಿಗಣಿಸುತ್ತಾರೆ. ಪುರುಷ ಪ್ರಧಾನವಾದ ಸಮಾಜದಲ್ಲಿ ಪುರುಷನಿಗಿಂತ ಸ್ತ್ರೀ ಕಡಿಮೆಯೆಂಬ ಅಂಶವನ್ನು ಕನ್ಯಾಪಿತೃವು ಒಪ್ಪಿಕೊಂಡು ತನ್ನ ಮಗಳಿಗೆ ಯೋಗ್ಯವಾದ ವರನನ್ನು ಪಡೆಯುವುದಕ್ಕಾಗಿ ವರದಕ್ಷಿಣೆ ಕೊಟ್ಟು, ತನ್ನ ಮೇಲಿನ ಹೊರೆ(ಹೊಣೆ)ಯನ್ನು ಕಳಚಿಕೊಳ್ಳಲು ಯತ್ನಿಸುತ್ತಾನೆ. ಎಪ್ರಿಲ್ ೧೯೭೯ ರಲ್ಲಿ ಪ್ರಬುದ್ಧವೆನಿಸಿದ ಒಂದು ಹಿಂದು ಕುಟುಂಬಕ್ಕೆ ವಿವಾಹವಾಗಿ ಬಂದಿದ್ದ ೧೯ ವರ್ಷ ವಯಸ್ಸಿನ ಕಾಂಚನಮಾಲಾ ತನ್ನ ತೌರಿನಿಂದ ಭಾರಿ ಬಳುವಳಿ ತರಲಿಲ್ಲವೆಂಬ ಕಾರಣಕ್ಕಾಗಿ ಆಕೆಯನ್ನು ಬೆಂಕಿಯಿಟ್ಟು ದಹಿಸುತ್ತಿದ್ದರೂ ಆಕೆಯ ಗಂಡ ಈ ಪ್ರಸಂಗ ತನಗೆ ಸಂಬಂಧಿಸಿಲ್ಲವೆಂಬಂತೆ ಲೋಟ ಹಾಲನ್ನು ಹೀರುತ್ತಿದ್ದನಂತೆ.

ಇಂತಹ ಅಮಾನುಷಕೃತ್ಯಗಳನ್ನು ತಡೆಗಟ್ಟಲು ಪರಿಹಾರ ಉಪಾಯಗಳೇನು? ಬಳುವಳಿಯನ್ನು ತರದೇ ಬಂದ ಸೊಸೆಯರಿಗೆ ಕಿರುಕುಳ ಕೊಡುವ ಮನೆಗೆ

ಇಲ್ಲವೆ ಕೊಲೆ ಮಾಡಿರುವ ಕುಟುಂಬ ವರ್ಗದವರಿಗೆ ತಮ್ಮ ಹೆಣ್ಣು ಮಕ್ಕಳನ್ನು ವಿವಾಹ ಮಾಡಿ ಕೊಡದಿರುವುದು; ಅವರ ಮನೆಯ ಹಬ್ಬ. ವಿವಾಹ, ಸಮಾರಂಭಗಳಲ್ಲಿ ಭಾಗವಹಿಸದಿರುವುದು; ಒಂದು ರೀತಿಯ ಸಾಮಾಜಿಕ ಬಹಿಷ್ಕಾರ ವಿಧಿಸುವುದು. ಹೆಣ್ಣು ಮಕ್ಕಳು ವರದಕ್ಷಿಣೆ ಕೊಟ್ಟು ವಿವಾಹವಾಗಲು ನಿರಾಕರಿಸಬೇಕು. ತನ್ನನ್ನು ಸಾಕಲಾರದ ಪುರುಷನನ್ನು ವಿವಾಹವಾಗುವುದು ಅವಮಾನವೆಂದು ಭಾವಿಸಿ,ವರದಕ್ಷಿಣೆ ತರುವುದರ ಬದಲು ಕಾರು, ಬಂಗಲೆ,ಸ್ಕೂಟರು, ಹಣ,ವಿದೇಶ ಪ್ರವಾಸ ಮುಂತಾದುವುಗಳಿಗೆ ಮಾರುಹೋಗುವ ಪುರುಷನನ್ನು ವಿವಾಹವಾಗುವ ಬದಲು, ತಾನು ಆಜೀವ ಪರ್ಯಂತ ಅವಿವಾಹಿತಳಾಗಿಯೇ ಉಳಿದುಕೊಳ್ಳುವೆನೆಂದು ಪ್ರತಿಜ್ಞೆ ಮಾಡಬೇಕು. ವರದಕ್ಷಿಣೆ ಕೊಡುವುದು, ಕೇಳುವುದು ಅಪರಾಧವೆಂದು ಘೋಷಿಸಿದರೆ ಸಾಲದು. ಆ ರೀತಿ ಕೊಟ್ಟು, ತೆಗೆದುಕೊಳ್ಳುವವರನ್ನು ಮಾಲುಸಮೇತ ವಶಪಡಿಸಿಕೊಂಡು ಅವರನ್ನು ಉಗ್ರ ಶಿಕ್ಷೆಗೆ ಗುರಿ ಪಡಿಸುವಷ್ಟು ಕಾನೂನು ಪ್ರಭಾವ ಶಾಲಿಯಾಗಿರಬೇಕು. ಸಾಧಾರಣವಾಗಿ ಬಡವರು ಮಧ್ಯಮ ವರ್ಗದವರನ್ನು, ಮಧ್ಯಮ ವರ್ಗದವರು ಶ್ರೀಮಂತ ವರ್ಗದವರನ್ನು ಅನುಕರಿಸುವುದು ಸಾಮಾನ್ಯವಾಗಿದೆ. ಆದ್ದರಿಂದ ಶ್ರೀಮಂತ ವ್ಯಕ್ತಿಗಳು ತಮ್ಮ ಮಕ್ಕಳ ವಿವಾಹವನ್ನು ಸರಳವಾಗಿ ನೆರವೇರಿಸುವ ಮನೋಭಾವ ತಳೆಯಬೇಕು. ತಮ್ಮ ಐಶ್ವರ್ಯ ಪ್ರದರ್ಶನ ಅಥವಾ ದೊಡ್ಡಸ್ತಿಕೆ ಮೆರೆಸುವದಕ್ಕಾಗಿ ಅದ್ದೂರಿಯಾಗಿ ಖರ್ಚು ಮಾಡಿದರೆ ಇತರರೂ ಅವರನ್ನು ಅನುಕರಿಸಲು ಹೋಗಿ ದಾರಿದ್ರ್ಯಕ್ಕೊಳಗಾಗುತ್ತಾರೆ. ಆದುದರಿಂದ ಸುಧಾರಣೆ ಶ್ರೀಮಂತರಿಂದಲೇ ಪ್ರಾರಂಭವಾದರೆ ಒಳ್ಳೆಯದು. ವಿನಾಕಾರಣ ಸಾವಿರಾರು ರೂಪಾಯಿಗಳನ್ನು ವ್ಯರ್ಥಮಾಡುವ ಬದಲು ತಮ್ಮ ಮಕ್ಕಳ ಹೆಸರಲ್ಲಿ ಬ್ಯಾಂಕಿನಲ್ಲಿಡುವುದು ಅಥವಾ ಯಾವುದಾದರೂ ಉದ್ಯಮದಲ್ಲಿ ತೊಡಗಿಸಿದರೆ ಬಹಳ ಅನುಕೂಲವಾಗುತ್ತದೆ. ವರದಕ್ಷಿಣೆಯ ಪಿಡುಗಿಲ್ಲದೆ ಹಲವಾರು ಹೆಣ್ಣು ಮಕ್ಕಳು ವಿವಾಹವಾಗಬಹುದು. ಸುಖ ದಾಂಪತ್ಯ ಜೀವನ ನಡೆಸಬಹುದು. ಗಂಡು ಮಕ್ಕಳನ್ನು ಹಡೆದ ತಂದೆತಾಯಿಯರು ವರದಕ್ಷಿಣೆ ತೆಗೆದುಕೊಳ್ಳುವುದು ಅವಮಾನವೆಂದು ಭಾವಿಸಿ,ತಮಗೆ ಸೊಸೆಯಾಗಿ ಬರುವ ಹೆಣ್ಣು ಮಗಳ ಗುಣ. ವಿದ್ಯೆ, ರೂಪ ಮುಂತಾದ ಅಂಶಗಳಿಗೆ ಪ್ರಾಶಸ್ತ್ಯಕೊಟ್ಟು ಸಂಬಂಧ ಬೆಳೆಸಬೇಕು.

ಮತ್ತೊಂದು ಸಲಹೆಯೆಂದರೆ ಕಿರಿ ವಯಸ್ಸಿನ ಬಾಲವಿಧವೆಗೆ ಮರುವಿವಾಹ ಮಾಡಿಕೊಳ್ಳುವ ಅವಕಾಶ ಕಲ್ಪಿಸಬೇಕು. ಹೀಗೆ ಮಾಡಿದರೆ ಸ್ತ್ರೀಯರಿಗೆ ಸಂಬಂಧಿಸಿದ ಭಾರತದ ಎರಡು ಬೃಹತ್ ಸಮಸ್ಯೆಗಳನ್ನು ಬಗೆಹರಿಸಿದಂತಾಗುತ್ತದೆ.

ಉತ್ತರ ಭಾರತದಲ್ಲಿ ಮಹಿಳಾ ದಕ್ಷತಾ ಸಮಿತಿ, ನಾರಿ ರಕ್ಷಾ ಸಮಿತಿ. ಸ್ತ್ರೀ ಸಂಘರ್ಷ ಸಮಿತಿ ಮುಂತಾದ ಸ್ತ್ರೀಯರ ಸಂಸ್ಥೆಗಳು ಸಾರ್ವಜನಿಕರ ಬೆಂಬಲ ಪಡೆದು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿವೆ. ಜೂನ ೧೨, ೧೯೭೯ ರಲ್ಲಿ ದೆಹಲಿಯ ಮಹಿಳೆಯರು ಗೃಹಖಾತೆ ಸಚಿವರಿಗೆ ವಿವಾಹ ಹಾಗೂ ವರದಕ್ಷಿಣೆಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಸುಧಾರಿಸಿ, ವಿವಾಹಗಳನ್ನು ನೋಂದಾಯಿಸಬೇಕೆಂಬ ಮನವಿ ಪತ್ರ ಸಲ್ಲಿಸಿದರು. ವರದಕ್ಷಿಣೆ ಪದ್ಧತಿಯನ್ನು ಅನುಮೋದಿಸುವವರೂ ಸಹ ಹೆಣ್ಣು ಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಸಮಭಾಗ ಕೊಡುವುದಾದರೆ ಈ ಸಮಸ್ಯೆ

ಯನ್ನು ಬಗೆಹರಿಸಬಹುದೆಂದು ಅಭಿಪ್ರಾಯ ಪಡುತ್ತಾರೆ. ೧೯೫೬ರ ಹಿಂದೂ ಉತ್ತರಾಧಿಕಾರ ಕಾಯಿದೆಯು ಹೆಣ್ಣುಮಕ್ಕಳಿಗೆ ಸಮಾನ ಹಕ್ಕುಗಳನ್ನು ಕೊಟ್ಟಿದ್ದರೂ ಅನೇಕ ಸಂದರ್ಭಗಳಲ್ಲಿ ಆಕೆಯ ಮಾತಾ ಪಿತೃಗಳು ಆಸ್ತಿಯ ಹಕ್ಕನ್ನು ತನ್ನ ಸೋದರನಿಗೆ ರವಾನಿಸಿ ಸಹಿಹಾಕಿಕೊಡುವಂತೆ ಮಾಡುತ್ತಾರೆ. ಹೆತ್ತವರೇ ಹೆಣ್ಣನ್ನು ಕಡೆಗಾಣಿಸಿದರೆಂದರೆ ಏನು ಹೇಳುವುದು ? ವರದಕ್ಷಿಣೆಯನ್ನು ತೆರಲಾರದ ತಂದೆ ತಾಯಿಯರು ಹೆಣ್ಣುಮಕ್ಕಳನ್ನು ಪಡೆಯುವುದೇ ತಮ್ಮ ಪಾಪದ ಫಲವೆಂದು ತಮ್ಮ ಅದೃಷ್ಟವನ್ನು ಹಳಿಯುತ್ತಾರೆ.ಈ ಬಗೆಯ ಮೂಢನಂಬಿಕೆಗಳು ತೊಲಗಿ, ಅವರು ಪ್ರಜ್ಞಾವಂತರಾಗಿ, ವೈಚಾರಿಕತೆಗೆ ತಲೆಬಾಗಬೇಕು. ಹಿಂದೆ ಆ ರೀತಿ ಕೈಲಾದಷ್ಟು ಕೊಟ್ಟು ಹೆಣ್ಣನ್ನು ವಿವಾಹ ಮಾಡಿಕೊಡುವುದು ಅನಿವಾರ್ಯವಾಗಿದ್ದಿರಬಹುದು. ಆದರೆ ಕಾಲ ಬದಲಾದಂತೆ ಈ ಉಗ್ರ ಪದ್ಧತಿಗಳನ್ನು ಬಿಡಬೇಕು. ಹೆಣ್ಣುಮಕ್ಕಳು ಓದಿ ವಿದ್ಯಾವಂತರಾಗಿ ಸ್ವಾವಲಂಬಿಗಳಾಗಿರುವಾಗ ಅರ್ಥವಿಲ್ಲದ ಶೃಂಖಲೆಯಲ್ಲಿ ಬಂಧಿಸುವುದು ನ್ಯಾಯವೂ ಅಲ್ಲ, ನೀತಿಯೂ ಅಲ್ಲ, ಧರ್ಮವೂ ಅಲ್ಲ. ಒಟ್ಟಿನಲ್ಲಿ ಮಾತಾ ಪಿತೃಗಳೂ ಕೂಡ ತಮ್ಮ ಹಳೆಯ ತರಹದ ಭಾವನೆಗಳನ್ನು ಬಿಡುವ ಪರಿಸ್ಥಿತಿಗೆ ಹೊಂದಿಕೊಂಡು ಹೆಣ್ಣು–ಗಂಡು ಎಂಬ ಭೇದವೆಣಿಸದೆ ತಮ್ಮ ಮಕ್ಕಳ ಪುರೋಭಿವೃದ್ಧಿಗೆ ಶ್ರಮಿಸಬೇಕು. ಮಿಗಿಲಾಗಿ, ಸ್ತ್ರೀಯರ ಮೌಢ್ಯವನ್ನು ಹೋಗಲಾಡಿಸುವಂತಹ ಉದಾತ್ತಭಾವನೆಯನ್ನು ಮೂಡಿಸುವ, ವಿಚಾರ ಶಕ್ತಿಯನ್ನು ಹೆಚ್ಚಿಸುವ, ಜೀವನವನ್ನು ಒಂದು ಹೊಸ ದೃಷ್ಟಿಯಿಂದ ನೋಡತಕ್ಕ ಶಕ್ತಿಯನ್ನು ಕೊಡುವ ಶಿಕ್ಷಣ ಸ್ತ್ರೀಯರಿಗೆ ಅಗತ್ಯವಾಗಿ ಬೇಕು. ಸಮಾಜ ಹಾಗೂ ಸಂಸಾರಗಳೆರಡರಲ್ಲೂ ತಮ್ಮ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಲು ತಾವು ಪಡೆಯುವ ಶಿಕ್ಷಣ ಸಹಾಯಕವಾಗಬೇಕು. ಪುರುಷನು ತನ್ನ ಸತಿಯ ವ್ಯಕ್ತಿತ್ವವನ್ನು ಗೌರವಿಸಿ, ತನ್ನ ಅನುಕೂಲಕ್ಕಾಗಿ ಸಂಪ್ರದಾಯದ ಶೃಂಖಲೆಯನ್ನು ಆಕೆಗೆ ತೊಡಿಸದೆ, ಆಕೆಯ ಆತ್ಮವನ್ನು ಬಲಿಕೊಡದೆ, ತನ್ನಂತೆಯೇ ಆಕೆಯೂ ಮಾನವಳು, ಜೀವಿಸುವ ಹಕ್ಕುಳ್ಳವಳೆಂಬ ಉದಾರ ಭಾವನೆಯನ್ನು ಹೊಂದಿ ಅರಿತು ಬಾಳಬೇಕು.

ಸ್ತ್ರೀಯರು ಪಾಶ್ಚಾತ್ಯ ಸಂಸ್ಕೃತಿಯ ಉತ್ತಮ ಅಂಶಗಳಾದ ಪೌರಧರ್ಮ, ಸೌಜನ್ಯ, ವೃತ್ತಿ ಗೌರವ, ಸಂಶೋಧನೆಯಲ್ಲಿ ಆಸಕ್ತಿ, ಪ್ರೀತಿ, ಸಂಘಟನಾ ಶಕ್ತಿ, ಕಾಲಜ್ಞಾನ, ತಾಳ್ಮೆ ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಂಡು ಆಧುನಿಕ ವಿಜ್ಞಾನದ ಸೌಲಭ್ಯ ಸೌಕರ್ಯಗಳನ್ನು,ಜ್ಞಾನವನ್ನು,ತಮಗೆ ದೊರಕಿರುವ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡರೆ ಜೀವನ ಸುಖಮಯವಾದೀತು. ಸ್ತ್ರೀಯರ ಪಾತ್ರ ನಮ್ಮ ಸಂಸ್ಕೃತಿಯಲ್ಲಿ ಶ್ರೇಷ್ಠವಾದುದನ್ನು ರಕ್ಷಿಸುವ, ದೃಢತೆಯಿಂದ ಪೋಷಿಸುವ,ಶುದ್ಧ ಮಾಡುವ, ಹತೋಟಿಯಲ್ಲಿಟ್ಟುಕೊಳ್ಳುವ ಪ್ರಬಲ ಅಂಶದಿಂದ ಕೂಡಿರಬೇಕು. ಈ ರೀತಿ ಪರಸ್ಪರ ಸಹಕಾರ, ಸ್ನೇಹ, ಪ್ರೇಮಗಳಿಂದ ಸ್ತ್ರೀ–ಪುರುಷರು ಆದರ್ಶ ಸಮಾಜವನ್ನು ಕಟ್ಟಿ ತನ್ಮೂಲಕ ದೇಶದ ಪ್ರಗತಿಯನ್ನು, ಶ್ರೇಯಸ್ಸನ್ನು ಸಾಧಿಸಬಹುದಾಗಿದೆ.

○

ಆಧುನಿಕ ಮಹಿಳೆಯರ ಕೆಲವು ಸಮಸ್ಯೆಗಳು

ಎಚ್. ಪಿ. ಫಿಲೋಮಿನ

ಭಾರತವು ಸ್ವತಂತ್ರವಾಗಿದೆ, ನಿಜ. ಆದರೆ ಅದರ ಅರ್ಧದಷ್ಟಿರುವ ಮಹಿಳಾ ಲೋಕಕ್ಕೆ ಸ್ವಾತಂತ್ರ್ಯದ ಬೆಳಕು ಬಿದ್ದಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು. ನಮ್ಮ ಸ್ತ್ರೀಯರಿಗೆ ಸ್ವಾತಂತ್ರ್ಯದ ಅರ್ಥ ಇನ್ನೂ ಆಗಿಲ್ಲ; ಲಾಭ ತಟ್ಟಿಲ್ಲ. ಸ್ತ್ರೀತ್ವವನ್ನು ದೇವತ್ವಕ್ಕೆ ಏರಿಸಿದ ಏಕಮೇವಾದ್ವಿತೀಯ ದೇಶವೆಂದು ಹೆಮ್ಮೆಪಡುವ ಈ ದೇಶದಲ್ಲಿ ಹಾಡುಹಗಲಿನಲ್ಲೇ ಮಹಿಳೆಯರ ಮೇಲೆ ಅತ್ಯಾಚಾರ, ವಧುಗಳ ಸಜೀವ ದಹನ, ಬಲಾತ್ಕಾರ ಶೀಲಹರಣ, ದೇವರು ಧರ್ಮದ ಹೆಸರಿನಲ್ಲಿ ಹೆಣ್ಣುಗಳ ಮಾರಾಟ, ಇಂಥ ಬಗೆ ಬಗೆಯ ಅವಮಾನಕರ ಪ್ರಸಂಗಗಳು ದಿನನಿತ್ಯದ ಸುದ್ದಿಗಳಾಗಿವೆ !

ಹೆಣ್ಣು ಇಂದು ಕೇವಲ ಭೋಗದ ವಸ್ತುವಾಗಿ, ಸುಡುವ ವಸ್ತುವಾಗಿ, ವೇಶ್ಯಾವಾಟಿಕೆಗಳಿಗೆ ಸುಲಭ ದರಕ್ಕೆ ದೊರಕುವ ಮಾರಾಟದ ವಸ್ತುವಾಗಿ ಮಾರ್ಪಟ್ಟಿರುವುದು ನಮ್ಮ ಕ್ರೂರ ಸಮಾಜ ಮಹಿಳೆಯರನ್ನು ನಡೆಸಿಕೊಳ್ಳುತ್ತಿರುವ ರೀತಿನೀತಿಗಳನ್ನು ಎತ್ತಿ ತೋರಿಸುತ್ತದೆ. 'ಯಾವ ಮನೆಯಲ್ಲಿ ಸ್ತ್ರೀ ಪೂಜ್ಯಳಾಗಿರುವಳೋ ಅಲ್ಲಿ ದೇವತೆಗಳೂ ಸಂತುಷ್ಟರಾಗಿರುವರು; ಎಲ್ಲಿ ಸ್ತ್ರೀಯರಿಗೆ ಅಪಮಾನವಾಗುವುದೋ ಅಲ್ಲಿ ಆ ಕುಟುಂಬವು ಮಾಡುವ ಸಕಲ ಧರ್ಮಕ್ರಿಯೆಗಳು ಸಹ ವಿಫಲವಾಗುತ್ತವೆ' ಎಂಬುದು ಭಾರತೀಯ ಸಂಪ್ರದಾಯವಂತೆ. ಇಂದಿನ ಮಹಿಳೆಯರ ಹೀನ ಸ್ಥಿತಿಗಳನ್ನು ನೋಡಿದರೆ ಇವೆಲ್ಲ ಉತ್ಪ್ರೇಕ್ಷೆಯ ಮಾತುಗಳೆಂದೇ ಕಾಣಿಸುತ್ತವೆ. ಹೆಣ್ಣನ್ನು ದೇವಿ, ಪೂಜ್ಯಳು ಎಂದು ಪೂಜಿಸುವುದು ಬೇಡ, ಮಾನವೀಯ ಮೌಲ್ಯಗಳಿಂದ, ಮಾನವೀಯತೆಯಿಂದ, ಸಮಾನತೆಯಿಂದ ಕಂಡರೇ ಸಾಕು.

ಕಲ್ಪಿತ ಆದರ್ಶಗಳನ್ನು ಕ್ಷಣಕಾಲ ಮರೆತು, ನಮ್ಮ ವಾಸ್ತವದ ಕಡೆಗೆ ನೋಡೋಣ. ಹಣದ ದಾಹಕ್ಕಾಗಿ ಹದಿಹರೆಯದ, ಆಗತಾನೇ ವಿವಾಹ ಜೀವನದ ಹೊಸ್ತಿಲನ್ನು ಏರಿರುವ ಹೆಣ್ಣುಮಕ್ಕಳನ್ನು ವರದಕ್ಷಿಣೆಗಾಗಿ ಸಜೀವ ದಹನ ಮಾಡುವುದು, ಮನೆಬಿಟ್ಟು ಓಡಿಸುವುದು, ಹಿಂಸಿಸುವುದು ನಡೆದಿದೆ. ಮಾನಭಂಗದ ಪ್ರಕರಣಗಳು, ಕೊಲೆಗಳು, ಬಾಲ್ಯ ವಿವಾಹ, ಸತಿ ಪ್ರಕರಣ ಇವುಗಳೆಲ್ಲ ಹೆಚ್ಚಿರುವ ಬಗ್ಗೆ ಕೇಂದ್ರ ಸರಕಾರವೇ ಒಪ್ಪಿಕೊಂಡಿದೆ ಎಂದು ಲೋಕದಳದ ಸತ್ಯಪಾಲ ಮಲ್ಲಿಕ್

ಮತ್ತಿತರ ಒಂಭತ್ತು ಜನರು ರಾಜ್ಯಸಭೆಯಲ್ಲಿ ಶೀಘ್ರ ಮಹಿಳೆಯರ ರಕ್ಷಣೆಗಾಗಿ ಆಯೋಗವೊಂದನ್ನು ರಚಿಸಬೇಕೆಂಬ ಸಲಹೆ ನೀಡಿದ್ದಾರೆ.

ಆಯೋಗಗಳು ರಚನೆಯಾದರೇನು ? ಕಾನೂನುಗಳಿದ್ದರೇನು ? ಮಹಿಳಾ ಸಂಘಗಳು ಪ್ರತಿಭಟಿಸಿ ಮೆರವಣಿಗೆ ತೆಗೆದರೇನು ? ಬಹಿರಂಗ ಸಭೆ, ಚಳವಳಿಗಳು ನಡೆದರೇನು ? ಪಾರ್ಲಿಮೆಂಟು ಮತ್ತು ವಿಧಾನ ಸಭೆಗಳ ಮಹಿಳಾ ಸದಸ್ಯರು ಗರ್ಜಿಸಿದರೇನು ? ಇವುಗಳಾವುವೂ ಈ ದೇಶದ ದುಷ್ಕರ್ಮಿಗಳ ಕಲ್ಲು ಹೃದಯವನ್ನು ಕರಗಿಸಿಲ್ಲ, ಜಗ್ಗಿಸಿಲ್ಲ. ದೇಶದ ರಾಜಧಾನಿಯಾದ ದಿಲ್ಲಿಯೇ ಇಂದು ಇಂಥ ಪ್ರಕರಣಗಳಿಗೆ ತವರೂರು–ಮಹಿಳೆಯರನ್ನು ರೇಗಿಸಿ ಕಾಡಿಸುವುದರಿಂದ ಹಿಡಿದು ಕೊಲೆ ಮಾಡುವವರೆಗೂ ಮಹಿಳೆಯರ ಮೇಲೆ ನಡೆಯುವ ಅಪರಾಧಗಳಿಗೆ ದಿಲ್ಲಿ ದಾಖಲೆ ಸಾಧಿಸುತ್ತಿದೆ. ಪಾರ್ಲಿಮೆಂಟು ಭವನದಿಂದ ಕೆಲವೇ ಕಿಲೋಮೀಟರ ದೂರದಲ್ಲೇ ಸತೀದೇವಿಗೆ ದೇವಾಲಯ ಕಟ್ಟಿಸಲು ಧೈರ್ಯ ತೋರಿದವರು ದಿಲ್ಲಿಯ (ಅ)ನಾಗರಿಕರೇ. ಪ್ರತಿವರ್ಷ ಇಲ್ಲಿ ನೂರಾರು ವರದಕ್ಷಿಣೆ ಸಾವಿನ ಪ್ರಕರಣಗಳು, ಅತ್ಯಾಚಾರದ ಬೆಳಕಿಗೆ ಬರುತ್ತಿವೆ. ದಿಲ್ಲಿಯ ಹೊರಗೂ ಅಷ್ಟೇ. ನಮ್ಮ ಎದೆಯಲ್ಲಿ ನಡುಕಹುಟ್ಟಿಸುವ ಮಥುರಾ ಪ್ರಕರಣ, ಅನುಸೂಯಮ್ಮನ ಪ್ರಕರಣ, ಬಾಗಪತ್‌ದಲ್ಲಿ ಮಾಯಾ ತ್ಯಾಗಿಯನ್ನು ಬೀದಿಯಲ್ಲಿ ಬತ್ತಲೆಮಾಡಿ ಸಾಮೂಹಿಕವಾಗಿ ಅತ್ಯಾಚಾರ ಮಾಡಿದ ಪ್ರಕರಣಗಳು ಮರೆಯಲಾಗದ ಹಲವು ಉದಾಹರಣೆಗಳು.

ದುಡಿಯುವ ಮಹಿಳೆಯರ ಸಮಸ್ಯೆಗಳು

ಆಧುನಿಕ ಮಹಿಳೆಯರ ಸಮಸ್ಯೆಗಳು ಒಂದಲ್ಲ, ಎರಡಲ್ಲ. ಅವಳು ಮನೆಯಲ್ಲಿರಲಿ ಅಥವಾ ಹೊರಗೆ ದುಡಿಯುತ್ತಿರಲಿ,ಅವಳ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ,ಶೈಕ್ಷಣಿಕ, ವೈದ್ಯಕೀಯ, ಧಾರ್ಮಿಕ, ವೈಜ್ಞಾನಿಕ ರಂಗಗಳಲ್ಲಿ ದುಡಿಯುವ ಮಹಿಳೆಯರು ಸಹ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗಿದ್ದಾರೆ. ಕಟ್ಟಡ ನಿರ್ಮಾಣ ಕಾರ್ಯದಲ್ಲಿ, ಹೊಲಗದ್ದೆಗಳಲ್ಲಿ, ತೋಟಗಳಲ್ಲಿ, ಬೀಡಿ ಕೈಗಾರಿಕೆಗಳಲ್ಲಿ, ಅಗರಬತ್ತಿ ತಯಾರಿಕಾ ಕೇಂದ್ರಗಳಲ್ಲಿ, ಬಟ್ಟೆಗಿರಣಿ, ಗೋಣಿನಾರು ಕೈಗಾರಿಕೆ, ಗಣಿಗಳಲ್ಲಿ, ರಸ್ತೆರಿಪೇರಿ ಕೆಲಸದಲ್ಲಿ, ಕಲ್ಲು ಒಡೆಯುವ ಕೆಲಸದಲ್ಲಿ– ಹೀಗೆ ಯಾವುದೇ ಕೈಗಾರಿಕೆ ಅಥವಾ ಕಾಮಗಾರಿಗಳಲ್ಲಿ ದುಡಿಯುವ ಮಹಿಳೆಯರಿಗೆ ವೇತನದಲ್ಲಿ ತಾರತಮ್ಯವಿದೆ. ಕಾನೂನಿನ ದೃಷ್ಟಿಯಲ್ಲಿ ಈ ತಾರತಮ್ಯ, ಅಪರಾಧವೇ ಸರಿ. ಆದರೆ ಮಾಲಿಕರ ಹಾಗೂ ಕಂಟ್ರಾಕ್ಟುದಾರರ ದೃಷ್ಟಿಯಲ್ಲಿ ಅಲ್ಲ. ಗಂಡಸರು ಇದನ್ನು ಪ್ರತಿಭಟಿಸುವುದಿಲ್ಲ. ಮಹಿಳೆಯರು ಪ್ರತಿಭಟಿಸಲಾರರು. ಅವರು ಸಂಘಟಿತರಾಗಿಲ್ಲ. ಆರ್ಥಿಕ ಕಾರಣಗಳಿಂದಾಗಿ ಸಿಕ್ಕ ಕೂಲಿ, ವೇತನವನ್ನು ಅವರು ಒಪ್ಪಿಕೊಂಡುಬಿಡುತ್ತಾರೆ.

ಇತ್ತೀಚಿನ ದಶಕಗಳಲ್ಲಿ ಹಲವು ಕಾರಣಗಳಿಂದ ಮಹಿಳೆಯರು ಹೆಚ್ಚು ಹೆಚ್ಚು ದುಡಿಯಲು ಹೊರಬರುತ್ತಿರುವುದು ಗಮನಾರ್ಹವಾಗಿದೆ. ೧೯೭೭–೭೮ರ ಅಂಕಿ ಅಂಶಗಳ ಪ್ರಕಾರ ಸಂಘಟಿತ ವಲಯಗಳಲ್ಲಿ ಒಟ್ಟು ೨೩.೧೯ ದಶಲಕ್ಷ ಉದ್ಯೋಗಸ್ಥ

ರಲ್ಲಿ ೨.೭೬ ದಶಲಕ್ಷ ಮಂದಿ ಮಹಿಳಾ ಉದ್ಯೋಗಸ್ಥರಿದ್ದರು–ಅಂದರೆ ಅವರ ಪ್ರಮಾಣ ಶೇಕಡಾ ೧೨.೪ರಷ್ಟಿತ್ತು.

ನವದೆಹಲಿಯ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯಲ್ಲಿ ವಿ. ವಿ. ಬಟ್ರಾ ಬರೆದಿರುವ ಲೇಖನವಲ್ಲಿ ಉದ್ಯೋಗಸ್ಥ ಮಹಿಳೆಯರ ಉದ್ಯೋಗ ಪ್ರಮಾಣ ಹೀಗಿತ್ತು (೧೯೭೧–೧೯೮೦) :

	ಸಾರ್ವಜನಿಕ ವಲಯ			ಖಾಸಗಿ ವಲಯ		
ವರ್ಷ (ಮಾರ್ಚ ೩೧)	ಒಟ್ಟು	ಸ್ತ್ರೀಯರು (ದಶಲಕ್ಷ)	ಶೇಕಡಾ	ಒಟ್ಟು	ಸ್ತ್ರೀಯರು	ಶೇಕಡಾ
(೧)	(೨)	(೩)	(೪)	(೫)	(೬)	(೭)
೧೯೭೧	೧೦.೭೩	೦.೮೦	೮.೦	೬.೭೬	೧.೦೬	೧೫.೭
೧೯೭೨	೧೧.೨೦	೦.೯೧	೮.೧	೬.೭೭	೧.೧೧	೧೬.೩
೧೯೭೩	೧೧.೯೮	೧.೦೧	೮.೪	೬.೮೫	೧.೧೩	೧೬.೫
೧೯೭೪	೧೨.೪೯	೧.೦೬	೮.೬	೬.೭೯	೧.೧೧	೧೬.೪
೧೯೭೫	೧೨.೮೭	೧.೧೩	೮.೮	೬.೮೦	೧.೧೦	೧೬.೨
೧೯೭೬	೧೩.೩೬	೧.೨೨	೯.೧	೬.೮೪	೧.೧೮	೧೭.೩
೧೯೭೭	೧೩.೮೮	೧.೩೦	೯.೩	೬.೮೭	೧.೨೦	೧೭.೪
೧೯೭೮	೧೪.೪೪	೧.೪೧	೯.೮	೭.೦೪	೧.೨೮	೧೭.೭
೧೯೭೯	೧೪.೯೮	೧.೫೧	೧೦.೧	೭.೨೦	೧.೨೫	೧೭.೩
೧೯೮೦	೧೫.೦೮	೧.೪೫	೯.೬	೭.೨೪	೧.೨೫	೧೭.೨

ಹೀಗೆ ಒಟ್ಟು ಕೆಲಸಗಾರರಲ್ಲಿ ಮಹಿಳೆಯರ ಪ್ರಮಾಣ ಶೇ. ೨೬.೮ ಇದೆ. ಇವರಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಹಾಗೂ ಹೊಲಗಳಲ್ಲಿ ದುಡಿಯುವ ಮಹಿಳೆಯರು ಸೇರಿಲ್ಲ. ಏನಿದ್ದರೂ ದುಡಿಯುವ ಮಹಿಳೆಯರ ಪ್ರಮಾಣ ಹೆಚ್ಚಾಗುತ್ತಿದೆ. ವಿದ್ಯಾವಂತಳಿರಲಿ, ಅವಿದ್ಯಾವಂತಳಿರಲಿ, ದುಡಿಯುವ ಮಹಿಳೆ ಎಲ್ಲ ರಂಗಗಳಲ್ಲಿಯೂ ಪುರುಷ ದುಡಿಯುವಷ್ಟೇ ಕಾಲ ನಿಷ್ಠೆಯಿಂದ, ಜವಾಬ್ದಾರಿಯಿಂದ ದುಡಿಯುತ್ತಿದ್ದಾಳೆ. ಆದರೂ ಬಹುತೇಕ ರಂಗಗಳಲ್ಲಿ ವೇತನವಲ್ಲಿ ತಾರತಮ್ಯ ನಡೆವೇ ಇವೆ. ಕೆಲವು ಸರ್ಕಾರಿ ಸಂಸ್ಥೆಗಳನ್ನು ಬಿಟ್ಟರೆ ಬೇರೆ ಎಲ್ಲ ಖಾಸಗೀ ಕಚೇರಿಗಳಲ್ಲಿ, ಕೈಗಾರಿಕೆಗಳಲ್ಲಿ, ಹೊಲಗದ್ದೆ ಕೆಲಸದಲ್ಲಿ, ರಸ್ತೆ ನಿರ್ಮಾಣ ಮತ್ತು ಕಟ್ಟಡ ನಿರ್ಮಾಣ ಕಾರ್ಯದಲ್ಲಿ, ಕರಕುಶಲ ಕೈಗಾರಿಕೆಗಳಲ್ಲಿ ಮತ್ತಿತರ ಕ್ಷೇತ್ರಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ತಾರತಮ್ಯ ಮತ್ತು ಶೋಷಣೆ ನಡೆಯುತ್ತಲೇ ಇದೆ. ಅವರಿಗೆ ಕಡಿಮೆ ಕೂಲಿ, ಕಡಿಮೆ ವೇತನ, ಕಡಿಮೆ ಸೌಕರ್ಯಗಳು. ಅವರ ಶೀಲ ಮತ್ತು ಜೀವ ಹೆಚ್ಚು ಅಭದ್ರ.

ಜಾಹೀರಾತುಗಳಲ್ಲಿ, ಚಲನಚಿತ್ರ ಮಾಧ್ಯಮಗಳಲ್ಲಿ ಶೋಷಣೆ

ಕೈಗಾರಿಕೋದ್ಯಮಿಗಳಿಗೆ, ಚಲನಚಿತ್ರ ನಿರ್ಮಾಪಕರಿಗೆ ತಮ್ಮ ವಸ್ತುಗಳು ಮಾರಾಟವಾಗಲು, ಚಲನಚಿತ್ರಗಳು ಜನರ ಆಸಕ್ತಿ ಕೆರಳಿಸಲು ಹೆಣ್ಣಿನ ಅಂಗಾಂಗ

ಪ್ರದರ್ಶನ ಒಂದು ಸುಲಭವಾದ ಮಾರ್ಗ. ಚಿತ್ರಮಂದಿರಗಳ ಮುಂದೆ, ಗೋಡೆಗಳ ಮೇಲೆ, ಪತ್ರಿಕೆಗಳ ಒಳಹೊರಪುಟಗಳಲ್ಲಿ ಸ್ತ್ರೀಯರ ಅರೆನಗ್ನ ಚಿತ್ರಗಳನ್ನು ಪ್ರಕಟಿಸಿ ಜನತೆಯ ಆಸಕ್ತಿ ಕೆರಳಿಸುವುದು ನಡೆದೇ ಇದೆ. ಪ್ರತಿಭಟನೆಗಳ ನಡುವೆಯೂ ಈ ಅನ್ಯಾಯ ನಿಂತಿಲ್ಲ. ಇದರ ದೂರಗಾಮಿಯಾದ ಪರಿಣಾಮದ ಅರಿವು ಜನತೆಗೆ ಆಗಿಲ್ಲ. ಇದು ಅಪ್ರತ್ಯಕ್ಷ ರೀತಿಯಲ್ಲಿ ಹೆಣ್ಣಿನ ಶೀಲಭಂಗ, ಶೋಷಣೆ ಎಂಬುದನ್ನು ಜನರು ತಿಳಿಯಬೇಕು. ಹೆಣ್ಣು ನ ಮಾರಾಟದ ವಸ್ತು, ಕೇವಲ ಭೋಗದ ವಸ್ತು ಎಂಬ ಮನೋಭಾವ ಉಂಟಾಗುವ ಗಂಡಾಂತರವನ್ನು ಮನಗಾಣಬೇಕು. ಯಾವುದೋ ಒಂದೆರಡು ಪ್ರಸಂಗಗಳಲ್ಲಿ ಪ್ರಜ್ಞಾವಂತರು ಇಂಥ ಜಾಹೀರಾತುಗಳನ್ನು, ಚಲನಚಿತ್ರಗಳನ್ನು ಕೋರ್ಟಿಗೆ ಎಳೆದು ಯಶಸ್ವಿಯಾಗಬಹುದು. ಆದರೆ ಸಹಸ್ರ ಸಂಖ್ಯೆಯಲ್ಲಿ ನಡೆಯುವ ಈ ಅನಾಹುತಕ್ಕೆ ಏನು ಮಾಡಬೇಕು ? ಸ್ತ್ರೀಯರ ಶಕ್ತಿಶಾಲಿಯಾದ ಸಂಘಟನೆಗಳು ಹುಟ್ಟಿಕೊಳ್ಳದೇ ಗತ್ಯಂತರವಿಲ್ಲ.

ಉದ್ಯೋಗಸ್ಥ ಮಹಿಳೆಯ ವರ್ಗಾವಣೆ

ಪತಿ ಮತ್ತು ಪತ್ನಿಯರಿಬ್ಬರೂ ಉದ್ಯೋಗಗಳಲ್ಲಿದ್ದು ಅವರಲ್ಲಿ ಒಬ್ಬರಿಗೆ ಬೇರೊಂದು ಕಡೆಗೆ ವರ್ಗವಾದರೆ ಉದ್ಯೋಗದಲ್ಲಿ ಮುಂದುವರಿಯಬೇಕೇ ಅಥವಾ ಕೆಲಸ ಬಿಟ್ಟು ಕುಟುಂಬ ಪರಿಪಾಲನೆ ಮಾಡಬೇಕೇ ಎಂಬುದು ಮಹಿಳೆಗೆ ಎದುರಾಗುವ ಒಂದು ಸಮಸ್ಯೆ. ಪತಿಗೆ ವರ್ಗವಾದರೆ ಪತ್ನಿಯು ಪತಿಯ ಜೊತೆ ಹೋಗಬೇಕೇ ಅಥವಾ ತಾನು ತನ್ನ ಕೆಲಸದಲ್ಲಿರಬಹುದೇ ? ಒಂದು ವೇಳೆ ಪತ್ನಿಗೆ ವರ್ಗವಾದರೆ ಅವಳು ತನ್ನ ಪತಿ ಮತ್ತು ಮಕ್ಕಳನ್ನು ಬಿಟ್ಟು ಬೇರೆ ಊರಿಗೆ ಕೆಲಸಕ್ಕೆ ಹೋಗಬಹುದೇ ಎಂಬ ವಾದ ವಿವಾದಗಳಿಗೆ ಸಿಲುಕಿ ಮಹಿಳೆ ಇಂದು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಇದಕ್ಕಾಗಿ ಕೋರ್ಟು ಕಚೇರಿಗಳ ಮೆಟ್ಟಲನ್ನು ಹತ್ತಬೇಕಾಗಿದೆ. ಉದಾಹರಣೆಗೆ, ಕಲಾವತಿ ಎಂಬಾಕೆ ಪಂಜಾಬಿನ ಹಳ್ಳಿಯೊಂದರಲ್ಲಿ ಶಿಕ್ಷಕಿ. ಅದೇ ಹಳ್ಳಿಯಲ್ಲಿ ಉಪಾಧ್ಯಾಯನಾಗಿದ್ದ ಅಜೋದಿಯಾ ಪ್ರಸಾದನೊಡನೆ ೧೯೬೬ರಲ್ಲಿ ಅವಳ ವಿವಾಹವಾಯಿತು. ವಿವಾಹವಾದ ಮೇಲೆ ಕಲಾವತಿಗೆ ತನ್ನ ಪತಿಯ ಹಳ್ಳಿಗೆ ವರ್ಗವಾಯಿತು. ಪತಿ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ. ಕಲಾವತಿ ತನ್ನ ಇಚ್ಛೆಗೆ ವಿರುದ್ಧವಾಗಿ ವರ್ಗ ಪಡೆಯಲು ಕುತಂತ್ರ ನಡೆಸಿದಳೆಂದೂ, ತನಗೆ ಅವಳನ್ನು ನೆಮ್ಮದಿಯಿಂದ ಪೋಷಿಸಲು ಶಕ್ತಿ ಇರುವುದರಿಂದ ಕಲಾವತಿ ತನ್ನ ನೌಕರಿ ಬಿಡಬೇಕೆಂದೂ ಮೊಕದ್ದಮೆಯಲ್ಲಿ ಆಪಾದಿಸಲಾಗಿತ್ತು. ತಾನು ಉದ್ಯೋಗಸ್ಥ ಮಹಿಳೆಯಾಗಿದ್ದಾಗಲೇ ತನ್ನ ಪತಿ ತನ್ನನ್ನು ವಿವಾಹವಾಗಲು ಒಪ್ಪಿರುವುದರಿಂದ ತಾನು ಉದ್ಯೋಗ ಬಿಡುವ ಅಗತ್ಯವಿಲ್ಲವೆಂದೂ ಅವಳು ಪಂಜಾಬ ಶ್ರೇಷ್ಠ ನ್ಯಾಯಾಲಯದಲ್ಲಿ ವಾದಿಸಿದಳು. ಆದರೆ ನ್ಯಾಯಾಲಯವು ಅವಳು ತನ್ನ ಪತಿ ಇಲ್ಲವೆ ತನ್ನ ಉದ್ಯೋಗ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕೆಂದು ತೀರ್ಪುನೀಡಿತು. ಹೀಗೆ ಪಂಜಾಬ ಶ್ರೇಷ್ಠ ನ್ಯಾಯಾಲಯವು ಗಂಡ–ಹೆಂಡತಿಯರ ಕುಟುಂಬ ಎಲ್ಲಿರಬೇಕೆಂಬ ಬಗ್ಗೆ ನಿರ್ಧರಿಸುವ ಹಕ್ಕುಪತಿಯದೆಂಬ ತೀರ್ಮಾನಕ್ಕೆ ಬಂದಿದೆ. ಆದರೆ ತದ್ವಿರುದ್ಧವಾಗಿ ದಿಲ್ಲಿ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳು ಹೆಣ್ಣಿಗೆ ಉದ್ಯೋಗದ ಹಕ್ಕಿದೆ

ಎಂದು ಶ್ರೀಮತಿ ಸ್ವರಾಜ್ ಅವರ ಮೊಕದ್ದಮೆಯಲ್ಲಿ ತೀರ್ಪಿತ್ತಿದ್ದಾರೆ. ಆದೇನೇ ಇದ್ದರೂ ಪಂಜಾಬ ಶ್ರೇಷ್ಠ ನ್ಯಾಯಾಲಯದ ತೀರ್ಪು ಉದ್ಯೋಗಸ್ಥ ಮಹಿಳೆಯರ ಹಕ್ಕಿಗೆ ಚ್ಯುತಿ ತಂದಿದೆ. ಈ ತೀರ್ಪು ಉದ್ಯೋಗಸ್ಥ ಮಹಿಳೆಯರ ವಿವಾಹ ವಿಚ್ಛೇದನ ಕ್ಕಾಗಿ ಪುರುಷರಿಗೆ ಸಿಕ್ಕ ಒಳ್ಳೆಯ ಅವಕಾಶ ಎಂಬುದಾಗಿ ಲೋಥಿಕಾ ಸರ್ಕಾರ್ ಒಂದೆಡೆ ಟೀಕಿಸಿದ್ದರಲ್ಲಿ ತಥ್ಯವಿದೆ.

ಗ್ರಾಮೀಣ ಮಹಿಳೆಯರ ನಿರಂತರ ಶೋಷಣೆ

ಅವಿದ್ಯಾವಂತ, ಮುಗ್ಧ ಮಹಿಳೆಯರ ಶೋಷಣೆ ನಿರಂತರವಾಗಿ ನಡೆಯುತ್ತಿ ರುವ ಶೋಷಣೆಯ ಇನ್ನೊಂದು ಕ್ರೂರ ಮುಖ. ದೇವರು, ಧರ್ಮದ ಹೆಸರಿನಲ್ಲಿ ಮೂಢ ನಂಬಿಕೆಗಳಿಗೆ, ತಂತ್ರಮಂತ್ರಗಳಿಗೆ ಮಾರುಹೋಗುವ ಅನಕ್ಷರಸ್ಥ ಮಹಿಳೆಯರು ಹಳ್ಳಿಯ ಜಮೀನ್ದಾರರಿಗೆ, ಧಣಿಗಳಿಗೆ, ಅಧಿಕಾರಿಗಳಿಗೆ, ಪ್ರತಿಷ್ಠಿತ ವ್ಯಕ್ತಿಗಳಗೆ ಸುಲಭ ರೀತಿಯಲ್ಲಿ ಸಿಗುವ ಭೋಗದ ವಸ್ತುಗಳು. ಪ್ರತಿ ಸೋಮವಾರ ಉಪವಾಸ ಮಾಡುತ್ತಿದ್ದ ಶ್ರೀಮತಿ ಗೌರಿ ಚೌಧರಿಯನ್ನು ಶುಭ ಸಮಾರಂಭಕ್ಕೆ ಉತ್ತಮಳು ಎಂದು ಪರಿಗಣಿಸಿ ಕೊಲ್ಲಲಾಯಿತು. ತಂತ್ರ–ಮಂತ್ರಗಳಿಂದ ಉತ್ತರ ಕರ್ನಾಟಕದ ಬೀದರ್ ಮತ್ತು ಕಲಬುರ್ಗಿ ಜಿಲ್ಲೆಗಳ ಹಲವು ಹಳ್ಳಿಗಳಲ್ಲಿ 'ಬಾನಾಮತಿ' ಮಾಡಿಸಿ ಗ್ರಾಮೀಣ ಮಹಿಳೆಯರಿಗೆ ನೀಡುತ್ತಿರುವ ಚಿತ್ರಹಿಂಸೆ ಮುಂದುವರಿದಿದೆ. ನಮ್ಮ ರಾಜ್ಯದ ಬೇರೆ ಬೇರೆ ಕಡೆಗಳಿಂದ ಬರುತ್ತಿರುವ 'ಬತ್ತಲೆ ಸೇವೆ'ಯ ವರದಿಗಳನ್ನು ನೋಡಿದರೆ ನಾವು ಇಪ್ಪತ್ತನೇ ಶತಮಾನದಲ್ಲಿರುವುದು ನಿಜವೋ ಸುಳ್ಳೋ ಎಂಬ ಸಂಶಯ ಬರುತ್ತದೆ.

ಮಹಿಳೆಯರ ಶೋಷಣೆಯ ಮತ್ತೊಂದು ಮುಖ 'ದೇವದಾಸಿ' ಪದ್ಧತಿ. ಇಂದಿಗೂ ದೇವರ ಹೆಸರಿನಲ್ಲಿ ಈ ವೇಶ್ಯಾ ವ್ಯವಸಾಯ ವ್ಯಾಪಕವಾಗಿ ನಡೆಯುತ್ತಿದೆ. ದಂತಕಥೆಗಳನ್ನು ಕಟ್ಟಿ, ಇವರ ಮೂಲಕ ಧಾರ್ಮಿಕ ಪರವಾನಗಿ ಪಡೆದು, ವೇಶ್ಯಾ ವಾಟಿಕೆಗಳಿಗೆ ಮುಗ್ಧ ಹೆಣ್ಣುಮಕ್ಕಳನ್ನು ನಿರಂತರವಾಗಿ ದಬ್ಬುತ್ತಿರುವುದು ಅತ್ಯಂತ ಹೇಯವಾದ ಸಂಗತಿ. ಆದರೆ ಕೆಲವು ದಲ್ಲಾಳಿಗೆ ಇದು ಲಾಭದ ಉದ್ದಿಮೆಯೂ ಹೌದು. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಹೆಣ್ಣುಮಕ್ಕಳನ್ನು ಯಲ್ಲಮ್ಮ ದೇವಿಗೆ ಅರ್ಪಿಸಿ, ಮುಂದೆ ಅವರನ್ನು ಮುಂಬೈ, ಪುಣೆಗಳಲ್ಲಿರುವ ವೇಶ್ಯಾವಾಟಿಕ ಗಳಿಲ್ಲಿ ರಫ್ತು ಮಾಡಲಾಗುತ್ತಿದೆ. ಕಿತ್ತುತಿನ್ನುವ ಬಡತನ, ಅಜ್ಞಾನ, ಮೂಢನಂಬಿಕೆ ಗಳಿಗೆ ಬಲಿಯಾಗಿರುವ ಗ್ರಾಮೀಣ ಮಹಿಳೆಯರು ಇಂದು ಮೇಲುವರ್ಗದ ಮತ್ತು ಹಣವಂತರ ಸೊತ್ತುಗಳೂ ಕೈಗೊಂಬೆಗಳೂ ಆಗಿದ್ದಾರೆ. ಕ್ಷಾಮಪೀಡಿತ ಪ್ರದೇಶದಲ್ಲಿ ವಾಸಿಸುವ, ಅಸ್ಪೃಶ್ಯ ಜಾತಿಗಳಿಗೆ ಸೇರಿದ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತುತ್ತಿನಚೀಲ ತುಂಬಲು ಇದೊಂದೇ ಮಾರ್ಗ ಮುಕ್ತವಾಗಿದೆಯೆ ?

ಸತೀ ಸಹಗಮನ ಪದ್ಧತಿ

ಪತಿ ಅಕಾಲ ಮರಣಕ್ಕೀಡಾದರೆ ಅಥವಾ ಯಾವುದೇ ಕಾರಣದಿಂದ ಮೃತ ನಾದಾಗಲೂ ಪತಿಯು ಅವನ ಜೊತೆ ಚಿತೆಯೇರುವ ಅನೇಕ ಪ್ರಕರಣಗಳು ವರದಿ ಯಾಗುತ್ತಲೇ ಇವೆ. ಉತ್ತರಪ್ರದೇಶದ ತಿವಾರಿ ಎಂಬವರ ಹೆಂಡತಿ ಸಾವಿತ್ರಿ, ರಾಜ

ಸ್ಥಾನದ ಹೀರಾಲಾಲ್ ಪತ್ನಿ ಸರಸ್ವತಿ ಇವರೆಲ್ಲ ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕರೆದುರಿಗೇ ಕಾನೂನನ್ನು ಉಲ್ಲಂಘಿಸುತ್ತ ಚಿತೆಯೇರಿದ ಮಹಿಳೆಯರು. 'ಕನ್ನಡಪ್ರಭ' ಪತ್ರಿಕೆ ೧೯೮೩ರ ಜುಲೈ ೩೦ರ ಸಂಚಿಕೆಯಲ್ಲಿ ಉತ್ತರಪ್ರದೇಶದ ಬಾಂಡಾ ಜಿಲ್ಲೆಯ ಪಂಗಾರಾ ಗ್ರಾಮದಲ್ಲಿ ಗಾಯತ್ರಿದೇವಿ ಎಂಬಾಕೆ ಸತಿ ಹೋದುದನ್ನು ಸವಿಸ್ತಾರ ವರ್ಣಿಸಿದೆ. ಇಂಥ ನೂರಾರು ಪ್ರಕರಣಗಳು ನಡೆಯುತ್ತಲೇ ಇವೆ. ಹಿಂದೂ ಧರ್ಮ ಮನ್ನಣೆ ಕೊಡದಿದ್ದರೂ ಯಾವುದೋ ಸಂಪ್ರದಾಯ ಅಥವಾ ಕಟ್ಟುಕಟ್ಟಳೆಗಳು ಮಹಿಳೆಯರನ್ನು ಈ ಘೋರ ಮಾನಸಿಕ ವೇದನೆಗೆ ಒಳಪಡಿಸಿರುವುದು ಊಹಿಸಲು ಸಾಧ್ಯವಾಗದಂತಹ ಬರ್ಬರ ಕೃತ್ಯ. ಇಂಥ ಪ್ರಕರಣಗಳು ನಡೆಯುವಾಗಲೆಲ್ಲ ಜನತೆ ಪ್ರತಿಭಟಿಸುವುದನ್ನು ಬಿಟ್ಟು ಸುಮ್ಮನೆ ವೀಕ್ಷಿಸುವುದನ್ನು ನೋಡಿದರೆ ಭಾರತೀಯ ಸಮಾಜದ ಸ್ವಾಸ್ಥ್ಯದ ಬಗ್ಗೆ ಗುಮಾನಿ ಹುಟ್ಟುತ್ತದೆ.

ವರದಕ್ಷಿಣೆಯ ಪಿಡುಗು

ಹಣದ ದಾಹದ ಮುಂದೆ ಮಹಿಳೆಯರಿಗೆ ಬೆಲೆ ಇಲ್ಲ. ವರದಕ್ಷಿಣೆಯ ಪಿಡುಗು ಭರದಿಂದ ಬೆಳೆಯುತ್ತಿರುವಂತೆ ಕಾಣುತ್ತಿದೆ. ವರದಕ್ಷಿಣೆಗಾಗಿ ವಧುಗಳನ್ನು ಜೀವಂತ ಸುಡಲಾಗುತ್ತಿದೆ. ದಿನಬೆಳಗಾದರೆ ಇಂಥ ವರದಿಗಳು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವುಗಳಲ್ಲಿ ಹಲವು ಪ್ರಕರಣಗಳು ವರದಕ್ಷಿಣೆಗಾಗಿ ಸಾವು ಇರಲಿಕ್ಕಿಲ್ಲ. ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಅಧ್ಯಕ್ಷೆ ದಿಲ್ಲಿಯ ಬಗ್ಗೆ ಹೇಳುತ್ತ ಅಲ್ಲಿ ವರದಿಯಾದ ನಲವತ್ತು ವರದಕ್ಷಿಣೆ ಸಾವಿನ ಪ್ರಕರಣಗಳಲ್ಲಿ ಕೇವಲ ನಾಲ್ಕು ಮಾತ್ರ ನಿಜವಾಗಿ ವರದಕ್ಷಿಣೆಗಾಗಿ ನಡೆದ ಕೊಲೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅದೇನೇ ಇರಲಿ, ಈ ಬಗ್ಗೆ ಜನಜಾಗೃತಿ ಕಾರ್ಯ ನಡೆಯುತ್ತಿದೆ. ವರದಕ್ಷಿಣೆ ಸಾವು ಪ್ರಕರಣಗಳನ್ನು ದಂಡನಾರ್ಹ ಮತ್ತು ಜಾಮೀನುರಹಿತ ಅಪರಾಧವೆಂದು ಪರಿಗಣಿಸುವ ಸೂಕ್ತ ಶಾಸನವನ್ನು ಕೇಂದ್ರ ಸರಕಾರ ಜಾರಿಗೆ ತರುತ್ತಿದೆ.

ಕಾನೂನು ಮತ್ತು ಜನಜಾಗೃತಿ

ದುರದೃಷ್ಟದ ಮಾತೆಂದರೆ ಮಹಿಳೆಯರಿಗಾಗಿಯೇ ರೂಪಿತವಾದ ಶಾಸನಗಳು ಹಲವಿದ್ದರೂ ಅವು ನಿಷ್ಕ್ರಿಯವಾಗಿವೆ. ವರದಕ್ಷಿಣೆಯನ್ನು ಪ್ರತಿಬಂಧಿಸುವ ಕಾನೂನು ೧೯೬೧ರಿಂದಲೂ ಇದೆ. ಸತೀಸಹಗಮನ ಬಹುಕಾಲದಿಂದಲೂ ಕಾನೂನುಬಾಹಿರ. ಅತ್ಯಾಚಾರದ ವಿರುದ್ಧ ಸಪ್ರೆಶನ್ ಆಫ್ ಇಮ್ಮೊರಲ್ ಟ್ರಾಫಿಕ್ ಆ್ಯಕ್ಟ ಬಂದು ಬಹುಕಾಲವಾಯಿತು. ದೇವದಾಸಿ ವಿರುದ್ಧ ಕಾನೂನಿದೆ. ಇಷ್ಟೆಲ್ಲ ಇದ್ದೂ ಈ ಅನಿಷ್ಟಗಳು ರಾಜಾರೋಷವಾಗಿ ನಮ್ಮ ಮಧ್ಯೆ ಇರುವುದು ಜನತೆಯ ಜಡತ್ವವನ್ನು ತೋರಿಸುತ್ತದೆ. ಮಹಿಳೆಯರು ಜಾಗೃತರಾಗಬೇಕು, ಸುಶಿಕ್ಷಿತರಾಗಬೇಕು. ಸುಸಂಘಟಿತರಾಗಬೇಕು. ಮಹಿಳೆಯರನ್ನು ಮಹಿಳೆಯರೇ ರಕ್ಷಿಸಿಕೊಳ್ಳದಿದ್ದರೆ ದೇವನೂ ರಕ್ಷಿಸಲಾರ.

○

ಆಧುನಿಕ ಭಾರತದಲ್ಲಿ ವಿವಾಹ ವಿಚ್ಛೇದನ

ಹೇಮಲತಾ ಮಹಿಷಿ

ಕಾಲ, ಪರಿಸ್ಥಿತಿ ಬದಲಾದಾಗ ಮಾನವ ಸಂಬಂಧಗಳಲ್ಲಿ ಬದಲಾವಣೆಯಾಗುವುದು ಅನಿವಾರ್ಯವಾಗುತ್ತದೆ. ಅನೇಕ ಸಾಮಾಜಿಕ ವ್ಯವಸ್ಥೆಗಳು ಬದಲಾಗುತ್ತವೆ. ಅಥವಾ ಸಡಿಲವಾಗುತ್ತವೆ. ಇದರಲ್ಲಿ ತಪ್ಪು–ಒಪ್ಪಿನ ಪ್ರಶ್ನೆ ಏಳುವದಿಲ್ಲ. ಒಂದು ವ್ಯಕ್ತಿಯ ಜೀವನದಲ್ಲಿ ಒತ್ತಡ ವಿಪರೀತವಾದಾಗ, ಅನಿವಾರ್ಯವಾಗಿ ಪರಿಸ್ಥಿತಿಗೆ ತಲೆಬಾಗಿ, ಆ ನಿಮಿಷದಲ್ಲಿ ತನಗೆ ಸರಿ ಎನಿಸಿದ ಪರಿಹಾರವನ್ನು ಧೈರ್ಯವಾಗಿ ಸ್ವೀಕರಿಸಬೇಕಾಗುತ್ತದೆ. ಸಮಾಜ, ಧರ್ಮ ಎಲ್ಲವೂ ವ್ಯಕ್ತಿಯ ಆ ಅನಿವಾರ್ಯ ಸಂದರ್ಭದಲ್ಲಿ ಗೌಣವಾಗುತ್ತವೆ. ಈ ರೀತಿ ಹಲವಾರು ಜನರು ಧೈರ್ಯಮಾಡಿ, ಸಮಾಜ, ಧರ್ಮ ತಮ್ಮನ್ನು ಕಡೆಗಣ್ಣಿನಿಂದ ಕಂಡರೂ ಅಂಜದೇ, ತಮ್ಮ ಜೀವನದಲ್ಲಿ ನಿರ್ಧಾರ ಕೈಗೊಂಡಾಗ ಅವು ತಮಗೆ ತಾವೇ ಬದಲಾವಣೆ ಹೊಂದುತ್ತವೆ. ಕಾಲಕ್ರಮೇಣ ಅನಿವಾರ್ಯತೆಯ ಕಾರಣದಿಂದಾಗಿ ಕೆಲವು 'ಅನಿಷ್ಟ'ಗಳು ಸಹ್ಯವಾಗುತ್ತವೆ, ಸ್ವಾಗತಾರ್ಹವೂ ಎನ್ನಿಸುತ್ತವೆ. ಇಂದಿನ ೨೦ನೇ ಶತಮಾನದಲ್ಲಿ ವಿವಾಹ ವಿಚ್ಛೇದನ ಅಂತಹ ಅನಿವಾರ್ಯ 'ಅನಿಷ್ಟ'ಗಳಲ್ಲಿ ಒಂದಾಗಿದ್ದು ಹಲವಾರು ವ್ಯಕ್ತಿಗಳಿಗೆ ಜೀವನದಲ್ಲಿ ನೆಮ್ಮದಿ ದೊರಕಿಸಲು ಏಕೈಕ ಪರಿಹಾರವಾಗಿರುತ್ತದೆ.

೧

ಹಿಂದೂಗಳಲ್ಲಿ ವಿವಾಹ ವಿಚ್ಛೇದನ

ಆರಂಭದಿಂದಲೂ ವಿವಾಹ ವಿಚ್ಛೇದನದ ವಿಷಯದಲ್ಲಿ ಪುರುಷನಿಗೆ ಹೆಚ್ಚಿನ ಸ್ವಾತಂತ್ರ್ಯವಿದ್ದಂತೆ ಕಂಡುಬರುತ್ತದೆ. ಧರ್ಮಸೂತ್ರಗಳ ಕಾಲದಲ್ಲಿದ್ದ ಧರ್ಮಶಾಸ್ತ್ರಜ್ಞರಲ್ಲಿ ಒಬ್ಬನಾಗಿದ್ದ ಬೌಧಾಯಣನು, 'ಪುರುಷನು ತನ್ನ ಬಂಜೆಯಾದ ಹೆಂಡತಿಯನ್ನು ೧೦ನೇ ವರ್ಷದಲ್ಲೂ, ಕೇವಲ ಹೆಣ್ಣುಮಕ್ಕಳನ್ನೇ ಹಡೆದ ಹೆಂಡತಿಯನ್ನು ೧೨ನೇ ವರ್ಷದಲ್ಲೂ, ಹಡೆದ ಎಲ್ಲಾ ಮಕ್ಕಳನ್ನೂ ಕಳೆದುಕೊಂಡ ಹೆಂಡತಿಯನ್ನು ೧೫ನೇ ವರ್ಷದಲ್ಲೂ ತ್ಯಜಿಸಬಹುದು ಎನ್ನುತ್ತಾ, 'ಜಗಳಗಂಟಿ' ಹೆಂಡತಿಯನ್ನು ಮಾತ್ರ ತಕ್ಷಣವೇ ತ್ಯಜಿಸಿ ಬೇರೆ ವಿವಾಹವಾಗಬಹುದು,' ಎನ್ನುತ್ತಾನೆ. ಅದರ

ಸ್ತ್ರೀಯರ ಬಗ್ಗೆ ಮಾತ್ರ, "ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ. ಅವರನ್ನು ಜೀವನದ ಎಲ್ಲಾ ಘಟ್ಟಗಳಲ್ಲೂ ರಕ್ಷಿಸಬೇಕು" ಎಂದು ಹೇಳಿ ಅವರ ಸ್ವತಂತ್ರ ವ್ಯಕ್ತಿತ್ವವನ್ನು ಅಲ್ಲಗಳೆದಿದ್ದಾನೆ. ಮುಂದೆ ಬಂದ ವಶಿಷ್ಠನೂ ಸಹ "ಸ್ತ್ರೀಯರು ಸ್ವತಂತ್ರರಲ್ಲ, ಪುರುಷರು ಅವರ ಒಡೆಯರು" ಎಂದಿದ್ದಾನೆ.

ಕೌಟಿಲ್ಯನು "ವಿವಾಹವು ಪವಿತ್ರವಾದ ಬಂಧನ, ಅದನ್ನು ಮುರಿಯುವಂತಿಲ್ಲ" ಎಂದರೂ ಕೆಲವು ಸಂದರ್ಭದಲ್ಲಿ ವಿಚ್ಛೇದನ ಹೊಂದಲು ಒಪ್ಪಿಗೆ ನೀಡಿದ್ದಾನೆ. ಇಲ್ಲಿ ಸ್ತ್ರೀಯರೂ ವಿವಾಹ ವಿಚ್ಛೇದನ ಹೊಂದಬಹುದು ಎಂದು ಕೌಟಿಲ್ಯನು ಹೇಳಿರುವುದು ಗಮನಾರ್ಹವಾದುದು.

ಆದರೆ, ಸಂಹಿತೆಗಳ ಕಾಲಕ್ಕೆ ಬಂದಾಗ ಕಟ್ಟುಪಾಡುಗಳು ಬಿಗಿಯಾದುದು ಕಂಡು ಬರುತ್ತದೆ. ಮನುವು "ಒಂದು ಸಾರಿ ಪವಿತ್ರ ಅಗ್ನಿಯ ಮುಂದೆ ವಿವಾಹವಾದರೆ ಮುಗಿಯಿತು. ಆ ವಿವಾಹ ಬಂಧನವನ್ನು ಮರೆಯುವಂತಿಲ್ಲ" ಎಂದಿದ್ದಾನೆ. ಮುಂದೆ ಬಂದ ಧರ್ಮಶಾಸ್ತ್ರಜ್ಞರೆಲ್ಲಾ ವಿವಾಹದ ಬಗ್ಗೆ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ರೀತಿ, ಹಿಂದೂ ಧರ್ಮವು ಆರಂಭದಿಂದಲೂ ವಿವಾಹವನ್ನು ಒಂದು ಪವಿತ್ರ ಸಂಸ್ಕಾರವೆಂದು ಭಾವಿಸುತ್ತ ಬಂದಿರುವುದರಿಂದ ವಿಚ್ಛೇದನ ಧರ್ಮಬಾಹಿರವೆನಿಸಿತ್ತು. ಬಹು ಪತ್ನಿತ್ವ ಹೆಚ್ಚಾಗಿ ರೂಢಿಯಲ್ಲಿ ಬಂದಾಗ ಪುರುಷನಿಗೆ ವಿಚ್ಛೇದನದ ಅವಶ್ಯಕತೆ ಇರಲಿಲ್ಲ.

ಸ್ತ್ರೀಯರ ವೇದಕಾಲದ ಸ್ವತಂತ್ರ ವ್ಯಕ್ತಿತ್ವ ನಾಶ ಹೊಂದಿ, ಅವರು ಪುರುಷರ ಮೇಲೆ ಅವಲಂಬಿಗಳಾದಾಗ, ಅವರಿಗೆ ವಿಚ್ಛೇದನದ ಅವಶ್ಯಕತೆ ಇದ್ದರೂ ಅವಕಾಶ ಉಳಿಯಲಿಲ್ಲ. ಬಾಲ್ಯವಿವಾಹ ಜಾರಿಗೆ ಬಂದು, ವಿದ್ಯೆ ನೈವಿದ್ಯವಾಗಿ, "ಪತಿಯೇ ಪರದೈವ" "ಪಾಲಿಗೆ ಬಂದದ್ದು ಪಂಚಾಮೃತ" ಮೊದಲಾದ ಘನವಾದ ತತ್ವಗಳನ್ನು ಬಾಲ್ಯದಿಂದಲೂ ಅರೆದು ಕುಡಿಸತೊಡಗಿದಾಗ ಆದರ್ಶ ಹಿಂದೂನಾರಿಯ ಕಲ್ಪನೆ ಬೇರೆಯಾಗಿ ಸ್ತ್ರೀಯರು ವಿವಾಹ ವಿಚ್ಛೇದನವನ್ನು ಕನಸು–ಮನಸಿನಲ್ಲಿಯೂ ನೆನೆಸುವುದು ಪಾಪವೆನಿಸಿತು. ಸಮಾಜ ಹೇಳುವುದಿರಲಿ ತನಗೇ ಪಾಪವೆನಿಸಿತು! ಪತಿ ತನಗೆ ಸವತಿಯರನ್ನು ತಂದರೂ ಸುಮ್ಮನಿರಬೇಕು. ಹಿಂಸಿಸಿದರೂ ತಡೆದುಕೊಳ್ಳಬೇಕು. ಕೆಟ್ಟ ಕಾಹಿಲೆಗಳಿಂದ, ಮನೋವೈಕಲ್ಯದಿಂದ ನರಳುತ್ತಿದ್ದರೂ ಸಹಿಸಿಕೊಂಡು ಸೇವೆ ಮಾಡಬೇಕು. ಪತಿ ಮನೆಯಿಂದ ಹೊರಹಾಕಿ ತೌರಿಗೆ ದಬ್ಬಿದರೂ 'ಗಂಡಬಿಟ್ಟವಳು' ಎನ್ನಿಸಿಕೊಂಡು ಮೌನವಾಗಿ ಜೀವನ ನೂಕಿ, ಮುತ್ತೈದೆಯಾಗಿ ಮರಣ ಹೊಂದಿ ಸ್ವರ್ಗ ಸೇರಬೇಕು. ಪತಿಯೇ ಮೊದಲು ಮರಣ ಹೊಂದಿದರೆ ಬದುಕಿದ್ದಾಗ ತನ್ನ ಬಗ್ಗೆ ಒಂದು ಒಳ್ಳೆಯ ಮಾತಾಡದಿದ್ದರೂ, ಅವನ ಹೆಸರಿನಲ್ಲಿ ವಿಧವೆಯಾಗಿ ಕಠಿಣ ನಿಯಮಗಳನ್ನು ಪಾಲಿಸುತ್ತಾ ಆಯುಷ್ಯ ಸವೆಸಬೇಕು. ಇದು ಕಲ್ಪನೆಯ ಸಂಗತಿಗಳಲ್ಲ. ನಿನ್ನೆ–ಮೊನ್ನೆಯವರೆಗೆ ಕಣ್ಣೆದುರಿಗೇ ಇದ್ದ ನಿಜಸಂಗತಿ. ಎಲ್ಲರೂ ಕಂಡ ಸತ್ಯ. ಈಗಲೂ ಅನೇಕರಿಗೆ ಇವರಲ್ಲಿ ಏನೊಂದು ತಪ್ಪು ಕಾಣಿಸದೇ ಇರುವುದೂ ಅಷ್ಟೇ ಸತ್ಯ.

ಈ ಶತಮಾನದಲ್ಲಿ

ಆದರೆ ಇಪ್ಪತ್ತನೆಯ ಶತಮಾನದ ಹೆಣ್ಣು ಜಾಗೃತಳಾಗುತ್ತಿದ್ದಾಳೆ. ವಿದ್ಯಾವಂತೆಯಾಗಿ ಹೊರಜಗತ್ತಿನ ಕಡೆ ಕಣ್ತೆರೆಯುತ್ತಿದ್ದಾಳೆ. ಅವಳ ಸ್ವತಂತ್ರ ವ್ಯಕ್ತಿತ್ವ ಎಚ್ಚೆತ್ತಿದೆ. ಮಾನಸಿಕವಾಗಿ ಬೆಳೆಯುತ್ತಿದ್ದಾಳೆ. ಆರ್ಥಿಕವಾಗಿ ಸ್ವತಂತ್ರಳಾಗುತ್ತಿದ್ದಾಳೆ. ಇನ್ನು ಮುಂದೆ ಯಾವ ರೀತಿಯ ದಬ್ಬಾಳಿಕೆಯನ್ನೂ ಅವಳು ಸಹಿಸಲಾರಳು. ಮೂಕವೇದನೆ ಪ್ರತಿಭಟನೆಗೆ ದಾರಿಮಾಡಿ ಕೊಡುತ್ತಿದೆ. ಸಮಾಜ, ಧರ್ಮ ಅವಳನ್ನು ಹೆಚ್ಚು ಕಾಲ ತುಳಿದಿಡಲಾರದು. ತನಗೆ ಒಂದು ಸ್ಥಾನಮಾನ ನೀಡದ, ತನ್ನನ್ನು ಒಬ್ಬ ಮಾನವಳಾಗಿ ಕಾಣದ ಸಮಾಜದ ಬಗ್ಗೆ, ಧರ್ಮದ ಬಗ್ಗೆ ಅವಳ ಧಿಕ್ಕಾರವಿದೆ.

ಈ ಬದಲಾದ ಪರಿಸ್ಥಿತಿಯನ್ನು ಅರಿತೇ ನಮ್ಮ ದೇಶವೂ ಹಿಂದೂ ವಿವಾಹ ಶಾಸನದಲ್ಲಿ ಬದಲಾವಣೆಯನ್ನು ತರಲು ಇಚ್ಛಿಸಿತು. ಹಿಂದೂ ಶಾಸನವನ್ನು ಕ್ರೋಢೀಕರಿಸಲು, ಸುಧಾರಣೆಗಳನ್ನು ಸೂಚಿಸಲು ೧೯೪೧ರಲ್ಲಿ ಬ್ರಿಟಿಷ್ ಸರ್ಕಾರವು ನ್ಯಾಯಾಧೀಶ ಶ್ರೀ ಬೆನಗಲ್ ನರಸಿಂಗರಾವ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯು ದೇಶಾದ್ಯಂತ ಸಂಚರಿಸಿ, ಅಭಿಪ್ರಾಯಗಳನ್ನು ಸಂಗ್ರಹಿಸಿ ಫೆಬ್ರುವರಿ ೨೧, ೧೯೪೭ ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತು. ಮಸೂದೆಯ ಕರಡೂ ಸಿದ್ಧಗೊಂಡಿತು. ಹಾಗಿದ್ದರೂ ಅದು ಶಾಸನದ ರೂಪ ಪಡೆಯಲು ೮ ವರ್ಷ ಕಾಯಬೇಕಾಯಿತು. ೧೯೫೫ರಲ್ಲಿ, ಅನೇಕ ಹಿಂದೂ ಸಂಪ್ರದಾಯವಾದಿಗಳ ವಿರೋಧವಿದ್ದರೂ "ಹಿಂದೂ ವಿವಾಹ ಶಾಸನ" ಜಾರಿಗೆ ಬಂದಿತು. ಸ್ತ್ರೀಯರಿಗೂ ವಿವಾಹ ವಿಚ್ಛೇದನದ ಹಕ್ಕು ದೊರೆಯಿತು. ವಿಚ್ಛೇದನ ಪಡೆಯುವ ಮನಸ್ಸಿಲ್ಲದಿದ್ದಲ್ಲಿ, ಪತಿಯಿಂದ ಬೇರೆಯಾಗಿದ್ದೂ, ಜೀವನಾಂಶ ಪಡೆಯುವ ಹಕ್ಕನ್ನೂ ನೀಡಿತು. ೧೯೭೬ರಲ್ಲಿ ಕೆಲವು ತಿದ್ದುಪಡಿಗಳಾಗಿ ಸ್ತ್ರೀಯರಿಗೆ ಮತ್ತಷ್ಟು ಹಕ್ಕುಗಳು ದೊರೆತವು. ವಿವಾಹ ವಿಚ್ಛೇದನ ಪಡೆಯುವುದು ಸುಲಭವಾಯಿತು.

"ಇಬ್ಬರೂ ಸೇರಿಕೊಂಡು, ತಮಗೆ ಒಟ್ಟಿಗೇ ಸಂಸಾರ ನಡೆಸಲು ಸಾಧ್ಯ ಆಗುವುದಿಲ್ಲವೆಂದು ಹೇಳಿದರೆ ಸಾಕಂತೆ, ವಿವಾಹ ವಿಚ್ಛೇದನ ಸಿಕ್ಕುಬಿಡುತ್ತದೆಯಂತೆ! ಏನು ಅನ್ಯಾಯ, ಕಾಲ ಕೆಟ್ಟುಹೋಯಿತು" ಎಂದು ಅನೇಕರು ಉದ್ಗಾರ ತೆಗೆಯುವುದುಂಟು. ಇದಕ್ಕೆ ೧೯೭೬ರಲ್ಲಿ ಹಿಂದೂ ವಿವಾಹ ಅಧಿನಿಯಮಕ್ಕೆ ತಂದ ತಿದ್ದುಪಡಿಯೇ ಕಾರಣ. ಈ ರೀತಿಯ ಉದ್ಗಾರ ತೆಗೆಯುವವರು ಸಾಮಾನ್ಯವಾಗಿ, "ದೇವರು ಒಂದುಗೂಡಿಸಿದುದನ್ನು ಯಾವ ಮಾನವನೂ ಬೇರ್ಪಡಿಸಬಾರದು" ಎಂಬ ತತ್ವದಲ್ಲಿ ನಂಬಿಕೆ ಉಳ್ಳವರು ಆಗಿರುತ್ತಾರೆ. ಇವರಿಗೆ ವಿವಾಹ ವ್ಯವಸ್ಥೆಯ ಪಾವಿತ್ರ್ಯತೆ ಹಾಗೂ ಪ್ರಾಚೀನತೆಯ ಬಗ್ಗೆ ಬಲವಾದ ಅಭಿಮಾನವಿರುವುದರಿಂದ, ಇಂದಿನ ಬದಲಾದ ಜೀವನಮೌಲ್ಯಗಳನ್ನು, ಮೂಲಭೂತವಾದ ಮಾನವ ಘನತೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ. ಇಂತಹವರಿಗೆ ಪುರುಷನ ನೆರಳಾಗಿ ಇರುವ ಸ್ತ್ರೀಯೆಂದರೆ ಬಲುಮೆಚ್ಚು. ರೋಗಿಯಾದ ಗಂಡ ವೇಶ್ಯೆಯ ಮನೆಗೆ ಹೋಗಬೇಕೆಂದು

ಬಯಸಿದರೆ, ಅವನನ್ನು ತಲೆಯ ಮೇಲೆ ಹೊತ್ತು ವೇಶ್ಯೆಯ ಮನೆಗೆ ಮುಟ್ಟಿಸಿ, ಪತಿಯ ಮನವರಿತು ನಡೆದ ಪತ್ನಿ ಆದರ್ಶ ಹಿಂದೂ ಸತಿಯಾಗಿ ತೋರುತ್ತಾಳೆ. ಅವಳನ್ನು ಪುರಾಣಗಳಲ್ಲಿ ಹಾಡಿ ಹೊಗಳಲಾಗುತ್ತದೆ. ಅವಳೇನಾದರೂ ಇಂತಹ ಕೃತ್ಯಗಳನ್ನು ಪ್ರಶ್ನಿಸಲು ಆರಂಭಿಸಿದರೆ, ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಿದರೆ 'ಹಿಡಂಬಿ'ಯಾಗಿ ಕಾಣಲು ಆರಂಭಿಸುತ್ತಾರೆ.

ಇತ್ತೀಚಿನವರೆಗೆ ವಿವಾಹ ವಿಚ್ಛೇದನ ಅಷ್ಟಾಗಿ ಪ್ರಚಲಿತವಿರಲಿಲ್ಲ. ಪುರುಷನಿಗೆ ಬಹುಪತ್ನಿಯರನ್ನು ಹೊಂದಲು ಅವಕಾಶವಿದ್ದುದರಿಂದ ಅವನಿಗೆ ವಿಚ್ಛೇದನ ಪಡೆಯಲು ಹಕ್ಕಿದ್ದರೂ ಅವಶ್ಯಕತೆ ಇರಲಿಲ್ಲ. ಆದರೆ, ಸ್ತ್ರೀ ವಿಚ್ಛೇದನ ಪಡೆಯುವುದು ಕನಸಿನಲ್ಲಿಯೂ ನೆನೆಸದ ಪಾಪಕಾರ್ಯವೆನಿಸಿತು. ೧೯೫೫ರ ಹಿಂದೂ ವಿವಾಹ ಅಧಿನಿಯಮ ಹಲವಾರು ಕಾರಣಗಳಿಗಾಗಿ ವಿಚ್ಛೇದನ ಪಡೆಯಲು ಸ್ತ್ರೀಯರಿಗೂ ಅವಕಾಶ ಕಲ್ಪಿಸಿಕೊಟ್ಟರೂ, ಅದನ್ನು ಪಡೆಯುವುದು ಬಹುಕಷ್ಟದ ಕೆಲಸವಾಗಿತ್ತು. ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಹಾಕಿದ ಅರ್ಜಿಯಲ್ಲಿ, ವ್ಯಭಿಚಾರಿ, ಕ್ರೌರ್ಯ, ತ್ಯಜಿಸುವಿಕೆ, ಕುಷ್ಠರೋಗ, ಲೈಂಗಿಕವ್ಯಾಧಿ, ಹುಚ್ಚು ಮೊದಲಾದವುಗಳನ್ನು ಪತಿಗೆ ಆರೋಪಿಸಬೇಕಾದುದು ಅನಿವಾರ್ಯವಾದುದರಿಂದ, ಸಹಜವಾಗಿಯೇ ಪತಿಯು ಆ ಅರ್ಜಿಯನ್ನು ವಿರೋಧಿಸಿ ತಾನು ನಿರಪರಾಧಿ ಎನ್ನುತ್ತಾನೆ. ಪರಿಣಾಮವೆಂದರೆ ಅದನ್ನು ಸಾಬೀತುಗೊಳಿಸುವಲ್ಲಿ ವೆಚ್ಚ, ಸಾಕ್ಷಿ ಪುರಾವೆಗಳನ್ನು ಒದಗಿಸಲು ಅಸಮರ್ಥರಾಗುವುದು, ಹಾಗೂ ಮುಖ್ಯವಾಗಿ ಕಾಲಹರಣ. ಇವೆಲ್ಲದರಿಂದ ಹಣ್ಣಾದ ಸ್ತ್ರೀಗೆ ತಾನು ಏಕಾದರೂ ವಿಚ್ಛೇದನ ಬಯಸಿದೆನೋ ಎನ್ನಿಸುವುದು ಸಹಜ.

ಒಪ್ಪಿಗೆಯ ವಿಚ್ಛೇದನ

ವೈವಾಹಿಕ ಮೊಕದ್ದಮೆಗಳಲ್ಲಿ ಸಾಕ್ಷಿ ಪುರಾವೆಗಳನ್ನು ಸಂಗ್ರಹಿಸುವುದೇನು ಸುಲಭದ ಕೆಲಸವಲ್ಲ. ಎಷ್ಟೋಬಾರಿ ತನಗೆ ಒದಗಿದ ಕಷ್ಟಗಳನ್ನು ಅನುಭವಿಸಿದ ಯಾತನೆಗಳನ್ನು ತನ್ನ ಮನದೊಳಗೇ ಬಚ್ಚಿಟ್ಟುಕೊಂಡು ಜೀವನ ಸಾಗಿಸುವುದರಿಂದ, ಹೆಂಡತಿಯ ಹತ್ತಿರದ ಬಂಧುಗಳಿಗೂ ವಿಷಯ ತಿಳಿಯದೇ ಸಾಕ್ಷಿ ಹೇಳುವುದು ಅಸಾಧ್ಯವಾಗುತ್ತದೆ. ಕೆಲವೊಂದು ಸಾರಿ ವಿಷಯಗಳು ಇಡೀ ಬೀದಿಗೇ ಗೊತ್ತಿದ್ದರೂ ಅವನ್ನು ನ್ಯಾಯಾಲಯದಲ್ಲಿ ಕ್ರಮಬದ್ಧವಾಗಿ ಸಾಬೀತುಗೊಳಿಸುವುದು ಅಸಾಧ್ಯವಾಗುತ್ತದೆ. ಇನ್ನು ಕೆಲವು ಸಾರಿ, ಇಬ್ಬರೂ ತಪ್ಪಿತಸ್ಥರಲ್ಲದೆಯೂ ಮಾನಸಿಕ ಹೊಂದಾಣಿಕೆ ಇಲ್ಲದ ಕಾರಣ ಒಟ್ಟಿಗೇ ಸಂಸಾರ ನಡೆಸುವುದು ಅಸಾಧ್ಯ ಆಗಬಹುದು. ಇಂತಹ ಸಂದರ್ಭದಲ್ಲಿ ಇಬ್ಬರಿಗೂ ವಿಚ್ಛೇನನ ಪಡೆದು ಬೇರೆ ಬೇರೆಯಾಗಬೇಕೆನಿಸಿದರೂ ಯಾವುದೇ ನ್ಯಾಯಬದ್ಧ ಕಾರಣವಿಲ್ಲದೇ ವಿಚ್ಛೇದನ ಸಿಗಲಾರದು. ಈ ಎಲ್ಲಾ ಸಂದರ್ಭಗಳಲ್ಲಿ ಮೂಕವಾಗಿ ಯಾತನೆ ಅನುಭವಿಸಬೇಕಾಗುತ್ತದೆಯೇ ಹೊರತು ಬೇಡವಾದ ಬಂಧನವನ್ನು ಕಳಚುವುದು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಕಡಿಮೆ ಸಮಯದಲ್ಲಿ, ಖರ್ಚಿನಲ್ಲಿ ಈ ಎಲ್ಲಾ ಯಾತನೆಯಿಂದ ಪಾರಾಗಲು ಪರಸ್ಪರ ಒಪ್ಪಿಗೆಯಿಂದ ವಿವಾಹ ವಿಚ್ಛೇನನ ಪಡೆಯುವ ಅವಕಾಶವನ್ನು ೧೯೭೬ರ ತಿದ್ದುಪಡಿಯ ಮೂಲಕ ಹಿಂದೂ ವಿವಾಹ ಅಧಿನಿಯಮದಲ್ಲಿ ಕಲ್ಪಿಸಲಾಗಿದೆ.

ಇಂದು ಪತಿ–ಪತ್ನಿಯರು ಒಟ್ಟಿಗೇ ಕೂಡಿ ಒಂದು ಅರ್ಜಿಯನ್ನು ಹಾಕಿ, ತಾವು ವಿವಾಹವಾದ ಮೇಲೆ, ಒಂದು ವರ್ಷಕಾಲಕ್ಕಿಂತ ಹೆಚ್ಚಿಗೆ ಬೇರೆ ಬೇರೆಯಾಗಿರುವುದಾಗಿಯೂ, ತಾವು ಕೂಡಿ ಸಂಸಾರ ನಡೆಸುವುದು ಅಸಾಧ್ಯವೆಂತಲೂ, ತಾವಿಬ್ಬರೂ ವಿವಾಹ ವಿಚ್ಛೇದನ ಪಡೆಯಲು ಪರಸ್ಪರ ಒಪ್ಪಿರುವುದಾಗಿಯೂ ತಿಳಿಸಿದರೆ, ನ್ಯಾಯಾಲಯ ಹೆಚ್ಚಿನದೇನನ್ನೂ ಪ್ರಶ್ನಿಸಲು ಹೋಗದೇ, ವಿವಾಹದ ಬಗ್ಗೆ ನಂಬಿಕೆ ಮೂಡಿದರೆ ಸಾಕು ವಿಚ್ಛೇದನ ನೀಡುತ್ತದೆ. ಇಲ್ಲಿ ಯಾರೂ ಯಾರ ಮೇಲೆ ಆಪಾದನೆ ಮಾಡಬೇಕಾದುದಿಲ್ಲ ಹಾಗೂ ಅದನ್ನು ಸಾಬೀತುಗೊಳಿಸಬೇಕಾದುದಿಲ್ಲ. ಆದರೆ, ಅರ್ಜಿ ಹಾಕಿದ ೬ ತಿಂಗಳವರೆಗೆ ಮಾತ್ರ ವಿಚ್ಛೇದನದ ಆಜ್ಞೆಯನ್ನು ಮಾಡಲು ಬರುವುದಿಲ್ಲ. ಕಾರಣ, ಆ ಆರು ತಿಂಗಳಲ್ಲಿ ಯಾರು ಬೇಕಾದರೂ ತಮ್ಮ ಮನಸ್ಸು ಬದಲಾಯಿಸಿ ಅರ್ಜಿಯನ್ನು ವಾಪಸ್ ಪಡೆಯಬಹುದು. ಅರ್ಜಿ ಹಾಕಿದ ಆರು ತಿಂಗಳ ನಂತರ ಆವರೆ ಹದಿನೆಂಟು ತಿಂಗಳವರೆಗೆ ಅರ್ಜಿದಾರರು ಯಾವಾಗ ಬೇಕಾದರೂ ನ್ಯಾಯಾಲಯದ ಮುಂದೆ ಹಾಜರಾಗಿ ಅರ್ಜಿಯ ಮೇಲೆ ಆಜ್ಞೆ ಮಾಡಲು ಕೇಳಬಹುದು. ನ್ಯಾಯಾಲಯ ಆಜ್ಞೆ ಮಾಡಿದ ದಿನಾಂಕದಿಂದ ವಿಚ್ಛೇದನ ಜಾರಿಗೆಬರುತ್ತದೆ.

ನ್ಯಾಯಾಲಯ ಇಂತಹ ಜಂಟಿ ಅರ್ಜಿಗಳ ಮೇಲೆ ವಿಚ್ಛೇದನ ನೀಡುವಾಗ, ಒಪ್ಪಿಗೆಯನ್ನು ಬಲವಂತದಿಂದ, ಮೋಸದಿಂದ, ಅನುಚಿತ ಪ್ರಭಾವದಿಂದ ಪಡೆಯಲಾಗಿದೆಯೇ ಎನ್ನುವುದರ ಬಗ್ಗೆ ಪರಿಶೀಲಿಸಿ, ಹಾಗೆ ಆಗಿಲ್ಲವೇ ಮನಃಪೂರ್ವಕವಾಗಿ ಒಪ್ಪಿಗೆ ಕೊಡಲಾಗಿದೆಯೆಂದು ಖಾತ್ರಿ ಮಾಡಿಕೊಳ್ಳಬೇಕಾಗುತ್ತದೆ. ಹಾಗೂ, ಇಬ್ಬರೂ ಸೇರಿಕೊಂಡು ನ್ಯಾಯಾಲಯಕ್ಕೆ ಮೋಸ ಮಾಡುತ್ತಿಲ್ಲವೆಂಬುದನ್ನೂ ಖಚಿತ ಪಡಿಸಿಕೊಳ್ಳಬೇಕಾಗುತ್ತದೆ.

ಗೌರವದಿಂದ ಬೀಳ್ಕೊಡಿ

ಪತಿ–ಪತ್ನಿಯರಿಬ್ಬರೂ ದೃಢವಾಗಿ ತಮಗೆ ಒಟ್ಟಿಗೆ ಕೂಡಿರಲು ಸಾಧ್ಯವೇ ಇಲ್ಲವೆಂದು ಹೇಳಿದಾಗ, ತಪ್ಪು ಯಾರದು ಎಂದು ಹುಡುಕುವುದು ನ್ಯಾಯಾಲಯದ ಕರ್ತವ್ಯವಲ್ಲ. "ನಾನು ನಿನ್ನ ಗಂಡನನ್ನು ನ್ಯಾಯಾಲಯದಲ್ಲಿ ನೋಡಿದ್ದೇನೆ. ಬಹಳ ಒಳ್ಳೆಯ ಮನುಷ್ಯ. ಅವನು ನಿನ್ನೊಂದಿಗೆ ಜೀವನ ನಡೆಸಲು ಬಯಸುತ್ತಾನೆ. ವಿವಾಹ ಮುರಿದುಹೋಗಿದೆ ಎಂಬುದನ್ನು ನಾನು ನಂಬಲಾರೆ" ಎಂದು ನ್ಯಾಯಾಲಯ ಹೇಳಲಾರದು. ಹಾಗೇನಾದರೂ ಹೇಳಿದಲ್ಲಿ, "ಕ್ಷಮಿಸಿ, ನೀವೇನು ಅವನ ಬಗ್ಗೆ ತಿಳಿದಿದ್ದೀರೆಂಬುದು ಮುಖ್ಯವಲ್ಲ, ನಾನು ಅವನ ಬಗ್ಗೆ ಏನು ತಿಳಿದಿದ್ದೇನೆ ಎಂಬುದು ಮುಖ್ಯ. ನಾನು ಅವನೊಂದಿಗೆ ಜೀವಿಸಲು ತಯಾರಿಲ್ಲ" ಎಂದು ಪತ್ನಿ ಖಂಡಿತಾ ಉತ್ತರಿಸಬಹುದು. ಆಗ ವಿಚ್ಛೇದನ ನೀಡದೇ ನ್ಯಾಯಾಲಯಕ್ಕೆ ಬೇರೆ ಮಾರ್ಗವೇ ಇರುವುದಿಲ್ಲ. ನ್ಯಾಯಾಲಯಕ್ಕೆ ಈ ಅರ್ಜಿಯ ವಿಚಾರಣೆಯಲ್ಲಿ ಹೆಚ್ಚಿನ ವಿವೇಚನೆಯ ಸ್ವಾತಂತ್ರ್ಯವಿರುವುದಿಲ್ಲ. ಅಷ್ಟೇ ಅಲ್ಲ, ಅರ್ಜಿದಾರರು ಅದಕ್ಕೂ ಮುಂದೆ ಹೋಗಿ "ಇವನಿಗಿಂತ ಇನ್ನೊಬ್ಬ ವ್ಯಕ್ತಿಯೊಂದಿಗೆ ಜೀವಿಸುವುದನ್ನು ನಾನು ಹೆಚ್ಚು ಇಷ್ಟಪಡುತ್ತೇನೆ" ಎಂದೂ ಹೇಳಬಹುದು ಎಂದು ಸರ್

ಜೋಸಲಿನ್ ಸೈಮನ್(ಪಿ.ಸಿ.)ತಮ್ಮ ರಿಡೆಲ್ ಭಾಷಣದಲ್ಲಿ (೧೯೬೦) ಹೇಳುತ್ತಾರೆ ಪುರಾತನ ರೋಮನ್ ಸಾಮ್ರಾಜ್ಯದ ಕಾಲದಲ್ಲಿ, ವ್ಯಕ್ತಿಯೊಬ್ಬ ತನ್ನ ಸ್ನೇಹಿತನ ಮಡದಿಯ ರೂಪ ಗುಣಗಳನ್ನು ಹೊಗಳಿದಾಗ ಆ ಸ್ನೇಹಿತ, ತನ್ನ ಬೆಲೆಬಾಳುವ, ಸುಂದರವಾದ ಪಾದರಕ್ಷೆ ಎಲ್ಲಿ ಕಚ್ಚುತ್ತದೆ ಎನ್ನುವುದು ಆತನಿಗೇನು ತಿಳಿಯುತ್ತದೆ ಎಂದು, ಮಾರುತ್ತರ ಕೊಟ್ಟನಂತೆ. ಅದೇ ತತ್ವ, ಪರಸ್ಪರ ಒಪ್ಪಿಗೆಯಿಂದ ಪಡೆಯುವ ವಿವಾಹ ವಿಚ್ಛೇದನದ ಹಿಂದೆಯೂ ಇದೆ.

ಹಿಂದೂ ವಿವಾಹ ಅಧಿನಿಯಮದಲ್ಲಿ ಸೇರ್ಪಡೆಯಾದ ಈ ತಿದ್ದುಪಡಿ ಬಹಳಷ್ಟು ಕ್ರಾಂತಿಕಾರಕವಾಗಿದೆಯೆಂದೇ ಹೇಳಬೇಕು. ಇದು ವಿಚ್ಛೇದನ ಪಡೆಯುವ ಕ್ರಮವನ್ನು ಸರಳಗೊಳಿಸಿದೆಯಲ್ಲದೇ, ಕಡಿಮೆ ವೆಚ್ಚ, ಶ್ರಮ, ಸಮಯವನ್ನು ಒಳಗೊಂಡಿದೆ. ಆಪಾದನೆಯನ್ನು ಸಾಬೀತುಗೊಳಿಸುವ ಮಾನಸಿಕ ಯಾತನೆಯಿಂದ ಅರ್ಜಿದಾರರನ್ನು ಮುಕ್ತಗೊಳಿಸುತ್ತದೆ. ಪರಸ್ಪರ ಗೌರವ, ಘನತೆಯನ್ನು ಉಳಿಸಿಕೊಂಡು ಬೇರೆ ಬೇರೆಯಾಗಲು, ಜೀವನದ ಬೇರೆ ಬೇರೆ ಕವಲುದಾರಿಯನ್ನು ಅನುಸರಿಸಲು ಅವಕಾಶ ಕೊಟ್ಟಿದೆ. ಇಬ್ಬರು ವ್ಯಕ್ತಿಗಳಿಗೆ ಒಟ್ಟಿಗೇ ಇರಲು ಸಾಧ್ಯವಾಗದ ಕಾರಣಕ್ಕಾಗಿ ಅವರು ಜೀವನಪರ್ಯಂತ ಹಗೆಗಳಾಗಿ ಕಚ್ಚಾಡಬೇಕಾದುದಿಲ್ಲ. ಪರಸ್ಪರ ಗೌರವದಿಂದ ಹೊಸ ಜೀವನಕ್ಕೆ ಬೀಳ್ಕೊಡಬಹುದು. ಈ ತಿದ್ದುಪಡಿಯ ಮತ್ತೊಂದು ಮಹತ್ವದ ಅಂಶವೆಂದರೆ ಅರ್ಜಿ ಹಾಕುವ ಮೊದಲು ಪತಿ–ಪತ್ನಿ ಒಂದು ವರ್ಷ ಕಾಲ ಬೇರೆ ಬೇರೆ ಇದ್ದರೆ ಸಾಕು. ಆದರೆ, ಇಂಗ್ಲೆಂಡಿನಲ್ಲಿ ಆ ಕಾಲವನ್ನು ಎರಡು ವರ್ಷ ಹಾಗೂ ಆಸ್ಟ್ರೇಲಿಯಾ ನ್ಯೂಜಿಲೆಂಡಿನಲ್ಲಿ ೫ ವರ್ಷ ಎಂದು ನಿಗದಿಪಡಿಸಲಾಗಿದೆ.

ಈ ತಿದ್ದುಪಡಿ ಜಾರಿಗೆ ಬಂದ ಮೇಲೆ ವಿಚ್ಛೇದನದ ಸಂಖ್ಯೆ ಜಾಸ್ತಿಯಾಯಿತು ಎಂದು ಅನೇಕರು ಮೂಗುಮುರಿಯಬಹುದು. ಆದರೆ, ಒಂದು ವಿಷಯ ಮಾತ್ರ ಅಂತಹವರು ನೆನಪಿಟ್ಟುಕೊಳ್ಳಬೇಕು.ಬದನೇಕಾಯಿ ಬೆಲೆ ಕಡಿಮೆಯಾಗಿದೆ ಎಂದು ಕೊಳ್ಳುವಂತೆ ತಿದ್ದುಪಡಿಯಾಗಿ ವಿಚ್ಛೇದನ ದೊರೆಯುವುದು ಸುಲಭವಾಗಿದೆ ಎಂದೇನು ಯಾವ ವಿವಾಹಿತ ಸ್ತ್ರೀಯಾದರೂ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸುವುದಿಲ್ಲ.

೨

ಮುಸಲ್ಮಾನರಲ್ಲಿ ವಿವಾಹ ವಿಚ್ಛೇದನ

ವಿವಾಹ ವಿಚ್ಛೇದನ, ಆಸ್ತಿ ಹಕ್ಕು, ಮೊದಲಾದವುಗಳ ಬಗ್ಗೆ ಭಾರತದಲ್ಲಿ ಏಕರೂಪದ ಸಿವಿಲ್ ಶಾಸನವಿಲ್ಲದೇ, ಇಂದಿಗೂ ಪ್ರತಿಯೊಂದು ಧರ್ಮದವರೂ ತಮ್ಮದೇ ಆದ ಧರ್ಮ ಶಾಸನಗಳಿಗೆ ಒಳಪಟ್ಟಿರುವುದರಿಂದ, ಹಿಂದೂಗಳಿಗೆ ಅನ್ವಯವಾಗುವ ನಿಯಮಗಳು ಮುಸಲ್ಮಾನರಿಗಾಗಲೀ, ಕ್ರಿಶ್ಚಿಯನ್ನರಿಗಾಗಲೀ, ಪಾರ್ಸಿಗಳಿಗಾಗಲೀ ಅನ್ವಯಿಸುವುದಿಲ್ಲ. ಅವರೆಲ್ಲರಿಗೂ ತಮ್ಮದೇ ಆದ ಪ್ರತ್ಯೇಕ ನಿಯಮಗಳಿವೆ.

ಮುಸಲ್ಮಾನರಲ್ಲಿ ವಿವಾಹ (ನಿಕಾ), ಪ್ರಾಯಕ್ಕೆ ಬಂದ ಹಾಗೂ ಸ್ವಸ್ಥ ಮನಸ್ಸಿನ ಒಂದು ಗಂಡು ಒಂದು ಹೆಣ್ಣು ಸಂಭೋಗಕ್ಕಾಗಿ, ಸಂತಾನೋತ್ಪತ್ತಿಗಾಗಿ, ಮತ್ತು ಸಂತಾನವನ್ನು ಶಾಸನಬದ್ಧವಾಗಿ ಮಾಡುವ ಉದ್ದೇಶದಿಂದ ಮಾಡಿಕೊಂಡ ಒಂದು ಒಪ್ಪಂದವೇ ಹೊರತು, ಒಂದು ಧಾರ್ಮಿಕ ಸಂಸ್ಕಾರವಲ್ಲ. ವಿವಾಹವನ್ನು ನೆರವೇರಿ

ಸಲು 'ಕಾಜಿ'ಗಳಾಗಲೀ ಮತ್ತಾವುದೇ ಧಾರ್ಮಿಕ ಗುರುಗಳಾಗಲೀ ಅವಶ್ಯಕವಿಲ್ಲ. ಇಬ್ಬರು ಗಂಡಸರು ಅಥವಾ ಇಬ್ಬರುಹೆಂಗಸರು ಮತ್ತು ಒಬ್ಬ ಗಂಡಸಿನ ಮುಂದೆ ಅವರಿಗೆ ಕೇಳುವಂತೆ ಗಂಡಾಗಲೀ, ಹೆಣ್ಣಾಗಲೀ ವಿವಾಹದ ಪ್ರಸ್ತಾಪ ಮಾಡಿದಾಗ, ಎದುರು ಪಕ್ಷದ ಗಂಡು ಅಥವಾ ಹೆಣ್ಣು ಅದನ್ನು ಅಂಗೀಕರಿಸಿದರೆ ವಿವಾಹ ಮುಗಿದಂತೆ. ಇವೆರಡನ್ನೂ ಒಂದೇ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಈ ಒಪ್ಪಂದ ಬರವಣಿಗೆಯಲ್ಲಿ ಇರುವ ಅಗತ್ಯವಿಲ್ಲ. ವಿವಾಹಕ್ಕೆ ಯಾವುದೇ ಧಾರ್ಮಿಕ ವಿಧಿಗಳು ಬೇಕಾಗಿಲ್ಲ. ಆದರೆ ಸಾಮಾನ್ಯವಾಗಿ ಕಾಜಿಗಳು ಎಲ್ಲಾ ವಿವಾಹಗಳನ್ನು ತಮ್ಮ ಪುಸ್ತಕದಲ್ಲಿ ನಮೂದಿಸಿ, ವಧೂವರರ ಒಪ್ಪಿಗೆಯನ್ನು ಅದರಲ್ಲಿ ಪಡೆಯುತ್ತಾರೆ.

ವಿವಾಹ ವೈವಿಧ್ಯ

ಹತ್ತಿರದ ಸಂಬಂಧಿಗಳನ್ನು ವಿವಾಹವಾಗಲು ಮುಸಲ್ಮಾನರಲ್ಲೂ ಅಡ್ಡಿ ಇದೆ. ಮುಸಲ್ಮಾನರ ಪುರುಷನು ಮುಸಲ್ಮಾನ ಹೆಂಗಸಿನ ಜೊತೆಗಾಗಲೀ, 'ಕಿತಾಬಿಯಾ' ಅಂದರೆ ಕ್ರಿಶ್ಚಿಯನ್ ಅಥವಾ ಜೂ ಹೆಂಗಸಿನೊಂದಿಗಾಗಲೀ ವಿವಾಹ ಸಂಬಂಧ ಬೆಳೆಸಬಹುದು. ಆದರೆ, ವಿಗ್ರಹಾರಾಧಕರನ್ನಾಗಲೀ ಅಗ್ನಿಯನ್ನು ಪೂಜಿಸುವವರನ್ನಾಗಲೀ ವಿವಾಹವಾಗಕೂಡದು. ಆದರೆ, ಮುಸಲ್ಮಾನ್ ಮಹಿಳೆಗೆ ಈ ಅಧಿಕಾರವಿಲ್ಲ. ಆಕೆ ಕೇವಲ ಮುಸಲ್ಮಾನ ಪುರುಷನನ್ನು ಮಾತ್ರ ವಿವಾಹವಾಗಬಹುದು.

ಸುನ್ನಿ ಮುಸಲ್ಮಾನನಲ್ಲಿ ಕಾಯಂ ವಿವಾಹವೊಂದನ್ನೇ ಮಾನ್ಯ ಮಾಡಿರುವುದು. ಆದರೆ ಷಿಯಾ ಮುಸಲ್ಮಾನರಲ್ಲಿ ಕಾಯಂ ವಿವಾಹವಲ್ಲದೇ ತಾತ್ಕಾಲಿಕ ವಿವಾಹವನ್ನೂ (ಮುತಾ) ಮಾನ್ಯ ಮಾಡಲಾಗಿದೆ. 'ಮುತಾ' ವಿವಾಹದಲ್ಲಿ ಗಂಡು–ಹೆಣ್ಣು ವಿವಾಹದ ನಿರ್ದಿಷ್ಟ ಅವಧಿಯನ್ನು ಮೊದಲೇ ಗೊತ್ತುಮಾಡಿಕೊಳ್ಳುತ್ತಾರೆ. ಈ ಅವಧಿಯಲ್ಲಿ ಹುಟ್ಟಿದ ಮಕ್ಕಳು ಶಾಸನಬಾಹಿರರಾಗುವುದಿಲ್ಲ. ಈ ವಿವಾಹದಿಂದ ಹೆಂಡತಿಗೆ ಗಂಡನ ಆಸ್ತಿಯಲ್ಲಿ ಯಾವುದೇ ಹಕ್ಕು ಲಭಿಸುವುದಿಲ್ಲ. ಆದರೆ, ಈ ಅವಧಿಯಲ್ಲಿ ಹುಟ್ಟಿದ ಮಕ್ಕಳು ತಂದೆಯ ಆಸ್ತಿಗೆ ಹಕ್ಕುದಾರರಾಗುತ್ತಾರೆ. ವಿವಾಹಕ್ಕೆ ನೀಡಿದ ಒಪ್ಪಿಗೆಯ ಪ್ರತಿಫಲವಾಗಿ ಗೊತ್ತುಮಾಡಿದ ಹಣಕ್ಕೆ ಮಾತ್ರ ಹೆಂಡತಿ ಹಕ್ಕುದಾರಳಾಗುತ್ತಾಳೆ.

ಗೊತ್ತುಮಾಡಿದ ಅವಧಿ ಮುಗಿದ ಕೂಡಲೇ 'ಮುತಾ' ವಿವಾಹ ತನಗೆ ತಾನೇ ರದ್ದಾಗುತ್ತದೆ. ಆದರೆ, ಅದನ್ನು ಪುನಃ ಮುಂದುವರಿಸಬಹುದು. ಅದೇ ರೀತಿ, ಮಧ್ಯದಲ್ಲಿಯೂ ಗಂಡನಾಗಲೀ, ಹೆಂಡತಿಯಾಗಲೀ ವಿವಾಹವನ್ನು ರದ್ದು ಮಾಡಬಹುದು. ಆದರೆ, ಗಂಡನು ರದ್ದು ಮಾಡಿದಾಗ ಪೂರ್ತಿ ಹಣವನ್ನು ಕೊಟ್ಟು ಉಳಿದ ಅವಧಿಯನ್ನು ಬಿಟ್ಟುಕೊಡಬೇಕಾಗುತ್ತದೆ. ಹೆಂಡತಿಯು ರದ್ದು ಮಾಡಿದಾಗ ಉಳಿದಿರುವ ಅವಧಿಗೆ ತಕ್ಕಂತೆ ಪ್ರತಿಫಲದ ಹಣದಲ್ಲಿ ಕಡಿತ ಮಾಡಲಾಗುತ್ತದೆ. ಈ ರೀತಿ ವಿವಾಹವನ್ನು ರದ್ದುಗೊಳಿಸಲು ಪರಸ್ಪರ ಒಪ್ಪಿಗೆಯಾಗಲೀ, ನ್ಯಾಯಾಲಯದ ಅನುಮತಿಯಾಗಲೀ ಬೇಕಿಲ್ಲ. ಈ ರೀತಿಯ ವಿವಾಹವನ್ನು ಇತ್ತೀಚೆಗೆ ಅರಬ್ ದೇಶಗಳಿಂದ ಬಂದ ಪುರುಷರು ಭಾರತದ ಮುಸಲ್ಮಾನ್ ಮಹಿಳೆಯರೊಂದಿಗೆ ಮಾಡಿಕೊಂಡು ಹೋಗುತ್ತಿರುವುದಾಗಿ ಕೇಳುತ್ತಿದ್ದೇವೆ. ಈ ವಿವಾಹದಲ್ಲಿ, ಮಹಿಳೆಗೆ, ಪ್ರತಿಫಲದ ಹಣವನ್ನು ಬಿಟ್ಟರೆ ಯಾವುದೇ ರೀತಿಯ ರಕ್ಷಣೆ ಇರುವುದಿಲ್ಲ.

ಕಾಯಂ ವಿವಾಹದಲ್ಲಿಯೂ ಮುಸಲ್ಮಾನ ಮಹಿಳೆ ಪ್ರತಿಫಲವಾಗಿ ಗೊತ್ತು ಮಾಡಿದ ಹಣ ಅಥವಾ ಆಸ್ತಿಗೆ(ಮೆಹರ್) ಹಕ್ಕುದಾರಳಾಗುತ್ತಾಳೆ. ಈ 'ಮೆಹರ್'ನ್ನು ಅವಳು ವಿವಾಹಕ್ಕೆ ನೀಡಿದ ಒಪ್ಪಿಗೆಯ ಪ್ರತಿಫಲವಾಗಿ ಗೊತ್ತು ಮಾಡಲಾಗುತ್ತದೆ. ಯಾವುದೇ ಮೊತ್ತವನ್ನು 'ಮೆಹರ್' ಆಗಿ ಗೊತ್ತುಮಾಡಬಹುದು. ಇದನ್ನು ಕೇಳಿದಾಗ ಕೊಡಬೇಕು ಎನ್ನುವ ಕರಾರಿನೊಂದಿಗೆ ನಿರ್ಧರಿಸಬಹುದು ಅಥವಾ ಪತಿಯ ಮರಣದ ನಂತರ ಅಥವಾ ವಿವಾಹ ವಿಚ್ಛೇದನದ ನಂತರ ಪಡೆಯಬೇಕು ಎನ್ನುವ ಕರಾರಿನೊಂದಿಗೆ ಗೊತ್ತುಪಡಿಸಬಹುದು. 'ಮೆಹರ್'ನ್ನು ಕೊಡದಿದ್ದಲ್ಲಿ ಅದು ಗಂಡನ ಆಸ್ತಿಯ ಮೇಲೆ ಹೊರಿಸಿದ ಹೊಣೆಯಾಗುತ್ತದೆ.

ಮುಸಲ್ಮಾನ ಮಹಿಳೆಯರೂ, ವಿನಾಕಾರಣ ತಮ್ಮನ್ನು ಪತಿಯು ತ್ಯಜಿಸಿದ್ದರೆ ತಮ್ಮೊಂದಿಗೆ ಬಂದಿದ್ದು, ವೈವಾಹಿಕ ಕರ್ತವ್ಯಗಳನ್ನು ನೆರವೇರಿಸುವಂತೆ ಗಂಡನಿಗೆ ಆದೇಶ ನೀಡಲು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ವಿವಾಹ ವಿಚ್ಛೇದನದ ಅರ್ಜಿಯ ವಿಚಾರಣೆಯ ಸಮಯದಲ್ಲಿ ಜೀವನಾಂಶಬೇಡಬಹುದು. ಸೂಕ್ತಕಾರಣವಿಲ್ಲದೆ ತನ್ನ, ಅಪ್ರಾಪ್ತವಯಸ್ಕ ಮಕ್ಕಳನ್ನು ನೋಡಿಕೊಳ್ಳದೇ ಹೋದಲ್ಲಿ, ಎಲ್ಲರ ಪರವಾಗಿ ಜೀವನಾಂಶ ಕೇಳಿ ಕ್ರಿಮಿನಲ್ ಪ್ರೊಸೀಜರ್‌ಕೋಡ್ ಕೆಳಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.ಕ್ರಿಮಿನಲ್ ಪ್ರೊಸೀಜರ್ ಕೋಡಿನ ಈ ನಿರ್ದಿಷ್ಟ ವಿಧಿಯನ್ನು ಮುಸಲ್ಮಾನರಿಗೆ ಅನ್ವಯಿಸಬಾರದೆಂದು ಕೇಳಿ ಅನೇಕ ಸಂಪ್ರದಾಯವಾದಿ ಮುಸಲ್ಮಾನರು ತಕರಾರು ತೆಗೆದುದುಂಟು. ಆದರೆ, ಈ ಕೋಡಿನ ೧೨೫ ನೇ ವಿಧಿಯು ದುರಾದೃಷ್ಟಶಾಲಿ ಮುಸಲ್ಮಾನ ಮಹಿಳೆಯರಿಗೆ ರಕ್ಷಣೆ ನೀಡುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಯಾವುದೇ ಧರ್ಮದವರು ಈ ವಿಧಿಯ ಉಪಯೋಗ ಪಡೆಯಲು ಅವಕಾಶ ಇರಬೇಕಾದುದು ಅತ್ಯಾವಶ್ಯಕ.

ವಿಚ್ಛೇದನ ಹೇಗೆ?

ಮುಸಲ್ಮಾನ ಪುರುಷರು ವಿವಾಹ ವಿಚ್ಛೇದನ ಹೊಂದಲು ನ್ಯಾಯಾಲಯಕ್ಕೆ ಹೋಗಬೇಕಾದುದಿಲ್ಲ. ನ್ಯಾಯಾಲಯದ ಅನುಮತಿ ಅದಕ್ಕೆ ಅವಶ್ಯಕವಿಲ್ಲ. ಸ್ವಸ್ಥ ಮನಸ್ಸಿನ ಹಾಗೂ ಪ್ರಾಯಕ್ಕೆಬಂದ ಒಬ್ಬ ಮುಸಲ್ಮಾನ್ ಪತಿಯು ಯಾವುದೇಕಾರಣವನ್ನೂ ನೀಡದೇ, ತನಗೆ ಇಷ್ಟಬಂದಾಗ ವಿವಾಹವನ್ನು ಮುರಿದುಕೊಳ್ಳಬಹುದು (ತಲಾಕ್). 'ತಲಾಕ್'ನಲ್ಲಿ ಮೂರುವಿಧಗಳಿವೆ.ಪತ್ನಿಯ ಎರಡು ಋತುಕಾಲದ ನಡುವಿನ ಕಾಲದಲ್ಲಿ ಒಂದು ಬಾರಿ ತಲಾಕನ್ನು ಉಚ್ಚರಿಸುವುದು ಅತ್ಯಂತ ಉತ್ತಮವಾದ ತಲಾಕ್. ಮೂರು ಋತುಕಾಲಗಳ ನಡುವೆ ಮೂರು ಬಾರಿ ತಲಾಕನ್ನು ಉಚ್ಚರಿಸಿ ಆ ಕಾಲದಲ್ಲಿ ಬ್ರಹ್ಮಚರ್ಯೆಯಿಂದಿರುವುದು ಉತ್ತಮವಾದ ತಲಾಕ್. ಎರಡು ಋತುಕಾಲಗಳ ನಡುವಿನ ಒಂದೇ ಸಂದರ್ಭದಲ್ಲಿ ಒಮ್ಮೆಲೇ ಮೂರು ಬಾರಿ ತಲಾಕ್ ಉಚ್ಚರಿಸುವುದು ಅಥವಾ ಕಡಿಮೆ ಕಾಲಾವಧಿಯಲ್ಲಿ ಮೂರು ಬಾರಿ ಒಂದಾದ ನಂತರ ಒಂದರಂತೆ ತಲಾಕ್ ಹೇಳುವುದು ಪಾಪದ ಪದ್ಧತಿ. ಕಾರಣವೆಂದರೆ, ಹಾಗೆ ಮೂರು ಬಾರಿ ಹೇಳಿದ ಕೂಡಲೇ ವಿವಾಹ ವಿಚ್ಛೇದನಗೊಳ್ಳುತ್ತದೆ. ಆದರೆ ಮೊದಲೆರಡು ಪದ್ಧತಿಯಲ್ಲಿ ನಿರ್ದಿಷ್ಟ ಕಾಲಾವಧಿಯ ನಂತರ (ಇದ್ದತ್) ವಿಚ್ಛೇದನ ಪರಿಣಾಮಕಾರಿಯಾಗುತ್ತದೆ. ಮಧ್ಯದಲ್ಲಿ ಬೇಕಾದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು. ತಲಾಕನ್ನು ಬಾಯಲ್ಲಿ

ಉಚ್ಚರಿಸಬಹುದು ಅಥವಾ ಬರವಣಿಗೆಯಲ್ಲಿ (ತಲಾಕ್‌ನಾಮಾ) ಹೇಳಬಹುದು. ಇದನ್ನು ಉಚ್ಚರಿಸುವಾಗ ಹೆಂಡತಿ ಎದುರಿಗಿರಬೇಕೆಂದೇನೂ ಇಲ್ಲ. ಬರವಣಿಗೆಯಲ್ಲಿದ್ದರೂ ಪರಿಣಾಮಕಾರಿಯಾಗಬೇಕಾದರೆ ಹೆಂಡತಿಯ ಗಮನಕ್ಕೆ ಅದು ಬರಬೇಕೆಂದೇನೂ ಇಲ್ಲ. ಆದರೆ, ಈ ರೀತಿ 'ತಲಾಕ್' ಕೊಡುವ ಅಧಿಕಾರ ಮುಸಲ್ಮಾನ ಮಹಿಳೆಯರಿಗಿಲ್ಲ. ಮುಸಲ್ಮಾನ ಪುರುಷಗಿರುವ ಈ ವಿಶೇಷ ಸವಲತ್ತು ಸದಾ ಅವರ ಸ್ತ್ರೀಯರ ತಲೆಯ ಮೇಲೆ ತೂಗಾಡುತ್ತಿರುವ ಹರಿತವಾದ ಕತ್ತಿ. ಬಹುಶಃ ಸ್ತ್ರೀಯರನ್ನು ಸದಾ ತಮ್ಮ ಅಂಕೆಯಲ್ಲಿಡಲು ಪುರುಷನು ಉಪಯೋಗಿಸಬಹುದಾದ ಆಯುಧ ಇದು. 'ಮೆಹರ್' ಗೊತ್ತು ಮಾಡುವ ಉದ್ದೇಶ ತಲಾಕನ್ನು ತಡೆಗಟ್ಟುವುದು ಎಂದು ಕೆಲವರು ತಾತ್ವಿಕವಾಗಿ ವಾದ ಮಾಡಿದರೂ, ಅದನ್ನು ಕಾರ್ಯತಃ ನೋಡಿದಾಗ 'ಮೆಹರ್' 'ತಲಾಕನ್ನು' ತಡೆಗಟ್ಟುವುದರಲ್ಲಿ ಪರಿಣಾಮಕಾರಿಯಾದ ಅಡ್ಡಿಯೇನೂ ಆಗುವುದಿಲ್ಲ.

ನ್ಯಾಯಾಲಯದ ಅನುಮತಿಯ ಅಗತ್ಯವಿಲ್ಲದೇ ವಿಚ್ಛೇದನ ಪಡೆಯಬಹುದಾದ ಇನ್ನೊಂದು ಕ್ರಮವೆಂದರೆ ಪರಸ್ಪರ ಒಪ್ಪಿಗೆಯಿಂದ ವಿವಾಹ ಬಂಧನವನ್ನು ಹರಿಸೊಗೆಯುವುದು, 'ಖುಲಾ' ಪದ್ಧತಿಯ ಪ್ರಕಾರ ಪತ್ನಿಯು ವಿವಾಹ ಬಂಧನದಿಂದ ಬಿಡುಗಡೆ ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಆಗ ಅವಳು ಅದರ ಬದಲಿಗೆ ನೀಡುವ ಪ್ರತಿಫಲ ಪತಿಗೆ ಒಪ್ಪಿಗೆಯಾದರೆ ಪರಸ್ಪರರ ಒಪ್ಪಿಗೆಯಿಂದ ವಿವಾಹ ವಿಚ್ಛೇದನಗೊಳ್ಳುತ್ತದೆ. ಈ ಪದ್ಧತಿಯಲ್ಲಿ ಕರಾರುಗಳ ಬಗ್ಗೆ ಚೌಕಶಿ ನಡೆಸಲು ಅವಕಾಶವಿರುತ್ತದೆ. ಆದರೆ,'ಮುಬಾರಕ್'ಪದ್ಧತಿಯ ಪ್ರಕಾರ ಕೇವಲ ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ಪಡೆಯಬಹುದು. ಪತ್ನಿ ತನ್ನ ಬಿಡುಗಡೆಗೆ ಬೆಲೆ ತೆರಬೇಕಾಗಿಲ್ಲ.

ಕೆಲವೊಮ್ಮೆ ಪತಿಯೇ ಕೆಲವೊಂದು ಸಂದರ್ಭದಲ್ಲಿ ವಿಚ್ಛೇದನ ಪಡೆಯುವ ಹಕ್ಕನ್ನು ಪತ್ನಿಗೆ ಕೊಟ್ಟಿರಬಹುದು. ಉದಾಹರಣೆಗೆ ತಾನು ಇನ್ನೊಂದು ವಿವಾಹವಾದರೆ ಮೊದಲ ಪತ್ನಿ ವಿಚ್ಛೇದನ ಪಡೆಯಬಹುದು ಎಂದು ಪತಿ ಅಧಿಕಾರ ನೀಡಿರಬಹುದು ಎರಡನೆಯ ವಿವಾಹವಾದಕೂಡಲೇ ಪತ್ನಿ ತನಗೆ ಪತಿನೀಡಿರುವ ಅಧಿಕಾರವನ್ನು ಚಲಾಯಿಸಿ ವಿಚ್ಛೇದನ ಪಡೆಯಬಹುದು. ಈ ರೀತಿ ಒಮ್ಮೆ ಕೊಟ್ಟ ಅಧಿಕಾರವನ್ನು ಪತಿಗೆ ಮರಳಿ ಪಡೆಯಲು ಬರುವುದಿಲ್ಲ.

ನಿಯಮಗಳು

ಮುಸಲ್ಮಾನ್ ಮಹಿಳೆ ಯಾವ ಸಂದರ್ಭದಲ್ಲಿ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಹೋಗಬಹುದು ಎನ್ನುವುದರ ಬಗ್ಗೆ ಸಂದೇಹಗಳಿದ್ದುದರಿಂದ ಪ್ರಥಮ ಬಾರಿಗೆ ೧೯೩೯ರಲ್ಲಿ ಈ ಕೆಲವೊಂದು ಸಂದೇಹಗಳನ್ನು ಪರಿಹರಿಸಲು ಹಾಗೂ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಕ್ರೋಢೀಕರಿಸಲು ಬ್ರಿಟಿಷ್ ಸರಕಾರವು ೧೯೩೯ರ ಮುಸಲ್ಮಾನ ವಿವಾಹ ವಿಚ್ಛೇದನ ಅಧಿನಿಯಮ ಜಾರಿಗೆ ತಂದಿತು. ಈ ಅಧಿನಿಯಮದ ಪ್ರಕಾರ ಕೆಳಕಂಡ ಕಾರಣಗಳಿಗಾಗಿ ಇಂದು ಮುಸಲ್ಮಾನ ಮಹಿಳೆ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು:

(೧) ೪ ವರ್ಷಗಳ ಕಾಲ ಪತಿಯ ನೆಲೆ ತಿಳಿಯದಿದ್ದರೆ;

(೨) ಎರಡು ವರ್ಷಗಳ ಕಾಲ ಪತಿ, ಪತ್ನಿಯನ್ನು ತಿರಸ್ಕರಿಸಿ, ಪೋಷಣೆ ಮಾಡದಿದ್ದರೆ;

(೩) ೭ ವರ್ಷಕ್ಕೂ ಹೆಚ್ಚು ಕಾಲ ಪತಿಗೆ ಸೆರೆಮನೆವಾಸದ ಶಿಕ್ಷೆಯಾಗಿದ್ದರೆ;

(೪) ಮೂರು ವರ್ಷ ಕಾಲ ಸಕಾರಣವಿಲ್ಲದೇ, ಪತಿ ತನ್ನ ವೈವಾಹಿಕ ಕರ್ತವ್ಯಗಳನ್ನು ನೆರವೇರಿಸದಿದ್ದರೆ;

(೫) ವಿವಾಹದ ಸಮಯದಲ್ಲಿ ಹಾಗೂ ಅನಂತರವೂ ಪತಿ ಷಂಡನಾಗಿದ್ದರೆ;

(೬) ಎರಡು ವರ್ಷಕಾಲ ಪತಿ ಬುದ್ಧಿ ವಿಕಲತೆ ಹೊಂದಿದ್ದರೆ, ಅಥವಾ ಕುಷ್ಠರೋಗ ಅಥವಾ ಲೈಂಗಿಕ ವ್ಯಾಧಿಯಿಂದ ನರಳುತ್ತಿದ್ದರೆ;

(೭) ತನ್ನ ೧೫ ವರ್ಷ ವಯಸ್ಸಿಗೂ ಮೊದಲು ಪೋಷಕರು ವಿವಾಹ ಮಾಡಿಕೊಟ್ಟಿದ್ದಾಗ, (ಇನ್ನೂ ಸಮಾಗಮವಾಗಿಲ್ಲದಿದ್ದರೆ) ತನ್ನ ೧೮ ವರ್ಷದ ಮೊದಲು ವಿವಾಹವನ್ನು ಧಿಕ್ಕರಿಸಿದ್ದರೆ; (ಮುಸಲ್ಮಾನ ವರನಿಗೂ ಈ ಅಧಿಕಾರ ಇದೆ.)

(೮) ಪತಿಯು ತನ್ನನ್ನು ಕ್ರೌರ್ಯದಿಂದ ನಡೆಸಿಕೊಂಡರೆ;

(೯) ಮುಸ್ಲಿಂ ಶಾಸನದ ಪ್ರಕಾರ ಮತ್ತಾವುದೇ ಕಾರಣವಿದ್ದರೆ.

ವಿಚ್ಛೇದನ ಪರಿಣಾಮಕಾರಿಯಾಗಿ ಜಾರಿಗೆ ಬಂದ ಕೂಡಲೇ ಮುಸಲ್ಮಾನ್ ಮಹಿಳೆಯಾಗಲೀ ಪುರುಷನಾಗಲೀ ಪುನರ್ ವಿವಾಹವಾಗಬಹುದು. ವಿಚ್ಛೇದನ ಹೊಂದಿದ 'ಪತಿ–ಪತ್ನಿಯರೇ ಪುನಃ ವಿವಾಹವಾಗಬಹುದು. ಆದರೆ, ಮೂರು ಬಾರಿ 'ತಲಾಕ್' ಉಚ್ಚರಿಸಿ ಪಡೆದ ವಿಚ್ಛೇದನದ ನಂತರ, ಅವರೇ ಪರಸ್ಪರ ವಿವಾಹವಾಗಬೇಕೆಂದಿದ್ದಲ್ಲಿ ಮಾತ್ರ ನೇರವಾಗಿ ಅವಳನ್ನು ವಿವಾಹವಾಗಲು ಬರುವುದಿಲ್ಲ. ಅವಳು ಬೇರೆಯ ಪುರುಷನನ್ನು ವಿವಾಹವಾಗಿ, ಸಮಾಗಮದ ನಂತರ, ಪತಿ ಮರಣ ಹೊಂದಿರಬೇಕು ಅಥವಾ ಅವನಿಂದ ವಿಚ್ಛೇದನ ಪಡೆದಿರಬೇಕು. ಅನಂತರವೇ ಮಾಜಿ ಪತಿ—ಪತ್ನಿಯರಿಗೆ ಎರಡನೆಯ ಬಾರಿ ವಿವಾಹವಾಗಲು ಅವಕಾಶವಾಗುತ್ತದೆ.

ಮುಸಲ್ಮಾನ ಪುರುಷರು ಒಮ್ಮೆಗೇ ೪ ಪತ್ನಿಯರನ್ನು ಹೊಂದಬಹುದು. ಆದರೆ, ಎಲ್ಲರನ್ನೂ ಸರಿಸಮವಾಗಿ ನೋಡಿಕೊಳ್ಳಲು ಸಾಧ್ಯವಾಗದಿದ್ದರೆ ಮಾತ್ರ ಏಕಪತ್ನೀವ್ರತನಾಗಬೇಕೆಂದು ಅವರ ಶಾಸನ ತಿಳಿಸುತ್ತದೆ. ೪ ಜನರಲ್ಲಿ ಒಬ್ಬರಿಗೆ 'ತಲಾಕ್' ಕೊಟ್ಟು, ಅನಂತರ ಬೇಕಾದರೆ ಮತ್ತೊಬ್ಬಳನ್ನು ವಿವಾಹವಾಗಬಹುದು. ಆದರೆ, ಮುಸ್ಲಿಂ ಮಹಿಳೆಗೆ ಈ ಹಕ್ಕಿಲ್ಲ.

೩

ಕ್ರಿಶ್ಚಿಯನ್ ಧರ್ಮದಲ್ಲಿ ವಿಚ್ಛೇದನ

ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳು ವಿಚ್ಛೇದನ ಪಡೆಯಲು ೧೮೬೯ ರ ಭಾರತೀಯ ವಿಚ್ಛೇದನ ಅನುಶಾಸನದ ಕೆಳಗೆ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಬೇಕಾಗುತ್ತದೆ. ಈ ಶಾಸನದ ಕೆಳಗೆ ಪುರುಷನು ವಿಚ್ಛೇದನ ಪಡೆಯಲು ಪತ್ನಿಯ ವ್ಯಭಿಚಾರ ಒಂದನ್ನೇ ಕಾರಣವನ್ನಾಗಿ ಕೊಡಲಾಗಿದೆ. ಆದರೆ, ಪತ್ನಿ ಸ್ತ್ರೀ ವಿಚ್ಛೇದನ ಹೊಂದಲು ಈ ಕೆಳಕಂಡವುಗಳಲ್ಲಿ ಒಂದು ಕಾರಣವಿರಬಹುದು.

(೧) ಪತಿಯು ಬೇರೆ ಧರ್ಮಕ್ಕೆ ಮತಾಂತರ ಹೊಂದಿ ಮತ್ತೊಂದು ವಿವಾಹ ವಾಗಿದ್ದರೆ;

(೨) ನಿಷಿದ್ಧ ಸಂಭೋಗದೊಡನೆ ವ್ಯಭಿಚಾರವೆಸಗಿದ್ದರೆ;

(೩) ವ್ಯಭಿಚಾರವಲ್ಲದೇ ಎರಡನೆಯ ವಿವಾಹವಾಗಿದ್ದರೆ;

(೪) ಅತ್ಯಾಚಾರ, ಪುರುಷ ಮೈಥುನ ಹಾಗೂ ಮೃಗೀಯ ಸಂಭೋಗದ ತಪ್ಪೆಸ ಗಿದ್ದರೆ;

(೫) ವ್ಯಭಿಚಾರವಲ್ಲದೇ ಕ್ರೌರ್ಯದ ನಡವಳಿಕೆ ಇದ್ದರೆ;

(೬) ವ್ಯಭಿಚಾರವಲ್ಲದೇ ಎರಡು ವರ್ಷಕ್ಕೂ ಹೆಚ್ಚು ಕಾಲ ಸಕಾರಣವಿಲ್ಲದೆ ಪತ್ನಿ ಯನ್ನು ತ್ಯಜಿಸಿದ್ದರೆ.

ಈ ಕಾರಣಗಳನ್ನು ಬಿಟ್ಟು ಬೇರೆ ಕಾರಣಗಳು ವಿಚ್ಛೇದನ ದೊರಕಿಸಿಕೊಡಲಾರವು. ಪರಸ್ಪರ ಸಮ್ಮತಿ ಇದ್ದರೂ ಮೇಲ್ಕಂಡ ಕಾರಣವಿಲ್ಲದಿದ್ದಲ್ಲಿ ವಿಚ್ಛೇದನ ದೊರೆಯಲಾರದು. ಅಲ್ಲದೆ ಕೆಳಗಿನ ನ್ಯಾಯಾಲಯವು ವಿಚ್ಛೇದನದ ಡಿಕ್ರಿ ಮಾಡಿದ ನಂತರವೂ, ಆರು ತಿಂಗಳ ನಂತರ, ಅದು ಉಚ್ಚ ನ್ಯಾಯಾಲಯದ ಸಮ್ಮತಿಯ ಮುದ್ರೆಯನ್ನು ಪಡೆಯಬೇಕು, ಇಲ್ಲವಾದರೆ, ವಿಚ್ಛೇದನ ಪರಿಣಾಮಕಾರಿಯಾಗುವುದಿಲ್ಲ. ಇವುಗಳಲ್ಲದೆ ಯಾವುದೇ ಧರ್ಮಕ್ಕೆ, ದೇಶಕ್ಕೆ ಸೇರಿದ ಗಂಡು ಹೆಣ್ಣುಗಳು ೧೯೫೪ರ ವಿಶೇಷ ವಿವಾಹ ಅಧಿನಿಯಮದ ಕೆಳಗೆ ಸಿವಿಲ್ ವಿವಾಹ (ರಿಜಿಸ್ಟರ್ ವಿವಾಹ) ವಾಗ ಬಹುದು. ಆಗ–ವಿಚ್ಛೇದನವನ್ನು ಆ ಅಧಿನಿಯಮದ ಕೆಳಗೇ ಪಡೆಯಬೇಕಾಗುತ್ತದೆ. ಸಾಮಾನ್ಯವಾಗಿ ಹಿಂದೂವಿವಾಹ ಅಧಿನಿಯಮದಲ್ಲಿ ನಮೂದಿಸಲಾಗಿರುವ ಎಲ್ಲಕಾರಣ ಗಳು ಇಲ್ಲಿಯೂ ಇವೆ.

ಪರಿಹಾರವಿಲ್ಲವೆ?

ಒಟ್ಟಿನಲ್ಲಿ, ಬದಲಾದ ಕಾಲ–ಮನೋಭಾವ–ಮೌಲ್ಯಕ್ಕೆ ತಕ್ಕಂತೆ ಹಿಂದೂ ವಿವಾಹ ಅಧಿನಿಯಮದಲ್ಲಿ ಬದಲಾವಣೆ ಆಗುತ್ತ ನಡೆದಿದ್ದರೂ ಮುಸಲ್ಮಾನ ಹಾಗೂ ಕ್ರಿಶ್ಚಿಯನ್ ಶಾಸನದಲ್ಲಿ ಏನೂ ಬದಲಾವಣೆಯಾಗಿಲ್ಲ. ೧೯೩೯ರ ಮುಸಲ್ಮಾನ್ ವಿವಾಹ ವಿಚ್ಛೇದನ ಅಧಿನಿಯಮದ ನಂತರ ಮತ್ತಾವುದೇ ತಿದ್ದುಪಡಿಯಾಗಲೀ, ಶಾಸನವಾಗಲೀ ಜಾರಿಗೆ ಬಂದಿಲ್ಲ. ೧೮೭೨ರ ಭಾರತೀಯ ಕ್ರಿಶ್ಚಿಯನ್ ವಿವಾಹ ಅಧಿನಿಯಮ ಮತ್ತು ೧೮೬೯ರ ಭಾರತೀಯ ವಿಚ್ಛೇದನ ಅಧಿನಿಯಮದನಂತರ ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳಿಗೆ ಅನ್ವಯಿಸುವ ಯಾವುದೇ ಶಾಸನ ಜಾರಿಗೆ ಬಂದಿಲ್ಲ. ಈಗ ಜಾರಿಯಲ್ಲಿರುವ ಈ ಶಾಸನಗಳಲ್ಲಿ ಎಷ್ಟೊಂದು ನ್ಯೂನತೆಗಳು, ಅಸಮಾನತೆ ಕಂಡುಬಂದರೂ ಅವು ಅಲ್ಪ ಸಂಖ್ಯಾತರಿಗೆ ಸಂಬಂಧಪಟ್ಟವು. ಅವರಲ್ಲಿ ಕೈಹಾಕಿದರೆ, ಆ ಧರ್ಮಗಳ ಸಂಪ್ರದಾಯವಾದಿಗಳ ಕೋಪಕ್ಕೆ ಗುರಿ ಆಗಬೇಕಾಗುತ್ತದೆ ಎನ್ನುವ ಏಕ ಮಾತ್ರ ಕಾರಣಕ್ಕಾಗಿ ಅವು ಹಾಗೆಯೇ ಉಳಿದಿವೆ. ಧರ್ಮಶಾಸನಗಳು ರೂಪು ಗೊಂಡ ಕಾಲದಿಂದ ನಾವು ಈಗಾಗಲೇ ಶತ–ಶತಮಾನಗಳು ದಾಟಿಬಂದಿದ್ದೇವೆ.ಎಂದು

ತಿಳಿದಿದ್ದರೂ ಅವರಲ್ಲಿ ಸುಧಾರಣೆ ತರುವುದನ್ನು ಉಗ್ರವಾಗಿ ಖಂಡಿಸುವ ಬೆಂಬಲಿಗರು ಈಗಲೂ ಇದ್ದಾರೆ. ಅಸಹಾಯಕರಾದ ಮಹಿಳೆಯರು, ಬಹುಶಃ ಅದನ್ನು ತಮ್ಮ ಮೇಲೆ ಹೇರಲಾಗಿರುವ ಅನ್ಯಾಯದ ಹೊರೆ ಎಂಬುದನ್ನು ತಿಳಿಯದೇ, ಮೌನವಾಗಿ ಜೀವನ ಸವೆಸುತ್ತಿದ್ದಾರೆ. ಹಿಂದೂ ಮಹಿಳೆ ಸ್ವಾತಂತ್ರ್ಯ, ಸಮಾನತೆಯತ್ತ ಮುನ್ನಡೆಯುವುದನ್ನು ಕಾಣುತ್ತಾ ಮೂಕ ಪ್ರೇಕ್ಷಕರಾಗಿ ಉಳಿದ್ದಾರೆ. ಬಹುಶಃ ಅವರಲ್ಲಿ ಪ್ರತಿಭಟನೆಯ ಕಿಡಿ ಹತ್ತುವವರೆಗೆ ಈ ಪರಿಸ್ಥಿತಿ ಅನಿವಾರ್ಯ. ಅಂತೆಯೇ ಆ ಕಿಡಿ ಹತ್ತದಂತೆ ಎಲ್ಲಾ ಎಚ್ಚರಿಕೆ ವಹಿಸಲಾಗುತ್ತಿದೆ. ಎಲ್ಲಾ ಧರ್ಮದವರಿಗೂ ಅನ್ವಯಿಸುವ ಏಕರೂಪದ ಸಿವಿಲ್ ಶಾಸನ ಇಂದಿನ ಅವಶ್ಯಕತೆ ಎನ್ನುವುದು ಎಲ್ಲರಿಗೂ ತಿಳಿದಿರುವ. ಆದರೆ ಆ ಬಗ್ಗೆ ಏನೂ ಮಾಡಲಾಗದ ಬಹಿರಂಗ ಗುಟ್ಟು.

○

ಮಹಿಳೆ ಮತ್ತು ಉದ್ಯೋಗ

ಚೂಡಾ ರತ್ನ ತಿಗಡಿ

ಕುಟುಂಬದಲ್ಲಿ ಗಂಡು ದುಡಿದು ತರುವ ಯಜಮಾನನಾಗಿ, ಹೆಣ್ಣು ಮಗಳು ಜೋಪಾನ ಮಾಡುವ ಗೃಹಿಣಿಯಾಗಿ ಮತ್ತು ಮಕ್ಕಳು ತಾಯಿ–ತಂದೆಗಳಿಗೆ ವಿಧೇಯರಾಗಿ ಸಮಾಜದ ಏಳ್ಗೆಗೆ ಸಹಾಯಕರು ಎಂಬ ಅಭಿಪ್ರಾಯ ಸಾಮಾನ್ಯವಾದದ್ದು.

ಮನೆಯ ಅಂಗಳದಲ್ಲಿ, ಹೆಣ್ಣು ಮಗಳ ಪಾತ್ರ ಪ್ರಮುಖವಾದದ್ದು. ಆಕೆ ಮನೆಯನ್ನು ಓರಣವಾಗಿಡುವುದಕ್ಕೆ,ಆಹಾರ ತಯಾರಿಸುವುದಕ್ಕೆ,ಮಕ್ಕಳ ಲಾಲನೆ–ಪಾಲನೆಗಳಿಗೆ ಹೆಚ್ಚಿನ ಕಾಲವನ್ನು ವಿನಿಯೋಗಿಸುತ್ತಾಳೆ. ಪತಿ ಮತ್ತು ಮಕ್ಕಳ ಸೇವೆಯನ್ನು ಪ್ರಥಮ ಕರ್ತವ್ಯವೆಂದು ನಂಬಿ ದುಡಿಯುತ್ತಾಳೆ. ಆದ್ದರಿಂದ ಯಾವ ಯಾಂತ್ರಿಕ ಸಹಾಯ ಸೌಕರ್ಯಗಳಿಲ್ಲದ ಹಿಂದಿನ ಕಾಲದಲ್ಲಿ ಗೃಹ ಕೃತ್ಯದ ಕೆಲಸಗಳು ಪರಿಶ್ರಮದ ಮತ್ತು ಹೆಚ್ಚು ಸಮಯ ಹಿಡಿಯುವ ಕೆಲಸಗಳಾಗಿದ್ದವು. ಹಾಗಾಗಿ ಗೃಹಕೃತ್ಯವನ್ನು ನೋಡಿಕೊಂಡು ಗೃಹಿಣಿ ಹೊರಗೆ ದುಡಿಯುವದು ಶ್ರಮದಾಯಕವೆನಿಸಿ ಸಾಧ್ಯವಿರಲಿಲ್ಲ.

ಮೊದಲು ಬೇಸಾಯವು ಸಮುದಾಯಗಳ ಪ್ರಮುಖ ಕಸುಬಾಗಿದ್ದಿತು. ಒಟ್ಟು ಕುಟುಂಬ, ಅಧಿಕ ಸಂತಾನ, ಹೆಣ್ಣು ಗಂಡು ಎಲ್ಲರೂ ಒಟ್ಟಾಗಿ ಹೊಲ ಮನೆಗಳಲ್ಲಿ ದುಡಿಯುವದು ಇವೆಲ್ಲ ಬೇಸಾಯ ಪ್ರಧಾನ ಪದ್ಧತಿಯ ಮುಖ್ಯ ಗುಣಗಳಾಗಿದ್ದವು. ಅನಂತರ ಔದ್ಯೋಗಿಕ ಪ್ರಗತಿಯಾಯಿತು. ಇದರಿಂದ ಸಮಾಜದಲ್ಲಿ ಅನೇಕ ಬದಲಾವಣೆಗಳು ಆದವು. ಔದ್ಯೋಗಿಕ ಪ್ರಗತಿ ಮತ್ತು ತಾಂತ್ರಿಕ ತರಬೇತಿ ಇವುಗಳಿಂದಾಗಿ ದೊಡ್ಡ ಕಾರ್ಖಾನೆಗಳ ಉದಯವಾಯಿತು. ಮೊದಲು ಮೀನುಗಾರಿಕೆ, ಹಾಲು ಮಾರಾಟ ಮತ್ತು ತರಕಾರಿ ಬೆಳೆಯುವದು ಮತ್ತು ಮಾರಾಟ, ಚಿಕ್ಕ ಪುಟ್ಟ ಗುಡಿಕೈಗಾರಿಕೆಗಳು ಮೊದಲಾದ ಸಣ್ಣ ಕಸಬುಗಳು ಹೆಣ್ಣು ಮಗಳ ಪಾಲಿಗೆ ಬಂದಿರಬೇಕು. ಆಕೆ ತನ್ನ ಗೃಹ ಕೃತ್ಯದೊಂದಿಗೆ ಈ ಕಸಬುಗಳನ್ನು ನಡೆಸಿ ಹಣ ಸಂಪಾದಿಸುತ್ತಿದ್ದಳು. ಔದ್ಯೋಗಿಕ ಕ್ರಾಂತಿಯಿಂದ ಸಣ್ಣ ಕಸಬುಗಳು ಹೆಣ್ಣು ಮಗಳ ಕೈ ಬಿಟ್ಟು ಕಾರ್ಖಾನೆಗಳಿಗೆ ಸೇರಿದವು ಅಂದರೆ ಈ ಕಸಬುಗಳನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಖಾನೆಗಳು ನಡಸ ತೊಡಗಿದವು. ಇದರಿಂದ ಗೃಹಕಾರ್ಯ ಉತ್ಪಾದನಾರಹಿತವಾಯಿತು ಮತ್ತು ಗೃಹಿಣಿಯು

ಜೀವನ ಪರಾಧೀನವಾಯಿತು ವಿದ್ಯೆ ಮತ್ತು ತಾಂತ್ರಿಕ ಪ್ರಜ್ಞೆಗೆ ಹೆಚ್ಚಿನ ಮಾನ್ಯತೆ ಮತ್ತು ಧನ ದೊರೆಯ ತೊಡಗಿತು. ಇವರಿಂದ ಮಹಿಳೆಯೂ ಉದ್ಯೋಗದ ಕಡೆಗೆ ಆಕರ್ಷಿತಳಾದಳು.

ಔದ್ಯೋಗಿಕ ಕ್ರಾಂತಿಯ ಫಲವಾಗಿ ಅಧಿಕ ಬೆಲೆ, ವಿಪರೀತ ಸುಂಕಗಳು ಮತ್ತು ಜೀವನದ ಅನಿಶ್ಚಿತತೆ ಉಂಟಾದವು. ಇದರಿಂದ ಸಾಮಾನ್ಯ ಜೀವನ ಕಷ್ಟಕರವಾಯಿತು. ಈ ಕಾರಣಗಳಿಂದ ಮಹಿಳೆಯೂ ಹೊರಗೆ ದುಡಿಯಬೇಕಾಯಿತು. ಧನ ಸಂಪಾದನೆಯ ಆವಶ್ಯಕತೆ ಮತ್ತು ಅದರಿಂದ ದೊರೆಯುವ ಗೌರವ, ಸೌಕರ್ಯಗಳು ಮಹಿಳೆಯನ್ನು ಹೊರಗಿನ ಉದ್ಯೋಗಕ್ಕೆ ಆಕರ್ಷಿಸಿದವು. ಅನೇಕ ಬದಲಾವಣೆಗಳೊಂದಿಗೆ, ಸಮಾಜದಲ್ಲಿ ವರದಕ್ಷಿಣೆ ಪದ್ಧತಿ ಹುಟ್ಟಿಕೊಂಡಿತು. ಇದರಿಂದ ಹೆಣ್ಣು ಮಗಳ ಮದುವೆ ಕಷ್ಟವಾಯಿತು ಮತ್ತು ಮದುವೆಯ ವಯಸ್ಸು ಹೆಚ್ಚತೊಡಗಿತು. ಉದ್ಯೋಗಸ್ಥ ಹೆಣ್ಣು ಮಗಳಿಗೆ ಮದುವೆ ಬಜಾರಿನಲ್ಲಿ ಹೆಚ್ಚಿನ ಬೇಡಿಕೆಯಿದೆ ಎಂಬುದು, ಪೇಪರಿನಲ್ಲಿ ಮದುವೆ ಜಾಹೀರಾತುಗಳನ್ನು ಓದಿದಲ್ಲಿ ತಿಳಿದು ಬರುತ್ತದೆ. ಹಾಗಾಗಿ ಅನೇಕ ತಾಯಿ-ತಂದೆಗಳು ಮಗಳನ್ನು ಉದ್ಯೋಗಕ್ಕೆ ತೊಡಗಿಸಿ, ಗಳಿಸಿದ ಹಣದಿಂದ ಆಕೆಯ ಮದುವೆಯನ್ನು ಮಾಡುವ ಹಂಚಿಕೆ ಮಾಡಬೇಕಾಯಿತು. ಮಹಿಳಾ ಉದ್ಯೋಗ ಪ್ರಗತಿಯನ್ನು ಪಡೆಯಿತು.

ಇಂದಿಗೂ ನಮ್ಮ ದೇಶದಲ್ಲಿ ಉದ್ಯೋಗ ಮಾಡುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ ಸುಮಾರು ೧೫% ನ್ನು ಮೀರಿಲ್ಲ. ಇದರಲ್ಲಿ ಬಹು ಸಂಖ್ಯಾತ ಹೆಣ್ಣು ಮಕ್ಕಳು ದುಡಿಯುವುದು ಮನೆಯ ಆಳಾಗಿ ಅಥವಾ ಹೊಲದ ಕೂಲಿಕಾರರಾಗಿ. ಅಂದರೆ ಮಹಿಳಾ ಉದ್ಯೋಗ ಕೂಲಿಕಾರ ವರ್ಗದಲ್ಲಿ ಹೆಚ್ಚಾಗಿದೆ. ಈಗ ತಾಯಿ ತಂದೆಗಳು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೂ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಇದರಿಂದ ಸ್ತ್ರೀ ವಿದ್ಯಾಭ್ಯಾಸ ಪ್ರಗತಿ ಹೊಂದಿ, ಸ್ತ್ರೀಯರೂ ತಾಂತ್ರಿಕ ತರಬೇತಿ ಪಡೆಯುತ್ತಿದ್ದಾರೆ. ಹಾಗೂ ಅನೇಕ ಉದ್ಯೋಗಗಳಲ್ಲಿ ಕೆಲಸ ಮಾಡಲು ಮುಂದಾಗಿದ್ದಾರೆ. ಇಷ್ಟಾದರೂ ಜೀವನೋಪಾಯದ ದೃಷ್ಟಿಯಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿಲ್ಲ ಎನ್ನಬಹುದು. ಹೆಣ್ಣು ಮಗಳ ಕುಶಲತೆ ಮತ್ತು ಬುದ್ಧಿವಂತಿಕೆಯ ಪ್ರಮಾಣದಲ್ಲಿ ಆಕೆ ಉದ್ಯೋಗ ಮಾಡಲು ಅನುಗುಣವಾದಂತಹ ಶಿಕ್ಷಣ ರೂಪುಗೊಳ್ಳಬೇಕು.

ಇಂದು ಹೆಣ್ಣು ಮಕ್ಕಳು ಮದುವೆಯ ಹಾದಿ ನೋಡುತ್ತಾ ಮಧ್ಯಂತರ ಕಾಲ ನಿರ್ವಹಣೆಗಾಗಿ ಉದ್ಯೋಗ ಮಾಡುವುದು ಸಾಮಾನ್ಯವಾಗಿದೆ. ಮಹಿಳೆ ದುಡಿದು ಸ್ವತಂತ್ರ ವ್ಯಕ್ತಿಯಾಗುವ ಬಗ್ಗೆ ಅಥವಾ ರಾಷ್ಟ್ರ ಸಂಪತ್ತಿಗೆ ನೆರವಾಗುವ ಬಗ್ಗೆ ನಮ್ಮ ಸಮಾಜದಲ್ಲಿ ನಂಬುಗೆಯಿಲ್ಲ. ಆದ್ದರಿಂದ ಹೆಣ್ಣು ಮಗಳ ವಿದ್ಯಾಭ್ಯಾಸ-ತಾಂತ್ರಿಕ ತರಬೇತಿ ಮತ್ತು ಉದ್ಯೋಗ ಇವುಗಳಿಗೆ ಗಮನಕೊಡುವುದಕ್ಕಿಂತ ಆಕೆಯ ಲಗ್ನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ತಾಯಿ-ತಂದೆಗಳು ಮಗಳ ಲಗ್ನಕ್ಕೆ ತಡಬಡಿಸುತ್ತಾರೆ. ವರದಕ್ಷಿಣೆಯ ಭೂತಕ್ಕೆ ಬಲಿ ಸಲ್ಲಿಸುತ್ತಾರೆ.

ಮಾನವ ಆಹಾರ ಉತ್ಪಾದನೆಗೆ ತೊಡಗಿದಾಗಿನಿಂದ ಮಹಿಳೆ ಒಳಗೆ– ಹೊರಗೆ ದುಡಿಯುತ್ತಾ ಬಂದಿದ್ದಾಳೆ. ಆದರೆ ಕೆಲವೇ ವರುಷಗಳಿಂದೀಚೆಗೆ, ಆಕೆ ಧನ ಸಂಪಾದನೆಗಾಗಿ ಹೊರಗಿನ ಉದ್ಯೋಗ ಮಾಡ ತೊಡಗಿದ್ದು ಎನ್ನಬಹುದು. ಅಂತರಾಷ್ಟ್ರೀಯ ಕೂಲಿ ಸಂಘದ ಗಣನೆಯ ಪ್ರಕಾರ ಸ್ತ್ರೀ ಕೂಲಿಕಾರರು, ಕೂಲಿಕಾರ ವರ್ಗದ ಸುಮಾರು $\frac{1}{3}$ ಅಂಶವೆಂದು ತಿಳಿದು ಬಂದರೂ ಸಹ, ಸ್ತ್ರೀಯರು ಸಂಸಾರದ ಮುಖ್ಯ ದುಡಿಮೆಗಾರರೆಂದು ಪರಿಗಣಿಸಲ್ಪಟ್ಟಿಲ್ಲ. ಸ್ತ್ರೀಯರು ಉದ್ಯೋಗ ಮಾಡುವ ಅವಶ್ಯಕತೆ ಇಲ್ಲವೆಂಬ ಭಾವನೆ ಇತ್ತು. ಆದರೆ ಇಂದಿನ ಪರಿಸ್ಥಿತಿ ಬದಲಾಗಿದೆ, ಎಲ್ಲರೂ ಒಳಗೆ– ಹೊರಗೆ ದುಡಿಯುವದು ಅವಶ್ಯಕತೆ ಎನಿಸಿದೆ. ಇದರಿಂದ ಸ್ತ್ರೀಯರೂ ಉದ್ಯೋಗ ಮಾಡಲು ಮುಂದಾಗಿದ್ದಾರೆ ಸ್ತ್ರೀ ಉದ್ಯೋಗವನ್ನು ಕನಿಷ್ಠವೆಂದು ಕಾಣುತ್ತಿದ್ದ ದೃಷ್ಟಿಕೋನ ಬದಲಾಗಿದೆ. ಇಂದು ಸ್ತ್ರೀ ಉದ್ಯೋಗವನ್ನು ಪ್ರಗತಿಯ ಹೆಜ್ಜೆಯೆಂದು ಕಾಣುವ ದೃಷ್ಟಿ ಬಂದಿದೆ.

ಉದ್ಯೋಗಸ್ಥ ಮಹಿಳೆಯ ಸಮಸ್ಯೆಗಳು ಹಲವಾರು. ಈ ಸಮಸ್ಯೆಗಳು ೧) ಸ್ತ್ರೀಯ ವೈವಾಹಿಕ ಜೀವನಗತಿ ೨) ತರಬೇತಿ ಮತ್ತು ವಿದ್ಯಾಭ್ಯಾಸ ೩) ಸಮಾಜದ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ೪) ಮನೆತನದ ಆರ್ಥಿಕ ಪರಿಸ್ಥಿತಿ ಮತ್ತು ಉದ್ಯೋಗಕ್ಕೆ ತೊಡಗಬೇಕಾದ ಅವಶ್ಯಕತೆ ಮತ್ತು ಆಸಕ್ತಿಗಳು— ಇವುಗಳೆಲ್ಲದರ ಮೇಲೆ ಅವಲಂಬಿಸಿರುತ್ತದೆ. ಬದಲಾಗಿರುವ ಆರ್ಥಿಕ ಪರಿಸ್ಥಿತಿ ಮತ್ತು ಮಾರ್ಪಾಡಾಗಿರುವ ವಿಚಾರದಿಂದಾಗಿ, ಪ್ರಗತಿಪರ ಮತ್ತು ಪ್ರಗತಿಗಾಮಿ ರಾಷ್ಟ್ರಗಳಲ್ಲಿ ಮಹಿಳೆಯೂ ಪುರುಷನೊಡನೆ ದುಡಿದು ಸಂಸಾರದ ಭಾರಕ್ಕೆ ಹೆಗಲು ಕೊಡುವಂತೆ ಆಗಿದೆ. ಮತ್ತೊಂದು ಕೈ ದುಡಿಯುವದರಿಂದ ಸಂಸಾರದ ಆರ್ಥಿಕ ಮುಗ್ಗಟ್ಟು ಹಗುರಾಗುತ್ತದೆ ಎಂದು ಪುರುಷನಿಗೂ ಅರಿವಾಗಿದೆ. ಇದರಿಂದ ಮಹಿಳಾ ಉದ್ಯೋಗ ಹೆಚ್ಚು ಪ್ರೋತ್ಸಾಹವನ್ನು ಪಡೆಯುತ್ತಿದೆ.

ಮಹಿಳೆ ಉದ್ಯೋಗವನ್ನು ಕಾಲ ನಿರ್ವಹಣೆಗಾಗಿ ಕೈಗೊಂಡ ಗೌಣ ಕಾರ್ಯದಂತೆ ಪರಿಗಣಿಸಿದರೆ, ಆಕೆಗೆ ದುಡಿಮೆಯಲ್ಲಿ ದಕ್ಷತೆ ಪಡೆದು ಪ್ರಗತಿ ಹೊಂದುವ ಆಸಕ್ತಿ ಇರುವುದಿಲ್ಲ. ದಕ್ಷ ಮತ್ತು ಸಮ ದುಡಿಮೆಗಾರಳಲ್ಲದ ಮಹಿಳೆಗೆ ಹೆಚ್ಚಿನ ತರಬೇತಿಗಾಗಿ ಪ್ರೋತ್ಸಾಹ ದೊರೆಯುವುದಿಲ್ಲ. ಆದ್ದರಿಂದ ಮಹಿಳೆಯರ ಹೆಚ್ಚಿನ ತಾಂತ್ರಿಕ ತರಬೇತಿ ಮತ್ತು ಉನ್ನತ ವಿದ್ಯಾಭ್ಯಾಸಗಳು ವಿರಳವಾಗಿದೆ. ಹಾಗಾಗಿ ಉದ್ಯೋಗಸ್ಥ ಮಹಿಳೆಯರ ಬಹುಪಾಲು ಜನರು ಸಾಮಾನ್ಯ ನೌಕರಿಗಳಲ್ಲಿ ತೃಪ್ತರಾಗುತ್ತಾರೆ.

ಉದ್ಯೋಗಕ್ಕೆ ತೊಡಗಿದ ಮಹಿಳೆ, ದೂರದ ಊರಿನಲ್ಲಿ ಒಂಟಿಯಾಗಿ ನಿಂತು ಕೆಲಸ ಮಾಡಲು ಧೈರ್ಯ ಮಾಡಬೇಕು. ಹಾಗಿಲ್ಲದಲ್ಲಿ ಮಹಿಳಾ ಉದ್ಯೋಗ ಸಮಸ್ಯೆಯಾಗುತ್ತದೆ. ಒಂಟಿಯಾಗಿ ನಿಂತು ಉದ್ಯೋಗದಲ್ಲಿ ತೊಡಗಿದ ಮಹಿಳೆ ದುಷ್ಟರ ಕೈಯಲ್ಲಿ ತೊಂದರೆಗೊಳಗಾಗಬಹುದು. ಮೇಲಧಿಕಾರಿ ಸುಸಂಸ್ಕೃತ ವ್ಯಕ್ತಿ ಇಲ್ಲದಿದ್ದಲ್ಲಿ ಮಹಿಳಾ ಉದ್ಯೋಗದ ಅಗ್ನಿಪರೀಕ್ಷೆಯಾಗುತ್ತದೆ. ಹಾಗಾಗಿ ಸ್ತ್ರೀಯರು

ಕೆಲವು ಕ್ಷೇಮಕರ ಕ್ಷೇತ್ರಗಳಲ್ಲಿ ಮಾತ್ರ ಉದ್ಯೋಗ ಮಾಡಲು ಇಚ್ಛಿಸುತ್ತಾರೆ. ಇಂತಹ ಆರಿಸಿದ ಉದ್ಯೋಗದಿಂದ ಮಹಿಳಾ ಉದ್ಯೋಗದ ಪ್ರಗತಿ ಕುಂಠಿತ ವಾಗುತ್ತದೆ.

ಲಿಂಗ ಭೇದವಿಲ್ಲದೆ, ಸಮ ಕೆಲಸಕ್ಕೆ ಸಮ ಸಂಬಳವೆಂದು ಸರಕಾರದ ಕಾನೂನು ನೀತಿಯಿದೆ. ಆದರೆ ಹೆಣ್ಣುಮಕ್ಕಳು ನೌಕರಿ ಮಾಡಲು ಅವರಿಗೆ ವಿಶೇಷ ಸೌಲಭ್ಯಗಳು ಬೇಕಾಗುತ್ತವೆ. ಹೆಣ್ಣುಮಕ್ಕಳಿಗೆ ಹೆರಿಗೆ ಕಾಲದ ರಜೆ, ರಾತ್ರಿ ಕೆಲಸದಿಂದ ವಿನಾಯಿತಿ, ಹೆಚ್ಚು ಶ್ರಮದಾಯಕ ಕೆಲಸದಿಂದ ವಿನಾಯಿತಿ, ವಿಶೇಷ ವಸತಿ ಸೌಕರ್ಯ ಮತ್ತು ಮಕ್ಕಳ ಪೋಷಣೆಗೆ ಸೌಕರ್ಯ, ಮತ್ತು ಹೆಣ್ಣುಮಕ್ಕಳ ಹಾಸ್ಟಲ್ ಮೊದ ಲಾದ ಸೌಕರ್ಯಗಳನ್ನು ಕೊಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಸ್ತ್ರೀಯರನ್ನು ದುಡಿಮೆಗಾಗಿ ಆರಿಸಿಕೊಳ್ಳುವದು ಕಡಿಮೆ ಎನ್ನಬಹುದು. ವಿಶೇಷ ಸೌಲಭ್ಯಗಳಿಲ್ಲದೆ ಸ್ತ್ರೀಯರು ದುಡಿಮೆ ಮಾಡುವದು ಕಷ್ಟವಾಗುತ್ತದೆ. ಹೊಸ ಜಾಗದಲ್ಲಿ ಮಹಿಳಾ ಹಾಸ್ಟಲ್ ಇಲ್ಲದಿದ್ದಲ್ಲಿ, ಒಂಟಿಯಾಗಿ ನೌಕರಿ ಮಾಡುವ ಉದ್ಯೋಗಸ್ಥ ಮಹಿಳೆಗೆ ತೊಂದರೆಯಾಗುತ್ತದೆ. ಹೀಗಾಗಿ ವರ್ಗವಾದಾಗ, ಸ್ತ್ರೀಯರು ನೌಕರಿಯನ್ನು ಬಿಡಬಹುದು. ಇದರಿಂದ ಮಹಿಳಾ ಉದ್ಯೋಗದ ಪ್ರಗತಿ ಒಂದೇ ಸಮನಾಗಿರದೆ ಏರು ಪೇರಾಗುತ್ತದೆ.

ಮಹಿಳೆಯೂ ಪುರುಷನಂತೆ ದುಡಿಯಬೇಕು, ಸಂಪಾದಿಸಬೇಕು ಎನ್ನುವದು ಸ್ತ್ರೀ ಸಮಾನತೆಯ ಪ್ರಶ್ನೆ ಅಲ್ಲವೇ ಅಲ್ಲ. ಸ್ತ್ರೀ ಸಮಾನತೆ ಎಂದರೆ ವಾರದ ಮೂರು ದಿನ ಗಂಡ ಮನೆ ಕೆಲಸ ನೋಡಿಕೊಂಡರೆ, ಇನ್ನುಳಿದ ದಿನ ಹೆಂಡತಿ ನೋಡಿ ಕೊಳ್ಳುತ್ತಾಳೆ ಎಂಬ ಪೈಪೋಟಿಯ ಸಂಕುಚಿತ ವಿಚಾರವಲ್ಲ. ಹೆಣ್ಣು ಮಗಳ ವ್ಯಕ್ತಿತ್ವ ವಿಕಾಸ ಹೊಂದಿ ಆಕೆ ಸಂಸಾರದ ಒಳಿತಿಗಾಗಿ, ಅದರ ಸಮಸ್ಯೆಗಳನ್ನು ಬಿಡಿಸುವಲ್ಲಿ ಸಮನಾಗಿ ನಿಲ್ಲಬಲ್ಲ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಪಡೆಯುವದು ಎಂಬ ಅರ್ಥದಲ್ಲಿ ತಿಳಿಯಬೇಕು. "ಸ್ತ್ರೀಯರ ಬುದ್ಧಿ ಮೊಣಕಾಲ ಕೆಳಗೆ" ಎಂಬ ಮಾತು ಸ್ತ್ರೀಯರ ವ್ಯಕ್ತಿತ್ವ ವಿಕಾಸ ಹೊಂದದೆ ಸಾಮಾನ್ಯ ಜಗಳದಲ್ಲಿ ಕಮರಿ ಹೋಗುತ್ತದೆ ಎಂಬುದರ ಸೂಚಕ ಎನ್ನಬಹುದು. ಮನೋರೋಗಕ್ಕೆ ಮದ್ದೆಂದರೆ, ಮನಸ್ಸಿಗೆ ಹರುಷವೆನಿಸುವಂತಹ ಕಾರ್ಯದಲ್ಲಿ ತೊಡಗಿ ಬೇಸರವನ್ನು ದೂರಮಾಡಿ ಕೊಳ್ಳುವದು. ಆದ್ದರಿಂದ ಮಹಿಳೆಯು ಉದ್ಯೋಗದಲ್ಲಿ ತೊಡಗುವದರಿಂದ ಆಕೆಯ ಬುದ್ಧಿ ವಿಕಾಸ ಹೊಂದಿ ವಿಶಾಲ ಮನೋಭಾವಕ್ಕೆ ಆಸ್ಪದವಿದೆ. ಉದ್ಯೋಗ ಸ್ತ್ರೀಯರ ಸ್ವತಂತ್ರ ವ್ಯಕ್ತಿತ್ವವನ್ನು ಪ್ರಕಾಶಗೊಳಿಸುತ್ತದೆ.

ಗೃಹಿಣಿಯಾದ ಮಹಿಳೆ ಹೊರಗೆ ದುಡಿಯಲು ಹೋದಾಗ ವಿಶಿಷ್ಟ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಆಕೆ ತಾಯಿ–ಗೃಹಿಣಿ–ದುಡಿಯುವ ಸ್ತ್ರೀ, ಈ ಎಲ್ಲ ಪಾತ್ರ ಗಳನ್ನು ಸಮಂಜಸವಾಗಿ ನಡೆಸಲು ಸಾಧ್ಯವಾಗದೆ ಆಕೆಯ ಮನೆತನ ಅಲಕ್ಷ್ಯಗೊಳ್ಳು ತ್ತದೆ ಎಂಬ ತರ್ಕ ಏಳುತ್ತದೆ. ಸ್ತ್ರೀ ಉದ್ಯೋಗಕ್ಕೆ ಪ್ರಾಮುಖ್ಯತೆ ಕೊಟ್ಟು ಸಂಸಾರ ದಿಂದ ದೂರ ಹೋಗಿಯಾದರೂ ದುಡಿಯಬೇಕೆ ? ಅಥವಾ ಸಂಸಾರದ ಸಾಮೀಪ್ಯಕ್ಕೆ

ಬೆಲೆಕೊಟ್ಟು ಉದ್ಯೋಗ ಬಿಡಬೇಕೆ? ಈ ಪ್ರಶ್ನೆಯನ್ನು ಕೋರ್ಟು ಬಿಡಿಸುವದಕ್ಕಿಂತ ಪತಿ–ಪತ್ನಿಯರು ತಮ್ಮ ಅನುಕೂಲದಂತೆ ಈ ಪ್ರಶ್ನೆ ಬಗೆಹರಿಸಬೇಕು. ಹೆಣ್ಣು ಮಗಳು ತನ್ನ ಉದ್ಯೋಗ–ಸಂಸಾರ ಮತ್ತು ಮಕ್ಕಳ ಸುಸ್ಥಿತಿ ಸಮತೋಲನ ಉಳಿಸಿ ಕೊಳ್ಳಬೇಕು. ಈ ಅರ್ಥದಲ್ಲಿ ಸ್ತ್ರೀ ಉದ್ಯೋಗ ಸಹನೆಯ ಪರಮಾವಧಿ ಎನ್ನಬಹುದು.

ದುಡಿಯುವ ಪತ್ನಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದು ಅದರೊಂದಿಗೆ ವಿಚಾರ ಸ್ವಾತಂತ್ರ್ಯವನ್ನು ಚಲಾಯಿಸುತ್ತಾಳೆ. ಇಂತಹ ಸ್ವತಂತ್ರ ಮನೋಭಾವ ಆಕೆಗೂ ಆಕೆಯ ಪತಿಗೂ ಮನಸ್ತಾಪ ತರಬಹುದು. ಸಂಸಾರದಲ್ಲಿ ಕಸಿಬಿಸಿ ಬೇರೂರಬಹುದು. ಮಕ್ಕಳು ತಲೆತಿರುಕರಾಗಬಹುದು. ಆಧುನಿಕ ಯುಗದ ಆದರ್ಶ ಮಹಿಳೆ ಎಂದರೆ ಮನೆತನ ಮತ್ತು ಉದ್ಯೋಗ ಎರಡನ್ನೂ ದಕ್ಷಳಾಗಿ ನಡೆಸಿಕೊಂಡು ಹೋಗಬಲ್ಲ ವ್ಯಕ್ತಿ, ಆರ್ಥಿಕ ಸೌಲಭ್ಯವನ್ನು ಸಂಸಾರಕ್ಕೆ ಒದಗಿಸಿ, ಸೌಖ್ಯವಾಗಿ ನಡೆಯಬಲ್ಲ ಗೃಹಿಣಿ ಎಂಬ ಆದರ್ಶ ಕಲ್ಪನೆ ವಾಸ್ತವದಿಂದ ದೂರವಾದದ್ದು. ಆರ್ಥಿಕ ಮತ್ತು ವಿಚಾರ ಸ್ವಾತಂತ್ರ್ಯ ಒಂದಕ್ಕೊಂದು ಪೋಷಕವಾದ್ದರಿಂದ, ಸಂಸಾರದ ನಡವಳಿಕೆ, ವಿಕೋಪಕ್ಕೆ ತಿರುಗದೆ ಸಮತೋಲನವಾಗಿ ಉಳಿಯುವಂತೆ ಮಾಡುವಲ್ಲಿ ಪತಿ–ಪತ್ನಿ ಇಬ್ಬರ ಪಾತ್ರವೂ ಮಹತ್ವವಾದದ್ದು. ಇಲ್ಲದಿದ್ದಲ್ಲಿ ಗಳಿಕೆ— ಉದ್ಯೋಗ ಸುಖ ತರದೆ ಕಂಟಕವಾಗಬಹುದು.

ಇಂದು ಬದಲಾಗಿರುವ ಸರಕಾರದ ಧೋರಣೆ, ಕಾಯಿದೆ ಮತ್ತು ಸ್ತ್ರೀ ವಿದ್ಯಾಭ್ಯಾಸ ಪ್ರೋತ್ಸಾಹಗಳು ವಿದ್ಯಾವತಿಯಾದ ಮಹಿಳೆ ತನ್ನ ಪಾಂಡಿತ್ಯ ಪ್ರತಿಭೆಗಳ ಲಾಭ ಪಡೆಯುವಂತೆ ಪ್ರೋತ್ಸಾಹಿಸುತ್ತವೆ. ಇವುಗಳು ಮಹಿಳಾ ಉದ್ಯೋಗಕ್ಕೆ ಅನುಕೂಲ ವಾತಾವರಣ ಕಲ್ಪಿಸಿವೆ. ಉದ್ಯೋಗಸ್ಥ ಮಹಿಳೆ ಹೊರ ಪ್ರಪಂಚದ ಅರಿವಿನಿಂದ ಪತಿಯ ನಿಜ ಸಂಗಾತಿಯಾಗುತ್ತಾಳೆ. ಆದ್ದರಿಂದ ಪತ್ನಿಯನ್ನು ಉದ್ಯೋಗ ಮಾಡುವಂತೆ ಪತಿ ಹುರಿದುಂಬಿಸುವದು ಹೆಚ್ಚಾಗಿ ಕಂಡು ಬಂದಿದೆ. ಆದರೂ ಹಿಂದಿನ ನಡವಳಿಕೆ–ನಂಬಿಕೆಗಳಿಂದ ಯಜಮಾನನಾದ ಪತಿ, ಪತ್ನಿಯ ಮನೆ ಕೆಲಸದಲ್ಲಿ ಸಹಕಾರ ನೀಡಲು ಮುಂದಾಗುವುದಿಲ್ಲ ಹಾಗೆ ಸಹಕಾರ ನೀಡುವುದೆಂದರೆ, ಹೆಂಡತಿಯ ದಾಸರಾದಂತೆ ಎಂಬ ಮನೋಭಾವನೆಯನ್ನು ಕಲ್ಪಿಸಿಕೊಂಡಿದ್ದಾರೆ. ಇಂತಹ ಮೂಢ ಭಾವನೆ ಬದಲಾಗಬೇಕು.

ಉದ್ಯೋಗಸ್ಥ ಗೃಹಿಣಿ ಮತ್ತು ಸಣ್ಣ ಕುಟುಂಬಗಳು ಒಟ್ಟಾಗಿ ಕಾಣಿಸಿ ಕೊಳ್ಳುತ್ತವೆ. ಇದಕ್ಕೆ ಕಾರಣವೆಂದರೆ, ಉದ್ಯೋಗಸ್ಥ ಮಹಿಳೆ ತನ್ನ ಕುಟುಂಬವನ್ನು ಸಮಯೋಚಿತವಾಗಿ ನಿಯಂತ್ರಿಸಬೇಕಾಗುತ್ತದೆ. ಇದರಿಂದ ಕುಟುಂಬ ಯೋಜನೆ ಅನಿವಾರ್ಯವಾಗಿ ನೆರವೇರುತ್ತದೆ.

ಉದ್ಯೋಗಸ್ಥ ತಾಯಿಯ ಮಕ್ಕಳು ಅಲಕ್ಷಗೊಂಡು ಬೆಳೆಯುತ್ತಾರೆಂಬ ಹೆದರಿಕೆಯಿದೆ. ಆದರೆ ನಿಜವಾಗಿ ಹೀಗೆ ಆಗಬೇಕಾಗಿಲ್ಲ. ಹಾಗೆ ನೋಡಿದರೆ, ಮಕ್ಕಳು ತಾಯಿಯ ಜವಾಬ್ದಾರಿಯ ಭಾರವನ್ನು ಅರಿತುಕೊಂಡು, ಸಹಾನುಭೂತಿ, ಸಹಕಾರ ನೀಡುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬಹುದು. ಉದ್ಯೋಗಸ್ಥ ತಾಯಿ ಹೊರ

ಪ್ರಪಂಚದ ಸಂಪರ್ಕದಿಂದ ಹೆಚ್ಚಿನ ಅರಿವು ಪಡೆಯುತ್ತಾಳೆ. ಆದ್ದರಿಂದ ತನ್ನ ಮಕ್ಕಳ ಬುದ್ಧಿ ಮತ್ತು ಅಭಿಲಾಷೆಗಳನ್ನು ಅನುಸರಿಸಿ ಅವರ ಜೀವನಕ್ರಮವನ್ನು ರೂಪಿಸುವಲ್ಲಿ ನೈಜತೆಯಿಂದ ಯೋಚಿಸುತ್ತಾಳೆ. ಭಾವೋದ್ರೇಕವನ್ನು ತಡೆಯುತ್ತಾಳೆ. ಅಂದರೆ ಸತ್ಯಾಸತ್ಯವನ್ನು ತಿಳಿದು ನೈಜ ವಿಚಾರ ಮಾಡುತ್ತಾಳೆ. ಇದರಿಂದ ಮಕ್ಕಳು ತಮ್ಮ ಸಹಜ ಶಕ್ತಿಯಿಂದ ಬೆಳೆಯುತ್ತಾರೆ.

ಇಬ್ಬರೂ ದುಡಿಯುವ ಮನೆಯಲ್ಲಿ, ಗಂಡ–ಸರ್ವಾಧಿಕಾರಿ, ಹೆಂಡತಿ-ಗುಲಾಮಳು ಎಂಬ ಭಾವನೆ ಬೆಳೆಯದೆ ಇಬ್ಬರೂ ಸಮಾನರೆಂಬ ಸಹಕಾರ ಭಾವನೆ ಬೆಳೆಯುತ್ತದೆ. ಹೊಂದಾಣಿಕೆಯ ಸಂಸಾರಕ್ಕೆ ಪತ್ನಿಯ ಉದ್ಯೋಗ ಮಾರಕ ಎಂಬ ಮಾತು ನಿಜವಲ್ಲ. ಹೊಂದಾಣಿಕೆಯು ಪತಿ-ಪತ್ನಿಯರ ಮೂಲ ಮನೋಭಾವನೆ, ನಡವಳಿಕೆಗಳ ಮೇಲೆ ಅವಲಂಬಿಸಿರುತ್ತದೆಯೇ ಹೊರತು ಪತ್ನಿಯ ಉದ್ಯೋಗದ ಮೇಲಲ್ಲ. ಜಗಳಗಂಟರು ಹೇಗಾದರೂ ಜಗಳವಾಡುವವರೆ.

ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿ ತನ್ನ ಕಾರ್ಯ ರಂಗವನ್ನು ವಿಶಾಲ ಮಾಡಿಕೊಳ್ಳಲು ಉದ್ಯೋಗಸ್ಥ ಮಹಿಳೆಗೆ ಹೆಚ್ಚಿನ ಅವಕಾಶವಿದೆ. ಇದರಿಂದ ಸಾಮಾನ್ಯ ಮಹಿಳೆಯ ಕಾಡು ಹರಟೆ ಮತ್ತು ವಸ್ತುಸಂಗ್ರಹ ದಾಹ ಕಡಿಮೆಯಾಗುತ್ತದೆ. ಇಂತಹ ಬದಲಾದ ಧೋರಣೆಯಿಂದ ಮಹಿಳೆಯರು ಸಂಘ ಸಂಸ್ಥೆಗಳನ್ನು ಕಟ್ಟಿ ಸಮಾಜ ಸೇವೆ ಸಲ್ಲಿಸುತ್ತಿರುವದನ್ನು ಕಾಣುತ್ತೇವೆ. ಒಂದು ಸಮಸ್ಯೆಯನ್ನು ನೋಡುವ ಮಹಿಳೆ ಮತ್ತು ಪುರುಷನ ದೃಷ್ಟಿಕೋನದಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಹೆಣ್ಣು ಮಗಳು ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಭಾಗವಹಿಸುವದು ದೇಶದ ಪ್ರಗತಿಯನ್ನು ಸಾಧಿಸುವಲ್ಲಿ ಸಹಾಯಕವಾಗಬಲ್ಲದು. ಮನೆಯ ಹೊರಗೆ ಉದ್ಯೋಗ ಅಥವಾ ಸಮಾಜ ಸೇವೆ ಮಾಡುವ ಸ್ತ್ರೀಯರ ಗೌರವ ಮತ್ತು ಸೌಲಭ್ಯ ಲಾಭಗಳು, ಮನೆಗೆ ಅಂಟಿ ಕುಳಿತ ಸಾಮಾನ್ಯ ಗೃಹಿಣಿಯನ್ನು ಆಕರ್ಷಿಸಿವೆ.

ಉದ್ಯೋಗದಿಂದ ಒದಗುವ ಸ್ವಾತಂತ್ರ್ಯ, ಸೌಲಭ್ಯಗಳು ಅದರ ಅನಾನುಕೂಲತೆಗಳಿಗಿಂತ ಮಿಗಿಲಾದದ್ದು ಎಂಬ ಅರಿವು ಮಹಿಳೆಯರಿಗೆ ಮೂಡಿದೆ. ಆದ್ದರಿಂದ ಮಹಿಳಾ ಉದ್ಯೋಗಸ್ಥರ ಸಂಖ್ಯೆ ಹೆಚ್ಚತೊಡಗಿದೆ.

ಪುರುಷರಂತೆ ಸ್ತ್ರೀಯರೂ ರಾಷ್ಟ್ರದ ಉನ್ನತಿಗಾಗಿ, ಸ್ಥಾನಮಾನಕ್ಕಾಗಿ ಅಪ್ರತ್ಯಕ್ಷವಾಗಿ, ವ್ಯಕ್ತಿ ಸ್ವರೂಪರಹಿತವಾಗಿ ಸ್ಪರ್ಧಿಸಬೇಕು. ಹಾಗಾದರೆ ಮಹಿಳೆ ಮನೆಯಲ್ಲೇ ಕುಳಿತು ಮನೋವಿಕಾಸ ಹೊಂದದೆ, ಅತ್ತೆಯ ಜೊತೆ ಯಜಮಾನಿ ಪಟ್ಟಕ್ಕೆ ಸ್ಪರ್ಧಿಸುವುದು; ಇಲ್ಲವೇ ನೆರೆಯಾಕೆಯ ಜೊತೆ ಒಡವೆ–ವಸ್ತುವಿಗಾಗಿ ಸ್ಪರ್ಧಿಸುವದು; ತಪ್ಪುತ್ತದೆ. ಭಾವೋದ್ರೇಕದ ಉಬ್ಬಿನಲ್ಲಿ ಮಗನನ್ನು ಉಬ್ಬಿಸಿ ಅವನನ್ನು ಕೆಲಸಕ್ಕೆ ಬಾರದ ದಡ್ಡನನ್ನಾಗಿ ಮಾಡುವ ತಪ್ಪು ಕಡಿಮೆಯಾಗುತ್ತದೆ.

ಮಹಿಳಾ ಉದ್ಯೋಗ, ಸಾಮಾಜಿಕ ಸಮಸ್ಯೆಯಾಗದೆ ಸಮಾಜ ಸುಧಾರಣೆಯ ಅಂಗವಾಗುತ್ತದೆ ಎಂದು ಆಶಿಸೋಣ.

ವಿಧವೆಯರ ಸಮಸ್ಯೆಗಳು : ಒಂದು ಅಧ್ಯಯನ

ಎ. ಪಿ. ಕಟ್ಟಿ
ಎಚ್. ವಿ. ನಾಗೇಶ

ಭಾರತದಲ್ಲಿ ವಿಧವೆಯರ ಸಮಸ್ಯೆಗಳು ವಿಪರೀತವಾಗಿದ್ದರೂ ವಿಧವೆಯರ ಬಗೆಗೆ ಇರುವ ಅಧ್ಯಯನಗಳು ಮಾತ್ರ ಬಹು ವಿರಳವಾಗಿವೆ. ದಿಲ್ಲಿಯಲ್ಲಿ, ವಾರಣಾಸಿಯಲ್ಲಿ ಹಾಗೂ ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯಲ್ಲಿ ಮಾಡಿದ ಸಮಾಜ ಶಾಸ್ತ್ರೀಯ ಅಧ್ಯಯನಗಳು ಮಾತ್ರ ಲಭ್ಯವಾಗಿವೆ. ಇತ್ತೀಚೆಗೆ ಬೆಂಗಳೂರು ಮತ್ತಿತರ ಕಡೆ ಅಲ್ಲಲ್ಲಿ ಇಂಥ ಅಧ್ಯಯನಗಳು ಪ್ರಾರಂಭವಾಗಿವೆ. ಭಾರತದಲ್ಲಿ ಸುಮಾರು ೨ ಕೋಟಿ ೩೪ ಲಕ್ಷ ವಿಧವೆಯರು ಇರಬಹುದೆಂದು ಅಂದಾಜು ಮಾಡಲಾಗಿದೆ. ಸಾಧಾರಣವಾಗಿ ವಿಧವೆಯರ ಕುಟುಂಬದಲ್ಲಿ ಸರಾಸರಿ ಐವರು ಸದಸ್ಯರಿದ್ದಾರೆಂದು ಭಾವಿಸಿದರೆ, ವಿಧವೆಯರಿರುವ ಕುಟುಂಬಗಳ ಜನಸಂಖ್ಯೆ ಹನ್ನೊಂದು ಕೋಟಿ ೭ ಲಕ್ಷವೆಂದು ಪರಿಗಣಿಸಬೇಕು. ಅಂದರೆ ವಿಧವೆಯರ ಸಮಸ್ಯೆಗಳ ಬಗೆಗೆ ಪ್ರತ್ಯಕ್ಷ ಅನುಭವವಿರುವವರು ಹನ್ನೊಂದು ಕೋಟಿಗಿಂತ ಹೆಚ್ಚು. ೧೯೮೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಇವರು ಪ್ರತಿಶತ ೧೭ ರಷ್ಟು ಆಗುತ್ತಾರೆ.

ವೈಧವ್ಯ, ಹೆಣ್ಣುಮಕ್ಕಳ ಜೀವನದಲ್ಲಿ ಒಂದು ಅಸಹನೀಯ ಹಾಗೂ ಕಷ್ಟದ ಸಮಯ. ವೈಧವ್ಯ ಒಂದು ಶಾಪವಾಗಿ ಪರಿಣಮಿಸಿದೆ. ವಿಧವೆಯರು ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುತ್ತಾರೆ. ಭಾರತದ ಸಂದರ್ಭದಲ್ಲಿ ವಿಧವೆಯರಾದ ಬಳಿಕ ಹೆಣ್ಣುಮಕ್ಕಳು ಹೆಚ್ಚಾಗಿ ತಮ್ಮ ತವರು ಮನೆಯ ಆಶ್ರಯ ಪಡೆಯುತ್ತಾರೆ. ತವರು ಮನೆಯ ಆಶ್ರಯ ತಪ್ಪಿದರಂತೂ ದೇವರೇ ಗತಿ. ತನ್ನ ಮನೆಯಲ್ಲಿ ಒಡತಿಯಾಗಿ ತನ್ನ ಗಂಡ, ಮಕ್ಕಳು ಹಾಗೂ ಇತರರೊಡನೆ ಸುಖವಾಗಿ ಜೀವನ ಸಾಗಿಸುವ ಸೌಭಾಗ್ಯ ವಿಧವೆಯಾದ ನಂತರ ತಪ್ಪಿಹೋಗುತ್ತದೆ. ಮತ್ತು ವಿಷಮ ಪರಿಸ್ಥಿತಿಯನ್ನು ಎದುರಿಸುವದು ಅನಿವಾರ್ಯವಾಗುತ್ತದೆ.

ಧಾರವಾಡದ ಜೆ.ಎಸ್.ಎಸ್. ಅರ್ಥಶಾಸ್ತ್ರ ಸಂಶೋಧನಾ ಸಂಸ್ಥೆಯು ಧಾರವಾಡ ನಗರದಲ್ಲಿ ಕೈಕೊಂಡ ಅಭ್ಯಾಸದ ಪ್ರಕಾರ, ಕುಟುಂಬದಲ್ಲಿ ದುಡಿಯುವವರ ಪ್ರಮಾಣ ವೈಧವ್ಯ ಪೂರ್ವದಲ್ಲಿ ೨.೨೭ ಇದ್ದದ್ದು ಅಭ್ಯಾಸದ ಸಮಯಕ್ಕೆ ೧.೮೧ಕ್ಕೆ

ಇಳಿಯಿತು. ಕುಟುಂಬದಲ್ಲಿ ದುಡಿಯುವವರ ಪ್ರಮಾಣ ಕಡಿಮೆಯಾದ್ದರಿಂದ ಆರ್ಥಿಕವಾಗಿ ಈ ಕುಟುಂಬಗಳಿಗೆ ಪೆಟ್ಟುಬಿದ್ದಿತು. ಇದೇ ರೀತಿ ಕುಟುಂಬವು ಹೊಂದಿದ ಆಸ್ತಿಪಾಸ್ತಿಯಿಂದ ಬರುವ ಉತ್ಪನ್ನವೂ ಸಹ ವೈಧವ್ಯ ಪ್ರಾಪ್ತವಾದ ನಂತರ ಅನೇಕ ಕುಟುಂಬಗಳಿಗೆ ಸಿಗದೇ ಹೋಯಿತು. ಈ ಸ್ಥಿತಿಯೂ ಸಹ ವಿಧವೆಯರ ಕುಟುಂಬಕ್ಕೆ ಆಘಾತವನ್ನುಂಟುಮಾಡುತ್ತದೆ. ನಮ್ಮ ದೇಶದಲ್ಲಿ ಅತೀ ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣುಮಕ್ಕಳು ಮದುವೆಯಾಗುವುದು ರೂಢಿ. ಇದರ ಪರಿಣಾಮವಾಗಿ ಕೆಲವು ಹೆಣ್ಣುಮಕ್ಕಳು ಅತೀ ಚಿಕ್ಕವಯಸ್ಸಿನಲ್ಲಿಯೇ ವಿಧವೆಯರಾಗುತ್ತಾರೆ. ಈ ಮೊದಲೇ ವಿವರಿಸಿದ ಅಭ್ಯಾಸದ ಪ್ರಕಾರ ವಿಧವೆಯರಾದಾಗಿನ ವಯಸ್ಸು ಸರಾಸರಿ ೩೪ ವರ್ಷ ಇತ್ತು. ಅವರಲ್ಲಿ ಪ್ರತಿಶತ ೨೦ರಷ್ಟು ವಿಧವೆಯರು ತಮ್ಮ ವಯಸ್ಸಿನ ೨೦–೨೪ರ ಗುಂಪಿನಲ್ಲಿದ್ದಾಗಲೇ ವಿಧವೆಯರಾಗಿದ್ದರು. ಅರ್ಧದಷ್ಟು ವಿಧವೆಯರು ವೈಧವ್ಯ ಬಂದಾಗ ೪೫ ವರ್ಷ ವಯಸ್ಸಿಗಿಂತ ಕಡಿಮೆ ಇದ್ದವರೇ ಇದ್ದರು. ಅಂದರೆ ಮದುವೆಯ ವಯಸ್ಸಿನೊಳಗೆಯೇ ಇದ್ದರು. ಪ್ರತಿಶತ ೪೦ರಷ್ಟು ಹೆಣ್ಣುಮಕ್ಕಳು ವೈಧವ್ಯದ ಪೂರ್ವದಲ್ಲಿಯೂ ಮತ್ತು ನಂತರವೂ ಅಶಿಕ್ಷಿತರಾಗಿಯೇ ಉಳಿದರು. ಪ್ರತಿಶತ ೭೬ರಷ್ಟು ವಿಧವೆಯರ ಶಿಕ್ಷಣದ ಅಂತಸ್ತಿನಲ್ಲಿ ಯಾವ ಬದಲಾವಣೆಯೂ ಕಂಡುಬರಲಿಲ್ಲ. ಆದರೆ ಪ್ರತಿಶತ ೨೪ರಷ್ಟು ವಿಧವೆಯರು ವಿಧವೆಯರಾದ ಮೇಲೆ ತಮ್ಮ ಶಿಕ್ಷಣದ ಮಟ್ಟವನ್ನು ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡರೆಂಬುದು ಮುಖ್ಯ ಅಂಶ. ಇವರು ಪಟ್ಟಣ ಪ್ರದೇಶದ ವಿಧವೆಯರಾದ್ದರಿಂದ ಹೀಗಾಗಲು ಸಾಧ್ಯವಾಗಿರಬೇಕು. ಪ್ರತಿಶತ ೭೧ರಷ್ಟು ವಿಧವೆಯರು, ವೈಧವ್ಯ ಪೂರ್ವದಲ್ಲಿ ದುಡಿಯುತ್ತಿರಲಿಲ್ಲ. ಅಂದರೆ ಅವರು ಗಂಡನ ಮೇಲೆ ಅವಲಂಬಿಸಿಕೊಂಡಿದ್ದರು. ಆದರೆ ವೈಧವ್ಯ ಬಂದ ಮೇಲೆ ಈ ಪ್ರಮಾಣ ೫೦ಕ್ಕೆ ತಗ್ಗಿತು. ಅಂದರೆ, ವೈಧವ್ಯ ಬಂದ ಮೇಲೆ ಪ್ರತಿಶತ ೨೧ರಷ್ಟು ವಿಧವೆಯರು ದುಡಿಯಲು ಆರಂಭ ಮಾಡಿದಂತಾಯಿತು. ಆರ್ಥಿಕ ಮುಗ್ಗಟ್ಟು ಈ ಮಹಿಳೆಯರನ್ನು ದುಡಿಯುವಂತೆ ಮಾಡಲು ಒತ್ತಾಯ ತಂದಿರಬಹುದು.

ವಿಧವೆಯರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜೀವನದ ಮೂಲಭೂತ ಆವಶ್ಯಕತೆಗಳಾದ ಆಹಾರ, ವಸ್ತ್ರ ಹಾಗೂ ವಸತಿ ಸಮಸ್ಯೆಗಳನ್ನೂ ಅವರು ಎದುರಿಸಬೇಕಾಗುತ್ತದೆ. ಮಕ್ಕಳ ಶಿಕ್ಷಣ ಹಾಗೂ ಮಕ್ಕಳ ಮದುವೆಯ ಸಮಸ್ಯೆಯನ್ನೂ ಎದುರಿಸಬೇಕಾಗುತ್ತದೆ. ವಿಧವೆಯರ ಆಪ್ತರು ಮೊದಲು ಚೆನ್ನಾಗಿ ನಡಕೊಳ್ಳುತ್ತಿದ್ದರೂ ಸಹ, ವೈಧವ್ಯ ಬಂದ ಮೇಲೆ ಬದಲಾಗುತ್ತಾರೆ. ವಿಧವೆಯರ ಬಗ್ಗೆ ಅನುಕಂಪ ತೋರುವ ಜನ, ಸಹಾನುಭೂತಿ ವ್ಯಕ್ತಪಡಿಸುವ ಜನ ಹಾಗೂ ಸಹಾಯ ಮತ್ತು ಸಹಕಾರ ಕೊಡುವ ಜನ ಬಹಳ ವಿರಳ. ಈ ಕುಟುಂಬದ ಭೆಟ್ಟಿಗೆ ಬರುವ ಜನರ ಪ್ರಮಾಣವೂ ಕೂಡ ವೈಧವ್ಯ ಬಂದ ಮೇಲೆ ಸಾಮಾನ್ಯವಾಗಿ ಕಡಿಮೆಯಾಗುತ್ತದೆ. ಆದರೆ ತವರು ಮನೆಯ ಬಳಗದ ಅಕ್ಕರತೆ ಹಾಗೂ ಅಂತಃಕರಣ ಮುಂದುವರಿಯುತ್ತದೆ. ಮತ್ತು ಅವರು ಮಗಳ ಮನೆಗೆ ಬರುವುದು-ಹೋಗುವುದು ಹೆಚ್ಚಾಗುತ್ತ ಹೋಗುತ್ತದೆ.

ಸಾಂಪ್ರದಾಯಿಕ ಸಮಾಜದಲ್ಲಿ ನಾವು ನಿರೀಕ್ಷಿಸುವಂತೆ ಇಲ್ಲಿಯು ವಿಧವೆಯರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪ್ರಮಾಣ ಕಡಿಮೆಯಾಗಿದೆ. ಮದುವೆ ಇತ್ಯಾದಿ ಮಂಗಲ ಕಾರ್ಯಗಳಲ್ಲಿ ಅವರಿಗೆ ಭಾಗವಹಿಸಲು ಆತಂಕವಿದೆ. ಮುತ್ತೈದೆತನದ ಸೌಭಾಗ್ಯವನ್ನು ಕಳೆದುಕೊಂಡು ದುರ್ದೈವಿಯಾದೆವೆಂಬ ಭಾವನೆ ಇವರಲ್ಲಿ ಪ್ರಖರವಾಗಿದೆ. ಹೀಗಾಗಿ ಸಮಾಜದಿಂದ ಅವರು ದೂರ ಉಳಿಯಲು ಇಚ್ಛೆಪಡುತ್ತಾರೆ.

ಅವರ ಜೀವನದ ಪದ್ಧತಿಯಲ್ಲಿ ಕೂಡ ಬದಲಾವಣೆ ಕಂಡುಬರುತ್ತದೆ. ಹೆಚ್ಚು ವಿಧವೆಯರನ್ನು ಬಡತನ ಆವರಿಸಿಕೊಳ್ಳುತ್ತದೆ. ಆಹಾರ ಮತ್ತು ವಸ್ತ್ರದ ಉಪಯೋಗದಲ್ಲಿ ಅವರು ಕೆಳಮಟ್ಟಕ್ಕೆ ಬರುತ್ತಾರೆ. ವಸತಿ ಸಮಸ್ಯೆಯೂ ಕೆಲ ಸಂದರ್ಭಗಳಲ್ಲಿ ಗಂಭೀರವಾಗಿ ನಿಲ್ಲುತ್ತದೆ. ಹೆಣ್ಣುಮಕ್ಕಳಿಗೆ ಪ್ರಿಯವಾದ ಕುಂಕುಮದ ಉಪಯೋಗವನ್ನು ನಿಲ್ಲಿಸಿಬಿಡಬೇಕಾಗುತ್ತದೆ. ಇದು ಅವರ ಮನಸ್ಸಿನ ಮೇಲೆ ಬಹಳ ನೋವನ್ನು ಉಂಟುಮಾಡುತ್ತದೆ. ಸ್ತ್ರೀಯರು ಹೆಚ್ಚಾಗಿ ಬಾಲ್ಯದಲ್ಲಿ ತಂದೆಯ ಮೇಲೂ, ತಾರುಣ್ಯದಲ್ಲಿ ಗಂಡನ ಮೇಲೂ ಅವಲಂಬಿಸಿರುತ್ತಾರೆ. ಗಂಡನ ಮರಣ ಅವರಿಗೆ ಸಹಿಸಲಾರದ ದುಃಖವನ್ನು ಉಂಟುಮಾಡುತ್ತದೆ. ನಮ್ಮ ಅಧ್ಯಯನದಂತೆ ಪ್ರತಿಶತ ೭೫ರಷ್ಟು ವಿಧವೆಯರಿಗೆ ಅಭದ್ರತೆಯ ಭಾವನೆ ಉಂಟಾಗುತ್ತದೆ. ಮನೆತನದ ಜವಾಬ್ದಾರಿಯನ್ನು ಹೊತ್ತು ಅದನ್ನು ತೂಗಿಸಿಕೊಂಡು ಹೋಗುವವರಲ್ಲಿ ಭಯಗ್ರಸ್ತರಾಗುತ್ತಾರೆ. ಎಷ್ಟೋ ಸಲ ದಾರಿಗಾಣದೆ ವಿಹ್ವಲರಾಗಿರುತ್ತಾರೆ. ಮಾನಸಿಕ ತೊಂದರೆಯೂ ಆಗುತ್ತದೆ.

ವಿಧವೆಯರ ಮಕ್ಕಳ ಸ್ಥಿತಿಗತಿ :

ವೈಧವ್ಯದಲ್ಲಿ ಎದುರಿಸಬೇಕಾದ ಒಂದು ಮುಖ್ಯ ಸಮಸ್ಯೆಯೆಂದರೆ ಮಕ್ಕಳ ಪೋಷಣೆ ಮತ್ತು ಭವಿತವ್ಯ. ವಿಧವೆಯರ ಮಕ್ಕಳನ್ನು ವಿಧವೆಯರ ತಂದೆ ತಾಯಿಗಳಾಗಲಿ ಅಥವಾ ಅಣ್ಣತಮ್ಮಂದಿರಾಗಲಿ ಸಾಕಿ ಸಲಹುವುದನ್ನು ಕಾಣುತ್ತೇವೆ. ಹೀಗಾಗಿ ಅವರಿಗೆ ತಂದೆ ತಾಯಿಗಳ ಮಮತೆ ಮತ್ತು ತರಬೇತಿ ಸಿಗದೇ ಹೋಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ದಾರಿ ತಪ್ಪುವ ಭೀತಿಯೂ ಇರುತ್ತದೆ. ದಿಲ್ಲಿಯಲ್ಲಿ ಕೈಕೊಂಡ ಅಭ್ಯಾಸದ ಪ್ರಕಾರ ಪ್ರತಿಶತ ೬೫ರಷ್ಟು ಚಿಕ್ಕಮಕ್ಕಳು ತಂದೆಯ ಮರಣದ ತರುವಾಯ ಶಿಕ್ಷಣವನ್ನು ನಿಲ್ಲಿಸಿದರೆಂದು ತಿಳಿಯುತ್ತದೆ. ತಂದೆಯ ಮರಣವು ಮಕ್ಕಳ ಶಿಕ್ಷಣಕ್ಕೆ ಕುತ್ತು ತರುತ್ತದೆಂಬ ಅಂಶವನ್ನು ಈ ಅಧ್ಯಯನ ಸ್ಪಷ್ಟವಾಗಿ ಹೊರಗೆಡಹುತ್ತದೆ. ಶಿಕ್ಷಣ ಮತ್ತು ವೃತ್ತಿ ನೈಪುಣ್ಯ ಜೀವನೋಪಾಯಕ್ಕೆ ಮುಖ್ಯ ಎಂದು ಬೇರೆ ಹೇಳಬೇಕಾಗಿಲ್ಲ. ತಂದೆಯ ಮರಣದಿಂದ ಮಕ್ಕಳು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ, ಚಿಕ್ಕಪುಟ್ಟ ಉದ್ಯೋಗ ಮಾಡಿಕೊಂಡು ಉಪಜೀವನವನ್ನು ಸಾಗಿಸಬೇಕಾಗುತ್ತದೆ. ಈ ಅಧ್ಯಯನ ಇನ್ನೂ ಒಂದು ಮುಖ್ಯ ಅಂಶವನ್ನು ಹೊರಗೆಡಹುತ್ತದೆ. ಅದೆಂದರೆ, ವಿಧವೆಯರ ಮಕ್ಕಳಲ್ಲಿ ಪ್ರತಿಶತ ೮೦ರಷ್ಟು ಮಕ್ಕಳು ಮದುವೆಯಾಗದವರೇ ಇದ್ದರು. ಮದುವೆಗೆ ನಿಂತ ಮಕ್ಕಳಿಗೆ ಮದುವೆಯಾಗದೇ ಇರುವ ಯಾತನೆ ಬಹಳ ದೊಡ್ಡದು. ವಿಶೇಷವಾಗಿ ಹೆಣ್ಣುಮಕ್ಕಳ ಗತಿ ಹೇಳುವುದೇ ಬೇಡ.

ಇನ್ನು ಗಂಡುಮಕ್ಕಳ ವಿಷಯ–ಅವರು ತಮ್ಮ ಮದುವೆಯಾದ ಮೇಲೆ ತಾಯಿಯನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಾರೆ. ಇದು ತಾಯಿಗೆ ವಿಶೇಷ ನೋವನ್ನುಂಟು ಮಾಡುತ್ತದೆ. ಹೆಣ್ಣುಮಕ್ಕಳ ಮದುವೆಗೆ ವರದಕ್ಷಿಣೆ ಬಹಳ ಪೀಡೆಯನ್ನು ಕೊಡುತ್ತದೆ. ಮೊದಲೇ ಆರ್ಥಿಕವಾಗಿ ಮುಗ್ಗರಿಸಿದ ಕುಟುಂಬಕ್ಕೆ ಈ ಪಿಡುಗು ಸಂಕಟ ಹುಟ್ಟಿಸುತ್ತದೆ. ಗಂಡನ ಮರಣ ಮಹಿಳೆಯ ಆರೋಗ್ಯವನ್ನು ಕೆಡಿಸಿದ್ದು ಕಂಡು ಬರುತ್ತದೆ.

ವಿಧವಾ ಪುನರ್ವಿವಾಹ

ತಮ್ಮ ಗಂಡಂದಿರು ತೀರಿಕೊಂಡ ಮೇಲೆ ವಿಧವೆಯರು ಸಾಮಾನ್ಯವಾಗಿ ಮರು ಮದುವೆ ಮಾಡಿಕೊಳ್ಳುವದಿಲ್ಲ. ಈ ಪರಿಸ್ಥಿತಿಗೆ ಮುಖ್ಯವಾಗಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಾಗೂ ಇನ್ನಿತರ ಕಾರಣಗಳನ್ನೂ ಕೊಡಬಹುದು. ನೀವು ಮತ್ತೊಮ್ಮೆ ಮದುವೆ ಯಾಕೆ ಮಾಡಿಕೊಳ್ಳುವದಿಲ್ಲ ? ಎಂಬ ಪ್ರಶ್ನೆಗೆ ಮುಖ್ಯವಾಗಿ ಮೂರು ಉತ್ತರಗಳು ಬಂದಿವೆ. (೧) "ನಮಗೆ ಬೆಳೆದುನಿಂತ ಮಕ್ಕಳಿದ್ದಾರೆ. ಮರುಮದುವೆ ಸರಿಕಾಣುವದಿಲ್ಲ." (೨) "ನಾವು ಮತ್ತೆ ಮದುವೆಯಾದರೆ ನಮ್ಮ ಚಿಕ್ಕಮಕ್ಕಳು ಅಲಕ್ಷ್ಯವಾಗುತ್ತವೆ. ಆ ಮಕ್ಕಳೇ ನಮ್ಮ ಸಂಪತ್ತು; ಅವರನ್ನು ಜೋಪಾನ ಮಾಡಿ, ಬೆಳೆಸಿ ಅದರಲ್ಲಿ ನಾವು ತೃಪ್ತಿ ಪಡೆಯುತ್ತೇವೆ." (೩) "ಸಮಾಜ ಮತ್ತು ಧರ್ಮ, ವಿಧವೆಯರ ಮರುಮದುವೆಗೆ ಅನುಕೂಲವಿಲ್ಲ. ಸಮಾಜದ ರೂಢಿಗೆ ವಿರುದ್ಧವಾಗಿ ನಾವು ಮದುವೆ ಮಾಡಿಕೊಳ್ಳಲು ಬಯಸುವುದಿಲ್ಲ." ನಮ್ಮ ಗಮನವನ್ನು ಸೆಳೆದ ಇನ್ನೊಂದು ಮಾತೆಂದರೆ ವಯಸ್ಸಿನಲ್ಲಿ ಚಿಕ್ಕವರಿದ್ದರೂ ಅನೇಕರು "ನಮಗೆ ಇದು ಮದುವೆಯ ವಯಸ್ಸಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಮುಖ್ಯ ಕಾರಣಗಳಿಂದಾಗಿ ಹೆಚ್ಚಾಗಿ ವಿಧವೆಯರು ಮರುಮದುವೆ ಮಾಡಿಕೊಳ್ಳುವದಿಲ್ಲ ಎಂಬ ಅಭಿಪ್ರಾಯಕ್ಕೆ ಬರಬಹುದು. ಕೇವಲ ಮೂರು ಪ್ರತಿಶತ ವಿಧವೆಯರು ಮರುಮದುವೆಗೆ ತಮ್ಮ ಸಮ್ಮತಿ ಇದೆ ಎಂದಿದ್ದಾರೆ.

ಪುನರ್ವಿವಾಹದ ಬಗ್ಗೆ ಅವರ ಒಟ್ಟು ಅಭಿಪ್ರಾಯವೇನು ? ಧಾರವಾಡದ ಅಧ್ಯಯನದ ಪ್ರಕಾರ ಪ್ರತಿಶತ ೬೦ರಷ್ಟು ವಿಧವೆಯರು ಬೇರೆ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳುವದಕ್ಕೆ ಅನುಕೂಲ ಅಭಿಪ್ರಾಯವುಳ್ಳವರಾಗಿದ್ದರು. ಆದರೆ ಪ್ರತಿಶತ ೧೫ರಷ್ಟು ವಿಧವೆಯರು ಬೇರೆ ವಿಧವೆಯರೂ ಸಹ ಪುನರ್ವಿವಾಹ ಮಾಡಿಕೊಳ್ಳಬಾರದೆಂದು ಅಭಿಪ್ರಾಯ ತಾಳಿದವರಾಗಿದ್ದರು. ವಿಧವೆಯರ ತಂದೆಯ ಕಡೆಯ ಆಪ್ತರು ವಿಧವಾವಿವಾಹಕ್ಕೆ ಹೆಚ್ಚು ಅನುಕೂಲ ಮತ ಉಳ್ಳವರಾಗಿದ್ದರು. ಈ ವಿಷಯದಲ್ಲಿ ಇನ್ನೊಂದು ಅಂಶ ಗಮನಾರ್ಹವಾಗಿದೆ. ಅದೆಂದರೆ, ಪುರುಷರು ಪುನರ್ವಿವಾಹಮಾಡಿಕೊಳ್ಳಲು ಅಡ್ಡಿಯಿಲ್ಲ ಎಂದು ವಿಧವೆಯರ ಅಭಿಪ್ರಾಯವಾಗಿತ್ತು. ಹೆಂಗಸಿಗೊಂದು ನ್ಯಾಯ, ಗಂಡಸಿಗೊಂದು ನ್ಯಾಯ ಎಂಬುವುದು ಸರಿಯೇ ಎಂದು ಕೇಳಿದಾಗ ಈ ವಿಧವೆಯರು ಅದರಲ್ಲೇನೂ ತಪ್ಪು ಕಾಣಲಿಲ್ಲ. ಯಾಕೆಂದರೆ, ಸಮಾಜ ಮತ್ತು ಧರ್ಮ ಇದಕ್ಕೆ ಮನ್ನಣೆ ಕೊಟ್ಟಿದೆ.

ವಿಧವೆಯರಿಗಾಗಿ ಕಲ್ಯಾಣ ಕಾಯಕ್ರಮಗಳು

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಮಗು ಗರ್ಭಾಶಯದಲ್ಲಿ ಇದ್ದಾಗಿನಿಂದ ಹಿಡಿದು, ಮರಣೋತ್ತರ ಕ್ರಿಯೆಯವರೆಗೂ ಜಾರಿಯಲ್ಲಿವೆ. ಸ್ವಾತಂತ್ರ್ಯ ಬಂದ ಮೇಲೆ ಭಾರತದಲ್ಲಿ ಕೂಡ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಜಾರಿಯಲ್ಲಿ ತಂದು ಸಾಮಾಜಿಕ ಭದ್ರತೆ ದೊರಕಿಸುವ ಪ್ರಯತ್ನ ಮುಂದುವರಿದಿದೆ. ಆದರೆ ಈ ದಿಸೆಯಲ್ಲಿ ನಾವು ಮುಂದುವರಿದ ರಾಷ್ಟ್ರಗಳ ಮಟ್ಟಕ್ಕೆ ಇನ್ನೂ ತಲುಪಿಲ್ಲ. ನಮ್ಮ ದೇಶದಲ್ಲಿ ನಿರುದ್ಯೋಗಿಗಳು, ರೋಗಪೀಡಿತರು, ಮುದುಕರು, ಅಂಗವಿಕಲರು ಇತ್ಯಾದಿ ಜನರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೆ ದುರ್ದೈವದಿಂದ ವಿಧವೆಯರ ಹಾಗೂ ಅವರ ಮಕ್ಕಳ ಯೋಗಕ್ಷೇಮಕ್ಕೆ ಸರಕಾರದ ಯಾವ ಯೋಜನೆಗಳೂ ಇದ್ದಂತಿಲ್ಲ. ಚಿಕ್ಕಮಕ್ಕಳಿರುವ ಅನಾಥ ವಿಧವೆಯರಿಗೆ ಆಪದ್ಗ್ರಸ್ತ ಮಹಿಳೆಯರ ಪುನರ್ವಸತಿ ಕೇಂದ್ರಗಳೆಂಬ ಸಂಸ್ಥೆಗಳಲ್ಲಿ ಈಚೆಗೆ ಪ್ರವೇಶ ಸಿಗುತ್ತಿದೆಯಾದರೂ ಇವುಗಳು ಬೆರಳ ಮೇಲೆ ಎಣಿಸುವಷ್ಟು ಕಡಿಮೆ ಸಂಖ್ಯೆಯಲ್ಲಿವೆ. ನಮ್ಮ ಅಧ್ಯಯನದಲ್ಲಿ ಕಂಡು ಬಂದ ಸಂಗತಿಯೆಂದರೆ ಎಲ್ಲ ವಿಧವೆಯರೂ ಸರಕಾರವು ತಮ್ಮ ಸಹಾಯಕ್ಕೆ ಬರಬೇಕೆಂದು ಆಶಿಸುತ್ತಾರೆ.

ಗಂಡಂದಿರು ಇರುವಾಗ ಏನೂ ಉಳಿತಾಯ ಮಾಡದೆ ಸತ್ತಿದ್ದರಿಂದ, ತೀರಿಕೊಂಡ ಗಂಡನ ಶವಸಂಸ್ಕಾರಕ್ಕೆ ಕೂಡ ತೊಂದರೆಯಾದ ಉದಾಹರಣೆಗಳಿವೆ. ಮರಣೋತ್ತರ ಕ್ರಿಯೆಗೂ ವಿಧವೆಯರು ಸಾಲ ಮಾಡಿದ ಉದಾಹರಣೆಗಳೂ ಕಡಿಮೆಯಿಲ್ಲ. ದುಡಿಯುತ್ತಿದ್ದ ಗಂಡ ತೀರಿಕೊಂಡ ನಂತರ ಹೊಟ್ಟೆಗೆ ಸಂಚಕಾರವಾಗುವ ಪರಿಸ್ಥಿತಿ ಬರುತ್ತದೆ. ಗಂಡನು ಕೆಲಸ ಮಾಡುತ್ತಲಿದ್ದ ಸರಕಾರ ಅಥವಾ ಸಂಸ್ಥೆ ಕೂಡಲೇ ಅವನ ಹೆಂಡತಿಗೆ ಪ್ರತ್ಯಾನುಕೂಲ ಮಾಡಿಕೊಡುವ ವ್ಯವಸ್ಥೆಯಾಗಬೇಕು. ಎಲ್ಲ ವ್ಯಕ್ತಿಗಳನ್ನೂ ಜೀವವಿಮೆ ಯೋಜನೆಗೆ ಒಳಪಡಿಸಬೇಕು. ಶಿಕ್ಷಣವನ್ನು ಮುಂದುವರಿಸಲು ಬಯಸುವ ವಿಧವೆಯರಿಗೆ ಶಿಕ್ಷಣವನ್ನು ಮುಂದುವರಿಸಲು ಅನುವು ಮಾಡಿಕೊಡಬೇಕು. ಮುಂದೆ ಯಾವುದಾದರೊಂದು ಉದ್ಯೋಗ ಮಾಡಿ ಅವರಿಗೆ ಸ್ವತಂತ್ರ ರೀತಿಯಿಂದ ಜೀವನ ಸಾಗಿಸಲು ಅನುಕೂಲವಾಗುವದು. ಅವರ ಮಕ್ಕಳಿಗೆ ಧನಸಹಾಯ ನೀಡಿ ಶಿಕ್ಷಣದ ಸೌಲಭ್ಯ ಒದಗಿಸಬೇಕು. ಕೈಲಾಗದ ವಿಧವೆಯರಿಗೆ ಸರಕಾರದಿಂದ ಮಾಸಿಕ ಪಿಂಚಣಿ ಸಿಗುವಂತೆ ಆಗಬೇಕು. ಸುಶಿಕ್ಷಿತ ವಿಧವೆಯರು ಹೆಚ್ಚಾಗಿ ಶಿಕ್ಷಕಿಯರಾಗಿ ಅಥವಾ ನರ್ಸ ಆಗಿ ಕೆಲಸ ಮಾಡಲು ಇಚ್ಛಿಸುತ್ತಾರೆ. ಅವರ ಇಚ್ಛೆಗೆ ಅನುಸರಿಸಿ ಅವರಿಗೆ ಅನುಕೂಲ ಮಾಡಿಕೊಡುವದು ಅವಶ್ಯವಿದೆ. ಅಶಿಕ್ಷಿತ ವಿಧವೆಯರಿಗೆ ಕಸೂತಿ, ಹೊಲಿಗೆ ಕೈಗಾರಿಕೆಯ ಕೆಲಸದಲ್ಲಿ ತರಬೇತಿಯನ್ನು ಕೊಟ್ಟು ಅವರ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡಬೇಕು. ಅಸಹಾಯ ಸ್ಥಿತಿಯಲ್ಲಿರುವ ವಿಧವೆಯರಿಗೆ ಅಥವಾ ಅವರ ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಸರಕಾರಿ ಹಾಗೂ ಸರಕಾರೇತರ ಉದ್ಯೋಗಗಳಲ್ಲಿ ಕೆಲವು ಸ್ಥಳಗಳನ್ನು ಮೀಸಲಾಗಿ ಇಟ್ಟು, ಈ ದುರ್ದೈವಿ ಕುಟುಂಬಗಳು ಮುಂದೆಬರಲು ಅನುವು ಮಾಡಿಕೊಡಬೇಕು.

ಉತ್ತರಪ್ರದೇಶ ವಿಧವೆಯರಿಗೆ ಪಿಂಚಣಿ ಕೊಡುತ್ತಿದೆ. ಅಧಿಕಾರಶಾಹಿಯ ಭ್ರಷ್ಟಾಚಾರದಿಂದ ಈ ಪಿಂಚಣಿ ಯೋಜನೆ ಯಶಸ್ವಿಯಾಗಿಲ್ಲ ಎನ್ನುತ್ತಾರೆ. ಏನೇ ಇರಲಿ, ಇತರ ರಾಜ್ಯಸರಕಾರಗಳೂ ವಿಧವೆಯರಿಗೆ ಪಿಂಚಣಿ ಕೊಡಲು ಮುಂದೆ ಬರಬೇಕು. ಕರ್ನಾಟಕ ಸರಕಾರವು ಇತ್ತೀಚೆಗಷ್ಟೆ ಇಂಥ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಅದನ್ನು ಇನ್ನಷ್ಟು ಉದಾರಗೊಳಿಸಿದರೆ ಶ್ರೇಯಸ್ಸುಂಟು.

ಸಮಾಜ ಮತ್ತು ಧರ್ಮ, ವಿಧವಾ ವಿವಾಹಕ್ಕೆ ಸಮ್ಮತಿಸುವದಿಲ್ಲವಾದುದರಿಂದ ಬಹಳಷ್ಟು ವಿಧವೆಯರು ಪುನರ್ವಿವಾಹಕ್ಕೆ ಅನುಕೂಲ ಅಭಿಪ್ರಾಯವುಳ್ಳವರಾಗಿಲ್ಲವೆಂಬುದು ಅಧ್ಯಯನದಿಂದ ಕಂಡುಬರುವ ವಿಷಯ. ಆದುದರಿಂದ ಈ ವಿಷಯದಲ್ಲಿ ಸಮಾಜದ ಮುಖಂಡರ ಹಾಗೂ ಧಾರ್ಮಿಕ ಮುಖಂಡರ ಪಾತ್ರ ಬಹಳ ಮಹತ್ವದ್ದು. ಮಠಾಧಿಪತಿಗಳು ಹಾಗೂ ಧರ್ಮಸುಧಾರಕರು ಈ ವಿಷಯದಲ್ಲಿ ಉದಾರ ನೀತಿತಳೆದು ವಿಧವಾ ವಿವಾಹಕ್ಕೆ ಸಮ್ಮತಿ ಇದೆಯೆಂದು ಸ್ಪಷ್ಟವಾಗಿ ಹೇಳಿದರೆ ವಿವಾಹವಾಗುವ ಯುವವಿಧವೆ ಧೈರ್ಯತಳೆಯುವುದು ಸಾಧ್ಯ. ಹಾಗೆಯೇ ಸರಕಾರವೂ ವಿಧವೆಯರ ಪುನರ್ವಸತಿಗಾಗಿ ಬಹಳ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಶಿಕ್ಷಣ, ತರಬೇತಿ ಉದ್ಯೋಗ ಹಾಗೂ ಧನಸಹಾಯ, ಉಚಿತ ವೈದ್ಯಕೀಯ ಸೇವೆ ಇತ್ಯಾದಿ ಸೌಕರ್ಯಗಳನ್ನು ಪುಕ್ಕಟಿಯಾಗಿ ಒದಗಿಸಿ ವಿಧವೆಯರು ನೆಮ್ಮದಿಯಿಂದ ಜೀವನ ಸಾಗಿಸುವಂತೆ ಮಾಡುವದು ಸರಕಾರದ ಹಾಗೂ ಸಮಾಜದ ಕರ್ತವ್ಯವಾಗಿದೆ.

○



ಕಾಲೇಜಿನ ಒಂದು ಸ್ನೇಹಸಮ್ಮೇಳನ
ಡಾ. ವೃಷಭೇಂದ್ರಸ್ವಾಮಿ ದಂಪತಿಗಳೊಂದಿಗೆ ಮಾತೋಶ್ರೀಯವರು



ಶಿಂ. ವೀರಪ್ಪನವರು ಚನಿವಾರ ಅವರ ಅಂಗಡಿ
ಈ ಹರದರ ಅಂಗಡಿಯಿಂದ ದಾನ ಹರಿದು ಬಂತು

CERTIFICATE OF REGISTRATION

Enq : 397/68

It is here-by notified that, the public Trust described below has this day been duly Registered under the Bombay Public Trust Act, 1950 *(BOM XXIX)* of 1960 at the public Trust's Registration Office, Belgaum Region, Belgaum.

Name of the Public Trust :

Srimati Gangamma Veerappa Chiniwar
Vidya Prasarak Trust, Muddebihal
(Dist : Bijapur)

Number in the Register of Public Trust. : **E-209 (Bjp)**

Certificate issued to

Sri Shankarappa Veerupaxappa Tadasad and 4 others of Muddebihal (Dist : Bijapur)

Given under my hand this 19th day of October, 1969.

Sd.
Assistant Charity Commissioner
Belgaum

ಆಧುನಿಕ ಮಹಿಳೆ ಮತ್ತು ಸಾಮಾಜಿಕ ಶಾಸನ

ಪ್ರಫುಲ್ಲಾ ನಾಯಕ

ವೇದಕಾಲದ ಪ್ರಾರಂಭದಲ್ಲಿ ಭಾರತೀಯ ಮಹಿಳೆಯು ಸಮಾಜದಲ್ಲಿ ಅತ್ಯುನ್ನತ ಸ್ಥಾನ ಪಡೆದಿದ್ದಳು. ಶಕ್ತಿ ಎಂದೂ ದೇವತೆಯೆಂದೂ ಗೌರವಿಸಲ್ಪಟ್ಟ ಅವಳು ಸಮಾನ ಶಿಕ್ಷಣಾವಕಾಶ ಪಡೆಯುವ ಸ್ವಾತಂತ್ರ್ಯವಿತ್ತು. ಅವಳು ಪತಿಯೊಡನೆ ಕುಟುಂಬದಲ್ಲಿ, ಸಮಾಜದಲ್ಲಿ ಸಮಾನ ಹಕ್ಕು ಬಾಧ್ಯತೆಗಳನ್ನು ಪಡೆದಿದ್ದಳು. ಅವಳು ಪತಿಯ ಅವಿಭಾಜ್ಯ ಅಂಗ ಎಂದೂ ತಿಳಿಯಲಾಗಿತ್ತು. ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಅವಳು ಭಾಗವಹಿಸುತ್ತಿದ್ದಳು. ಆದರೆ, ಕ್ರಮೇಣ ಆಸ್ತಿಯ ಕಲ್ಪನೆ ಸಂಗ್ರಹಣೆ ಬಂದಂತೆ ಮಹಿಳೆ ಸಮಾಜದಲ್ಲಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳ ತೊಡಗಿದಳು. ಅವಳ ದೈಹಿಕ ದುರ್ಬಲತೆ ಮತ್ತು ಇನ್ನಿತರ ಸ್ವಾಭಾವಿಕ ನ್ಯೂನತೆಗಳು ಕೂಡ ಅವಳನ್ನು ಅಸಹಾಯಕಳನ್ನಾಗಿ ಪರಾವಲಂಬಿಯನ್ನಾಗಿ ಮಾಡಿ ಸಮಾಜದಲ್ಲಿ ಅವಳ ಸ್ಥಾನ ಕೆಳಗಿಳಿಯುವಂತೆ ಮಾಡಿದವು. ಇದರ ಪರಿಣಾಮ ಮನು ಹೇಳಿದಂತೆ ಮಹಿಳೆ ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಪತಿಯ, ವೃದ್ಧಾಪ್ಯದಲ್ಲಿ ಮಗನ ಆಧೀನಳಾಗಬೇಕಾಯಿತು.

ಇಲ್ಲಿಂದ ಮುಂದೆ ಮಧ್ಯಕಾಲೀನ ಅವಧಿಯಲ್ಲಿ ಮಹಮ್ಮದೀಯರ ಆಳ್ವಿಕೆಯು ಪ್ರಾರಂಭವಾದೊಡನೆ ಮಹಿಳೆಯ ಸ್ಥಾನ ಇನ್ನೂ ಶೋಚನೀಯ ಸ್ಥಿತಿಗಿಳಿಯಿತು. ಆಗ ಜಾರಿಗೆ ಬಂದ ಪರದಾ ಪದ್ಧತಿಯಿಂದಾಗಿ ಮಹಿಳೆಯು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲಾರದೆ ಹಿಂದೆ ಸರಿಸಲ್ಪಟ್ಟಳು. ಅವಳ ವ್ಯಕ್ತಿತ್ವವನ್ನು ಕಸಿದುಕೊಂಡ ಸಮಾಜ ಅವಳನ್ನು ಸತಿಯನ್ನಾಗಿ ಕೂಡಿಸಿ ಅವಳ ಸರ್ವ ಸ್ವಾತಂತ್ರ್ಯವನ್ನು ಅಪಹರಿಸಿತು. ಈ ಅವಧಿಯಲ್ಲಿ ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಸಹಗಮನ ಪದ್ಧತಿ, ಬಾಲ್ಯ ವಿವಾಹ, ವೇಶ್ಯಾ ವೃತ್ತಿ ಮತ್ತು ಬಹುಪತ್ನಿತ್ವ ಬೆಳೆದು ಬಂದವು.

ಭಾರತದಲ್ಲಿ ಬ್ರಿಟಿಷ ಆಡಳಿತ ಆರಂಭವಾದಂತೆ ಹೊಸ ಸಾಮಾಜಿಕ ಪ್ರಜ್ಞೆ ಜಾಗ್ರತವಾಯಿತು. ಕ್ರಿಸ್ತಮಿಷನರಿಗಳು ತಮ್ಮ ಧರ್ಮ ಪ್ರಸಾರಕ್ಕಾಗಿ ಹಿಂದೂ ಜನರಲ್ಲಿರುವ ಸಾಮಾಜಿಕ ಅನಿಷ್ಟಗಳನ್ನು, ನ್ಯೂನತೆಗಳನ್ನು ಎತ್ತಿತೋರಿಸಿದರು.

ಇದೇ ಸಮಯದಲ್ಲಿ ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಅನೇಕ ಸಮಾಜ ಸುಧಾರಕರ ಕಣ್ಣು ತೆರೆಯಿಸಿ ಮಹಿಳೆಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಪ್ರೇರೇಪಿಸಿತು. ಬ್ರಿಟಿಷ್ ಸುಧಾರಣಾವಾದಿಗಳು ಹಾಗೂ ಇಂಗ್ಲೀಷ್ ಶಿಕ್ಷಣ ಪಡೆದ ಭಾರತೀಯರ ಅವಿರತ ಹೋರಾಟದ ಫಲವಾಗಿ, ಮಹಿಳಾ ಪ್ರಗತಿಗಾಗಿ ಕೆಲವು ಶಾಸನಗಳು ಜಾರಿಗೆ ಬಂದವು. ಅವುಗಳಲ್ಲಿ ಕೆಲವು ಸಹಗಮನ ಪದ್ಧತಿಯ ರದ್ದತಿ, ಬಾಲ್ಯ ವಿವಾಹ ರದ್ಧತಿ, ವಿಧವಾ ವಿವಾಹಕ್ಕೆ ಅವಕಾಶ, ಹಿಂದೂ ಮಹಿಳೆಗೆ ಆಸ್ತಿ ಹಕ್ಕು ಮುಂತಾದವುಗಳಿಗೆ ಸಂಬಂಧಿಸಿವೆ.

ಆಧುನಿಕ ಕಾಲದಲ್ಲಿ ರೂಪಿತವಾದ ಎಲ್ಲ ಶಾಸನಗಳಲ್ಲಿ ಬಹುಮುಖ್ಯವಾದುದು ಹೆಂಗಸರಿಗೆ ಗಂಡಸರಷ್ಟೇ ಸಮಾನತೆಯನ್ನು ಕೊಟ್ಟಿದ್ದು, ಅಷ್ಟೇ ಅಲ್ಲ ಸಮಾನ ಉದ್ಯೋಗಾವಕಾಶ ಒದಗಿಸಿದ್ದು. ಈ ಶಾಸನ ಈಗ ಪ್ರಚಲಿತವಿದ್ದರೂ, ನಾವು ಎಲ್ಲ ರಂಗದಲ್ಲಿಯೂ ಅಸಮಾನತೆಯನ್ನು ಕಾಣುತ್ತೇವೆ. ಇತ್ತೀಚೆಗೆ ಒಬ್ಬ ಕಾನೂನು ಪದವೀಧರ ಮಹಿಳೆ ಆರ್ಮಿ ಜಡ್ಜ ಅಡ್ವೊಕೇಟ ಆಫೀಸನಲ್ಲಿಯ ೫ ವರ್ಷದ ಕಮೀಶನ್ಡ್ ಜಾಗೆಗೆ ಅರ್ಜಿ ಸಲ್ಲಿಸಿದ್ದಳು. ಅವಳ ಅರ್ಜಿಯನ್ನು ಈ ಆಫೀಸಿನವರು ತಿರಸ್ಕರಿಸಿದರು. ಇದರಿಂದ ನೊಂದ ಅವಳು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಳು. ಅವಳ ಈ ಮೇಲ್ಮನವಿಯನ್ನು ನ್ಯಾಯಾಲಯ ಕಿತ್ತುಹಾಕಿತು. ನಂತರ ಅದನ್ನು ತಿರಸ್ಕರಿಸಿದ್ದಕ್ಕೆ ಕೊಟ್ಟ ಕಾರಣ ಮಾತ್ರ ಬಹಳ ವಿಚಿತ್ರವಾಗಿತ್ತು. ಅದೇನೆಂದರೆ, ಈ ಮಹಿಳೆ ಅರ್ಜಿ ಮಾಡಿದ ಹುದ್ದೆ, ರಸ್ತೆ, ರೈಲು ಮತ್ತು ನದಿಗಳಲ್ಲಿ ದೂರ ಸಂಚಾರ ಮಾಡುವುದಾಗಿರುತ್ತದೆ, ಮತ್ತು ಸೈನಿಕರ ಜೀವನ ಅಧ್ಯಯನ ಮಾಡಬೇಕಾಗಿ ಬರುವುದರಿಂದ, ಇಂತಹ ಮಹಿಳೆ ಇಂತಹ ಹುದ್ದೆಗೆ ಅರ್ಹ ವ್ಯಕ್ತಿಯಲ್ಲ ಎನ್ನುವುದಾಗಿತ್ತು. ಆದರೆ, ಒಂದು ಚೋದ್ಯವೆಂದರೆ, ಸೈನಿಕ ಖಾತೆಯಲ್ಲಿ ಮಹಿಳಾ ಡಾಕ್ಟರರ ನೇಮಣೂಕಿ ಇದೆ, ಮತ್ತು ಈ ಡಾಕ್ಟರರು ದಿನನಿತ್ಯ ಸೈನಿಕರ ಜತೆಯೇ ಇರಬೇಕಾಗುತ್ತದೆ. ಈ ಹುದ್ದೆಗೆ ಅವಳು ಅರ್ಹಳು; ಆದರೆ ಆರ್ಮಿ ಅಡ್ವೊಕೇಟ ಹುದ್ದೆಗೆ ಅವಳು ಅರ್ಹಳಲ್ಲ!

ಇಷ್ಟೇ ಇಲ್ಲ, ಸದ್ಯ ಒಂದು ರಾಜ್ಯದ ರಾಜ್ಯಪಾಲರು ಹೊರಡಿಸಿರುವ ಆಜ್ಞೆ ಎಷ್ಟು ವಿಚಿತ್ರವಾಗಿದೆ ಎಂದರೆ ಪುರುಷರ ಜೈಲಿನಲ್ಲಿ ಮಹಿಳೆ ಜೈಲಾಧಿಕಾರಿಯಾಗಲು ಅರ್ಹಳಲ್ಲ; ಆದರೆ, ಅವಳು ಆ ಜೈಲಿನಲ್ಲಿ ಕ್ಲಾರ್ಕ ಅಥವಾ ದಾದಿ ಎಂದು ಕೆಲಸ ಮಾಡಬಹುದು. ಹೀಗೆ ಪುಸ್ತಕದಲ್ಲಿ ಮಾತ್ರ ಮಹಿಳೆಗೆ ಪುರುಷನಷ್ಟೇ ಸಮಾನಾವಕಾಶ ಉದ್ಯೋಗ ಕೊಡಬೇಕು ಎಂಬುದಿದೆಯೇ ಹೊರತು, ನಮ್ಮ ನಿತ್ಯ ಜೀವನದಲ್ಲಿ ನಾವು ಕಾಣುವುದು ಬೇರೆಯೇ ಎಂಬುದಕ್ಕೆ ಇವು ದೃಷ್ಟಾಂತಗಳು.

ಹಿಂದೂ ವಾರಸಾ ಕಾನೂನು

೧೯೫೬ರ ಹಿಂದೂ ವಾರಸಾ ಕಾನೂನು ಮಹಿಳೆಯರಿಗೆ ಒಂದು ವರಪ್ರದಾನವೆಂದು ಹೇಳಬೇಕು. ಈ ಕಾನೂನಿನನ್ವಯ ಮಹಿಳೆ ಸ್ತ್ರೀಧನವನ್ನು ಸಂಪೂರ್ಣವಾಗಿ ಅನುಭವಿಸಬಲ್ಲಳು.ಅಂದರೆ ಅದು ದಾನ,ವಿಕ್ರಯಗಳ ಪೂರ್ಣಾಧಿಕಾರದ ಹಕ್ಕುಗಳನ್ನು ಪ್ರಸಾರಿಸಿತು. ಆದರೆ ಸಂಪೂರ್ಣ ಹಕ್ಕನ್ನು ನೀಡಲಾಗಿದೆ ಎಂಬ ಸಂತೋಷದ

ಜೊತೆಗೆ ಆ ಶಾಸನದಲ್ಲಿ ಕೆಲವು ಪರಿಮಿತಿಗಳಿವೆ ಎಂಬುದನ್ನು ನಾವು ಮರೆಯ ಕೂಡದು. ಪುರುಷರೊಡನೆ ಸಮಾನವಾದ ಹಕ್ಕುಗಳನ್ನು ನೀಡಿರುವೆವೆಂದು ಹೇಳುವರೇ ಹೊರತು ಅವುಗಳನ್ನು ಪೂರ್ತಿಯಾಗಿ ಅನುಭವಿಸಲು ಸಾಧ್ಯವಾಗದಂತೆ ಕೆಲವು ಷರತ್ತುಗಳನ್ನು ಹಾಕಲಾಗಿದೆ. ತಂದೆಯಾಗಲೀ, ಪತಿಯಾಗಲೀ, ಪುತ್ರನಾಗಲೀ ಅದು ಸ್ತ್ರೀಗೆ ದೊರೆಯುವಂತೆ 'ಉಯಿಲು' (will) ಮುಂತಾದ ಕಾಗದ ಪತ್ರಗಳನ್ನು ಬರೆದಿಟ್ಟಿದ್ದರೆ ಆಕೆಗೆ ಆ ಹಕ್ಕು ಲಭಿಸುವುದಿಲ್ಲ. ಅಂಥ ಯಾವ ದಾಖಲೆಗಳು ಇಲ್ಲದಿದ್ದಲ್ಲಿ ಮಾತ್ರ ಅದು ಆಕೆಗೆ ಲಭಿಸುತ್ತದೆ. ಈಗ ಪ್ರತಿಯೊಬ್ಬರೂ ಈ ಬಗೆಯ ಕಾಗದಪತ್ರಗಳನ್ನು ಮಾಡಿ ಜಾಗ್ರತೆ ವಹಿಸುತ್ತಿದ್ದಾರೆ. ಹಿಂದೆ ತಾಯಿಯ ಆಸ್ತಿ ಪುತ್ರಿಯರಿಗೆ ಮಾತ್ರ ದೊರೆಯುತ್ತಿತ್ತು. ಆದರೆ ಈಗ ಪುತ್ರರಿಗೂ ಅದರಲ್ಲಿ ಸಮಾನ ಪಾಲು ಲಭಿಸುತ್ತದೆ. ಇನ್ನು ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಹುಟ್ಟುತ್ತಲೇ ಸಮಾನವಾಗಿ ಪಾಲು ದೊರೆಯುತ್ತದೆ. ಆದರೆ ಪುತ್ರಿಯರಿಗೆ ದೊರೆಯುವುದಿಲ್ಲ. ತನ್ನ ತಂದೆಗೆ ಬಂದ ಪಾಲಿನಲ್ಲಿ ಪುತ್ರಿಯರು ತಮ್ಮ ಸೋದರರೊಂದಿಗೆ ಹಂಚಿಕೊಳ್ಳಬೇಕು. ಅದೂ ಕೂಡ ತಂದೆ ಉಯಿಲು ಮುಂತಾದ ಕಾಗದ ಪತ್ರಗಳನ್ನು ಮಾಡದೆ ಸತ್ತರೆ ಮಾತ್ರ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳುವ ಹಕ್ಕು ಪುರುಷರಿಗೆ ಇರುವಂತೆ ಸ್ತ್ರೀಯರಿಗಿಲ್ಲ. ಸ್ತ್ರೀಯರಿಗೂ ಈ ಹಕ್ಕು ಇದ್ದರೆ ಚೆನ್ನಾಗಿರುತ್ತಿತ್ತು.

ಹಿಂದೂ ವಿವಾಹ ಕಾಯಿದೆ

ಮದುವೆಯ ವಿಷಯದಲ್ಲಿ ಸ್ತ್ರೀಯರಿಗೆ ಕೆಲವು ಹಕ್ಕುಗಳು ದೊರೆಯುವಂತೆ ಸರ್ಕಾರ ಶಾಸನ ಮಾಡಿದೆ. ೧೯೫೫ರಲ್ಲಿ ಬಂದ 'ಬಹುಪತ್ನಿ ನಿಷೇಧ' ಶಾಸನದಿಂದಾಗಿ ಪುರುಷನು ಒಬ್ಬ ಹೆಂಡತಿ ಬದುಕಿರುವಾಗ ಎರಡನೆಯ ಮದುವೆಯನ್ನು ಮಾಡಿಕೊಳ್ಳುವಂತಿಲ್ಲ; ಅಂಥ ಮದುವೆ ಊರ್ಜಿತವಾಗುವುದಿಲ್ಲ. ಅವರಿಗೆ ಹುಟ್ಟುವ ಮಕ್ಕಳಿಗೆ ವಾರಸು ಹಕ್ಕುಗಳಿರುವುದಿಲ್ಲ; ಹಾಗೆ ಎರಡನೆಯ ಮದುವೆ ಮಾಡಿಕೊಂಡ ಪುರುಷರಿಗೆ ಜೈಲುಶಿಕ್ಷೆ ಮತ್ತು ಜುಲ್ಮಾನೆಯನ್ನು ವಿಧಿಸಲಾಗುವುದು. ಆದರೆ ಇಂಥ ಅಪರಾಧ ಮಾಡಿದಾಗ ಮೊದಲನೆಯ ಹೆಂಡತಿ ಹೊರತು ಬೇರೆಯವರು ಯಾರೂ ಕೇಸು ಹಾಕಲು ಸಾಧ್ಯವಿಲ್ಲ; ನಮ್ಮ ದೇಶದ ಮಹಿಳೆಯರು ಅನುಕಂಪ ಹೃದಯದವರಾದುದರಿಂದ ತನ್ನ ಪತಿ ಎಲ್ಲಿಯೋ ಸುಖವಾಗಿದ್ದರೆ ಸಾಕು ಎಂಬ ವಿಶಾಲ ಹೃದಯದಿಂದ ತಮಗೆ ತಾವೇ ಬಾಧೆ ಪಡುತ್ತ ಸುಮ್ಮನಿದ್ದು ಬಿಡುವರೇ ಹೊರತು, ತಮ್ಮ ಪತಿಯ ಮೇಲೆ ಕೇಸು ಹಾಕಲು ಮುಂದಾಗುವುದಿಲ್ಲ. ಇಂಥ ಸಮಯದಲ್ಲಿ ಅವಳನ್ನು ಹೊರತುಪಡಿಸಿ, ಬೇರೆ ಇನ್ನಾರಾದರೂ ಕೇಸು ಹಾಕಲುಸಾಧ್ಯವಾಗುವಂತೆ ಶಾಸನದಲ್ಲಿ ತಿದ್ದುಪಡಿ ಮಾಡಿದರೆ ಚೆನ್ನಾಗಿರುತ್ತದೆ.

ಹಿಂದೂ ವಿವಾಹ ಒಂದು ಸಾಮಾಜಿಕ ಒಪ್ಪಂದವಾಗಿರದೆ ಧಾರ್ಮಿಕ ಸಂಸ್ಕಾರವಾಗಿರುವುದರಿಂದ ವಧುವಾಗಲೀ, ವರನಾಗಲೀ ವಯಸ್ಕರಲ್ಲ ಎಂಬ ಕಾರಣಕ್ಕಾಗಿ ಅದು ರದ್ದಾಗುವುದಿಲ್ಲ. ಆದರೆ ಮುಸ್ಲಿಂ ಮದುವೆ ಬರೀ ಒಂದು ಸಾಮಾಜಿಕ

ಒಪ್ಪಂದವಾಗಿರುವುದರಿಂದ, ಅದರಲ್ಲಿ ವಿಚ್ಛೇದನ ಪಡೆಯುವುದು ಮದುವೆ ಆದಷ್ಟೇ ಸುಲಭವಾಗಿರುತ್ತದೆ.

ಒಂದು ಹೆಣ್ಣು, ಒಂದು ಗಂಡು ಕಾನೂನಿನ ದೃಷ್ಟಿಯಲ್ಲಿ ಪತಿ ಪತ್ನಿಯರೆನಿಸಬೇಕಾದರೆ ಎರಡು ದಾರಿಗಳಿವೆ. ಒಂದು, ಹಿಂದೂ ಧರ್ಮಶಾಸ್ತ್ರದ ಪ್ರಕಾರ ವಿವಾಹವಾಗುವುದು, ಇಲ್ಲವೆ ಸಿವಿಲ್ ಅಥವಾ ರಿಜಿಸ್ಟರ್ಡ್ ವಿವಾಹವಾಗುವುದು.

ಹಿಂದೂ ಪದ್ಧತಿಯ ಪ್ರಕಾರ ಶಾಸ್ತ್ರೋಕ್ತ ವಿವಾಹವಾಗುವುದಾದಲ್ಲಿ ವರನ ಅಥವಾ ವಧುವಿನ ಪದ್ಧತಿಯನ್ನು ಅನುಸರಿಸಿ ವಿಧಿಗಳನ್ನು ನೆರವೇರಿಸಬೇಕಾಗುತ್ತದೆ. ಅದರಲ್ಲಿ ಸಪ್ತಪದಿ ಸೇರಿದ್ದರೆ, ಏಳನೆಯ ಹೆಜ್ಜೆ ಇಟ್ಟಮೇಲೆ ವಿವಾಹ ಎನಿಸುತ್ತದೆ. ಯಾವೊಂದು ಅವಶ್ಯಕ ವಿಧಿಯನ್ನು ಬಿಟ್ಟರೂ ಅದು ವಿವಾಹವೆನಿಸುವುದಿಲ್ಲ.

ಸಿವಿಲ್ ವಿವಾಹ ಮಾಡಿಕೊಳ್ಳುವುದು ಬಹು ಸುಲಭ ಹಾಗೂ ಸುರಕ್ಷಿತ. ಯಾವುದೇ ಎರಡು ವ್ಯಕ್ತಿಗಳು ಸಿವಿಲ್ ವಿವಾಹ ಮಾಡಿಕೊಳ್ಳಬಹುದು.

೧. ಇದು ಎರಡನೆಯ ವಿವಾಹವಾಗಿದ್ದರೆ, ಮೊದಲ ಪತಿ ಅಥವಾ ಪತ್ನಿ ಬದುಕಿರ ಕೂಡದು.

೨. ವಧುವಾಗಲೀ, ವರನಾಗಲೀ ಮಾನಸಿಕ ವೈಕಲ್ಯ ಹೊಂದಿರಕೂಡದು.

೩. ವರನು ೨೧ ವರ್ಷವನ್ನೂ ವಧುವು ೧೮ ವರ್ಷವನ್ನೂ ಪೂರ್ಣಗೊಳಿಸಿರಬೇಕು.

೪. ವಧು–ವರರು ನಿರ್ಬಂಧಿತ ರಕ್ತ ಸಂಬಂಧ ಹೊಂದಿರಕೂಡದು. ಇಬ್ಬರೂ ಹಿಂದೂಗಳು ಅಥವಾ ಬೇರೆ ಬೇರೆ ದೇಶದ ಪ್ರಜೆಗಳು ಇದ್ದಲ್ಲಿ ಸಿವಿಲ್ ವಿವಾಹ ಮಾಡಿಕೊಳ್ಳಬಹುದು.

ಸಿವಿಲ್-ವಿವಾಹ ಮಾಡಿಕೊಳ್ಳಬಯಸುವ ವಧು–ವರರು ಗೊತ್ತುಪಡಿಸಿದ ಫಾರಂನಲ್ಲಿ ತಮ್ಮ ಪ್ರದೇಶದ ವಿವಾಹಾಧಿಕಾರಿಯ ಮುಂದೆ (ಸಬ್–ರಿಜಿಸ್ಟ್ರಾರ) ಸ್ವತಃ ಹಾಜರಾಗಿ ವಿವಾಹದ ಬಗ್ಗೆ ಒಂದು ನೋಟೀಸು ಕೊಡುವ ಮೊದಲು ೩೦ ದಿನವಾದರೂ ಆ ಸ್ಥಳದಲ್ಲಿ ವಾಸಿಸಿರಬೇಕೆಂಬ ನಿಯಮವಿದೆ.

ಇಂತಹ ಸುಲಭವಾದ ವಿವಾಹ ಪದ್ಧತಿಯಿದ್ದರೂ ನಮ್ಮ ಯುವಜನರು ಅನಾವಶ್ಯಕ ದುಂದು ವೆಚ್ಚಗಳ ಮದುವೆಗೆ ಮೊರೆ ಹೋಗುತ್ತಿರುವುದು ನಿಜವಾಗಿಯೂ ವಿಷಾದನೀಯ. ಅವರಿಗೆ ಈ ಮದುವೆ ತಂದೆ–ತಾಯಿಗಳ ಒಪ್ಪಿಗೆ ಪಡೆಯದೇ ಆಗುವವರಿಗೆ ಮಾತ್ರ ಅನ್ವಯಿಸುತ್ತದೆ ಎಂಬ ಭಾವನೆಯಿದೆ. ಅದು ಅವರ ತಪ್ಪು ಗ್ರಹಿಕೆ.

೧೯೫೪ರ ವಿಶೇಷ ವಿವಾಹ ಕಾಯಿದೆ ಅನ್ವಯಿಸುವುದು ಇಬ್ಬರು ವ್ಯಕ್ತಿಗಳು ಆ ಕಾಯಿದೆ ಅನ್ವಯದ ವಿವಾಹವಾಗಲು ಇಚ್ಛಿಸಿದಾಗ ಮಾತ್ರ. ಇನ್ನುಳಿದ ಸಂದರ್ಭಗಳಲ್ಲಿ ಭಾರತದಲ್ಲಿ ಹಿಂದೂ ವಿವಾಹ ಪದ್ಧತಿ, ಕ್ರಿಶ್ಚಿಯನ್ ವಿವಾಹ, ಮುಸ್ಲಿಂ

ವಿವಾಹ, ಪಾರ್ಸಿ ವಿವಾಹ ಅಥವಾ ಅವರಿಗೆ ಅನ್ವಯಿಸುವ ವಿವಾಹ ಪದ್ಧತಿಯ ಪ್ರಕಾರ ಇರಬೇಕಾಗುತ್ತದೆ.

ಒಬ್ಬ ಹಿಂದೂ ಹಾಗೂ ಹಿಂದೂ ಅಲ್ಲದಿರುವವರ ಜತೆ ಮದುವೆಯಾಗಬೇಕಾದರೆ ಅವರು ವಿಶೇಷ ವಿವಾಹ ಕಾಯಿದೆಯನ್ನು ಆಶ್ರಯಿಸಬೇಕಾಗುತ್ತದೆ. ಹೀಗೆ ಮಾಡುವುದೆಂದರೆ ಕೂಡು ಕುಟುಂಬದೊಂದಿಗೆ ತಮ್ಮ ಹಕ್ಕಿನ ಸಂಬಂಧವನ್ನು ಕಡಿದುಕೊಂಡಂತೆ. ಇದಿಷ್ಟೇ ಅಲ್ಲದೆ ಆ ದಂಪತಿಗಳ ಆಸ್ತಿಗೆ ಹಾಗೂ ಅವರ ಸಂತಾನದ ಆಸ್ತಿಗೆ ವಂಶಾನುಕ್ರಮದ ಹಿಂದೂ ಕಾನೂನು ಅನ್ವಯಿಸದೇ ಭಾರತೀಯ ವಂಶಾನುಕ್ರಮದ ಕಾಯಿದೆಯಲ್ಲಿ ನಿರೂಪಿಸಲಾಗಿರುವ ಕಾನೂನು ಅನ್ವಯಿಸುವುದು. ಆದ್ದರಿಂದ ನಮ್ಮ ಜಾತ್ಯಾತೀತ ರಾಷ್ಟ್ರದಲ್ಲಿ ಧರ್ಮದ ಅಳತೆಗೋಲು ವಿರಾಜಿಸುತ್ತಿದ್ದು ಅಂತರ್ಜಾತೀಯ ವಿವಾಹಗಳಿಗೆ ತಡೆಯೊಡ್ಡಿದೆ. ಆದ್ದರಿಂದ ಎಲ್ಲ ಧರ್ಮಗಳಿಗೂ ಅನ್ವಯವಾಗುವಂತಹ ಕೆಲವು ಸರಳ ವಿಧಿ ಸಮಾರಂಭಗಳುಳ್ಳ ಸಾರ್ವತ್ರಿಕ ಸಿವಿಲ್–ವಿವಾಹ ಕಾಯಿದೆ ಇಂದಿನ ಅಗತ್ಯವಾಗಿದೆ.

ವಿವಾಹ ವಿಚ್ಛೇದನ :

೧೯೫೫ರಲ್ಲಿ ಮತ್ತು ಆನಂತರ ಹಿಂದೂ ವಿವಾಹ ಕಾಯಿದೆಯಲ್ಲಿ ಸರ್ಕಾರ ಕೆಲವು ಮಾರ್ಪಾಡುಗಳನ್ನು ಮಾಡಿದೆ. ಹಿಂದಿನಂತೆ ಸ್ತ್ರೀ ತನ್ನ ಗಂಡ ಹೊಡೆಯಲಿ ಬಡಿಯಲಿ, ಅಥವಾ ಬಿಟ್ಟು ಬಿಡಲಿ ಅವನ್ನೆಲ್ಲಾ ತಾಳ್ಮೆಯಿಂದ ಸಹಿಸಿಕೊಂಡು ಇರುವ ಅಗತ್ಯವಿಲ್ಲದೆ ರಕ್ಷಣೆಗಾಗಿ ಕೋರ್ಟಿಗೆ ಹೋಗಬಹುದು ಮತ್ತು ಅವನಿಂದ ವಿಚ್ಛೇದನ ಪಡೆಯಬಹುದು.

ವಿಚ್ಛೇದನಕ್ಕೆ ಅರ್ಜಿ ಹಾಕುವಾಗ ವಿವಾಹವಾಗಿ ಕನಿಷ್ಠ ಒಂದು ವರ್ಷವಾದರೂ ಆಗಿರಬೇಕು. ಅಸಾಧಾರಣವಾದ ಯಾತನೆಯಾಗಲೀ ಅಥವಾ ಅಸಾಧಾರಣವಾದ ನೀಚತನವಾಗಲೀ ಇದ್ದಂತಹ ಸಂದರ್ಭದಲ್ಲಿ ನ್ಯಾಯಾಲಯ ವಿವಾಹವಾದ ಒಂದು ವರ್ಷಕ್ಕೂ ಮೊದಲೇ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡಬಹುದು. ೧೯೭೬ ರ ತಿದ್ದುಪಡಿಗೆ ಮೊದಲು ಇಂತಹ ಅರ್ಜಿಗಳನ್ನು ಸಲ್ಲಿಸಲು ಕನಿಷ್ಠ ಮೂರು ವರ್ಷಗಳಾದರೂ ಆಗಿರಬೇಕೆಂದು ವಿಧಿಸಲಾಗಿತ್ತು. ಆದರೆ ಅರ್ಜಿಯ ವಿಚಾರಣೆಯಾಗಿ ತೀರ್ಮಾನ ಹೊರಬರಲು ಅನೇಕ ವರ್ಷಗಳು ಹಿಡಿಯುತ್ತಿದ್ದು, ಆ ವೇಳೆಗಾಗಲೇ ಅರ್ಜಿದಾರರು ಜೀವನದಲ್ಲಿಯ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದರಿಂದ ಈ ಮೂರು ವರ್ಷ ಅವಧಿಯನ್ನು ಈಗ ಒಂದು ವರ್ಷಕ್ಕೆ ಇಳಿಸಲಾಗಿದೆ.

ವಿವಾಹ–ವಿಚ್ಛೇದನದ ಮುಖ್ಯ ಪರಿಣಾಮವೆಂದರೆ ಪತಿ–ಪತ್ನಿಯರ ನಡುವಿನ ವಿವಾಹ ಬಂಧನವು ಹರಿದು ಹೋಗಿ ಪರಸ್ಪರರ ಬಗೆಯ ವೈವಾಹಿಕ ಕರ್ತವ್ಯಗಳು ಹಾಗೂ ಹಕ್ಕುಗಳು ಕಳೆದು ಕೊಳ್ಳುತ್ತವೆ. ಹಾಗಾಗಿ ಪರಸ್ಪರರ ಆಸ್ತಿಯ ಬಗ್ಗೆ ಯಾರೊಬ್ಬರೂ ವಾರಸುದಾರರಾಗುವುದಿಲ್ಲ. ಆದರೆ ಮಕ್ಕಳಿಗೆ ಮಾತ್ರ ಆನಂತರವೂ ತಂದೆ ತಾಯಿಯರ ಆಸ್ತಿಯಲ್ಲಿ ಹಕ್ಕು ಇದ್ದೇ ಇರುತ್ತದೆ. ಗಂಡ ಹೆಂಡತಿಯರಿಬ್ಬರಿಗೂ ಇಷ್ಟವಿಲ್ಲದಿದ್ದರೆ, ಇಬ್ಬರೂ ಒಮ್ಮತದಿಂದ ಸೇರಿ ಕೋರ್ಟಿಗೆ ಅರ್ಜಿ ಹಾಕಿ

ವಿಚ್ಛೇದನ ಪಡೆಯಬಹುದು. ಸ್ತ್ರೀ ವಿಚ್ಛೇದನದ ನಂತರ ಜೀವನಾಂಶ ಸಹಿತ ಪಡೆಯಬಹುದು. ವಿಚ್ಛೇದನ ಪಡೆಯಲು ಇಷ್ಟವಿಲ್ಲವಾದರೆ ಗಂಡನ ಮನೆಯಿಂದ ದೂರವಾಗಿ ಬೇರೆ ಇದ್ದು ಜೀವನಾಂಶವನ್ನು ಪಡೆಯಬಹುದು.

ವರದಕ್ಷಿಣೆ ನಿಷೇಧ ಕಾನೂನು :

ಈ ವರದಕ್ಷಿಣೆ ಹಾವಳಿ ನಮ್ಮ ಪೂರ್ವಜರಿಂದ ನಮಗೆ ಅಂಟಿಕೊಂಡು ಬಂದಂತಹ ಒಂದು ಅನಿಷ್ಟ ಪದ್ಧತಿಯಾಗಿದೆ. ಪೂರ್ವಜರು ದಕ್ಷಿಣೆ ಇಲ್ಲದ ದಾನ ಅಪೂರ್ಣವೆಂದು ತಿಳಿದು ದಾನ ನೀಡಬೇಕಾದರೆ, ತಮ್ಮ ಕೈಲಾದಷ್ಟು ದಕ್ಷಿಣೆ ಕೊಡುತ್ತಿದ್ದರು. ಈ ದಕ್ಷಿಣೆ ಇಂತಹುದೇ ಆಗಿರಬೇಕು ಎಂಬ ಕಡ್ಡಾಯವಿರಲಿಲ್ಲ. ಅದು ಹಣವೇ ಆಗಿರಬಹುದು ಅಥವಾ ದವಸ ಧಾನ್ಯವೇ ಆಗಿರಬಹುದು. ಎಲ್ಲ ದಾನಗಳಲ್ಲಿ ಶ್ರೇಷ್ಠವಾದ ದಾನ ಕನ್ಯಾದಾನ ಎಂದು ತಿಳಿದ ಪೂರ್ವಜರು 'ಸಾಲಂಕೃತ ಕನ್ಯಾದಾನ' ವನ್ನು ತಮ್ಮ ಶಕ್ತಿಮೀರಿ ದಕ್ಷಿಣೆ ಇತ್ತು ಮಾಡುತ್ತಿದ್ದರು. ಈ ಸಾಲಂಕೃತ ಕನ್ಯಾದಾನ ಮಾಡುವ ಉದ್ದೇಶ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ಎಂದು ತಿಳಿದಜನ, ಅವಳ ಆಪತ್ಕಾಲದಲ್ಲಿ ಅವಳಿಗೆ ಹಾಕಿದ ಆಭರಣ ಅವಳ ನೆರವಿಗೆ ಬರಲಿ ಎನ್ನುವುದಾಗಿತ್ತು. ಆದರೆ ಇಂತಹ ಒಂದು ಸಾಮಾಜಿಕ ಪದ್ಧತಿ ಈಗ ಒಂದು ಹಕ್ಕಾಗಿ ಪರಿವರ್ತನೆಹೊಂದಿರುವುದು ನಮ್ಮೆಲ್ಲರ ದುರದೃಷ್ಟ. ದಿನಂಪ್ರತಿ ವರದಕ್ಷಿಣೆಗೋಸ್ಕರ ಆಗುವ ವಧುವಿನ ಸಾವನ್ನು ಓದಿ ಏನೂ ಮಾಡದೆ ಬರೀ ಅಧರಾನುಕಂಪ ತೋರಿಸುವುದರಲ್ಲಿಯೇ ಸಾರ್ಥಕತೆ ಪಡೆಯುತ್ತಿದ್ದೇವೆ. ಈ ವರದಕ್ಷಿಣೆ ನಿಷೇಧ ಕಾನೂನು ೧೯೬೧ ನೇ ಇಸ್ವಿಯಿಂದ ಜಾರಿಯಲ್ಲಿದ್ದರೂ ಅದು ಬರೀ ಕಾಗದದ ಹುಲಿ ಆಗಿರುವುದು, ನಮ್ಮೆಲ್ಲರ ನಿಷ್ಕ್ರಿಯತೆಯಿಂದ ಹೊರತು. ಕಾನೂನು ಪ್ರಭಾವಶಾಲಿ, ಪರಿಣಾಮಕಾರಿ ಆಗಿಲ್ಲವೆಂದಲ್ಲ. ಅದನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುವ ಕರ್ತವ್ಯ ಈಗ ನಮ್ಮದಾಗಿದೆ. ಕಾಯಿದೆಯ ಪ್ರಕಾರ ವರದಕ್ಷಿಣೆ ತೆಗೆದು ಕೊಂಡವರು ಮತ್ತು ಕೊಟ್ಟವರು ಇಬ್ಬರೂ ಶಿಕ್ಷಾರ್ಹರು. ಆದರೆ ಮದುವೆಯಲ್ಲಿ ನಾವು ನೀಡುವ 'ಉಡುಗೊರೆ' ವರದಕ್ಷಿಣೆಯಡಿಯಲ್ಲಿ ಬರುವುದಿಲ್ಲ. ಆದ್ದರಿಂದ ವರನಕಡೆಯವರು ಈಗ ವರದಕ್ಷಿಣೆ ಬೇಡ, ನಮಗೆ ಉಡುಗೊರೆ ರೂಪದಲ್ಲಿ ಒಂದು ಮನೆ ಕೊಡಿ ಎಂದು ವಧುವಿನ ಕಡೆಯವರನ್ನು ಪೀಡಿಸುವ ಪರಿಪಾಠ ಇಂದಿಗೂ ನಾವು ನೋಡುತ್ತೇವೆ. ಆದ್ದರಿಂದ ಈ 'ಉಡುಗೊರೆ'ಗೂ ಒಂದು ಪರಿಮಿತಿ ಹಾಕಿದರೆ ಈ ಕಾನೂನು ಯಶಸ್ವಿಯಾದೀತು ಎಂದು ಹೇಳಬಹುದು.

ವಧುವಿನ ಸಾವು ಇತ್ತೀಚಿಗೆ ಬಹಳವಾದ್ದರಿಂದ ಅದನ್ನು ಹತ್ತಿಕ್ಕಲು ಇತ್ತೀಚಿಗೆ ಈ ೧೯೬೧ ರ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ವಧುವಿನ ಸಾವು ಅವಳ ಮದುವೆಯಾದ ಒಂದು ವರ್ಷದಲ್ಲಿ, ಪತಿಯ ಮನೆಯಲ್ಲಿ ನಡೆದರೆ, ಪತಿಯನ್ನು ಮತ್ತು ಅವನ ತಂದೆ ತಾಯಿಯರನ್ನು ಅಪರಾಧಿಯೆಂದು ಸೆರೆ ಹಿಡಿಯಬಹುದು ಮತ್ತು ಈ ಅಪರಾಧಿಗಳೇ ಕೋರ್ಟಿನಲ್ಲಿ ತಾವು ನಿರ್ದೋಷಿಗಳೆಂದು ಸಾಬೀತು ಮಾಡಬೇಕಾಗುತ್ತದೆ. ಮತ್ತು ಒಂದು ವೇಳೆ ಅವರೇ ಅಪರಾಧಿಗಳು

ಎಂದು ನ್ಯಾಯಾಲಯ ನಿರ್ಣಯಿಸಿದರೆ, ಅವರಿಗೆ ಅತೀ ಕಠಿಣ ಶಿಕ್ಷೆಯನ್ನು ವಿಧಿಸುತ್ತದೆ.

ಇಷ್ಟೆಲ್ಲ ಕಾನೂನು ಇದ್ದರೂ, ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಕಾಯಿದೆ ಎಷ್ಟು ಅಸಹಾಯಕ ಇದೆಯೋ ಈ ವಿಷಯದಲ್ಲಿ ಸಹ ಅಷ್ಟೇ ಅಸಹಾಯಕವಾಗಿದೆ. ಎಲ್ಲವೂ ಕಾಯಿದೆಯಿಂದಲೇ ಆಗಬೇಕು ಎಂದರೆ ಹೇಗೆ ಸಾಧ್ಯ ? ಇದು ಸಾಮಾಜಿಕ ಸ್ವಾಸ್ಥ್ಯಕ್ಕೆ ಅಂಟಿದ ಪಿಡುಗು. ಇದನ್ನು ಸಮಾಜವೇ ಹೋಗಲಾಡಿಸಬೇಕು. ವರದಕ್ಷಿಣೆ ನಿರ್ಮೂಲನೆಗೆ ಸಾಮಾಜಿಕ ಕ್ರಾಂತಿ ಅವಶ್ಯ. ಈ ವಿಷಯದಲ್ಲಿ ಕಾಯಿದೆ ಸಹಾಯ ಕೇಳುವುದೆಂದರೆ, ಅದು ಪಲಾಯನವಾದೀ ತಂತ್ರ ಎಂದು ಹೇಳಬೇಕಾಗುವುದು. ಗುಪ್ತವಾಗಿ ನಡೆಯುವ ಈ ವ್ಯವಹಾರಕ್ಕೆ ಕಾಯಿದೆಯಿಂದ ಪರಿಹಾರ ಸಿಗುವುದು ಕಷ್ಟ. ಸಾಮಾನ್ಯವಾಗಿ ವರದಕ್ಷಿಣೆ ಕೊಟ್ಟವರು, ತೆಗೆದುಕೊಂಡವರು ಬೀಗರಿರುವುದರಿಂದ ಈ ವಿಷಯ ಬಯಲಿಗೆಬಾರದು. ಒಮ್ಮೆ ಏನಾದರೂ ಅನಾಹುತ ಜರುಗಿ ಜಗಳ ಪ್ರಾರಂಭವಾದಾಗ ಮಾತ್ರ ಬಾಯಿಬಿಡುತ್ತಾರೆ ಈ ಜನ. ಆದ್ದರಿಂದ ಈ ಪಿಡುಗು ಸಮಾಜದ ದೃಷ್ಟಿಯಲ್ಲಿ ಅಪರಾಧವಾಗಬೇಕು. ಆಗ ಮಾತ್ರ ಇದರ ನಿವಾರಣೆ ಸಾಧ್ಯವಾದೀತು ಎಂದು ಹೇಳಬಹುದು.

ಇತರ ಶಾಸನಗಳು :

ಸ್ವಾತಂತ್ರ್ಯ ನಂತರ ಅನೇಕ ಶಾಸನಗಳನ್ನು ಮಹಿಳೆಯ ಸರ್ವತೋಮುಖ ಬೆಳವಣಿಗೆಗಾಗಿ ಬಂದಿವೆ. ಅವಳ ಮೇಲೆ ನಡೆಯುತ್ತಿರುವ ಬಲಾತ್ಕಾರ, ಅತ್ಯಾಚಾರ, ಇನ್ನಿತರ ದೌರ್ಜನ್ಯಗಳನ್ನು ಹತ್ತಿಕ್ಕಲು ಸಹಿತ ಅನೇಕ ಶಾಸನಗಳು ಈಗ ಜಾರಿಯಲ್ಲಿವೆ. ಮಹಿಳಾ ಕಾರ್ಮಿಕರಿಗಾಗಿ ಕಾನೂನ ವೇತನ ಶ್ರೇಣಿಯ ಶಾಸನ, ಹೆರಿಗೆ ರಜಾದ ಸವಲತ್ತುಗಳ ಶಾಸನ, ಮಕ್ಕಳಿಲ್ಲದ ಸ್ತ್ರೀಯರು ದತ್ತು ತೆಗೆದು ಕೊಳ್ಳುವ ಶಾಸನ, ಮಕ್ಕಳನ್ನು ತಾಯಿಯಿಂದ ಬೇರ್ಪಡಿಸುವ, ಹಿಂಸಿಸುವ ಗಂಡಂದಿರಿಂದ ಮತ್ತೆ ತಾಯಿಯ ವಶಕ್ಕೆ ತೆಗೆದುಕೊಳ್ಳಲು ಚಿಕ್ಕಮಕ್ಕಳನ್ನು ಸಂರಕ್ಷಿಸಿ ಅವರ ಭವಿಷ್ಯವನ್ನು ಉತ್ತಮಪಡಿಸಲು ಈಗ ಶಾಸನವಿದೆ. ಇದರಿಂದ ಮಕ್ಕಳಿಗೆ ಅವರ ಆಸ್ತಿಗಳಿಗೆ ಕೋರ್ಟಿನ ಮೂಲಕ ಸಂರಕ್ಷಕರನ್ನು ನಿಯಮಿಸಬಹುದು.

ಪರಿಸ್ಥಿತಿಗಳ ಪ್ರಭಾವಗಳಿಗೆ ಬಲಿಯಾಗಿ,ವಂಚಿತರಾಗಿ ಕಾಲುಜಾರಿದ ಅಭಾಗಿನಿಯರಾದ ಸ್ತ್ರೀಯರು, ಮಕ್ಕಳು ಅವಲಂಬಿಸುತ್ತಿರುವ ವ್ಯಭಿಚಾರ ಜೀವನವನ್ನು ನಿರ್ಮೂಲಿಪಡಿಸಲು ಸರ್ಕಾರ ಒಂದು ಶಾಸನವನ್ನು ಜಾರಿಗೆ ತಂದಿತು. ಅದರ ಪ್ರಕಾರ ವ್ಯಭಿಚಾರ ಮಾಡಿದ ಸ್ತ್ರೀಯರಿಗೆ ಜೈಲು ಶಿಕ್ಷೆ ಅಥವಾ ಜುಲ್ಮಾನೆಯನ್ನು ವಿಧಿಸಲಾಗುವುದು; ಆದರೆ ಜಿರೆಯಾರೂ ದಂಡ ತೆತ್ತು ಈ ಸ್ತ್ರೀಯರನ್ನು ಬಿಡಿಸಿಕೊಂಡು ಹೋಗುವುದು ನಡೆಯುತ್ತಲೇ ಇದೆ. ಸ್ತ್ರೀಯರಿಂದ ವ್ಯಭಿಚಾರವನ್ನು ಮಾಡಿಸಿ ಅದರಿಂದ ಲಾಭ ಪಡೆಯುವ ಪರಪುರುಷ ಹಿಡಿತದಿಂದ ರಕ್ಷಿಸಲು ಸರ್ಕಾರ ಇನ್ನೂ ಕಟ್ಟುನಿಟ್ಟಾದ ಶಾಸನಗಳನ್ನು ಜಾರಿಗೆ ತರಬೇಕು. ವ್ಯಭಿಚಾರಕ್ಕೆ ಪ್ರೇರೇಪಿಸುವವರನ್ನೂ ವ್ಯಭಿಚಾರ ಮಾಡುವ ಪುರುಷರನ್ನೂ ಅದೇ ರೀತಿ ಶಿಕ್ಷಿಸಬೇಕು. ಅಂಥ ಸ್ತ್ರೀಯರು ಆರ್ಥಿಕ ಸ್ವಾತಂತ್ರ್ಯ ಪಡೆದು ಸ್ವಯಂ ಜೀವಿಸಲು ಅನುಕೂಲಕರ

ಅವಕಾಶವನ್ನು ಕಲ್ಪಿಸಬೇಕು. ಸಮಾಜ ಅವರನ್ನು ಹೀನಾಯವಾಗಿ ಕಾಣದೆ ಗೌರವದಿಂದ ಕಂಡು ಅವರಿಗೆ ಸೂಕ್ತ ಸ್ಥಾನವನ್ನು ದೊರಕಿಸಿ ಅವರಲ್ಲಿ ಆತ್ಮ ವಿಶ್ವಾಸ ಉಂಟುಮಾಡಿ ಒಳ್ಳೆ ರೀತಿ ಜೀವಿಸಲು ದಾರಿಮಾಡಬೇಕು.

ಗರ್ಭ ನಿರೋಧ ಶಾಸನದ ಮೂಲಕ ಅಕ್ರಮ ಗರ್ಭವನ್ನು ನಿವಾರಿಸಿಕೊಂಡು, ಅಕ್ರಮ ಸಂತಾನವನ್ನು ತಡೆಗಟ್ಟಲು ವ್ಯವಸ್ಥೆ ಮಾಡಲಾಗಿದೆ. ಅಷ್ಟೇ ಅಲ್ಲದೆ ಸ್ತ್ರೀಗೆ ಇದರಿಂದ ಸಮಾಜದಲ್ಲಿ ಗೌರವವಾಗಿ ಬಾಳಲು ಸಾಧ್ಯವಾಗುವುದು. ವಿಪರೀತವಾಗಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಕೂಡ ಈ ಶಾಸನ ಸಹಾಯಕವಾಗುತ್ತದೆ.

ಇಷ್ಟೆಲ್ಲ ಶಾಸನಗಳಿದ್ದರೂ, ಭಾರತೀಯ ಮಹಿಳೆಯನ್ನು ಪ್ರಗತಿ ಪರದೇಶದ ಮಹಿಳೆಯರಿಗೆ ಹೋಲಿಸಿದರೆ ಅವಳು ಇನ್ನೂ ತೀರ ಹಿಂದುಳಿದಿದ್ದಾಳೆ ಎಂದೆನಿಸುತ್ತದೆ. ಅವಳಿಗೆ ತನ್ನ ಹಕ್ಕುಗಳ ಅರಿವೇ ಇಲ್ಲವಾದರೆ ಮತ್ತು ಅವಳ ಬಗ್ಗೆ ಸರಕಾರವು ತೋರುವ ನಿರ್ಲಕ್ಷತನ, ಭಾರತದ ಜನಸಂಖ್ಯೆಯ ಅರ್ಧದಷ್ಟು ಜನಸಂಖ್ಯೆಗೆ ತೋರಿದ ನಿರ್ಲಕ್ಷ ಎಂಬುದನ್ನು ನಾವು ಅರಿಯಬೇಕು. ಭಾರತದ ಮಹಿಳೆ ರಾಷ್ಟ್ರೀಯ ಜೀವನದಲ್ಲಿ ಚಟುವಟಿಕೆಯಿಂದ ಭಾಗವಹಿಸದ ಹೊರತು ಭಾರತ ದೊಡ್ಡ ದೇಶವಾಗಲಾರದು.

ಸಮಾಜದ ದೃಷ್ಟಿಕೋನವನ್ನು ಬದಲಾಯಿಸಬೇಕಾದರೆ, ಕಾನೂನು ಕ್ರಿಯಾಶೀಲವಾಗಬೇಕು. ಹಿಂದುಳಿದ ಊಳಿಗ ಮಾನ್ಯ ಸಮಾಜಗಳಲ್ಲಿ ಸಾಮಾಜಿಕ ದುಷ್ಟ ಪದ್ಧತಿಗಳು ಹದಕ್ಕೆ ಬಂದಿವೆ. ದಮನಕ್ಕೊಳಗಾದ ಹೆಂಗಸರಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಯ ಅರಿವು ಜಾಗ್ರತವಾದಾಗ ಇಂತಹ ದುಷ್ಟ ಪದ್ಧತಿಗಳನ್ನು ಹಾಗೂ ಅಸಮಾನತೆಗಳನ್ನು ಹೋಗಲಾಡಿಸಬೇಕೆಂಬ ಪ್ರವೃತ್ತಿ ಬಲವಾಗುತ್ತಿದೆ. ಈ ಅನಿಸಿಕೆಗಳು ಹಾಗೂ ಒತ್ತಾಯಗಳು ಸಾರ್ವಜನಿಕ ಅಭಿಪ್ರಾಯಗಳಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. ಸೂಕ್ತವಾದ ಸಾಮಾಜಿಕ, ಆರ್ಥಿಕ ಶಾಸನ ಇದನ್ನು ಹಿಂಬಾಲಿಸುತ್ತದೆ.

ಆದ್ದರಿಂದ ಮಹಿಳೆಯರ ಸ್ಥಿತಿಗಳಲ್ಲಿ ಮೂಲಭೂತವಾದ ಪರಿವರ್ತನೆಯನ್ನು ತರುವಂತಹ ಒಂದು ಸಾಮಾಜಿಕ ಸಿದ್ಧಾಂತಕ್ಕಾಗಿ ಮಹಿಳೆಯರು ಉದ್ದೇಶಪೂರ್ವಕ ಗುರಿಹೊಂದಿ ಅದರ ಸಲುವಾಗಿ ನಿರಂತರ ಕೆಲಸ ಮಾಡಿದರೆ, ಒಂದು ಮಾದರಿ ಸಮಾಜದ ನಿರ್ಮಾಣ ಮಾಡಬಹುದು.

ಆಧುನಿಕ ಮಹಿಳೆ ಮತ್ತು ಸಾಹಿತ್ಯ

ಗೀತಾ ಕುಲಕರ್ಣಿ

ನಮ್ಮ ದೇಶ ಸ್ವತಂತ್ರವಾದ ಮೇಲೆ ಮಹಿಳೆಗೂ ಪುರುಷನಿಗೆ ಸಮಾನವಾದ ಸ್ವಾತಂತ್ರ್ಯ ಸಿಕ್ಕು, ಮನುವಿನ ಕಾಲದಿಂದ ರೂಢಿಯಾಗಿದ್ದ ಮಾತು ಅರ್ಥಕಳೆದು ಕೊಂಡಿತು. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶಿಸುತ್ತ, ಶ್ರಮಪಟ್ಟು ದುಡಿಯುತ್ತಿರುವುದರಿಂದ ದೇಶಕ್ಕೆ ಒಂದು ಹೊಸ ಚಲನೆ ಪ್ರಾಪ್ತವಾಗುತ್ತ ಬಂತೆಂದು ಹೇಳಬಹುದು. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿಯಂತೆ ಶಿಕ್ಷಣ, ಸಂಸ್ಕೃತಿ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಆಧುನಿಕ ಮಹಿಳೆ ತನ್ನ ಪಾತ್ರ ನಿರ್ವಹಿಸುತ್ತ ಒಂದು ದೇಶವನ್ನು ಹೊಸತಿರುವಿನಲ್ಲಿ ಕೊಂಡೊಯ್ಯಲು ಸಾಧ್ಯವಾಯಿತೆನ್ನಬಹುದು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿಯೇ ಭಾರತದ ಕೋಗಿಲೆ ಎಂದು ಖ್ಯಾತಿ ಪಡೆದ ಸರೋಜಿನಿ ನಾಯಿಡು ಅವರ ಸಾಹಿತ್ಯವನ್ನು, ತೋರುದತ್ತ ಅವರ ಸಾಹಿತ್ಯವನ್ನು, ಗಮನಿಸಿದರೆ ಅದು ಆಧುನಿಕ ಮಹಿಳೆಯರಿಗೆ ಸ್ಫೂರ್ತಿ, ಪ್ರೇರಣೆ, ಚೈತನ್ಯಗಳನ್ನು ತುಂಬುವ ಶಕ್ತಿಯಾಯಿತೆಂದು ಹೇಳಬಹುದು.

ಕನ್ನಡದಲ್ಲಿಯೂ ಆಧುನಿಕ ಮಹಿಳೆ ಸಾಹಿತ್ಯ, ಸಂಸ್ಕೃತಿ, ಕಲೆ ಇವುಗಳಿಗೆ ಸಹಜವಾಗಿಯೇ ಆಕರ್ಷಿತಳಾಗಿದ್ದನ್ನು ಮರೆಯುವ ಹಾಗಿಲ್ಲ. ಮಹಿಳೆಗೆ ಪುರುಷನಷ್ಟೇ ಸ್ವಾತಂತ್ರ್ಯವಿದ್ದರೂ ಮಹಿಳೆಗಿರುವ ಜವಾಬ್ದಾರಿ ಪುರುಷನಿಗಿಲ್ಲವೆನ್ನಬಹುದು. ಇಡೀ ಕೌಟುಂಬಿಕ ಸ್ಥಿತಿ–ಗತಿಗಳು, ಮಹಿಳೆಯನ್ನೇ ಅವಲಂಬಿಸಿರುವುದರಿಂದ ಅವಳು ಕುಟುಂಬವನ್ನು ಅಂದರೆ ಮನೆ, ಮಕ್ಕಳ ಪಾಲನೆ–ಪೋಷಣೆ, ಬೆಳವಣಿಗೆ, ಭವಿಷ್ಯತ್ತು ಇವನ್ನೆಲ್ಲ ನೋಡಿಕೊಂಡು, ಮಿಕ್ಕುಳಿದ ಅವಧಿಯಲ್ಲಿ, ಸಾಹಿತ್ಯಾಧ್ಯಯನ ಮಾಡಿ, ಚಿಂತನೆಮಾಡಿ ಸಾಹಿತ್ಯ ಸೃಷ್ಟಿಗೆ ತೊಡಗಬೇಕು. ಮಹಿಳೆಗಿರುವಷ್ಟು ತೊಡಕುಗಳು, ಸಮಸ್ಯೆಗಳು ಪುರುಷರಿಗೆ ಇಲ್ಲವೆಂದು ನನ್ನ ಭಾವನೆ.

ಜೇನ್ ಆಸ್ಟಿನ್ ಪರ್ಲ್‌ಬಕ್, ಜಾರ್ಜ ಈಲಿಯಟ್, ಎಮಿಲಿ ಬ್ರಾಂಟಿ, ಮುಂತಾದವರಂತೆ ಕನ್ನಡದಲ್ಲಿಯೂ ಆಧುನಿಕ ಮಹಿಳೆಯರು ಸಾಹಿತ್ಯ ರಚನೆಗೆ ತೊಡಗಿದ್ದುಂಟು. ಅವರವರ ಬದುಕಿನ ಮೇಲೆ ಹಾಗೂ ಕಾರ್ಯ ಕ್ಷೇತ್ರದಲ್ಲಿಯೇ ಸಾಹಿತ್ಯ

ರಚನೆಯ ಕಾರ್ಯಕ್ಕೆ ತೊಡಗುವುದಕ್ಕೆ ಸ್ವಾತಂತ್ರ್ಯ ನಂತರದ ಆಧುನಿಕ ವಾತಾವರಣವೇ ಕಾರಣವಾಯಿತೆನ್ನಬಹುದು.

ಶತ ಶತಮಾನಗಳಿಂದ ವಂಚಿತವಾಗಿದ್ದ ಸ್ವಾತಂತ್ರ್ಯ ಲಭ್ಯವಾಗಿ ಮಹಿಳೆಯಲ್ಲಿ ಸುಪ್ತವಾಗಿದ್ದ ಪ್ರತಿಭೆ, ಕಲ್ಪನೆ, ವಿಚಾರ, ಪ್ರತೀಕಾರ ಭಾವನೆಗಳು ಜಾಗೃತಗೊಂಡು ಅದು ಕಥೆ, ಕಾವ್ಯ, ಕಾದಂಬರಿ, ಸಂಗೀತ, ಕಲೆ ಇವುಗಳ ರೂಪದಲ್ಲಿ ವ್ಯಕ್ತವಾಗಲಾರಂಭಿಸಿತು. ಅದರಲ್ಲಿ ಅವಳು ಸಹಜವಾಗಿಯೇ ತನ್ನ ಹಾಗೂ ಸಮಾಜದ, ಮಹಿಳೆಗೆ ವಿಶಿಷ್ಟವಾದ ಅನುಭವವನ್ನು ಪ್ರಕಟಪಡಿಸುವ ಯತ್ನದಲ್ಲಿ ತೊಡಗಿದಳು. ಆದ್ದರಿಂದ ಆಧುನಿಕ ಮಹಿಳೆ ತನ್ನ ಸುತ್ತಲಿನ ಪರಿಸರ, ಬದುಕಿನ ಘೋರಕಷ್ಟನಷ್ಟಗಳನ್ನು, ವರದಕ್ಷಿಣೆ ಮದುವೆ, ಮೂಢನಂಬಿಕೆಗಳು, ಮೇಲು ಕೀಳು, ಅಸಮಾನತೆ, ಸ್ತ್ರೀಯರ ಸ್ಥಾನಮಾನಗಳು, ಹಲವು ವರ್ಷಗಳಿಂದ ಹಾಗೂ ವರ್ತಮಾನದಲ್ಲಿ ಕಾಡುವ ಸಮಸ್ಯೆಗಳು ಇತ್ಯಾದಿ ಸಾಹಿತ್ಯಕ ವಸ್ತುವಾಗಿ ಗಮನ ಸೆಳೆದವು. ಈ ದೃಷ್ಟಿಯಿಂದ ನೋಡಿದಾಗ, ಆರಂಭದಲ್ಲಿ ಸರೋಜಿನಿ ನಾಯಿಡು ಅವರಂತೆ ದೇಶಭಕ್ತಿ, ದೇಶಪ್ರೇಮ, ಸ್ವಾತಂತ್ರ್ಯ, ಆದರ್ಶ ದಾಂಪತ್ಯ ಇಂಥ ವಿಚಾರಗಳನ್ನು ಪ್ರಕಟಿಸುವ ಮಹಿಳಾ ಲೇಖಕಿಯರು ಆಧುನಿಕ ಕನ್ನಡದ ಆರಂಭದಲ್ಲಿ ಕಾಣಿಸಿಕೊಂಡರು.

ನಮ್ಮ ಕಾಲದಲ್ಲಿ ಅಂದರೆ, ಅದೇ ಸಾಹಿತ್ಯ ಹೊಸಭಾವನೆ, ಹೊಸ ವಿಚಾರಗಳಿಂದ ಪ್ರೇರಿತವಾಗಿ ಪ್ರಗತಿಯ ಹೆಜ್ಜೆಯನ್ನಿಡುತ್ತ ಮುನ್ನಡೆದ ಸಂದರ್ಭದಲ್ಲಿ ದಿ.ಗೌರಮ್ಮ, ತ್ರಿವೇಣಿ, ಎಂ. ಕೆ. ಇಂದಿರಾ, ಅನುಪಮಾ, ಎಚ್. ಎಸ್. ಪಾರ್ವತಿ, ನೀಳಾದೇವಿ, ದೇವಕಿ ಕೃಷ್ಣಮೂರ್ತಿ, ಟಿ. ಸುನಂದಮ್ಮ, ಪಂಕಜಾ, ಯಮುನಾಮೂರ್ತಿ, ನಿರುಪಮಾ, ಶಾಂತಾದೇವಿ ಮಾಳವಾಡ, ಶಾಂತಾದೇವಿ ಕಣವಿ, ಮುಂತಾದವರು ಬರೆಯಲು ಆರಂಭಿಸಿದ್ದು, ಆಧುನಿಕ ಜಗತ್ತಿನ ಸಂಸ್ಥೆಗಳು ನೆಲೆಸುವ ಕೃತಿಗಳ ವಸ್ತು-ವಿಷಯಗಳಾಗಿರುವುದನ್ನು ನೋಡಬಹುದು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಬರೆಯಲಾರಂಭಿಸಿದೆವು. ತ್ರಿವೇಣಿ ತನ್ನದೇ ಆದ ರೀತಿಯಿಂದ ಬರೆಯಲಾರಂಭಿಸಿದರೆ, ಅನುಪಮಾ ಇನ್ನೊಂದು ರೀತಿಯಿಂದ, ನಾನು ನನ್ನದೇ ಆದ ರೀತಿಯಿಂದ ಬರೆದೆವು. ನಮ್ಮ ರೀತಿಗಳು ಭಿನ್ನವಾಗಿದ್ದರೂ ಆಧುನಿಕ ಮಹಿಳೆಯ ಸಮಸ್ಯೆಗಳನ್ನು ಮನಮುಟ್ಟುವಂತೆ ಚಿತ್ರಿಸುವುದೇ ನಮ್ಮ ಗುರಿಯಾಗಿತ್ತೆನ್ನಬಹುದು.

ನನ್ನ ಯಾವ ಕೃತಿಯನ್ನು ನೋಡಿದರೂ ಅದೆಲ್ಲ ನನ್ನ ಬದುಕಿನ ಅನುಭವದ ಕುಲುಮೆಯಿಂದ ಹೊರಬಂದದ್ದು. ಕಥೆಯಿರಲಿ, ಕಾದಂಬರಿಯಿರಲಿ, ನಾಟಕವಿರಲಿ, ಯಾವುದರಲ್ಲಿಯೂ ನಾನು ಕಲ್ಪಿಸಿಕೊಂಡಾಗಲಿ ಇಲ್ಲವೆ ಅನುಭವಕ್ಕೆ ಹೊರತಾದುದನ್ನಾಗಲಿ ಬರೆಯಲಿಲ್ಲ. ಅನುಭವ ನನ್ನಲ್ಲಿ ಹಿಡಿಸಲಾರದಷ್ಟು ಗಾಢವಾಗಿ, ಕ್ಷೋಭೆಗೆ ಒಳಗಾದಾಗಲೇ ಅದನ್ನೆಲ್ಲಾ ಪ್ರಕಟಿಸುವುದು ಅಗತ್ಯವೆನಿಸಿ, ನಾನು ಕೃತಿ ರಚನೆಗೆ ತೊಡಗಿದ್ದುದು. ಕೌಟುಂಬಿಕ ಪರಿಸರವನ್ನು, ಸುತ್ತಲಿನ ಸಮಾಜವನ್ನು, ಸಾಮಾಜಿಕ ಏರು-ಪೇರುಗಳನ್ನು, ಬಡವ–ಬಲ್ಲಿದ, ಶ್ರೀಮಂತ–ಕೂಲಿಕಾರರು, ಪಾತ್ರೆ ತಿಕ್ಕುವವರು, ವೇಶ್ಯಾವೃತ್ತಿಯಲ್ಲಿರುವವರು, ಶಿಕ್ಷಕರು, ವಿದ್ಯಾರ್ಥಿಗಳು, ವ್ಯಾಪಾರಿಗಳು, ಅನಾಥ ನಿರ್ಗತಿಕರು, ಮುಗ್ಧ ಮಕ್ಕಳು, ಮಹಿಳೆಯರು ಮುಂತಾದವರೆಲ್ಲರ ಬದುಕು ಹಾಗೂ

ಬದುಕಿನ ಘಟನೆಗಳು ನನ್ನ ಗಮನ ಸೆಳೆದದ್ದನ್ನು, ನನಗೆ ಕಂಡಂತೆ, ನನಗೆ ಅನಸಿದಂತೆ ಪ್ರಾಮಾಣಿಕವಾಗಿ, ಅಂಥವರ ಸಮಸ್ಯೆಗಳನ್ನು,ಪಾತ್ರಗಳನ್ನು ಕಥೆ.ಕಾದಂಬರಿ, ನಾಟಕಗಳಲ್ಲಿ ಬಿಡಿಸುತ್ತ, ಚಿತ್ರಿಸುತ್ತ, ಬಂದಿದ್ದೇನೆ. ನನ್ನಂತೆ ಇತರರೂ ಈ ಆಧುನಿಕ ಹಾಗೂ ಸಮಕಾಲೀನ ಬದುಕಿಗೆ ಸ್ಪಂದಿಸಿದ್ದಾರೆ.

ಆಧುನಿಕ ಮಹಿಳೆಯ ಹಲವು ತರದ ಸಮಸ್ಯೆಗಳು ನನ್ನ ಗಮನ ಸೆಳೆದಿದ್ದು, ನನ್ನ ಕಥೆ. ಕಾದಂಬರಿ, ನಾಟಕಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು ಒಮ್ಮೊಮ್ಮೆ ನನಗಿಂತಲೂ ಹೆಚ್ಚಿನ ಧೈರ್ಯ, ದಿಟ್ಟತನ, ಬುದ್ಧಿವಂತಿಕೆಯನ್ನು ಪ್ರದರ್ಶಿಸಿದರೆ, ಅದರಲ್ಲಿ ಆಶ್ಚರ್ಯವಿಲ್ಲ. ನಾನು ಸೃಷ್ಟಿಸುವ ಪಾತ್ರಗಳು ಬರೀ ವರ್ತಮಾನದಲ್ಲಿಯೇ ಸುತ್ತಲಾರವು. ಅವು ಭವಿಷ್ಯತ್ತನ್ನು, ನಾಳಿನ ಜಗತ್ತಿನಲ್ಲಿ ಪ್ರವೇಶಿಸಿ, ಬದುಕನ್ನು ಸರ್ವಾಂಗ ಸುಂದರಗೊಳಿಸಬೇಕೆಂಬುದು ನನ್ನ ಹಿರಿಯಾಸೆ. ಕಂಬನಿಯೊರೆಸಿದ ಕೈ, ಸಂಬಂಧ, ನೂಲುಏಣಿ,– ಈ ಕಾದಂಬರಿಗಳಲ್ಲಿಲ್ಲದೆ ನನ್ನ ನಾಟಕಗಳಲ್ಲಿಯೂ ಇದೇ ವಿಚಾರ ಮುಖ್ಯವಾಗಿದ್ದು, ನನಗೊಂದು ಸಮಾಧಾನವೆಂದರೆ ನನ್ನ ಹಾಗೆಯೇ ನನ್ನ ಪಾತ್ರಗಳು ಸತ್ಯಕ್ಕಾಗಿ, ನ್ಯಾಯಕ್ಕಾಗಿ ಅಂಥ ದಿಟ್ಟ ಧೈರ್ಯ ತೋರುವುದು. ಬದುಕಿನ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ನನ್ನಂತೆ ಸದಾ ಹೋರಾಟದಲ್ಲಿ ತೊಡಗಿರುವುದು.ಈ ಹೋರಾಟವ ಪ್ರವೃತ್ತಿಯನ್ನು ಆಧುನಿಕ ಮಹಿಳೆ ನಿಧಾನವಾದರೂ ನಿಶ್ಚಯವಾಗಿ ರೂಢಿಸಿಕೊಳ್ಳುತ್ತಿದ್ದಾಳೆ. ಆಕೆಯ ಸಾಹಿತ್ಯ ನಿರ್ಮಿತಿಯಲ್ಲಿ ಅದು ಪ್ರತಿಧ್ವನಿಸಿದೆ. ಹೀಗಾಗಿಯೇ ನನ್ನ ಪಾತ್ರಗಳು ಒಮ್ಮೊಮ್ಮೆ ಕೋರ್ಟು ಕಟ್ಟೆ ಹತ್ತಿನಿಂತು, ಸತ್ಯವನ್ನು, ನ್ಯಾಯವನ್ನು ಸಾರಿದ್ದುಂಟು.

ನಾನು ನಂಬಿಕೊಂಡಿರುವ ಬದುಕಿನ ಮೌಲ್ಯಗಳು ಕ್ಷಣಿಕ ತೃಪ್ತಿ ಹಾಗೂ ಅಂಥ ಭ್ರಮೆಗಳಿಂದ ದೂರವಾಗಿದ್ದು, ವಾಸ್ತವಿಕ ಜಗತ್ತು, ಅದು ಬದಲಾಗುತ್ತಿರುವ ಗತಿಯೊಂದಿಗೆ ನಾನು ಸೃಷ್ಟಿಸುವ ಪಾತ್ರಗಳು ಧ್ವನಿಗೊಡುತ್ತ ಬದುಕಿನ ವಿಷಣ್ಣತೆಯನ್ನು, ಕರಾಳತೆಯನ್ನು, ಕ್ರೌರ್ಯವನ್ನು ಅಡಗಿಸಿ, ಪ್ರೇಮದ ನವೀನ ಜಗತ್ತನ್ನು ನಿರ್ಮಿಸಬೇಕೆಂಬಾಶೆಯಿಂದಲೇ ನಾನು ನನ್ನ ಕೃತಿಗಳಲ್ಲಿ ನನ್ನ ಅನುಭವದ ಜೊತೆಗೆ ನನ್ನ ರಕ್ತವನ್ನು, ಶಕ್ತಿಯನ್ನು ಧಾರೆಯೆರೆಯುವ ಯತ್ನದಲ್ಲಿ ತೊಡಗಿಸಿದ್ದೇನೆ. ಯಾವ ರಾಜಕೀಯವನ್ನು ಮಾಡದ, ಗುಂಪುಗಾರಿಕೆಯಿಂದ ದೂರವಿರುವ ಕೃತಿ ನಿಷ್ಠೆ ಹಾಗೂ ಗುಣವನ್ನು ಎತ್ತಿತೋರುವ, ವಿಮರ್ಶಕರನ್ನು ನಾನು ಸ್ವಾಗತಿಸುತ್ತೇನೆ. ನಾನು ನನ್ನ ಅನುಭವವನ್ನು ವಾಸ್ತವಿಕವಾಗಿ,ಜೀವನಕ್ಕೆ ತೀರ ಹತ್ತಿರವಾಗಿ ಸಾಹಿತ್ಯದ ಮುಖಾಂತರ ಹೇಳಿದ್ದೇನೆ. ಇದೇ ಆಧುನಿಕ ಮಹಿಳೆಯ ಸಾಹಿತ್ಯ ನಿರ್ಮಿತಿಯ ಒಂದು ಮುಖ್ಯ ಲಕ್ಷನೆಂದು ನಾನು ನಂಬಿದ್ದೇನೆ.

ಈ ನನ್ನ ಲೇಖನ ಸ್ಥೂಲವಾಗಿ ಸಾಹಿತ್ಯದೊಡನೆ ಸಂಬಂಧವಿರಿಸಿಕೊಂಡು ಬಂದಿರುವ ಆಧುನಿಕ ಮಹಿಳೆಯರ ಹಲವು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಯೋಚಿಸಲು ಸಹಾಯಕವಾದರೆ ಸಂತೋಷ.

○

ಭಾರತೀಯ ಮಹಿಳೆಯರ ಸಮಸ್ಯೆಗಳು, ಕಲ್ಯಾಣ ಕಾರ್ಯಕ್ರಮಗಳು

ಎಚ್. ವಿ. ನಾಗೇಶ್

೧. ಮಹಿಳಾ ಕಲ್ಯಾಣದ ಅವಶ್ಯಕತೆ

ಜಗತ್ತಿನ ಯಾವ ದೇಶದಲ್ಲಿಯೇ ಆಗಲಿ, ಸ್ತ್ರೀಯರು ಸಂಖ್ಯಾ ದೃಷ್ಟಿಯಲ್ಲಿ ಅಲ್ಪಸಂಖ್ಯಾಕರಲ್ಲ; ಭಾರತದಲ್ಲೂ ಅಲ್ಲ. ಭಾರತದ ಸಂವಿಧಾನ ಮತ್ತು ಶಾಸನಗಳು ಮಹಿಳೆಯರಿಗೆ ಪುರುಷರಿಗಿರುವ ಎಲ್ಲ ಹಕ್ಕುಗಳನ್ನು ಕೊಟ್ಟಿವೆ. ಮಹಿಳೆಯರು ದೈಹಿಕವಾಗಿ ಊನಶಕ್ತರೂ ಅಲ್ಲ. ಅಂದ ಮೇಲೆ, ಅವರಿಗೆ ಪ್ರತ್ಯೇಕವಾದ ಕಲ್ಯಾಣ ಕಾರ್ಯಕ್ರಮಗಳು ಏಕೆ ಬೇಕು? ಎಂಬ ಕುಹಕದ ಮಾತು ಎಲ್ಲಾದರೂ ಕೇಳಿಬರಬಹುದು. ಹೌದು, ಎಲ್ಲ ಕಲ್ಯಾಣ ಕ್ರಮಗಳು ಯಾವುದಾದರೊಂದು ಬಾಧಿತ ವರ್ಗಕ್ಕೆಂದು ರೂಪುಗೊಂಡಿರುತ್ತವೆ. ಉದಾಹರಣೆಗೆ, ನೆರೆಪೀಡಿತರು ಒಂದು ಬಾಧಿತವರ್ಗ; ಅವರಿಗೆ ಕಲ್ಯಾಣ ಕಾರ್ಯಕ್ರಮ ಬೇಕು. ಕುರುಡರು ಬಾಧಿತ ವರ್ಗಕ್ಕೆ ಸೇರುತ್ತಾರೆ; ಅವರಿಗಾಗಿ ಕಲ್ಯಾಣ ಕಾರ್ಯಕ್ರಮಗಳಿವೆ. ಹಾಗಾದರೆ, ಸ್ತ್ರೀಯರಿಗೆ ಇಂಥ ಕಾರ್ಯಕ್ರಮಗಳ ಅವಶ್ಯಕತೆ ಏನು?

ಒಂದು ಬಹುಮುಖ್ಯವಾದ ದೃಷ್ಟಿಯಿಂದ ಸ್ತ್ರೀಯರು–ಅದರಲ್ಲೂ ಭಾರತದ ಸ್ತ್ರೀಯರು ಬಾಧಿತರೆಂದು ಹೇಳಿದರೆ ತಪ್ಪಾಗುವುದಿಲ್ಲ. ಶತಮಾನಗಳ ಕಾಲ ಅವರು ಸಂಕುಚಿತವಾದ ಸಂಪ್ರದಾಯಗಳಿಂದ ಪೂರ್ವಾಗ್ರಹಗಳಿಂದ, ನಿರಕ್ಷರತೆಯಿಂದ, ಆರ್ಥಿಕ ಪರಾವಲಂಬನೆಯಿಂದ, ಸಾಮಾಜಿಕ ನ್ಯೂನತೆಗಳಿಂದ ಬಾಧೆಗೊಳಗಾಗಿದ್ದಾರೆ ಈಗಲೂ ಅವುಗಳಿಂದ ಮುಕ್ತವಾಗಿಲ್ಲ. ಸ್ತ್ರೀಯರ ಶೋಷಣೆ ಸೂಕ್ಷ್ಮಾತಿಸೂಕ್ಷ್ಮ ವಿಧಾನಗಳಿಂದ ನಡೆಯುತ್ತಲೇ ಇದೆಯೆಂಬುದು ಜನರು ಅದನ್ನು ಸಾರ್ವಜನಿಕವಾಗಿ ಒಪ್ಪಲಿ ಬಿಡಲಿ ಎಲ್ಲರಿಗೂ ತಿಳಿದ ವಿಷಯ. ಊಳಿಗಮಾನ್ಯ ಪದ್ಧತಿಯಲ್ಲೇ ಬೆಳೆದ, ವರ್ಣ–ಜಾತಿ–ಲಿಂಗ ತಾರತಮ್ಯಗಳಿಗೆ ಹೆಸರಾದ ಭಾರತೀಯ ಸಮಾಜವನ್ನು ಆಮೂಲಾಗ್ರವಾಗಿ ಬದಲಾಯಿಸದೆ ಅಲ್ಲಿಷ್ಟು ಇಲ್ಲಿಷ್ಟು ತೇಪೆಹಚ್ಚಿದರೆ ಇಂಥ ಸಮಸ್ಯೆಗಳು ಮಾಯವಾಗುವುದಿಲ್ಲ. ಎಂದು ಮಾರ್ಕ್ಸ್‌ವಾದಿಗಳು ಹೇಳಬಹುದು. ನಾವು ಮಾರ್ಕ್ಸ್‌ವಾದವನ್ನು ಒಪ್ಪದಿದ್ದರೂ ಮಹಿಳೆಯರು ಶೋಷಣೆಗೆ ಒಳಗಾಗಿದ್ದಾರೆ ಎಂಬುದನ್ನು ಗುರುತಿಸುವುದು

ಕಷ್ಟವಾಗಲಿಕ್ಕಿಲ್ಲ. ಅವರಲ್ಲೂ ಕೆಲವು ವರ್ಗದ ಮಹಿಳೆಯರ ಸಮಸ್ಯೆಗಳು ಎಲ್ಲ ಪ್ರಜ್ಞಾವಂತ ನಾಗರಿಕರ ಗಮನಕ್ಕೆ ತಕ್ಷಣ ಬರುತ್ತವೆ. ಉದಾಹರಣೆಗೆ, ವಿಧವೆಯರು, ಪರಿತ್ಯಕ್ತ ಮಹಿಳೆಯರು, ಅಪಸ್ಪೃಷ್ಟ ಮಹಿಳೆಯರು, ನಿರ್ಗತಿಕ ಮಹಿಳೆಯರು, ಗ್ರಾಮೀಣ ಕೂಲಿಕಾರಳು, ಶೀಲಭಂಗ ಅತ್ಯಾಚಾರ-ಅನೈತಿಕತೆಗಳಿಗೆ ತುತ್ತಾದ ಮಹಿಳೆಯರು, ಅವಿವಾಹಿತ ತಾಯಂದಿರು, ತನ್ನ ಇಚ್ಛೆಗೆ ವಿರುದ್ಧವಾಗಿ ವೇಶ್ಯಾ ವೃತ್ತಿಗೆ ಎಳೆಯಲ್ಪಟ್ಟ ಮಹಿಳೆ, ಗಂಡಂದಿರ ಕ್ರೌರ್ಯಕ್ಕೆ ಒಳಗಾದ ಹೆಂಡಿರು—ಈ ಪಟ್ಟಿ ಮುಗಿಯಲಿಲ್ಲ; ಆದರೆ ಅದು ಅವರ ಸಮಸ್ಯೆಯ ಕಿರುಪರಿಚಯ ಮಾಡಿಕೊಡಬಲ್ಲುದು. ಕಲ್ಯಾಣರಾಜ್ಯವೆಂದು ಕರೆಯಿಸಿಕೊಳ್ಳುವ ಯಾವ ರಾಷ್ಟ್ರವೂ ಇಂಥ ಬಾಧಿತರ ಸಹಾಯಕ್ಕೆ ಬರುವುದು ಸಹಜವೂ ಹೌದು, ಅನಿವಾರ್ಯವೂ ಹೌದು.

೨. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ಬಾಧಿತರಿಗೆ ಸಹಾಯ ಸಲ್ಲಿಸುವ ಉದ್ದೇಶವೇನೋ ಒಳ್ಳೆಯದೇ, ಆದರೆ ಅಂಥ ಸಹಾಯ ಸಲ್ಲಿಸುವ ಸಂಸ್ಥೆ ಅಥವಾ ಸರಕಾರಕ್ಕೆ ಬಾಧೆ ಯಾವುದು, ಅದರ ತೀವ್ರತೆ ಎಂಥದು, ಎಂಥ ಸಹಾಯಬೇಕು, ಆ ಸಹಾಯವನ್ನು ಯಾವ ರೂಪದಲ್ಲಿ ಕೊಡಬೇಕು ಎಂಬ ಅರಿವು ಅಗತ್ಯ. ಆದುದರಿಂದ ನಮ್ಮ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪ್ರಯತ್ನಗಳನ್ನು ಮಾಡಲಾಯಿತು. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಬಹುದು. ೧೯೫೮ರಲ್ಲಿ ಸ್ತ್ರೀಯರ ಶಿಕ್ಷಣದ ಮೇಲಿನ ರಾಷ್ಟ್ರೀಯ ಸಮಿತಿ ನೇಮಕವಾಗಿ ಅದು ೧೯೫೯ರಲ್ಲಿ ವರದಿ ಸಲ್ಲಿಸಿತು. ಇದಕ್ಕಿಂತ ವ್ಯಾಪಕವಾದ ಉದ್ದೇಶವುಳ್ಳ ಸಮಿತಿಯೊಂದನ್ನು ೧೯೭೧ರಲ್ಲಿ ನೇಮಕ ಮಾಡಲಾಯಿತು. ೧೯೭೫ರಲ್ಲಿ ವರದಿ ಪ್ರಕಟವಾಯಿತು. ಶಿಕ್ಷಣ ಮತ್ತು ಉದ್ಯೋಗಗಳ ವಿಷಯದಲ್ಲಿ ನಾವು ಅಪೇಕ್ಷಿಸುವ ಸಮಾನಾವಕಾಶಗಳಿಗೂ ವಸ್ತುಸ್ಥಿತಿಗೂ ಏನೇನೂ ಸಂಬಂಧವಿಲ್ಲವೆಂದು ಈ ವರದಿ ಕಣ್ಣಿಗೆ ಕಟ್ಟುವಂತೆ ತಿಳಿಸುತ್ತದೆ. ಬೇಸಾಯ, ಗಣಿಯಲ್ಲಿ ಕೂಲಿಕೆಲಸ ಹಾಗೂ ಪ್ಲಾಂಟೇಶನ್ನುಗಳಲ್ಲಿ ಕೂಲಿಕೆಲಸ ಇವುಗಳನ್ನು ಬಿಟ್ಟರೆ ಬೇರೆ ಎಲ್ಲಿಯೂ ಮಹಿಳೆಯರಿಗೆ ಪ್ರಾತಿನಿಧ್ಯ ಇಲ್ಲ. ಹೆಚ್ಚೆಂದರೆ ೧೦%ರಷ್ಟು ಇರಬಹುದು, ಅಷ್ಟೆ. ಅರೆ-ಅವಧಿಯ ಉದ್ಯೋಗಗಳೂ ಬಹಳ ಕಡಿಮೆ. ನಗರಸ್ಥಿತ ಉದ್ಯೋಗಗಳಲ್ಲಿ ಎರಡೇ ಎರಡು ಉದ್ಯೋಗಗಳು ಹೆಣ್ಣುಮಕ್ಕಳನ್ನು ದೊಡ್ಡ ಸಂಖ್ಯೆಯಲ್ಲಿ ಸೇರಿಸಿಕೊಂಡಿವೆ. ಕಟ್ಟಡ ಕಟ್ಟುವ ಕೂಲಿಕೆಲಸ ಮತ್ತು ಬೀಡಿಕಟ್ಟುವ ಕೆಲಸ ಇವೇ ಆ ಎರಡು. ವಿವಿಧ ವೃತ್ತಿಗಳು ಹಾಗೂ ಸೇವೆಗಳಲ್ಲಿ ೧% ರಿಂದ ೩% ವರೆಗೆ ಅವಕಾಶಗಳು ಸಿಕ್ಕಬಹುದು. ಕಚೇರಿಯ ಕಾರಕೂನ ಮಟ್ಟದಲ್ಲಿ ಸುಮಾರು ೮% ಸ್ತ್ರೀಯರಿದ್ದಾರೆ. ಇದ್ದುದರಲ್ಲಿ ಸ್ತ್ರೀಯರಿಗೆ ಹೆಚ್ಚು ಅವಕಾಶವಿರುವ ವೃತ್ತಿಗಳೆಂದರೆ ಶಿಕ್ಷಕಿಯರಾಗಿ ಮತ್ತು ವೈದ್ಯರಾಗಿ ದುಡಿಯುವುದು. ಸ್ತ್ರೀ-ಪುರುಷರಿಬ್ಬರ ಸಾಕ್ಷರತಾ ಪ್ರಮಾಣಗಳು ಕ್ರಮೇಣ ಏರುತ್ತಿದ್ದರೂ ಅವುಗಳ ನಡುವಿನ ಅಂತರ ಇನ್ನೂ ಉಳಿದುಕೊಂಡಿದೆ. ೧೯೮೧ರ ಜನಗಣತಿಯಂತೆ ಪುರುಷರ ಸಾಕ್ಷರತಾ ಪ್ರಮಾಣ ೪೬.೭೪%ಕ್ಕೆ ಏರಿದ್ದರೆ, ಮಹಿಳೆಯರ ಸಾಕ್ಷರತಾ

ಪ್ರಮಾಣ ೨೪.೮೮% ಮಾತ್ರ ಇತ್ತು–ಅಂದರೆ ಪುರುಷರ ಪ್ರಮಾಣದ ಅರ್ಧದಷ್ಟು ಮಾತ್ರ !

ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನ ಪುರುಷರಿಗಿಂತ ಬಹಳ ಕೀಳಾಗಿದೆಯೆಂಬುದು ಎಲ್ಲರಿಗೂ ಗೊತ್ತು. ಆದರ್ಶಗಳನ್ನು ವರ್ಣಿಸುವ ಧರ್ಮಗ್ರಂಥಗಳು ಕೆಲವೊಮ್ಮೆ ತಾತ್ವಿಕವಾಗಿ ಗಂಡೂ ಹೆಣ್ಣೂ ಸರಿಸಮಾನರೆಂದು ವರ್ಣಿಸಿದ್ದರೂ, ಆಚರಣೆಯಲ್ಲಿ ಶತಮಾನಗಳಿಂದಲೂ ತಾರತಮ್ಯಗಳು ನಡೆದುಬಂದಿವೆ. ಸ್ವಾತಂತ್ರ್ಯದ ನಂತರ ನಾವು ರೂಪಿಸಿಕೊಂಡ ಸಂವಿಧಾನ ಇನ್ನೊಮ್ಮೆ ಸಮಾನತೆಯನ್ನು ಪ್ರಸ್ತಾಪಿಸಿದರೂ ಆಚರಣೆಯಲ್ಲಿ ಮತ್ತೆ ಅದೇ ಅಸಹಾಯಕತೆ ಉಳಿದುಕೊಂಡಿದೆ. ಗ್ರಾಮಾಂತರದಲ್ಲಿ ಸ್ತ್ರೀಯು ಗಂಡನಿಗೆ ಸಮನಾಗಿ ಗದ್ದೆಗಳಲ್ಲಿ ದುಡಿಯುತ್ತ ಬಂದಿದ್ದಾಳೆ. ಅದರೊಂದಿಗೆ ಮನೆಗೆಲಸ, ಮಕ್ಕಳನ್ನು ಸಾಕಿ ಬೆಳೆಸುವುದು ಮೊದಲಾದ ಹೊರೆಯನ್ನೂ ಹೊತ್ತಿದ್ದಾಳೆ. ಆದರೆ ಹೆಣ್ಣು ಆರ್ಥಿಕ ಭಾರ ಎಂಬ ಪ್ರತೀತಿ ಮಾತ್ರ ತಪ್ಪಿಲ್ಲ. ನಗರದಲ್ಲಿ, ಅದೂ ಮಧ್ಯಮ ಹಾಗೂ ಮೇಲ್ವರ್ಗಗಳಲ್ಲಿ, ಅವಳು ಕೆಲಸ ಮಾಡಬಾರದು ಎಂಬ ನಿರ್ಬಂಧವಿದೆ. ಆದರೆ ಇದು ಗಂಡನೇ ಹಾಕಿದ ನಿರ್ಬಂಧ. ಇದರಿಂದಲೇ ಅವಳು ಆದಾಯ ತರುವ ವೃತ್ತಿಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಪರಿಣಾಮ ವೆಂದರೆ ಹೆಣ್ಣು ಹೊರೆಯೆಂಬ ಅಪವಾದ ಬಂದಿದೆ. ಕೆಲಸಕ್ಕೆ ಸೇರಿಕೊಳ್ಳುವ ಕೆಲವೇ ಕೆಲವು ಉದ್ಯೋಗಸ್ಥ ಮಹಿಳೆಯರು ಮನೆಯಿಂದ ಹೊರಗೆ ಇರಬೇಕಾದಾಗ ಅವರಿಗೆ ಬೇಕಾದ ಸೌಲಭ್ಯಗಳು ಸಿಗುವುದಿಲ್ಲ. ಹೊಲಗದ್ದೆಗಳಲ್ಲಿ, ಗಣಿಗಳಲ್ಲಿ, ಕಟ್ಟಡ ಕಟ್ಟುವ ಕೆಲಸಗಳಲ್ಲಿ, ಗೃಹಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯರು ಗಂಡಸರಷ್ಟೇ ದುಡಿದರೂ ಗಂಡಸರಿಗಿಂತ ಕಡಿಮೆ ಸಂಬಳ ಪಡೆಯುತ್ತಾರೆ. ಈ ತಾರತಮ್ಯವನ್ನು ಕಾಯಿದೆಯ ದೃಷ್ಟಿಯಿಂದ ಈಗಾಗಲೇ ನಿಷೇಧಿಸಲಾಗಿದೆ. ಆದರೆ ಅದು ಆಚರಣೆಯಲ್ಲಿ ಬಹಳಮಟ್ಟಿಗೆ ಉಳಿದುಕೊಂಡಿದೆ.

ಮಹಿಳೆಯರ ವಿರುದ್ಧದ ತಾರತಮ್ಯಭಾವ ಮತ್ತು ಶೋಷಣೆ ಎಷ್ಟರಮಟ್ಟಿಗೆ ನಮ್ಮಲ್ಲಿ ಆಳವಾಗಿ ಬೇರುಬಿಟ್ಟದೆಯೆಂದು ಸರಿಯಾಗಿ ಗ್ರಹಿಸಬೇಕಾದರೆ ಹಳ್ಳಿಗರ ಆಹಾರ ಪದ್ಧತಿಯನ್ನು ಸ್ವಲ್ಪ ನೋಡಬೇಕು. ಗಂಡಿಗೊಂದು ಆಹಾರ, ಹೆಣ್ಣಿಗೊಂದು ಆಹಾರ ಎಂಬ ತತ್ವ ಇನ್ನೂ ಮಾಯವಾಗಿಲ್ಲ. ಗಂಡ ಉಂಡೆದ್ದ ಮೇಲೆ ಹೆಂಡತಿ ಎಂಜಲು ಉಣ್ಣುವುದು ಹಳೆಯ ಪದ್ಧತಿ. ಅಷ್ಟೇ ಅಲ್ಲ, ಸತ್ವಯುತವಾದದ್ದು ಏನಾದರೂ ಇದ್ದರೆ ಅದು ಗಂಡಿಗೆ–ಉಳಿದದ್ದು ಹೆಣ್ಣಿಗೆ ಎಂಬ ರೂಢಿಯೂ ಇದೆ. ಪಂಜಾಬ, ಹರ್‍ಯಾಣ, ಉತ್ತರಪ್ರದೇಶ, ಬಿಹಾರ ಮುಂತಾದ ರಾಜ್ಯಗಳಲ್ಲಿ ಇದು ಜನಪದದ ರೂಢಿಯಂತೆ ! ಕರ್ನಾಟಕದ ಹಳ್ಳಿಗಾಡಿನ ಸರಿಯಾದ ಪರಿಚಯ ಇರುವವರಿಗೂ ಇದೊಂದು ಸೋಜಿಗದ ಸಂಗತಿಯಲ್ಲ. ಇನ್ನು ಆರೋಗ್ಯದ ವಿಷಯದಲ್ಲೂ ಸಮಸ್ಯೆಗಳಿವೆ. ಹೆರಿಗೆ ಬಾಣಂತಿತನಗಳಲ್ಲಿ ಸಾಯುವುದು, ಅನೇಕ ಹೆರಿಗೆಗಳಾಗಿ ರಕ್ತಹೀನತೆಯಿಂದ ಬಳಲುವುದು, ಹೆರಿಗೆಯ ಯಂತ್ರದಂತೆ ಬಾಳುವುದು ಇವೂ ನಮ್ಮ ಮಹಿಳೆಯರ ಚಿರಪರಿಚಿತ ಜಾಡ್ಯಗಳು.

ದುರದೃಷ್ಟದ ಮಾತೆಂದರೆ ಸಾಕ್ಷರತಾ ಪ್ರಮಾಣ ಹೆಚ್ಚುತ್ತಿರುವಂತೆಯೇ, ನಮ್ಮ ಸಂವಿಧಾನ ಮತ್ತು ಶಾಸನಗಳು ರಕ್ಷಣೆಗೆ ಬರುತ್ತಿದ್ದಂತೆಯೇ, ಮಹಿಳೆಯರನ್ನು ಘಾಸಿಗೊಳಿಸುವ ಪಿಡುಗುಗಳು ಹೆಚ್ಚುತ್ತಲೇ ನಡೆದಿವೆ. ಹೆಣ್ಣುಮಕ್ಕಳನ್ನು ಬೇರೆ ಬೇರೆ ನಗರಗಳಿಗೂ ದೇಶಗಳಿಗೂ ಒಯ್ದು ವೇಶ್ಯಾವಾಟಿಕೆಗಳಿಗೆ ತುರುಕುವ ಪ್ರಸಂಗಗಳು ಹೆಚ್ಚುತ್ತಿವೆ. ಶೀಲಭಂಗ, ಅಪಹರಣ, ಬಲಾತ್ಕಾರಗಳೂ ಹೆಚ್ಚುತ್ತಿವೆ. ವರದಕ್ಷಿಣೆಯ ಪಿಡುಗು ಒಮ್ಮಿಂದೊಮ್ಮೆಲೇ ಹೆಚ್ಚಿದಂತೆ ಭಾಸವಾಗುತ್ತಿದೆ. ನಿರ್ಗತಿಕರಾದ ಹೆಣ್ಣುಮಕ್ಕಳನ್ನೂ, ಗಂಡ ಬಿಟ್ಟವಳನ್ನೂ, ವಿಧವೆಯರನ್ನೂ ಎಂದಿನಂತೆಯೇ ನಿರ್ಲಕ್ಷಿಸಲಾಗುತ್ತಿದೆ. ನಾವು ಪ್ರಸ್ತಾಪಿಸಿದ ಸಮಸ್ಯೆಗಳನ್ನೆಲ್ಲ ನೋಡಿದರೆ, ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಸುಧಾರಿಸಿದೆ ಅಥವಾ ಸುಧಾರಿಸುತ್ತಿದೆ ಎಂಬ ವರದಿಗಳನ್ನು ಶಂಕಿಸುವುದೂ ಸಾಧ್ಯವಿದೆ. ಇಂಥ ಪರಿಸ್ಥಿತಿಯಲ್ಲಿ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು ಅನಿವಾರ್ಯ ಎಂಬ ಬಗ್ಗೆ ಎರಡು ಅಭಿಪ್ರಾಯಗಳಿರಲು ಸಾಧ್ಯವುಂಟೆ ?

೩. ಮಹಿಳಾ ಕಲ್ಯಾಣಕ್ಕೆ ಆಧುನಿಕ ಪ್ರಯತ್ನಗಳು

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಇದ್ದ ಪೂರ್ವಾಗ್ರಹಗಳು ಅಷ್ಟಿಷ್ಟಾಗಿ ಕರಗುತ್ತ ಹೋದುದನ್ನು ಕಾಣಬಹುದು. ಮಹಿಳಾ ಕಲ್ಯಾಣದ ಗುರಿಯನ್ನು ಹೊತ್ತ ಅನೇಕ ಸಂಘಸಂಸ್ಥೆಗಳು ಸ್ಥಳೀಯ ಮಟ್ಟದಲ್ಲೂ ರಾಷ್ಟ್ರೀಯ ಮಟ್ಟದಲ್ಲೂ ಅಸ್ತಿತ್ವಕ್ಕೆ ಬಂದವು. ವಿಮೆನ್ಸ ಇಂಡಿಯನ್ ಅಸೋಸಿಯೇಶನ್, ಫೆಡರೇಶನ್ ಆಫ್ ಯುನಿವ್ಹರ್ಸಿಟಿ ವಿಮೆನ್, ನ್ಯಾಶನಲ್ ಕೌನ್ಸಿಲ್ ಆಫ್ ವಿಮೆನ್, ಆಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್ ಮುಂತಾದುವನ್ನು ಹೆಸರಿಸಬಹುದು. ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಜಸ್ಟಿಸ್ ರಾನಡೆ, ಪಂಡಿತಾ ರಮಾಬಾಯಿ, ಮುತ್ತುಲಕ್ಷ್ಮಿರೆಡ್ಡಿ, ಅ್ಯನಿ ಬೆಸೆಂಟ್, ಮಾರ್ಗರೆಟ್ ಕಸಿನ್ಸ್, ಮಹರ್ಷಿ ಕರ್ವೆ ಮೊದಲಾದವರು ಮಹಿಳೆಯರ ಪ್ರಶ್ನೆಯನ್ನೆತ್ತಿಕೊಂಡು ಹೋರಾಡಿದರು. ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ಸ್ತ್ರೀಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಸಾವಿರ ಸಂಖ್ಯೆಯಲ್ಲಿ ಪಾಲುಗೊಂಡರು. ಇದು ಬ್ರಿಟಿಷ ಸರಕಾರವನ್ನು ಚಕಿತಗೊಳಿಸಿದ ಮಾತ್ರವಲ್ಲ, ಭಾರತೀಯ ಪುರುಷರನ್ನೂ ಚಕಿತಗೊಳಿಸಿತು. ಅವರ ಸಂಘಟನಾ ಶಕ್ತಿ, ಧೈರ್ಯಗಳು ಬೆಳಕಿಗೆ ಬಂದವು. ಇದರಿಂದ ಮಹಿಳೆಯರ ಶಕ್ತಿ ಸಾಮರ್ಥ್ಯಗಳ ಬಗ್ಗೆ ಹೆಚ್ಚಿನ ಅಬ್ಬರವಿಲ್ಲದೆ ಎಲ್ಲರ ಮನ್ನಣೆ ಸಿಗುವಂತಾಯಿತು; ಅಲ್ಲದೆ ಸ್ವಾತಂತ್ರ್ಯದ ನಂತರ ಸುಧಾರಣೆ ಮತ್ತು ಮಹಿಳಾ ಕಲ್ಯಾಣದ ಹೊಸ ಯುಗವೇ ಪ್ರಾರಂಭವಾಗುವುದಕ್ಕೆ ಅನುಕೂಲವಾಯಿತು.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಮಹಿಳಾ ಕಲ್ಯಾಣಕ್ಕೋಸ್ಕರ ತೆಗೆದುಕೊಂಡ ಪ್ರಪ್ರಥಮ ಹೆಜ್ಜೆಯೆಂದರೆ ನಮ್ಮ ಸಂವಿಧಾನದಲ್ಲಿ ಇದಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ವಿಧಿಗಳನ್ನು ಸೇರಿಸಿಕೊಂಡದ್ದು, ಸಂವಿಧಾನದ ಪ್ರಕಾರ ಜಾತಿ ಪಂಥ ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳನ್ನು ಕೊಡಲಾಗಿದೆ. ಮತ ಚಲಾಯಿಸುವ ಹಕ್ಕು, ಚುನಾವಣೆಗೆ ನಿಲ್ಲುವ ಹಕ್ಕು, ಸಾರ್ವಜನಿಕ ಅಧಿಕಾರಗಳನ್ನು

ಪಡೆಯುವ ಹಕ್ಕು ಸ್ತ್ರೀ–ಪುರುಷರಿಗೆ ಸಮಾನವಾಗಿ ಸಿಕ್ಕಿದೆ. ಸಂವಿಧಾನದ ೧೫ನೇ ವಿಧಿಯು ಲಿಂಗಭೇದದ ಮೇಲೆ ತಾರತಮ್ಯವನ್ನು ಮಾಡಬಾರದು ಎಂದು ವಿಧಿಸುವು ದರ ಜೊತೆಗೆ, ಸ್ತ್ರೀಯರಿಗಾಗಿ ವಿಶೇಷ ಸವಲತ್ತುಗಳನ್ನು ಕೊಡುವುದಕ್ಕೂ ಅನುವು ಮಾಡಿಕೊಟ್ಟಿದೆ.

ಸಂವಿಧಾನಾತ್ಮಕ ಪ್ರಯತ್ನದಷ್ಟೇ ಮುಖ್ಯವಾದುದು ಮಹಿಳಾ ಕಲ್ಯಾಣಕ್ಕೆ ಸಂಬಂಧಿಸಿದ ಶಾಸನಗಳು. ಇಂಥ ಕೆಲವು ಶಾಸನಗಳು ೧೯ನೇ ಶತಮಾನದಲ್ಲಿಯೇ ರಚಿತವಾಗಿದ್ದನ್ನು ನೋಡಬಹುದು. ೧೮೨೯ರಲ್ಲಿ ಬಂದ ಸತಿ ನಿರ್ಮೂಲನಾ ಕಾಯಿದೆ. ೧೮೫೬ರಲ್ಲಿ ಬಂದ ವಿಧವಾ ಪುನರ್ವಿವಾಹ ಕಾಯಿದೆ ಇವುಗಳನ್ನು ಇಲ್ಲಿ ಎತ್ತಿ ಹೇಳ ಬೇಕು. ಈ ಶತಮಾನದ ಆದಿಭಾಗದಲ್ಲಿ–ಅಂದರೆ ೧೯೨೯ರಲ್ಲಿ–ಬಂದ ಬಾಲ್ಯವಿವಾಹ ಪ್ರತಿಬಂಧಕ ಕಾಯಿದೆ (ಶಾರದಾ ಕಾಯಿದೆ) ಹಾಗೂ ಸ್ವಾತಂತ್ರ್ಯದ ನಂತರ ಬಂದ ವಿಶೇಷ ವಿವಾಹ ಕಾಯಿದೆ (೧೯೫೪). ಹಿಂದೂ ವಿವಾಹ ಕಾಯಿದೆ (೧೯೫೫). ಹಿಂದೂ ವಾರಸಾ ಮತ್ತು ಉತ್ತರಾಧಿಕಾರ ಕಾಯಿದೆ (೧೯೫೬). ಹಿಂದೂ ದತ್ತಕ ಮತ್ತು ಜೀವನಾಂಶ ಕಾಯಿದೆ (೧೯೫೬) ಹಾಗೂ ಹಿಂದೂ ಅನೈತಿಕ ವ್ಯವಹಾರಗಳ ಪ್ರತಿಬಂಧಕ ಕಾಯಿದೆ (೧೯೫೬) ಇವು ಮಹತ್ವದವು. ಇವುಗಳಲ್ಲಿ ಹಿಂದೂ ವಿವಾಹ ಕಾಯಿದೆ ಏಕಪತ್ನಿತ್ವವನ್ನು ವಿಧಿಸುತ್ತದೆ, ವಿವಾಹದ ಕನಿಷ್ಠ ವಯೋಮಿತಿಯನ್ನು ಎತ್ತರಿಸುತ್ತದೆ. ವಿವಾಹ ವಿಚ್ಛೇದನವನ್ನು ಮನ್ನಿಸಿ ಅನುಮತಿಸುತ್ತದೆ ಮತ್ತು ಸಂಗಾತಿಗಳ ಆಯ್ಕೆಯನ್ನು ವಿಶಾಲಗೊಳಿಸುತ್ತದೆ. ಹಿಂದೂ ವಾರಸಾ ಮತ್ತು ಉತ್ತರಾಧಿಕಾರದ ಕಾಯಿದೆಯಂತೆ ಆಸ್ತಿ ಅನುಭವಿಸುವ ವಿಷಯದಲ್ಲಿ ಮಗನೂ ಮಗಳೂ ಸಮಾನರು. ಮೊದಲ ಬಾರಿಗೆ ವಿಧವೆ ಮತ್ತು ಮಗಳು ಆಸ್ತಿಯ ಉತ್ತ ರಾಧಿಕಾರವನ್ನು ಪೂರ್ಣವಾಗಿ ಪಡೆಯುತ್ತಾರೆ. ದತ್ತಕ ಮತ್ತು ಜೀವನಾಂಶದ ಕಾಯಿದೆಯು ಹೆಣ್ಣನ್ನು ದತ್ತಕ ಪಡೆಯುವುದನ್ನು ಮನ್ನಿಸುವುದಲ್ಲದೆ ಎಲ್ಲ ದತ್ತಕ ಗಳಿಗೂ ತಾಯಿಯ ಅನುಮತಿ ಅವಶ್ಯವೆಂದು ವಿಧಿಸುತ್ತದೆ. ಗಂಡನಿಂದ ಪ್ರತ್ಯೇಕ ಇರಬಯಸುವ ಪತ್ನಿಗೆ ಜೀವನಾಂಶ ಸಿಗುವುದಕ್ಕೆ ಇಲ್ಲಿ ಅವಕಾಶವಿದೆ. ೧೯೬೧ರ ವರದಕ್ಷಿಣಾ ಪ್ರತಿಬಂಧಕ ಕಾಯಿದೆ, ಆನಂತರ ಜಾರಿಗೆಬಂದ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಕಾಯಿದೆ ಇವುಗಳನ್ನೂ ಹೆಸರಿಸಬೇಕು. ಇಂಥ ಕಾಯಿದೆಗಳು ನಿಂತ ನೀರಿನಂತಿದ್ದ ಸಮಾಜ ವ್ಯವಸ್ಥೆಗೆ ಹೊಸ ತಿರುವುಕೊಡುತ್ತವೆ. ಸ್ತ್ರೀಯರ ಸ್ಥಾನ ಮಾನವನ್ನು ಎತ್ತರಿಸುವುದರಲ್ಲಿ ಅವು ಖಂಡಿತವಾಗಿಯೂ ಸಹಕಾರಿಯಾಗಿವೆ. ೧೯೭೬ರ ಜನಸಂಖ್ಯಾ ಘೋಷಣೆಯನ್ನೂ ನಾವು ಇಲ್ಲಿ ಸ್ಮರಿಸಬೇಕು. ಇದು ನೇರವಾಗಿ ಮಹಿಳಾ ಕಲ್ಯಾಣಕ್ಕೆ ಸಂಬಂಧಿಸಿದ ಶಾಸನವಲ್ಲ. ಆದರೆ ಇದು ವಿವಾಹದ ವಯಸ್ಸು ಏರಬೇಕೆಂದೂ, ಕುಟುಂಬವು ಚಿಕ್ಕಗಾತ್ರದ್ದಾಗಿರಬೇಕೆಂದೂ ಪ್ರತಿಪಾದಿಸಿ ಮಹಿಳಾ ಕಲ್ಯಾಣಕ್ಕೆ ಸಹಕಾರಿಯಾಗಿದೆ ಎಂದರೆ ತಪ್ಪಲ್ಲ.

೪. ಕಲ್ಯಾಣ ಕಾರ್ಯಕ್ರಮಗಳು

ಮಹಿಳೆಯರಿಗಾಗಿರುವ ಕಲ್ಯಾಣ ಕಾರ್ಯಕ್ರಮಗಳನ್ನು ಸ್ವಯಂಸೇವಾ ಸಂಸ್ಥೆಗಳೂ, ಕೇಂದ್ರ ಮತ್ತು ರಾಜ್ಯ ಸರಕಾರಗಳೂ ಹಮ್ಮಿಕೊಂಡಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಬಹುದು :

(i) ಮಹಿಳೆಯರ ಶಿಕ್ಷಣ ಕಾರ್ಯಕ್ರಮಗಳು
(ii) ಕುಟುಂಬ ಕಲ್ಯಾಣ ಯೋಜನೆ ಮತ್ತು ಆರೋಗ್ಯ ಸೇವೆಗಳು
(iii) ಸ್ತ್ರೀಯರ ಆರ್ಥಿಕ ವಿಮೋಚನೆ
(iv) ನೈತಿಕ ಗಂಡಾಂತರದಲ್ಲಿರುವ ಮಹಿಳೆಯರ ರಕ್ಷಣೆ
(v) ಮಾತೃತ್ವ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು
(vi) ಗ್ರಾಮೀಣ ಪ್ರದೇಶದ ಕುಟುಂಬ ವಿಸ್ತರಣಾ ಕಾರ್ಯಕ್ರಮಗಳು
(vii) ನಗರ ಪ್ರದೇಶದ ಕುಟುಂಬ ವಿಸ್ತರಣಾ ಕಾರ್ಯಕ್ರಮಗಳು
(viii) ನಿರ್ಗತಿಕ ಹಾಗೂ ಆಪತ್‌ಗ್ರಸ್ತ ಮಹಿಳೆಯರ ಪುನರ್ವಸತಿ ಕಾರ್ಯಕ್ರಮ
(ix) ವಿಧವೆಯರಿಗೆ ಮಾಸಿಕ ಪಿಂಚಣಿ
(x) ಮಹಿಳಾ ಕಾರ್ಮಿಕರ ಕಲ್ಯಾಣ
(xi) ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿಗೃಹ ನಿರ್ಮಾಣ
(xii) ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ರಚನೆ
(xiii) ಸ್ವಯಂಸೇವಾ ಸಂಸ್ಥೆಗಳಿಗೆ ಆರ್ಥಿಕ ಬೆಂಬಲ, ಅನುದಾನ

ಅಜ್ಞಾನ ಮತ್ತು ಅನಕ್ಷರತೆಗಳು ಮಹಿಳೆಯರು ಕೀಳು ಸ್ಥಾನಮಾನ ಹೊಂದಿರುವುದಕ್ಕೆ ಬಹುಮುಖ್ಯವಾದ ಕಾರಣವಾಗಬಹುದೆಂಬುದನ್ನು ಗ್ರಹಿಸಿ ಮಹಿಳಾ ಶಿಕ್ಷಣಕ್ಕೆ ಮಹತ್ವಕೊಡಲಾಗಿದೆ. ಇದರಿಂದ ಉದ್ಯೋಗ ಪ್ರಾಪ್ತಿಯಾಗಿ ಅವರ ಆರ್ಥಿಕ ಸ್ವಾವಲಂಬನವೂ ಸಾಧ್ಯವಾಗುತ್ತದೆ. ೧೯೫೧ರಲ್ಲಿ ೭.೯೩% ಇದ್ದ ಮಹಿಳಾ ಸಾಕ್ಷರತಾ ಪ್ರಮಾಣವು ೧೯೮೧ರಲ್ಲಿ ೨೪.೮೮%ಕ್ಕೆ ಏರಿದೆ. ೧೫–೪೫ ವಯೋಗುಂಪಿನಲ್ಲಿರುವ ಹೆಣ್ಣುಮಕ್ಕಳಿಗಾಗಿ ರೂಪಿಸಿದ ಸಂಕ್ಷಿಪ್ತ ಶಿಕ್ಷಣ ಯೋಜನೆ, ವೃತ್ತಿಪರ ಶಿಕ್ಷಣ ಯೋಜನೆ, ಮಹಿಳಾ ಶಿಕ್ಷಣ ಕೊಡುವ ಸ್ವಯಂಸೇವಾ ಸಂಸ್ಥೆಗಳಿಗೆ ಕೊಡುವ ಆರ್ಥಿಕ ಸಹಾಯ ಇವುಗಳನ್ನು ನಾವು ಎತ್ತಿಹೇಳಬೇಕು.

ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದೂ, ಮಹಿಳಾ ಕಾರ್ಮಿಕರಿಗೆ ಸೌಲಭ್ಯಗಳನ್ನು ಕೊಡುವುದೂ, ಸ್ತ್ರೀ–ಪುರುಷರ ವೇತನಗಳಲ್ಲಿ ಸಮಾನತೆಯನ್ನು ತರುವುದೂ, ಉದ್ಯೋಗಸ್ಥ ಮಹಿಳೆಯರಿಗಾಗಿ ಸಣ್ಣ ದೊಡ್ಡ ನಗರ ಪ್ರದೇಶಗಳಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸುವುದೂ ಮಹಿಳಾ ಕಲ್ಯಾಣದ ಅಂಗವಾಗಿ ಕೈಕೊಂಡ ಕೆಲವು ಪ್ರಮುಖ ಕಾರ್ಯಕ್ರಮಗಳು. ೧೯೭೧ರ ಜನಗಣತಿಯಂತೆ ಭಾರತದಲ್ಲಿ ೩೧.೩ ದಶಲಕ್ಷ ಮಹಿಳಾ ಕೆಲಸಗಾರರಿದ್ದರು. ಇವರಲ್ಲಿ ೩೦% ಕೃಷಿ ಕಾರ್ಯದಲ್ಲೂ, ೫೦% ಕೃಷಿಕೂಲಿಕೆಲಸದಲ್ಲಿಯೂ ತೊಡಗಿದ್ದರು. ಸುಸಂಘಟಿತ ಕೈಗಾರಿಕೆಗಳಲ್ಲಿ ಕೇವಲ ೬% ಮಹಿಳೆಯರೂ, ಸಂಘಟಿತವಲ್ಲದ ಇತರ ಕೈಗಾರಿಕೆಗಳಲ್ಲಿ ಇನ್ನೊಂದು ೪.೫% ಮಹಿಳೆಯರೂ ಕೆಲಸಮಾಡುತ್ತಿದ್ದರು. ಒಟ್ಟಿನಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಸ್ತ್ರೀಯರು ಅಸಂಘಟಿತ ಕಾರ್ಮಿಕ ಕ್ಷೇತ್ರದಲ್ಲಿದ್ದು ಶೋಷಣೆಗೆ ಒಳಗಾಗಿದ್ದರೆಂದರೆ ತಪ್ಪಿಲ್ಲ. ಇವರ ರಕ್ಷಣೆಗೆಂದು ಹಲವು ಕಾರ್ಮಿಕ ಶಾಸನಗಳು ಬಂದಿದ್ದು ಅವು ನೇರವಾಗಿ ಅಥವಾ ಪರೋಕ್ಷವಾಗಿ ಮಹಿಳೆಯರಿಗೆ

ರಕ್ಷಣೆ ಒದಗಿಸುತ್ತವೆ. ಕಾರ್ಖಾನೆಗಳ ಕಾಯಿದೆ (೧೯೪೮), ಕನಿಷ್ಠ ವೇತನ ಕಾಯಿದೆ (೧೯೪೮), ನೌಕರರ ರಾಜ್ಯ ವಿಮಾ ಕಾಯಿದೆ (೧೯೪೮), ಪ್ಲಾಂಟೇಶನ್ ಕಾರ್ಮಿಕ ಕಾಯಿದೆ (೧೯೫೧), ಗಣಿಗಳ ಕಾಯಿದೆ (೧೯೫೨), ಮಾತೃತ್ವ ಸೌಲಭ್ಯಗಳ ಕಾಯಿದೆ (೧೯೬೧), ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯಿದೆ (೧೯೬೬), ಕಾಂಟ್ರಾಕ್ಟ್ ಲೇಬರ್ ಕಾಯಿದೆ (೧೯೭೦), ಸಮಾನ ವೇತನ ಕಾಯಿದೆ (೧೯೭೬), ಕಾರ್ಖಾನೆಗಳ (ತಿದ್ದುಪಡಿ) ಕಾಯಿದೆ (೧೯೭೬) ಇತ್ಯಾದಿಗಳನ್ನು ಇಲ್ಲಿ ಸ್ಮರಿಸಬಹುದು. ಮಹಿಳಾ ಪಾಲಿಟೆಕ್ನಿಕ್‌ಗಳು, ಮಹಿಳೆಯರ ವೃತ್ತಿಶಿಕ್ಷಣ ಶಾಲೆಗಳು, ತರಬೇತಿ ಕೇಂದ್ರಗಳು ಇವೆಲ್ಲವೂ ಕೂಡ ಮಹಿಳೆಯರಿಗೆ ಹೆಚ್ಚಿನ ಉದ್ಯೋಗ ದೊರಕುವಂತೆ ಮಾಡಿವೆ. ಈ ಕ್ಷೇತ್ರದಲ್ಲಿ ಈಗಲೂ ಉಳಿದುಕೊಂಡಿರುವ ಒಂದು ದೊಡ್ಡ ಕೊರತೆಯೆಂದರೆ ಗ್ರಾಮೀಣ ಕೆಲಸಗಾರರಿಗಾಗಿ ಏನೇನೂ ಕೆಲಸ ಆಗಿಲ್ಲ. ನ್ಯಾಯವಾಗಿ ನೋಡಿದರೆ, ಒಟ್ಟು ಮಹಿಳಾ ಶ್ರಮಬಲದಲ್ಲಿ ಸುಮಾರು ೮೦% ರಷ್ಟು ಇರುವ ಗ್ರಾಮೀಣ ಮಹಿಳಾ ಕಾರ್ಮಿಕರಿಗೆ ಪ್ರಥಮ ಪ್ರಾಶಸ್ತ್ಯ ಸಿಗಬೇಕಾಗಿತ್ತು. ಆದರೆ ಈಗ ಸಿಗುವ ಸೌಲಭ್ಯಗಳಲ್ಲಿ ಸಿಂಹಪಾಲು ನಗರದ ಸುಶಿಕ್ಷಿತ ಮಹಿಳೆಯರಿಗೇ ಲಭ್ಯವಾಗುತ್ತಿವೆ. ಗ್ರಾಮೀಣ ಆರೋಗ್ಯ, ಸಾಕ್ಷರತೆ, ಶಿಶುಕಲ್ಯಾಣ ಕಾರ್ಯಕ್ರಮಗಳು ರೂಪಿತವಾಗಿದ್ದರೂ ಅವು ಹೆಸರಿಗೆ ಮಾತ್ರ ಇವೆ. ಇತರ ಕಾರ್ಯಕ್ರಮಗಳಲ್ಲಿ ಹೆಸರಿಸಬೇಕಾದ ಕೆಲವು ಸಾಮಾಜಿಕ ಸಂರಕ್ಷಣಾ ಕಾರ್ಯಕ್ರಮಗಳಿವೆ. ಅನೈತಿಕ ವ್ಯವಹಾರಗಳ ಪ್ರತಿಬಂಧಕ ಕಾಯಿದೆಯನ್ವಯ ಬಂಧನಕ್ಕೊಳಗಾದ ಮಹಿಳೆಯರಿಗೆ ರಕ್ಷಣೆ ಮತ್ತು ಪುನರ್ವಸತಿಗಾಗಿ ಕೇಂದ್ರಗಳನ್ನು ತೆರೆಯಲಾಗಿದೆ. ಆಪತ್‌ಗ್ರಸ್ತ ಮಹಿಳೆಯರಿಗೆ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಉತ್ತರ ಪ್ರದೇಶ, ಕರ್ನಾಟಕಗಳಂಥ ರಾಜ್ಯಗಳು ವಿಧವೆಯರಿಗೆ ಮಾಸಿಕ ಪಿಂಚಣಿಯನ್ನು ಕೊಡುತ್ತಿವೆ. ಕರ್ನಾಟಕದಲ್ಲಿ ಇತ್ತೀಚೆಗೆ ಪ್ರಾರಂಭಿಸಿದ ಯೋಜನೆಯಂತೆ ೧೫೦೦ ರೂಪಾಯಿಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಎಲ್ಲ ವಿಧವೆಯರಿಗೆ ಪ್ರತಿ ತಿಂಗಳು ೫೦ ರೂ. ಪಿಂಚಣಿ ಸಿಗುತ್ತದೆ. ವಿಧವೆಯು ೬೦ ವರ್ಷ ತಲುಪುತ್ತಲೆ ಇದು ವೃದ್ಧಾಪ್ಯ ವೇತನವಾಗಿ ಮಾರ್ಪಡುತ್ತದೆ. ಸಾಧ್ಯವಾದ ಕಡೆ ಪ್ರತಿಯೊಂದು ದೊಡ್ಡ ಗ್ರಾಮದಲ್ಲಿಯೂ ಮಹಿಳಾ ಮಂಡಳಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಇವುಗಳು ಸ್ಥಳೀಯ ಮಟ್ಟದಲ್ಲಿ ಮಹಿಳಾ ಕಲ್ಯಾಣದ ಕೆಲಸಗಳನ್ನು ನಿರ್ವಹಿಸುವುವು.

೧೯೭೫ರಲ್ಲಿ ಇತರ ದೇಶಗಳಂತೆ ಭಾರತದಲ್ಲಿಯೂ ಅಂತರರಾಷ್ಟ್ರೀಯ ಮಹಿಳಾ ವರ್ಷ ಆಚರಿಸಲಾಯಿತು. ಮಹಿಳೆಯರ ಸ್ಥಾನಮಾನದ ಮೇಲಿನ ರಾಷ್ಟ್ರೀಯ ಸಮಿತಿಯು ಅದೇ ವರ್ಷ ತನ್ನ ವರದಿ ಒಪ್ಪಿಸಿ ಮಹಿಳಾ ಕಲ್ಯಾಣದ ಆವಶ್ಯಕತೆಯನ್ನು ಒತ್ತಿಹೇಳಿತು. ಇಂದು ಮಹಿಳಾ ಕಲ್ಯಾಣವು ಸರಕಾರದ ಘೋಷಿತ ಕಾರ್ಯೋದ್ದೇಶವಾಗಿದೆ. ಇದರ ಸಾಧನೆಗಾಗಿ ಕೇಂದ್ರ ಸರಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯವೂ, ಗೃಹಖಾತೆ, ಸಮುದಾಯ ವಿಕಾಸ ಮತ್ತು ಪಂಚಾಯತಿ ರಾಜ್ಯ ಇಲಾಖೆಗಳೂ, ರಾಜ್ಯ ಸರಕಾರದ ತತ್ಸಂಬಂಧಿ ಅನೇಕ ಇಲಾಖೆಗಳೂ ಕಾರ್ಯತತ್ಪರವಾಗಿವೆ. ಅನೇಕ ಸ್ವಯಂಸೇವಾ ಸಂಘಸಂಸ್ಥೆಗಳೂ

ಈ ಕ್ಷೇತ್ರದಲ್ಲಿ ಪರಿಶ್ರಮಿಸಿವೆ. ಹಾಗೆ ನೋಡಿದರೆ, ಇವೇ ಮೊಟ್ಟಮೊದಲ ಶಾಲೆಗಳನ್ನೂ, ವಿಧವಾಶ್ರಮಗಳನ್ನೂ, ಅಬಲಾಶ್ರಮಗಳನ್ನೂ, ಆಪತ್‌ಗ್ರಸ್ತರ ಪುನರ್ವಸತಿ ಕೇಂದ್ರಗಳನ್ನೂ ಸ್ಥಾಪಿಸಿದವು. ಇಂದೂ ಕೂಡ ಇವು ಮುಂಚೂಣಿಯಲ್ಲಿವೆ. ಇವುಗಳಲ್ಲಿ ಹಲವು ಈಗ ಸರಕಾರದ ಅನುದಾನಕ್ಕೂ ನಿಯಂತ್ರಣಕ್ಕೂ ಒಳಗಾಗಿವೆ. ಮಹಿಳಾ ಕಲ್ಯಾಣದ ಬಹುಪಾಲು ಕೆಲಸವನ್ನು ನಿರ್ವಹಿಸುವ ಹಾಗೂ ಮೇಲ್ವಿಚಾರಣೆ ಮಾಡುವ ಅರೆ-ಸರಕಾರಿ ಸಂಸ್ಥೆಯೊಂದನ್ನು ೧೯೫೩ ರಲ್ಲಿ ಸ್ಥಾಪಿಸಲಾಯಿತು. ಇದೇ ಕೇಂದ್ರ ಸಮಾಜ ಕಲ್ಯಾಣ ಮಂಡಳಿ. ದೇಶದಲ್ಲಿ ಹರಡಿಕೊಂಡಂತೆ ಇರುವ ಸಾವಿರಾರು ಸಂಘಸಂಸ್ಥೆಗಳಿಗೆ ಧನಸಹಾಯವನ್ನು ಕೊಡುವ ಕೆಲಸವನ್ನು ಈ ಸಂಸ್ಥೆಗೆ ಒಪ್ಪಿಸಲಾಗಿದೆ.

೫. ಮಹಿಳಾ ಕಲ್ಯಾಣದ ಹಿಂದು-ಮುಂದು

ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಖಂಡಿತವಾಗಿಯೂ ಒಂದಿಷ್ಟು ಕೆಲಸವಾಗಿದೆ. ಮುಖ್ಯವಾಗಿ ಮಹಿಳಾ ಕಲ್ಯಾಣಕ್ಕಾಗಿ ವಿವಿಧ ಶಾಸನಗಳನ್ನು ರೂಪಿಸುವ ವಿಷಯದಲ್ಲಿ ಈ ಮಾತು ಅನ್ವಯಿಸುತ್ತದೆ. ಅನೈತಿಕ ವ್ಯವಹಾರಗಳ ವಿರುದ್ಧ, ಸ್ತ್ರೀಯರ ವಿರುದ್ಧ ಎಸಗುವ ಅಪರಾಧಗಳ ಬಗ್ಗೆ, ವರದಕ್ಷಿಣೆ ನಿರ್ಮೂಲನೆಯ ವಿಷಯದಲ್ಲಿ, ಮಹಿಳಾ ಕಾರ್ಮಿಕರ ಶೋಷಣೆಯ ವಿರುದ್ಧ, ಮಹಿಳೆಯರಿಗೆ ಅವಶ್ಯವಿರುವ ಮಾತೃತ್ವ ಮತ್ತಿತರ ಸೌಲಭ್ಯಗಳ ಬಗ್ಗೆ ಹಲವಾರು ಕಾಯಿದೆಗಳು ಜಾರಿಗೆ ಬಂದಿವೆ. ಆದರೆ ಕೆಲವೇ ಕೆಲವರು ಮಾತ್ರ ಇವುಗಳ ಲಾಭ ಪಡೆಯುವುದು ಸಾಧ್ಯವಾಗಿದೆ. ನಮ್ಮ ಮಹಿಳೆಯರ ಅನಕ್ಷರತೆ ಮತ್ತು ಸಂಪ್ರದಾಯ ಶರಣತೆಯನ್ನೂ, ಅವರ ಪರಾವಲಂಬನೆ ಮತ್ತು ಆರ್ಥಿಕ ಪರಿಸ್ಥಿತಿಯನ್ನೂ ಲಕ್ಷ್ಯದಲ್ಲಿಟ್ಟುಕೊಂಡು ವಿಚಾರ ಮಾಡಿದರೆ, ಅವರು ಸಂವಿಧಾನದಲ್ಲಿ ಕೊಡಮಾಡಿದ ಹಕ್ಕುಗಳನ್ನು ಹೇಗೆ ಪಡೆಯುವುದು ಸಾಧ್ಯವಿಲ್ಲ ಎಂಬುದೂ, ಅವರು ಕೋರ್ಟುಕಚೇರಿಗಳಿಗೆ ಹೋಗಿ ಏಕೆ ಹೋರಾಡುವುದು ಸಾಧ್ಯವಿಲ್ಲವೆಂಬುದೂ ಅರ್ಥವಾಗುತ್ತದೆ. ಹಾಗೇನಾದರೂ ಹೋರಾಡಿದರೆ ಸಂಪ್ರದಾಯಶೀಲವಾದ ಗಂಡಸು ಮಾತ್ರವಲ್ಲ, ಸಂಪ್ರದಾಯಶೀಲವಾದ ಹೆಣ್ಣುಮಗಳೂ ಕೂಡ ತಮಗೆ ಬಹಿಷ್ಕಾರ ಹಾಕಬಹುದು ಎಂಬ ಹೆದರಿಕೆ ಇದ್ದೇ ಇದೆ.

ಮಹಿಳಾ ಕಾರ್ಮಿಕರ ಕಲ್ಯಾಣದ ಬಗೆಗೂ ಪ್ರಾರಂಭಿಕ ಕೆಲಸ ಖಂಡಿತವಾಗಿ ಆಗಿದೆ. ಆದರೆ ಈ ಕ್ಷೇತ್ರದಲ್ಲಿರುವ ಅತಿದೊಡ್ಡ ಕೊರತೆಯೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಭೂರಹಿತ ಮಹಿಳಾ ಕಾರ್ಮಿಕರಿಗಾಗಿ ನಾವು ಹೆಚ್ಚಿಗೆ ಏನನ್ನೂ ಮಾಡುವುದು ಸಾಧ್ಯವಾಗಿಲ್ಲ. ಇದು ನಮ್ಮ ಅತಿದೊಡ್ಡ ಶೋಷಿತ ವರ್ಗ. ನಮ್ಮ ಗಮನ ಈ ಕ್ಷೇತ್ರದ ಮೇಲೆ ಬೀಳುವುದು ಅವಶ್ಯವಿತ್ತು. ಇನ್ನಾದರೂ ತುರ್ತಾಗಿ ಈ ಕೆಲಸ ಆಗಬೇಕು. ನಾವು ಈಗಾಗಲೇ ನೋಡಿದಂತೆ ಕಾರ್ಖಾನೆಯ ಮಹಿಳಾ ಕಾರ್ಮಿಕರಿಗಾಗಿ ವಿವಿಧ ಕಾರ್ಯಕ್ರಮಗಳೂ ಕಾಯಿದೆಗಳೂ ಬಂದಿವೆ. ಸಮಾನ ವೇತನವನ್ನು ಕಡ್ಡಾಯಗೊಳಿಸಲಾಗಿದೆ. ಇವುಗಳನ್ನು ಮಾಲಿಕವರ್ಗ ಹಾಗೂ ಅಧಿಕಾರಿ ವರ್ಗ ಕಟ್ಟುನಿಟ್ಟಾಗಿ ಪಾಲಿಸುವಂತೆ ಜಾಗೃತಾ ಸಮಿತಿಗಳನ್ನು ತಪ್ಪದೇ ನೇಮಿಸಬೇಕು. ಈಗಿರುವ ಮಾತೃತ್ವ ಸೌಲಭ್ಯಗಳು ಸುಸಂಘಟಿತ ಕ್ಷೇತ್ರದ ಕಾರ್ಮಿಕರಿಗಷ್ಟೇ ಅನ್ವಯವಾಗುತ್ತವೆ. ಕೃಷಿ ಕೆಲಸಗಾರರಿಗೂ, ಭೂರಹಿತ

ಕಾರ್ಮಿಕರಿಗೂ, ಚಹಾ–ಕಾಫಿ ಪ್ಲಾಂಟೇಶನ್ನುಗಳಲ್ಲಿ ದುಡಿಯುವ ಮಹಿಳೆಯರಿಗೂ, ಕಟ್ಟಡ ಕೆಲಸದಲ್ಲಿ ತೊಡಗಿರುವ ಮಹಿಳಾ ಕಾರ್ಮಿಕರಿಗೂ ಅನ್ವಯವಾಗುವಂತೆ ವಿಸ್ತರಿಸಬೇಕು.

ಒಂದು ಅತಿಮುಖ್ಯವಾದ ಮಾತೆಂದರೆ ನಾವು ಯಾವ ಕಾಯಿದೆ ರೂಪಿಸಿದ್ದೇವೆ, ಎಷ್ಟು ಸವಲತ್ತು ಕೊಟ್ಟಿದ್ದೇವೆ, ಯಾವ ವರ್ಷ ಎಷ್ಟು ಹಣ ಖರ್ಚುಮಾಡಿದ್ದೇವೆ ಎಂಬುದರಿಂದ ಮಹಿಳಾ ಕಲ್ಯಾಣದ ಯಶಸ್ಸು ಅಪಯಶಸ್ಸುಗಳನ್ನು ಅಳೆಯಬಾರದು. ಮಹಿಳಾ ಕಲ್ಯಾಣವು ಮುಖ್ಯವಾಗಿ ನಮ್ಮ ಮನೋಭಾವದ ಮಾತು. ನಮ್ಮ ಸ್ತ್ರೀ–ಪುರುಷರ ಸಂಪ್ರದಾಯಶೀಲತೆ, ತಾರತಮ್ಯಭಾವಗಳು ಅಳಿಯದೆ ಇದ್ದರೆ ಎಂಥ ಕಾರ್ಯಕ್ರಮಗಳನ್ನು ಹಾಕಿಕೊಂಡರೇನು ಬಂತು? ಎಂಥ ಕಾಯಿದೆಗಳನ್ನು ರೂಪಿಸಿದರೇನು ಬಂತು? ಅವೆಲ್ಲ ಹೆಸರಿಗೆ ಮಾತ್ರ ಇದ್ದುಬಿಡುತ್ತವೆ. ಗಂಡು ಸ್ವಾಭಾವಿಕವಾಗಿಯೇ ಹೆಣ್ಣಿಗಿಂತ ಶ್ರೇಷ್ಠ ಎಂಬ ಭಾವನೆ ಮೊದಲು ಹೋಗಬೇಕು; ಹೆಣ್ಣನ್ನು ಕಡೆಗಣಿಸುವವರನ್ನು ಸುಮ್ಮನೆ ಬಿಡಬಾರದು ಎಂಬ ಪ್ರಜ್ಞೆ ಮೊದಲು ಬರಬೇಕು. ಇದು ಆಗದೇ ಇದ್ದರೆ ಎಲ್ಲ ಕಲ್ಯಾಣ ಕಾರ್ಯಕ್ರಮಗಳೂ ಅರ್ಥಹೀನ. ಈ ಚರ್ಚೆ ಮುಗಿಸುವ ಮುನ್ನ ಇನ್ನೊಂದು ಮಾತನ್ನು ಹೇಳುವುದು ಅವಶ್ಯವಿದೆ. ಸರಕಾರವೊಂದೇ ಕಲ್ಯಾಣದ ಗುತ್ತಿಗೆ ಹಿಡಿದಿಲ್ಲ. ಎಲ್ಲ ಜನರು–ಅವರಲ್ಲೂ ಮುಖ್ಯವಾಗಿ ಮಹಿಳೆಯರು ಇದರಲ್ಲಿ ಪಾಲ್ಗೊಳ್ಳಬೇಕು. ಮಹಿಳೆಯರು ಕೇವಲ ಫಲಾನುಭವಿಗಳಾದರೆ ಸಾಲದು; ಅವರು ರಾಷ್ಟ್ರೀಯ ಅಭಿವೃದ್ಧಿ ಪ್ರಯತ್ನಗಳಲ್ಲಿ ಪಾಲ್ಗೊಳ್ಳುವ ಪಾಲುದಾರರೂ ಆಗಿರಬೇಕು.

ವರದಕ್ಷಿಣೆ: ಒಂದು ಸಮಗ್ರ ವಿವೇಚನೆ

ಚ. ವಿ. ಮುಳಗುಂದ

ಸೊಸೆಯನ್ನು ಅತ್ತೆ ಸೀಮೆಯೆಣ್ಣೆ ಸುರಿದು ಬೆಂಕಿ ಹಚ್ಚಿಕೊಂದಳು !

೧೯೭೫ ಮೇ ೧೫ ರಂದು ಹೊಸದಿಲ್ಲಿಯ ಮಾಡೆಲ್ ಟೌನಿನ ತನ್ನ ಮನೆಯಲ್ಲಿ ೨೪ ರ ಹರೆಯದ ತರ್ವಿಂದರ ಕೌರ್ ಟಿ. ವಿ. ನೋಡುತ್ತ ಕುಳಿತಿದ್ದಳು. ಅತ್ತೆ ಆಕೆಯ ಮೇಲೆ ಚಿಮಣಿ ಎಣ್ಣೆ ಸುರುವಿದಳು. ಕಾಲೇಜಿಗೆ ಹೋಗುತ್ತಿದ್ದ ನಾದಿನಿ ಕಡ್ಡಿ ಕೊರೆದು ಬೆಂಕಿ ಹಚ್ಚಿದಳು. ಅವಳ ಗಂಡ ಸತ್ಪಾಲಸಿಂಗಆನಂದ್ ಸ್ನಾನದ ಮನೆಯಲ್ಲಿದ್ದ. ಹೆಂಡತಿಯ ಚೀರಾಟ ಕೇಳಿ ಓಡಿಬಂದ. ಹೆಂಡತಿ ಹೊತ್ತಿ ಉರಿಯುತ್ತಿದ್ದಳು. ಹೆಚ್ಚಿನ ಸುಟ್ಟ ಗಾಯಗಳಾಗಿದ್ದವು. ಜೆ. ಪಿ. ಆಸ್ಪತ್ರೆಗೆ ಸೇರಿಸಲಾಯಿತು.ಐದು ದಿನಗಳ ಬಳಿಕ ಆಕೆ ಅಲ್ಲಿಯೇ ಮರಣ ಹೊಂದಿದಳು.ಎರಡು ತಿಂಗಳುಗಳ ವೈವಾಹಿಕ ಜೀವನದಲ್ಲಿ ಅವಳು ಮಾಡಿದ ಒಂದೇ ಅಪರಾಧವೆಂದರೆ : ಒಂದು ಟಿ. ವಿ. ಸೆಟ್, ಐದು ಸಾವಿರ ರೂ. ಬೆಲೆ ಬಾಳುವ ಪೀಠೋಪಕರಣಗಳು, ಮತ್ತು ಇತರ ಗೃಹೋಪಯೋಗಿ ಉಪಕರಣಗಳಿಗಿಂತ ಹೆಚ್ಚಿಗೆ ಏನನ್ನೂ ಆಕೆ ಗಂಡನ ಮನೆಗೆ ತರದಿದ್ದುದು. ಗಂಡನಿಗಾಗಿ ಸ್ಕೂಟರ್ ಹಾಗೂ ಅವನ ಮೋಟಾರು ಬಿಡಿಭಾಗಗಳ ಅಂಗಡಿಯನ್ನು ವಿಸ್ತರಿಸಲು ಬೇಕಾಗುವಷ್ಟು ನಗದು ಹಣ ಸೊಸೆಯ ಕಡೆಯಿಂದ ಬರಲಿಲ್ಲವೆಂದು ಅವಳ ಅತ್ತೆ ಯಾವಾಗಲೂ ಕಿರಿಚಾಡುತ್ತಿದ್ದಳು. ಗಂಡ ಆನಂದನೂ ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ತಾಯಿಯಿಂದ ಪ್ರಭಾವಿತನಾಗಿದ್ದ. ಅವರೆಲ್ಲರೂ ಕೊಡುತಿದ್ದ ಅಮಾನುಷ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದ ಹೊರಬರಲಾರದೆ ಒದ್ದಾಡುತ್ತಿದ್ದಾಗ ತರವಿಂದಳಿಗೆ ಅವಳ ಅತ್ತೆ ನಾದಿನಿಯರೇ ಪರಿಹಾರ ಒದಗಿಸಿದರು

—ಸುಧಾ, ಜುಲೈ ೨೯, ೧೯೭೯.

ವರದಕ್ಷಿಣೆ ದಾಹಕ್ಕೆ ಬಾಣಂತಿ, ಕೂಸು ಇಬ್ಬರೂ ಬಲಿ !

ಯುವತಿಯೋರ್ವಳ ವಿವಾಹವು ಎಂಟು ವರ್ಷಗಳ ಹಿಂದೆ ಜೈಪುರ ಜಿಲ್ಲೆಯ ಸಮೋದ ಗ್ರಾಮದ ಸೇದುರಾಮ ಮಾಲಿ ಎಂಬವನೊಂದಿಗೆ ಆಗಿತ್ತು. ಅವಳ ತಾಯಿ ಬಡ ವಿಧವೆ. ಹೆಚ್ಚು ವರದಕ್ಷಿಣೆ ಕೊಡದೆ ಮಗಳ ಮದುವೆ ಮಾಡಿದ್ದಳು. ದಿನಗಳೆದಂತೆ ಹಿಂಸೆ ಹೆಚ್ಚುತ್ತ ನಡೆಯಿತು. ಇದರಲ್ಲಿಯೇ ಕೂಸಿನ ತಾಯಿಯೂ

ಆದಳು. ಒಂದು ದಿನ ಅತ್ತೆ ಚಂಡಿಯಾದಳು. ಹಸುಗೂಸನ್ನು ಕಲ್ಲು ಹಾಸಿನ ನೆಲದ ಮೇಲೆ ಎತ್ತಿ ಒಗೆದಳು. ಎಷ್ಟಾದರೂ ಅದು ಹಸುಗೂಸು. ಅಸು ನೀಗಿತು. ಬಾಲಾಂತಿ ಭಯದಿಂದ ಚೀರಿದಳು. ಅವಳ ಗಂಡ, ಅತ್ತೆ, ಮಾವ ಯಾರಿಗೂ ಕರುಣೆ ಬರಲಿಲ್ಲ. ಅಮಾನುಷವಾಗಿ ವರ್ತಿಸಿದರು. ಸಾಲದೆಂದು ಅವಳನ್ನೂ ಕೊಂದರು. ಅವಳ ತಾಯಿಯ ತಕರಾರಿನಂತೆ ನಂತರ ಅವಳನ್ನೂ ಅವಳ ಹಸುಗೂಸನ್ನೂ ಬಾವಿಯಲ್ಲಿ ಚೆಲ್ಲಿದರು. ಪೋಲೀಸರು ಬಂದು ಶವಗಳನ್ನೂ ಹೊರಗೆ ತೆಗೆಯಿಸಿ ಮರಣೋತ್ತರ ಪರೀಕ್ಷೆಗೆ ಕಳಿಸಿದರು.

—ದಿ ಹಿಂದೂ, ಮಾರ್ಚ ೧, ೧೯೮೦.

ಗರ್ಭಿಣಿಯ ಆಹುತಿ !

ಶ್ರೀಮತಿ ಕುಸುಮ್ ಜಲಾನ್ ೨೨ ವರ್ಷದ ಯುವತಿ. ಎಪ್ರಿಲ್ ೨೭, ೧೯೭೮ ರಂದು ವಿವಾಹವಾಗಿತ್ತು. ಒಂದೂವರೆ ವರ್ಷದ ಕೂಸು ಇತ್ತು. ಏಳು ತಿಂಗಳ ಬಸುರಿ. ಹಿಂಸೆ ತಾಳಲಾರದೆ ಎರಡು ಸಾರೆ ಆತ್ಮಹತ್ಯೆಗೂ ಹವಣಿಸಿದ್ದಳು, ಸಾಧ್ಯವಾಗಿರಲಿಲ್ಲ. ಜೂನ ೬, ೧೯೮೧ ರಂದು ಅವಳ ಅತ್ತೆಯೇ ಅವಳನ್ನು ಮೂರನೆಯ ಮಹಡಿಯಲ್ಲಿಯ ಫ್ಲ್ಯಾಟಿನಿಂದ ದೂಡಿ ಕೊಂದಳು.

—ಸಂಡೇ, ಜೂನ ೨೮, ೧೯೮೧.

ವರದಕ್ಷಿಣೆಯ ದಳ್ಳುರಿಗೆ ಭಸ್ಮವಾದ ಪುಷ್ಪಾ !

ಬೆಂಗಳೂರಿನ ರಾಜಾಜಿನಗರದ ಯುವತಿ ಪುಷ್ಪಾ ಮದುವೆಯಾದ ಒಂದು ವರ್ಷದಲ್ಲಿಯೇ ವರದಕ್ಷಿಣೆಯ ದಳ್ಳುರಿಗೆ ಸಿಲುಕಿ–ಸತ್ತಳು. ಸಾಯುವ ಮುನ್ನ ಬೆಂಗಳೂರು ಉತ್ತರ ತಾಲೂಕು ಮ್ಯಾಜಿಸ್ಟ್ರೇಟರ ಮುಂದೆ ಮುಚ್ಚು ಮರೆಯಿಲ್ಲದೆ ತನ್ನ ದುರಂತದ ಕತೆ ಹೇಳಿದಳು. "ಹತ್ತು ಸಾವಿರ ರೂ. ವರದಕ್ಷಿಣೆ ಕೊಡಲಿಲ್ಲವೆಂದು ನನ್ನ ಗಂಡ, ಅತ್ತೆ ಮತ್ತು ಮೈದುನ ನನ್ನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು." ಎಂದು ಅವಳು ಹೇಳಿರದಿದ್ದರೆ ಅಸಂಖ್ಯ ಘಟನೆಗಳಂತೆ ಇದೂ ಕೂಡ ಮರೆಯಾಗಿ ಹೋಗುತ್ತಿತ್ತು. ಪುಷ್ಪಳ ಪತಿ, ಅತ್ತೆ ಮತ್ತು ಮೈದುನನನ್ನು ಬಂಧಿಸಲಾಗಿದೆ. ಪುಷ್ಪ ಸತ್ತ ಮರುದಿನ, ಮೆ ೨೪ ರಂದು ಮಹಿಳಾ ವೇದಿಕೆಯವರು ಅವಳ ಪತಿ ನಾಗಭೂಷಣರಾವ್ ಅವರ ಮನೆಯ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು; ಅವಳ ದುರಂತ ಕತೆ ಆಧಾರಿತ ರೂಪಕವನ್ನು ಪ್ರದರ್ಶಿಸಿದರು.

—ಸುಧಾ; ಜುಲೈ ೫, ೧೯೮೧.

ಬಡ ಹೆಣ್ಣನ್ನು ಭಸ್ಮ ಮಾಡಿದ ವರದಕ್ಷಿಣೆಯ ಭೂತ!

ಶ್ರೀಮತಿ ಶಾರದಾ, ಬೆಳಗಾವಿಯ ಟಿಳಕವಾಡಿ ನಿವಾಸಿ. ಹೋದ ವರ್ಷ ಪತಿಯನ್ನು ಕಳೆದುಕೊಂಡು ವಿಧವೆಯಾದಳು. ಈ ವರ್ಷ ಅವಳ ಮುದ್ದಿನ ಮಗಳು ಸವಿತಾ ವರದಕ್ಷಿಣೆಯ ಭೂತಕ್ಕೆ ಬಲಿಯಾದಳು.

ಸವಿತಾ ಸುಶಿಕ್ಷಿತೆ. ಬೆಳಗಾವಿಯಲ್ಲಿ ತನ್ನದೇ ಆದ ಬೆರಳಚ್ಚಿನ ಸಂಸ್ಥೆಯೊಂದನ್ನು ನಡೆಸುತ್ತಿದ್ದಳು. ಅವಳ ಮದುವೆಯು ಕಲಕತ್ತೆಯ ಕಮಲೇಶ್ ಎಂಬವನ ಜೊತೆಗೆ

ನಡೆಯಿತು. ಶ್ರೀಮತಿ ಶಾರದಾ ಮಗಳು ಸವಿತಾಳಿಗೆ ಮದುವೆಯಲ್ಲಿ ಏಳು ತೊಲಿ ಬಂಗಾರ ಕೊಟ್ಟಿದ್ದಳು. ಇಷ್ಟೇ ಸಾಲದೆಂದು ಅಳಿಯ ಹಠ ಮಾಡಿದ. ವಿರಸ ಪ್ರಾರಂಭವಾಯಿತು. ಮದುವೆಯಾದ ಎರಡನೇ ದಿನವೇ ಪತ್ನಿಯನ್ನು ಕರೆದುಕೊಂಡು ಹೋದ. ಶಾರದಾ ತನ್ನ ಮಗಳಿಗೆ ಅನೇಕ ಪತ್ರಗಳನ್ನು ಬರೆದಳು. ತಂತಿ ಕೊಟ್ಟಳು. ಆಕೆಯಿಂದ ಒಂದಕ್ಷರದ ಉತ್ತರವೂ ಬರಲಿಲ್ಲ. ೧೯೮೩ ಸಪ್ಟೆಂಬರ್ ೧೩ ರಂದು ಕಲಕತ್ತೆಯಿಂದ ತಂತಿ–ಸಮಾಚಾರ ಬಂತು. ಸವಿತಾಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ, ಎಂದು ತಿಳಿಸಲಾಗಿತ್ತು. ಮರುದಿನ ಮತ್ತೊಂದು ತಂತಿಯಿಂದ ಸವಿತಾ ಸತ್ತು ಹೋದಳು ಎಂಬ ಸುದ್ದಿ ಬಂತು.

ತಾಯಿ ಶಾರದಾ ಹೌಹಾರಿದಳು. ಮದುವೆಯ ನಂತರ ಮಗಳ ಮುಖ ಕಂಡಿರಲಿಲ್ಲ, ಕಲಕತ್ತೆಗೆ ಧಾವಿಸಿದಳು.ಅಲ್ಲಿ"ನಿಮ್ಮ ಮಗಳು ಹೃದಯಾಘಾತದಿಂದ ಸತ್ತಳು" ಎಂದು ಅಳಿಯ ಹೇಳಿದ. ಸವಿತಾಳನ್ನು ಸೇರಿಸಿದ್ದ ಆಸ್ಪತ್ರೆಗೆ ಹೋಗಿ ವಿಚಾರಿಸಿದರೆ, "ನಿಮ್ಮ ಮಗಳು ವಿಷಪ್ರಾಶನದಿಂದ ಸತ್ತಿದ್ದಾಳೆಂದು", ಆಕೆಯ ಮರಣೋತ್ತರ ಪರೀಕ್ಷೆ ನಡೆಸಿದ ಡಾಕ್ಟರರು ಹೇಳಿದರು. ಶ್ರೀಮತಿ ಶಾರದಾ ನೇರವಾಗಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯ ಬಳಿಗೆ ಹೋಗಿ ತನ್ನ ಮಗಳನ್ನು ಹೆಚ್ಚಿನ ವರದಕ್ಷಿಣೆಗಾಗಿ ಕೊಂದು ಹಾಕಲಾಗಿದೆ ಎಂದು ದೂರು ನೀಡಿದಳು. ತಾಯಿ ಇಂದು ತನ್ನ ಮಗಳನ್ನು ನೆನೆಯುತ್ತ ಕಣ್ಣೀರು ಸುರಿಸುತ್ತಿದ್ದಾಳೆ.

—ತರಂಗ, ಮಾರ್ಚ ೧೧–೧೭, ೧೯೮೪

ಐದು ತಿಂಗಳ ಹಿಂದೆ ಹಸೆ ಮಣೆ ಏರಿದ ಹೆಣ್ಣಿನ ಗತಿ!

ಕೇವಲ ೫ ತಿಂಗಳ ಹಿಂದಷ್ಟೇ ೧೮ ವರ್ಷದ ತರುಣಿ ವಿಜಯಲಕ್ಷ್ಮಿ ಹಸೆ ಮಣೆ ಏರಿದ್ದಳು. ಕಳೆದ ದಿನಾಂಕ ೧೦ ರಂದು ಬಚ್ಚಲು ಮನೆಯಲ್ಲಿ ಅಗ್ನಿಗಾಹುತಿಯಾದಳು. ಆಕೆ ತಾನೇ ಸುಟ್ಟುಕೊಂಡು ಸತ್ತಳೊ ಅಥವಾ ಕೊಲೆಮಾಡಿ ನಂತರ ಸುಟ್ಟು ಬಿಡಲಾಗಿತ್ತೋ ತಿಳಿಯದು.

ಹಣದಾಶೆಗಾಗಿ ತನ್ನ ತಂಗಿಯನ್ನು ಆಕೆಯ ಗಂಡ, ಅತ್ತೆ ಮತ್ತು ಮಾವ ಸೇರಿ ಕೊಂದುಹಾಕಿದ್ದಾರೆಂದು ವಿಜಯಲಕ್ಷ್ಮಿಯ ಅಣ್ಣ ಬನಹಟ್ಟಿಯ ಶ್ರೀ ಶಂಕರ ಕರಡಿ ಗೋಕಾಕದ ಪೋಲೀಸರಿಗೆ ದೂರು ನೀಡಿದ್ದಾನೆ.

ಕಳೆದ ಮೇ ೯, ೧೯೮೪ ರಂದು ಗೋಕಾಕದ ಶ್ರೀ ಶಂಕರಲಿಂಗ ಕಲ್ಯಾಣಮಂಟಪದಲ್ಲಿ ವಿವಾಹ ನಡೆದಿತ್ತು. ವಿವಾಹ ಕಾಲಕ್ಕೆ ಆಕೆಯ ಗಂಡನಿಗೆ ಹತ್ತು ಸಾವಿರ ರೂಪಾಯಿ ನಗದು ಮತ್ತು ಐದು ತೊಲಿ ಬಂಗಾರವನ್ನು ವರದಕ್ಷಿಣೆಯ ರೂಪದಲ್ಲಿ ನೀಡಲಾಗಿತ್ತು.

ವಿವಾಹದ ನಂತರ ಗಂಡನ ಮನೆಯವರು, 'ಬಂಗಾರದ ಚೈನು ತಾ, ಉಂಗುರ ತಾ', ಎಂದೆಲ್ಲ ಪೀಡಿಸುತ್ತಿದ್ದರೆಂದು ಶಂಕರ ಕರಡಿ ತಿಳಿಸಿದ್ದಾನೆ. ಈ ಬಗ್ಗೆ ಡಿಶೆಂಬರ್ ೧೦ ರಂದು ವಿಜಯಲಕ್ಷ್ಮಿ ತನಗೆ ಪತ್ರ ಬರೆದಿರುವುದಾಗಿ ತಿಳಿಸಿದ್ದಾನೆ. ಪತ್ರದ ಪೂರ್ತಿ ಪಾಠ ಇಂತಿದೆ:

೧೦–೧೨–೧೯೮೪

ಪ್ರೀತಿಯ ಅಣ್ಣನಿಗೆ—

ಗೋಕಾಕದಿಂದ ನಿಮ್ಮ ತಂಗಿಯಾದ ಕು. ಸೌ. ವಿಜಯಲಕ್ಷ್ಮಿಯ ಸಪ್ರೇಮ ವಂದನೆಗಳು.

ಈ ಪತ್ರ ಬರೆಯುವಾಗ ಬಿಕ್ಕಿ ಬಿಕ್ಕಿ ಕಣ್ಣೀರು ಸುರಿಸಿ ನನ್ನ ಕಷ್ಟವನ್ನು ಇಲ್ಲಿಯವರೆಗೆ ಸಹಿಸಿಕೊಂಡು ಈಗ ನಿನ್ನ ಮುಂದೆ ಬಿಚ್ಚಿ ಹೇಳ ಬಯಸುತ್ತೇನೆ.

ನನಗೆ ಇಲ್ಲಿ ಯಾವುದೇ ತರದ ಸ್ವತಂತ್ರತೆ ಇಲ್ಲ. ಊಟಕ್ಕೆ ಒಂದು ವೇಳೆ ಸಹ ಸರಿಯಾಗಿ ಹಾಕುತ್ತಿಲ್ಲ. ನನ್ನವರು ಮೂರು ತೊಲಿ ಚೈನ ಮತ್ತು ಒಂದು ಆಟೋಮ್ಯಾಟಿಕ್ ವಾಚ್ ತರಿಸಿಕೊಡಲು ಪದೇ ಪದೇ ಹೇಳುತ್ತಿದ್ದಾರೆ.

ಇತ್ತಿತ್ತಲಾಗಿ ನನ್ನವರು ಹಾಗೂ ಅತ್ತೆಯವರು ನನಗೆ ಜೀವದ ಭಯ ತೋರಿಸುವ ಮಾತನ್ನು ಆಡುತ್ತಿದ್ದಾರೆ. ನನ್ನ ಹಣೇಬರದಲ್ಲಿ ಇದ್ದುದನ್ನು ನಾನು ಅನುಭವಿಸಲೇ ಬೇಕು. ಈ ಪತ್ರ ಮುಟ್ಟಿದ ಕೂಡಲೇ ನನ್ನನ್ನು ಕರೆಯಲಿಕ್ಕೆ ಬರಬೇಕು. ಮನೆಯಲ್ಲಿ ತಂದೆ-ತಾಯಿಗಳಿಗೆ ನೊಂದ ಮಗಳ ನಮಸ್ಕಾರ ತಿಳಿಸು. ಆನಂದ, ವಾಣಿಶ್ರೀ ಇವರಿಗೆ ಆಶೀರ್ವಾದಗಳು.

ನಿನ್ನ ತಂಗಿ
ಕು. ಸೌ. ವಿಜಯಲಕ್ಷ್ಮಿ

ಈ ಪತ್ರ ಶ್ರೀ ಕರಡಿ ಅವರಿಗೆ ಮದ್ಯಾಹ್ನ ೧೨ ಗಂಟೆಗೆ ತಲುಪಿತು. ಅದೇ ರಾತ್ರಿ ಅವರಿಗೆ ದೂರವಾಣಿ ಮೂಲಕ ಕರೆ ಬಂತು. ರಾತ್ರಿ ೨ ಗಂಟೆಗೆ ಗೋಕಾಕ ತಲುಪಿದರು. ಬಚ್ಚಲು ಮನೆಯಲ್ಲಿ ಸುಟ್ಟು ಭಸ್ಮವಾಗಿ ಬಿದ್ದಿದ್ದ ತಂಗಿಯ ದೇಹ ನೋಡಿ ಕಣ್ಣೀರು ಕೋಡಿಯಾಗಿ ಹರಿಯಿತು. ಜೊತೆಗೆ ಆಕೆಯ ಗಂಡನ ಮನೆಯವರ ಮೇಲೆ ಸಿಟ್ಟೂ ಬಂತು. ಪೋಲೀಸರಿಗೆ ದೂರು ಕೊಡಲು ಹೋದರು. ಆದರೆ ಅವರು ದೂರು ತೆಗೆದುಕೊಳ್ಳಲು ನಿರಾಕರಿಸಿದರು. "ನಿಮ್ಮ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮುಗಿಸಿಬಿಡಿ. ಆಕೆ ಮತ್ತೆ ಬರ್ತಾಳಾ?" ಎಂದೆಲ್ಲಾ ಉಪದೇಶ ಮಾಡಿದರು. ಜಿಲ್ಹಾ ಪೋಲೀಸ ಅಧಿಕಾರಿಗಳ ಮೂಲಕ ಹೇಳಿಸಿದಾಗ ದೂರು ಸ್ವೀಕರಿಸಿದರು.

—ಲಂಕೇಶ ಪತ್ರಿಕೆ, ಡಿಶೆಂಬರ್ ೩೦, ೧೯೮೪

ವರದಕ್ಷಿಣೆ ಬೆಂಕಿಗೆ ಗೃಹಿಣಿ ಬಲಿ!

ಆರ್. ಜೆ. ನಾಯ್ಡು ಬೆಂಗಳೂರು ನಗರದ ಅಲಸೂರಿನ ನಿವಾಸಿ. ೨೫ ರ ಹರೆಯದ ಸೋದರಿ ಉಮಾದೇವಿಯನ್ನು ಮೂರು ವರ್ಷಗಳ ಹಿಂದೆ ಚಿಂತಾಮಣಿಯ ಕಮಿಶನ್ ಏಜೆಂಟ ಒಬ್ಬರ ಮಗನಿಗೆ ಧಾರೆ ಎರೆದು ಕೊಟ್ಟರು. ಮದುವೆಯಲ್ಲಿ ೨೫ ಸಾವಿರ ರೂ. ನಗದು, ಒಂದು ಸ್ಕೂಟರ್, ೨೫ ಸವರನ್ ಒಡವೆ ಮುಂತಾದವುಗಳಿಂದ ವರೋಪಚಾರ ನಡೆಯಿತು. ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿಗೆ ಜನ್ಮ ನೀಡುವುದರೊಳಗಾಗಿ ಉಮಾದೇವಿಗೆ ಇನ್ನಿಷ್ಟು ವರದಕ್ಷಿಣೆ ತರಬೇಕೆಂದು

ಒತ್ತಾಯಿಸಿ ಎಲ್ಲ ಕಿರುಕುಳ, ಹಿಂಸೆ ಪ್ರಾರಂಭವಾಯಿತು. ಈ ಬಗ್ಗೆ ಉಮಾದೇವಿ ಹಲವಾರು ಪತ್ರಗಳನ್ನು ಬರೆದಳು. ಕಳೆದ ೨ನೇ ತಾರೀಖಿನ ಪತ್ರದಲ್ಲಿ ರಕ್ತ ಸುರಿಯುವ ವರೆಗೆ ತಲೆಗೆ ಹೊಡೆದ ಉಲ್ಲೇಖವಿದೆ. ಕೂಡಲೇ ನಾಯ್ಡು ತಂಗಿಯ ಮನೆಗೆ ಹೋಗಿ ಬಂದರು. ಎಲ್ಲವೂ ಸರಿಹೋಗಬಹುದೆಂದು ಭಾವಿಸಿದರು. ಆದರೆ ಭರವಸೆ ಬಹಳ ದಿನ ಉಳಿಯಲಿಲ್ಲ. ಗುರುವಾರ ಸುಟ್ಟ ಗಾಯಗಳಿಂದ ಜರ್ಜರಿತಳಾದ ಉಮಾದೇವಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದ ಸುದ್ದಿ ಬಂತು, ಕೂಡಲೇ ನಾಯ್ಡು ಅಲ್ಲಿಗೆ ಧಾವಿಸಿದರು. ತಂಗಿ ಕೊನೆಯ ಉಸಿರು ಎಳೆಯುವುದೊಂದೇ ಬಾಕಿ ಉಳಿದಿತ್ತು! ಅಂದೇ ರಾತ್ರಿ ಮೃತಪಟ್ಟಳು.

—ಪ್ರಜಾವಾಣಿ, ಜನೇವರಿ ೧೬, ೧೯೮೫.

ಪತಿಯ ಮುಂದೆ ಸತಿಯ ಆತ್ಮಹತ್ಯೆ!

ಗೋವಿಂದಯ್ಯ ಚಿತ್ರದುರ್ಗದ ಸರಕಾರಿ ಆರ್ಟ್ಸ್ ಕಾಲೇಜಿನಲ್ಲಿ ಉಪನ್ಯಾಸಕ. ಅವನ ಹುಟ್ಟೂರು ಕನಕಪುರ. ತುಮಕೂರು ಜಿಲ್ಲೆಯ ದೇವರಾಜಪುರದ ಶಿಕ್ಷಕರೊಬ್ಬರ ಮಗಳಾದ ಲೀಲಾವತಿಯೊಂದಿಗೆ ಅವನ ವಿವಾಹವಾಗಿತ್ತು. ಅವಳೂ ಸುಶಿಕ್ಷಿತೆ.

ವರದಕ್ಷಿಣೆ ಸಾವಿನ ಬಗ್ಗೆ ಪೋಲೀಸರು ನೀಡಿದ ವರದಿ ಈ ರೀತಿ ಇದೆ.: "ಹರಿಜನ ಕೋಮಿಗೆ ಸೇರಿದ ಗೋವಿಂದಯ್ಯ ೩೫ ಸಾವಿರ ರೂ. ವರದಕ್ಷಿಣೆ ತರಬೇಕೆಂದು ಪತ್ನಿ ಲೀಲಾವತಿಯನ್ನು ಒತ್ತಾಯಿಸುತ್ತಿದ್ದ. ಹಿಂಸೆ ಅತಿಯಾಯಿತು. ಒಂದು ದಿನ ಆತ್ಮಹತ್ಯೆ ಮಾಡಿಕೊಳ್ಳಲು ಲೀಲಾವತಿ ನಿರ್ಧರಿಸಿದಳು. ಆಗ ಸ್ವತಃ ಪತಿ ಗೋವಿಂದಯ್ಯನೇ ಸೀಮೆ ಎಣ್ಣೆ ತಂದು ಕೊಟ್ಟ. ಲೀಲಾವತಿ ಮೈಮೇಲೆ ಸೀಮೆ ಎಣ್ಣೆ ಸುರುವಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಾಗ ಗೋವಿಂದಯ್ಯ ಮೌನ ಪ್ರೇಕ್ಷಕನಾಗಿ ಘಟನೆ ವೀಕ್ಷಿಸಿದ. ಬೆಂಕಿ ಹಚ್ಚಿಕೊಂಡ ಲೀಲಾವತಿ ಸಂಕಟ ತಾಳಲಾರದೆ ಕೂಗಿಕೊಳ್ಳಲು ಆರಂಭಿಸಿದಳು." ಸಾಯುವ ಮೊದಲು ಲೀಲಾವತಿ ಹೇಳಿಕೆ ನೀಡಿದ್ದಾಳೆಂದೂ ತಿಳಿಸಲಾಗಿದೆ. ಈ ಘಟನೆಯನ್ನು ಆಧರಿಸಿ ನಗರದ ಕಾಲೇಜಿನ ವಿದ್ಯಾರ್ಥಿಗಳು ವರದಕ್ಷಿಣೆ ಪದ್ಧತಿ ಪ್ರತಿಭಟಿಸಿ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

—ಪ್ರಜಾವಾಣಿ, ಫೆಬ್ರುವರಿ ೫,೧೯೮೫

ಮೇಲೆ ಬರೆದ ಕೆಲವೊಂದು ಘಟನೆಗಳು ಕಾಲ್ಪನಿಕ ಕತೆಗಳಲ್ಲ. ಚಲನಚಿತ್ರಗಳಲ್ಲಿ ಕಾಣಿಸಿಕೊಂಡವೂ ಅಲ್ಲ. ನೈಜ ಸಂಗತಿಗಳು. ದಿನಬೆಳಗಾದರೆ ಸಾವು ನೋವಿನ ಇಂಥ ಸಂಗತಿಗಳು ದೇಶದ ಒಂದಿಲ್ಲೊಂದು ಮೂಲೆಯಲ್ಲಿ ಸಂಭವಿಸುತ್ತಲೇ ಇರುತ್ತವೆ. ಎಲ್ಲವೂ ವರದಿಯಾಗುವುದಿಲ್ಲ, ವರದಿಯಾದವುಗಳಲ್ಲಿಯೇ ಹಲಕೆಲವನ್ನು ಆಕಸ್ಮಿಕ ಘಟನೆಗಳೆಂಬಂತೆ ಮುಚ್ಚಿ ಬಿಡಲಾಗುತ್ತದೆ.

ಮೇಲಿನ ಘಟನೆಗಳನ್ನು ಎತ್ತಿ ತೋರಿಸುವ ಉದ್ದೇಶ, ಓದುಗರನ್ನು ಹೆದರಿಸುವುದಲ್ಲ. ಭಾವನಾ ಪರವಶರನ್ನಾಗಿ ಮಾಡುವುದೂ ಅಲ್ಲ. ಸಮಸ್ಯೆಯ ವ್ಯಾಪ್ತಿ

ಯನ್ನು ಮತ್ತು ಗಂಭೀರತೆಯನ್ನು ಗುರುತಿಸಲು ಸಾಧ್ಯವಾಗಲೆಂದು. ಸಮಸ್ಯೆಯ ತಳ ಬುಡಗಳನ್ನು ಮತ್ತು ಉತ್ತರಚಿತ್ರಗಳನ್ನು ಅರಿಯಲು, ಶೋಧಿಸಲು.

ದೇಶದ ರಾಜಧಾನಿ ದಿಲ್ಲಿಯಲ್ಲಿಯೇ ವರದಕ್ಷಿಣೆಯ ಕಾರಣಕ್ಕಾಗಿ ಪ್ರತಿ ೧೨ ಗಂಟೆಗೊಬ್ಬಳಂತೆ ಸುಟ್ಟು ಕೊಲ್ಲಲಾಗುತ್ತದೆ ಎಂದು ತಿಳಿದು ಬಂದಿದೆ. ಇಲ್ಲಿಯ ವರೆಗೆ ವರದಕ್ಷಿಣೆಯ ಸಾವುಗಳು ದಿಲ್ಲಿಗೆ ಮಾತ್ರ ಸೀಮಿತವಾದುವೆಂದು ತಿಳಿಯಲಾಗಿತ್ತು. ಆದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದೇಶದ ಎಲ್ಲ ರಾಜ್ಯಗಳಲ್ಲಿಯೂ ವರದಕ್ಷಿಣೆಯ ಬಗೆಗಿನ ಸಾವು ನೋವುಗಳು ವರದಿಯಾಗುತ್ತಲಿವೆ. ಸಂಖ್ಯೆಗಳಲ್ಲಿ ವ್ಯತ್ಯಾಸ ಅಷ್ಟೆ. ಈ ದಿಶೆಯಲ್ಲಿ ಕರ್ನಾಟಕವೂ ಹಿಂದೆ ಬಿದ್ದಿಲ್ಲ. ಸಿ.ಓ.ಡಿ. ಹೊಂದಿದ ಅಂಕಿ, ಸಂಖ್ಯೆಗಳ ಪ್ರಕಾರ ಪ್ರತಿ ತಿಂಗಳೂ ಸರಾಸರಿ ನಾಲ್ಕು ಸಾವುಗಳು ಸಂಭಸುತ್ತಲಿವೆ. ೧೯೮೩ ರಲ್ಲಿ ೩೧ ಸಾವುಗಳು ವರದಿಯಾಗಿದ್ದರೆ.೧೯೮೪ ರ ಮೊದಲಿನ ಮೂರು ತಿಂಗಳುಗಳಲ್ಲಿಯೇ ೧೪ ಸಾವುಗಳು ಸಂಭವಿಸಿದವು. ಹೆಣ್ಣುಮಕ್ಕಳನ್ನು ಅಮಾನುಷವಾಗಿ ನಡೆಸಿಕೊಳ್ಳುವುದು ಮತ್ತು ವರದಕ್ಷಿಣೆ ಸಾವು ನೋವುಗಳು ಎಂದೊಡನೆ ನಮಗೀಗ ಏನೂ ಅನ್ನಿಸುವುದಿಲ್ಲ. ಸಹಜವೆನ್ನಿಸಿವೆ. ನಮ್ಮ ಮನಸ್ಸು ಅಷ್ಟೊಂದು ಜಿಡ್ಡುಗಟ್ಟಿ ಹೋಗಿದೆ. ನಮ್ಮ ಕೆಲವೊಂದು ಮುಗ್ಧ ಕೋಮಲ ಸೋದರಿಯರು ನಿರ್ದಯಿ ಗಂಡುಗಳ ಕಪಿ ಮುಷ್ಟಿಯಲ್ಲಿ ಸಿಲುಕಿ ನರಳುತ್ತಿದ್ದಾರೆ. ಬಡಿಯುವುದು, ಸುಡುವುದು, ಉಪವಾಸ ಕೆಡುಹುವುದು, ಬಾವಿಗೆ ದೂಡುವುದು ಮುಂತಾದ ಕೃತಿಗಳ ಮೂಲಕ ಗಂಡುಗಳು ತಮ್ಮ ಪಶುತ್ವವನ್ನು ಮೆರೆದರೆ, ಹೆಣ್ಣು ಅತ್ತೆ, ನಾದಿನಿಯರ ಸ್ಥಾನದಲ್ಲಿ ಸೊಸೆಯ ಪಾಲಿನ ರಕ್ಕಸಿಯಾಗಿ ಕಾಣಿಸಿಕೊಳ್ಳುತ್ತಿದ್ದಾಳೆ. ಆಶ್ಚರ್ಯವೆಂದರೆ ಅಮಾಯಕ ಹೆಣ್ಣಿನ ಹಿಂಸೆ, ಸಾವು-ನೋವುಗಳಲ್ಲಿ ಹೆಣ್ಣಿನ ಪಾತ್ರವೇ ಗಮನಾರ್ಹವಾದುದು.

ಇಂದು ಭಾರತೀಯ ಮಹಿಳೆಯು ಹಲವಾರು ವಿಧಗಳಿಂದ ಶೋಷಣೆಗೆ ಒಳಗಾಗದ್ದಾಳೆ. ಇವುಗಳಲ್ಲಿ ವೇಶ್ಯಾವೃತ್ತಿ, ವೈಧವ್ಯ, ವರದಕ್ಷಿಣೆ, ಸಾಮಾಜಿಕ ಮತ್ತು ಆರ್ಥಿಕ ಪರಾವಲಂಬನೆ, ಅಸಮಾನತೆ, ಅತ್ಯಾಚಾರ ಮುಂತಾದವು ಮುಖ್ಯವಾದುವು. ಹೀಗಾಗಿ ಅವಳ ಜಿಲಿಯುಳ್ಳ ಬದುಕು ಸತ್ವಹೀನವಾಗುತ್ತಿದೆ. ಹಿಂದಿನಂತೆ ಮಹಿಳೆಯರ ಮೇಲಿನ ಅಪರಾಧಗಳು ಇಂದು ಕಡಿಮೆಯೂ ಇಲ್ಲ, ವಿರಳವೂ ಅಲ್ಲ.

ಮಹಿಳಾ ಶೋಷಣೆಯ ಒಂದು ಮುಖವಾದ ವರದಕ್ಷಿಣಾ ಪದ್ಧತಿ ಎಷ್ಟು ಭೀಕರವಾದದ್ದು, ಭಯಾನಕವಾದದ್ದು ಮತ್ತು ವ್ಯಾಪಕವಾದದ್ದು ಎಂಬುದನ್ನು ಪ್ರಸ್ತುತ ಲೇಖನದ ಪ್ರಾರಂಭದಲ್ಲಿಯೇ ಉಲ್ಲೇಖಿಸಿದ ಕೆಲವೊಂದು ಘಟನೆಗಳಿಂದ ತಿಳಿಯಬಹುದು. ಈ ಅನಿಷ್ಟ ಪದ್ಧತಿ ಎಂದು ಹುಟ್ಟಿತು? ಹೇಗೆ ಬೆಳವಣಿಗೆ ಹೊಂದಿತು? ಎಷ್ಟೊಂದು ಪ್ರಾಚೀನವಾದದ್ದು? ಇದನ್ನು ಪೋಷಿಸಿಕೊಂಡು ಬಂದಿರುವ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಾವುವು? ವರದಕ್ಷಿಣೆಯ ಗಾತ್ರವನ್ನು ನಿರ್ಧರಿಸುವ ಮುಖ್ಯಾಂಶಗಳಾವುವು? ವ್ಯಕ್ತಿ ಮತ್ತು ಅವನ ಕುಟುಂಬದ ಮೇಲೆ ಉಂಟುಮಾಡುವ ಅನಪೇಕ್ಷಿತ ಮತ್ತು ಅಪೇಕ್ಷಿತ ಪರಿಣಾಮಗಳಾವುವು? ಆಶಾಭಂಗ

ಗೊಂಡಿರುವ ವ್ಯಕ್ತಿ ಮತ್ತು ಕುಟುಂಬಗಳನ್ನು ಇದು ಎಷ್ಟರ ಮಟ್ಟಿಗೆ ಸಾಮಾಜಿಕ ಅವ್ಯವಸ್ಥೆಗೆ ಈಡು ಮಾಡುತ್ತದೆ? ಇದಕ್ಕೆ ಪರಿಹಾರವಿದೆಯೆ? ಇದ್ದ ಪರಿಹಾರ ಎಷ್ಟೊಂದು ಸಮರ್ಪಕ? ಸಮಯೋಚಿತ ಸಲಹೆ ಸೂಚನೆಗಳೇನಾದರೂ ಇವೆಯೆ? —ಇವೆಲ್ಲ ವರದಕ್ಷಿಣಾ ಪದ್ಧತಿಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳು, ಸಮಸ್ಯೆಗಳು. ಪ್ರಸ್ತುತ ಪ್ರಬಂಧದಲ್ಲಿ ಇವೆಲ್ಲವುಗಳಿಗೆ ಉತ್ತರಿಸುವ ಒಂದು ಪ್ರಯತ್ನ ಮಾಡಲಾಗಿದೆ.

ವರದಕ್ಷಿಣೆಯ ಉಗಮ

ವ್ಯಕ್ತಿಯ ಜೀವನದಲ್ಲಿ ವಿವಾಹವು ಒಂದು ಮಹತ್ವದ ಹಂತ. ಇದಕ್ಕೆ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಮಹತ್ವ ಉಂಟು. ಇಂಥ ಮಹತ್ವದ ಸಂದರ್ಭ ಸನ್ನಿವೇಶಗಳಲ್ಲಿ ಕಾಣಿಕೆಗಳ ವಿನಿಮಯವು ಪರಂಪರಾಗತವಾಗಿ ಸಾಗಿಬಂದಿದೆ.

ಭಾರತೀಯ ಸಂಸ್ಕೃತಿಯಲ್ಲಿ ಗೋದಾನ, ಭೂದಾನ, ಕನ್ಯಾದಾನ ಮುಂತಾದವುಗಳನ್ನು ಮಹತ್ವದ ದಾನಗಳೆಂದು ಪರಿಗಣಿಸಲಾಗಿದೆ. ಇಂಥ ದಾನಗಳನ್ನು ಪುರೋಹಿತರ ಮೂಲಕ ಧಾರ್ಮಿಕ ವಿಧಿ ವಿಧಾನಗಳಿಗೆ ಅನುಸಾರವಾಗಿ ದಕ್ಷಿಣೆಯೊಂದಿಗೆ ಕೊಡಬೇಕಾಗುತ್ತದೆ. 'ದಕ್ಷಿಣೆ' ಇಲ್ಲದಿದ್ದರೆ ದಾನ ಫಲಿಸುವುದಿಲ್ಲ ಎನ್ನಲಾಗುತ್ತದೆ. ಅಲ್ಲದೇ ದಕ್ಷಿಣೆಯು ದಾನದ ಹಿರಿಮೆಗೆ ತಕ್ಕದ್ದಿರಬೇಕು. ಗೋದಾನ ಬಹಳ ಪುಣ್ಯಪ್ರದವೆಂದು ನಮ್ಮ ಜನ ಈಗಲೂ ಭಾವಿಸುತ್ತಾರೆ. ಹಸುವನ್ನು ಇನ್ನೊಬ್ಬರಿಗೆ ದಾನ ಕೊಡುವಾಗ ಜತೆಯಲ್ಲಿ ದಕ್ಷಿಣೆಯನ್ನೂ ಕೊಡುತ್ತಾರೆ. ದಕ್ಷಿಣೆ ಇಲ್ಲದ ದಾನ ಸಾರ್ಥಕವಾಗುವುದಿಲ್ಲವೆಂಬುದು ಧರ್ಮಶಾಸ್ತ್ರಜ್ಞರ ಅಭಿಮತ. ಗೋವನ್ನು ದಾನಕೊಡುವಾಗ ಅದಕ್ಕೆ ಉಪವಾಸ ಬೀಳುವ ಸ್ಥಿತಿ ಒದಗದಿರಲೆಂದು ಅದರ ಆಹಾರವಾದ ತೃಣ ಸಂಪತ್ತನ್ನು (ಹುಲ್ಲು, ಮೇವು) ಕೊಡುವುದುಂಟು. ಇನ್ನೂ ಉತ್ಸಾಹಿಗಳು ಕೊಂಬುಗಳಿಗೆ ಚಿನ್ನದ ಕೋಡಣಸು ಹಾಕಿ ಮೇಲೆ ಪೀತಾಂಬರ ಹೊದಿಸಿ ಕೊಡುವುದುಂಟು. ಇದೂ ಸಾಲದೆಂದು ಹಸುವಿನ ಗೊರಸುಗಳಿಗೂ ಬೆಳ್ಳಿಯ ಅಥವಾ ಚಿನ್ನದ ಅಲಂಕಾರ ಮಾಡುವುದೂ ಉಂಟು. ದಾನಮಾಡಿದಷ್ಟೂ ಪುಣ್ಯ ಫಲ!

ಗೋದಾನವನ್ನು ಹೀಗೆ ಮಾಡಬೇಕಾದರೆ ಹೊಟ್ಟೆಯಲ್ಲಿ ಹುಟ್ಟಿದ ಮತ್ತು ಮುದ್ದಿನಿಂದ ಸಾಕಿ ಸಲುಹಿದ ಮಗಳನ್ನು ದಾನಮಾಡುವಾಗ ದಕ್ಷಿಣೆ ಕೊಡದಿರುತ್ತಾರೆಯೆ? ವಿವಾಹದ ಪದ್ಧತಿಗಳಲ್ಲಿಯೇ ಅತಿ ಶ್ರೇಷ್ಠವಾದ ಬ್ರಾಹ್ಮ ಪದ್ಧತಿಯಲ್ಲಿ 'ಕನ್ಯಾದಾನವು' ಮಹತ್ವದ ಅಂಗವೆನಿಸಿದೆ. ದಾನಗಳಲ್ಲಿಯೇ ಅತಿ ಶ್ರೇಷ್ಠವಾದ ಕನ್ಯಾದಾನಕ್ಕೆ ತಕ್ಕಂಥ ದಕ್ಷಿಣೆ ಇರಬೇಡವೇ? ದಾನ ಫಲಿಸಬೇಕಾದರೆ ವಧುವಿನೊಂದಿಗೆ ಉಚಿತ ಉಡುಗೊರೆಗಳನ್ನೂ, ಆಸ್ತಿ ಪಾಸ್ತಿಗಳನ್ನೂ, ದನಕರುಗಳನ್ನೂ, ಧನಕನಕಾದಿಗಳನ್ನೂ, ಅವರವರ ಶಕ್ತ್ಯಾನುಸಾರ ಕೊಡಬೇಕಾಗಿತ್ತು. ಇದಕ್ಕೆ ಸಾಲಂಕೃತ ಕನ್ಯಾದಾನವೆನ್ನುತ್ತಾರೆ.

ಭಾರತದ ಎಲ್ಲ ಜಾತಿಯ ಜನರಲ್ಲಿಯೂ ಕನ್ಯಾದಾನ ಪದ್ಧತಿಯು ಪ್ರಚಲಿತ

ವಿರಲಿಲ್ಲ. ಮೇಲ್ಜಾತಿಯ ಜನರಲ್ಲಿ ಮಾತ್ರ ಇತ್ತು. ಒಂದು ಕಾಲಕ್ಕೆ ಕೆಳಜಾತಿಯ ಜನರಲ್ಲಿ ಕನ್ಯಾಶುಲ್ಕ ಅಥವಾ ತೆರವು ಪದ್ಧತಿಯು ಹೆಚ್ಚು ಚಲಾವಣೆಯಲ್ಲಿತ್ತು. ಎಂತಲೇ ಕನ್ಯೆಯನ್ನು ದಾನಮಾಡು, ವಿಕ್ರಯ ಮಾಡಬೇಡ ಎಂದು ಉಪದೇಶಿಸುತ್ತಿದ್ದರು. ಇಂದಿಗೂ ಪರಿಶಿಷ್ಟ ಜಾತಿಗಳ ಜನರಲ್ಲಿ ಮತ್ತು ಆದಿವಾಸಿಗಳಲ್ಲಿ ವಧುವಿಗೆ ಪ್ರತಿಯಾಗಿ ಹಣ ಇಲ್ಲವೇ ವಸ್ತುಗಳನ್ನು ಕೊಡುವುದು ವಾಡಿಕೆಯಾಗಿದೆ. ಕೆಲವರು ಆಡು, ಆಕಳು ಕೊಡುತ್ತಾರೆ. ಮತ್ತೆ ಕೆಲವರು ವಸ್ತ್ರ, ಆಭರಣ, ಉಪಕರಣ, ಮದ್ಯ, ಧಾನ್ಯ ಮುಂತಾದವನ್ನು ಕೊಡುತ್ತಾರೆ. 'ಭಾರತವಲ್ಲಿಯ ಮಹಿಳೆಯ ಸ್ಥಾನಮಾನ ಅಧ್ಯಯನ ಸಮಿತಿಯು' (೧೯೭೪) ಕನ್ಯಾಶುಲ್ಕ ಸಂಪ್ರದಾಯವು ಪರಿಶಿಷ್ಟ ಜಾತಿಗಳಲ್ಲಿ ಭಾರತದ ಉದ್ದಗಲಕ್ಕೂ ಪ್ರಚಲಿತವಿರುವುದಾಗಿ ತನ್ನ ವರದಿಯಲ್ಲಿ ತಿಳಿಸಿದೆ. ಬಹುಶಃ ಇದು ದುಡಿಯುವ ಕೈಗಳಿಗೆ ಪ್ರತಿಯಾಗಿ ಕೊಡುವ ಪರಿಹಾರ ಧನವಿರಬೇಕು. ಇಂಥ ಸಮಾಜಗಳಲ್ಲಿ ಹೆಣ್ಣಿನ ಜನನವನ್ನು ಹುಣ್ಣು ಎಂದು ಬಗೆಯದೆ ಲಾಭದಾಯಕವೆಂದು ತಿಳಿಯುತ್ತಾರೆ.

ವರದಕ್ಷಿಣೆ ಮತ್ತು ತೆರವು ಈ ಎರಡೂ ಪದ್ಧತಿಗಳಲ್ಲಿ ಆಸ್ತಿಪಾಸ್ತಿಗಳ ವರ್ಗಾವಣೆಯಾಗುತ್ತದೆ. ತೆರವಿನಲ್ಲಿ ಆಸ್ತಿಯನ್ನು ವಧುವಿನ ತಂದೆ ತಾಯಿಗಳು ಪಡೆಯುತ್ತಾರೆ. ವರದಕ್ಷಿಣೆಯು ವರನಿಗೆ, ಅವನ ತಂದೆತಾಯಿಗಳಿಗೆ ವಧುವಿನ ಜೊತೆಗೆ ಬರುವಂಥದು. ಮೇಲ್ನೋಟಕ್ಕೆ ಇವು ಒಂದಕ್ಕೊಂದು ವಿರುದ್ಧವಾಗಿ ಕಂಡರೂ ವಾಸ್ತವವಾಗಿ ಹೀಗಿರುವುದಿಲ್ಲವೆಂದು ಗೂಡೆ ಎಂಬ ಸಮಾಜಶಾಸ್ತ್ರಜ್ಞನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ವಧುವಿನ ತಂದೆತಾಯಿಗಳು ತೆರವು ಎಂದು ಪಡೆದದ್ದನ್ನು ವಧುವಿಗೇ ತಿರುಗಿಕೊಡುತ್ತಾರೆ. ಇದು ದಂಪತಿಗಳ ಸೊತ್ತೇ ಆಗುತ್ತದೆ. ಆದ್ದರಿಂದ ಕನ್ಯಾಶುಲ್ಕವನ್ನು ಅಪ್ರತ್ಯಕ್ಷ ವರದಕ್ಷಿಣೆ ಎಂದು ಪರಿಗಣಿಸಬಹುದೆಂದು ಅವನು ಹೇಳಿದ್ದಾನೆ. ಏನೇ ಆಗಲಿ ಇಂದು ಬಹುತೇಕ ಜನಸಮೂಹಗಳು ಕನ್ಯಾಶುಲ್ಕವನ್ನು ಕೈಬಿಟ್ಟು ಅಥವಾ ಸಾಂಕೇತಿಕವಾಗಿ ಇಟ್ಟುಕೊಂಡು ವರದಕ್ಷಿಣೆಯನ್ನು ಅಳವಡಿಸಿಕೊಳ್ಳುತ್ತಿರುವುದು ಕಂಡುಬಂದಿದೆ.

ಪ್ರಾಚೀನತೆ

ಕನ್ಯಾಶುಲ್ಕ ಮತ್ತು ವರದಕ್ಷಿಣೆ ಪದ್ಧತಿಗಳು ಇಂದು ನಿನ್ನೆಯವಲ್ಲ. ಬಹಳ ಪ್ರಾಚೀನವಾದುವು. ವೇದ, ಗೃಹ್ಯಸೂತ್ರ, ಧರ್ಮಶಾಸ್ತ್ರ, ಸ್ಮೃತಿ, ಮಹಾಕಾವ್ಯ ಮೊದಲಾದವುಗಳಲ್ಲಿ ಇವುಗಳ ಉಲ್ಲೇಖವಿದೆ. ಅರಸುಮನೆತನದ ವಧುಗಳು ಒಂದು ನೂರು ಆಕಳುಗಳನ್ನು ವರದಕ್ಷಿಣೆಯ ರೂಪದಲ್ಲಿ ತರುತ್ತಿದ್ದರೆಂದು ಅಥರ್ವವೇದದಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿದೆ. ದ್ರೌಪದಿ, ಸುಭದ್ರಾ ಮತ್ತು ಉತ್ತರೆಯರು ತಮ್ಮ ತವರುಮನೆಯಿಂದ ಅನೇಕ ಆನೆಗಳನ್ನು, ಕುದುರೆಗಳನ್ನು ಮತ್ತು ಮುತ್ತುರತ್ನಗಳ ಹೇರಳವಾದ ಕಾಣಿಕೆಗಳನ್ನು ತಂದಿದ್ದರು. ಶ್ರೀಮತ್ ಭಾಗವತದಲ್ಲಿ ದೇವರಿಗೆ ಕೊಟ್ಟ ಕಾಣಿಕೆಗಳ ವಿಸ್ತಾರವಾದ ವರ್ಣನೆಯಿದೆ. ಆದರೆ ಇಂಥ ಕಾಣಿಕೆಗಳು ಇಂದಿನ ಅರ್ಥದಲ್ಲಿ ವರದಕ್ಷಿಣೆಗಳಾಗಿರಲಿಲ್ಲ. ಏಕೆಂದರೆ ಅವುಗಳನ್ನು ಯಾವ ಒತ್ತಾ

ಯವಿಲ್ಲದೆಯೆ, ಪ್ರೀತಿ ಒಲವುಗಳ ದ್ಯೋತಕವಾಗಿ ಕೊಟ್ಟಂಥವು. ಸ್ಮೃತಿ ಟೀಕಾಕಾರರು ಮತ್ತು ನಾಟಕ ಕರ್ತೃಗಳು ಅಂದಿನ ಸಮಾಜವನ್ನು ಚಿತ್ರಿಸುವಾಗ ವಿವಾಹ ಪೂರ್ವದಲ್ಲಿ ನಡೆದ ಒಪ್ಪಂದಗಳ ಉಲ್ಲೇಖ ಮಾಡಿರುವುದಿಲ್ಲ.

ಕ್ರಿ. ಪೂ. ೬೦೦ ರಿಂದ ಕ್ರಿ. ಶ. ೪೦೦ ರ ವರೆಗಿನ ಅವಧಿಯಲ್ಲಿದ್ದ ಗೃಹ್ಯಸೂತ್ರ, ಧರ್ಮಶಾಸ್ತ್ರ ಮತ್ತು ಸ್ಮೃತಿಗಳಲ್ಲಿ ಎಂಟು ತೆರನಾದ ವಿವಾಹ ಪದ್ಧತಿಗಳ ಪ್ರಸ್ತಾಪ ಬರುತ್ತವೆ. ಅವುಗಳಲ್ಲಿ ಬ್ರಹ್ಮ ಪದ್ಧತಿಯ ವಿವಾಹವೇ ಅತಿ ಶ್ರೇಷ್ಠವಾದುದೆಂದು ಪರಿಗಣಿತವಾಗಿತ್ತು. ಇದರ ಪ್ರಕಾರ, ವಿದ್ಯಾವಂತನೂ ಶೀಲವಂತನೂ ಆದ ವರನನ್ನು ಗೌರವಾದರಗಳಿಂದ ಸ್ವಾಗತಿಸಿ ಉತ್ತಮ ವಸ್ತ್ರ ತೊಡಿಸಿ, ಪೂಜಿಸಿ, ಸಾಲಂಕೃತಳಾದ ಕನ್ಯೆಯನ್ನು ಅವನಿಗೆ ದಾನಮಾಡುವುದು. ಈ ಪದ್ಧತಿಯು ವೇದಕಾಲದಿಂದಲೂ ಅಸ್ತಿತ್ವದಲ್ಲಿದೆ. ಆರ್ಷ ವಿವಾಹವೆಂದರೆ ಒಂದೆರಡು ಆಕಳು–ಹೋರಿಗಳನ್ನು (ಗೋಮಿಥುನವನ್ನು) ವರನಿಂದ ಪಡೆದುಕೊಂಡು ಶಾಸ್ತ್ರ ವಿಧಿ ಪ್ರಕಾರ ಅವನಿಗೆ ಕನ್ಯೆಯನ್ನು ದಾನಮಾಡುವುದು. ಅಸುರ ವಿವಾಹ ಪದ್ಧತಿಯಲ್ಲಿ ವರನು ಕನ್ಯೆಯ ತಂದೆತಾಯಿ, ಬಂಧುಬಳಗಗಳಿಗೆ ಮತ್ತು ಕನ್ಯೆಗೂ ಕೂಡ ಶಕ್ತ್ಯಾನುಸಾರ ಹಣ ಕೊಟ್ಟು ತನ್ನ ಇಷ್ಟದ ಪ್ರಕಾರ ಮದುವೆ ಮಾಡಿಕೊಳ್ಳುವುದು. ವೈದಿಕಕಾಲದಲ್ಲಿ ಕನ್ಯೆಯು ಧಾರಾಳವಾಗಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದ್ದಳು. ಕೈಕೇಯಿ, ಗಾಂಧಾರಿ ಮತ್ತು ಮಾದ್ರಿ ಇವರ ವಿವಾಹಗಳಲ್ಲಿ ಬಹಳಷ್ಟು ಕನ್ಯಾಶುಲ್ಕ ಕೊಡಲಾಯಿತು.

ಕನ್ಯಾಶುಲ್ಕ ಪದ್ಧತಿಯು ಭಾರತಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಒಂದು ಕಾಲಕ್ಕೆ ಜಗತ್ತಿನ ಉದ್ದಗಲಕ್ಕೂ ಎದ್ದುಕಾಣುವ ಪದ್ಧತಿಯಾಗಿತ್ತು. ಪ್ರಾಚೀನ ಗ್ರೀಸಿನಲ್ಲಿ ಈ ಪದ್ಧತಿಯು ಸರ್ವ ಸಾಮಾನ್ಯವಾಗಿತ್ತು. ಮಹಾಕವಿ ಹೋಮರನ (ಕ್ರಿ. ಪೂ. ೯ನೇ ಶತಮಾನ)ಪ್ರಕಾರ ಹೆಣ್ಣುಮಕ್ಕಳು ಆದಾಯದ ಮೂಲವಾಗಿದ್ದರು. ವರನು ಕನ್ಯಾಶುಲ್ಕವೆಂದು ಎತ್ತುಗಳನ್ನು ವಧುವಿನ ತಂದೆಗೆ ಕೊಡಬೇಕಾಗಿತ್ತು. ಹಿಂದಿನಕಾಲದಲ್ಲಿ ಪುರುಷರು ಹೆಂಡಂದಿರನ್ನು ಕೊಂಡುಕೊಳ್ಳುತ್ತಿದ್ದರೆಂದು ಅರಿಸ್ಟಾಟಲ್ (ಕ್ರಿ. ಪೂ. ೪ನೇ ಶತಮಾನ) ಹೇಳಿದ್ದಾನೆ. ಐತಿಹಾಸಿಕ ಕಾಲದ ಯುರೋಪಿನಲ್ಲಿ ವರದಕ್ಷಿಣೆಯು ಕನ್ಯಾಶುಲ್ಕ ಪದ್ಧತಿಯನ್ನು ಬದಿಗೆ ಸರಿಸಿತು. ಆದರೆ ವರದಕ್ಷಿಣೆಯು ಶ್ರೀಮಂತ ವರ್ಗಗಳ ಜನರಿಗೆ ಮಾತ್ರ ಸೀಮಿತವಾಗಿತ್ತು. ಅವರಿಗೆ ಇದೊಂದು ಆಡಂಬರದ, ಪ್ರದರ್ಶನದ ಮಾರ್ಗವಾಗಿತ್ತು. ಉಚ್ಚವರ್ಗಗಳಲ್ಲಿ ಯಾರಾದರೂ ವರದಕ್ಷಿಣೆ ಇಲ್ಲದೆ ವಿವಾಹ ಮಾಡಿಕೊಂಡರೆ ಅಂಥವರನ್ನು ಅವಹೇಳನ ಮಾಡುತ್ತಿದ್ದರು. ಆದರೆ ಯುರೋಪ ಅಮೇರಿಕೆಗಳಲ್ಲಿ ವರದಕ್ಷಿಣಾ ಪದ್ಧತಿಯು ಭಾರತದಲ್ಲಿಯಂತೆ ಆಳವಾಗಿ ಬೇರುಗಳನ್ನು ಬಿಡಲಿಲ್ಲ. ಮತ್ತು ವ್ಯಾಪಕವಾಗಿ ಹಬ್ಬಲೂ ಇಲ್ಲ. ಯಾಕೆಂದರೆ ಅಲ್ಲಿಯ ವಿವಾಹಗಳು ಪ್ರೇಮ–ವಿವಾಹಗಳು. ಭಾರತದಂತೆ ಹಿರಿಯರು ವ್ಯವಸ್ಥೆಗೊಳಿಸುವ ವಿವಾಹಗಳಲ್ಲ.

ರಾಜಾ ಭಗವಾನದಾಸ ಜಯಪುರದ ದೊರೆ. ತನ್ನ ಮಗಳು ಜೋಧುಬಾಯಿಯನ್ನು ಅಕಬರನ ಮಗ ಜಹಾಂಗೀರನಿಗೆ ಧಾರೆ ಎರೆದುಕೊಟ್ಟ. ಕಣ್ಣು ಕುಕ್ಕಿಸುವಷ್ಟು ಸಂಪತ್ತು ಹರಿದುಹೋಯಿತು. ಅಗಣಿತ ಬಂಗಾರ, ಮುತ್ತು–ರತ್ನಗಳು.

ವಜ್ರಗಳು, ಜರಿಯುಳ್ಳ ಮತ್ತು ನಯನಾಜೂಕಿನ ವಸ್ತ್ರಗಳು, ನೂರಾರು ಆನೆಕುದುರೆಗಳು, ಪುರುಷ ಮತ್ತು ಸ್ತ್ರೀ ಗುಲಾಮರು ಮುಂತಾದ ಕಾಣಿಕೆಗಳನ್ನು ಮಗಳೊಂದಿಗೆ ಕಳಿಸಿದ. ಮಗಳನ್ನು ಗಂಡನ ಮನೆಗೆ ಕಳಿಸುವಾಗ ಗೌರವಾದರ ಮತ್ತು ಕೃತಜ್ಞತೆಗಳ ದ್ಯೋತಕವಾಗಿ ಅರಮನೆಯ ಬಾಗಿಲದಿಂದ ಕೋಟೆಯ ಮಹಾದ್ವಾರದ ವರೆಗೆ ದಾರಿಯುದ್ದಕ್ಕೂ ಮುತ್ತುರತ್ನಗಳನ್ನು ಹರಡಿಸಿದ್ದ!

ಮುಸಲ್ಮಾನ ಅರಸರಲ್ಲಿಯೇ ಅತಿ ಕರ್ಮಠನೆನಿಸಿದ್ದ ಔರಂಗಜೇಬನೂ ಸಹ ತನ್ನ ಮಗ ಸುಲ್ತಾನ ಮಹಮ್ಮದನ ವಿವಾಹವನ್ನು ಚೋಳರಾಜಕುವರಿಯೊಂದಿಗೆ ಮಾಡುವಾಗ ವರದಕ್ಷಿಣೆ ಎಂದು ರಾಮಗಿರಿ ಕೋಟೆಯನ್ನೇ ಪಡೆದನು.

'ದಿ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ, ಎಂಬ ಗ್ರಂಥದಲ್ಲಿ ಅನೇಕ ಐರೋಪ್ಯ ಪ್ರವಾಸಿಕರು ಇದೊಂದು ಕ್ರೂರವಾದ ಸಂಪ್ರದಾಯವೆಂದು ಉಲ್ಲೇಖಿಸುತ್ತ "ಹೆಚ್ಚಿನ ವರದಕ್ಷಿಣೆ ಕೊಡುವ ಶಕ್ತಿ ಇಲ್ಲದ ತಂದೆತಾಯಿಗಳಿಗೆ ಮಗಳ ಮದುವೆಯನ್ನು ಮಾಡಿಕೊಡುವುದು ಕಠಿಣವಾಗಿತ್ತು. ಕೆಲವೊಂದು ಬಡ ತಂದೆಗಳಿಗೆ ಮಗಳಿಗೆ ಮದುವೆಯ ವಸ್ತ್ರಗಳನ್ನು ಕೂಡ ಕೊಡಿಸುವ ಶಕ್ತಿ ಇರಲಿಲ್ಲ, ಸಂತಶ್ರೇಷ್ಠ ತುಕಾರಾಮನು ತನ್ನ ಮಗಳ ವಿವಾಹವನ್ನು ಗ್ರಾಮಸ್ಥರಿಂದ ವರ್ಗಣಿ ಎತ್ತಿ ಮಾಡಬೇಕಾಯಿತು... ಸುರಸಾಗರ, ರಾಮಚರಿತ ಮಾನಸ, ಪದ್ಮಾವತ ಮೊದಲಾದ ಆ ಕಾಲದ ಗ್ರಂಥಗಳಲ್ಲಿ ಬೃಹತ್ ಮೊತ್ತದ ವರದಕ್ಷಿಣೆಯ ಉಲ್ಲೇಖಗಳಿವೆ" ಎಂದಿದೆ.

ಆಲ್ಟೇಕರ್ (೧೯೬೨) ಪ್ರಕಾರ, "ಬ್ರಾಹ್ಮಣೇತರ ಜಾತಿಗಳ ಜನರು ಈ ಸಂಪ್ರದಾಯವನ್ನು ೧೩-೧೪ನೇ ಶತಮಾನದ ರಾಜಪುತಾನಾದ ಅರಸರಿಂದ ಮತ್ತು ಶ್ರೀಮಂತ ಕುಟುಂಬಗಳಿಂದ ಎರವಲು ಪಡೆದರು." ವಸಂತರಾವ್ ಅಭಿಪ್ರಾಯ ಪಡುವಂತೆ, "ಜಾತಿಯನ್ನು ಒಂದೊಂದಾಗಿ ತೆಗೆದುಕೊಂಡು ನೋಡಿದರೆ ಇದು ಬ್ರಾಹ್ಮಣರಲ್ಲಿ ಮೊದಲು ಜನಪ್ರಿಯ ಪದ್ಧತಿಯಾಗಿತ್ತು. ನಂತರ ಬ್ರಾಹ್ಮಣೇತರರೂ ಈ ದಿಶೆಯಲ್ಲಿ ಬ್ರಾಹ್ಮಣರನ್ನು ಅನುಕರಣೆ ಮಾಡಿದರು."

ವರದಕ್ಷಿಣೆ ಇಂದು

೧೯ನೇ ಶತಮಾನದ ಮಧ್ಯಭಾಗದ ವರೆಗೆ ಅರಸು ಮನೆತನಗಳಲ್ಲಿ, ಸರದಾರರಲ್ಲಿ, ಶ್ರೀಮಂತ ಕುಟುಂಬಗಳಲ್ಲಿ ಮತ್ತು ಬ್ರಾಹ್ಮಣರಲ್ಲಿ ವಿವಾಹಕಾಲಕ್ಕೆ ಮತ್ತು ಆ ನಂತರ ಅಳಿಯಂದಿರಿಗೆ ಯಾವ ಒತ್ತಾಯವೂ ಇಲ್ಲದೆ ಅವರವರ ಶಕ್ತ್ಯಾನುಸಾರ ಕಾಣಿಕೆಗಳನ್ನು ಕೊಡಲಾಗುತ್ತಿತ್ತು. ಒಂದು ದೃಷ್ಟಿಯಲ್ಲಿ ಇದು ಅವರವರ ವೈಭವಾಡಂಬರಗಳ ಮತ್ತು ಪರಂಪರಾಗತ ರೀತಿ ನೀತಿಗಳ ಪ್ರದರ್ಶನಕ್ಕೆ ಸದವಕಾಶವಾಗಿತ್ತು. ಸಾಮಾನ್ಯ ಜನರಲ್ಲಿ ಇದು ಸಾಂಕೇತಿಕವಾಗಿತ್ತು. ಕೆಳವರ್ಗದ ಜನರಲ್ಲಂತೂ ವರದಕ್ಷಿಣೆಗೆ ಪ್ರತಿಯಾಗಿ ಕನ್ಯಾಶುಲ್ಕ ಪದ್ಧತಿಯು ಪ್ರಚಲಿತವಿತ್ತು.

ಬ್ರಿಟಿಶ್ ಪೂರ್ವ ಕಾಲದಲ್ಲಿ ಸಮಾಜವು ಒಕ್ಕಲುತನ ಪ್ರಧಾನವಾಗಿತ್ತು. ಸರಕಾರಿ ಮತ್ತಿತರ ಉದ್ಯೋಗಗಳು ಈಗಿನಂತೆ ಹೆಚ್ಚಾಗಿ ಇರಲಿಲ್ಲ. ಮತ್ತು ಅಷ್ಟೊಂದು ಲಾಭದಾಯಕವೂ ಆಗಿರಲಿಲ್ಲ. ಇತ್ತಿತ್ತಲಾಗಿ ಒಳ್ಳೆಯ ಶಿಕ್ಷಣ ಮತ್ತು

ಲಾಭದಾಯಕ ಉದ್ಯೋಗಗಳು ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಎತ್ತರಿಸುವಲ್ಲಿ ಸಹಾಯಮಾಡುತ್ತಲಿವೆ. ವೈವಾಹಿಕ ಮಾರುಕಟ್ಟೆಯಲ್ಲಿ ಇಂಥವರನ್ನು ಅಳಿಯಂದಿರನ್ನಾಗಿ ಮಾಡಿಕೊಳ್ಳಲು ಮಾವಂದಿರು ಮೇಲಾಟಕ್ಕಿಳಿಯುತ್ತಿದ್ದಾರೆ. ಉಪಜಾತಿಗಳ ಹೆಚ್ಚಳವೂ ಸಮಸ್ಯೆಯನ್ನು ಇನ್ನಿಷ್ಟು ಉಲ್ಬಣಗೊಳಿಸಿದೆ. ಒಳ್ಳೇ ವರಗಳ ಕೊರತೆಯಿಂದ ಬೆಲೆಗಳು ಗಗನಕ್ಕೇರುತ್ತಿವೆ. ಅಂತೂ ೧೯ನೇ ಶತಮಾನದ ಕೊನೆಯ ಭಾಗವಷ್ಟೊತ್ತಿಗೆ ವರದಕ್ಷಿಣೆಯ ಬೇಡಿಕೆಗಳು ಹೆಚ್ಚುತ್ತ ಬಂದು ಈ ಅನಿಷ್ಟವು ಎಲ್ಲ ವರ್ಗ, ಜಾತಿ. ಧರ್ಮ ಮತ್ತು ಪ್ರದೇಶಗಳಿಗೂ ಹರಡಿತು. ವರದಕ್ಷಿಣೆಯ ಪ್ರಮಾಣ ಹೆಚ್ಚುಕಡಿಮೆ ಇರಬಹುದು. ಆದರೆ ಎಲ್ಲ ವರ್ಗಗಳ ತಂದೆತಾಯಿಗಳಿಗೆ ಇದರ ಬಿಸಿ ತಟ್ಟಿದೆ. ಇಂದು ಇದು ವಿವಾಹದ ಅವಿಭಾಜ್ಯ ಅಂಗವಾಗಿದೆ.

ವರದಕ್ಷಿಣಾ ಪದ್ಧತಿಯು ಎಷ್ಟೊಂದು ಕಠಿಣ ರೂಪ ಧರಿಸಿದೆ ಎಂದರೆ ಆರ್ಥಿಕ ಮತ್ತು ಸಾಮಾಜಿಕ ಏಣಿಶ್ರೇಣಿಗಳಲ್ಲಿ ಕೆಳಮಟ್ಟದಲ್ಲಿರುವವರೂ ಕೂಡ ತಮ್ಮ ಹೆಣ್ಣುಮಕ್ಕಳಿಗೆ ವರಗಳನ್ನು ಪಡೆಯುವುದೇ ದುರ್ಲಭವಾಗುತ್ತಿದೆ. ಕಟ್ಟಡ ಕಾರ್ಯಗಳಲ್ಲಿ ಕೆಲಸಮಾಡುತ್ತಿರುವ ಕೂಲಿಗಳೂ ಕೂಡ ದ್ವಿಚಕ್ರವಾಹನಗಳನ್ನು, ನಿವೇಶನಗಳನ್ನು ಮತ್ತು ಹಣವನ್ನು ವರದಕ್ಷಿಣೆ ಎಂದು ಬೇಡುತ್ತಿರುವುದು 'ವಿಮೋಚನಾ' ಸಂಘದ ಗಮನಕ್ಕೆ ಬಂದಿದೆ.

ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಅಭ್ಯಾಸಮಾಡಿ ವರದಿ ಸಲ್ಲಿಸಲು ಭಾರತ ಸರಕಾರವು ಸಮಿತಿಯೊಂದನ್ನು (೧೯೭೪) ನೇಮಿಸಿತ್ತು. ಅದು ದೇಶದ ಉದ್ದಗಲಕ್ಕೂ ಸಂಚರಿಸಿ, ಅಭಿಪ್ರಾಯಗಳನ್ನು ಸಂಗ್ರಹಿಸಿ ವರದಿ ಸಲ್ಲಿಸಿದೆ. ವರದಕ್ಷಿಣಾ ಪದ್ಧತಿಯು ದೇಶದ ಮೂಲೆ ಮೂಲೆಗಳಲ್ಲಿ ಹಬ್ಬಿರುವುದು, ವರದಕ್ಷಿಣೆಯ ಪ್ರಮಾಣ ಹೆಚ್ಚಿರುವುದು, ಆಧುನಿಕ ಜೀವನದ ಹಲವಾರು ಸೌಲಭ್ಯಗಳನ್ನು ವಧುವಿನ ತಂದೆತಾಯಿಗಳಿಂದ ಅಪೇಕ್ಷಿಸಲಾಗುತ್ತಿದೆ. ಎಂಬುದು ಮತ್ತು ಸಾಂಕ್ರಾಮಿಕ ರೋಗದಂತೆ ಎಲ್ಲೆಡೆ ಪಸರಿಸುತ್ತಿರುವುದು ಸಮಿತಿಯ ಸದಸ್ಯರ ಗಮನಕ್ಕೆ ಬಂದಿದೆ.

ಭಾರತದ ಸಂಸತ್ತು ೧೯೬೧ ರ ವರದಕ್ಷಿಣಾ ನಿಷೇಧ ಶಾಸನದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದರ ಸಲುವಾಗಿ ಉಭಯ ಸದನಗಳ ಜಂಟೀ ಸಮಿತಿಯೊಂದನ್ನು ನೇಮಿಸಿತು. ಅದರ ಕಾರ್ಯಾಧ್ಯಕ್ಷರು ಮತ್ತು ಸದಸ್ಯರು ಎರಡು ವರ್ಷಗಳ ವರೆಗೆ ದೇಶದ ಮೂಲೆಮೂಲೆಗಳನ್ನು ಸುತ್ತಿದರು. ವರದಕ್ಷಿಣೆಯ ಬಗೆಗೆ ಅಭಿಪ್ರಾಯಗಳನ್ನೂ ಸಾಕ್ಷ್ಯಗಳನ್ನೂ ಸಂಗ್ರಹಿಸಿದರು. ವರದಕ್ಷಿಣಾ ಪದ್ಧತಿಯು ಗಟ್ಟಿರೂಪ ಧರಿಸಿದ್ದು ಮತ್ತು ಎಲ್ಲೆಡೆ ಹರಡಿದ್ದು ಕಂಡರು. ಆಂಧ್ರ ಪ್ರದೇಶದ ಕಮ್ಮಾ ಜಾತಿಗೆ ಸಂಬಂಧಿಸಿದ ಪ್ರಕರಣ ಒಂದರಲ್ಲಿ ಸುಮಾರು ಒಂದು ಕೋಟಿ ರೂಪಾಯಿ ವರದಕ್ಷಿಣೆ ಕೊಟ್ಟದ್ದು ಅದರ ಗಮನವನ್ನು ಸೆಳೆಯಿತು. ಅಲ್ಲದೆ ವರನ ಕಡೆಯವರು ವರನ ಪಾಲನೆಪೋಷಣೆ, ಶಿಕ್ಷಣ, ಉದ್ಯೋಗ, ಮುಂತಾದವು

ಗಳಿಗೆ ಉಂಟಾದ ಒಟ್ಟು ಖರ್ಚಿನ ಬಿಲ್ಲನ್ನು ವಧುವಿನ ತಂದೆತಾಯಿಗಳಿಂದ ವಸೂಲು ಮಾಡಿದ ಪ್ರಕರಣಗಳೂ ಬೆಳಕಿಗೆ ಬಂದವು.

ಗ್ರೀಸ್, ಐರ್ಲೆಂಡ್ ಮತ್ತಿತರ ದೇಶಗಳಲ್ಲಿ ವರದಕ್ಷಿಣೆಯು ಭೂಮಿ ಸೀಮೆಗಳ ರೂಪದಲ್ಲಿ ಪ್ರಚಲಿತವಿದೆ. ಕಮ್ಯುನಿಷ್ಟರ ಆಡಳಿತ ಪ್ರಾರಂಭವಾಗುವ ಪೂರ್ವದಲ್ಲಿ ಚೀನದಲ್ಲಿಯೂ ಪ್ರಚಲಿತವಿತ್ತು. ಬರ್ಮಾ ಶ್ರೀಲಂಕಾಗಳಲ್ಲಿ ಇಂದಿಗೂ ಇದೆ. ಆದರೆ ಭಾರತದಲ್ಲಿ ಇದರ ಹರವು ಗಾತ್ರಗಳು ಅತ್ಯಗಾಧವಾದುವು.

ಭಾರತದಲ್ಲಿ ವರದಕ್ಷಿಣಾ ಪದ್ಧತಿಯು ಹಿಂದೂಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದು ಮಹಮ್ಮದೀಯರಲ್ಲಿ ಮತ್ತು ಕೆಲ ಕ್ರಿಶ್ಚಿಯನ್ ಪಂಗಡಗಳಲ್ಲಿಯೂ ಪ್ರಚಲಿತವಿದೆ. ಕೇರಳದಲ್ಲಿಯ ಸಿರಿಯನ್ ಕ್ರಿಶ್ಚಿಯನ್ನರಲ್ಲಿ ಮತ್ತು ಗೋವಾದ ರೋಮನ್ ಕೆಥೋಲಿಕ್‌ರಲ್ಲಿ ರೂಢಿಯಲ್ಲಿದೆ.

ಮೊದಮೊದಲು ಇದು ನಗರಗಳಿಗೆ, ಅದೂ ಗಣ್ಯರಿಗೆ ಸಂಬಂಧಿಸಿದ ವಿಷಯವಾಗಿತ್ತು. ಈಗ ಗ್ರಾಮೀಣ ಪ್ರದೇಶಗಳನ್ನೂ ಪ್ರವೇಶಿಸಿದೆ; ಮತ್ತು ಅದಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ.

ಬ್ಯಾಂಕುಗಳು, ಜೀವವಿಮಾಕಂಪನಿಗಳು ತಮ್ಮ ವ್ಯವಹಾರ ಹೆಚ್ಚಿಸಿಕೊಳ್ಳಲು ವರದಕ್ಷಿಣೆ ಮತ್ತು ವಿವಾಹ ಖರ್ಚಿಗೆ ಹಣ ಉಳಿಸಲು ಪ್ರಚಾರಮಾಡುತ್ತವೆ. ದೇಶದ ಕಾನೂನಿಗೆ ವಿರುದ್ಧವಾದ ಇಂಥ ಸಲಹೆಗಳೂ ಕೂಡ ಸಮಸ್ಯೆಯ ಅಪಾರವಾದ ಭೀಕರತೆಯಲ್ಲಿ ಮರೆಯಾಗಿ ಹೋಗುತ್ತವೆ.

ಸಮಾಜಶಾಸ್ತ್ರಜ್ಞರನೇಕರು ವಿವಾಹ ಸಂಸ್ಥೆಯ ಬಗೆಗೆ ಅಧ್ಯಯನ ನಡೆಸಿದ್ದಾರೆ. ಲೆವಿ (೧೯೪೯), ಡ್ಯುಮಾಂಟ್ (೧೯೫೯), ಆಲ್ಟೇಕರ್ (೧೯೬೨), ಗೂಡೆ (೧೯೬೩), ಎಂ. ಎನ್. ಶ್ರೀನಿವಾಸ (೧೯೬೬), ಚೆಕ್ಕಿ (೧೯೬೮), ಗೋರೆ (೧೯೬೮), ಗುಪ್ತಾ (೧೯೭೨), ಕುಪ್ಪುಸ್ವಾಮಿ (೧೯೭೨), ಪ್ರಕಾಶರಾವ್ ಮತ್ತು ನಂದಿನಿರಾವ್ (೧೯೭೫) ಮುಂತಾದವರು ಅಧ್ಯಯನ ನಡೆಸಿದವರಲ್ಲಿ ಪ್ರಮುಖರು. ಸಂಪ್ರದಾಯ, ಮನೋವೃತ್ತಿ ಮತ್ತು ಜೀವನ ಮೌಲ್ಯಗಳಲ್ಲಿ ಬದಲಾವಣೆ ಆಗುತ್ತಿರುವುದನ್ನು ಕಂಡುಹಿಡಿದ್ದಾರೆ. ಅಲ್ಲದೆ ವಿವಾಹದ ವಯಸ್ಸು ಏರುತ್ತಿರುವುದನ್ನೂ, ಸಂಗಾತಿಗಳ ಆಯ್ಕೆಯಲ್ಲಿ ವಧೂವರರಿಗೆ ವೈಯಕ್ತಿಕ ಸ್ವಾತಂತ್ರ್ಯ ಹೆಚ್ಚುತ್ತಿರುವುದನ್ನೂ, ವಿವಾಹಕ್ಕೆ ಪ್ರೇಮವೂ ಒಂದು ಪ್ರಮುಖ ಆಧಾರವಾಗುತ್ತಿರುವುದನ್ನೂ ಮತ್ತು ವರದಕ್ಷಿಣೆಯ ಅನಿಷ್ಟದ ಬಗೆಗೆ ಅರಿವು ಮೂಡುತ್ತಿರುವುದನ್ನೂ ಅಧ್ಯಯನಗಳು ಎತ್ತಿತೋರಿಸಿವೆ. ಪ್ರಕಾಶರಾವ್ ಮತ್ತು ನಂದಿನಿರಾವ್ ಜೊತೆಗೂಡಿ ನಡೆಸಿದ ಅಧ್ಯಯನದಲ್ಲಿ ಈ ಪದ್ಧತಿಯು ಕೊನೆಗೊಳ್ಳುವ ಸಾಧ್ಯತೆ ಕಂಡು ಬರುವುದಿಲ್ಲವೆಂದು ಹೇಳಿದ್ದಾರೆ. ಕಾರಣವೇನೆಂದರೆ, ಪರಂಪರೆಯ ಪ್ರಭಾವ ಇನ್ನೂ ಉಳಿದುಕೊಂಡಿರುವುದು. ಮತ್ತು ಅಭಿಪ್ರಾಯ ವ್ಯಕ್ತ ಪಡಿಸುವುದಕ್ಕೂ ಮತ್ತು ಸ್ವತಃ ನಡೆಯುವುದಕ್ಕೂ ಅಂತರವಿರುವುದು.

ವಿಕೃತರೂಪ

ಹಿಂದೆ ವಿವಾಹದ ಅಂಗವಾಗಿ ವರನಿಗೆ ಕೊಡಲಾಗುತ್ತಿದ್ದ ಕಾಣಿಕೆಗಳು ಇಂದಿನ ಅರ್ಥದಲ್ಲಿ ವರದಕ್ಷಿಣೆಯಾಗಿರಲಿಲ್ಲ. ಸಾಲಸೋಲಗಳನ್ನು ಮಾಡದೆ, ಜೀವನವನ್ನು ಒತ್ತೆ ಇಡದೆ ತಂತಮ್ಮ ಶಕ್ತ್ಯಾನುಸಾರವಾಗಿ ಪ್ರೀತಿ–ಒಲವುಗಳ ದ್ಯೋತಕವಾಗಿ ಕಾಣಿಕೆಗಳನ್ನು ಕೊಡುತ್ತಿದ್ದರು. ಯಾವ ಒತ್ತಾಯವೂ ಇರಲಿಲ್ಲ. ಕನ್ಯೆಯನ್ನು 'ನೋಡುವ' ಪೂರ್ವದಲ್ಲಿಯೇ ವರದಕ್ಷಿಣೆಯ ಅಪೇಕ್ಷಿತ ಗಾತ್ರವನ್ನು ನಾಚಿಕೆ ಇಲ್ಲದೆ ಕೇಳುವ ಹವ್ಯಾಸ ಉದ್ದೇಶಗಳು ಮೊದಲಿನ ವಿವಾಹಗಳಲ್ಲಿ ಇರಲಿಲ್ಲ. ಇಷ್ಟು ಕೊಟ್ಟರೆ ವಿವಾಹ ಸಂಬಂಧ, ಇಲ್ಲದಿದ್ದರೆ ಇಲ್ಲ ಎನ್ನಲಾಗುತ್ತಿರಲಿಲ್ಲ. ಇಷ್ಟಿಷ್ಟನ್ನು, ಇಂತಿಂಥಾದ್ದನ್ನು ಕೊಡಲೇಬೇಕು ಎಂದು ವರನ ಕಡೆಯವರು ಪಟ್ಟುಹಿಡಿದು ಕೂಡ್ರುತ್ತಿರಲಿಲ್ಲ. ದಿನಗಟ್ಟಲೇ ಚೌಕಾಸಿಮಾಡಿ ಪೂರ್ವಭಾವಿಯಾಗಿ ಕರಾರುಕಟ್ಟುಗಳನ್ನು ಹಾಕಿ ಒಪ್ಪಂದ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿರಲಿಲ್ಲ. ಕರಾರಿಗನುಗುಣವಾಗಿ ವಿವಾಹದ ವೇಳೆಗೆ ಕೊಡಲಾಗಲಿಲ್ಲವೆಂದು ಮುರುಗಡೆ ಮಾಡಿಕೊಳ್ಳುತ್ತಿರಲಿಲ್ಲ. ವಿವಾಹದ ನಂತರ ಅಷ್ಟುತಾ, ಇಷ್ಟುತಾ ಎಂದು ಹೆಂಡತಿಯನ್ನು ಗಂಡನಮನೆಯವರೆಲ್ಲರೂ ಒಟ್ಟುಗೂಡಿ ಕಾಡಿಸಿ ಪೀಡಿಸಿ, ಹಿಂಸಿಸಿ, ಗೋಳು ಹೊಯ್ದುಕೊಂಡು ಸಾವಿನಲ್ಲಿ ಪರಿಹಾರ ಕಂಡುಕೊಳ್ಳುವಂತೆ ಮಾಡುತ್ತಿರಲಿಲ್ಲ. ಅಂತೂ ಒಂದುಕಾಲಕ್ಕೆ ಅಳಿಯನಿಗೆ ಪ್ರೀತ್ಯಾದರಗಳಿಂದ ಕೊಡಲಾಗುತ್ತಿದ್ದ ಬಳುವಳಿಗಳಿಂದು ವಿಕೃತಗೊಂಡು ವರನ ಕುಟುಂಬದವರ ಮೂಲಭೂತ ಹಕ್ಕುಗಳೇನೋ ಎಂಬಂತೆ ಮಾರ್ಪಾಟಾಗಿವೆ. ಪವಿತ್ರ ಸಂಬಂಧವಾಗಿದ್ದ ವಿವಾಹವಿಂದು ವ್ಯವಹಾರದ ಮಟ್ಟಕ್ಕಿಳಿದಿದೆ. ಇಂದು ಒಲವು ಪ್ರೀತಿಗಳು ಗೌಣ. ಹಣ, ಪ್ರಭಾವ, ಆಸ್ತಿ ಪಾಸ್ತಿಗಳು ಪ್ರಧಾನ.

ಆಲ್ಟೇಕರ್ (೧೯೬೨) ಹೇಳುವಂತೆ, "ಸ್ಮೃತಿಗಳಲ್ಲಿ ಉಚಿತ ಉಡುಗೆ-ತೊಡುಗೆ, ಆಭರಣಗಳೊಂದಿಗೆ ವಧುವನ್ನು ಧಾರೆಯೆರೆದು ಕೊಡಬೇಕು ಎಂದು ಹೇಳಿದ್ದ ನಿರ್ದೇಶನ, ಕಾಲಾಂತರದಲ್ಲಿ ವಿಕೃತಗೊಂಡು ಅನಿವಾರ್ಯ ಅಂಶವೆನಿಸಿದೆ. ೧೩–೧೪ನೇ ಶತಮಾನದಿಂದೀಚೆಗೆ ಮೊದಮೊದಲು ಐಚ್ಛಿಕವಾಗಿದ್ದ ಸಂಪ್ರದಾಯವು ಕಡ್ಡಾಯದ ಪಿಡುಗಾಗಿ ಪರಿಣಮಿಸಿದೆ."

ವರದಕ್ಷಿಣೆಯ ಅರ್ಥ

ವರನು ವಿವಾಹಕ್ಕೆ ಸಂಬಂಧಿಸಿದಂತೆ ವಧುವಿನ ತಂದೆತಾಯಿಗಳಿಂದ ಅಥವಾ ಅವಳ ಪಾಲಕರಿಂದ ಪಡೆಯುವ ಹಣ ಅಥವಾ ವಸ್ತುಒಡವೆಗಳು ಅಥವಾ ಇವೆರಡರ ರೂಪದಲ್ಲಿರುವ ಯಾವುದೇ ಮೌಲಿಕ ಆಸ್ತಿಯನ್ನು ಸಾಮಾನ್ಯವಾಗಿ ವರದಕ್ಷಿಣೆ ಎಂದು ಕರೆಯುತ್ತಾರೆ. ಆದರೆ ವರದಕ್ಷಿಣೆಯ ಅರ್ಥ ಇಷ್ಟೊಂದು ಸರಳವಾಗಿಲ್ಲ.

ಮಹಿಳಾಸ್ಥಾನಮಾನದ ಬಗೆಗಿನ ಅಧ್ಯಯನ ಸಮಿತಿಯು (೧೯೭೫)ತನ್ನ ವರದಿಯಲ್ಲಿ ತಿಳಿಸಿರುವಂತೆ,"ನಮ್ಮ ದೇಶದ ಜನಗಳಂತೆಯೇ ವರದಕ್ಷಿಣೆಯ ಬಗೆಗಿನ ಅರ್ಥಗಳೂ ಕೂಡ ಅಷ್ಟೇ ವೈವಿಧ್ಯಮಯ ಮತ್ತು ಇದರ ಬಗೆಗಿನ ತಿಳುವಳಿಕೆಗಳು ಮತ್ತು

ವಾಡಿಕೆಗಳು ಪ್ರದೇಶದಿಂದ ಪ್ರದೇಶಕ್ಕೆ ದಿಗ್ಭ್ರಮೆಗೊಳಿಸುವಷ್ಟು ಭಿನ್ನವಾಗಿರುತ್ತವೆ." ಪ್ರಸ್ತುತ ಸಮಿತಿಯು ವರದಕ್ಷಿಣೆಯನ್ನು ಈ ರೀತಿ ವ್ಯಾಖ್ಯಾನಿಸಿದೆ:

i) ಏನೇನು ಕೊಡಬೇಕೆಂಬುದನ್ನು ವಿವಾಹ ಪೂರ್ವದಲ್ಲಿಯೇ ಇತ್ಯರ್ಥಗೊಳಿಸಿ, ಅದನ್ನು ಬಹಿರಂಗವಾಗಿ ಪ್ರಕಟಿಸಿ, ಅದಕ್ಕನುಗುಣವಾಗಿ ವಧುವಿಗೆ ಕೊಟ್ಟಿದ್ದು. ಕಾಣಿಕೆಯನ್ನು ವಧುವಿಗೆ ಕೊಟ್ಟಿದ್ದಾದರೂ ಅದು ಪ್ರತ್ಯೇಕವಾಗಿ ಅವಳೊಬ್ಬಳದೇ ಸ್ವತ್ತಲ್ಲ.

ii) ವಿವಾಹ ಪೂರ್ವದಲ್ಲಿ ಮತ್ತು ವಿವಾಹಕಾಲಕ್ಕೆ ವರನಿಗೆ ಕೊಟ್ಟಿದ್ದು.

iii) ಹುಡುಗಿಯ ಅತ್ತೆ ನಾದಿನಿಯರಿಗೆ ಮಾವ, ಮೈದುನರಿಗೆ ಕೊಟ್ಟ ಕಾಣಿಕೆಗಳು.

"ವರನ ಪಕ್ಷದವರ ಪ್ರಯಾಣಕ್ಕಾಗಿ ಮತ್ತು ಮನರಂಜನೆಗಾಗಿ ಖರ್ಚು ಮಾಡಿದ ಅಪಾರ ಮೊತ್ತವೂ ವರದಕ್ಷಿಣೆಯಲ್ಲಿಯೇ ಸೇರಿರುತ್ತದೆ."

ಕೇಂದ್ರಸರಕಾರದ ೧೯೬೧ರ ವರದಕ್ಷಿಣಾ ನಿಷೇಧ ಶಾಸನವು ಕೊಟ್ಟ ವರದಕ್ಷಿಣೆಯ ಅರ್ಥ ಹೀಗಿದೆ: ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಯಾವುದೇ ಆಸ್ತಿಯನ್ನು ಅಥವಾ ಮೌಲಿಕ ಭದ್ರತೆಯನ್ನು ಕೊಟ್ಟಿದ್ದು ಅಥವಾ ಕೊಡಬೇಕೆಂದು ತೀರ್ಮಾನಿಸಿದ್ದು.

a) ವಿವಾಹದ ಒಂದು ಪಕ್ಷದವರಿಂದ ಮತ್ತೊಂದು ಪಕ್ಷದವರಿಗೆ ಕೊಟ್ಟಿದ್ದು; ಅಥವಾ.

b) ಯಾವುದೇ ಪಕ್ಷದ (ವರ ಅಥವಾ ವಧುವಿನ) ತಂದೆ ತಾಯಿಗಳಿಂದ ಅಥವಾ ಯಾವುದೇ ವ್ಯಕ್ತಿಯಿಂದ ಇನ್ನೊಂದು ಪಕ್ಷದ ತಂದೆ ತಾಯಿಗಳಿಗೆ ಅಥವಾ ಸಂಬಂಧಿಸಿದ ಯಾವುದೇ ವ್ಯಕ್ತಿಗೆ; ಉಭಯ ಪಕ್ಷದವರು ಮೊದಲೇ ತೀರ್ಮಾನಿಸಿದಂತೆ ವಿವಾಹ ಪೂರ್ವದಲ್ಲಿ ಅಥವಾ ವಿವಾಹಕಾಲಕ್ಕೆ ಅಥವಾ ನಂತರ ಕೊಟ್ಟಿದ್ದು; ಆದರೆ ಇದು ಮುಹಮ್ಮದೀಯ ವೈಯಕ್ತಿಕ ಕಾನೂನು ಅನ್ವಯವಾಗುವ ವ್ಯಕ್ತಿಗಳನ್ನು ಒಳಗೊಳ್ಳುವುದಿಲ್ಲ.

ಪ್ರಸ್ತುತ ಕಾನೂನಿನ ವರದಕ್ಷಿಣೆಯ ಅರ್ಥ ಇಲ್ಲಿಗೆ ಮುಗಿಯಲಿಲ್ಲ. ಇನ್ನೂ ಹೆಚ್ಚಿಗೆ ಒಳಗೊಂಡಿದೆ. ಅದೇನೆಂದರೆ, "ಯಾವುದೇ ಪಕ್ಷದವರಾಗಲಿ ವಿವಾಹದ ಕಾಣಿಕೆಗಳಾದ ಹಣ, ಆಭರಣ, ಬಟ್ಟೆಬರೆ ಅಥವಾ ಇನ್ನಾವುದೇ ವಸ್ತುಗಳನ್ನು ಪ್ರತ್ಯರ್ಥವಾಗಿ ಕೊಡತಕ್ಕೊಳ್ಳುವುದನ್ನು ವರದಕ್ಷಿಣೆ ಎಂದು ಪರಿಗಣಿಸಕೂಡದು. ಒಂದು ವೇಳೆ ಇಂಥ ಯಾವುದೇ ವಸ್ತುವನ್ನು ಮೊದಲೇ ಮಾಡಿಕೊಂಡ ಕರಾರುಗಳಿಗೆ ಅನುಗುಣವಾಗಿ ಪಡೆದಿದ್ದರೆ ಮಾತ್ರ ಅದು ವರದಕ್ಷಿಣೆ ಎನಿಸುತ್ತದೆ." ಆದ್ದರಿಂದ ಪ್ರಸ್ತುತ ಕಾನೂನಿನ ಪ್ರಕಾರ ಪ್ರೀತಿ–ಒಲವುಗಳ ದ್ಯೋತಕವಾಗಿ, ಸ್ವಸಂತೋಷದಿಂದ, ಯಾವ ಪೂರ್ವಭಾವಿ ಕರಾರುಗಳಿಲ್ಲದೆ ಕೊಟ್ಟದ್ದು ಅಥವಾ ತೆಗೆದುಕೊಂಡದ್ದು ವರದಕ್ಷಿಣೆ ಎನಿಸುವುದಿಲ್ಲ.

ಒಂದು ಸ್ವಾರಸ್ಯದ ವಿಷಯವೆಂದರೆ ಕೇಂದ್ರ ಸರಕಾರದ ೧೯೬೧ ರ ವರದಕ್ಷಿಣಾ

ನಿಷೇಧ ಶಾಸನಕ್ಕೆ ತಿದ್ದುಪಡಿ ಮಾಡಿದ ಹರಿಯಾನಾದ ವರದಕ್ಷಿಣಾ ನಿಷೇಧ ಶಾಸನವು ಆಸ್ತಿ ಪಾಸ್ತಿಗಳನ್ನು ಅಥವಾ ಮೌಲಿಕ ಭದ್ರತೆಗಳನ್ನು ವರದಕ್ಷಿಣೆಯಲ್ಲಿ ಒಳಗೊಳ್ಳುವುದರ ಜೊತೆಗೆ ವಿವಾಹಕ್ಕೆ ಸಂಬಂಧಿಸಿದ ನಿಶ್ಚಿತಾರ್ಥ ಮೊದಲ್ಗೊಂಡು ಎಲ್ಲ ಸಮಾರಂಭಗಳಿಗೆ ಆದ ಖರ್ಚು; ದೀಪಾಲಂಕಾರ ಉಭಯ ಪಕ್ಷದವರು ಕೊಡುತಕ್ಕೊಳ್ಳುವ ಕಾಣಿಕೆಗಳಾದ ಹಣ, ಆಭರಣ, ಬಟ್ಟೆಬರೆ ಅಥವಾ ಇತರ ವಸ್ತುಗಳು, ಔತಣ ಮತ್ತಿತರ ಸಾದಿಲವಾರ ಖರ್ಚುವೆಚ್ಚಗಳನ್ನೆಲ್ಲ ವರದಕ್ಷಿಣೆಯ ಬಾಬಿನಲ್ಲಿ ಸೇರಿಸಲಾಗಿದೆ.

ನಿಜ ಜೀವನದಲ್ಲಿ ವರದಕ್ಷಿಣೆ ವ್ಯಾಪಕಾರ್ಥವುಳ್ಳದ್ದು. ಅದಕ್ಕೆ ಇತಿ ಮಿತಿಗಳೆಂಬುದಿರುವುದಿಲ್ಲ. ಹನುಮಂತನ ಬಾಲದಂತೆ ಬೆಳೆಯಬಲ್ಲ ಶಕ್ತಿಯುಳ್ಳದು. ಅದು ಹಣದ ರೂಪದಲ್ಲಿ ಮಾತ್ರ ಇರುವುದಿಲ್ಲ. ಹೊಸ ಸಂಸಾರ ಹೂಡಲು ಮನೆಯ ಅಗತ್ಯದ ವಸ್ತುಗಳು, ಪಾತ್ರೆ ಪಗಡೆಗಳು, ಉಡುಗೆ ತೊಡುಗೆಗಳು, ಪೀಠೋಪಕರಣಗಳು, ಪಲ್ಲಂಗ, ಬೆಲೆಯುಳ್ಳ ಮೆತ್ತನೆಯ ಹಾಸಿಗೆ ಹೊದಿಕೆಗಳು, ಕಪಾಟು, ನಿವೇಶನ, ಮನೆ, ಕೆಲಸ, ವಾಹನ, ವಿದೇಶ ಪ್ರಯಾಣ ಖರ್ಚು, ವರನ ಮನೆಯವರಿಗೆಲ್ಲ ವಸ್ತ್ರಾಭರಣಗಳೇ, ದೇವರ ಪೂಜೆಯ ಸಲಕರಣೆಗಳು,ಐಷಾರಾಮಿನ ಸಾಧನೆಗಳಾದ ಟಿ. ವ್ಹಿ, ಫ್ರಿಜ್, ಇಂಜನಿಯರಿಂಗ ಅಥವಾ ಮೆಡಿಕಲ್ ಅಥವಾ ಕಾಮ್ರ್ಸಿ ಶಿಕ್ಷಣ ವೆಚ್ಚ ಹೀಗೆ ವರಕ್ಷಿಣೆಯು ನೂರಾರು ಮುಖವಾಡಗಳನ್ನು ಧರಿಸಬಲ್ಲದು. ಹಣ ಆಸ್ತಿ–ಪಾಸ್ತಿಗಳಂತೂ ಸರಿಯೆ. ಜೊತೆಗೆ ಎಲ್ಲ ರೀತಿಯ ಪ್ರಭಾವ, ಅನುಗ್ರಹಗಳನ್ನೂ ಒಳಗೊಂಡಿದೆ. ಹಣ ಮತ್ತು ಪ್ರಭಾವಗಳು ವರನಿಗೆ ತಾಂತ್ರಿಕ ಅಥವಾ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ದೊರಕಿಸಿಕೊಡಬಹುದು. ಹಲಕೆಲವು ಸಂದರ್ಭಗಳಲ್ಲಿ ಪದವಿಗಿಂತಲೂ ಮಿಗಿಲಾಗಿ ಪ್ರಭಾವ ಮತ್ತು ಹಣ ಇವೆರಡೂ ಅಳಿಯನ ಉತ್ತಮ ಉದ್ಯೋಗಾವಕಾಶಕ್ಕೆ ನೆರವಾಗಬಲ್ಲವು. ಉನ್ನತ ವ್ಯಾಸಂಗ ಮತ್ತು ಉತ್ತಮ ಉದ್ಯೋಗಾವಕಾಶಗಳನ್ನು ಪಡೆದು ತನ್ಮೂಲಕ ಆರ್ಥಿಕ ವರಮಾನವನ್ನು ಮತ್ತು ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಬಹುದು. ಇಂದಿಲ್ಲ ನಾಳೆ ಚಂದ್ರ, ಮಂಗಳ, ಶುಕ್ರಗಳೆಡೆಗೆ ಪ್ರಯಾಣ ಸಾಧ್ಯವಾದರೆ ಇವರ ಖರ್ಚು ಕೂಡ ವರದಕ್ಷಿಣೆಯ ಮೊತ್ತದಲ್ಲಿ ಸೇರುವುದರಲ್ಲಿ ಸಂಶಯವೇ ಇಲ್ಲ.

ಕಾರಣಗಳು

ವರದಕ್ಷಿಣಾ ಪದ್ಧತಿ ಹುಟ್ಟಲು, ಬೆಳೆಯಲು, ತನ್ನ ಜ್ವಾಲೆಗಳನ್ನು ಸುತ್ತೆಲ್ಲ ಹರಡಲು, ನಂಜಿನ ನಾಲಿಗೆಗಳನ್ನು ದೇಶದ ಉದ್ದಗಲಕ್ಕೂ ಚಾಚಲು ಹಲವಾರು ಕಾರಣಗಳಿವೆ. ನಿವಾರಣೆಯ ಕ್ರಮಗಳನ್ನು ಕೈಗೊಳ್ಳಬೇಕಾದರೆ ವ್ಯಾಧಿಯ ಕಾರಣಗಳನ್ನು ಅರಿಯುವದು ಅತ್ಯವಶ್ಯಕ. (೧) ಧರ್ಮ ಸಂಪ್ರದಾಯಗಳ ಬೆಂಬಲ ವಿವಾಹವು ಬಹು ಪುರಾತನವಾದ ಧಾರ್ಮಿಕ ಸಂಸ್ಥೆ. ಪ್ರಧಾನವಾದ ಧಾರ್ಮಿಕ ಸಂಸ್ಕಾರ. ಅತ್ಯವಶ್ಯವಾಗಿ ನೆರವೇರಲೇ ಬೇಕಾದದ್ದು. ಹೆಣ್ಣುಮಗಳ ವಿವಾಹ ನೆರವೇರಿಸುವದರಿಂದ ತಂದೆ ತಾಯಿಗಳ ಮೋಕ್ಷದ ದಾರಿ ಸುಗಮ. ಆ ಹೆಣ್ಣಿನ ಮೂಲಕ ಸತ್ಪುತ್ರನನ್ನು ಪಡೆದಾಗಲೇ ತಂದೆತಾಯಿಗಳಿಗೆ ಮೋಕ್ಷ. ಧರ್ಮಶಾಸ್ತ್ರ

ಕಾರರು ತೆರವನ್ನು ಹೆಣ್ಣಿನ ಮಾರಾಟವೆಂದು ತೆಗಳಿದ್ದಾರೆ. ಕನ್ಯಾದಾನವನ್ನು ಶ್ರೇಷ್ಠವಾದುದೆಂದು ಎತ್ತಿಹಿಡಿದಿದ್ದಾರೆ. ವಿದ್ಯಾವಂತನೂ ಶೀಲವಂತನೂ ಆದ ವರನನ್ನು ಗೌರವಾದರಗಳಿಂದ ಸ್ವಾಗತಿಸಿ, ಉಚಿತ ಕಾಣಿಕೆಗಳನ್ನು ಕೊಟ್ಟು ಸಾಲಂಕೃತ ಕನ್ಯೆಯನ್ನು ಅವನಿಗೆ ದಾನಮಾಡುವದು ಪರಂಪರಾಗತ ಪದ್ಧತಿ.

ವಿವಾಹವು ಎರಡು ವ್ಯಕ್ತಿಗಳನ್ನು ಮಾತ್ರವಲ್ಲ ಎರಡು ಕುಟುಂಬಗಳನ್ನೂ ಬೆಸೆಯುವಂಥ ಮಹತ್ವದ ಸಮಾರಂಭ, ಸಂಬಂಧ. ಇದು ಕೆಲವೊಂದು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನಿಮಯಗಳಿಂದ ಕೂಡಿದೆ. ಎರಡೂ ಪಕ್ಷದವರಲ್ಲಿ ಹಣ ವಡವೆ, ವಸ್ತ್ರ ಮೊದಲಾದ ಕಾಣಿಕೆಗಳು ವಿನಿಮಯವಾಗುತ್ತವೆ. ವಿವಾಹದ ವಿವಿಧ ಅಂಗಗಳಾಗಿಯೇ ಬೆಳೆದು ಬಂದ ಇವುಗಳನ್ನು ತೆರವು, ವರದಕ್ಷಿಣೆ, ವರೋಪಚಾರ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕೆಲವೊಂದು ಮಾರ್ಪಾಡುಗಳೊಂದಿಗೆ ಇವು ಇಂದಿಗೂ ಸಾಗಿ ಬಂದಿವೆ.

(೨) ಜೀವನ ಮೌಲ್ಯಗಳ ಅವನತಿ: ಜೀವನ ಮೌಲ್ಯಗಳು ಕುಸಿಯುತ್ತಿರುವದಕ್ಕೂ ವರದಕ್ಷಿಣೆ ಒಂದು ಪ್ರಬಲ ಪಿಡುಗಾಗಿ ಪರಿಣಮಿಸಿರುವದಕ್ಕೂ ಸಂಬಂಧವಿದೆ. ಹಣ ಸಂಪತ್ತು ಹೇಗೆ ಬಂದರೂ ಬರಲಿ ಎಂಬ ದಾಹ ಬೆಳೆಯುತ್ತಿದೆ. ಬರುವ ಸೊಸೆ ಸಾಧ್ಯವಾದಷ್ಟು ತರಲಿ ಎಂಬ ದುರಾಸೆ ಹೆಚ್ಚುತ್ತಿದೆ. ಹೀಗಾಗಿ ವರದಕ್ಷಿಣೆಯ ಬೆಲೆಗಳು ಗಗನಕ್ಕೇರುತ್ತಿವೆ. ಅನೇಕ ವಿವಾಹಿತ ಮಹಿಳೆಯರು ಗಂಡನ ಮನೆಯ ಅಮಾನುಷ ಹಿಂಸೆ, ಕಿರುಕುಳಕ್ಕೆ ಒಳಗಾಗಿ ನರಳುತ್ತಾರೆ. ಕೊಲೆ ಮಾಡಿಸಿಕೊಂಡು ಇಲ್ಲವೇ ಬಾಳು ಅಸಹನೀಯವಾದಾಗ ಆತ್ಮಹತ್ಯೆ ಮಾಡಿಕೊಂಡು ಸಾಯುವವರ ಸಂಖ್ಯೆ ಹೆಚ್ಚುತ್ತಲೇ ನಡೆದಿದೆ.

ಬ್ರಿಟಿಶರ ಆಗಮನದಿಂದೀಚಿನ ದಿನದಲ್ಲಿ ವ್ಯಾವಹಾರಿಕ ದೃಷ್ಟಿಕೋನ ಬೆಳೆಯುತ್ತಿದೆ. ಭೋಗ ಜೀವನದ ಬೆನ್ನು ಹತ್ತಿ ಸಂಪತ್ತನ್ನೇ ಸರ್ವಸ್ವವೆಂದು ಭಾವಿಸಿದ್ದೇವೆ. ಹೇಗಾದರೂ ಮಾಡಿ ಸುಖಜೀವನದ ಮತ್ತು ಐಷಾರಾಮಿನ ವಸ್ತುಗಳನ್ನು ಹೊಂದುವ ಹಂಬಲ ಹೆಚ್ಚುತ್ತಿದೆ. ಧರ್ಮ, ನೀತಿ, ನ್ಯಾಯಗಳು ಗೌಣವಾಗಿವೆ. ಇಷ್ಟೇ ಅಲ್ಲ ತಲೆಕೆಳಗಾಗುತ್ತಿವೆ. ಜಯಶ್ರೀ ಅಯ್ಯರ್ ಹೇಳುವಂತೆ— "ಆತ್ಮಗೌರವವಿಲ್ಲದ ಗಂಡು, ಪರರು ಬೆವರು ಸುರಿಸಿ ಗಳಿಸಿದ ಹಣವನ್ನು ತಮ್ಮದಾಗಿಸಿಕೊಳ್ಳುವ ಹಂಬಲ ಹೊತ್ತ ಗಂಡಿನ ತಂದೆತಾಯಿಗಳು, ಗಂಡಿನವರ ದರ್ಪಮನೋಭಾವಕ್ಕೆ ಹೆದರಿ ಕುರಿಯಂತೆ ತಲೆದೂಗುವ ಹೆಣ್ಣಿನ ತಂದೆತಾಯಿಗಳು, ಸಿನಿಮಾತಾರೆಯರಂತೆ ಜೀವನವನ್ನು ರೂಪಿಸಿಕೊಳ್ಳುವ ಹಂಬಲಹೊತ್ತ ಕನ್ಯೆಯರು ಈ ಸಮಸ್ಯೆಯನ್ನು ನಿರಂತರವಾಗಿ ಪೋಷಿಸುತ್ತ ನಡೆದಿದ್ದಾರೆ."

೩) **ಮಹಿಳೆಯ ಕೆಳಮಟ್ಟದ ಸ್ಥಾನಮಾನ**— ಹಿಂದೂ ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಪ್ರಾಚೀನ ಕಾಲದಿಂದಲೇ ಮಹಿಳೆಯ ಬೆನ್ನುಹತ್ತಿವೆ. ಹೆಣ್ಣು ಸಾಲದ ಮೂಲ, ಗಂಡು ಆದಾಯದ ಆಕರ ಎಂದು ತಿಳಿದಿದ್ದೇವೆ. ಅದಕ್ಕೆಂದೇ ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದ ಹಾಗೆ

ಎಂಬ ಭಾವನೆಯಿದೆ. ಹೆಣ್ಣುಮಗಳಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ. ಜೀವನದ ಎಲ್ಲ ಘಟ್ಟಗಳಲ್ಲಿಯೂ ಒಬ್ಬಿಲ್ಲೊಬ್ಬ ಪುರುಷನನ್ನೇ ಅವಲಂಬಿಸಿಯೇ ಬದುಕಬೇಕು. ಹೀಗಾಗಿ ವೈವಾಹಿಕ ಮಾರುಕಟ್ಟೆಯಲ್ಲಿ ವರನಿಗೆ ಹೆಚ್ಚುಬೆಲೆ; ವಧುವಿಗೆ ಬೆಲೆಯೇ ಇಲ್ಲ. ಹೆಣ್ಣು, ಹೊಲೆ ಅಗ್ಗ; ಕಾಲು ಕಸ, ಗಂಡು ಹೆತ್ತವರಿಗೆ ದಕ್ಷಿಣೆ. ಹೆಣ್ಣು ಹಡೆದವರು ಹಡೆದ ತಪ್ಪಿಗೆ ದಂಡಕೊಡಬೇಕು. ಲಂಚವೆಂದರೂ ಸರಿಯೆ. ಇಂದಿಗೂ ಹೆಣ್ಣನ್ನ ಜೀತದಾಳಿನಂತೆ ಮಾರಾಟದ ಸರಕಿನಂತೆ ಕಾಣುತ್ತಿರುವವಕ್ಕೆ ವರದಕ್ಷಿಣೆ ಪದ್ಧತಿ ಮೂಲ ಕಾರವಾಗಿದೆ. ಐದು ಹೆಣ್ಣುಮಕ್ಕಳಿದ್ದರೆ ಅರಸನೂ ಭಿಕ್ಷುಕನಾಗ ಬಹುದೆಂಬ ಗಾದೆಯಿದೆ. ಇದೂ ಕೂಡ ಹೆಣ್ಣು ಸಾಲದ ಅಸಾಮಾನ್ಯ ಹೊರೆ ಎಂಬುದನ್ನೇ ಸೂಚಿಸುತ್ತದೆ. ಅಂತೂ ವರದಕ್ಷಿಣೆಯ ಮೂಲವು ಅಸಮಾನತೆ ಮತ್ತು ಪರಾವಲಂಬನೆಗಳಲ್ಲಿ ಅಡಗಿದೆ.

೪. **ಮಹಿಳೆಯ ಆರ್ಥಿಕ ಅನುತ್ಪಾದಕತೆ:**— ಒಂದು ಕಾಲಕ್ಕೆ ತೆರವು ಭಾರತದಲ್ಲಿ ಇಷ್ಟೇ ಅಲ್ಲ ಜಗತ್ತಿನ ಉದ್ದಗಲಕ್ಕೂ ಎದ್ದುಕಾಣುವ ಪದ್ಧತಿಯಾಗಿತ್ತು. ಆಗ ಹೆಣ್ಣುಮಗಳು ಗಂಡಿನಂತೆಯೇ ಹೊಲಮನೆಗಳಲ್ಲಿ ದುಡಿಯುತ್ತಿದ್ದಳು. ಆದಾಯದ ಮೂಲವಾಗಿದ್ದಳು. ಆದರೆ ಇಂದು ಅವಳನ್ನು ಒಕ್ಕಲುತನ ಮತ್ತು ಇತರ ಆರ್ಥಿಕ ಚಟುವಟಿಕೆಗಳಿಂದ ಹಿಂದಕ್ಕೆ ಸರಿಸಲಾಗಿದೆ. ಮತ್ತು ಅದಕ್ಕೆ ಸಂಬಂಧಿಸಿದ ಜ್ಞಾನ, ತರಬೇತಿ ನೀಡಲಾಗುತ್ತಿಲ್ಲ ಎಂಬುದೇ ವರದಕ್ಷಿಣೆ ಹೋಗಿ ವರದಕ್ಷಿಣೆ ಬಂದಿರುವದಕ್ಕೆ ಮುಖ್ಯ ಕಾರಣವೆಂಬುದು ಸ್ಕಾರಲೆಟ್ ಎಪ್‌ಸ್ಟೀನ ಎಂಬ ಮಾನವಶಾಸ್ತ್ರಜ್ಞಳ ಅಭಿಮತ. ಇತ್ತಿತ್ತಲಾಗಿ ಮಹಿಳೆಯರು ಸುಶಿಕ್ಷಿತರಾಗುತ್ತಿದ್ದಾರೆ, ಲಾಭದಾಯಕ ಉದ್ಯೋಗಗಳನ್ನು ಅವಲಂಬಿಸಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುತ್ತಿದ್ದಾರೆ. ಹಿರಿಯರು ಹೊಂದಿಸಿದ ವಿವಾಹಗಳ ಸಂಖ್ಯೆಯೂ ಸಾವಕಾಶವಾಗಿ ಕಡಿಮೆಯಾಗುತ್ತಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಬೇರುಬಿಟ್ಟ ವರದಕ್ಷಿಣಾ ಪದ್ಧತಿ ಕಣ್ಮರೆಯಾಗದೆ ಹೋದರೂ ಅದರ ಪ್ರಭಾವ ಇಳಿಮುಖವಾಗಬಹುದೇನೊ !

೫. **ಯುವಕರ ಪರಾವಲಂಬನೆ**:-ಭಾರತದಲ್ಲಿ ಯುವಕನೂ ಕೂಡ ತನ್ನ ತಂದೆ ತಾಯಿಗಳ ಮೇಲೆ ಆರ್ಥಿಕವಾಗಿ ಅವಲಂಬಿಸಿರುವದು ವರದಕ್ಷಿಣೆಗೆ ಒಂದು ಕಾರಣ. ಪಾಲನೆ ಪೋಷಣೆ, ಶಿಕ್ಷಣ, ಉದ್ಯೋಗ ಎಲ್ಲದಕ್ಕೂ ತಂದೆತಾಯಿಗಳನ್ನೇ ಅವಲಂಬಿಸಬೇಕಾಗುತ್ತದೆ. ಒಂದು ಅರ್ಥದಲ್ಲಿ ಹಂಗಿನಲ್ಲಿ ಬಿದ್ದಂತೆಯೇ. ಹೀಗಾಗಿ ತಂದೆಯು ತಾನು ಹೊತ್ತ ಭಾರವನ್ನು ವಧುವಿನ ತಂದೆಯ ಮೇಲೆ ಹೇರಲು ಹವಣಿಸುತ್ತಿರುವಾಗ ಚಕಾರವೆತ್ತದೆ ಮೌನಸಮ್ಮತಿ ಸೂಚಿಸುತ್ತಾನೆ. ತಂದೆ ಕೇಳಿದ್ದಕ್ಕೆಲ್ಲ ಕೋಲೇ ಬಸವನಂತೆ ತಲೆಹಾಕಬೇಕಾಗುತ್ತದೆ. ತಾನು ತಂದೆ ತಾಯಿಗಳ ಮನ ನೋಯಿಸಲಾರದೇ ವರದಕ್ಷಿಣೆಗೆ ಒಪ್ಪಿಗೆ ಸೂಚಿಸಿರುವದಾಗಿ ಹೇಳುತ್ತಾನೆ. ಪಾಶ್ಚಾತ್ಯ ದೇಶಗಳಲ್ಲಿ ಹೀಗಿರುವದಿಲ್ಲ. ಅಲ್ಲಿ ತಂದೆ-ತಾಯಿಗಳ ಮೇಲೆ ಬೀಳುವ ಭಾರ ಅತ್ಯಲ್ಪ. ಸರಕಾರ ಮತ್ತು ಸ್ವತಃ ಯುವಕರೇ ಹೆಚ್ಚಿನ ಭಾರ ಹೊರಲು ಶಕ್ತರು.

೬. **ಹೊಸ ಸಂಸಾರ ಹೂಡಲು ಅನಕೂಲ :** ವಿವಾಹ ಕಾಣಿಕೆಗಳ

ಹಿಂದಿನ ಉದ್ದೇಶ ಹೊಸದಾಗಿ ಮದುವೆಯಾದ ದಂಪತಿಗಳು ಹೊಸಮನೆ, ಹೊಸ ಸಂಸಾರ ಹೂಡಲು ಅನುಕೂಲವಾಗಲೆಂಬುದೇ ಆಗಿತ್ತು. ಪರಸ್ಪರರನ್ನು ಗೌರವಾದರಗಳಿಂದ ಕಾಣಲೆಂಬ ಭಾವವೂ ಅಡಕವಾಗಿತ್ತು. ಮೊದಲು ಯಾರ ಒತ್ತಾಯವೂ ಇರಲಿಲ್ಲ. ಸ್ವಸಂತೋಷದಿಂದ ಕೊಡು–ತಕ್ಕೊಳ್ಳುವದು ನಡೆಯುತ್ತಿತ್ತು, ಈಗ ಒತ್ತಾಯ ಎದ್ದು ಕಾಣುತ್ತಿದೆ. ಕರಾರುಗಳನ್ನು ಹಾಕಲಾಗುತ್ತಿದೆ. ಅಂದಿನ ಸಭ್ಯ ರೂಪವೇ ಇಂದು ವಿಕೃತ ರೂಪವನ್ನು ತಳೆದಿದೆ. ಶೋಷಣೆಯು ಸಾಧ್ಯವಾಗಿದೆ.

೭. **ಆರ್ಥಿಕ ಭದ್ರತೆ:**– ಕೆಲವರ ಪ್ರಕಾರ ವರದಕ್ಷಿಣೆ ಪದ್ಧತಿಗೆ ಕಾರಣ ಅದು ಹೊಂದಿರುವ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳು ಕೇವಲ ತೆಗಳುವವರಿಂದ ಏನನ್ನೂ ಸಾಧಿಸಿದಂತೆ ಆಗುವದಿಲ್ಲವೆಂದೂ, ಇವರ ಕ್ರಿಯಾತ್ಮಕ ಉಪಯುಕ್ತತೆಯ ಕಡೆಗೆ ನೋಡಬೇಕೆಂದೂ, ಸುಖೀಜೀವನಕ್ಕೆ ಇವರ ನೆರವು ಕಡಿಮೆ ಏನಿಲ್ಲವೆಂದೂ ಹೇಳುತ್ತಾರೆ.

ವರದಕ್ಷಿಣೆಯೂ ಆಪತ್ಕಾಲದ ವಿಮೆ ಇದ್ದ ಹಾಗೆ. ಬಂಗಾರದ ಒಡವೆಗಳು, ಹೊಲಮನೆಗಳು ಮುಂತಾದ ಮೌಲಿಕ ಭದ್ರತೆಗಳು ಆರ್ಥಿಕ ದುಸ್ಥಿತಿಯಲ್ಲಿ ನೆರವಿಗೆ ಬರಬಲ್ಲವು. ಸಾಲಸೋಲಗಳಿಂದ ಮುಕ್ತರಾಗಲು ನೆರವು ನೀಡುತ್ತವೆ. ಆಂಧ್ರ ಪ್ರದೇಶದಲ್ಲಿ ಮಗಳ ಹೆಸರಿಗೆ ಹೊಲಮನೆಗಳನ್ನು ಹಚ್ಚುವದು ಇದೇ ಉದ್ದೇಶಕ್ಕಾಗಿ ಎನ್ನುವದು ಕೆಲ ಅಧ್ಯಯನಗಳಿಂದ ತಿಳಿದುಬಂದಿದೆ.

೮. **ಉತ್ತರಾಧಿಕಾರದ ಪರ್ಯಾಯ ವ್ಯವಸ್ಥೆ:**— ಮೊದಲಿನ ಉತ್ತರಾಧಿಕಾರ ಕಾಯ್ದೆ 'ಮಿತಾಕ್ಷರ'ದಲ್ಲಿ ಕುಟುಂಬದ ಆಸ್ತಿಯಲ್ಲಿ ಮಗಳಿಗೆ ಪಾಲು ದೊರೆಯುತ್ತಿರಲಿಲ್ಲ. ಆದ್ದರಿಂದ ಮದುವೆ ಮತ್ತಿತರ ಸಂದರ್ಭಗಳಲ್ಲಿ ಹಣ ಬಂಗಾರ, ಬೆಳ್ಳಿ ರೂಪದಲ್ಲಿ ಸ್ವಲ್ಪಮಟ್ಟಿಗೆ ಕುಟುಂಬದ ಆಸ್ತಿ ಹೆಣ್ಣುಮಕ್ಕಳ ಕೈಗೆ ಸೇರುತ್ತಿತ್ತು. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಹೊಲಮನೆಗಳಲ್ಲಿ ಬೆವರು ಸುರಿಸಿ ದುಡಿದು ಮನೆತನವನ್ನು ಮುಂದೆ ತರಲು ಸಹಾಯ ಸಲ್ಲಿಸಿದವಳನ್ನು ಧನಕನಕಗಳಿಲ್ಲದೆಯೆ ಧಾರೆ ಎರೆದುಕೊಡುವದೇ? ಇಂಥವಳನ್ನು ಬರಿಗೈಯಿಂದ ಪತಿಯ ಮನೆಗೆ ಕಳಿಸುವದೇ? ಹೀಗಾಗಿ ಕಾಣಿಕೆಗಳನ್ನು ಕೊಟ್ಟು ಕಳುಹಿಸುವದು ವಾಡಿಕೆಯಾಗಿತ್ತು. ಇದನ್ನು ಸ್ತ್ರೀಧನವೆಂತಲೂ ಕರೆಯುತ್ತಿದ್ದರು. ಮೊದಲು ಇದರ ಮೇಲೆ ಸ್ತ್ರೀಯರದೇ ಪ್ರತ್ಯೇಕ ಅಧಿಕಾರವಿತ್ತು. ಆದರೆ ಬರಬರುತ್ತ ಇದನ್ನು ಕಿತ್ತುಕೊಳ್ಳುವ ಸಂಚು ನಡೆದು ಸ್ತ್ರೀ ತನ್ನ ಹಕ್ಕನ್ನು ಕಳೆದುಕೊಂಡಳು. ಅಂತೂ ಸ್ತ್ರೀಧನವು ಉತ್ತರಾಧಿಕಾರಕ್ಕೆ ಪರ್ಯಾಯ ವ್ಯವಸ್ಥೆಯಾಗಿತ್ತು. ಇದು ಪಿತ್ರಾರ್ಜಿತ ಆಸ್ತಿಯಮೇಲೆ ಮಗಳನ್ನು ಹಕ್ಕುದಾರಳನ್ನಾಗಿ ಮಾಡುವ ಸಾಮಾಜಿಕ ವಿಧಾನವಾಗಿತ್ತು. ಈ ಮಾತು ಇಂದಿಗೂ ಅನ್ವಯಿಸುತ್ತದೆ. ಆದರೆ ಈ ಸಂಪ್ರದಾಯ ಎಷ್ಟು ಭದ್ರವಾಗಿ ನೆಲೆಯೂರಿತೆಂದರೆ ಆಸ್ತಿ ಇಲ್ಲದವರೂ ಸಹ ಸಾಲವನ್ನು ಮಾಡಿಯಾಗಲೀ ಅಥವಾ ಇದ್ದ ಚೂರುಚಾರು ಆಸ್ತಿಯನ್ನು ಮಾರಿಯಾದರೂ ಆಗಲಿ ಹೆಣ್ಣು ಮಕ್ಕಳ ಮದುವೆಯನ್ನು ಮಾಡುವ ಪರಿಸ್ಥಿತಿ ತಲೆದೋರಿದೆ.

೯. ಗೌರವ-ಅಂತುಸ್ತುಗಳ ಪ್ರತೀಕ : ಉಭಯ ಪಕ್ಷದವರೂ ತಂತಮ್ಮ ಸ್ಥಾನಮಾನ ದೊಡ್ಡದೆಂದು ಹೇಗೆ ತೋರಿಸಿಕೊಡುವುದು? ಹೆಚ್ಚಿಚ್ಚಾಗಿ ವರದಕ್ಷಿಣೆ ಕೊಡುತಕ್ಕೊಳ್ಳುವುದರಿಂದ; ಭವ್ಯಮಂಟಪ, ಅದ್ದೂರಿ ಔತಣ, ಆಕರ್ಷಕ ಮೆರವಣಿಗೆ, ಅಪರೂಪದ ಮನರಂಜನೆ ಮುಂತಾದವುಗಳನ್ನು ಏರ್ಪಡಿಸುವುದರಿಂದ. ಫ್ರೀಡ್‌ಮನ್ ಹೇಳುವಂತೆ ಹೆಚ್ಚು ವರದಕ್ಷಿಣೆಯು ದೊಡ್ಡ ಸ್ಥಾನಮಾನದ ಪ್ರತಿಬಿಂಬ.

ವ್ಯಕ್ತಿ ಮತ್ತು ಅವನ ಸಾಮಾಜಿಕ ಅಂತಸ್ತು, ಶಿಕ್ಷಣ, ಉದ್ಯೋಗ, ಮತ್ತು ಶ್ರೀಮಂತಿಕೆಯನ್ನು ಅವಲಂಬಿಸಿರುತ್ತದೆ. ಇವೆಲ್ಲವುಗಳನ್ನು ಪಡೆಯಲು ಹಲ ಕೆಲವರು ವರದಕ್ಷಿಣೆಯ ಮಾಧ್ಯಮವನ್ನು ಅವಲಂಬಿಸುತ್ತಾರೆ.

ಹೆಚ್ಚು ವರದಕ್ಷಿಣೆಯಿಂದ ವರನ ಮತ್ತು ಅವನ ತಂದೆತಾಯಿಗಳ ಸ್ಥಾನಮಾನ ಹೆಚ್ಚುತ್ತದೆ. ಇಷ್ಟೆಲ್ಲ ಕೊಟ್ಟವರು ಎಂಬ ಕಾರಣದಿಂದ ವಧುವಿನ ಮತ್ತು ಅವಳ ತಂದೆತಾಯಿಗಳ ಸ್ಥಾನಮಾನವೂ ದೊಡ್ಡದೆನಿಸುತ್ತದೆ.

ಆಶ್ಚರ್ಯವೆಂದರೆ ಆದರ್ಶಕ್ಕೆ ಮಾರುಹೋಗಿ ಯಾರಾದರೂ ವರದಕ್ಷಿಣೆ ಇಲ್ಲದೆ ವಿವಾಹವಾದರೆ ಜನರು ಅವನ ವಿದ್ಯಾರ್ಹತೆ, ಉದ್ಯೋಗ, ನಡತೆ ಮುಂತಾದವುಗಳನ್ನು ಸಂಶಯ ದೃಷ್ಟಿಯಿಂದ ನೋಡುತ್ತಾರೆ. ಇದೊಂದು ದೊಡ್ಡ ಸುದ್ದಿಯೇ ಆಗುತ್ತದೆ.

೧೦. ಕುಂದುಕೊರತೆಗಳನ್ನು ಮುಚ್ಚುವ ಪರದೆ: ವಧುವಿಗೆ ಇರಬಹುದಾದ ಕೆಲವೊಂದು ಕುಂದುಕೊರತೆಗಳನ್ನು ಮುಚ್ಚಲು ವರದಕ್ಷಿಣೆ ಅವುಗಳ ಮೇಲೆ ಕಪ್ಪು ಪರದೆ ಎಳೆಯುತ್ತದೆ. ನ್ಯೂನತೆಯು ನಿರಕ್ಷರತೆ ಇರಬಹುದು, ಅನಾಕರ್ಷಕ ರೂಪ-ಬಣ್ಣಗಳಿರಬಹುದು, ಅನಾರೋಗ್ಯ, ಅಂಗವಿಕಲತೆಗಳಿರಬಹುದು, ಹೆಚ್ಚು ವಯಸ್ಸಾದದ್ದಿರಬಹುದು. ಹೀಗೆ ವರದಕ್ಷಿಣೆಯ ಗಾಳಕ್ಕೆ ಬಿದ್ದು ಆಗುವ ಸಂಬಂಧಗಳು ಲೆಕ್ಕವೇ ಇಲ್ಲದಷ್ಟು.

೧೧. ವರದಕ್ಷಿಣೆಯ ಮೊತ್ತವನ್ನು ನಿರ್ಧರಿಸುವ ಐದು ಅಂಶಗಳು: **ಮೊದಲನೆಯದಾಗಿ,** ವರನ ಶಿಕ್ಷಣದ ಮಟ್ಟವು ವರದಕ್ಷಿಣೆಯ ಮೊತ್ತವನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಪರದೇಶಕ್ಕೆ ಹೋಗಿ ಉಚ್ಚ ಶಿಕ್ಷಣ ಹೊಂದಿದ ವರನಿಗೆ ಅತಿ ಹೆಚ್ಚಿನ ವರದಕ್ಷಿಣೆ. ನಂತರದ ಸ್ಥಾನ ವೈದ್ಯಕೀಯ ಪದವಿ ಪಡೆದವರದು. ಆನಂತರದ ಸ್ಥಾನ ಇಂಜನಿಯರಿಂಗ ಪದವಿ ಹೊಂದಿದವರದು. ಸ್ನಾತಕನಿಗಿಂತಲೂ ಸ್ನಾತಕೋತ್ತರ ಪದವೀಧರನು ಹೆಚ್ಚಿನ ವರದಕ್ಷಿಣೆಯನ್ನು ಅಪೇಕ್ಷಿಸುತ್ತಾನೆ. ಏನೂ ಓದದಿದ್ದವನಿಗೆ ಅಥವಾ ಅತಿ-ಕಡಿಮೆ ಓದಿದವನಿಗೆ ಕಡಿಮೆ ವರದಕ್ಷಿಣೆ. ವರದಕ್ಷಿಣೆಯ ಮೊತ್ತವು ವಧುವಿನ ಶಿಕ್ಷಣದ ಮಟ್ಟವನ್ನು ಅವಲಂಬಿಸಿಲ್ಲವೇ ಎಂದು ಕೇಳಬಹುದು. ಸುಶಿಕ್ಷಿತ ವರನು ಸಾಮಾನ್ಯವಾಗಿ ಸುಶಿಕ್ಷಿತ ಕನ್ಯೆಯನ್ನೂ ಜೊತೆಗೆ ಹೆಚ್ಚಿನ ವರದಕ್ಷಿಣೆಯನ್ನೂ ಅಪೇಕ್ಷಿಸುತ್ತಾನೆ.

ಎರಡನೆಯದಾಗಿ, ವರದಕ್ಷಿಣೆಯ ಮೊತ್ತವು ವರನು ತನ್ನ ಆದಾಯದಿಂದ

ಗಳಿಸುತ್ತಿರುವ ಆದಾಯದ ಮೊತ್ತವನ್ನು ಅವಲಂಬಿಸಿರುತ್ತದೆ. ವ್ಯಕ್ತಿಯ ಆದಾಯವು ಆತನು ಕೈಗೊಂಡಿರುವ ವೃತ್ತಿಯನ್ನು ಅವಲಂಬಿಸಿರುತ್ತದೆಯಲ್ಲದೆ ಆತನು ಪಡೆದಿರುವ ಪದವಿಯನ್ನಲ್ಲ. ಹಲವಾರು ವರಗಳು ಮತ್ತು ಅವರ ತಂದೆತಾಯಿಗಳು ಲಾಭದಾಯಕ ಉದ್ಯೋಗದಲ್ಲಿರುವ ವಧುಗಳನ್ನೇ ಅಪೇಕ್ಷಿಸುತ್ತಾರೆ. ಇಂಥವರು ಪ್ರತಿ ತಿಂಗಳೂ ಬಂಗಾರದ ಮೊಟ್ಟೆಗಳನ್ನಿಡುವ ಕೋಳಿಗಳೆಂದು ತಿಳಿದಿರುತ್ತಾರೆ. ಆದ್ದರಿಂದ ವಧುವಿನ ಗಳಿಕೆಯ ಶಕ್ತಿಯನ್ನು ಪರಿಗಣಿಸಿ ವರದಕ್ಷಿಣೆಯ ಮೊತ್ತ ಕಡಿಮೆಯಾಗುವ ಸಾಧ್ಯತೆಯೂ ಇದೆ.

ಮೂರನೆಯದಾಗಿ, ವಧುವಿನ ಸೌಂದರ್ಯವೂ ಕೂಡ ವರದಕ್ಷಿಣೆಯ ಮೊತ್ತವನ್ನು ನಿರ್ಧರಿಸುವಲ್ಲಿ ಸಹಾಯಕವಾಗಬಹುದು. ಆಕರ್ಷಕವಾದ ದೈಹಿಕ ಸೌಂದರ್ಯವು ವರದಕ್ಷಿಣೆಯ ಮೊತ್ತವನ್ನು ಕಡಿಮೆಗೊಳಿಸುವ ಸಾಧ್ಯತೆ ಇದೆ.

ನಾಲ್ಕನೆಯದಾಗಿ, ವಧುವಿನ ತಂದೆತಾಯಿಗಳು ತಮ್ಮ ಮಗಳು ಯಾವ ರೀತಿ ಬಾಳಬೇಕೆಂದು ಬಯಸುತ್ತಾರೆಂಬುದು ವರದಕ್ಷಿಣೆಯ ಮೊತ್ತವನ್ನು ನಿರ್ಧರಿಸುತ್ತದೆ. ಕೂಡಿದ ಜೀವನ ನಡೆಸಲು ಬೇಕಾಗುವ ಸೌಕರ್ಯಗಳನ್ನು ಹೊಂದಿರುವ ವರನನ್ನು ದೃಷ್ಟಿಯಲ್ಲಿರಿಸಿಕೊಂಡು ವರದಕ್ಷಿಣೆಯ ಮೊತ್ತವನ್ನು ಹೆಚ್ಚಿಸುವ ಸಂದರ್ಭಗಳೂ ಉಂಟು.

ಐದನೆಯದಾಗಿ, ಕೆಲವೊಂದು ಜಾತಿ–ಪಂಗಡಗಳಲ್ಲಿ ವಿದ್ಯಾವಂತ ವರಗಳ ಸಂಖ್ಯೆ ವಧುಗಳ ಸಂಖ್ಯೆಗಿಂತ ಕಡಿಮೆಯಾಗಿರುತ್ತದೆ. ತತ್ಪರಿಣಾಮವಾಗಿ ವರದಕ್ಷಿಣೆಯ ಮೊತ್ತವನ್ನು ಹೆಚ್ಚಿಸುವ ಸಾಧ್ಯತೆ ಇರುತ್ತದೆ.

ಪರಿಣಾಮಗಳು

ವರದಕ್ಷಿಣೆಯು ಹಲವು ಮುಖಗಳುಳ್ಳ ರಾಕ್ಷಸ. ಇದರ ನಂಜಿನ ನಾಲಿಗೆಗಳು ಸಾಕಷ್ಟು ಉದ್ದ–ಅಗಲ ಚಾಚಿರುತ್ತವೆ. ಇದು ಮೊದಲು ಕೆಲವೇ ಕೆಲವು ಜನ ಸಮೂಹಗಳಲ್ಲಿ ಪ್ರಚಲಿತವಿತ್ತು. ಇಂದು ಇದರ ಪ್ರಬಲ ರೋಗಾಣುಗಳು ಎಲ್ಲ ಜಾತಿ, ವರ್ಗ, ಧರ್ಮ ಮತ್ತು ಪ್ರದೇಶಗಳ ಜನರಲ್ಲಿಯೂ ವ್ಯಾಪಕವಾಗಿ ಹರಡಿದೆ. ಇದು ಬಡವರನ್ನು ಮತ್ತು ಹಿಂದುಳಿದ ವರ್ಗದ ಜನರನ್ನೂ ಬಿಟ್ಟಿಲ್ಲ. ಶಿಕ್ಷಣ ಪ್ರಸಾರವಾದಂತೆ ಇದು ಕಡಿಮೆಯಾಗಬಹುದೆಂದು ಬಗೆದಿದ್ದೆವು. ಹೀಗಾಗಲಿಲ್ಲ. ಶಿಕ್ಷಣದ ಮಟ್ಟ ಹೆಚ್ಚಿದಷ್ಟೂ ಇದರ ಮೊತ್ತ ಹೆಚ್ಚುತ್ತ ನಡೆದಿದೆ. ಕಪಾಡಿಯಾ (೧೯೬೬) ಹೇಳುವಂತೆ, “ಶಿಕ್ಷಣ ಪ್ರಸಾರದಿಂದ ವರದಕ್ಷಿಣೆಯ ಕೇಡು ಕಡಿಮೆಯಾಗಲಿಲ್ಲ. ಅತಿ ಹೆಚ್ಚಿಗೆ ಬೆಳೆಯಿತು. ಭ್ರಮನಿರಸನವಾಯಿತು.”

ವರದಕ್ಷಿಣಾ ಸಾವಿನ ಬಗ್ಗೆ ನಮಗೆ ತಿಳಿದಾಗ ಅತೀವ ಆಘಾತವಾಗುತ್ತದೆ. ಆದರೆ ಇದೊಂದೇ ದುಷ್ಪರಿಣಾಮವಲ್ಲ. ನಮಗೆ ಗೋಚರವಾದದ್ದು, ಆಳವಾದ ಸರೋವರದಲ್ಲಿಯ ದೊಡ್ಡ ಹಿಮಬಂಡೆಯ ತುದಿಮಾತ್ರ. ಅದರ ಬಹುಭಾಗ ನೀರಿನಲ್ಲಿಯೇ ಮುಳುಗಿರುತ್ತದೆ. ಇದೇ ರೀತಿಯಾಗಿ ವರದಕ್ಷಿಣಾ ಪದ್ಧತಿಯಿಂದ ಉಂಟಾ

ಗುತ್ತಿರುವ ದುಷ್ಪರಿಣಾಮಗಳಿಗೆ ಲೆಕ್ಕವೇ ಇಲ್ಲ. ಮುಖ್ಯವಾದ ಕೆಲವೊಂದು ಪರಿಣಾಮಗಳನ್ನು ಗುರುತಿಸಬಹುದು.

(೧) ಹೆಣ್ಣುಮಗಳ ಜನನ ವ್ಯಥೆಗೆ ಕಾರಣವಾದರೆ ಗಂಡುಮಗನದು ಸಂತಸ ಉಂಟುಮಾಡುತ್ತದೆ. ಮುಂದೊದಗಬಹುದಾದ ಆಪತ್ತಿನ ಭಯದಿಂದ ಹೆಣ್ಣನ್ನು ಹುಟ್ಟಿದ ಮನೆಯಲ್ಲಿಯೇ ಹುಣ್ಣೆಂದು ಪರಿಗಣಿಸಲಾಗುತ್ತದೆ. ಗಂಡು ಮತ್ತು ಹೆಣ್ಣುಮಕ್ಕಳ ಪಾಲನೆ-ಪೋಷಣೆಯಲ್ಲಿ ತಾರತಮ್ಯ ತೋರಿಸಲಾಗುತ್ತದೆ. ಇದು ಬೆಳೆಯುತ್ತಿರುವ ಹೆಣ್ಣುಮಕ್ಕಳ ಮನಸ್ಸಿನ ಮೇಲೆ ಅಹಿತ ಪ್ರಭಾವ ಬೀರುತ್ತದೆ. ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಬೇಡವಾದ ಜೀವವೆನಿಸುತ್ತಾಳೆ.

(೨) ವರದಕ್ಷಿಣೆಯು ಹನುಮಂತನ ಬಾಲವಿದ್ದ ಹಾಗೆ. ದುರಾಶೆ ಹೆಚ್ಚಿದಷ್ಟೂ ಅದು ಬೆಳೆಯುತ್ತ ಹೋಗುತ್ತದೆ. ಮಾವ ಆಗರ್ಭ ಶ್ರೀಮಂತನಾಗಿದ್ದರೆ ವರದಕ್ಷಿಣಾ ದಾಹ ಎಷ್ಟಿದ್ದರೂ ತೀರಿಸಬಹುದು. ಆದರೆ ಈ ಶಕ್ತಿ ಬಹಳಷ್ಟು ತಂದೆ ತಾಯಿಗಳಿಗಿರುವುದಿಲ್ಲ. ಹಾಗೂ ಹೀಗೂ ಮಾಡಿ ಮದುವೆ ಮಾಡಿ ಮುಗಿಸುವುದರಲ್ಲಿಯೇ ಸಾಕು ಬೇಕಾಗಿ ಹೋಗುತ್ತದೆ. ಕೆಲ ದಿನ ಕಳೆಯುವುದರೊಳಗಾಗಿ ಗಂಡನ ಮನೆಯಲ್ಲಿ ಕೊಡುವುದು ಉಳಿದಿದ್ದರೆ ಉಳಿದಿದ್ದಕ್ಕೆ, ಕೊಟ್ಟಿದ್ದರೆ ಹೆಚ್ಚಿನದಕ್ಕೆ ಹಿಂಸೆ ಪ್ರಾರಂಭವಾಗುತ್ತದೆ. ಸಾಕಷ್ಟು ವರದಕ್ಷಿಣೆ ಇಲ್ಲದೆ ವಿವಾಹವಾಗುವ ಕನ್ಯೆಯಂತೂ ತನ್ನ ಅತ್ತೆಯ ಮನೆಯಲ್ಲಿ ಸತತವಾಗಿ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ. ವರದಕ್ಷಿಣೆಯ ಹಿಂಸೆ ಇಂಥದೇ ರೂಪ ತಳೆಯುತ್ತದೆಂದು ಹೇಳಲು ಬರುವುದಿಲ್ಲ. ನೀಚತನ, ದಬ್ಬಾಳಿಕೆ, ಬೆದರಿಕೆ, ಮೂದಲಿಕೆ, ಗೋಳಾಟ, ಹೊಡೆಯುವುದು, ಕೂದಲು ಹಿಡಿದು ಎಳೆಯುವುದು, ಕಣ್ಣಲ್ಲಿ ಖಾರತುಂಬುವುದು, ಉಪವಾಸ ಬೀಳಿಸುವುದು, ಸುಡುವುದು, ಕೊಲೆ, ಆತ್ಮಹತ್ಯೆ ಮುಂತಾದವು ವರದಕ್ಷಿಣೆ ಪಿಡುಗಿನ ಲಕ್ಷಣಗಳು.

ವರದಕ್ಷಿಣೆಯ ಹಿಂಸೆ ಅತಿಯಾದ ಕೆಲವೊಂದು ಪ್ರಕರಣಗಳು ಸಾವಿನಲ್ಲಿ ಪರ್ಯವಸಾನ ಹೊಂದುವುದೂ ಉಂಟು. ವರದಕ್ಷಿಣೆ ಸಾವುಗಳು ಎರಡು ಬಗೆಯವು. ಒಂದು ಕೊಲೆ. ಇನ್ನೊಂದು ಆತ್ಮಹತ್ಯೆ. ಗಂಡನ ಮನೆಯವರು ಹೆಣ್ಣನ್ನು ಸುಟ್ಟ, ಮರಣಾಂತಿಕವಾಗಿ ಬಡಿದ, ಮಹಡಿಯಿಂದ ದೂಡಿದ ಮತ್ತು ವಿಷಹಾಕಿ ಕೊಂದ ಉದಾಹರಣೆಗಳು ಸಾಕಷ್ಟು.

ಭಾರತದಲ್ಲಿ ಒಂದು ಅಂದಾಜಿನಂತೆ ಪ್ರತಿವರ್ಷ ೨೦,೦೦೦ ಆತ್ಮಹತ್ಯೆಯ ಪ್ರಕರಣಗಳು ದಾಖಲಾಗುತ್ತವೆ. ಇವುಗಳಿಗೆ ಪ್ರಧಾನ ಕಾರಣ ವರದಕ್ಷಿಣೆ. ಈ ಹಿಂದೆ ಗುಜರಾತಿನಲ್ಲಿ ಆತ್ಮಹತ್ಯೆಯ ಕಾರಣಗಳನ್ನು ಕಂಡುಹಿಡಿಯಲು ಶ್ರೀಮತಿ ಪುಷ್ಪಾಬೆನ್ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಲಾಗಿತ್ತು. ಕಿರಿವಯಸ್ಸಿನ ಹುಡುಗೆಯರು ಮತ್ತು ವಿವಾಹಿತ ಮಹಿಳೆಯರು ವರದಕ್ಷಿಣೆಯ ಕಾರಣಕ್ಕಾಗಿ ಆತ್ಮಹತ್ಯೆಗೆ ಎಳೆಸುತ್ತಾರೆಂದು ವರದಿ ಮಾಡಿದೆ. ಸೂಕ್ಷ್ಮಮನೋವೃತ್ತಿಯ ಮಹಿಳೆಯರು ತಂದೆ ತಾಯಿಗಳ ಅಸಹಾಯಕತೆಯನ್ನು ನೋಡಿ ಅವರನ್ನು ಚಿಂತೆಯಿಂದ ಮುಕ್ತ

ಮಾಡಲು ಆತ್ಮಹತ್ಯೆ ಮಾಡಿಕೊಂಡ ಪ್ರಸಂಗಗಳೂ ಬೇಕಾದಷ್ಟಿವೆ. ವಿವಾಹಾನಂತರ ಅಮಾನುಷ ಹಿಂಸೆ ತಾಳಲಾರದೆ ಉರುಲು ಹಾಕಿಕೊಂಡು, ಬಾವಿಗೆ ಬಿದ್ದು, ಮಹಡಿಯಿಂದ ಹಾರಿ, ವಿಷಕುಡಿದು ಮತ್ತಿನ್ನಾವುದೋ ವಿಧಾನ ಅನುಸರಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿರುತ್ತಾರೆ.

ವರದಕ್ಷಿಣೆಯ ಭೂತಕ್ಕೆ ಬಲಿಯಾಗುತ್ತಿರುವ ಅವಿವಾಹಿತ ಹೆಣ್ಣುಮಕ್ಕಳ ಮತ್ತು ನವವಧುಗಳ ಹಾನಿ ಅಪಾರ. ಯಾವುದೇ ರಾಷ್ಟ್ರವು ಈ ರೀತಿಯಾಗಿ ಸ್ವೇಚ್ಛೆಯಿಂದ ಮಾನವ ಶಕ್ತಿಯನ್ನು ನಾಶಮಾಡಿ ಮುಂದೆ ಬರಲು ಸಾಧ್ಯವಿಲ್ಲ. ಆದ್ದರಿಂದ ರಾಷ್ಟ್ರೀಯ ಅಭಿವೃದ್ಧಿಯ ಹಾದಿಯಲ್ಲಿ ವರದಕ್ಷಿಣೆಯೊಂದು ದೊಡ್ಡ ಅಡತಡೆ. ಇದನ್ನು ನಿವಾರಿಸದೇ ಗತ್ಯಂತರವಿಲ್ಲ.

(೩) ವಿವಾಹದ ಮಾರುಕಟ್ಟೆಯಲ್ಲಿ ವಧುವನ್ನು ಮಾರಾಟದ ವಸ್ತುವಿನ ಮಟ್ಟಕ್ಕೆ ಇಳಿಸಿರುತ್ತದೆ. ಹೀಗೆ ಮಾಡಿ ಅವಳ ಆತ್ಮಗೌರವಕ್ಕೆ ಧಕ್ಕೆ ಉಂಟು ಮಾಡುತ್ತದೆ. ಅವಳ ವ್ಯಕ್ತಿತ್ವದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

(೪) ವರನ ಮತ್ತು ಅವನ ತಂದೆತಾಯಿಗಳ ದುರಾಸೆಯ ದಳ್ಳುರಿ ಹಬ್ಬಲು ಅವಕಾಶ ಲಭಿಸಿದೆ. ಶೋಷಣೆಯ ಮೇಲಾಟ ಏರ್ಪಡಿಸಿದಂತಾಗಿದೆ.

(೫) ಇತ್ತ ಮಗಳ ವೈವಾಹಿಕ ಜೀವನದಲ್ಲಿ ಮಾತ್ರ ಶಾಂತಿ ಮಾಯವಾಗುವುದಿಲ್ಲ. ಗಂಡನೂ ಅಶಾಂತಿಗೆ ಬಲಿಯಾಗುತ್ತಾನೆ. ಇಡೀ ಗಂಡನ ಮನೆಯೇ ಅಶಾಂತಿಯ ತಾಣವಾಗುತ್ತದೆ. ಅತ್ತ ಅವಳ ತಂದೆ ತಾಯಿಗಳೂ ಸಂಕಟ ಅನುಭವಿಸುತ್ತಾರೆ. ಕಣ್ಣೀರಿನಲ್ಲಿ ಕೈ ತೊಳೆಯುತ್ತಾರೆ. ಗಂಡನ ಮನೆಯ ದುರಾಸೆಯ ದಳ್ಳುರಿ ತವರುಮನೆಯ ಶಾಂತಿಯನ್ನೂ ಕದಡುತ್ತದೆ.

(೬) ಇಂಥ ಹಿಂಸೆ, ಅಶಾಂತಿಯಿಂದ ಕೂಡಿದ ಪರಿಸರದಲ್ಲಿ ಬೆಳೆಯುವ ಮಕ್ಕಳ ವ್ಯಕ್ತಿತ್ವವೂ ದೋಷಪೂರ್ಣವಾಗುತ್ತದೆ. ಒಳ್ಳೆಯ ನಾಗರಿಕರಾಗಿ ಬೆಳೆಯಲು ಅನುಕೂಲವಾಗಿರುವುದಿಲ್ಲ. ಮಕ್ಕಳು ವಕ್ರಬುದ್ಧಿಯವರೂ ಸಮಾಜಘಾತಕ ಶಕ್ತಿಗಳೂ ಆಗಲು ಸಾಧ್ಯ. ವಿವಾಹವಯಸ್ಕ ಹೆಣ್ಣು ಮಕ್ಕಳ ಮನಸ್ಸಿನ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ.

(೭) ವರದಕ್ಷಿಣೆಯ ದುರಾಸೆ-ಒತ್ತಾಸೆಗಳು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತವೆ. ಸಮಾಜದ ನೈರ್ಮಲ್ಯವನ್ನು ಕೆಡಿಸುತ್ತವೆ. ಪ್ರತಿಷ್ಠೆಯ ಬಗೆಗಿನ ತಪ್ಪುಕಲ್ಪನೆಯು ಜನರನ್ನು ಅಡ್ಡ ಹಾದಿ ಹಿಡಿಯಲು ಹಚ್ಚುತ್ತದೆ.

ಇದರ ಪರಿಣಾಮ ಇಲ್ಲಿಗೇ ಕೊನೆಗೊಳ್ಳುವುದಿಲ್ಲ. ರಾಷ್ಟ್ರೀಯ ಜೀವನದ ಮೇಲೂ ಇದರ ದುಷ್ಪರಿಣಾಮ ಅಪಾರ. ಲೆಕ್ಕಕ್ಕೆ ಇಲ್ಲದ ಕಪ್ಪುಹಣ ಆರ್ಥಿಕ ವ್ಯವಸ್ಥೆಯಲ್ಲಿ ತೂರಿಬರುತ್ತದೆ. ಜೊತೆಗೆ ನೈತಿಕ ಮೌಲ್ಯಗಳೂ ಇಳಿಮುಖವಾಗುತ್ತವೆ.

(೮) ವರದಕ್ಷಿಣೆಯ ಒತ್ತಾಯಗಳು ಜನರನ್ನು ಸಾಲದ ಕೊಳ್ಳದಲ್ಲಿ ನೂಕುತ್ತವೆ. ಆರ್ಥಿಕ ಭಾರದಿಂದ ನೆಲಕಚ್ಚುವಂತೆ ಮಾಡುತ್ತವೆ. ಬಡ್ಡಿ ವ್ಯವಹಾರಸ್ಥರ

ಕಪಿಮುಷ್ಠಿಯಲ್ಲಿ ನರಳುವಂತೆ ಮಾಡುತ್ತವೆ. ಇದು ಹರಿತವಾದ ಎರಡು ಬಾಯಿಗಳುಳ್ಳ ಖಡ್ಗವಿದ್ದ ಹಾಗೆ. ಯಾವ ಬದಿಯಿಂದ ಬೇಕಾದರೂ ಸವರಿಹಾಕಬಹುದು. ಇತ್ತ ಮಗಳನ್ನು, ಅತ್ತ ತಂದೆ ತಾಯಿಗಳನ್ನು. ಬುಚನನ್ (೧೯೬೯) ಹೇಳುವಂತೆ, "ವಿವಾಹಗಳು ಅನೇಕ ಕುಟುಂಬಗಳನ್ನು ನೆಲಸಮ ಮಾಡುತ್ತವೆ. ಸಾಲದ ಋಣದಿಂದ ಮುಕ್ತರಾಗಲು ಇರುವ ಒಂದೇ ದಾರಿಯೆಂದರೆ ಸಾವು."

(೯) ಆಡಂಬರದ, ಅದ್ದೂರಿಯ, ಅಪಾರ ಖರ್ಚುವೆಚ್ಚದ ವಿವಾಹ ಸಮಾರಂಭಗಳು ವರದಕ್ಷಿಣಾ ಪದ್ಧತಿಯ ನೇರ ಸಂತಾನಗಳು. ಯಾರದೊ ದುಡ್ಡು, ಎಲ್ಲಮ್ಮನ ಜಾತ್ರೆ ಎನ್ನುವಹಾಗೆ. ರಾಷ್ಟ್ರೀಯ ವರಮಾನದ ದುರಂತಮಯ ಅಪವ್ಯಯದ ಮಾರ್ಗಗಳೂ ಹೌದು. ಜೊತೆಗೆ ಓಣಿಕೇರಿಗಳ ಶಾಂತತೆಗೆ ಭಂಗತರುವಂಥವು.

(೧೦) ವರದಕ್ಷಿಣಾ ಪದ್ಧತಿಯು ಇಜ್ಜೋಡು ವಿವಾಹಗಳ ಸೃಷ್ಟಿಗೆ ದಾರಿ ಮಾಡಿ ಕೊಟ್ಟಿದೆ. ವರದಕ್ಷಿಣೆ ಕೊಡುವ ಸಾಮರ್ಥ್ಯವಿಲ್ಲದ ಬಡ ತಂದೆ ತಾಯಿಗಳ ಹದಿವಯಸ್ಸಿನ ಯುವತಿಯರನೇಕರು ಅನಿವಾರ್ಯವಾಗಿ ತಮ್ಮ ತಂದೆಯ ವಯಸ್ಸಿನ ವಿಧುರನೊಂದಿಗೆ ಮದುವೆ ಮಾಡಿಕೊಂಡ ಸಂದರ್ಭಗಳೂ ಸಾಕಷ್ಟು. ಶ್ರೀ ಫಡಕೆ ೧೯೩೬ ರಷ್ಟು ಹಿಂದೆಯೆ ಮಾಡಿದ ನಿರೀಕ್ಷಣೆಗಳು ಇಂದಿಗೂ ಸತ್ಯವಾಗಿ ತೋರುತ್ತಿವೆ "ವರದಕ್ಷಿಣಾ ಪದ್ಧತಿಯು ತಂದೆಯನ್ನು ನಿರ್ಗತಿಕರನ್ನಾಗಿ ಮಾಡಿದೆ. ಹತಾಶರಾದ ಅನೇಕ ಕನ್ಯಾಮಣಿಗಳು ತಮಗೂ ತಮ್ಮ ಕುಟುಂಬಕ್ಕೂ ಕೆಟ್ಟ ಹೆಸರು ತರಬಾರದೆಂಬ ಕಾರಣದಿಂದ ಆತ್ಮಹತ್ಯೆಗೆ ಮೊರೆಹೋಗಿದ್ದಾರೆ. ಸಮರ್ಥ, ಬುದ್ಧಿವಂತ ಮತ್ತು ಅಸಾಮಾನ್ಯರಾದ ಯುವಕರು ಹೆಚ್ಚು ವರದಕ್ಷಿಣೆ ತಂದರೆಂಬ ಒಂದೇ ಕಾರಣದಿಂದ ಕುರೂಪಿಗಳಾದ ಮತ್ತು ಸಂಪೂರ್ಣವಾಗಿ ಅಯೋಗ್ಯರಾದ ಯುವತಿಯರೊಂದಿಗಿನ ವಿವಾಹ ಬಂಧನಕ್ಕೆ ಸಿಲುಕಿವರೆಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಹುಡುಗರ ತಂದೆ ತಾಯಿಗಳ ದೃಷ್ಟಿ ವರದಕ್ಷಿಣೆ ಮೇಲಲ್ಲದೆ ಬೇರೆ ಯಾವುದರ ಕಡೆಗೂ ಇರುವುದಿಲ್ಲ. ಇದರಂತೆಯೆ ಮೋಹನಾಂಗಿಗಳೂ ಮತ್ತು ಬುದ್ಧಿವಂತರೂ ಆದ ಎಷ್ಟೋ ಹೆಂಗಳೆಯರನ್ನು ಮಂದಬುದ್ಧಿಯ ಯುವಕರೊಂದಿಗೆ ಜೊತೆಗೂಡಿಸಿದ ಸಂದರ್ಭಗಳೂ ಅದೆಷ್ಟೋ ಇವೆ. ಇದಕ್ಕೆ ಮುಖ್ಯ ಕಾರಣ ಆ ಹೆಂಗಳೆಯರ ತಂದೆ ತಾಯಿಗಳು ಬಡವರಾಗಿದ್ದರೆಂಬುದು."

(೧೧) ವರದಕ್ಷಿಣಾ ಪದ್ಧತಿಯು ಮುಂದುವರಿಕೆಯು ಮಹಿಳೆಯ ಸ್ಥಾನಮಾನ ಹೆಚ್ಚದಂತೆ ಅಡ್ಡಗಾಲು ಹಾಕುತ್ತದೆ. ಇಂಥ ಅನಿಷ್ಟ ಪದ್ಧತಿಗಳಿಂದಾಗಿಯೇ ಇಂದಿಗೂ ಹೆಣ್ಣನ್ನು ಹುಣ್ಣೆಂದು ಪರಿಗಣಿಸುವುದು. ಮಹಿಳೆಯ ಆರ್ಥಿಕ ಪರಾವಲಂಬನೆ, ಕೀಳು ಸಾಮಾಜಿಕ ಸ್ಥಾನಮಾನ ಮುಂತಾದವು ಅನೇಕ ಸಂಪ್ರದಾಯಗಳಲ್ಲಿ ಒಡೆದು ಕಾಣುತ್ತವೆ. ದತ್ತಕ, ಜೀವನಾಂಶ, ಉತ್ತರಾಧಿಕಾರ ಮುಂತಾದವುಗಳಲ್ಲಿ ಈ ಕೊರತೆ ಎದ್ದುಕಾಣುತ್ತದೆ.

(೧೨) ವಿವಾಹ ವಯಸ್ಕರಾದ ಕೆಲವೊಂದು ಹುಡುಗೆಯರು ವರದಕ್ಷಿ ಹಣ ಕೂಡಿಸಲೆಂದು ಶಿಕ್ಷಕಿಯರಾಗಿ, ಕಾರಕೂನರಾಗಿ, ಪ್ರಚಾರ ಕರ್ತೆಯರಾಗಿ ದುಡಿಯು

ತ್ತಿರುವುದು ಮಹಿಳೆಯರ ಸ್ಥಾನಮಾನದ ಬಗೆಗಿನ ಅಧ್ಯಯನ ಸಮಿತಿಯ (೧೯೭೫) ಗಮನಕ್ಕೆ ಬಂದಿದೆ. ಇದು ತಪ್ಪಲ್ಲ, ಆದರೆ ಸಿಕ್ಕ ಸಿಕ್ಕ ಉದ್ಯೋಗಗಳ ಮೊರೆ ಹೊಕ್ಕು ಶೀಲವನ್ನು ಮಾರಿಕೊಂಡ ಸಂದರ್ಭಗಳೂ ಉಂಟು. ಇಂಥವರಲ್ಲಿ ಹಲ ಕೆಲವರು ವೇಶ್ಯೆಯರಾಗಿ ಜೀವನ ನಿರ್ವಹಣೆ ಮಾಡಬೇಕಾಗುತ್ತದೆ.

(೧೩) ಕೊನೆಯದಾಗಿ, ನಮ್ಮ ಸಂವಿಧಾನವು ಎಲ್ಲರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜ್ಯಕೀಯ ನ್ಯಾಯ ಒದಗಿಸುವ ಮತ್ತು ಲಿಂಗ ಮತ್ತಿತರ ಅಂಶಗಳ ಆಧಾರದಿಂದ ಬೇಧ ಭಾವ ಮಾಡಕೂಡದೆಂಬ ಪವಿತ್ರ ಉದ್ದೇಶಗಳನ್ನೇನೊ ಹೊಂದಿದೆ. ಆದರೆ ಈ ಉದ್ದೇಶಗಳ ಪೂರೈಕೆಗೂ ಕೂಡ ವರದಕ್ಷಿಣಾ ಪದ್ಧತಿಯು ಅಡ್ಡ ಬರುತ್ತದೆ. ಆದ್ದರಿಂದ ಇಂಥ ಉದ್ದೇಶಗಳ ಅರ್ಥಪೂರ್ಣ ಈಡೇರಿಕೆಗೆ ಈ ಅನಿಷ್ಟ ಪದ್ಧತಿಯ ನಿವಾರಣೆ ಅತ್ಯಗತ್ಯ.

ಪರಿಹಾರಗಳು

ವರದಕ್ಷಿಣೆ ಮತ್ತು ವರೋಪಚಾರಗಳು ಪ್ರಾಚೀನಕಾಲದಲ್ಲಿ ಧರ್ಮಗ್ರಂಥಗಳು ಮಾನ್ಯ ಮಾಡಿದ ಪದ್ಧತಿಗಳಾಗಿದ್ದವು. ವಿಶೇಷವಾಗಿ ಮೇಲುಜಾತಿಯ ಜನರಲ್ಲಿ ಆಚರಣೆಯಲ್ಲಿದ್ದವು. ಆದರೆ ಕನ್ಯಾಶುಲ್ಕ ಪದ್ಧತಿಯು ಕೆಳವರ್ಗಗಳ ಜನರಲ್ಲಿ ವ್ಯಾಪಕವಾಗಿ ಹರಡಿತ್ತು. ಧರ್ಮ ಗ್ರಂಥಗಳು ಮತ್ತು ಧರ್ಮಶಾಸ್ತ್ರಕಾರರು ಇದನ್ನು ಹೀನ ಪದ್ಧತಿಯೆಂದು ಖಂಡಿಸಿದ್ದರು. ಮಹಾಭಾರತವು ಕೊಡುತಕ್ಕೊಳ್ಳುವವರಿಬ್ಬರಿಗೂ ಭಯಂಕರವಾದ 'ಕಾಲಸೂತ್ರ' ನರಕದಲ್ಲಿ ಬಿದ್ದು ನರಳಬೇಕಾಗುತ್ತದೆಂದು ಎಚ್ಚರಿಕೆ ನೀಡಿತ್ತು. ಅಲ್ಲದೆ ಕೊಂಡು ತಂದ ಪತ್ನಿಯು ಗೌರವಸ್ಥಾನ ಪಡೆಯಲಾರಳೆಂದೂ, ದೇವತಾ ಮತ್ತು ಪಿತೃಕಾರ್ಯಗಳಲ್ಲಿ ಪಾಲುಗೊಳ್ಳಲು ಅನರ್ಹಳೆಂದೂ, ಕನ್ಯೆಯನ್ನು ಮಾರುವ ಪಿತೃಗಳು ತಮ್ಮ ಹಿಂದಿನ ಏಳು ಸಂತತಿಯ ಸುಕೃತ್ಯವನ್ನು ಹಾಳುಮಾಡಿಕೊಂಡು ಸ್ವರ್ಗಚ್ಯುತರಾಗಿ ನರಕಕ್ಕೆ ಬೀಳುವರೆಂದೂ ಹೇಳಲಾಗಿತ್ತು. ಏನೇ ಆದರೂ ವರದಕ್ಷಿಣೆ ಮತ್ತು ವಧೂ ದಕ್ಷಿಣೆ ಪದ್ಧತಿಗಳು ಪ್ರಾಚೀನ ಕಾಲದಲ್ಲಿ ಈಗಿನಂತೆ ಆತಂಕಕಾರಿ ಸಮಸ್ಯೆಗಳಾಗಿರಲಿಲ್ಲ. ಪ್ರೀತಿ ಒಲವುಗಳ ದ್ಯೋತಕವಾಗಿದ್ದವು. ಮಧ್ಯಕಾಲದಿಂದೀಚೆಗೆ ದಿನಗಳೆದಂತೆ ಹೆಚ್ಚೆಚ್ಚು ಭಯಾನಕ ರೂಪಧರಿಸುತ್ತ ದುಷ್ಪರಿಣಾಮಗಳಿಗೆ ಎಡೆಮಾಡುತ್ತ ಸಾಗಿ ಬಂದಿರುವುದನ್ನು ಮತ್ತು ಇವುಗಳ ಪರಿಹಾರಕ್ಕೆ ಕ್ರಮಗಳನ್ನು ಕೈಗೊಂಡಿರುವುದನ್ನೂ ಕಾಣುತ್ತೇವೆ.

ಜಯಪುರದ ದೊರೆಯು ತನ್ನ ಮಗಳಾದ ಜೋಧುಬಾಯಿಯನ್ನು ಜಹಾಂಗೀರನಿಗೆ ಧಾರೆಯೆರೆದುಕೊಟ್ಟು ಅವಳೊಂದಿಗೆ ಕಣ್ಣು ಕುಕ್ಕಿಸುವಷ್ಟು ಸಂಪತ್ತನ್ನು, ಅಸಂಖ್ಯ ಆನೆಕುದುರೆಗಳ ಮೇಲೆ ಹೇರಿಕಳಿಸಿದ ಸಂಗತಿಯನ್ನು ಹಿಂದೆಯೆ ಹೇಳಲಾಗಿದೆ. ಆದರೆ ಜಹಾಂಗೀರನ ತಂದೆ ಅಕಬರ ಬಾದಶಾಹನು ಪ್ರಾಜ್ಞನೂ ದೂರದರ್ಶಿಯೂ ಆಗಿದ್ದ. ಇಂಥ ಪದ್ಧತಿಯ ಅನುಕರಣೆಯಿಂದ ಅಹಿತ ಪರಿಣಾಮಗಳು ಉಂಟಾಗಬಾರದೆಂದು ಮುಂದಾಗಿಯೇ ಊಹಿಸಿ ಯೋಗ್ಯಕ್ರಮಗಳನ್ನು ಕೈಕೊಂಡಿದ್ದನು. ಇದನ್ನು ನಿಯಂತ್ರಿಸುವುದಕ್ಕಾಗಿಯೆ 'ತಾಯಿಬೇಗ್' ಎಂಬ ಹೆಸರಿನ ಅಧಿ

ಕಾರಿಗಳನ್ನೂ ನೇಮಿಸಿದ್ದನು. ಅಕಬರನಿಗಿಂತಲೂ ಸುಮಾರು ಇನ್ನೂರು ವರ್ಷಗಳ ಪೂರ್ವದಲ್ಲಿಯೆ ವಿಜಯನಗರದ ರಾಜ ಎರಡನೇ ದೇವರಾಯನು ವರದಕ್ಷಿಣೆಯನ್ನು ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಂಡಿದ್ದನೆಂಬುದನ್ನು ೧೪೩೨ ರ ಶಾಸನ ವೊಂದು ನಿರೂಪಿಸುತ್ತದೆ. ಗ್ರಾಮಪ್ರಮುಖರ ಅಂಕಿತದೊಂದಿಗೆ ಹೊರಡಿಸಲಾದ ಆ ಘೋಷಣೆಯು ಇಂತಿದೆ. "ತಮ್ಮ ಗ್ರಾಮದಲ್ಲಿಯ ಮದುವೆಗಳು ಕನ್ಯಾದಾನ ಮಾತ್ರವಾಗಿರಬೇಕು; ಅಕಸ್ಮಾತ್ ವರದಕ್ಷಿಣೆಯ ಪ್ರಸ್ತಾಪ ಬಂದರೆ, ವರದಕ್ಷಿಣೆ ಕೊಟ್ಟವರು ಹಾಗೂ ತೆಗೆದುಕೊಂಡವರು ಇಬ್ಬರೂ ರಾಜನಿಂದ ಶಿಕ್ಷೆಗೆ ಒಳಪಡುವರು. ಅಲ್ಲದೆ ಅಂಥವರಿಗೆ ಗ್ರಾಮಸಭೆಯು ಬಹಿಷ್ಕಾರ ಹಾಕಲಾಗುತ್ತದೆ."

ಇಂಥ ಅಪರೂಪವಾದ ಒಂದೆರಡು ಪ್ರಯತ್ನಗಳನ್ನು ಬಿಟ್ಟರೆ ಹೇಳಿಕೊಳ್ಳು ವಂಥ ವ್ಯಾಪಕ ಕ್ರಮಗಳನ್ನು ಕೈಗೊಂಡಂತೆ ಕಾಣುವುದಿಲ್ಲ. ಮೇಲಾಗಿ ಬ್ರಿಟಿಶ್ ಪೂರ್ವ ಕಾಲದಲ್ಲಿ ವರದಕ್ಷಿಣೆಯು ಜನಸಾಮಾನ್ಯರಲ್ಲಿ ಅಷ್ಟೊಂದು ಎತ್ತರ ಬಿತ್ತರ ಗಳನ್ನು ಹೊಂದಿರಲಿಲ್ಲ. ಬ್ರಿಟಿಶರ ಆಗಮನದಿಂದೀಚೆಗೆ ಈ ಸಮಸ್ಯೆ ಹೆಚ್ಚೆಚ್ಚು ಗಂಭೀರವಾಗುತ್ತ ನಡೆದಿದೆ. ಜೊತೆಗೆ ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಶಿಕ್ಷಣಗಳಿಂದ ಪ್ರಭಾವಿತರಾದ ಸಮಾಜ ಸುಧಾರಕರು ಜಾತೀಯತೆ, ಮೂಢನಂಬಿಕೆ, ಮೊದಲಾದ ಅನಿಷ್ಟಗಳೆಡೆಗೆ ಕಣ್ಣು ಹೊರಳಿಸಿದಂತೆ ಈ ಕಡೆಗೂ ದೃಷ್ಟಿಬೀರಿದರು; ತೆಗಳ ಹತ್ತಿ ದರು. ನಿವಾರಿಸುವ ಮಾರ್ಗಗಳ ಅನ್ವೇಷಣೆಗೆ ಮುಂದಾದರು. ಹೀಗೆ ಮಾಡಿದವ ರಲ್ಲಿ ರಾಜಾರಾಮ್‌ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ಪಂಡಿತಾ ರಮಾಬಾಯಿ, ಮಹಾತ್ಮಾಗಾಂಧಿ ಮುಂತಾದವರು ಪ್ರಮುಖರು. ಮಹಾತ್ಮಾ ಗಾಂಧಿ ಒಮ್ಮೆ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಹೀಗೆ ಬರೆದರು. "ವರದಕ್ಷಿಣೆಯ ಕರಾರಿನ ಮೇಲೆ ವಿವಾಹಮಾಡಿಕೊಳ್ಳುವ ಯಾವುದೇ ಯುವಕನು ತನ್ನ ತಾಯ್ನಾಡಿಗೆ ಮತ್ತು ತಾನು ಪಡೆದ ಶಿಕ್ಷಣಕ್ಕೆ ಅಗೌರವವನ್ನುಂಟು ಮಾಡುತ್ತಾನೆ. ಅಲ್ಲದೇ ಸ್ತ್ರೀತ್ವವನ್ನು ಅವಮಾನಗೊಳಿಸುತ್ತಾನೆ. ವಾಮ ಮಾರ್ಗ ಹಿಡಿದು ಧನಕನಕ ಪಡೆ ಯುವ ಇಂಥ ಯುವಕರು ತಮ್ಮ ಬೆರಳುಗಳನ್ನೇ ಮಲಿನಗೊಳಿಸಿಕೊಳ್ಳುತ್ತಾರೆ. ಇಂಥ ವರಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕು."

ವರದಕ್ಷಿಣೆ ಮತ್ತು ಕಾನೂನು

ಆಧುನಿಕ ಸಮಾಜದಲ್ಲಿ ಕಾನೂನು ಅನೇಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಹತ್ವದ ಪಾತ್ರವಾಡುತ್ತಿದೆ. ಮಹಿಳಾ ಅಸಮಾನತೆ, ಶೋಷಣೆ ಮತ್ತು ದೌರ್ಜ ನ್ಯಗಳನ್ನು ನಿವಾರಿಸಲು ಅನೇಕ ಶಾಸನಗಳು ವಿಶೇಷವಾಗಿ ಬ್ರಿಟಿಶರ ಕಾಲದಿಂದೀಚೆಗೆ ಕಾಲಕಾಲಕ್ಕೆ ರಚಿತವಾಗುತ್ತ ಬಂದಿವೆ. ದಂಡ ಸಂಹಿತೆಯ ಮೂಲಕವೂ ಮಹಿಳೆ ಯರಿಗೆ ಹಲವಾರು ರಕ್ಷಣೆಗಳನ್ನು ನೀಡಲಾಗಿದೆ. ೧೯೫೬ ರ ಹಿಂದೂ ಉತ್ತರಾಧಿ ಕಾರ ಅಧಿನಿಯಮವು ಹೆಣ್ಣುಮಕ್ಕಳಿಗೆ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಟ್ಟಿದೆ. ಇದರಿಂದಲೂ ವರದಕ್ಷಿಣೆಯ ಅನಿಷ್ಟ ಸಂಪ್ರದಾಯ ನಿಲ್ಲಲಿಲ್ಲ. ೧೯೬೧ ರಲ್ಲಿ ವರದಕ್ಷಿಣಾ ನಿಷೇಧದ ಅಧಿನಿಯಮ ರಚಿತವಾಯಿತು. ಇದರ ಪ್ರಕಾರ ವರ

ದಕ್ಷಿಣೆಯನ್ನು ಕೊಡುತಕ್ಕೊಳ್ಳುವುದು ಶಿಕ್ಷಾರ್ಹ ಅಪರಾಧ. ಈ ಅಪರಾಧಕ್ಕೆ ೬ ತಿಂಗಳ ಶಿಕ್ಷೆ, ಅಥವಾ ೫೦೦೦ ರೂ. ದಂಡ. ಅಥವಾ ಎರಡನ್ನೂ ವಿಧಿಸಬಹುದು. ವರದಕ್ಷಿಣೆಯನ್ನು ಕೇಳುವುದು ಕೂಡ ಅಪರಾಧವೇ. ತಿಳಿದೊ, ತಿಳಿಯದೆಯೊ ಒಂದುವೇಳೆ ವರದಕ್ಷಿಣೆಯನ್ನು ತೆಗೆದುಕೊಂಡು ಬಿಟ್ಟಿದ್ದರೆ ಅದನ್ನು ಪತ್ನಿಗೆ ಒಂದು ವರ್ಷದ ಒಳಗೆ ವರ್ಗಾಯಿಸಬೇಕು. ಅದು ಪತ್ನಿಯ ಸೊತ್ತು. ಅವಳ ಪತಿ, ಅವನ ತಂದೆತಾಯಿ ಅಥವಾ ಅವನ ಪಾಲಕರ ಆಸ್ತಿಯಲ್ಲ ಎಂಬುದನ್ನು ಅಧಿನಿಯಮದಲ್ಲಿ ಸೇರಿಸಲಾಗಿದೆ. ಹೀಗೆ ಮಾಡದೆ ಹೋದರೆ ಶಿಕ್ಷೆಗೆ ಒಳಪಡುತ್ತಾರೆ. ಆದರೆ ವಿವಾಹವಾದ ಒಂದು ವರ್ಷದೊಳಗೆ ಯಾರಾದರೂ ತಕರಾರು ಕೊಟ್ಟರೆ ಮಾತ್ರ ಇಂಥ ಅಥವಾ ಇದಕ್ಕೆ ಸಂಬಂಧಿಸಿದ ಇನ್ನಿತರ ವಿವಾದಗಳನ್ನು ಕೈಗೆತ್ತಿಕೊಳ್ಳುವುದರಲ್ಲಿ ಬರುವುದು. ಅಲ್ಲದೆ ಈ ಅಧಿನಿಯಮದಂತೆ ನ್ಯಾಯಾಲಯದ ಅನುಮತಿ ಇಲ್ಲದೆ ಪೋಲೀಸ ಇಲಾಖೆಗೆ ಸ್ವತಃ ಅಪರಾಧಿಗಳನ್ನು ಬಂಧಿಸುವ ಅಧಿಕಾರವಿಲ್ಲ.

ಕಾಗದದ ಹುಲಿ. ಪ್ರಸ್ತುತ ಶಾಸನದ ಮೂಲಕ ಹೊಸ ಮೌಲ್ಯಗಳನ್ನು ಅನುಷ್ಠಾನದಲ್ಲಿ ತರಲು ಸಾಧ್ಯವಾಗಬಹುದೆಂದು ಆಶಿಸಲಾಗಿತ್ತು. ಆದರೆ ಆಶೆ ಹುಸಿಯಾಯಿತು. ಕಾನೂನು ಕಾಗದದ ಹುಲಿಯಾಯಿತು. ಕಾನೂನು ರಚಿತವಾದಂದಿನಿಂದ ಅಂದರೆ ೧೯೬೧ ರಿಂದ ನಿನ್ನೆ ಮೊನ್ನೆಯ ವರೆಗೆ ಒಂದೂ ಪ್ರಕರಣ ದಾಖಲಾಗಲಿಲ್ಲ. ನಿರ್ಣಯದ ಮಾತಂತೂ ದೂರೇ ಉಳಿಯಿತು. ಅಂದಮೇಲೆ ಕಾನೂನಿನ ನಿರರ್ಥಕತೆಯ ಬಗೆಗೆ ಇನ್ನೆಂಥ ಉದಾಹರಣೆಬೇಕು? ಇತ್ತಿತ್ತಲಾಗಿ ಮಹಿಳಾ ಸಂಘಟನೆಗಳು ಹೆಚ್ಚೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡು ಕಾರ್ಯೋನ್ಮುಖವಾಗಿರುವುದರಿಂದ ಅದೂ ಅಲ್ಲೊಂದು ಇಲ್ಲೊಂದು ಪ್ರಕರಣಗಳು ದಾಖಲಾಗುತ್ತಿವೆ.

ಕಾನೂನಿನ ಕುಂದುಕೊರತೆಗಳು. ೧೯೬೧ ರ ವರದಕ್ಷಿಣಾ ನಿಷೇಧದ ಅಧಿನಿಯಮವು ಹಲವಾರು ಕುಂದುಕೊರತೆಗಳಿಂದ ತುಂಬಿದೆ.

೧. ವರದಕ್ಷಿಣಾ ನಿಷೇಧದ ೨ನೇ ವಿಧಿಯು ವರದಕ್ಷಿಣೆಯನ್ನು ವ್ಯಾಖ್ಯಾನಿಸುತ್ತದೆ. ಈ ವ್ಯಾಖ್ಯೆಯು ಕನ್ಯಾಶುಲ್ಕವನ್ನೂ ಒಳಗೊಂಡಿದೆ. ಅಂದರೆ ಕಾನೂನಿನ ಉದ್ದೇಶ ಕನ್ಯಾಶುಲ್ಕ ಅಥವಾ ತೆರವನ್ನು ತಡೆಗಟ್ಟುವುದೂ ಆಗಿದೆ. ಆದರೆ ಕನ್ಯಾಶುಲ್ಕವು ಒಂದು ಪಿಡುಗು ಎಂಬಷ್ಟು ಭಯಾನಕವಾಗಿಲ್ಲ. ಅಷ್ಟೇ ಅಲ್ಲ ಕನ್ಯಾಶುಲ್ಕದ ಸ್ಥಾನವನ್ನು ವರದಕ್ಷಿಣೆಯು ಈಗಾಗಲೇ ಬಹುತೇಕವಾಗಿ ಆಕ್ರಮಿಸಿಕೊಂಡಿದೆ ಆದ್ದರಿಂದ ಈ ದಿಶೆಯಲ್ಲಿನ ಪ್ರತಿಬಂಧನೆ ಅನವಶ್ಯಕ; ಅಷ್ಟೇ ಅಲ್ಲ, ನೇರ ಪ್ರಭಾವಕ್ಕೆ ಇದೊಂದು ಆತಂಕವಾಗಲೂಬಹುದು.

೨. ವರದಕ್ಷಿಣಾ ನಿಷೇಧ ಶಾಸನದಲ್ಲಿಯ ವ್ಯಾಖ್ಯೆಯ ಪ್ರಕಾರ ವರದಕ್ಷಿಣೆ ಎಂದರೆ ಇಷ್ಟು ಹಣ, ಆಭರಣ, ಆಸ್ತಿ, ಬೆಲೆಯುಳ್ಳ ಭದ್ರತೆ ಮುಂತಾದವುಗಳನ್ನು ವಿವಾಹಕಾಲಕ್ಕೆ ಅಥವಾ ವಿವಾಹ ಪೂರ್ವದಲ್ಲಿ ಕೊಟ್ಟಾಗಲೇ ವಿವಾಹ ನೆರವೇರಬೇಕು ಎಂದು ಮೊದಲೇ ಹಾಕುವ ಕರಾರು. ಕೆಲವೊಂದು ಅನಿವಾರ್ಯ ಸಂದರ್ಭಗಳಲ್ಲಿ ವಿವಾಹದ ನಂತರವೂ ಕೊಡಲಿ ಎಂಬ ಅವಕಾಶ ಕಲ್ಪಿಸಲಾಗುತ್ತದೆ. ಹೀಗೆ

ಒಪ್ಪಂದ ಮಾಡಿಕೊಂಡು ವಧುವಿನ ಕಡೆಯವರು ವರನ ಕಡೆಯವರಿಗೂ ಮತ್ತು ವರನ ಕಡೆಯವರು ವಧುವಿನ ಕಡೆಯವರಿಗೂ ಕೊಡುವುದನ್ನು ಕಾನೂನು ನಿಯಂತ್ರಿಸುತ್ತದೆ.

ಮೇಲ್ನೋಟಕ್ಕೆ ಪ್ರಸ್ತುತ ವ್ಯಾಖ್ಯೆಯು ಸಮಗ್ರ ಸ್ವರೂಪದ್ದಾಗಿ ಕಾಣುತ್ತದೆ. ಆದರೆ ವಾಸ್ತವವಾಗಿ ಹೀಗಿಲ್ಲ. ವ್ಯಾಖ್ಯೆಯ ನಂತರ ಬರುವ ವಿವರಣೆಯೇ ಕಾನೂನಿನ ಉದ್ದೇಶ ಈಡೇರಿಕೆಗೆ ಅಡ್ಡಬರುತ್ತದೆ. ವಿವಾಹಕಾಲಕ್ಕೆ ಯಾವುದೇ ಪಕ್ಷದವರು ಒತ್ತಾಯವಿಲ್ಲದೇ, ಪ್ರೀತ್ಯರ್ಥವಾಗಿ ಕೊಡುತಕ್ಕೊಳ್ಳುವ ಹಣ, ಆಭರಣ, ಉಡುಗೆ ತೊಡುಗೆ, ಸಾಮಾನು, ಸರಂಜಾಮು ಮತ್ತಿತರ ಕಾಣಿಕೆಗಳನ್ನು ವರದಕ್ಷಿಣೆ ಎಂದು ಪರಿಗಣಿಸಕೂಡದೆಂದು ಕಾನೂನಿನಲ್ಲಿ ವಿವರಣೆ ನೀಡಲಾಗಿದೆ. ಕಾನೂನಿನ ಉದ್ದೇಶವೇನೋ ಸ್ಪಷ್ಟವಾಗಿದೆ. ಆದರೆ ಇದು ಕಾನೂನನ್ನು ಊನಗೊಳಿಸುವದಿಲ್ಲವೇ? ಒತ್ತಾಯದಿಂದ, ಕರಾರಿಗೆ ಅನುಗುಣವಾಗಿ ಪಡೆದವು ಎಂದು ಹೇಳಿ ಯಾರಾದರೂ ಶಿಕ್ಷೆಗೆ ಒಳಪಡಲು ಇಚ್ಛಿಸುತ್ತಾರೆಯೆ? ಮಗಳ ಮೇಲಿನ ಮಮತೆ, ಪರಿಸ್ಥಿತಿಯ ಒತ್ತಡಗಳಿಂದಾಗಿ ಎಂಥ ತ್ಯಾಗಕ್ಕೂ ಸಿದ್ಧರಿರುವ ತಂದೆತಾಯಿಗಳು, ಸಹೋದರರು ಎಷ್ಟಿರುವುದಿಲ್ಲ? 'ಇಷ್ಟು' ಕೊಡಬೇಕೆಂದು ಕರಾರು ಮಾಡಿಕೊಂಡಿದ್ದರೂ ಹೀಗೆಂದು ಹೇಳುವುದೇ ಇಲ್ಲ.

೩. ವರದಕ್ಷಿಣೆಯ ಬಗೆಗಿನ ಪ್ರಸ್ತುತ ವ್ಯಾಖ್ಯೆಯು ಪರಂಪರಾಗತ ವಸ್ತು ವಡವೆಗಳನ್ನು ಮತ್ತು ಖರ್ಚುವೆಚ್ಚಗಳನ್ನು ಒಳಗೊಳ್ಳುವುದಿಲ್ಲ. ಅವುಗಳ ಅಂಚನ್ನು ಮಾತ್ರ ಮುಟ್ಟುತ್ತದೆ. ಉಡುಗೊರೆ, ಬಳುವಳಿ, ಹರಕೆ, ವರೋಪಚಾರ, ಮುಂತಾದ ಪದ್ಧತಿಗಳ ಹೆಸರಿನಲ್ಲಿ ಕೊಡುತಕ್ಕೊಳ್ಳುವುದನ್ನು ಕಾನೂನು ನಿಷೇಧಿಸಿಲ್ಲ. ಹೀಗಾಗಿ ಅದರ ಕಟ್ಟುನಿಟ್ಟಾದ ಅನುಷ್ಠಾನ ಅಸಾಧ್ಯ. ಮೇಲಾಗಿ ಕೆಲವೊಂದು ತಂದೆ ತಾಯಿಗಳಿಗೆ ಇಂಥ ಯಾವ ಕಾಣಿಕೆಗಳೂ ಬೇಕಾಗಿರುವುದಿಲ್ಲ. ಅವರ ಅಂತಸ್ತಿಗೆ ಅನುಗುಣವಾಗಿ ಅದ್ದೂರಿಯಿಂದ ಮದುವೆ ಮಾಡಿಕೊಟ್ಟರೆ ಸಾಕು ಎಂದು ಹೇಳುತ್ತಾರೆ. ಕಾಣಿಕೆಗಳನ್ನು ಕೊಡುವುದು ಬೇಕು, ಇಂಥ ಅದ್ದೂರಿಯ ಮದುವೆ ಬೇಡ ಎನ್ನುವಷ್ಟು ಭಾರವಾಗಿರುತ್ತದೆ. ಆದ್ದರಿಂದ ಇದೂ ಆರ್ಥಿಕ ಭಾರವೇ.ರೂಪ ಬೇರೆ ಅಷ್ಟೆ. ಪರಿಣಾಮ ಆರ್ಥಿಕ ಕುಸಿತ. ಇದನ್ನು ಕಾನೂನು ನಿಯಂತ್ರಿಸುವುದಿಲ್ಲ.

೪. ವಿವಾಹ ಅಕ್ಷತೆಯಿಂದ ಪ್ರಾರಂಭವಾಗುವುದೂ ಇಲ್ಲ ಮತ್ತು ಅದರಿಂದ ಕೊನೆಗೊಳ್ಳುವುದೂ ಇಲ್ಲ. ವಿವಾಹಕ್ಕೆ ಸಂಬಂಧಿಸಿದ ಸಮಾರಂಭಗಳು ಸಾಲುಗಟ್ಟಿ ಬರುತ್ತವೆ. ಇವೆಲ್ಲವುಗಳ ಬಹುತೇಕ ಭಾರವನ್ನು ವಧುವಿನ ತಂದೆತಾಯಿಗಳೇ ಹೊರಬೇಕಾಗುತ್ತದೆ. ಇವೆಲ್ಲವೂ ಕಾನೂನಿನ ಕಕ್ಷೆಯಲ್ಲಿ ಬರುವುದಿಲ್ಲ.

೫. ಕಾನೂನು ಕೊಡುತಕ್ಕೊಳ್ಳುವರಿಬ್ಬರನ್ನೂ ಅಪರಾಧಿಗಳನ್ನಾಗಿ ಪರಿಗಣಿಸಿ ಶಿಕ್ಷೆಗೆ ಗುರಿಮಾಡುತ್ತದೆ. ಹೀಗಿರುವಾಗ ಯಾರು ತಾನೆ ತಕರಾರು ಕೊಡಲು ಮುಂದಾಗುತ್ತಾರೆ? ಇದೊಂದು ದುಷ್ಟ ಹವ್ಯಾಸವೆಂದು ಎಲ್ಲರಿಗೂ ತಿಳಿದ ವಿಷಯುವೇ ಆದರೂ ಸತ್ಯ ಹೇಳಲು ಯಾರೂ ಮುಂದಾಗುವುದಿಲ್ಲ. ಮೇಲಾಗಿ ದೇವರೆಂದು ಬಗೆದ ದೈವದವರ ಸಮುಕ್ಷಮದಲ್ಲಿಯೇ ಈ 'ವ್ಯವಹಾರ' ನಡೆಯುತ್ತಿದೆ.

ಪರಂಪರಾಗತ ದೃಷ್ಟಿಕೋನವುಳ್ಳ ಎಷ್ಟೋ ಹೆಣ್ಣುಮಕ್ಕಳು ಹಿಂಸೆಗೆ ಗುರಿಯಾದಾಗಲೂ ತಕರಾರು ಕೊಡಲು ಮುಂದಾಗುವುದಿಲ್ಲ. ಧರಿಸಿದ ತಾಳಿಯು ತಾಳ್ಮೆಯ ಸಂಕೇತವೆಂದೂ, ಅದನ್ನು ಕಟ್ಟಿದ ಗಂಡನು ದೇವರೆಂದೂ ತಿಳಿದು ಹಿರಿಯರಿಗೆ ಎದುರಾಡದೇ ಅಳುನುಂಗಿ ಬಾಳಬೇಕೆಂದೂ ತಲೆಯಲ್ಲಿ ತುಂಬಲಾಗಿರುತ್ತದೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ತವರುಮನೆಯ ಪರಿಸರದಲ್ಲಿ ಮೇಲಿಂದ ಮೇಲೆ ಕೇಳಿಬರುವ ಮಾತು. ಇನ್ನೂ ಆರ್ಥಿಕವಾಗಿ ಪರಾವಲಂಬಿಯಾದ ಮಹಿಳೆ ಗಂಡನ ಮನೆಯವರನ್ನು ಎದುರುಹಾಕಿಕೊಂಡು ಬಾಳಲು ಸಾಧ್ಯವೇ? ತಕರಾರು ಕೊಟ್ಟ ಹಡೆದ ಮನೆ ಮತ್ತು ಪಡೆದ ಮನೆಯ ಈರ್ವರನ್ನೂ ಕೋರ್ಟಿನ ಕಟ್ಟೆಯನ್ನು ಏರುವಂತೆ ಮಾಡುತ್ತಾರೆ ಎನ್ನುವುದನ್ನು ಸದ್ಯ ಊಹಿಸಲೂ ಅಸಾಧ್ಯ. ಮೇಲಾಗಿ ಶಾಸನದ ಆರನೆಯ ವಿಧಿಯ ಪ್ರಕಾರ ಕಾನೂನಿನ ಉಲ್ಲಂಘನೆಯ ಪ್ರಕರಣವು ವಿವಾಹವಾದ ಒಂದು ವರ್ಷದ ಒಳಗೇ ದಾಖಲಾಗಬೇಕು ಎಂದಿದೆ. ಇದು ಸಾಧ್ಯವೇ ? ಒಂದೆರಡು ಹಡೆದ ನಂತರವೂ ವರದಕ್ಷಿಣೆ ಹಿಂಸೆಯಿಂದ ಸಾವನ್ನಪ್ಪಿದ ಸಂದರ್ಭಗಳೆಷ್ಟಿಲ್ಲ?

೬. ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡಲಿಕ್ಕೂ ಕಾನೂನಿನಲ್ಲಿ ಅವಕಾಶವಿದೆ. ಇದೆಲ್ಲವೂ ಸಾಲದೆಂಬಂತೆ ವರದಕ್ಷಿಣೆಯ ಸಂಬಂಧದಲ್ಲಿ ಉಂಟಾದ ಸಾವನ್ನು ಸಹಜವೆಂಬಂತೆ ಮುಚ್ಚಿಡುವ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ಪೋಲೀಸ ಅಧಿಕಾರಿಗಳೂ ಮತ್ತು ಸಮಾಜ ಪ್ರಮುಖರೂ ಸಾಮೀಲಾಗುತ್ತಾರೆ. ಭ್ರಷ್ಟಾಚಾರವು ಕಾನೂನನ್ನು ನಿಸ್ಸತ್ವಗೊಳಿಸುತ್ತದೆ. ನ್ಯಾಯಾಂಗವೂ ಕೂಡ ಒಬ್ಬ ನಿರಪರಾಧಿಯನ್ನು ರಕ್ಷಿಸುವ ಭರದಲ್ಲಿ ಬಹಳಷ್ಟು ಕೇಡಿಗಳು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ.

೭. ವರದಕ್ಷಿಣೆಯು ವಿವಾಹದ ಅವಿಭಾಜ್ಯ ಅಂಗವೆಂಬಷ್ಟು ಸಹಜವಾಗಿರುವುದು ೧೯೬೧ ರ ವರದಕ್ಷಿಣಾ ನಿಷೇಧ ಶಾಸನದ ಜೊಳ್ಳುತನಕ್ಕೆ ಸಾಕ್ಷಿ. ವರದಕ್ಷಿಣೆಯ ಕಾರಣದಿಂದ ಅಸಂಖ್ಯ ಭಾರತೀಯ ಮಹಿಳೆಯರು ಅಮಾನುಷ ಹಿಂಸೆಗೆ ಗುರಿಯಾಗುತ್ತಿರುವುದು ಮತ್ತು ವರದಕ್ಷಿಣೆಯ ಸಾವುಗಳ ಸಂಖ್ಯೆ ಹೆಚ್ಚುತ್ತ ನಡೆದಿರುವುದೂ ಕಾನೂನಿನ ನಿರ್ವೀರ್ಯತೆಯ ಲಕ್ಷಣಗಳಾಗಿವೆ. ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಡಾ. ಎಂ.ಎನ್. ಶ್ರೀನಿವಾಸ್ (೧೯೬೬) ಅವರು ಪ್ರಸ್ತುತ ಶಾಸನವು ವರದಕ್ಷಿಣೆಯ ಅನಿಷ್ಟವನ್ನು ಹೊಡೆದೋಡಿಸುವಲ್ಲಿ ಯಶಸ್ವಿಯಾಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಹುತೇಕ ಜನರ ಅಭಿಪ್ರಾಯವೂ ಇದೇ ಆಗಿದೆ.

ಉಭಯ ಸಂಸತ್ ಸದನಗಳ ಜಂಟಿ ಸಲಹಾ ಸಮಿತಿ. ಇಂಥ ನಿರುಪಯುಕ್ತವಾದ ಮತ್ತು ನಿರ್ವೀರ್ಯವಾದ ಶಾಸನ ತುಂಬುಬಾಳನ್ನೇ ಬಾಳುತ್ತಿದೆ! ಇದನ್ನು ಬದಲಿಸುವ ಸಕ್ರಿಯ ಪ್ರಯತ್ನ ಪ್ರಾರಂಭವಾದದ್ದು ಶಾಸನ ರಚಿತವಾಗಿ ಸುಮಾರು ೨೦ ವರ್ಷಗಳ ನಂತರ. ಅಲ್ಲದೆ ಶಾಸನ ಬದಲಾವಣೆಯ ಪ್ರಯತ್ನ ನಡೆದು ಅರ್ಧಶತಮಾನ ಸಮೀಪಿಸುತ್ತ ಬಂದಿದ್ದರೂ ಇನ್ನೂ ಪ್ರಯತ್ನದ ಹಂತದಲ್ಲೇ

ಇದೆ. ಸಿದ್ಧಿ ಎಂದೋ, ಏನೊ! ಪ್ರಮೀಳಾ ದಂಡವತೆ ಅವರು ಪ್ರಸಕ್ತ ಕಾಯ್ದೆಯ ತಿದ್ದುಪಡಿಗಾಗಿ ಈ ಹಿಂದಿನ ಸಂಸತ್ತಿನಲ್ಲಿ ಖಾಸಗಿ ಸೂಚನೆಯನ್ನು ಮಂಡಿಸಿದ್ದರ ಪರಿಣಾಮವಾಗಿ ಉಭಯ ಸದನಗಳ ಜಂಟೀ ಸಲಹಾ ಸಮಿತಿಯನ್ನು ಬಿಹಾರ ರಾಜ್ಯದ ಶ್ರೀಮತಿ ಕೃಷ್ಣಸಾಹಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಸಮಿತಿಯು ಎರಡು ವರ್ಷಗಳವರೆಗೆ ದೇಶದ ಉದ್ದಗಲಕ್ಕೂ ಸಂಚರಿಸಿತು. ಹಲವಾರು ಸಂಘ-ಸಂಸ್ಥೆಗಳಿಗೆ ಪ್ರಶ್ನಾವಳಿಯೊಂದನ್ನು ನೀಡಿ ಅಭಿಪ್ರಾಯ ಸಂಗ್ರಹಿಸಿತು. ಜೊತೆಜೊತೆಗೆ ಆ ಸಂಸ್ಥೆಗಳ ಪ್ರತಿನಿಧಿಗಳಿಂದಲೂ ಅಹವಾಲು ಸ್ವೀಕರಿಸಿತು. ಹಲವಾರು ಜನರು ವೈಯಕ್ತಿಕವಾಗಿಯೂ ತಂತಮ್ಮ ಅಭಿಪ್ರಾಯಗಳನ್ನು ಸಮಿತಿಯ ಗಮನಕ್ಕೆ ತಂದರು. ಪದ್ಧತಿಯು ಗಟ್ಟಿರೂಪ ಧರಿಸಿದ್ದು ಮತ್ತು ಇಡೀ ಭಾರತದ ತುಂಬ ಹರಡಿದ್ದು ಸಮಿತಿಯ ಗಮನಕ್ಕೆ ಬಂತು.

ಮದುವೆಯ ಖರ್ಚಿಗೆ ಇತಿ ಮಿತಿಗಳಿರಬೇಕೇ? ಒಟ್ಟು ವೆಚ್ಚದಲ್ಲಿ ಉಡುಗೊರೆಯೂ ಸೇರಬೇಕೆ? ವರದಕ್ಷಿಣೆ ಪಡೆದವರಿಗೆ ಶಿಕ್ಷೆ ಸಾಕೆ? ಕಾಯ್ದೆ ಅನುಷ್ಠಾನಕ್ಕೆ ವಿಶೇಷ ವ್ಯವಸ್ಥೆ ಅಗತ್ಯವೇ? ಕಾನೂನಿನಲ್ಲಿ ಬದಲಾವಣೆ ಅಗತ್ಯವೇ? ಇಂಥ ಹಲವಾರು ಪ್ರಶ್ನೆಗಳನ್ನು ಸಮಿತಿಯ ಪ್ರಶ್ನಾವಳಿಯು ಒಳಗೊಂಡಿದೆ.

ಪ್ರಸ್ತುತ ಸಮಿತಿಯು ೧೯೮೨, ಆಗಸ್ಟ ೧೧ ರಂದು ತನ್ನ ವರದಿಯನ್ನು ಸಲ್ಲಿಸಿತು. ವರದಿಯಲ್ಲಿ ಮುಖ್ಯವಾದ ಕೆಲವೊಂದು ಸಲಹೆಗಳು ಇಂತಿವೆ:

(೧) ವರದಕ್ಷಿಣೆ ಕೊಡುತಕ್ಕೊಳ್ಳುವ ಅಪರಾಧಕ್ಕೆ ಈಗಿರುವ ೬ ತಿಂಗಳು ಜೇಲುವಾಸ ಮತ್ತು ೫೦೦೦ ರೂ. ದಂಡವನ್ನು ೨ ವರ್ಷಗಳ ಜೇಲುವಾಸ ಮತ್ತು ೧೦,೦೦೦ ರೂ. ದಂಡಕ್ಕೆ ಹೆಚ್ಚಿಸಬೇಕು.

(೨) ೧೫೦೦೦ ರೂ. ವರೆಗಿನ ವಿವಾಹದ ಕಾಣಿಕೆಗಳನ್ನು ವರದಕ್ಷಿಣೆ ಎಂದು ಪರಿಗಣಿಸಕೂಡದು.

(೩) ಅಂಥ ಕಾಣಿಕೆಗಳು ಪತ್ನಿಯ ಆಸ್ತಿಯಾಗಬೇಕು. ಅವಳು ಅಕಾಲ ಮರಣಕ್ಕೆ ತುತ್ತಾದರೆ ಅದು ಅವಳ ತಂದೆತಾಯಿಗಳಿಗೆ, ಅವಳು ವಿಚ್ಛೇದನ ಪಡೆದರೆ ಅವಳಿಗೆ ಹೋಗಬೇಕು.

(೪) ವಧುವಿಗೆ ಕೊಡುವ ಕಾಣಿಕೆಗಳ ಮೊತ್ತ ವ್ಯಕ್ತಿಯ ವಾರ್ಷಿಕ ಆದಾಯದ ೧೦೦ ಕ್ಕೆ ೨೦ ರಷ್ಟು ಮೀರದಿರಬೇಕು. ಮತ್ತು ವಿವಾಹದ ಖರ್ಚು ೧೦೦ ಕ್ಕೆ ೭ ಕ್ಕೆ ಮೀರದಿರಬೇಕು.

ಮೇಲಿನ ಸಿಫಾರಸುಗಳಲ್ಲಿ ೧೫೦೦೦ ರೂ. ವರೆಗಿನ ಕಾಣಿಕೆಗಳನ್ನು ವರದಕ್ಷಿಣೆ ಎಂದು ಪರಿಗಣಿಸಕೂಡದು ಎಂಬುದೊಂದೇ ಸಾಕು ಕಾನೂನಿನ ಜೊಳ್ಳುತನವನ್ನು ಅನಿರ್ಬಂಧಿತವಾಗಿ ಮುಂದುವರಿಸಲು. ಇಷ್ಟು ವರದಕ್ಷಿಣೆ ಕೊಡುವ ಶಕ್ತಿ ಬಡ ಭಾರತದಲ್ಲಿ ಎಷ್ಟು ಜನರಿಗಿರುತ್ತದೆ? ಮೇಲಾಗಿ ಲಾಭಬಡಕ ತಂದೆತಾಯಿಗಳು ಕಾನೂನಿನ ಕಪಿಮುಷ್ಟಿಯಲ್ಲಿ ಸಿಲುಕುವಷ್ಟು ಮೂರ್ಖರಲ್ಲ. ಮಹಿಳಾ ಪ್ರಧಾನಿ ವಾಸವಾಗಿದ್ದ ದಿಲ್ಲಿಯಲ್ಲಿಯೇ ಸಾವಿರಾರು ಸಾವುಗಳು ನಡೆದಾಗಲೂ ಏನೂ ಮಾಡ

ಲಾಗದಿದ್ದ ಕಾನೂನಿನಿಂದ ಪ್ರಸ್ತುತ ತಿದ್ದುಪಡಿಯಿಂದ ಹೆಚ್ಚಿಗೆ ಅಪೇಕ್ಷಿಸುವುದು ಅವ್ಯಾವಹಾರಿಕವೆನಿಸುತ್ತದೆ. ಮೇಲಾಗಿ ನಮ್ಮ ಪ್ರತಿನಿಧಿಗಳಿಗೂ ಹೆಚ್ಚಿನ ಆಸಕ್ತಿ ಇದ್ದಂತಿಲ್ಲ. ಸಂಸತ್ ಸಲಹಾ ಸಮಿತಿ ತನ್ನ ವರದಿಯನ್ನು ಸಲ್ಲಿಸಿ ಮೂರು ವರ್ಷಗಳಾಗುತ್ತ ಬಂದವು. ಇನ್ನೂ ತಿದ್ದುಪಡಿ ಸಾಧ್ಯವಾಗಿಲ್ಲವೆಂದರೆ ಏನನ್ನು ಸೂಚಿಸುತ್ತದೆ?

ಕೆಲವೊಂದು ಸೂಚನೆಗಳು. ಅಲ್ಪ ಸ್ವಲ್ಪ ಮಾರ್ಪಾಡುಗಳೊಂದಿಗೆ ಮೇಲಿನ ಶಿಫಾರಸುಗಳನ್ನು ಪರಿಗಣಿಸುವುದರ ಜೊತೆಗೆ ಇನ್ನು ಕೆಲವು ಸೂಚನೆಗಳನ್ನು ಸೂಚಿಸಬಹುದು.

ಯಾವುದೇ ಮೂಲದಿಂದ ದೊರೆತ ಸುದ್ದಿಯ ಆಧಾರದ ಮೇಲೆ ಪೋಲೀಸರೇ ಕ್ರಮ ತೆಗೆದುಕೊಂಡು ಸಂಬಂಧಿಸಿದವರನ್ನು ಸೆರೆಹಿಡಿದು ವಿಚಾರಣೆಗೆ ಒಳಪಡಿಸಬೇಕು. ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡಕೂಡದು. ನ್ಯಾಯಾಲಯವು ವಿಚಾರಣೆಯನ್ನು ಹೆಚ್ಚೆಂದರೆ ಎರಡು ತಿಂಗಳುಗಳಲ್ಲಿ ಮುಗಿಸಬೇಕು. ವಿವಾಹದ ಖರ್ಚುವೆಚ್ಚಗಳನ್ನು ಮಿತಗೊಳಿಸಬೇಕು. ಅತಿಯಾದ ಶ್ರೀಮಂತಿಕೆಯ ಪ್ರದರ್ಶನಕ್ಕೆ ಕಡಿವಾಣ ಹಾಕಬೇಕು. ಕಾಣಿಕೆಗಳು ವ್ಯಕ್ತಿಯ ಆದಾಯದ ನಿಶ್ಚಿತ ಮಿತಿಯಲ್ಲಿರಬೇಕು. ಆಡಂಬರದ ವಿವಾಹಗಳಿಗೆ ಭಾರವಾದ ತೆರಿಗೆ ಹಾಕಬೇಕು. ಸರಕಾರಿ ಕೆಲಸಗಾರರೇ ಹೀಗೆ ಮಾಡಿದಾಗ ಅವರಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ವಿವಾಹವನ್ನು ಸರಳಗೊಳಿಸಬೇಕು. ಸಾಮೂಹಿಕ ವಿವಾಹಗಳಿಗೆ ಪ್ರೋತ್ಸಾಹ ನೀಡಬೇಕು.

ಇವೆಲ್ಲ ವಿವಾಹಗಳಿಗೆ ಸಂಬಂಧಿಸಿದ ವಿಚಾರಗಳು. ಇನ್ನು ವಿವಾಹದ ನಂತರವೂ ವರನ ಪಕ್ಷದವರು ಇನ್ನೂ ಹೆಚ್ಚಿನ ಸಂಪತ್ತಿಗಾಗಿ ಹಿಂಸಿಸುತ್ತಾರೆ. ಕೆಲವೊಂದು ಹೆಣ್ಣುಮಕ್ಕಳಿಗೆ ಈ ಹಿಂಸೆ ಅಸಹನೀಯ. ಕೊಲೆಮಾಡಿಸಿಕೊಂಡೊ ಇಲ್ಲವೆ ಆತ್ಮಹತ್ಯೆ ಮಾಡಿಕೊಂಡೊ ಅಸಹನೀಯ ಹಿಂಸೆಯಿಂದ ಮುಕ್ತಿ ಪಡೆಯುತ್ತಾರೆ. ಇದಕ್ಕೆ ಕಾರಣರಾದ ಗಂಡುಗಳು ಮರುಮದುವೆಯನ್ನು ಏನೂ ಆಗಿಲ್ಲವೆಂಬಂತೆ ಸಲೀಸಾಗಿ ಸಂಬಂಧಿಕರ ನೆರವಿನೊಂದಿಗೆ ಮಾಡಿಕೊಳ್ಳುತ್ತಾರೆ. ಹೀಗೆ ಮಾಡಿಕೊಳ್ಳುವ ಪೂರ್ವದಲ್ಲಿ ಸಾವಿನ ಬಗ್ಗೆ ಆಮೂಲಾಗ್ರ ತನಿಖೆಯಾಗಬೇಕು. ತಪ್ಪುಗಾರರಿಗೆ ತಕ್ಕ ಶಿಕ್ಷೆಯಾಗಬೇಕು. ಗಂಡನೂ ಅಪರಾಧದಲ್ಲಿ ಪಾಲುಗಾರನಾಗಿದ್ದ ಪಕ್ಷದಲ್ಲಿ ಮರುಮದುವೆಗೆ ಆಸ್ಪದ ಕೊಡಕೂಡದು.

ಹಿಂಸೆಗೊಳಗಾದ ಯುವತಿಯರಿಗೆ ರಕ್ಷಣಾಗೃಹಗಳು ಸ್ಥಾಪಿತವಾಗಬೇಕು. ಅವರಿಗೆ ಸರಕಾರಿ ಸೇವೆಯಲ್ಲಿ ಮೀಸಲಾತಿ ಇರಬೇಕು.

ಕಾನೂನಿಗೆ ಬೇಕಾದ ನೈತಿಕ ಬೆಂಬಲ ಮತ್ತು ಸಾಮಾಜಿಕ ಬೆಂಬಲ. ಶಾಸನದ ಯಶಸ್ಸು ಕೇವಲ ಅದನ್ನು ಪಾಸುಮಾಡುವುದರಲ್ಲಿ ಇಲ್ಲ. ಅದರ ಕಟ್ಟುನಿಟ್ಟಾದ ಅನುಷ್ಠಾನದಲ್ಲಿಯೂ ಅಡಕವಾಗಿದೆ. ಆಡಳಿತ ಯಂತ್ರ ಬಿಗುವಿನಿಂದ ಕೂಡಿದ್ದರೆ, ಕೌಶಲ್ಯ ಪೂರ್ಣವಾಗಿದ್ದರೆ ಮತ್ತು ಭ್ರಷ್ಟರಹಿತವಾಗಿದ್ದರೆ ಹೆಚ್ಚಿಗೆ

ಸಾಧಿಸಲು ಸಾಧ್ಯ. ಮೇಲಾಗಿ ಇಷ್ಟೇ ಮಹತ್ವದ್ದು ಕಾನೂನಿಗೆ ಬೇಕಾದ ನೈತಿಕ ಮತ್ತು ಸಾಮಾಜಿಕ ಬೆಂಬಲ. ಇದಿಲ್ಲದ ಕಾನೂನು ಕೇವಲ ರತ್ನಖಚಿತ ವಸ್ತುವಾಗಬಹುದು. ಶಬ್ದಗಳ ಜಾಲವಾಗಬಹುದು. ರೋಮದೇಶದ ಪ್ರಸಿದ್ಧ ಇತಿಹಾಸಕಾರನೊಬ್ಬನ ಮಾತುಗಳು ಈ ದಿಶೆಯಲ್ಲಿ ಅರ್ಥ ಪೂರ್ಣ. "ನೈತಿಕ ನಿಯಮಗಳ ಆಧಾರವಿಲ್ಲದ ಕಾನೂನುಗಳು ಕಾನೂನುಗಳೇ ಅಲ್ಲ." ಅವನು ಮುಂದುವರೆದು ಹೀಗೆ ಹೇಳಿದ್ದಾನೆ. "ನೈತಿಕ ನಿಯಮಗಳು ಯಥೋಚಿತವಾಗಿದ್ದರೆ ಕಾನೂನುಗಳು ಅನವಶ್ಯಕ. ನೈತಿಕ ನಿಯಮಗಳ ಬೆಂಬಲವಿಲ್ಲದ ಕಾನೂನುಗಳು ನಿರುಪಯುಕ್ತ." ಸಮಾಜದ ಬೆಂಬಲವಿಲ್ಲದ ಕಾನೂನು ದುರ್ಬಲ, ಷಂಡ. ಜನರು ಕಾನೂನನ್ನು ಒಪ್ಪುವಂತೆ ಮಾಡಬೇಕು. ಅವರ ಕಲ್ಯಾಣಕ್ಕಾಗಿಯೆ ಎಂಬ ಭಾವನೆ ಮೂಡುವಂತೆ ಮಾಡಬೇಕು.

ದಂಡ ಸಂಹಿತೆಯ ತಿದ್ದುಪಡಿ. ಮಹಿಳೆಗೆ ರಕ್ಷಣೆ ನೀಡಲು ದಂಡ ಸಂಹಿತೆಯಲ್ಲಿ (Penal code) ಕೆಲವೊಂದು ತಿದ್ದುಪಡಿಗಳನ್ನು ಮಾಡಲಾಗಿದೆ. ದಂಡ ಸಂಹಿತೆ ತಿದ್ದುಪಡಿ ೧೯೮೩ ಮತ್ತು ದಂಡ ಸಂಹಿತೆಯ ೨ ನೇ ತಿದ್ದುಪಡಿ ೧೯೮೩ ಇವುಗಳನ್ನು ಡಿಶೆಂಬರ್ ೧೯೮೩ ರಲ್ಲಿ ಪಾಸು ಮಾಡಲಾಯಿತು. (೧) ವಿವಾಹಿತ ಮಹಿಳೆಯ ಮೇಲಿನ ಕ್ರೌರ್ಯವನ್ನು ಅಪರಾಧವೆಂದು ಪರಿಗಣಿಸಿ ೪೯೮-A ವಿಧಿಯನ್ನು ಭಾರತೀಯ ದಂಡ ಸಂಹಿತೆಯಲ್ಲಿ ಸೇರಿಸಲಾಗಿದೆ. ಅದರಲ್ಲಿ ಕ್ರೌರ್ಯವನ್ನು ಈ ರೀತಿ ವ್ಯಾಖ್ಯಾನಿಸಲಾಗಿದೆ: (ಅ) ಹೆಣ್ಣುಮಗಳನ್ನು ಆತ್ಮಹತ್ಯೆಗೆ ಪ್ರೇರೇಪಿಸುವಂಥ ಯಾವುದೇ ನಡತೆ ಅಥವಾ ಘಾಯವಾಗುವಂತೆ ಹೊಡೆಯುವುದು.... (ಬ) ಹಿಂಸೆಗೆ ಗುರಿಮಾಡುವುದು. ಇದು ಕಾನೂನು ಬಾಹಿರ. ಗಂಡ ಮತ್ತು ಅವನ ಬಂಧು-ಬಳಗದವರನ್ನು ಹಿಂಸೆಕೊಡುವುದಕ್ಕೆ ಆರೋಪಿಗಳನ್ನಾಗಿ ಮಾಡಲಾಗುವುದು. ಅಪರಾಧ ಸಾಬೀತಾದರೆ ಮೂರು ವರ್ಷಗಳ ಕಾರಾಗೃಹವಾಸದ ಶಿಕ್ಷೆ ವಿಧಿಸಲಾಗುವುದು.

ಅಪರಾಧ ಸಂಹಿತೆಯ ೧೭೪ (೩) ವಿಧಿಯು ಸಂಶಯಾಸ್ಪದ ರೀತಿಯಲ್ಲಿ ಮರಣ ಹೊಂದಿದ ವ್ಯಕ್ತಿಯ ಮರಣೋತ್ತರ ಪರೀಕ್ಷೆಯನ್ನು ಸಿವಿಲ್ ಸರ್ಜನ್ ಅಥವಾ ಅವನ ಸರಿಸಮಾನ ಸ್ಥಾನಮಾನದ ವ್ಯಕ್ತಿಯಿಂದ ಮಾಡಿಸಲು ಆದೇಶಿಸಲಾಗಿದೆ.

೧೭೪ ನೇ ವಿಧಿಯ ಉಪವಿಧಿಯನ್ನು (೩) ತಿದ್ದುಪಡಿ ಮಾಡಲಾಗಿದೆ. ಕೆಳಗಿನ ರೀತಿಯಲ್ಲಿ ಸಾವನ್ನಪ್ಪಿದ ವ್ಯಕ್ತಿಯ ಶರೀರ ಪರೀಕ್ಷೆ ಮಾಡಲು ಅವಕಾಶ ಕಲ್ಪಿಸಲಾಗಿದೆಃ

(೧) ವಿವಾಹವಾದ ಏಳು ವರ್ಷಗಳ ವರೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಅಥವಾ ಈ ಅವಧಿಯಲ್ಲಿ ಯಾರಿಂದಲಾದರೂ ಕೊಲೆಯಾದ ಸಂಶಯ ಬಂದರೆ, (೨) ವಿವಾಹವಾದ ಏಳು ವರ್ಷಗಳ ಒಳಗೆ ಸಂಶಯಾಸ್ಪದ ರೀತಿಯಲ್ಲಿ ಮರಣಹೊಂದಿದ ಬಗ್ಗೆ ಮಹಿಳೆಯ ಸಂಬಂಧಿಕರು ವಿಚಾರಣೆಗೆ ವಿನಂತಿಸಿದರೆ.

ಉಚ್ಚನ್ಯಾಯಾಲಯದ ಸಕಾಲಿಕ ಸೂಚನೆ ಮತ್ತು ಎಚ್ಚರಿಕೆ. ವರದ

ಕ್ಷಿಣೆ ಸಾವುಗಳು ಕೊನೆಗೂ ಸುಪ್ರೀಮ್ ಕೋರ್ಟಿನ ಗಮನ ಸೆಳೆದಿವೆ. ಶ್ರೇಷ್ಠ ನ್ಯಾಯಾಲಯವು ವಿವಾಹಿತ ಮಹಿಳೆಯ ಜೀವ ಮತ್ತು ಗೌರವ ಕಾಪಾಡಲು ಕೇಂದ್ರ ಸರಕಾರಕ್ಕೆ ಯೋಜನೆಯನ್ನು ರೂಪಿಸಲು ಆದೇಶ ನೀಡಿದೆ. ಪ್ರತ್ಯೇಕ ಘಟಕ ಸ್ಥಾಪಿಸಿ ಆ ಮೂಲಕ ವಿವಾಹವಾದ ಐದು ವರ್ಷಗಳ ವರೆಗೆ ಸತ್ತವರ ವಿಚಾರಣೆ ನಡೆಯಿಸಿ ವರದಕ್ಷಿಣೆಗೂ ಸಾವಿಗೂ ಸಂಬಂಧವಿದೆಯೇ ಎಂಬುದನ್ನು ಕಂಡುಹಿಡಿಯಬೇಕು. ಎಂದೂ ತಿಳಿಸಿದೆ. ವಿಚಾರಣೆ ನಡೆಸಲು ಮಹಿಳಾ ಅಧಿಕಾರಿಗಳನ್ನು ಮತ್ತು ಮಹಿಳಾ ಪೋಲೀಸರನ್ನು ನೇಮಿಸಲು ಸೂಚಿಸಿದೆ.

ನೀಲಂ ಎಂಬ ಯುವತಿಯು ಕೊಲೆಗೀಡಾದ ಮೊಕದ್ದಮೆಗೆ ಸಂಬಂಧಿಸಿದಂತೆ ದಿಲ್ಲಿಯ ವಿಶೇಷ ಸೆಶನ್ಸ ನ್ಯಾಯಾಧೀಶ ಜೆ. ಡಿ. ಕಪೂರ್ (ಫೆ. ೪, ೧೯೮೫) ಅವರ ನುಡಿಗಳು ಪೋಲೀಸ್ ಇಲಾಖೆಯ ಕೆಲಸದ ರೀತಿ ನೀತಿಗಳ ಮೇಲೆ ಕ್ಷ ಕಿರಣ ಹಾಯಿಸಿದಂತಿವೆ. ವರದಕ್ಷಿಣೆ ಸಾವಿನ ಪ್ರಕರಣಗಳು ಹೆಚ್ಚುತ್ತಿದ್ದರೂ ಪೋಲೀಸರು ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದೂ ನ್ಯಾಯಾಧೀಶರು ವಿಷಾದ ವ್ಯಕ್ತಪಡಿಸಿದ್ದಾರೆ. ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಸಹಾಯಕ ಪೋಲೀಸ್ ಕಮಿಶನರರಿಗಿಂತ ಕಡಿಮೆ ಸ್ಥಾನಮಾನದ ಅಧಿಕಾರಿ ಮಾಡಕೂಡದೆಂದು ಕೇಂದ್ರ ಸರಕಾರ ಮೂರು ವರ್ಷಗಳ ಹಿಂದೆಯೆ ನಿರ್ಧರಿಸಿದ್ದರೂ ಈ ಪ್ರಕರಣಗಳನ್ನು ಕಿರಿಯ ಅಧಿಕಾರಿಗಳು ಕೈಗೆತ್ತಿಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಉಪಕಮಿಶನರು ಇಂತಹ ಪ್ರಕರಣಗಳ ತನಿಖೆಯ ಮೇಲ್ವಿಚಾರಣೆ ಮಾಡಬೇಕು. ಕಮೀಶನರು ತನಿಖೆಯ ಪ್ರಗತಿಯನ್ನು ಅರಿತುಕೊಳ್ಳುತ್ತಿರಬೇಕು. ಆದರೆ ದಿಲ್ಲಿ ಪೋಲೀಸರು ಇದಾವುದನ್ನೂ ಮಾಡದಿರುವುದು ದುರದೃಷ್ಟಕರ ಎಂದು ನ್ಯಾಯಾಧೀಶರು ಟೀಕಿಸಿದ್ದಾರೆ. ಆತ್ಮಹತ್ಯೆ ಮತ್ತು ವರದಕ್ಷಿಣೆ ಹತ್ಯೆ ಪ್ರಕರಣಗಳಲ್ಲಿ ಕೂದಲೆಳೆಯಷ್ಟು ಅಂತರವಿರುತ್ತದೆ. ಮುಚ್ಚಿದ ಬಾಗಿಲಹಿಂದೆ ಈ ಕೃತ್ಯ ನಡೆಯುವುದೇ ಇದಕ್ಕೆ ಕಾರಣ. ಸ್ಥಿತಿ ಹೀಗಿರುವುದರಿಂದ ನುರಿತ ಅಧಿಕಾರಿಗಳೇ ಇಂಥ ಪ್ರಕರಣಗಳ ತನಿಖೆ ನಡೆಸುವುದು ಬಹು ಅಗತ್ಯವಿರುತ್ತದೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಮಹತ್ವದ ತೀರ್ಪು. ವಿವಾಹ ಸಮಯದಲ್ಲಿ ತಂದೆತಾಯಿಗಳು ಮತ್ತಿತರರು ಮಗಳಿಗೆ ಕೊಡುವ ಒಡವೆ, ವಸ್ತ್ರ, ವಸ್ತು ಮತ್ತು ನಗದು ಹಣ ಸಂಪೂರ್ಣವಾಗಿ ಹೆಂಡತಿಯ ಸ್ವತ್ತು. ಈ ಸ್ತ್ರೀಧನದ ಮೇಲೆ ಅತ್ತೆ ಮಾವಂದಿರಿಗಾಗಲೀ, ಗಂಡನಿಗಾಗಲೀ, ಮಕ್ಕಳಿಗಾಗಲೀ ಹಕ್ಕಿಲ್ಲವೆಂದು ಇತ್ತೀಚೆಗೆ (೧೯೮೫, ಮಾರ್ಚ ೧೩) ಸುಪ್ರೀಮ್ ಕೋರ್ಟು ನೀಡಿರುವ ತೀರ್ಪು ಶೋಷಿತ ಹೆಣ್ಣಿನ ಬದುಕಿಗೆ ಒಂದು ಆಶಾಕಿರಣವಾಗಿ ಬಂದಿದೆ.

ಮಹಿಳೆ ವಿವಾಹಿತಳಾಗಿ ಪತಿ-ಗೃಹವನ್ನು ಪ್ರವೇಶಿಸಿದ ನಂತರ ಅವಳ ಖಾಸಗಿ ಸ್ವತ್ತೂ ಸೇರಿದಂತೆ ಅವಳ ಎಲ್ಲ ಆಸ್ತಿಯೂ ಪತಿಪತಿಯರ ಜಂಟೀ ಸ್ವತ್ತಾಗಿರುತ್ತದೆಂದು ಹಿಂದೆ ಅನೇಕ ಹೈಕೋರ್ಟುಗಳು ತೀರ್ಪು ನೀಡಿದ್ದವು. ಆದರೆ ಸರ್ವೋಚ್ಚ ನ್ಯಾಯಾಲಯವು ಅವುಗಳನ್ನೆಲ್ಲ ತಳ್ಳಿಹಾಕಿ ಪ್ರಸ್ತುತ ತೀರ್ಪು ನೀಡಿದೆ. ವಿವಾಹ

ಸಂದರ್ಭದಲ್ಲಿ ವರದಕ್ಷಿಣೆಯ ಅಂಗವಾಗಿ ನೀಡಲಾಗುವ ಒಡವೆ ವಸ್ತ್ರ, ಹಣ ಮತ್ತಿತರ ವಸ್ತುಗಳು ಆ ಮಹಿಳೆಯ ಸ್ತ್ರೀಧನವಾಗಿರುತ್ತವೆ. ಈ ಸ್ತ್ರೀಧನದ ಮೇಲಿನ ಸಂಪೂರ್ಣ ಹಕ್ಕು ಅವಳದೇ. ಅವಳು ಅದನ್ನು ತನ್ನ ಪತಿ ಅಥವಾ ಅತ್ತೆ ಮಾವಂದಿರ ವಶಕ್ಕೆ ಕೊಟ್ಟದ್ದರೂ ಅದು ಕೇವಲ ಒಂದು ನ್ಯಾಸ. ಅವರೆಲ್ಲ ಆ ನ್ಯಾಸದ ಸಂರಕ್ಷಕರು ಮಾತ್ರ. ಕಡೆಯ ತನಕ ಅವಳ ಪತಿಗಾಗಲೀ, ಅತ್ತೆ ಮಾವಂದಿರಿಗಾಗಲೀ ಅವಳ ಮಕ್ಕಳಿಗಾಗಲೀ ಮತ್ತಾವ ಬಂಧು ಬಳಗದವರಿಗಾಗಲೀ ಅದರಮೇಲೆ ಯಾವ ಹಕ್ಕೂ ಇರುವುದಿಲ್ಲ. ಅವಳು ಅದನ್ನು ತಿರುಗಿಕೊಡುವಂತೆ ಕೇಳಿದಾಗ ಸಂರಕ್ಷಕರು ಅದನ್ನು ಹಿಂತಿರುಗಿಸಬೇಕು. ಇಲ್ಲದಿದ್ದರೆ ಅದು ವಿಶ್ವಾಸ ದ್ರೋಹವೆನಿಸಿ ಅವರು ಭಾರತೀಯ ದಂಡ ಸಂಹಿತೆಯ ೪೦೫,೪೦೬ ಈ ವಿಧಿಗಳಂತೆ ಶಿಕ್ಷೆಗೆ ಒಳಪಡುತ್ತಾರೆ–ಎಂದು ಸುಪ್ರೀಮ್‌ಕೋರ್ಟು ತನ್ನ ೨೫ಪುಟಗಳ ಸುದೀರ್ಘತೀರ್ಪಿನಲ್ಲಿ ಸ್ಪಷ್ಟಗೊಳಿಸಿದೆ.

ಸ್ತ್ರೀಧನದ ಬಗ್ಗೆ ಈ ಮಹತ್ವದ ತೀರ್ಪನ್ನು ಪ್ರತಿಭಾರಾಣಿ-ಸೂರಜ ಕುಮಾರರ ಮೊಕದ್ದಮೆ ಇತ್ಯರ್ಥ ಪಡಿಸುವಾಗ ಕೊಡಲಾಯಿತು. ಮೊಕದ್ದಮೆ ಹೀಗಿದೆ: ೧೯೭೨ ರಲ್ಲಿ ಲೂಧಿಯಾನಾದ ವರಮಾನ ತೆರಿಗೆಯ ಸಲಹೆಗಾರನ ಮಗಳು ಪ್ರತಿಭಾರಾಣಿಯ ವಿವಾಹವು ಅದೇ ನಗರದ ಸೂರಜಕುಮಾರ ಎಂಬ ಯುವಕನೊಡನೆ ನಡೆಯಿತು. ಆ ಸಮಯದಲ್ಲಿ ಸುಮಾರು ೬೦ ಸಾವಿರ ರೂ. ಬೆಲೆ ಬಾಳುವ ವಸ್ತು ಒಡವೆಗಳನ್ನು ಪ್ರತಿಭಾರಾಣಿಗೆ ಬಳುವಳಿಯಾಗಿ ಕೊಡಲಾಯಿತು. ವಿವಾಹವಾದಾಗಿನಿಂದಲೂ ಅವಳನ್ನು ವರದಕ್ಷಿಣೆ ಸಾಲದೆಂದು ಹಿಂಸಿಸಲಾಗುತ್ತಿತ್ತು. ಹಿಂಸೆಯ ಮಧ್ಯದಲ್ಲಿಯೆ ಆಕೆ ಎರಡು ಮಕ್ಕಳ ತಾಯಿಯೂ ಆದಳು. ೫ ವರ್ಷಗಳ ನಂತರ ಅವಳ ಗಂಡ ಅವಳನ್ನು ಮಕ್ಕಳೊಂದಿಗೆ ಮನೆಯಿಂದ ಹೊರದೂಡಿದ. ಸ್ವಲ್ಪ ಕಾಲದ ನಂತರ ಹಿರಿಯರ ಮಧ್ಯಸ್ಥಿಕೆಯಿಂದ ರಾಜಿಯಾಯಿತು. ಪತಿಗೃಹಕ್ಕೆ ಹಿಂತಿರುಗಿದಳು. ಹಿಂಸೆ ನಿಲ್ಲಲಿಲ್ಲ. ಮೂರು ವರ್ಷಗಳ ನಂತರ ಅವಳ ಗಂಡ ಮುಂದಿನ ಎರಡು ಹಲ್ಲುಗಳು ಮುರಿಯುವಂತೆ ಹೊಡೆದು ಲೂಧಿಯಾನಾ ರೇಲ್ವೆ ಸ್ಟೇಶನ್ನಿನಲ್ಲಿ ಬಿಟ್ಟುಹೋದ. ಬಳುವಳಿ ಹಿಂತಿರುಗಿಸಲು ಪ್ರತಿಭಾರಾಣಿ ಮತ್ತು ಅವಳ ತಂದೆ ತಾಯಿಗಳು ಆಗ್ರಹ ಪಡಿಸಿದರು. ಆದರೆ ಅವಳ ಗಂಡ, ಅತ್ತೆ ಮತ್ತು ಮಾವ ಅದಕ್ಕೆ ಒಪ್ಪಲಿಲ್ಲ. ಅನಿವಾರ್ಯವಾಗಿ ನ್ಯಾಯಾಲಯದ ಮೊರೆಹೊಕ್ಕರು. ೧೯೮೨ ರಲ್ಲಿ ಪಂಜಾಬ-ಹರಿಯಾನಾ ಹೈಕೋರ್ಟು ಸ್ತ್ರೀಧನ ಪತಿ ಪತ್ನಿಯರ ಜಂಟೀ ಸ್ವತ್ತೆಂದೂ ಅದನ್ನು ಹಿಂತಿರುಗಿಸಬೇಕಾಗಿಲ್ಲವೆಂದೂ ತೀರ್ಪು ನೀಡಿತು. ಸುಪ್ರೀಮ್ ಕೋರ್ಟಿಗೆ ಅಪೀಲ್ ಹೋದಳು. ೧೯೮೫ ಮಾರ್ಚ ೧೨ ರಂದು ನ್ಯಾಯಮೂರ್ತಿ ಶ್ರೀ ಮುರ್ತುಜಾ ಫಜಲ್ ಅಲಿ ಮತ್ತು ನ್ಯಾಯಮೂರ್ತಿ ಸವ್ಯಸಾಚಿ ಮುಖರ್ಜಿ ಅವರು ಸ್ತ್ರೀಧನ ಪತ್ನಿಯ ಸಂಪೂರ್ಣ ಸ್ವತ್ತೆಂದೂ ಅದರ ಮೇಲೆ ಪತಿಗೆ ಯಾವ ಅಧಿಕಾರವಿಲ್ಲೆಂದೂ ತೀರ್ಪು ನೀಡಿದರು. ಇನ್ನೊಬ್ಬ ನ್ಯಾಯಮೂರ್ತಿ ಶ್ರೀ ವರದರಾಜನ್ ಅವರು ವಿವಾಹದ ನಂತರ ಎಲ್ಲ ಸ್ವತ್ತೂ ಪತಿ-ಪತ್ನಿಯರ ಜಂಟೀ ಸ್ವತ್ತಾಗಿರುತ್ತದೆಂದೂ ಅದರಿಂದ ಕ್ರಿಮಿನಲ್ ನಂಬಿಕೆ ದ್ರೋಹದ ಆಪಾದನೆ ಸಲ್ಲದೆಂದೂ ಅಭಿ

ಪ್ರಾಯ ವ್ಯಕ್ತ ಪಡಿಸಿದರು. ಇಂತಹ ತೀರ್ಪು ಪತಿಪತ್ನಿಯರ ಅನ್ಯೋನ್ಯತೆಗೆ ಭಂಗ ತರುವುದೆಂಬುದು ಅವರ ಅನಿಸಿಕೆ. ಅಂತೂ ಬಹುಮತದ ಆಧಾರದ ಮೇಲೆ ಸ್ತ್ರೀ ಧನವು ಪತ್ನಿಯ ಸಂಪೂರ್ಣ ಸ್ವತ್ತೆಂಬ ತೀರ್ಪು ಸ್ವೀಕೃತವಾಯಿತು. ಈ ತೀರ್ಪು ಮಹಿಳಾ ಚಳುವಳಿಗಾರರ ಪಾಲಿಗೆ ದೊಡ್ಡ ವಿಜಯ. ಮಹಿಳೆಯರ ಸಾವುನೋವು ಗಳು, ದುಃಖ ದುಮ್ಮಾನಗಳು, ಕಡಿಮೆಯಾಗಬಹುದೆಂದು ಆಶಿಸಲಾಗಿದೆ. ಸಿವಿಲ್ ಕೋರ್ಟಿನ ಮುಖಾಂತರ ಹತ್ತಾರು ವರ್ಷಗಳ ವರೆಗೆ ನ್ಯಾಯಕ್ಕಾಗಿ ಪರಿತಪಿಸಬೇಕಾ ಗಿಲ್ಲ. ಕ್ರಿಮಿನಲ್ ಕೋರ್ಟಿನ ಮೂಲಕ ಶೀಘ್ರವಾಗಿ ನ್ಯಾಯ ಪಡೆಯಲು ಸಾಧ್ಯ.

ಮಹಿಳಾ ಮತ್ತು ಯುವಕ ಸಂಘಟನೆಗಳ ಹೋರಾಟ. ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆಯ ಪಿಡುಗಿನ ವಿರುದ್ಧ ಅನೇಕ ಮಹಿಳಾ ಮತ್ತು ಯುವಕರ ಸಂಘಟನೆಗಳು ಹೋರಾಟ ನಡೆಸುತ್ತಿರುವುದು ಶುಭ ಚಿಹ್ನೆಯಾಗಿದೆ. ಹಿಂದೆ ಸಂಜಯಗಾಂಧಿಯ ನೇತೃತ್ವದಲ್ಲಿ ಈ ಕಾರ್ಯಕ್ಕೆ ಚಾಲನೆ ದೊರಕಿತ್ತು. ಇಂದು ದಿಲ್ಲಿಯ ಎಲ್ಲ ಮಹಿಳಾ ಸಂಘಟನೆಗಳೂ ವರದಕ್ಷಿಣಾ ವಿರೋಧಿ ಸಮನ್ವಯ ಸಮಿತಿ ಯನ್ನು ರಚಿಸಿಕೊಂಡು ಕಾರ್ಯೋನ್ಮುಖವಾಗಿವೆ. ಬೆಂಗಳೂರಿನ ಸಂಯುಕ್ತ ವೇದಿ ಕೆಯವರು ಈ ದಿಶೆಯಲ್ಲಿ ನಡೆಸುತ್ತಿರುವ ಕಾರ್ಯ ಶ್ಲಾಘನೀಯವಾದುದು. ಅಖಿಲ ಭಾರತ ಮಾರ್ವಾಡಿ ಒಕ್ಕೂಟದ ಅಧ್ಯಕ್ಷ ಶ್ರೀ ಎನ್. ಕೆ. ಜಲನ್ ಅವರು ವರದಕ್ಷಿಣೆ ಪಿಡುಗಿನಿಂದ ತರುಣಿಯರ ಸಾವಿಗೆ ಕಾರಣವಾಗುವವರನ್ನು ಸಮಾಜದಿಂದ ಬಹಿಷ್ಕರಿಸ ಬೇಕೆಂದು ಕರೆನೀಡಿದ್ದಾರೆ.

ಮಹಿಳಾ ಸಿಬ್ಬಂದಿಯ ಅವಶ್ಯಕತೆ. ಕುಟುಂಬ ನ್ಯಾಯಾಲಯ, ವಿಶೇಷ ತನಿಖಾದಳ ಮುಂತಾದವು ಹೆಚ್ಚಾಗಿ ಮಹಿಳಾ ಸಿಬ್ಬಂದಿಯನ್ನು ಒಳಗೊಂಡಿರಬೇಕು. ವರದಕ್ಷಿಣೆಯಿಂದ ನೊಂದ ಕುಟುಂಬಗಳಿಗೆ ಪರಿಹಾರಧನ ಮಂಜೂರು ಮಾಡಬೇಕು.

ವಧೂವರರ ಪಾತ್ರ. ಈ ಸಮಸ್ಯೆ ಪರಿಹರಿಸುವಲ್ಲಿ ವಧೂವರರ ಪಾತ್ರ ಹಿರಿ ದಾದುದು. ಹೆಣ್ಣು, ತಾನು ಮದುವೆಯಾಗದೆ ಹಾಗೆಯೇ ಉಳಿದೇನು, ಆದರೆ ವರ ದಕ್ಷಿಣೆಕೊಟ್ಟು ಗಂಡನನ್ನು ಕೊಳ್ಳುವುದಿಲ್ಲವೆಂಬ ಪಣ ತೊಡಬೇಕು. ಗಂಡು ತಾನು ವರದಕ್ಷಿಣೆ ತೆಗೆದುಕೊಂಡು ಗಂಡುವೇಶ್ಯೆ ಎಂಬ ತಲೆಪಟ್ಟಿ ಕಟ್ಟಿಕೊಂಡು ತನ್ನ ಜೀವ ನಿಗದಿಪಡಿಸಿಕೊಳ್ಳುವುದಿಲ್ಲ ಎಂಬ ಪ್ರತಿಜ್ಞೆ ಮಾಡಬೇಕು. ವಿವಾಹ ಅನಿವಾರ್ಯ ಎಂಬ ಭಾವನೆ ಅಳಿಯಬೇಕು. ಇದಿಲ್ಲದೆ ನಾವು ಬಾಳಬಹುದು. ಅರ್ಥಪೂರ್ಣ ಬದುಕಿಗೆ ಇದುಬೇಕೇಬೇಕೆಂದೇನೂ ಇಲ್ಲ ಎಂಬ ಅರಿವು ಮೂಡಿದಾಗಲೇ ಈ ಪಿಡುಗಿಗೆ ಪರಿಹಾರ.

ಸಾಮಾಜಿಕ ಸಂಸ್ಥೆಗಳು ಸಂಪರ್ಕ ಕಾರ್ಯಕ್ರಮ, ಬೀದಿ ನಾಟಕ, ವಿಚಾರ ಗೋಷ್ಠಿ, ಪ್ರತಿಜ್ಞಾ ವೇದಿಕೆ ಮುಂತಾದವುಗಳ ಮೂಲಕ ಜನತೆಯಲ್ಲಿ ಈ ಅನಿಷ್ಟದ ಬಗೆಗೆ ತಿಳುವಳಿಕೆ ಮೂಡಿಸಬೇಕು. ಮತ್ತು ಸರಳ ವಿವಾಹ, ಸಾಮೂಹಿಕ ವಿವಾಹ ಮತ್ತು ಅಂತರ್ಜಾತೀ ವಿವಾಹಗಳಿಗೆ ಹೆಚ್ಚು ಅನುಕೂಲ ಒದಗಿಸಬೇಕು.

ಮಹಿಳೆಯರನ್ನು ಸುಶಿಕ್ಷಿತರನ್ನಾಗಿ ಮಾಡಿದರೆ ಸಾಲದು. ಅವರನ್ನು ಸ್ವಾವ

ಲಂಬಿಗಳನ್ನಾಗಿಯೂ ಮಾಡಬೇಕು. ವರದಕ್ಷಿಣೆ ಪದ್ಧತಿ ಉಲ್ಬಣಗೊಳ್ಳಲು ಮಹಿಳೆಯಿಂದ ಆರ್ಥಿಕ ಉತ್ಪನ್ನ ಸಾಧ್ಯವಿಲ್ಲ ಎಂಬ ಕಾರಣವೂ ಮುಖ್ಯವಾಗಿದೆ.

ಧರ್ಮಗುರುಗಳ ಕರ್ತವ್ಯ. ಧರ್ಮಗುರುಗಳು ಈ ದಿಶೆಯಲ್ಲಿ ಮಹತ್ವದ ಪಾತ್ರ ಆಡಬಲ್ಲರು. ಯಾಕೆಂದರೆ ಜನತೆಯ ಮೇಲೆ ಅವರ ಪ್ರಭಾವ ಅಪಾರವಾಗಿದೆ. ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಶ್ರೀ ಸಿದ್ಧಲಿಂಗ ಸ್ವಾಮಿಗಳು ವರದಕ್ಷಿಣೆಯೊಂದಿಗಿನ ವಿವಾಹಗಳ ಆಮಂತ್ರಣ ಸ್ವೀಕರಿಸುವುದಿಲ್ಲ ಮತ್ತು ಅವುಗಳಲ್ಲಿ ಪಾಲುಗೊಳ್ಳುವುದಿಲ್ಲ. ಇತ್ತೀಚೆಗೆ ಇನ್ನೂ ಕೆಲವರು ಈ ಸತ್ಸಂಪ್ರದಾಯ ಅನುಸರಿಸುತ್ತಿದ್ದಾರೆ. ಇಳಕಲ್ಲಿನ ಮಹಾಂತ ಸ್ವಾಮಿಗಳು ಯುವಕರಿಗೆ 'ನಾವು ವರದಕ್ಷಿಣೆ ತೆಗೆದುಕೊಂಡು ಮದುವೆ ಮಾಡಿಕೊಳ್ಳುವುದಿಲ್ಲ' ಎಂಬ ಪ್ರಮಾಣ ವಚನ ಬೋಧಿಸುತ್ತಾರೆ ಮತ್ತು ಕೆಟ್ಟ ಚಟಗಳನ್ನು ಮಹಾಂತ ಜೋಳಿಗೆಯಲ್ಲಿ ಹಾಕಲು ಹೇಳುತ್ತ ಊರೂರು ಅಲೆಯುತ್ತಿದ್ದಾರೆ. ಜಗದ್ಗುರು ಶ್ರೀ ಕಂಚಿ ಕಾಮಕೋಟಿ ಶಂಕರಾಚಾರ್ಯ ಸ್ವಾಮಿಗಳು ಒಮ್ಮೆ ಈ ರೀತಿ ಹೇಳಿದರು. "ನಿಮಗೆ ಸರಿದೋರಬಹುದು ಇಲ್ಲವೇ ಸರಿದೋರಲಿಕ್ಕಿಲ್ಲ. ಆದರೂ ನನಗೆ ಸರಿಕಂಡದ್ದನ್ನು ಹೇಳುವುದು ನನ್ನ ಕರ್ತವ್ಯ. ಹುಡುಗನ ತಂದೆತಾಯಿಗಳು ಎಂಥ ಪ್ರಸಂಗದಲ್ಲಿಯೂ ವರದಕ್ಷಿಣೆ ಬೇಡಲಾರೆವೆಂದು ಸಂಕಲ್ಪ ಮಾಡಬೇಕು. ಉಳಿದ ವಿಷಯಗಳು ಒಪ್ಪಿಗೆ ಆದರಾಯಿತು ವಿವಾಹ ನಡೆಯಬೇಕು. ವರದಕ್ಷಿಣೆ ತೆಗೆದುಕೊಳ್ಳುವುದರಲ್ಲಿಯೇ ಗೌರವವಡಗಿದೆ ಎಂಬುದು ತಪ್ಪು ಕಲ್ಪನೆ. ಅಥವಾ ವರದಕ್ಷಿಣೆ ಬಿಟ್ಟರೆ ವರನಲ್ಲಿ ಏನೋ ದೋಷವಡಗಿದೆ ಎಂದು ಸಂಶಯ ಪಡುವುದೂ ತಪ್ಪು. ಇಂಥ ಕ್ಷುಲ್ಲಕ ಭ್ರಮೆಗಳನ್ನು ತೊರೆದು ಬಿಡಿರಿ. ಸುತ್ತಲೂ ಸುಖಸಂತೋಷಗಳನ್ನು ಹರಹಬಲ್ಲ ಪವಿತ್ರ ವಿವಾಹ ನೆರವೇರಿಸಿರಿ." ಜಾತಿ–ಮತಗಳ ಭೇದವಿಲ್ಲದೆ ಸರಳರೀತಿಯ ಸಾಮೂಹಿಕ ವಿವಾಹಗಳನ್ನು ಸಹಸ್ರಸಹಸ್ರ ಸಂಖ್ಯೆಯಲ್ಲಿ ನೆರವೇರಿಸಿದ ಧರ್ಮಸ್ಥಳದ ಶ್ರೀ ಡಿ ವೀರೇಂದ್ರ ಹೆಗ್ಗಡೆಯವರು ಈ ದಿಶೆಯಲ್ಲಿ ಅಗ್ರಗಾಮಿಗಳೆನಿಸಿದ್ದಾರೆ. ೧೯೭೨ ರಲ್ಲಿ ಸಾಮೂಹಿಕ ವಿವಾಹಗಳನ್ನು ನೆರವೇರಿಸಲು ಪ್ರಾರಂಭಿಸಿ ಇಲ್ಲಿಯ ವರೆಗೆ (೧೯೮೫) ನೆರವೇರಿಸಿದ ಸಾಮೂಹಿಕ ವಿವಾಹಗಳ ಒಟ್ಟು ಸಂಖ್ಯೆ ೫೦೪೭. ಬಹುಶಃ ಇದೊಂದು ಜಾಗತಿಕ ದಾಖಲೆಯೇ ಇರಬೇಕು. ಉಳಿದ ಧರ್ಮಗುಳುಗಳಿಗೆ, ಸ್ವಯಂ ಸೇವಾ ಸಂಘಗಳಿಗೆ ಇದೊಂದು ಅನುಕರಣೀಯ ಮತ್ತು ಸಮಯೋಚಿತ ಕಾರ್ಯಕ್ರಮ.

ಒಂದು ಉದಾಹರಣೆ. ಯಾವುದೇ ಸಮುದಾಯದ ಜನ ಒಟ್ಟಾಗಿ ಶ್ರಮಿಸಿದರೆ ಗಮನಾರ್ಹ ಸಾಧನೆಗಳನ್ನು ಸಾಧಿಸಬಹುದೆಂಬುವಕ್ಕೆ ವಿರಳವಾದರೂ ಕೆಲವೊಂದು ಉದಾಹರಣೆಗಳಿವೆ. ಸುಮಾರು ಒಂದು ದಶಕದ ಹಿಂದೆ ದಿಲ್ಲಿ ಸಮೀಪದ ಜಾಟ್ ಗ್ರಾಮ ಒಂದರ ಪ್ರಮುಖರು ಮತ್ತು ನೆರೆಹೊರೆಯ ಗ್ರಾಮಗಳ ಜನರು ಒಟ್ಟುಗೂಡಿ ಸಮಾಲೋಚಿಸಿದರು. ಎಲ್ಲರೂ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ನಿರ್ಧಾರ ಕೈಗೊಂಡರು. ನಿಶ್ಚಯ ಕಾರಣದಲ್ಲಿ ಹುಡುಗನಿಗೆ ಒಂದು ರೂಪಾಯಿ, ಒಂದು ಬೆಡ್‌ಶೀಟು ಮತ್ತು ಪಾವುಸೇರು ಸಿಹಿತಿನಿಸು. ವಿವಾಹಕಾಲಕ್ಕೆ ವರನಿಗೆ

೧೦೧ ರೂ. ಅವನ ತಂದೆಗೆ ೧೧ ರೂ. ವಧುವಿಗೆ ಒಂದು ಬಂಗಾರದ ಉಂಗುರ, ಕೆಲವು ಬೆಳ್ಳಿಯ ಆಭರಣಗಳು, ೧೧ ವಸ್ತ್ರಗಳು ಮತ್ತು ೧೧ ಪಾತ್ರೆಗಳು. ವರನ ವಿವಾಹಕ್ಕೆ ೧೧ ಜನರಿಗಿಂತ ಹೆಚ್ಚಿಗೆ ತರಕೂಡದು. ಉದ್ದೇಶ, ವಧುವಿನ ತಂದೆತಾಯಿಗಳಿಗೆ ಭಾರವಾಗಕೂಡದೆಂಬುದು, ಆತಿಥ್ಯಕ್ಕೆ ತೊಂದರೆಯಾಗಬಾರದೆಂಬುದು. ಈ ನಿಯಮವನ್ನು ಮುರಿಯುವ ಯಾವುದೇ ಕುಟುಂಬ ದಂಡಕೊಡಬೇಕಾಗುತ್ತದೆ ಮತ್ತು ಬಹಿಷ್ಕಾರವನ್ನು ಎದುರಿಸಬೇಕಾಗುತ್ತದೆ. ಫರೀದಾಬಾದ ಜಿಲ್ಲೆಯ ಗ್ರಾಮಗಳ ಜಾಟರು, ಮಥುರಾ ಜಿಲ್ಲೆಯ ಚಾಟಾ ತಹಸೀಲಿನ ಗ್ರಾಮಸ್ಥರು ಮತ್ತು ದಿಲ್ಲಿ ಹರಿಯಾನಾ ಮೇರೆಯ ಅನೇಕ ಗ್ರಾಮಗಳ ಜನರು ಈ ನಿಯಮವನ್ನು ಇಂದಿಗೂ ಕಟ್ಟುನಿಟ್ಟಾಗಿ ಅನುಸರಿಸುತ್ತಾರೆಂದು ವರದಿಯಾಗಿದೆ. ಹೀಗಿದ್ದರೆ ಇದು ಅನುಕರಣೀಯ ಮತ್ತು ವ್ಯಾಪಕವಾಗಿ ಹರಡಬೇಕಾದುದು.

ಲೇಖನದ ಕೊನೆಗೆ ಒಂದು ಮಾತು: ಭಾರತದಲ್ಲಿ ವರದಕ್ಷಿಣೆಯಂತೂ ಸರ್ವೇಸಾಮಾನ್ಯವಾಗಿದೆ. ಆದರೆ ಎಲ್ಲ ವಿವಾಹಗಳೂ ಅಮಾನುಷ ಹಿಂಸೆ ಮತ್ತು ಸಾವುಗಳಿಂದಲೇ ಕೊನೆಗೊಳ್ಳುವುದಿಲ್ಲ. ಶಾಂತಿ ನೆಮ್ಮದಿಗಳಿಂದ ಕೂಡಿದ ಕುಟುಂಬಗಳೂ ಸಾಕಷ್ಟಿರುತ್ತವೆ. ವರದಕ್ಷಿಣೆಯು ಪಿಡುಗಾಗಿ ಪರಿಣಮಿಸಿದೆ ಎಂಬುದನ್ನು ನಾವು ಗನ್ನಡಿ ಹಿಡಿದು ಹೇಳಿದ್ದಲ್ಲ. ಎಲ್ಲರ ಅನುಭವಕ್ಕೂ ಬಂದಿರುವ ಸಂಗತಿ. ಸಮಾಜಶಾಸ್ತ್ರಜ್ಞರು ಈ ದಿಶೆಯಲ್ಲಿ ಅಧ್ಯಯನ ನಡೆಸಿದ್ದಾರೆ, ನಡೆಸುತ್ತಿದ್ದಾರೆ. ಸಮಾಜಕಾರ್ಯಕರ್ತರು ಈ ಸಮಸ್ಯೆಯ ಬಗೆಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.



ತ್ಯಾಗದ ಮತ್ತೊಂದು ಕುರುಹು ಮಾತೋಶ್ರೀ ಗಂಗಮ್ಮ ವೀರಪ್ಪ ಚಿನವಾರ ಮಂಗಲಭವನ



ಕಾಲೇಜಿನ ಒಂದು ಸ್ನೇಹ ಸಮ್ಮೇಲನ

ಕುಲಪತಿ ಡಾ॥ ಆರ್. ಸಿ. ಹಿರೇಮಠ ಮತ್ತು ಮಾತೋಶ್ರೀಯವರು



ಅನ್ಯೋನ್ಯ ಸ್ನೇಹ ಸಮ್ಮೇಲನ ಸಾಹಿತಿ – ಪತ್ರಕರ್ತ ಪಾಟೀಲ ಪುಟ್ಟಪ್ಪನವರೊಂದಿಗೆ



ಜಾನಪದ ರತ್ನ ಕೆ. ಆರ್. ಲಿಂಗಪ್ಪನವರೊಡನೆ ಮಾತೋಶ್ರೀಯವರು

ಲೇಖಕರ ಪರಿಚಯ

ಈಶ್ವರ ಸಿಂಪಿ : ಅರ್ಥಶಾಸ್ತ್ರ ಪ್ರವಾಚಕರು, ಎಂ. ಜಿ. ವಿ. ಸಿ. ಕಾಲೇಜ, ಮುದ್ದೇಬಿಹಾಳ.

ಚ. ವಿ. ಮುಳಗುಂದ : ಪ್ರಾಚಾರ್ಯರು. ಎಂ. ಜಿ ವಿ. ಸಿ. ಕಾಲೇಜ, ಮುದ್ದೇಬಿಹಾಳ.

ಡಾ. ಶೈಲಜಾ ಉಡಚಣ : ಕನ್ನಡ ಪ್ರಾಧ್ಯಾಪಕರು, ಕಲಬುರ್ಗಿ.

ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಎಸ್. ಎಸ್. ಭೂಸರಡ್ಡಿ : ಕನ್ನಡ ಉಪನ್ಯಾಸಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಡಾ. ಬಿ. ಸಿ. ಜವಳಿ : ಕನ್ನಡ ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಡಾ. ವಿ. ಎಸ್. ಕಂಬಿ : ಕನ್ನಡ ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಾಂತರಸ : ಅಝಾದ ನಗರ, ರಾಯಚೂರು.

ಶಾಂತಾದೇವಿ ಇಮ್ರಾಪೂರ : ನವೋದಯ ನಗರ, ಧಾರವಾಡ.

ಎಚ್. ಎಸ್. ಗಂಗಮ್ಮ : ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹನುಮಾಕ್ಷಿ ಗೋಗಿ : ಉಪನ್ಯಾಸಕರು, ಕಲ್ಯಾಣನಗರ, ಕಲಬುರ್ಗಿ.

ಜಿ. ಎಸ್. ಮಾಮನಿ : ಕನ್ನಡ ಪ್ರವಾಚಕರು, ಎಂ. ಜಿ. ವಿ. ಸಿ. ಕಾಲೇಜ, ಮುದ್ದೇಬಿಹಾಳ.

ಬಿ. ವಿ. ಗುಂಜಟ್ಟಿ : ಕನ್ನಡ ಪ್ರವಾಚಕರು, ಕರ್ನಾಟಕ ಕಾಲೇಜ, ಧಾರವಾಡ.

ಎಚ್. ಎಂ. ಬೀಳಗಿ : ಉಪನ್ಯಾಸಕರು, ಕರ್ನಾಟಕ ಕಾಲೇಜ, ಧಾರವಾಡ.

ಡಾ. ಸರೋಜಿನಿ ಚವಲಾರ : ಕನ್ನಡ ಪ್ರಾಧ್ಯಾಪಕರು, ಮೂರುಸಾವಿರಮಠ ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ.

ಬಿ. ವಿ. ಯಕ್ಕುಂಡಿಮಠ : ಉಪನ್ಯಾಸಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಡಾ. ವೀರಣ್ಣ ರಾಜೂರ : ಕನ್ನಡ ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಬಸವರಾಜ ಹೂಗಾರ : ಕನ್ನಡ ಸಹಾಯಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿಜಯಶ್ರೀ ಸಬರದ : ಉಪನ್ಯಾಸಕರು, ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ.

ಎಸ್. ವಿ. ಅಯ್ಯನಗೌಡರ : ಉಪನ್ಯಾಸಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಭಾ ಗುಂಜಟ್ಟಿ : ಕಲ್ಯಾಣನಗರ, ಧಾರವಾಡ.

ಶಶಿಕಲಾ ವೋಳದಿ : ಕನ್ನಡ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಡಾ. ಬಿ. ಆರ್. ಹಿರೇಮಠ : ಕನ್ನಡ ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಎಂ. ಎಸ್. ಮಹಾಂತಯ್ಯ : ಕನ್ನಡ ಪ್ರಾಧ್ಯಾಪಕರು, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ,

ಎಚ್. ದೇವೀರಪ್ಪ : ವಿಜಯನಗರ, ಬೆಂಗಳೂರು.

ಕೆಳದಿ ಗುಂಡಾ ಜೋಯಿಸ್ : ಕೆಳದಿ, ಶಿವಮೊಗ್ಗಾ ಜಿಲ್ಲೆ.

ಡಾ. ಚನ್ನಕ್ಕಾ ಎಲಿಗಾರ : ಕನ್ನಡ ಉಪನ್ಯಾಸಕರು, ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ. ಧಾರವಾಡ.

ಡಾ. ದೇವೇಂದ್ರಕುಮಾರ ಹಕಾರಿ : ಕನ್ನಡ ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಡಾ. ವ್ಹಿ. ಜಿ. ಮಾರಿಹಾಳ : ಅಧ್ಯಾಪಕರು, ವಿಶ್ವವಿದ್ಯಾಲಯ ಶಿಕ್ಷಣ ಮಹಾವಿದ್ಯಾಲಯ ಧಾರವಾಡ.

ಸುಶೀಲಾ ಕಡ್ಡಿಪುಡಿ : ಪ್ರಾಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

ಡಾ. ಸರೋಜಿನಿ ಶಿಂತ್ರಿ : ಇಂಗ್ಲೀಷ ಪ್ರಾಧ್ಯಾಪಕರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಮಲಾ ಹಂಪನಾ : ಕನ್ನಡ ಪ್ರವಾಚಕರು, ಮಹಾರಾಣಿ ಕಾಲೇಜು, ಬೆಂಗಳೂರು.

ಲೀಲಾ ಶಾಂತಕುಮಾರಿ : ಇತಿಹಾಸ ಪ್ರವಾಚಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕೆ. ಶರೀಫಾ : ಶೇಖರೋಜಾ, ಗುಲಬರ್ಗಾ.

ಡಾ. ಕೆ. ಕೃಷ್ಣಮೂರ್ತಿ : ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು, ಸಪ್ತಾಪೂರ, ಧಾರವಾಡ.

ಡಾ. ಬಿ. ಬಿ. ಹೆಂಡಿ : ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಎಸ್. ರಾಮಚಂದ್ರ : ನಿವೃತ್ತ ಹಿಂದಿ ಪ್ರಾಧ್ಯಾಪಕರು,
ಕಲ್ಯಾಣನಗರ, ಧಾರವಾಡ.

ಎನ್ಕೆ : ಕಲ್ಯಾಣನಗರ, ಧಾರವಾಡ.

ಎನ್. ಬೋರಲಿಂಗಯ್ಯ : ಕನ್ನಡ ಪ್ರವಾಚಕರು, ಯುವರಾಜಾ ಕಾಲೇಜು,
ಮೈಸೂರು.

ಡಾ. ಎಸ್. ಪಿ. ಪಾಟೀಲ : ಕನ್ನಡ ಅಧ್ಯಾಪಕರು. ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸುಕನ್ಯಾ ಮಾರುತಿ : ಕನ್ನಡ ಉಪನ್ಯಾಸಕರು, ಜೆ. ಎಸ್. ಎಸ್. ಕಾಲೇಜ,
ಧಾರವಾಡ.

ಡಾ. ಹಿರೇಮಲ್ಲೂರ ಈಶ್ವರನ್: ಸಮಾಜಶಾಸ್ತ್ರದ ಪ್ರಾಧ್ಯಾಪಕರು, ಯಾರ್ಕ
ವಿಶ್ವವಿದ್ಯಾಲಯ, ಟೊರಾಂಟೋ, ಕೆನಡಾ.

ಡಾ. ದಾನೇಶ ಎ. ಚೆಕ್ಕಿ : ಸಮಾಜಶಾಸ್ತ್ರ ಪ್ರಾಧ್ಯಾಪಕರು, ವಿನ್ನಿಪೆಗ್
ವಿಶ್ವವಿದ್ಯಾಲಯ, ವಿನ್ನಿಪೇಗ್, ಕೆನಡಾ,

ಡಾ. ಲೀಲಾ ಫಡ್ನೀಸ್ : ನಿರ್ದೇಶಕರು (ಬೋಧನೆ) ಗೃಹವಿಜ್ಞಾನ ವಿಭಾಗ,
ಕೃಷಿ ವಿಶ್ವವಿದ್ಯಾಲಯ, ಧಾರವಾಡ.

ಎಂ. ಸಂಜಮ್ಮಣ್ಣಿ : ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಿಕೆಯರು,
ಸರಸ್ವತಿಪುರಂ, ಮೈಸೂರು,

ಎಚ್. ಪಿ. ಫಿಲೋಮಿನ : ಉಪಸಂಪಾದಕಿ 'ಪ್ರಜಾಮತ' ಬೆಂಗಳೂರು.

ಶ್ರೀಮತಿ ಹೇಮಲತಾ ಮಹಿಷಿ : ನ್ಯಾಯವಾದಿಗಳು. ಬೆಂಗಳೂರು.

ಚೂಡಾರತ್ನ ತಿಗಡಿ : ಪ್ರಾಧ್ಯಾಪಿಕೆಯರು, ಕರ್ನಾಟಕ ಸಾಯನ್ಸ ಕಾಲೇಜು,
ಧಾರವಾಡ.

ವಿ. ಪಿ. ಕಟ್ಟಿ : ಉಪನಿರ್ದೇಶಕರು, ಅರ್ಥಶಾಸ್ತ್ರ ಸಂಶೋಧನಾ ಸಂಸ್ಥೆ, ಧಾರವಾಡ,

ಪ್ರಫುಲ್ಲಾ ನಾಯಕ : ನ್ಯಾಯವಾದಿಗಳು, ಧಾರವಾಡ.

ಗೀತಾ ಕುಲಕರ್ಣಿ : ರಜತಗಿರಿ, ಧಾರವಾಡ.

ಎಚ್. ವಿ. ನಾಗೇಶ್ : ಸಮಾಜಶಾಸ್ತ್ರದ ಪ್ರಾಧ್ಯಾಪಕರು,
ಜೆ. ಎಸ್. ಎಸ್. ಕಾಲೇಜು, ಧಾರವಾಡ.

———

ಮಾತೋಶ್ರೀ

ತಲೆತಲಾಂತರ ಬೆಳೆದುಬಂದ ತಮ್ಮ ಮನೆತನದ ಆಗರ್ಭ ಸಂಪತ್ತನ್ನು ಶಿಕ್ಷಣ–ಸಂಸ್ಕೃತಿಗಳ ಸಂವರ್ಧನೆಗೆ ತ್ಯಾಗಮಾಡಿ ಅಭಿನವ ಅತ್ತಿಮಬ್ಬೆ ಎನಿಸಿಕೊಂಡಿರುವ ಮುದ್ದೇಬಿಹಾಳದ ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಅವರ ಅಮೃತ ಮಹೋತ್ಸವದ ಸಂದರ್ಭದಲ್ಲಿ ಅರ್ಪಿಸಿದ ಅಭಿನಂದನ ಗ್ರಂಥ. ಇಡೀ ಗ್ರಂಥ ಮಹಿಳಾ ಪ್ರಪಂಚಕ್ಕೆ ಸಂಬಂಧಪಟ್ಟ ೫೪ ಅಭ್ಯಾಸಪೂರ್ಣ ಲೇಖನಗಳನ್ನು ಒಳಗೊಂಡಿದೆ.

ಈ ಬೃಹತ್ ಕೃತಿಯ ರೂಪರೇಷೆ ಹೀಗಿದೆ :

೧. ಮಾತೋಶ್ರೀ : ವ್ಯಕ್ತಿಚಿತ್ರ
೨. ಶಿವಶರಣೆಯರು
೩. ವೀರಶೈವ ರಾಣಿಯರು
೪. ಧರ್ಮಗಳ ದೃಷ್ಟಿಯಲ್ಲಿ ಮಹಿಳೆ
೫. ಸಾಹಿತಿಗಳ ದೃಷ್ಟಿಯಲ್ಲಿ ಮಹಿಳೆ
೬. ಆಧುನಿಕ ಮಹಿಳೆ

ಸಂಪಾದಕರು :

ಪ್ರೊ. ಸಿ. ವಿ. ಮುಳಗುಂದ

ವಿಭಾಗೀಯ ಸಂಪಾದಕರು :

ಡಾ. ಶೈಲಜಾ ಉಡಚಣ
ಶ್ರೀ ಶಾಂತರಸ
ಡಾ. ಸರೋಜಿನಿ ಶಿಂತ್ರಿ
ಪ್ರೊ. ಸದಾನಂದ ಕನವಳ್ಳಿ
ಪ್ರೊ. ಎಚ್. ಪಿ. ನಾಗೇಶ್